

ಪ್ರಧಾನ ಸಂಪಾದಕರು

ಡಾ. ಬಿ.ಎಸ್. ಪ್ರಣತಾರ್ತಿಹರನ್ ತಮ್ಮ ಪಿಎಚ್.ಡಿ. ಪದವಿಯನ್ನು (ಸಂಕೇತಿ ಒಂದು ಅಧ್ಯಯನ:1993) ಪಡೆದಮೇಲೆ ಸಂಕೇತಿ ಸಮುದಾಯದ ಬಗೆಗಿನ ಅಧ್ಯಯನವನ್ನು ಮುಂದುವರೆಸಿದರು. ತಾವು ಕಲೆಹಾಕಿದ ಅಪಾರ ಮಾಹಿತಿಯನ್ನು ವಿಂಗಡಿಸಿ, ಪರಿಷ್ಕರಿಸಿ, ವಿಮರ್ಶಿಸಿ ಪ್ರಕಟಿಸಿದರು. ಅವರು ಪಿಎಚ್.ಡಿ. ಅಧ್ಯಯನಕ್ಕಾಗಿ ಪ್ರಾರಂಭಿಸಿದಾಗ ಇದ್ದ ಒಂದೆರಡು ನೂರು ಪುಟಗಳ ಆಕರ ಮಾಹಿತಿಯನ್ನು ಈ ವರೆಗೆ 10 ಸಾವಿರ ಪುಟಗಳಿಗೆ ವಿಸ್ತರಿಸಿದ್ದಾರೆ. ಈ ಯೋಜನೆಯ 12 ಸಂಪುಟಗಳು ಪ್ರಕಟವಾಗಿವೆ, 8 ಸಂಪುಟಗಳು ಮುದ್ರಣಗೊಳ್ಳುತ್ತಿವೆ. 1983ರಲ್ಲಿ ಅವರು ಪ್ರಾರಂಭಿಸಿದ ಈ ಅಧ್ಯಯನವು ಇಂದಿಗೂ ಮುಂದುವರಿದಿದೆ. ಆಳವಾದ ಮತ್ತು ವಿಸ್ತಾರವಾದ ಅಧ್ಯಯನ, ಅನುಭವಗಳಿಗೆ ದಕ್ಕುವ ಕಾಣ್ಕೆಯಿಂದಾಗಿ (Vision) ಸಂಕೇತಿ ಅಧ್ಯಯನಕ್ಕೆ ವೈವಿಧ್ಯಪೂರ್ಣ ಆಯಾಮ ದೊರೆತಿದೆ.



Thanks Anima shree

Anima Anandkumar is currently a principal scientist at Amazon Web Services and a Bren professor at Caltech CMS department. Her research interests are in the areas of large-scale machine learning, non-convex optimization and high-dimensional statistics. In particular, she has been spearheading the development and analysis of tensor algorithms. She is the recipient of several awards such as the Alfred. P. Sloan Fellowship, Microsoft Faculty Fellowship, Google research award, ARO and AFOSR Young Investigator Awards, NSF Career Award, Early Career Excellence in Research Award at UCI, Best Thesis Award from the ACM Sigmetrics society, IBM Fran Allen PhD fellowship, and several best paper awards. She has been featured in a number of forums such as the yourstory, Quora ML session, Huffington post, Forbes, O'Reilly media, and so on. She received her B.Tech in Electrical Engineering from IIT Madras in 2004 and her PhD from Cornell University in 2009. She was a postdoctoral researcher at MIT from 2009 to 2010, an assistant professor at U.C. Irvine between 2010 and 2016, and a visiting researcher at Microsoft Research New England in 2012 and 2014.

ಸಂಕೇತಿ ಅಧ್ಯಯನ ಮಾಲೆ
ಪ್ರಧಾನ ಸಂಪಾದಕ
ಡಾ.ಬಿ.ಎಸ್. ಪ್ರಣತಾರ್ತಿಹರನ್



ಸಮೀಕ್ಷೆ

(ಒಂದರಿಂದ ಹತ್ತನೆಯ ಸಂಪುಟದವರೆಗೆ)

ಸಂಪಾದಕರು
ಬಿ.ಎಸ್. ಪ್ರಣತಾರ್ತಿಹರನ್

ಸಮುದಾಯ ಅಧ್ಯಯನ ಕೇಂದ್ರ
ಮೈಸೂರು

sanketi E-lib-11 Web : 6-6-2018

ಸಂಕೇತಿ ಅಧ್ಯಯನ ಯೋಜನೆ
ಸಂಪುಟ ೧೧

SAMEEKSHE
From First to Tenth Volume

Editor
Dr. B.S. Pranatartiharan
3059, 4th Cross, Gokulam Park Road,
Mysore-570 002
email: bspharan@gmail.com

Published by : Samudaya Adhyayana Kendra, 3059, 4th Cross,
Gokulam Park Road, Mysore-570 002

Pages : xiv+384

First Edition : 2014

Price : Rs. 500-00

ಸಮೀಕ್ಷೆ
ಒಂದರಿಂದ ಹತ್ತನೆಯ ಸಂಪಟದವರೆಗೆ

ಸಂಪಾದಕರು
ಡಾ. ಬಿ.ಎಸ್. ಪ್ರಣತಾರ್ತಿಹರನ್
3059, 4ನೇ ಅಡ್ಡ ರಸ್ತೆ, ಗೋಕುಲಂ ಪಾರ್ಕ್ ರಸ್ತೆ,
ಮೈಸೂರು–570 002
email: bspharan@gmail.com

ಪ್ರಕಾಶಕರು : ಸಮುದಾಯ ಅಧ್ಯಯನ ಕೇಂದ್ರ, 3059, 4ನೇ ಅಡ್ಡ ರಸ್ತೆ,
ಗೋಕುಲಂ ಪಾರ್ಕ್ ರಸ್ತೆ, ಮೈಸೂರು–570 002

ಪುಟಗಳು : xiv+384

ಮೊದಲ ಮುದ್ರಣ : 2014


ಬೆಲೆ: ರೂ.: 500–00

ಡಿ.ಟಿ.ಪಿ. : ಸಂತೋಷ್, ಹೇಮಲತಾ ಹೆಚ್.ಎಸ್.

ಮುದ್ರಕರು : ಲಿಪಿಗ್ರಾಫ್, ಇಟ್ಟಿಗೆ ಗೂಡು, ಮೈಸೂರು – 570 010

ತಿರುವಾಂಕೂರು ಸಂಸ್ಥಾನದ
ಮೂವರು ಸ್ಥಾಪಕರಲ್ಲಿ ಒಬ್ಬರಾದ
ದಳವಾ ರಾಮಯ್ಯರ್
ಅವರ
ದಿವ್ಯಸ್ಮರಣೆಗೆ

ಸಂಕೇತಿ ಅಧ್ಯಯನ



ಸಾಧ್ವೀಮಣಿಯಾದ ಶ್ರೀನಾಚಾರಮ್ಮನ ನೇತೃತ್ವದಲ್ಲಿ ಸಂಕೇತಿ ಸಮುದಾಯದ ಮಹಾವಲಸೆ ಶಾಪತ್ತೂರಿನಿಂದ ಕರ್ನಾಟಕಕ್ಕೆ ನಡೆದುದು ೯೦೦ ವರ್ಷಗಳ ಹಿಂದೆ. ಅದರ ನೆನಪಿಗಾಗಿ ಶ್ರೀನಾಚಾರಮ್ಮ ನವಶತಮಾನೋತ್ಸವ ನಡೆಯುತ್ತಿದೆ. ಸಂಕೇತಿ ಸಮುದಾಯದ ಬಗೆಗೆ ಈವರೆಗೆ ಲಭ್ಯವಾಗಿರುವ ಅಪಾರ ಮಾಹಿತಿಯನ್ನು ಈ ಸಂದರ್ಭದಲ್ಲಿ ಪ್ರಕಟಿಸಲಾಗುತ್ತಿದೆ. ಈ ಸಂಪುಟಸರಣಿಯು ಸಂಶೋಧನೆ, ದಾಖಲೀಕರಣ, ಕ್ರೋಡೀಕರಣದ ಸ್ವರೂಪದ್ದಾಗಿದೆ. ಈ ಸರಣಿಯನ್ನು 'ಸಂಕೇತಿ ಅಧ್ಯಯನ' ಎಂದು ಕರೆಯಲಾಗಿದೆ.

ಜ್ಞಾನಗಂಗೆಗೆ ದಂಡೆಗಳಿಲ್ಲ; ಮೈಲಿಗೆಯಂತೂ ಇಲ್ಲವೇ ಇಲ್ಲ. ಅದನ್ನು ಹಿಡಿದಿಡಲು ಮಾತ್ರ ತೆರೆದ ಮನದ ಜಟಾಜೂಟಧರರು ಆಗಲೇಬೇಕು ನಾವು. ಪುನೀತರಾಗಲು ಇರುವ ಬೆಳಕಿನ ಮಾರ್ಗ ಅದು.

ನಮ್ಮನ್ನು ನಾವು ತಿಳಿದರೆ ವಿಕಾಸಶೀಲತೆಗೆ ಬಾಗಿಲು ತೆರೆದಂತೆ. ವಿಕಾಸವೆಂದರೆ ಮಾನವರಾಗುವುದು, ಉದಾತ್ತರಾಗುವುದು, ಆತ್ಮಗುಣಸಂಪನ್ನರಾಗುವುದು.

ನಿರ್ಗುಣಕ್ಕೆ ಅಚಲ ಶಾಂತಿ ಇದ್ದರೆ ಸಗುಣಕ್ಕೆ ವೈವಿಧ್ಯದ ಕಾಂತಿ ಉಂಟು. ಜಗತ್ತು ಸಂಜೀವನವೆನಿಸಿರುವುದು ಚೇತನಾಚೇತನದ ಈ ಬಹು ಕಿರಣದಿಂದ. ಈ ಬಹುತ್ವದ ಗರ್ಭದಲ್ಲಿ ಏಕಾತ್ಮತೆಯ ಅಗ್ನಿಯು ಪ್ರಖರವಾದರೆ ಸಾರ್ಥಕ್ಯ.

'ಸಂಕೇತಿ' ಎಂಬುದು ಇಲ್ಲಿ ಅಧ್ಯಯನ ಘಟಕ. ಸಮಗ್ರತೆಯಲ್ಲಿ ಅದು ಮಾನವೀಯತೆಯ ಅನುಸಂಧಾನ. 'ಸಂಕೇತಿ ಅಧ್ಯಯನ'ದ ಸಂಪುಟಸರಣಿಯು ವಿವೇಕಾನುಸಂಧಾನದ ಮುಕ್ತಪಥವಾಗಿ ಬರುತ್ತಿದೆ. ಅದರ ನಡಿಗೆಯಲ್ಲಿ ವಾಸ್ತವದ ವಿವರವಿದೆ. ಅಂತರಂಗದಲ್ಲಿ ಆದರ್ಶದ ಹುಡುಕಾಟವಿದೆ.

ಒಂದು ಪುಟ್ಟಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟ ಸರಣಿ ಪ್ರಕಾಶಗೊಳ್ಳುತ್ತಿದೆ.

ಪ್ರಕೃತ ಸಂಪುಟದಲ್ಲಿ ಸಂಕೇತಿ ಅಧ್ಯಯನಮಾಲೆಯ ಮೊದಲ ಹತ್ತು ಸಂಪುಟಗಳ ಸ್ವರೂಪದ ಪರಿಚಯವಿದೆ. ಸಂಕೇತಿ ಸಮುದಾಯದ ಬಗೆಗಿನ ನಿಬಂಧ ಮತ್ತು ಆಧಾರ ಪಾಠ್ಯಗಳು ಈ ಹತ್ತು ಸಂಪುಟಗಳ ವಸ್ತು. ಈ ಹತ್ತೂ ಸಂಪುಟಗಳನ್ನು ಓದುವ ಅವಕಾಶವಿಲ್ಲದವರಿಗೆ ಅವುಗಳ ಅಂತರಂಗದರ್ಶನವಾಗಲಿ ಎಂಬುದು ಉದ್ದೇಶ. ಸಂಬಂಧಿಸಿದ ಲೇಖಕರಿಗೂ, ಮುದ್ದಾಗಿ ಮುದ್ರಿಸಿಕೊಟ್ಟ ಲಿಪಿಗ್ರಾಫ್, ಮೈಸೂರು, ಅವರಿಗೂ, ಪ್ರಕಾಶಕರಾದ ಮೈಸೂರಿನ ಸಮುದಾಯ ಅಧ್ಯಯನ ಕೇಂದ್ರದ ಪದಾಧಿಕಾರಿಗಳಿಗೂ ಕೃತಜ್ಞತೆಗಳು.

ಈ ಸಂಪುಟಸರಣಿಯ ಬಗೆಗೆ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಿದ ಖ್ಯಾತ ವಿಮರ್ಶಕರಾದ ಡಾ. ಸಿ.ಎನ್. ರಾಮಚಂದ್ರನ್ ಅವರಿಗೆ ಧನ್ಯವಾದಗಳು.

ಈ ಸಂಪುಟದ ಸಿದ್ಧತೆಯಲ್ಲಿ ಸಹಕರಿಸಿದ ಆತ್ಮೀಯರಾದ ಶ್ರೀ ಎನ್.ಎಸ್. ಶಾರದಾ ಪ್ರಸಾದ್, ಡಾ. ಎಂ.ಎಸ್. ವಿಜಯಾ ಹರನ್ ಮತ್ತು ಶ್ರೀ ಸಂಸ್ಕೃತಿ ಸುಬ್ರಹ್ಮಣ್ಯ ಅವರಿಗೆ ಆಭಾರಿ.

ಅಕ್ಷರ ಜೋಡಣೆ ಮಾಡಿಕೊಟ್ಟ ಸಂತೋಷ್ ಮತ್ತು ಹೇಮಲತಾ ಅವರಿಗೂ ಕೃತಜ್ಞತೆಗಳು.

ಮೈಸೂರು
ವಿಜಯದಶಮಿ
೪-೧೦-೨೦೧೪

ಪ್ರಣತಾರ್ತಿಹರನ್
ಪ್ರಧಾನ ಸಂಪಾದಕ

ಸಂಕೇತಿ ಅಧ್ಯಯನ ಮಾಲೆ

ಸಂಪುಟ ೧	*ಸಂಕೇತಿ ಒಂದು ಅಧ್ಯಯನ (ಸಂಸ್ಕೃತಿ – ಸಮೀಕ್ಷೆ)*	ಡಾ. ಬಿ.ಎಸ್. ಪ್ರಣತಾರ್ತಿಹರನ್, ೨೦೦೩
ಸಂಪುಟ ೨	*ಸಂಕೇತಿ ಶತಮಾನದ ಪತ್ರಗಳು (೧೮೯೧–೨೦೦೩)*	ಸಂ. ಡಾ. ಬಿ.ಎಸ್. ಪ್ರಣತಾರ್ತಿಹರನ್, ೨೦೦೪
ಸಂಪುಟ ೩	*ಸಂಕೇತಿ ಅಭಿನಂದನ*	ಸಂ. ಪೂಮಗಾಮೆ ಗೋಪಿ, ೨೦೦೫
ಸಂಪುಟ ೪	*ಸಂಕೇತಿ ಭಾಷಾಧ್ಯಯನ*	ಸಂ. ಪ್ರೊ. ಎಚ್.ಎಸ್. ಅನಂತನಾರಾಯಣ, ೨೦೦೭
ಸಂಪುಟ ೫	*ಸಂಕೇತಿ ಇತಿವೃತ್ತಗಳು*	ಸಂ. ಎನ್.ಎಸ್. ಶಾರದಾ ಪ್ರಸಾದ್, ೨೦೦೮
ಸಂಪುಟ ೬	*ಸಂಕೇತಿ ಆತ್ಮಕಥೆಗಳು*	ಸಂ. ಸುಮನಾ ವಿಶ್ವನಾಥ್, ೨೦೦೮
ಸಂಪುಟ ೭	*Vibrant India*	ಸಂ. ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ, ಡಾ. ಬಿ.ಎಸ್. ಪ್ರಣತಾರ್ತಿಹರನ್, ೨೦೦೯
ಸಂಪುಟ ೮	*ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು*	ಎನ್. ಕೇಶವಮೂರ್ತಿ, ೨೦೧೦
ಸಂಪುಟ ೯	*ಸಂಕೇತಿ ಬೇಸಾಯದ ಬದುಕು*	ವಿಜಯ್ ಅಂಗಡಿ, ಡಾ. ಎಂ.ಎಸ್. ವಿಜಯಾ ಹರನ್, ೨೦೧೦
ಸಂಪುಟ ೧೦	*Sanketi Autobiographies*	ಸಂ. ಕೆ. ಸುಂದರರಾಜು, ೨೦೧೦
ಸಂಪುಟ ೧೧	*ಸಮೀಕ್ಷೆ*	ಸಂ. ಡಾ. ಬಿ.ಎಸ್. ಪ್ರಣತಾರ್ತಿಹರನ್, ೨೦೧೪
ಸಂಪುಟ ೧೨	*ಸಾರ್ಥ* (ಡಾ. ಎಸ್.ಎಲ್. ಭೈರಪ್ಪನವರ ಕಾದಂಬರಿಯ ಸಂಕೇತಿ ರೂಪ)	ಡಾ. ಬಿ.ಎಸ್. ಪ್ರಣತಾರ್ತಿಹರನ್, ೨೦೧೪

TRAILING A TINY BUNCH

Leafing Through

Pranatartiharan's nine-volume tone on the Sanketi community is a model work of community studies

Sanketi Adhyayana, Vols. 1-9

Individuals and communities migrate from one place to another for various reasons - for greener pastures, for religious or political freedom, and occasionally, for wanderlust. Such individuals and communities, once they come across a suitable place, settle down there and in course of time, forget their original homeland, language and culture - but not totally. Even after a few centuries, traces of original language and culture stay with them and, now and then, they look back at their 'roots' with mixed feelings of wonder and nostalgia. This is one of the major reasons why Ethnic Studies and Community Studies are very popular today - they provide broad contours of different communities coming together, their mutual influences and conflicts. In short, such studies serve as micro-level socio-cultural histories. One such impressive study is Dr. Pranatartiharan's series, "Sanketi Studies".

'Sanketi: A Study,' originally, was the thesis Haran submitted for his Ph.D. degree of Mysore University in 1993. Later, in collaboration with other eminent scholars, he brought out nine volumes on the subjects related to the Sanketi community, their migrations, language, rituals and festivals, oral literature, agriculture, letters, and such. Here, I have focussed only on the first volume.

The Sanketi community is a small sub-sect of Smartha Brahmins, about 25,000 people who migrated from southern Tamil Nadu, a few centuries ago. They are found mostly in old Mysore state (especially in the neighbourhood of Kaveri and Tunga rivers), and traditionally, they are noted for agriculture, study of the Vedas, and classical music. This community, apart from Havyakas, appears to be the only Brahmin community (in Karnataka), whose main occupation is agriculture. They speak a dialect which has freely borrowed words and grammatical structures from Kannada, Malayalam and Tulu, besides retaining certain Tamil elements. They are first mentioned in the 'Mysore Census Report, 1871 and 1893'; and the first major work on this topic was M. Keshavaiah's 'Life of Nacharamma' in 1936. After Keshavaiah, many other scholars like C.S. Ramachandra, H.S. Ananthanarayana, and Kikkeri Narayana have done considerable work in this field. But Haran's work, carried on for more than a decade appears to be exhaustive and authoritative.

A few of the major conclusions of Haran are:

a) The Smartha Brahmins, living in the north, migrated to Tamilnadu during the 7-8th centuries. Since they lived in a place called Shenkotai they were called 'Sanketis'.

b) They began to migrate in waves to Karnataka in 1087 A.D., first they settled in Nilagunda (Dist. Bellary), and later, around 1120 A.D., settled in Hassan district.

c) The 'real' reason for the migration was the tragic 'Nacharamma episode'.

d) In their long journey, they followed the Kaveri river valley, which was then a popular trade-cultural route.

e) They do not owe allegiance to any one Matha or Guru.

f) They have harmonised the study of the Vedas and manual work in arecanut gardens.

g) Its orthodox beliefs and practices being questioned today, the community finds itself in a state of transition.

The second volume consists of 555 letters written by Sanketis, over a period of a century (1891-2003), collected and glossed by Haran; and they make a very interesting reading. Providing rare glimpses to a bygone world: letters expressing fears about the Plague-endemic (1926, 1945, etc.); the unemployment problem faced by the first generation to get modern education (1931, 1932, 1934, etc;. - one young man writes to his father: "who cares for B.A.s now?"); letters about early marriages (1936); a mother-in-law scalding her daughter-in-law with a hot iron as punishment (1935); the value of rupee then (1921, a father sends one rupee to his son studying in a city for his expenses); and such.


Dr. H.S. Ananthanarayana, the famous linguist, has edited Volume-4, devoted to linguistic analysis of the Sanketi-dialect; there are 22 scholarly articles written by five linguists including the editor. All these articles demonstrate that Sanketi is a dialect of Tamil, it has its own grammar, it has absorbed some features of Malayalam, and that "it is as good as any other dialect or language and serves as well as any in the function of communication."

Dr. Haran has done a remarkable job that demands scholarship, enormous labour, and perseverance. Of course, still, a few nagging questions remain regarding the 'true' cause/s of migration, the path taken during migration, etc., but that is true of all such projects involving a reconstruction of the past. But for the occasional adulatory tone, Dr. Haran's works is a model for community studies.

The Hindu **Dr. C.N. Ramachandran**
17-6-2011

ಪರಿವಿಡಿ
ಸಮೀಕ್ಷೆ

ಸಮೀಕ್ಷೆ



ಸಂಪುಟ 1

ಸಂಕೇತಿ : ಒಂದು ಅಧ್ಯಯನ

(ಸಂಸ್ಕೃತಿ-ಸಮೀಕ್ಷೆ)

ಡಾ॥ ಬಿ.ಎಸ್. ಪ್ರಣತಾರ್ತಿಹರನ್

೧ ಅರಿಕೆ

ಸಂಕೇತಿ ಸಮುದಾಯದ ಬಗೆಗೇ ಅಧ್ಯಯನ ಮಾಡುವುದೆಂದು ಅಂತಿಮವಾಗಿ ನಿರ್ಧರಿಸಿಕೊಂಡಾಗ ಖ್ಯಾತ ಜಾನಪದ ವಿದ್ವಾಂಸ ಡಾ.ಅಂಬಳಿಕೆ ಹಿರಿಯಣ್ಣ ಅವರು ಮಾರ್ಗದರ್ಶಕರಾಗಲು ಕೃಪೆ ಇಟ್ಟು ಒಪ್ಪಿದರು. ಅವರು ಜಾನಪದ ಪ್ರಪಂಚದ ಅಂತರಂಗವನ್ನು ತೆರೆದಿಟ್ಟು ಸಂಕೇತಿ ಸಮುದಾಯದ ಸಮಗ್ರ ಅಧ್ಯಯನಕ್ಕೆ ನನ್ನ ಮನೋಧರ್ಮವನ್ನು ಒಗ್ಗಿಸಿದರು. ಎಲ್ಲ ಹಂತಗಳಲ್ಲೂ ನೆರವಿಗೆ ನಿಂತರು; ಸಂಶೋಧನೆಗೆ ಮುಕ್ತ ಮಾರ್ಗವನ್ನು ಕಲ್ಪಿಸಿಕೊಟ್ಟರು; ಉದ್ದಕ್ಕೂ ಪ್ರಚೋದಕ ಶಕ್ತಿಯಾಗಿ ನಿಂತು ಚಾಲನೆ ನೀಡಿದರು. ಸಂಕೇತಿಗಳ ಯಾವ ಉಪವಿಭಾಗದ ದತ್ತಾಂಶವೂ ಮುಕ್ಕಾಗಬಾರದು ಮತ್ತು ವಿಕೃತಗೊಳ್ಳಬಾರದು ಎಂಬ ನನ್ನ ಪ್ರಾರ್ಥನೆಯ ಮೇರೆಗೆ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಸತ್ಯನಾರಾಯಣ ಶಾಸ್ತ್ರಿ, ಪ್ರೊ. ಎಲ್. ಎಂ. ಎಲ್. ಶಾಸ್ತ್ರಿ, ಶ್ರೀಮತಿ ಅನಂತಲಕ್ಷ್ಮಿ ಎಂ. ಆರ್., ಡಾ. ಎಂ. ಎಲ್. ಲಲಿತಮ್ಮ, ಪ್ರೊ. ಆರ್.ಕೆ. ಶ್ರೀಕಂಠಕುಮಾರಸ್ವಾಮಿ, ಡಾ. ಆರ್.ಆರ್. ಕುಲಕರ್ಣಿ, ಡಾ. ಆರ್. ರಾಮಕೃಷ್ಣ ಅವರು ಆಂಶಿಕವಾಗಿ ಇಲ್ಲವೆ ಪೂರ್ಣವಾಗಿ ನಿಬಂಧವನ್ನು ಗಮನಿಸಿ ಸೂಕ್ತ ಸಲಹೆಗಳನ್ನು ಕೊಟ್ಟರು, ಒಳ್ಳೆಯ ಅಂಶಗಳ ಬಗೆಗೆ ಮೆಚ್ಚಿ ಉತ್ತೇಜಿಸಿದರು, ನೆರವು ನೀಡಿದರು. ಪ್ರೊ. ಜಿ. ಅಶ್ವತ್ಥನಾರಾಯಣ ಅವರಂತೂ ನಿಬಂಧದ ಬೆರಳಚ್ಚು ಪ್ರತಿ ಸಿದ್ಧವಾಗುವವರೆಗೂ ನಿರಂತರವಾಗಿ ಅಪಾರ ವಾತ್ಸಲ್ಯದಿಂದ ನೋಡಿಕೊಂಡರು.

ಅಂತಿಮವಾಗಿ ಸಿದ್ಧಪಡಿಸಿ ಇಟ್ಟ ನಿಬಂಧವೂ ಸಾವಿರ ಪುಟಗಳ ಗಜಗಾತ್ರದ್ದಾಗಿತ್ತು. ಹಬ್ಬಗಳು, ಸಂಸ್ಕಾರಗಳ ಬಗೆಗೆ ಈಗಾಗಲೇ ಅಚ್ಚಾಗಿ ಬಂದಿದ್ದ ಪುಸ್ತಕಗಳ ಕೇವಲ ಉಲ್ಲೇಖ ಮಾಡಿ ವಿಶೇಷಗಳನ್ನಷ್ಟೇ ಗುರುತಿಸುವ ಮೂಲಕ ಅದರ ಗಾತ್ರವನ್ನು ಕೊಂಚ ಕುಗ್ಗಿಸಿದ್ದಾಯಿತು. ವಕ್ತೃಗಳ ಚರ್ಚೆ, ಮರುಚರ್ಚೆ, ಮುಂದುವರಿದ ಚರ್ಚೆಗಳನ್ನೆಲ್ಲ 'ಆಧಾರ'ವಾಗಿ ಕೊಟ್ಟು ಸಮರ್ಥಿಸುವ ಕ್ರಮಕ್ಕೆ ಬದಲು ತೀರ್ಮಾನಗಳನ್ನು ಕೊಟ್ಟು ಸಂಕ್ಷೇಪಿಸಿದ್ದಾಯಿತು. ಶಾಸನ, ಐತಿಹ್ಯ, ಪಹಣಿ, ಗೋತ್ರಸಂಬಂಧ, ಕೋರ್ಟು ಕಛೇರಿಗಳ ವ್ಯವಹಾರದ ಉಲ್ಲೇಖಗಳನ್ನೆಲ್ಲ ಬಳಸಿ ಒಂದೊಂದು ಸಣ್ಣ ವಿಷಯವನ್ನೂ ಚರ್ಚಿಸುತ್ತ ಸಾಗುವ ವಿಧಾನವನ್ನು ಬದಲಿಸಿದ್ದಾಯಿತು. ಹತ್ತಾರು ಹೇಳಿಕೆಗಳ ಇಲ್ಲವೆ ನಿದರ್ಶನಗಳ ಇಲ್ಲವೆ ಆಧಾರಗಳ ಪಟ್ಟಿಗಳನ್ನು ಬಹುವಾಗಿ ಅಡಕಗೊಳಿಸಿದ್ದಾಯಿತು. ಬಹಳಷ್ಟು ವಿವರಗಳಿಗೆ ಪಟ್ಟಿಕೆಗಳ ಆಕೃತಿ ಕೊಡಲಾಯಿತು. ಪ್ರೊ. ಅಂಬಳಿಕೆ ಅವರು ತಾಳ್ಮೆಯಿಂದ ನಿಬಂಧದ ಗತಿಯನ್ನು ನಿರ್ದೇಶಿಸಿದ್ದರ ಮೇಲೆ ಮತ್ತೆ ಮೂರು ಪುನರ್ನಿರೂಪಣೆಗಳಾದುವು. ಮೂಲಪಾಠ್ಯ ಮುನ್ನೂರು ಪುಟಕ್ಕೆ ಇಳಿದು ಪರಿಶಿಷ್ಟವು ಇನ್ನೂರು ಪುಟಗಳಲ್ಲಿ ಅಡಕವಾಯಿತು. ೧೯೯೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದ ಈ ನಿಬಂಧಕ್ಕೆ ಅದೇ ವರ್ಷ ಪಿಎಚ್.ಡಿ., ಪದವಿ ಲಭ್ಯವಾಯಿತು. ಪರಿಣತರಾದ ಡಾ. ಎ. ಶ್ರೀಕೃಷ್ಣಭಟ್ ಅವರೂ

ಡಾ. ಎಂ. ರಾಮ ಅವರೂ ಒಳ್ಳೆಯ ಅಭಿಪ್ರಾಯಗಳನ್ನು ನೀಡಿದ್ದರು.

ಈ ನಿಬಂಧವನ್ನು ಮುದ್ರಿಸುವ ಪ್ರಸ್ತಾಪ ಬಂದಾಗ ವಿಸ್ತೃತ ಸಂಶೋಧನೆ ಮಾಡಿ ವಿಷಯದ ತುದಿ ಮುಟ್ಟಿಸಿದ ಅನಂತರವೇ ಪ್ರಕಟಿಸಬೇಕೆಂದು ನಿಶ್ಚಯಿಸಿಕೊಂಡೆ. ಸದಾ ವಾತ್ಸಲ್ಯದಿಂದ ನೋಡಿಕೊಳ್ಳುವ ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಆಗ್ರಹವೂ ಅದೇ ಆಗಿತ್ತು. ಸಂಶೋಧನೆಯನ್ನು ಮುಂದುವರಿಸಿ ವಿಸ್ತೃತ ಮಾಹಿತಿಯನ್ನು ಯೋಜನಾಬದ್ಧವಾಗಿ ವಿಂಗಡಿಸಿಕೊಂಡು ಆಧಾರ ಪಾಠ್ಯಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತ ಬಂದೆ. ಹೀಗೂ ಮತ್ತೆ ಹತ್ತು ವರ್ಷ ಕಳೆಯಿತು, ಹತ್ತು ಪುಸ್ತಕಗಳನ್ನು ಪ್ರಕಟಿಸಿದ್ದಾಯಿತು. ಆಗಮಾತ್ರ, ಈ 'ಒಂದು ಹಂತ'ದ ನಿಬಂಧ ನಿಸ್ಸಂಶಯವಾಗಿ ಸುಭದ್ರ ಚೌಕಟ್ಟನ್ನು ಒದಗಿಸಿಕೊಟ್ಟಿದೆ ಎಂಬುದು ನನಗೇ ಮನದಟ್ಟಾಯಿತು. ಇನ್ನೂ ಇಷ್ಟು ವರ್ಷ ಇಷ್ಟೇ ತೀವ್ರವಾಗಿ ತೊಡಗಿಸಿಕೊಂಡರೂ 'ತುದಿಮುಟ್ಟಿಸುವುದು' ಅಸಾಧ್ಯವೆನ್ನುವುದು ಖಚಿತವಾಯಿತು. ಯಾವ ನಿಬಂಧವೂ ಯಾವ ವಿಷಯವನ್ನೂ ತುದಿ ಮುಟ್ಟಿಸಿರಲಾರದು ಎಂಬುದು ಸ್ಪಷ್ಟವಾಯಿತು. ಮೊದಲ ಬಾರಿಗೆ ಒಂದು ಸಮುದಾಯದ ಬಗೆಗಿನ ಸಮಗ್ರ ಮಾಹಿತಿಗೆ ಶಿಸ್ತುಬದ್ಧ ಸಂಯೋಜನೆ ದೊರಕಿಸಿಕೊಡುವುದು ತನ್ನಷ್ಟಕ್ಕೇ ಒಂದು ಸಾಧನೆಯಾಗುತ್ತದೆ. ಸಂಬಂಧಿಸಿದ ಹಾಗೂ ಸಂಬಂಧಿಸದ ನೂರಾರು ಸಮುದಾಯಗಳ ಬಗೆಗಿನ ಅಪಾರ ಮಾಹಿತಿ ಲಭ್ಯವಾದ ಹೊತ್ತು ಸಮಗ್ರತೆಯ ದಾರಿ ಸುಮುಖವಾಗುತ್ತದೆ. ಎಲ್ಲವೂ ಒಂದೊಂದು ಹಂತದ ಸಾಧನೆಗಳೇ ಸರಿ. ಇದು ಮತ್ತೂ ಸ್ಪಷ್ಟವಾಯಿತು. ಈವರೆಗೆ ಮಾಡಿರುವ ಇಪ್ಪತ್ತು ವರ್ಷಗಳ ಸಂಶೋಧನೆಯನಂತರ ಈ ವಿಷಯಕ್ಕೆ ಸಂಬಂಧಿಸಿದಂತೆ ನನಗೇ ವಿಶೇಷವಾಗಿ ಲಭ್ಯವಾಗಿರುವ ಹೊಳಹು ಎಂದರೆ ಯಾವ ಯಾವ ದಿಕ್ಕಿನಲ್ಲಿ ಸಂಶೋಧನೆಗೆ ಅವಕಾಶವಿದೆ ಎಂಬ ತಿಳಿವು ಮಾತ್ರ. ಈಗಾಗಲೇ ಸಂಗ್ರಹವಾಗಿರುವ ಮಾಹಿತಿಯನ್ನು ಪೂರ್ಣವಾಗಿ ಪ್ರಕಟಿಸುವುದು ಮುಂದಣ ಸಂಶೋಧನೆಯ ಸಾಧ್ಯತೆಗಳನ್ನೂ ಗತಿಯನ್ನೂ ಕ್ಷಿಪ್ರಗೊಳಿಸುವ ಮೊದಲ ಹೆಜ್ಜೆಯಾಗಬಹುದು ಎನಿಸಿತು. ಅದರಿಂದಾಗಿ ಪ್ರಸ್ತುತ ನಿಬಂಧವು ಯಥಾವತ್ತಾಗಿ ಪ್ರಕಟಣೆಗೆ ಅಣಿಗೊಂಡಿತು.

ನಿಬಂಧವು ೧೯೯೩ರಲ್ಲಿಯೇ ಮಂಡಿತಗೊಂಡರೂ, ಮುದ್ರಣಗೊಳ್ಳದುದರ ಅಪಪರಿಣಾಮಗಳೂ ಇದ್ದವು. ಈಗಾಗಲೇ ಸಿದ್ಧವಾದ ಮಾಹಿತಿಯ ಅರಿವಿಲ್ಲದ ಹಲವು ಕುತೂಹಲಿಗಳು ಸಮುದಾಯದ ಬಗೆಗಿನ ಕೆಲವು ಸಮಸ್ಯೆಗಳನ್ನು ತಮತಮಗೆ ತೋಚಿದಂತೆ ವಿಶ್ಲೇಷಿಸುವುದನ್ನು ಮುಂದುವರಿಸಿದ್ದರು. ಸಂಶೋಧನೆಯ ಪ್ರಾಮಾಣಿಕ ಕಾಳಜಿ ಇದ್ದ ದೂರದ ಊರುಗಳ ಹಲವರಿಗೆ ಪರಾಮರ್ಶೆಗೆ ಈ ನಿಬಂಧ ಸುಲಭವಾಗಿ ಸಿಗುವಂತಿರಲಿಲ್ಲ. ಹತ್ತಿರದ ಕೆಲವರು ಇದರ ಸದ್ಬಳಕೆ ಮಾಡಿಕೊಂಡರೂ ತಮ್ಮ ಬಳಿ ಈ ನಿಬಂಧದ ಒಂದು ಪ್ರತಿ ಇರಬೇಕೆಂಬ ನ್ಯಾಯವಾದ ಆಗ್ರಹವನ್ನು ಮುಂದಿಡುತ್ತಿದ್ದರು.

ಈಗ ಈ ನಿಬಂಧವು ೧೯೯೩ರ ದಾಖಲೆಯಾಗಿಯೇ ಹೊರಬರುತ್ತಿದೆ. ಆದರೂ, ಮುದ್ರಣಗೊಳ್ಳುತ್ತಿರುವ ಈ ನಿಬಂಧವು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದ ನಿಬಂಧದ ಸ್ವರೂಪದಲ್ಲಿಯೇ ಇಲ್ಲ. ಓದುಗರಿಗೆ ಸರಳವಾಗುವಂತೆ ಅದರ ಶರೀರವನ್ನು ಅಣಿಗೊಳಿಸಲಾಗಿದೆ. ಛಾಯಾಚಿತ್ರಗಳನ್ನು ಪಠ್ಯದ ನಡುವೆ ಆಯಾ ವಿಷಯಕ್ಕೆ ಹೊಂದಿಕೊಂಡಂತೆಯೇ ಜೋಡಿಸಲಾಗಿದೆ. ಅಡಿಟಿಪ್ಪಣಿಗಳನ್ನು ಆಯಾ ಪುಟಗಳಲ್ಲಿಯೇ ಅಳವಡಿಸಲಾಗಿದೆ. ಬೆರಳಚ್ಚಿನ ಹಲವು ದೋಷಗಳನ್ನು ಸರಿಪಡಿಸಲಾಗಿದೆ. ಸಹಜವಾಗಿಯೇ ಪದಸೂಚಿಯನ್ನು ಪುನಃ ರೂಪಿಸಲಾಗಿದೆ. 'ವಿಶೇಷಪದಗಳ ಅರ್ಥ'ವನ್ನು ವಿಸ್ತರಿಸಲಾಗಿದೆ. ಹೆಚ್ಚಿನ ನಕ್ಷೆಗಳನ್ನು ಸೇರಿಸಲಾಗಿದೆ. ಕಾರಣಾಂತರದಿಂದ ಛಾಯಾಚಿತ್ರಗಳಲ್ಲಿ ಮರುಜೋಡಣೆಯಾಗಿದೆ. 'ಗ್ರಂಥಋಣ' ಹಾಗೂ 'ವಕ್ತೃವಿವರ'ದ ಅನುಬಂಧಗಳನ್ನು ಕೈಬಿಡಲಾಗಿದೆ; ನೇರವಾಗಿ ಸಂಬಂಧಿಸಿದ ಉಲ್ಲೇಖಗಳಿಗೆ ಹೊಂದಿಕೊಂಡು ಅತ್ಯಗತ್ಯವಾದಷ್ಟು ಮಾತ್ರ ಅಡಿಟಿಪ್ಪಣಿಯಲ್ಲಿ ಸೇರಿದೆ. ಮಾಹಿತಿಗೆ ಪ್ರಧಾನ ಆಧಾರಗಳಾದ ಸಹಸ್ರಾರು ವಕ್ತೃಗಳ ವಿವರದ ಬಗೆಗಿನ ಅನುಬಂಧವು ಈ ಬಗೆಯ ನಿಬಂಧಗಳ ಅತ್ಯಗತ್ಯ ಭಾಗವೆಂಬುದು ಯುಕ್ತವಾದುದು. ಈಗ ಆಗಿರುವುದು ಮುದ್ರಣಾನುಕೂಲ. ಉದ್ಧೃತವಾದ ಹಲವು ಹೇಳಿಕೆಗಳು ಸಾರ್ವತ್ರಿಕವೂ ಸರ್ವಸಮ್ಮತವೂ ಆದ ಮಾತುಗಳಾದುದರಿಂದ

ಯಾವ ನಿರ್ದಿಷ್ಟ ವಕ್ತೃವಿನ ಹೆಸರನ್ನೂ ಅವುಗಳಿಗೆ ಸಂಬಂಧಿಸಿದಂತೆ ನಮೂದಿಸಿಲ್ಲ. ಪರಿಣತರು ಸೂಚಿಸಿದ್ದ ಈ ವಿಧದ ಇತರ ತಿದ್ದುಪಡಿಗಳನ್ನೂ ಅಳವಡಿಸಿಕೊಳ್ಳಲಾಗಿದೆ.

ಈ ನಿಬಂಧದ ರೂಪರೇಖೆಯನ್ನು ಸೂಚಿಸಿ, ಪ್ರಾರಂಭಿಕ ಮಾಹಿತಿ ನೀಡಿ, ಸಂಗ್ರಹವಾದ ವಿಸ್ತೃತ ಮಾಹಿತಿಯ ಬಗೆಗೆ ಚರ್ಚಿಸಿ ಮುನ್ನಡೆಯ ಹೊಳಹುಗಳನ್ನು ನೀಡಿದವರು ನನ್ನ ಪೂಜ್ಯ ತಂದೆತಾಯಿಯರಾದ ವಿದ್ವಾನ್ ಬಿ.ಎಸ್. ಸುಬ್ಬರಾಯಶಾಸ್ತ್ರೀ, ಪಾರ್ವತಮ್ಮ ಅವರು.

ಈ ನಿಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದ್ದು ೧೯೭೩ರಲ್ಲಿ. ಅದು ಇಪ್ಪತ್ತನೆಯ ಶತಮಾನ. ಇದೀಗ ಅದು ಇಪ್ಪತ್ತೊಂದನೆಯ ಶತಮಾನದಲ್ಲಿ ಮುದ್ರಣವಾಗುತ್ತಿದೆ. ಓದುಗರು, ಇದು ಇಪ್ಪತ್ತನೆಯ ಶತಮಾನದಲ್ಲಿ ಸಿದ್ಧವಾದ ಕೃತಿ ಎಂಬುದನ್ನು ಅಗತ್ಯವಾಗಿ ಮನಸ್ಸಿನಲ್ಲಿಡಬೇಕು. ಆ ಸಂಬಂಧದಲ್ಲಿಯೂ ನಿಬಂಧವನ್ನು ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ ಎಂಬುದನ್ನು ಪ್ರತ್ಯೇಕವಾಗಿ ಸೂಚಿಸಬಯಸುತ್ತೇನೆ.

ಈ ನಿಬಂಧವನ್ನು ಸಿದ್ಧಪಡಿಸುವಾಗ ಕೇಂದ್ರದಲ್ಲಿದ್ದುದು ಇಪ್ಪತ್ತನೆಯ ಶತಮಾನದ ಸ್ವಾತಂತ್ರ್ಯಪೂರ್ವ ಸಮಾಜದ ಸಾಂಪ್ರದಾಯಿಕ ಬದುಕಿನ ಸಂದರ್ಭದ ಚಿತ್ರ. ಅಲ್ಲಿಂದ ಮುಂದೆ ಹೊಸ ಶಿಕ್ಷಣ, ನಗರೀಕರಣ, ಉದ್ಯೋಗ ವಲಸೆ, ಜಾಗತೀಕರಣ, ಸಾರ್ವತ್ರೀಕರಣದ ಪರಿಣಾಮವಾಗಿ ಹಲವು ಸ್ಥಿತ್ಯಂತರಗಳು ಸಂಭವಿಸಿವೆ. ಈ ಸ್ಥಿತ್ಯಂತರದ ಅಧ್ಯಯನವೇ ಬೇರೆಯ ಸ್ವರೂಪವನ್ನು ತಳೆಯಬಹುದು. ಸಹಸ್ರಾರು ವರ್ಷಗಳ ಪಾರಂಪರಿಕ ಬದುಕಿನ ಕೊನೆಯ ಕೊಂಡಿಯ ಚಿತ್ರಣವಾಗಿ ಈ ನಿಬಂಧ ಬಂದಿದೆ. ಸಂಕೇತಿಗಳಲ್ಲಿಯೇ ಇರುವ ವಿವಿಧ ಪ್ರಾದೇಶಿಕ ಗುಂಪುಗಳ ಬಗೆಗಿನ ತೌಲನಿಕ ಅಧ್ಯಯನಕ್ಕೂ ಅವಕಾಶವಿದೆ. ಅನ್ಯ ಬ್ರಾಹ್ಮಣ ಸಮುದಾಯಗಳ ಹಲವು ರೀತಿಯ ತೌಲನಿಕ ಅಧ್ಯಯನಕ್ಕೆ ಅವಕಾಶವಿದೆ. ಎಲ್ಲ ಸಂಕೇತಿ ಪಂಗಡಗಳ ಬಗೆಗೂ ಮಾಹಿತಿಯನ್ನು ಸಂಗ್ರಹಿಸಿದ್ದರೂ ಒಂದು ಸಾಮಾನ್ಯ ಚೌಕಟ್ಟನ್ನು ನಿರ್ವಹಿಸುವ ಮಟ್ಟಿಗೆ ಅವನ್ನು ಇಲ್ಲಿ ಬಳಸಿಕೊಳ್ಳಲಾಗಿದೆ (ಇಲ್ಲಿ ಬಳಕೆಗೊಳ್ಳದೆ ಉಳಿದಿರುವ ಮಾಹಿತಿಯೂ ಇದೆ). ಎಂ. ಕೇಶವಯ್ಯನವರು ಇಂಥದೊಂದು ಚೌಕಟ್ಟನ್ನು ನಿರ್ವಹಿಸಿದ ಸುಮಾರು ಆರು ದಶಕಗಳ ಅನಂತರ ಆ ಮಾದರಿಯ ವಿಸ್ತೃತ ಚೌಕಟ್ಟೊಂದು ಇಲ್ಲಿ ಲಭ್ಯವಾಗಿದೆ. ಹೆಚ್ಚಿನ ಸಂಶೋಧನೆ ಮತ್ತು ದಾಖಲೀಕರಣವು ಈ ಸಮುದಾಯದ ಬಗೆಗಿನ ತಿಳಿವಿನ ಆಯಾಮವನ್ನು ಸುಲಭವಾಗಿ ವಿಸ್ತರಿಸುವುದು ಸಾಧ್ಯ. ಬ್ರಾಹ್ಮಣ ಸಮುದಾಯವೊಂದನ್ನು ಕುರಿತಂತೆ ಕನ್ನಡದಲ್ಲಿ ಸಿದ್ಧವಾದ ಮೊದಲ ನಿಬಂಧ ಇದು; ಅದೇ ಒಂದು ಹೆಗ್ಗಳಿಕೆಯಾಗದು. ಆದರೆ ಅದು ಪಡೆದುಕೊಳ್ಳುತ್ತಿರುವ ವಿಸ್ತಾರವು ಗಮನಾರ್ಹವಾಗಿದೆ.

ಮಕರ ಸಂಕ್ರಾಂತಿ

ಮೈಸೂರು

ಪ್ರಣತಾರ್ತಿಹರನ್

15-01-03

೨ ಪರಿವಿಡಿ

ಚಿತ್ರಗಳು

85,86	153	ಗುಣೀಕಿಡರದ್
87	154	ರಕ್ಷೆ ಇಡುವುದು
88	156	ಉಪನಯನ: ಯಜ್ಞೋಪವೀತ ಸ್ವೀಕಾರ
89	156	ಉಪನಯನ: ಸಾವಿತ್ರೀ ಉಪದೇಶ
90	156	ಉಪನಯನ: ವಟು ಭಿಕ್ಷೆ ಸ್ವೀಕರಿಸುತ್ತಿರುವುದು
91	157	ವಿವಾಹ: ನಿಶ್ಚಿತಾರ್ಥ: ಫಲತಾಂಬೂಲ ವಿನಿಮಯ
92	157	ವರಪೂಜೆ: ವರನಿಗಾಗಿ ಸಿದ್ಧವಾದ ಕಾಣಿಕೆಗಳು
93	157	ವರನಿಗೆ ಅತ್ತೆಯಿಂದ ವಸ್ತ್ರಕಾಣಿಕೆ
94	158	ವರಪೂಜೆ: ಮಾವನಿಂದ ವರನಿಗೆ ವಸ್ತ್ರಾದಿ ಕಾಣಿಕೆ
95	158	ವರಪೂಜೆ: ವಧುವಿಗೆ ಮಡಿಲು ತುಂಬುತ್ತಿರುವುದು
96	158	ಉಂಗುರ ತೊಡಿಸುವುದು
97	158	ಗೌರಿಪೂಜೆ ಮಾಡಿಸಿ ವಧುವಿಗೆ ಮಾಂಗಲ್ಯ ಕಟ್ಟುತ್ತಿರುವ ತಾಯಿ
98	158	ವಧುವಿಗೆ ಕಾಲುಂಗುರ ತೊಡಿಸುತ್ತಿರುವ ಅತ್ತೆ
99	159	ವರನು ವಧುವಿಗೆ ಕಾಲುಂಗುರ ತೊಡಿಸುತ್ತಿರುವುದು
100	159	ಕಾಶಿಯಾತ್ರೆಗೆ ಮೊದಲು ವರನಿಗೆ ಸೋದರಿಯಿಂದ ಅಲಂಕಾರ
101	159	ವಧುವಿನಿಂದ ಅಶ್ವತ್ಥವೃಕ್ಷದ ಪೂಜೆ
102	159	ಕಾಶಿಯಾತ್ರೆ
103	160	ಧಾರೆ ಎರೆಯುವ ದೃಶ್ಯ
104	160	ಸಪ್ತಪದಿ
105	160	ಯುಗಚ್ಛಿದ್ರಪ್ರತಿಷ್ಠಾಪನೆ
106	161	ಊಂಜಲ್
107,108	161	ಮಾಯಿಪಳಂ ಸಭೆ
109	162	ಮುತ್ತುಹವಳ ತೆಗೆಯುವುದು
110	163	ಸಕ್ಕರೆ ಬಾಳೆಹಣ್ಣು ತಿನ್ನಿಸುವುದು
111	163	ಊರಬಟ್ಟು ಬೀರಲು ಸಿದ್ಧತೆ
112,113	164	ಸಭೆಯ ದೃಶ್ಯ
114	165	ಪಾಡಿಬಿಡುವುದು
115	171	ಔಪಾಸನೆ
116	171	ವೈಶ್ವದೇವ
117	172	ವೈಶ್ವದೇವ
118,119	172	ಚಾತುರ್ಮಾಸ್ಯ ಯಜ್ಞ
120	173	ಚಾತುರ್ಮಾಸ್ಯ ಯಜ್ಞ
121	173	ಗಣಪತಿ ಹೋಮ: ಪೂರ್ಣಾಹುತಿ
122	173	ರಾಮಾಯಣ ಪಾರಾಯಣ
123	176	ತೆಂಗಿನಕೆರೆಯ ಒಂದು ಗುಡಿ
124	176	ಬಸವಾನಿಯ ದೇವಸ್ಥಾನ
125	180	ಪಾದಪೂಜೆ
126	187	ವಾರಾತುರುವೆ
127	189	ಅಂಗಡಿ ಹಬ್ಬ: ಲಿಂಗದಹಳ್ಳಿ
128	191	ಗೋವರ್ಧನ ಪೂಜೆ
129	191	ದೀಪಾವಳಿ: ಗೋವುಗಳಿಗೆ ಅಲಂಕಾರ, ಪೂಜೆ
130	192	ಗಣಪತಿ ಪೂಜೆ
131	192	ತೊಟ್ಟಿಲು ಗೌರಮ್ಮನಿಗೆ ಪೂಜೆ
132	192	ಲಿಂಗದಹಳ್ಳಿ: ಅನಂತಪದ್ಮನಾಭ ವ್ರತ
133	193	ಲಿಂಗದಹಳ್ಳಿ: ಮಂಗಳಾರತಿಗೆ ಸೇರಿದ ಭಕ್ತರು
134	194	ತೀರ್ಥಸ್ನಾನ: ರಾಮನಾಥಪುರ
135	196	ಕೋಲು : ನವರಾತ್ರಿಯ ಬೊಂಬೆ
136	197	ಶ್ರೀರಾಮನವಮಿ: ಓಕುಳಿ
137	199	ಸರಸ್ವತಿ ಪೂಜೆ
138	200	ನಾಗಮಂಡಲ: ಲಿಂಗದಹಳ್ಳಿ
139	200	ಕೃಷ್ಣನ ಉಡಿಗೆಜ್ಜೆ ಮತ್ತು ಪಾದದ ರಂಗೋಲಿ: ಉಪಾಕರ್ಮ
140	201	ವರಮಹಾಲಕ್ಷ್ಮಿ ಹಬ್ಬ: ಲಕ್ಷ್ಮಿಯ ಹೆಜ್ಜೆ
141	231	ಬಕ್ಷಿ ತಿಪ್ಪಯ್ಯ

ಅನುಬಂಧಗಳು 257-364

1. ನಕ್ಷೆಗಳು

೩. ಉಪಸಂಹಾರ

೧. ಅ. ಲಭ್ಯ ಸಾಂಸ್ಕೃತಿಕ ಆಧಾರಗಳಿಂದ ಸೂಚಿತವಾಗುವಂತೆ ಕ್ರಮವಾಗಿ ಗಂಗಾ, ನರ್ಮದಾ, ಗೋದಾವರೀ ತೀರಗಳಲ್ಲಿ ನೆಲೆಸಿದ್ದು (ಈಗಿನ) ತಮಿಳುನಾಡಿನ ಶೆಂಕೋಟ್ಟೈಸೀಮೆಗೆ ವಲಸೆ ಬಂದ ಬ್ರಾಹ್ಮಣರ ಒಂದು ಗುಂಪು ಇತರ ಸಮಾನ ನಿದರ್ಶನಗಳಂತೆ ಸ್ಥಳಾಧಾರಿತ ಹೆಸರು ಪಡೆದು 'ಸಂಕೇತಿ' ಎನಿಸಿತು.

ಆ. ಖಚಿತ ನಿರ್ಧಾರಕ್ಕೆ ಬಲವಾದ ಆಧಾರಗಳು ದೊರೆಯದಿದ್ದರೂ, ಸಂಕೇತಿಗಳು ತಮಿಳುನಾಡಿನಲ್ಲಿ ನೆಲೆಸಿದ ಕಾಲವನ್ನು ಶಂಕರರ, ಇಲ್ಲವೆ ಶಂಕರಾನಂತರದ ಸನಿಹದ ಶತಮಾನದಲ್ಲಿ ಗುರುತಿಸಬಹುದು.

ಇ. ವಿಂಧ್ಯದಕ್ಷಿಣದ ಪಂಚದ್ರಾವಿಡರಲ್ಲಿ ಭಾಷೆ ಮತ್ತು ದೇಶಸೂಚಿಯಾಗಿ 'ದ್ರಾವಿಡ' ಬ್ರಾಹ್ಮಣರೆನಿಸಿದ ತಮಿಳು ಬ್ರಾಹ್ಮಣರಲ್ಲಿ ಸಂಕೇತಿಗಳದೂ ಒಂದು ಪುಟ್ಟ ಸ್ಮಾರ್ತಸಂಪ್ರದಾಯದ ಉಪಜಾತಿಯಾಗಿ ಮುಂದುವರಿಯಿತು.

೨. ಅ. ಶೆಂಕೋಟ್ಟೈಸೀಮೆಯಿಂದ (ಮುಖ್ಯವಾಗಿ ಶಾಪತ್ತೂರ್ ಕೇಂದ್ರದಿಂದ) ಕರ್ನಾಟಕಕ್ಕೆ ಆದ ಸಂಕೇತಿಗಳ ಐತಿಹಾಸಿಕ ವಲಸೆಯು ಮೊದಲು ನೀಲಗುಂದಕ್ಕೆ (ಹರಪನಹಳ್ಳಿ ತಾಲ್ಲೂಕು, ಬಳ್ಳಾರಿಜಿಲ್ಲೆ) ಕ್ರಿ.ಶ.೧೦೮೭ರಲ್ಲಿಯೂ, ಅನಂತರ ಕೌಶಿಕಕ್ಕೆ (ಹಾಸನ ತಾಲ್ಲೂಕು, ಹಾಸನಜಿಲ್ಲೆ) ಕ್ರಿ.ಶ.೧೧೨೦ರಲ್ಲಿಯೂ ಆಗಿರುವುದಕ್ಕೆ ಖಚಿತ ಆಧಾರಗಳಿವೆ. ಕ್ರಿ.ಶ.೧೦೮೭ ಮತ್ತು ಕ್ರಿ.ಶ.೧೧೨೩ರ ನಡುವೆ ಕರ್ನಾಟಕಕ್ಕೆ ತರಂಗಿತ ವಲಸೆಗಳಾದವು ಎಂಬುದು ವಲಸೆಗಳ ಪ್ರವೃತ್ತಿಗೆ ಅನುಗುಣವಾದುದು.

ಆ. ವ್ಯಾಪಕವಾದ ಮತ್ತು ಖಚಿತವಾದ ಆಧಾರಗಳಿಂದ ಸಮರ್ಥಿತವಾಗುವಂತೆ, ಕರ್ನಾಟಕಕ್ಕೆ ಆದ ಸಂಕೇತಿಗಳ ಐತಿಹಾಸಿಕ ವಲಸೆಯ ನಿಜವಾದ ಕಾರಣವು, ನಾಚಾರಮ್ಮನಿಗೆ ಸಂಬಂಧಿಸಿದ ದುರಂತ ಪ್ರಸಂಗವೇ ಆಗಿದೆ. ಈ ಸಂಬಂಧದ ಇತರ ವಾದಗಳು ನಿರಾಧಾರವಾದುವಾಗಿವೆ.

ಇ. ಶೆಂಕೋಟ್ಟೈಸೀಮೆಯಿಂದ (ಈಗಿನ) ತಮಿಳುನಾಡು ಮತ್ತು ಕೇರಳದ ವಿವಿಧ ನೆಲೆಗಳಿಗೆ ಆದ ವಲಸೆಗಳು, ಕಾಲ ಮತ್ತು ಕಾರಣದಲ್ಲಿ ಕರ್ನಾಟಕಕ್ಕೆ ಆದ ಐತಿಹಾಸಿಕ ವಲಸೆಗೆ ಹೊಂದಿಕೊಂಡಂತೆ ಆಗಿರದೆ, ಅನೇಕ ಶತಮಾನಗಳ ದೀರ್ಘ ಅವಧಿಯಲ್ಲಿ ಜೀವನಾಧಾರಕ್ಕಾಗಿ ಕಾಲಕಾಲಕ್ಕೆ ಆದವು.

ಈ. ವ್ಯವಸ್ಥಿತವಾದ ಮತ್ತು ಸಾಮುದಾಯಿಕ ಕಾರಣದ ವಲಸೆಯಾದುದರಿಂದಲೇ, ಕರ್ನಾಟಕಕ್ಕೆ ಆದ ಈ ಮಹಾವಲಸೆಯು, ಆ ದಿನಗಳ ಪ್ರಚಲಿತ ವಾಣಿಜ್ಯ ಮತ್ತು ಸಾಂಸ್ಕೃತಿಕ ಮಾರ್ಗವಾಗಿದ್ದ ಕಾವೇರೀಕಣಿವೆಯ ಪಥದಲ್ಲಿಯೇ ನಡೆಯಿತು ಎಂಬುದಕ್ಕೆ ಪೂರಕ ಆಧಾರಗಳೂ ಇವೆ.

ಉ. ಕರ್ನಾಟಕಕ್ಕೆ ಆದ ಮಹಾವಲಸೆಯ ಗಾತ್ರವು ಸಾವಿರ ಕುಟುಂಬಗಳಿಗೂ ಹೆಚ್ಚಿನದಿತ್ತು ಮತ್ತು ಅಲ್ಲಿ ಉಳಿದವರಿಗಿಂತಲೂ ವಲಸೆಹೊರಟವರ ಸಂಖ್ಯೆ ದೊಡ್ಡದಾಗಿತ್ತು ಎಂಬುದು ತರ್ಕಸಮ್ಮತವಾಗಿದೆ.

೩. ಅಸಂಪರ್ಕ ಇಲ್ಲವೆ ಅಲ್ಪಸಂಪರ್ಕದಿಂದಾಗಿಯೇ, ಕಾಲಕ್ರಮದಲ್ಲಿ ಪ್ರತ್ಯೇಕತೆಯನ್ನು ಪಡೆದು ಆದ ಉಪಪಂಗಡಗಳ ಜನಸಂಖ್ಯೆಯು ನಾನಾ ಆಧಾರಗಳಿಂದ, ಖಚಿತತೆಗೆ ಸಮೀಪವಾಗಿ ವ್ಯಕ್ತವಾಗುವುದು ಹೀಗೆ:

ಅ. ಕರ್ನಾಟಕದಲ್ಲಿ:	ಕೌಶಿಕ ಸಂಕೇತಿ	-	೧೬,೩೦೦
	ಲಿಂಗದಹಳ್ಳಿ ಸಂಕೇತಿ (ಮಲೆನಾಡು ಸಂಕೇತಿ)	-	೭೦೦

	ಬೆಟ್ಟದಪುರ ಸಂಕೇತಿ	-	೬೦೦೦
ಆ. ದಕ್ಷಿಣದಲ್ಲಿ :	ದಕ್ಷಿಣ ಸಂಕೇತಿ	-	೨೦೦೦
		ಒಟ್ಟು	೨೫,೦೦೦

ಸಂಕೇತಿಗಳು ಪಾರಂಪರಿಕವಾಗಿ ನೆಲೆಸಿರುವ ಜಿಲ್ಲೆಗಳು: ಹಾಸನ, ಶಿವಮೊಗ್ಗ, ಮೈಸೂರು, ಮಂಡ್ಯ, ಚಿಕ್ಕಮಗಳೂರು; ತಿರುನೆಲ್‌ವೇಲಿ, ಕನ್ಯಾಕುಮಾರಿ; ತಿರುವನಂತಪುರಂ.


ಅವರು ಈಗ ಚದುರಿರುವ ಪ್ರದೇಶಗಳು: ಬೆಂಗಳೂರು, ಮದರಾಸು, ಮುಂಬಯಿ, ದೆಹಲಿ, ಇತರ ರಾಜ್ಯಗಳು ಮತ್ತು ಹೊರದೇಶಗಳು ಕೂಡ.

ಇವುಗಳಲ್ಲಿ, ಕರ್ನಾಟಕ ಮತ್ತು ದಕ್ಷಿಣದ ಸಂಪರ್ಕವು ಕಳೆದ ಒಂಬತ್ತು ಶತಮಾನಗಳಿಂದಲೂ ಪೂರ್ಣವಾಗಿ ಕಡಿದುಬಿದ್ದಿದೆ. ಕೌಶಿಕ, ಬೆಟ್ಟದಪುರ, ಲಿಂಗದಹಳ್ಳಿ - ಮೂರೂ ಖಚಿತವಾದ ಪ್ರತ್ಯೇಕತೆಯನ್ನು ಪಡೆದಿವೆ. ಮತ್ತೂರು ಪ್ರತ್ಯೇಕಗೊಳ್ಳುವ ಸೂಚನೆಗಳನ್ನು ಪ್ರಕಟಿಸುತ್ತಿದ್ದಾಗಲೇ, ಹಾಸನಸೀಮೆಯೊಂದಿಗಿನ ಸಂಪರ್ಕಸಾಧ್ಯತೆಗಳು ಅದನ್ನು ತಪ್ಪಿಸಿವೆ. ಆಧುನಿಕ ಸನ್ನಿವೇಶದಲ್ಲಿ ಈ ಪಂಗಡಗಳು ಒಂದಾಗಿ ಕೂಡುವ ಲಕ್ಷಣಗಳು ಕಂಡುಬರುತ್ತಿವೆ.


೪. ಅ. ಎಲ್ಲೆಡೆಯ ಸಂಕೇತಿಗಳಲ್ಲಿ ಕಾಣಿಸುವ ಸಮಾನ ಪ್ರವೃತ್ತಿ ಎಂದರೆ, ಜೀವನಾಧಾರಕ್ಕಾಗಿ ಮತ್ತೆ ಮತ್ತೆ ಮರುವಲಸೆ ಹೊರಡಲು ಹಿಂಜರಿಯದ ಅಕ್ಷರಶಃ ಅಲೆಮಾರೀ ಲಕ್ಷಣ. ಪೂರ್ಣವಾಗಿ ಉಧ್ವಸ್ತಗೊಂಡ ತಮ್ಮ ಬದುಕನ್ನು ಹೊಸನೆಲೆಯೊಂದರಲ್ಲಿ ಆಮೂಲಾಗ್ರವಾಗಿ ಕಟ್ಟಿಕೊಳ್ಳಬೇಕಾಗಿದ್ದ ಕರ್ನಾಟಕದ ಸಂಕೇತಿಗಳ ಮರುವಲಸೆಗಳ ವಿವರಗಳಲ್ಲಿ ಕಾಣಿಸುವ ತೀವ್ರತೆ, ಸಂಕೀರ್ಣತೆ, ತಳಮಳದ ಲಕ್ಷಣವು ದಕ್ಷಿಣದ್ದಲ್ಲ.

ಆ. ಕರ್ನಾಟಕದಲ್ಲಿನ ಮರುವಲಸೆಗಳು ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರು ಅರಸರ ರಾಜಾಶ್ರಯವನ್ನನುಸರಿಸಿ ಪ್ರಧಾನ ತರಂಗಗಳಲ್ಲಿ ನಡೆದವು. ಅವನ್ನು ಅನುಸರಿಸಿ ವಿವಿಧ ಕಾರಣಗಳಿಗಾಗಿ ಸಂಕೀರ್ಣಸ್ವರೂಪದ ವಲಸೆಗಳು ಮುಂದುವರಿದವು. ಅವುಗಳನ್ನು ಎರಡು ಪ್ರಧಾನ ಸ್ತರಗಳಲ್ಲಿ ಗುರುತಿಸಬಹುದು:

1.




2.



ಹೊಯ್ಸಳರಾಜ್ಯಕ್ಕೆ ಆದ ವಲಸೆಗಳ ಸಂದರ್ಭವು, ಸಂಕೇತಿಗಳಿಗೆ, ಅನಿರ್ದಿಷ್ಟತೆಯ ಆತಂಕದಿಂದ ಮುಕ್ತವಾದುದಾಗಿರಲಿಲ್ಲ. ವಿಜಯನಗರದ ಅರಸರ ಆಶ್ರಯದ ವೇಳೆಗೆ ಅವರದು ಸುಸ್ಥಿರ ಮತ್ತು ಸುಸ್ಥಿತ ವಲಸೆಯಾಗಿತ್ತು. ಮೈಸೂರು ಅರಸರ ವೇಳೆಗೆ ರಾಜಕಾರಣದಲ್ಲಿ ಮುಖ್ಯ ಜವಾಬ್ದಾರಿಗಳನ್ನು ನಿರ್ವಹಿಸುವ ಮೇಲ್ಮೆ ಸಿದ್ಧಿಸಿತ್ತು.

ದಕ್ಷಿಣದಲ್ಲಿ, ಈ ಮರುವಲಸೆಗಳಿಗೆ ಸಂಬಂಧಿಸಿದ ಕಾಲದ ಖಚಿತ ಆಧಾರಗಳು ದೊರೆಯದುದಕ್ಕೆ ಅವು ವೈಯಕ್ತಿಕ ನೆಲೆಯಲ್ಲಿ ವಿಶಾಲ ಕಾಲಹರಹಿನಲ್ಲಿ ಆದ ವಲಸೆಗಳಾದುದು ಕಾರಣವಾಗಿದೆ.



೩. ವ್ಯವಸಾಯಕೇಂದ್ರಿತ ಬದುಕಿಗಾಗಿ 'ತೃಣಜಲಸಮೃದ್ಧವಾದ' ನೆಲೆಗಳನ್ನು ಅನ್ವೇಷಿಸುತ್ತ ಹೊರಟುದು ಕರ್ನಾಟಕದಲ್ಲಿ ನಡೆದರೆ, ದೇವಸ್ಥಾನಸೇವೆಗೆ ಒತ್ತುಬಿದ್ದ ದಕ್ಷಿಣದಲ್ಲಿ ಪ್ರಮುಖ ದೇವಸ್ಥಾನಗಳನ್ನು ಅದು ಅನುಸರಿಸಿತು. ಎಲ್ಲೆಡೆಯ ನೆಲೆಗಳೂ ಹಳ್ಳಿಗಳೇ ಮತ್ತು ಪಶ್ಚಿಮ ಘಟ್ಟದ ಪೂರ್ವದ ಅರೆಮಲೆನಾಡುಭಾಗದ ನದೀತಟಗಳ ಸೀಮಿತವಲಯವೆಂಬುದು ಎದ್ದುಕಾಣುವ ಸಾಮ್ಯ. ಮಳೆ, ಬೆಳೆ, ಹವಾಮಾನ, ಸುಸ್ಥಿರತೆ, ರಾಜಾಶ್ರಯ ಇವುಗಳಿಗೆ ಸಮಗ್ರವಾಗಿ ಹೊಂದಿಕೊಂಡಂತೆ ಅದು ನಡೆದಿದೆ. ಗ್ರಾಮಒಕ್ಕೂಟ ಮತ್ತು 'ಸಂಕೇತಂ' (ಹೆಚ್ಚಿನ ಸಂಖ್ಯೆಯ ಸಂಕೇತಿಗಳು ಒಟ್ಟಾಗಿ ತಮ್ಮ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಮುಂದುವರಿಸಿಕೊಂಡು ಬಾಳುವ ನೆಲೆ) ಎಲ್ಲೆಡೆಯ ಸಂಕೇತಿ ನೆಲೆಗಳ ಲಕ್ಷಣವಾದರೂ, ವ್ಯವಸಾಯಕೇಂದ್ರಿತತೆ ಮುಂದುವರಿದಿರುವುದರಿಂದಲೂ, ಜನಸಂಖ್ಯೆ ದೊಡ್ಡದಾದುದರಿಂದಲೂ, ಕರ್ನಾಟಕದಲ್ಲಿ ಆ ಪರಂಪರೆ ಹೆಚ್ಚು ಜೀವಂತವಾಗಿದೆ.

೫. ಅ. ಅವರಿಗೆ ಷಟ್ಕರ್ಮವಾಗಲಿ, ಪಶುಪಾಲನೆ (ಗೋಸೇವೆ)ಯಾಗಲಿ ಆರ್ಥಿಕ ಉದ್ಯೋಗಗಳಾಗಿಲ್ಲ; ಬದಲಿಗೆ, ಧಾರ್ಮಿಕ ಕರ್ತವ್ಯಗಳು. ಅದು ಸಾಧ್ಯವಾದದ್ದು ಕೃಷಿ ಮತ್ತು ವೈದಿಕತೆಯ ಸಮನ್ವಯವನ್ನು ಸಾಧಿಸಿದ್ದುದರಿಂದ. ಈ ಸಮನ್ವಯವು ಸಾಧ್ಯವಾದದ್ದು ತೋಟಗಾರಿಕೆ ಅದಕ್ಕೆ ಅನುಕೂಲಕರವಾದುದರಿಂದ. ಕರ್ನಾಟಕದಲ್ಲಿ ಕೃಷಿಗೆ ಒತ್ತುಬಿದ್ದು, ಅದು ಹೊಲಗದ್ದೆಗಳ ವ್ಯವಸಾಯಕ್ಕೂ ವಿಸ್ತರಿಸಿತು; ಸ್ವಾವಲಂಬನೆಗಾಗಿ ತಮ್ಮದಲ್ಲದ ವೈವಿಧ್ಯಪೂರ್ಣ ಕಸಬುಗಳನ್ನು ಸಮೂಹತತ್ವದಿಂದ ನಿರ್ವಹಿಸಿಕೊಳ್ಳುವ ತುರ್ತು ಅವರಿಗಿತ್ತು. ಕಠಿಣ ದುಡಿಮೆಗೆ ಒಡ್ಡಿಕೊಂಡರು. 'ದಕ್ಷಿಣ'ದಲ್ಲಿ, ದೇವಸ್ಥಾನಸೇವೆಗೇ ಹೆಚ್ಚು ಒತ್ತುಬಿತ್ತು. ಆದರೆ ಬಹುಮುಖ ವೃತ್ತಿನೈಪುಣ್ಯವಿದ್ದರೂ ಆರ್ಥಿಕ ದೌರ್ಬಲ್ಯದಿಂದಾಗಿ ಜೀವನವು ಒಂದು ಹೋರಾಟವಾದುದು ಎಲ್ಲೆಡೆಯ ಸಂಕೇತಿಗಳ ಲಕ್ಷಣ. ವ್ಯವಸಾಯದ ನಂಟೂ ಬಿಟ್ಟುಹೋಗಿ ನೌಕರಿಗಳೂ ದೊರೆಯದ ಸದ್ಯದಸ್ಥಿತಿಯಲ್ಲಿ ಆರ್ಥಿಕ ಬಿಕ್ಕಟ್ಟು ಮತ್ತೂ ದೊಡ್ಡದಾಗುತ್ತಿದ್ದು ನಗರೀಕರಣವನ್ನು ಅನಿವಾರ್ಯಗೊಳಿಸುತ್ತಿದೆ.

ಆ. ದುಡಿಮೆಗಾರರಾದರೂ ಆರ್ಥಿಕಮಿತಿ, ಸಾಧನಸೌಲಭ್ಯಗಳಮಿತಿ ಮತ್ತು ಧಾರ್ಮಿಕಮಿತಿಯಿಂದಾಗಿ ಅವರದು ಸರಳವಾದ ಸಸ್ಯಾಹಾರವಾಗಿದ್ದು, ಪೌಷ್ಟಿಕಾಂಶಗಳನ್ನು ಪೂರೈಸಲು ಸೋಲುತ್ತದೆ. ಕಠಿಣ ದುಡಿಮೆಗೆ ಒಡ್ಡಿಕೊಂಡ ಸಂಕೇತಿಗಳು ಭೋಕ್ತಾಪುರುಷರೆಂಬುದನ್ನು ಇದು ಸರಿಯಾಗಿ ವಿವರಿಸುತ್ತದೆ. ಸಾಂದರ್ಭಿಕವಾಗಿ ಆಗಾಗ ಆಹಾರದಲ್ಲಿ ಏಕತಾನವು ಪರಿಹಾರವಾದರೂ ಅದು ಪುಷ್ಟಿಗೆ ಪೂರಕವಾಗುವುದಿಲ್ಲ. ಆಹಾರ ತಯಾರಿಕೆಯಿಂದ ಹಿಡಿದು ಭೋಜನಾನಂತರದವರೆವಿಗೂ ಇರುವ ಕ್ರಮಬದ್ಧತೆ, ಅತಿಥಿಗಳಿಗೆ ನಡೆಯುವ ವಿಶೇಷ ಉಪಚಾರ,

ಆಹಾರದಲ್ಲಿ ವೈದ್ಯಕೀಯಗಣನೆ, ಸಂಯಮ, ರುಚಿವೈವಿಧ್ಯ, ಬಂಧುತ್ವವೃದ್ಧಿಗಾಗಿ ಮತ್ತು ಸಂಸ್ಕೃತಿಮಾಧ್ಯಮವಾಗಿ ಆಹಾರದ ಬಳಕೆ - ಇವು ಅಲ್ಲಿನ ಉತ್ತಮಾಂಶಗಳು. ಆಹಾರಕ್ರಮದಲ್ಲಿ ಅವರದೇ ಆದ ವೈಶಿಷ್ಟ್ಯಗಳಿವೆ; ಅವುಗಳಲ್ಲಿ, 'ಶಾವಿಗೆ', 'ನೀರ್‌ಪಿಳಿ', 'ಪುಟ್ಟು' ಮೊದಲಾದವು ಅವರ ವಿಶಿಷ್ಟ ಬಳಕೆಯವೂ ಹೌದು. ಭೌಗೋಳಿಕ ಸನ್ನಿವೇಶವನ್ನನುಸರಿಸಿಯೂ ಆಹಾರ ವೈವಿಧ್ಯಗಳಿವೆ. ಹೆಣ್ಣಿಗೆ ಸಂಬಂಧಿಸಿದಂತೆ ನಡೆಯುವ 'ಆರೈಕೆ'ಯ ವಿಶಿಷ್ಟ ಕ್ರಮವು ವೈದ್ಯವಿಜ್ಞಾನದ ಹಿನ್ನೆಲೆಯಲ್ಲಿ ಅಧ್ಯಯನಯೋಗ್ಯವಾದುದು. ಆಧುನಿಕ ಜೀವನ ಕ್ರಮವು ಸಂಕೇತಿಗಳ ಆಹಾರ ಪಾನೀಯಗಳ ವಿವರದಲ್ಲಿ ಬದಲಾವಣೆಗಳನ್ನು ಕ್ಷಿಪ್ರವಾಗಿ ತರುತ್ತಿದ್ದರೂ, ತಮ್ಮದೇ ಆದ ವೈಶಿಷ್ಟ್ಯಗಳು ಮಾಸಿಲ್ಲ.

ಇ. ಅವರ ಉಡುಗೆ, ತೊಡುಗೆ, ಕೇಶಾಲಂಕಾರ, ಲಾಂಛನಗಳೆಲ್ಲವೂ ಧಾರ್ಮಿಕ ನಂಬಿಕೆಗಳಿಂದ ನಿಯಂತ್ರಿಸಲ್ಪಟ್ಟಿವೆ. ಆದುದರಿಂದಲೇ, ಮೂಲಭೂತವಾಗಿ ಅತ್ಯಂತ ಸರಳವಾದರೂ ಅವೆಲ್ಲವೂ ಸಂದರ್ಭಗಳನ್ನನುಸರಿಸಿ ಶಿಸ್ತುಪೂರ್ಣವಾಗಿ ವೈವಿಧ್ಯಪೂರ್ಣವಾಗಿ ಪ್ರಕಟಗೊಳ್ಳುತ್ತವೆ. ಸೌಂದರ್ಯಪ್ರಜ್ಞೆಗಿಂತಲೂ ಕಾರ್ಯಸಾಧ್ಯತೆ ಇಲ್ಲಿ ಮುಖ್ಯವಾಗುತ್ತದೆ. ಸೌಂದರ್ಯಪ್ರಜ್ಞೆಯು ಅತಿಶಯವಾಗಿ ವ್ಯಕ್ತಗೊಳ್ಳುವುದು ಸ್ತ್ರೀಯರ ಕೇಶಾಲಂಕಾರ, ಒಡವೆಗಳು ಮತ್ತು ಲಾಂಛನದಲ್ಲಿ. ಆದರೆ, ಸಾಂಪ್ರದಾಯಿಕ ಸಂದರ್ಭದಲ್ಲಿ ಅವೂ ಲಜ್ಜೆಯ ಮಿತಿಯಲ್ಲೇ ಉಳಿಯುವಂಥವು. ಮೂಲಭೂತ ಸಾಂಸ್ಕೃತಿಕ ಅಂಶಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲವೂ ಈಗ ಸಾರ್ವತ್ರಿಕಗೊಳ್ಳುತ್ತಿವೆ. ಗಂಡೀಸೀರೆಯಂಥ ಐತಿಹಾಸಿಕ ಸಾಂಸ್ಕೃತಿಕ ವಿಧಾನವೇ ಬಿಟ್ಟುಹೋಗಿರುವುದರ ಹಿನ್ನೆಲೆಯಲ್ಲಿ, ಮಾಂಗಲ್ಯದ ಮೂಲರೂಪು ಕರ್ನಾಟಕ ಮತ್ತು ದಕ್ಷಿಣದಲ್ಲಿ ಭಿನ್ನವಾಗಿ ಬೆಳೆದಿರುವುದನ್ನು ಅರ್ಥಮಾಡಿಕೊಳ್ಳಬಹುದು.

ಈ. ಪರಿಸರದಲ್ಲಿ ಸುಲಭಲಭ್ಯವಿದ್ದ ಮರಮುಟ್ಟುಗಳನ್ನು ಬಳಸಿದುದು ಮತ್ತು ಮರಗೆಲಸ, ಕುಸುರಿಗೆಲಸಗಳೂ ಸೇರಿದಂತೆ ಪೂರ್ಣವಾಗಿ ತಮ್ಮ ವಸತಿಗಳನ್ನು ತಾವೇ ಸಮೂಹತತ್ತ್ವದಿಂದ ಕಟ್ಟಿಕೊಳ್ಳುವುದರಲ್ಲಿ ಅವರ ವಿಶೇಷವಿದೆ. ತಮ್ಮ ಮಿತಿಯಲ್ಲಿ ಅಂದಕ್ಕೆ, ಅದಕ್ಕಿಂತಲೂ ಶುಚಿತ್ವ, ಸುಭದ್ರತೆ, ಸುರಕ್ಷಿತತೆಗೆ ಒತ್ತುಕೊಟ್ಟದಿನಗಳಲ್ಲಿ - ಅಂದಕ್ಕಾಗಿ ಅವರು ಅನ್ವೇಷಿಸಿಕೊಂಡ ವಿಧಾನಗಳಲ್ಲಿಯೂ ಅವರ ಕೊಡುಗೆ ಇದೆ. ಶಾಸ್ತ್ರವಿಧಿಗಳನ್ನನುಸರಿಸುತ್ತಲೇ, ಕೃಷಿ ಮತ್ತು ವೈದಿಕತೆಗೆ ಅನುಕೂಲವಾಗುವಂತೆ ಹಾಗೂ ಹವಾಮಾನದಿಂದ ರಕ್ಷಣೆಗೆ ಒದಗುವಂತೆ ತಮ್ಮ ಮನೆಗಳನ್ನು ರೂಪಿಸಿದುದರಲ್ಲಿಯೂ ಅವರ ಪರಿಣತಿ ಇದೆ. ಕಾಲಕ್ರಮದಲ್ಲಾದ ಗೃಹವಿನ್ಯಾಸದ ಬದಲಾವಣೆಗಳಿಗೆ ಆರ್ಥಿಕಾನುಕೂಲ ಕಾರಣವಾಗುವುದರ ಬದಲು ಸುರಕ್ಷಾಸ್ಥಿತಿಗತಿಗಳನ್ನನುಸರಿಸಿ ಇಲ್ಲವೆ ಸಂಶೋಧನೆಗಳನ್ನನುಸರಿಸಿ ಸಾರ್ವತ್ರಿಕವಾಗಿ ಆದ ಬದಲಾವಣೆಗಳೇ ಕಾರಣವಾಗಿವೆ. ಭೌಗೋಳಿಕ ಪರಿಸರವೂ ಅವರ ವಸತಿಗಳ ರಚನೆಗಳನ್ನು ಪರಿಣಮಿಸಿದೆ; ಅದರಿಂದಾಗಿಯೇ ವಸತಿಗೆ ಸಂಬಂಧಿಸಿದಂತೆಯೂ ಪ್ರಾಂತವೈವಿಧ್ಯವಿದೆ. ಮತ್ತೂರು ಮತ್ತು ದಕ್ಷಿಣದ ತೊಟ್ಟಿಮನೆಗಳಲ್ಲಿ ಮಾತ್ರ ಎದ್ದುಕಾಣುವ ಸಾಮ್ಯ ಇರುವುದು ಕೆಲವು ಅಂಶಗಳಲ್ಲಿ ಶತಮಾನಗಳ ಅನಂತರವೂ ಕೆಲವೆಡೆಗಳಲ್ಲಾದರೂ ಪರಂಪರೆಯು ಹಾಗೆಯೇ ಮುಂದುವರಿದಿರುವುದನ್ನು ಸಮರ್ಥಿಸುತ್ತದೆ. ದೇವಸ್ಥಾನವನ್ನು ಮಗ್ಗುಲಿಗೆ ಬಿಟ್ಟುಕೊಂಡ ರಸ್ತೆಗಳ ಚೌಕವ್ಯವಸ್ಥೆಯಲ್ಲಿಯೂ ಅಂಥ ಗಾಢವಾದ ಹಾಗೂ ವ್ಯಾಪಕವಾದ ಸಾಮ್ಯವಿದೆ.

೬. ಅ ಸಂಕೇತಿಗಳ ಸಾಮಾಜಿಕ ಮತ್ತು ಧಾರ್ಮಿಕ ಜೀವನವು (ಇತರ ಬ್ರಾಹ್ಮಣರಿಗೆ) ಸಮಾನವಾದ ಆಕರಗಳಿಂದಲೇ ನಿರ್ದೇಶಿತವಾಗಿರುವುದರಿಂದ ವಿಶ್ವಸಾಮಾನ್ಯಗಳು ವ್ಯಾಪಕವಾಗಿರುವುದು ಸಹಜವೇ. ಧರ್ಮಶಾಸ್ತ್ರನಿರ್ದೇಶನದ ಪಾರಂಪರಿಕ ಜೀವನವು ಆಧುನಿಕ ಸನ್ನಿವೇಶದಲ್ಲಿ ವ್ಯಾಪಕವಾಗಿ ಬದಲುತ್ತಿರುವುದು ಸತ್ಯವಾದರೂ ಪರಂಪರೆಯ ಮೂಲಭೂತ ಅಂಶಗಳು ಪೂರ್ಣವಾಗಿ ಬಿಟ್ಟುಹೋಗಿಲ್ಲ. ಹಾಗಾಗಿಯೇ, ಕೌಟುಂಬಿಕ ಮತ್ತು ಸಾಮುದಾಯಿಕ ದೃಢತೆಯನ್ನು ಇಂದಿಗೂ ಗುರುತಿಸುವುದು ಸಾಧ್ಯ. ಉಚ್ಚಸ್ವರದಲ್ಲಿ ಮಾತನಾಡುವ ಮೂಲಕ ಆತ್ಮೀಯತೆಯ ನೇರ ಪ್ರಕಟಣೆ ಮತ್ತು ತೊಂತಿದ ಬಂಧುತ್ವವೂ ಈ ದೃಢತೆಯನ್ನು ಕಾಯಲು ನೆರವಾಗಿದೆ.

ಆ. ಅವರ ಸಾಮಾಜಿಕ ಸಂದರ್ಭದಲ್ಲಿ ಉಲ್ಲೇಖಿಸಬೇಕಾದ ವೈಶಿಷ್ಟ್ಯಗಳು:

1. ಅವರಲ್ಲಿ ಕುಲದೇವತಾಪದ್ಧತಿ ಇಲ್ಲದುದು.
2. ಧಾರ್ಮಿಕ ಮಠಗಳ ಬದ್ಧತೆ ಇಲ್ಲದುದು ಮತ್ತು ಅದಕ್ಕೆ ಪರ್ಯಾಯವಾಗಿ 'ಪರಿಷತ್' (ಸಭಾ) ವ್ಯವಸ್ಥೆ ಬಲಿಷ್ಠವಾದುದು.
3. ಇತರ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಸಮುದಾಯಗಳ ಒಡನೆ ಇರುವ ಪ್ರೀತಿಪೂರ್ಣ ಸಂಬಂಧಗಳಿಂದಾಗಿಯೇ ವ್ಯಾಪಕ ವಲಸೆಗಳು ಮತ್ತು ಸ್ಥಿರತೆ ಸಾಧ್ಯವಾದುದು.

ಇ. ಇಹಪರಗಳ ಶ್ರೇಯಸ್ಸು ಮತ್ತು ಶುದ್ಧೀಕರಣದ ಉದ್ದೇಶದಿಂದ ಆಚರಣೆಯಲ್ಲಿರುವ ಹಬ್ಬಗಳೂ ಸೇರಿದಂತೆ ಅವರ ಜೀವನಚಕ್ರದ ವಿವಿಧ ಸಂಪ್ರದಾಯಗಳು ವಿಶಿಷ್ಟವಾದುವಾಗಿವೆ. ಅವರ ಜೀವನೋತ್ಸಾಹ, ಬಂಧುತ್ವವರ್ಧನೆ, ಪಾರಮಾರ್ಥಿಕತೆ, ಶ್ರದ್ಧೆ, ಸಾಂಸ್ಕೃತಿಕ ಔನ್ನತ್ಯ, ವಾಸ್ತವಪ್ರಜ್ಞೆ, ಸದಾಶಯ, ಸೌಂದರ್ಯಪ್ರಜ್ಞೆ, ಯಾವುದೇ 'ಪರ'ತೆ ಇಲ್ಲದ ಬಹುದೇವತೋಪಾಸನೆ ಮತ್ತು ಅದರ ಒಡಲಲ್ಲಿಯೇ ವೇದಮೂಲದ 'ಏಕದೇವ' ಭಾವದ ಜೀವಂತಿಕೆ, ವೈದ್ಯಕೀಯಪ್ರಜ್ಞೆ, ಸಾಮಾಜಿಕಪ್ರಜ್ಞೆ, ರಸಿಕತೆ, ಹೆಣ್ಣುಮಕ್ಕಳ ಪ್ರಾಮುಖ್ಯ ಮತ್ತು ಅನಿವಾರ್ಯತೆ, ದೇಹದಂಡನೆ, ಇವುಗಳಿಗೆ ನೇರವಾಗಿ ಇಲ್ಲವೆ ಪರೋಕ್ಷವಾಗಿ ಹೊಂದಿಕೊಂಡ ನಂಬಿಕೆಗಳು- ಇವೆಲ್ಲವೂ ಅವರ ಜೀವನ ಮತ್ತು ಧೋರಣೆಯ ಪರಿಚಯ ಮಾಡಿಕೊಡುತ್ತವೆ. ಶಮಾದಿ ಷಡ್ಗುಣಗಳ ಸಾಧನೆ ಮತ್ತು ಆ ಮೂಲಕ ಬ್ರಹ್ಮಸಾಧನೆಯ ಉನ್ನತಾದರ್ಶಕ್ಕೆ ಇವುಗಳು ಕೇವಲ ಮಾಧ್ಯಮಗಳಾದುದರಿಂದಲೇ ಪ್ರಾದೇಶಿಕ ವೈಶಿಷ್ಟ್ಯವು ಲೋಪವೆನಿಸುವುದರ ಬದಲು ಪೂರಕವೇ ಆಗುತ್ತದೆ. ಆದರೆ ಮಾಧ್ಯಮವನ್ನೇ ಗುರಿಯೆಂದು ಭ್ರಮಿಸುವುದರಿಂದ ಆಗುವ ಯಾಂತ್ರಿಕತೆಯು ಸಮಾಜದ ಧಾರ್ಮಿಕ ಜೀವನದ ಶೈಥಿಲ್ಯಕ್ಕೂ ಕಾರಣವಾಗಿದೆ. ಆಧುನಿಕ ಸನ್ನಿವೇಶವು ಪ್ರಶ್ನಿಸುವುದು ಇಂಥ ಅರ್ಥರಾಹಿತ್ಯವನ್ನು. ಅಲ್ಲದೆ, ಅದು ತನ್ನ ಜ್ಞಾನದ ಹೊಸ ಬೆಳಕಿನ ಮೂಲಕ ಸಂಪ್ರದಾಯಾಚರಣೆಗಳ ಬಹುಭಾಗವನ್ನು ಅರ್ಥಹೀನವಾಗಿಸಿದೆ; ಕೈಗಾರಿಕೀಕರಣದ ಯಾಂತ್ರಿಕ ಬದುಕು ಅದನ್ನು ಅಸಾಧ್ಯವಾಗಿಸಿಯೂ ಇದೆ. ಮೂಲದ ಸರಳ ಆಚರಣೆಯು ಪಡೆದುಕೊಂಡ ಗೊಂದಲಮಯವೂ ಗುಣಸಾಧ್ಯವಲ್ಲದ್ದೂ ಆದ ಸಂಕೀರ್ಣತೆಯೂ ಈ ಶೈಥಿಲ್ಯಕ್ಕೆ ಕಾರಣವಾಗಿದೆ. ಆದರೆ, ನಿಶ್ಚಯವಾಗಿಯೂ, ಶಾಂತಿ ಮತ್ತು ಪ್ರೀತಿಯ ಪಾತಳಿಯಲ್ಲಿ ನಡೆಸಲು ನೆರವಾಗಿ ಬದುಕನ್ನು ಸಹ್ಯವಾಗಿಸುವಲ್ಲಿ ಅವುಗಳ ಪಾತ್ರವಿದೆ ಎಂಬುದನ್ನೂ ಮರೆಯುವಂತಿಲ್ಲ. ಧರ್ಮದ ಹಿಡಿತವು ಸಡಿಲವಾಗುತ್ತಿರುವ ಸ್ಥಿತ್ಯಂತರ ಸ್ಥಿತಿಯಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಖಚಿತ ವೈಚಾರಿಕತೆ ಪರ್ಯಾಯಶಕ್ತಿಯಾಗಬಹುದು. ಆದರೆ ಈಗಿನದು ಸ್ಥಿತ್ಯಂತರದ ಗೊಂದಲದ ಸ್ಥಿತಿಯಾಗಿದೆ ಎಂಬುದನ್ನು ಮಾತ್ರ ಗುರುತಿಸಬಹುದಾಗಿದೆ.

೭. ಅ. ಸಂಕೇತಿಗಳು, ತಾವು ನೆಲೆಸಿದ ಪ್ರದೇಶಗಳೊಂದಿಗೆ ತಾದಾತ್ಮ್ಯವನ್ನು ಸಾಧಿಸಿಕೊಳ್ಳುವ ಪ್ರವೃತ್ತಿಯವರಾದುದರಿಂದಲೇ, ಆ ಪುಟ್ಟ ಸಮುದಾಯದಲ್ಲಿಯೂ ಭಾಷಾಭೇದಗಳು ಕಾಣಿಸಿಕೊಂಡಿವೆ. ಕನ್ನಡನಾಡಿನಲ್ಲಿಯಂತೂ ಆ ಪ್ರವೃತ್ತಿಯು ಮುಂದುವರಿದು ಕನ್ನಡೀಕರಣವನ್ನು ಗಾಢವಾಗಿ ಸಾಧಿಸಿದೆ. ತಮಿಳುಮಾತೃಭಾಷೆಯು ಇಂದು 'ಸಂಕೇತಿಕನ್ನಡ ' ಎಂದು ಗುರುತಿಸಲು ಅವಕಾಶಕೊಡುವ ಸ್ಥಿತ್ಯಂತರವನ್ನು ಪಡೆದುದು ಭಾಷೆಯ ಪರಿವರ್ತನಶೀಲತೆಗೆ ಅನುಗುಣವಾದುದೂ ಹೌದು. ಮುಖ್ಯವಾಗಿ ಕರ್ನಾಟಕದ ಸಂಕೇತಿ ಭಾಷೆಯು ಪ್ರಾಕ್‌ದ್ರಾವಿಡ, ತಮಿಳು, ಮಲೆಯಾಳಂ, ಕನ್ನಡ ಭಾಷೆಗಳ ಒಡನಾಟದಿಂದಾಗಿ ಕೆಲವು ವಿಶಿಷ್ಟ ಲಕ್ಷಣಗಳನ್ನು ಪಡೆದಿದೆ. ಆ ಭಾಷೆಯು ನಶಿಸುತ್ತಿರುವ ಈ ಹೊತ್ತಿನಲ್ಲಿ, ಎಲ್ಲ ಸಂಕೇತಿ ಉಪಭಾಷೆಗಳ ತೌಲನಿಕ ಅಧ್ಯಯನವೊಂದರ ಅಗತ್ಯವಿದೆ.

ಆ. ಇಲ್ಲಿ, ಗದ್ಯಕಥನಗಳಲ್ಲಿ - ಐತಿಹ್ಯಗಳದೇ ಸಿಂಹಪಾಲು. ಚರಿತ್ರೆಯೇ ಐತಿಹ್ಯವಾಗಿ ಬೆಳೆದು ಪುರಾಣವಾಗಿ ರೂಪುಗೊಂಡ ನಾಚಾರಮ್ಮನ ಪ್ರಸಂಗವೊಂದೇ ಪುರಾಣದ ಗುಂಪಿನಲ್ಲಿರುವುದು. ಕತೆಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತವಾದರೂ, ಸಮುದಾಯವು ಗೌರವಿಸುವುದು ಮತ್ತು ಜತನಗೊಳಿಸಿರುವುದು ಐತಿಹ್ಯಗಳನ್ನು. ಕತೆಗಳಲ್ಲಿಯೂ ಸಂಕೇತಿಗಳ ಸಾಂಸ್ಕೃತಿಕ ಧೋರಣೆಯ ಸುಳುಹು ದೊರೆಯುತ್ತದಾದರೂ, ಐತಿಹ್ಯಗಳು ಅವರ ವಂಶಚರಿತ್ರೆಗಳ ಭಾಗವೇ ಆದುದರಿಂದ ಪೂರ್ಣವಾಗಿ ಅವರ ಸಂಸ್ಕೃತಿಯ ಕನ್ನಡಿಗಳೇ ಆಗಿವೆ. ಅವರ ಕ್ರಿಯಾತ್ಮಕ ಬಳಕೆಗೆ ಐತಿಹ್ಯಗಳು ಒಗ್ಗುವುದಕ್ಕೆ ಅವುಗಳ ಗಾತ್ರದ ನಮ್ಯಗುಣವೇ ಕಾರಣವಾಗಿದೆ. ಸಂಸ್ಕೃತಿಯನ್ನು ಮುಂದುವರಿಸುವ ಅವರ ಉದ್ದೇಶಕ್ಕೆ ಅದು ಸಾಕಾಗುತ್ತದೆ. ಈ ಮುಖ್ಯ ಅಂಶದಿಂದಾಗಿಯೇ ಈ ಸಮುದಾಯದಲ್ಲಿ ಬುದ್ಧಿವಂತಿಕೆ, ಆತ್ಮಚಿಕಿತ್ಸೆ, ನೈತಿಕತೆಗೆ ಒತ್ತುಕೊಟ್ಟ ಸರಳಕತೆಗಳೇ ಹೆಚ್ಚಾಗಿ ಬಳಕೆಯಲ್ಲಿವೆ. ಅವರ ಗದ್ಯಕಥನಗಳ ಸಂದರ್ಭದಲ್ಲಿ ಸಂಕೇತಿಗಳ ವಿದ್ಯಾಪ್ರೌಢಿಮೆ, ಆತ್ಮಪ್ರತ್ಯಯ, ಕ್ಷಾತ್ರ, ಛಲ, ಸಾಹಸಪ್ರವೃತ್ತಿ, ಭೋಕ್ತಾಪಟುತ್ವ, ಆಧ್ಯಾತ್ಮಿಕ ವರ್ಚಸ್ಸು, ಪ್ರಾಮಾಣಿಕತೆ, ನಿಯಮನಿಷ್ಠೆ, ರಾಜ್ಯನಿಷ್ಠೆ, ಶ್ರದ್ಧೆ, ಮಾನವೀಯ ಅನುಕಂಪ, ಶ್ರಮಸಹಿಷ್ಣುತೆ, ನಿಶಿತಮತಿ, ಅಲೆಮಾರಿಪ್ರವೃತ್ತಿ ಮೊದಲಾದ ಗುಣಗಳು ಗಾಢವಾಗಿ ಪ್ರಕಟವಾಗುತ್ತವೆ.

ಇ. ಸಂಕೇತಿಗಳ ಧೋರಣೆ ಮತ್ತು ಪ್ರವೃತ್ತಿಯ ವಿವರಗಳು ಅವರ ಗಾದೆ, ಒಗಟು, ಪಾಟ್ಸ್‌ಗಳಲ್ಲಿಯೂ ಪ್ರಕಟಗೊಳ್ಳುತ್ತವೆ. ವಸ್ತುವೈವಿಧ್ಯದ ದೃಷ್ಟಿಯಿಂದ ಸಾರ್ವತ್ರಿಕ ಅಂಶಗಳು ಗಾದೆ ಮತ್ತು ಒಗಟುಗಳಲ್ಲಿ ಹೆಚ್ಚಾಗಿವೆ. ಪಾಟ್ಸ್‌ಗಳ ವಸ್ತುವು ಕರ್ನಾಟಕದಲ್ಲಿ ಬಹುಪಾಲು ಧಾರ್ಮಿಕವೇ ಆಗಿರುವುದಕ್ಕೆ, ಅವರು ಇಲ್ಲಿ ಸ್ವೀಕರಿಸಿರುವ ಹಬ್ಬ, ವ್ರತಗಳ ಆಧಿಕ್ಯವೇ ಕಾರಣವಾಗಿದೆ. ದಕ್ಷಿಣದಲ್ಲಿ ಹಾಡುಗಳ ಕ್ರಿಯಾತ್ಮಕ ಸಂದರ್ಭವೇ ಕಡಮೆಯಾದುದಕ್ಕೆ ಪರ್ವಾಚರಣೆಗಳ ಮಿತಿಯೇ ಕಾರಣ; ಆದರೆ ಅಲ್ಲಿ ಸಂಕೇತಿ ಪಾಟ್ಸ್‌ಗಳು ಬ್ರಾಹ್ಮಣಸಾಮಾನ್ಯವಾದುವಾಗಿವೆ. ಕರ್ನಾಟಕದಲ್ಲಿಯೂ ಅವು ದಕ್ಷಿಣ ಕರ್ನಾಟಕ ಬ್ರಾಹ್ಮಣ-ಸಾಮಾನ್ಯವಾಗಿರುವುದಕ್ಕೆ ಪ್ರಸರಣ ಗುಣವೇ ಕಾರಣವಾಗಿದೆ; ಅದರಲ್ಲಿ ಸಂಕೇತಿಗಳ ಕೊಡುಗೆಗೆ ಆಧಾರವಿದೆ. ಈ ಮೂರು ಪ್ರಕಾರಗಳಲ್ಲಿಯೂ ಸಂಕೇತಿಗಳು ಭಾಷೆಯನ್ನು ರೂಢಿಸಿಕೊಂಡ ವೈವಿಧ್ಯವನ್ನು ಕಾಣಬಹುದು. ಗಾದೆಯು ಸಮುದಾಯದ ಎಲ್ಲರ ಕ್ರಿಯಾತ್ಮಕ ಬಳಕೆಯದಾದರೆ ಪಾಟ್ಸ್‌ಗಳು ಸ್ತ್ರೀಯರಿಗೂ, ಒಗಟುಗಳು ಕೆಲವೇ ಆಸಕ್ತರಿಗೂ ಸೀಮಿತವಾಗುವುದು ಅವುಗಳ ಕಾರ್ಯಗುಣಗಳಿಂದಲೇ. ಗಾದೆಯು ಅದರ ಚಿಕಿತ್ಸಕತೆಗೆ, ಪಾಟ್ಸ್ ಅದರ ಧಾರ್ಮಿಕತೆಗೆ ಗೌರವಿತವಾದಂತೆ, ಸೀಮಿತ ಪಾತ್ರಿಗಳಿದ್ದಾಗಲೂ ಒಗಟು ಅದರ ಬೌದ್ಧಿಕ ಗುಣದಿಂದಾಗಿ ಗೌರವಿತವಾಗಿದೆ. ಒಗಟುಗಳನ್ನು ಕ್ರೀಡೆಯಾಗಿ ಸ್ವೀಕರಿಸಿದಾಗಲೂ ಅದರ ಅವಧಿಯ ಬಗೆಗೆ ಅವರೇ ಇಟ್ಟುಕೊಂಡ ನಮ್ಯತೆಯು ಸಮುದಾಯದಲ್ಲಿ ಅದು ಉಳಿದುಕೊಳ್ಳಲು ಸಹಾಯಕವಾಗಿದೆ. 'ಪಾಟ್ಸ್'ಗಳು ದಿನವಿಡೀ ಮನೆಯಲ್ಲಿ ಕೇಳಿಬರುತ್ತಿರುವಂತೆ ನೋಡಿಕೊಳ್ಳುವ ಪ್ರವೃತ್ತಿಯಿಂದಾಗಿ ಅಪಾರ ಸ್ವೀಕರಣಗಳು ನಡೆದಿವೆ; ವೃದ್ಧೆಯರೂ ಹೊಸ ಪಾಟ್ಸ್‌ಗಳನ್ನು ಕಲಿಯುವುದಕ್ಕೆ ಪ್ರೇರಣೆ ನೀಡಿದೆ. ಅದು ಸಾಧ್ಯವಾದುದು ಅವರಿಗೆ ಗೌರವಾದರದ ಧಾರ್ಮಿಕವಸ್ತು ಅದರಲ್ಲಿರುವುದರಿಂದ. ವಿಧವೆಯರು ಹತಾಶರಾಗದಂತೆ ಮಾಡುವ ಶಕ್ತಿ ಅದರಲ್ಲಿ ಪ್ರಕಟವಾದುದರಿಂದಲೇ ಮಧ್ಯವಯಸ್ಸಿನ ಅನಂತರ 'ಪಾಟ್ಸ್'ಗಳ ಕಲಿಕೆಗೆ ವಿಶೇಷ ಆಸಕ್ತಿತಳೆದ ನಿದರ್ಶನಗಳು ಇಲ್ಲಿ ದೊರೆಯುತ್ತವೆ. ಧಾರ್ಮಿಕವಸ್ತುವಿನ ಆಧಿಕ್ಯದಿಂದಾಗಿ ರಮ್ಯತೆ ಅವರ ಹಾಡುಗಳಲ್ಲಿ ಸೊರಗಿದರೂ ಪ್ರತಿಭಾಮೂಲದ ಭಾವನಿರ್ಭರತೆಗೆ ಎಲ್ಲಿಯೂ ಕುಂದುಬಂದಿಲ್ಲ. ಒಟ್ಟಿನಲ್ಲಿ ಅವರ ಭಾಷೆ ಮತ್ತು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಅವರ ಸಾಂಸ್ಕೃತಿಕ ಛಾಪು ಒಂದಲ್ಲ ಒಂದು ರೀತಿಯಲ್ಲಿ, ಪ್ರಮಾಣದಲ್ಲಿ, ರೂಪದಲ್ಲಿ ಕಾಣಿಸಿಕೊಂಡಿದೆ ಎಂಬುದನ್ನು ಗಮನಿಸಬೇಕು.

ಉ. ನಿಬಂಧದ ವಿವರಗಳಲ್ಲಿ ಸಂಕೇತಿ ಸಮುದಾಯದ ಅನನ್ಯತೆಯು ಸ್ಪಷ್ಟಗೊಳ್ಳುತ್ತಾ ಸಾಗಿರುವುದರ ಜೊತೆಗೆ, ವಿಶ್ವಸಾಮಾನ್ಯಗಳ ಅಳವಡಿಕೆಗೂ ನಿದರ್ಶನಗಳು ದೊರೆತಿವೆ. ಸಮುದಾಯದ ಸಾಂಪ್ರದಾಯಿಕ ಜೀವನವು ತೀವ್ರವಾಗಿ

ಆಧುನಿಕ ಸಾರ್ವತ್ರಿಕ ಸ್ವರೂಪವನ್ನು ಪಡೆಯುತ್ತಿದ್ದರೂ, ಪೂರ್ಣವಾಗಿ ಅದರ ವೈಶಿಷ್ಟ್ಯವು ತೊಡೆದುಹೋಗಿಲ್ಲ ಎಂಬುದೂ ಇಲ್ಲಿ ಸ್ಪಷ್ಟವಾಗಿದೆ.

೯. ಪ್ರಾಮಾಣಿಕರು, ಧರ್ಮಶ್ರದ್ಧೆ ಉಳ್ಳವರು, ಕರ್ಮಠರು, ವಿದ್ಯೆಗಾಗಿ ವಿದ್ಯೆಕಲಿತು ಉನ್ನತಬೌದ್ಧಿಕ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವವರು, ಆಧ್ಯಾತ್ಮಿಕ ಸಂವೇದನಾಶೀಲರು ಮತ್ತು ದೃಢಕಾಯರೂ ಆದ ಸಂಕೇತಿಗಳು ಅವರು ನೆಲೆಸಿದ ದೇಶಗಳ ಜೀವನದ ಮುಖ್ಯ ಪ್ರವಾಹದಲ್ಲಿ ಒಂದಾಗಿ ಸಾಗಿದ್ದಾರೆ. ನಿದರ್ಶನಕ್ಕೆ:

ಅ. ಕರ್ನಾಟಕದಲ್ಲಿ ತಾವು ನೆಲೆಸಿದ ಎಡೆಗಳಲ್ಲಿ ಸಹಸ್ರಾರು ಎಕರೆ ಅಡಿಕೆ ತೋಟಗಳನ್ನು ಬೆಳೆಸಿ ಅಂಥದೊಂದು ವ್ಯವಸಾಯ ಪರಂಪರೆಯನ್ನು ನಿರ್ಮಿಸಿದುದು; ಅದಕ್ಕಾಗಿ ಅನೇಕ ಕೆರೆಗಳನ್ನು ಕಟ್ಟಿಸಿದುದು.

ಆ. ಸಮರ್ಥ ವೇದಶಾಸ್ತ್ರ ಪರಂಪರೆಯ ಒಂದು ಮುಖ್ಯಭಾಗವಾದುದು.

ಇ. ಕರ್ನಾಟಕದ ರಾಜಮನೆತನಗಳಲ್ಲಿ ವಿವಿಧ ರೀತಿಯ ಸೇವೆ ಸಲ್ಲಿಸಿದುದು: ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಪ್ರೇರಕ ಮತ್ತು ಪೋಷಕ ಶಕ್ತಿಯಾಗಿ ವಿದ್ಯಾರಣ್ಯರು ನಿಂತುದು, ಮೈಸೂರು ಅರಸರ ರಾಜಕೀಯ ಇತಿಹಾಸದ ಮುಖ್ಯ ತಿರುವಿಗೆ ಬಕ್ಷಿ ತಿಪ್ಪಯ್ಯನವರು ಕಾರಣೀಭೂತರಾದುದು; ಹಾಗೆಯೇ, ತಿರುವಾಂಕೂರು ಸಂಸ್ಥಾನದ ಸ್ಥಾಪನೆಗೆ ಕಾರಣರಾದ ಮೂವರು ಪ್ರಧಾನರಲ್ಲಿ ರಾಮೈಯ್ಯನ್ ದಳವಾಯಿ ಎಂಬ ಸಂಕೇತಿಯೂ ಒಬ್ಬಾತನೆಂಬುದು - ಸಂಕೇತಿಗಳ ಮಣ್ಣಿನನಿಷ್ಠೆಗೆ ಪ್ರಬಲ ಸಾಕ್ಷಿಗಳಾಗಿವೆ. ಈ ಸಮುದಾಯದ ಅನಂತಸುಬ್ಬರಾವ್ ಕನ್ನಡದ 'ಬೆರಳಚ್ಚು ಬ್ರಹ್ಮ' ಎನಿಸಿದರು ಎಂಬುದೂ ಈ ದೃಷ್ಟಿಯಿಂದ ಮುಖ್ಯವಾದುದು.

ಅಹಂಕಾರದ ಭ್ರಮೆಯನ್ನುಂಟುಮಾಡುವಷ್ಟು ಆತ್ಮಪ್ರತ್ಯಯ, ಆತ್ಮವಿಶ್ವಾಸ; ಸಾತ್ವಿಕರಾದರೂ ಒರಟರಂತೆ ಕಾಣುವ ವರ್ತನೆ; ವ್ಯವಸ್ಥೆಯ ವಿರುದ್ಧ ಬಂಡೇಳುತ್ತಿರುವಂತೆ ಭ್ರಮೆ ಹುಟ್ಟಿಸುವಷ್ಟು ಶೋಷಣೆಗೆ ಒಪ್ಪಿಸಿಕೊಳ್ಳದ ಹೋರಾಟಗುಣ; ಹೊಸ ಸವಾಲುಗಳಿಗೆ ಮುಕ್ತಾಹ್ವಾನ; ಎಲ್ಲ ಪರಿಸರಗಳಲ್ಲಿ ಹೊಂದಿಕೊಳ್ಳುವ ಗುಣ; ಲೌಕಿಕತೆಯನ್ನು ಮೀರಿದ ವರ್ತನೆ - ಸಂಕೇತಿಗಳ ಕೆಲವು ಸ್ವಭಾವಗಳಾಗಿವೆ.

೧೦. ಸಂಕೇತಿಗಳು ಆರ್ಥಿಕ ಕ್ಷೋಭೆಯ ಬಾಗಿಲಲ್ಲಿರುವ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರದಲ್ಲಿರುವ ಈ ಹೊತ್ತಿನಲ್ಲಿ ಮಾಡಬಹುದಾದುದು:

ಅ. ಸಾಂಸ್ಕೃತಿಕ ವೈವಿಧ್ಯದ ಅರ್ಥಪೂರ್ಣ ಪರಿಸರವಿರಬೇಕೆಂಬ ವಿಶ್ವತತ್ತ್ವದ ಹಿನ್ನೆಲೆಯಲ್ಲಿ, ವೇದಶಾಸ್ತ್ರಗಳ ಉತ್ತಮಾಂಶದ ಗಾಢ ಪರಂಪರೆಯು ಪ್ರಾತಿನಿಧಿಕವಾಗಿಯಾದರೂ ಉಳಿಯುವಂತೆ ಸೌಲಭ್ಯಗಳನ್ನೊದಗಿಸುವುದು.

ಆ. ತೋಟಗಾರಿಕೆಯಲ್ಲಿ ತಮ್ಮದೇ ನೈಪುಣ್ಯ ಪಡೆದಿರುವ ಮತ್ತು ಕೃಷಿ ಹಾಗೂ ಪಶುಪಾಲನೆಯೊಂದಿಗೆ ಪಾರಂಪರಿಕವಾದ ಪ್ರೀತಿಯ ನಂಟನ್ನು ಹೊಂದಿದ ಈ ಸಮುದಾಯಕ್ಕೆ ತತ್ಸಂಬಂಧದ ಸೌಲಭ್ಯಗಳನ್ನೊದಗಿಸುವುದು.

ಇ. ಸಂಕೇತಿಗಳ ಬದುಕನ್ನು ಕುರಿತ ಸಾಕ್ಷ್ಯಚಿತ್ರ ತಯಾರಿಸಿ ಅವರ ವಿಶಿಷ್ಟ ಜೀವನವನ್ನು ನೆನಪಿನಲ್ಲಿ ಉಳಿಸುವುದು.

ಈ. ಬಹುಮುಖ ಪ್ರತಿಭೆಯ ಪರಂಪರೆ ಇರುವುದರಿಂದ, ದೇಶವು ಅದನ್ನು ಸೂಕ್ತವಾಗಿ ಬಳಸಿಕೊಳ್ಳುವುದು.

ಈ ಗ್ರಂಥದ ಬಗೆಗೆ

ಈ ನಿಬಂಧದಲ್ಲಿ ಸಂಕೇತಿ ಸಮುದಾಯವನ್ನು ಕುರಿತು ಆಳವಾದ, ಶಾಸ್ತ್ರೀಯವಾದ ಹಾಗೂ ಸಮಗ್ರವಾದ ಅಧ್ಯಯನವನ್ನು ಮಾಡಲಾಗಿದೆ. ಕರ್ನಾಟಕವನ್ನು ಮೂಲವಾಗಿಟ್ಟುಕೊಂಡು ಸಂಕೇತಿಗಳನ್ನು ಕುರಿತ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ. ಸಂಕೇತಿಗಳನ್ನು ಕುರಿತು ಹಿಂದೆ ಪ್ರಕಟವಾದ ಹೆಚ್ಚಿನ ಎಲ್ಲಾ ಗ್ರಂಥಗಳನ್ನೂ ಲೇಖನಗಳನ್ನೂ ಮೌಖಿಕ ಸಂಪ್ರದಾಯಗಳನ್ನೂ ವಿವಿಧ ಮೂಲಗಳಿಂದ ದೊರೆತ ಅನೇಕ ಮಾಹಿತಿಗಳನ್ನೂ ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಉಪಸಮುದಾಯವೊಂದರ ಅಧ್ಯಯನಕ್ಕೆ ಈ ನಿಬಂಧ ಉತ್ತಮ ಮಾದರಿಯಾಗಬಲ್ಲುದು. ದೊರೆಯಬಹುದಾದ ಎಲ್ಲಾ ಮೂಲಗಳಿಂದ ಮಾಹಿತಿಗಳನ್ನು ಕಲೆ ಹಾಕಿರುವುದು ಮತ್ತು ಶಾಸ್ತ್ರೀಯವಾದ ವ್ಯಾಪಕವಾದ ವೈವಿಧ್ಯಪೂರ್ಣವಾದ ಕ್ಷೇತ್ರಕಾರ್ಯ ನಡೆಸಿರುವುದು ಸಂಶೋಧಕರ ಪ್ರಾಮಾಣಿಕ ಶ್ರದ್ಧೆ, ಶ್ರಮ ಹಾಗೂ ಆಸಕ್ತಿಗೆ ಉತ್ತಮ ನಿದರ್ಶನವಾಗಿದೆ.

ತಮ್ಮದೇ ಆದ ಭಾಷೆ, ವೃತ್ತಿ ಮತ್ತು ಸಾಹಿತ್ಯವನ್ನು ಹೊಂದಿದ ಸಂಕೇತಿಗಳ ವಿಶಿಷ್ಟ ಜೀವನ ವಿಧಾನ ಮತ್ತು ಸಂಸ್ಕೃತಿಗಳು ತೀವ್ರವಾಗಿ ಸಾಮಾನ್ಯೀಕರಣಕ್ಕೆ ಒಳಗಾಗಿ ಅವರ ಪಾರಂಪರಿಕ ಬದುಕು ತನ್ನ ವ್ಯಾಪಕತೆಯನ್ನೂ ತೀವ್ರತೆಯನ್ನೂ ಅತಿ ಬೇಗನೇ ಕಳೆದುಕೊಳ್ಳುತ್ತಿರುವ ಸಂಧಿಕಾಲದಲ್ಲಿ ಈ ಸಂಶೋಧನೆ ನಡೆದಿರುವುದು ಸಕಾಲಿಕವೂ ಪ್ರಯೋಜನಕಾರಿಯೂ ಆಗಿದೆ. ಇದು ಕನ್ನಡದಲ್ಲಿ ಬ್ರಾಹ್ಮಣರ ಉಪಸಮುದಾಯವೊಂದನ್ನು ಕುರಿತು ನಡೆಸಿದ ಮೊದಲ ಅಧ್ಯಯನವಾಗಿದೆ. ಮಾನವ ಸಮಾಜದ ಒಟ್ಟು ಜೀವನ ಹಾಗೂ ಸಂಸ್ಕೃತಿಯನ್ನು ಗುರುತಿಸುವ ದೃಷ್ಟಿಯಿಂದ ವಿವಿಧ ಸಮಾಜಗಳನ್ನು ಕುರಿತ ಪ್ರತ್ಯೇಕ ಅಧ್ಯಯನಗಳು ಅವಶ್ಯವಾಗಿವೆ.

ಸಂಗ್ರಹಿಸಿದ ಮಾಹಿತಿಗಳನ್ನು ವ್ಯವಸ್ಥಿತವಾಗಿ ಸಂಶೋಧನಾ ಶಾಸ್ತ್ರಕ್ಕನುಗುಣವಾಗಿ ಉತ್ತಮರೀತಿಯಲ್ಲಿ ಆಧಾರಸಹಿತ ವಿಶ್ಲೇಷಿಸಲಾಗಿದೆ. ವಿವಿಧ ಅಭಿಪ್ರಾಯಗಳ ಮಂಡನೆ, ಖಂಡನೆ ಮುಂತಾದುವು ಆಧಾರಸಹಿತವೂ ಸಮರ್ಥನೀಯವೂ ಆಗಿವೆ. ಸಂಶೋಧನೆಯಲ್ಲಿ ಸಂಶೋಧಕರಿಗಿರುವ ತೀವ್ರ ಕಾಳಜಿ ಈ ನಿಬಂಧದಲ್ಲಿ ಎದ್ದು ಕಾಣುತ್ತದೆ. ನಿಬಂಧದ ಭಾಷೆಯೂ ಚೆನ್ನಾಗಿದೆ. ಸಂಕೇತಿಗಳ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಗುರುತಿಸುವುದೇ ಈ ನಿಬಂಧದ ಪ್ರಧಾನ ಆಶಯವಾಗಿರುವುದನ್ನು ಗಮನಿಸಬಹುದಾಗಿದೆ. ಕೆಲವೊಂದು ಅಂಶಗಳು ಮೊದಲ ಬಾರಿಗೆ ಈ ನಿಬಂಧದಲ್ಲಿ ನಿರೂಪಿತವಾಗಿರುವುದು ಗಮನಾರ್ಹವಾಗಿದೆ. ಅನುಬಂಧದಲ್ಲಿ ನೀಡಿದ ಮಾಹಿತಿಗಳನ್ನು, ವಿವರಗಳನ್ನು, ಫೋಟೋ, ನಕ್ಷೆ ಹಾಗೂ ವಿವಿಧ ಪಟ್ಟಿಗಳನ್ನು ಅವಲೋಕಿಸಿದಾಗ ಸಂಶೋಧಕರು ಈ ನಿಬಂಧ ರಚನೆಗಾಗಿ ನಡೆಸಿದ ಪ್ರಾಮಾಣಿಕ ಪ್ರಯತ್ನದ ಅರಿವಾಗುತ್ತದೆ.

ಡಾ. ಎ. ಶ್ರೀಕೃಷ್ಣಭಟ್
ಕನ್ನಡ ವಿಭಾಗದ ಮುಖ್ಯಸ್ಥರು
ಮದರಾಸು ವಿಶ್ವವಿದ್ಯಾಲಯ

* * *

'Sanketigalu ondu adhyayana' by Pranatartiharan is a total study in this respect. I have gone through the thesis. Sri Pranatartiharan has studied and presented in the thesis their religion, culture, language and their folklore in detail. For all these it requires field work and from his work it is clear that he has done lot of field work for collecting the materials. Also he has referred a lot of books

for the collation of this work. The thesis is excellently presented with some hand drawn diagrams and lot of photographs at appropriate places. The work is a very good contribution to the Kannada literature in general and to the researchers in the area of language literature and culture in particular. The methodology he has adopted is proper. His style is simple and direct.

Dr. M. Rama
Professor in Kannada and Linguistics
University of Kerala

* * *

ಕೈಗಾರಿಕೀಕರಣ, ನಗರೀಕರಣದಿಂದಾಗಿ ಆಗುತ್ತಿರುವ ಸಾಮಾಜಿಕ ಸ್ಥಿತ್ಯಂತರದ ಈ ಸಂಧಿಕಾಲದಲ್ಲಿ ಇದೇ ಮೊದಲ ಬಾರಿಗೆ ಸಂಕೇತಿಗಳನ್ನು ಕುರಿತ ಒಂದು ವ್ಯಾಪಕ ಅಧ್ಯಯನ ತೀರ ಅಗತ್ಯದ ಕಾರ್ಯವಾಗಿತ್ತು. ಈ ಕಾರ್ಯವನ್ನು ಬಹು ಶ್ರದ್ಧಾಸಕ್ತಿಗಳಿಂದ ಯಶಸ್ವಿಯಾಗಿ ನಿರ್ವಹಿಸಿರುವ ಒಂದು ನಿದರ್ಶನವೆಂದರೆ ಶ್ರೀ ಬಿ. ಎಸ್. ಪ್ರಣತಾರ್ತಿಹರನ್ ಅವರ ಪ್ರಕೃತ ನಿಬಂಧ.

ಈ ಪಿಎಚ್.ಡಿ. ನಿಬಂಧ ಸಂಕೇತಿಗಳ ಜೀವನ ಮತ್ತು ಸಂಸ್ಕೃತಿಯನ್ನು ಸಮಗ್ರ ಹಿನ್ನೆಲೆಯಲ್ಲಿ ಅಭ್ಯಸಿಸಿದ ಒಂದು ವೈಜ್ಞಾನಿಕ ದೃಷ್ಟಿಯ ಜಾನಪದೀಯ ಸಂಶೋಧನೆಯಾಗಿದೆ. ಕೇರಳ, ತಮಿಳುನಾಡು ಮತ್ತು ಕರ್ನಾಟಕದ ಕೆಲವೆಡೆ ನೆಲೆಸಿರುವ ಸಂಕೇತಿಗಳು ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಂಡೇ ಸದ್ಯ ತಾವು ನೆಲೆಸಿರುವ ಆಯಾ ಪ್ರದೇಶದ ಭಾಷೆ, ಸಂಸ್ಕೃತಿ ಮತ್ತು ಧರ್ಮವನ್ನು ಅಳವಡಿಸಿಕೊಂಡು ಹೇಗೆ ಬದುಕು ನಡೆಸುತ್ತಿದ್ದಾರೆಂಬುದನ್ನು ತಿಳಿಯಲು ಈ ಅಧ್ಯಯನ ಸಹಾಯಕವಾಗಿದೆ.

ಮುಖ್ಯವಾಗಿ ಕರ್ನಾಟಕದ ಸಂಕೇತಿಗಳನ್ನೂ ಗಮನದಲ್ಲಿಟ್ಟುಕೊಂಡು ಹೀಗೆ ಎರಡು ಸಂಪುಟಗಳಲ್ಲಿ ಸಿದ್ಧಪಡಿಸಿರುವ ಈ ನಿಬಂಧವನ್ನು ಆಮೂಲಾಗ್ರವಾಗಿ ಓದಿ ನನಗೆ ಸಮಾಧಾನವೂ ಸಂತೋಷವೂ ಆಗಿದೆ. ಒಂದು ಸಮುದಾಯವಾಗಿ ಸಂಕೇತಿಗಳನ್ನು, ಅವರ ಬದುಕು ಮತ್ತು ಸಂಸ್ಕೃತಿಯನ್ನು ಅವರದೇ 'ಲೋಕದೃಷ್ಟಿ'ಯಿಂದ (world view) ವಿವೇಚಿಸಿ ಬಹು ನಿರ್ಣಾಯಕವಾದ ತೀರ್ಮಾನಗಳಿಗೆ ಇಲ್ಲಿ ಬರಲಾಗಿದೆ. ಇಲ್ಲಿ ಅನುಸರಿಸಿರುವ ವೈಧಾನಿಕತೆಯಂತೂ (methodology) ಉಪಸಂಸ್ಕೃತಿಯೊಂದರ (sub-culture) ಅಧ್ಯಯನಕ್ಕೆ ತಕ್ಕುದಾಗಿದೆ. ಸಂಶೋಧಕರು ಇಲ್ಲಿ ತಮಗೆ ದೊರಕಬಹುದಾದ ಎಲ್ಲ ಮೂಲಗಳಿಂದಲೂ ಮಾಹಿತಿಗಳನ್ನು ದೊರಕಿಸಿಕೊಂಡು ವೈಜ್ಞಾನಿಕ ರೀತಿಯಲ್ಲಿ ವಿಷಯವನ್ನು ಗ್ರಹಿಸಿ ಗಂಭೀರವೂ ಶಾಸ್ತ್ರೀಯವೂ ಆದ ಚೌಕಟ್ಟಿನಲ್ಲಿ ಮಂಡಿಸಿ ಯಾವ ಪೂರ್ವಗ್ರಹಕ್ಕೂ ಗುರಿಯಾಗದೆ ಅರ್ಥಪೂರ್ಣ ರೀತಿಯಲ್ಲಿ ವಿಚಾರಗಳನ್ನು ಪ್ರತಿಪಾದಿಸಿರುವುದು ಸಂಶೋಧಕರ ವೈಜ್ಞಾನಿಕ ದೃಷ್ಟಿಗೆ ಉತ್ತಮ ನಿದರ್ಶನವಾಗಿದೆ. ವಿಷಯ ಪ್ರತಿಪಾದನೆಗೆ ಅಗತ್ಯ ಎನಿಸಿದೆಡೆಗಳಲ್ಲಿ ಟಿಪ್ಪಣಿಗಳು, ರೇಖಾಚಿತ್ರಗಳು, ಛಾಯಾಚಿತ್ರಗಳನ್ನು ಒದಗಿಸಿರುವುದು ಗಮನಾರ್ಹ. ಎಲ್ಲಕ್ಕಿಂತ ಹೆಚ್ಚಾಗಿ ವಿವಿಧ ವಿದ್ವಾಂಸರ ಅಭಿಪ್ರಾಯಗಳ ಮಂಡನೆ, ಖಂಡನೆಗಳನ್ನು ಆಧಾರಸಹಿತವಾಗಿ ವಸ್ತುನಿಷ್ಠವಾಗಿ ಸಾದರಪಡಿಸಿರುವುದು ಈ ನಿಬಂಧದ ಹೆಚ್ಚುಗಾರಿಕೆಯಾಗಿದೆ. ಒಟ್ಟಿನಲ್ಲಿ ಉತ್ತಮ ಸಂಶೋಧಕನ ಎಲ್ಲ ಉತ್ತಮ ಗುಣಗಳನ್ನು ಮೈಗೂಡಿಸಿಕೊಂಡಿರುವ ಈ ನಿಬಂಧಕಾರರು ಮುಂದೆ ನಡೆಯಲಿರುವ ಈ ಬಗೆಯ ಸಂಶೋಧನೆಗೆ ಉತ್ತಮ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ಈ

ದೃಷ್ಟಿಯಿಂದ ಪ್ರಕೃತ ನಿಬಂಧ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂದ ಉತ್ತಮ ಕೊಡುಗೆಯಾಗಿದ್ದು ಕರ್ನಾಟಕದ ಉಪ-ಸಂಸ್ಕೃತಿ ಅಧ್ಯಯನದ ಅತ್ಯುತ್ತಮ ಮಾದರಿಯಾಗಿದೆ.

ಡಾ. ಅಂಬಳಿಕೆ ಹಿರಿಯಣ್ಣ
ರೀಡರ್, ಜಾನಪದ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

* * *

. . . ಮೊನ್ನೆ ಅಕಸ್ಮಾತ್ ನಿಮ್ಮ ವಿದ್ವತ್‌ಪೂರ್ಣ ನಿಬಂಧದ ಪ್ರಥಮಭಾಗ ಸಿಕ್ಕಿದಾಗ ಅತ್ಯಂತ ಕ್ಷುದ್ಬಾಧೆಗೊಳಗಾದವ ಬಕಬಕನೆ ತಿನ್ನುವಂತೆ ಓದಿದೆ. . . ನಿಮ್ಮ ನಿಬಂಧ ತುಂಬಾ ಚೆನ್ನಾಗಿದೆ. ಆ ವಿಷಯ ಸಂಗ್ರಹಣೆಯ ಹಿಂದಿರುವ ಶ್ರಮ ಸಾರ್ಥಕವಾಗಿದೆ.

ಡಾ. ಎ. ಜಿ. ಸುಬ್ಬರಾವ್
20-9-1993

* * *

ನಾನು ಕೊಳ್ಳೇಗಾಲದ ಮಹದೇಶ್ವರ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥನಾಗಿದ್ದಾಗ ಡಾ. ಬಿ.ಎಸ್. ಪ್ರಣತಾರ್ತಿಹರನ್ ಅವರು, ಕನ್ನಡ ಅಧ್ಯಾಪಕರಾಗಿ ಬಂದರು. ಬಹಳ ಶ್ರದ್ಧೆಯಿಂದ ಪಾಠ ಪ್ರವಚನ ಮಾಡಿ ವಿದ್ಯಾರ್ಥಿಗಳ ಗಮನ ಸೆಳೆದರು. ಸ್ನೇಹ ಪ್ರೀತಿಯಲ್ಲಿ ಅಧ್ಯಾಪಕರಿಗೆ ಹತ್ತಿರ ಆದರು. ಅವರ ಸಾಹಿತ್ಯಪ್ರೀತಿ ಕಂಡು ಅವರ ಬರಹಗಳನ್ನು ಕುರಿತು ವಿಚಾರಿಸುತ್ತಿದ್ದಾಗ ಪಿಹೆಚ್.ಡಿ ಗಾಗಿ ಸಂಕೇತಿ ಸಮುದಾಯದ ಅಧ್ಯಯನದಲ್ಲಿ ತೊಡಗಿ ಕರ್ನಾಟಕ, ಕೇರಳ, ತಮಿಳುನಾಡುಗಳಲ್ಲಿ ಸಂಚರಿಸಿ ಬಹು ಪರಿಶ್ರಮದಿಂದ ಹಲವಾರು ವರ್ಷಗಳ ಅವಧಿಯಲ್ಲಿ ಅಪಾರ ಸಾಮಗ್ರಿ ಕಲೆಹಾಕಿದ್ದು ಗಮನಕ್ಕೆ ಬಂದಿತು. ಸಂಶೋಧನಾ ಗ್ರಂಥ ರಚನೆಯನ್ನು ಚುರುಕುಗೊಳಿಸಿ ಎಂದು ಪ್ರೋತ್ಸಾಹಿಸಿದೆ. ಅವರು ಕಲೆ ಹಾಕಿದ ಸಾಮಗ್ರಿ ಕಂಡು ನಿಬ್ಬೆರಗಾದೆ.

ಸಂಕೇತಿ ಸಮುದಾಯದ ಯಾವುದೇ ಒಂದು ಮುಖದ ಅಧ್ಯಯನವನ್ನು ಗುರಿಯಾಗಿಟ್ಟುಕೊಳ್ಳದೆ ಸರ್ವತೋಮುಖ ಅಧ್ಯಯನ ನಡೆಸಿದ್ದರು. ಸಾಂಸ್ಕೃತಿಕ ಅಧ್ಯಯನಕ್ಕೆ ಬೇಕಾದ ಎಲ್ಲ ಸಾಮಗ್ರಿ ಸಂಗ್ರಹಿಸಿದ್ದರು. ಐತಿಹಾಸಿಕ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ, ಜಾನಪದೀಯ ಎಂಬ ಪಂಚಮುಖೀ ಸ್ವರೂಪದಲ್ಲಿ ಗ್ರಂಥವನ್ನು ರೂಪಿಸಿ ಎಂದಾಗ ಅವರ ಮಾರ್ಗದರ್ಶಕ ಗುರುಗಳಾದ ಅಂಬಳಿಕೆ ಹಿರಿಯಣ್ಣನವರ ನೇತೃತ್ವದಲ್ಲಿ ಕೆಲವೇ ತಿಂಗಳುಗಳಲ್ಲಿ ಸಂಶೋಧನಾ ಗ್ರಂಥವನ್ನು ಸಿದ್ಧಗೊಳಿಸಿದರು. ಹಲವಾರು ವರ್ಷ ಸಂಗ್ರಹಿಸಿದ ಮಾಹಿತಿಯನ್ನೆಲ್ಲ ಒಪ್ಪ ಓರಣವಾಗಿ ಅನುಬಂಧದಲ್ಲಿ ಕೊಡಿ; ಮುಂದೆ ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ನೆರವಾಗುತ್ತದೆ ಎಂದೆ. ೧೯೦ ಪುಟಗಳ ಆಕರ ಮಾಹಿತಿಗಳನ್ನು ಅದರಂತೆಯೇ ನೀಡಿದ್ದಾರೆ. ಸಂಕೇತಿಗಳ ನೆಲೆಗಳ ನಕ್ಷೆಗಳು, ಹಬ್ಬಗಳು, ಕುಲಗೋತ್ರಗಳು, ಒಕ್ಕಲು ನೆಲೆಗಳು, ಧಾರ್ಮಿಕ ಗ್ರಂಥಗಳು, ಮನೆದೇವರುಗಳು, ಪಾರಿಭಾಷಿಕ ಪದಸೂಚಿ, ಟಿಪ್ಪಣಿಗಳು, ಆಯ್ದ ವಕ್ತೃಗಳು, ಗ್ರಂಥಲೇಖನಗಳ ಪಟ್ಟಿ ಮತ್ತು ನೂರಾರು ಚಿತ್ರಗಳ ಆಲ್ಬಂ ಇತ್ಯಾದಿಗಳನ್ನು ಜನಗಣತಿ ಮಾದರಿಯಲ್ಲಿ ವೈವಿಧ್ಯಮಯವಾಗಿ ಹಾಗೂ ಅಗಾಧವಾಗಿ ನೀಡಿದ್ದಾರೆ. ಈ

ಪ್ರಬಂಧದ ವಿಶೇಷ ಇದು ಎಂದರೆ ತಪ್ಪಾಗದು.

ಬ್ರಾಹ್ಮಣರ ಉಪಪಂಗಡಗಳಲ್ಲಿ ಒಂದಾದ ಸಂಕೇತಿ ಸಮುದಾಯವನ್ನು ಕುರಿತ ಇಷ್ಟೊಂದು ವೈವಿಧ್ಯಮಯವಾದ ಅಧ್ಯಯನ ಗ್ರಂಥ ಇನ್ನೊಂದಿಲ್ಲ ಎಂದರೆ ತಪ್ಪಾಗದು. ಈ ದೃಷ್ಟಿಯಿಂದ ಸಂಕೇತಿಗಳು ವಿಶೇಷವಾಗಿ ನೆಲೆಸಿರುವ ಕೇರಳ, ತಮಿಳುನಾಡಿನ ಬಾಂಧವರಿಗೆ ತಿಳಿಯಲು ಈ ಗ್ರಂಥ ಮಲೆಯಾಳಂ ಮತ್ತು ತಮಿಳು ಭಾಷೆಗಳಿಗೆ ಅನುವಾದ ಆಗುವುದು ಅಗತ್ಯವಾಗಿದೆ. ಅಷ್ಟೇ ಅಲ್ಲ, ತುರ್ತಾಗಿ ಇಂಗ್ಲಿಷಿಗೆ ಅನುವಾದ ಆಗುವುದು ಅಗತ್ಯ. ಏಕೆಂದರೆ ಕನ್ನಡನಾಡಿನಲ್ಲಿ ನಡೆದಿರುವ ಈ ಶೋಧನೆಯ ವಿಚಾರಗಳು ಜಗತ್ತಿನ ಇತರ ಭಾಗದಲ್ಲಿರುವವರಿಗೂ ತಿಳಿಯಬೇಕಾಗಿದೆ.

ಇನ್ನೊಂದು ವೈಶಿಷ್ಟ್ಯವೆಂದರೆ ಅಪಾರ ಗ್ರಂಥಲೇಖನ ಅಧ್ಯಯನದ ಜೊತೆಗೆ ಜನಸಂಪರ್ಕದಿಂದ ಕ್ಷೇತ್ರಕಾರ್ಯ ನಡೆಸಿರುವುದು. ಇದರ ಫಲವಾಗಿ ಪುಟಪುಟದಲ್ಲೂ ಸಂಕೇತಿ ಸಮುದಾಯದ ಸತ್ಯದರ್ಶನ ಆಗುತ್ತದೆ. ಸಂಕೇತಿ ಜನರ ಬದುಕಿನ ವಾಸ್ತವ ನೋಟ ಸಿಗುತ್ತದೆ. ಲೇಖಕರು ತೌಲನಿಕ ಅಧ್ಯಯನ ಮಾಡದೆ ಕೇವಲ ಸಂಕೇತಿ ಸಮುದಾಯದ ಸಮಗ್ರ ಚಿತ್ರಣ ನೀಡುವಲ್ಲಿ ಲಕ್ಷ್ಯವಿರಿಸಿರುವುದರಿಂದ ಸಂಕೇತಿ ಜನರ ಸೂಕ್ಷ್ಮ ನೋಟಗಳು ಇಲ್ಲಿವೆ.

ಇಂದು ಕನ್ನಡದಲ್ಲಿ ನೂರಾರು ಪ್ರಬಂಧಗಳು ಪ್ರಕಟವಾಗುತ್ತಿವೆ. ಅವುಗಳಲ್ಲಿ ಸಮುದಾಯಗಳ ಬಗ್ಗೆ ಕ್ಷೇತ್ರಕಾರ್ಯವನ್ನಾಧರಿಸಿ ಮಾಡಿದ ಸಮಗ್ರ ಅಧ್ಯಯನದ ಗ್ರಂಥಗಳು ವಿರಳ. ಆ ಪೈಕಿ ಒಂದಾದ ಈ ಗ್ರಂಥವು ಸಮುದಾಯವೊಂದರ ಅಧ್ಯಯನಕ್ಕೆ, ಅದರಲ್ಲೂ ಬ್ರಾಹ್ಮಣರ ಉಪಪಂಗಡಗಳ ಅಧ್ಯಯನಕ್ಕೆ ಮಾದರಿಯಾದ ಗ್ರಂಥವಾಗಿದೆ.

ಡಾ.ಚಿದಾನಂದ ಮೂರ್ತಿ ಅವರು ಸಾಂಸ್ಕೃತಿಕ ಅಧ್ಯಯನದ ಮಾದರಿಯ ಮಹಾಪ್ರಬಂಧವನ್ನು ಮೊದಲ ಬಾರಿಗೆ ಕನ್ನಡದಲ್ಲಿ ರಚಿಸಿ ಆ ಬಗೆಯ ಪ್ರಬಂಧ ರಚಕರಿಗೆ ಮಾದರಿಯಾದರು. ಅಂತೆಯೇ ಡಾ.ಬಿ.ಎಸ್. ಪ್ರಣತಾರ್ತಿಹರನ್ ಅವರು ಬ್ರಾಹ್ಮಣ ಉಪಪಂಗಡವೊಂದರ ಸಮಗ್ರ ಸಮುದಾಯ ಅಧ್ಯಯನದ ಮಾದರಿ ಗ್ರಂಥ ರಚಿಸಿ ಉಳಿದ ಮುಂಬರುವ ಸಂಶೋಧಕರಿಗೆ ಮಾರ್ಗದರ್ಶಕರೆನಿಸಿದ್ದಾರೆ. ಅವರಿಗೆ ನನ್ನ ಅಭಿನಂದನೆಗಳು.

ಪ್ರೊ. ಜಿ. ಅಶ್ವತ್ಥನಾರಾಯಣ

* * *

ಇದು ಸಮಗ್ರ ಸಂಕೇತಿಗಳ ಸಮಗ್ರ ಬದುಕಿನ ಬಗೆಗೆ ಬಂದಿರುವ ಆಶಯಾತ್ಮಕ ನಿಬಂಧ. ಇದರ ಮೂಲದಲ್ಲಿ ಒಂದೊಂದು ಸಣ್ಣ ಅಂಶದ ಬಗೆಗೂ ವಿಸ್ತಾರವಾದ ಕ್ಷೇತ್ರಕಾರ್ಯ, ಅಪಾರ ಮಾಹಿತಿಯ ಸಂಗ್ರಹ, ಆಳವಾದ ತರ್ಕಬದ್ಧ ಚಿಂತನೆಯ ಕೃಷಿ ನಡೆದಿರುವುದರ ಲಕ್ಷಣವಿದೆ; ಇದರ ಹಿಂದೆ ಪ್ರಾಮಾಣಿಕತೆ ಇದೆ, ಪರಿಶ್ರಮವಿದೆ; ಸಮಗ್ರತೆಯ ಅಪೇಕ್ಷೆ ಕೆಲಸ ಮಾಡಿದೆ. ನಿಬಂಧಕ್ಕೆ ಒಂದು ಉದ್ದಿಷ್ಟ ಚೌಕಟ್ಟು ಇದೆ; ಅದಕ್ಕೆ ಅನುಗುಣವಾಗಿ ವಿಸ್ತಾರವೂ ವೈವಿಧ್ಯಪೂರ್ಣವೂ ಸಂಕೀರ್ಣವೂ ಆದ ವಸ್ತು ವಿಷಯವನ್ನು ನಿರ್ವಹಿಸಿರುವುದು ಕಾಣುತ್ತದೆ; ಅದರಲ್ಲಿಯೇ ಒಂದು ಸಿದ್ಧಿ ಇದೆ. ನಿಬಂಧದ ಗಾತ್ರಮಿತಿಯು ಅದರ ಸ್ವರೂಪವನ್ನು ನಿರ್ದೇಶಿಸಿರುವುದು ಸಹಜವಾಗಿದೆ; ಅದರಿಂದಾಗಿ ವಿವರವಾದ ಬಹಳಷ್ಟು ಸಾಮಗ್ರಿ ಹಿನ್ನೆಲೆಯಲ್ಲಿ ಉಳಿದಿದೆ; ಮುದ್ರಿತ ಆವೃತ್ತಿಯು ಓದುಗನ ಅಗತ್ಯಕ್ಕಾಗಿ ಮತ್ತಷ್ಟು ನೇರವೂ ಸರಳವೂ ಆಗಿದೆ. ಆದರೂ, ಹೀಗೆ ನೇರವಾಗಿ ಬಳಸಿಕೊಳ್ಳಲಾಗದೆ ಹೋದ ಮಾಹಿತಿಯನ್ನು ಲೇಖಕರು ವಿಸ್ತೃತ ಸಂಶೋಧನೆಯೊಡನೆ ಆಧಾರಪಾಠ್ಯಗಳ ರೂಪದಲ್ಲಿ ಪ್ರಕಟಿಸುತ್ತಿದ್ದಾರೆ. ಇದು ಅವರ ಸಂಶೋಧನಾವೃತ್ತಿಯು ಜೀವಂತವಾಗಿರುವುದನ್ನೇ ಪ್ರಕಟಿಸುತ್ತದೆ. ಜೊತೆಗೆ ಸಂಸ್ಕೃತಿಯ ಬಗೆಗೆ ಕ್ಷೇತ್ರಕಾರ್ಯ ಮಾಡಿಯೇ ನಿಬಂಧವನ್ನು ನಿರ್ವಹಿಸಬೇಕಾದವರ ಬಹುಶ್ರಮಕ್ಕೂ ಇದು ಕನ್ನಡಿಯಾಗಿದೆ. ಸಮುದಾಯದ ನಿಕಟ ಪರಿಚಯ ಇರುವವರು ಇದರ ಚಾರಿತ್ರಿಕ ದರ್ಶನಕ್ಕೆ ಕುರುಡಾಗಬಾರದು; ಸಾರ್ವತ್ರಿಕ ವಸ್ತುವಷ್ಟನ್ನೇ

ಇಷ್ಟಪಡುವವರು ಇಲ್ಲಿನ ಸಂಸ್ಕೃತಿ ಘಟಕದ ವಿಶಿಷ್ಟ ನೋಟವನ್ನು ಉಪೇಕ್ಷಿಸಬಾರದು. ಇಷ್ಟರಮೇಲೆ, ಇವುಗಳ ನಿರೀಕ್ಷೆಯಲ್ಲಿ ಕಳೆದುಹೋಗದೆ ತಮ್ಮ ಸಂಶೋಧನಾಕಾರ್ಯದಲ್ಲಿಯೇ ಇಷ್ಟಾರ್ಥ ಕಾಣುತ್ತಿರುವ ಡಾ.ಪ್ರಣತಾರ್ತಿಹರನ್ ಅವರದು ಅನುಕರಣೀಯ ಮಾದರಿಯಾಗಿದೆ.

ಡಾ. ಬಿ.ಎಸ್. ನರಹರಿ

****

...ನಿಜಕ್ಕೂ ನಿಮ್ಮ ಶ್ರಮ ಸಾರ್ಥಕವಾಗಿದೆ. ನನಗಂತೂ ಬಹಳ ಮೆಚ್ಚುಗೆಯಾಯಿತು. ನಿಮ್ಮ ವಿಚಾರಸರಣಿ, ವಿಶ್ಲೇಷಣಾ ವಿಧಾನ, ಅಧ್ಯಯನಕ್ರಮ, ವಿಷಯ ವಿಂಗಡಣೆ, ವಿಷಯ ಪ್ರಾತಿನಿಧ್ಯ, ಸುಂದರ ಮುದ್ರಣದ ಹಿಂದಿನ ಕಲಾಪ್ರೇಮ ಎಲ್ಲವೂ ಸಂತಸದ ಸಂಗತಿಯೇ...

ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಡಾ॥ ಆರ್. ರಾಮಕೃಷ್ಣ
ಭಾಷಾವಿಜ್ಞಾನ ಪ್ರಾಧ್ಯಾಪಕರು

* * *

...ಡಾಕ್ಟೋರಲ್ ಪ್ರಬಂಧಗಳಿಗೆ ನೀಡುತ್ತಿರುವ ಡಿಗ್ರಿಗಳ ವಿಷಯವಾಗಿ ಒಂದು ದಿನ ಚರ್ಚೆ ಹೊರಳಿತು. ಶ್ರದ್ಧೆ–ಶ್ರಮಗಳಿಗೆ ಒಂದು ಮಾದರಿಯಾಗಿ ನಿಲ್ಲಬಲ್ಲ ಪ್ರಬಂಧವನ್ನು ನಾನು ನಿಮಗೆ ತಂದುಕೊಡುತ್ತೇನೆ ಎಂದು ಹೇಳಿ ಪ್ರೊ॥ ಅಶ್ವತ್ಥನಾರಾಯಣರಾಯರು ಮಾರನೆಯ ದಿವಸವೇ ತಂದುಕೊಟ್ಟರು...

...ಸಂಕೇತಿಗಳಿಗೆ ಬೇಸಾಯವೇ ಮುಖ್ಯ ವೃತ್ತಿ. ಸಂಸಾರ ಪ್ರಾರಂಭಿಸಿದ ಮೇಲೆ ಮನೆ ಕಟ್ಟುವ ಸಂದರ್ಭ ಬಂದರೆ, ಆಗಲೂ ಬೇಸಾಯ ದೃಷ್ಟಿಯನ್ನು ಗಮನದಲ್ಲಿಟ್ಟಿರುತ್ತಾರೆ. ಸಂಸಾರದಲ್ಲಿ ಮಿಕ್ಕ ಸಮುದಾಯಗಳಿಗೆ ಹೋಲಿಸಿದರೆ ಸಂಕೇತಿಗಳ ಕುಟುಂಬಗಳಲ್ಲಿ ಸ್ವಲ್ಪ ನಚ್ಚು ಹೆಚ್ಚು. ಬೇಸಾಯವನ್ನು ಮುಖ್ಯ ವೃತ್ತಿಯಾಗಿಟ್ಟುಕೊಂಡು ಕಲೆ, ಸಾಹಿತ್ಯ ಮುಂತಾದ ಜೀವನವನ್ನು ಸಂಸ್ಕರಣಗೊಳಿಸುವ ಇತರ ಕಲೆಗಳನ್ನು ರೂಢಿಸಿಕೊಂಡು ಬಂದಿದ್ದಾರೆ. ಶ್ರಮಜೀವಿಗಳು. ಡಾ॥ ಹರನ್‌ರವರು ಸಂಕೇತಿ ಅಧ್ಯಯನವನ್ನು ಬಹು serious ಆಗಿ ಕೈಗೊಂಡು ಆ ಸಮುದಾಯದ ಎಲ್ಲ ಮುಖಗಳನ್ನೂ ಪರಿಚಯ ಮಾಡಿಕೊಟ್ಟಿದ್ದಾರೆ...ಸಾಕಷ್ಟು ವ್ಯಾಸಂಗ (Desk Work) ಕ್ಷೇತ್ರಾಭ್ಯಾಸ (Field Studies) ಎರಡೂ ಹೊಯ್‌ಕಯ್ ಆಗಿ ಬೆರೆತಿವೆ...

ಕಾಫಿ ಬೋರ್ಡ್
ಬೆಂಗಳೂರು

ಕೆ.ವಿ. ಸುಬ್ಬರಾವ್, ಎಂ.ಎ.,ಬಿ.ಎಲ್.,
ಜಾಯಿಂಟ್ ಸೆಕ್ರೆಟರಿ (ರಿ.),

* * *

ಶಿಷ್ಟಜನಾಂಗವೆಂದು ಅಖಿಲಭಾರತ ಮಟ್ಟದಲ್ಲಿ ಗುರುತಿಸಲ್ಪಡುವ ಬ್ರಾಹ್ಮಣರದು ದೇಶದಾದ್ಯಂತ ಏಕರೂಪದ ಸಂಸ್ಕೃತಿಯೇನೂ ಅಲ್ಲ. ವೇದೋಪನಿಷತ್ತುಗಳು–ಶ್ರುತಿ–ಸ್ಮೃತಿ ಮತ್ತು ಪುರಾಣಗಳನ್ನು ಆಧಾರವಾಗಿಟ್ಟುಕೊಂಡ ಜನಾಂಗವಾಗಿ ಇವರಲ್ಲಿ ಸ್ಥೂಲವಾಗಿ ಕೆಲವು ಸಮಾನ–ಸಾಮಾನ್ಯಾಂಶಗಳು ಕಂಡುಬರುತ್ತವಾದರೂ ಅಖಿಲಭಾರತ ಮಟ್ಟದಿಂದ ನೋಡುವುದಾದರೆ ಇವರಲ್ಲೂ ಅನೇಕ ಉಪವಿಭಾಗಗಳು ಕಂಡುಬರುತ್ತವೆ. ಈ ಉಪವಿಭಾಗ ಮುಖ್ಯವಾಗಿ ವಿಂಧ್ಯೋತ್ತರ ಪಂಚಗೌಡ ಭೇದ ಮತ್ತು ವಿಂಧ್ಯದಕ್ಷಿಣ ದ್ರಾವಿಡಭೇದ ಎಂದು ಎರಡು ತೆರನಾಗಿದೆ ಮತ್ತು ಈ ಒಂದೊಂದು

ಉಪವಿಭಾಗದಲ್ಲೂ ಮತ್ತೆ ಅನೇಕ ಒಳಜಾತಿಗಳಿದ್ದು ಈ ಜಾತಿಗಳ ಜೀವನಕ್ರಮ ವಿಶಿಷ್ಟವೂ ಅಧ್ಯಯನಪೂರ್ಣವೂ ಆಗಿದೆ. ಈ ಒಂದೊಂದನ್ನೂ ಕುರಿತಂತೆ ಐತಿಹಾಸಿಕ–ಸಾಂಸ್ಕೃತಿಕ ಅಧ್ಯಯನಕ್ಕೆ ಸಾಕಷ್ಟು ಅವಕಾಶವಿದೆ. ಇಂಥ ದಕ್ಷಿಣದ ಉಪಪಂಗಡಗಳಲ್ಲಿ ತಮಿಳುನಾಡಿನಿಂದ ಕರ್ನಾಟಕಕ್ಕೆ ಸುಮಾರು ಸಾವಿರ ವರ್ಷದ ಹಿಂದೆಯೇ ವಲಸೆ ಬಂದ ಸಂಕೇತಿ ಸಮುದಾಯವು ವಿಶಿಷ್ಟವಾದುದು. ಉಳಿದ 'ಬ್ರಾಹ್ಮಣ' ಸಮುದಾಯಗಳಿಂದ ತಮ್ಮದೇ ಜೀವನಕ್ರಮ ; ಲೌಕಿಕ, ಅಲೌಕಿಕ ನೆಲೆಗಳಿಂದ ತಮ್ಮ ವಿಶಿಷ್ಟತೆಯನ್ನು ಇನ್ನೂ ಉಳಿಸಿಕೊಂಡಿರುವ ಈ ಜನಾಂಗದ ಒಟ್ಟು ಸಂಸ್ಕೃತಿಯನ್ನು ಕುರಿತಂತೆ ಡಾ॥ ಪ್ರಣತಾರ್ತಿಹರನ್ ಅವರು ನಡೆಸಿದ ಆಳವೂ ಶಾಸ್ತ್ರೀಯವೂ ಮತ್ತು ಸಮಗ್ರವೂ ಆದ ಅಧ್ಯಯನದ ಫಲವೇ ಪ್ರಸ್ತುತ ಗ್ರಂಥ. ಇದು ಮುಖ್ಯವಾಗಿ ಕರ್ನಾಟಕವನ್ನು ಮೂಲನೆಲೆಯನ್ನಾಗಿಟ್ಟುಕೊಂಡ ಸಂಕೇತಿಗಳ ಸಂಸ್ಕೃತಿಯನ್ನು ಕುರಿತದ್ದಾಗಿದೆ.

ಇಲ್ಲಿ ಉಲ್ಲೇಖಿಸತಕ್ಕ ಇನ್ನೊಂದು ಅಂಶವೆಂದರೆ, ಕೊನೆಯಲ್ಲಿ ಸೇರಿಸಿದ 5 ಅನುಬಂಧಗಳು ಗ್ರಂಥದ ಮೌಲಿಕತೆಯನ್ನು ಹೆಚ್ಚಿಸಿವೆ. ಸಂಶೋಧನೆಯು ನಿರ್ದಿಷ್ಟ ಜನಾಂಗ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟಿದ್ದಾದ್ದರಿಂದ ಅದಕ್ಕೆ ಸಂಬಂಧಿಸಿದ ಪರಿಭಾಷೆಗಳನ್ನು ತಿಳಿದುಕೊಳ್ಳುವ ದೃಷ್ಟಿಯಿಂದ ಈ ಅನುಬಂಧಗಳು ಪೂರಕವಾಗಿವೆ. ಈ ಎಲ್ಲ ಅಧ್ಯಾಯಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದಾಗ, ನಮಗೆ ಗ್ರಂಥಕರ್ತರ ಪರಿಶ್ರಮ ಮನದಟ್ಟಾಗುತ್ತದೆ. ದಾಖಲೆ ಸಂಗ್ರಹ, ಕ್ಷೇತ್ರಕಾರ್ಯ, ಐತಿಹ್ಯವೇ ಮೊದಲಾದ ಅಂಶಗಳ ಸಂಗ್ರಹ ಮತ್ತು ಅವುಗಳ ಯಥಾರ್ಥ ತರ್ಕಬದ್ಧ ನಿರೂಪಣೆಗಳೇ ಈ ಪ್ರಬಂಧದ ಮೂಲಶಕ್ತಿಯಾಗಿವೆ...

ಈ ಪ್ರಬಂಧವನ್ನು ಒಂದು ರೀತಿಯಲ್ಲಿ ಸಂಕೇತಿಗಳ 'ಸಾಂಸ್ಕೃತಿಕ ವಿಶ್ವಕೋಶ' ಎಂದೂ ಕರೆಯಬಹುದಾಗಿದೆ. ಅಂದರೆ ಅಷ್ಟರಮಟ್ಟಿಗೆ ಒಂದು ಜನಾಂಗಕ್ಕೆ ಸಂಬಂಧಪಟ್ಟ ವಿವರಗಳನ್ನೆಲ್ಲ ಇದು ಒಳಗೊಂಡಿದೆ.

'ಜನಾಂಗ'ಗಳ ಸ್ವರೂಪ, ಸಮುದಾಯಗಳಲ್ಲಿ ಆಗುತ್ತಿರುವ ಸಾಂಸ್ಕೃತಿಕ ಸ್ಥಿತ್ಯಂತರ ಹಾಗೂ, ಕೈಗಾರಿಕೀಕರಣ–ನಗರೀಕರಣಗಳ ಮುಂದುವರಿಕೆಯಾಗಿ ದಾಪುಗಾಲಿಡುತ್ತಾ ಧಾವಿಸುತ್ತಿರುವ ಇವತ್ತಿನ 'ಜಾಗತೀಕರಣ'ದ ಸಂದರ್ಭದಲ್ಲಿ ನಮ್ಮ ದೇಶೀಯ, ಪ್ರಾದೇಶಿಕ ಮತ್ತು ಸ್ಥಳೀಯ ಸಂಸ್ಕೃತಿಗಳು ತಮ್ಮತನವನ್ನು ಅನಿವಾರ್ಯವಾಗಿ ಲಯವಾಗಿಸಿಕೊಳ್ಳುತ್ತ ಸಾಂಸ್ಕೃತಿಕ ಸೂಕ್ಷ್ಮಗಳು ಅರ್ಥ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಅಂಥ ಸೂಕ್ಷ್ಮಗಳನ್ನು ತಿಳಿದುಕೊಳ್ಳುವ, ಉಳಿಸಿಕೊಳ್ಳುವ, ಅವುಗಳ ಮೂಲಕ ನಮ್ಮ ಸಂಸ್ಕೃತಿಯನ್ನು ಪುನರ್‌ರೂಪಿಸುವ ನಿಟ್ಟಿನಲ್ಲಿ ಇಂಥ ಅಧ್ಯಯನಗಳು ಅಗತ್ಯ. ನಮ್ಮದು ಬಹುಜನಾಂಗೀಯ ಮತ್ತು ಬಹುಮುಖೀ ಸಂಸ್ಕೃತಿಯ ಸಮಾಜ ಮತ್ತು ದೇಶ. ಒಂದೊಂದು ಧರ್ಮ– ಪ್ರದೇಶ–ಪ್ರಾಂತ್ಯಗಳ ಒಳಗೆ ಇರುವ ವೈವಿಧ್ಯತೆ ಮತ್ತು ಅವುಗಳ ಗುಣವಿಶೇಷವನ್ನು ಅರಿಯಲು ಇಂಥ ಜನಾಂಗೀಯ ಅಧ್ಯಯನಗಳು ಅಪೇಕ್ಷಣೀಯವಾಗಿವೆ. ಈ ದೃಷ್ಟಿಯಿಂದ ಡಾ॥ ಪ್ರಣತಾರ್ತಿಹರನ್ ಅವರ ಈ ಗ್ರಂಥವು ಇಂಥ ಉಪಸಮುದಾಯಗಳ ಅಧ್ಯಯನಕ್ಕೆ ಮಾದರಿಯಾಗಿದೆ. ಇಂಥ ಒಂದು ಮಹತ್ವದ ಮತ್ತು ಮಾದರಿಯ ಗ್ರಂಥರಚನೆ ಮಾಡಿರುವ ಡಾ॥ ಬಿ.ಎಸ್. ಪ್ರಣತಾರ್ತಿಹರನ್ ಅಭಿನಂದನಾರ್ಹರಾಗಿದ್ದಾರೆ.

ಕನ್ನಡ ಪ್ರಭ ದಿನಪತ್ರಿಕೆ
ಬೆಂಗಳೂರು

ಡಾ॥ ಸುರೇಶ ಪಾಟೀಲ
ವಿಮರ್ಶಕರು

* * *

...ಮೊಟ್ಟಮೊದಲನೆಯದಾಗಿ 'ಸಂಕೇತಿ : ಒಂದು ಅಧ್ಯಯನ' ಮಹಾಕೃತಿಯ ಪ್ರಕಟಣೆಗಾಗಿ ನಿಮ್ಮನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಇದೊಂದು ಮಹಾಸಾಹಸವೇ ಸರಿ.

ಈ ಗ್ರಂಥವು ಸಂಕೇತಿ ಅಧ್ಯಯನದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ತಲೆತಲಾಂತರದಿಂದ ಬಂದಿದ್ದ ವಿಷಯಗಳನ್ನೇ ಹೇಳಿಕೊಂಡು ಅದೇ ಸಂಕೇತಿಗಳ ಚರಿತ್ರೆ ಎಂದು ತಿಳಿದವರಿಗೆ ಈ ಗ್ರಂಥದ ವಿಷಯವು ಸಂಕೇತಿಗಳಷ್ಟೇ ಅಲ್ಲ, ಎಲ್ಲ ಬ್ರಾಹ್ಮಣ ಸಮುದಾಯದ ಜನರ ಕಣ್ಣುಗಳನ್ನೂ ತೆರೆಸುತ್ತದೆ. ಸಂಕೇತಿಗಳೆಂಬ ಒಂದು ಸಣ್ಣ ಬ್ರಾಹ್ಮಣ ಸಮುದಾಯದ ಮೇಲೆ ಇಷ್ಟೊಂದು ವಿಷಯ ಗರ್ಭೀಕೃತವಾಗಿದೆ ಎಂಬುದು ನಿಮ್ಮ ಗ್ರಂಥವನ್ನು ಅವಲೋಕಿಸಿದ ಮೇಲೆಯೇ ಅರ್ಥವಾಗುತ್ತದೆ.

ಈ ಮಹಾಪ್ರಬಂಧದ ರಚನೆಗಾಗಿ ನೀವು ಕೈಗೊಂಡ ಕ್ಷೇತ್ರಕಾರ್ಯ ಎಷ್ಟು ಶ್ರಮದಾಯಕವಾದುದು ಮತ್ತು ವಿಪುಲವಾದುದು ಎಂಬುದು ನೀವು ಕೊಟ್ಟಿರುವ ಅನುಬಂಧಗಳಿಂದ ತಿಳಿಯುತ್ತದೆ. ಒಟ್ಟಿನಲ್ಲಿ ಇದೊಂದು ಶಾಶ್ವತ ಕೃತಿ ಎಂಬುದು ಸುಸ್ಪಷ್ಟ.

ನಿಮ್ಮ ಮಹಾಗ್ರಂಥದಲ್ಲಿ ಬಹು ಮುಖ್ಯವಾದ ವಿಷಯವೆಂದರೆ ಕರ್ಣಾಟಕದ ಸಂಕೇತಿಗಳ ಐತಿಹಾಸಿಕ ವಲಸೆಗಳು ಮತ್ತು ಅವರ ಆಂತರಿಕ ವಲಸೆಗಳು. ಇದೊಂದು ಕಣ್ಣು ತೆರೆಸುವ ವಿಷಯವಾಗಿದೆ.

ಬೆಂಗಳೂರು **ಪ್ರೊ॥ ಕೆ.ಎಸ್. ಕೃಷ್ಣಮೂರ್ತಿ**
17.12.03 ನಿವೃತ್ತ ಕನ್ನಡ ಪ್ರಾಧ್ಯಾಪಕರು

* * *

ನಾನು ಹಲವಾರು ಪಿಎಚ್.ಡಿ., ಪ್ರಬಂಧಗಳನ್ನು ನೋಡಿದ್ದೇನೆ.... ನಿಮ್ಮ ಈ ಪುಸ್ತಕ ಅದಕ್ಕೆ ಒಂದು ದೊಡ್ಡ ಅಪವಾದ.... Real scientific research.

ಬ್ರಾಹ್ಮಣ ಜನಾಂಗದ ಒಂದು ಉಪಸಂಸ್ಕೃತಿಯ ಪರಿಚಯವನ್ನು ಅತ್ಯಂತ ವಿಶದವಾಗಿ ಮಾಡಿಕೊಟ್ಟಿರುತ್ತೀರಿ. ಇದಕ್ಕೆ ಸಂಕೇತಿ ಜನಾಂಗದವರಷ್ಟೇ ಅಲ್ಲ, ಕನ್ನಡಿಗರೆಲ್ಲರೂ ಕೃತಜ್ಞರಾಗಿರಬೇಕು. ನಿಮಗೆ ಪಿಎಚ್.ಡಿ., ಬಂದು ಹತ್ತು ವರ್ಷವಾದ ನಂತರ ಪುಸ್ತಕ ಪ್ರಕಟವಾಗುತ್ತಿದ್ದರೂ ಅದು Fresh ಆಗಿಯೇ ಇದೆ. ಇಂತಹ ಅಧ್ಯಯನ ಮಾಡುವವರಿಗೆ source Book ಆಗಿ ನೂರ್ಕಾಲ ಬೆಳಗುತ್ತದೆ....

ಮೈಸೂರು **ಲ.ನ. ಶಾಸ್ತ್ರಿ**
17.12.03 ಸಂಶೋಧಕರು ಮತ್ತು ಲೇಖಕರು

* * *

... The book is very good and we have to carefully preserve it as whoever sees it, would like to take it for reading.

Bangalore ***R.S. Lakshmikanta***

****

. . . ಶ್ರೀ ಪ್ರಣತಾರ್ತಿಹರನ್ ಹೊರತಂದಿರುವ 'ಸಂಕೇತಿ: ಒಂದು ಅಧ್ಯಯನ' ಸಂಕೇತಿಗಳನ್ನು ಕುರಿತು ಯಾರಾದರೂ ಓದಿದಲ್ಲಿ ಅಚ್ಚರಿ ಮೂಡಿಸಿ ಈ ಜನಾಂಗಕ್ಕೆ ಗೌರವ ನೀಡುವುದರಲ್ಲಿ ಅನುಮಾನವಿಲ್ಲ. ಅಷ್ಟರಮಟ್ಟಿಗೆ ಈ ಪ್ರಾಚೀನ ಜನಾಂಗದ ವೈವಿಧ್ಯಮಯ ಬದುಕು ಬೆಳೆದು ಬಂದಿರುವುದನ್ನು ಕಾಣಬಹುದಾಗಿದೆ . . .

ಮಾರ್ಚ್, ೨೦೦೪ **ಅನಾಮಿಕ**
ಸಂಕೇತಿ ಸಂಗಮ

****

ಸಮುದಾಯ ಅಧ್ಯಯನ ಕೇಂದ್ರದ ಈ ಕಾಯಕ ಶ್ಲಾಘನೀಯವಾದುದು. ಬ್ರಾಹ್ಮಣ ಸಮುದಾಯದಲ್ಲಿ ಸುಮಾರು 64 ಉಪಪಂಗಡಗಳಿದ್ದು ಆ ಎಲ್ಲ ಉಪಪಂಗಡಗಳ ಇತಿಹಾಸವನ್ನು ದಾಖಲಿಸುವ ಕೆಲಸವಾಗಬೇಕು.

ಹಾಸನ **ಕೆ.ಎಸ್. ಗಿರಿಜಾಂಬಾ**
16.2.2003 ಸಂಪಾದಕರು, ವಿಪ್ರವಾಹಿನಿ

****

'ಸಂಕೇತಿ: ಒಂದು ಅಧ್ಯಯನ' ಕೃತಿಯು ಸಂಕೇತಿಗಳ ಬಗೆಗೆ ಸಮಗ್ರ ಮಾಹಿತಿಯನ್ನೊಳಗೊಂಡ ವಿಶ್ವಕೋಶವೇ ಆಗಿದೆ.

ಬೆಂಗಳೂರು **ಬಿ.ಕೆ. ವಿಶ್ವನಾಥರಾವ್**

ಶಿಕ್ಷಣತಜ್ಞರು


****

... ಪ್ರೀತಿ ಶ್ರದ್ಧೆ ಸಮವಾಗಿ ಬೆರೆತಾಗ ಹರನ್ ಮೈದಳೆಯುವರೇ! ಇಂಥ ಮೌಲಿಕ ಕೃತಿಸಮುಚ್ಚಯದ 'ಸಂಕೇತಿ ಒಂದು ಅಧ್ಯಯನ' ಮತ್ತು 'ಶತಮಾನದ ಪತ್ರಗಳು' ಹಿನ್ನೆಲೆಯ ಚೇತನವನ್ನು ಬಾಕಿ ಹೇಗೆ ಬಣ್ಣಿಸಲಿ...

ಮೈಸೂರು **ಪ್ರೊ.ಜಿ.ಟಿ.ನಾರಾಯಣರಾವ್**

ನಿವೃತ್ತ ಪ್ರಾಧ್ಯಾಪಕರು

****



ಸಂಪುಟ 2
ಸಂಕೇತಿ : ಶತಮಾನದ ಪತ್ರಗಳು
(1891 – 2003)
ಸಂ : ಡಾ॥ ಬಿ.ಎಸ್. ಪ್ರಣತಾರ್ತಿಹರನ್

೧ ಮುನ್ನುಡಿ

ಪತ್ರವ್ಯವಹಾರದ ಮೂಲಕ ಪರಸ್ಪರ ಸುದ್ದಿಮುಟ್ಟಿಸುವುದು, ವಿಚಾರ ವಿನಿಮಯ ಮಾಡಿಕೊಳ್ಳುವುದು, ಸಲಹೆ–ಸಹಕಾರಗಳನ್ನು ಪಡೆದುಕೊಳ್ಳುವುದು, ತೊಡಕು–ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು, ಮಾರ್ಗದರ್ಶನ ದೊರಕಿಸಿಕೊಳ್ಳುವುದು ಇವೇ ಮುಂತಾದ ಲೌಕಿಕ ಪ್ರಯೋಜನಗಳನ್ನು ಮನುಷ್ಯನು ಸಾಕಷ್ಟು ಹಿಂದಿನಿಂದಲೂ ಪಡೆದುಕೊಳ್ಳುತ್ತಿದ್ದಾನೆ. ಆದರೆ ಕವಿತೆ, ಕತೆ, ಕಾದಂಬರಿ, ನಾಟಕ ಮುಂತಾದ ಸೃಜನಶೀಲ ಸಾಹಿತ್ಯಪ್ರಕಾರಗಳಂತೆ ಪತ್ರಗಳೂ ಸಾಹಿತ್ಯರಂಗವನ್ನು ಪ್ರವೇಶಿಸಬಲ್ಲವು ಎಂಬುದು ಸಾಹಿತ್ಯಮಾರ್ಗದಲ್ಲಿ ಸಂಚರಿಸುವವರಿಗೆ ಇತ್ತೀಚಿನ ದಶಕಗಳಲ್ಲಷ್ಟೇ ಗಮನಕ್ಕೆ ಬಂತೆಂದು ಭಾವಿಸಬಹುದಾಗಿದೆ. ಹೆಚ್ಚಿನ ವಿಶೇಷಗಳೇನನ್ನೂ ಒಳಗೊಳ್ಳದ ಸರ್ಕಾರಿ ಆಡಳಿತದ ಪತ್ರಗಳಾಗಲಿ; ಕ್ಷೇಮಸಮಾಚಾರದ, ಸುದ್ದಿವಾಹಕಗಳಾದ, ಸಾಮಾನ್ಯ ನಿರೂಪಣೆಯ ಪತ್ರಗಳಾಗಲಿ ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಲಾರವು. ಕಾವ್ಯಗುಣದ ಸ್ಪರ್ಶವಿರುವ, ಬೋಧಪ್ರದವಾದ, ಶಾಸ್ತ್ರ–ಕಾವ್ಯ–ಲೋಕಜ್ಞಾನಗಳನ್ನು ಕುರಿತಂತಿರುವ; ನಂಬಿಕೆ– ನಡವಳಿಕೆ, ಆಚಾರ–ವಿಚಾರ, ಆಚರಣೆ–ಸಂಪ್ರದಾಯ, ನಡೆ– ನುಡಿ– ಮುಂತಾದ ಜೀವನೋಪಯೋಗಿಯಾದ ಸಂಗತಿಗಳ ಚರ್ಚೆ, ನಿರೂಪಣೆ, ಪ್ರತಿಪಾದನೆಗಳನ್ನೊಳಗೊಂಡಂತೆ ರೂಪುಗೊಳ್ಳುವ ಪತ್ರಗುಚ್ಛಗಳು 'ಪತ್ರ ಸಾಹಿತ್ಯ' ಎಂಬ ಗೌರವಕ್ಕೆ ಪಾತ್ರವಾಗುತ್ತವೆ.

ಸಾಹಿತ್ಯಪ್ರಕಾರಗಳಲ್ಲೊಂದಾದ ಪ್ರವಾಸಕಥನವು ಪತ್ರರೂಪವನ್ನೂ ತಾಳಿಕೊಳ್ಳಬಹುದು. ಅಲ್ಲಿ ಪತ್ರಶೈಲಿಯು ಸಾಹಿತ್ಯಾಭಿವ್ಯಕ್ತಿಯ ಒಂದು ತಂತ್ರವಾಗಿಯೂ ಬಳಕೆಯಾಗಬಹುದು.

ಪತ್ರಗಳಲ್ಲಿ ಉಲ್ಲಖಿತವಾಗುವ ವಿಷಯಗಳು ಅನಂತಮುಖಿಯಾಗಿರುತ್ತವೆ. ಸಾಮಾಜಿಕ, ರಾಜಕೀಯ, ಐತಿಹಾಸಿಕ, ಸಾಹಿತ್ಯಿಕ, ಸಮಸ್ಯಾತ್ಮಕ, ಸಂಶೋಧನಾತ್ಮಕ, ಉಪದೇಶಾತ್ಮಕ – ಮುಂತಾದ ಅನೇಕಾನೇಕ ವಿಷಯಗಳು ಪತ್ರಪ್ರಪಂಚಕ್ಕೆ ಬಂದು ನಿರೂಪಣೆಯ ಗುಣಗೌರವಗಳಿಂದ ಸಾಹಿತ್ಯಪ್ರಕಾರದ ಮನ್ನಣೆಯನ್ನು ಪಡೆದುಕೊಳ್ಳುತ್ತವೆ. ಪುತ್ರೋತ್ಸವದ ಸಂಭ್ರಮದಲ್ಲಿ ಬರೆದ ಪತ್ರವು ಹರ್ಷೋಲ್ಲಾಸಗಳನ್ನು ತುಂಬಿಕೊಟ್ಟರೆ; ಆತ್ಮೀಯರನ್ನು ಕಳೆದುಕೊಂಡ ಸಂಕಟದಲ್ಲಿ ಬರೆದ ಪತ್ರ ಕರುಣರಸಕ್ಕೆ ಮುಟ್ಟಿಸಬಹುದು. 'ದುಃಖಿಸುವುದೇಕೆ, ಸಮಾಧಾನ ತಂದುಕೊಳ್ಳಿ, ಜಗತ್ತಿನ ಸ್ವರೂಪವೇ ವಿಯೋಗವಲ್ಲವೆ' ಎಂದು ಹಿರಿಯರು ದುಃಖತಪ್ತರಿಗೆ ಬರೆದ ಸಾಂತ್ವನಪತ್ರವು ಶಾಂತರಸವನ್ನು ತಂದುಕೊಡುತ್ತದೆ. ಹೀಗೆಲ್ಲ ಸಶಕ್ತ ಪತ್ರಗಳು ನವರಸಭರಿತವಾಗಿ ಸಹೃದಯರನ್ನು ಸೆಳೆದುಕೊಳ್ಳಬಲ್ಲವು. ಪತ್ರಗಳ 'ಆನಂದಮುಖ'ದಂತೆಯೇ ಅವುಗಳ 'ಉಪದೇಶಮುಖ'ವೂ ಅಷ್ಟೇ ಪ್ರಶಸ್ತವಾದುದು.

ಆನಂದಮುಖ, ಉಪದೇಶಮುಖಗಳಲ್ಲದೆ 'ಉಪಯೋಗ ಮುಖ' ಎಂಬ ಮೂರನೆಯದೊಂದು ಮುಖವೂ ಪತ್ರಸಾಹಿತ್ಯಕ್ಕೆ ಕೂಡಿಕೊಂಡ ವಿಶೇಷ ಗುಣ. ಮಿಕ್ಕ ಸಾಹಿತ್ಯ ಪ್ರಕಾರಗಳಿಗಿಂತ ಈ ದಿಕ್ಕಿನಲ್ಲಿ ಪತ್ರಸಾಹಿತ್ಯವು 'ವಿಲಕ್ಷಣ'.

ಸಮಕಾಲೀನ ಸ್ಥಿತಿಗತಿಗಳು, ಏರುಪೇರುಗಳು, ಸಮಸ್ಯೆಗಳು, ಮೊದಲಾದ ನೂರಾರು ವಿಚಾರಗಳು ಪತ್ರಗಳಿಗೆ ಗ್ರಾಸವಾಗಿರುತ್ತವೆ. ಹೀಗಾಗಿ ಪತ್ರಸಾಹಿತ್ಯವು ಇತಿಹಾಸರಚನೆಗೆ, ಮಹಾಪುರುಷರ ಜೀವನಗಾಥೆಯ ನಿರೂಪಣೆಗೆ, ಆಯಾ ಕಾಲದ ಸಾಮಾಜಿಕ ಸ್ಥಿತಿಗತಿಗಳ ತಿಳಿವಳಿಕೆಗೆ ವಿಪುಲವಾದ ಸಾಮಗ್ರಿಯನ್ನು ಒದಗಿಸಿಕೊಡುತ್ತದೆ. ನಮ್ಮ ಸಂಸ್ಕೃತಿ, ಸಂಸ್ಕಾರ, ಹಬ್ಬಹರಿದಿನಗಳ ಮೇಲೆ ಬೆಳಕು ಚೆಲ್ಲುತ್ತದೆ. ಪತ್ರಸಾಹಿತ್ಯದ ಆನಂದಮುಖಕ್ಕಿಂತ ಈ ಉಪಯೋಗಮುಖವೇ ವಿಶಾಲವಾದುದು.

ರಾಷ್ಟ್ರಕಾರಣ, ಅಧ್ಯಾತ್ಮ, ಸ್ವಾತಂತ್ರ್ಯ ಸಂಗ್ರಾಮವೇ ಮೊದಲಾದ ಹೋರಾಟಗಳು; ಆಂದೋಳನಗಳು, ಚಳುವಳಿಗಳು, ಕ್ರಾಂತಿಗಳು ಮುಂತಾದ ಮಹತ್ವದ ವಿಚಾರಗಳ ಹಿನ್ನೆಲೆಯಲ್ಲಿ ಮಹಾಪುರುಷರು, ಗಣ್ಯರು ಬರೆದ ಪತ್ರಗಳು 'ಪತ್ರಸಾಹಿತ್ಯ'ವಾಗಿ ಲೋಕಹಿತ ಸಾಧನೆಗೆ ಪೂರಕವಾಗುತ್ತವೆಂಬುದರಲ್ಲಿ ಎರಡು ಮಾತಿಲ್ಲ. ಸ್ವಾಮಿ ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ಮಹಾತ್ಮಗಾಂಧಿ ಮೊದಲಾದ ಮಹಿಮಾನ್ವಿತರ ಪತ್ರಗಳು ಈಗಾಗಲೇ ಪತ್ರಸಾಹಿತ್ಯವಾಗಿ ಲೋಕೋಪಯೋಗಿಯಾಗಿರುವ ವಿಷಯ ಸರ್ವವಿದಿತವಾಗಿದೆ.

* * *

ಸಂಕೇತಿಜನಾಂಗದ ಸಾಹಿತ್ಯರಾಯಭಾರಿಯಾಗಿ ದುಡಿಯುತ್ತಿರುವ ಡಾ॥ ಪ್ರಣತಾರ್ತಿಹರನ್ ಅವರು ತಮ್ಮ ಮಹಾಯೋಜನೆಯ ಒಂದು ಸುಗ್ಗಿಯಾಗಿ ಸಂಕೇತಿ ಪತ್ರಸಾಹಿತ್ಯದ ಈ ಬೃಹತ್ ಸಂಪುಟವನ್ನು ಅತ್ಯಂತ ಶ್ರಮವಹಿಸಿ ಸಂಪಾದಿಸಿಕೊಟ್ಟಿದ್ದಾರೆ. 19ನೆಯ ಶತಮಾನದ ಕೊನೆಯ ದಶಕದಿಂದ ಮೊದಲ್ಗೊಂಡು, 20ನೆಯ ಶತಮಾನದ ಪರ್ಯಂತ ಬರೆಯಲಾಗಿರುವ ಸ್ವಾರಸ್ಯಮಯವೂ ಉಪಯುಕ್ತವೂ ವೈವಿಧ್ಯಮಯವೂ ಆದ 555 ಪತ್ರಗಳನ್ನು ಇಲ್ಲಿ ತಾವೇ ರೂಪಿಸಿಕೊಂಡ ವಿಂಗಡಣೆಯ ಪದ್ಧತಿಯಲ್ಲಿ ಸಂಕಲಿಸಿಕೊಟ್ಟಿದ್ದಾರೆ. 555 ಎಂಬ ಸಂಖ್ಯೆಗೆ ವೇದಾಂತದ ಹಿನ್ನೆಲೆಯಲ್ಲಿ ವಿಶೇಷ ಮಹಿಮೆಯುಂಟು. ಬಾದರಾಯಣರು ಬರೆದ ಬ್ರಹ್ಮಸೂತ್ರಗಳ ಸಂಖ್ಯೆ 555. ಈ ಹೊಸ ಶತಮಾನದ ಕೆಲವು ಪತ್ರಗಳೂ ಇಲ್ಲಿ ಅಳವಟ್ಟಿವೆ. ನಾಲ್ಕುಸಾವಿರಕ್ಕೂ ಹೆಚ್ಚು ಸಂಕೇತಿಪತ್ರಗಳನ್ನು ಸಂಗ್ರಹಿಸಿದ ಹರನ್‌ರವರು ಅವುಗಳನ್ನೆಲ್ಲ ಚೆನ್ನಾಗಿ ಬಡಿದು, ತೂರಿ, ಕೇರಿ, ಗಟ್ಟಿಕಾಳುಗಳನ್ನು ಮಾತ್ರವೇ ಆಯ್ದುಕೊಂಡು ಎರಡು ಖಂಡಗಳಲ್ಲಿ ಜೋಡಿಸಿದ್ದಾರೆ. ಪ್ರಥಮ ಖಂಡದಲ್ಲಿ 'ಕೌಟುಂಬಿಕ ಪತ್ರಗಳು' ಎಂಬ ಶೀರ್ಷಿಕೆಯಲ್ಲಿ ವಿವಿಧ ವಯೋಮಾನದ, ವಿವಿಧ ಮನೋಧರ್ಮದ, ವಿವಿಧ ಗ್ರಾಮ–ನಗರಗಳ, ವಿವಿಧ ವಿದ್ಯಾಅಂತಸ್ತುಗಳ, ವಿವಿಧ ವೃತ್ತಿಗಳ ವೃದ್ಧರೂ ವೃದ್ಧೆಯರೂ; ಯುವಕರೂ ಯುವತಿಯರೂ; ಬಾಲಕರೂ ಬಾಲೆಯರೂ ವಿವಿಧ ಸನ್ನಿವೇಶ–ಸಂದರ್ಭಗಳಲ್ಲಿ ಹಾರ್ದಿಕವಾಗಿ, ಸಹಜ ಭಾವದಲ್ಲಿ ಬರೆದ 435 ಪತ್ರಗಳಿವೆ. ಅವರಾರೂ ಮುಂದೊಂದು ದಿನ ತಮ್ಮ ಪತ್ರಗಳು ಪ್ರಣತಾರ್ತಿಹರನ್ ಅವರ ಕೈಗೆ ಸಿಕ್ಕಿ 'ಪತ್ರಸಾಹಿತ್ಯ' ವಾಗಿಬಿಡುತ್ತವೆ ಎಂದು ಭಾವಿಸಿಕೊಂಡು ಬರೆದವರಲ್ಲ; ಮಿಕ್ಕ ಸಾಹಿತ್ಯ ಪ್ರಕಾರಗಳಿಗಿಲ್ಲದ, ಪತ್ರಸಾಹಿತ್ಯಕ್ಕೆ ಮಾತ್ರವೇ ಮೀಸಲಾದ ವಿಶಿಷ್ಟ ಲಕ್ಷಣಗಳಲ್ಲಿ ಇದು ಅತ್ಯಂತ ಪ್ರಮುಖವಾದುದು.

ಪ್ರಥಮಖಂಡದ 435 ಪತ್ರಗಳಲ್ಲಿ ಕನ್ನಡ ಮಾತ್ರವಲ್ಲದೆ ಸಂಸ್ಕೃತ, ಆಂಗ್ಲಭಾಷೆಗಳಲ್ಲಿ ಬರೆದ ಪತ್ರಗಳೂ ಸೇರಿವೆ. ಸಂಸ್ಕೃತ ಪತ್ರಗಳಿಗೆ ಅಲ್ಲಲ್ಲೇ ಸಂಪಾದಕರು ಕನ್ನಡಾನುವಾದವನ್ನು ಒದಗಿಸಿ ಕೊಟ್ಟಿರುವುದು ಮೆಚ್ಚತಕ್ಕ ಸಂಗತಿಯಾಗಿದೆ. ಪತ್ರವಿಷಯಗಳು ಅನಂತಮುಖಿಯಾಗಿರುತ್ತವೆಯಾದರೂ ಪ್ರಣತಾರ್ತಿಹರನ್‌ರವರು ಅತ್ಯಂತ ಸಾವಧಾನವಾಗಿ ಎಲ್ಲವನ್ನೂ ಅಧ್ಯಯನ ಮಾಡಿ, ಅವುಗಳನ್ನು ಜಾತಾದಿ, ಅಧ್ಯಯನ, ವಿವಾಹ, ವ್ಯವಸಾಯ–ಉದ್ಯೋಗ, ಸಂಸ್ಕಾರವಲಯ, ಜಿಜ್ಞಾಸೆ, ಆರೋಗ್ಯ, ಆತಂಕ, ಜುಗುಪ್ಸೆ, ಆಸ್ತಿವಿಭಾಗ, ಗೃಹಕೃತ್ಯ, ಯೋಗಕ್ಷೇಮ, ತಂದೆ ಮಕ್ಕಳ ನಡುವೆ, ಒಂದೇ ಕುಟುಂಬದ ಪತ್ರಗಳು, ಪತ್ರಾಂಶ, ಸಾವು–ಸಾಂತ್ವನ, ದೇವನಾಗರಿಲಿಪಿಯ ಪತ್ರಗಳು, ಹೊಸ ಅಲೆಯ ಪತ್ರಗಳು– ಎಂಬ ಅಷ್ಟಾದಶ ಶೀರ್ಷಿಕೆಗಳಲ್ಲಿ ರೇಖೆಮಾಡಿ ಜೋಡಿಸಿದ್ದಾರೆ. ನಿಜಕ್ಕೂ ಈ ಅಷ್ಟಾದಶ– 18 ಎಂಬ ಸಂಖ್ಯೆ ಅತ್ಯಂತ ರಹಸ್ಯಮಯವಾದುದು. 1891ನೇ ಇಸವಿಯ ಪತ್ರಗಳನ್ನೂ ಹರನ್ ತಡಕಿ ತೆಗೆದಿದ್ದಾರೆಂದರೆ ಯಾರಿಗೆ ತಾನೆ ಅಚ್ಚರಿಯಾಗುವುದಿಲ್ಲ !

* * *

ಈ ಪ್ರಥಮಖಂಡದಲ್ಲಿರುವ ಪತ್ರಗಳ ಭಾಷೆಶೈಲಿಗಳು ತುಂಬ ಮೋಹಕವಾಗಿವೆ. "ಸರ್ಕಾರದ ಧನ್ವಂತರೀ ಇಲಾಖೆಯವರಿಂದ ಪ್ರಯೋಗಿಸಲ್ಪಡುತ್ತಿರುವ ಇನಾಕ್ಯುಲೇರ್ಷ ಮಹಾಶಕ್ತ್ಯಸ್ತ್ರದಿಂದ ಪ್ಲೇಗ್ ಮಹಾಮಾರಿ ಭೂತವು ಅರಣ್ಯರೋದನ ಮಾಡಲಿಕ್ಕೆ ಪರಾರಿಯಾಗುತ್ತಲಿದೆಯೆಂದು ಸೂಚಿಸಲು ಬಹಳ ಸಂತೋಷವಾಗುತ್ತದೆ"; "ಜೀವಮಾನವೆಲ್ಲ ಸಂಸಾರದ ಜಂಜಾಟದಲ್ಲಿ ಕಳೆದು ಅಹವಾಲುಗಳು ಒಂದನ್ನೊಂದು ಬಿಗಿದುಕೊಂಡಿರುವಾಗ ಅದರಲ್ಲಿ ಕೆಲವು ಕ್ಷಣಗಳನ್ನು ಭಗವಂತನ ನಾಮಸ್ಮರಣೆಯಲ್ಲಿ ಕಳೆಯಬಹುದಾಗಿದೆ. ಭಗವದ್ಭಕ್ತರಿಗೆ ಇದಕ್ಕಿಂತ ಬೇರೊಂದಿಲ್ಲ"; "ಮಿತ್ರಾ ! ಮಗ್ಗುಲಲ್ಲಿರುವ ನವಮಣಿಯ ಮೇಲ್ಮೆಯ ಬೆಡಗಿನ ಬಿನ್ನಾಣದ ಮಧುರಾಧರದ ಹೊಳಪಿಗೆ ಸೋತು ಆಜನ್ಮಮಿತ್ರರತ್ನವನ್ನು ಮರೆಯುವಂಥ ಕುಲಹೇಡಿಯಾದ ಮಿತ್ರದ್ರೋಹಿಯೆಂದು ನನ್ನನ್ನು ಭಾವಿಸಿದೆಯ?"; "ಅವಳ ತಂದೆತಾಯಿಯರಿಗೆ ಅಪ್ಪಿತಪ್ಪಿಯೂ ಒಂದು ಸಲ ಮಗಳನ್ನಾಗಲಿ ಅಳಿಯನನ್ನಾಗಲಿ ಕರೆಯುವ ಅಭ್ಯಾಸವಿಲ್ಲ. ಆದರೂ ಹೋದಳು. ಭೇತಾಳ ಮುಳ್ಳುಮುತ್ತುಕದ ಮರವೇರಿದರೆ ವಿಕ್ರಮಾದಿತ್ಯ ವಾಪಸ್ ಕರೆತರಲು ಹೋಗುವಂತೆ ಚಿ॥ ಯೂ ಹೋಗಿದಾನೆ"; "ಮೊದಲು ಮಾತಾಡಿಕೊಂಡಿದ್ದಂತೆಯೆ ಪ್ರಸಂಗಗಳು ಒದಗಿಬಂದದ್ದು ನೋಡಿ ಮನಸ್ಸು ಕರಗಿ ನೀರಾಗಿಹೋಗುತ್ತಿದೆ. ಅನ್ಯಾಯವಾಗಿ ನಿಮ್ಮನ್ನು ಒಂದು ಮಾತು ಕೇಳುವ ಹಾಗೆ ಮಾಡಿದೆನಲ್ಲ ಎಂದು ತುಂಬಾ ಯೋಚನೆಯಾಗಿದೆ. ಈ ವಿಷಯದಲ್ಲಿ ನಿಮ್ಮಗಳ ಕ್ಷಮಾಪಣೆಯನ್ನು ಬೇಡುತ್ತಿದ್ದೇನೆ"; "ಅಂದು – ಜೀವನದಲ್ಲಿ ಕಾಲಿಡುವ ಅತಿ ಉತ್ಸಾಹದಲ್ಲಿ ಕಾರಣಾಂತರಗಳಿಂದ ವಿದ್ಯಾಭ್ಯಾಸವನ್ನೂ ಬಿಟ್ಟು, ಜೀವನಸಮುದ್ರಕ್ಕೆ ಹಾರಿದರೆ, ಅಮೃತದ ಬದಲು ವಿಷಪಾನವಾಗಬೇಕೆ? ನಿರ್ಮಲೋದಕವೆಂದು ನಂಬಿದ ಸರಸ್ಸು ಕೆಸರುಗುಂಡಿಯಾಗಬೇಕೆ? ಸರ್ವಾಭೀಷ್ಟ ಫಲಪ್ರದವೆಂದು ನಂಬಿದ ವಸ್ತು ಕೇವಲ ಕಲ್ಲಾಗಬೇಕೆ? 'ದೇವಾ–ಇಂತಹ ದುಃಖವನ್ನು ಪ್ರಾಣಿಸಾಮಾನ್ಯಕ್ಕೆ ಕೊಡಬೇಡ' ಎಂದು ಎಷ್ಟು ಬೇಡಿದರೂ, ಕೇಳಬೇಕಲ್ಲ ಅವನ ಕಿವಿಗೆ?"; "ಆ ನಿಧಿಯನ್ನು ದೇವರು ತನ್ನದನ್ನಾಗಿ ಮಾಡಿಕೊಂಡಾಯಿತಲ್ಲಾ. ಏನೋ ಕೆಲಸ ಮಾಡುವುದಕ್ಕಾಗಿ ಊಟ ಮಾಡಬೇಕು. ಊಟ ಮಾಡ್ತೇನಲ್ಲಾ ಅಂತ ಕೆಲಸ ಮಾಡಬೇಕು. ನಗಬೇಕು, ನಗಿಸಬೇಕು. ನನ್ನ ಪರಿಸ್ಥಿತಿಯನ್ನು ನಿಮಗೆ ತಿಳಿಸಲಸಾಧ್ಯವು. ದಯವಿಟ್ಟು ನೀವೇನೂ ಬೇಜಾರು ಮಾಡಿಕೊಳ್ಳುವುದು ಬೇಡ. ನಿಮ್ಮ ಮೇಲೆ ನನಗೇಕೆ ಬೇಜಾರು. ಭಗವಂತನೇ ನಮ್ಮ ಪಾಲಿಗೆ ನಿಷ್ಕರುಣಿಯಾಗಿ ಕುಳಿತಿರುವಾಗ ಯಾರ ಮೇಲೆ ನಮ್ಮ ಪ್ರತಾಪವನ್ನು ವ್ಯಕ್ತಪಡಿಸುವುದೋ ಕಾಣೆ" – ಎಂಬಂತಹ ವಾಕ್ಯಗಳನ್ನು ಮತ್ತೆ ಮತ್ತೆ ಮೆಲುಕು ಹಾಕಬೇಕೆನಿಸುತ್ತದೆ. ಒಂದೆರಡು ಪತ್ರಗಳಲ್ಲಿ ಕೂಡಿಕೊಂಡಿರುವ ಸಂಕೇತಿಭಾಷೆಯ ವಾಕ್ಯಗಳು ಕೂಡ ಸನ್ನಿವೇಶದ ಸೊಬಗನ್ನು ಇಮ್ಮಡಿಗೊಳಿಸಿವೆ.

"ಈಗ ಮನೆಯಲ್ಲಿ ಜೋಳ ಮುರಿದಿದ್ದೇವೆ. ಸುಮಾರಾಗಿದೆ. ಕೆರೆಗೆ ನೀರಿಲ್ಲ. ಗದ್ದೆಬೆಳೆ ಸಾಮಾನ್ಯ ;" "ಮಳೆ ಕಡಮೆ. ಕೆಲವೆಡೆ ಉಂಟು. ಪ್ರಾಂತ ಸುಭಿಕ್ಷ. ನಮ್ಮ ನಿಮ್ಮ ಮನೆಯಲ್ಲೆಲ್ಲರೂ ಕ್ಷೇಮ"– ಎಂಬಂತೆ ಅನೇಕ ಕಡೆಗಳಲ್ಲಿ ಚಿಕ್ಕಚಿಕ್ಕ ವಾಕ್ಯಗಳು ಮನಸ್ಸನ್ನು ಮುದಗೊಳಿಸುತ್ತವೆ. ಕೆಲವು ಪತ್ರಗಳು ತಮ್ಮ ಆಡುನುಡಿಯ ಸೊಗಡಿನಿಂದ ಓದುಗರನ್ನು ಸಂತೋಷಪಡಿಸುತ್ತವೆ. ತಮ್ಮ ಮಗನಿಗಾಗಿ ಹುಡುಗಿಯನ್ನು ನೋಡಿಕೊಂಡು ಬಂದ ತಂದೆ, ಆಕೆಯನ್ನು ವರ್ಣಿಸುತ್ತ ಮಗನಿಗೆ ಬರೆಯುವ ಪತ್ರದಲ್ಲಿರುವ "ತಲೆಯು ದಪ್ಪವಾಗಿಲ್ಲ. ಅವಯವಗಳು ಅಂದವಾಗಿಯೂ ದೃಢವಾಗಿಯೂ ಮುಖವು ಕಲಾಯುಕ್ತವಾಗಿಯೂ ಇವೆ" ಎಂಬ ವಾಕ್ಯಗಳು ನಗೆಯುಕ್ಕಿಸುತ್ತವೆ. ಸಂದರ್ಭಾನುಸಾರ ಪತ್ರದ ಒಡಲಿನಲ್ಲಿ ಹಾಸುಹೊಕ್ಕಾಗಿರುವ ಹತ್ತಾರು ಸುಭಾಷಿತರೂಪದ ಶ್ಲೋಕಗಳು ಕೂಡ ಗಮನಸೆಳೆಯುತ್ತವೆ.

ಸಣ್ಣದಾರಿ ಪ್ರವೇಶಿಸು, ಕಲ್ಲುಹಾಕು, ಕೈಯಳ್ಳಾಡಿಸು, ಅವರಿವರಿಗೆ ಬಾಯಿಬಿಡು, ಕಾಡುಪಾಲಾಗು, ಬರಿಕೈಯಲ್ಲಿ ನಿಲ್ಲು , ತಳ್ಳಿಗೆ ಹೋಗದಿರು, ಭಾಷ್ಕಳ ಹೊಡೆ, ಜವಾಬು ಬೆಳೆಸು, ಎದೆ ಒಡೆದುಕೊ– ಎಂಬಂತೆ ಪತ್ರಗಳಲ್ಲಿ ಬಳಕೆಯಾಗಿರುವ ನುಡಿಗಟ್ಟುಗಳು ಭಾಷೆಯ ಸೊಬಗಿಗೆ ತಿಲಕವಿಟ್ಟಂತಿವೆ. ಕನ್ನಡ ಶೈಲಿಯ ನಡುವೆ ಆಂಗ್ಲಶಬ್ದಗಳು ಅಪ್ರಯಾಸವಾಗಿ ಬಳಕೆಯಾಗಿವೆ. ಯತ್ಕಿಂಚಿತ್ತು, ವಿದ್ಯಾವ್ಯಸನಿ, ಆಪಚ್ಛುಂತಿ, ದ್ರವ್ಯಧ್ವಂಸ, ಕಿಂವದಂತಿ, ಅಶನಾರ್ಥಿ, ವಾಚಾಪರೀಕ್ಷೆ, ಗುಣಗ್ರಹಣಿ ಎಂಬಂತೆ ಸಂಸ್ಕೃತ ಶಬ್ದಗಳು; ದಸ್ತಾವೇಜು, ತರದೂದು, ತಲಾಶು, ಶಿವಾಯಿ, ಜುಮ್ಲಾ, ತಪಸೀಲು, ಸಬೂಬು, ಲೇಣಾದೇಣಾ ಎಂಬಂತೆ ಅನ್ಯದೇಶ್ಯಗಳು; ಆಲಾಜೋಲಿ, ಹಗ್ಗಾಗು, ಪಿಚ್ಚುಲು ಎಂಬಂತೆ ಸಂಕೇತಿ ವಿಶಿಷ್ಟವಾದ ಶಬ್ದಗಳು ಸಹಜವಾಗಿ ಸೇರಿಕೊಂಡಿವೆ. 'ಹುಬ್ಬಳ್ಳಿಯಾಂವಾ' ಎಂದು ಬೇಂದ್ರೆಯವರು

ಬಳಸಿರುವಂತೆ, ಇಲ್ಲಿ 'ಹಾಸನದಾಕೆ' ಎಂಬ ಶಬ್ದ ತಮಾಷೆಯಾಗಿದೆ. ಕಳೆದ ಶತಮಾನದ ಆರಂಭದ ದಶಕಗಳಲ್ಲಿ ಕೇಶವ್ಯೆಯ್ಯ, ಯರಡು, ಯಿಲ್ಲಿ , ವೂರು, ವುಭಯ, ವಾಪ್ಸು ಎಂಬಂತೆ ಬರವಣಿಗೆಯ ಲಿಪಿಸ್ವರೂಪ ವಿಶಿಷ್ಟವೆನಿಸುತ್ತದೆ.

ಈ ಪತ್ರಗಳು ಸಂಕೇತಿ ಜನಾಂಗವು ಏಳಿಗೆಯ ಪಥದಲ್ಲಿ ಸಾಗಿನಡೆದ ನಿಚ್ಚಳವಾದ ಚಿತ್ರವೊಂದನ್ನು ಕಟ್ಟಿಕೊಡುವುದರಲ್ಲಿ ನಿಸ್ಸೀಮವೆನಿಸಿವೆ. ಈ ಹಿಂದೆ ಸಂಕೇತಿಗಳು ಅನುಭವಿಸಿದ ಕ್ಷಾಮಡಾಮರಗಳು, ಪ್ಲೇಗುಸಿಡುಬು ಮುಂತಾದ ರೋಗಬಾಧೆಗಳು, ಬಡತನ, ನಿರುದ್ಯೋಗ; ವಿದ್ಯಾಭ್ಯಾಸಕ್ಕಾಗಿ ಪಟ್ಟ ಕಷ್ಟನಿಷ್ಠುರಗಳು, ವಿಭಿನ್ನ ಪರಿಸ್ಥಿತಿಗಳಿಗೆ ಹೊಂದಿಕೊಂಡ ಬಗೆ, ತಮ್ಮ ಸಂಸ್ಕೃತಿಸಂಸ್ಕಾರಗಳನ್ನು ಕಾಪಾಡಿಕೊಳ್ಳಬೇಕೆಂದು ಹಂಬಲಿಸಿದ್ದು ; ಕೃತಜ್ಞತೆ, ಪ್ರಾಮಾಣಿಕತೆ, ನೇರವಾದ ನಡೆ ಈ ಮುಂತಾದ ಅವರ ಗುಣವಿಶೇಷಗಳು– ಇವೆಲ್ಲವೂ ಇಲ್ಲಿನ ಪತ್ರಗಳಲ್ಲಿ ಪಡಿಮೂಡಿವೆ ; ಸಂಕೇತಿ ಜನಾಂಗದ ಕೈಗನ್ನಡಿಯಾಗಿ ಈ ಕೃತಿ ಬೆಳಗುತ್ತಿದೆಯೆಂದೇ ಹೇಳಬೇಕು.

* * *

ಈ ಪತ್ರಸಾಹಿತ್ಯವನ್ನು ಸಹೃದಯರು ಆಸ್ವಾದಿಸಲು ಅನುಕೂಲವಾಗುವಂತೆ ಡಾ॥ ಪ್ರಣತಾರ್ತಿಹರನ್‌ರವರು ಅಗತ್ಯವೆಂದು ತೋರಿದ ಪತ್ರಗಳಿಗೆ ಸೂಕ್ತವಾದ ಹಿನ್ನೆಲೆಯನ್ನೂ ವಿವರಣೆಗಳನ್ನೂ ವಿಮರ್ಶೆಯನ್ನೂ ಒದಗಿಸಿಕೊಟ್ಟಿದ್ದಾರೆ. ತಮ್ಮನ ದುಃಸ್ಥಿತಿ; ನಾನು ತಾತ್ಸಾರ ಮಾಡಿಲ್ಲ ; ಪ್ರೊಫೆಸರನ್ನು ಆಶ್ರಯಿಸು; ಆಳುತ್ರಾಣವಾಗಿದಾನೆ; ತಂದೆಯ ವಾಗ್ದಂಡ; ಜೀವನ್ ಭದ್ರಾಣಿ ಪಶ್ಯತಿ– ಎಂಬಂತೆ ಎಲ್ಲ ಪತ್ರಗಳಿಗೂ ಸೂಕ್ತವಾದ, ಆಕರ್ಷಕವಾದ ಶೀರ್ಷಿಕೆಗಳನ್ನು ಕೊಟ್ಟಿದ್ದಾರೆ. ಪ್ರಸ್ತುತ ಸಂಕಲನವನ್ನಾಗಲಿ, ಒಟ್ಟಾರೆ ಕನ್ನಡ ಪತ್ರಸಾಹಿತ್ಯವನ್ನು ಅಧ್ಯಯನ ಮಾಡಬಯಸುವ ಸಂಶೋಧಕರಿಗಾಗಲಿ, ಪತ್ರಸಾಹಿತ್ಯವನ್ನು ಹೇಗೆ ಸಂಪಾದಿಸಬೇಕೆಂಬ ಮಾರ್ಗದರ್ಶನವನ್ನು ಬಯಸುವವರಿಗಾಗಲಿ ಈ ಸಂಪುಟವು ತವನಿಧಿಯಂತಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಸರ್ವಾಂಗಸುಂದರವೂ ಶಾಸ್ತ್ರೀಯವೂ ಅಧ್ಯಯನಯೋಗ್ಯವೂ ಆದ ಬಗೆಯಲ್ಲಿ ಈ ಕೃತಿಯು ಮೂಡಿಬಂದಿದೆಯೆಂಬುದನ್ನು ಎಷ್ಟು ಕೊಂಡಾಡಿದರೂ ಸಾಕಾಗುವುದಿಲ್ಲ.

* * *

ಈ ಸಂಪುಟದ ದ್ವಿತೀಯ ಖಂಡದಲ್ಲಿ ಪ್ರೊ॥ ಶ್ರೀಕಂಠಕುಮಾರಸ್ವಾಮಿಗಳೆಂಬ ಗಣ್ಯವಿದ್ವನ್ಮಣಿಗಳೊಬ್ಬರು 1982ರಿಂದ ಪ್ರಾರಂಭಿಸಿ ಇತ್ತೀಚಿನವರೆಗೂ ಬರೆದ 120 ಪತ್ರಗಳ ಒಕ್ಕೂಟವಿದೆ. ಅವುಗಳನ್ನು ಹರನ್‌ರವರು ಶ್ರೀ ಬಿ.ವಿ. ಶ್ರೀಕಂಠ ಮತ್ತು ಇತರರಿಗೆ ಬರೆದ ಪತ್ರಗಳು, ಮಗಳಿಗೆ ಬರೆದ ಪತ್ರಗಳು, ಸ್ವಾಮೀಜಿಯೊಬ್ಬರಿಗೆ ಬರೆದ ಪತ್ರ ಎಂದು ಮೂರಾಗಿ ವಿಂಗಡಿಸಿದ್ದಾರೆ. ಈ ಪತ್ರಗಳೆಲ್ಲ ವಿದ್ವತ್ಪೂರ್ಣವೂ ವಿಚಾರಪರಿಪ್ಲುತವೂ ಚಿಂತನಪೂರ್ಣವೂ ಬೋಧಪ್ರದವೂ ಆಗಿದ್ದು, ಸಾಮಾನ್ಯ ವ್ಯಾವಹಾರಿಕಸ್ತರದಿಂದ ಮೇಲೆದ್ದು ಪತ್ರಸಾಹಿತ್ಯದ ಸಲ್ಲಕ್ಷಣಗಳನ್ನೂ ವ್ಯಾಪ್ತಿವಿಸ್ತಾರಗಳನ್ನೂ ಘನತೆಗೌರವಗಳನ್ನೂ ಮನದಟ್ಟು ಮಾಡಿಕೊಡುವಂತಿವೆ. ಪತ್ರಗಳು, ಅವುಗಳನ್ನು ಬರೆಯುವ ಲೇಖಕನ ರಾಯಭಾರಿಯಿದ್ದಂತೆ. ಆ ಲೇಖಕನ ವ್ಯಕ್ತಿತ್ವದ ನಾನಾ ಮುಖಗಳನ್ನು ಅವು ಅನಾವರಣಗೊಳಿಸುತ್ತವೆ. ಶ್ರೀಕಂಠಕುಮಾರಸ್ವಾಮಿಗಳ ನಿರಾಡಂಬರ ಜೀವನಶೈಲಿ, ಸಹೃದಯತೆ, ಆರ್ದ್ರಮನಸ್ಕತೆ, ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಕನ್ನಡ ಸಂಸ್ಕೃತಿಯ ವಿಷಯದಲ್ಲಿರುವ ಸಾಂದ್ರವಾದ ಪ್ರೀತಿ, ತಾವು ತಿಳಿದುದನ್ನು ಜಿಜ್ಞಾಸುಗಳಿಗೆ ತಿಳಿಸಿಕೊಡಬೇಕೆಂಬ ಉತ್ಕಂಠೆ, ಅಂಧಶ್ರದ್ಧೆಗಳ ಕೋಟಲೆಗೆ ಯಾರೂ ಸಿಲುಕಬಾರದೆಂಬ ಕಳಕಳಿ, ನಮ್ಮ ಆಚರಣೆಗಳ ಅಂತರಾಳದಲ್ಲಿರುವ ಧ್ಯೇಯೋದ್ದೇಶಗಳನ್ನು ತಮ್ಮ ಅಂತರ್ದೃಷ್ಟಿಯಿಂದ ಕಂಡು ಉದ್ಘಾಟಿಸುವ ಅಧ್ಯಯನಶೀಲತೆ ; ಉದಾರವಾದಿತೆ, ಹೊಸಹೊಸದನ್ನು ಕಾಣುವ, ಹೊಸಹೊಸದನ್ನು ಕಟ್ಟುವ ನವನವೋನ್ಮೇಷಶಾಲಿಯಾದ ಪ್ರತಿಭೆ– ಈ ಮುಂತಾದ ಮಹೋನ್ನತ ಗುಣಗಳನ್ನು ಇಲ್ಲಿರುವ ಅವರ ಪತ್ರಗಳ ಅಧ್ಯಯನದ ಮೂಲಕ ಮನನ ಮಾಡಬಹುದಾಗಿದೆ.

* * *

ಹಿಂದೀಸಾಹಿತ್ಯರಂಗದಲ್ಲಿ ಪತ್ರಸಾಹಿತ್ಯವು ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಮಹಾತ್ಮಾ ಮುಂಶೀರಾಮ್ ಅವರು 1904ರಲ್ಲಿ ಪ್ರಕಟಿಸಿದ ಸ್ವಾಮಿ ದಯಾನಂದ ಸರಸ್ವತಿಗಳ ಪತ್ರಗಳ ಸಂಕಲನವೇ ಆ ಕ್ಷೇತ್ರದ ಮೊತ್ತಮೊದಲ ಕೃತಿಯಾಗಿದೆ. ಅಲ್ಲಿಂದ ಮುಂದಕ್ಕೆ ಆನಂದ ಕೋಸಲ್ಯಾಯನ, ಧೀರೇಂದ್ರವರ್ಮ, ಸತ್ಯಭಕ್ತಸ್ವಾಮಿ, ಸೂರ್ಯಬಲಿಸಿಂಹ, ವ್ರಜಮೋಹನಲಾಲ್ ವರ್ಮಾ, ದ್ವಿವೇದಿ, ಪದ್ಮಾಸಿಂಹಶರ್ಮ, ಕಮಲಾಪತಿತ್ರಿಪಾಠಿ, ಡಾ॥ ಜಗದೀಶಚಂದ್ರ, ಪ್ರೇಮ್‌ಚಂದ್,

ಬನಾರಸೀದಾಸ್ ಚತುರ್ವೇದಿ, ಪುರುಷೋತ್ತಮದಾಸ ಟಂಡನ್, ಕಿಶೋರಿದಾಸ ವಾಜಪೇಯಿ, ಸುಮಿತ್ರಾನಂದನಪಂತ್, ಹರಿವಂಶರಾಯ್ ಬಚ್ಚನ್– ಈ ಮೊದಲಾದ ಗಣ್ಯರು ಬರೆದ ಪತ್ರಗಳ ಸಂಕಲನಗಳು ಪ್ರಕಟಗೊಂಡಿವೆ. ಕನ್ನಡದಲ್ಲಿ ಪತ್ರಸಾಹಿತ್ಯವು ಹೆಚ್ಚಿನ ಬೆಳವಣಿಗೆಯನ್ನು ಸಾಧಿಸಿಲ್ಲ. ಹತ್ತಾರು ಸಂಕಲನಗಳು ಹೊರಬಂದಿವೆಯಾದರೂ ಹಿರಿಯ ಸಾಹಿತಿಗಳ, ವಿದ್ವಾಂಸರ ಪತ್ರಗಳನ್ನು ಸಂಶೋಧಿಸಿ ಬೆಳಕಿಗೆ ತರುವ ಅಗತ್ಯವಿದೆ. ಈ ಸಮುದಾಯದಲ್ಲಿ ಎ.ಎನ್. ಮೂರ್ತಿರಾಯರ 'ಚಿತ್ರಗಳು–ಪತ್ರಗಳು' (1978) ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರಕ್ಕೆ ಪಾತ್ರವಾದ ಮಹತ್ವದ ಕೃತಿ. ಅದರ 'ಪತ್ರಗಳು' ಎಂಬ ಭಾಗವು 76 ಪತ್ರಗಳಿಂದ ಕೂಡಿದೆ. ತನ್ನ ಆತ್ಮೀಯ ಶೈಲಿ, ಬದುಕಿನ ನೋವುನಲಿವುಗಳ ಆರ್ದ್ರವಾದ ಚಿತ್ರಣ, ತಿಳಿಹಾಸ್ಯದಿಂದ ಕೂಡಿದ ರಸಮಯವಾದ ಶೈಲಿ ಇವೇ ಮುಂತಾದುವು ಅದರಲ್ಲಿ ಎದ್ದುಕಾಣುತ್ತವೆ. ಆ ಪತ್ರಗುಚ್ಛದಲ್ಲಿ ಮೂರ್ತಿರಾಯರು ತೀನಂಶ್ರೀ ಅವರಿಗೆ ಬರೆದಿರುವ ಪತ್ರಗಳ ಸಂಖ್ಯೆಯೇ (70) ಹೆಚ್ಚು. ಮಿಕ್ಕಂತೆ ಮಗ ಸುಬ್ಬರಾಮಯ್ಯನವರಿಗೆ (5) ಸೊಸೆ ನ್ಯಾನ್ಸಿನಾಗರಾಜ್ ಅವರಿಗೆ (1) ಬರೆದ ಆರು ಪತ್ರಗಳಿವೆ. ಸಾಂಸ್ಕೃತಿಕ ಹಿನ್ನೆಲೆಯಿಂದಲೂ ಈ ಎಲ್ಲ ಪತ್ರಗಳು ಮಹತ್ವವನ್ನು ಗಳಿಸಿಕೊಂಡಿವೆ. "ಕಾಲು ಶತಮಾನಕ್ಕಿಂತ ಹೆಚ್ಚಿನ ಅವಧಿಯಲ್ಲಿ ಆಗಾಗ ಬರೆದ ಪತ್ರಗಳು, ಇವು" ಎಂದು ಮೂರ್ತಿರಾಯರೇ ಸೂಚಿಸಿದ್ದಾರೆ. ಇಂಗ್ಲಿಷ್ ಸಾಹಿತ್ಯದ ಕ್ಷೇತ್ರದಲ್ಲಿ ಕಾರ್ಲೈಲ್ ಮತ್ತು ಎಮರ್ಸನ್ನರ ನಡುವೆ ನಡೆದ ಪತ್ರವ್ಯವಹಾರವು ಲೋಕಪ್ರಸಿದ್ಧವಾದುದೆಂದು ಬಲ್ಲವರು ಹೇಳುತ್ತಾರೆ. ಸಂಪರ್ಕ ಸೌಲಭ್ಯಗಳು ಮೇರೆಮೀರಿ ಬೆಳೆದಿರುವ ಈ ಹೊಚ್ಚಹೊಸ ಯುಗದಲ್ಲಿ 'ಪತ್ರಸಾಹಿತ್ಯ'ಕ್ಕೆ ಏನು ಭವಿಷ್ಯವಿದೆಯೋ ತಿಳಿಯದು.

* * *

ಪ್ರಸ್ತುತ ಡಾ॥ ಪ್ರಣತಾರ್ತಿಹರನ್ ಸಂಪಾದಿಸಿರುವ ಈ ಪತ್ರಸಾಹಿತ್ಯ ಸಂಕೇತಿ ಸಂಸ್ಕೃತಿಗೆ ಅವರು ಸಮರ್ಪಿಸಿರುವ ಅನುಪಮವಾದ ಕೊಡುಗೆ. ಸಂಕೇತಿಬಂಧುಗಳಿಗೆಲ್ಲ ಈ ಸಂಪುಟವು ಆತ್ಮೀಯವಾಗುವುದರಲ್ಲಿ ಸಂದೇಹವಿಲ್ಲ. ಅಷ್ಟೇ ಏಕೆ, ಕನ್ನಡನಾಡಿನ ಒಟ್ಟು ಬ್ರಾಹ್ಮಣಸಮುದಾಯ ಈ ಕೃತಿಯಿಂದ ಪ್ರೇರಣೆ ಪ್ರಯೋಜನಗಳನ್ನು ಪಡೆಯುತ್ತದೆಂದು ನಾನು ನಂಬಿದ್ದೇನೆ. ಅವರಿವರೆನ್ನದೆ ಕನ್ನಡಸಾಹಿತ್ಯ ಪ್ರೇಮಿಗಳೆಲ್ಲರನ್ನೂ ಮೆಚ್ಚಿಸಬಲ್ಲ ಸಂಕಲನ ಇದಾಗಿದೆ. ಅಷ್ಟೇನೂ ಸಮೃದ್ಧವಲ್ಲದ ಕನ್ನಡ ಪತ್ರಸಾಹಿತ್ಯ ರಂಗಕ್ಕೆ ಇದೊಂದು ಅಮೂಲ್ಯವಾದ ಸೇರ್ಪಡೆ; ಅಷ್ಟು ಮಾತ್ರವಲ್ಲ , ಭಾರತದ ಯಾವ ಭಾಷೆಯಲ್ಲೂ ಇಷ್ಟೊಂದು ದೊಡ್ಡಗಾತ್ರದ ಪತ್ರಸಾಹಿತ್ಯ ಕೃತಿ ಪ್ರಕಟವಾಗಿರುವುದನ್ನು ನಾನು ಕಂಡಿಲ್ಲ. ಪ್ರಣತಾರ್ತಿಹರನ್ ಅವರ ಸಹನೆ, ತಾಳ್ಮೆ, ಕಾರ್ಯದಕ್ಷತೆ, ವಿದ್ವತ್ತು, ಪ್ರಯತ್ನಶೀಲತೆ, ಪ್ರಾಮಾಣಿಕತೆ, ಕಡಿವಡೆಯದೆ ಸಾಹಿತ್ಯಸೇವೆಯಲ್ಲಿ ತಮ್ಮನ್ನು ಸಮರ್ಪಿಸಿಕೊಂಡಿರುವಿಕೆ– ಈ ಮೊದಲಾದ ಅನನ್ಯಗುಣಗಳೇ ಇಂತಹ ಸತ್ಕೃತಿಯೊಂದು ಬೆಳಕು ಕಾಣಲು ಸಾಧ್ಯಮಾಡಿವೆ. ಸಂಕೇತಿ ಬಂಧುಗಳೆಲ್ಲರ ಪರವಾಗಿ, ಕನ್ನಡಿಗರೆಲ್ಲರ ಪರವಾಗಿ ಡಾ॥ ಪ್ರಣತಾರ್ತಿಹರನ್ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಮೈಸೂರು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜು
ಮೈಸೂರು

ಡಾ॥ ಕೆ. ಅನಂತರಾಮು
ಕನ್ನಡ ಪ್ರಾಧ್ಯಾಪಕ

೨ ಅರಿಕೆ

'ಸಂಕೇತಿ : ಒಂದು ಅಧ್ಯಯನ' ಎಂಬುದು ನನ್ನ ಪಿಎಚ್.ಡಿ., ನಿಬಂಧ. ಅದು 'ಸಂಕೇತಿ ಅಧ್ಯಯನ' ಮಾಲಿಕೆಯ ಮೊದಲ ಸಂಪುಟವಾಗಿ 2003ರಲ್ಲಿ ಪ್ರಕಟವಾಯಿತು. 'ಸಂಕೇತಿ : ಶತಮಾನದ ಪತ್ರಗಳು' ಎಂಬುದು ಸಂಕೇತಿ ಸಮುದಾಯದ ಪತ್ರಸಾಹಿತ್ಯ. ಅದು ಈ ಮಾಲಿಕೆಯ ಎರಡನೆಯ ಸಂಪುಟವಾಗಿ ಈಗ ಹೊರಬರುತ್ತಿದೆ.

ಸಂಗ್ರಹ

ಸಂಕೇತಿ ಸಮುದಾಯದ ಕೌಟುಂಬಿಕ ಪತ್ರಗಳನ್ನು ಸಂಗ್ರಹಿಸುವ ಪ್ರೇರಣೆ ಬಂದದ್ದು ಆಕಸ್ಮಿಕವಾಗಿ. 1986ರಲ್ಲಿ ಕೊಳ್ಳೇಗಾಲದ ಶ್ರೀಮಹದೇಶ್ವರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನಾಗಿ ಸೇವೆ ಸಲ್ಲಿಸುತ್ತಿದ್ದೆ. ಆ ವರ್ಷದ ಬೇಸಗೆ ರಜೆಯಲ್ಲಿ ನನ್ನ ಹಳ್ಳಿಗೆ ಹೋದೆ. ಹಾಸನಜಿಲ್ಲೆಯ ಬಸವಪಟ್ಟಣ ನನ್ನ ಪೂರ್ವಿಕರ ಊರು. ನನ್ನ ಬಾಲ್ಯವನ್ನು ಅಲ್ಲಿಯೇ ಕಳೆದಿದ್ದೆ. ಆ ದಿನಗಳಲ್ಲಿ 'ಸ್ವಾಮಿ, ಬಿಕ್ಷ' ಎಂದು ಕೂಗಿ ಬೇಡುತ್ತಿದ್ದ ಒಬ್ಬ ಭಿಕ್ಷುಕನಿದ್ದ. ಆತ ಹತ್ತಿರಹತ್ತಿರ ನೂರು ವರ್ಷ ಬದುಕಿದ್ದ. ಆ ಬಾರಿ ನಾನು ಊರಿಗೆ ಹೋದಾಗ ಆತ ಸತ್ತ ಸುದ್ದಿ ಕೇಳಿದೆ. ಒಂದು ರೀತಿಯ ಶೂನ್ಯದ ಅನುಭವವಾಯಿತು. ಹಳ್ಳಿಯ ಜೀವನವೇ ಅಂಥದು. ಅದು ತನಗೆ ಸಂಬಂಧಿಸಿದ ಎಲ್ಲವನ್ನೂ ಆತ್ಮೀಕರಿಸಿಕೊಳ್ಳುತ್ತದೆ. ಅಲ್ಲದೆ, 'ಸ್ವಾಮಿ, ಬಿಕ್ಷ'ನ ಅಜ್ಜ ಬರೆದುಕೊಟ್ಟಿದ್ದ ತಾಳೆಗರಿ ಗ್ರಂಥವೊಂದು ನಮ್ಮ ಮನೆಯಲ್ಲಿತ್ತು. ಅದು ಗದುಗಿನ ಭಾರತ. ಆ ಕಾರಣದಿಂದಾಗಿಯೂ ನಮಗೆ ಆತನ ಮೇಲೆ ಅಭಿಮಾನ. ಆತನಿಗಾಗಿ ಮೌನ ಆಚರಿಸಿದೆ. ನಮ್ಮ ಹಳೆಯ ಮನೆಯ ಅಟ್ಟದಲ್ಲಿ , ಆತನ ಪೂರ್ವಿಕರು ಪ್ರತಿ ಮಾಡಿಕೊಟ್ಟ ಆ ಗ್ರಂಥವಿತ್ತು. "ಅದನ್ನು ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಗೆ ತಲುಪಿಸಬೇಕು, ಅದೇ ನಾನು ಆ 'ಭಿಕ್ಷುಕ'ನಿಗೆ ಸಲ್ಲಿಸಬಹುದಾದ ಶ್ರದ್ಧಾಂಜಲಿ" ಎನಿಸಿತು. ಅಟ್ಟ ಹತ್ತಿದೆ. ಒಂದು ಜಾಯಿಕಾಯಿ ಪೆಟ್ಟಿಗೆಯಲ್ಲಿದ್ದ ಮೂರು ತಾಳೆಗರಿ ಗ್ರಂಥಗಳನ್ನು ಎತ್ತಿಕೊಂಡೆ. ಅವುಗಳ ಜತೆ ಸಂಸ್ಕೃತ ಲಿಪಿ ಮತ್ತು ಭಾಷೆಯಲ್ಲಿ ಬರೆದ ಹತ್ತಾರು ಕಾಗದಗಳೂ ಇದ್ದವು. ಗ್ರಂಥಗಳನ್ನು ಅಧ್ಯಯನಸಂಸ್ಥೆಗೆ ತಲುಪಿಸಿದೆ, ಕಾಗದಗಳನ್ನು ಕೇವಲ ಅಭಿಮಾನದಿಂದ ಜೋಪಾನವಾಗಿ ಇಟ್ಟುಕೊಂಡೆ.

1989ರಲ್ಲಿ ಶಿವಮೊಗ್ಗೆಯ ಸಹ್ಯಾದ್ರಿಕಾಲೇಜಿಗೆ ವರ್ಗವಾಯಿತು. ಶ್ರೀ ಬಿ.ವಿ.ಶ್ರೀಕಂಠ ಎಂಬ ವಿಶಿಷ್ಟ ವ್ಯಕ್ತಿಯೊಬ್ಬರು ಭದ್ರಾವತಿಯಲ್ಲಿದ್ದರು. ಅವರು ಇತಿಹಾಸಪ್ರಜ್ಞೆ ಇರುವ ವ್ಯಕ್ತಿ. ಹಲವು ಅಪರೂಪದ ಅಧ್ಯಯನಸಾಮಗ್ರಿ ಅವರ ಬಳಿ ಇತ್ತು. ಪ್ರೊ॥ ಶ್ರೀಕಂಠಕುಮಾರಸ್ವಾಮಿ ಎಂಬ ಚಿಂತಕರು ಬರೆದ ಪತ್ರಗಳ ಕಟ್ಟು ಅವುಗಳಲ್ಲೊಂದು. ವಿಶೇಷವಾಗಿ ಧರ್ಮ ಮತ್ತು ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಬರೆದ ದೀರ್ಘಪತ್ರಗಳು ಅವು. ಅವನ್ನು ನೋಡಿದ ಮೇಲೆ ಸಂಕೇತಿ ಸಮುದಾಯದ ಪತ್ರಸಾಹಿತ್ಯದ ಬಗೆಗೆ ಆಸಕ್ತಿ ಮೂಡಿತು. ನನ್ನ ಬಳಿ ಇದ್ದ ಸಂಸ್ಕೃತಪತ್ರಗಳಿಗೆ ಒಂದು ಗುರಿ ಕಂಡಿತು. ಕೌಟುಂಬಿಕ ಪತ್ರಗಳನ್ನು ಸಂಗ್ರಹಿಸತೊಡಗಿದೆ.

1990ರ ಬೇಸಗೆ ರಜೆಯಲ್ಲಿ ಬಸವಪಟ್ಟಣವನ್ನು ಕೇಂದ್ರವಾಗಿ ಇಟ್ಟುಕೊಂಡು ಕ್ಷೇತ್ರಕಾರ್ಯವನ್ನು ಆರಂಭಿಸಿದೆ. ಮೊದಲು ಹೋದದ್ದು ಸುಮಾರು ಹನ್ನೆರಡು ಮೈಲು ದೂರದ ಒಂದು ಹಳ್ಳಿಗೆ. ಅಲ್ಲಿ ಒಂದು ಮದುವೆ ನಡೆಯುವುದಿತ್ತು. 'ಅಲ್ಲಿ ಪತ್ರಸಂಗ್ರಹವನ್ನೂ ಮಾಡಬೇಕು' ಎಂಬ ಉದ್ದೇಶವಿತ್ತು. ಆದರೆ "ನಿಮ್ಮ ಮನೆಗೆ ಬಂದಿರುವ ಕಾಗದಗಳನ್ನು ಕೊಡಿ" ಎಂದು ಕೇಳುವುದು ಹೇಗೆ? ಆ ಯೋಚನೆ ಬರುತ್ತಲೇ ನಾಲಗೆ ಒಣಗುತ್ತಿತ್ತು. ಸೈಕಲ್ ತುಳಿಯುವುದು ಕಷ್ಟವಾಗುತ್ತಿತ್ತು. ಬಿಸಿಲು ಹೆಚ್ಚು ಸುಡುತ್ತಿತ್ತು. ಮನಸ್ಸು ವಿಪರೀತ ಡೋಲಾಯಮಾನವಾಗುತ್ತಿತ್ತು. ಆ ಹಳ್ಳಿಗೆ ಪ್ರವೇಶಿಸುತ್ತಲೇ ಒಬ್ಬ ಸಂಕೇತಿರೈತರು ಎದುರಾದರು. ಆಗತಾನೇ ತೋಟದಿಂದ ಬರುತ್ತಿದ್ದರು. ತಲೆಯಮೇಲೆ ಸೋಗೆಯ ಹೊರೆ ಇತ್ತು. ನಮ್ಮ ತಂದೆಯವರ ಕಾರಣದಿಂದಾಗಿ ನಾನೂ ಅವರಿಗೆ ಪರಿಚಿತ. ಮನೆಗೆ ಕರೆದುಕೊಂಡು ಹೋದರು. ಕುಶಲೋಪರಿ ಆಯಿತು. ಅವರ ಮನೆಯ ಅಟ್ಟದ ದಬ್ಬೆಗೆ ನೇತುಹಾಕಿದ್ದ ಕಾಗದಗಳ ಸರ ಕಂಡದ್ದು ಆಗಲೇ. ಮದುವೆಯ ಊಟಕ್ಕೆ ಕೂರಲು ಇನ್ನೊಂದು ಮನೆಗೆ ಹೋದೆವು. ಅಲ್ಲೂ ಅಂಥದೊಂದು ಸರವಿತ್ತು. ಆ ಸಂಜೆ ಆ ರೈತಬಂಧುವಿನ ತೋಟದಲ್ಲಿ ಎಳನೀರು ಕುಡಿಯುತ್ತಿದ್ದೆವು. ಆಗಲೇ ಪತ್ರಸಂಗ್ರಹದ ನನ್ನ ಉದ್ದೇಶವನ್ನು ವಿವರಿಸಿದೆ. ಗೋಪ್ಯವನ್ನು ಕಾಪಾಡುವ ಭರವಸೆ ಕೊಟ್ಟೆ. ಸಂಕೇತಿ ಪತ್ರಸಾಹಿತ್ಯದ ಕಲ್ಪನೆ ಮೂಡಿಸಿದೆ. ಅವರು,

ತಂತಿಯೊಂದಕ್ಕೆ ಪೋಣಿಸಿ ಇಟ್ಟಿದ್ದ ಅಷ್ಟೂ ಕಾಗದಗಳನ್ನು ಕೊಟ್ಟರು, ಇತರ ಇನ್ನೂ ನಾಲ್ಕು ಮನೆಗಳಲ್ಲಿ ಕೊಡಿಸಿದರು. ಒಟ್ಟು 400 ಪತ್ರಗಳ ಬೋಣಿಗೆ ಆಗಿತ್ತು.

ಇದರಿಂದ ಉತ್ತೇಜಿತನಾಗಿ 20–25 ಮೈಲು ದೂರದ ಇನ್ನೊಂದು ಹಳ್ಳಿಗೆ ಹೋದೆ. ಪರಿಚಿತರು ಇದ್ದಾರೆನ್ನುವುದೇ ಆ ಹಳ್ಳಿಯ ಆಯ್ಕೆಗೆ ಇದ್ದ ಅಳತೆಗೋಲು. ಬಸ್ಸಿನಿಂದ ಇಳಿದು ಮೂರು ಮೈಲು ನಡೆಯಬೇಕಾಗಿತ್ತು. ಊರು ತಲುಪಲು ಇನ್ನೂ ಮೂರು ಫರ್ಲಾಂಗ್ ಇತ್ತು. "ಯಾರ ಮನೆಗೆ ಹೋಗಲಿ? ಯಾರನ್ನು 'ಪತ್ರ ಕೊಡಿ' ಎಂದು ಕೇಳಲಿ? ಹೇಗೆ ಕೇಳಲಿ? ಅವರು ಹೀಯಾಳಿಸಿ ತಿರಸ್ಕರಿಸಿದರೆ ಅಪಮಾನವಲ್ಲವೆ?" ಎಂಬಂಥ ಪ್ರಶ್ನೆಗಳ ಮೇಲೆಯೇ ಹೆಜ್ಜೆ ಹಾಕುತ್ತಿದ್ದೆ. ನನ್ನದೇ ಪ್ರಪಂಚದಲ್ಲಿ ಮುಳುಗಿ ಹೋಗಿದ್ದೆ. 'ಕ್ಷೇಮ್ಮ್‌ಮ್ಮೋss'? ಎಂಬ ಆತ್ಮೀಯವಾದ ಸ್ವಾಗತ ಗುಡುಗಿತು. ಅಂಥ ಅಕ್ಕರೆ, ಅಂಥ ಗಡಸು ದನಿ. ಅವರಿಗೆ ನನ್ನ ಪರಿಚಯವಿತ್ತು. ಅದು ಉಳುಮೆಯ ಕಾಲ. ಅವರು ಉಳುತ್ತಿದ್ದರು. ಹಲಸಿನ ಮರದ ಅಡಿ ಕೂತೆ. ಒಂದೆರಡು ನಿಮಿಷದಲ್ಲಿ ನೇಗಿಲು ಕೈಬಿಟ್ಟು ಅವರೂ ಬಂದು ಕೂತರು, ನಶ್ಯದ ಡಬ್ಬಿ ತೆಗೆದರು. ಅವರೊಬ್ಬ ಮಾಜಿ ಯೋಧ. ಹೊಲ ಉತ್ತೇ ಜೀವಿಸಬೇಕಾಗಿರಲಿಲ್ಲ. 'ಮಣ್ಣಿನ ಜತೆ ಒಡನಾಟ, ಗಿಡದ ಜತೆ ಉಸಿರಾಟ' ಎಂದು ನಿರ್ಣಯಿಸಿ ನಶ್ಯ ಸೇದಿ ಕೈ ಒದರಿದರು. ಅದೇ ಸಮಯಕ್ಕೆ ಇನ್ನೊಬ್ಬ ರೈತ ಬಂದ. ಹೋರಿಗೆ 'ಜೊತೆಹಾಕುವ' ಮಾತು ಗಹನವಾಗಿ ಸಾಗಿತ್ತು. ಆ ನಡುವೆ ನಾನೂ ಒಂದು ಬಣಸಾಲು ಉತ್ತೆ. ಅವರ ಮನೆಯಲ್ಲೇ ತಿಂಡಿ, ಊಟ, ಕಾಫಿ. ಅವರ ಯುದ್ಧಾನುಭವವನ್ನು ಕೇಳುವುದರಲ್ಲೇ ಆ ದಿನ ಪೂರ್ತಿ ಕಳೆಯಿತು. ಆ ಶಿಸ್ತುಗಾರನ ಬಳಿ ಪತ್ರ ಕೇಳುವ ಧೈರ್ಯ ಬರಲಿಲ್ಲ. 'ಹೊತ್ತಾಯಿತು, ಬರುತ್ತೇನೆ' ಎಂದು ಮೇಲೆದ್ದೆ. 'ಅದೇನು, ಬಂದಿದ್ದಿರಿ?' ಎಂದರು. ವಿವರಿಸಿದೆ. ಅವರು ಕೂತಿದ್ದುದು ಮಿಲಿಟರಿ ಪೆಟ್ಟಿಗೆಯೊಂದರ ಮೇಲೆ. ತಕ್ಷಣ ಅದರ ಬಾಗಿಲು ತೆಗೆದರು. ಅಚ್ಚುಕಟ್ಟಾಗಿ ಜೋಡಿಸಿ ಕಟ್ಟಿ ಇಟ್ಟಿದ್ದ ಪತ್ರಗಳ ಕಂತೆಯನ್ನೇ ಕೊಟ್ಟರು. ಅದರಲ್ಲಿ 350 ಪತ್ರಗಳಿದ್ದವು. 'ಆಚೋss!' (ಸರಿಯೆ? ಸಮಾಧಾನವೇ? ನಿಮಗೆ ಉಪಯೋಗಕ್ಕೆ ಬರುತ್ತದೆಯೇ?) ಎಂದು ಜೋರಾಗಿ ನಕ್ಕು ಬೀಳ್ಕೊಟ್ಟರು.

ಆಮೇಲೆ ಹತ್ತಾರು ಹಳ್ಳಿ ಸುತ್ತಿದೆ. ಅದೇ ಅಂಜಿಕೆ, ಹಿಂಜರಿಕೆ, ಅನುಮಾನ, ಭೀತಿ ಇದ್ದೇ ಇತ್ತು. ಹೊಲ, ಗದ್ದೆ, ತೋಟ, ಮದುವೆಮನೆ, ಗಾಡಿಪ್ರಯಾಣ, ಶ್ಮಶಾನ– ಇಂಥ ಹಲವು ಎಡೆಗಳಲ್ಲಿ ಪೀಠಿಕೆ ಹಾಕಿ ಬೆಳೆ ತೆಗೆಯಬೇಕಾಗುತ್ತಿತ್ತು. 'ಒಂದು' ಪತ್ರ ಕೊಟ್ಟವರೂ ಉಂಟು. 'ಹತ್ತು' ಪತ್ರ ಕೊಟ್ಟವರೂ ಉಂಟು. 1991ರ ಹೊತ್ತಿಗೆ ಒಟ್ಟು 3000 ಪತ್ರಗಳು ಸಂಗ್ರಹವಾಗಿದ್ದವು.

ನಾನು ಆಗಲೂ ಶಿವಮೊಗ್ಗೆಯಲ್ಲಿ ಸೇವೆಸಲ್ಲಿಸುತ್ತಿದ್ದೆ. ಮೈಸೂರಿನ ಮನೆಯನ್ನು ಸಹೋದ್ಯೋಗಿ ಮಿತ್ರರೊಬ್ಬರಿಗೆ ವಹಿಸಿದ್ದೆ. 'ದೀಪಹಚ್ಚಿಕೊಂಡಿರಿ' ಎಂದು ವಿನಂತಿಸಿದ್ದೆ. ಅವರಿಗೂ ಅದು ಸಹಾಯವಾಗಿತ್ತು. ಆದರೆ ನನ್ನ ಗ್ರಂಥಭಂಡಾರವಿದ್ದ ಕೋಣೆಯನ್ನು ನನ್ನ ವಶದಲ್ಲೇ ಉಳಿಸಿಕೊಂಡಿದ್ದೆ. ಅವರೂ ಅದನ್ನು ಬಳಸಿಕೊಳ್ಳಲು ಅವಕಾಶ ಕೊಟ್ಟಿದ್ದೆ. ಈ 3000 ಪತ್ರಗಳನ್ನು ಒಂದು ಕಾರ್ಡ್‌ಬೋರ್ಡ್ ಪೆಟ್ಟಿಗೆಯಲ್ಲಿ ತುಂಬಿದೆ. ಅದನ್ನು ಮೈಸೂರಿನ ನನ್ನ ಮನೆಯ ಆ ಗ್ರಂಥಭಂಡಾರದಲ್ಲಿರಿಸಿದೆ. ಹಿಂದೆ ಬಸವಪಟ್ಟಣದಲ್ಲಿ ಹಾಡಿನ ಸಂಗ್ರಹದ ಪುಸ್ತಕಗಳನ್ನು ಗೆದ್ದಲು ತಿಂದಿತ್ತು. ಹಾಗಾಗದಿರಲೆಂದು ಆ ಪೆಟ್ಟಿಗೆಯನ್ನು ಆರು ಅಡಿ ರ್‍ಯಾಕಿನ ತುದಿಯಲ್ಲಿರಿಸಿದೆ. ಕೀಟನಾಶಕಗಳನ್ನೂ ಸಿಂಪಡಿಸಿದೆ.

ಮೂರು ತಿಂಗಳು ಬಿಟ್ಟು ಒಮ್ಮೆ ಮೈಸೂರಿಗೆ ಹೋದೆ. ನನ್ನ ಗ್ರಂಥಭಂಡಾರವನ್ನು ಗೆದ್ದಲು ಆಕ್ರಮಿಸಿಲ್ಲವೆ ಎಂದು ಪರಿಶೀಲಿಸಿದೆ. ಎಲ್ಲವೂ ಚೆನ್ನಾಗಿತ್ತು. ಹೊರಟೆ. ಅಷ್ಟರಲ್ಲಿ ಕಾರ್ಡ್‌ಬೋರ್ಡ್ ಪೆಟ್ಟಿಗೆಯ ಮೇಲೆ ಏನೋ ರಿಂಗಿನ ಮಾದರಿ ಕಾಣಿಸಿತು. ಅದನ್ನು ತೆಗೆದರೆ ಪೆಟ್ಟಿಗೆಯೊಳಗಿನಿಂದ ಇಡೀ ಪ್ಲಾಸ್ಟಿಕ್ ಕೊಡವೇ ಹೊರಗೆ ಬಂತು. 'ನಾನು ಯಾವಾಗ ಇದನ್ನು ಇಟ್ಟೆ?' ಎಂದು ಗೊಣಗಿಕೊಂಡೆ. ಗೆಳೆಯನ ಪತ್ನಿ ಓಡಿಬಂದರು, 'ಅದು ನಮ್ಮದೇ ಕೊಡ, ನಮ್ಮ ಮಿನ್ನಿ ಬಾಗಿಲಿಗೆ ನೀರು ಹಾಕಿದ ಮೇಲೆ ಕೊಡಾನ ಅಲ್ಲಿ ಜೋಪಾನವಾಗಿ ಇಡುತಾಳೆ, ಅಷ್ಟೆ' ಎಂದರು. ಸುಮಾರು ಒಂದು ಸಾವಿರ ಪತ್ರ ತೇವಗೊಂಡು ಹಾಳಾಗಿತ್ತು. ಕೋಪ, ದುಃಖ, ಹತಾಶೆ ಎಲ್ಲ ಒಟ್ಟಿಗೆ ಉಂಟಾಯಿತು. ಗೆಳೆಯನ ಮಡದಿ ತಿರಸ್ಕಾರವಾಗಿ ನಕ್ಕರು. ಕಾಫಿ ಕೊಟ್ಟು ಕೂರಿಸಿದರು. ತಮ್ಮ ಮನೆಯಲ್ಲಿ ಅಲ್ಲಿಇಲ್ಲಿ ಬಿದ್ದಿದ್ದ 'ಕಾಗದ'ಗಳನ್ನೆಲ್ಲ

ಗುಡ್ಡೆಹಾಕಿಕೊಂಡು ನನ್ನ ಎದುರಿಗೆ ಕೂತರು. ಅವನ್ನು ನೋಡಿದಂತೆ ಮಾಡಿ ಒಂದೊಂದಾಗಿ ಮುದುಡಿ 'ಹಾಳು ಕಸ' ಎಂದು ಮೂಲೆಗೆ ಹಾಕಿದರು. ಕಸದ ಮೊರದಲ್ಲಿ ತುಂಬಿಕೊಂಡು ಕನ್ಸರ್ವೆನ್ಸಿಗೆ ಎಸೆದು ಬಂದರು. ಅವುಗಳಲ್ಲಿ ಚೆನ್ನಾದ ಅರುವತ್ತೈದು ಪತ್ರಗಳಿದ್ದವು.

ಸಾವಿರ ಪತ್ರಗಳು ಹಾಳಾಗಿದ್ದವು. ಮತ್ತೆ 'ಆ' ಒಂದು ಸಾವಿರ ಪತ್ರಗಳನ್ನು ಸಂಗ್ರಹಿಸಬೇಕೆಂಬ ಗುರಿ ಹಾಕಿಕೊಂಡೆ. ಕ್ಷೇತ್ರಕಾರ್ಯ ಮುಂದುವರಿಸಿದೆ. 2003ರ ಹೊತ್ತಿಗೆ 4500 ಪತ್ರಗಳಾದುವು.

ಪತ್ರಸಾಹಿತ್ಯ

ಪತ್ರಸಾಹಿತ್ಯ ಎಂಬುದು ಪಾಶ್ಚಾತ್ಯರಲ್ಲಿರುವ ಒಂದು ಸಾಹಿತ್ಯ ಪ್ರಕಾರ. ಅಂಥದೊಂದು ಮಾದರಿ ಭಾರತದಲ್ಲಿ ಬೆಳೆದಿಲ್ಲ , ಕನ್ನಡದಲ್ಲಿಯೂ ಬೆಳೆದಿಲ್ಲ. ಇತರ ಸಾಹಿತ್ಯಪ್ರಕಾರಗಳನ್ನು ಅನುಕರಿಸಿದ ಭಾರತೀಯರು ಈ ಪ್ರಕಾರವನ್ನು ಏಕೆ ಬೆಳೆಸಲಿಲ್ಲ ಎಂಬುದು ಆಶ್ಚರ್ಯಕರವಾಗಿದೆ. ಕನ್ನಡದಲ್ಲಿ ಈ ಪ್ರಕಾರಕ್ಕೆ ಸೇರುವ ಅನೇಕ ಕೃತಿಗಳೇನೋ ಬಂದಿವೆ.

ಪತ್ರಸಾಹಿತ್ಯದಲ್ಲಿ 'ಕಾಲ್ಪನಿಕ ಪತ್ರಗಳು' ಎಂಬುದೇ ಒಂದು ವಿಭಾಗ. ಆ ವಿಭಾಗಕ್ಕೆ ಸೇರುವ ಪತ್ರಗಳಲ್ಲಿ ಗೋಕಾಕರ 'ಜೀವನಪಾಠಗಳು' ಗ್ರಂಥದ 'ವನಮಾಲಿಯ ಒಲವಿನೋಲೆಗಳು' ಎಂಬುದೂ ಒಂದು. ಆ ಪತ್ರಗಳು ಉಪದೇಶಾತ್ಮಕವಾಗಿವೆ, ಜೊತೆಗೆ ಅವುಗಳಲ್ಲಿ ಕಾವ್ಯಮೌಲ್ಯ ಇದೆ. ಹಾಗೆಯೇ, ಪಂಡಿತ ಸಿ.ಕೃಷ್ಣ ಅವರ 'ಮುಗುದೆಯರ ಪತ್ರಗಳು' ಎಂಬ ಸಂಕಲನದಲ್ಲಿ ಹಾಸ್ಯವಿದೆ, ಸಂತೋಷವಿದೆ, ಮೊದಲಪ್ರೇಮದ ಸವಿಗನಸುಗಳಿವೆ. ಇಲ್ಲಿರುವುವು 'ಪ್ರಣಯದಲ್ಲಿ ಓಲಾಡುವ ಬೆಳುದಿಂಗಳ ಪಾತ್ರಗಳು.'

'ಕಾರುಣ್ಯ ಕಿರಣ' ಜ.ಚ.ನಿ. ಅವರ ಗ್ರಂಥ. ಇಲ್ಲಿಯೂ ಉಪದೇಶಾತ್ಮಕ ಪತ್ರಗಳೇ ಇವೆ. ಅವು ವಚನಶೈಲಿಯಲ್ಲಿವೆ. ಈ ಬಗೆಗೆ, "ಭಾವಸಂಸ್ಕಾರವನ್ನೂ ಹೃದಯಸಂಸ್ಕಾರವನ್ನೂ ಪಡೆದು ಹೃದಯಸ್ಪರ್ಶಿಯಾದರೆ ಬುದ್ಧಿನಿಷ್ಠವಾದ ಉಪದೇಶ ಸಾಹಿತ್ಯವಾಗುತ್ತದೆ. ಈ ಸಾಹಿತ್ಯಗುಣದ ರಜತರೇಖೆಗಳಿಂದ ರಂಜಿತವಾಗಿರುವುದರಿಂದ ಇಲ್ಲಿ ಓಲೆಗಳು ಯಾರಿಗಾಗಿ ಉದ್ದಿಷ್ಟವೋ ಅವರಿಗೆ ಮಾತ್ರವಲ್ಲದೆ ಇತರರಿಗೂ ಉಪಾದೇಯವಾಗಿವೆ" ಎಂಬ ಎಂ.ವಿ.ಸೀ. ಅವರ ಮಾತು ('ಚಿನ್ನದ ಬೆಳಸು', ಪು. 112) ಪತ್ರಸಾಹಿತ್ಯದ ಬಗೆಗಿನ ಒಳ್ಳೆಯ ವ್ಯಾಖ್ಯಾನವಾಗಿದೆ.

ಪತ್ರಕಥೆ, ಪತ್ರಕಾದಂಬರಿಯ ನಿದರ್ಶನಗಳೂ ನಮ್ಮಲ್ಲಿವೆ. ಪತ್ರತಂತ್ರದ ಮೂಲಕವೇ ಹಾಸ್ಯಕಥೆಯೊಂದನ್ನು ಬರೆದಿರುವ ಡಾ। ಎ.ಜಿ.ಸುಬ್ಬರಾವ್ ('ಅಮರಾಯಿ ಹರಾಜು' : ದಾರಿಯಾವುದಯ್ಯಾ) ಆ ಕಲೆಯು ಪಡೆಯಬಹುದಾದ ಹೊಸ ಆಯಾಮವೊಂದನ್ನು ತೋರಿಸಿಕೊಟ್ಟಿದ್ದಾರೆ. ಹುಣಸೆ ಫಸಲನ್ನು ಹರಾಜು ಮಾಡಲು ಸರ್ಕಾರದ ವಿವಿಧಸ್ತರದ ಕಚೇರಿಗಳ ನಡುವೆ ನಡೆಯುವ ಪತ್ರವ್ಯವಹಾರವು ಅದರ ಹಂದರ. ಆ ಬಗೆಗೆ ಮೇಲಿನವರ ಸಮ್ಮತಿ ದೊರೆಯುವ ವೇಳೆಗೆ ಹುಣಸೆ ಫಸಲು ನಾಶವಾಗಿರುತ್ತದೆ. ನಮ್ಮ ವ್ಯವಸ್ಥೆಯ ನಿಧಾನಗತಿಯನ್ನು ತೀಕ್ಷ್ಣವಾದ ವ್ಯಂಗ್ಯದ ಮೂಲಕ ಇದು ಪ್ರತೀಕಿಸಿದೆ. ಬೀಚಿ ಅವರ 'ಬೆಳ್ಳಿ ಪತ್ರಗಳು' ಎಂಬ ಕಾದಂಬರಿ 25 ಪತ್ರಗಳ ಮೂಲಕವೇ ಬೆಳೆದಿದೆ. ಭಾವನಾವಲಯವನ್ನು ಪುಷ್ಟಿಗೊಳಿಸುವಲ್ಲಿ ಈ ತಂತ್ರ ಹೇಗೆ ಸಿದ್ಧಿ ಪಡೆದಿದೆ ಎಂಬುದನ್ನು ಅದರಲ್ಲಿ ಕಾಣಬಹುದು.

ಪತ್ರಸಾಹಿತ್ಯದ ಇನ್ನೊಂದು ವಿಭಾಗ ವಾಸ್ತವಪತ್ರಗಳದು. ಪಾಶ್ಚಾತ್ಯರು ನಿತ್ಯಜೀವನದ ಪತ್ರಗಳನ್ನೂ ಕಲಾತ್ಮಕವಾಗಿ ಬರೆಯುವುದನ್ನು ರೂಢಿಸಿಕೊಂಡಿರುವುದು ಕಾಣುತ್ತದೆ. ಅಂಥ ಪತ್ರಗಳ ಸಂಕಲನಗಳು ಕನ್ನಡದಲ್ಲಿಯೂ ಬಂದಿವೆ. ಜವಹರಲಾಲ್ ನೆಹರೂ ಅವರ ಪುಸ್ತಕವನ್ನು 'ಮಗಳಿಗೆ ತಂದೆಯ ಓಲೆಗಳು' ಎಂಬ ಹೆಸರಿನಲ್ಲಿ ಕಪಟ್ರಾಳ ಕೃಷ್ಣರಾಯರು ಕನ್ನಡಕ್ಕೆ ತಂದಿದ್ದಾರೆ. 'ತಾಯಿಗೆ ಬರೆದ ಪತ್ರಗಳು' ಇ.ಎ. ಭಾಸ್ಕರರಾಯರ ಕೃತಿ. ಅವರು ಉನ್ನತ ವ್ಯಾಸಂಗಕ್ಕಾಗಿ ಜರ್ಮನಿಗೆ ಹೋದಾಗ ಬರೆದ ಪತ್ರಗಳು ಅದರಲ್ಲಿವೆ. ಗೋಕಾಕರ 'ಸಮುದ್ರದಾಚೆಯಿಂದ', ಆರ್. ಕೆ.ಕಾರಂತರ 'ಪ್ರವಾಸಿಯ ಪತ್ರಗಳು' ಪ್ರವಾಸ ಸಾಹಿತ್ಯದ ಗುಂಪಿಗೆ ಸೇರುತ್ತವೆ; ಆದರೆ ಪತ್ರರೂಪದಲ್ಲಿವೆ. ಸಾಹಿತಿಗಳೇ ಬರೆದ ಪತ್ರಗಳಲ್ಲಿ ಸಾಹಿತ್ಯಗುಣ ಇರುವುದು ಸಹಜ. ಮಾಸ್ತಿಯವರು ಸಂಪಾದಿಸಿದ 'ಸಾಹಿತ್ಯ ಲಾಲನೆ', ಕು.ಶಿ.

ಹರಿದಾಸಭಟ್ಟರು ಸಂಗ್ರಹಿಸಿದ 'ಗೋವಿಂದ ಪೈ ಬರೆದ ಪತ್ರಗಳು', ಹರಿಹರಪ್ರಿಯ ಅವರು ಸಂಪಾದಿಸಿದ 'ಕುವೆಂಪು ಪತ್ರಗಳು' ಅದೇರೀತಿಯವು. ಇವುಗಳ ಬಗೆಗೆ ಬರೆದ ಮಾತುಗಳಲ್ಲಿ– ಕವಿಯ ವ್ಯಕ್ತಿಚಿತ್ರವನ್ನು ಕಟ್ಟುವ, ಕವಿಯ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವ ಮಾಹಿತಿ ದೊರೆಯುವ– ಪ್ರಯೋಜನಗಳ ಬಗೆಗೆ ಹೇಳಲಾಗಿದೆ. ಎ.ಎನ್.ಮೂರ್ತಿರಾಯರ 'ಚಿತ್ರಗಳು–ಪತ್ರಗಳು' ಇದೇ ಗುಂಪಿಗೆ ಸೇರುವಂಥದು.

ವಾಸ್ತವಪತ್ರಗಳಲ್ಲಿಯೇ ವಿಶಿಷ್ಟವಾದವು ಕೌಟುಂಬಿಕ ಪತ್ರಗಳು. ಮಡಿಕೇರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ತಮ್ಮ ಅಧ್ಯಕ್ಷ ಭಾಷಣದಲ್ಲಿ ಡಿ.ವಿ.ಜಿ. 1932ರಷ್ಟು ಹಿಂದೆಯೇ ಈ ಬಗೆಗೆ ಹೇಳಿದ್ದರು. "ಬಂಧುಮಿತ್ರರೊಡನೆ ಬಳಯಿಸುವ ಪತ್ರಪ್ರಸಂಗವೂ (Letter writing) ಒಂದು ಬಗೆಯ ಸಾಹಿತ್ಯವೇ. ಈ ಜಾತಿಯ ಬರವಣಿಗೆಯೂ ಇಂಗ್ಲಿಷ್‌ನಲ್ಲಿ ಹೆಚ್ಚಾಗಿದೆ. ಲ್ಯಾಂಬ್, ಮಕಾಲೆ, ಮ್ಯಾತ್ಯೂ ಆರ್ನಾಲ್ಡ್, ಹಕ್ಸ್ಲೆ ಇತ್ಯಾದಿಗಳು ಬರೆದ ಕಾಗದಗಳು ವಿವಿಧ ವಸ್ತುವರ್ಣನೆ, ಪರಿಹಾಸ ವಚನ, ಅಂತರಂಗ ವಿವರಣೆ ಇವುಗಳಿಗೆ ಆದರ್ಶಪ್ರಾಯಗಳಾಗಿ, ಓದುವವರಿಗೆ ವಿನೋದವನ್ನುಂಟುಮಾಡತಕ್ಕವಾಗಿವೆ." ಈ ಮಾತುಗಳು ಕೌಟುಂಬಿಕ ಪತ್ರಗಳ ವಸ್ತುವೈವಿಧ್ಯ, ರಸವೈವಿಧ್ಯ ಮತ್ತು ಅಂತರಂಗ ದರ್ಶನದ ಗುಣಗಳ ಕಡೆಗೆ ನಮ್ಮ ಗಮನ ಸೆಳೆಯುತ್ತವೆ.

ಕೌಟುಂಬಿಕ ಪತ್ರಗಳಲ್ಲಿ ನೂರಾರು ರೀತಿಯ ಪಾತ್ರಗಳಿರುತ್ತವೆ, ನೂರಾರು ರೀತಿಯ ಸನ್ನಿವೇಶಗಳಿರುತ್ತವೆ; ಅವಕ್ಕೆ ತಕ್ಕಂತೆ ನಿರೂಪಣೆ ಇರುತ್ತದೆ. ಅಲ್ಲಿರುವ ಸಂಬಂಧಗಳು ಹತ್ತಾರು ರೀತಿಯವು, ಅವುಗಳ ಭಾವಾಭಿವ್ಯಕ್ತಿ ಮುಕ್ತವಾಗಿರುತ್ತದೆ; ಜೀವನದ ಸವಾಲನ್ನು ಎದುರಿಸುವ ಅವರವರದೇ ವಿಶಿಷ್ಟ ವಿಧಾನಗಳಿರುತ್ತವೆ. ಅಲ್ಲಿ, ತಮ್ಮ ದನಿಯನ್ನು ಇನ್ನೊಬ್ಬರು ಕೇಳಿಸಿಕೊಂಡಾರೆಂಬ ಅಂಜಿಕೆ ಇರುವುದಿಲ್ಲ; ತನ್ನ ಎದುರಿಗಿರುವ ವ್ಯಕ್ತಿ ಚೆನ್ನಾಗಿ ಕೇಳಿಸಿಕೊಳ್ಳಬೇಕೆಂಬ ಬಿಚ್ಚುನುಡಿ ಇರುತ್ತದೆ. ಅದರಿಂದಲೇ ಭಾಷೆಯು ಪರಿಣಾಮಕಾರಿಯಾಗಿ ಮೂಡುತ್ತದೆ. ಹೊರಪ್ರಪಂಚದಲ್ಲಿರುವ ಎಲ್ಲವೂ ಅಲ್ಲಿರುತ್ತವೆ– ಸಾಮಾಜಿಕ, ಕೌಟುಂಬಿಕ, ವೈಯಕ್ತಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ– ಎಂಬಂತೆ ಅಧ್ಯಯನಕ್ಕೆ ಆಕರಗಳೂ ಆಗುತ್ತವೆ; ಕಾಲಸಂದು ಸಾರ್ವತ್ರಿಕಗೊಂಡಂತೆ ಸಾಹಿತ್ಯವೇ ಆಗಿಬಿಡುತ್ತವೆ. ಅತ್ಯಂತ ಸಹಜವಾದ, ಅಪ್ರಜ್ಞಾಪೂರ್ವಕವಾಗಿ ಬರೆದ ಪತ್ರಗಳು ಅವು. ಭಾವವು ಮಾಗಿದ ಸ್ಥಿತಿಯಲ್ಲಿ ಬರೆದ ಪತ್ರಗಳು ಅನೇಕವೇಳೆ ಇತರ ಸಾಹಿತ್ಯಕೃತಿಗಳಿಗಿಂತ ಹೆಚ್ಚು ಕಾವ್ಯಾತ್ಮಕವಾಗಿರುವುದುಂಟು. ಓದುಗರ ಕಲ್ಪನೆಗೆ, ಸ್ಪಂದನಕ್ಕೆ, ಭಾವನಾವಿಶೇಷಕ್ಕೆ, ಜೀವನರಹಸ್ಯದ ಪರಿಭಾವನೆಗೆ ಅಲ್ಲಿ ಅವಕಾಶವಿದೆ.

ನಿರ್ವಹಣೆ

ನಾನು ಸಂಗ್ರಹಿಸಿದ 4500 ಪತ್ರಗಳಲ್ಲಿ ಮಹತ್ತ್ವದವೆಂದು ಕಂಡುಬಂದ 555 ಪತ್ರಗಳನ್ನು ಇಲ್ಲಿ ಪ್ರಕಟಿಸಲಾಗಿದೆ. ಜೀವನಕ್ಕೆ ಸಂಬಂಧಿಸಿದಂತೆ ಏನಾದರೂ ಮಾಹಿತಿಯೋ, ಹೊಳಹೋ, ದಿಗ್ದರ್ಶನವೋ ದೊರೆಯುವುದೇ ಈ ಪತ್ರಗಳ ಆಯ್ಕೆಗೆ ಇರುವ ಮಾನದಂಡವಾಗಿದೆ. ಹೀಗೆ ಆಯ್ಕೆಯಾದ ಪತ್ರಗಳೆಲ್ಲವೂ ಒಂದೇ ಮಟ್ಟದವಲ್ಲ. ಆದರೆ ಜೀವನದ ವಿವಿಧ ಆಯಾಮಗಳನ್ನು ಪ್ರತಿನಿಧಿಸುವುದರಿಂದ ಅವನ್ನು ಪ್ರಕಟಿಸಲಾಗಿದೆ.

ಈ ಪತ್ರಗಳಲ್ಲಿ ಕೆಲವು, ಹಲವು ದಶಕಗಳಷ್ಟು ದೀರ್ಘಕಾಲದವು. ಅನೇಕ ಪತ್ರಗಳು ಶಿಥಿಲವಾಗಿವೆ, ಅಕ್ಷರಗಳು ಮಾಸಿವೆ; ಮೋಡಿ ಅಕ್ಷರಗಳಲ್ಲಿ ಬರೆದವೂ ಇವೆ. ಹಾಗಾಗಿ ಈ ಪತ್ರರಾಶಿಯನ್ನು ಅಧ್ಯಯನ ಮಾಡುವುದೇ ಒಂದು ಸವಾಲಾಯಿತು. ಆದರೂ, ನಿಖರವಾಗಿ ಓದುವುದಕ್ಕೆ ಒತ್ತು ಕೊಡಲಾಗಿದೆ.

ಪತ್ರಗಳ ಶಿರೋಭಾಗ ಮತ್ತು ಮುಕ್ತಾಯಭಾಗಗಳಲ್ಲಿನ ಕನ್ನಡ, ಇಂಗ್ಲಿಷ್, ದೇವನಾಗರೀಲಿಪಿಗಳ ಪದಗಳನ್ನು ಆಯಾ ಲಿಪಿಯಲ್ಲೇ ಕೊಟ್ಟಿದೆ. ಪತ್ರದ ಒಡಲಿನಲ್ಲಿ ಮಾತ್ರ ನಾಗರೀಲಿಪಿಯ ಭಾಗಗಳನ್ನು ಕನ್ನಡಕ್ಕೆ ಲಿಪ್ಯಂತರಗೊಳಿಸಿದೆ. ಕನ್ನಡ ಮತ್ತು ಇಂಗ್ಲಿಷ್‌ಅಂಕಿಗಳನ್ನು ಯಥಾವತ್ತಾಗಿ ಉಳಿಸಿಕೊಂಡಿದೆ; ನಾಗರಿಅಂಕಿಗಳನ್ನು ಮಾತ್ರ ಕನ್ನಡಅಂಕಿಗೆ ಪರಿವರ್ತಿಸಿದೆ. ಓದುಗರ ಅನುಕೂಲವನ್ನು ಅನುಲಕ್ಷಿಸಿ ಹೀಗೆ ಮಾಡಿದೆ.

ಕುಶಲೋಪರಿಯ ಪ್ರಾರಂಭಿಕ ವಾಕ್ಯಗಳು ಹಾಗೂ ಸಭ್ಯತಾಪೂರ್ವಕ ಮುಕ್ತಾಯದ ಕೊನೆಯ ವಾಕ್ಯಗಳಲ್ಲಿ ವಿಶೇಷವೂ ವೈವಿಧ್ಯವೂ ಇದ್ದಾಗ ಮಾತ್ರ ಅವನ್ನು ಉಳಿಸಿಕೊಂಡಿದೆ.

ಮೊದಲಭಾಗದ 435 ಪತ್ರಗಳು 18 ಗುಚ್ಛಗಳಲ್ಲೂ ಎರಡನೆಯ ಭಾಗದ 120 ಪತ್ರಗಳು 3 ವಿಭಾಗಗಳಲ್ಲೂ ವಿಂಗಡಣೆಗೊಂಡಿವೆ. ಮೊದಲಭಾಗದಲ್ಲಿ ಜೀವನಚಕ್ರದ ಚಿತ್ರವೊಂದು ದೊರೆಯುವಂತೆ ಈ ವಿಂಗಡಣೆ ಮಾಡಿದೆ. ಎರಡನೆಯಭಾಗದಲ್ಲಿ ಪತ್ರಗಳ ಆಂತರಿಕಸ್ವರೂಪವನ್ನು ಅನುಲಕ್ಷಿಸಿ ವಿಂಗಡಿಸಲಾಗಿದೆ. ಪ್ರತಿವಿಭಾಗದಲ್ಲೂ ಪತ್ರಗಳು ಕಾಲಾನುಕ್ರಮದಲ್ಲಿವೆ.

ಪತ್ರಗಳಿಗೆ ಸಂಬಂಧಿಸಿದಂತೆ ಸಂಕೇತಿ ಸಮುದಾಯದ ಈವರೆಗಿನ ಅಧ್ಯಯನದ ಹಿನ್ನೆಲೆಯಲ್ಲಿ ಕೆಲವು ಟಿಪ್ಪಣಿಗಳನ್ನು ಕೊಡಲಾಗಿದೆ.

ಸಾಹಿತ್ಯವಾಗಿ ಪತ್ರಗಳು

ಸಂಕೇತಿ ಸಮುದಾಯದ ಪತ್ರವ್ಯವಹಾರವೆಲ್ಲ ಬಹುಮಟ್ಟಿಗೆ ಕನ್ನಡದಲ್ಲಿಯೇ ನಡೆದಿದೆ. ಸಂಸ್ಕೃತ ಮತ್ತು ವೇದವನ್ನು ವಿಧ್ಯುಕ್ತವಾಗಿ ಪಾಠಶಾಲೆಗಳಲ್ಲಿ ಕಲಿಯತೊಡಗಿದಮೇಲೆ ಕೆಲವರು ಸಂಸ್ಕೃತದಲ್ಲಿಯೇ ಪತ್ರವ್ಯವಹಾರ ನಡೆಸಿದ್ದಾರೆ. ಸಂಗ್ರಹವಾದ ಒಟ್ಟು 4500 ಪತ್ರಗಳಲ್ಲಿ ಸಂಸ್ಕೃತಭಾಷೆಯಲ್ಲಿ ಬರೆದ ಕೇವಲ 25 ಪತ್ರಗಳು ಸೇರಿವೆ. ಸಾಂಪ್ರದಾಯಿಕ ವಿದ್ಯೆಯನ್ನು ಪಾಠಶಾಲೆಗಳಲ್ಲಿ ಪಡೆಯುವ ನೂತನಕ್ರಮವು ಪ್ರಾರಂಭವಾಗುತ್ತಿದ್ದಂತೆಯೇ ಆಧುನಿಕಶಿಕ್ಷಣಕ್ಕೆ ಈ ಸಮುದಾಯ ಒಲಿಯಿತು. ಹಾಗಾಗಿ ಸಂಸ್ಕೃತವು ಇಂಗ್ಲಿಷ್‌ಗೆ ಬೇಗ ದಾರಿ ಮಾಡಿಕೊಟ್ಟಿತು. ಸಂಸ್ಕೃತದಲ್ಲಿ ಪತ್ರವ್ಯವಹಾರ ನಡೆದದ್ದು ಕಡಮೆ, ಇಂಗ್ಲಿಷ್ ಭಾಷೆಯ ಮೂಲಕ ನಡೆದದ್ದು ಅದಕ್ಕಿಂತ ಹೆಚ್ಚು. ಆದರೆ, ಇಂಗ್ಲಿಷ್ ಕಲಿತವರು ಇಂಗ್ಲಿಷ್ ಕಲಿಯದ ತಮ್ಮ ಬಂಧುಗಳ ಜತೆ ವ್ಯವಹರಿಸಬೇಕಿತ್ತು ; ಇಂಗ್ಲಿಷ್ ಕಲಿತ ಬಂಧುಗಳಾದರೂ ಕನ್ನಡವನ್ನು ಬಿಟ್ಟು ಇಂಗ್ಲಿಷ್ ಭಾಷೆಯಲ್ಲಿ ವ್ಯವಹರಿಸುವುದು ಆತ್ಮೀಯತೆಯನ್ನು ಬಲಿಗೊಡುತ್ತಿತ್ತು, ಕೃತಕವಾಗಿ ಕಾಣುತ್ತಿತ್ತು. ಆದ್ದರಿಂದ ಅವರ ಇಂಗ್ಲಿಷ್ ಪತ್ರವ್ಯವಹಾರವು ಸ್ನೇಹಿತರಿಗೆ ಮತ್ತು ನಗರಗಳಲ್ಲೇ ಇರುವ ಕೆಲ ಬಂಧುಗಳಿಗೆ ಸೀಮಿತವಾಯಿತು. ದೊರೆತ ಪತ್ರಗಳ ಪ್ರಮಾಣವನ್ನು ಗಮನಿಸಿದರೆ (ಶೇ.99), ಕನ್ನಡವೇ ಅವರ ನೈಜ ಮಾಧ್ಯಮವಾಗಿದೆ; ಉಳಿದ ಭಾಷೆಗಳು ತಾತ್ಕಾಲಿಕವಾದ ಮತ್ತು ಸೀಮಿತವಾದ ವ್ಯವಹಾರಕ್ಕೆ ಬಳಕೆಗೊಂಡಿವೆ. ಅದು ಮಾತ್ರವಲ್ಲ, ಸಂಕೇತಿ ಭಾಷೆಯಲ್ಲಿ ಬರೆದ ವಾಕ್ಯಗಳು ಬಲುಬಲು ಅಪರೂಪವಾಗಿ ಅಲ್ಲೊಂದು ಇಲ್ಲೊಂದು ಪತ್ರದಲ್ಲಿ ಕಾಣುತ್ತವೆ. ಪತ್ರವ್ಯವಹಾರದಲ್ಲಿ ಕನ್ನಡವೇ ಹೇಗೆ ಇವರ ಅಂತರಂಗದ ಭಾಷೆಯಾಗಿದೆ ಎಂಬುದು ಇದರಿಂದ ತಿಳಿಯುತ್ತದೆ.

ಸಂಕೇತಿ ಸಮುದಾಯದ ಪತ್ರಸಾಹಿತ್ಯದ ಸ್ವರೂಪವು ಶಿಕ್ಷಣ, ನೌಕರಿ, ನಗರೀಕರಣ, ತಾಂತ್ರಿಕತೆಯ ಅಭಿವೃದ್ಧಿಗೆ ಹೊಂದಿಕೊಂಡಿದೆ. ನಮಗೆ ಸಿಕ್ಕಿರುವ ಮೊದಲ ಪತ್ರ ಕ್ರಿ.ಶ. 1891ರದ್ದು. 1891ರಿಂದ 1920ರವರೆಗೆ ಸಿಕ್ಕಿರುವ ಪತ್ರಗಳು ಬಹು ಕಡಮೆ. ಪತ್ರ ಸಂಸ್ಕೃತಿಗೆ ಒಗ್ಗುತ್ತಿರುವ ಸ್ಥಿತಿಯನ್ನೇ ಅದು ತೋರಿಸುತ್ತದೆ. ಆ ವೇಳೆಗೆ ಸಂಕೇತಿಗಳು ಹಳ್ಳಿಗಳಲ್ಲಿಯೇ ನೆಲೆಸಿರುತ್ತಿದ್ದುದರಿಂದ, ಭೌತಿಕಸಂಪರ್ಕದ ಮಿತಿಯಲ್ಲೇ ತಮ್ಮ ವ್ಯವಹಾರಗಳನ್ನಿಟ್ಟುಕೊಂಡಿದ್ದುದರಿಂದ ಅವರ ಪತ್ರಗಳಲ್ಲಿರುವ ವಿವರ ಬಹು ಕಡಮೆ. ವ್ಯವಹಾರಕ್ಕೆ ಕ್ಲುಪ್ತವಾದ ಒಂದೆರಡು ಸಾಲುಗಳೋ ಅಂಶಗಳೋ ಅಲ್ಲಿರುತ್ತವೆ. ಪತ್ರಗಳು ವ್ಯಾಪಕವಾಗಿ ದೊರೆತಿರುವುದು 1920ಕ್ಕಿಂತ ಮುಂದೆ. ಸಂಪ್ರದಾಯಶೀಲರಾದ ಸಂಕೇತಿಗಳು ಆಧುನಿಕ ವಿದ್ಯೆಗೆ, ಉದ್ಯೋಗಕ್ಕೆ ಹಾಗೂ ನಗರೀಕರಣಕ್ಕೆ ತೆರೆದುಕೊಂಡ ಕಾಲಘಟ್ಟಕ್ಕೆ ಇದು ಹೊಂದುತ್ತದೆ. 1920ರಿಂದ 1940ರವರೆಗಿನ ಅವಧಿಯು ಈ ಸಮುದಾಯವು ಆಧುನಿಕ ಶಿಕ್ಷಣ ಮತ್ತು ನಗರಜೀವನದ ಮೂಲಕ ಹೊಸಪ್ರಪಂಚಕ್ಕೆ ತೆರೆದುಕೊಂಡ ಮೊದಲಘಟ್ಟ. ವಾಹನಸಂಪರ್ಕ ಕಡಮೆ ಇತ್ತು. ಪತ್ರಗಳ ಮೂಲಕವೇ ಸಮಸ್ತ ವ್ಯವಹಾರವೂ ನಡೆಯಬೇಕಿತ್ತು. ಆಗ ಹೊರಟ ಪತ್ರಗಳಲ್ಲಿ ಅವರ ಒಳತೋಟಿಯ ದಟ್ಟಚಿತ್ರಣ ಸಿಗುತ್ತದೆ. ಅಲ್ಲಿ ತೀವ್ರ ತಳಮಳವಿದೆ. ಭಾಷೆಯ ಹೊಸತನವೂ ಅಲ್ಲಿ ಕಾಣಿಸಿಕೊಂಡಿದೆ. 1940 ರಿಂದ 1990ರ ವರೆಗಿನ ಘಟ್ಟದಲ್ಲಿ ಹೊಸ ಪರಿಸರಕ್ಕೆ ಹೊಂದಿಕೊಂಡ ಶಾಂತಸ್ಥಿತಿ ಇದೆ. ಆದರೆ ಹೊಸ ಸವಾಲು, ಪರಿಸರ, ಸಾಧ್ಯತೆ, ಸಾಧನೆಗಳ ಎದುರಾಟವಿದೆ. ಅದು ವಾಹನಗಳ ಸೌಕರ್ಯ ಹೆಚ್ಚುತ್ತಿದ್ದ ಅವಧಿ. ಆಗಾಗ ಭೌತಿಕವಾಗಿಯೇ ಭೇಟಿಯಾಗುವ ಸಾಧ್ಯತೆಯೂ ಹೆಚ್ಚಿತು. ಹೊಸ ಸನ್ನಿವೇಶಗಳು ಅವರ

ನಡೆ ಮತ್ತು ಭಾಷೆಯನ್ನು ಪರಿಣಾಮಿಸಿರುವುದು ಅಲ್ಲಿ ಕಾಣುತ್ತದೆ. 1990ಕ್ಕಿಂತ ಮುಂದೆ ದೂರವಾಣಿ ಸಂಪರ್ಕದಲ್ಲಿ ಕ್ರಾಂತಿಯಾಯಿತು. ಅವರ ಸುದ್ದಿಗಳೂ, ಅದಕ್ಕೆ ಹೊಂದಿಕೊಂಡ ಭಾವಾವೇಶವೂ ಗಾಳಿಯಲ್ಲಿ ಲಯವಾಯಿತು. ಪತ್ರಸಂಖ್ಯೆಯೂ ಸೊರಗಿತು. 21ನೆಯ ಶತಮಾನದಲ್ಲಿ ಇ–ಮೇಲ್ ಮೂಲಕ ಸುದ್ದಿಯ ತೆಳು ಹಂದರ ತೆರೆಯ ಮೇಲೆ ಕಾಣಿಸಿಕೊಂಡು ಕಣ್ಮರೆಯಾಗುತ್ತಿದೆ. ಒಟ್ಟಿನಲ್ಲಿ , ಸಂಕೇತಿಗಳ ಪತ್ರಸಾಹಿತ್ಯವು ಸ್ಥೂಲವಾಗಿ ಪ್ರಾರಂಭವಾದಾಗಿನಿಂದ ಹಿಡಿದು ಬಹುತೇಕ ಕೊನೆಗೊಳ್ಳುವವರೆಗಿನ ಒಂದು ಸುತ್ತು, ಇಲ್ಲಿನ ಸಂಗ್ರಹದಲ್ಲಿ ಪ್ರತಿಬಿಂಬಿತವಾಗಿದೆ.

ಒಂದೇ ಕುಟುಂಬದ ಸದಸ್ಯರ ನಡುವೆ ಹೊರಟ 'ಪಾಸ್ಟನ್ ಪತ್ರಗಳು', ತಂದೆಯು ಮಗನಿಗೆ ಬರೆದ ನೀತಿಬೋಧಕ ಪತ್ರಗಳನ್ನೊಳಗೊಂಡ 'ಲೆಟರ್ಸ್ ಟು ಹಿಸ್ ಸನ್' (ಲಾರ್ಡ್ ಚೆಸ್ಟರ್ ಫೀಲ್ಡ್) ಇವನ್ನು ಪ್ರಸ್ತುತ ಸಂಕಲನದ ಮೊದಲ ಭಾಗದ ಸ್ವರೂಪಕ್ಕೆ ಸಂವಾದಿಯಾಗಿ ನಿದರ್ಶಿಸಬಹುದು. ವಿವೇಕಾನಂದರ ಜೀವನದೃಷ್ಟಿಯನ್ನು ತಿಳಿಸುವ 'ವಿವೇಕಾನಂದರ ಪತ್ರಮಾಲೆ', ಕೆನಡ ದೇಶದ ಜನಜೀವನದ ಬಗ್ಗೆ ಮಾಹಿತಿ ನೀಡುವ 'ಕೆನಡದಲ್ಲಿ ಕನ್ನಡಿಗ' (ಡಾ॥ ವಿ. ಶೆಟ್ಟಿ) ಇಂಥ ಪತ್ರಸಂಕಲನಗಳನ್ನು ಈ ಸಂಪುಟದ ಎರಡನೆಯ ಭಾಗದ ಸ್ವರೂಪಕ್ಕೆ ಹೋಲಿಸಬಹುದು.

ಇಲ್ಲಿನ ಪತ್ರಗಳಲ್ಲಿ ಭಾಷೆ ಪರಿಣಾಮಕಾರಿಯಾಗಿಯೂ ಕಾವ್ಯಮಯವಾಗಿಯೂ ಬಳಕೆಯಾಗಿದೆ. ಉದಾಹರಣೆಗೆ, "ಇದೇನೆ ಅಕ್ಕ ಹಾಗ್ ನಿಂತ್ಕೊಂಡ್ ಬಿಟ್ಟೆ. ನಾನೇ ಕಣೇ. ನಿನ್ನ ತಂಗಿ ಬರೆದಿರೊ ಕಾಗದ ಕಣೇ. ಆಶ್ಚರ್ಯ ಆಯ್ತ? ನಿಧಾನವಾಗಿ ಓದು" (ಪತ್ರ 223). ಇದು ಹಳ್ಳಿಯ ಸಾಧಾರಣ ಹೆಣ್ಣುಮಗಳೊಬ್ಬಳು ಪತ್ರವನ್ನು ಪ್ರಾರಂಭಿಸಿರುವ ರೀತಿ. ಇದರಲ್ಲಿ ಲವಲವಿಕೆ ಇದೆ, ಬಂಧುತ್ವದ ಉತ್ಕಟತೆ ಇದೆ, ಅಂತರಂಗದ ಪ್ರೀತಿ ಇದೆ. ಅದನ್ನೂ ಮೀರಿ ಒಂದು ರಮ್ಯ ಚಿತ್ರವನ್ನು ಇದು ಕಟ್ಟಿಕೊಟ್ಟಿದೆ : ಅಂಚೆಯವನು ಪತ್ರವೊಂದನ್ನು ಕೊಟ್ಟು ಹೋಗಿದ್ದಾನೆ. ದೂರದ ಊರಿನಲ್ಲಿರುವ ಅಕ್ಕ ಬಹುದಿನಗಳ ಅನಂತರ ತನ್ನ ತಂಗಿಯ ಆ ಪತ್ರವನ್ನು ಪಡೆದಿದ್ದಾಳೆ. ಅವಳಿಗೆ ಪತ್ರ ಬರುವುದು ಅಪರೂಪ. ಹಾಗೆಂದೇ ಆ ಪತ್ರವು ಅವಳಲ್ಲಿ ಪ್ರೀತಿ, ಆಶ್ಚರ್ಯ, ಅನುಮಾನಗಳನ್ನೆಲ್ಲ ಒಟ್ಟಿಗೆ ಹುಟ್ಟಿಸಿದೆ. ಅವಳು ಇನ್ನೂ ಬಾಗಿಲಲ್ಲಿಯೇ ನಿಂತಿದ್ದಾಳೆ– ಇನ್ನೂ ಪತ್ರದ ಹೊರವಿವರಗಳಲ್ಲೇ ಅವಳ ಕಣ್ಣು ನೆಟ್ಟಿದೆ. ತವರಿನ ನೆನಪು ಪುಟಿದೆದ್ದಿದೆ; ಕಣ್ಣು ಮಿಂಚಿದೆ, ಮುಖ ಅರಳಿದೆ; ಹಾಗೇ ಮೈಮರೆತು ನಿಂತಿದ್ದಾಳೆ– ಇದು ಆ ತಂಗಿಯ ಮಾತುಗಳ ಸೂಚನೆಯು ಕಟ್ಟಿಕೊಡುವ ಭಾವಚಿತ್ರ; ಅಭಿರಾಮತರವಾದ ಚಿತ್ರ.

ತನಗಾದ ಪುತ್ರೋತ್ಸವದ ಹರ್ಷವನ್ನು ಹಂಚಿಕೊಳ್ಳಲು ಮಿತ್ರನೊಬ್ಬನು ಉಲ್ಲಾಸದಿಂದ 'ನನ್ನ ಪ್ರೀತಿಯ ಅಣ್ಣೂ' ಎಂದು ಪತ್ರದ ಪ್ರಾರಂಭಮಾಡಿರುವ ರೀತಿಯಾಗಲಿ (ಪತ್ರ 1), ಬಾಲಭಾಷೆಯೇ ಒಂದು ಶಕ್ತಿಯಾಗುವ ಪರಿಯಾಗಲಿ (ಪತ್ರ 238), ಗುರು–ಶಿಷ್ಯರ ಪ್ರಶ್ನೋತ್ತರದ ಜ್ಞಾನಯಾತ್ರೆಯ ಆವೇಶವನ್ನು ಕಾಣಿಸುವ 'ಶ್ರೀಕಂಠ' ಎಂಬ ಒಂದೇ ಪದದ ಪ್ರಾರಂಭವಾಗಲಿ–ಪರಿಣಾಮಕತೆಯ ದೃಷ್ಟಿಯಿಂದ ಉಲ್ಲೇಖನೀಯವಾದವು.

ಏನನ್ನಾದರೂ ಸುಂದರವಾಗಿ ಮತ್ತು ಆಕರ್ಷಕವಾಗಿ ಹೇಳಿದರೆ ಅಥವಾ ಬರೆದರೆ ಅದೊಂದು ಸಾಹಿತ್ಯಿಕ ಅಭಿವ್ಯಕ್ತಿ ಎನಿಸುತ್ತದೆ. ಸಾಹಿತ್ಯ ಎನ್ನುವುದು ಮನುಷ್ಯನ ಅತ್ಯುತ್ತಮ ಅನುಭವ ಮತ್ತು ಚಿಂತನೆಯ ದಾಖಲೆ ಎನ್ನುತ್ತಾನೆ ಮ್ಯಾತ್ಯೂ ಆರ್ನಾಲ್ಡ್. ಸಾಹಿತ್ಯವು ಹೇಗೆ ಭಾಷೆಯ ಮೂಲಕವೇ ಅಭಿವ್ಯಕ್ತವಾಗುವ 'ಕಲೆ' ಎಂಬುದನ್ನು ಕೆಳಗಿನ ನಿದರ್ಶನಗಳಿಂದಲೂ ನೋಡಬಹುದು.

ತನ್ನ ಕೈಗೂಸನ್ನು ಕಳೆದುಕೊಂಡ ಎಳೆಯ ತಾಯಿಯೊಬ್ಬಳ ಶೋಕಗೀತೆಯಾಗಿ ಬಂದಿರುವ (ಪತ್ರ 368) ಸಾಲುಗಳನ್ನೇ ನೋಡೋಣ. ಮಗು 'ಕೈ ಬಿಡುವುದು' ಎಂದರೆ ತಾಯಿಯನ್ನೇ ಸದಾ ಅವಲಂಬಿಸದೆ ಓಡಾಡಿಕೊಳ್ಳುವ ಸ್ಥಿತಿ. 'ಕೈಬಿಟ್ಟು ಹೋಗುವುದು' ಸಾಯುವುದನ್ನೇ ಸೂಚಿಸುವ ನುಡಿಗಟ್ಟು. 'ಕೈ ಬಿಟ್ಟಾಗ', 'ಕೈಬಿಟ್ಟು ಹೋದಳಲ್ಲಾ' ಎಂಬ ರೂಪಗಳಲ್ಲಿ ಈ ನುಡಿಗಟ್ಟುಗಳು ಬಳಕೆಯಾಗಿವೆ. ಅವುಗಳ ನಡುವಣ ವ್ಯತ್ಯಾಸವು ಸಂದರ್ಭವಶದಿಂದ ಹುಟ್ಟಿಸುವ ಕ್ರೂರವ್ಯಂಗ್ಯವು ದುಃಖಾನುಭವವನ್ನು ಹೆಚ್ಚಿಸುತ್ತದೆ. ಮಗು ಸತ್ತ ಮೇಲೆ 'ಸದಾ' ಸೊಪ್ಪುಕತ್ತರಿಸಿ ಹಾಕುವ ಶೋಕತಪ್ತ ತಾಯಿಯ ಚಿತ್ರವೇ ಆ ದುಃಖಾನುಭವವನ್ನು ಹೆಪ್ಪುಗಟ್ಟಿಸುತ್ತದೆ. ಆ ಪತ್ರದ ಮುಂದಿನ ಸಾಲುಗಳು ಶೋಕವನ್ನೇ ಹಿಂಡುವ ಅನುಭವ ಉಂಟು ಮಾಡುವುದಕ್ಕೆ ಈ ಪೀಠಿಕೆ ಮತ್ತಷ್ಟು ಪುಷ್ಟಿಕೊಡುತ್ತದೆ.

ಆ ಪತ್ರದ ಪಕ್ಕದಲ್ಲೇ ಇರುವ 367ನೆಯ ಪತ್ರದಲ್ಲಿ ಶೋಕದಿಂದ ಪ್ರಶಾಂತಿಗೆ ಮುನ್ನಡೆಸುವ ಸ್ಥಿತಪ್ರಜ್ಞತೆಯ ಮಾತುಗಳಿವೆ. ಒಂದೆಡೆ ಭಾವನೆ ಕೆರಳುತ್ತದೆ, ಮತ್ತೊಂದೆಡೆ ಅದು ಉಪಶಮನಗೊಳ್ಳುತ್ತದೆ; ಉಪಶಮನಗೊಳ್ಳಬೇಕು. ಆಗಲೇ ಅದು ಸಾಹಿತ್ಯದ ಗರಿಮೆಗೆ ಅರ್ಹವಾಗುವುದು. 'ಐದು ದುರ್ನಯಕ್ಕೈದು ಎಡೆಯಲ್ಲಿ ಗದಾಪ್ರಹಾರ ಮಾಡಿದ' ವಿವರವಿರುವ 169ನೆಯ ಪತ್ರದಲ್ಲಿಯೇ, ಕೊನೆಯಲ್ಲಿ ಉಪಶಾಂತಿಯೂ ಇದೆ. ಕಷ್ಟ, ಸುಖ, ಕೋಪ, ತಾಪ, ಸಮಾಧಾನಗಳಲ್ಲೆಲ್ಲಾ ತೀವ್ರಾನುಭವಗಳೂ, ತೀವ್ರಾಭಿವ್ಯಕ್ತಿಯೂ, ಪತ್ರಸಾಹಿತ್ಯದಲ್ಲಿರುತ್ತದೆ ಎನ್ನುವುದಕ್ಕೆ ಸಾಕ್ಷಿಯಂತೆ ಈ ಪತ್ರಗಳಿವೆ.

ಇವು ಯಾವುವೂ ಪ್ರಜ್ಞಾಪೂರ್ವಕವಾಗಿ ಬರೆದುವಲ್ಲ; ಇವು ಅನುಭವ ಮತ್ತು ಭಾವನೆಗಳ ಸಹಜ ಅಭಿವ್ಯಕ್ತಿಗಳು; ಸ್ವಂತಕ್ಕಾಗಿ ಬರೆದವು. ಅವುಗಳ ಸಂವಹನಗುಣ ದೊಡ್ಡದು.

ಸಾಧಾರಣ ರೈತನೊಬ್ಬನ ಪತ್ರದಲ್ಲೂ (226) ಇರುವ ಚಿತ್ರಕಶಕ್ತಿ ಬೆರಗು ಹುಟ್ಟಿಸುವಂತಿದೆ. ದರೋಡೆಕೋರರು, ವೃದ್ಧರಾದ ಗಂಡಹೆಂಡಿರ ಮೇಲೆ ಕಾಡುದಾರಿಯಲ್ಲಿ ಆಕ್ರಮಣ ಮಾಡಿದ ಘಟನೆಯ ವರ್ಣನೆ ಅದು. ಆ ವರ್ಣನೆ ಮೈನವಿರೇಳಿಸುವಂತಿದೆ. ಅವಿದ್ಯಾವತಿಯಾದ ಹಳ್ಳಿಯ ಹೆಣ್ಣುಮಗಳೊಬ್ಬಳ ಮೇಲೆ ಕಳ್ಳತನದ ಆರೋಪ ಬಂದಾಗ ತನ್ನ ಗಂಡನಲ್ಲಿ ಮಾಡಿಕೊಂಡ ನಿವೇದನೆ ಒಂದೆಡೆ ಇದೆ. ಬ್ರಾಹ್ಮಣರ ಗ್ರಾಮ್ಯಭಾಷೆಯ ಸ್ವರೂಪ ಮತ್ತು ಸೊಗಡಿಗೆ ಆ ಪತ್ರ (157) ನಿದರ್ಶನದಂತೆ ಇದೆ. ಅದಕ್ಕೆ, ಭಾವನೆಗೆ ಪುಷ್ಟಿ ಕೊಡುವ ಶಕ್ತಿ ಇದೆ. ವರ್ಣನೆ, ವಿವರ, ಹೋಲಿಕೆ, ಉದ್ಗಾರ, ನೀತಿಬೋಧೆ, ಸಂತಾಪಸೂಚನೆ, ಇಂಥ ಹಲವು ಸನ್ನಿವೇಶಗಳಲ್ಲಿನ ಅನೇಕ ಪತ್ರಗಳಲ್ಲಿ ಇಂಥ ಸಿದ್ಧಿ ಕಾಣಿಸುತ್ತದೆ.

ಇಲ್ಲಿ ಪ್ರವಾಸವರದಿಗಳಿವೆ, ವ್ಯಕ್ತಿಚಿತ್ರಗಳಿವೆ, ಆತ್ಮಕಥನಗಳೂ ಇವೆ. "You have a knack of writing letters in such a way as to make others shed tears of joy" (ಪತ್ರ 540), ಇದು ಓದುಗರೇ ಮಾಡಿರುವ ಪ್ರಶಂಸೆ. ತನ್ನ ಆತ್ಮಚರಿತ್ರೆಯನ್ನೇ ಪರೀಕ್ಷೆಗೆ ಇಟ್ಟು (ಪತ್ರ 540) " 'Hats off to Amma' ಎಂದು ಹೇಳು. ನನಗಲ್ಲ," ಎನ್ನಬಲ್ಲ ಭಾವಪಕ್ವತೆ ಇಲ್ಲಿ ಕಾಣಿಸುತ್ತದೆ. ತುಂಬ ವೃದ್ಧಳೂ ರೋಗಿಷ್ಠಳೂ ಆದ ತಾಯಿಯ ವೇದನೆಯನ್ನು ನೋಡಲಾರದೆ, 'ಸ್ವಾಮಿ, ಅವಳ ಪ್ರಾಣವನ್ನು ತೆಗೆದುಕೊ' ಎಂದು ಮಗನೇ ಪ್ರಾರ್ಥಿಸಬೇಕಾದ ಸ್ಥಿತಿಯೊಂದು ಅಲ್ಲಿ ಚಿತ್ರಿತವಾಗಿದೆ. ಜೀವನವು ಸಾಗುವ ವಿಚಿತ್ರಪಾತಳಿಯ ದರ್ಶನ ಅಲ್ಲಿ ಆಗುತ್ತದೆ. ಅನುಕಂಪವನ್ನು ಮೀರಿದ ವಿಸ್ಮಯ ಮೂಡುತ್ತದೆ. 550ನೆಯ ಪತ್ರದಲ್ಲಂತೂ ಗೃಹಕೃತ್ಯದ ಸುತ್ತಲೇ ಹೆಣೆದುಕೊಂಡ ಜೀವನಾರ್ಣವದಿಂದ ಬಿಡಿಸಿಕೊಂಡು ತೃಷ್ಣಾಕ್ಷಯದ ಪರಾಕಾಷ್ಠೆಯನ್ನೇರುವ ಉನ್ನತ ಗಮನವಿದೆ. ಅಪರಕರ್ಮದಂಥ, ಸಾಮಾನ್ಯವಾಗಿ ಹೆದರಿಕೆ ಹುಟ್ಟಿಸುವ ವಿಷಯವಿರಲಿ (ಪತ್ರ 531, 532), ಆಸ್ಪತ್ರೆಯಲ್ಲಿರುವ ರೋಗಿಯೊಬ್ಬನಿಗೆ ಹೇಳುವ ಸಮಾಧಾನವಿರಲಿ (ಪತ್ರ 530), ಉಪನಯನ ಸಂಸ್ಕಾರದಂಥ ಶಾಸ್ತ್ರವಿಷಯದ ವಿವರವಿರಲಿ (ಪತ್ರ 529) ಒಂದು ಭಾವಗೀತೆಯ ಗತಿಯನ್ನು ಪಡೆಯುವುದು ಸಾಧ್ಯ ಎಂಬುದನ್ನು ಇಲ್ಲಿ ಕಾಣಬಹುದು. ಇಲ್ಲೆಲ್ಲ ಆತ್ಮಶೋಧದ ಗುಣವಿದೆ.

ಇಲ್ಲಿ ವ್ಯಾಕರಣಜಿಜ್ಞಾಸೆ ನಡೆದಿದೆ, ಕಾವ್ಯ ಹೇಗಿರಬೇಕು ಎಂಬುದಕ್ಕೆ 'ವಿದ್ವತ್ಕವಯಃ ಕವಯಃ' ಎಂಬ ಉತ್ತರವಿದೆ. ಅದು ಹೇಗಾದರೂ ಇರಲಿ, ಶ್ಲೋಕಗಳನ್ನೇ ರಚಿಸಿ ಅದರ ಬಗೆಗೆ ಮಾತನಾಡಿದ್ದಾರೆ. ಶ್ಲೋಕಗಳಿಂದಲೇ ಪತ್ರವ್ಯವಹಾರ ನಡೆಸಿದ್ದಾರೆ. ಶ್ಲೋಕಗಳನ್ನೂ ಉಕ್ತಿಗಳನ್ನೂ ಆಧರಿಸಿದ ನೀತಿಬೋಧೆ ಇದೆ. ಕ್ರಿಮಿನಲ್ ಕೇಸು ನಡೆಸುವ ಪ್ರಸ್ತಾಪದಲ್ಲೂ ಒಂದು ಚೊಕ್ಕ ಕಥನವಿದೆ (ಪತ್ರ 155). ವಿಧೇಯಳಾದ ಪತ್ನಿಯೂ ತನ್ನ ಪತಿಯನ್ನು ಛೇಡಿಸುವ, ತರಾಟೆಗೆ ತೆಗೆದುಕೊಳ್ಳುವ ಉಕ್ತಿ ವಿಧಾನವಿದೆ (ಪತ್ರ 198, 199). "ನಿಮ್ಮ ಕಾವ್ಯಮಯವಾದ ಪತ್ರ ಬಹಳ ದಿನಗಳ ಮೇಲೆ ಬಂದು ನಮ್ಮೆಲ್ಲರಿಗೂ ಸಂತೋಷವನ್ನುಂಟು ಮಾಡಿತು...." (ಪತ್ರ 201) ಎಂಬ ಮಾತಿನಲ್ಲಿ– ಕಾವ್ಯಾತ್ಮಕವಾಗಿ ಬರೆಯಬಲ್ಲವರೂ, ಅದನ್ನು ಆಸ್ವಾದಿಸಬಲ್ಲವರೂ ಇರುವ ಸೂಚನೆ ಇದೆ. 'ಜಾನ್‌ಸ್ಟುವರ್ಟ್ ಮಿಲ್' ಎಂಬಾತ 1832ರಷ್ಟು ಹಿಂದೆಯೇ ಇಂಥ ಪತ್ರಗಳನ್ನು "ಅರ್ಥಪೂರ್ಣವಾದ ಕೃತಿವಿಶೇಷ"ಗಳೆಂದು ಗುರುತಿಸಿದ ಎಂಬುದನ್ನು ಇಲ್ಲಿ ಉಲ್ಲೇಖಿಸಬಹುದು.

"ಆದರೂ ಮಾತ್ರಾಹ್ವಾನ ಕಾಲದಲ್ಲಿ ಇಷ್ಟವು ನೆರವೇರದೆ ಜನ್ಮಗೃಹದ ಅಗಲುವಿಕೆಯ ವಿಷಾದವು ಕೆಲವು ಚರ್ಯಗಳಿಂದ ತೋರುತ್ತಿದೆ. ಇದು ಲೋಕದಲ್ಲಿ ಸ್ತ್ರೀಜನ ಸ್ವಭಾವವಾದ ಕರ್ತವ್ಯವೇ ಹೌದು. ಅತಿಶಯವಲ್ಲ." (ಪತ್ರ 212) ಹೀಗೆ ಸಾಂದ್ರವಾಗಿ ಬರೆಯಬಲ್ಲ ಮತ್ತು ಹೇಳಿಕೆಗಳಲ್ಲಿ ಲೋಕಸಿದ್ಧಾಂತವನ್ನಡಗಿಸಬಲ್ಲ ಶೈಲಿಯ ಸಿದ್ಧಿಗೆ ಹೇರಳವಾದ ನಿದರ್ಶನಗಳು ಇಲ್ಲಿ ಸಿಗುತ್ತವೆ (ಉದಾ: ಪತ್ರ 213, 220 ಇ.) 'ರುಕ್ಕು ಎಣಸಣ್ಣ ಮಣಸಣ್ಣನಾಗುತ್ತಿದ್ದಾಳೆ' ಎಂಬಂಥ ಪ್ರಯೋಗಗಳಿರಲಿ, ವಿಷಯವನ್ನು ಪರಿಷ್ಕಾರವಾಗಿ ಒಕ್ಕಣಿಸುವ ರೀತಿಯಾಗಲಿ (ಪತ್ರ 267), ಶೈಲಿವೈವಿಧ್ಯದ ಭಾಗವಾಗಿ ಬರುತ್ತವೆ. "ವಾಯುಗುಣವು ಇಂದಿದ್ದಂತೆ ನಾಳೆ ಇರುವುದಿಲ್ಲ. ಒಂದು ದಿನ ಮಂಜು ಬೀಳುವುದು, ಒಂದು ದಿನ ಮೋಡ. 1 ದಿನ ಮಳೆ ಶಿಬರು ಹೀಗೆಲ್ಲಾ ಅವ್ಯವಸ್ಥೆಯಾಗಿದೆ" (ಪತ್ರ 286) ಎಂದು ತಂದೆಯು ಮಗನಿಗೆ ಬರೆದ ಸಾಲುಗಳು ಸೊಸೆಯ ವರ್ತನೆಯ ಚಾಂಚಲ್ಯವನ್ನು ಕುರಿತವು! ಇಂಥ ಪ್ರತಿಮೆಗಳೂ ಸಾಮಾನ್ಯರ ಪತ್ರಗಳಲ್ಲಿವೆ. ಅಪಘಾತಕ್ಕೊಳಗಾಗಿ ಚೇತರಿಸಿಕೊಳ್ಳುತ್ತಿರುವ ಸೈನಿಕನೊಬ್ಬನ, "If after resuming work, I find it difficult to do quality work and produce tangible results and prove myself to be effective and efficient, I may have to think of tendering resignation..." (ಪತ್ರ 416) ಎಂಬ ಆಧುನಿಕರ ನೈತಿಕ ಔನ್ನತ್ಯದ ಅಭಿವ್ಯಕ್ತಿಯವರೆಗೆ ಇಲ್ಲಿನ ಪತ್ರಗಳು ಹರಡಿಕೊಂಡಿವೆ.

ಈ ಸಂಪುಟದ ಎರಡನೆಯ ಭಾಗದಲ್ಲಿರುವ ಪ್ರೊ॥ ಶ್ರೀಕಂಠ ಕುಮಾರಸ್ವಾಮಿಯವರ ಪತ್ರಗಳನ್ನು 'ವಿಚಾರ ಸಾಹಿತ್ಯ'ದ ಗುಂಪಿಗೆ ಸೇರಿಸಬಹುದು. ಇದು 'ವೈದಿಕ ವಿಚಾರ ಸಾಹಿತ್ಯ'. ಬಿ.ವಿ. ಶ್ರೀಕಂಠ ಮತ್ತಿತರರಿಗೆ ಬರೆದ ಪತ್ರಗಳಲ್ಲಿ ಶಾಸ್ತ್ರಾಚಾರಗಳು ಮತ್ತು ಸಂಪ್ರದಾಯಗಳ ಬಗೆಗೆ ವಿಶ್ಲೇಷಣೆ ಇದೆ. ಮಗಳಿಗೆ ಬರೆದ ಪತ್ರಗಳಲ್ಲಿ ಹೆಚ್ಚಾಗಿ ವೇದಮಾರ್ಗದ ಅಂತರಂಗದರ್ಶನ ಮಾಡಿಸುವ ಯತ್ನವಿದೆ. ಮೂರನೆಯ ಭಾಗದಲ್ಲಿರುವ ಒಂದೇ ಪತ್ರದಲ್ಲಿ ಅವರ ಚಳವಳಿಯ ಆಶಯದ ಘೋಷಣೆ ಇದೆ. ಈ ಪತ್ರಗಳನ್ನು ಕಾಲಾನುಕ್ರಮದಲ್ಲಿ ಕೊಟ್ಟಿರುವುದರಿಂದ ಕುಮಾರಸ್ವಾಮಿಯವರೂ ಸೇರಿದ ಹಾಗೆ ಹಲವರ ಕುಟುಂಬಜೀವನದ ಪುಟ್ಟ ಚರಿತ್ರೆಯೂ ದೊರೆಯುತ್ತದೆ. ಪುರೋಹಿತರೊಬ್ಬರ ದಿನಚರಿಯೂ ಇಲ್ಲಿದೆ. ಒಂದೊಂದು ಪತ್ರವೂ ತನ್ನಷ್ಟಕ್ಕೇ ಸಮಗ್ರವಾದ ಒಂದು ಘಟಕವಾಗಿದೆ. ಇಪ್ಪತ್ತು ವರ್ಷಗಳ ದೀರ್ಘ ಅವಧಿಯಲ್ಲಿ ಬಂದ ಪ್ರಶ್ನೆಗಳಿಗೆ ಉತ್ತರಿಸಿದ ಪತ್ರಗಳು ಇವು. ಪ್ರಸ್ತುತ ಸಂಪುಟದಲ್ಲಿ ಅವು ಸಂಕಲನವಾಗಿ ಒಂದೇಕಡೆ ದೊರೆಯುವುದರಿಂದ ಪುನರಾವರ್ತನೆಯ ಭಾಗಗಳಿರುವುದು ಸಹಜ. ಸಾಧ್ಯವಾದಷ್ಟೂ ಪುನರಾವರ್ತನೆಯನ್ನು ನಿವಾರಿಸಲು ಯತ್ನಿಸಲಾಗಿದೆ. ಅನೇಕ ಪತ್ರಗಳು ಒಂದು ಪ್ರಬಂಧದ ರೂಪದಲ್ಲೋ ಲೇಖನದ ರೂಪದಲ್ಲೋ ಯಶಸ್ವಿಯಾಗಿ ಬೆಳೆದಿವೆ.

ಪ್ರೊ॥ ಶ್ರೀಕಂಠಕುಮಾರಸ್ವಾಮಿಯವರು ಒಬ್ಬ ಸೃಜನಶೀಲ ಲೇಖಕರೂ ಹೌದು. ಅವರ ಪತ್ರಗಳಲ್ಲಿನ ಕಾವ್ಯಗುಣಗಳ ಬಗೆಗೆ ಈಗಾಗಲೇ ಚರ್ಚಿಸಲಾಗಿದೆ. ಅವರ 'ಹೃದಯಸಂಪನ್ನತೆ' ಸುಂದರ ವ್ಯಕ್ತಿಚಿತ್ರಗಳಿಂದಲೂ ಘಟನಾಚಿತ್ರಗಳಿಂದಲೂ ಕೂಡಿದ ಕೃತಿ. ಅವರಲ್ಲೊಬ್ಬ ಕವಿ ಇದ್ದಾನೆ, ಋಷಿ ಇದ್ದಾನೆ; ವಿಜ್ಞಾನಿಯೂ ಆದ ಅವರಲ್ಲಿ ಒಬ್ಬ ಚಿಂತಕನೂ ಇದ್ದಾನೆ ಎಂಬುದು ಇಲ್ಲಿನ ಪತ್ರಗಳಲ್ಲಿ ಕಾಣುತ್ತದೆ; ಮಾನವೀಯ ನೆಲೆಯ ಚಿಕಿತ್ಸಕನೊಬ್ಬ ಅವರ ಪತ್ರಗಳಲ್ಲಿನ ಸಾಮಾನ್ಯ ಆಶಯರೂಪದಲ್ಲಿ ಕಾಣಿಸಿಕೊಂಡಿದ್ದಾನೆ. ಅವರು ವೇದೋಪನಿಷತ್ತುಗಳ ಆಶಯಗಳಿಗೆ ನಿಷ್ಠರಾಗಿದ್ದಾರೆ. ಅವರ ಪತ್ರಗಳು ಪ್ರಶ್ನಕರು ಒಡ್ಡಿದ ವಿಶಿಷ್ಟ ಸನ್ನಿವೇಶಗಳಿಗೂ ಉತ್ತರವಾಗಿ ಬಂದಿವೆ ; ಆ ಹಿನ್ನೆಲೆಯನ್ನೂ, ಆಶಯವನ್ನೂ, ಗೌಣಗೊಳಿಸಿ ಓದಿದರೆ, ಸಾಂಪ್ರದಾಯಿಕರಿಗೆ ಅನೇಕ ಕಡೆ ಅವು ಅತಿರೇಕದ್ದೂ ಭಾವೋದ್ವೇಗದ್ದೂ ಪ್ರತೀಕಾರಾತ್ಮಕವಾದದ್ದೂ ಆಗಿ ಕಂಡರೆ ಆಶ್ಚರ್ಯವಿಲ್ಲ. ಹಾಗೆಯೇ ಪ್ರೌಢರಲ್ಲದವರಿಗೆ, ಸ್ವಚ್ಛಂದತೆಗೆ ಸಿಕ್ಕ ಪರವಾನಗಿಯಾಗಿಯೂ ಕಾಣಬಹುದು.

ಅಂಧಶ್ರದ್ಧೆ ಕೂಡದು, ವೈಜ್ಞಾನಿಕ ಮನೋಧರ್ಮ ಬೆಳೆಯಬೇಕು. ಯಾವ ಆಚರಣೆಗೂ ಅದೃಷ್ಟ ಪ್ರಯೋಜನವಿಲ್ಲ, ದೈವೀಸಂಪದ್ಗುಣಗಳನ್ನು ಬೆಳೆಸಿಕೊಳ್ಳುವುದೇ ಅವುಗಳ ಗುರಿ. ಧರ್ಮದ ಬಹಿರ್‌ವ್ಯಾಪಾರ ನಿಲ್ಲಬೇಕು, ಆಂತರಿಕ ಮೌಲ್ಯ ಅಧಿಕವಾಗಬೇಕು. ಇದು ಕುಮಾರಸ್ವಾಮಿಯವರ ವಿಚಾರಧಾರೆ. ಮುಕ್ತವಾಗಿ ಚಿಂತಿಸಬಲ್ಲವರು ಈ ಆಶಯವನ್ನು ಗ್ರಹಿಸಿ ಆತ್ಮಾವಲೋಕನ ಮಾಡಿಕೊಳ್ಳುವುದು ಸಾಧ್ಯ.

ಅವರ ಪತ್ರಗಳಲ್ಲಿ ವ್ಯಕ್ತವಾಗಿರುವಂತೆ– ಪ್ರೊ॥ ಶ್ರೀಕಂಠಕುಮಾರಸ್ವಾಮಿ ಅವರಿಗೆ ಸಂಸ್ಕಾರಗಳನ್ನು ಅರ್ಥಪೂರ್ಣವಾಗಿ ಆಚರಿಸುವುದರಲ್ಲಿ ಶ್ರದ್ಧೆ ಇದೆ. ಪುನರ್ಜನ್ಮದಲ್ಲಿ ನಂಬಿಕೆ ಇದೆ. ಅಗ್ನಿಕಾರ್ಯ ಮತ್ತು ಸಾವಿತ್ರೀ

ಮಂತ್ರಜಪದಿಂದ ವಿದ್ಯಾರ್ಜನೆಯ ಸಾಮರ್ಥ್ಯ ಹೆಚ್ಚುತ್ತೆಂಬ ಬಗೆಗೆ ಅಚಲ ವಿಶ್ವಾಸವಿದೆ. ರಾಹುಕಾಲ, ಮುಹೂರ್ತಗಣನೆ, ನವಗ್ರಹ ಪೂಜೆಯಂಥ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಇದೆ. ರಜಸ್ವಲಾ ವಿಚಾರ, ಜ್ಯೋತಿಷ ಇಂಥ ವಿಷಯಗಳಲ್ಲಿ ವೈಚಾರಿಕ ನಿಲುವು ಇದೆ. ವಿಧಿ, ಅನಧ್ಯಯನದಂಥ ವಿಚಾರಗಳಲ್ಲಿ ಖಚಿತ ವಿವೇಚನೆ ಇದೆ. ಶ್ರಾದ್ಧ , ಪಿತೃಯಜ್ಞದಂಥ ವಿಷಯಗಳಲ್ಲಿ ಸಂಪ್ರದಾಯದಲ್ಲಿ ಬಂದಿರುವ ಕೆಲ ನಿಲುವುಗಳನ್ನು ಅವರು ಪ್ರಶ್ನಿಸಿದ್ದಾರೆ– ಅವರ ಈ ವಿಚಾರಧಾರೆಯ ನೆಲೆಗೂ ಇರುವ ಮಿತಿ ಅವರಿಗೆ ತಿಳಿದಿದೆ.

"ಅಂಥ ಸಮಯದಲ್ಲಿ ಶಾಸ್ತ್ರವಾಕ್ಯಗಳಲ್ಲಿ ನಂಬಿಕೆಯೊಂದೇ ನಮಗೆ ದಾರಿ. ಆದರೆ ಆ ನಂಬಿಕೆಯನ್ನು ನಮ್ಮ ಜೀವನದ ಪ್ರತಿಯೊಂದು ಸಾಮಾನ್ಯ ಕಾರ್ಯಗಳಿಗೂ ಅನ್ವಯಿಸಿದಾಗ ಅದು ಅಂಧಶ್ರದ್ಧೆಯಾಗುತ್ತದೆ. ಜಾಡ್ಯವಾಗುತ್ತದೆ" ಎಂದು ಸ್ಪಷ್ಟಪಡಿಸಿಯೇ (ಪತ್ರ 444) ಅವರು ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ರಾಮಾಯಣ ಭಾರತಾದಿ ಮಹಾಗ್ರಂಥಗಳ ಅಧ್ಯಯನದಿಂದಲೇ ವೈದಿಕಸಂಸ್ಕೃತಿಯ ನಿಜವಾದ ಅರ್ಥ ಆಯಿತೆಂದು ಅವರು ನಿವೇದಿಸಿಕೊಂಡೂ ಇದ್ದಾರೆ (ಪತ್ರ 18–11–91. ಬಹಳ ಶಿಥಿಲವಾದ ಪತ್ರ. ಪ್ರಕಟಿಸಿಲ್ಲ) ಅವರಿಗೆ, ತಾವು ತಿಳಿದುಕೊಂಡಿರುವುದೇ ಸರಿ ಎಂಬ ಆಗ್ರಹವಿಲ್ಲ (ಪತ್ರ 555). "ಅದೃಷ್ಟವಾದ ವಿಷಯವಾದ್ದರಿಂದ, ಸತ್ಯಕ್ಕೆ ನಿಕಟವಾದ Explanations ಕೊಡಬಹುದೇ ಹೊರತು ಸತ್ಯವನ್ನೇ ಯಾರೂ ಹೇಳಲು ಸಾಧ್ಯವಿಲ್ಲ. ಕೆಲವು circumstantial evidence ನಿಂದ ನಾವು ನಿಶ್ಚಯ ಮಾಡಬೇಕಾಗುತ್ತದೆ. ಆದ್ದರಿಂದ ಆದಷ್ಟು factಗಳನ್ನು ಸಂಗ್ರಹಿಸಬೇಕು" (ಪತ್ರ 455) ಎಂಬ ಅವರ ಮಾತು ಸತ್ಯವನ್ನು ತಿಳಿಯಲು, ಅನ್ವೇಷಿಸಲು ಅವರಿಗೆ ಇರುವ ತೆರೆದಮನಸ್ಸನ್ನೇ ತೋರುತ್ತದೆ.

ಅವರ ಪತ್ರಗಳಲ್ಲಿ ಒಂದು ವೇಗವಿದೆ, ಶಕ್ತಿ ಇದೆ, ಸೆಳೆತವಿದೆ. ಅದು ಅವರ ವೈಚಾರಿಕ ಅಹಮಿಕೆಯಿಂದ ಆಗಿರದೆ, ಅವರಿಗನಿಸಿದ ಕೊರತೆಗಳನ್ನು ನೀಗಿ ವೈದಿಕ ಜೀವನಕ್ರಮವನ್ನು ಅದರ ಅನಂತಸ್ಫೂರ್ತಿಯ ಕಡೆಗೆ ಮತ್ತೆ ಒಯ್ಯುವ ಕಳಕಳಿಯಿಂದ ಆಗಿದೆ. ಆದ್ದರಿಂದಲೇ ಇಲ್ಲಿನ ಪತ್ರಗಳನ್ನು ಮತ್ತೆಮತ್ತೆ ಓದಿದಾಗ ಹೊಸಹೊಸ ಪ್ರೇರಣೆಗಳು ದೊರೆಯುತ್ತವೆ. ಇಷ್ಟಾಗಿಯೂ, ವೈದಿಕ ಜೀವನ ಮಾರ್ಗಕ್ಕೆ ಇರುವುದು ಅಥವಾ ಇರಬಹುದಾದುದು ಇದೊಂದೇ ವ್ಯಾಖ್ಯಾನವಲ್ಲ ; ಪತ್ರರೂಪದಲ್ಲಿ ನಮಗೆ ದೊರೆತುದು ಇದೊಂದು ಮಾತ್ರ.

ವೈದಿಕ ಜೀವನಮಾರ್ಗದ ಮೂಲಸತ್ತ್ವ ದೊಡ್ಡದು, ಗಟ್ಟಿಯಾದುದು. 'ಅನಾದಿ' ಮತ್ತು 'ಅನಂತ' ಎಂದು ಈ ಸನಾತನ ಧರ್ಮಕ್ಕೆ ಜೋಡಿಸುವ ವಿಶೇಷಣಗಳು ಅರ್ಥಪೂರ್ಣವಾದವು. ಕಾಲಕಾಲದ ಎಲ್ಲ ಒಳಿತುಗಳನ್ನು ಮೈಗೂಡಿಸಿಕೊಳ್ಳುತ್ತ ವಿಕಾಸಶೀಲವಾಗಿ ಚಲಿಸುತ್ತಿರುವುದರ ಸಂಕೇತ ಅದು. ಅದರ ಆಲದ ಬೀಜದೊಳಗಿನ ವಿಸ್ತಾರಕ್ಕೂ ಹಿಡಿದ ಕನ್ನಡಿ. ಯಾವುದೇ ಮೂಲಪರಿಕಲ್ಪನೆಗಳನ್ನು ಯಾವುದೇ ಮುಂಬರುವ ಪೀಳಿಗೆಗಳು ಅಷ್ಟೇ ಅಂತಃಸ್ಫೂರ್ತಿಯಿಂದ ಅನುಷ್ಠಾನಕ್ಕೆ ತರುವುದಿಲ್ಲ. ಅದು ನಿಸರ್ಗಸಿದ್ಧ ಸತ್ಯ. ಅದನ್ನು ವಿಮರ್ಶಿಸುವ ಜಾಗೃತಿ ಕೆಲವೆಡೆಗಳಲ್ಲಾದರೂ ಚರಿತ್ರೆಯಲ್ಲಿ ಕಂಡಿದೆ. ಆಗ ಪಂಥಗಳು ಹುಟ್ಟಿವೆ, ಪರಸ್ಪರ ವಿರುದ್ಧವಾಗಿ ನಿಂತಿವೆ, ಎದುರು ಪಕ್ಷವನ್ನು ಹೀಯಾಳಿಸಿವೆ. ವೈದಿಕಮಾರ್ಗದಲ್ಲಿಯೂ ಇದು ನಡೆದಿದೆ. ಆದರೆ ಜಗತ್ತಿನಲ್ಲಿ ಇನ್ನೆಲ್ಲೂ ಕಾಣದ ಅತಿ ವಿಶಿಷ್ಟ ಪರಿಪಾಠ ಈ ಮಾರ್ಗದಲ್ಲಿದೆ. ಅದೆಂದರೆ ನಿರಂತರವಾಗಿ ತನ್ನನ್ನೇ ತಾನು ವಿಮರ್ಶಿಸಿಕೊಳ್ಳುವುದು, ವ್ಯಾಖ್ಯಾನಿಸುವುದು, ಚರ್ಚಿಸುವುದು. ಈ ಆತ್ಮವಿಮರ್ಶಕ ಗುಣವೇ ವೈದಿಕಮಾರ್ಗದ ಶಕ್ತಿಯಾಗಿದೆ. ಆ ಶಕ್ತಿಯಿಂದಾಗಿಯೇ ಅದರ ಹಳೆಯ ಬೇರು ಜೀವಂತವಾಗಿದೆ, ಹೊಸ ಚಿಗುರು ನಳನಳಿಸುತ್ತಿದೆ. ಹೊರವಲಯಗಳಿಂದಲೂ ಅದು ಮುಕ್ತವಾದ ಟೀಕೆಗೆ ಒಳಗಾಗುತ್ತಿದೆ; ಆದರೂ ಆ ಆತ್ಮಚಿಕಿತ್ಸಕ ಶಕ್ತಿಯಿಂದಾಗಿಯೇ ಉಳಿದುಕೊಂಡಿದೆ. ಅದೂ, ಪ್ರಾಯಶಃ ಜಗತ್ತಿನ ಇತರ ಜಾತಿಧರ್ಮಗಳ ವಿಷಯದಲ್ಲಿ ಕಾಣದ ಒಂದು ವಿಶೇಷವೇ ಆಗಿದೆ.

ನಾವೆಲ್ಲರೂ ಆದರ್ಶವೆಂದು ಗಣಿಸುವ 'ಅವನವನ ಧರ್ಮವನ್ನು ಅವನವನು ಹುಡುಕಿಕೊಳ್ಳಬೇಕು' ಎಂಬ ಸುಂದರ ತತ್ತ್ವ ವೈದಿಕ ಜೀವನಕ್ರಮದಲ್ಲಿ ಸಾಕಾರವಾಗಿದೆ.

ಈ ಸಂಪುಟದ ಮೊದಲಭಾಗದ ಪತ್ರಗಳಲ್ಲಿ , ಹುಟ್ಟಿನಿಂದ ಸಾವಿನವರೆಗಿನ ವಿಸ್ತಾರವಾದ ಭಿತ್ತಿ ಇದೆ. ಅಲ್ಲಿನ ಒಂದೊಂದು ಪತ್ರವೂ ಒಂದೊಂದು– ಕಥನ, ಅನುಭವ, ಚಲನೆ, ನೋವು, ತಳಮಳ, ಹೊಳಹು, ಧೀಮಂತಿಕೆ,

ಛಲ, ಸಾಧನೆ– ಹೀಗೆ ಜೀವನದ ಅನಂತ ಆಯಾಮಗಳ ಪ್ರತಿನಿಧಿಯಾಗಿದೆ. ಅಲ್ಲಿ ಸಮಾಧಾನ, ಶಾಂತಿಯ ಕಡೆಗೆ ನೋಟವಿದೆ. ಆಕಾಶಕ್ಕೆ ಮುಖವಿಟ್ಟು ಕೇಳುತ್ತಿರುವ ವ್ಯಕ್ತ ಮತ್ತು ಅವ್ಯಕ್ತ ಪ್ರಶ್ನೆಗಳೂ ಅಲ್ಲಿವೆ. ಅವಕ್ಕೆ ಉತ್ತರ ಹುಡುಕುವಂತೆ ಎರಡನೆಯಭಾಗದ ಪತ್ರಗಳಿವೆ. ಆದ್ದರಿಂದಲೇ, ಅನುದ್ದಿಷ್ಟವಾದರೂ ಅವು ಒಂದಕ್ಕೊಂದು ಪೂರಕವಾಗಿ ಕಾಣಿಸಿಕೊಂಡಿವೆ. ಮೊದಲಭಾಗ ದತ್ತಾಂಶದಂತೆಯೂ ಎರಡನೆಯ ಭಾಗವು ವಿಶ್ಲೇಷಣೆಯಂತೆಯೂ ಇದೆ. ಹಾಗಾಗಿ ಎರಡೂ ಭಾಗಗಳಲ್ಲಿ ಒಂದು ನಿರಂತರತೆಯೂ, ಎರಡೂ ಭಾಗಗಳು ಸೇರಿ ಒಂದು ಉದ್ದೇಶವೂ ಸಹಜವಾಗಿ ಸೃಷ್ಟವಾಗಿದೆ. ಇದರಿಂದಾಗಿ ಇಲ್ಲಿನ ಇಡೀ ಪತ್ರಸಾಹಿತ್ಯಕ್ಕೊಂದು ಸೃಜನಾತ್ಮಕ ದರ್ಶನ ಲಭ್ಯವಾಗಿದೆ. ಮಾನವನ ಬದುಕಿನ ಸಾರ್ಥಕ್ಯವನ್ನು ಪರಿಭಾವಿಸುವುದು ಈ ಒಟ್ಟಂದದಿಂದ ಸಾಧ್ಯವಾಗಬಹುದು. ಅದು ಸಾಧ್ಯವಾಗುವುದಾದರೆ ಈ ಶ್ರಮ ಸಾರ್ಥಕವಾದಂತೆ.

ಕೃತಜ್ಞತೆಗಳು

ಕಲೆ ಹಾಕಿದ ಪತ್ರಗಳನ್ನು ಜೋಡಿಸಿ, ಅವಕ್ಕೆ ಅಡಿಟಿಪ್ಪಣಿಗಳನ್ನು ಬರೆದು ಮೊದಲು ತೋರಿಸಿದ್ದು ಪ್ರೊ॥ ಜಿ. ಅಶ್ವತ್ಥನಾರಾಯಣ ಅವರಿಗೆ–ಹತ್ತು ವರ್ಷಗಳ ಹಿಂದೆ. ಅವರು ತಕ್ಷಣ ಅದರ ಸ್ವರೂಪ ಹೇಗಿರಬೇಕೆಂದು ನಿರ್ದೇಶಿಸಿ ಕರಡಿನ ತುಂಬ ಮೇಲು ಟಿಪ್ಪಣಿಗಳನ್ನು ಮಾಡಿ ಪ್ರೋತ್ಸಾಹಿಸಿದರು. ಆ ಮುಂದೆ ಈ ಸಂಗ್ರಹ ಇನ್ನೂ ಬೆಳೆದು ಈ ಸ್ವರೂಪವನ್ನು ಪಡೆದಿದೆ.

ಡಾ॥ ಟಿ.ವಿ. ಸತ್ಯನಾರಾಯಣ ಅವರು ಸಂಸ್ಕೃತ ಪತ್ರಗಳನ್ನು ಓದಲು ನೆರವಾಗಿ ಅವಕ್ಕೆ ಕನ್ನಡ ಸಾರಾಂಶವನ್ನೂ ಬರೆದುಕೊಟ್ಟಿದ್ದಾರೆ. ಅವರು ಅದಕ್ಕಾಗಿ 4–5 ಗಂಟೆಗಳ ಕಾಲ ನಿರಂತರವಾಗಿ ಕೂರುತ್ತಿದ್ದುದು ನನಗೊದಗಿದ ಪ್ರಭಾವೀ ಅನುಭವ.

ಮಕರ ಸಂಕ್ರಾಂತಿ, **ಪ್ರಣತಾರ್ತಿಹರನ್**
ಮೈಸೂರು. 15–1–2004

೩. ಪರಿವಿಡಿ

ಶತಮಾನದ ಪತ್ರಗಳು

* ವಿಷಯ / ಭಾಷೆ / ಸನ್ನಿವೇಶದ ಮರುಘಟ್ಟ : ಕಾಲಾನುಕ್ರಮದ ಮರು ಹೊಂದಾಣಿಕೆ

ಗುಚ್ಛ – 4 ವ್ಯವಸಾಯ–ಉದ್ಯೋಗ

ಗುಚ್ಛ – 5 ಸಂಸ್ಕಾರ ವಲಯ

* ಇ–ಮೇಲ್ ಪತ್ರಗಳು

ಎರಡನೆಯ ಭಾಗ

ಪ್ರೊ॥ ಶ್ರೀಕಂಠಕುಮಾರಸ್ವಾಮಿ ಅವರ ಪತ್ರಗಳು

ಅ. ಶ್ರೀ ಬಿ.ವಿ. ಶ್ರೀಕಂಠ ಮತ್ತು ಇತರರಿಗೆ ಬರೆದ ಪತ್ರಗಳು

ಆ. ಮಗಳಿಗೆ ಬರೆದ ಪತ್ರಗಳು

---

* ಬಿ.ವಿ.ಎಸ್. ಅವರು ಅನ್ಯ ಕುಟುಂಬಗಳಿಂದ ಸಂಗ್ರಹಿಸಿದ ಪತ್ರಗಳು : ಪ್ರಬಂಧಾತ್ಮಕ ಪತ್ರಗಳು.

೪ ಗ್ರಂಥದ ಬಗೆಗೆ

ಪ್ರಸ್ತುತ ಸಂಪುಟವನ್ನು ಕುರಿತ
ಅನಿಸಿಕೆಗಳು

ಹಾಸನ **ಡಾ॥ ಎ.ಎಸ್. ವೇಣುಗೋಪಾಲರಾವ್**
ನವೆಂಬರ್ 5, 2003 ನಿವೃತ್ತ ಕನ್ನಡ ಪ್ರಾಧ್ಯಾಪಕರು

ಕಳೆದ ನಾಲ್ಕು ದಶಕಗಳಲ್ಲಿ, ಜನಾಂಗೀಯ ಅಧ್ಯಯನ, ಸಂಶೋಧನೆ, ಸಂಸ್ಕೃತಿ–ಸಮೀಕ್ಷೆಗಳ ಬಗೆಗಿನ ಆಸಕ್ತಿ ವಿಶೇಷವಾಗಿ ಬೆಳೆದಿರುವುದು ಹರ್ಷದಾಯಕ ಸಂಗತಿ. ರಾಜ್ಯದ ವಿಶ್ವವಿದ್ಯಾನಿಲಯಗಳ ಜಾನಪದ ವಿಭಾಗಗಳು, ವಿಶೇಷವಾಗಿ ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ಅಧ್ಯಯನ ವಿಭಾಗ ನೀಡುತ್ತಿರುವ ಮಾರ್ಗದರ್ಶನ, ಪ್ರೋತ್ಸಾಹ, ಪೋಷಣೆಗಳು ಸ್ತುತ್ಯರ್ಹ. ಕ್ಷೇತ್ರಕಾರ್ಯ ಹಾಗೂ ಬರವಣಿಗೆಯು ಬೇಡುವ ದೈಹಿಕ ಹಾಗೂ ಬೌದ್ಧಿಕ ಶ್ರಮವನ್ನೂ ಸಂಶೋಧನ ವಿದ್ಯಾರ್ಥಿಗಳು ಪ್ರೀತಿಯಿಂದ ಸ್ವೀಕರಿಸುವಂತೆ ಮಾಡಿರುವುದು ಈ ವಿಭಾಗಗಳ ಸಿದ್ಧಿ ಎಂದೇ ಹೇಳಬಹುದಾಗಿದೆ. ಅಧ್ಯಯನ–ವಿಷಯ ಕ್ರೋಡೀಕರಣ, ಮೌಲ್ಯಮಾಪನಗಳಲ್ಲಿನ ಶೈಕ್ಷಣಿಕ ಶಿಸ್ತು ಆರೋಗ್ಯಕರವಾದ ಬೆಳವಣಿಗೆಯೇ ಸರಿ. ಎಂ.ಫಿಲ್. ಹಾಗೂ ಪಿಎಚ್.ಡಿ., ಪದವಿಗಳ ಅಗತ್ಯ ಹಾಗೂ ಅನಿವಾರ್ಯತೆಗಳು ಈ ಕಠಿಣ ಕಾರ್ಯಕ್ಕೆ ಸೂಕ್ತ ಪ್ರಚೋದನೆಯನ್ನು ನೀಡಿರಬಹುದಾದರೂ ಬಹುಮಟ್ಟಿಗೆ ಕನ್ನೆನೆಲವಾಗಿಯೇ ಉಳಿದಿದ್ದ ಜನಾಂಗೀಯ ಅಧ್ಯಯನದ ಕುತೂಹಲ, ಆಕರ್ಷಣೆಗಳನ್ನೂ ಗಂಭೀರವಾಗಿಯೇ ಗಮನಿಸಬೇಕು.

ಈ ಕ್ಷೇತ್ರದಲ್ಲಿ ಇಲ್ಲಿಯವರೆಗಿನ ಸಾಧನೆಯನ್ನು ನೋಡಿದರೆ ಜನಾಂಗೀಯ ಅಧ್ಯಯನದಲ್ಲಿ ವಿಶೇಷ ಒತ್ತು ದೊರಕಿರುವುದು ಹಕ್ಕಿಪಿಕ್ಕಿಗಳು, ಕಾಡುಗೊಲ್ಲರು, ಲಂಬಾಣಿಗಳು, ಮ್ಯಾಸಬೇಡರು, ಸಿದ್ದಿಗಳು, ಗೊಂಡರು ಮುಂತಾದ ಬುಡಕಟ್ಟುಗಳ ಬಗೆಗೆ. ಇದು ನಿಜಕ್ಕೂ ಸಮಕಾಲೀನ ಹಾಗೂ ಸಾರ್ವಕಾಲೀನ ಅಗತ್ಯವೇ ಆಗಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಭಾರತದಂತಹ ಸಮಗ್ರ–ಸಂಕೀರ್ಣ ಸಮಾಜದ ಬಗೆಗೆ ವ್ಯಾಪಕವಾದ ಅಧ್ಯಯನ ಇತರ ಜಾತಿ–ಉಪಜಾತಿ–ಮತಗಳನ್ನೂ ಒಳಗೊಳ್ಳುತ್ತದೆ – ಒಳಗೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಬ್ರಾಹ್ಮಣವರ್ಗದ ಉಪಜಾತಿಗಳ ಸಾಂಸ್ಕೃತಿಕ ಅಧ್ಯಯನವೂ ಮಹತ್ವಪೂರ್ಣವಾಗುತ್ತದೆ. ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ನಡೆದಿರುವಂತೆ ತೋರುವುದಿಲ್ಲ. ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿ ಅವರು ಮುಲಕನಾಡು ಬ್ರಾಹ್ಮಣರನ್ನು ಕುರಿತು, ಡಾ॥ ಶಾಲಿನೀ ರಘುನಾಥ್ ಅವರು ಹವ್ಯಕರನ್ನು ಕುರಿತು, ಡಾ॥ ಪಾಂಡುರಂಗ ಅವರು ಹೊಯ್ಸಳ ಕರ್ಣಾಟಕರನ್ನು ಕುರಿತು ನಡೆಸಿದ ಅಧ್ಯಯನ, ಪ್ರಕಟಿಸಿದ ಕೃತಿಗಳು ಬೆರಳೆಣಿಕೆಯ ಉದಾಹರಣೆಗಳಷ್ಟೆ !

ಹೀಗಿರುವಲ್ಲಿ, ಡಾ॥ ಪ್ರಣತಾರ್ತಿಹರನ್ ಅವರ– **ಸಂಕೇತಿ, ಒಂದು ಅಧ್ಯಯನ (ಸಂಸ್ಕೃತಿ–ಸಮೀಕ್ಷೆ)** ಥಟ್ಟನೆ ಮನಸೆಳೆಯುವ, ಕುತೂಹಲವನ್ನು ಹೆಚ್ಚಿಸುವ ಮೌಲಿಕ ಕೃತಿಯೇ ಸರಿ. ಆಳ–ಅಗಲಗಳಲ್ಲಿ, ವಿಶಿಷ್ಟ ಆಯಾಮಗಳಲ್ಲಿ, ಸಮಗ್ರತೆಯಲ್ಲಿ, ಸೂಕ್ಷ್ಮತೆಯಲ್ಲಿ, ಮೂಲಕಾಳಜಿಗಳಲ್ಲಿ ಅವರ ಅಧ್ಯಯನ ಪ್ರಾಯಶಃ ಪ್ರಥಮ ದರ್ಜೆಯದು. "ತನಗೆ ತಾನೇ ಸಾಟಿಯಾದುದು." ಈ ಕೃತಿ ಮೈಸೂರಿನ 'ಸಮುದಾಯ ಅಧ್ಯಯನ ಕೇಂದ್ರ'ದ ಪ್ರಕಟಣೆಯಾಗಿ 2003ರಲ್ಲಿ ಪ್ರಕಾಶಿತವಾಯಿತು. 1993ರಲ್ಲಿಯೇ ಮುಕ್ತಾಯಗೊಂಡು, ಪಿಎಚ್.ಡಿ., ಪದವಿಯನ್ನು ಗಳಿಸಿಕೊಟ್ಟ ಇಂಥ ಮೌಲಿಕ ಕೃತಿ ಸುಮಾರು ಹತ್ತು ವರ್ಷಗಳ ಕಾಲ ಕತ್ತಲ–ಗರ್ಭದಲ್ಲೇ ಉಳಿದದ್ದೇ ಒಂದು ಸೋಜಿಗ ! ಬೆಟರ್ ಲೇಟ್ ದ್ಯಾನ್ ನೆವರ್ ಎಂಬಂತೆ ಇದೀಗ ತುಂಬ ಅಚ್ಚುಕಟ್ಟಾಗಿ, ಸುಂದರ ಮುದ್ರಣವಿನ್ಯಾಸ, ಗಟ್ಟಿರಟ್ಟಿನ ರಕ್ಷಾಕವಚ, ಸಮೃದ್ಧ ಚಿತ್ರಗಳು, ನಕ್ಷೆಗಳು, ಉದ್ಧೃತಿಗಳು ಎಲ್ಲವನ್ನೂ ತುಂಬಿಕೊಂಡ ಈ ತುಂಬುಕೃತಿ ತನ್ನ ಹೊರ ರೂಪದಂತೆಯೇ ಒಳಹೂರಣದ ಪೌಷ್ಟಿಕತೆ ಹಾಗೂ ಸ್ವಾದಗಳಿಂದ ಕಣ್ಣು–ಮನಸ್ಸುಗಳನ್ನೂ ತುಂಬಿಬಿಡುತ್ತದೆ. ಯಾವುದೇ ವಿದ್ವತ್ಪ್ರಪಂಚಕ್ಕೆ ಯಾವುದೇ ಕಾಲದಲ್ಲಿ ಶೋಭಾಯಮಾನವಾಗಬಲ್ಲ ಈ ಪ್ರಕಟಿತ ಮಹಾಪ್ರಬಂಧ, ಆ ಪ್ರಕಾರದ ಆದರ್ಶ ಕೃತಿಯೂ ಆಗಿದೆ.

ಸಾಮಾನ್ಯವಾಗಿ ಪಿಎಚ್.ಡಿ., ಪದವಿಗಾಗಿ ಮಾಡುವ ಅಧ್ಯಯನ ಸಂಶೋಧನೆಗಳು, ಇಂಥ ಕೃತಿಯ ಪ್ರಕಟಣೆಯಲ್ಲಿ ಮುಕ್ತಾಯವಾಗಿಬಿಡುತ್ತವೆ. ಉದ್ದೇಶ ಸಫಲವಾಯಿತು, ಸಾರ್ಥಕವಾಯಿತು ಎಂಬ "ಧನ್ಯತೆ"

ಸಂಶೋಧಕನನ್ನು ತುಂಬಿ ಬಿಡುತ್ತದೆ. ಇದು ಮುಗಿದ ಪ್ರಯಾಣ, ಮತ್ತೆ ಹಿಂತಿರುಗಿ ನೋಡುವುದೇಕೆ ? ಎಂಬ ಅಕ್ಯಾಡಮಿಕ್ ಆಯಾಸ, ಸುದೀರ್ಘ ಸುಷುಪ್ತಿಯನ್ನೇ ಬಯಸುತ್ತದೆ ! ಆದರೆ ಈಗಲೂ – ಇನ್ನು ಮುಂದೆಯೂ ಇದೇ ವಿಷಯವನ್ನು ಕುರಿತ ಮತ್ತಷ್ಟು ಅಧ್ಯಯನ, ಮಾಹಿತಿ ಸಂಗ್ರಹಣ, ಸಂಶೋಧನ, ಸಮೀಕ್ಷೆಗಳಲ್ಲಿ ಅತ್ಯಂತ ಲವಲವಿಕೆಯಿಂದ ಡಾ॥ ಹರನ್ ತೊಡಗಿಕೊಂಡಿರುವುದು ತುಂಬ ಅಪರೂಪದ ಆದರ್ಶವೇ ಸರಿ. ಈ ನಿಟ್ಟಿನಲ್ಲಿ ಅವರ ಶ್ರದ್ಧೆ–ಶ್ರಮಗಳು ಬೆರಗುಗೊಳಿಸುತ್ತವೆ. ತಮ್ಮ ವ್ಯಾಸಂಗವಿಷಯದಲ್ಲಿ ಅವರು ಒಂದು ರೀತಿಯಲ್ಲಿ "ಭ್ರಮರ–ಕೀಟ ನ್ಯಾಯದಂತೆ, ತಾವೇ ವಿಷಯವೂ–ವಿಷಯಿಯೂ ಆಗಿಬಿಡುವಂತೆ ತೋರುತ್ತಾರೆ. ಯಾಕೆ ಹೇಳುತ್ತೇನೆಂದರೆ, ಅಪರಿಮಿತ ಕಷ್ಟಸಹಿಷ್ಣುತೆ, ಶ್ರದ್ಧೆ , ಪ್ರಾಮಾಣಿಕತೆ ನಿಶ್ಚಿತಗುರಿಯತ್ತ ನಿಶ್ಚಿತಪ್ರಯಾಣದ ಸಾಹಸ – ವ್ಯವಸಾಯಾತ್ಮಿಕಾಬುದ್ಧಿ (!) ಸಂಕೇತಿಗಳಲ್ಲಿ ಎದ್ದುಕಾಣುವ ಗುಣ. ಆಧುನಿಕತೆಯ ಸುಲಭಜಾಲದ ಪ್ರಲೋಭನೆಗೆ (ಜನಪ್ರಿಯತೆಗಾಗಿ ಸುಲಭಸಾಧ್ಯವಾದ ಬರವಣಿಗೆ, ಬಹುಮಾನ, ಪ್ರಶಸ್ತಿ, ಸನ್ಮಾನ ಇತ್ಯಾದಿ) ಮನಸ್ಸು ಮಾರಿಕೊಳ್ಳದೆ, ಸಂಶೋಧನೆಯಂತಹ ಕಠಿಣ ಶಿಸ್ತನ್ನೇ ಪ್ರೀತಿಪೂರ್ವಕವಾಗಿ ಡಾ॥ ಹರನ್ ಇಂದಿಗೂ ಆಯ್ಕೆ ಮಾಡಿಕೊಂಡಿದ್ದಾರೆ. ಅವರ ವಿದ್ವತ್ತು– ಪರಿಶ್ರಮಗಳಿಗೆ ಉಚಿತವಾದ ಪ್ರಶಸ್ತಿಗಳು ಇನ್ನೂ ದೊರಕಿಲ್ಲ ಎಂಬ ಕೊರಗು ಅವರ ಮಿತ್ರರಿಗೆ–ಹಿತೈಷಿಗಳಿಗೆ ಉಂಟೇ ವಿನಃ ಆ ಬಗ್ಗೆ ಅವರು ಅಚ್ಚರಿಗೊಳಿಸುವಷ್ಟು ವಿಮುಖರಾಗಿದ್ದಾರೆ. ತಾವೇ ನಿರ್ಮಿಸಿಕೊಂಡ ಕಲ್ಲುಮುಳ್ಳಿನ ಕಠಿಣ ಹಾದಿಯಲ್ಲೇ ಹೂವು ಚೆಲ್ಲುತ್ತಾ ಉಲ್ಲಾಸದಿಂದ ಸಾಗಿಬಿಟ್ಟಿದ್ದಾರೆ.

ಅವರ ಮುಂದುವರಿದ ಅಧ್ಯಯನ–ಸಂಶೋಧನೆಗಳನ್ನೇ ಗಮನಿಸಿದರೂ ಈ ವಿಷಯ ಸ್ಪಷ್ಟವಾಗುತ್ತದೆ. ಪ್ರಕೃತ, ಅವರ ಅಧ್ಯಯನದ ಪತ್ರಸಾಹಿತ್ಯದ ಹಸ್ತಪ್ರತಿ ನನ್ನೆದುರಿಗಿದೆ. ಮೊದಲನೆಯ ಭಾಗದಲ್ಲಿ ಸಂಕೇತಿ ಕುಟುಂಬಗಳಲ್ಲಿನ ಹಲವಾರು ಸಂದರ್ಭಗಳ ಪತ್ರವ್ಯವಹಾರಗಳ ಸಂಗ್ರಹವಿದೆ. ಅವುಗಳು ಮನೆಯಲ್ಲಿನ ಪುತ್ರೋತ್ಸವ, ಜನ್ಮಕುಂಡಲಿ, ಚೌಲಸಂಸ್ಕಾರಕ್ಕೆ ಆಹ್ವಾನ, ಉಪನಯನ, ವಿದ್ಯಾಭ್ಯಾಸಕ್ಕಾಗಿ ಪರಸ್ಥಳದಲ್ಲಿ ವಾಸಿಸುತ್ತಿರುವ ಮಕ್ಕಳು ಮೊಮ್ಮಕ್ಕಳ ಕಷ್ಟಕಾರ್ಪಣ್ಯ, ಆರ್ಥಿಕ ಮುಗ್ಗಟ್ಟು, ವಿವಾಹಪ್ರಯತ್ನ– ನಿರಾಕರಣೆ, ಮುಂತಾದ ಆತ್ಮೀಯವೂ ಹೃದ್ಯವೂ ಆದ ಸಂದರ್ಭಗಳನ್ನೂ ಸಂಬಂಧಗಳನ್ನೂ ಒಳಗೊಂಡಿವೆ. ಪತ್ರಗಳ ಒಟ್ಟು ಸಂಖ್ಯೆ 435 ರಷ್ಟು! ಕಾಲದ ಹರವು 1891 ರಿಂದ 2003ರವರೆಗೆ. ಹೀಗೆ ಪತ್ರಗಳನ್ನು ಸಂಗ್ರಹಿಸಿ ಸಂಪಾದಿಸಿರುವುದೇ ಒಂದು ಸಾಹಸ. ಏಕೆಂದರೆ ನಮ್ಮದೇಶದಲ್ಲಿ ಪೌರಾಣಿಕ ಪ್ರಜ್ಞೆಗೆ ಇರುವ ಮಹತ್ವ ಇತಿಹಾಸ ಪ್ರಜ್ಞೆಗೆ ಇಲ್ಲ. ಈ ಕಾರಣದಿಂದ 'ದಾಖಲಾತಿ'– ಡಾಕ್ಯುಮೆಂಟೇಷನ್– ಕಡೆಗೆ ಗಮನ ತೀರ ಕಡಿಮೆ– ಇಲ್ಲವೇ ಇಲ್ಲ ಎನ್ನುವಷ್ಟು. ಸಂಶೋಧಕರಿಗೆ ಇದೊಂದು ಪ್ರಾಥಮಿಕ ಸಂಕಷ್ಟ. ಸ್ಥಳ ಪುರಾಣಗಳು, ಹೇಳಿಕೇಳಿದ ಸಂಗತಿಗಳು ಸಮೃದ್ಧ. ಅವುಗಳಲ್ಲಿ ಉತ್ಪ್ರೇಕ್ಷೆ, ಕಲ್ಪನಾವಿಲಾಸಗಳೇ ಮೂರುಪಾಲು. ಅಪ್ಪಟ ಸತ್ಯ ಒಂದು ಪಾಲು. ಅದನ್ನು ಹೆಕ್ಕಿ ತೆಗೆಯಬಲ್ಲ– ಅದಕ್ಕೆ ಸಹಕಾರಿಯಾಗಬಲ್ಲ ದಾಖಲಾತಿಗಳು ತೀರ ದುರ್ಲಭ. ಹೀಗಿರುವಾಗ, ಇಷ್ಟು ದೊಡ್ಡ ಪ್ರಮಾಣದಲ್ಲಿ ವೈಯಕ್ತಿಕ ಪತ್ರಗಳನ್ನೂ ಹುಡುಕಿ ಸಂಗ್ರಹಿಸಿಕೊಂಡ ಡಾ॥ ಹರನ್ ಅವರ ಹರಸಾಹಸ ಅನನ್ಯವಾದದ್ದೇ !

ಇನ್ನು 'ಎರಡನೆಯ ಭಾಗ'ದ 120 ಪತ್ರಗಳು ಏಕಕರ್ತೃಕ ಪತ್ರಗಳು. ಬರೆದವರು ಘನವಿದ್ವಾಂಸರೂ, ಪ್ರಕಾಂಡ ಪಂಡಿತರೂ, ಸಹೃದಯಶ್ರೀಮಂತರೂ ಆದ ಪ್ರೊ॥ ಶ್ರೀಕಂಠಕುಮಾರಸ್ವಾಮಿಗಳು. ಪ್ರಾಚೀನ – ಅರ್ವಾಚೀನ ವಿದ್ವತ್ತಿನಲ್ಲಿ ಅವರು ಶಿಖರಪ್ರಾಯರು. ಅಧಿಕಾರವಾಣಿಯಿಂದ ನುಡಿಯಬಲ್ಲವರು, ಮಾಗದರ್ಶನ ಮಾಡಬಲ್ಲವರು, ಸ್ವೋಪಜ್ಞರಾದ ಚಿಂತಕರು. ಶಾಸ್ತ್ರಗೌರವ ಸಹಜವಾಗಿಯೇ ಅವರಲ್ಲಿ ಮಿಗಿಲಾಗಿದ್ದರೂ, ಅನೇಕ ಸಂದರ್ಭಗಳಲ್ಲಿ 'ಪ್ರಮಾಣಮಂತಃಕರಣಂ' ಎಂಬ ನೆಲೆಗೆ ಸಂದ ಸತ್ಯನಿಷ್ಠರು. ಮುಖ್ಯವಾಗಿ ಆಧುನಿಕ ಮನಸ್ಸುಗಳೂ ಒಪ್ಪುವಂತಹ ಸತ್ಯ ಪ್ರತಿಪಾದಕರಾದ ಈ ಪಂಡಿತವರ್ಯರು ಸಂಕೇತಿ ಸಮಾಜದ ಭೂಷಣಪ್ರಾಯರಾಗಿದ್ದಾರೆ. ಉಪನಯನ ವಿಧಿ, ವ್ರತಾಚರಣೆ, ಸಗೋತ್ರ ವಿವಾಹ, ಷೋಡಶ ಕರ್ಮಗಳು ಮುಂತಾದ ಹತ್ತು ಹಲವು ಸಂದರ್ಭಗಳಲ್ಲಿ ಅವರು ತಾಳಿದ ಖಚಿತ ನಿಲವು–ನೀಡಿದ ಮಾರ್ಗದರ್ಶನಗಳು ಈ ಪತ್ರಗಳಲ್ಲಿ ದಾಖಲಾಗಿವೆ. ಅವುಗಳನ್ನು ಸಂಗ್ರಹಿಸಿ, ಪ್ರತ್ಯೇಕ ಭಾಗವಾಗಿ ಸೇರ್ಪಡಿಸಿರುವುದು ತುಂಬ ಔಚಿತ್ಯಪೂರ್ಣವಾಗಿದೆ.

ಹೀಗೆ ದಾಖಲೆಗಳನ್ನು ಸಂಗ್ರಹಿಸಿಕೊಂಡ ಡಾ॥ ಹರನ್, ಅವುಗಳ ಸಂದರ್ಭ, ಬರವಣಿಗೆಯ ಶೈಲಿ, ಬಳಸಿದ ಭಾಷೆ, ಅವುಗಳಲ್ಲಿ ತೋರಿಬರುತ್ತಿರುವ ಕಾಲಾನುಗುಣವಾದ ಬದಲಾವಣೆಗಳು, ಆ ಮೂಲಕ ಇಡಿಯ ಒಂದು

ಉಪಜಾತಿಯ ಮಾನಸಿಕ–ಆರ್ಥಿಕ–ಸಾಂಸ್ಕೃತಿಕ ಆಘಾತಗಳು, ಹೊಂದಾಣಿಕೆಗಳು, ಹಾಗೆ ಹರಿಯುತ್ತಿರುವ ಜೀವನ ಪ್ರವಾಹದ ಏರಿಳಿತಗಳನ್ನು ತುಂಬ ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ. ತೆರೆದ ಮನಸ್ಸಿನಿಂದ ಅಧ್ಯಯನ ಮಾಡಿದ್ದಾರೆ. ಯಾವ ಪೂರ್ವಾಗ್ರಹಕ್ಕೂ ಮನಸ್ಸನ್ನು ತೆತ್ತುಕೊಳ್ಳದೆ, ಆದರೆ ಖಚಿತವಾದ ತಮ್ಮ ನಿಲುವನ್ನು ತೊದಲಿಲ್ಲದೆ ದಾಖಲಿಸಿದ್ದಾರೆ. ಈ ಸತ್ಯನಿಷ್ಠೆ ಹಾಗೂ ಸತ್ಯನಿಷ್ಠುರತೆ ಒಂದು ಅನುಕರಣೀಯ ಆದರ್ಶವೇ ಸರಿ.

ವಿಶೇಷವಾಗಿ, ಪರಸ್ಥಳಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ತಮ್ಮ ಹಿರಿಯರಿಗೆ ಬರೆದ ಪತ್ರಗಳು ಗಮನಾರ್ಹವಾಗಿವೆ. ಸಂಸ್ಕೃತ ಹಾಗೂ ಆಂಗ್ಲಭಾಷೆಯ ಪದ, ವಾಕ್ಯ, ಉದ್ಧ ೃತಗಳ ಬಳಕೆಯಲ್ಲಿ ಈ ತರುಣರು ತೋರುವ ಉತ್ಸಾಹವನ್ನು ಡಾ॥ ಹರನ್ ಗಮನಿಸಿದ್ದಾರೆ. ತಮಿಳು–ಮಲೆಯಾಳ ಪ್ರದೇಶದಿಂದ ಬಂದ ಸಂಕೇತಿಗಳು ಕನ್ನಡವನ್ನು ಹೊಸತಾಗಿ ಕಲಿತು ಪ್ರಯೋಗಿಸತೊಡಗಿದ ಸಂಭ್ರಮವನ್ನು ದಾಖಲಿಸಿದ್ದಾರೆ. ಮನೆಯ ಶುಭಸಮಾರಂಭಗಳಿಗೆ ಎಂಟುದಿನ ಮುಂಚಿತವಾಗಿ ಬರುವಂತೆ ಪತ್ರ ಬರೆಯುತ್ತಿದ್ದುದು ಕ್ರಮೇಣ ಕಾಲ–ದೂರ–ಸೌಕರ್ಯಗಳ ಕಾರಣವಾಗಿ 'ಒಂದು ದಿನದ ಮಟ್ಟಿಗಾದರೂ', 'ಅನುಕೂಲವನ್ನು ನೋಡಿಕೊಂಡು' ಎಂಬಂತೆ ಬದಲಾದುದು; ವೈಯಕ್ತಿಕ ಆಹ್ವಾನ ಪತ್ರಮುಖೇನಕ್ಕೆ ತಿರುಗಿದುದು– ಇಂಥ ಸೂಕ್ಷ್ಮಗಳು ಅವರ ಗಮನಕ್ಕೆ ಬಂದಿವೆ. ಕಾಲದಿಂದ ಕಾಲಕ್ಕೆ ಬದಲಾದ– ಸಂಕೀರ್ಣವಾದ ವಿದ್ಯಾರ್ಥಿಗಳ ಊಟ–ವಸತಿ–ಓದುಗಾರಿಕೆ ಸಮಸ್ಯೆಗಳನ್ನೂ ತೆರೆದ ಮನಸ್ಸಿನಿಂದ ಪರಿಶೀಲಿಸಿದ್ದಾರೆ. ಅನ್ಯಾಶ್ರಯದ ಅಪಮಾನ ಮುಜುಗರಗಳಿಂದ ವಿದ್ಯಾರ್ಥಿಗಳನ್ನು ಪಾರುಮಾಡಿದ ಆಧುನಿಕ ವಸತಿನಿಲಯಗಳ ಬಗೆಗೆ ಡಾ॥ ಹರನ್ ಸಹಜವಾಗಿಯೇ ಅಭಿಮಾನದ ನುಡಿಗಳನ್ನಾಡಿದ್ದಾರೆ. ಪ್ರಾಯಶಃ ಬಹುಮಟ್ಟಿಗೆ ಏಕಾಂತಜೀವಿಗಳೂ ವಿಶೇಷ ಸ್ವಪ್ರಜ್ಞಾಶೀಲರೂ ಆದ ಸಂಕೇತಿ ವಿದ್ಯಾರ್ಥಿಗಳ ಒಳಕೊರಗುಗಳನ್ನೂ ಖಿನ್ನತೆಯನ್ನೂ ನಿವಾರಿಸಿ ಸಮೂಹಜೀವಿಗಳಾಗಿ, ಬಹಿರ್ಮುಖತೆಯನ್ನೂ ಹೊಂದಾಣಿಕೆಯನ್ನೂ ಬೆಳೆಸಿಕೊಳ್ಳುವಲ್ಲಿ ಈ ವಿದ್ಯಾರ್ಥಿನಿಲಯಗಳು ನೆರವಾಗುವಂತೆ ನನಗೆ ತೋರುತ್ತದೆ. ನಾನು ಗಮನಿಸಿದ ಒಂದೆರಡು ವಿಶೇಷ ಅಂಶಗಳನ್ನು ಪ್ರಾಯಶಃ ದಾಖಲಿಸಬಹುದೆಂದು ತೋರುತ್ತದೆ.

1) ಕಾಲ–ಸಂದರ್ಭಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೂ ಸಂಕೇತಿ ವಿದ್ಯಾರ್ಥಿಗಳ ಈ ಪತ್ರಗಳು ಹೆಚ್ಚು ಸಾಲಂಕೃತ ಭಾಷೆಯಲ್ಲಿರುವಂತಿವೆ.
   - ಪತ್ರ 12. IV ಫಾರಂ ವಿದ್ಯಾರ್ಥಿ, ದಿನಾಂಕ 12.12.22. ದಿವ್ಯ ಶ್ರೀಚರಣ ಸನ್ನಿಧಿಯಲ್ಲಿ / ಪತ್ರಿಕೆಯು ಹಸ್ತಗತವಾಯ್ತು / ವ್ಯಾಕುಲಚಿತ್ತನಾಗಿದ್ದೇನೆಂಬಂಶವು ಅವನಿಗೂ ತಿಳಿದಿರಬಹುದಾಗಿದ್ದಾಗ್ಯೂ/
   - ಪತ್ರ 15 : ಬಾಲಕಕೃತಾನೇಕ ಸಾಷ್ಟಾಂಗ ವಿಜ್ಞಪ್ತಯಃ ತದುಪರಿಸಾಂಪ್ರತಂ/ಮಂದಭಾಗ್ಯನಾದ ನನ್ನ/ ಇತರಾಪಿ ಇನ್ನೂ
   - ಪತ್ರ 16: ಯತ್ನೇಕೃತೇ / ಇತ್ಯಾದಿ–
2) ಹಿರಿಯರಿಗೆ ಬರೆವ ಪತ್ರಗಳಲ್ಲೂ ವಿದ್ಯಾರ್ಥಿಯ ಉಪದೇಶ ಚಾಪಲ್ಯ !
   - ಪತ್ರ 18: ಅತಿಯಾದ ವ್ಯಾಕರಣಕ್ಕೆ ಎದೆಒಡೆದುಕೊಳ್ಳುವುದು ಅವಿವೇಕ (!) / ವ್ಯಾಕರಣವು ಸಾಹಿತ್ಯದ ತಿಳುವಳಿಕೆಗೆ ಸಹಕಾರಿಯಾಗಿರ ಬೇಕೇ ವಿನಃ ... ಇತ್ಯಾದಿ
3) ಕಿರಿಯನಾದ ತಮ್ಮನ ಬಗ್ಗೆ (ವಯಸ್ಸಿನ ಅಂತರ ಹೆಚ್ಚು ಇರಲಾರದು) ಕಳಕಳಿ ಗಮನಾರ್ಹ. ಜೊತೆಜೊತೆಗೆ ಬುದ್ಧಿ ಹೇಳುವ ಉತ್ಸಾಹ ಎದ್ದು ಕಾಣುತ್ತದೆ (ಪತ್ರ 19). ಪ್ರತಿಯಾಗಿ ಪತ್ರ 21: ತಮ್ಮನ ಬಗೆಗೆ ಮರುಕ ಪ್ರಾಮಾಣಿಕವಾಗಿದೆ.
4) ಪತ್ರ–17. ಗ್ರಾಮೀಣ ಪರಿಸರದಿಂದ ಬಂದ ಎಳೆಯ ಬಾಲಕನ ಆತಂಕ, ಭಯ, ಅರ್ಥವಾಗುವಂತಿದೆ. ಸಂಸ್ಕೃತ ಪಾಠಶಾಲೆಗೇ ಕಳುಹಿಸುವಂತೆ ಕೋರುವ ಕಳವಳವೂ ಸರಿಯೇ. ಅದಕ್ಕೆ ಅಪರಿಚಯದ ಆಂಗ್ಲಪಾಠ /ಸಹಪಾಠಿಗಳೊಡನೆ ಹೊಂದಾಣಿಕೆಯ ಕಷ್ಟ / ಬೆಂಗಳೂರಿನ ವಿಕ್ಷುಬ್ಧವಾತಾವರಣ... ಇವು ಕಾರಣವಿರಬಹುದು (ದಿ. 1.7.29). ಆದರೆ ಅದನ್ನು 'ರ್‍ಯಾಗಿಂಗ್' ಎಂಬ ವಿಕೃತ ನಡೆವಳಿಕೆಯ ಅಡಿಯಲ್ಲಿ ತರಬಹುದೆ? ಲಾಲಸೆ–ದಬ್ಬಾಳಿಕೆ–ಠೇಂಕಾರ ಹಿರಿಯ ವಿದ್ಯಾರ್ಥಿಗಳಲ್ಲಿರಬಹುದು. ಆದರೆ 'ರ್‍ಯಾಗಿಂಗ್'ನ ಹಿಂಸಾರತಿಯ ಸಮಸ್ಯೆ ಬೇರೆ ಬಗೆಯದಲ್ಲವೆ?

5) 1950–51ರ ವೇಳೆಗೂ ದೂರು ಹೇಳುವ ಪ್ರವೃತ್ತಿ, ವ್ಯಂಗ್ಯದ ಭಾಷೆ ಸುದೀರ್ಘವಾಗಿಯೇ ಇದೆ. ಉದಾ. ಪತ್ರ. 29. "ಯಾವಾಗ ಗಂಡನೆನಿಸಿಕೊಂಡವನು ಹೆಂಡತಿಯಾದವಳ ಕೈಗೊಂಬೆಯಾದನೋ... ಸೈಗೊಡುವುದೇ ನ್ಯಾಯವಾಗಿದೆ... ಇತ್ಯಾದಿ!"
6) ಪತ್ರ 30/38...'ಹೊಸ ಜನಗಳ ಪರಿಚಯ, ಹೊಸ ಊರು ಒಂದೂ ಬೇಡವಾಗಿರುವುದರಿಂದ...' ಈ ಒಂಟಿತನ, ಅಂತರ್ಮುಖತೆ ಅದರ ಮತ್ತೊಂದು ಮುಖವಾದ ಪರೋಪದೇಶ, ಸಾಲಂಕೃತ ಭಾಷೆ...ಪ್ರಮಾಣದಲ್ಲಿ ಸಂಕೇತಿ ವಿದ್ಯಾರ್ಥಿಗಳಲ್ಲಿ ಹೆಚ್ಚಾಗಿದೆಯೆ ? ಬೆಳೆದ ಪರಿಸರ ಕಾರಣವೆ? ನಗರೀಕರಣದತ್ತ ಸುಲಭವಾಗಿ ಒಲಿಯದ rigidityಯೆ ? ಇದು ಆಕ್ಷೇಪಣೆಯಲ್ಲ. ಸ್ವಲ್ಪ ಅಧ್ಯಯನಯೋಗ್ಯವೇನೋ.
7) ಪತ್ರ 14 : ತಿರುವಾಂಕೂರು ಮಹಾರಾಜರ ಬಗೆಗಿನ ಗಾಢ ಸಂಬಂಧ. ತಮ್ಮ ಟಿಪ್ಪಣಿ ತೀರ ಸರಿ. ವಿಷಯ ಹೃದ್ಯವೂ ಹೌದು.
ವಿದ್ಯಾರ್ಥಿಗಳ ಈ ಭಾವುಕ / ವಿಜೃಂಭಿತ / ಕೆಲವೊಮ್ಮೆ ಉಪದೇಶಾತ್ಮಕ ಭಾಷೆಗೆ ವ್ಯತಿರಿಕ್ತವಾಗಿ ಗ್ರಾಮೀಣ ಹಿರಿಯರ ಪತ್ರಗಳಲ್ಲಿನ ಸಹಜತೆ, ಆತ್ಮೀಯತೆ, ವಾತ್ಸಲ್ಯ ಇವು ವಿಶೇಷವಾಗಿ ಮನಮುಟ್ಟುವಂತಿವೆ. ಗ್ರಾಮದಿಂದ ನಗರದತ್ತ / ಆಧುನಿಕ ವಿದ್ಯಾಭ್ಯಾಸದ presumed ಬುದ್ಧಿವಂತಿಕೆಯಿಂದ ಮನೋಧರ್ಮದಲ್ಲಾದ ಬದಲಾವಣೆ ಕಾರಣವಿರಬಹುದೇ?

ಪ್ರೊ॥ ಶ್ರೀಕಂಠಕುಮಾರಸ್ವಾಮಿಗಳ ಪಾಂಡಿತ್ಯದ ಹರಹು– ವಿಸ್ತಾರ ಹಾಗೂ ಆಳವನ್ನು ಪ್ರಕಟಿಸುವುದು ಸಹಜವೇ. ಆದರೆ ಅದಕ್ಕಿಂತ ಮಹತ್ವದ ಸಂಗತಿ ಎಂದರೆ ಈ ಮಹನೀಯರ ತೆರೆದ ಮನಸ್ಸು, ಅಚ್ಚರಿ ಎನಿಸುವಷ್ಟು ಆಧುನಿಕವಷ್ಟೇ ಅಲ್ಲದೆ ಅಪೂರ್ವ ಸ್ವಂತಿಕೆ. ಬಹುಮಟ್ಟಿಗೆ ಸಂಪ್ರದಾಯನಿಷ್ಠರೂ ಕರ್ಮಠರೂ ಆದ ಸಂಕೇತಿಗಳಲ್ಲಿ ಸ್ವಾಮಿಗಳು ಎದ್ದುಕಾಣುವ ವಿಶಿಷ್ಟ ವ್ಯಕ್ತಿತ್ವ ಉಳ್ಳವರಾಗಿ ತೋರುತ್ತಾರೆ. ಸಂಪ್ರದಾಯಗಳ ಹೊರಹೊದಿಕೆಗಿಂತ ಅಂತಃಸತ್ವದ ಕಡೆಗೆ ಅವರ ಆರೋಗ್ಯಕರ ಮನಸ್ಸು ಧಾವಿಸುತ್ತದೆ. ಮಡಿ–ಮೈಲಿಗೆ, ವ್ರತಾಚರಣೆ, ಉಪನಯನ ಇತ್ಯಾದಿಗಳನ್ನು ಕುರಿತ ಅವರ ಚಿಂತನೆಗಳನ್ನು ಗಮನಿಸಬಹುದು. ಗಣಪತಿವ್ರತವನ್ನು ಕುರಿತಂತೆ "ಸಮಾಧಾನ ನಿನ್ನ ಮನಸ್ಸೇ. ನಿನಗೆ ಹೇಗೆ ತೃಪ್ತಿಯೋ ಹಾಗೆ ಮಾಡು. ಕೊನೆಗೆ photo ಇಟ್ಟುಕೊಂಡು ಮಾಡಿದರೂ ಬರುತ್ತದೆ... ನಿನ್ನ ಸೌಕರ್ಯ, ನಿನ್ನ ಮಾನಸಿಕ preparationಗೆ ತಕ್ಕಂತೆ ಮಾಡು. ಯಾವುದಕ್ಕೂ rigid ಆಗಿ attach ಮಾಡಿಕೊಳ್ಳುವುದು ಬೇಡ. ಭಯವೂ ಬೇಡ" (ಪತ್ರ 438). "ಈ ನಿಷೇಧಗಳಿಗೆ ಯಾವುದಕ್ಕೂ ಅರ್ಥವಿಲ್ಲ. ಯಾವ ಸೂತ್ರಕಾರರೂ ಹೇಳಿಯೂ ಇಲ್ಲ. ಶ್ರಾದ್ಧವೆಂಬುದು ಒಂದು ಅಮಂಗಳಕಾರ್ಯ ಎಂಬ ತಪ್ಪುನಂಬಿಕೆಯ ಮೇಲೆ ಹೊರಟಿರುವ ಸಂಪ್ರದಾಯಗಳು ಇವು. ಅವಕ್ಕೆ ಈಷದಪಿ ಪ್ರಮಾಣವಿಲ್ಲ" (ಪತ್ರ 443), "ಬೇಜಾರು ಯಾವಾಗ ಎಂದರೆ ಸಕಾರಣವಾಗಿ, ಸಶಾಸ್ತ್ರೀಯವಾಗಿ ವಿಷಯವನ್ನು ತಿಳಿಸಿದರೂ ಕಿವಿಗೆ ಹಾಕಿಕೊಳ್ಳದೆ ಕೇವಲ ಸಂಪ್ರದಾಯಜಾಡ್ಯಕ್ಕೆ ನೇತುಬೀಳುವ ಮೌರ್ಖ್ಯವನ್ನು ತೋರಿಸಿದಾಗ. ಕೆಲವು ವೇಳೆ ಅಂಥದನ್ನು ಕಂಡಾಗ ಅಪ್ರಯತ್ನವಾಗಿ ಕ್ರೋಧವೂ ಬರುವುದುಂಟು (ಪತ್ರ 444)", ಇತ್ಯಾದಿ ಚಿಂತನೆಗಳನ್ನು ಗಮನಿಸಬಹುದು. "ಪಿತೃಶ್ರಾದ್ಧವನ್ನು ಸೋದರರು ಪ್ರತ್ಯೇಕವಾಗಿಯೇ ಸ್ವಯಾರ್ಜಿತ ಸಂಪಾದನೆಯಿಂದ ಮಾಡಿ ಕೃತಕೃತ್ಯರಾಗಬೇಕು", "ಆತ್ಮತೃಪ್ತಿಗೆ, ಆಹ್ವಾನಿತ ಬ್ರಾಹ್ಮಣರ ಸಂತೃಪ್ತಿಗೇ ವಿನಃ ಸತ್ತ ಪಿತೃಗಳು ತೃಪ್ತರಾಗುತ್ತಾರೆ ಎಂಬ ಭಾವನೆ ತಪ್ಪು" ಎಂದು ಸ್ವಾಮಿಗಳು ಕಂಠೋಕ್ತವಾಗಿ ನುಡಿದುಬಿಡುತ್ತಾರೆ (ಪತ್ರ 446). ಹಾಗೆಯೇ "ಗ್ರಹಣ ಕಾಲದಲ್ಲಿ ಶಾಂತಿ ಎನ್ನುವುದು ಮೌರ್ಖ್ಯ, ಮೌಢ್ಯ. ಯಾರೂ ಯಾವ ಶಾಂತಿಯನ್ನೂ ಮಾಡಿಕೊಳ್ಳಬೇಕಾದುದಿಲ್ಲ. ನಮ್ಮ ಸೂತ್ರಕಾರರಾಗಲೀ ಮನ್ವಾದಿ ಸ್ಮೃತಿಕಾರರಾಗಲೀ ಯಾರೂ ಹೇಳಿಲ್ಲ" ಎಂಬ ಖಚಿತ ತೀರ್ಮಾನವನ್ನು ಗಮನಿಸಬೇಕು (ಪತ್ರ 452). "ದುರದೃಷ್ಟವಶಾತ್ ಇವತ್ತಿನ ವಿವಾಹಗಳು ಸಂಸ್ಕಾರದ ವಿಡಂಬನೆಗಳಾಗಿ ಕೂತಿವೆ. ಯಾಂತ್ರಿಕವಾಗಿ ಪುರೋಹಿತರು ಹೇಳಿದ ಕೆಲವು ಕ್ರಿಯೆಗಳನ್ನು ಅಂಧರಂತೆ ಮಾಡಿ ವಿವಾಹಸಂಸ್ಕಾರವನ್ನು ನೆರವೇರಿಸಿದೆವೆಂಬ ಚರಿತಾರ್ಥತೆಯಿಂದ ಬೆನ್ನುತಟ್ಟಿಕೊಳ್ಳುತ್ತೇವೆ. ಇದಕ್ಕಿಂತ Mockery ಬೇರೇನು ಬೇಕು !" ಎಂಬ ಮಾತಿನ ವಿಷಾದದ ದನಿಯನ್ನು ಗಮನಿಸಬೇಕು (ಪತ್ರ 453). ವಿಧವಾ ವಿವಾಹದ ಬಗ್ಗೆ– "ಧಾರಾಳವಾಗಿ ಮಾಡಬಹುದು (ಸ್ತ್ರೀಯು ಒಪ್ಪಿದರೆ!) ಯಾವ ಪಾಪವೂ ಇಲ್ಲ" (ಪತ್ರ 459) ಎಂಬವರೆಗೂ ಈ ಪುಣ್ಯಪುರುಷರ ಔದಾರ್ಯ ಬೆಳೆದಿದೆ.

ಪರಮಪೂಜ್ಯರಾದ ಈ ಹಿರಿಯರ ಸ್ವೋಪಜ್ಞ ಚಿಂತನೆಯ ಪತ್ರಗಳನ್ನು ಸಂಗ್ರಹಿಸಿ ಮಹಾಪ್ರಬಂಧದ ಅಧ್ಯಾಯವಾಗಿ ಅಳವಡಿಸಿರುವುದು ಪ್ರಶಂಸನೀಯ. ಆದರೆ ಈ ಚಿಂತನೆಗಳು ಸಂಕೇತಿ ಸಮುದಾಯದ ಸಾಮಾನ್ಯ ಸ್ವೀಕೃತಿಗಳು ಇರಲಾರವು. ಅವರು ಏರಬಹುದಾದ ಬೌದ್ಧಿಕ ಎತ್ತರ, ಹೃದಯವಂತಿಕೆಯನ್ನು ಸೂಚಿಸುವ ವಿಶಿಷ್ಟ ಉದಾಹರಣೆಯಾಗಿರಬಹುದು! ಮಡಿ–ಹುಡಿಗಳಲ್ಲಿ, ಆಚಾರ ವ್ಯವಹಾರಗಳಲ್ಲಿ, ಬ್ರಾಹ್ಮಣ ಸಮಾಜದ ಇತರ ಉಪಜಾತಿಗಳಿಗಿಂತ ಹೆಚ್ಚು ಪ್ರಮಾಣದ ಸಂಪ್ರದಾಯನಿಷ್ಠೆ ಸಂಕೇತಿಗಳಲ್ಲಿ ಕಂಡುಬರುತ್ತದೆ (ವಿಶೇಷವಾಗಿ ಮಲೆನಾಡು ಸಂಕೇತಿಗಳಲ್ಲಿ).

ಬಹುಮುಖ್ಯವಾಗಿ ಸಂಕೇತಿಗಳು ಸಾಮೂಹಿಕ ವಲಸೆಗಾರರು. ಆದರೆ ನದೀತೀರ, ಗ್ರಾಮೀಣ ಪರಿಸರಗಳೇ ಅವರಿಗೆ ನಗರಗಳಿಗಿಂತ ಹೆಚ್ಚು ಪ್ರಿಯ. ವಲಯ ಕಿರಿದಾದಷ್ಟೂ ನಿರ್ದಿಷ್ಟ ಗುಂಪುಗಳಾಗಿ ಉಳಿದು ಸ್ವರಕ್ಷಣೆ ಪೋಷಣೆಗಳ ಮೂಲಕ ತಮ್ಮ ವಿಶಿಷ್ಟತೆಯನ್ನು ಜೋಪಾನವಾಗಿ ಕಾಪಾಡಿಕೊಳ್ಳುವ ಛಲ ಈ ಉಪಜಾತಿಯಲ್ಲಿ ಗಾಢವಾಗಿ ತೋರುತ್ತದೆ.

ಹೀಗೆ ತಮ್ಮತನವನ್ನು ಬಿಟ್ಟುಕೊಡದೆಯೇ ನಿಂತನೆಲಕ್ಕೆ ತಮ್ಮ ಕಾಣಿಕೆಯನ್ನೂ ಸಲ್ಲಿಸುತ್ತಿರುವ ಸಂಕೇತಿಗಳು, ಸಮುದಾಯದ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ರುದ್ರಪಟ್ಟಣ ಪ್ರಾಂತ್ಯದಲ್ಲಿ ಸಂಗೀತಪ್ರತಿಭೆ, ಮತ್ತೂರಿನಲ್ಲಿ ವೇದವಿದ್ಯಾ ಪಾಂಡಿತ್ಯದ ಪ್ರಖರತೆ – ಸಂಸ್ಕೃತ ಪ್ರೀತಿ, ವಿಶೇಷವಾಗಿ ಗಮಕ ವಾಚನ – ವ್ಯಾಖ್ಯಾನಗಳ ಮೂಲಕ ಕನ್ನಡ ಕಾವ್ಯಪರಂಪರೆಗೆ ನೀಡಿದ ಕಾಣಿಕೆ ಇವು ಗಮನಾರ್ಹ. ಇಂತಹ ವಿಶಿಷ್ಟತೆಗಳನ್ನು ಪ್ರಕಟಪಡಿಸುತ್ತಲೇ ವ್ಯವಸಾಯಕ್ಕೂ ಅಂಟಿಕೊಂಡು ಶ್ರಮದ ಕಾಯಕನಿರತರಾಗಿರುವುದು ಸಂಕೇತಿಗಳ ಅನನ್ಯತೆಯೇ ಸರಿ. ಇಂಥ ಸವ್ಯಸಾಚಿತನ, ಈ ಸಮುದಾಯದ ಸಾಚಾತನಕ್ಕೂ "ಆಶಿಷ್ಠೋ ದೃಢಿಷ್ಠೋ, ಬಲಿಷ್ಠಃ" ಆದ ವ್ಯಕ್ತಿತ್ವಕ್ಕೂ ಕಾರಣವಾಗಿರುವಂತಿದೆ. ಮಣ್ಣಿನ ಬದುಕನ್ನು ದೃಢವಾಗಿ ಅಪ್ಪಿಕೊಂಡು ಮನಸ್ಸನ್ನು ಮುಗಿಲಿಗೆ ಚಾಚುವ ದ್ಯಾವಾಪೃಥಿವೀ ಸಾಹಸಕ್ಕೆ ಸಂಕೇತಿಗಳು ಸಂಕೇತವಾಗಿದ್ದಾರೆ. ಅವರ ಜೀವನ ಪ್ರೀತಿ, ಸತ್ವ, ಬಗೆದಷ್ಟೂ ಚಿಮ್ಮುವ ಚಿಲುಮೆಯಾದುದರಿಂದ ಡಾ॥ ಹರನ್ ಅವರ ಸಂಶೋಧನೆ, ಸಾಂಸ್ಕೃತಿಕ ಅಧ್ಯಯನಗಳ ವ್ಯಾಪ್ತಿಗೆ ತಕ್ಕ ಆಹಾರ–ವಿಹಾರಗಳನ್ನು ಈ ಸಮುದಾಯ ನಿಸ್ಸಂದೇಹವಾಗಿ ಅವರಿಗೆ ಒದಗಿಸಿದೆ. ಶ್ರೀಯುತರ ಶ್ರಮ–ಶ್ರದ್ಧೆಗಳು ಸಾರ್ಥಕವಾಗಿವೆ. ಸಂಶೋಧನಾಕ್ಷೇತ್ರಕ್ಕೆ, ವಿದ್ವತ್ ಪ್ರಪಂಚಕ್ಕೆ ಬೆಲೆಯುಳ್ಳ ಕೊಡುಗೆಯನ್ನು ಶ್ರೀಯುತರು ತಮ್ಮ ಮಹಾಪ್ರಬಂಧದ– ನಿರಂತರ ಸಂಪ್ರಬಂಧದ – ಮೂಲಕ ನೀಡಿದ್ದಾರೆ, ಕೃತಾರ್ಥರಾಗಿದ್ದಾರೆ. ಅಂಥ ಸಾಹಸಕ್ಕೆ ತೊಡಗುವವರಿಗೆ ಮಾದರಿಯಾಗಿದ್ದಾರೆ – ದಾರಿದೀಪವೂ ಆಗಿದ್ದಾರೆ.

* * *

ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಡಾ॥ ಆರ್. ಇಂದಿರಾ
ಸಮಾಜಶಾಸ್ತ್ರ ಪ್ರಾಧ್ಯಾಪಕರು

ಮಾನವ ಸಂಬಂಧಗಳ ಮೌಲ್ಯವೇ ನಶಿಸಿಹೋಗುತ್ತಿರುವಂಥ ಈ ಹೊತ್ತಿನಲ್ಲಿ, ಒಬ್ಬರೊಡನೊಬ್ಬರು ಪತ್ರಮುಖೇನ ಸಂಪರ್ಕವನ್ನಿಟ್ಟುಕೊಳ್ಳುವಂಥ ಪದ್ಧತಿಯ ಔಚಿತ್ಯವನ್ನೇ ಪ್ರಶ್ನಿಸುವಂಥ ಸಮಯ ಬಂದಿದೆ ಎನ್ನುವುದು ಅತಿಶಯೋಕ್ತಿಯಲ್ಲ. ದಿನೇ ದಿನೇ ಕಡಿಮೆಯಾಗುತ್ತಿರುವ ದೂರವಾಣಿ ದರಗಳು, ಹೆಚ್ಚುತ್ತಿರುವ ಸಾರ್ವಜನಿಕ ದೂರವಾಣಿ ಸೇವಾಕೇಂದ್ರಗಳು, ಊರಿನ ತುಂಬಾ ತುಂಬಿರುವ ಇಂಟರ್‌ನೆಟ್ ಕೇಂದ್ರಗಳು ಮತ್ತು ಎಲ್ಲೆಡೆ ಎಲ್ಲರ ಕೈಗಳಲ್ಲಿ ರಾರಾಜಿಸುತ್ತಿರುವ ಮೊಬೈಲ್ ಫೋನ್‌ಗಳು, ಪತ್ರಗಳನ್ನು ಬರೆಯುವ ಅಭ್ಯಾಸವನ್ನೇ ತಪ್ಪಿಸುತ್ತಿವೆ. ನಾವು ಕುಳಿತ ಕಡೆಯೇ ಜಗತ್ತಿನ ಯಾವ ಭಾಗವನ್ನಾದರೂ ಕ್ಷಣಮಾತ್ರದಲ್ಲಿ ಸಂಪರ್ಕಿಸಬಹುದು ಎನ್ನುವ ಅನುಕೂಲವನ್ನು ತಂತ್ರಜ್ಞಾನ ನಮಗೆ ತಂದುಕೊಟ್ಟಿರುವಾಗ, ಪತ್ರ ಬರೆಯುವ ಕೆಲಸವನ್ನು 'Waste of Precious time' ಎನ್ನುವವರು ನಮ್ಮ ಮಧ್ಯದಲ್ಲಿ ಬಹು ಮಂದಿ ಇದ್ದಾರೆ. ದಿನದಲ್ಲಿ 24 ಗಂಟೆಗಳ ಬದಲು, 48 ಗಂಟೆಗಳಿದ್ದರೂ ಸಾಲದು ಎಂಬಂಥ ಸ್ಥಿತಿಯನ್ನು ತಲುಪಿರುವ ನಮಗೆ ಪತ್ರ ಬರೆಯಲು, ಬೇರೆಯವರು ಬರೆದಿರುವ ಪತ್ರಗಳನ್ನು ಓದಲು ಸಮಯವಾದರೂ ಎಲ್ಲಿದೆ ? ಎರಡು–ಮೂರು ದಶಕಗಳ ಹಿಂದೆ ಕೂಡ ಪತ್ರಗಳನ್ನೇ ನಂಬಿ, ದಿನಗಳನ್ನು ಕಳೆಯುತ್ತಿದ್ದ ಕಾಲವಿತ್ತು. ಪತ್ರಗಳು ತಮ್ಮೊಡನೆ ತರುವ ಆಶೆ–ನಿರಾಶೆಗಳು, ಸೋಲು–ಗೆಲವುಗಳು, ಸುಖ–ದುಃಖಗಳು, ಸುದ್ದಿ–ಸಂಗತಿಗಳು ಬದುಕಿನ ಬಗ್ಗೆ ಭರವಸೆಯನ್ನೂ ಮೂಡಿಸುತ್ತಿದ್ದವು, ಭಯವನ್ನೂ ಹುಟ್ಟಿಸುತ್ತಿದ್ದವು. ಆದರೆ ಇಂದಿನ

ಪರಿಸ್ಥಿತಿ ಹಾಗಿಲ್ಲ. 'Time is money' ಎಂಬ ಸಿದ್ಧಾಂತಕ್ಕೆ ಅಂಟಿಕೊಂಡಿರುವ ವಾಣಿಜ್ಯೀಕೃತ ಬದುಕಿನಲ್ಲಿ, ಪತ್ರಗಳ ಪ್ರಸ್ತುತತೆಯೇ ಪ್ರಶ್ನಾರ್ಹವಾಗಿದೆ.

ಆಧುನಿಕ ಯುಗದಲ್ಲಿ ಪತ್ರಗಳ ಮುಖೇನ ಸಂಪರ್ಕವನ್ನಿಟ್ಟುಕೊಳ್ಳುವ ಪದ್ಧತಿ ಕ್ರಮೇಣ ಹಿಂದಕ್ಕೆ ಸರಿಯುತ್ತಿದ್ದರೂ ಪತ್ರಗಳ ಉಪಯುಕ್ತತೆಯೇನೂ ಕಡಿಮೆಯಾಗಿಲ್ಲ. ಯಾವುದೇ ಸಂಸ್ಥೆಯನ್ನಾಗಲಿ, ಸಂಬಂಧವನ್ನಾಗಲಿ ಅಥವಾ ಘಟನೆಯನ್ನಾಗಲಿ, ಐತಿಹಾಸಿಕ ದೃಷ್ಟಿಕೋನದಿಂದ ಅಧ್ಯಯನ ಮಾಡಬೇಕಾದಾಗ, ಈ ವಿಷಯಗಳಿಗೆ ಸಂಬಂಧಿಸಿದ ಪತ್ರಗಳಿದ್ದಲ್ಲಿ, ಅವು ಉಪಯುಕ್ತ ವಿಷಯ ಮೂಲಗಳಾಗಬಹುದು ಎಂಬುದು ಸತ್ಯ. ಹೆಚ್ಚು-ಕಡಿಮೆ ಎಲ್ಲ ವಿಷಯಗಳಿಗೂ ಸಂಬಂಧಿಸಿದಂತೆ Websites ಇಂದು ದೊರೆಯುತ್ತಿವೆಯಾದರೂ, ವಿಷಯಕ್ಕೆ ಸಂಬಂಧಿಸಿದ ಸೂಕ್ಷ್ಮತೆಗಳು ಅವುಗಳಲ್ಲಿ ಬಿಂಬಿತವಾಗಿಲ್ಲದಿರುವಂಥ ಸಾಧ್ಯತೆಯೂ ಇದೆ. ಅದರಲ್ಲೂ ಮಾನವಸಂಬಂಧಗಳು ಸೂಕ್ಷ್ಮಾತಿಸೂಕ್ಷ್ಮಗಳನ್ನು ಒಳಗೊಂಡಂಥ ವಿಚಾರವಾದ್ದರಿಂದ, ಆ ಸಂಬಂಧಗಳನ್ನು ಸುತ್ತುವರೆದಿದ್ದ ಭಾವನೆಗಳು, ಆಚರಣೆಗಳು, ಸಂದಿಗ್ಧಗಳು ಅಥವಾ ಸಮಸ್ಯೆಗಳು-ಇವುಗಳೆಲ್ಲದರ ಬಗೆಗಿನ ಒಳನೋಟ ಪತ್ರಗಳಲ್ಲಿ ದೊರೆಯುವ ಸಾಧ್ಯತೆಯಿದೆ.

ಪತ್ರಗಳು ಅತ್ಯಂತ ಆಸಕ್ತಿಕರವಾದ ವಿಷಯಮೂಲವಾಗಿರುತ್ತವೆಂಬ ವಿಷಯವನ್ನು ಅನೇಕ ಸಂಶೋಧಕರು ಮನಗಂಡಿರಲಾರರು. ಸಮಾಜವನ್ನು ಅಧ್ಯಯನ ವಿಷಯವನ್ನಾಗಿ ಹೊಂದಿರುವ ಸಂಶೋಧಕರಿಗೆ, ವೈಯಕ್ತಿಕ ದಾಖಲೆಗಳ ಗುಂಪಿಗೆ ಸೇರಿದ ಪತ್ರಗಳು, ಅನೇಕ ಸಂದರ್ಭಗಳಲ್ಲಿ ಅತ್ಯಂತ ಉಪಯುಕ್ತ ಮಾಹಿತಿಯನ್ನು ನೀಡಬಲ್ಲಂಥ ಶಕ್ತಿಯನ್ನು ಪಡೆದಿವೆ. ಥಾಮಸ್ ಮತ್ತು ಜೆನನ್‌ಕಿ ಎಂಬ ಸಂಶೋಧಕರು ತಮ್ಮ The Polish Peasant in Europe and America ಎಂಬ ಅಧ್ಯಯನದಲ್ಲಿ ಪತ್ರಗಳನ್ನು ವ್ಯಾಪಕವಾಗಿ ಬಳಸಿದ್ದರು. ತಮ್ಮ ಅಧ್ಯಯನ- ವಿಷಯವಾದ ಪೋಲಿಷ್ ರೈತ ಸಮುದಾಯದ ಸಾಮಾಜಿಕ ಜೀವನದಲ್ಲಿ ಕಾಲದಿಂದ ಕಾಲಕ್ಕೆ ತೋರಿದ ಬದಲಾವಣೆಗಳನ್ನು ತಿಳಿದುಕೊಳ್ಳಲು ಥಾಮಸ್ ಮತ್ತು ಜೆನನ್‌ಕಿಯವರುಗಳಿಗೆ ನೆರವಾದವು- ಆ ರೈತರು ಬರೆದಿದ್ದ ಏಳುನೂರಕ್ಕೂ ಹೆಚ್ಚು ಪತ್ರಗಳು. ಪತ್ರಗಳನ್ನು ಬರೆಯುವವರು ಮತ್ತು ಆ ಪತ್ರಗಳನ್ನು ಸ್ವೀಕರಿಸುವವರು ಇವರ ನಡುವೆ ಇರುವ ಸಂಬಂಧದ ಸ್ವರೂಪವನ್ನು ಆಧರಿಸಿ, ಪತ್ರಗಳ ಉಪಯುಕ್ತತೆಯನ್ನು ಅಳೆಯಲು ಸಾಧ್ಯ. ಪತ್ರಗಳು ಸಾಮಾನ್ಯವಾಗಿ ಬರಹಗಾರರ ವೈಯಕ್ತಿಕ ಅನುಭವಗಳು ಅಥವಾ ಅಭಿಪ್ರಾಯಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದ್ದರೂ ಸಮಕಾಲೀನ ಸಮಾಜ ಮತ್ತು ಸಂಸ್ಕೃತಿಗಳ ಬಗ್ಗೆ ಅವುಗಳು ನೀಡಬಹುದಾದಂಥ ಸುಳಿವುಗಳು ಅತ್ಯಮೂಲ್ಯ ಮಾಹಿತಿಮೂಲಗಳಾಗಬಹುದು ಎಂಬುದರಲ್ಲಂತೂ ಸಂದೇಹವಿಲ್ಲ.

ವಿವಿಧ ಸಂದರ್ಭಗಳಲ್ಲಿ ಬರೆದ ಪತ್ರಗಳನ್ನು ಈ 'ಸಂಕೇತಿ ಶತಮಾನದ ಪತ್ರಗಳು' ಎಂಬ ಪುಸ್ತಕವಾಗಿ ಹೊರತರುವಲ್ಲಿ ಡಾ॥ ಹರನ್ ಅವರ ಶ್ರಮ ಮತ್ತು ಶ್ರದ್ಧೆಗಳೆರಡೂ ಮೆಚ್ಚುಗೆಗೆ ಪಾತ್ರವಾಗುವಂಥವು. ಪುಸ್ತಕದ ಮೊದಲನೆಯ ಭಾಗದಲ್ಲಿ ನಾವು ಕಾಣುವ ಬಹುತೇಕ ಪತ್ರಗಳು ತೀರಾ Ordinary ಎನಿಸುವಂಥ ವಿಷಯಗಳನ್ನು ಕುರಿತು ಬರೆದಿರುವಂಥದ್ದು. ಆದರೆ ಸುಮಾರು 113 ವರ್ಷಗಳ ಕಾಲವ್ಯಾಪ್ತಿಯಲ್ಲಿ ಬರೆದಿರುವ ಈ ಪತ್ರಗಳಲ್ಲಿ ನಾವು ಇತಿಹಾಸ, ಸಮಾಜಶಾಸ್ತ್ರ , ಶಿಕ್ಷಣಶಾಸ್ತ್ರ , ಮಾನವಶಾಸ್ತ್ರ , ಸಾಹಿತ್ಯ-ಇವೇ ಮುಂತಾದ ಅಧ್ಯಯನ ಕ್ಷೇತ್ರಗಳಲ್ಲಿ ಸಂಶೋಧನೆಯಲ್ಲಿ ತೊಡಗಿರುವವರಿಗೆ ಆಸಕ್ತಿ ಹುಟ್ಟಿಸುವಂಥ ವಿಚಾರಗಳನ್ನು ಕಾಣಬಹುದು. ಅನೇಕ ಪತ್ರಗಳಲ್ಲಿ ಸಂಕೇತಿ ಎಂಬ ಜಾತಿ ಗುಂಪಿಗೆ ಸೇರಿದ ಜನರ ಪ್ರಸ್ತಾಪಗಳೇ ಹೆಚ್ಚಾಗಿ ಕಂಡುಬಂದರೂ, ಆಯಾ ಕಾಲಘಟ್ಟದ ಸಾಮಾಜಿಕ-ಆರ್ಥಿಕ ಸ್ಥಿತಿ-ಗತಿಗಳ ಬಗ್ಗೆ ಕೂಡ ಈ ಪತ್ರಗಳಲ್ಲಿ ಮಾಹಿತಿ ದೊರೆಯುತ್ತದೆ. ಪುಸ್ತಕದ ಮೊದಲನೆಯ ಭಾಗದಲ್ಲಿನ ಪತ್ರಗಳಲ್ಲಿ ಕಂಡುಬರುವ ವಿಷಯ ವ್ಯಾಪ್ತಿ ವಿಶಾಲವಾದುದು: ಉನ್ನತ ಶಿಕ್ಷಣ, ಆರ್ಥಿಕ ಮುಗ್ಗಟ್ಟು, ಮಹಿಳಾ ಶಿಕ್ಷಣ, ನಿರುದ್ಯೋಗ, ಹಳ್ಳಿಯಿಂದ ನಗರಗಳಿಗೆ ಬಂದವರ ಬವಣೆಗಳು, ಅನಾರೋಗ್ಯ, ಶಿಶುಜನನ, ಹಬ್ಬಗಳ ಆಚರಣೆಗಳು, ಪ್ಲೇಗ್‌ನಂಥ ಪಿಡುಗು ತರುತ್ತಿದ್ದ ಕ್ಲೇಶಗಳು, ಕೃಷಿ, ಕುಟುಂಬದ ಸದಸ್ಯರ ಆರೋಗ್ಯ-ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಕಾಳಜಿಗಳು, ಮಳೆ-ಬೆಳೆ, ಮದುವೆ, ಹೊರನಾಡಿನಲ್ಲಿರುವ ಸಂಕೇತಿಗಳು-ಹೀಗೆ ಇನ್ನೂ ಹತ್ತು ಹಲವಾರು ವಿಚಾರಗಳನ್ನು ಕುರಿತಂತೆ ಒಂದು ನೋಟ ಈ ಪತ್ರಗಳಲ್ಲಿ ದೊರೆಯುತ್ತದೆ.

ಭಾಗ ಒಂದರಲ್ಲಿ ಮುದ್ರಿತವಾಗಿರುವ ಎಲ್ಲ ಪತ್ರಗಳ ಬಗ್ಗೆಯೂ ವಿವರವಾಗಿ ಬರೆಯುವುದು ಕಾಲ ಹಾಗೂ ಸ್ಥಳದ ದೃಷ್ಟಿಯಿಂದ ಸಾಧ್ಯವಿಲ್ಲದೆ ಹೋದರೂ, ಸಮಾಜಶಾಸ್ತ್ರದ ವಿದ್ಯಾರ್ಥಿನಿಯಾಗಿ ನನಗೆ ವಿಶೇಷವೆನಿಸಿದ ಕೆಲ ವಿಚಾರಗಳನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡುತ್ತೇನೆ. 1931ರಲ್ಲಿ ಬರೆದ ಪತ್ರವೊಂದರಲ್ಲಿ , ಆ ಕಾಲದಲ್ಲಿಯೇ M.A., B.T. ಪದವಿಯನ್ನು ಪಡೆದ ಮಹಿಳೆಯೊಬ್ಬರ ಉದ್ಯೋಗದ ಹುಡುಕಾಟದ ಪ್ರಸ್ತಾಪವಿದೆ. ಮಹಿಳೆಯರು ಉನ್ನತ ಶಿಕ್ಷಣಕ್ಕೆ ಕಾಲಿಡುತ್ತಿರುವುದು ಇತ್ತೀಚೆಗೆ ಮಾತ್ರವೇನೋ ಎಂಬಂತೆ ಚಿತ್ರಿಸುವವರಿಗೆ, ಏಳು ದಶಕಗಳ ಹಿಂದೆಯೇ ಕಾಲೇಜು ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಿದ್ದ ಮಹಿಳೆಯೊಬ್ಬರಿದ್ದರು ಎನ್ನುವುದು ಮುಖ್ಯವಾದ ವಿಚಾರ. ಭಾರತದಲ್ಲಿ ವಿದ್ಯಾವಂತರ ನಿರುದ್ಯೋಗದ ಸಮಸ್ಯೆ 1930ರ ದಶಕದಲ್ಲೇ ಉದ್ಭವವಾಗಿತ್ತು ಎನ್ನುವ ವಿಚಾರ ಕೂಡ ಗಮನಾರ್ಹ. ಆ ಕಾಲದಲ್ಲಿ , ವಿದ್ಯೆಯಿದ್ದುಬಿಟ್ಟರೆ ಸಾಕು, ಕೆಲಸ ಬೇಡದಿದ್ದರೂ ದೊರೆಯುತ್ತಿತ್ತು ಎನ್ನುವವರಿಗೆ ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಲು ಈ ವಿಷಯವನ್ನು ಕುರಿತಂತೆ ಬರೆದಿರುವ ಪತ್ರಗಳು ನೆರವಾಗುತ್ತವೆ.

ವಿದ್ಯೆಯನ್ನು ಅರಸಿ ಊರಿನಿಂದ ದೂರದ ಪಟ್ಟಣ ಅಥವ ನಗರಗಳಿಗೆ ವಲಸೆ ಬರುವಂಥ ಪ್ರಕ್ರಿಯೆ ಭಾರತೀಯ ಸಮಾಜದಲ್ಲಿ ಬಹು ಹಿಂದಿನಿಂದಲೂ ಜಾರಿಯಲ್ಲಿದೆ. ಆದರೆ ಈಗಿರುವ ಅನುಕೂಲಗಳಲ್ಲಿ $^1/_{10}$ ಭಾಗವೂ ಇಲ್ಲದಿದ್ದ ಕಾಲದಲ್ಲಿ ವಿದ್ಯಾಕಾಂಕ್ಷಿಗಳು ಪಟ್ಟ ಕಷ್ಟಗಳು, ಅನುಭವಿಸಿದ ಬವಣೆಗಳು ಇಂದಿನ ಯುವಜನಾಂಗಕ್ಕೆ ಒಂದು revelation. ಕೂತೆಡೆ ಜೀವನ ತಂದುಕೊಡಬಹುದಾದ ಎಲ್ಲ ಸೌಲಭ್ಯಗಳನ್ನೂ ಅನುಭವಿಸುವ ಹಣವಂತ ಯುವಕ–ಯುವತಿಯರನೇಕರಿಗೆ, ತಮ್ಮನ್ನು ಈ ಸ್ಥಿತಿಗೆ ತರಬೇಕಾದರೆ, ತಮ್ಮ ಹಿರಿಯರು ಎಂತಹ ಪಾಡು ಪಟ್ಟಿದ್ದಾರೆ ಎಂದು ತಿಳಿದುಕೊಳ್ಳಲು ಮೊದಲನೆಯ ಭಾಗದಲ್ಲಿರುವ ಅನೇಕ ಪತ್ರಗಳು eye-openers. ಹಾಗೆಯೇ ವಾರಾನ್ನದ ಪದ್ಧತಿಯನ್ನು ಕುರಿತ ಮನಮುಟ್ಟುವ ಚಿತ್ರಣವೂ ನಮಗಿಲ್ಲಿ ದೊರೆಯುತ್ತದೆ. ವಿದ್ಯೆಯನ್ನು ಕಲಿಯಲು ಅವಕಾಶ ದೊರೆತರೂ ಜೀವನಾವಶ್ಯಕತೆಗಳನ್ನು ಪೂರೈಸಿಕೊಳ್ಳಲಾಗದಿದ್ದರೆ, ಎಂತಹ ಪಾಡನ್ನು ಪಡಬೇಕಾಗುತ್ತದೆ ಎಂಬ ಬಹುಮುಖ್ಯವಾದ ಅಂಶವನ್ನು ಹತ್ತು ಹಲವಾರು ಪತ್ರಗಳು ಎತ್ತಿ ಹಿಡಿಯುತ್ತವೆ. ಇಂದಿಗೂ ಕೂಡ ಉಚಿತ ಶಿಕ್ಷಣ, ಉಚಿತ ಸಮವಸ್ತ್ರ , ಉಚಿತ ಪಠ್ಯಪುಸ್ತಕಗಳನ್ನು ಒದಗಿಸಿಬಿಟ್ಟರೆ ಬಡವರ ವಿದ್ಯೆಯ ಸಮಸ್ಯೆ ಬಗೆಹರಿದುಬಿಡುತ್ತದೆ ಎಂಬ ಅಭಿಪ್ರಾಯವೊಂದಿದೆ. ಆದರೆ ಬದುಕಿಗೆ ಆಧಾರವಾದ ಆಹಾರಕ್ಕಾಗಿಯೇ ಅಹರ್ನಿಶಿ ಸಂಘರ್ಷ ನಡೆಸಬೇಕಾದಾಗ, ಕಲಿಯುವ ಆಸೆ ಕಮರಿಹೋಗಬಹುದು ಎನ್ನುವ ಕಟುಸತ್ಯ ಅಂದೂ ಇತ್ತು, ಇಂದಿಗೂ ಇದೆ.

ಹಬ್ಬ, ಮದುವೆ, ಮುಂಜಿ ಮುಂತಾದ ಸಮಾರಂಭಗಳಲ್ಲಿ ಭಾಗವಹಿಸುವುದು ಅಥವಾ ಭಾಗವಹಿಸಲಾರದಿರುವುದು–ಇವುಗಳ ಬಗ್ಗೆ ಅನೇಕ ಪತ್ರಗಳಲ್ಲಿ ಪ್ರಸ್ತಾಪವಿದೆ. ಈ ವಿಷಯವನ್ನು ಕುರಿತಂತೆ ನನ್ನ ವೈಯಕ್ತಿಕ ಅಭಿಪ್ರಾಯವೆಂದರೆ ಭಾಗವಹಿಸುವಿಕೆ ಅಥವಾ ಭಾಗವಹಿಸಲಾಗದಿರುವುದು–ಅವರವರ ಸಮಯ–ಸಂದರ್ಭ, ಅನುಕೂಲ–ಅನಾನುಕೂಲಗಳಿಗೆ ಬಿಟ್ಟುದಾದ್ದರಿಂದ, ಅದೊಂದು ವೈಭವೀಕರಿಸಬೇಕಾದ ವಿಷಯವಂತೂ ಖಂಡಿತ ಅಲ್ಲ. ಇಂದಿನ ಯಾಂತ್ರಿಕ ಮತ್ತು ವೇಗವಾಗಿ ಚಲಿಸುವ ಬದುಕಿನಲ್ಲಿ , ತಮ್ಮ ವೃತ್ತಿ ಹಾಗೂ ಇತರ ಜವಾಬ್ದಾರಿಗಳಲ್ಲಿ ಮಗ್ನರಾಗಿರುವ ಅನೇಕರು 'ನನ್ನನ್ನು ಎಲ್ಲಿಯೂ ಕರೆಯೋದು ಬೇಡ, ನನ್ನ ಪಾಡಿಗೆ ನಾನಿರಲು ಬಿಟ್ಟರೆ ಸಾಕು' ಎನ್ನುವಂಥ ಪರಿಸ್ಥಿತಿಯನ್ನು ತಲುಪಿದ್ದಾರೆ. ಇದಕ್ಕೆ ವಿರುದ್ಧವಾಗಿ ಕರೆದ ಕಡೆಗಳಿಗೆ ಬಹು ಆಸಕ್ತಿಯಿಂದ ಹೋಗುವವರು ಇಂದಿಗೂ ಇದ್ದಾರೆ. ವಾಣಿಜ್ಯೀಕೃತ ಮನರಂಜನೆಯ ಧಾಳಿಗೆ ಸಿಲುಕಿರುವ ನಮ್ಮ ಸಮಾಜದಲ್ಲಿ , ಅರ್ಥಪೂರ್ಣ ಮಾನವ ಸಂಬಂಧಗಳೇ ಕಡಿಮೆಯಾಗುತ್ತಿವೆ. ದಿನವಿಡೀ ಧಾಳಿ ಮಾಡುವ ಧಾರಾವಾಹಿಗಳಿಗೆ ದಾಸರಾದ ಅನೇಕರಿಗೆ ಜಗತ್ತಿನ ಬೇರ‍್ಯಾವ ಗೊಡವೆಯೇ ಬೇಡ ! ಅಂಥವರು ತಮ್ಮ ಮನೆಗೆ ಬಂದವರನ್ನು 'ಯಾಕಾದರೂ ಹೋದೆವಪ್ಪಾ' ಎಂದೆನಿಸುವಷ್ಟು ಮಟ್ಟಿಗೆ ಅಲಕ್ಷಿಸುವಂಥ ಸ್ಥಿತಿ ಇಂದು ಬಂದುಬಿಟ್ಟಿದೆ. ಆದರೆ ಜೀವನದಲ್ಲಿ ಬೇರ‍್ಯಾವ ಮನರಂಜನೆಗೂ ಅವಕಾಶಗಳಿಲ್ಲದಿದ್ದಾಗ, ಯಾವುದಾದರೂ ಒಂದು ನೆಪದಲ್ಲಿ ಒಬ್ಬರೊಡನೊಬ್ಬರು ಸಂಪರ್ಕ ಬೆಳೆಸುವುದು ಎಷ್ಟು ಮುಖ್ಯವಾಗಿತ್ತು ಎನ್ನುವುದನ್ನು ನಮಗೆ ಇಲ್ಲಿರುವ ಅನೇಕ ಪತ್ರಗಳು ತಿಳಿಸುತ್ತವೆ. ಸಮಾರಂಭದಲ್ಲಿ ಭಾಗವಹಿಸುವುದು ಮಾನವಸಂಬಂಧಗಳ ಒಂದು ಮುಖವಷ್ಟೆ; ಅದರ ಮತ್ತೊಂದು ಮುಖವೆಂದರೆ, ಸಹಕಾರ, ಸಹಬಾಳ್ವೆ, ಸುಖ–ದುಃಖಗಳ ಹಂಚಿಕೆ, ಸಾಮಾಜಿಕ ಕಳಕಳಿಯನ್ನು ಬೆಳೆಸಿಕೊಳ್ಳುವುದು–ಇವೇ ಮುಂತಾದ ಸಾಮಾಜಿಕ ಮೌಲ್ಯಗಳನ್ನು ಪ್ರತಿಪಾದಿಸುವುದು. ಒಟ್ಟಿನಲ್ಲಿ ಹೇಳುವುದಾದರೆ, ಪತ್ರಗಳ ಒಳಹೊಕ್ಕು ಅವುಗಳಲ್ಲಿ ಹೊರನೋಟಕ್ಕೆ

ಕಾಣುವ ವಿಚಾರಗಳ ಹಿಂದಿರುವ ಭಾವನೆ–ಆಚರಣೆಗಳನ್ನು ಅರ್ಥೈಸುವ ಸೂಕ್ಷ್ಮ ಸಂಶೋಧನಾ ಮನಸ್ಸನ್ನು ಹೊಂದಿರುವವರಿಗೆ ಆಸಕ್ತಿಯನ್ನು ಕೆರಳಿಸುವಂಥ, ಚಿಂತನೆಗೆ ಆಹಾರವಾಗುವಂಥ ಮಾಹಿತಿ ಮೊದಲನೆಯ ಭಾಗದ ಪತ್ರಗಳಲ್ಲಿದೆ ಎಂಬುದು ನನ್ನ ಅಭಿಪ್ರಾಯ.

ಎರಡನೆಯ ಭಾಗದಲ್ಲಿ ಮುದ್ರಿತವಾಗಿರುವ ಪ್ರೊ॥ ಶ್ರೀಕಂಠಕುಮಾರಸ್ವಾಮಿಗಳ ಪತ್ರಗಳಲ್ಲಿ ನಾನು ಕಂಡದ್ದು ಸಂಪ್ರದಾಯ ಹಾಗೂ ಪ್ರಗತಿಪರ ನಿಲುವುಗಳ ಒಂದು ವಿಶಿಷ್ಟ ಮಿಲನ. ಸ್ವತಃ ತಂತ್ರಜ್ಞಾನದ ಪ್ರಾಧ್ಯಾಪಕರಾಗಿ, ತಾಂತ್ರಿಕ ಶಿಕ್ಷಣದ ಮುಂಚೂಣಿಯಲ್ಲಿರುವ IIT ಸಂಸ್ಥೆಯ 'ತಂತ್ರಜ್ಞಾನ ಸಂಸ್ಕೃತಿ'ಯ ಪರಿಸರದಲ್ಲಿದ್ದೂ, ವಿಷಯಗಳನ್ನು ವಿವರಿಸಿ, ವಿಮರ್ಶಿಸಿ, ವಿಶ್ಲೇಷಿಸುವ ಅವರ ಪತ್ರಬರಹದ ವೈಖರಿ, ಇಂದಿನ businesslike ಪತ್ರಗಳ Context ನಲ್ಲಿ ನಿಜಕ್ಕೂ ಅಚ್ಚರಿಯನ್ನು ಮೂಡಿಸುವಂತಹುದು. ವ್ಯಕ್ತಿಯು ವಿವಿಧ Life cycle Rituals ಗಳ ಆಚರಣೆಯ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳು–ಕ್ರಿಯಾವಿಧಿಗಳನ್ನು ಕುರಿತು ಪ್ರೊ॥ ಶ್ರೀಕಂಠಕುಮಾರಸ್ವಾಮಿಗಳು ನಿಶ್ಚಿತವಾದ ಅಭಿಪ್ರಾಯಗಳನ್ನು ಹೊಂದಿದ್ದಾರೆ ಎನ್ನುವುದು ಅವರು ಬರೆದಿರುವ ಹಲವಾರು ಪತ್ರಗಳಲ್ಲಿ ಕಂಡುಬರುತ್ತದೆ. ಅವರು ತಮ್ಮ ಅನೇಕ ಪತ್ರಗಳಲ್ಲಿ ದೀರ್ಘವಾಗಿ ವಿಶ್ಲೇಷಿಸಿರುವ ಪ್ರಗತಿಪರ ವಿಚಾರಗಳು ಮನಸ್ಸಿಗೆ ತುಂಬಾ ಹಿಡಿಸಿವೆ.

ಎರಡನೇ ಭಾಗದಲ್ಲಿರುವ ಪತ್ರಗಳು ಭಾರತೀಯ ಸಮಾಜವನ್ನು ಧಾರ್ಮಿಕ–ಐತಿಹಾಸಿಕ ದೃಷ್ಟಿಕೋನಗಳಿಂದ ವಿಮರ್ಶಾತ್ಮಕ ವಿಶ್ಲೇಷಣೆಗೆ ಒಳಪಡಿಸುವವರಿಗೆ ಅತ್ಯಂತ revealing ಮಾಹಿತಿಯ ಮೂಲಗಳಾಗಿವೆ ಎಂದು ಹೇಳುವುದು ಅತಿಶಯೋಕ್ತಿಯಲ್ಲ. ಸಂಪ್ರದಾಯವನ್ನು 'ಅನುಸರಿಸು'ವುದಕ್ಕೆ ಮೊದಲು 'ಅನ್ವೇಷಿಸು'ವ ಮನಸ್ಸಿರುವ ಅಧ್ಯಯನಕಾರರಿಗೆ, ಸಂಶೋಧಕರಿಗೆ ಮತ್ತು ಆಸಕ್ತರಿಗೆ ಪ್ರೊ॥ ಶ್ರೀಕಂಠಕುಮಾರ ಸ್ವಾಮಿಯವರ ಪತ್ರಗಳು ಬಹು ಪ್ರಸ್ತುತ. ಕುಟುಂಬ ಜೀವನವೇ ಆಗಲಿ, ಮಹಿಳೆಯರ ಸ್ಥಿತಿ–ಗತಿಗಳೇ ಆಗಲಿ, ಶಾಸ್ತ್ರ–ಸಂಪ್ರದಾಯಗಳನ್ನೇ ಆಗಲಿ, ತೆರೆದ ಮನಸ್ಸಿನಿಂದ, ಒಂದು holistic perspectiveನಿಂದ ನೋಡುವುದೇ ಔಚಿತ್ಯಪೂರ್ಣ ಸಂಶೋಧನಾ ಬಗೆ. ನಾವೆಂದುಕೊಂಡದ್ದೇ ಸರಿ ಎಂಬ ಧೋರಣೆಯಿಂದ ಸಮಾಜವನ್ನು ನೋಡುವುದನ್ನು ಬಿಟ್ಟು, ಭಿನ್ನ ಭಿನ್ನ ಆಲೋಚನಾ ಲಹರಿಗಳನ್ನು ಅಧ್ಯಯನ ಮಾಡಿ, ಅರ್ಥೈಸುವವರೇ ನಿಜವಾದ ಸಂಶೋಧಕರು. ಅಂತಹ ಸಂಶೋಧಕರಿಗೆ ಸಾಕಷ್ಟು ಆಹಾರ ಎರಡನೆಯ ಭಾಗದ ಪತ್ರಗಳಲ್ಲಿದೆ.

ಸುಮಾರು 113 ವರ್ಷಗಳ ಕಾಲವ್ಯಾಪ್ತಿಯಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ, ಬೇರೆ ಬೇರೆಯವರಿಂದ ಬರೆಯಲ್ಪಟ್ಟ ಪತ್ರಗಳನ್ನು ಸಂಗ್ರಹಿಸಿ, ಅವುಗಳನ್ನು ಪುಸ್ತಕರೂಪದಲ್ಲಿ ಹೊರತರುವ ಪ್ರಯತ್ನ ಒಂದು ಸಾಹಸವೇ ಸರಿ. ಇಂದಿನ hightech ಸಂಶೋಧನಾ ಪರಿಸರದಲ್ಲಿ , ಓದುವ ಸಂಸ್ಕೃತಿಯೇ ನಶಿಸಿಹೋಗುತ್ತಿರುವಾಗ, ಪತ್ರಗಳನ್ನು ಓದುವ ತಾಳ್ಮೆ ತಾನೇ ಯಾರಿಗಿದೆ ಎನ್ನಬಹುದು ನಾವು. ಆದರೆ ವಿಷಯಮೂಲಗಳಾಗಿ ಅವುಗಳ ಉಪಯುಕ್ತತೆಯನ್ನು ತಳ್ಳಿಹಾಕುವಂತೆಯೂ ಇಲ್ಲ. ಪತ್ರಗಳಲ್ಲಿ ವ್ಯಕ್ತವಾಗಿರುವ ವಿಷಯಗಳನ್ನೆಲ್ಲ , ವಿಮರ್ಶಿಸದೆ, ಅವುಗಳ ಸಮಕಾಲೀನ ಸಂದರ್ಭಗಳನ್ನು ಗಣನೆಗೆ ತೆಗೆದುಕೊಳ್ಳದೆ, generalizationsಗಾಗಿ ಬಳಸಬಾರದು ಎಂಬುದು ಸಮಾಜದ ಅಧ್ಯಯನಕಾರರು ಕಡ್ಡಾಯವಾಗಿ ಗಮನಿಸಲೇಬೇಕಾದ ಒಂದು ಸಂಗತಿ. ಆದರೆ ಅವುಗಳ 'data base value' ಮಾತ್ರ ಇಂದಿಗೂ ಪ್ರಸ್ತುತ.

ಪತ್ರಗಳು ಕಾಲಾನುಕ್ರಮ ಹಾಗೂ ವಿಷಯಾನುಕ್ರಮದಲ್ಲಿ ಜೋಡಣೆಯಾಗುವುದೆಂದರೆ, ಸಂಶೋಧಕರಿಗೆ 'ಸುಸೂತ್ರ ಸಂಶೋಧನಾ ಸಾಧನ'ವಾದಂತೆ. ಡಾ॥ ಹರನ್ ಅವರ ಈ ಪ್ರಯತ್ನಕ್ಕೆ ಸಾರ್ಥಕ ಸ್ಪಂದನ ದೊರೆಯಲಿ ಎಂಬುದು ನನ್ನ ಹಾರೈಕೆ.

* * *

ಪ್ರಾಚ್ಯ ವಿದ್ಯಾ ಸಂಶೋಧನಾಲಯ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ವಿದ್ವಾನ್
ಡಾ। ಟಿ.ವಿ. ಸತ್ಯನಾರಾಯಣ
ಹಿರಿಯ ಸಂಶೋಧಕರು

ಸಮುದಾಯ ಅಧ್ಯಯನ ಕೇಂದ್ರದವರು ಪ್ರಕಟಿಸುತ್ತಿರುವ "ಶತಮಾನದ ಪತ್ರಗಳು" ಎಂಬ ಈ ಕೃತಿ ಅಪೂರ್ವವೂ, ಅನುಪಮವೂ ಆಗಿದೆ. ಕುಶಲಸಮಾಚಾರಗಳನ್ನು ತಿಳಿಯಲು ಬರೆಯುತ್ತಿದ್ದ ಪತ್ರಗಳಲ್ಲೇ ಜೀವನದ ಎಷ್ಟೊಂದು ಸಮಸ್ಯೆಗಳನ್ನು, ಆಗುಹೋಗುಗಳನ್ನು, ಪ್ರಶ್ನಿಸಿಕೊಂಡು ಅದಕ್ಕೆ ಪರಿಹಾರವನ್ನೂ ಪಡೆದುಕೊಂಡು, ಜೀವಿಸುತ್ತಿದ್ದ ರೀತಿಯನ್ನು ಕಂಡಾಗ, ಓದಿದಾಗ ನಿಜಕ್ಕೂ ಆಶ್ಚರ್ಯವಾಗುತ್ತದೆ. ಈ ಕೃತಿ ನಮ್ಮ ಜೀವನದ ಸಮಸ್ತ ದರ್ಶನವನ್ನು ಮಾಡಿಕೊಡುವುದರಲ್ಲಿ ಸಮರ್ಥವಾಗಿದೆ. ಸಂಸಾರದ ದ್ವಂದ್ವಗಳನ್ನು ಬಹುವಾಗಿ ಇಲ್ಲಿ ನೋಡಬಹುದು, ತಿಳಿಯಬಹುದು. ಜೊತೆಗೆ ಒಂದುಬಗೆಯ ಜೀವನದಲ್ಲಿ ಬದುಕುವಂತಹ ಕಲೆಯನ್ನು, ಶಿಕ್ಷಣವನ್ನು ಇದರಿಂದ ನಾವು ಪಡೆಯಬಹುದು.

ಇಂದಿನ ಎಷ್ಟೋ ಧಾರ್ಮಿಕ ಆಚರಣೆಗಳು, ಶಾಸ್ತ್ರೀಯ ಕರ್ಮಗಳು, ಸಂಸ್ಕಾರವಿಶೇಷಗಳು ಹಿಂದಿನ ಧರ್ಮಪ್ರವರ್ತಕರಾದ ಋಷಿಗಳು ಹೇಳಿದಂತೆ ನಡೆಯುತ್ತಲೇ ಇಲ್ಲ. ನೂರಕ್ಕೆ ತೊಂಬತ್ತು ಭಾಗ ಶಾಸ್ತ್ರಕ್ಕೆ ವಿರುದ್ಧವಾಗಿಯೇ ನಡೆಯುತ್ತಿವೆ. ಆದರೂ ಆಗುವ ತಪ್ಪುಗಳನ್ನು, ಕ್ಲೇಶಗಳನ್ನು ಶಾಸ್ತ್ರಕಾರರ ತಲೆಗೆ ಕಟ್ಟುತ್ತೇವೆ. ಇದಕ್ಕೆ ಕಾರಣ ಈ ಕ್ಷೇತ್ರದಲ್ಲಿ ಆಳವಾದ ಹಾಗೂ ನಿಖರವಾದ ಜ್ಞಾನವಿಲ್ಲದಿರುವುದು. ಇದರಲ್ಲಿ ಅಪಾರ ಅನುಭವವುಳ್ಳವರು ಇದರ ಬಗ್ಗೆ ಸೂಕ್ತವಾಗಿ ಸಹೃದಯತೆಯಿಂದ ತಿಳಿಸಿಕೊಡದಿರುವುದೂ ಒಂದು ಕೊರತೆ. ಹೀಗಾಗಿ ಜನರಿಗೆ ಈ ಆಚರಣೆಗಳ ಹಿನ್ನೆಲೆಯೇ ತಿಳಿಯದಿರುವಾಗ ವಾಸ್ತವವಾಗಿ ಅದರಲ್ಲಿ ಉಪೇಕ್ಷೆ ಬರುವುದು ಸಹಜ. ಅದನ್ನು ದೂರ ಮಾಡಿ, ಇವುಗಳ ಅರ್ಥ ಮಹತ್ತ್ವಗಳು ಮತ್ತು ನಿಜವಾಗಿ ಏಕೆ ಇದನ್ನು ಆಚರಿಸುತ್ತಿದ್ದರು ಎನ್ನುವ ಸತ್ಯವನ್ನು ತಿಳಿಸಿಕೊಡಬೇಕು.

ನಮ್ಮ ಸಮಾಜದಲ್ಲಿ ಎರಡು ದಾರಿಗಳು ಈಗ ಹಸುವಿನ ಕೊಂಬುಗಳಂತೆ ಒಂದಕ್ಕೊಂದು ಸೇರದೆ, ಭಿನ್ನಭಿನ್ನವಾಗಿ ಹೋಗುತ್ತಿವೆ. ಇದರ ಮಧ್ಯದಲ್ಲಿರುವವರು ಅತಂತ್ರರಾಗಿದ್ದಾರೆ. ಒಂದು, ವೇದಾದಿಜ್ಞಾನವನ್ನು ಪಡೆದ ಅನೇಕ ವೈದಿಕರು, ಶಾಸ್ತ್ರವೇತ್ತರು ಅವರ ಮನೆಯವರು ಹಿಂದಿನಿಂದಲೂ ಅತಿಯಾದ ಮಡಿವಂತಿಕೆಯಲ್ಲಿ ಮುಳುಗಿ ಬೇರೆಯವರೆಲ್ಲ ಅಪ್ರಯೋಜಕರು ಎಂದು ಭಾವಿಸಿದುದು. ಎರಡನೆಯದೆಂದರೆ, ಕೆಲವರು ಎಲ್ಲ ಆಚಾರ-ವಿಚಾರಗಳನ್ನೂ ಮಡಿವಂತಿಕೆಗಳನ್ನೂ ಬಿಟ್ಟು, ಪರಮ ನಾಸ್ತಿಕರಾಗಿ ನಮ್ಮ ಎಲ್ಲ ಸಂಪ್ರದಾಯ ಪರಂಪರೆಗಳನ್ನು ತೆಗಳುವುದು. ಇವರಿಬ್ಬರ ಮಧ್ಯೆ ಅಲ್ಪಸ್ವಲ್ಪ ಆಚಾರವಿಚಾರಗಳನ್ನು ತಿಳಿದು ಶ್ರದ್ಧಾಭಕ್ತಿಗಳಿಂದ ಕೆಲವಾರು ಕಾರ್ಯಗಳನ್ನು ಆಚರಿಸಬೇಕೆನ್ನುವವರು; ಇಂತಹ ಮಧ್ಯಮಸ್ಥಿತಿಯವರಿಗೆ ತುಂಬಾ ಕಷ್ಟ. ವೇದಗಳ ಬಗ್ಗೆ, ಯಜ್ಞಯಾಗಾದಿಗಳ ಬಗ್ಗೆ, ಧಾರ್ಮಿಕ ಆಚರಣಾದಿಗಳ ಬಗ್ಗೆ ತಿಳಿದುಕೊಳ್ಳಬೇಕೆಂಬ ಕುತೂಹಲದಿಂದ ಪ್ರಶ್ನೆ ಕೇಳಿದರೂ ಅದನ್ನು ತಪ್ಪೆಂದು ಭಾವಿಸುವ, ಅಪರಾಧವೆಂದು ತೀರ್ಮಾನಿಸುವ, ಇವನಿಗೇನು ಗೊತ್ತು? ಇವನಿಗೇನು ಅರ್ಹತೆ ಇದೆ ಎಂದು ಹೀಯಾಳಿಸುವ ಸಂಪ್ರದಾಯವಾದಿಗಳೇ ಹೆಚ್ಚು. ತಿಳಿದ ವಿಜ್ಞಾನಿಗಳು, ವಿದ್ವಜ್ಜನರು ಒಂದೆಡೆ ಸೇರಿ ಇವುಗಳ ಬಗ್ಗೆ ವಿಚಾರ ವಿನಿಮಯ ನಡೆಸಿ, ಸೂಕ್ತ ಮಾರ್ಪಾಡುಗಳೊಂದಿಗೆ, ಇವುಗಳ ಹೊಸತನವನ್ನು ರೂಪಿಸಿಕೊಡಬೇಕು.

ಇಂತಹ ಒಂದು ಮಹತ್ತರವಾದ ಕೆಲಸವನ್ನು ಪ್ರೊ। ಶ್ರೀಕಂಠಕುಮಾರಸ್ವಾಮಿಯವರು ಅನೇಕ ವರ್ಷಗಳ ಹಿಂದೆಯೇ ದಿಟ್ಟತನದಿಂದ ಮಾಡಿದ್ದಾರೆ. ಇದು ಪತ್ರೋತ್ತರ ಶಿಕ್ಷಣ. ನಮಗೆ ಇದು ಉಪನಿಷತ್ತುಗಳ ಪರಂಪರೆಯನ್ನು ಜ್ಞಾಪಿಸುತ್ತದೆ. ಉಪನಿಷತ್ತುಗಳಲ್ಲೂ ಗುರುವು ಶಿಷ್ಯನ ಪ್ರಶ್ನೆಗಳಿಗೆ ಉತ್ತರಿಸುವುದು, ತಂದೆಯು ಮಗನ ಸಂದೇಹಗಳನ್ನು ಪರಿಹರಿಸುವುದು, ಹೀಗೆ ಸಂವಾದರೂಪದಲ್ಲಿ ಬಂದಿದೆ.

ನಾವಿಂದು ಆಚರಿಸುತ್ತಿರುವ ಸಂಸ್ಕಾರಗಳಲ್ಲಿ ಎಷ್ಟೋ ಕ್ರಿಯೆಗಳು ಅರ್ಥವನ್ನು ಕಳೆದುಕೊಂಡಿವೆ. ಬೇಕಿಲ್ಲವೇನೋ, ಆದರೂ ಮಾಡುತ್ತಿದ್ದೇವೆ. ವಧೂವರರನ್ನು ನೋಡುವ ವಿಧಾನ : ಈಗ ಮೊದಲೇ ಗಂಡುಹೆಣ್ಣುಗಳು

ನೋಡುತ್ತಾರೆ, ಒಪ್ಪುತ್ತಾರೆ. ನಂತರ ಮದುವೆ. ಆದರೂ ಮದುವೆಯಲ್ಲಿ ಅಂತರಪಟವನ್ನು ಹಿಡಿಯುವುದು, ವಯಸ್ಸಾದ ಹೆಣ್ಣಿನ ತಂದೆ-ತಾಯಿಗಳು ವರನ ಕಾಲು ತೊಳೆದು, ಆ ನೀರನ್ನು ತಲೆಯ ಮೇಲೆ ಪ್ರೋಕ್ಷಿಸಿಕೊಳ್ಳುವುದು ಖಂಡಿತಾ ಸರಿಯಲ್ಲ. ಕಾಶೀಯಾತ್ರೆಯ ಭರಾಟೆ ಏಕೋ ತಿಳಿಯದು. ಆ ಕಾಲದಲ್ಲಿ ವೇದಾಧ್ಯಯನಕ್ಕಾಗಿ, ಶಾಸ್ತ್ರವಿದ್ಯಾಭ್ಯಾಸಕ್ಕಾಗಿ ಕಾಶಿಗೆ ಹೋಗುತ್ತಿದ್ದರು. ಕಷ್ಟಪಟ್ಟು ಓದುತ್ತಿದ್ದರು. ವಿದ್ಯೆ ಪರಿಪೂರ್ಣನಾದವನನ್ನು ದೇವಸಮಾನನೆಂದು ಗೌರವಿಸಿ ಕರೆತಂದು, ಮದುವೆ ಮಾಡುತ್ತಿದ್ದರು. ಅವನು ಐಹಿಕ ಸುಖಗಳನ್ನು ತ್ಯಜಿಸಿದ್ದನೆಂದು ತಿಳಿದು, ಈಗ ಭೋಗಭಾಗ್ಯಗಳನ್ನು ಅನುಭವಿಸಲೆಂದು, ಅಲಂಕಾರಸಾಮಗ್ರಿಗಳು, ವೇಷಭೂಷಣಗಳು, ಬಳುವಳಿಗಳು ಎಲ್ಲವನ್ನೂ ಕೊಡುತ್ತಿದ್ದರು. ಆದರೆ ಇಂದು ಹಾಗಿದೆಯೇ? ಇಲ್ಲ. ಆದರೂ ಅದೇ ಕಂದಾಚಾರ. ಇದು ಏಕೆ? ಇಂದಿನ ರೀತಿನೀತಿಗೆ ಅನುಗುಣವಾಗಿ ಗೌರವಿಸಿದರೆ ಸಾಲದೆ?

ಚೌಲಸಂಸ್ಕಾರದಲ್ಲಿ ಮಗುವಿನ ಕೂದಲನ್ನು ಕತ್ತರಿಸುವುದು ಆರೋಗ್ಯದ ದೃಷ್ಟಿಯಿಂದ, ಚೆನ್ನಾಗಿ ಕಾಣಲೆಂದು. ಇದಕ್ಕೆ ಚರಕ-ಸುಶ್ರುತ ಸಂಹಿತೆಗಳಲ್ಲಿ ಆಧಾರವಿದೆ. ಹೆಣ್ಣುಮಕ್ಕಳು-ಗಂಡು ಮಕ್ಕಳು ಇಬ್ಬರಿಗೂ ಕೂದಲನ್ನು ಕತ್ತರಿಸಬೇಕು. ಇದರಿಂದ ಮುಖ ಅಂದವಾಗಿ ಕಾಣುತ್ತದೆ. ತಲೆಯು ಹಗುರವಾಗುತ್ತದೆ. ಇದು ಹಿನ್ನೆಲೆ. ಆದರೆ ಹೆಣ್ಣುಮಗುವಿಗೆ ತಲೆಗೂದಲನ್ನು ಕತ್ತರಿಸಿದರೆ ಅದು ಬಹು ದೊಡ್ಡ ಅಪರಾಧ. ಹಿಂದಿನ ಕಾಲದಲ್ಲಿ ; ಇದು ಸರಿಯಲ್ಲ. ಉಪನಯನದಲ್ಲಿ ಶಿಷ್ಯನು ಗುರುವಿನ ಬಳಿಗೆ ವಿದ್ಯಾಭ್ಯಾಸಕ್ಕೆಂದು ಹೋಗುತ್ತಿದ್ದುದು ಹಿಂದಿನ ಆಚರಣೆ. ಜೀವನದ ಕಷ್ಟ-ಸುಖಗಳ ಅನುಭವವಾಗಲೆಂದು ಗುರುವು ಅವನನ್ನು ಎಲ್ಲ ಕೆಲಸ ಕಾರ್ಯಗಳಲ್ಲಿ ತೊಡಗಿಸುತ್ತಿದ್ದ. ಕಾಡಿನಲ್ಲೇ ಜೀವಿಸಬೇಕಾಗಿತ್ತು. ಅಲ್ಲಿರುವ ಆಹಾರ ಸಾಮಗ್ರಿಗಳು, ವೇಷಭೂಷಣಗಳನ್ನೇ ಉಪಯೋಗಿಸಬೇಕಾಗಿತ್ತು. ಇಂದಿನಷ್ಟು ಪ್ರಪಂಚದ ನಾಗರಿಕತೆ, ಆವಶ್ಯಕತೆ ಹೆಚ್ಚಿರಲಿಲ್ಲ. ಹೀಗಾಗಿ ಆ ಕಾಲಕ್ಕೆ ತಕ್ಕಂತೆ ಆಚರಣೆ ನಡೆದುಬಂದಿದೆ. ದೇಹದ ರಕ್ಷಣೆಗಾಗಿ ನಾರುಬಟ್ಟೆ ಉಡುತ್ತಿದ್ದರು. ಪ್ರಕೃತಿಯಲ್ಲಿರುವ ಹುಲ್ಲುಗಳನ್ನೇ ಹೆಣೆದು ಉಡುದಾರ ಮಾಡಿಕೊಂಡರು. ಕಾಡಿನ ಹಿಂಸ್ರಜಂತುಗಳಿಂದ, ಸರೀಸೃಪಾದಿಗಳಿಂದ, ದುಷ್ಟರಿಂದ ರಕ್ಷಣೆಗಾಗಿ ದಂಡವನ್ನು ಹಿಡಿದರು, ಹೊಟ್ಟೆಹೊರೆಯಲು ಭಿಕ್ಷೆ ಬೇಡಿದರು. ಆದರೆ ಇಂದು ಅದೇ ಕ್ರಮ ಆಗಬೇಕಾಗಿಲ್ಲ. ಇಂದಿನ ರೀತಿನೀತಿಗೆ ತಕ್ಕಂತೆ ನಾವು ಆಚರಿಸಿಕೊಳ್ಳಬಹುದು.

ಗ್ರಹಣಕಾಲದಲ್ಲಿ ಊಟ ಮಾಡಬಾರದು ಇತ್ಯಾದಿಗಳಿಗೂ ವೈಜ್ಞಾನಿಕ ಹಿನ್ನೆಲೆಯಿದೆ. ಗ್ರಹಣಕಾಲದಲ್ಲಿ ಆಯಾಯಾ ಗ್ರಹಗಳ ಪ್ರಭಾವ ಜೀವಿಗಳ ಮೇಲೆ ಇದ್ದೇಇರುತ್ತದೆ. ನಾವು ತಿಂದ ಆಹಾರ ಗ್ರಹಣಕಾಲದಲ್ಲಿ ಪಚನವಾಗದಿದ್ದರೆ, ಅದರಿಂದ ತೊಂದರೆಯಾಗಬಹುದು. ಹಾಗಾಗಿ ಅದು ಖಾಲಿಯಾಗಿರಬೇಕು ಎಂದು ಚಿಂತಿಸಿರಬಹುದು. ತೊಂದರೆಯಾದರೆ ಅದು ಎಲ್ಲರಿಗೂ ಆಗಬೇಕೆಂದೇನೂ ಇಲ್ಲ. ಯಾರೋ ಒಬ್ಬರಿಗೆ ಆಗಬಹುದು. ಆ ವ್ಯಕ್ತಿ ನಾವೇ ಆಗಬಹುದೇನೋ ? ಹಾಗಾಗಿ ಎಚ್ಚರಿಕೆ ಅಗತ್ಯ ಎಂದು ಹೇಳಿರುವುದು.

ಪ್ರೊ॥ ಶ್ರೀಕಂಠಕುಮಾರಸ್ವಾಮಿಯವರು ಅನೇಕ ಬಾಹ್ಯಪ್ರಪಂಚದ ಕಡೆ ಕೆಲಸ ಮಾಡಿದವರಾದ್ದರಿಂದ ಆಧುನಿಕ ಪ್ರಪಂಚದ ರೀತಿ-ನೀತಿಗಳನ್ನು ಬಲ್ಲವರು. ಈ ಕಾಲದ ಜನರ ಮನೋಭಾವನೆಗಳನ್ನೂ ಬಲ್ಲವರು. ಹೀಗೆ ಪ್ರಾಚೀನತೆ-ಆಧುನಿಕತೆ ಎರಡನ್ನೂ ಮೈಗೂಡಿಸಿಕೊಂಡವರಾದ್ದರಿಂದ ನಮ್ಮ ಹಿಂದಿನ ಋಷಿಗಳ, ಶಾಸ್ತ್ರಕಾರರ ಮರ್ಮವನ್ನು ತಿಳಿದಿದ್ದಾರೆ. ಆಚರಣೆಗಳ ಮಹತ್ತ್ವವನ್ನು ತಲಸ್ಪರ್ಶಿಯಾಗಿ ತಿಳಿದುಕೊಂಡಿದ್ದಾರೆ. ಅವರ ಎಲ್ಲ ಉತ್ತರಗಳು ಒಪ್ಪುವಂತಹುದೇ ಆಗಿವೆ. ಇಂತಹ ಅಪೂರ್ವ ಕಾಗದಪತ್ರಗಳನ್ನು ಅವರಿಂದ ಸಂಗ್ರಹಿಸಿ, ಮುದ್ರಿಸಿ ಕೊಟ್ಟಿರುವುದು, ಹಿಂದಿನವರು ಮಾಡಿರುವ ಸಿದ್ಧಿಸಾಧನೆಗಳ ಮೇಲೆ ಬೆಳಕು ಚೆಲ್ಲುತ್ತದೆ.

ಇಂತಹ ಪತ್ರಗಳನ್ನು ಸಂಗ್ರಹಿಸಿ, ಪುಸ್ತಕವಾಗಿ ತರಬೇಕೆಂದು ಚಿಂತಿಸಿದ ಡಾ॥ ಪ್ರಣತಾರ್ತಿಹರನ್ ಅವರ ಸಾಹಸ ಮೆಚ್ಚುವಂತಹುದು. ಕಾಗದಪತ್ರಗಳನ್ನು ಸಂಗ್ರಹಿಸಲು ಮನೆಮನೆಗೆ ನೂರಾರು ಬಾರಿ ಅಲೆದಿದ್ದಾರೆ. ಬೇಸರವಿಲ್ಲದೆ ಸುತ್ತಿದ್ದಾರೆ. ವಿದ್ವಜ್ಜನರ ಮನೆಗಳಿಗೆ ಹಗಲು-ರಾತ್ರಿಯೆನ್ನದೆ ಅಲೆದಿದ್ದಾರೆ. ಹಾಸನದಿಂದ ಮೈಸೂರಿಗೆ ಅನೇಕ ಬಾರಿ ಬಂದು, ಹಗಲು-ರಾತ್ರಿಯೆನ್ನದೆ ತಿಳಿದವರ ಮನೆಗಳಿಗೆ ಹೋಗಿ ವಿಚಾರವಿನಿಮಯ ಮಾಡಿ, ಚರ್ಚಿಸಿ, ಸದುತ್ತರ

ಪಡೆದು, ಸೂಕ್ತರೀತಿಯಲ್ಲಿ ಸಂಪಾದಿಸಿ, ಮುದ್ರಿಸಿಕೊಟ್ಟಿದ್ದಾರೆ. ಛಲ ಬಿಡದ ತ್ರಿವಿಕ್ರಮನಂತೆ ಈ ಕೃತಿಯ ಪ್ರಕಟಣೆಗೆ ಶ್ರಮಿಸಿದ್ದಾರೆ. ಇವರ ನಿರಂತರ ಶ್ರಮ, ಪ್ರಯತ್ನ, ಉತ್ಸಾಹ, ಕಾರ್ಯದಕ್ಷತೆ, ಕಾರ್ಯಶ್ರದ್ಧೆ , ಅಪಾರ ಅನುಭವ, ಜ್ಞಾನಪ್ರೌಢಿಮೆ ಎಲ್ಲವೂ ಮೆಚ್ಚುವಂತಹವುಗಳು. ಸಮುದಾಯ ಅಧ್ಯಯನ ಕೇಂದ್ರದವರು ಇಂತಹ ವಿನೂತನ ಕೃತಿಯೊಂದನ್ನು ಪ್ರಕಟಿಸಿ ಹೊರತಂದಿರುವುದು ಕನ್ನಡನಾಡಿನ ಜನರೆಲ್ಲ ಸಂತೋಷಪಡುವಂತಹುದು.

* * *

ಬೆಂಗಳೂರು — **ಪ್ರೊ॥ ಜಿ. ಅಶ್ವತ್ಥನಾರಾಯಣ**
1.01.2004 — ನಿವೃತ್ತ ಕನ್ನಡ ಪ್ರಾಧ್ಯಾಪಕರು

ಅಸ್ತಿತ್ವದಲ್ಲಿದ್ದರೂ ಆಧಿಕ್ಯವಿಲ್ಲದ, ಪ್ರಬುದ್ಧ ಬರಹಗಳಿದ್ದರೂ ಪ್ರಸಿದ್ಧಿಯಿಲ್ಲದ ಲಲಿತಪ್ರಬಂಧದ ಹಲವಾರು ಪ್ರಕಾರಗಳಲ್ಲಿ ಪತ್ರಸಾಹಿತ್ಯವೂ ಒಂದು. ಕನ್ನಡದಲ್ಲಿ ಪತ್ರಸಾಹಿತ್ಯ ನಿರೀಕ್ಷಿತ ಮಟ್ಟದಲ್ಲಿ ಬೆಳೆದಿಲ್ಲ. ಈ ಮಾದರಿಯ ಸಾಮುದಾಯಿಕ ಕೌಟುಂಬಿಕ ಪತ್ರಮಾಲೆಯ ಗ್ರಂಥ ಪ್ರಕಟವಾಗುತ್ತಿರುವುದು ಬಹುಮಟ್ಟಿಗೆ ಇದೇ ಮೊದಲು ಎನ್ನಬಹುದು. ಇದು ಹೊರನೋಟಕ್ಕೆ ಒಂದು ಉಪವರ್ಗದ ಪತ್ರಾವಳಿಯಾದರೂ, ಅಂತಃಸತ್ತ್ವದಲ್ಲಿ ಬ್ರಾಹ್ಮಣವರ್ಗಕ್ಕೆ, ಭಾರತದ ಎಲ್ಲ ಸಮುದಾಯಗಳಿಗೆ ಸಂಬಂಧಿಸಿದ ಅರ್ಥಸೂಕ್ಷ್ಮಗಳು ಇಲ್ಲಿ ಅಡಕವಾಗಿವೆ.

* * *

ಸರ್ಕಾರಿ ಕಲಾ ಕಾಲೇಜು — **ನಾಗೇಶ್. ಎಸ್.**
ಹಾಸನ — ಗ್ರಂಥಪಾಲಕರು

...ಇಲ್ಲಿನ ಪತ್ರಗಳು ನಮ್ಮ ಹಿಂದಿನವರು ಸಾಮಾಜಿಕ ಸಮಸ್ಯೆಗಳನ್ನು ಹೇಗೆ ಎದುರಿಸಿದರು ಎಂಬುದನ್ನು ತಿಳಿಸಿ ನಮಗೆ ದಾರಿದೀಪಗಳಾಗಿವೆ; ಮೂಢನಂಬಿಕೆಗಳನ್ನು ತೊಲಗಿಸಿ ವಿಚಾರವಂತರನ್ನಾಗಿ ಮಾಡಲು ಶಕ್ತವಾಗಿವೆ.

* * *

ಮೈಸೂರು — **ಬಿ.ವಿ. ವೆಂಕಟನಾರಾಯಣ**
1.01.2004 — ನಿವೃತ್ತ ಬ್ಯಾಂಕ್ ಮ್ಯಾನೇಜರ್

...ನಮ್ಮ ಹಿಂದಿನವರು ಉನ್ನತವಾಗಿ ಬಾಳಿದ ಎಡೆಗಳ ದರ್ಶನ ಇಲ್ಲಿ ಆಗುತ್ತದೆ. ಅವರು ಎಷ್ಟು ಬೆಂದು ನಮ್ಮನ್ನು ಈ ಮಟ್ಟಕ್ಕೆ ತಂದರು ಎಂಬುದೂ ಇಲ್ಲಿ ತಿಳಿಯುತ್ತದೆ. ಮುಂದಿನ ಪೀಳಿಗೆಯನ್ನು ರೂಪಿಸುವಲ್ಲಿ ನಮ್ಮ ಹೊಣೆ ಏನು ಎಂಬುದೂ ತಿಳಿಯುತ್ತದೆ.

* * *

ಸರ್ಕಾರಿ ವಿಜ್ಞಾನ ಕಾಲೇಜು — **ಡಾ॥ ಬಿ.ಎಸ್. ನರಹರಿ**
ಹಾಸನ — ಭೌತಶಾಸ್ತ್ರ ಪ್ರಾಧ್ಯಾಪಕರು

'ಸಂಸ್ಕೃತಿ' ಎನ್ನುವುದು ಬಹು ವ್ಯಾಪಕವೂ ಸಂಕೀರ್ಣವೂ ಅಮೂರ್ತವೂ ಆದ ಸಂಗತಿ. 'ಸಮುದಾಯ'ದ ಸ್ವರೂಪವೂ ಅದಕ್ಕಿಂತ ತೀರಾ ಭಿನ್ನವಾದುದಲ್ಲ. ಅದು ಮೂರ್ತ, ಮತ್ತು ಸಂಸ್ಕೃತಿಯು ಅದರ ಮೂಲಕ ವ್ಯಕ್ತವಾಗುವುದು ಮೂರ್ತವಾಗಿ. ಒಬ್ಬ ವ್ಯಕ್ತಿಯ ನೂರು ವರ್ಷದ ಜೀವಿತದ ಸಾಂಸ್ಕೃತಿಕ ಸ್ವರೂಪವನ್ನು ಹಿಡಿದಿಡುವುದೇ ಅತಿ ಸಾಹಸದ ಕೆಲಸ. ಒಂದು ಸಮುದಾಯದ ಕೊನೆಯ ಪಕ್ಷ ಹತ್ತು ಸಹಸ್ರ ವರ್ಷಗಳ–ಬೇಡವೆಂದರೆ ಒಂದು ಸಾವಿರ ವರ್ಷಗಳ– ವಿಶಿಷ್ಟ ಸಾಂಸ್ಕೃತಿಕ ಪರಿಪಾಕವನ್ನು ಅಳೆಯುವುದು ಸುಲಭದ ಮಾತಲ್ಲ. ಪರಿವರ್ತನಶೀಲತೆಯ ದೃಷ್ಟಿಯಿಂದ ಇಪ್ಪತ್ತನೆಯ ಶತಮಾನವು ಭಾರತೀಯ ಸಮಾಜಕ್ಕೆ ಅತಿ ವಿಶಿಷ್ಟವಾದುದು. ಒಂದು ಮಹಾಪರಂಪರೆಯ ಬೇರುಗಳನ್ನು ಹಿಡಿದು ನಿತ್ಯಪರಿವರ್ತನಶೀಲವಾದ 21ನೆಯ ಶತಮಾನದ ಬಾಗಿಲಲ್ಲಿ ನಿಂತು ಅದರ ಸಾಂಸ್ಕೃತಿಕ ಸ್ವರೂಪವನ್ನು ಗ್ರಹಿಸಿ ಹಿಡಿದಿಡುವುದು ಸಾಧಾರಣವಾದ ಕೆಲಸವಲ್ಲ. ವೈದಿಕ ಪರಂಪರೆಯನ್ನು ಆಳವಾಗಿ ಅಭ್ಯಸಿಸಿ, ಹಲವು

ದಶಕಗಳ ಕಾಲ ಅದರ ಜೀವನಕ್ರಮದಲ್ಲಿ ಹಾಸುಹೊಕ್ಕಾಗಿ, ಅನುಷ್ಠಾನಗಳನ್ನು ನಿಯತವಾಗಿ ಮಾಡುತ್ತಿರುವವರಿಗೂ ಅದರ ನಿತ್ಯಜೀವಂತವೂ ಕ್ರಿಯಾಶೀಲವೂ ನಮ್ಮವೂ ಚಿರಂತನ ಸ್ಫೂರ್ತಿಯ ಆಕರವೂ ಆದ ವಿಸ್ಮಯಸ್ವರೂಪವು ಇದಮಿತ್ಥಮ್ ಎಂದು ಅರ್ಥವಾಗಲಾರದು. ಆ ಬಗೆಗೆ ಮೇಲ್ಪದರದ ಅಲ್ಪಾತಿ ಅಲ್ಪ ಹೊರಗ್ರಹಿಕೆಗಳನ್ನು ಆಧರಿಸಿ ಖಚಿತ ನುಡಿಗಳನ್ನಾಡುವ ಉದಾಸೀನ ವರ್ತನೆಯೇ ಈಗ ವಿಜೃಂಭಿಸುತ್ತಿದೆ. ಅದರ ನಡುವೆ ನಿಂತು, ಈ ಮಹಾಪರಂಪರೆಯನ್ನು ಅರ್ಥಮಾಡಿಕೊಳ್ಳಲು ಎಲ್ಲ ಸಾಧ್ಯ ಆಕರಗಳನ್ನೂ ದುಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಇಲ್ಲಿ ಕಾಣುತ್ತದೆ.

***

ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್
ಅಧ್ಯಕ್ಷರು

ನೀವು ಪ್ರೀತಿಯಿಂದ ಕಳಿಸಿದ ಸಂಕೇತಿ: ಶತಮಾನದ ಪತ್ರಗಳು ಕೈ ಸೇರಿತು. ನನಗೆ ತುಂಬಾ ಸಂತೋಷವಾಯಿತು. ನಾನು ಹಿಂದಿನ ಸಂಪುಟವನ್ನು ಓದಿ, ನೋಡಿ ಬೆರಗುಪಟ್ಟಿದ್ದೆ. ಇಂಥ ಸಂಪುಟವು ಕರ್ನಾಟ ಸಂಸ್ಕೃತಿಯ ಮೂಲರೂಪವನ್ನು ತಿಳಿಯಲು ಅನುವು ಮಾಡಿಕೊಡುತ್ತದೆ. ಸಂಕೇತಿ ಸಮುದಾಯ ಕುರಿತ ಈ ಗ್ರಂಥಗಳು ಅಧ್ಯಯನಕ್ಕೆ ಮಾತ್ರವಲ್ಲ, ಮೂಲ ತಿಳಿವಳಿಕೆಗೂ ಬೇಕಾದುವೇ ಸರಿ. ಪ್ರತಿಯೊಂದು ಸಮುದಾಯಗಳ ಬಗೆಗೂ ಈ ಬಗೆಯ ಹೊತ್ತಗೆಗಳು ಬೇಕು. ನಾನು ನಿಮ್ಮ ಪಿಹೆಚ್.ಡಿ., ಪ್ರಬಂಧ ಬಂದಾಗ ಬಹು ಕುತೂಹಲದಿಂದ ಓದಿದ್ದೆ. ಈಗ ಇನ್ನಷ್ಟು ಹೊಸ ಪರಿಕರಗಳ ಜತೆ ಪುಷ್ಟಗೊಂಡ ಗ್ರಂಥ ಕಂಡ ಮೇಲೆ ನನಗೆ ಅಭಿಮಾನ ತಂದಿತು; ನನಗೆ ನಿಜಕ್ಕೂ ಸಂತೋಷವಾಗಿದೆ.

ನಾನು ಈ ಎರಡನೆಯ ಸಂಪುಟದ ಮೇಲೆ ಕಣ್ಣಾಡಿಸಿದಂತೆಲ್ಲ, ವೈದಿಕ ವಿಚಾರಗಳ ಬಗೆಗೂ, ಓದಿನ ಕ್ರಮದ ಬಗೆಗೂ, ಸಾಮಾಜಿಕ ಸ್ಥಾನಮಾನದ ಬಗೆಗೂ, ಶಿಕ್ಷಣ-ನೀತಿ ಕ್ರಮಗಳ ಬಗೆಗೂ, ಭಾಷೆಯ ಬಳಕೆಯ ಬಗೆಗೂ - ಇನ್ನೆಷ್ಟೋ ವಿಧಗಳಲ್ಲಿ ಅಧ್ಯಯನ ಮಾಡಲು ಸಕಲ-ಸಾಮಗ್ರಿಗಳು ಈ ಸಂಪುಟದಲ್ಲಿ ಅಡಕಗೊಂಡಿವೆ. ಅವುಗಳನ್ನು ಜೋಡಿಸಿರುವ ರೀತಿ, ಅಲ್ಲಲ್ಲಿ ನೀವು ಒದಗಿಸಿರುವ ಟಿಪ್ಪಣಿಗಳು ಅಧ್ಯಯನದ ಶಿಸ್ತನ್ನು ಎತ್ತಿತೋರಿಸುತ್ತವೆ. ಈ ಸಂಪುಟವು ಸಾಹಿತ್ಯದ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಸಮಾಜಶಾಸ್ತ್ರದ ಬಹು ವ್ಯಾಸಂಗಿಗಳಿಗೆ ಬಹು ಉಪಯುಕ್ತ ಆಕರ ಗ್ರಂಥವಾಗುವುದರಲ್ಲಿ ಸಂಶಯವಿಲ್ಲ. ಈ ಸಂಪುಟಗಳ ನಿರ್ವಹಣೆಯಲ್ಲಿ, ಸಂಪಾದಕತ್ವದಲ್ಲಿ ನಿಮ್ಮ ಸೂಕ್ಷ್ಮ ತಿಳಿವಳಿಕೆ, ಸಜ್ಜನಿಕೆ, ಅಪಾರ ವಿದ್ವತ್ತುಗಳು ಎದ್ದು ಕಾಣುತ್ತಿವೆ. ನಿಮಗೂ ಇದಕ್ಕೆ ನೆರವಾಗುತ್ತಿರುವ ಸಂಕೇತಿ ಸಮಾಜದ ಸರ್ವಶ್ರೇಷ್ಠರಿಗೂ ನನ್ನ ಕೃತಜ್ಞತೆಗಳು. ನಿಮಗೆ ಎಲ್ಲ ರೀತಿಯ ಶುಭಗಳು ಸಲ್ಲಲಿ.

****

ತರಂಗ, ಏಪ್ರಿಲ್, ೧೫, ೨೦೦೪ **ಜ.ಕಾ.**

ಗ್ರಂಥಾಂತರಂಗ

೯೦೦ ವರ್ಷಗಳ ಹಿಂದೆ ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದು ನೆಲೆಸಿ ಇಲ್ಲಿಯವರೇ ಆಗಿಬಿಟ್ಟಿರುವ 'ಸಂಕೇತಿ' ಬ್ರಾಹ್ಮಣ ಸಮುದಾಯದ ಕೆಲವು ಕುಟುಂಬಗಳು ಕಳೆದೊಂದು ಶತಮಾನದ ಅವಧಿಯಲ್ಲಿ ಬರೆದುಕೊಂಡ ಸಾವಿರಾರು ಪತ್ರಗಳ ಪೈಕಿ ೫೫೫ ಪತ್ರಗಳನ್ನು ಇಲ್ಲಿ ಕ್ರಮವತ್ತಾಗಿ ಎಂದರೆ, ವಸ್ತು ವಿಷಯಗಳಿಗನುಗುಣವಾಗಿ ಸಂಗ್ರಹಿಸಿ ಕೊಡಲಾಗಿದೆ. ಒಂದು ಶತಮಾನದ ಅವಧಿಯಲ್ಲಿ ಈ ತಮಿಳು ಬ್ರಾಹ್ಮಣರು ಕಂಡ ಸಾಮಾಜಿಕ, ಧಾರ್ಮಿಕ, ಆರ್ಥಿಕ ಪಲ್ಲಟಗಳು, ಅವುಗಳಿಗೆ ಅವರ ಸಮಸಾಮಯಿಕ ಪ್ರತಿಕ್ರಿಯೆಗಳು ಈ ಪತ್ರಗಳಲ್ಲಿ ಬಿಂಬಿತವಾಗಿವೆ. ಈ ಪತ್ರಗಳು ಕನ್ನಡ ಪತ್ರಸಾಹಿತ್ಯ ಪ್ರಪಂಚಕ್ಕೆ

ಅಮೂಲ್ಯ ಕೊಡುಗೆ. ಈ ಸಮುದಾಯದ ನೂರಾರು ಸಾಮಾನ್ಯರು, ವೈದಿಕ ಜೀವನಮಾರ್ಗದಲ್ಲಿ ತಾವು ಕಂಡುಂಡ ನೂರಾರು ಅನುಭವದ ತುಣುಕುಗಳು, ತಳಮಳ - ತಳ್ಳಂಕಗಳು, ತನ್ನ ಜೀವನಾನುಭವವನ್ನು ತಾನೇ ರೂಪಿಸಿಕೊಳ್ಳಬೇಕು ಎಂಬಂಥ ನಿಲುವುಗಳು, ತತ್ತ್ವಜಿಜ್ಞಾಸೆ, ಒಬ್ಬರಿಗೊಬ್ಬರು ನೀಡಿಕೊಂಡ ಸಾಂತ್ವನ - ಸಮಾಧಾನಗಳು ಇಲ್ಲಿನ ಪತ್ರಗಳಲ್ಲಿ ಜೀವಂತವಾಗಿ ದಾಖಲಾಗಿವೆ.

****

Mysore **_H.S. Ananthanarayana_**
Professor of Linguistics (Retd.)

Sanketi: Letters of the century is well planned, neatly designed and ably executed; and it will remain a very informative volume in every Sanketi family. I read a letter here and a letter there of the first part but every word of the second part. I must say that I thoroughly enjoyed reading these letters. The paper, get up and the printing are all tastefully selected.

The fieldwork for collecting letters appears to have been done mostly in a few villages of Hassan district. Although 3-4 Sanketi settlements are recognised, no effort is made to collect samples from Mysore district (Bettadapura), Kadur district (Lingadahalli) and Shimoga district (Mattur, Hosahalli). Similarly, sufficient care is not taken to include samples from different age groups and professional groups. It would have been fully representative of the community if more centres had been included for collection.

Of the 435 letters arranged in 18 sections, 18 letters (including some e-mail letters) are in English, 25 in Sanskrit, and the rest in Kannada. Six letters are not dated. There are 39 letters from a single family (not very desirable). Section 15 appears to be an addendum to the other sections. In sum, the letters present a beautiful picture of the Sanketi society and there is ample material for a good linguistic analysis of the speech.

The second part arranged in three sections includes 120 letters, the third section comprising only a single letter. The letters are all authored by a single person and the recipients of the letters are also single persons in each case.

Mr. Srikanthakumaraswamy, the author of the letters in the second part, combines in himself both the traditional learning of vedas and shastras and also western education. He has logically and scientifically explained many things of

our religion, rituals, beliefs and the way people conduct themselves. Doubts which arise in the minds of many are clarified in easily understandable language; rituals and customs are explained in proper perspective. Blind beliefs are shunned. This part must be read therefore by everyone, sanketis and non-sanketis alike.

However, from the point of view of the present volume it cannot be said that right judgement is made in including so many letters of one person, occupying about half the space in the volume. There is plenty of repetition between the first two sections and also within each section. It would have been more proper to have included only a few letters representing this type, for this volume. Because of the usefulness of the matter discussed, these letters could be brought out in a separate volume.

****

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ **ಡಾ. ಅಂಬಳಿಕೆ ಹಿರಿಯಣ್ಣ**
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬ ಜಾನಪದ ಪ್ರಾಧ್ಯಾಪಕರು

. . . ಅನಾರೋಗ್ಯದ ನಡುವೆಯೂ ಈ ಪ್ರಮಾಣದ ಕೆಲಸದಲ್ಲಿ ತೊಡಗಿಸಿಕೊಂಡಿದ್ದೀರಿ. ನಿಮ್ಮ ಬಗೆಗೆ ನನ್ನ ವಿಶ್ವಾಸ - ಅಭಿಮಾನ ಇಮ್ಮಡಿಗೊಂಡಿದೆ. ನಿಮಗೆ ಎಲ್ಲ ಶುಭವಿರಲಿ.

****

ಬೆಂಗಳೂರು **ಸಾಪ್ತಾಹಿಕ ವಿಜಯ**
೧೮.೦೭.೦೪ ವಿಜಯ ಕರ್ನಾಟಕ

... ಸಾವಿರದ ಒಂದು ಪತ್ರಗಳ ಕಥೆ ಬರೀ ಸಂಕೇತಿ ಸಮುದಾಯಕ್ಕಷ್ಟೇ ಸೀಮಿತಗೊಂಡಿದೆ ಎಂಬುದನ್ನು ಕ್ಷಣಕಾಲ ಮರೆತು ನೋಡಿದರೆ, ಈ ಪತ್ರಗಳು ಒಂದು ಕಾಲಘಟ್ಟದ ಬದುಕಿನ ಚಿತ್ರವನ್ನು ಮೂಡಿಸುವ ರೀತಿ ಅನನ್ಯ. ಪತ್ರಗಳು ಇಲ್ಲಿ ಪಾತ್ರಗಳಾಗಿವೆ; ಇಷ್ಟನ್ನು ಹೇಳಿ ಅಷ್ಟನ್ನು ಊಹೆಗೆ ಬಿಟ್ಟು ವಿಶಿಷ್ಟ ಸಾಹಿತ್ಯ ಕೃತಿಗಳಾಗಿ ಪರಿಣಮಿಸಿವೆ...

****

RDES, ಉಪನಿರ್ದೇಶಕರವರ ಕಛೇರಿ **ಡಾ. ಕೆ. ಕೃಷ್ಣಮೂರ್ತಿ**
ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆ, ಹಾಸನ ಸಹಾಯಕ ನಿರ್ದೇಶಕರು

. . . ಸದಾಕಾಲ ಸವಿಯಬಹುದಾದಷ್ಟು ಸವಿಯ ಖನಿಯನ್ನು ಸಾವಿರದ ಒಂದು ಪತ್ರಗಳ ಕಥೆ ಮುಖಾಂತರ ನೀಡಿದ್ದೀರಿ. ಬಹಳ ಸಂತೋಷ. ಧೈರ್ಯ ಮತ್ತು ನಾಜೂಕುತನದಿಂದ ಹೊಸ ಸಾಹಿತ್ಯ ಪ್ರಕಾರಕ್ಕೆ ಮೂರ್ತರೂಪ ಕೊಟ್ಟಿದ್ದೀರಿ. ಚಾಚಾ ನೆಹರೂ, ಮೂರ್ತಿರಾಯರು, ಗೋಕಾಕರ ಸಾಹಿತ್ಯಮಾಲೆಯನ್ನು ಪ್ರಸ್ತಾಪಿಸಿ ಹೊಸ ಪ್ರಕಾರದ ಮೂರ್ತರೂಪದ ಚಿತ್ರಕ್ಕೆ ನಿಮ್ಮದೇ ಆಕರ್ಷಕ ಬಣ್ಣ ಸಕಾಲಿಕವಾಗಿ ನವಿರಾಗಿ ಮೂಡಿಸುವುದರಲ್ಲಿ ಸಫಲರಾಗಿದ್ದೀರಿ.

. . . "ಸಾವಿರದ ಒಂದು ಪತ್ರಗಳ ಕಥೆ" ಶೀರ್ಷಿಕೆಯೂ ಪ್ರಚೋದಾತ್ಮಕವಾಗಿದೆ. "ಮಣ್ಣಿನ ಜತೆ ಓಡಾಟ, ಗಿಡದ ಜತೆ ಉಸಿರಾಟ" ಎಂಬ ಘೋಷಣೆ ತಮ್ಮ "ಸಂಕೇತಿ ಕೃಷಿ" ಬೃಹತ್ ಹೊತ್ತಗೆಯ ಸಂಕೇತ ಎಂದು ನಾನು ಭಾವಿಸಿ ಅದನ್ನು ಆಸ್ವಾದಿಸಲು ತುದಿಗಾಲಲ್ಲಿ ನಿಂತಿದ್ದೇನೆ. ಹಲವಾರು ವರ್ಷಗಳು ಅವರ ಕೃಷಿಯ ಒಡನಾಟದಲ್ಲಿ ಇದ್ದ ನನಗೆ ಆ ಕುರಿತು ಅಪಾರ ಗೌರವ, ಆದರ, ಅಭಿಮಾನವಿದೆ. ಆ ವಿಚಾರದಲ್ಲಿ ಅವರುಗಳಿಗೆ ಇರುವ ಮಮತೆ, ಪ್ರೀತಿ, 'ಕೃಷಿಯು ಹಣ ಗಳಿಸುವ ಕಾರ್ಖಾನೆಯಲ್ಲ, ನೆಮ್ಮದಿಯ ನಿರ್ಲಿಪ್ತತೆಯ ತೃಪ್ತಿಯ ತಪೋಭೂಮಿ' ಎನ್ನುವ ಅವರುಗಳ ಭಾವನೆಗಳಿಗೆ ಇದೋ ನನ್ನ ಸಾಷ್ಟಾಂಗ ನಮಸ್ಕಾರಗಳು.

****

ಕೆ.ಆರ್.ಸಾಗರ **ಪಿ.ಗಣಪತಿ**

ನಿವೃತ್ತ ಎಕ್ಸಿಕ್ಯುಟಿವ್ ಇಂಜಿನಿಯರ್

. . . ಸಂಕೇತಿ ಅಧ್ಯಯನದ ಎರಡನೆಯ ಸಂಪುಟವನ್ನು ಓದಿ ಮುಗಿಸಿದೆ. ಬಹಳ ಅತ್ಯುತ್ತಮವಾಗಿದೆ. ನಿಮ್ಮ ಶ್ರಮಕ್ಕೆ ಧನ್ಯವಾದಗಳು ಹಾಗೂ ಚಿರಋಣಿ. ಒಂದು ಅಮೂಲ್ಯವಾದ ಸಾಧನೆ. ವಿಶೇಷವಾಗಿ ಪೂಜ್ಯ ಶ್ರೀ ಶ್ರೀಕಂಠಕುಮಾರಸ್ವಾಮಿಗಳ ಕ್ರಾಂತಿಕಾರಿ ಪತ್ರಗಳು ಅಮೋಘ. ಈ ಕಾಲದ ಗೃಹಸ್ಥರ ಹಲವಾರು ಬವಣೆ ಹಾಗೂ ಅನುಮಾನಗಳ ಮನಸ್ಸಿನ ತೊಳಲಾಟಕ್ಕೆ ಪರಿಹಾರ ಸಿಕ್ಕುತ್ತದೆ. ಆದರೂ ಕೆಲವು ವಿಷಯಗಳಲ್ಲಿ ಆಧುನಿಕ ಗೃಹಸ್ಥರಿಗೆ ಅವರ ಅನಿಸಿಕೆಗಳು ಮಲಗುವವನಿಗೆ ಹಾಸಿಗೆ ಹಾಸಿದಂತಾಗುವುದೇನೋ ಎಂಬ ಶಂಕೆ ಉಂಟಾಗುತ್ತದೆ. ಇವುಗಳನ್ನು ಮುಖತಃ ಮಾತನಾಡಬೇಕು . . .

****

ಮತ್ತೂರು **ವೇ. ಬ್ರ. ಶ್ರೀ ಮಾರ್ಕಂಡೇಯ ಅವಧಾನೀ**

. . . ಇದು ಭಾರೀ ಸಾಹಸವೇ ಸೈ. ಬೇರೆಯವರಿಂದ ಸಾಧ್ಯವಿಲ್ಲದ್ದು. ನಿಮ್ಮ ಎರಡೂ ಪುಸ್ತಕ ಅಲ್ಲಲ್ಲಿ ನೋಡಿದೆ. ತುಂಬಾ ಚೆನ್ನಾಗಿ ಬಂದಿದೆ. ಹಳೇ ಪತ್ರಗಳ ಆ ಶೈಲಿ, ಆಶೀರ್ವಾದ, ನಮಸ್ಕಾರ, ಕೋಪ, ಪ್ರೀತಿ, ವಿನೋದ ನೋಡಿದಾಗ ಆನಂದವಾಗುತ್ತೆ. ನಿಮಗೆ ಈ ಯೋಚನೆ ಹೇಗೆ ಬಂತು? ಗಾಂಧೀಜೀ ಪತ್ರದಿಂದಲೇ? . . .

****

United Kingdom **Dr. R.S.S. Krishnamurthy, MBBS.,**

General Medical Practitioner

I tried to go through the enormous work in bringing out our 'SANKETHI ADHYAYANA' and I felt that it is an authentic reflection of our culture and people. The quality of information is of highest standard. The amount of information is abundant. The outcome is very appealing.

I sincerely thank and I am grateful to Mr. Pranatartiharan and to all others who are responsible for this great gift to our community.

****

ಮಹಾರಾಣಿ ಮಹಿಳಾ ಕಲಾ ಕಾಲೇಜು
ಮೈಸೂರು

ಡಾ॥ ಬಿ.ವಿ. ಸುಧಾಮಣಿ
ಇತಿಹಾಸ ಪ್ರಾಧ್ಯಾಪಕರು

ಶತಮಾನದ ಪತ್ರಗಳಲ್ಲಿ ಸಂಕೇತಿ ಸಮಾಜ – ಒಂದು ಅವಲೋಕನ

ಪ್ರಸ್ತುತ ಲೇಖನವು ಕರ್ನಾಟಕದ ಸ್ಮಾರ್ತ ಬ್ರಾಹ್ಮಣ ಪಂಗಡಕ್ಕೆ ಸೇರಿರುವ ಸಂಕೇತಿ ಜನಾಂಗದವರ 100 ವರ್ಷಗಳ ಕೌಟುಂಬಿಕ ವ್ಯವಹಾರ ಪತ್ರಗಳನ್ನು ಅವಲಂಬಿಸಿದೆ[1.] ಕುತೂಹಲಕ್ಕಾಗಿ ಡಾ॥ ಪ್ರಣತಾರ್ತಿಹರನ್‌ರವರು ಸಂಪಾದಿಸಿರುವ ಸಂಕೇತಿ – ಶತಮಾನದ ಪತ್ರಗಳು ಎಂಬ ಸಂಪುಟವನ್ನು ಓದುವ ಸಂದರ್ಭದಲ್ಲಿ ನೂರು ವರ್ಷಗಳ ಕಾಲಾವಧಿಯ ಈ ಪತ್ರಗಳು ಸಂಕೇತಿ ಸಮುದಾಯದ ಸಾಮಾಜಿಕ ಪ್ರತಿಬಿಂಬಗಳಂತೆ ಕಂಡುಬಂದವು. ಕ್ರಿ.ಶ. 1891–1991ರವರೆಗಿನ ಪತ್ರಗಳಲ್ಲಿ ಅವರ ಸಾಮಾಜಿಕ ಸಂಸ್ಕಾರಗಳು, ಹವ್ಯಾಸಗಳು, ವಿಶೇಷ ತಿನಿಸುಗಳು, ವ್ಯವಸಾಯ, ಅವರು ಅನುಭವಿಸಿದ ಕ್ಷಾಮಡಾಮರಗಳು, ಪ್ಲೇಗು–ಸಿಡುಬು ಮುಂತಾದ ರೋಗಬಾಧೆಗಳು, ಬಡತನ, ನಿರುದ್ಯೋಗ, ಆಧುನಿಕ ವಿದ್ಯಾಭ್ಯಾಸ ಪಡೆಯಲು ಪಟ್ಟ ಕಷ್ಟ ಕಾರ್ಪಣ್ಯಗಳು, ತಮ್ಮ ಸಂಸ್ಕೃತಿ ಸಂಸ್ಕಾರಗಳನ್ನು ಕಾಪಾಡಿಕೊಳ್ಳಲು ಅವರು ಪಟ್ಟ ಶ್ರಮ, ಸಮಕಾಲೀನ ಆ ಪ್ರಾಂತ್ಯದ ಮಳೆ–ಬೆಳೆ ಹಾಗೂ ಧಾನ್ಯಗಳ ಬೆಲೆ ಇತ್ಯಾದಿ ಹತ್ತು ಹಲವು ವಿಚಾರಗಳ ಬಗೆಗೆ ಸ್ಥೂಲವಾಗಿ ತಿಳಿಯಬಹುದಾಗಿದೆ. ಪತ್ರ ಬರೆಯುವ ಸಂದರ್ಭದಲ್ಲಿ ಅವರಾರೂ ಮುಂದೊಂದು ದಿನ ತಮ್ಮ ಪತ್ರಗಳು ಒಂದು ಸಂಪುಟ ಅಥವಾ ಲೇಖನದ ರೂಪದಲ್ಲಿ ಪ್ರಕಟವಾಗುತ್ತದೆಂದು ತಿಳಿದಿದ್ದವರಲ್ಲ. ಹೀಗಾಗಿ ಪತ್ರಗಳ ಮಾಹಿತಿಗಳು ಅವರ ಸಮಾಜದ ನೈಜಚಿತ್ರಣವನ್ನು ನೀಡುವಲ್ಲಿ ಸಹಕಾರಿಯಾಗಿವೆ.

ಈ ಪತ್ರಗಳು ಸಂಸ್ಕೃತ, ಕನ್ನಡ ಹಾಗೂ ಆಂಗ್ಲ ಭಾಷೆಗಳಲ್ಲಿವೆ. ಶೈಲಿ ಉತ್ತಮವಾಗಿದ್ದು ಹಾಸ್ಯ, ವ್ಯಂಗ್ಯ, ಸಂತೋಷ ದುಃಖ ಇತ್ಯಾದಿಗಳ ನೋಟ ನೀಡುತ್ತದೆ. ಮೂಲತಃ ಅಡಿಕೆ ತೋಟ ಮಾಡುವ ಕೃಷಿಕರಾಗಿದ್ದರೂ ಅವರ ಕನ್ನಡ ಭಾಷಾ ಶೈಲಿ ಉತ್ಕೃಷ್ಟವಾಗಿತ್ತೆಂಬುದಕ್ಕೆ ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ನೀಡಬಹುದಾಗಿದೆ. ನಗರದಲ್ಲಿ ನೌಕರಿಯಲ್ಲಿದ್ದ ಆಧುನಿಕವಿದ್ಯೆ ಗಳಿಸಿದ್ದ ಯುವಕನೊಬ್ಬ ತನ್ನ ಗ್ರಾಮದಲ್ಲಿದ್ದ ರೈತಮಿತ್ರನಿಗೆ ಪತ್ರ ಬರೆದು ವಿವಾಹವಾದ ನಂತರ ತನ್ನನ್ನು ಮರೆತಿದ್ದಾನೆಂದು ಆಕ್ಷೇಪ ಮಾಡಿದ್ದ ಸಂದರ್ಭದಲ್ಲಿ ಗ್ರಾಮದ ಯುವಕ ತನ್ನ ಸ್ನೇಹಿತನಿಗೆ 'ಮಿತ್ರಾ! ಮಗ್ಗುಲಲ್ಲಿರುವ ನವಮಣಿಯ ಮೇಲ್ಮೆಯ ಬೆಡಗಿನ ಬಿನ್ನಾಣದ ಮಧುರಾಧರದ ಹೊಳಪಿಗೆ ಸೋತು ಆಜನ್ಮ ಮಿತ್ರರತ್ನವನ್ನು ಮರೆಯುವಂಥಾ ಕುಲಹೇಡಿಯಾದ ಮಿತ್ರದ್ರೋಹಿ ಎಂದು ನನ್ನನ್ನು ಭಾವಿಸಿದೆಯಾ?'[2] ಎಂದು ಉತ್ತರಿಸಿರುವ ರೀತಿ ಪ್ರಶಂಸಾರ್ಹ.

20ನೇ ಶತಮಾನದ ಪೂರ್ವಭಾಗದ ಪತ್ರಗಳಲ್ಲಿ ಸಂಕೇತಿಗಳು ಪರಂಪರಾನುಗತವಾಗಿ ಬಂದಿದ್ದ ಸಂಸ್ಕಾರಗಳಿಗೆ ಹೆಚ್ಚು ಮಹತ್ವ ನೀಡಿದ್ದರೆಂಬುದು ಕಂಡುಬರುತ್ತದೆ. ವಿವಾಹ, ಸೀಮಂತ, ಚೌಲ, ನಾಮಕರಣ, ಇತ್ಯಾದಿ ಹಲವು ಹತ್ತು ಸಂಸ್ಕಾರಗಳನ್ನು ಹಾಗೂ ಹೋಮ ಹವನಾದಿಗಳನ್ನು ನಿಗದಿತ ಸಂದರ್ಭಗಳಲ್ಲಿ ತಪ್ಪದೇ ಆಚರಿಸುತ್ತಿದ್ದರು. ಆದರೆ 1940ರ ದಶಕದ ಹಾಗೂ ನಂತರದ ಪತ್ರಗಳಲ್ಲಿ ಅವರ ಅನೇಕ ಆಚರಣೆಗಳನ್ನು ಸಂದರ್ಭಕ್ಕನುಗುಣವಾಗಿ ಸಡಿಲಿಸಿರುವ ಮಾಹಿತಿಗಳು ದೊರಕುತ್ತವೆ. ಇಲ್ಲಿ ಅಂತಹ ಒಂದೆರಡು ದೃಷ್ಟಾಂತಗಳನ್ನು ನೀಡಬಹುದು. ವಿವಾಹ ಆಚರಣೆಗೆ ಸಂಬಂಧಿಸಿದಂತೆ ಬಾಲ್ಯವಿವಾಹವು ರೂಢಿಯಲ್ಲಿತ್ತು. ವಿದ್ಯಾರ್ಥಿಗಳೂ ಕೂಡ ವಿವಾಹಿತರಾಗಿದ್ದರೆಂಬುದಕ್ಕೆ ಹಲವಾರು ಪತ್ರಗಳಲ್ಲಿ ಮಾಹಿತಿ ಲಭ್ಯವಿದೆ.[3] ಹಾಗೆಯೇ ವಿವಾಹದ ಲಗ್ನಪತ್ರಿಕೆಯನ್ನು ಪೋಸ್ಟ್ ಕಾರ್ಡ್ ಬಳಕೆಗೆ ಬಂದ ದಿನಗಳಲ್ಲಿ ಅದರಲ್ಲೇ ಬರೆದು ಪ್ರತಿಯೊಬ್ಬ ಬಂಧುವಿಗೂ ಕಳುಹಿಸುತ್ತಿದ್ದರು. ವರನ ತಂದೆ ತಾಯಿಗಳೆ ಕನ್ಯೆಯನ್ನು ನೋಡಿ ವಿವಾಹ ನಿಶ್ಚಯ ಮಾಡುತ್ತಿದ್ದರು. ಪತ್ರ ಒಂದರಲ್ಲಿ ತಂದೆಯು ವಿದ್ಯಾಭ್ಯಾಸ ಮಾಡುತ್ತಿದ್ದ ನಗರದಲ್ಲಿದ್ದ ಮಗನಿಗೆ 'ನಿನ್ನ ವಿವಾಹಕ್ಕೆ ತಪ್ಪದೇ ಬಾ'

ಎಂದು ಬರೆದಿದ್ದಾರೆ.[4] ವಾಸ್ತವವೆಂದರೆ ಆ ವಿದ್ಯಾರ್ಥಿಗೆ ತನ್ನ ವಿವಾಹಕ್ಕೆ ಪ್ರಯತ್ನ ನಡೆದಿರುವ ವಿಚಾರವೇ ತಿಳಿದಿದ್ದಂತಿಲ್ಲ. ಹಾಗೇ ವರದಕ್ಷಿಣೆ ಪಡೆಯುವುದೂ ಸರ್ವೇ ಸಾಮಾನ್ಯವಾಗಿತ್ತು. ಕನ್ಯೆ ಒಳ್ಳೆ ಕುಲದವಳಾಗಿದ್ದು ಗೃಹಕೃತ್ಯಗಳಲ್ಲಿ ತೊಡಗಿದ್ದರೆ ಸಾಕೆಂಬ ಭಾವನೆ ಇತ್ತು. ವಿವಾಹಕ್ಕೆ ಸಂಬಂಧಿಸಿರುವ ಈ ಆಚರಣೆಗಳಲ್ಲಿ 1940ರ ದಶಕದಿಂದೀಚೆಗೆ ಹಲವಾರು ಬದಲಾವಣೆಗಳನ್ನು ಪತ್ರಗಳಲ್ಲಿ ಗುರ್ತಿಸಬಹುದು. ಬಾಲ್ಯವಿವಾಹದ ಸ್ಥಾನದಲ್ಲಿ ವರನು ವಿದ್ಯಾಭ್ಯಾಸ ಮುಗಿದ ನಂತರ ಅಥವಾ ಒಂದು ನೌಕರಿ ಹೊಂದಿದ ನಂತರ ವಿವಾಹ ಮಾಡಿಕೊಳ್ಳತೊಡಗಿದುದು ಗಮನಿಸಬೇಕಾದ ಅಂಶ. ಅದೇ ರೀತಿ ಮುದ್ರಣದ ಸೌಲಭ್ಯದ ಅರಿವಾದ ನಂತರ ಲಗ್ನಪತ್ರಿಕೆಗಳನ್ನು ಕನ್ನಡ ಹಾಗೂ ಆಂಗ್ಲ ಭಾಷೆಗಳೆರಡರಲ್ಲೂ ಅಚ್ಚು ಹಾಕಿಸಲಾರಂಭಿಸಿದುದು[5] ವಿವಾಹ ಆಗಬಯಸುವ ಹುಡುಗ ಹುಡುಗಿಯ ಆಯ್ಕೆಯ ಬಗೆಗೆ ತನ್ನ ನಿಲುವನ್ನೂ ವ್ಯಕ್ತಪಡಿಸಲಾರಂಭಿಸಿದುದು'[6], ಕೇವಲ ದ್ರವ್ಯಕನ್ಯೆ ತರುವುದರಿಂದ ಗೃಹಸೌಖ್ಯ ಸಾಧ್ಯವಿಲ್ಲವೆಂಬ ಅರಿವು[7], ಕನ್ಯೆ ಸತ್ಕುಲದವಳಾಗಿರುವುದರ ಜೊತೆಗೆ ಎಸ್.ಎಸ್.ಎಲ್.ಸಿ. ವರೆಗೆ ಓದಿರಬೇಕೆಂಬ ಷರತ್ತು ಹಾಕಿರುವುದು[8], ಜಾತಕ ವಿಷಯದಲ್ಲಿ ಸಡಿಲಿಕೆ ಇತ್ಯಾದಿ ಬೆಳವಣಿಗೆಗಳನ್ನು, ಬದಲಾವಣೆಗಳನ್ನು ಗುರ್ತಿಸಬಹುದಾಗಿದೆ.

ಕೆಲವು ಪತ್ರಗಳು ಅವರ ಹವ್ಯಾಸಗಳು, ವಿಶೇಷವಾದ ತಿನಿಸುಗಳು ಮತ್ತು ಕೆಲವು ಸಂಪ್ರದಾಯಗಳನ್ನು ಇಂದಿಗೂ ತಪ್ಪದೇ ಆಚರಿಸಿಕೊಂಡು ಬರುತ್ತಿರುವ ಬಗ್ಗೆ ಅರಿವು ಮೂಡಿಸುತ್ತವೆ. ಹವ್ಯಾಸಗಳಲ್ಲಿ ನಶ್ಯ ಸೇದುವುದು, ಇಸ್ಪೀಟ್ ಆಡುವುದು, ಎಲೆ ಅಡಿಕೆ ಹಾಗೂ ಹೊಗೆಸೊಪ್ಪು ಜಗಿಯುವದು, ಸಂಗೀತಾಭ್ಯಾಸ ಇವುಗಳು ಇಂದಿಗೂ ಈ ಸಮುದಾಯದವರಲ್ಲಿ ಮುಂದುವರೆದುಕೊಂಡು ಬಂದಿವೆ. ತಿನಿಸುಗಳಲ್ಲಿ ಚೋಮಾಯ್ (ಒತ್ತು ಶಾವಿಗೆ), ಕೊಳಕಟ್ಟೆ (ಉದ್ದಿನ ಕಡುಬು), ಮೋರ್ಪುಳಿ (ಮಜ್ಜಿಗೆಹುಳಿ) ಇತ್ಯಾದಿ ಇಂದಿಗೂ ಅವರ ಅಚ್ಚುಮೆಚ್ಚಿನ ಅಡುಗೆಗಳು. ಸಂಪ್ರದಾಯಗಳಲ್ಲಿ ಹೆಣ್ಣುಮಕ್ಕಳಿಗೆ ಗೌರೀಹಬ್ಬಕ್ಕೆ ತಪ್ಪದೆ ದ್ರವ್ಯ ಕಳುಹಿಸುವುದು, ದೀಪಾವಳಿಯ ಮರುದಿನ ಸಹೋದರರು ಸಹೋದರಿಯರ ಮನೆಗಳಿಗೆ ಸೋದರಬಿದಿಗೆಗೆ ಹೋಗುವುದು, ಬಂಧುಗಳು ಸಾವಪ್ಪಿದ ವರ್ಷ ಅವರ ಮನೆಗೆ ಹಬ್ಬದ ದಿನಗಳಲ್ಲಿ ತಿಂಡಿ ಇಡುವುದು ಇತ್ಯಾದಿ ಆಚರಣೆಗಳು ಮುಂದುವರಿಯುತ್ತಿವೆ.

ಸಂಕೇತಿಗಳ ಕುಟುಂಬ ಪದ್ಧತಿಗೆ ಸಂಬಂಧಿಸಿದಂತೆ ಅವಿಭಕ್ತ ಕುಟುಂಬಗಳು 1940ರ ದಶಕಕ್ಕೆ ಮೊದಲು ಅಸ್ತಿತ್ವದಲ್ಲಿದ್ದುದು ಆಧುನಿಕ ಶಿಕ್ಷಣ ಹಾಗೂ ನೌಕರಿಯ ಸಲುವಾಗಿ ನಗರಗಳಿಗೆ ವಲಸೆ ಹೋಗಲಾರಂಭಿಸಿದ ನಂತರ ವಿಭಕ್ತ ಕುಟುಂಬಗಳು ಅಸ್ತಿತ್ವಕ್ಕೆ ಬಂದು ಸಹೋದರರು ಆಸ್ತಿ ಹಂಚಿಕೊಂಡಿರುವುದಕ್ಕೆ ಪತ್ರದಾಖಲೆಗಳಿವೆ.[9]

ಆಧುನಿಕ ಶಿಕ್ಷಣದ ಸೌಲಭ್ಯ ಮೈಸೂರು ಸಂಸ್ಥಾನಕ್ಕೆ ಲಭ್ಯವಾದಾಗ ಸಂಸ್ಕೃತಾಭ್ಯಾಸವನ್ನೇ ಪರಂಪರೆಯನ್ನಾಗಿ ಮಾಡಿಕೊಂಡಿದ್ದ ಸಂಕೇತಿ ಜನಾಂಗದವರು ಆಧುನಿಕ ಶಿಕ್ಷಣಕ್ಕೂ ತೊಡಗಿಕೊಂಡರು. ಅಂದಮಾತ್ರಕ್ಕೆ ಸಂಸ್ಕೃತಾಭ್ಯಾಸವನ್ನು ದೂರ ಮಾಡಲಿಲ್ಲ. ಬದಲಾಗಿ ಸಂಸ್ಕೃತ ಹಾಗೂ ಆಂಗ್ಲ ವಿದ್ಯಾಭ್ಯಾಸ ಎರಡನ್ನೂ ಜೊತೆಜೊತೆಗೇ ಅಭ್ಯಸಿಸಿದರು. ಇಲ್ಲಿ ಸಂಕೇತಿಗಳು ಸಂಪ್ರದಾಯ ಹಾಗೂ ಆಧುನಿಕತೆ ಎರಡರ ಸಂಯೋಜನೆ ಮಾರ್ಗ ಅನುಸರಿಸಿದರೆನ್ನಬಹುದು. ಹೊಸದಾಗಿ ನಗರಗಳಿಗೆ ಶಿಕ್ಷಣ ಪಡೆಯುವ ಸಲುವಾಗಿ ಹೋದ ಹೋರಾಟದ ವಿವರಣೆ ನೂರಾರು ಪತ್ರಗಳಲ್ಲಿ ಲಭ್ಯವಿದೆ.[10] ಎಂತಹ ಕಠಿಣ ಸಂದರ್ಭದಲ್ಲೂ ಎದೆಗುಂದದೆ ತಮ್ಮ ಗುರಿಮುಟ್ಟಲು ಪಟ್ಟ ಪಾಡು ತೊಟ್ಟ ಛಲದ ಪರಿಚಯ ಅವರ ಪತ್ರಗಳಿಂದಾಗುತ್ತದೆ. ಈ ಸಂದರ್ಭದಲ್ಲಿ ಅನಿವಾರ್ಯವಾಗಿ ಮಡಿವಂತಿಕೆಯನ್ನು ಬಿಟ್ಟು ಹೋಟಲ್ಲುಗಳನ್ನು ಆಶ್ರಯಿಸಿದ್ದುದು ಗಮನಾರ್ಹ ಬದಲಾವಣೆಯಾಗಿದೆ. ಅದೇ ರೀತಿ ರೈಲು ಹಾಗೂ ಮೋಟಾರು ವಾಹನಗಳಲ್ಲಿ ಪ್ರಯಾಣ ಮಾಡಿದರೆ ತಮ್ಮ ಮಡಿ ಹಾಳಾಗುತ್ತದೆಂದು ನಂಬಿದ್ದ ಅವರು ತಮ್ಮ ಮಕ್ಕಳನ್ನು ನಗರಗಳಿಗೆ ಕಳುಹಿಸಲಾರಂಭಿಸಿದ ನಂತರದ ದಿನಗಳಲ್ಲಿ ಅನಿವಾರ್ಯವಾಗಿ ಪ್ರಯಾಣದ ನೂತನ ಸೌಲಭ್ಯಗಳನ್ನು ಬಳಸಿಕೊಳ್ಳಲಾರಂಭಿಸಿದುದು ಕಂಡುಬರುತ್ತದೆ.[11]

ಔಷಧಿಯ ವಿಚಾರದಲ್ಲೂ ಸಂಕೇತಿ ಸಮುದಾಯದವರು ಸಂಯೋಜನಾ ಮಾರ್ಗವನ್ನು ಅನುಸರಿಸಿದ್ದುದು ಕಂಡುಬರುತ್ತದೆ. ಪರಂಪರಾನುಗತವಾಗಿ ಅನುಸರಿಸಿಕೊಂಡು ಬಂದಿದ್ದ ನಾಟಿ ಔಷಧಿಯ ಜೊತೆಗೆ ಐರೋಪ್ಯರ ಸಂಪರ್ಕದಿಂದ ಮೈಸೂರು ಸಂಸ್ಥಾನಕ್ಕೆ ಲಭ್ಯವಾಗಿದ್ದ ಆಂಗ್ಲ ವೈದ್ಯಕೀಯ ಸೌಲಭ್ಯವನ್ನೂ ಪಡೆದುಕೊಳ್ಳಲಾರಂಭಿಸಿದ್ದರು.[12] ಪ್ರಸವವನ್ನು ಮನೆಯಲ್ಲೇ ಮಾಡಿಸುತ್ತಿದ್ದವರು ಮಿಷನ್ ಆಸ್ಪತ್ರೆಗೆ ಹೆಣ್ಣುಮಕ್ಕಳನ್ನು ಕರೆದೊಯ್ಯಲಾರಂಭಿಸಿದರು,[13] ಪ್ಲೇಗ್ ರೋಗಕ್ಕೆ ಸರ್ಕಾರದ ಧನ್ವಂತರಿ ಇಲಾಖೆಯವರು ನೀಡುತ್ತಿದ್ದ ಇನ್ಯಾಕ್ಯುಲೇಷನ್ ಪಡೆಯಲಾರಂಭಿಸಿದರು.[14]

ತೋಟಗಾರಿಕೆ ಹಾಗೂ ಸಂಸ್ಕೃತ ಅಧ್ಯಯನ ಸಂಕೇತಿಗಳಿಗೆ ಪರಂಪರಾನುಗತವಾಗಿ ಬಂದಿತ್ತು. ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ಆಂಗ್ಲ ಶಿಕ್ಷಣ ಇವರನ್ನು ಸೆಳೆದುದು ಅವರ ಪತ್ರಗಳಿಂದ ತಿಳಿದುಬರುವ ಸಂಗತಿ. ಆಧುನಿಕ ಶಿಕ್ಷಣ ಪಡೆಯುತ್ತಿದ್ದಂತೆಯೇ ಆಧುನಿಕ ನೌಕರಿಯನ್ನೂ ಗಳಿಸತೊಡಗಿದರು. ಆದರೂ ಈ ಸಮುದಾಯದವರು ಅಧ್ಯಯನ ಮತ್ತು ವೃತ್ತಿ ಎರಡೂ ವಿಷಯಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆ ಎರಡರ ಸಂಯೋಜನೆಯ ಮಾರ್ಗವನ್ನು ಅನುಸರಿಸಿದರು.[15] ಕೇವಲ ತೋಟದ ಕೃಷಿಗೆ ಮಹತ್ವ ಕೊಟ್ಟಿದ್ದ ಇವರು ಕ್ರಮೇಣ ಹೊಲ ಗದ್ದೆಗಳ ಬೇಸಾಯವನ್ನೂ ಮಾಡತೊಡಗಿದರು.[16] 1930ರ ದಶಕದಲ್ಲಿ ಕೃಷಿಕ ತಂದೆಯೊಬ್ಬರು ಆಂಗ್ಲಶಿಕ್ಷಣ ಪಡೆದು ನಗರದಲ್ಲಿದ್ದ ಮಗ ಗ್ರಾಮಕ್ಕೆ ಹಿಂತಿರುಗಿ ಕುಲಕಸಬನ್ನು ಮುಂದುವರಿಸುವ ಆಸೆ ವ್ಯಕ್ತಪಡಿಸಿದ ಸಂದರ್ಭದಲ್ಲಿ ಆತನನ್ನು ಸರ್ಕಾರಿ ಕೆಲಸವನ್ನೇ ಪಡೆಯುವಂತೆ ಬಲವಂತಪಡಿಸಿರುವ ಉದಾಹರಣೆ ಇದೆ.[17]


ಆಧುನೀಕರಣದ ಪ್ರಭಾವದಿಂದಾಗಿ ಸಂಕೇತಿ ಸಮಾಜದಲ್ಲಿ ಹೆಣ್ಣುಮಕ್ಕಳ ಪರಿಸ್ಥಿತಿಯೂ ಸುಧಾರಿಸಿತೆಂದು ತೋರುತ್ತದೆ. 1950ರ ದಶಕದವರೆವಿಗೂ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುವುದು ಅಗೌರವದ ಸಂಗತಿಯಾಗಿತ್ತು. ಬಹಳ ಅಪರೂಪಕ್ಕೆ 1931ರ ಪತ್ರ ಒಂದರಲ್ಲಿ ಈ ಜನಾಂಗದ ಹೆಣ್ಣುಮಗಳೊಬ್ಬಳು ಎಮ್.ಎ.,ಬಿ.ಟಿ. ಮಾಡಿದ್ದಳು.[18] ಆದರೆ ತಮ್ಮ ಹೆಣ್ಣುಮಕ್ಕಳಿಗೂ ಶಿಕ್ಷಣದ ಆವಶ್ಯಕತೆ ಇದೆ ಎಂದು ಅವರು ಕಂಡುಕೊಂಡಿದ್ದು ನಗರದಲ್ಲಿ ಶಿಕ್ಷಣ ಪಡೆಯುತ್ತಿದ್ದ ಅಥವಾ ನೌಕರಿಯಲ್ಲಿದ್ದ ವರಗಳು ಕನ್ಯೆಗೆ ಎಸ್.ಎಸ್.ಎಲ್.ಸಿ. ಆಗಿರಬೇಕೆಂಬ ಬೇಡಿಕೆಯನ್ನು ಮುಂದಿಡತೊಡಗಿದಾಗ.[19] 1970ರದಶಕದಲ್ಲಿ ಪದವಿಯಾದ ಕನ್ಯೆಗೆ ಬೇಡಿಕೆ ಹೆಚ್ಚತೊಡಗಿದ್ದರಿಂದ ಕಾಲೇಜು ಶಿಕ್ಷಣವೂ ಅವರಿಗೆ ಲಭಿಸುವಂತಾಯಿತು. 1970ರ ದಶಕದಲ್ಲಿ ಈ ಜನಾಂಗದವರು ಬಡ ಗ್ರಾಮಾಂತರ ಹೆಣ್ಣುಮಕ್ಕಳು ಕಾಲೇಜು ಶಿಕ್ಷಣ ಪಡೆಯಲು ಅನುಕೂಲವಾಗುವಂತೆ ಉಚಿತವಿದ್ಯಾರ್ಥಿನಿನಿಲಯ ಒಂದನ್ನು ಹಾಸನ ನಗರದಲ್ಲಿ ತೆರೆದುದು ಪ್ರಶಂಸಾರ್ಹ. 1960ರ ದಶಕದ ವೇಳೆಗಾಗಲೆ ಎಸ್.ಎಸ್.ಎಲ್.ಸಿ. ಮಾಡಿದ ಅನೇಕ ಹೆಣ್ಣುಮಕ್ಕಳಿದ್ದುದರಿಂದ ಅವರು ಹೊಲಿಗೆ, ಎಂಬ್ರಾಯ್ಡರಿ ಮುಂತಾದ ನೂತನ ಕಸುಬುಗಳನ್ನು ಕಲಿಯಲಾರಂಭಿಸಿದ್ದರು.[20] ತಮ್ಮ ಗ್ರಾಮದಲ್ಲಿದ್ದ ಸಮಾಜದಂತಹ ಸಂಘಟನೆಗೆ ಸದಸ್ಯತ್ವ ಪಡೆದು ಸಾಂಘಿಕ ಚಟುವಟಿಕೆಯಲ್ಲೂ ತೊಡಗಿಕೊಂಡರು. ಆಧುನೀಕರಣದ ಪರಿಣಾಮದಿಂದಾಗಿ ಇವರ ಗ್ರಾಮದ ಮನೆಗಳಲ್ಲಿ ಹಲವಾರು ಸೌಲಭ್ಯಗಳು ಒದಗಿದುವು. ನಗರದಲ್ಲಿ ಕಲಿತು ನೌಕರಿ ಹಿಡಿದ ಯುವಕರ ದೆಸೆಯಿಂದಾಗಿ ಮಣ್ಣಿನ ನೆಲಕ್ಕೆ ಬದಲಾಗಿ ಗಾರೆನೆಲ, ಇಟ್ಟಿಗೆಗೋಡೆ, ಫ್ಯಾನ್, ವಿದ್ಯುದ್ದೀಪ, ಶೌಚಾಲಯ ಇತ್ಯಾದಿ ಸೌಲಭ್ಯಗಳು ದೊರೆತವು.

ತಮಿಳುನಾಡಿನಿಂದ 900 ವರ್ಷಗಳಷ್ಟು ಹಿಂದೆಯೇ ಕರ್ನಾಟಕಕ್ಕೆ ವಲಸೆ ಬಂದಿರುವ ಇವರು ತಮ್ಮ ಪೂರ್ವಜರ ಮೂಲಸ್ಥಳವನ್ನು 1980ರ ದಶಕದವರೆವಿಗೂ ನೋಡಿರಲಿಲ್ಲ. ಅದರ ಬಗ್ಗೆ ಆಸಕ್ತಿಯನ್ನೂ ತೋರಿರಲಿಲ್ಲ. ಆಧುನಿಕ ಶಿಕ್ಷಣದ ಪರಿಣಾಮವಾಗಿ ತಮಿಳುನಾಡಿನ ಸಂಕೇತಿಗಳೊಂದಿಗೆ 80ರ ದಶಕದಿಂದೀಚೆಗೆ ಪತ್ರವ್ಯವಹಾರ ನಡೆಸಲಾಗುತ್ತಿದೆ. ಈರ್ವರ ನಡುವೆ ಸಂಬಂಧ ಬೆಳೆಸಲೂ ಪ್ರಯತ್ನ ನಡೆದಿತ್ತೆಂಬ ವಿಷಯ ಪತ್ರಗಳಿಂದ ತಿಳಿಯುತ್ತದೆ.[21] ಈ ಪತ್ರಗಳಲ್ಲಿ ಸಮಕಾಲೀನ ಹಳೇಮೈಸೂರುಪ್ರಾಂತದ ಮಳೆ–ಬೆಳೆ, ಧಾನ್ಯಗಳ

ಬೆಲೆ, ಮಳೆ ಇಲ್ಲದೆ ಕ್ಷಾಮದಿಂದ ಜನ ಅನುಭವಿಸಿದ ತೊಂದರೆ ಹಾಗೂ ಪ್ಲೇಗು ರೋಗದಿಂದ ಗ್ರಾಮಗಳೇ ಖಾಲಿಯಾದ ವಿಚಾರ, ಈ ರೋಗವನ್ನು ತಡೆಯಲು ಮೈಸೂರು ಸರ್ಕಾರ ಕೈಗೊಂಡ ಕ್ರಮ, ಸ್ವಾತಂತ್ರ್ಯ ಚಳುವಳಿಯ ವಿಷಯಗಳು, ಸ್ವಾತಂತ್ರ್ಯಾನಂತರ ಉಂಟಾದ ಕೋಮು ಗಲಭೆ ಮುಂತಾದ ವಿಷಯಗಳಿಗೂ ಕೂಡ ನಮ್ಮ ಗಮನ ಸೆಳೆಯುತ್ತವೆ. ಒಟ್ಟಿನಲ್ಲಿ ಸಂಕೇತಿ ಸಮುದಾಯದವರು ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಆಧುನಿಕ ಶಿಕ್ಷಣ ಹಾಗೂ ನೌಕರಿ ಪಡೆದುಕೊಂಡರೂ, ಸಂಪ್ರದಾಯವನ್ನೂ ಪೂರ್ಣವಾಗಿ ಬಿಟ್ಟುಕೊಡದೆ ಆಧುನೀಕರಣ ಮತ್ತು ಸಂಪ್ರದಾಯ ಎರಡರ ಸಂಯೋಜನೆಯ ಬದುಕನ್ನು ನಡೆಸಿದ್ದುದು ಗಮನಾರ್ಹ. ಇಂತಹ ಪತ್ರಗಳ ಸಂಗ್ರಹದಿಂದ ಆಯಾ ಸಮುದಾಯದ ನೈಜ ಚಿತ್ರಣ ಪಡೆಯಲು ಸಾಧ್ಯವಾಗುತ್ತದೆ. ಸಂಕೇತಿ ಜನಾಂಗಕ್ಕೆ ಸಂಬಂಧಿಸಿದಂತೆ ಈ ಪತ್ರಗಳ ಸಂಗ್ರಹಕಾರ್ಯ ಕೈಗೊಂಡು ಒಂದು ಸಂಪುಟವನ್ನು ರಚಿಸಿ ಈ ಲೇಖನ ರಚಿಸಲು ಕಾರಣರಾದ ಡಾ॥ಬಿ.ಎಸ್.ಪಿ. ಹರನ್‌ರವರನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯುತ್ತೇನೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಪ್ರಣತಾರ್ತಿಹರನ್ (ಸಂ), ಸಂಕೇತಿ ಶತಮಾನದ ಪತ್ರಗಳು, 1891–2003, ಸಂ. 2 ಸಮುದಾಯ ಅಧ್ಯಯನ ಕೇಂದ್ರ, ಮೈಸೂರು, 2004.
2. 1935, ಪತ್ರಸಂಖ್ಯೆ : 179, ಪು. 89
3. ಸುಮಾರು ಐವತ್ತಕ್ಕೂ ಹೆಚ್ಚು ಪತ್ರಗಳು ವಿವಾಹಿತ ವಿದ್ಯಾರ್ಥಿಗಳ ಬಗೆಗೆ ಮಾಹಿತಿ ನೀಡುತ್ತವೆ.
4. 1934, ಸಂ. 266, ಪು. 130–131
5. 1934, ಸಂ. 267, ಪು. 131–132
6. 1933, ಸಂ. 46, ಪು. 25
7. 1933, ಸಂ. 263, ಪು. 129
8. 1961, ಸಂ. 58, ಪು. 31
9. 1934, ಸಂ. 178, ಪು. 59: 1943, ಸಂ. 166, ಪು. 80
10. ಹಲವಾರು ಪತ್ರಗಳಲ್ಲಿ ಮಾಹಿತಿ ಇದೆ. 1921, ಸಂ. 11. ಪು. 8: 1924, ಸಂ. 13, ಪು. 9: 1929, ಸಂ. 16, ಪು. 10.
11. 1941, ಸಂ. 148, ಪು. 70: 1947, ಸಂ. 187, ಪು. 72.
12. 1942, ಸಂ. 130, ಪು. 62: 1936, ಸಂ. 1, ಪು. 4.
13. 1942, ಸಂ. 130, ಪು. 62
14. 1936, ಸಂ. 1, ಪು. 4.
15. 1946, ಸಂ. 91, ಪು. 48
16. 1926, ಸಂ. 82, ಪು. 42
17. 1935, ಸಂ. 88, ಪು. 45
18. 1931, ಸಂ. 83, ಪು. 42–43
19. 1961, ಸಂ. 58, ಪು. 31
20. 1981, ಸಂ. 204, ಪು. 99
21. 1994, ಸಂ. 426, ಪು. 198, 1991ರವರೆಗಿನ ಪತ್ರಗಳನ್ನು ಲೇಖನಕ್ಕೆ ಬಳಸಲಾಗಿದೆ. ಆದರೆ ಈ ಪತ್ರದ ವಿಷಯ ಮುಖ್ಯವಾದುದೆಂಬ ಕಾರಣಕ್ಕೆ 1994ರ ಪತ್ರವನ್ನು ಉದಾಹರಿಸಲಾಗಿದೆ.



ಸಂಪುಟ 3

ಸಂಕೇತಿ : ಅಭಿನಂದನ

ಸಂ : ಪೂಮಗಾಮೆ ಗೋಪಿ

೧ ಅರಿಕೆ

ಇದೀಗ ಓದುಗರ ಮುಂದಿರುವುದು ಈಗಾಗಲೇ ಸಾರ್ವಜನಿಕರು ಕೆಲ ಗಣ್ಯರಿಗೆ ಸಮರ್ಪಿಸಿರುವ ಅಭಿನಂದನ ಗ್ರಂಥಗಳ ಸಂಕಲನ. ಅವನ್ನು ಸಿದ್ಧಪಡಿಸಿದ, ಮತ್ತೆ ಬಳಸಿಕೊಳ್ಳಲು ಕೇಂದ್ರಕ್ಕೆ ಅನುಮತಿ ಇತ್ತ ಎಲ್ಲ ಸಹೃದಯರಿಗೆ ವಂದನೆಗಳು.

ಜಗತ್ತಿನಲ್ಲಿ ಸಜ್ಜನರಿದ್ದಾರೆ ; ಸಮಾಜಕ್ಕಾಗಿ ತಮ್ಮ ಬದುಕನ್ನು ಮೀಸಲಿಟ್ಟವರಿದ್ದಾರೆ ; 'ಸಂತೋಷಂ ಜನಯೇತ್ ಪ್ರಾಜ್ಞಃ ' ಎಂಬ ಸದಾಶಯವನ್ನು ಸಾಕಾರಗೊಳಿಸುತ್ತಿರುವವರೂ ಇದ್ದಾರೆ. ಅವರೆಲ್ಲ ಹೀಗೆ ಬಾಳಿಯೇ ಬದುಕಿಗೆ ಅರ್ಥ ತುಂಬಿದ್ದಾರೆ ; ಅವರಲ್ಲಿ ಅನೇಕರು ಅತಿಗಣ್ಯರಾಗಿಯೂ ಪ್ರಕಾಶಿಸಿದ್ದಾರೆ.

ಗುಣಗ್ರಹಣ ಮಾಡುವ ಸಜ್ಜನರೂ ಜಗತ್ತಿನಲ್ಲಿದ್ದಾರೆ ; ಅವರಲ್ಲಿ ಅನೇಕರು ಗುಣೈಕಗ್ರಾಹಿಗಳೇ ಆಗಿದ್ದಾರೆ; ಅಂಥವರಲ್ಲಿ ಕೆಲವರಾದರೂ ತಮಗಾದ ಸಂತೋಷವನ್ನು, ತಮ್ಮ ಮೆಚ್ಚುಗೆಯನ್ನು, ಕೃತಜ್ಞತೆಯನ್ನು ಆಡಿ ತೋಡಿಕೊಳ್ಳುತ್ತಾರೆ ; ಅವರ ಪೈಕಿ ಕೆಲವರಿಗಾದರೂ ಅದನ್ನು ಬರಹಕ್ಕೆ ಇಳಿಸಿದಲ್ಲದೆ ನಿರಾಳವಾಗುವುದಿಲ್ಲ; ಅಪೂರ್ವ ಸಂದರ್ಭಗಳಲ್ಲಿ, ಅಲ್ಪಸಂಖ್ಯಾತರಾದ ಈ ರಸಜ್ಞರು ಮತ್ತು ಕೃತಜ್ಞರು ಸಮಾರಂಭವನ್ನೇರ್ಪಡಿಸಿ ಹಿರಿಯ ಸಾಧಕರನ್ನು ಹಾಡಿ, ಹೊಗಳಿ, ಅಭಿನಂದನ ಗ್ರಂಥಗಳನ್ನೂ ಅರ್ಪಿಸಿ ಸಮಾಧಾನ ತಾಳುತ್ತಾರೆ.

'ಅಭಿನಂದನ ' ಎಂದರೆ ಕೊಂಡಾಟ, ಪ್ರಶಂಸೆ, ಗೌರವ ತೋರಿಸುವುದು, ಸಂತೋಷ ಸೂಚನೆ, laudation, congratulation, felicitation. Felicitation ಎಂದರೆ 'an expression of good wishes'. ಅದರ ಮೂಲದ felicity ಎಂದರೆ happiness, delight, a blessing, a happy event, elegance or aptness of wording or expression. ಇಂಥ 'ಅಭಿನಂದನ ' ಸಾಹಿತ್ಯವು ಕನ್ನಡದಲ್ಲಿ ವಿಪುಲವಾಗಿ, ವಿಶಿಷ್ಟವಾಗಿ ಬೆಳೆದಿದೆ. ದೇ.ಜ.ಗೌ. ಅವರು 'ಗಂಗೋತ್ರಿ'ಯ (೧೯೭೦) ಸಂಪಾದಕೀಯದಲ್ಲಿ ಹೇಳಿರುವ ಮಾತನ್ನು ಇಲ್ಲಿ ಉಲ್ಲೇಖಿಸಬಹುದು, "ಅಭಿನಂದನ ಸಾಹಿತ್ಯ ಕನ್ನಡದ ವಿಶಿಷ್ಟ ರೂಪವೆಂದೇ ಹೇಳಬಹುದು. ಅದು ಹೊರಗಡೆಯಿಂದ ಆಮದಾದುದಲ್ಲ. ಇಂಡಿಯಾ ದೇಶದ ಯಾವ ಭಾಷೆಯಲ್ಲಿಯೂ ಅದು ಇಷ್ಟು ಸಮೃದ್ಧವಾಗಿ ಬೆಳೆದಿಲ್ಲ. ಒಂದು ಭಾಷೆಯ ಜನ ತನ್ನ ಸಾಹಿತಿಗಳ ಶಕ್ತಿ-ಸಾಮರ್ಥ್ಯ, ಸಾಧನೆ-ಸಿದ್ಧಿಗಳನ್ನು ಮೆಚ್ಚುವ, ಗೌರವಿಸುವ ವಿಧಾನವಿದು. ಒಬ್ಬ ಸಾಹಿತಿ ದೇಶದ ಅಮೂಲ್ಯ ಆಸ್ತಿ, ಸಂಸ್ಕೃತಿಯ ಕಣ್ಣು, ಸಮಾಜದ ತಲೆ, ರಾಷ್ಟ್ರದ ಅಗ್ರನಾಯಕ ಎಂಬ ಭಾವನೆ ಅಭಿನಂದನ ವಿಧಾನದಲ್ಲಿ ವ್ಯಕ್ತಗೊಳ್ಳುತ್ತದೆ. ಇದು ಜನ ತಮ್ಮ ಹೆಮ್ಮೆಯ ಕವಿಗೆ ತೋರುವ ಕೃತಜ್ಞತೆ". ಈ ಮಾತುಗಳಲ್ಲಿನ ಸದಾಶಯವು ಎಲ್ಲ ರೀತಿಯ ಅಭಿನಂದಿತರಿಗೂ ಸಲ್ಲುತ್ತದೆ. ದೇಜಗೌ ಅವರೇ

ಮುಂದುವರಿದು ಹೇಳಿರುವ ಮಾತು ಇದು : "ಸಾಮಾನ್ಯವಾಗಿ ಈ ಗೌರವ ಕವಿಗಣಕ್ಕೆ ಮೀಸಲಾದದ್ದು. ಆಗೊಮ್ಮೆ, ಈಗೊಮ್ಮೆ ಸಾಹಿತ್ಯೇತರ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ನಾಡಿನ ಹಿರಿಯರಿಗೂ ಇಂಥ ಗೌರವ ಸಂದದ್ದುಂಟು. ಏನೇ ಆಗಲಿ ಜನತೆಯ ಕಲಾಭಿರುಚಿ, ಸಂಸ್ಕೃತಿಯ ಪ್ರಜ್ಞೆ ಮತ್ತು ಉದಾರಾಕಾಂಕ್ಷೆ ಇದರಿಂದ ವ್ಯಕ್ತವಾಗುತ್ತದೆ. "

ಹೀಗೆ ಜನಮನ್ನಣೆಗೆ ಒಳಗಾಗುವವರು ಅಪರೂಪದ ಸಾಧಕರೇ ಸರಿ. ಈ ಸಂಕಲನದಲ್ಲಿ ಅಭಿನಂದಿತರಾದ ಆರು ಹಿರಿಯರೂ ಸಾಹಿತ್ಯೇತರ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದವರೇ ಆಗಿದ್ದಾರೆ. ಅವರಲ್ಲಿ ಪ್ರವಚನ ಚಕ್ರವರ್ತಿ ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳ ಜನ್ಮಶತಮಾನೋತ್ಸವದ ಸಂದರ್ಭಕ್ಕೆ ಸರಿಯಾಗಿ ಈ ಅಭಿನಂದನಗ್ರಂಥ ಹೊರಬರುತ್ತಿರುವುದು ಹೆಚ್ಚಿನ ಸಂತೋಷಕ್ಕೆ ಕಾರಣವಾಗಿದೆ.

"ಕನ್ನಡದ ಜನ ಅಭಿಮಾನ ಕೃಪಣರು ಅಂತ ಒಂದು ಕಾಲಕ್ಕೆ ಗಾಢವಾಗಿ ಅನ್ನಿಸಿದ್ದ ನನಗೆ ಈ ಅನ್ನಿಸಿಕೆ ಕ್ರಮೇಣ ಇಲ್ಲವಾಗುತ್ತಿದೆ. ಒಂದು ಧ್ಯೇಯ ಸಾಧನೆಗೆ ತನ್ನ ಬದುಕನ್ನು ಪಣವಾಗಿಟ್ಟ ವ್ಯಕ್ತಿಯ ಬಗ್ಗೆ ನಮ್ಮ ಜನ ಎಷ್ಟು ಉದಾತ್ತವಾಗಿಯೂ ನಡೆದುಕೊಳ್ಳಬಲ್ಲರೆಂಬುದಕ್ಕೆ ಈ 'ಅಂತಃಕರಣ'ವೇ ಸಾಕ್ಷಿ". ಶ್ರೀಕೃಷ್ಣ ಆಲನಹಳ್ಳಿ ಅವರ (ಸಂಪಾದಕರು: 'ಅಂತಃಕರಣ': ದೇಜಗೌ ಅಭಿನಂದನ ಗ್ರಂಥ) ಈ ಮಾತನ್ನು ಪುಷ್ಟೀಕರಿಸುವಂತೆ ಐದು ಅಭಿನಂದನ ಗ್ರಂಥಗಳು ಇಲ್ಲಿವೆ.

ಸಂಕೇತಿ ಅಧ್ಯಯನ ಯೋಜನೆಯ ಉದ್ದೇಶಗಳಲ್ಲಿ ಮಾಹಿತಿಯ ಕ್ರೋಡೀಕರಣವೂ ಒಂದು. ಸಂಕೇತಿ ಅಧ್ಯಯನಕ್ಕೆ ಆಧಾರ ಪಾಠ್ಯಗಳನ್ನು ಒದಗಿಸುವುದು ಅದರ ಪ್ರಮುಖ ಗುರಿ. ಹಾಗಾಗಿ, ಮೂಲ ಅಭಿನಂದನ ಗ್ರಂಥಗಳಲ್ಲಿದ್ದ ಲೇಖನಗಳ ಪೈಕಿ, ವ್ಯಕ್ತಿ ಮತ್ತು ಸಾಧನೆಗಳಿಗೆ ಸಂಬಂಧಿಸಿದವನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಆಸಕ್ತರ ಅವಗಾಹನೆಗಾಗಿ ಮೂಲಗ್ರಂಥಗಳ ಪರಿವಿಡಿಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಬಿಡಿಬಿಡಿಯಾಗಿ ಪ್ರಕಟವಾಗಿದ್ದ ಅಭಿನಂದನಗ್ರಂಥಗಳು ಆಯಾ ಮಹನೀಯರನ್ನು ಕುರಿತಂತೆ ಅಂದಂದಿನವರೆಗಿನ ಸಾಧನೆಸಿದ್ಧಿಗಳನ್ನು ಒಳಗೊಂಡಿದ್ದುವವೆಂಬುದು ಸಹಜವೇ. ಈ ಮಹಾಸಂಪುಟದಲ್ಲಿ ತರುವಾಯದ ವರ್ಷಗಳಲ್ಲಿ ಆ ಮಹನೀಯರು ಗೈದ ವಿಶಿಷ್ಟ ಸಾಧನೆಗಳನ್ನು ಜೋಡಿಸಿಕೊಡುವ ಸಾರ್ಥಕ ಯತ್ನವೊಂದನ್ನು ಮಾಡಲಾಗಿದೆ. ಅನುಬಂಧವು ವೈವಿಧ್ಯಪೂರ್ಣವಾದ ಪೂರಕ ಮಾಹಿತಿಯನ್ನೊಳಗೊಂಡಿದ್ದು, ಆ ಮೂಲಕ ಪಾಠ್ಯಭಾಗವು ಹೆಚ್ಚು ಅರ್ಥಪೂರ್ಣವಾಗಿದೆ. ಇಲ್ಲಿ ವರ್ತಮಾನ, ಪ್ರಶಸ್ತಿ, ಅಭಿಪ್ರಾಯ ಇಂಥ ಭಾಗಗಳು ಕೇವಲ ಪ್ರಾತಿನಿಧಿಕವಾಗಿ ಬಂದಿವೆ. ಒಂದು ವಸ್ತುಸ್ಥಿತಿಯ ಸ್ವರೂಪದರ್ಶನವಷ್ಟೇ ಅವುಗಳ ಉದ್ದೇಶವೂ ಆಗಿದೆ.

ಈ ಮಾದರಿಯ ವ್ಯಕ್ತಿ-ಪರಿಚಯ ಲೇಖನಗಳ ಸಂಗ್ರಹಗಳ ಬಗೆಗೆ ಏಳಬಹುದಾದ ಆಕ್ಷೇಪವೆಂದರೆ ಪುನರಾವರ್ತನೆ, ಜಾಳುತನ, ಏಕತಾನತೆ, ಉತ್ಪ್ರೇಕ್ಷೆ-ಇಂಥವು. ಅನುಭವವು (ಮೌನವು) ಮಾತಿಗೆ ಇಳಿದಾಗಲೋ ಮಾತು ಬರಹವಾದಾಗಲೋ ಅದು ಉತ್ಪ್ರೇಕ್ಷೆಯಾಗುತ್ತದೆ, ಅದನ್ನು ಮೀರಿದ ವಿ(ಶೇಷ)ಕೃತಿಯೂ ಆಗುತ್ತದೆ. 'ಗಂಭೀರ ' ಎಂದು ಉದ್ದೇಶಿಸಿದ ವಿಮರ್ಶಾತ್ಮಕ ಸಾಹಿತ್ಯಕ್ಕೂ ಈ 'ದೋಷ ' ತಪ್ಪಿದ್ದಲ್ಲ. ಆದರೆ ತಮ್ಮ ಸಂತೋಷ, ಹಿಗ್ಗು, ಸಂಭ್ರಮ, ಕೃತಜ್ಞತೆ, ಮೆಚ್ಚುಗೆಯನ್ನು ಸ್ವಚ್ಛಂದವಾಗಿ ತೋಡಿಕೊಂಡು ಕೃತಾರ್ಥರಾಗುವ - ಆ ಮೂಲಕ ಒಳ್ಳೆಯದನ್ನು ಆರಾಧಿಸುವ ಮತ್ತು ಅದನ್ನು ಮುಂದಿನ ಪೀಳಿಗೆಗೆ ಸ್ಫೂರ್ತಿಯ ಆಕರವಾಗಿ ಮಾಡಿಕೊಳ್ಳುವ ಉದ್ದೇಶದಿಂದಲೇ ಹೊರಟವರಿಗೆ ಈ 'ದೋಷ 'ವೇ ಗುಣವಾಗುತ್ತದೆ. ಅವರವರ ಮನದಂತೆ ದೃಷ್ಟಿಯೂ ಬೇರೆ . ಅಂತೆಯೇ ಒಂದೇ ಸದ್ಗುಣವನ್ನು ಹತ್ತು ಮಂದಿ ಹಲವು ರೀತಿ ಸ್ವಯಂಪ್ರೇರಣೆಯಿಂದ ಸ್ತುತಿಸುತ್ತಾರೆಂದರೆ ಅದಕ್ಕೊಂದು ಗುರುತ್ವವೂ ಲಭ್ಯವಾದಂತೆಯೇ. ಕೇವಲ ಪರೀಕ್ಷಕದೃಷ್ಟಿಯಿಂದ ಹೊರಗಿನವರಾಗಿ ನೋಡುವವರಿಗೆ ಯಾವುದು ಏಕತಾನವೋ, ಸಹಜ ಸಹೃದಯನಿಗೆ ಅದೇ ಧ್ಯಾನಯೋಗದ ಮಾಧ್ಯಮವಾಗುತ್ತದೆ; ಪುನರಾವರ್ತನೆಯೇ ಆತನಿಗೆ ಪೋಷಣೆ ನೀಡುತ್ತದೆ.

ಇಲ್ಲಿ ರೂಪಿತವಾಗಿರುವುದು ಜೀವನ ಚರಿತ್ರೆಯಲ್ಲ, ಬದಲಿಗೆ ಬಾಳಿನ ಆಶಯಚಿತ್ರ. ಇಲ್ಲಿ ಬದುಕಿನ ಪೂರ್ಣವಿವರವಿಲ್ಲ; ಬದಲಿಗೆ ಒಂದು ಬಾಳಿನ ಒಂದೋ ಹಲವೋ ಆದರ್ಶಗಳ ಗುಣಗಾನವಿದೆ ; ಅದು ಸಂಭ್ರಮ, ಉಲ್ಲಾಸ, ಕೊನೆಗೆ ಆರಾಧನೆಯ ಪ್ರಭಾವಲಯವನ್ನು ಒಡಮೂಡಿಸಿಕೊಂಡಿದೆ. ಇಲ್ಲಿರುವುದು ದತ್ತಾಂಶಗಳ ವೈಭವವಲ್ಲ, ಒಂದೇ ಗುರಿಗಾಗಿ ಮಾಡಿದ ತಪಸ್ಸಿನ ಪ್ರಭಾವಲಯ.

ಇಲ್ಲಿ ಅಭಿನಂದಿತರಾದವರಲ್ಲಿ ಪುರೋಹಿತರಿದ್ದಾರೆ, ಸಮಾಜಸೇವಕರಿದ್ದಾರೆ, ಕಲಾವಿದರಿದ್ದಾರೆ; ವೈದಿಕರೂ ಕೈಗಾರಿಕೋದ್ಯಮಿಗಳೂ ಅಧ್ಯಾಪಕರೂ ಸಂಘಟಕರೂ ಕೃಷಿಕರೂ ಅವರಲ್ಲಿ ಸೇರಿದ್ದಾರೆ; ಕಲಾರಾಧನೆಗಾಗಿ ತಮ್ಮ ಧನ ಕನಕವನ್ನು ಸೂರೆ ಮಾಡಿದವರು, ಪ್ರಯೋಗಶೀಲರು, ಬಹುಮುಖ ಪ್ರತಿಭಾಸಂಪನ್ನರು, ತ್ಯಾಗಶೀಲರು, ಸಾಮಾಜಿಕ ಕಳಕಳಿ ಉಳ್ಳವರು, ಸರಳರು, ಬಹುಜನಪ್ರಿಯರು, ದಾನಿಗಳು, ಸೇವಾವ್ರತಿಗಳು, ಲೋಕ ಹಿತಚಿಂತಕರು, ಸಾಹಸಿಗಳು, ಸಾಹಿತಿಗಳು ಇಲ್ಲಿ ಅನಾವರಣಗೊಂಡಿದ್ದಾರೆ. ಹೀಗೆ ಅನಾವರಣ ಮಾಡಿರುವವರಾದರೂ ಕರ್ನಾಟಕದ ಉದ್ದಗಲಕ್ಕೆ ಹರಡಿದ ಕನ್ನಡ ಬಂಧುಗಳು, ಸಜ್ಜನರು.

ಮೇಲುನೋಟಕ್ಕೆ ಇದು ಕೇವಲ ಸಿದ್ಧಗ್ರಂಥಗಳ ಸಂಚಯದಂತೆ ಕಂಡರೂ ಸ್ವರೂಪದಲ್ಲೂ, ವಿವರದಲ್ಲೂ, ಪರಿಣಾಮ ಮತ್ತು ಪ್ರಯೋಜನದಲ್ಲೂ ಈ ಸಂಪುಟಕ್ಕೊಂದು ಸ್ವತಂತ್ರ ಅಸ್ತಿತ್ವವಿದೆ; ಅದನ್ನು ಸಾಧಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ.

ಮಕರ ಸಂಕ್ರಾಂತಿ **ಪ್ರಣತಾರ್ತಿಹರನ್**
೧೪ ಜನವರಿ, ೨೦೦೫

೨ ಓದಿದ ಮೇಲೆ

ತಮ್ಮ ತಮ್ಮ ಸಾಧನ ಕ್ಷೇತ್ರದಲ್ಲಿ ಅಪ್ರತಿಮ ಹಂತವನ್ನು ತಲುಪಿ ಮಾಗಿದ ವ್ಯಕ್ತಿಗಳು ಜನಮಾನಸದಿಂದ ಮರೆಯಾಗಿ ಹೋದವರೆಷ್ಟೋ. ಅವರು ಪಟ್ಟ ಶ್ರಮ, ಗಳಿಸಿದ ಪರಾಕಾಷ್ಠತೆಗಳೂ ಅವರೊಂದಿಗೆ ಅವರ ಹಾದಿಯನ್ನೇ ಹಿಡಿದವಲ್ಲ? ಕಾವ್ಯ, ಸಾಹಿತ್ಯ ಮತ್ತು ಬಾಳಿಕೆ ಬರಬಲ್ಲ ಕಲಾ ಪ್ರಕಾರಗಳಲ್ಲಿ ಶ್ರಮಿಸಿದವರು ತಮ್ಮ ಪರಿಚಯವನ್ನು ಅಷ್ಟಿಷ್ಟು ಉಳಿಸಿ ಹೋಗುತ್ತಾರೇನೋ. ಹಾಗೆ ಪುರಾವೆ ಉಳಿಸದೆ ತಮ್ಮ ಸಮಕಾಲೀನ ಪ್ರಪಂಚದಲ್ಲಿ ಚೈತನ್ಯಶೀಲರಾಗಿ ಅಪಾರ ಜನಮನ್ನಣೆಗೂ ಪಾತ್ರರಾದವರು ತಮ್ಮ ನಿರ್ಗಮನದನಂತರ ಪ್ರಸ್ತುತರಾಗಿ ಉಳಿಯುದಿರುವುದು ಕಾಲದ ಅಣಕಿಸುವಿಕೆಯೇ ಸರಿ. ಅವರ ಸಮಕಾಲೀನರಿಗೆ, ಹೆಚ್ಚೆಂದರೆ ಅವರ ಕಿರಿಯ ತಲೆಮಾರಿನವರಿಗೆ ಅವರ ಸಾಧನಾಶ್ರೀಯ ಪ್ರಭಾವವೂ ಮುಂದೆ ಮಸುಕಾದ ನೆನಪಿನ ಭಾಗವಾದೀತು, ಕ್ರಮೇಣ ಅಳಿಸಿಯೂ ಹೋದೀತು.

ಅಂತಹ ಹಲವಾರು ದಿಗ್‌ದಂತಿಗಳ ಸಾಧನಾ ವೃತ್ತಾಂತವು ಸಮುದಾಯದ ನೆನಪಿನಿಂದ ಹಾರಿಹೋಗುವ ಅಥವಾ ಆರಿಹೋಗುವ ಮುನ್ನ ಅದನ್ನು ದಾಖಲಿಸಿಡುವ ಒಂದು ಶ್ಲಾಘನೀಯ ಯತ್ನವನ್ನು ಈ 'ಸಂಕೇತಿ : ಅಭಿನಂದನ'ದಲ್ಲಿ ಕಾಣಬಹುದು. ಮುಂದಿನ ಪೀಳಿಗೆಯವರಿಗೆ ತಮ್ಮ ಹಿರಿಯರ ಸಾಧನೆಯ ಪರಿಚಯ ಇದರಿಂದಲಾದರೂ ಮುಂದೊಮ್ಮೆ ಆದೀತೆಂಬ ಕಳಕಳಿಯೇ ಈ ಗ್ರಂಥಸರಣಿಯ ಮೂಲೋದ್ದೇಶವೆನಿಸುತ್ತದೆ. ಹಾಗಿದ್ದಲ್ಲಿ ಇದರ ಸಂಪಾದಕಮಂಡಳಿಯ ಶ್ರಮ ಸಾರ್ಥಕವಾಯಿತೆನ್ನಬಹುದು. ಈ ಜತನದ ದಾಖಲಿಸುವಿಕೆಯೂ ಆ ಹಿರಿಯರ ಕಾರ್ಯಸಿದ್ಧಿಯ ಮಟ್ಟಕ್ಕೇ ಏರಿ ನಿಲ್ಲಬಲ್ಲಂತಹ ಯತ್ನವೇ ಸರಿ. ಕಳೆದ ನೂರು ವರ್ಷಗಳಿಗಿಂತ ಹಿಂದಿನ ಹಿರಿಯರ ಸಾಮಾಜಿಕ ಕೊಡುಗೆ ಮತ್ತು ವೈಯಕ್ತಿಕ ಸಾಧನೆಗಳಿಗೆ ಈ ಸೌಲಭ್ಯ ಸಿಕ್ಕಲಿಲ್ಲವಲ್ಲಾ ಎಂಬುದು ಶಾಶ್ವತ ಕೊರಗಿನ ಸಂಗತಿಯಾಗುತ್ತದೆ. ಇತಿಹಾಸಪ್ರಜ್ಞೆಯ ಕೊರತೆಯೂ ಇದಕ್ಕೆ ಕಾರಣವಿರಬಹುದು. ಅದೇನಿದ್ದರೂ ಈಗ ಕೈಗೊಂಡ ಈ ಪ್ರಕಟಣ ಕ್ರಮ ಶ್ಲಾಘನೀಯವಾದುದು.

ಶ್ರೀ ಲಕ್ಷ್ಮೀಕೇಶವಶಾಸ್ತ್ರಿಯವರ 'ಪ್ರವಚನ ಚಕ್ರವರ್ತಿ ' ಅಭಿನಂದನ ಗ್ರಂಥವು ಅನ್ವರ್ಥವಾದುದು. ಅವರ ಪಾಂಡಿತ್ಯದ, ವಾಗ್ವಿಶೇಷದ ಕುರಿತು ಅದರಲ್ಲಿ ತಮ್ಮ ನೆನಪನ್ನು ಮಥನ ಮಾಡಿದ ಅಗ್ರಣಿ ಲೇಖಕರೆಲ್ಲಾ ಮುಂದಿನ ಪೀಳಿಗೆಗೆ "ಇಂತಹ ಒಬ್ಬ ವರ್ಣರಂಜಿತ ವಾಕ್ಪಟು ಸಂದುಹೋದ" ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ, ಚಿತ್ತಚಿತ್ರಣ ಮಾಡಿದ್ದಾರೆ. ಅವರ ಪ್ರವಚನ ಪ್ರವಾಹದ ಧ್ವನಿಸುರುಳಿಗಳೇನೋ ಬಿಡುಗಡೆಗೊಂಡು ಕೇಳುಗರಿಗೆ ಕರ್ಣಾನಂದಕರ, ವಿದ್ವದಾನಂದಕರ ಹಾಗೂ ದಿವ್ಯಾನಂದಕರವಾದವು.

ಅವರ ಭಾವಾಭಿನಯವೂ ಪ್ರವಚನ ಕಾಲದಲ್ಲಿ ನೋಟಕರ ಕಣ್ಣರಳಿಸಿ, ತಲೆದೂಗಿಸಿ, ಹೃನ್ಮನಗಳಿಗೆ ತಂಪೆರೆದು, ಕವಿಸಮಯಕ್ಕೆ ಒದಗಣೆಯಾಗಿ ಬಂದದ್ದನ್ನು (ಅವರ ಪ್ರವಚನ ದೃಶ್ಯಪಟುತ್ವವನ್ನು ನೋಡದ) ಭಾವೀ ಪೀಳಿಗೆಯವರಿಗಾಗಿ ದೃಶ್ಯ ಮುದ್ರಣವನ್ನು ಮಾಡಿದ್ದರೆ, ಇನ್ನಷ್ಟು ಸೊಗಡು ದೊರಕುತ್ತಿತ್ತೇನೋ ಎನಿಸುತ್ತದೆ. ಈ ಅಪ್ರತಿಮ ಕಥನ ವ್ಯಾಖ್ಯಾನ ಚತುರತೆಗೆ ಜನ್ಮಜಾತ ಸುಳಿವು ನೀಡಬಲ್ಲ ಅವರ ಜನ್ಮಕುಂಡಲಿಯೂ ಈ ಗ್ರಂಥದೊಳಿದ್ದಲ್ಲಿ ಅದು ಹೆಚ್ಚು ಪರಿಪೂರ್ಣವಾಗುತ್ತಿತ್ತೇನೋ ಎಂದು ಅನ್ನಿಸುತ್ತದೆ. ಶ್ರೀಯುತರ ವೈಯಕ್ತಿಕ ವಿಚಾರ ಲಹರಿಗಳ, ಆದ್ಯತೆಗಳ, ಜೀವನದ ಒಳನೋಟಗಳ ಚಿತ್ರಣ ನೀಡಬಲ್ಲ ಒಂದು ಸಂದರ್ಶನ ನಡೆಸಿ, ಪ್ರಶ್ನೋತ್ತರವಾಗಿಸಿದ್ದರೆ ಇನ್ನಷ್ಟು ಕಳೆಕಟ್ಟುತ್ತಿತ್ತೇನೋ.

ಶ್ರೀ ನರಸಿಂಹಮೂರ್ತಿಯವರ 'ನಿಗಮ ಕೌಮುದಿ ' ಅಭಿನಂದನಾ ಗ್ರಂಥವು ಒಂದು ಕಿರೀಟಗ್ರಂಥ. ವೈದಿಕ ಪರಂಪರೆಯ ನಿಷ್ಠ ಕರ್ಮಠನಾಗಿ ಬದುಕಿನ ಸಾರ್ಥಕತೆಯನ್ನು ಕಂಡುಂಡವರೊಬ್ಬರು, ಅಷ್ಟೇ ಉದಾರಶೀಲರಾಗಿಯೂ ಬದುಕನ್ನು ಮೌಲ್ಯಭರಿತವಾಗಿ ಕಾಣಬಲ್ಲವರಿದ್ದರೆಂಬುದಕ್ಕೆ ಇದೊಂದು ನಿಜಗನ್ನಡಿ. ಈ ನಿಗರ್ವಿ ಸಾಧಕನ ಕುರಿತು ಅವರ

ಸಂಸರ್ಗಕ್ಕೆ ಬಂದವರು ಲೇಖಿಸಿದ ಪ್ರಬಂಧಗಳೆಲ್ಲಾ ಈ ಅಂಶಕ್ಕೆ ಪುಷ್ಟಿಕೊಡುತ್ತವೆ. ಅವರೊಂದಿಗೆ ನಡೆಸಿದ ಸಂದರ್ಶನವು ಅವರ ವ್ಯಕ್ತಿತ್ವವನ್ನು ಮತ್ತಷ್ಟು ಹೊರಗೆಡಹುತ್ತದೆ.

'ಜ್ಯೋತಿಶ್ರೀ' ಅಭಿನಂದನ ಗ್ರಂಥವು ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರು ಅಲ್ಪಕಾಲದಲ್ಲಿ ವಿಶೇಷ ಸಾಧನೆ ಮಾಡಿದ ಪವಾಡದ ವರದಿಯಂತಿದೆ. ಶ್ರೀಯುತರು ಕ್ರಮಿಸುತ್ತಿರುವ ಸಾಧನಮಾರ್ಗವು ಇನ್ನೂ ಬಹಳ ಇರುವುದರಿಂದ ವಯೋಮಾನದಲ್ಲಿ ಇನ್ನೂ ಸಾಪೇಕ್ಷವಾಗಿ ಕಿರಿಯವರಾದ ಇವರ ಕುರಿತಾದ ಈ ಗ್ರಂಥವನ್ನು ಭಾಗ೧ ಎಂದು ನಮೂದಿಸಿದ್ದರೆ ಹೆಚ್ಚು ಸೂಕ್ತವೆನಿಸುತ್ತಿತ್ತೆನಿಸುತ್ತದೆ. ಮುಂದಿನ ಭಾಗಗಳನ್ನು ಪ್ರತೀಕ್ಷೆ ಮಾಡುವ ಅವಕಾಶ ಹೆಚ್ಚುತ್ತಿತ್ತು. ಸ್ವತಃ ಶ್ರೀ ಬಿ.ಎನ್.ವಿ.ಯವರ ನಿಜ ಪಥಸಂಚಲನಕ್ಕೆ ಇನ್ನಷ್ಟು ಪುಷ್ಟಿ ದೊರಕುತ್ತಿತ್ತು.

ಶ್ರೀ ವೆಂಕಟಕೃಷ್ಣ ಅವಧಾನಿಯವರ ಅಭಿನಂದನ ಗ್ರಂಥವು 'ಶತಮಾನಂ ಭವತಿ' ಎಂಬ ಹಾರೈಕೆಯನ್ನೇ ತಲೆಬರಹವಾಗಿಸಿಕೊಂಡದ್ದು ವಿಶೇಷ. ಅದು ಹಾಗಾಗಬೇಕು ಕೂಡ ಎಂದು ಯಾರಿಗೂ ಅನ್ನಿಸದೇ ಇರುವುದಿಲ್ಲ. ಗಾತ್ರದಲ್ಲಿ ಚಿಕ್ಕದಾದರೂ ಈ ಗ್ರಂಥವು ಶ್ರೀಯುತರ ಜೀವನಶ್ರದ್ಧೆಗೆ ಕನ್ನಡಿ ಹಿಡಿಯುತ್ತದೆ.

'ತುಂಗ-ಭದ್ರ' ಎಂಬ ದ್ವಿಸಮಾಸದ ಹೆಸರು ಹೊತ್ತ ಅಭಿನಂದನ ಗ್ರಂಥವು ಶ್ರೀ ಮಾರ್ಕಂಡೇಯ ಅವಧಾನಿಗಳನ್ನೂ ಶ್ರೀ ಎಚ್.ಆರ್. ಕೇಶವಮೂರ್ತಿಗಳನ್ನೂ ಯುಗಳವಾಗಿಯೇ ಕಂಡು ಅನ್ವರ್ಥವಾಗಿದೆ. ಒಬ್ಬರು ಕವಿಯ ಭಾಷೆಗೆ ಧ್ವನಿಯನ್ನಿತ್ತು ಮೋಹಜಾಲ ಬೀಸಿದರೆ, ಮತ್ತೊಬ್ಬರು ಕವಿಯ ಧ್ವನಿಗೆ ಅರ್ಥವಂತಿಕೆಯ ಬುದ್ಧಿಪಾಕವನ್ನು ಬಡಿಸಿದವರು. ಈ ದ್ವಂದ್ವಚಿತ್ರಣ ಅಪ್ರತಿಮವಾಗಿ ಮೂಡಿ ಬಂದಿದೆ.

ಈ ಎಲ್ಲಾ ಪುರುಷ ಶ್ರೇಷ್ಠರ ಅಭಿನಂದನೆಯ ಗ್ರಂಥಗಳಲ್ಲಿ ಅವರವರ ಕುಟುಂಬಜೀವನದ ಬೇರುಗಳನ್ನು ವಂಶವೃಕ್ಷ ಚಿತ್ರಣದ ಮೂಲಕ ಪರಿಚಯ ಮಾಡಲೆತ್ನಿಸಲಾಗಿದೆ. ಈವರೆಗೆ ಪ್ರಕಟಗೊಂಡ ಇಂತಹ ಕೆಲವೇ ಕೆಲವು ಗ್ರಂಥಗಳನ್ನೇ ಸಂಪುಟವಾಗಿಸುವ ಈ ಯತ್ನ ಮೆಚ್ಚುವಂತಹುದು. ಅಷ್ಟೇನು, ಇನ್ನುಳಿದ, ಇನ್ನೂ ಗ್ರಂಥರೂಪಕ್ಕೆ ಇಳಿಸಲಾಗದ ಹಿರಿಯ ಚೇತನಗಳ ಕುರಿತೂ ಗ್ರಂಥಜನನಕ್ಕೆ ಇದು ಒತ್ತಾಯದ ಕಾರಣವಾದೀತು. ಅಂತಹ ಪುರುಷ ಸಾಧಕರೊಂದಿಗೆ, ಸಮುದಾಯದ ಸ್ತ್ರೀ ಸಾಧಕಿಯರ ಅಭಿನಂದನ ಗ್ರಂಥವೂ ಹೊರಬಂದೀತು ಎಂದು ನಿರೀಕ್ಷಿಸಬಹುದೇನೋ.

'ಸಂಕೇತಿ ಅಧ್ಯಯನ ' ಸಂಪುಟ ೧ ಮತ್ತು ೨ ಕುರಿತು ಓದುಗರ ಮನಮುಟ್ಟಿದ ವಿಮರ್ಶೆಯು ಈ ಎಲ್ಲಾ ಸಂಪುಟಗಳ ಗುಣವಿಮರ್ಶೆಯಂತೆಯೇ ಇದೆ. ಅಷ್ಟೇನು, ಮುಂದಿನ ಸಂಪುಟಗಳ ಗುಣಗಾತ್ರಗಳನ್ನು ಅವು ಮುಂಗಂಡಿದ್ದವೇ ಎಂದು ಸಂಶಯ ತಾಳಬೇಕಾಗುತ್ತದೆ.

ಈ ಎಲ್ಲಾ ಸಂಪುಟಗಳ ಸಂಪಾದನೆ ಮತ್ತು ಪ್ರಕಟಣೆಯಲ್ಲಿ ತೋರಿಸಿದ ಶ್ರದ್ಧೆ, ಒಪ್ಪ, ಓರಣ, ಮುಂದಿನ ಇಂತಹ ಪ್ರಕಟಣೆಗಳಿಗೆ ಮಾದರಿಯಾಗಬೇಕು ಎಂದು ಹಿಂಜರಿಯದೆ ಶಿಫಾರಸು ಮಾಡಬಹುದು. ಶ್ರೀ ಪ್ರಣತಾರ್ತಿಹರನ್ ಸಾರಥ್ಯದಲ್ಲಿ ಮುಂದಿನ ಸಂಪುಟಗಳ ಪ್ರಕಟಣೆಯ ಕುರಿತೂ ಆಸೆ ತಾಳುವಂತಾಗುತ್ತದೆ.

ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯ, ಹಾಸನ
೧೪.೧.೨೦೦೫

ಪ್ರೊ. ವಿ. ನರಹರಿ
ಪ್ರಾಂಶುಪಾಲರು

೩. ಪರಿವಿಡಿ

ಸಂಕೇತಿ : ಅಭಿನಂದನ

೧. ಪ್ರವಚನ ಚಕ್ರವರ್ತಿ

೨. ನಿಗಮ ಕೌಮುದಿ

೩. ಜ್ಯೋತಿಶ್ರೀ

೪. ಶತಮಾನಂ ಭವತಿ

೫. ತುಂಗ ಭದ್ರ

ಸಂಕೇತಿ ಅಭಿನಂದನ : ಅನುಬಂಧ

೪ ಸಂಪಾದಕರು

ಶ್ರೀ ಎಚ್.ಆರ್. ಕೇಶವಮೂರ್ತಿ

ಪ್ರವಚನ ಚಕ್ರವರ್ತಿ: ಸಂಪಾದಕರು: ಹೊಸಹಳ್ಳಿ ರಾಮಸ್ವಾಮಿ ಶಾಸ್ತ್ರಿ ಕೇಶವಮೂರ್ತಿ (ಜ.೨೨.೨.೧೯೩೪); ತಾಯಿ: ಲಕ್ಷ್ಮೀದೇವಮ್ಮ. ಇಂಟರ್ ಮುಗಿಸಿ ಕೃಷಿ ಕಾಯಕಕ್ಕೆ ಮರಳಿದ ಕೇಶವಮೂರ್ತಿ ಅವರು ಖ್ಯಾತ ಗಮಕಿ ಕುಪ್ಪಹಳ್ಳಿ ವೆಂಕಟೇಶಯ್ಯನವರ ಶಿಷ್ಯರಾಗಿ 'ಗಮಕ ಗಂಧರ್ವ'ರಾಗಿ ಬೆಳೆದರು. ಹೊಸಹಳ್ಳಿಯ ಗ್ರಾಮಾಧ್ಯಕ್ಷರಾಗಿ ಹತ್ತು ವರ್ಷ ಸೇವೆ ಸಲ್ಲಿಸಿದ ಅವರು, ಹತ್ತಿರ ಹತ್ತಿರ ಎರಡು ದಶಕಗಳ ಕಾಲದಿಂದ ಗಮಕ ಕಲಾಪರಿಷತ್ತಿನ ಅಧ್ಯಕ್ಷರೂ ಆಗಿದ್ದಾರೆ; ಅವರ ಗಮಕ ವಾಚನದ ಸಮ್ಮೋಹಕ ಶಕ್ತಿಗೆ ವಶರಾಗದವರಿಲ್ಲ. ವಿವಾಹವಾದದ್ದು ೧೯೫೦ರಲ್ಲಿ ಹೊಸಹಳ್ಳಿಯ ನಂಜುಂಡಾವಧಾನಿಗಳ ಮಗಳು ಶ್ರೀಮತಿ ರಾಜೇಶ್ವರೀ ಅವರನ್ನು. ನಂಜುಂಡಾವಧಾನಿಗಳೂ ಹೊಸಹಳ್ಳಿ ಗ್ರಾಮದ ಅಧ್ಯಕ್ಷರಾಗಿದ್ದವರು, ಖ್ಯಾತ ಜ್ಯೋತಿಷಿ ಕೂಡ ಆಗಿದ್ದವರು.

ಶ್ರೀ ಎಲ್.ವಿ. ಸೀತಾರಾಮ್

ನಿಗಮ ಕೌಮುದಿ: ಪ್ರಧಾನ ಸಂಪಾದಕರು: ಲಿಂಗದಹಳ್ಳಿ ವೆಂಕಟರಮಣ ಅವಧಾನೀ ಸೀತಾರಾಮ್. ವಾಧೂಲಸ, ಯಜುರ್ವೇದ, ಆಪಸ್ತಂಬ. ಎಂ.ಎ. (ಕನ್ನಡ), ಪ್ರೌಢಶಾಲಾ ಅಧ್ಯಾಪಕರು. ನಿವೃತ್ತರಾದ ಮೇಲೂ ಎಲ್ಲ ಜಾತಿಗಳ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ವಸತಿ ನೀಡಿ, ಊಟ ಹಾಕಿ ಪಾಠವನ್ನೂ ಹೇಳುವ ಕಾಯಕದ ಮುಂದುವರಿಕೆ. ತಂದೆ: ಪುರೋಹಿತರು. ತಾಯಿ ಲಿಂಗದಹಳ್ಳಿಯ ಮಹಾಲಕ್ಷ್ಮಮ್ಮ ಸಂಪ್ರದಾಯದ ಹಾಡುಗಳಲ್ಲಿ ಸಿದ್ಧಹಸ್ತರು. ಪತ್ನಿ ಭಾಗ್ಯಲಕ್ಷ್ಮಿ: ತಂದೆ ರಾಮಾಜೋಯಿಸ್ ಬೀರೂರು ಮೂಲದವರು; ಸಂಗೀತ ಅಧ್ಯಾಪಕರು, ನಟರು, ಸಿನೆಮಾದ ಹಿನ್ನೆಲೆ ಸಂಗೀತಕ್ಕೆ ಪಿಟೀಲು ವಾದಕರು; ಕೌಂಡಿನ್ಯ, ಯಜುರ್ವೇದ, ಆಪಸ್ತಂಬ.

ಪ್ರೊ. ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಜ್ಯೋತಿಶ್ರೀ : ಪ್ರೊ. ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಎಂ.ಎಸ್‌ಸಿ. (ಭೌತಶಾಸ್ತ್ರ), ಅವರು ನಿವೃತ್ತ ಪ್ರಾಧ್ಯಾಪಕರು. ನರಸಿಂಹರಾಜಪುರ ಪೂರ್ವಿಕರ ನೆಲೆ. ತಂದೆ: ಎಚ್.ಶೇಷಭಟ್ಟ, ತಾಯಿ: ಚಿನ್ನಮ್ಮ; ಆತ್ರೇಯಸ ಗೋತ್ರ, ಋಗ್ವೇದ, ಆಶ್ವಲಾಯನಸೂತ್ರ. ಪ್ರೊ|| ಭಟ್ಟರು ಉತ್ತಮ ವಾಗ್ಮಿ. ಡಿವಿಜಿ ಅವರ ಕಗ್ಗದ ಬಗೆಗೆ ಸಾವಿರಕ್ಕೂ ಹೆಚ್ಚು ಉಪನ್ಯಾಸ ನೀಡಿದ ಕೀರ್ತಿ ಅವರದು. ಪತ್ನಿ: ಎ. ಪುಷ್ಪವಲ್ಲಿ ಬಿ.ಎ., ಆರಗದವರು; ಸಂಗೀತ, ಸಾಹಿತ್ಯದಲ್ಲಿ ಆಸಕ್ತೆ.

ಶ್ರೀ ರಾಜಾರಾಮಮೂರ್ತಿ

ಶತಮಾನಂ ಭವತಿ ಮತ್ತು ತುಂಗ ಭದ್ರ: ಸಂಪಾದಕರು: ಹೊಸಹಳ್ಳಿ ಲಕ್ಷ್ಮೀರಮಣ ಅವಧಾನೀ ರಾಜಾರಾಮಮೂರ್ತಿ. ನಿತುಂದಿಲ, ಯಜುರ್ವೇದ, ಆಪಸ್ತಂಬ. ತಂದೆ: ಲಕ್ಷ್ಮೀರಮಣ ಅವಧಾನಿಗಳು ಔಪಾಸನಾಗ್ನಿ ಧಾರಕರು, ೧೯೬೧ರಲ್ಲಿ ಅಷ್ಟಗ್ರಹಕೂಟವಾದಂದಿನಿಂದ ದೈವಾಧೀನರಾಗುವವರೆಗೆ ಪ್ರತಿ ಸೋಮವಾರ ಏಕಾದಶವಾರ ರುದ್ರಾಭಿಷೇಕವನ್ನೂ ಪ್ರದೋಷ ಪೂಜೆಯನ್ನೂ ನಿರಂತರವಾಗಿ ನಡೆಸಿದವರು, ಶಿವಮೊಗ್ಗ ಜಿಲ್ಲೆ ಬಸವಾಪಟ್ಟಣದಲ್ಲಿ ನಡೆದ ಬೃಹತ್ ಯಾಗದಲ್ಲಿ ಪ್ರಧಾನಾಚಾರ್ಯರಾಗಿದ್ದವರು, ಅಶ್ವತ್ಥಪುರದಲ್ಲಿನ ಸಹಸ್ರ ಚಂಡೀಯಾಗದಲ್ಲಿ ಆಚಾರ್ಯರಾಗಿದ್ದವರು, ೧೯೭೩ರಲ್ಲಿ ದೆಹಲಿಯಲ್ಲಿ ನಡೆದ 'ಅಖಿಲ ಭಾರತ ವೇದ ಸಮ್ಮೇಳನ'ಕ್ಕೆ ಆಹ್ವಾನಿತರಾಗಿ ಪಾಂಡಿತ್ಯ ಪ್ರದರ್ಶನ ಮಾಡಿದವರು, ಮತ್ತೂರು

ಹೊಸಹಳ್ಳಿಗಳ ನಡುವೆ ನದಿಗೆ ಸೋಪಾನ ಮತ್ತು ಜಪಸ್ಥಾನ ನಿರ್ಮಾಣ ಕಾರ್ಯದಲ್ಲಿ ಮುಂದಾಳಾಗಿದ್ದವರು. ತಾಯಿ: ಅನ್ನಪೂರ್ಣಮ್ಮ. ರಾಜಾರಾಮಮೂರ್ತಿ ಎಂ.ಎ., (ಕನ್ನಡ), ಮುದ್ರಕರು, ಲೇಖಕರು, ವ್ಯಾಖ್ಯಾನಕಾರರು; 'ಸಂಕೇತಿ ಸಂಗಮ' ಮಾಸಪತ್ರಿಕೆಯ ಸಂಪಾದಕರು.

ಪೂಮಗಾಮೆ ಗೋಪಿ (ಶ್ರೀ ನಾಗೇಶ್ ಎಸ್)

ಸಂಕೇತಿ: ಅಭಿನಂದನ: ಸಂಪಾದಕರು: (ಪೂಮಗಾಮೆ) ಶ್ರೀನಿವಾಸಮೂರ್ತಿ ನಾಗೇಶ್ (ಪೂಮಗಾಮೆ ಗೋಪಿ) (ಜ.೧೯೬೭) ಕನ್ನಡದಲ್ಲಿ ಎಂ.ಎ., ಹಿಂದಿಯಲ್ಲಿ ರಾಷ್ಟ್ರಭಾಷಾ ಪ್ರವೀಣ್, ಡಿ.ಎಂ.ಇ (ಎ.ಇ.), ಬಿ.ಲಿಬ್.ಸೈನ್ಸ್., ಸದ್ಯ ಹಾಸನದ ಸರ್ಕಾರಿ ಕಲಾ ಕಾಲೇಜಿನ ಗ್ರಂಥಾಲಯ ನಿರ್ವಾಹಕರು. ಕಂಪ್ಯೂಟರ್ ತರಪೇತಿ ಪಡೆದು ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ನಾಗೇಶ್ ಎಲಿಜಿಬಿಲಿಟಿ ಫಾರ್ ಲೆಕ್ಚರರ್‌ಶಿಪ್ ಸರ್ಟಿಫಿಕೇಟ್ [UGC(NET)] ಕೂಡ ಪಡೆದಿದ್ದಾರೆ. ಹಾಸನದ ರಿಮ್ಯಾಂಡ್ ಹೋಂನಲ್ಲಿ ನೈತಿಕ ಶಿಕ್ಷಣದ ಅಧ್ಯಾಪಕ; ಹಾಸನದ ಎನ್.ಡಿ.ಆರ್.ಕೆ. ನರ್ಸಿಂಗ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕ; ಹಾಸನದ ಸುನೀತಾ ಬಾಲಕಿಯರ ಪ್ರೌಢಶಾಲೆಯಲ್ಲಿ ಗಣಿತದ ಅಧ್ಯಾಪಕ; ವಿವಿಧ ಔದ್ಯಮಿಕ ಸಂಸ್ಥೆಗಳಲ್ಲಿ ಮೆಕ್ಯಾನಿಕ್, ಫೋರ್‌ಮನ್, ವರ್ಕ್‌ಷಾಪ್ ಸೂಪರ್‌ವೈಸರ್- ಹೀಗೆ ಅವರದು ವೈವಿಧ್ಯಪೂರ್ಣವಾದ ಉದ್ಯೋಗಾನುಭವ. ಕನ್ನಡ, ಇಂಗ್ಲಿಷ್, ಸಂಸ್ಕೃತ, ಹಿಂದಿ, ತಮಿಳು ಭಾಷೆಗಳಲ್ಲಿ ಪರಿಶ್ರಮ ಉಳ್ಳ ನಾಗೇಶ್ ಬಹುಮುಖ ಹವ್ಯಾಸಗಳನ್ನು ಉಳ್ಳವರು; ಹತ್ತನೆಯ ತರಗತಿಯವರೆಗೆ ಬಡಮಕ್ಕಳಿಗೆ ಉಚಿತವಾಗಿ ಪಾಠ ಹೇಳಿಕೊಡುವುದೂ ಅವುಗಳಲ್ಲಿ ಒಂದು. ಪ್ರಥಮ ಚಿಕಿತ್ಸೆಯಲ್ಲಿ ತರಬೇತಿ ಹೊಂದಿರುವ ಅವರು ಅಗತ್ಯ ಉಳ್ಳವರಿಗೆ ಸೇವೆ ಒದಗಿಸುತ್ತಾರೆ; ಪದ್ಯ, ಲೇಖನ, ನಾಟಕ ಬರೆಯುತ್ತಾರೆ; ಚೆಸ್ ಮತ್ತು ಕೇರಂ ಆಡುತ್ತಾರೆ; ಒಳ್ಳೆಯ ಭಾಷಣಗಳಿಗೂ ಭಕ್ತಿಗೀತೆಗಳಿಗೂ ಕಿವಿ ತೆರೆದಿಡುತ್ತಾರೆ; ಆಟೋಮೊಬೈಲ್ ರಿಪೇರಿ ಮಾಡುತ್ತಾರೆ; ಚಿತ್ರ ಕಲೆಯಲ್ಲೂ ಸಾಧನೆ ಮಾಡಿದ್ದಾರೆ; ರಸಪ್ರಶ್ನೆಯ ಸ್ಪರ್ಧೆಗಳನ್ನು ನಡೆಸಿದ್ದಾರೆ. ಪೂಮಗಾಮೆಯ ಮೂಲದ ನಿವೃತ್ತ ಅಧ್ಯಾಪಕ ಶ್ರೀ ಎಂ. ಶ್ರೀನಿವಾಸಮೂರ್ತಿ (ವಾಧೂಲಸ, ಯಜುರ್ವೇದ, ಆಪಸ್ತಂಬ) ಮತ್ತು ಶ್ರೀಮತಿ ಪದ್ಮಾ ಅವರ ಪುತ್ರರಾದ ಅವರು ಕ್ರಿಯಾಶೀಲರು, ಚಿಂತಕರು, ತಮಗೆ ಒದಗಿ ಬಂದ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುವಂಥವರು.

ಈ ಗ್ರಂಥದ ಬಗೆಗೆ

ಸಂಕೇತಿ: ಅಭಿನಂದನ

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಡಾ. ಕೆ. ಅನಂತರಾಮು
ನಿವೃತ್ತ ಕನ್ನಡ ಪ್ರಾಧ್ಯಾಪಕರು

'ಸಂಕೇತಿ: ಅಭಿನಂದನ' ಎಂಬ ಈ ಮಹಾಸಂಪುಟವು ಆರು ಜನ ಸಂಕೇತಿ ಮಹನೀಯರಿಗೆ ಬೇರೆ ಬೇರೆ ಕಾಲದೇಶಗಳಲ್ಲಿ ಅರ್ಪಿಸಿದ ಅಭಿನಂದನ ಸಂಪುಟಗಳನ್ನು ತನ್ನಲ್ಲಿ ಅಡಕಮಾಡಿಕೊಂಡಿದೆ. ಎಲ್ಲೆಲ್ಲಿಯೋ ಚೆಲ್ಲಿ ಮರೆಯಾಗಿ ಹೋಗಬಹುದಾದ ಆ ಬಿಡಿಬಿಡಿ ಸಂಪುಟಗಳನ್ನು ಆಯ್ದುತಂದು ಒಂದರೊಳಗೇ ಐಕ್ಯಗೊಳಿಸಿರುವ ಈ ಅದ್ವೈತ ಒಂದು ದೊಡ್ಡ ಸಾಧನೆ. ಈ ಮಹಾಸಂಪುಟವು ಒಳಗೊಂಡಿರುವ ಮಹನೀಯರ ಅನನ್ಯವಾದ ಸಾಧನೆಸಿದ್ಧಿಗಳನ್ನು ಅವಲೋಕಿಸುತ್ತ ಹೋದಂತೆಲ್ಲ ನಾವು ರೋಮಾಂಚನಗೊಳ್ಳುತ್ತೇವೆ. ಈ ಸಮುದಾಯದಲ್ಲಿ ಇಬ್ಬರು ಈಗಿಲ್ಲ; ಆದರೂ 'ಅಳಿಸಲಾರದ ಹೆಜ್ಜೆಗುರುತುಗಳನ್ನು ಹೇಗೆ ಮೂಡಿಸಿ ಹೋಗಿದ್ದಾರಪ್ಪಾ' ಎಂದು ನಾವು ವಿಸ್ಮಯಾಭಿಭೂತರಾಗುತ್ತೇವೆ. ತೆಂಗಿನಮರದಿಂದ ಉದುರಿಬೀಳುವ ಗರಿಯೊಂದು ತನ್ನ ಗುರುತನ್ನು ಬಿಟ್ಟೇ ಉದುರುತ್ತದೆ. ಇನ್ನು ಮಾನವರಾದ ನಾವು ಏನಾದರೂ ಸತ್ಕಾರ್ಯದ ಒಂದಿಷ್ಟು ಗುರುತುಗಳನ್ನು ಈ ಜಗತ್ತಿನಲ್ಲಿ ಬಿಟ್ಟು ಉದುರಬೇಡವೇ! ಈ ಮಹಾಸಂಪುಟದಲ್ಲಿ ಸೇರ್ಪಡೆಯಾಗಿದ್ದು, ಇನ್ನೂ ನಮ್ಮ ನಡುವೆ ಓಡಾಡಿಕೊಂಡಿರುವ ಪುಣ್ಯಪುರುಷರು ಇಲ್ಲಿಂದ ಮುಂದಕ್ಕೆ ಏನೂ ಮಾಡದೆ ಸುಮ್ಮನಿದ್ದರೂ ನಡೆಯುತ್ತದೆ; ಏಕೆಂದರೆ ಅವರೆಲ್ಲ ಈಗಾಗಲೇ ತಮ್ಮ ಕೀರ್ತಿಧ್ವಜವನ್ನು ಕನ್ನಡದ ಬಾನಿನಲ್ಲಿ ಹಾರಿಸಿಬಿಟ್ಟಿದ್ದಾರೆ.

ಈ ಬಗೆಯ ಮಹಾಸಂಪುಟವೊಂದನ್ನು ರೂಪಿಸುವ ಕಲ್ಪನೆಯೇ ಮಹೋನ್ನತವಾದುದು. 'ಹಾಗೆ ಕಲ್ಪಿಸಿಕೊಳ್ಳುವುದು ಸುಲಭ' ಎಂದು ಭಾವಿಸಬಹುದಾದರೂ ಅದನ್ನು ಕೃತಿರೂಪಕ್ಕೆ ಇಳಿಸುವುದೇನೂ ಸುಲಭಸಾಧ್ಯವಾದ ಕಾರ್ಯವಲ್ಲ. ಇಂತಹ ದುಸ್ಸಾಧ್ಯವಾದ ಕಾರ್ಯವೊಂದನ್ನು ಕೈಗೆತ್ತಿಕೊಂಡು ಡಾ. ಪ್ರಣತಾರ್ತಿಹರನ್ ತಮ್ಮ ಪ್ರಧಾನ ಸಂಪಾದಕತ್ವದಲ್ಲಿ, ಅದನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಮೇಲುನೋಟಕ್ಕೆ ಈ ಮಹಾಸಂಪುಟವು ನಾಲ್ಕೈದು ಬಿಡಿಬಿಡಿ ಸಂಪುಟಗಳ ಸಂಕಲನವೆಂದು ತೋರುತ್ತದೆಯಾದರೂ ಅದನ್ನು ಇಷ್ಟು ಅಚ್ಚುಕಟ್ಟಾಗಿ ಸಂಯೋಜಿಸಿ, ಸಂಕಲಿಸಿ, ಸೂಕ್ತವಾಗಿ ಸಂಪಾದಿಸಿ ಹೊರತಂದಿರುವುದು ಅಮೋಘವಾದ ವಿಚಾರ. ಸಂಕೇತಿ ಸಂಸ್ಕೃತಿಯನ್ನು ಕಣ್ಮುಂದೆ ತಂದು ನಿಲ್ಲಿಸಲು ಡಾ. ಪ್ರಣತಾರ್ತಿಹರನ್ ಈಶ್ವರಾರ್ಪಣ ಭಾವದಿಂದ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದಾರೆ. ಆ ದಿಕ್ಕಿನಲ್ಲಿ ಸಾಗುವಾಗ ತಮಗಾದ ನೋವು ನಿರಾಸೆಗಳನ್ನೆಲ್ಲ ನೀಲಕಂಠನಂತೆ ತಾವೇ ನುಂಗಿಕೊಂಡು, ಸಂಕೇತಿಬಂಧುಗಳಿಗೆ ಅಮೃತವನ್ನೇ ಉಣಬಡಿಸಿದ್ದಾರೆ.

ಹುಚ್ಚು ಸಾಂಕ್ರಾಮಿಕವಲ್ಲದಿದ್ದರೂ ತಮ್ಮ ಹುಚ್ಚನ್ನೇ ಶ್ರೀ ಪೂಮಗಾಮೆ ಗೋಪಿಯವರಿಗೂ ಡಾ. ಹರನ್ ಅವರು ಹಚ್ಚಿ ಈ ಮಹಾಸಂಪುಟದ ಸಂಪಾದಕತ್ವವನ್ನೆಲ್ಲ ಅವರಿಗೆ ವಹಿಸಿಕೊಟ್ಟಿರುವುದು ಒಂದು ಮಹತ್ತ್ವದ ಬೆಳವಣಿಗೆ. ಇನ್ನೀಗ ಈ ಸಂಕೇತಿ ಸಂಸ್ಕೃತಿಯನ್ನು ದಾಖಲೀಕರಿಸುವ ಸೊಡರು ನಂದುವುದಿಲ್ಲವೆಂಬ ಭರವಸೆ ಮೂಡಿದಂತಾಗಿದೆ. ಇಂತಹ ಸಂಕೀರ್ಣ ಸಂಪುಟವೊಂದನ್ನು ಸಮರ್ಪಕವಾಗಿ ಸಂಪಾದಿಸಿರುವ ಪೂಮಗಾಮೆ ಗೋಪಿಯವರನ್ನೂ ನಾನು ಅಭಿನಂದಿಸುತ್ತೇನೆ.

ಸಂಕೇತಿಗಳನ್ನು ಮಾತ್ರವಲ್ಲ, ಸಂಸ್ಕೃತಿ ಪ್ರೇಮಿಗಳಾದ ಸಮಸ್ತ ಕನ್ನಡಿಗರನ್ನೂ ಈ ಸಂಪುಟವು ಆಕರ್ಷಿಸುವುದರಲ್ಲಿ ಎರಡು ಮಾತಿಲ್ಲ.

***

ಸರ್ಕಾರಿ ವಿಜ್ಞಾನ ಕಾಲೇಜು
ಹಾಸನ

ಡಾ. ಬಿ.ಎಸ್.ನರಹರಿ
ಭೌತಶಾಸ್ತ್ರ ಪ್ರಾಧ್ಯಾಪಕರು

'ಸಂಕೇತಿ ಅಧ್ಯಯನ' ಮಾಲಿಕೆಯ ಮೊದಲೆರಡು ಸಂಪುಟಗಳು ಸಂಶೋಧನಾ ಕೃತಿಗಳು, ಮೂರನೆಯದು ಕೃತಿ ಸಂಚಯ. ಸಂಶೋಧನಾತ್ಮಕ ಕೃತಿಗಳಿಗೆ ಆದ್ಯತೆ ಇರಬೇಕೆಂಬುದು ಓದುಗರ ಸಹಜ ನಿರೀಕ್ಷೆ. ಕ್ರೋಡೀಕರಣವು ಒಂದು ರೀತಿಯಲ್ಲಿ ಪುನರ್ ಪ್ರಕಾಶನ. ಆದರೂ ಪ್ರಕೃತ ಸಂಪುಟವು ಪಡೆದುಕೊಂಡ ನೂತನ ಸ್ವರೂಪವು ಈ ಮಾದರಿಯ ಸಾಹಿತ್ಯದ ಹೊಸಸಾಧ್ಯತೆಯನ್ನು ತೋರಿಸಿಕೊಟ್ಟಿದೆ. ಇದರಲ್ಲಿ ಸೇರಿರುವ ಐದೂ ಗ್ರಂಥಗಳನ್ನು ಒಂದೆಡೆ ಅವಲೋಕಿಸುವ ಸೌಲಭ್ಯ, ವ್ಯಕ್ತಿಚಿತ್ರಣಗಳನ್ನು ರೂಪಿಸುವವರಿಗೆ ಲಭ್ಯವಾದ 'ಮಾದರಿ', ಅಂಥ ಹೆಚ್ಚಿನ ಸಾಹಸಕ್ಕೆ ಪ್ರೇರಣೆ ಮತ್ತು ಪ್ರಚೋದನೆ- ಇಲ್ಲಿನ ಅತಿಶಯದ ಸಾಧನೆಗಳು. ಒಬ್ಬ ವ್ಯಕ್ತಿಯ ಬಗೆಗಿನ ಇಷ್ಟೊಂದು ಮಾಹಿತಿ ಒಂದೆಡೆ ದೊರೆಯುತ್ತದೆ ಎನ್ನುವುದು ದೊಡ್ಡ ಪ್ರಯೋಜನವೇ ಸರಿ. ಇಂಥ ಆಕರಗಳು ಸಂಶೋಧನೆಗೆ ಬೇಕಾದ ಪೂರಕ ಸಾಮಗ್ರಿ ಎಂಬುದೂ ನಿಜ. ಸಂಕೇತಿ ಅಧ್ಯಯನ ಯೋಜನೆಯಲ್ಲಿ ಪಾಲ್ಗೊಂಡ ವಿವಿಧ ವಿದ್ವಾಂಸರು ಗ್ರಂಥಗಳನ್ನು ಸಿದ್ಧಪಡಿಸಿದ ಕಾಲಾನುಕ್ರಮದಲ್ಲಿ ಸಂಪುಟಗಳು ಪ್ರಕಾಶನಗೊಳ್ಳುತ್ತವೆ ಎಂಬುದೂ ಅರ್ಥವಾಗುವ ಸಂಗತಿ.

ಇಲ್ಲಿ ಚಿತ್ರಿತರಾದವರೆಲ್ಲ ತಮ್ಮ ಬದುಕನ್ನು ಒಂದು ದೊಡ್ಡ ಉದ್ದೇಶಕ್ಕಾಗಿ ಸಮರ್ಪಿಸಿಕೊಂಡು ಉನ್ನತವಾಗಿ ಬಾಳಿದ ಮಹನೀಯರು. ಅವರ ಬಾಳು ಒಂದು ತಪಶ್ಚರ್ಯೆಯಂತೆ ಕಾಣುತ್ತದೆ. ಅದರಲ್ಲಿ ಅವರು ಆತ್ಮಾನಂದ ಕಂಡಿದ್ದಾರೆ. ಅವರಲ್ಲಿ ಯಾರೂ ಭಾಷಣ ಬಿಗಿದವರಲ್ಲ, ಲೇಖನಗಳ ಮೂಲಕ ತಮ್ಮನ್ನು ವೈಭವೀಕರಿಸಿಕೊಂಡು ಇತರರನ್ನು ಕೀಳುಗೈದವರಲ್ಲ; ಬದಲಿಗೆ ಎಲ್ಲರೂ ಒಂದು ಉನ್ನತಿಯನ್ನು ಬಾಳಿ ತೋರಿಸಿದವರು. ಹೀಗೆ ಹಿರಿಯ ಸಾಧನೆ ಮಾಡಿದ ಹಲವು ಹತ್ತು ಗಣ್ಯರು ಈಗಲೂ ನಮ್ಮೊಡನೆ ಇದ್ದಾರೆ ಎನ್ನುವುದು ಹೆಮ್ಮೆಯ ಮತ್ತು ಹರ್ಷದ ಸಂಗತಿ. ಅವರೆಲ್ಲರ ವ್ಯಕ್ತಿಚಿತ್ರ ಹೀಗೆಯೇ ಮೂಡಿ ಬರಲಿ; ಅವು ಮುಂಬರುವ ಪೀಳಿಗೆಗಳಿಗೆ ದಾರಿದೀಪಗಳಾಗಿ ಬೆಳಗಲಿ. ಒಂದು ಸಂಸ್ಕೃತಿಯ ಸ್ವರೂಪವನ್ನು ಕಟ್ಟಿಕೊಡಲು ಅಪಾರ ಶ್ರಮ ವಹಿಸುತ್ತಿರುವ ಸಮುದಾಯ ಅಧ್ಯಯನ ಕೇಂದ್ರಕ್ಕೆ ಎಲ್ಲ ಯಶಸ್ಸೂ ಸಿಗಲಿ.

****


ಶೇಷಾದ್ರಿಪುರಂ ಕಾಲೇಜು
ಬೆಂಗಳೂರು

ಪ್ರೊ. ಎಂ.ಎಸ್. ಚಂದ್ರಶೇಖರ
ಸಂಸ್ಕೃತ ಪ್ರಾಧ್ಯಾಪಕರು

ಸೋತ್ಸಾಹಾನಾಂ ನಾಸ್ತ್ಯಸಾಧ್ಯಮ್

. . . ಇಲ್ಲಿ ಚಿತ್ರಿತರಾದ ಗಣ್ಯರ ಜೀವನ ಮತ್ತು ಅವರ ಸಾಧನೆಗಳ ವಿವರಗಳು ಸ್ಫೂರ್ತಿದಾಯಕವಾಗಿವೆ. ದಿನಗಳೆದಂತೆ ಈ ಗ್ರಂಥದ ಸಾಂಸ್ಕೃತಿಕ ಮೌಲ್ಯ ಅಧಿಕವಾಗುತ್ತ ಹೋಗುತ್ತದೆ . . .

****



ಸಂಪುಟ 4

ಸಂಕೇತಿ : ಭಾಷಾಧ್ಯಯನ

ಸಂ : ಪ್ರೊ|| ಎಚ್.ಎಸ್. ಅನಂತನಾರಾಯಣ

a) Sanketi Studies

The present volume, `Sanketi : A Linguistic Study' examines the Sanketi language that is being spoken by this community. Sanketi is the name of the community, and is extended also to the language they speak in Karnataka.

There are many communities in Karnataka whose mother tongue is Tamil. Barring the new migrants, Tamil that is being spoken by the Tamil-settlers does not bear any resemblance to Tamil that is being spoken in Tamilnadu. There are many changes and variations; only the degree may vary from variety to variety.

Even then the Sanketi dialect has drawn the attention of many linguists and a great deal of research has been done on this language. When compared to other varieties the phenomenal changes that have taken place in Sanketi may be the main reason for evincing so much interest in its study.

Many linguists and scholars have attempted an in-depth study of Sanketi and have written interesting articles on it in many learned journals. They have presented their findings in Seminars and Conferences. Except one or two articles, all other articles have been included in the present volume. Two Ph.D. theses will be published separately.

Editing of such articles for a single volume does pose many problems and challenges to the editor. There may be justification for using different data and their inferences for the need-based articles. But when brought together in a volume, the repetitions and problem of uniformity poses great challenges to the editor. Only a person who has command over the Sanketi language and is a great linguist can undertake such a stupendous task successfully.

Of late a great deal of cultural studies has taken place and new findings have comeout on many aspects of Sanketi community viz. the original home of Sanketis, their migration, remigration, conversion etc. In addition to the cultural studies, language also should act as an examining factor and linguists should look from this angle also:

The Sanketis migrated to Shenkottai from the banks of the river Narmada. That migration took place a little before Sri Adi Shankaracharya, and by A.D. 1087 the majority of the Sanketis migrated to Karnataka. This is an inference drawn from the cultural studies in a contextual base.

We can also examine the above findings based on such linguistic studies from various aspects such as, the time that Malayalam got separated from Tamil, the geographical and linguistic atmosphere in and around Shenkottai, the special features of Sanketi dialect which are different from those avaiable in other Brahmin varities of Tamil Nadu.

One branch of the Sanketi community which had settled in Shenkottai left for Palghat in the present Kerala State and now they are known as "Palghat Iyers", another branch left for Kerala and they are called `Nambudiris'. Their nomenclature became slightly different from Brihachcharana and Vadama. This suggests that the Sanketi community is different from other Tamil Brahmin sects, and this may be examined by a comparative linguistic study.

Corresponding to Tinnavelly, Kanyakumari, Thiruvananthapuram and Kollam districts there were four `Sankethams'. Sanketis were the Chieftains of them. We get this definite and precise information from many sources.

The major groups (branches) of Sanketis that have settled down in Karnataka are Kaushika and Bettadapura. In addition, we have Lingadahalli and Mattur varieties also. Besides, in Kaushika Sanketi one comes across a distinct, unique speech-styles or shade based either on lineage or villages. One cannot also ignore the multiplicity in the usage of words or pronunciations. One has to take into account the fine nuances of the Sanketi variety of the Hassan area. Enormous data collected from vast field work helps us in knowing whether the origin of the Sanketis of Karnataka could be traced in different Sankethams of the original place.

Sri Keshavaiah recorded about 70 years ago (1936)that Srivaishnavas of Hemmige are the complete converts from Sanketis. The recent cultural studies have given us details

which corroborate his earlier findings. A comparative study of the speech of these two communities, i.e., Sanketis and Srivaishanavas of Hemmige - would also help us in finding out and confirming whether the Sanketi migration took place along the route of Hemmige in T. Narasipur Taluk, Mysore District.

Similarly, a comparative study of the speeches of Attankoota and Hebbar Sri Vaishnava sects with Sanketi dialect should also be under-taken. There is a legend that these communities are formed out of Sanketis. The cultural evidences should be complemented by the results of the linguistic studies. Not only that, the comparative study of the Tamil varieties of Karnataka should also examine the antiquity of the Sanketi dialect.

Thus, linguistic studies have to be undertaken as complementary to the cultural and social study of Sanketi since almost all the languages are losing their identities mostly because of urbanisation and globalisation very quickly; there is an urgent necessity to take up these studies at the earliest.

The data collected from the urban respondents only, or collected from only a few respondents may be misleading many times. Naturally the Sanketi urbanites who are away from the real-Sanketi speaking areas and who do not have intimate contact with them might have been influenced to a greater extent by the environment in which they are living, specially with regard to the language.

We find in a few places Kannada words being used for which very good Sanketi words are available. If we base our study on such data, we may end up in misleading inferences.

The Kannadisation of the Sanketi language of Karnataka coincides with the time when Sanketis collectively opened up themselves to modern education (ca. A.D. 1950). The process of urbanisation (A.D. 1975) has hastened the process of Kannadisation (of Sanketi language). But we are fortunate that even today we have representatives of all the regional dialects still settled in rural areas. There are elders who could help us in providing fairly original forms. Extensive field work has to be carried out for a dictionary containing the words and usages from various dialects of Sanketi; this has become the need of the hour.

There is much to be done regarding the Sanketi language from the linguistic point of view, yet this unique volume could go a long way in providing the necessary

information from many angles. This contains articles of in depth study. Since the majority of the articles are in English, this will help the non-Kannada Sanketis, i.e., Sanketis of Kerala and Tamilnadu, the Sanketis who are in the USA and Sanketis who cannot read Kannada language.

There is a complex amongst Kannadigas that it would be more respectable to speak in English rather than in their mother tongue; the same complex is deep rooted among the Sanketis too. There are sufficient evidences in this volume for Sanketis to feel proud of their language. The people of this small community have spread over vast areas due to many reasons. The only emotional bond which can bind them together is the Sanketi speech.

I hope this volume will open up avenues for many more studies on Sanketi language.

We are fortunate that Prof. H.S. Ananthanarayana, Professor and Head of the Dept. of Linguistics (Retd.), Osmania University, Hyderabad, an internationally reputed linguist has undertaken the stupendous task of editing this volume. Scholars may find this useful, and dependable for further research and studies on Sanketi language. The Samudaya Adhyayana Kendra would like to place on record its gratitude to Prof. H.S. Ananthanarayana for his invaluable contribution.

The Centre acknowledges with gratitude the permission given by Prof. H.S. Ananthanarayana, Dr. K. Kempe Gowda, Mr. Kikkeri Narayana, Dr. K.S. Nagaraja, Dr. C.S. Ramachandra to include their invaluable articles in this volume.

The co-operation extended by Sri N.S. Sharada Prasad, Translator (Retd.), Kuvempu Institute of Kannada Studies, Manasagangotri, Mysore in bringing out this volume is unique in many ways. He has given valuable suggestions keeping in mind the genius of the Sanketi language. We are fortunate that he has involved himself in the publication of this series earnestly. The Centre records its deep appreciation for his commitment and involvement in the project.

Mysore
6-6-2006

Dr. B.S. Pranatartiharan
Chief Editor

b) ABOUT THE VOLUME

The present volume on the speech of the Sanketis is a collection of papers written over a period of time, spanning 40 years, by five scholars, three of whom are native speakers and two are non-natives. All of them were trained in the methods of modern linguistics and were involved in teaching post-graduate students in linguistics.

The articles are arranged in two sections, those which are in English and those which are in Kannada, to be followed in the end by the `Vocabulary' presented in English. There are 29 articles in English of which 20 have already been published in various professional journals, and two in the souvenirs. Three short papers introducing the topic treated in the papers that follow them were specially written for the volume. They are more general and non-technical, and help the readers to understand the technical papers. The two papers of Kikkeri Narayana formed originally part of the thesis submitted in partial fulfilment, for the award of M.A. in Linguistics at the University of Poona.

The papers are arranged by topics as they are generally treated in a grammar of any language, phonology first to be followed by morphology. Thus it has become possible for the readers to get a comprehensive idea of the grammar of Sanketi, in the absence of such a treatment by any one individual. It will become clear to the users of this volume that Sanketi like any other dialect / language possesses a grammar which is simple in certain areas but complex in others, as any natural language. It dispels the misconception on the part of some that Sanketi has no grammar of its own.

Besides phonology and morphology, one may note that some attempt is being made in the areas of semantics, lexicology, and language change. Without advancing linguistic evidence, some have attempted to group Sanketi under Malayalam and some under Kannada. On a careful reading of the materials presented in the papers and of the linguistic analysis which has clearly brought out the structure of Sanketi, no one will be left with any doubt regarding the linguistic affinity of Sanketi. It is a dialect of Tamil. The basic grammatical structure and the core vocabulary support this assumption.

The Kannada section includes 13 articles of which only four are specially written for this volume. The remaining have already been published and most of these in souvenirs and magazines. Five of them are Kannada versions of the articles included in the English section. The remaining treat topics which are not presented in English. It

is gratifying that the lacuna in the English section of not having a single article on the syntax of Sanketi is happily made up here.

The Sanketi Vocabulary is a joint venture; it is compiled with the assistance of all the contributors who supplied lexical as well as grammatical items they had employed in their articles. It makes no pretence therefore to being exhaustive. A full scale lexicon of Sanketi is a desideratum and needs to be attended by a competent linguist, preferably, a native speaker of Sanketi.

The authors of the papers may be found at times to be at variance in their analysis and in the resulting linguistic structure consequent on such analysis. Differences of minute nature may also be noted in the data each one has used. Nevertheless, I have tried that the papers present uniformly homogeneous picture. I have retained the individual writer's general style of language and have made minimum changes, specially in the analysis of the data. I have made known these changes, wherever possible, to the authors who thought them to be better. In the interest of general readers, I have corrected, though with much reluctance, a few items in the data of the articles whose authors are non-natives and had relied entirely on their informants. Occasionally, I have added an item or a comment where I thought it desirable and necessary.

I must add at the end that I undertook and executed this responsibility out of love to my mother tongue and as a token of service to the society. If every speaker of Sanketi takes pride in his speech, I am hopeful that Sanketi will live on for ever.

Vyasapurnima
May 13, 2006.

H.S.Ananthanarayana
Editor

c) CONTRIBUTORS TO THE VOLUME



Hallimysore Suryanarayana Avadhani **Ananthanarayana** was born on the 23rd of May 1931, in Hallimysore, a small village, in Hassan district in the present State of Karnataka. Early in his life, he had the advantage of acquiring classical Indian linguistic tradition, before it was supplemented with Western linguistic training, first in India and later in the United States.

After higher secondary school and undergraduate college in Shimoga, he moved to Mysore and in 1950 joined the Maharaja's College. He graduated from the University of Mysore with B.A. (Hons.) in Sanskrit in 1953 and received his Masters in 1954 with Veda and Meemaamsaa. Ananthanarayana was awarded Gold Medals and Cash Prize for standing first in the University and in the same year, was appointed to the faculty of Maharaja's College at Mysore where he served until 1959, teaching Sanskrit, Pali and the Prakrits.

He attended several Summer schools and Winter seminars in which participated an International faculty drawn from the U.S.A., U.K., Europe, and India. On the basis of his performance, Ananthanarayana was offered a year's fellowship at the Deccan College where he received intensive training in Modern Linguistics from a Senior American Linguist, and applied its techniques in the analysis of his own speech, Sanketi.

The opportunity for further training in the U.S.A. came beckoning Ananthanarayana when the renowned Indo-European Scholar, Winfred P. Lehmann, was searching for a competent Sanskritist. In September, 1959 he enrolled at the University of Texas for his Ph.D. while at the same time assisting Prof. Lehmann as a research fellow in Indo-European linguistics. He received his Ph.D. in June 1962 for his dissertation, ``Studies in the language of the Taittirèya Bráhmaïa". In the opinion of Prof. Lehmann, ``This was a pioneering attempt. No one had previously set out to deal with the intonation patterns of IE, let alone to approach the subject through the Vedic materials".


After acquiring his Ph.D., Ananthanarayana did short stints at the Universities of Texas, Illinois, Wisconsin, and Chicago, before coming to India. Under a grant from the Ford Foundation, he prepared at the University of Chicago, ``A Prakrit Reader'' consisting of a grammatical sketch and selections of Gáthás from Hála's Sattasaè. He returned to the University of Texas during 1971-72 as a research scientist to work in a project of Prof. Lehmann on Metrical and Poetical analysis of the Rigveda. The result was published in the form of two articles: ``Basic metrical pattern in the poems of the Rigveda'', and ``An attempt at structural criticism: RV. 10.129''.

Dr. Ananthanarayana's career at Osmania University, which lasted for nearly three decades, began with a lecturership in the year 1963. He became Professor in 1977 and Chairman of the Department in 1979. During his 14-year tenure of Professorship, he was responsible, as a member of Selection Committees, to select a dozen professors who chaired the Departments in various universities. He was responsible to some extent for University Grants Commission to extend its Special Assistance Programme to the Department at Osmania, and when the UGC awarded the Centre of Advanced Study in Linguistics to Osmania in 1986, he became its Director for five years and guided it through its seminal development. His illustrious career was capped by the UGC's recognition in the form of appointment as a National Lecturer for two terms. Dr. Ananthanarayana's is the unique distinction of being the President of the Dravidian Linguistics Association and the Linguistic Society of India, simultaneously. To Prof. Ananthanarayana goes a good measure of credit for building the Department of Linguistics at Osmania into the foremost centre for the study of Linguistics. He retired from Osmania University in May 1991 as Dean, Faculty of Arts and is now staying in Bangalore.

Although his formal area of interest was Historical linguistics, Prof. Ananthanarayana has done extensive research in Comparative Indo-Aryan linguistics and Indian Grammatical theories. In a number of papers, he has drawn the attention of young linguists to the rich heritage and has focused on the methodology and analytic techniques of Indian tradition. He was the first linguist to point out the relationship between Páïini's treatment of the noun in his Sanskrit grammar and contemporary Case grammar. His writings on the Sanketi dialect have brought it to the knowledge of fellow linguists and have shown how a dialect displaced from its original home has retained archaic features though heavily influenced by the language of its new home. In a citation

presented to him on the event of his retirement his colleagues at Osmania eulogized thus : ``In a sense, we may call him the Panini of Sanketi".


Prof. Ananthanarayana has held fellowships and delivered extension lectures in several universities in India (Mysore, Karnataka, Annamalai, Berhampur, Calcutta, Delhi) besides being on the faculty of many Summer schools of linguistics (1964-70) and Summer linguistic Institutes in India as well as in U.S.A. He founded in 1975, Osmania Papers in Linguistics, a research journal of the Department of Linguistics at Osmania University, and was its first editor for three years. The Journal has attained international standard and is now in its 30th issue.



Kempegowda **Kempegowda** was born on 15th August 1939 at Byadarahally in Channapatna Taluk, Karnataka. He served in various administrative and academic positions at the University of Mysore. He was Professor of Linguistics at the Kuvempu Institute of Kannada Studies and taught Linguistics for 32 years at the graduate as well as post-graduate level. He was for two years Director of Kuvempu Institute of Kannada Studies, and for a short period, Director of Prasaranga, University of Mysore.

After completing Higher Secondary education in Channapatna, he came to Mysore for university education. He took his B.A. in 1961 from Maharaja's College and continued for M.A. in Hindi. He then went to Deccan College, Pune and obtained M.A. in Linguistics in 1965. He joined the Linguistics faculty as Lecturer in the University of Mysore and simultaneously worked for Doctorate degree under the guidance of Professor H.M.Nayak. He was awarded Ph.D. in 1974 for his thesis, ``A descriptive analysis of Irula dialect''. He researched in many Dravidian Tribal languages and his monumental work, `General Linguistics' in Kannada earned him D. Litt., degree from the University of Mysore, in 1995. And on his retirement, Dr. Kempegowda was appointed Professor Emeritus for two years by the University Grants Commission which provided him with ample opportunity for furtherance of research in Dravidian.

He has guided several students for Doctorate degree and himself analysed Sanketi, a dialect of Tamil. He has published many books in linguistics some of which are prescribed as text books for M.A. course in the University.




Keralapura Shreenivasaiah **Nagaraja** was born on 13th October, 1949, at Keralapura in Hassan district, Karnataka. He has been teaching Linguistics at Deccan College Postgraduate and Research Institute, Pune for the last 24 years at the post-graduate level. He has done excellent field work in several tribal languages belonging to Austro-asiatic family, not neglecting however his own speech, Sanketi, and Kannada.

After completing graduation at Maharaja's College, Mysore with Sanskrit and Linguistics, he went to Pune to pursue post-graduate studies in Linguistics at Deccan College where he earned Doctorate degree under the able guidance of Professor H.S.Biligiri for his thesis on **Khasi** spoken in the Khasi and Jaintia hills of Meghalaya State, from the University of Poona.


Before joining the faculty of Linguistics at Deccan College, he had worked for five years at the Central Institute of Indian Languages, Mysore. And, on the invitation of Tokyo University of Foreign Studies, Tokyo, Japan, he worked as a Visiting Professor for a year in 1997-98.

He was awarded a Gold Medal for standing first in Linguistics at B.A. and in 2004 was honored by Dravidian Linguistics Association of India with a cash prize for his contribution to Austro-asiatic languages and in particular, Khasi and Korku.

He has published several books and many research articles in national and International journals. He is a Life member of the Linguistic Society of India and also of Dravidian Linguistics Association. He has guided students for Doctorate degree in linguistics and is presently Professor of Austroasiatic Linguistics at Deccan College, Pune.



Kikkeri **Narayana** was born in Kikkeri, Mandya District, Karnataka State. After the early schooling in his native place, he moved to Mysore city for his collegiate studies. He joined Maharaja's College and obtained Bachelor's degree with Linguistics as one of the main subjects. He later went to Pune and enrolled himself for his Master's degree at the Centre of Advanced study in Linguistics at Deccan College, Pune. He received M.A. in Linguistics and joined the Central Institute of Indian Languages, Mysore as a specialist in Kannada. He is involved in the preparation of Text books in Kannada for various groups and has evolved a novel method of teaching Kannada to non-natives. He has to his credit several articles on **Je:nu Kuruba** dialect and is, at present, Head of the Centre for Folklore in Central Institute of Indian Languages, Mysore.



Chagahalli Subbaraya **Ramachandra** was born on 2nd June 1955 at Chagahalli,* a small village in Hassan district, Karnataka. He has been working for the last 20 years at the Kuvempu Institute of Kannada Studies, and is now Director, Prasaranga, University of Mysore, Mysore.

After completing M.A. in Linguistics, he also secured another Master's degree in Kannada and B.Ed. in English and Sociology. He received Doctorate degree in Linguistics under the guidance of Prof. G. Varadarajarao from the University of Mysore for his thesis, ``A Linguistic Analysis of the Kèrtanas of Haridásas in Kannada", and has specialized in Comparative Dravidian Linguistics.

Before joining the University, Dr. Ramachandra had earlier worked for three years at the Regional Institute of Education at Mysore and for two years, as Lecturer, concurrently both in Mahajana First Grade College for Women and Ramakrishna Mahavidyalaya. He has guided many students for Doctorate degree and has himself published both in Kannada and in English on various aspects of Sanketi and Kannada linguistics. He has been Chairman of Kannada Text books preparation committees constituted for this purpose by the Government of Karnataka. Under the U.G.C.'s programme of Text books preparation in local languages, Dr. Ramachandra has recently published a book in Kannada on Historical linguistics which is being used for M.A. course in linguistics at the University of Mysore.

ನಿಧನ * 19–06–2013

– ಸಂ

d) CONTENTS

II. **ಸಂಕೇತಿ : ಭಾಷಾಧ್ಯಯನ**

e) ಗ್ರಂಥದ ಬಗೆಗೆ

ಸಂಕೇತಿ : ಭಾಷಾಧ್ಯಯನ

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಡಾ॥ ಕೆ. ಅನಂತರಾಮು
ನಿವೃತ್ತ ಕನ್ನಡ ಪ್ರಾಧ್ಯಾಪಕರು

ಕನ್ನಡನಾಡಿನ ಬ್ರಾಹ್ಮಣರಲ್ಲಿ 'ಸಂಕೇತಿ' ಎಂಬೊಂದು ಸಮುದಾಯವಿದೆ. ಅವರು ಸ್ಮಾರ್ತಸಂಪ್ರದಾಯದವರಾಗಿದ್ದು ಆದಿಶಂಕರಾಚಾರ್ಯರ ಶಿಷ್ಯಕೋಟಿಗೆ ಸೇರಿದವರಾಗಿದ್ದಾರೆ. ಅವರು ಮೂಲತಃ ತಮಿಳುನಾಡಿನವರೆಂದೂ ನಾಲ್ಕಾರು ಶತಮಾನಗಳ ಹಿಂದೆಯೇ ಕನ್ನಡನಾಡಿಗೆ ವಲಸೆ ಬಂದು, ಈ ನಾಡನ್ನೇ ತಮ್ಮ ತಾಯ್ನಾಡನ್ನಾಗಿ ಮಾಡಿಕೊಂಡರೆಂದೂ ಮೌಖಿಕಚರಿತ್ರೆಯು ಹೇಳುತ್ತದೆ. ಯಾವ ಮೂಲದಿಂದ ವಲಸೆಬಂದರೋ ಆ ಮೂಲಸ್ಥಾನವನ್ನು ಸಂಕೇತಿಗಳು ಇಂದು ಸಂಪೂರ್ಣವಾಗಿ ಮರೆತುಬಿಟ್ಟಿದ್ದಾರೆ; ಅಲ್ಲಿನ ಸಂಪರ್ಕವನ್ನು ಇನ್ನಿಲ್ಲವೆಂಬಂತೆ ಕಳಚಿಕೊಂಡುಬಿಟ್ಟಿದ್ದಾರೆ. ಕನ್ನಡನಾಡಿಗೆ ಬಂದು ಹಾಸನಜಿಲ್ಲೆಯ ಕೌಶಿಕ ಎಂಬ ಗ್ರಾಮದಲ್ಲಿ ನೆಲೆಸಿ ಕೌಶಿಕಸಂಕೇತಿಗಳೆಂದೂ ಮೈಸೂರುಜಿಲ್ಲೆಯ ಬೆಟ್ಟದಪುರದಲ್ಲಿ ನೆಲೆಸಿ ಬೆಟ್ಟದಪುರದ ಸಂಕೇತಿಗಳೆಂದೂ ಚಿಕ್ಕಮಗಳೂರು ಜಿಲ್ಲೆಯ ಲಿಂಗದಹಳ್ಳಿಯಲ್ಲಿ ನೆಲೆಸಿ ಲಿಂಗದಹಳ್ಳಿ ಸಂಕೇತಿಗಳೆಂದೂ ಶಿವಮೊಗ್ಗಜಿಲ್ಲೆಯ ಮತ್ತೂರು–ಹೊಸಹಳ್ಳಿಗಳಲ್ಲಿ ನೆಲೆಸಿ ಮಲೆನಾಡುಸಂಕೇತಿಗಳೆಂದೂ ವಿಂಗಡಣೆಗೊಂಡರು. ಈ ಹಿಂದೆ ಸಾರಿಗೆ ಸಂಪರ್ಕಗಳಿಲ್ಲದೆ ಪರಸ್ಪರ ದೂರವಾಗಿಯೇ ಉಳಿದುಬಿಟ್ಟಿದ್ದವರು, ಇತ್ತೀಚಿನ ದಶಕಗಳಲ್ಲಿ ಒಬ್ಬರನ್ನೊಬ್ಬರು ಅರಿತುಕೊಂಡು, ಕೊಟ್ಟುತರುವುದು ಮಾಡಿಕೊಂಡು ಹತ್ತಿರಹತ್ತಿರ ಬಂದಿದ್ದಾರೆ, ಬರುತ್ತಿದ್ದಾರೆ. ಸಂಘ ಸಂಸ್ಥೆಗಳನ್ನೂ ವಿದ್ಯಾರ್ಥಿನಿಲಯಗಳನ್ನೂ ವೃದ್ಧಾಶ್ರಮಗಳನ್ನೂ ರೂಪಿಸಿಕೊಂಡು ಕನ್ನಡನಾಡಿನ ಸರ್ವತೋಮುಖ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ.

ಮೂಲಸ್ಥಾನದಿಂದ ಬಂದಾಗ ಅಲ್ಲಿ ತಾವಾಡುತ್ತಿದ್ದ ತಮಿಳುಭಾಷೆಯನ್ನೇ ಸಂಕೇತಿಗಳು ಈ ನಾಡಿಗೆ ಹೊತ್ತುತಂದರು. ಹಾಗೆ ತಂದ ತರುಣದಲ್ಲಿ ಅದರ ಸ್ವರೂಪವೇನಿತ್ತೋ ಯಾರಿಗೂ ತಿಳಿಯದು. ಕನ್ನಡನಾಡಿಗೆ ಬಂದಮೇಲೆ ಸಹಜವಾಗಿಯೇ ಈ ಮಣ್ಣಿನ ಮಕ್ಕಳಾಗಿ, ಈ ಮಣ್ಣಿನ ಭಾಷೆಯಿಂದ ಪ್ರಭಾವಿತರಾಗಿ, ತಾವಾಡುತ್ತಿದ್ದ ಭಾಷೆಯನ್ನೂ ಅದರ ನೆರಳಿಗೇ ಒಡ್ಡಿಬಿಟ್ಟರು. ಅದರ ಫಲವಾಗಿ ಇಂದು ಸಂಕೇತಿಗಳಾಡುವ 'ಸಂಕೇತಿ ಭಾಷೆ' ತಮಿಳುನಾಡಿನಲ್ಲಿ ಬಳಸಲಾಗುತ್ತಿರುವ ತಮಿಳಿಗಿಂತ ಬೇರೆಯಾಗಿ, ಅದರ ದೂರಪ್ರಾಂತದ 'ಉಪಭಾಷೆ'ಗಳಲ್ಲೊಂದಾಗಿ ತನ್ನ ಸ್ಥಾನಮಾನಗಳನ್ನು ಕಾಪಾಡಿಕೊಂಡಿದೆ. ಮೂಲಸ್ಥಾನದಲ್ಲಿದ್ದಾಗ ಬರೆವಣಿಗೆಗೆ ಬಳಸುತ್ತಿದ್ದಿರಬಹುದಾದ ತಮಿಳುಲಿಪಿಯನ್ನೇ ಕನ್ನಡನಾಡಿಗೂ ತಂದಿದ್ದಿರಬಹುದಾದರೂ ಅದು ಈ ನಾಡಿನಲ್ಲಿ ಪ್ರಯೋಜನಕ್ಕೆ ಬಾರದಂತಾಗಿ, ಸಂಪೂರ್ಣವಾಗಿ ಮರೆತೇಹೋಯಿತು. ಆಡುನುಡಿಯಾಗಿಯಾದರೂ ಅದು ಉಳಿದುಕೊಂಡಿರುವುದೇ ಹೆಚ್ಚೆಂದು ನಾವಿಂದು ಹೆಮ್ಮೆಪಡಬೇಕಾಗಿದೆ.

ಸಂಕೇತಿಗಳ ವಲಸೆಯ ಮೌಖಿಕ ಇತಿಹಾಸವನ್ನು ಕೈಗೆತ್ತಿಕೊಂಡು ಪ್ರಣತಾರ್ತಿಹರನ್ ಅವರು, ತಮಿಳುನಾಡಿಗೆ ಭೇಟಿ ನೀಡಿ, ಗಾಢವಾದ ಕ್ಷೇತ್ರಕಾರ್ಯದ ಬಲದಿಂದ, ಅದರ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚಿ ಜಯಶೀಲರಾಗಿಬಿಟ್ಟರು. ಅಪಾರವಾದ ಮಾಹಿತಿಗಳನ್ನು ಸಂಗ್ರಹಿಸಿ, ಆ ಮೌಖಿಕ ಇತಿಹಾಸವೆಲ್ಲ ಸತ್ಯವೆಂಬುದನ್ನು ಬಯಲುಮಾಡಿಬಿಟ್ಟರು. ಅದು ಅವರ ಸಂಶೋಧನ ಪ್ರಬಂಧದ ವಿಷಯವೂ ಆಗಿದ್ದು, ಮೈಸೂರು ವಿಶ್ವವಿದ್ಯಾನಿಲಯವು ಅವರಿಗೆ ಡಾಕ್ಟರೇಟ್ ಪ್ರಶಸ್ತಿಯನ್ನು ನೀಡಿ ಗೌರವಿಸಿತು. 'ಸಂಕೇತಿ: ಒಂದು ಅಧ್ಯಯನ' ಎಂಬ ಶೀರ್ಷಿಕೆಯಲ್ಲಿ ಹರನ್ ಅವರು ಇದೇ ವಿಸ್ತಾರದ 374 ಪುಟಗಳ ಉದ್ಗ್ರಂಥವಾಗಿ ಸಂಕೇತಿ ಅಧ್ಯಯನಮಾಲೆಯ ಪ್ರಥಮ ಸಂಪುಟವಾಗಿ ಅದನ್ನು ಹೊರತಂದಿದ್ದಾರೆ. ಸಂಕೇತಿಗಳ ವಲಸೆಯ,

ಅದರ ಹಿನ್ನೆಲೆಯ, ಅದರ ಪರಿಣಾಮಗಳ, ತಮಿಳುನಾಡಿನಲ್ಲಿಯೇ ಈಗ ಉಳಿದಿರುವ ಈ ಸಮುದಾಯದ ಬ್ರಾಹ್ಮಣರ ಸ್ಥಿತಿಗತಿಗಳ ರೋಮಾಂಚಕಾರಿಯಾದ ವಿವರಗಳನ್ನು ಹರನ್ ಅದರಲ್ಲಿ ದಾಖಲಿಸಿದ್ದಾರೆ. ಅದರೊಟ್ಟಿಗೇ ಇಂದು ಕನ್ನಡನಾಡಿನಲ್ಲಿರುವ ಸಂಕೇತಿಗಳ ಭಾಷೆ ಮತ್ತು ಸಂಸ್ಕೃತಿಗಳ ಸಮಗ್ರ ಅಧ್ಯಯನವನ್ನು ಅಳವಡಿಸಿದ್ದಾರೆ. ಅದರಲ್ಲಿರುವುದೆಲ್ಲ 'First Hand Information' ಎಂದು ತಪ್ಪದೆ ಹೇಳಬೇಕು. ಸಂಶೋಧನೆಯೆಂದ ಮೇಲೆ ಏನಾದರೂ ಹೊಸತನ್ನು ಹುಡುಕಿಕೊಡಬೇಡವೇ ಎಂದು ಹಂಬಲಿಸುವವರಿಗೆ ಹರನ್ ಅವರ ಆ ಮಹತ್ಸಂಪುಟವು ನಿಜಕ್ಕೂ ಸಂತೃಪ್ತಿಯನ್ನು ತುಂಬಿಕೊಡುತ್ತದೆ. ಒಂದರ್ಥದಲ್ಲಿ ಆ ಸಂಪುಟವು ಸಂಕೇತಿಜನಾಂಗದ ಪುಟ್ಟದೊಂದು ವಿಶ್ವಕೋಶವಾಗಿಯೇ ಪರಿಣಮಿಸಿದೆ.

ಮೊದಲು ಗ್ರಾಮಾಂತರಗಳಲ್ಲಿ ನೆಲೆಸಿ, ಕೃಷಿಯನ್ನೇ ನಂಬಿ, ನಿಜವಾದ ಅರ್ಥದಲ್ಲಿ ಈ ಮಣ್ಣಿನ ಮಕ್ಕಳಾಗಿ ಜೀವನ ಸಾಗಿಸುತ್ತಿದ್ದ ಸಂಕೇತಿಗಳು, ಸ್ವಾತಂತ್ರ್ಯಾನಂತರದ ದಶಕಗಳಲ್ಲಿ, ಗ್ರಾಮಜೀವನವು ದುಸ್ತರವಾಗಿ, ನೌಕರಿಗಳನ್ನು ಅರಸುತ್ತ ಪಟ್ಟಣಗಳನ್ನು ಸೇರಿಬಿಟ್ಟರು. ಪಟ್ಟಣಗಳಲ್ಲೂ ತಮ್ಮ ಬದುಕು ಸಾಗುವುದಿಲ್ಲ ಎನ್ನುವ ಕಾಲಬಂದಾಗ ಹೊರರಾಜ್ಯಗಳಿಗೆ, ತರುವಾಯ ಅಮೇರಿಕದಂತಹ ಹೊರರಾಷ್ಟ್ರಗಳಿಗೆ ಒಂದಷ್ಟು ಜನ ಹೋಗಿ ನೆಲೆಸಿಬಿಟ್ಟರು, ತಮ್ಮ ಜೀವನಮಾರ್ಗವನ್ನು ಕಂಡುಕೊಂಡರು. ಈ ಎಲ್ಲ ಸ್ಥಿತ್ಯಂತರಗಳ ಪರಿಣಾಮವಾಗಿ ಸಂಕೇತಿಭಾಷೆಗೆ, ಸಂಕೇತಿ ಸಂಸ್ಕೃತಿಗೆ ಬಲವಾದ ಪೆಟ್ಟುಬಿದ್ದಿತು. ವಿದೇಶಗಳಲ್ಲಿರುವವರ ಮಾತು ಹಾಗಿರಲಿ, ಕನ್ನಡನಾಡಿನ ಮಹಾನಗರಗಳಲ್ಲಿರುವ ಕೆಲವು ಸಂಕೇತಿ ಕುಟುಂಬಗಳೇ ಸಂಕೇತಿಭಾಷೆಯನ್ನು ಪಕ್ಕಕ್ಕೆ ಸರಿಸಿ, ಅದರ ಜಾಗದಲ್ಲಿ ಇಂಗ್ಲೀಷು–ಕನ್ನಡಗಳನ್ನು ಸ್ಥಾಪನೆ ಮಾಡಿಕೊಂಡುಬಿಟ್ಟುವು.

ಭಾಷೆ ಎಂಬುದೊಂದು ಬೆಳಕು; ಅದೊಂದು ತವನಿಧಿ. ಕಾವ್ಯಮೀಮಾಂಸಕನಾದ ದಂಡಿಯು ತನ್ನ 'ಕಾವ್ಯಾದರ್ಶ'ದಲ್ಲಿ (1–4)–

ಇದಮಂಧಂತಮಂ ಕೃತ್ಸ್ನಂ ಜಾಯೇತ ಭುವನತ್ರಯಂ।
ಯದಿ ಶಬ್ದಾಹ್ವಯಂ ಜ್ಯೋತಿಃ ಆಸಂಸಾರಾನ್ನದೀಪ್ಯತೇ ॥

ಎಂದು ಉದ್ಗರಿಸಿದ್ದಾನೆ. "ಭಾಷೆಯೆಂಬ ದಿವ್ಯಜ್ಯೋತಿಯು ಈ ಜಗತ್ತನ್ನು ಬೆಳಗದಿದ್ದಲ್ಲಿ ಭುವನತ್ರಯಗಳೂ ಕಗ್ಗತ್ತಲೆಯಲ್ಲಿ ಮುಳುಗಿ ಹೋಗುತ್ತಿದ್ದುವು" ಎಂಬ ಅವನ ಮಾತು ಸತ್ಯಸ್ಯಸತ್ಯ. ಇಂತಹ ಪರಮಪಾವನವಾದ ಭಾಷೆಯೆಂಬುದು ಮನುಷ್ಯನಿಗೆ ದಕ್ಕಿದ್ದಾದರೂ ಹೇಗೆ, ಅವನು ಅದನ್ನು ಸೃಷ್ಟಿ ಮಾಡಿಕೊಂಡದ್ದಾದರೂ ಹೇಗೆ ಎಂಬುದು ಇಂದಿಗೂ ಬಿಡಿಸಲಾಗದ ಒಗಟೇ ಆಗಿದೆ. ಭಾಷೆಯ ಉಗಮವನ್ನು ಕುರಿತು ಭಾಷಾವಿಜ್ಞಾನಿಗಳು ತರಹೇವಾರಿ ಸಿದ್ಧಾಂತಗಳನ್ನು ಮುಂದೊಡ್ಡಿದ್ದಾರಾದರೂ ಅವಾವುವೂ ಹೆಚ್ಚು ದೂರ ನಮ್ಮೊಡನೆ ಬರುವುದಿಲ್ಲ. ಆರಂಭಕಾಲದ ಭಾಷಾವಿಜ್ಞಾನಸಮ್ಮೇಳನಗಳಲ್ಲಿ ಭಾಷಾಶಾಸ್ತ್ರಜ್ಞರು ಭಾಷೆಯ ಉಗಮವನ್ನು ಕುರಿತಂತೆಯೂ ಚರ್ಚಿಸುತ್ತಿದ್ದರು. ಇಷ್ಟು ತಿಳಿಯಿತು, ಇಷ್ಟು ಉಳಿಯಿತು ಎಂದು ಹೇಳುತ್ತಿದ್ದರು. ಆಮೇಲಾಮೇಲೆ ಅದು ಹತ್ತುವುದಲ್ಲ ಹರಿಯುವುದಲ್ಲ ಎಂದು ಅವರಿಗೇ ಅನ್ನಿಸಿ "ಇನ್ನು ಮುಂದೆ ಯಾವುದೇ ಭಾಷಾವಿಜ್ಞಾನದ ಸಮ್ಮೇಳನಗಳಲ್ಲಿ ಭಾಷೆಯ ಉಗಮವನ್ನು ಕುರಿತು ಚರ್ಚಿಸತಕ್ಕದ್ದಲ್ಲ" ಎಂಬ ಠರಾವನ್ನು ಪಾಸುಮಾಡಿಬಿಟ್ಟರು.

ಸೃಷ್ಟಿಕ್ರಿಯೆಯ ಮೂಲದಲ್ಲಿ ಒಂದು ಗಂಡು, ಒಂದು ಹೆಣ್ಣು ಇರಲೇಬೇಕೆಂಬುದನ್ನು ಎಲ್ಲರೂ ಒಪ್ಪುತ್ತೇವೆ. ಆ ಮೊದಲನೆಯ ಗಂಡು, ಆ ಮೊದಲನೆಯ ಹೆಣ್ಣು ಹುಟ್ಟಿದ್ದು ಹೇಗೆ ಎಂದು ಪ್ರಶ್ನಿಸಿದರೆ ಎಲ್ಲರೂ ನಿರುತ್ತರರಾಗುತ್ತೇವೆ. ಆ ಮೊದಲನೆಯ ಗಂಡನ್ನೂ ಆ ಮೊದಲನೆಯ ಹೆಣ್ಣನ್ನೂ ಅಖಿಳಾಂಡಕೋಟಿ ಬ್ರಹ್ಮಾಂಡನಾಯಕನಾದ ಪರಮಾತ್ಮನೇ ಸೃಷ್ಟಿಸಿದನೆಂದು ನಮ್ರತೆಯಿಂದ ಒಪ್ಪಿಕೊಂಡುಬಿಟ್ಟರೆ ನಮ್ಮ

ತಲೆಭಾರವೆಲ್ಲ ಇಳಿದು ಹೋಗುತ್ತದೆ. ಹೀಗೆಯೇ ಭಾಷೆಯೆಂಬ ಬೆಳಕನ್ನು ಪರಮಾತ್ಮನೇ ಮನುಷ್ಯಪ್ರಾಣಿಗಳಿಗೆ ದಯಪಾಲಿಸಿದನು ಎಂದು ನಂಬಿಬಿಟ್ಟರೆ ಸಾಕು, ನಿಶ್ಚಿಂತರಾಗಿಬಿಡಬಹುದು. ಆ ನಿಲುವಿನ ಒಂದು ಸಿದ್ಧಾಂತವೂ ಭಾಷಾವಿಜ್ಞಾನದಲ್ಲಿದೆ. ಪರಮಾತ್ಮನೇ ಭಾಷೆಯನ್ನು ಮನುಷ್ಯ ಪ್ರಾಣಿಗಳಿಗೆ ದಯಪಾಲಿಸಿದನೆಂದಾದಬಳಿಕ ವಿಶ್ವಕ್ಕೆಲ್ಲ ಒಂದೇ ಭಾಷೆ ಇರಬೇಕಾಗಿತ್ತಲ್ಲವೇ ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಈ ಪ್ರಶ್ನೆಯನ್ನು ಉತ್ತರಿಸುವುದೂ ಕಷ್ಟ ಎನ್ನಲೋ ಎಂಬಂತೆ ಬೈಬಲ್‌ನಲ್ಲಿ ಸ್ವಾರಸ್ಯಕರವಾದೊಂದು ಕಥೆ ನಿರೂಪಿತವಾಗಿದೆ. ಬಹುಪುರಾತನ ಕಾಲದಲ್ಲಿ ಜಗತ್ತಿನ ಜನರೆಲ್ಲರೂ ಒಂದೇಕಡೆ ವಾಸಮಾಡುತ್ತ, ದೇವರುಕೊಟ್ಟ ಒಂದೇ ಭಾಷೆಯನ್ನು ಮಾತನಾಡಿಕೊಂಡು ಸಂತೋಷದಿಂದಿದ್ದರು. ದೈವಭಕ್ತರಾದ ಅವರೆಲ್ಲರೂ ಮೇಲಿನ ಸ್ವರ್ಗಲೋಕದಲ್ಲಿ ತಮ್ಮ ತಂದೆಯಾದ ದೇವರು ವಾಸಮಾಡುತ್ತಿದ್ದಾನೆಂದು ನಂಬಿಕೊಂಡು ಅವನನ್ನು ಕಾಣಬೇಕೆಂದು ಕಾತರಿಸುತ್ತಿದ್ದರು. ಆಗ ಅವರೆಲ್ಲರೂ ಒಮ್ಮತದಿಂದ ಸ್ವರ್ಗದವರೆಗೂ ಸಾಗುವ ಗೋಪುರವೊಂದನ್ನು ಕಟ್ಟಿಬಿಡಬೇಕೆಂದು ನಿರ್ಧರಿಸಿ ಕಾರ್ಯಪ್ರವೃತ್ತರಾದರು. ಕಟ್ಟಿದರು ಕಟ್ಟಿದರು ಕಟ್ಟಿಯೇಬಿಟ್ಟರು. 'ಅಬ್ಬಬ್ಬಾ, ನಾನಿರುವ ಸ್ವರ್ಗಕ್ಕೇ ಇವರೆಲ್ಲ ನುಗ್ಗಿಬಿಟ್ಟರೆ ಏನು ಗತಿ' ಎಂದುಕೊಂಡನೋ ಏನೋ, ಗೋಪುರವು ಮುಕ್ತಾಯದ ಹಂತದಲ್ಲಿದ್ದಾಗ 'ಈ ಗೋಪುರವನ್ನು ಕಟ್ಟುತ್ತಿರುವವರು ಆಡುತ್ತಿರುವ ಭಾಷೆ ಒಬ್ಬರದೊಬ್ಬರಿಗೆ ಅರ್ಥವಾಗದೆ ಹೋಗಲಿ' ಎಂದು ದೇವರು ಶಪಿಸಿಬಿಟ್ಟನು. ಅಷ್ಟಾದುದೇ ತಡ, ಒಬ್ಬನು ಕಟ್ಟು ಎಂದರೆ ಇನ್ನೊಬ್ಬನು ಕೆಡವುತ್ತಾನೆ, ಒಬ್ಬನು ಇಡು ಎಂದರೆ ಮತ್ತೊಬ್ಬನು ಕೀಳುತ್ತಾನೆ– ಹೀಗೆಲ್ಲಾ ರಾದ್ಧಾಂತವಾಗಿ ಗೋಪುರ ಅಷ್ಟಕ್ಕೇ ನಿಂತುಹೋಯಿತು. ಒಂದೇ ಭಾಷೆಯಿದ್ದ ಜಾಗದಲ್ಲಿ ಗೋಪುರ ಕಟ್ಟುತ್ತಿದ್ದವರು ಎಷ್ಟು ಜನರಿದ್ದರೋ ಅಷ್ಟು ಬಗೆಬಗೆಯ ಭಾಷೆಗಳು ಹುಟ್ಟಿಕೊಂಡುಬಿಟ್ಟವು. ಅಂತೂ ಜಗತ್ತಿನ ಭಾಷೆಗಳೆಲ್ಲವೂ ಪರಮಾತ್ಮನ ವರಪ್ರಸಾದ ಎಂಬುದನ್ನು ಸಾರುವ ಈ ಕಥೆಯ ಸ್ವಾರಸ್ಯವನ್ನು ಎಷ್ಟು ಸವಿದರೂ ಸಾಕಾಗುವುದಿಲ್ಲ.

ಈ ಕಥೆಯನ್ನೆಲ್ಲ ಏಕೆ ಹೇಳಿದ್ದಾಯಿತೆಂದರೆ ಭಾಷೆಯೆಂಬುದು ಪರಮಾತ್ಮನು ಕೊಟ್ಟಿರುವ ಅಮೂಲ್ಯವಾದ ಕೊಡುಗೆ; ಭಾಷಾವಿಜ್ಞಾನದ ದೃಷ್ಟಿಯಲ್ಲಿ ಲಿಪಿಸಹಿತವಾದ ಸಾಹಿತ್ಯಿಕ ಭಾಷೆಗೆ ಎಷ್ಟು ಮಾನ್ಯತೆಯುಂಟೋ ಲಿಪಿರಹಿತವಾದ ಆಡುನುಡಿಗೂ ಅಷ್ಟೇ ಗೌರವವುಂಟು; ಇದು ಗಣ್ಯ ಅದು ನಗಣ್ಯ ಎಂಬ ತಾರತಮ್ಯ ಅದಕ್ಕಿಲ್ಲ; ಈ ಹಿನ್ನೆಲೆಯಲ್ಲಿ ದೇವರು ಕೊಟ್ಟ ವರವಾಗಿರುವ ಸಂಕೇತಿಭಾಷೆಯನ್ನು ಜೋಪಾನಮಾಡಿಕೊಳ್ಳಬೇಕಾದುದು ಸಂಕೇತಿಗಳೆಲ್ಲರ ಕರ್ತವ್ಯವಾಗಿದೆ ಎಂಬುದನ್ನು ತಿಳಿಸಲು. ಶಿವಮೊಗ್ಗ ಜಿಲ್ಲೆಯ ಹೊಸಹಳ್ಳಿಯ ರಾಜಾರಾಮಮೂರ್ತಿಗಳ ಸಂಪಾದಕತ್ವದಲ್ಲಿ 'ಸಂಕೇತಿಸಂಗಮ' ಎಂಬ ಕನ್ನಡ ಮಾಸಪತ್ರಿಕೆಯೊಂದು ಕಳೆದೆಂಟು ವರ್ಷಗಳಿಂದ ಪ್ರಕಟವಾಗುತ್ತಿದೆ. ಅದು ವಿಶ್ವಾದ್ಯಂತ ಚೆಲ್ಲಿಹೋಗಿರುವ ಸಂಕೇತಿಗಳ ನಡುವೆ ಸಂಪರ್ಕವೇರ್ಪಡಿಸುವ ಸತ್ಕಾರ್ಯವನ್ನು ಪರಿಣಾಮಕಾರಿಯಾಗಿ ಮಾಡುತ್ತಿದೆ. 'ಕನ್ನಡದಲ್ಲಿ ಬರೆಯಿರಿ, ಸಂಕೇತಿಯಲ್ಲಿ ನುಡಿಯಿರಿ' ಎಂದು ಘೋಷಿಸುತ್ತ, ಆ ಭಾಷೆಯತ್ತ ಸಂಕೇತಿಗಳೆಲ್ಲರ ಗಮನ ಸೆಳೆಯುತ್ತಿದೆ. ಕನ್ನಡಲಿಪಿಯಲ್ಲಿಯೇ ಚೂರುಪಾರು ಸಂಕೇತಿ ನುಡಿಯನ್ನೂ ಚೆಲ್ಲಾಡುತ್ತಿದೆ.

ಈಗ ನಮ್ಮ ಮುಂದಿರುವುದು ಸಂಕೇತಿಭಾಷೆಯ ಸರ್ವಾಂಗೀಣ ಭಾಷಾವೈಜ್ಞಾನಿಕ ಅಧ್ಯಯನದ ಸಮಗ್ರಸಂಪುಟ. ಪ್ರಣತಾರ್ತಿಹರನ್ ಅವರು ಈ ಸಂಪುಟ ಮಾಲಿಕೆಯ ಪ್ರಧಾನ ಸಂಪಾದಕರಾದರೆ, ಪ್ರಸ್ತುತ ಸಂಪುಟದ ಸಂಪಾದಕರಾಗಿ ಭರತಖಂಡದ ಭಾಷಾವಿಜ್ಞಾನರಂಗದ ಖ್ಯಾತ ವಿದ್ವನ್ಮಣಿಗಳಾದ ಎಚ್. ಎಸ್. ಅನಂತನಾರಾಯಣ ಅವರು ತಮ್ಮ ಗುರುತರವಾದ ಹೊಣೆಗಾರಿಕೆಯನ್ನು ಎಲ್ಲರೂ ಮೆಚ್ಚುವಂತೆ ನಿರ್ವಹಿಸಿದ್ದಾರೆ. ಇಲ್ಲಿರುವ ಆಂಗ್ಲ ಲೇಖನಗಳಲ್ಲಾಗಲಿ, ಕನ್ನಡ ಲೇಖನಗಳಲ್ಲಾಗಲಿ ಅರ್ಧಕ್ಕರ್ಧ ಅನಂತನಾರಾಯಣರು ಬರೆದುವುಗಳೇ ಆಗಿವೆ. ಈ ಸಂಪುಟದ ಲೇಖನಗಳ ಮಿಕ್ಕ ವಿದ್ವಾಂಸರಾದ ಕೆ. ಕೆಂಪೇಗೌಡ, ಕೆ.ಎಸ್. ನಾಗರಾಜ, ಕಿಕ್ಕೇರಿ ನಾರಾಯಣ, ಸಿ.ಎಸ್. ರಾಮಚಂದ್ರ ಅವರುಗಳೆಲ್ಲ ಭಾಷಾವಿಜ್ಞಾನದ

ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಗಳನ್ನು ಮಾಡಿದವರೇ ಆಗಿದ್ದಾರೆ. ಸ್ನಾತಕೋತ್ತರ ಮಟ್ಟದಲ್ಲಿ ಭಾಷಾವಿಜ್ಞಾನವನ್ನು ಬೋಧಿಸಿ, ಅಧ್ಯಯನ–ಅಧ್ಯಾಪನಗಳ ಮೂಲಕ, ಚಿಂತನಮಂಥನಗಳ ಮೂಲಕ ತಮ್ಮ ವಿಚಾರಧಾರೆಯನ್ನು ಪ್ರಶಸ್ತಗೊಳಿಸಿಕೊಂಡು ಇಲ್ಲಿನ ಲೇಖನಗಳೆಲ್ಲ ಶಾಸ್ತ್ರಜಗತ್ತಿಗೆ ಉಪಯುಕ್ತವಾಗುವಂತೆ ಮಾಡಿದ್ದಾರೆ. ಧ್ವನಿವಿಜ್ಞಾನ, ಶಬ್ದವಿಜ್ಞಾನ, ರೂಪವಿಜ್ಞಾನ, ವಾಕ್ಯವಿಜ್ಞಾನ ಎಂಬುವು ಭಾಷಾವಿಜ್ಞಾನಾಧ್ಯಯನದ ನಾಲ್ಕು ಪ್ರಮುಖ ಆಧಾರಸ್ತಂಭಗಳು. ಅವುಗಳ ಜೊತೆಗೆ ಅರ್ಥವಿಜ್ಞಾನ, ಭಾಷಿಕ ಪರಿವರ್ತನೆ, ಭಾಷಾಸ್ವೀಕರಣ ಮುಂತಾದ ಅಧ್ಯಯನ ವಿಷಯಗಳೂ ಕೂಡಿಕೊಳ್ಳುತ್ತವೆ. ಭಾಷಾವಿಜ್ಞಾನದ ಈ ಎಲ್ಲ ಮುಖಗಳಿಂದಲೂ ಸಂಕೇತಿಭಾಷೆಯನ್ನು ತೀಕ್ಷ್ಣವಾದ ಅಧ್ಯಯನಕ್ಕೆ ಗುರಿಪಡಿಸಿರುವುದು ಈ ಸಂಪುಟದ ವೈಶಿಷ್ಟ್ಯವಾಗಿದೆ. ಅನಂತನಾರಾಯಣರಾದರೋ ಇದು ಒಬ್ಬನೇ ವಿದ್ವಾಂಸನು ಬರೆದ ಗ್ರಂಥವೋ ಏನೋ ಎನ್ನುವ ಹಾಗೆ ಆ ಲೇಖನಗಳನ್ನೆಲ್ಲ ವಿಷಯಾನುಸಾರ ವಿಂಗಡಿಸಿ, ಪರಿಶೀಲಿಸಿ, ಅರೆಕೊರೆಗಳಿದ್ದಲ್ಲಿ ಅಲ್ಲಲ್ಲಿಯೇ ಸರಿಪಡಿಸಿ, ಒಟ್ಟು ಸಂಪುಟವು ಏಕಘನವಾಗುವಂತೆ ಮಾಡಿದ್ದಾರೆ. ಎಲ್ಲೆಲ್ಲಿ ವಿಷಯದ ಕೊಂಡಿ ಸ್ವಲ್ಪ ಬಿಟ್ಟುಕೊಂಡಿತು ಎನಿಸಿದೆಯೊ, ಅಲ್ಲೆಲ್ಲ ಈ ಸಂಪುಟಕ್ಕಾಗಿಯೇ ಕೆಲವು ಲೇಖನಗಳನ್ನು ಬರೆದು ಆ ಕೊಂಡಿಯನ್ನು ಬೆಸೆದುಕೊಟ್ಟಿದ್ದಾರೆ. ಈ ಸತ್ಕಾರ್ಯಕ್ಕೆ ಅನಂತನಾರಾಯಣರನ್ನಾಗಲಿ, ಈ ಸಂಪುಟದ ಮಿಕ್ಕ ವಿದ್ವಾಂಸರನ್ನಾಗಲಿ ಭಾಷಾವಿಜ್ಞಾನಜಗತ್ತು ಕೃತಜ್ಞತೆಯಿಂದ ಗೌರವಿಸುತ್ತದೆಂಬುದರಲ್ಲಿ ಸಂದೇಹವಿಲ್ಲ.

ಈ ಸಂಪುಟದ ಪ್ರಧಾನಸಂಪಾದಕರಾದ ಪ್ರಣತಾರ್ತಿಹರನ್ ಅವರ ವಿಚಾರವಾಗಿ ಎರಡುಮಾತು ಹೇಳದಿದ್ದರೆ ನನ್ನ ಮಾತುಗಳು ಪೂರ್ಣವಾಗದೆ ಉಳಿದುಬಿಡುತ್ತವೆ. ಹರನ್ ಅವರು ಸಾಂಸ್ಕೃತಿಕ ಸಾಹಸೋದ್ಯಮಗಳನ್ನು ಹೆಗಲಿಗೇರಿಸಿಕೊಂಡು ಸಾಗುತ್ತಿರುವ ಪ್ರಕಟಣಧೀರ. ಸರ್ಕಾರಿ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾಗಿ ದುಡಿಯುತ್ತಿರುವ ಅವರು, ಊರಿಂದೂರಿಗೆ ವರ್ಗವಾಗುವ ಕಷ್ಟಕ್ಕೆ ಸಿಲುಕಿದ್ದರೂ 'ಶೆಟ್ಟಿ ಬಿಟ್ಟಲ್ಲೇ ಪಟ್ಣ' ಎಂಬ ಗಾದೆಯಂತೆ ನಿಂತ ನೆಲವನ್ನೇ ಸಂಕೇತಿ ಕಾರ್ಯರಂಗವನ್ನಾಗಿ ಮಾಡಿಕೊಳ್ಳುತ್ತಿರುವ ಕಾಯಕಯೋಗಿ. ಅವರು ಹೊರತಂದಿರುವ, ಹೊರತರಿಸುತ್ತಿರುವ ಒಂದೊಂದು ಸಂಪುಟವೂ ಬೆಲೆಯಳಿಯದೆ ಚಿರಕಾಲ ನಿಲ್ಲುವ ಜ್ಞಾನಭಾಂಡಾಗಾರ. ಹುಟ್ಟಿದವರೆಲ್ಲ ಸಾಯಲೇಬೇಕು; ಆದರೆ ಹುಟ್ಟುಸಾವುಗಳ ನಡುವಣ ಬಿಡುವನ್ನು ಪ್ರಣತಾರ್ತಿಹರನ್ ಅವರಂತೆ ಮಹತ್ಕಾರ್ಯಕ್ಕೆ ವಿನಿಯೋಗಿಸಬಲ್ಲವರು ನಾವು ಎಷ್ಟು ಮಂದಿ ತಾನೆ ಇದ್ದೇವು! ಅವರದು ಕಾಯೇನವಾಚಾಮನಸಾ ಸಾರೋದ್ಧಾರವಾಗಿ ದುಡಿಯುವ ಏಕಾಗ್ರತೆ; 'ಚೆನ್ನಮಲ್ಲಿಕಾರ್ಜುನಯ್ಯ, ಶಿರಹರಿದು ಬಿದ್ದರೆ ಪ್ರಾಣ ನಿಮಗರ್ಪಿತವೆಂಬೆನೊ' ಎನ್ನುವಂತಹ ಸರ್ವಸಮರ್ಪಣಭಾವ. ಅವರನ್ನು ಕನ್ನಡಿಗರೆಲ್ಲರ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಆಚಾರ್ಯ ತೀ.ನಂ. ಶ್ರೀಕಂಠಯ್ಯನವರು ಬರೆದಿರುವ 'ಕನ್ನಡ ಮಧ್ಯಮ ವ್ಯಾಕರಣ'ದಂತೆ, ಸಂಕೇತಿ ಭಾಷೆಯನ್ನು ಪರಂಪರಾಗತ ವ್ಯಾಕರಣದ ಅಚ್ಚಿನಲ್ಲಿ ಎರಕಹೊಯ್ದ ಲೇಖನವೊಂದನ್ನು ಈ ಸಂಪುಟಕ್ಕೆ ಜೋಡಿಸಿದ್ದರೆ ಭಾಷಾವಿಜ್ಞಾನದಲ್ಲಿ ಪ್ರವೇಶವಿಲ್ಲದವರ ಗಮನವನ್ನೂ ಆಕರ್ಷಿಸುತ್ತಿತ್ತು ಎಂದು ನಾನು ಭಾವಿಸುತ್ತೇನೆ. ಭಾಷಾವಿಜ್ಞಾನವು ಕೆಲವೊಮ್ಮೆ ಸರಳವಾದ ವಿಚಾರಗಳನ್ನೂ ಸಂಕೀರ್ಣಗೊಳಿಸಿಬಿಡುತ್ತದೆ. ಹೀಗೆ ಹೇಳುವುದರ ಮೂಲಕ ಈ ಸಂಪುಟದ ಉಪಯುಕ್ತತೆಗೆ ಊನವೇನೂ ಇಲ್ಲ. ಸಂಕೇತಿಗಳಾದವರು, "ಸಂಕೇತಿ ಭಾಷೆ ಎಂದರೆ ಏನೋ ಅಂದುಕೊಂಡಿದ್ದೆವಲ್ಲಾ, ಅದರಲ್ಲಿ ಇಷ್ಟೆಲ್ಲ ಸಂಕೀರ್ಣವಾದ 'ಭಾಷಾವಿಜ್ಞಾನ' ತುಂಬಿಕೊಂಡಿದೆಯೇ!" ಎಂದು ಆಶ್ಚರ್ಯಚಕಿತರಾಗುತ್ತಾರೆ. ಜ್ಞಾನೋಪಾಸಕರಾದ ಕನ್ನಡಿಗರು 'ಸಂಕೇತಿಭಾಷೆ ಕನ್ನಡ ಭಾಷೆಗೆ ಹತ್ತಿರಹತ್ತಿರ ಬಂದರೂ ತನ್ನತನವನ್ನು ಉಳಿಸಿಕೊಂಡಿದೆಯಲ್ಲ, ಕನ್ನಡನಾಡಿನ ಭಾಷಾಸಾಮ್ರಾಜ್ಯಕ್ಕೆ ತನ್ನದೇ ಕಾಣಿಕೆಯನ್ನು ನೀಡಿದೆಯಲ್ಲ' ಎಂದು ಸಂಭ್ರಮಿಸುತ್ತಾರೆ. ಭರತಖಂಡದ ಮಟ್ಟದಲ್ಲಿ, ಅಷ್ಟೇ ಏಕೆ, ಜಾಗತಿಕ ಮಟ್ಟದಲ್ಲಿ ಭಾಷಾವಿಜ್ಞಾನವನ್ನೇ ತಮ್ಮ ಜೀವದುಸಿರಾಗಿ

ಮಾಡಿಕೊಂಡಿರುವವರು 'ಸಂಕೇತಿ ಭಾಷೆಯನ್ನು ಕುರಿತಂತೆ ಇನ್ನೇನಾದರೂ ಹೊಸ ಚಿಂತನಮಂಥನ ನಡೆಸಬಹುದೆ' ಎಂದು ಕಣ್ಣಿಡುತ್ತಾರೆ. ಹೀಗೆಲ್ಲ ಈ ಸಂಪುಟವು ಇಡೀ ಜಗತ್ತನ್ನೇ ತನ್ನತ್ತ ಸೆಳೆದುಕೊಳ್ಳುವ ಅಧ್ಯಯನಸಾಮಗ್ರಿಯಿಂದ ತುಂಬಿತುಳುಕುತ್ತಿದೆಯೆಂದರೆ ಅತಿಶಯೋಕ್ತಿಯಲ್ಲ.

ಸಂಕೇತಿ ಭಾಷೆಯ ವೈಶಿಷ್ಟ್ಯಗಳಲ್ಲಿ ಅದರ ಮಹಾಪ್ರಾಣಪ್ರಿಯತೆಯೂ ಒಂದು. ಕೊಠಾಯಿ, ಕುಘಾಯು, ಖರ್‌ಪ್ಪ್, ಭಳ್‌ಪ್ಪ್, ಭೊಪ್ಪ್, ಧಾಟ್, ಧಾರು, ಕಂಭು, ಫರ್ಲ್, ಖಾಯ್ಲು, ಠೇಂಕಾರು, ವಿಡ್ಢೂರು, ಘಮು, ವಾರ್ಥ, ಘಾಯು, ಪೊಠ, ಖಾರಾಲ್, ಉಢೇವ್ರ್, ದುಬ್ಧಿ ಎಂಬಂತೆ ನೂರಾರು ಮಹಾಪ್ರಾಣಯುಕ್ತ ಶಬ್ದಗಳಿವೆ. ತಮಿಳಿನಲ್ಲಿ ಮಹಾಪ್ರಾಣಗಳಿಲ್ಲ, ಕನ್ನಡಕ್ಕೆ ಅವು ಸಹಜವಲ್ಲವಾದರೂ ಸಂಸ್ಕೃತಭಾಷೆಯ ಪ್ರಭಾವದಿಂದ ಅವು ಅನಿವಾರ್ಯವೆಂಬಂತೆ ಸೇರಿಕೊಂಡುಬಿಟ್ಟಿವೆ. ಸಂಕೇತಿಭಾಷೆಯಮೇಲೂ ಸಂಸ್ಕೃತವು ಶಬ್ದಕೋಶದ ದೃಷ್ಟಿಯಿಂದ ತನ್ನ ವಿಶೇಷ ಪ್ರಭಾವವನ್ನು ಬೀರಿದೆ. ಸಂಕೇತಿಭಾಷೆಯು ದಶಕದಿಂದ ದಶಕಕ್ಕೆ ಶಬ್ದಭಂಡಾರದ ಲೆಕ್ಕದಲ್ಲಿ ಕನ್ನಡದ ಮಿತಿಮೀರಿದ ಪ್ರಭಾವಕ್ಕೆ ತುತ್ತಾಗುತ್ತಿದೆ. ಹಿಂದಿನ ಪೀಳಿಗೆಯವರು ಬಳಸುತ್ತಿದ್ದ ಈ (ನೊಣ), ಚೀ (ಕೀವು), ಖಾತಾಟಿ (ಬೀಸಣಿಗೆ), ಯಮಚಂಪಳು (ನಿಂಬೇ ಹಣ್ಣು), ಈರು (ಒದ್ದೆ), ಕುಘಾಯು (ರವಿಕೆ), ಕಿನಾವ್ (ಕನಸು), ನರಂಬ್ (ನರ), ವಳ್ಕ್(ನಾಚಿಕೆ), ಪುಹ (ಹೊಗೆ), ನಾರ್ಥಂಗಾಯಿ (ಹೆರಳೇಹಣ್ಣು), ತೊಡ್ಪು (ಬರ್ಲು), ಪಲಹಾಯಿ (ಹಲಗೆ) ಮುಂತಾದ ಶಬ್ದಗಳ ಜಾಗದಲ್ಲಿ ಇಂದಿನ ಪೀಳಿಗೆಯವರು ಕಂಸದಲ್ಲಿ ಸೂಚಿಸಿರುವ ಕನ್ನಡಶಬ್ದಗಳನ್ನೇ ಸಂಕೇತಿ ತತ್ಸಮಗಳನ್ನಾಗಿಸಿಕೊಂಡು ಬಳಸುತ್ತಿದ್ದಾರೆ. ಹಂತಹಂತವಾಗಿ ಈ ಶಬ್ದಗಳು ಮರೆಯಾಗಿಬಿಟ್ಟರೆ ಆಶ್ಚರ್ಯವೇನಿಲ್ಲ. ಕುಥಾಯಿ, ಹಾರಂಕ್ಲ್, ಪುಡಶೀರ, ಕಾಲ್ವಾಯಿ, ಪುಡ, ಚೀಲ್ಢ, ಕಡ್‌ಹ್, ಮಳ್‌ಹ್, ಉಳತಂಪರ್ಪ್, ತೂರೇಪರ್ಪ್, ಪೀರ್ಖಂಗಾಯಿ, ಕೊಟ್ಟಿಕೊಳ್ಪ್, ವಳದ್ಲಂಗಾಯಿ, ಕಂಡ್ರ್, ಅರಂಗ್, ಮೇಪ್ಡಿ, ಮಾಟಾದ್ವೆ, ಚಾಣ, ಓಮ, ಮುಚ್ಚಂದಿ, ಉರಿ, ಸುಗ್ಯು, ಕಾದ್, ಅರವಾಮಣ, ಮೋಂದಾಳಿ, ಮುಟ್ಟ, ಚಾರ್ಣಿ, ನಿಲಾವ್, ಅಮಣಾಕಣ್ಣ, ಎಂಬೀ ಸಂಕೇತಿಶಬ್ದಗಳು ಮರೆಯಾಗುವ ಅಂಚಿನಲ್ಲಿವೆ. ಗ್ರಾಮಗಳಲ್ಲಿ ಉಳಿದುಕೊಂಡಿರುವ ಹಳೆಯ ಪೀಳಿಗೆಯ ಸಂಕೇತಿಗಳಿಂದ ಈ ಬಗೆಯ ಶಬ್ದಗಳನ್ನಾದರೂ, ಸಂಗ್ರಹಿಸಿ ಅರ್ಥಸಹಿತವಾಗಿ ದಾಖಲಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ.

ಇಂತಹ ಸಂಕ್ರಾಂತಿಕಾಲದಲ್ಲಿ ಈ ಸಂಕೇತಿಭಾಷಾಸಂಪುಟವು ಪ್ರಕಟವಾಗುತ್ತಿರುವುದು ಯೋಗಾಯೋಗವೇ ಸರಿ. ಸಂಕೇತಿಗಳು ತಮ್ಮ ಮನೆಯ ವಾತಾವರಣದಲ್ಲಿ ಸಂಕೇತಿಭಾಷೆಯನ್ನು ಆಡುತ್ತ, ತಮ್ಮ ಮಕ್ಕಳಿಗೂ ಅದು ಇಳಿದುಬರುವಂತೆ ನೋಡಿಕೊಳ್ಳಬೇಕು. ಮರೆಯಾಗುತ್ತಿರುವ ಸಂಕೇತಿ ಪದಗಳನ್ನು ಅವರಿಗೆ ನೆನಪಿಸಿಕೊಡಬೇಕು. ಸಂಕೇತಿಭಾಷೆ ಬಾಯ್ವಶವಾಗಿದ್ದರೆ ತಮಿಳುನಾಡಿನ ತಮಿಳನ್ನು ಅಷ್ಟೋ ಇಷ್ಟೋ ಗ್ರಹಿಸಿಕೊಳ್ಳುವ ಸಾಮರ್ಥ್ಯ ಮೈಗೂಡುತ್ತದೆ. 'ಹೊಸಭಾಷೆಯೊಂದನ್ನು ಕಲಿತರೆ ಹೊಸದೊಂದು ಸಾಮ್ರಾಜ್ಯವನ್ನೇ ಗೆದ್ದಂತೆ' ಎಂದು ಬಲ್ಲವರು ಹೇಳುತ್ತಾರೆ. ಈಗಂತೂ ತಮಿಳಿಗೆ 'ಶಾಸ್ತ್ರೀಯ ಭಾಷೆ'ಯ ಸನ್ಮಾನ ಲಭ್ಯವಾಗಿದೆ. ಕನ್ನಡಕ್ಕೂ ಲಭ್ಯವಾಗಲಿದೆ (ಈಗ ಲಭ್ಯವಾಗಿದೆ–ಸಂ). ಈ ಮೂಲಕ ತಮಿಳಿನ ಉಪಭಾಷೆಯಾದ 'ಸಂಕೇತಿ'ಯೂ ಶಾಸ್ತ್ರೀಯಭಾಷೆಯೆಂಬ ಗೌರವಕ್ಕೆ ಪಾತ್ರವಾದಂತಾಗಲಿಲ್ಲವೆ! ಪ್ರಾಣಿಮಾತ್ರಕ್ಕೆ ಹುಟ್ಟುಸಾವುಗಳಿರುವಂತೆ ಭಾಷೆಗಳಿಗೂ ಹುಟ್ಟುಸಾವುಗಳಿವೆ. ಈಗಾಗಲೇ ಜಗತ್ತಿನ ಎಷ್ಟೋ ಭಾಷೆಗಳು ಕಾಲಗರ್ಭದಲ್ಲಿ ಸೇರಿಹೋಗಿವೆ. ಒಬ್ಬರೋ ಇಬ್ಬರೋ ಮಾತ್ರವೇ ಮಾತನಾಡುವವರಿರುವ ಒಂದೆರಡು ಭಾಷೆಗಳೂ ಕೊನೆಯುಸಿರೆಳೆಯುತ್ತಿವೆ. ಮುಂದಿನ ಭವಿಷ್ಯದಲ್ಲಿ ಸಾಯಬಹುದಾದ ಕೆಲವು ಭಾಷೆಗಳ ಅನುಕ್ರಮವಾದ ಪಟ್ಟಿಯೊಂದನ್ನು ಸಮೀಕ್ಷಕರು ತಯಾರುಮಾಡಿದ್ದಾರೆ. ಅದರಲ್ಲಿ ಕನ್ನಡವೂ ಸೇರ್ಪಡೆಯಾಗಿದೆಯಂತೆ! ಇನ್ನು ಸಂಕೇತಿ ಭಾಷೆಯನ್ನು ಕೇಳಬೇಕೆ!

ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಪುಟವು ಸಂಕೇತಿಗಳಲ್ಲಿ ಸ್ವಭಾಷಾಪ್ರೇಮವನ್ನು ಉದ್ದೀಪನಗೊಳಿಸುವ ಶಕ್ತಿಯಾಗಿ ಪರಿಣಮಿಸಲೆಂದು ನಾನು ಆಸೆಪಡುತ್ತೇನೆ. ಮತ್ತೊಮ್ಮೆ ಈ ಸಾಹಸಪೂರ್ಣ ಮಹತ್ಕಾರ್ಯಕ್ಕಾಗಿ ಪ್ರಣತಾರ್ತಿಹರನ್ ಅವರಿಗೆ ಮಣಿಯುತ್ತ, ಅನಂತನಾರಾಯಣರ ಸಂಯೋಜನೆಗೆ ಸಂತೋಷಪಡುತ್ತ, ಕೆ. ಕೆಂಪೇಗೌಡ, ಕೆ.ಎಸ್. ನಾಗರಾಜ, ಕಿಕ್ಕೇರಿ ನಾರಾಯಣ, ಸಿ.ಎಸ್. ರಾಮಚಂದ್ರ ಅವರುಗಳ ವಿದ್ವತ್ತಿಗೆ ಹೆಮ್ಮೆಪಡುತ್ತ, ಸಮಸ್ತ ಕನ್ನಡಿಗರೂ ಈ ಸಂಪುಟವನ್ನು ಹೃತ್ಪೂರ್ವಕವಾಗಿ ಸ್ವಾಗತಿಸಲೆಂದು ಹಾರೈಸುತ್ತ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

☆☆☆

ದೇಶೀಯ ವಿದ್ಯಾ ಶಾಲೆ ಕಾಲೇಜು
ಶಿವಮೊಗ್ಗ

ಪ್ರೊ॥ ಎಲ್.ಎಂ.ಎಲ್. ಶಾಸ್ತ್ರಿ
ನಿವೃತ್ತಕನ್ನಡ ಪ್ರಾಧ್ಯಾಪಕರು

ನಮ್ಮ ವಂಶದ ಹಿರಿಯರ ಚರಿತ್ರೆ ತಿಳಿಯುವಾಗ ಆಗುವಷ್ಟೇ ಸಂತೋಷ, ಸಂಭ್ರಮ ನಮ್ಮ ಭಾಷೆಯ ಬಗೆಗೆ ತಿಳಿಯುವಾಗಲೂ ಆಗುತ್ತದೆ. ಇಲ್ಲಿಯವರೆಗೆ ನಮ್ಮ ಭಾಷೆಯನ್ನು ಕುರಿತು ಪ್ರಕಟವಾಗಿರುವ ಎಲ್ಲಾ ಸಂಶೋಧನ ಲೇಖನಗಳನ್ನೂ ಒಂದೆಡೆ ಕಲೆಹಾಕಿ ನಮ್ಮ ಕೈಗಿಡುತ್ತಿದ್ದಾರೆ–ಸಮುದಾಯ ಅಧ್ಯಯನ ಕೇಂದ್ರದವರು. ಆದ್ದರಿಂದ 'ಸಂಕೇತಿ' ಸಂಚಿಕೆಗಳ ಮಾಲೆಯಲ್ಲಿ ಈ ನಾಲ್ಕನೆಯ ಸಂಚಿಕೆ ವಿಶಿಷ್ಟವಾದದ್ದು. ಲಿಪಿಯೇ ಇಲ್ಲದ ಈ ನಮ್ಮ ಮಾತೃಭಾಷೆಯ ಸ್ವರೂಪವನ್ನು ಕಣ್ಣಿಗೆ ಕಟ್ಟುವಷ್ಟು ಢಾಳಾಗಿ ಕಾಣಿಸಿದ ಹಿರಿಯರಾದ ಎಚ್. ಎಸ್. ಅನಂತನಾರಾಯಣ ಅವರು ಪ್ರಾತಃಸ್ಮರಣೀಯರಾಗಿದ್ದಾರೆ. ಅವರ ಬಳಗದ ಉಳಿದ ಲೇಖಕರೆಲ್ಲರೂ ವಹಿಸಿರುವ ಶ್ರಮ ಬಹಳವಾಗಿದ್ದು ಅವರೆಲ್ಲರೂ ನಮ್ಮ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಇಲ್ಲಿಯ ಒಂದೊಂದು ಲೇಖನವೂ ಅಪಾರವಾದ ಚಿಂತನೆ ಮತ್ತು ಪ್ರತಿಭೆಯ ಫಲವಾಗಿ ಮೂಡಿಬಂದಿದೆ.

ಭಾಷಾವಿಜ್ಞಾನದ ಚೌಕಟ್ಟಿನಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಮೂಡಿಬಂದ ಈ ಲೇಖನಗಳನ್ನು ಓದಿ ಅರ್ಥಮಾಡಿಕೊಳ್ಳಬಲ್ಲ ಸಂಕೇತಿಗಳ ಸಂಖ್ಯೆ ಎಷ್ಟು ? ನನ್ನ ಅಂದಾಜು 0.1% ಅಂದರೆ ಕೇವಲ ಬೆರಳೆಣಿಕೆಯಷ್ಟು. ಈ ಲೇಖನಗಳನ್ನು ಅದೇ ಲೇಖಕರಿಂದ ಅಥವ ಶ್ರೀ ಕೆ. ಅನಂತರಾಮು ಅಂತಹ ವಿದ್ವಾಂಸರಿಂದ ಅನುವಾದಿಸಿ ಕನ್ನಡದಲ್ಲಿ ಓದುವಂತಾಗಿದ್ದರೆ ಶೇ. 50 ರಷ್ಟು ಸಂಕೇತಿಗಳ ಮನ ತಲುಪಬಹುದಾಗಿತ್ತು ? ಕನ್ನಡದಲ್ಲಿ ಕೂಡ ಸಮಾನ ಪಾರಿಭಾಷಿಕ ಶಬ್ದಗಳು ಇರುವುದರಿಂದ ಈ ಕೆಲಸ ಕಷ್ಟದ್ದಾಗಿರಲಿಲ್ಲ. ಪ್ರಸ್ತುತ ಕೃತಿಯ ಕಡೆಯ ಭಾಗದ ಕನ್ನಡ ಲೇಖನಗಳು ಮಧುರ ಆಗಿವೆ–ಹೃದ್ಯವಾಗಿವೆ.

ಹಿರಿಯ ವಿದ್ವಾಂಸರ ಅಪಾರ ಪರಿಶ್ರಮದಿಂದ ಮೂಡಿಬಂದ ಇಲ್ಲಿನ ಲೇಖನಗಳನ್ನು ಓದುವುದೇ ಒಂದು ಭಾಗ್ಯ. ಯಾವುದೇ ಶೋಧನೆ ಎಂಬುದು ಬದಲಿ ಅಭಿಪ್ರಾಯ ಗಟ್ಟಿಗೊಳ್ಳುವವರೆಗಿನ ಸತ್ಯ ಮಾತ್ರವಾದ್ದರಿಂದ ಈ ಅರಿವುಳ್ಳ ಸಂಶೋಧಕ ವಿನಯದಿಂದಲೇ ಮೆರೆಯುತ್ತಾನೆ. ಆದ್ದರಿಂದ ನನ್ನ ಎರಡು ಮಾತುಗಳನ್ನು ಸೇರಿಸಲು ಸಂಕೋಚ ಪಡಬೇಕಾಗಿಲ್ಲ.

ಭಾಷಾವಿಜ್ಞಾನಿಗಳು ಜಾತಿಯ ಹಿನ್ನೆಲೆಯಲ್ಲಿ ಭಾಷೆಯನ್ನು ಕುರಿತು ವಿಚಾರ ಮಾಡುವುದು ಕಡಿಮೆ. ಆದರೆ ಸಂಕೇತಿ ಭಾಷೆ ಕೇವಲ ಬ್ರಾಹ್ಮಣರ ಆಡುನುಡಿಯಾದ್ದರಿಂದ, ಅಪಾರವಾದ ವೇದಾಧ್ಯಯನಶೀಲರಾದ ತಮಿಳುನಾಡಿನ ಬ್ರಾಹ್ಮಣ ಪರಂಪರೆಯವರಾದ್ದರಿಂದ ಈ ಭಾಷೆಯನ್ನು ತನ್ನದೇ ಆದ ಭಾಷೆ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ಅವಲೋಕಿಸಬೇಕಾಗಿದೆ. ಪ್ರಸ್ತುತ ಕೃತಿಯ ಲೇಖಕರು ಈ ಅಂಶವನ್ನು ಗಮನಿಸಿರುತ್ತಾರೆ (ಉದಾ : ಪುಟ 27, 29, 30, 35, 110 ಇತ್ಯಾದಿ).

ಶ್ರೀ ಎಚ್.ಎಸ್. ಅನಂತನಾರಾಯಣ ಅವರ "The Original Home of the Sanketis" ಲೇಖನದಲ್ಲಿ ಸಂಕೇತಿಗಳು ಮಲೆಯಾಳಿ ಭಾಷಿಕರ ಪ್ರಾಂತದಂಚಿನ ತಮಿಳುನಾಡಿನಿಂದ ಬಂದ ತಮಿಳರು ಎಂಬ ಮಾತನ್ನು ಹೆಚ್ಚು ಎಚ್ಚರಿಕೆಯಿಂದ ಶ್ರುತಪಡಿಸಿರುತ್ತಾರೆ. ಅಲ್ಲಿಂದ ಕರ್ನಾಟಕಕ್ಕೆ ಬಂದು ಬೀಡು ಬಿಟ್ಟ ವಿಸ್ತರವಾದ ಉಲ್ಲೇಖವಿದೆ. ಕಡೂರು ಜಿಲ್ಲೆಯ (ಈಗಿನ ಚಿಕ್ಕಮಗಳೂರು ಜಿಲ್ಲೆ) ಲಿಂಗದಹಳ್ಳಿಗೆ ಬರುವ ಮೊದಲು ಹಿರಿಯಂಗಳ (ಬೀರೂರು ಸಮೀಪ)ದಲ್ಲಿ ಬೀಡು ಬಿಟ್ಟಿದ್ದರು. ಅಲ್ಲಿಂದ ಮೂರು ಸಂಸಾರ ಬೀರೂರಿನಲ್ಲಿ ಉಳಿದು ಉಳಿದವರು ಲಿಂಗದಹಳ್ಳಿಗೆ ಬಂದರು. ಲಿಂಗದಹಳ್ಳಿಗೆ ಬಂದ ಮತ್ತೊಂದು ಗುಂಪು ತೀರ್ಥಹಳ್ಳಿ ತಾ॥ ಬಸವಾನಿಯಿಂದ ಬಂದದ್ದು. ಅಲ್ಲಿ ಈಗಲೂ ಎರಡು ಸಂಕೇತಿಗಳ ಮನೆ ಇದ್ದು ಅವರು ಲಿಂಗದಹಳ್ಳಿಯ ವಂಶದ ಮೂಲದವರಲ್ಲ! ಒಂದು ಸಂಸಾರ ಲಕ್ಕುಂಡಿಯಿಂದ ಬಂದಿದ್ದು ಅವರಿಗೆ ಇತ್ತೀಚಿನವರೆಗೆ ಅಲ್ಲಿಂದ ಕಂದಾಯ ಸಂದಾಯವಾಗುತ್ತಿತ್ತು ! ಎರಡು ಸಂಸಾರ ಶೃಂಗೇರಿ ಮೂಲದ್ದಾಗಿದ್ದು ಅಲ್ಲಿ ಅವರಿಗೆ ಇತ್ತೀಚಿನವರೆಗೆ ಗೇಣಿ ಲಭ್ಯವಾಗುತ್ತಿತ್ತು. ಈಗ ಶೃಂಗೇರಿಯಲ್ಲಿ ಒಂದು ಸಂಕೇತಿ ಸಂಸಾರವಿದ್ದು ಅದು ಮೇಲೆ ಹೇಳಿದ ವಂಶಸ್ಥರ ಸಂಬಂಧಿಗಳದ್ದಲ್ಲ. ಎರಡು ಸಂಸಾರಗಳಿಗೆ ಅಜ್ಜಂಪುರ ಬಳಿಯ 'ಯಗಟಿ'ಯ ನರಸಿಂಹದೇವರು ಮನೆದೇವರು !! ಈ ದೇವರು ಕೆಲವು ಬೆಟ್ಟದಪುರ–ಸಂಕೇತಿಗಳಿಗೂ ಮನೆದೇವರು!

ನೂರಾರು ಪದಗಳ ಉದಾಹರಣೆಯೊಂದಿಗೆ ಶ್ರೀ ಎಚ್.ಎಸ್. ಅನಂತನಾರಾಯಣ ಅವರು ತಮಿಳು ಮತ್ತು ಸಂಕೇತಿ ಭಾಷೆಗಳ ಸಂಬಂಧವನ್ನು ಕಾಣಿಸಿದ್ದಾರೆ. ವರ್ಣಮಾಲೆ ಕುರಿತು ಡಾ॥ ಕೆ. ಕೆಂಪೇಗೌಡ ಅವರು ವಿಸ್ತಾರವಾಗಿ ಚರ್ಚಿಸಿದ್ದಾರೆ. ವರ್ಣಮಾಲೆ ಕುರಿತ ಎಲ್ಲ ಲೇಖನಗಳ ಒಟ್ಟಭಿಪ್ರಾಯವನ್ನು ಸಂಪಾದಕರು ಅಡಿಟಿಪ್ಪಣಿಯಲ್ಲಿ ನಮೂದಿಸಬಹುದಿತ್ತು. ಕೆಂಪೇಗೌಡ ಅವರು 43 ಅಕ್ಷರ (ಧ್ವನಿಮಾ)ಗಳನ್ನೂ ಶ್ರೀ ಕೆ. ನಾರಾಯಣ ಅವರು ಮಹಾಪ್ರಾಣಾಕ್ಷರಗಳನ್ನು ಬಿಟ್ಟು (!) 33 ಅಕ್ಷರಗಳನ್ನೂ ಒಪ್ಪಿಕೊಂಡಿದ್ದಾರೆ.

ಶ್ರೀ ಕೆಂಪೇಗೌಡ ಅವರು "ನಾಲ್ಕು ಸಂಕೇತಿ ಜನಾಂಗವು ಪರಸ್ಪರ ಪ್ರತ್ಯೇಕವಾಗಿವೆ. ಪ್ರತಿ ಗುಂಪೂ ತಮ್ಮ ಭಾಷೆ ಮತ್ತು ಸಂಸ್ಕೃತಿಯ ವಿಷಯದಲ್ಲಿ ಭಿನ್ನವಾಗಿವೆ. ಪ್ರತಿ ಗುಂಪೂ ತಮ್ಮದು ಬೇರೆ ಗುಂಪಿಗಿಂತ ಮೇಲಾದದ್ದು ಎಂದು ಭಾವಿಸಿದೆ." ಎಂದಿದ್ದಾರೆ. ಲೇಖನದ ಕಾಲ ನಮೂದಾಗಿಲ್ಲ. ಪುಟ 53ರ ಈ ಮೂರೂ ಮಾತುಗಳು ಈ ಕಾಲಕ್ಕೆ ಅನನ್ವಿತ. ಬದಲಾಗಿದೆ.

2ನೆಯ ಲೇಖನದಲ್ಲಿ ಶ್ರೀ ಎಚ್.ಎಸ್. ಅನಂತನಾರಾಯಣ ಅವರು ತೌಲನಿಕ ಚಿಂತನೆ ಮಾಡಿದ್ದಾರೆ. ಇನ್ನೂ ಆಗಬೇಕು ಎಂದಿದ್ದಾರೆ (ಪು.8). ಈ ಮಾತು ಸರಿ. ಮೂರಲ್ಲ, ನಾಲ್ಕು ಪಂಗಡಗಳ ಭಾಷಾ ವರ್ಗೀಕರಣ ಖಚಿತವಾಗಿ ಆಗಬೇಕಾದದ್ದಿದೆ. ಈ ಲೇಖನದಲ್ಲಿ ಉದಾಹರಿಸಿರುವ ಬೆಂ.ಸಂ. ಪದಗಳು ಬಹಳಷ್ಟು ಲಿಂ.ಸಂ.ಗೆ ಸಂವಾದಿಯಾಗಿವೆ (ಪುಟ 8–10). ಉದಾ: ಮುದ್ಲು, ಮಗೋ, ಚಿರಿ, ಪೂನೆ, ಪುಳ್ಳೆ, ಅಕ್ಕೊ, ಅಣ್ಣೊ, ಆಯಿರೊ, ಮಳಿಗಿ, ಕಡಿಗಿ, ಪಗಲಿ, ಅಳಗಿ, ಪೈಜ, ಪೊಂಡಾಟಿ, ಕರ್ಪಿ, ಪಾರೆ, ಕೂಗು, ರಮಕೆ, ಪೂಷ್ಣಿಕ್ಕಾ, ತೂಮ ಇತ್ಯಾದಿ.

ಸ್ವರವ್ಯತ್ಯಯದ ಅದ್ಭುತ ಚಿತ್ರವನ್ನು ಪುಟ 19ರಲ್ಲಿ ಲೇಖಕರು ಕಾಣಿಸಿದ್ದಾರೆ. 0 > 0 ಮತ್ತು e: > o: ಇತ್ಯಾದಿ ವ್ಯತ್ಯಾಸಗಳನ್ನು ಗಮನಿಸಬಹುದು. ಹಾಗೆಯೇ ಕನ್ನಡ ಸಂಕೇತಿ ಸಂವಾದಿ ಪದಗಳ ವಿಸ್ತಾರ ವಿವೇಚನೆ ಇಲ್ಲಿದೆ (ಪುಟ 26). ಬಹಳಷ್ಟು ಸಂಸ್ಕೃತ ಪದಗಳು ಕನ್ನಡದ ಮೂಲಕವಾಗಿ ಸಂಕೇತಿಗೆ ಬಂದಿವೆ ಎಂಬ ಸೂಕ್ಷ್ಮವನ್ನು ಇಲ್ಲಿ ಲೇಖಕರು ಪ್ರಸ್ತಾಪಿಸಬಹುದಿತ್ತು. ವಿಸ್ತಾರ ಪ್ರಬಂಧದ ಒಟ್ಟು ಸಾರವನ್ನು ಪುಟ 28ರಲ್ಲಿ ಶ್ರೀ ಎಚ್.ಎಸ್. ಅನಂತನಾರಾಯಣ ಕೊಟ್ಟಿರುತ್ತಾರೆ. ಪ್ರಬಂಧದ ಈ ಅಚ್ಚುಕಟ್ಟುತನ ಅನುಕರಣೀಯವಾಗಿದೆ.

ಶ್ರೀ ಎಚ್.ಎಸ್. ಅನಂತನಾರಾಯಣ ಅವರು ಪ್ರಬಂಧ 4ರಲ್ಲಿ (ಪುಟ 30) ನಿಯಮಬದ್ಧ ಬದಲಾವಣೆಗಳನ್ನು ಕುರಿತು ವಿವರಿಸಿದ್ದಾರೆ. ಕೇರಳದ ಗಡಿ ಭಾಗದ ತಮಿಳುನಾಡಿನಿಂದ ಸಂಕೇತಿಗಳು ಬಂದವರು ಎಂಬ ಮಾತು ಸರಿಯೆನಿಸುತ್ತದೆ. 'ಉಮಾರ್ ಪಿಂಡಿ' ಅಂತಹ ಕೆಲವೇ ಪದಗಳ ಸೇರ್ಪಡೆ ಬಹುಶಃ ಗಡಿ ಭಾಗದ ಪ್ರಭಾವವಿರಬೇಕು. (ಪಿಂಡಿ(ತ) > ಪಿಂಡಿ (ತೆ) > ಪಿಂಡಿ (ಸಂ) ಉದಾ : ಗೋಧಿಪಿಂಡಿ (ಮತ್ತೂರು) ಉಮ್ರಾ ಪಿಂಡಿ (= ಉಮಾರ್ ಪಿಂಡಿ) (ಲಿಂ.)

ಪುಟ 35ರಲ್ಲಿ ಕಿಟ್ಟೆ (Near) ಪದ ಸಂಕೇತಿಯಲ್ಲಿ ಇಲ್ಲ ಎಂದು ಎಚ್.ಎಸ್. ಅನಂತನಾರಾಯಣ ಸೂಚಿಸಿದ್ದಾರೆ. ಮಧ್ಯದೇಶದಲ್ಲಿ ಇಲ್ಲ, ಆದರೆ ಲಿಂಗದ ಹಳ್ಳಿಯಲ್ಲಿ ಇದೆ ! (ತ – ಕಿಟ್ಟು; ತುಳು – ಕಿಟ್ಟ). ಅತ್ಯಂತ ಸೂಕ್ಷ್ಮಾಂಶಗಳು ಕೂಡ ಶ್ರೀ ಎಚ್.ಎಸ್. ಅನಂತನಾರಾಯಣ ಅವರ ಕಣ್ಣು ತಪ್ಪಿಸುವುದಿಲ್ಲ. ಶಬ್ದಾದಿಯ ಧ್ವನಿವ್ಯತ್ಯಾಸ (ಪುಟ 38)ದಿಂದಾಗುವ ಅರ್ಥವ್ಯತ್ಯಾಸಗಳನ್ನು ಚಿಂತಿಸಿದ್ದಾರೆ. ಕನ್ನಡದ ಮಟ್ಟಿಗೆ ಇಂತಹ ಅಸಂಖ್ಯ ಪದಗಳುಂಟು. ಈ ವ್ಯತ್ಯಾಸಗಳ ಇನ್ನಷ್ಟು ಗಾಢವಾದ ವಿಶ್ಲೇಷಣೆಯ ಅಗತ್ಯವಿದೆ. ಧ್ವನಿಮಾಗಳಲ್ಲಿನ ಧ್ವನಿ ವೈವಿಧ್ಯತೆ ಸಂಕೇತಿಯಲ್ಲಿ ಹೆಚ್ಚು.

ಶ್ರೀ ಕಿಕ್ಕೇರಿ ನಾರಾಯಣ ಅವರು ಸ್ವರ ವ್ಯಂಜನಗಳ ಹರಹನ್ನು ವಿಸ್ತಾರವಾಗಿ ಚರ್ಚಿಸಿದ್ದಾರೆ. ವೈಜ್ಞಾನಿಕವಾಗಿದೆ. i ಕಾರ ಮತ್ತು e ಕಾರಗಳು ಸಂಕೇತಿಯಲ್ಲಿ ಮೂರಿರುವಂತೆ ಹೆಚ್ಚಿನ ದ್ರಾವಿಡಭಾಷೆಗಳಲ್ಲಿಲ್ಲ. ತೊದ ಭಾಷೆಯಲ್ಲಿದೆ. ಈ ಬಗ್ಗೆ ಹೆಚ್ಚಿನ ಅಧ್ಯಯನದ ಅಗತ್ಯವಿದೆ. ಪುಟ 46ರ ಪಟ್ಟಿ ಶ್ರೀ ನಾರಾಯಣ ಅವರ ಆಳವಾದ ಚಿಂತನೆಗೆ ಸಾಕ್ಷಿಯಾಗಿದೆ.

ಶ್ರೀ ಸಿ.ಎಸ್. ರಾಮಚಂದ್ರ ಅವರ "Clusters in Sanketi Tamil" ಪ್ರಬಂಧ ರೋಚಕವಾಗಿದೆ. ಸುದೀರ್ಘವಾದ "Classification of Consonant Clusters" ವಿವರ ಇಲ್ಲಿದೆ. ನಾಲ್ಕು ವ್ಯಂಜನಗಳ ಗುಚ್ಛ (Consonant Clusters)ಗಳನ್ನು ಕಾಣಿಸಿದ್ದಾರೆ ! ಅವರ ಆಳವಾದ ಅಧ್ಯಯನ–ಚಿಂತನೆ ಇಲ್ಲಿ ಕಾಣುತ್ತೇವೆ.

ಶ್ರೀ ರಾಮಚಂದ್ರ ಅವರು ತಮ್ಮ ಇನ್ನೊಂದು ಪ್ರಬಂಧದಲ್ಲಿ ಐದಕ್ಷರದ ಸಂಕೇತಿ ಪದಗಳನ್ನು ಉದಾಹರಿಸಿದ್ದಾರೆ. ಆದರೆ ಕನ್ನಡ ವ್ಯಾಕರಣಕಾರ ಕೇಶಿರಾಜನ 5 ಅಕ್ಷರದ ಉದಾಹರಣೆಗಳೆಲ್ಲ ಸಮಾಸಪದಗಳಾಗಿರುವಂತೆ ಇಲ್ಲಿನ ಉದಾಹರಣೆಗಳು ಕೂಡ ಸಮಾಸಪದಗಳಾಗಿವೆ.

ಶ್ರೀ ಎಚ್.ಎಸ್. ಅನಂತನಾರಾಯಣ ಅವರು ಸಂಧಿವಿಚಾರ ವಿಸ್ತಾರವಾಗಿ ವಿಶ್ಲೇಷಿಸಿದ್ದಾರೆ. ಪ್ರತ್ಯಯ ಸೇರಿದಾಗ ಮೂಲಪದದ ಉಪಾಂತ್ಯ ಸ್ವರ ವ್ಯತ್ಯಾಸವಾಗುವ ಸೂಕ್ಷ್ಮವನ್ನು ಗಮನಿಸಿದ್ದಾರೆ. ಉದಾ. talay + a = taleya; a > e ಉಚ್ಚಾರ ಸುಖಕ್ಕಾಗಿ. ಈ ವ್ಯತ್ಯಾಸ ಕನ್ನಡದಲ್ಲೂ ಉಂಟು. ಹಳದು + ಅ = ಹಳೆಯ. ಭೂತಕಾಲ ಸೂಚಕವಾಗಿ 'ಇ' ಪ್ರತ್ಯಯ ಬರುವುದೆಂದು Dr. Cald -well ಸೂಚಿಸುವ ಕನ್ನಡದ ರೂಢಿಯೂ (ಮಾಡು + ದ = ಮಾಡಿದ) ಸೌಲಭ್ಯಾಕಾಂಕ್ಷೆಯೇ! (ಪುಟ 116). ಉತ್ತಮ ಪುರುಷ ಭೂತಕಾಲ ಬಹುವಚನ ರೂಪಗಳು (117–5) ಚುಟ್ಟು, ತೋಡ್ನುಗಳು ಲಿಂ.ಸಂ. ಯಲ್ಲಿ ಚುಟ್ನೊ, ತೋಡ್ನೊ ಎಂದಾಗುತ್ತವೆ.

ಪುಟ 151ರ ಮಾತು ``Present Continuous Negative: This is formed by adding 'ill' (no, not) to the present continuous" ಇದು 'ill' ಅಲ್ಲ all ಆಗಬೇಕಿತ್ತು ?

ಶ್ರೀ ಕೆ.ಎಸ್. ನಾಗರಾಜ ಅವರ 'Verbs in Sanketi ಲೇಖನದ 180ನೇ ಪುಟದ ಕಡೆಯಲ್ಲಿ '14 Verbs roots are not found in L.S' ಅಂತ ಹೇಳಿ ಉದಾಹರಣೆ ಕೊಟ್ಟಿದ್ದಾರೆ. ಆದರೆ ಇವೆಲ್ಲ L.S. ನಲ್ಲಿ ರೂಢಿಯಲ್ಲಿವೆ.

ಪಟ್ಟಿಮಾಡುವುದು, ಸೂಚಿಸುವುದು ನನ್ನ ಉದ್ದೇಶವಲ್ಲ. ನನ್ನ ಮೆಚ್ಚುಗೆಯನ್ನ ಹಂಚಿಕೊಂಡ ವಿಧಾನವಿದು. ಇಂಥ ಮೇರು ಕೃತಿಯನ್ನು ದಯಪಾಲಿಸಿದ ಶ್ರೀ ಹರನ್ ಅವರಿಗೆ, ಶ್ರೀ ಎಚ್.ಎಸ್. ಅನಂತನಾರಾಯಣ ಅವರಿಗೆ, ಅಧ್ಯಯನ ಕೇಂದ್ರದವರಿಗೆ ಸಂಕೇತಿ ಸಮುದಾಯ ಆಭಾರಿಯಾಗಿದೆ.

***

ಆಕಾಶವಾಣಿ **ಡಾ॥ ಎಂ.ಎಸ್. ವಿಜಯಾ ಹರನ್**
ಮೈಸೂರು ನಿರ್ದೇಶಕರು

ಶ್ರೇಷ್ಠ ವಿದ್ವಾಂಸರೂ ಸಂಶೋಧಕರೂ ಆಗಿರುವುದರ ಜೊತೆಗೆ ಉತ್ತಮ ಅಧ್ಯಾಪಕರೂ ಆದ ಪ್ರೊ॥ ಎಚ್. ಎಸ್. ಅನಂತನಾರಾಯಣ ಅವರು ಈ ಸಂಪುಟವನ್ನು ಸಂಪಾದಿಸುವುದರಲ್ಲಿ ಶ್ಲಾಘ್ಯವಾದ ಒಳನೋಟವನ್ನು ಮೆರೆದಿದ್ದಾರೆ. ತುಸುವೇ ಆಸಕ್ತಿ ಇದ್ದರೂ, ಇಲ್ಲಿನ ಲೇಖನಗಳನ್ನು ಸಾಮಾನ್ಯ ಓದುಗರೂ ಲೀಲಾಜಾಲವಾಗಿ ಓದಿಕೊಂಡುಹೋಗಬಹುದು, ಅರ್ಥಮಾಡಿಕೊಳ್ಳಬಹುದು. ಇನ್ನಷ್ಟು ಆಸಕ್ತಿ ಇದ್ದರೆ, ತಮಗೆ ಗೊತ್ತಿರುವ ಅಪರೂಪದ ಪದ ಮತ್ತು ನುಡಿಗಟ್ಟುಗಳ ವಿವರಗಳನ್ನು ಸಂಪಾದಕರಿಗೆ ಮುಂದಿನ ಉಪಯೋಗಕ್ಕಾಗಿ ಒದಗಿಸಬಹುದು. ಈ ಸಮುದಾಯದವರು ತಮ್ಮ ಮಾತೃಭಾಷೆ 'ಸಂಕೇತಿ'ಯ ಬಗೆಗೆ ಪೂರ್ಣ ಅಭಿಮಾನ ತಳೆಯುವುದಕ್ಕೆ ಇಲ್ಲಿನ ವಿವಿಧ ಲೇಖಕರ ಶಾಸ್ತ್ರೀಯ ಪ್ರತಿಪಾದನೆಗಳು ನೆರವಾಗುತ್ತವೆ. ತಮ್ಮ ಭಾಷೆಗೆ ಲಿಪಿಯೊಂದು ಬೇಕೆಂಬ ತಹತಹ ಸಂಕೇತಿ ಸಮುದಾಯದಲ್ಲಿದೆ ; ಆ ಬಗೆಗೆ ಬೇಕಾದಷ್ಟು ಚರ್ಚೆಗಳೂ ನಡೆದಿವೆ. ಪ್ರೊ॥ ಅನಂತನಾರಾಯಣ ಅವರು ಆ ಬಗೆಗೆ ಬರೆದಿರುವ ಲೇಖನವು ಅವರ ವಿದ್ವತ್ತು ಮತ್ತು ಅನುಭವದ ಹಿನ್ನೆಲೆಯಲ್ಲಿ ನಿರ್ಣಾಯಕವಾಗಿದೆ. ಆ ಬಗೆಗೆ ಎಲ್ಲ ಗೊಂದಲಗಳೂ ನಿವಾರಣೆಯಾಗುವಂತೆ ಲೇಖಕರು ತಿಳಿಯಾಗಿ ವಿವರಿಸಿದ್ದಾರೆ, ಮಾರ್ಗದರ್ಶನ ಮಾಡಿದ್ದಾರೆ.

ಇದನ್ನು ಆಧಾರವಾಗಿಟ್ಟುಕೊಂಡು ಸಂಕೇತಿ ಭಾಷೆಯ ಸಾಹಿತ್ಯವನ್ನು ಬೆಳೆಸಬಹುದಾಗಿದೆ. ಸಂಕೇತಿ ಸಮುದಾಯದ ಸಾಂಸ್ಕೃತಿಕ ಪ್ರಯೋಜನದ ಬಗೆಗೆ ಮುನ್ನೋಟವಿರುವವರು ಅದಕ್ಕಾಗಿ ಒಂದು ಕಿರುಪತ್ರಿಕೆಯನ್ನೂ ಪ್ರಾರಂಭಿಸಬಹುದು.

ಹಾಗೆ ಆದಾಗ, ಕಳೆದುಹೋಗುತ್ತಿರುವ ಸಂಕೇತಿ ಪದಗಳು ಉಳಿದುಕೊಳ್ಳುತ್ತವೆ. ಭಾಷೆಯು ದೃಢವಾಗುತ್ತದೆ. ಭಾಷೆಯನ್ನು ಮರೆಯುವ ಅಂಚಿನಲ್ಲಿರುವ ಜನರು, ಅದನ್ನು ಉಳಿಸಿ ಬೆಳೆಸುತ್ತಾರೆ. ಅಲ್ಲದೆ ಈ ಭಾಷೆಯೇ ಇಲ್ಲವಾದರೆ ಸಮುದಾಯವು ಕರಗದಂತೆ ಹಿಡಿದಿಟ್ಟಿರುವ ಭದ್ರವಾದ ಕಟ್ಟು ಕಳಚಿದಂತಾಗುತ್ತದೆ. ಆಮೇಲೆ ಸಮುದಾಯವೆಲ್ಲಿ ? ಪತ್ರಿಕೆಗಳೆಲ್ಲಿ ? ಸಕಾಲಿಕವಾದ ಈ ಪ್ರಕಟಣೆಯ ಮೂಲಕ ಸಮುದಾಯ ಅಧ್ಯಯನ ಕೇಂದ್ರವು ಸಂಕೇತಿ ಸಮುದಾಯಕ್ಕೆ ಒಂದು ಮಹತ್ತರ ಕೊಡುಗೆ ನೀಡಿದಂತಾಗಿದೆ.

ಈ ಸಂಪುಟವು ವಿಸ್ತಾರವಾದ ಭಾಷಾವಿಜ್ಞಾನ ಪ್ರಪಂಚಕ್ಕೂ ಒಂದು ಕಾಣಿಕೆ ಎಂಬುದನ್ನು ಮತ್ತೆ ಹೇಳಬೇಕಿಲ್ಲ.

***

ಪ್ರಧಾನ ಸಂಪಾದಕರು **ಡಾ॥ ಬಿ.ಎಸ್. ಪ್ರಣತಾರ್ತಿಹರನ್**
ಸಂಕೇತಿ : ಭಾಷಾಧ್ಯಯನ ಕನ್ನಡ ಪ್ರಾಧ್ಯಾಪಕರು

ಪ್ರಕೃತ ಸಂಪುಟವು ಕರ್ನಾಟಕದ ಸಂಕೇತಿಗಳು ಬಳಸುತ್ತಿರುವ 'ಸಂಕೇತಿ' ಭಾಷೆಯ ಸ್ವರೂಪಕ್ಕೆ ಸಂಬಂಧಿಸಿದ್ದು, ಅದನ್ನು 'ಸಂಕೇತಿ: ಭಾಷಾಧ್ಯಯನ' ಎಂದೇ ಹೆಸರಿಸಲಾಗಿದೆ. 'ಸಂಕೇತಿ' ಎಂಬುದು ಸಮುದಾಯದ ಹೆಸರು; ಅಲ್ಲದೇ ಕರ್ನಾಟಕದಲ್ಲಿ ಅವರಾಡುವ ಭಾಷೆಗೂ ಅದು ಬಳಕೆಯಾಗುತ್ತಿದೆ.

ಕರ್ನಾಟಕದಲ್ಲಿ ತಮಿಳನ್ನು ಮಾತೃಭಾಷೆಯಾಗಿ ಉಳ್ಳ ಹಲವು ಸಮುದಾಯಗಳಿವೆ. ಹೊಸದಾಗಿ ವಲಸೆ ಬಂದು ನೆಲೆಸಿರುವವರನ್ನು ಬಿಟ್ಟರೆ, ಉಳಿದ ಯಾವ ಸಮುದಾಯಕ್ಕೆ ಸಂಬಂಧಿಸಿದ ಭಾಷೆಯೂ ತಮಿಳುನಾಡಿನಲ್ಲಿ ಈಗ ಬಳಕೆಯಾಗುತ್ತಿರುವ ತಮಿಳುಭಾಷೆಗೆ ಸಂವಾದಿಯಾಗಿಲ್ಲ. ಎಲ್ಲವೂ ವ್ಯತ್ಯಾಸಗೊಂಡಿವೆ; ವ್ಯತ್ಯಾಸಗೊಂಡ ಪ್ರಮಾಣದಲ್ಲಿ ಮಾತ್ರ ಹೆಚ್ಚು ಕಡಿಮೆ ಇರಬಹುದು ಅಷ್ಟೆ. ಆದರೂ ಸಂಕೇತಿಗಳ ಆಡುಭಾಷೆಯು ಭಾಷಾ ಸಂಶೋಧಕರ ಗಮನವನ್ನು ಸೆಳೆದಷ್ಟು ಉಳಿದ ಉಪಭಾಷೆಗಳು ಸೆಳೆದಂತಿಲ್ಲ. ಅದಕ್ಕೆ ಸಂಕೇತಿ ಉಪಭಾಷೆಯು ಇತರೆಲ್ಲಾ ಉಪಭಾಷೆಗಳಿಗಿಂತ ಹೆಚ್ಚು ವ್ಯತ್ಯಾಸಗೊಂಡಿರುವುದೇ ಕಾರಣವಿರಬಹುದು.

ಕಳೆದ ನಲವತ್ತು ವರ್ಷಗಳಲ್ಲಿ ಅನೇಕ ವಿದ್ವಾಂಸರು ಈ ಭಾಷೆಗೆ ಸಂಬಂಧಿಸಿದಂತೆ ಹಲವಾರು ಲೇಖನಗಳನ್ನು ಬರೆದಿದ್ದಾರೆ. ವಿಚಾರಸಂಕಿರಣಗಳಲ್ಲೂ, ಸಂಶೋಧಕ ಮಂಡಲಿಗಳಲ್ಲೂ ಪ್ರಬಂಧಗಳನ್ನು ಮಂಡಿಸಿದ್ದಾರೆ. ಡಿಸರ್ಟೇಷನ್‌ಗಳನ್ನೂ, ಥೀಸೀಸ್‌ಗಳನ್ನೂ ಸಿದ್ಧಪಡಿಸಿದ್ದಾರೆ. ಅವುಗಳಲ್ಲಿ ಒಂದೆರಡು ಬರಹಗಳನ್ನು ಕೈಬಿಟ್ಟು ಉಳಿದವನ್ನು ಈ ಸಂಪುಟದಲ್ಲಿ ಸೇರಿಸಲಾಗಿದೆ. ಎರಡು ಪಿಎಚ್.ಡಿ. ಮಹಾಪ್ರಬಂಧಗಳು ಪ್ರತ್ಯೇಕವಾಗಿ ಪ್ರಕಟವಾಗಲಿವೆ.

ಈ ಲೇಖನಗಳೆಲ್ಲಾ ಸಂಕೇತಿಗಳೇ ಬರೆದುವಲ್ಲ, ಹೊರಗಿನಿಂದ ಈ ಭಾಷೆಯನ್ನು ಕೇಳಿ ಕುತೂಹಲಗೊಂಡು, ವಿಶೇಷ ಆಸಕ್ತಿ ತಳೆದು ಅಭ್ಯಸಿಸಿ ಬರೆದವರೂ ಇಲ್ಲುಂಟು. ಅನ್ಯಭಾಷೆಯೊಂದರ ಭಾಷಾವೈಜ್ಞಾನಿಕ ನಿರ್ವಹಣೆಯು ಹೆಚ್ಚು ಶ್ರಮದಾಯಕವಾದ ಕಾರ್ಯವೂ ಹೌದು. ಅಂಥ ಶ್ರಮವಹಿಸಿದ ಖ್ಯಾತ ಭಾಷಾವಿಜ್ಞಾನಿಗಳಾದ ಡಾ॥ ಕೆ. ಕೆಂಪೇಗೌಡ ಅವರನ್ನೂ, ಶ್ರೀಯುತ ಕಿಕ್ಕೇರಿ ನಾರಾಯಣ ಅವರನ್ನೂ ಸಮುದಾಯ ಅಧ್ಯಯನ ಕೇಂದ್ರವು ವಿಶೇಷವಾಗಿ ಅಭಿನಂದಿಸುತ್ತದೆ.

ಈ ಲೇಖನಗಳೆಲ್ಲವೂ ಆಯಾಹೊತ್ತಿನ ಶೈಕ್ಷಣಿಕ ಅಗತ್ಯಗಳನ್ನು ಪೂರೈಸಲು ಸಿದ್ಧವಾದಂಥವು. ಅನೇಕ ವೇಳೆ ಅವು ವಿದ್ವತ್‌ಗೋಷ್ಠಿಗಳಲ್ಲಿ ಚರ್ಚೆಗೆ ಒಡ್ಡಿಕೊಳ್ಳುತ್ತವೆಂಬ ಪ್ರಜ್ಞೆಯಿಂದಲೇ ಸಿದ್ಧವಾದಂಥವು. ಆದ್ದರಿಂದ ಅವೆಲ್ಲವೂ ಗಂಭೀರ ಬರವಣಿಗೆಗಳೆಂದು ಮತ್ತೆ ಹೇಳಬೇಕಾಗಿಲ್ಲ.

ಹೀಗೆ ಬಿಡಿಬಿಡಿಯಾಗಿ, ಆಯಾ ಸಂದರ್ಭಗಳಿಗನುಗುಣವಾಗಿ ತಮ್ಮ ಆಸಕ್ತಿಯ ಇಲ್ಲವೇ ಅಗತ್ಯದ ಲೇಖನಗಳ್ನು ಸಿದ್ಧಪಡಿಸಿರುವುದರಿಂದಾಗಿ, ಅವೆಲ್ಲವೂ ಒಟ್ಟು ಸೇರಿದರೂ, ಒಂದು ಭಾಷೆಯ ಸಮಗ್ರ ಅಧ್ಯಯನಕ್ಕಾಗಿಯೇ ತೊಡಗಿಸಿಕೊಂಡ ಏಕವಿದ್ವಾಂಸನ ಕೃತಿಯಂತೆ ಸುಸಂಘಟಿತವಾಗಿರುವುದಿಲ್ಲ ಎಂಬುದೂ ನಿಜವೇ. ಹೀಗೆ ಹರಡಿದ ಲೇಖನಗಳನ್ನು ಒಂದು ಸಂಪುಟಕ್ಕಾಗಿ ಸಂಪಾದಿಸುವುದು ಸವಾಲಿನ ಕೆಲಸವೇ ಸರಿ. ವಿಭಿನ್ನ ಲೇಖಕರು ಅನುಸರಿಸಿದ ದತ್ತಾಂಶಗಳು ಹಾಗೂ ಅವರ ತೀರ್ಮಾನಗಳಲ್ಲಿನ ಭಿನ್ನತೆಗಳು ಆ ಹೊತ್ತಿನ ಲೇಖನಗಳಿಗೆ ಅಗತ್ಯವಾಗಿದ್ದರೂ, ಸಂಕಲನಗೊಂಡ ಲೇಖನಗಳ ನಡುನಡುವೆ ಪುನರಾವರ್ತನೆಯೇನೋ ಎನಿಸಿಬಿಡುವ ಭಾಗಗಳು ಹಾಗೂ ಒಂದು ಸಂಪುಟದ ಉದ್ದೇಶಕ್ಕಾಗಿ ಕೊಡಲೇಬೇಕಾದ ರೂಪು ಇವೆಲ್ಲವೂ ಯಾವುದೇ ಸಂಪಾದಕನಿಗೆ ಎದುರಾಗುವ ಸಮಸ್ಯೆಗಳೇ. ಅಲ್ಲದೆ ಭಾಷಾವಿಜ್ಞಾನದ ಬಗೆಗೆ ಹೇಗೋ ಹಾಗೆಯೇ ಸಂಕೇತಿ ಭಾಷೆಯ ಬಗೆಗೂ ಸಮಾನಪ್ರಭುತ್ವ ಸಾಧಿಸಿದವರು ಮಾತ್ರ ಯಶಸ್ವಿಯಾಗಿ ಪೂರೈಸಬಲ್ಲ ಕೆಲಸವಿದು. ಸಮುದಾಯ ಅಧ್ಯಯನ ಕೇಂದ್ರದ 'ಸಂಕೇತಿ ಅಧ್ಯಯನ ಮಾಲೆ'ಗಾಗಿ ಪ್ರೊ॥ ಎಚ್.ಎಸ್. ಅನಂತನಾರಾಯಣ ಅವರು ಪ್ರೀತಿ ಮತ್ತು ಶ್ರದ್ಧೆಯಿಂದ ಇಂಥ ಕಠಿಣ ಕಾರ್ಯವನ್ನು ಮಾಡಿಕೊಟ್ಟಿದ್ದಾರೆ.

ಕಳೆದ ನಾಲ್ಕು ದಶಕಗಳಲ್ಲಿ, ವಿವಿಧ ಲೇಖಕರು ಸಿದ್ಧಪಡಿಸಿದ ಇಲ್ಲಿನ ಲೇಖನಗಳಲ್ಲಿ ಭಾಷೆಗೆ ನೇರವಾಗಿ ಸಂಬಂಧಿಸದ ಕೆಲವು ಹೇಳಿಕೆಗಳೂ, ಸಹಜವಾಗಿಯೇ ಬಂದಿವೆ. ಸಂಕೇತಿಗಳ ಮೂಲಸ್ಥಾನ, ವಲಸೆ,

ಮರುವಲಸೆ, ಜನಸಂಖ್ಯೆ ಇತ್ಯಾದಿ ವಿವರಗಳ ಬಗೆಗಿನ ಆನುಷಂಗಿಕ ಹೇಳಿಕೆಗಳು ಅವು. ಆ ವಿಷಯಗಳ ಬಗೆಗೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಸಂಶೋಧನೆಗಳು ನಡೆದಿವೆಯಾದರೂ ಮೂಲಲೇಖನಗಳನ್ನು ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ.

ವಾಸ್ತವವಾಗಿ ಮೇಲೆ ಸೂಚಿಸಿದ ಭಾಷೇತರ ಸಂಗತಿಗಳ ಬಗೆಗೆ ನಡೆದಿರುವ ಅಧ್ಯಯನಗಳು, ಸಾಂಸ್ಕೃತಿಕ ಮತ್ತು ಸಾಂದರ್ಭಿಕ ಪುರಾವೆಗಳ ಬಲದಿಂದಲೇ ಕೆಲವು ತೀರ್ಮಾನಗಳಿಗೆ ಬಂದಿವೆ. ಅವುಗಳ ಜತೆಗೆ ಭಾಷೆ ಕೂಡ ಒಂದು ಬಲವಾದ ಪರೀಕ್ಷಕ ಅಂಶವಾಗಿ (ಒರೆಹಚ್ಚುವ ಸಾಧನವಾಗಿ) ಕೆಲಸ ಮಾಡಬೇಕಿದೆ. ಆ ದಿಕ್ಕಿನಲ್ಲಿ ಭಾಷಾವಿಜ್ಞಾನಿಗಳು ಚಿಂತಿಸಬೇಕಾಗಿದೆ:

ಸಂಕೇತಿಗಳು ನರ್ಮದಾತೀರದಿಂದ ಶೆಂಕೋಟ್ಟೈಗೆ ವಲಸೆ ಹೋದರು, ಹಾಗೆ ಹೋದುದು ಆದಿಶಂಕರರ ಕಾಲಕ್ಕೆ ಸ್ವಲ್ಪ ಮೊದಲು; ಕ್ರಿ.ಶ. 1087ರ ವೇಳೆಗೆ ಮತ್ತೆ ಬಹುಪಾಲು ಸಂಕೇತಿಗಳು ಕರ್ನಾಟಕಕ್ಕೆ ವಲಸೆ ಬಂದರು. ಇದು ಸಾಂದರ್ಭಿಕ ಆಧಾರದಿಂದ ಸಾಂಸ್ಕೃತಿಕ ಅಧ್ಯಯನವು ತಲುಪಿದ ಒಂದು ತೀರ್ಮಾನ. ತಮಿಳಿನಿಂದ ಮಲೆಯಾಳಂ ಭಾಷೆಯು ಬೇರ್ಪಟ್ಟ ಕಾಲ, ಶೆಂಕೋಟ್ಟೈ ಇರುವ ಭೌಗೋಳಿಕ ಮತ್ತು ಭಾಷಾ ಸನ್ನಿವೇಶ, ತಮಿಳುನಾಡಿನ ಇತರ ಬ್ರಾಹ್ಮಣರ ಭಾಷೆಯ ಸ್ವರೂಪಕ್ಕಿಂತ ಸಂಕೇತಿ ಭಾಷೆಯಲ್ಲಿ ಕಾಣಬರುವ ವಿಶಿಷ್ಟ ಅಂಶಗಳು – ಇಂಥ ಭಾಷಿಕ ಅಂಶಗಳ ಅಧ್ಯಯನದ ಆಧಾರದ ಮೇಲೆ ಮೇಲಿನ ತೀರ್ಮಾನವನ್ನು ಪರಿಶೀಲಿಸಬಹುದು.

ಶೆಂಕೋಟ್ಟೈಯಲ್ಲಿ ನೆಲೆಸಿದ್ದ ಸಂಕೇತಿ ಸಮುದಾಯದಿಂದಲೇ ಒಂದು ಗುಂಪು ಪಾಲ್ಘಾಟ್‌ಗೆ ಹೋಗಿ ನೆಲೆಸಿ 'ಪಾಲ್ಘಾಟ್ ಅಯ್ಯರ್' ಎನಿಸಿತು; ಇನ್ನೊಂದು ಗುಂಪು ಕೇರಳದ ಬೇರೆಡೆಗೆ ಹೋಯಿತು, 'ನಂಬೂದಿರಿ' ಎನಿಸಿತು. ಬೃಹಚ್ಚರಣ, ವಡಮ, ಇತ್ಯಾದಿ ಸಮುದಾಯನಾಮಗಳಿಗಿಂತ ವಿಭಿನ್ನವಾದ ವರ್ಗನಾಮವನ್ನು ಇವು ಪಡೆದವು. ಇತರ ತಮಿಳುಬ್ರಾಹ್ಮಣರಿಂದ, ಸಂಕೇತಿಗಳದು ಭಿನ್ನವಾದ ಸಮುದಾಯವೆಂಬ ಸೂಚನೆಯನ್ನು ದೊರಕಿಸಿ ಕೊಡುವ ಈ ಸಂಗತಿಗಳನ್ನು ತೌಲನಿಕ ಭಾಷಾ ಅಧ್ಯಯನದ ಮೂಲಕವೂ ನಿರ್ಣಯಿಸಬಹುದು.

ತಿರುನೆಲ್‌ವೇಲಿ, ಕನ್ಯಾಕುಮಾರಿ, ತಿರುವನಂತಪುರಂ ಮತ್ತು ಕೊಲ್ಲಂ ಜಿಲ್ಲೆಗಳಿಗೆ ಸಂವಾದಿಯಾಗಿ ಹಿಂದೆ ನಾಲ್ಕು 'ಸಂಕೇತಂ' ಗಳಿದ್ದವು. ಅವಕ್ಕೆ ಸಂಕೇತಿಗಳು ಒಡೆಯರಾಗಿದ್ದರು. ಇದು ನಮಗೆ ಅನೇಕ ಮೂಲಗಳಿಂದ ಲಭ್ಯವಾಗುವ ನಿಖರ ಮಾಹಿತಿ. ಕರ್ನಾಟಕದಲ್ಲಿ ನೆಲೆಸಿರುವ ಪ್ರಧಾನ ಗುಂಪುಗಳು ಕೌಶಿಕ ಮತ್ತು ಬೆಟ್ಟದಪುರ ಸಂಕೇತಿಗಳವು. ಇವುಗಳ ಜೊತೆಗೆ ಲಿಂಗದಹಳ್ಳಿ ಮತ್ತು ಮತ್ತೂರಿನ ಉಪಭಾಷಾ ಮಾದರಿಗಳಿವೆ. ಇಷ್ಟೇ ಅಲ್ಲದೆ ಕೌಶಿಕ ಸಂಕೇತಿಗಳಲ್ಲಿ ವಂಶಗಳನ್ನೋ, ಗ್ರಾಮಗಳನ್ನೋ ಆಧರಿಸಿದ ಸೂಕ್ಷ್ಮವಾದ ವಿಶಿಷ್ಟ ಭಾಷಾಛಾಯೆ ಅಥವಾ ಶೈಲಿ ಎದ್ದು ಕಾಣುತ್ತದೆ. ಪದಪ್ರಯೋಗಗಳಲ್ಲಿ ಕಾಣುವ ಬಹುರೂಪ ಮತ್ತು ಉಚ್ಚಾರಣಾ ಶೈಲಿಗಳನ್ನು ನಿರ್ಲಕ್ಷಿಸುವಂತಿಲ್ಲ. ಹಾಸನಸೀಮೆಯ ಸಂಕೇತಿ ಭಾಷೆಯ ಸೂಕ್ಷ್ಮ ಭಾಷಾವ್ಯತ್ಯಾಸಗಳನ್ನೂ ಉಪೇಕ್ಷಿಸುವಂತಿಲ್ಲ. ವ್ಯಾಪಕವಾದ ಸೂಕ್ಷ್ಮ ಕ್ಷೇತ್ರಕಾರ್ಯದ ಮೂಲಕ ಪಡೆದ ವಿಭಿನ್ನ ದತ್ತಾಂಶಗಳು, ಕರ್ನಾಟಕದ ಸಂಕೇತಿ ಉಪಜಾತಿಗಳ ಮೂಲವು ಮೂಲಸ್ಥಾನದ ವಿಭಿನ್ನ 'ಸಂಕೇತಂ'ಗಳಲ್ಲೇ ಇದೆಯೇ ಎಂಬುದನ್ನು ಅಭ್ಯಸಿಸಲು ನೆರವಾಗುತ್ತದೆ.

ಹೆಮ್ಮಿಗೆ ಶ್ರೀವೈಷ್ಣವರು ಪೂರ್ಣವಾಗಿ ಸಂಕೇತಿಗಳಿಂದಲೇ ಪರಿವರ್ತಿತರಾದವರು ಎಂಬುದು ಶ್ರೀ ಕೇಶವಯ್ಯನವರು ಸುಮಾರು 70 ವರ್ಷಗಳ ಹಿಂದೆಯೇ (1936) ದಾಖಲಿಸಿರುವ ಅಂಶ. ಇತ್ತೀಚಿನ ಸಾಂಸ್ಕೃತಿಕ ಅಧ್ಯಯನಗಳು ಅದನ್ನು ಸಮರ್ಥಿಸುವ ಹಲವು ಸಾಕ್ಷ್ಯಗಳನ್ನು ಪತ್ತೆ ಮಾಡಿವೆ. ಈ ಎರಡು ಸಮುದಾಯಗಳ ಭಾಷೆಗಳ ತೌಲನಿಕ ಅಧ್ಯಯನವು, ಈ ಸಂಗತಿಯ ಜೊತೆಗೆ, ವಲಸೆಯು ಹೆಮ್ಮಿಗೆ

ಮಾರ್ಗವಾಗಿ ನಡೆಯಿತೇ ಎಂಬುದನ್ನೂ ಖಚಿತಪಡಿಸಲು ಪುಷ್ಟಿನೀಡುತ್ತದೆ. ಹೀಗೆಯೇ ಅತ್ತಾನ್ ಕೂಟ ಮತ್ತು ಹೆಬ್ಬಾರ್ ಶ್ರೀವೈಷ್ಣವ ಭಾಷೆಯೊಂದಿಗೆ ಸಂಕೇತಿ ಭಾಷೆಯ ತೌಲನಿಕ ಅಧ್ಯಯನ ನಡೆಯಬೇಕು. ಬಹುಪಾಲು 'ಸಂಕೇತಿ'ಗಳಿಂದಲೇ ಆದ ಸಮುದಾಯಗಳಿವು ಎಂಬ ಐತಿಹ್ಯವಲ್ಲದೇ, ಅದಕ್ಕಿರುವ ಸಾಂಸ್ಕೃತಿಕ ಪುರಾವೆಯೊಡನೆ ಭಾಷಾಧ್ಯಯನದ ಫಲಿತಾಂಶವೂ ಆಧಾರ ನೀಡಬೇಕು. ಅಷ್ಟೇಕೆ, ಕರ್ನಾಟಕದ ತಮಿಳು ಉಪಭಾಷೆಗಳ ತೌಲನಿಕ ಅಧ್ಯಯನವು ಸಂಕೇತಿ ಉಪಭಾಷೆಯ ಪ್ರಾಚೀನತೆಯನ್ನು ಒರೆಗೆ ಹಚ್ಚಬಲ್ಲದು.

ಹೀಗೆ ಸಂಕೇತಿಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾಗಿ ಭಾಷೆಗೆ ಸಂಬಂಧಿಸಿದ ಅಧ್ಯಯನ ನಡೆಯಬೇಕಿದೆ. ಈಗ ಎಲ್ಲ ಭಾಷೆಗಳೂ ತಮ್ಮತನವನ್ನು ಬೇಗ ಬೇಗ ಕಳೆದುಕೊಳ್ಳುತ್ತಿರುವುದರಿಂದ ಈ ಅಧ್ಯಯನಗಳು ತುರ್ತಾಗಿ ನಡೆಯಬೇಕಾದ ಅನಿವಾರ್ಯತೆ ಇದೆ.

ಕೇವಲ, ಪಟ್ಟಣಗಳ ವಕ್ತೃಗಳಿಂದ ಅಥವಾ ಕೆಲವೇ ಆಯ್ದ ವಕ್ತೃಗಳಿಂದ ಸಂಗ್ರಹಿಸಿದ ದತ್ತಾಂಶಗಳು ಅನೇಕವೇಳೆ ದಾರಿ ತಪ್ಪಿಸುತ್ತವೆ. ಸಹಜವಾಗಿಯೇ ನಗರವಾಸಿಗಳು ಸಂಕೇತಿ ಭಾಷೆಯನ್ನಾಡುವ ದಟ್ಟ ಪರಿಸರದಿಂದ ದೂರವಿದ್ದು ಅವರೊಡನೆ ವಿರಳಸಂಪರ್ಕ ಹೊಂದಿರುವುದರಿಂದ ಅವರ ಸಂಕೇತಿ ಭಾಷೆಯ ಮೇಲೆ ಇತರ ಭಾಷೆಗಳ ಪರಿಣಾಮ ಮತ್ತು ಪ್ರಭಾವ ಅಧಿಕವಾಗಿರುತ್ತದೆ.

ಈಗಲೂ ಸಂಕೇತಿ ಭಾಷೆಯಲ್ಲಿ ಚೆನ್ನಾಗಿಯೇ ಬಳಕೆಯಲ್ಲಿರುವ ಮೂಲಶಬ್ದಗಳ ಜಾಗದಲ್ಲಿ ಕೆಲವೆಡೆ ಕನ್ನಡಪದಗಳು ಕಾಣಿಸಿಕೊಳ್ಳುತ್ತಿವೆ. ಅಂಥ ದತ್ತಾಂಶಗಳನ್ನಾಧರಿಸಿದ ಅಧ್ಯಯನವು ತಪ್ಪು ಫಲಿತಾಂಶಗಳಿಗೆ ಕಾರಣವಾಗುತ್ತದೆ.

ಕರ್ನಾಟಕದ ಸಂಕೇತಿ ಭಾಷೆಯು ಕನ್ನಡೀಕರಣಗೊಳ್ಳುತ್ತಿರುವ ಪ್ರಮಾಣವು, ಸಂಕೇತಿಗಳು ಸಾಮೂಹಿಕವಾಗಿ ಆಧುನಿಕ ವಿದ್ಯಾಭ್ಯಾಸಕ್ಕೆ ತೊಡಗಿಕೊಳ್ಳತೊಡಗಿದ ಕಾಲದೊಂದಿಗೆ (ಸು. 1950) ಹೊಂದಿಕೊಂಡಿದೆ. ನಗರೀಕರಣದ ಪ್ರಕ್ರಿಯೆಯೊಂದಿಗೆ (ಸು. 1975) ಕನ್ನಡೀಕರಣ ಪ್ರಕ್ರಿಯೆಗೆ ವೇಗ ದೊರೆತಿದೆ. ಆದರೂ ಎಲ್ಲ ಪ್ರಾದೇಶಿಕ ಉಪಭಾಷೆಗಳ ಪ್ರತಿನಿಧಿಗಳು ಈಗಲೂ ಹಳ್ಳಿಗಳಲ್ಲಿ ನೆಲೆಸಿದ್ದಾರೆ. ಭಾಷೆಯ ಮೂಲರೂಪದ ಸುಳುಹು ಕೊಡಬಲ್ಲ ಹಿರಿಯರೂ ಇದ್ದಾರೆ. ವ್ಯಾಪಕವಾದ ಕ್ಷೇತ್ರಕಾರ್ಯ ಮಾಡಿ, ಎಲ್ಲ ಪ್ರಾದೇಶಿಕ ಉಪಭಾಷೆಗಳ ಪದಪ್ರಯೋಗಗಳನ್ನೂ ಒಳಗೊಂಡ ಖಚಿತವಾದ ಶಬ್ದಕೋಶವೊಂದನ್ನು ಮೊದಲು ಸಿದ್ಧಪಡಿಸಿಕೊಳ್ಳಬೇಕಾಗಿದೆ.

ಆಗಬೇಕಾದ ಅಥವಾ ಮಾಡಬಹುದಾದ ಭಾಷಾ ಸಂಬಂಧದ ಅಧ್ಯಯನದ ವ್ಯಾಪ್ತಿ ಇಷ್ಟಿದ್ದರೂ ಪ್ರಕೃತ ಸಂಪುಟದ ಮೌಲಿಕತೆಗೆ ಧಕ್ಕೆ ಇಲ್ಲ. ಸಂಕೇತಿ ಭಾಷೆಯ ಸ್ವರೂಪವನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಸಿದ್ಧಪಡಿಸಿದ ಲೇಖನಗಳು ಇದರಲ್ಲಿ ಸೇರಿವೆ. ಬಹುಪಾಲು ಲೇಖನಗಳು ಆಂಗ್ಲಭಾಷೆಯಲ್ಲಿರುವುದರಿಂದ ಕನ್ನಡೇತರರಿಗೆ– ಮುಖ್ಯವಾಗಿ ತಮಿಳುನಾಡು ಹಾಗೂ ಕೇರಳದ ಸಂಕೇತಿಗಳಿಗೂ, ಕನ್ನಡ ಬಾರದ ಅಮೇರಿಕನ್ ಸಂಕೇತಿಗಳಿಗೂ, ಕನ್ನಡವನ್ನು ಓದಲಾಗದ ಕರ್ನಾಟಕದ ಕೆಲ ಸಂಕೇತಿಗಳಿಗೂ ಒಟ್ಟಿನಲ್ಲಿ ಸಂಕೇತಿ ಭಾಷಾಧ್ಯಯನದಲ್ಲಿ ಆಸಕ್ತರಾದವರೆಲ್ಲರಿಗೂ – ವಿಷಯವು ಅವಗಾಹನೆಗೆ ದೊರಕುವಂತಾಗಿದೆ.

ತಮ್ಮ ಮಾತೃಭಾಷೆಗಿಂತ ಇಂಗ್ಲಿಷಿನಂಥ ಅನ್ಯಭಾಷೆಯಲ್ಲಿ ಮಾತನಾಡುವುದು ಹೆಚ್ಚು ಗೌರವಾಸ್ಪದವೆಂಬ ತಪ್ಪರಿಮೆ ಕನ್ನಡಿಗರಲ್ಲಿಯೇ ಇದೆ; ಅದು ಸಂಕೇತಿಗಳಲ್ಲೂ ಇದೆ. ಸಂಕೇತಿಗಳು ತಮ್ಮ ಭಾಷೆಯ ಬಗೆಗೆ ಅಭಿಮಾನ ತಳೆಯಬಹುದಾದ ಸಾಕ್ಷ್ಯಗಳು ಈ ಸಂಪುಟದಲ್ಲಿವೆ. ಸಾವಿರಾರು ಕಡೆ ಚದುರಿಹೋಗಿರುವ ಈ ಪುಟ್ಟಸಮುದಾಯವನ್ನು ಭಾವನಾತ್ಮಕವಾಗಿ ಹಿಡಿದಿಡಬಹುದಾದ ಒಂದೇ ಒಂದು ಸಾಧನವೆಂದರೆ ಅವರ ಸಂಕೇತಿ ಭಾಷೆ ಮಾತ್ರ.

ಮುಂದಿನ ಅಧ್ಯಯನಗಳಿಗೆ ಆಧಾರವೂ, ಸ್ಫೂರ್ತಿಯೂ ಈ ಸಂಪುಟದಿಂದ ದೊರೆತರೆ ನಮ್ಮ ಶ್ರಮ ಸಾರ್ಥಕ.

ಉಸ್ಮಾನಿಯಾ ವಿಶ್ವವಿದ್ಯಾಲಯದ ಭಾಷಾವಿಜ್ಞಾನ ವಿಭಾಗದ ಪ್ರಾಧ್ಯಾಪಕರೂ ಮುಖ್ಯಸ್ಥರೂ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಪ್ರೊ॥ ಎಚ್.ಎಸ್. ಅನಂತನಾರಾಯಣ ಅವರು ಈ ಸಂಪುಟವನ್ನು ಸಂಪಾದಿಸಿಕೊಟ್ಟಿರುವುದು ಒಂದು ಪುಣ್ಯವಿಶೇಷ. ಆ ಮೂಲಕ ಅಂತಾರಾಷ್ಟ್ರೀಯ ಮಟ್ಟದ ಭಾಷಾವಿಜ್ಞಾನಿಯೊಬ್ಬರ ವಿಶೇಷ ಸೇವೆ 'ಸಂಕೇತಿ' ಭಾಷೆಗೆ ದೊರಕಿದಂತಾಗಿದೆ. ತಮ್ಮ ನಾನಾರೀತಿಯ ಅಧ್ಯಯನಗಳಿಗೆ ಅವಲಂಬಿಸಲು ಭಾಷಾ ವಿಜ್ಞಾನಿಗಳಿಗೆ ವಿಶ್ವಾಸಾರ್ಹವಾದ ಭಾಷಾ ಅಧ್ಯಯನ ಘಟಕವೊಂದು ದೊರತಂತಾಗಿದೆ. ಆ ಕಾರಣಕ್ಕಾಗಿ ಸಮುದಾಯ ಅಧ್ಯಯನ ಕೇಂದ್ರವು ಪ್ರೊ॥ ಎಚ್.ಎಸ್. ಅನಂತನಾರಾಯಣ ಅವರಿಗೆ ವಿಶೇಷ ಕೃತಜ್ಞತೆಗಳನ್ನು ಅರ್ಪಿಸುತ್ತದೆ.

****

ಮೈಸೂರು

ಕಿಕ್ಕೇರಿ ನಾರಾಯಣ
ಭಾರತೀಯ ಭಾಷಾ ಸಂಸ್ಥಾನ

.... a marvellous work

***

ಮೈಸೂರು

ಡಾ. ರಾಮಮೂರ್ತಿ
ಭಾರತೀಯ ಭಾಷಾ ಸಂಸ್ಥಾನ

A production of international standard – contents as well as the form....


******

ಬೆಂಗಳೂರು

ಪ್ರೊ॥ ಕೆ. ಎಸ್. ಕೃಷ್ಣಮೂರ್ತಿ
ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಪುಸ್ತಕವು ಅತ್ಯಂತ ಸುಂದರವಾಗಿ ಬಂದಿದೆ; ಪ್ರಿಂಟಿಂಗ್ ತುಂಬ ಚೆನ್ನಾಗಿದೆ. ಸ್ವಲ್ಪ ಹೆಚ್ಚೂ ಕಡಮೆ ಅಂತಾರಾಷ್ಟ್ರೀಯ ಗುಣಮಟ್ಟ (International Standards) ತಲುಪಿದೆ ಎಂದು ಹೇಳಬಹುದು. ನಾನು ಪುಸ್ತಕವನ್ನು ಸ್ವಲ್ಪ ತಿರುವಿಹಾಕಿದೆ. ಲೇಖನಗಳೆಲ್ಲ ಉಚ್ಚಮಟ್ಟದ್ದಾಗಿವೆ. ಸಂಪುಟಾಧ್ಯಕ್ಷರಾದ ಡಾ. ಆರ್. ಎಸ್. ಎಸ್. ಕೃಷ್ಣಮೂರ್ತಿ ಮತ್ತು ಡಾ. ಎಸ್. ಶ್ರೀಧರ್ ಇವರ ವ್ಯಕ್ತಿತ್ವ ವಿವರವನ್ನು ನೋಡಿ ನನಗೆ ಆನಂದಾಶ್ಚರ್ಯಗಳು ಒಮ್ಮೆಗೇ ಉಂಟಾದವು. ಇಂಥ ಉನ್ನತ ಅಂತಾರಾಷ್ಟ್ರೀಯ ಖ್ಯಾತಿಯ ವೈದ್ಯರೂ ಸಂಶೋಧಕರೂ ನಮ್ಮಲ್ಲಿದ್ದಾರಲ್ಲ ಎಂದು ಹೆಮ್ಮೆಯಾಯಿತು. ನಮ್ಮ ಸಂಕೇತಿ ಸಮುದಾಯಕ್ಕೆ ಕಿರೀಟಪ್ರಾಯರಾದವರು ಇಂಥವರನ್ನು ನಾವು ಎಷ್ಟೋ ಜನ ತಿಳಿದೇ ಇಲ್ಲ. ಈ ಗ್ರಂಥದಮೂಲಕ ಪರಿಚಯವಾದುದು ತುಂಬ ಸಂತೋಷ. ಭಾಷಾತಜ್ಞರಾದ ಎಚ್. ಎಸ್. ಅನಂತನಾರಾಯಣ ಅವರೂ ನೀವೂ ಈ ಸಂಪುಟಕ್ಕಾಗಿ ಎಷ್ಟು ಶ್ರಮಿಸಿದ್ದೀರಿ ಎಂಬುದನ್ನು ಹೇಳಬೇಕಾದುದೇ ಇಲ್ಲ.

****



ಸಂಪುಟ 5
ಸಂಕೇತಿ : ಇತಿವೃತ್ತಗಳು
ಸಂ : ಎನ್.ಎಸ್. ಶಾರದಾಪ್ರಸಾದ್

೧ ಅರಿಕೆ

ಈಗ ಓದುಗರ ಕೈಲಿರುವುದು ಸಂಕೇತಿ ಅಧ್ಯಯನ ಮಾಲೆಯ ಐದನೆಯ ಸಂಪುಟ. ಇದನ್ನು 'ಸಂಕೇತಿ : ಇತಿವೃತ್ತಗಳು' ಎಂದು ಕರೆಯಲಾಗಿದೆ. ಇದು ನಾಲ್ಕು ವರ್ಷಗಳಷ್ಟು ದೀರ್ಘಾವಧಿಯಲ್ಲಿ ರೂಪುತಳೆದು, ಎಂಟು ಕೃತಿಗಳ ಸಂಕಲನವಾಗಿ ಹೊರಹೊಮ್ಮಿದೆ. ಹೀಗೆ ಸೇರಿರುವ ಎಂಟು ಕೃತಿಗಳಲ್ಲಿ 'ಸಂಕೇತಿ ಸಂಪದ' ಎಂಬುದೂ ಒಂದು. ವಾಸ್ತವವಾಗಿ ಈ ಕೃತಿಯ ಆಶಯದ ವಿಸ್ತರಣವೇ 'ಸಂಕೇತಿ : ಇತಿವೃತ್ತಗಳು'.

'ಸಂಕೇತಿ ಸಂಪದ' ಪ್ರಕಟವಾದುದು 1994ರಲ್ಲಿ. 'ಸಂಕೇತಿಗಳ ಬದುಕಿನ ವೈಭವ ಅಥವಾ ಶ್ರೀಮಂತಿಕೆ' ಎಂಬ ಅರ್ಥ ಅದರದು. ಆ ಶ್ರೀಮಂತಿಕೆಯು ಆರ್ಥಿಕವಾದುದಲ್ಲ, ಬಡತನದ ನಡುವೆಯೇ ಮೂಡಿಬಂದ ಜೀವನೋತ್ಸಾಹದ್ದು.

ಸಂಶಯವಿಲ್ಲದೆ, ಭಾರತದ ಎಲ್ಲ ಸಮುದಾಯಗಳ ಆರ್ಥಿಕಸ್ಥಿತಿಯೂ ಜೀವನಮಟ್ಟವೂ ಸಾರ್ವತ್ರಿಕವಾಗಿ ಈಗ ಸುಧಾರಿಸಿದೆ. ಸಂಕೇತಿ ಸಮುದಾಯದಲ್ಲಿಯೂ ಆ ಲಕ್ಷಣವು ಕಂಡಿದೆ. ಸುಮಾರು ಅರ್ಧ–ಮುಕ್ಕಾಲು ಶತಮಾನದ ಹಿಂದಿನ ಬದುಕನ್ನು ಕಂಡವರಿಗೆ ಈಗ ಆಗಿರುವ ಅಗಾಧ ವ್ಯತ್ಯಾಸವು ನಿಚ್ಚಳವಾಗಿ ಗೋಚರಿಸುತ್ತದೆ, ವಿಸ್ಮಯವೂ ಉಂಟಾಗುತ್ತದೆ. ಜತೆಗೆ ಆ ಹಳೆಯ ಜೀವನವಿವರವೂ, ಅದು ಒಟ್ಟಾರೆಯಾಗಿ ಹೊಂದಿದ್ದ ಹದವೂ, ಬಾಳಿನ ಪಾತಳಿಯೂ ರಮ್ಯವಾಗಿಯೇ ಕಾಣುತ್ತದೆ. ಅದನ್ನು ತಿಳಿಯುವ ಕುತೂಹಲವು ಹೊಸ ತಲೆಮಾರಿನವರಿಗೆ ಹುಟ್ಟಿದರೆ ಅದನ್ನು ತಣಿಸುವಂತೆ ಈ ಪುಸ್ತಕ ಬಂದಿದೆ. ಲೇಖಕರೇ ಹೇಳುವಂತೆ, "ಇಲ್ಲಿಯ ಚಿತ್ರಗಳು ಸಂಕೇತಿಗಳ ಬದುಕಿನ ಹಲವು ಬಣ್ಣದ ಬಣ್ಣನೆಗಳ ಚಿತ್ರವಾಗಿದೆ." ಆ ಚಿತ್ರವಾದರೂ ಹಲವು ಶತಮಾನಗಳ ಬದುಕಿನ ರೀತಿಯ ಕೊನೆಯ ಹಂತದ್ದು. ಕೊನೆಯ ಪಕ್ಷ ಸಂಕೇತಿಗಳ ಒಂದು ಸಹಸ್ರ ವರ್ಷದ ಜೀವನದ ಸ್ವಭಾವ ಮತ್ತು ಸ್ವರೂಪದ ಯಥಾವತ್ತಾದ ಒಳನೋಟ ಇಲ್ಲಿ ದೊರೆಯುತ್ತದೆ.

ಈ ಕೃತಿಯಲ್ಲಿ ಕಾಣುವ ವಿಶಿಷ್ಟ ಲಕ್ಷಣಗಳಲ್ಲಿ ಒಂದು, ಒಕ್ಕಣೆಯಾಗಿ ನಿರೂಪಿಸುವ ಗುಣ. ಆದ್ದರಿಂದಲೇ ಸಂಕೇತಿಗಳ ಬದುಕಿನ, ಕಣ್ಣಿಗೆ ಕಟ್ಟಿದಂಥ ಚಿತ್ರ ಇಲ್ಲಿ ಸಿಗುತ್ತದೆ.

ಇಲ್ಲಿನ ಲೇಖನಗಳೆಲ್ಲವೂ ಸಂಕೇತಿಗಳ ಬದುಕಿನ ಜೀವನಾಡಿಗಳೆನಿಸಬಹುದಾದ ವಿಷಯಗಳಿಗೆ ಸಂಬಂಧಪಟ್ಟವು. ಆ ವಿಷಯಗಳ ವಾಸ್ತವತೆಯ ಮರ್ಯಾದೆ ಕುಗ್ಗದಂತೆ ಬರೆಯುವುದು ಸುಲಭವಲ್ಲ. ಅದಕ್ಕೆ ನೇರ ಅನುಭವ ಬೇಕು, ಕೇವಲ ನೋಡುವುದಲ್ಲ, ಗಮನಿಸುವ ಮತ್ತು ಒಳಮರ್ಮಗಳನ್ನು ಗ್ರಹಿಸುವ

ಶಕ್ತಿ ಬೇಕು, ಅದನ್ನು ದಾಖಲಿಸಬೇಕೆಂಬ ಅದಮ್ಯ ಶ್ರದ್ಧೆ ಬೇಕು, ಪ್ರತಿ ವಿವರವನ್ನೂ ಹೆಣೆದು ಪ್ರಬಂಧಧ್ವನಿಗೆ ಅದನ್ನು ಅಧೀನವಾಗಿಸುವ ಪ್ರತಿಭೆ ಬೇಕು, ತಾಳ್ಮೆ ಬೇಕು. ಇವೆಲ್ಲವೂ ಎಲ್ಲ ಲೇಖಕರಿಗೂ ಬೇಕಾದ ಗುಣಗಳೇ. ಆದರೆ ಸೃಜನೇತರವೆಂದೂ, ಕಾಲಗುಣಕ್ಕೂ ಮಾರುಕಟ್ಟೆಯ ವಿದ್ಯಮಾನಕ್ಕೂ ಅನುಗುಣವಾದುದಲ್ಲವೆಂದೂ ಸುಲಭ–ತಿರಸ್ಕಾರಕ್ಕೆ ಈಡಾಗುವ ಅಪಾಯದ ಪರಿಸರದಲ್ಲಿದ್ದುಕೊಂಡು ಇಂಥ ಲೇಖನಗಳನ್ನು ಬರೆಯುವುದಕ್ಕೆ ಈ ಧೃತಿ ದೊಡ್ಡದಾಗಿಯೇ ಇರಬೇಕು. ಅದನ್ನು ಪ್ರೊ|| ಕೆ.ಎಸ್. ಕೃಷ್ಣಮೂರ್ತಿಯವರು ಸಮರ್ಥವಾಗಿ ಪ್ರದರ್ಶಿಸಿದ್ದಾರೆ. ಅವರ 'ಸಂಕೇತಿ ಸಂಪದ' ಎಂಬ ಈ ಕೃತಿಯನ್ನು ಪ್ರಸ್ತುತ ಸಂಪುಟದಲ್ಲಿ 'ಜೀವನೋಲ್ಲಾಸ' ಎಂಬ ಹೆಸರಿನಿಂದ ಸೇರಿಸಿಕೊಳ್ಳಲಾಗಿದೆ.

'ಸಂಕೇತಿ ಅಧ್ಯಯನ' ಮಾಲೆಯಲ್ಲಿ ಆತ್ಮಕಥೆಗಳ ಸಂಪುಟವೇ ಪ್ರತ್ಯೇಕವಾಗಿ ಹೊರಬರಲಿದೆ. ಪ್ರಕೃತ ಸಂಪುಟದಲ್ಲಿ ಸಂಕೇತಿ ಸಮುದಾಯದ ಒಟ್ಟು ಬದುಕಿನ ಒಳ ವಿವರಗಳು ಅನೇಕ ಗಣ್ಯರ ಇತಿವೃತ್ತಗಳ ಮೂಲಕ ಕ್ರೋಡೀಕರಣವಾಗಲೆಂದು ಇಲ್ಲಿ ಆಶಿಸಲಾಗಿದೆ. ಈಗಾಗಲೇ ಪ್ರಕಟವಾಗಿದ್ದ ಕೃತಿಗಳನ್ನೂ ಒಂದು ಉದ್ದೇಶಕ್ಕಾಗಿ ಇಲ್ಲಿ ಸೇರಿಸಲಾಗಿದೆ ಎಂಬುದು ಇದರಿಂದ ಅರಿವಾದೀತು.

☆☆☆

ಪ್ರಸ್ತುತ ಸಂಪುಟಕ್ಕಾಗಿ, 'ಸಂಕೇತಿ ಸಂಪದ'ದ ಜೀವನಚಿತ್ರಣವನ್ನು ಮನಸ್ಸಿನಲ್ಲಿಟ್ಟುಕೊಂಡು, ತಮ್ಮ ಜೀವನವೃತ್ತಾಂತವನ್ನು ಬರೆದುಕೊಡಬೇಕೆಂದು ಹಲವು ಹಿರಿಯರನ್ನು ಕೇಳಿಕೊಳ್ಳಲಾಯಿತು; ಪತ್ರಿಕೆಗಳ ಮೂಲಕವೂ ಪ್ರಾರ್ಥಿಸಲಾಯಿತು. ನಮಗೆ ದೊರಕಿದ ಪ್ರಾತಿನಿಧಿಕ ಪ್ರತಿಕ್ರಿಯೆ ಇದು: ಅವರೊಬ್ಬ ವಯೋವೃದ್ಧರು, ಜ್ಞಾನವೃದ್ಧರು; ಕನ್ನಡ ಮತ್ತು ಸಂಸ್ಕೃತಭಾಷಾ ವಾಙ್ಮಯದಲ್ಲಿ ಉದ್ದಾಮ ಪಂಡಿತರು; ಅಧ್ಯಾಪನ ಮಾಡಿದವರು; ದೀರ್ಘವಾದ ಅನುಭವ ಉಳ್ಳವರು; ಸಂಕೇತಿಗಳ ಪಾರಂಪರಿಕ ಬದುಕಿನ ಪರಿಸರದಲ್ಲಿಯೇ ಹಳ್ಳಿಗಳಲ್ಲಿ ಬೆಳೆದವರು. ಅವರೊಡನೆ ನಮ್ಮ ಸಂಭಾಷಣೆ ಹೀಗಿತ್ತು:

"ಮಾವಯ್ಯನವರೆ, ದಯಮಾಡಿ ನಿಮ್ಮ ಆತ್ಮಚರಿತ್ರೆಯನ್ನು ಬರೆದುಕೊಡಬೇಕೆಂದು ನಮ್ಮ ಪ್ರಾರ್ಥನೆ."

"ಅಂದೆ ಪ್ರವೃತ್ತಿ ಇಲ್ಲ." (ಆ ಪ್ರವೃತ್ತಿ ಇಲ್ಲ)

"ಇದು ಸಂಕೇತಿ ಸಮುದಾಯದ ಪಾರಂಪರಿಕ ಜೀವನಚಿತ್ರವೊಂದನ್ನು ಕಟ್ಟಿಕೊಡುವುದಕ್ಕಾಗಿ ಹಿರಿಯರಲ್ಲಿ ಪ್ರಾರ್ಥನೆ ಮಾಡಿ ಬರೆಸುತ್ತಿರುವಂಥದು. ಶ್ರೀನಾಚಾರಮ್ಮನವರು ಸಂದುಹೋದ ಒಂಬತ್ತು ಶತಮಾನಗಳ ಸ್ಮರಣೆಗಾಗಿ ಈ ಯೋಜನೆ."

"ಅಂದೆ ಪ್ರವೃತ್ತಿ ಇಲ್ಲ."

"ನಿಮಗಾಗಿ ಅಲ್ಲ, ಸಮುದಾಯಕ್ಕಾಗಿ. ಇದರಲ್ಲಿ ನಿಮ್ಮನ್ನು ಮೆರೆಸಿಕೊಳ್ಳುತ್ತಿದ್ದೀರೆಂಬ ಪ್ರಶ್ನೆಯೇ ಬರುವುದಿಲ್ಲ."

"ಅಂದೆ ಪ್ರವೃತ್ತಿ ಇಲ್ಲ."

ಆ ಮಹನೀಯರು ನಿರ್ವಿಕಾರವಾಗಿ ಅದನ್ನೇ ಹೇಳುತ್ತಿದ್ದರು. ಎಲ್ಲವನ್ನೂ ಸಮಾಧಾನವಾಗಿ ಕೇಳಿಸಿಕೊಳ್ಳುತ್ತಿದ್ದರು, ಆದರೆ ಅದೇ ಸಮಚಿತ್ತದಿಂದಲೂ ದೃಢತೆಯಿಂದಲೂ ಅದದೇ ಉತ್ತರವನ್ನೇ ಕೊಡುತ್ತಿದ್ದರು. ವೀತರಾಗಿಗಳಾದ ಅವರನ್ನು ಮತ್ತೂ ಒತ್ತಾಯಿಸುವುದು ಸಾಧ್ಯವಿಲ್ಲವಾಯಿತು.

ಎಲ್ಲೆಡೆಯೂ ಇದು ಹೀಗೆಯೇ ನಡೆಯಿತು. ಕೊನೆಗೂ ನಮಗೆ ಸಾಧ್ಯವಾದುದು ಐವರು ಮಹನೀಯರಿಂದ ಬರೆಸುವುದಕ್ಕೆ ಮಾತ್ರ. ನಮ್ಮ ಉದ್ದೇಶವನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಂಡು ತಮ್ಮ ಮುಜುಗರಗಳ ನಡುವೆಯೂ ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಬರೆದುಕೊಟ್ಟ ಈ ಐವರೂ ನುರಿತ ಲೇಖಕರು, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು, ಏಳು–ಎಂಟು–ಒಂಬತ್ತು ದಶಕಗಳನ್ನು ದಾಟಿದವರು.

☆☆☆

ಪ್ರೊ॥ ಕೆ.ಎಸ್. ಕೃಷ್ಣಮೂರ್ತಿಯವರು ಈ ಸಂಪುಟಕ್ಕಾಗಿಯೇ ಬರೆದುಕೊಟ್ಟ 'ಆಡಿದ ಹೊಲ, ಕಂಡ ವಿಚಾರ' ಅವುಗಳಲ್ಲಿ ಒಂದು. 'ಸಂಕೇತಿಗಳ ಜೀವನ ವಿವರಕ್ಕಾಗಿ ಅವರ ಆತ್ಮಕಥೆ' ಎಂಬ ಚೌಕಟ್ಟಿಗೆ ಸಮ್ಮತಿಸಿ ಅವರು ಸಹಕರಿಸಿದ್ದಾರೆ. ಒಂದು ಶತಮಾನಕ್ಕೂ ಮೀರಿದ ಕಾಲದ ಹರಹಿನ ಜೀವನ ವಿವರಗಳು ಇಲ್ಲಿವೆ. ಅವರೇ ಈಗ ತೊಂಬತ್ತರ ವೃದ್ಧರು. ಅತಿ ಸಾಮಾನ್ಯ ಪರಿಸರದಲ್ಲಿ ಹುಟ್ಟಿ ಬೆಳೆದು, ವಿದ್ಯಾವಂತರಾಗಿ, ಕಾಲೇಜು ಅಧ್ಯಾಪಕರಾಗಿ, ಲೇಖಕರಾಗಿ ಮುನ್ನಡೆದ ಅವರ ವಿಕಾಸದ ಕಥೆ ಇಲ್ಲಿದೆ. ಜತೆಜತೆಗೇ ಇಲ್ಲಿ ರೋಚಕ ಸಂಗತಿಗಳಿವೆ, ಆಶ್ರಯದಾತರಾದ ಉದಾರಿಗಳ ಸ್ಮರಣೆಯಿದೆ, ವಿದ್ವಾಂಸರ ಬಗೆಗಿನ ಉಲ್ಲೇಖಗಳಿವೆ, ಸ್ವಾತಂತ್ರ್ಯ ಚಳವಳಿಯಲ್ಲಿನ ಪಾತ್ರವಿದೆ, ತೊಡಗಿಸಿಕೊಂಡ ಉದ್ಯೋಗದಲ್ಲಿ ಮಾಡಿದ ಸಮರ್ಪಣಭಾವದ ಕಾಯಕದ ದರ್ಶನವಿದೆ, ಸರಳವೂ ಸಹಜವೂ ಆದ ನೇರ ನಿರೂಪಣೆಯಿದೆ.

'ಕಲೆಯ ಸನ್ನಿಧಿಯಲ್ಲಿ' ಎಂಬುದು ಸಾ.ನಾ. ಶ್ರೀಕಂಠಯ್ಯನವರ ಕೃತಿ. ಈ ಐವರಲ್ಲಿ ಎಪ್ಪತ್ನಾಲ್ಕು ವರ್ಷದ ಈ ಕಲಾವಿದರೇ ಕಿರಿಯರು. 150 ನಾಟಕಗಳನ್ನೂ, 1200 (ನಾಟಕದ) ಹಾಡುಗಳನ್ನೂ ರಚಿಸಿದ ಮಹಾನುಭಾವರು ; ಆದರೆ ಅವನ್ನೆಲ್ಲ ರಚಿಸಿ, ಕೇಳಿದವರಿಗೆ ಸೀರುಂಡೆ ಮಾಡಿಬಿಟ್ಟ ನಿರ್ಲಿಪ್ತರು. ಸಮುದಾಯ ಅಧ್ಯಯನ ಕೇಂದ್ರದ ಪ್ರಾರ್ಥನೆಯನ್ನು ಮನ್ನಿಸಿ ಅಳಿದುಳಿದ ನಾಟಕಗಳನ್ನು ಜೋಪಾನ ಮಾಡಿಕೊಟ್ಟರು. ಇದೀಗ ತಮ್ಮ ಆತ್ಮಕಥೆಯನ್ನೂ ಬರೆದುಕೊಟ್ಟು ಉಪಕರಿಸಿದ್ದಾರೆ. ಎಳೆಯ ವಯಸ್ಸಿನಲ್ಲಿಯೇ (16) ಜೀವನಾಧಾರಕ್ಕೆ ಜೀವವಿಮಾ ನಿಗಮವನ್ನು ಸೇರಿದ ಶ್ರೀಕಂಠಯ್ಯನವರು ತಮ್ಮ ಸರ್ವಸ್ವವನ್ನೂ ಕಲಾತಪಸ್ಸಿಗಾಗಿ ಅರ್ಪಣೆ ಮಾಡಿದ ವಿವರ ಇಲ್ಲಿದೆ.

ಸಾನಾಶ್ರೀ ಅವರು ನುರಿತ ಲೇಖಕರು ; ಅವರ ಬರಹದಲ್ಲಿ ಒಂದು ಜೀವಂತಿಕೆ ಇದೆ, ಅಲ್ಲೊಂದು ಮುಂಸೆಳೆತವಿದೆ. ಅಲ್ಲಿ ಕಣ್ಣಿಗೆ ಕಟ್ಟುವಂತೆ ವರ್ಣಿಸುವ ಸಾವಧಾನವೂ ಇದೆ, ಹಾಸ್ಯವೂ ಇದೆ, ಉದಾತ್ತದೃಷ್ಟಿಯೂ ಇದೆ, ಕೊನೆ ಮುಟ್ಟುವವರೆಗೆ ಕೇವಲ ಓದಿಸಿಕೊಂಡಲ್ಲ ಓಡಿಸಿಕೊಂಡೂ ಹೋಗಬಲ್ಲ ಕಾವು ಕೂಡ ಇದೆ. ಮುಖ್ಯವಾಗಿ, ನಾಟಕಕ್ಷೇತ್ರವು ಅವರನ್ನು ಹೇಗೆ ಆವರಿಸಿಕೊಂಡಿದೆ ಎಂಬುದರ ಚಿತ್ರ ಇಲ್ಲಿದೆ.

ಅವರು ಬಹು ವೃದ್ಧರೇನೂ ಅಲ್ಲ. ಆದರೆ ಸಾಂಸಾರಿಕ ಜಂಜಡಗಳಿಂದ ನಲುಗಿದ್ದಾರೆ. ಅವರ ಜ್ಞಾಪಕಶಕ್ತಿ ಕುಸಿದಿದೆ, ಹಾಗಾಗಿ ಅವರ ಅತ್ಯುತ್ತಮ ಅಭಿವ್ಯಕ್ತಿ ಇಲ್ಲಿ ಕಾಣುವುದಿಲ್ಲ ಎಂಬ ನೋವು ಅವರಿಗಿದೆ. ಆದರೆ ಈ 'ದೌರ್ಬಲ್ಯ'ದ ಹೊತ್ತಿನಲ್ಲಿ ಅವರು ಬರೆದಿರುವ ಲೇಖನ ಕೂಡ ಇಷ್ಟು ಸೊಗಸಾಗಿದೆ!

'ಶ್ರೀ ಸೀತಾರಾಮ ಜನನಮೂಲ' ಎಂಬ ಷಟ್ಪದೀ ಕಾವ್ಯದ ಕರ್ತೃ ಶ್ರೀ ಆರ್.ವಿ. ಶ್ರೀನಿವಾಸಯ್ಯನವರು; ಎಳವೆಯಿಂದಲೇ ಕಾವ್ಯವಾಚನದ ಪರಿಸರದಲ್ಲಿ ಬೆಳೆದವರು, ಅರುವತ್ತೈದು ವರ್ಷಗಳಷ್ಟು ದೀರ್ಘಕಾಲ ಕಾವ್ಯವಾಚನ ಮಾಡಿದವರು. ಅನೇಕ ಕಾವ್ಯಗಳನ್ನು ಬಾಲ್ಯದಲ್ಲಿಯೇ ರಚಿಸಿದ್ದವರು ಶ್ರೀನಿವಾಸಯ್ಯನವರು; ಅವುಗಳ ಪೈಕಿ ಉಳಿದುಕೊಂಡುದು 'ಶ್ರೀ ಸೀತಾರಾಮ ಜನನಮೂಲ' ಮಾತ್ರ. ಪ್ಲೇಗು ಅವರನ್ನು ತೀವ್ರವಾಗಿ

ಕಾಡಿತು, ಬಡತನ ಮತ್ತು ಸಂಕಷ್ಟಗಳು ಬಲೆ ಬೀಸಿದವು, ಪತ್ನೀವಿಯೋಗಗಳು ನಡುಗಿಸಿದುವು; ಅವುಗಳ ನಡುವೆ ಹೀಗಾದುದು ಆಶ್ಚರ್ಯವಲ್ಲ. ಅವರು ತಮ್ಮ ಕಷ್ಟಗಳ ನೋವಿನಿಂದ ಬಿಡುಗಡೆ ಹೊಂದಲೆಂದೇ ಕಾವ್ಯವಾಚನವನ್ನು ರೂಢಿಸಿಕೊಂಡು ಬೆಳೆಸಿದರು; ವಿಷಮ ಪರಿಸ್ಥಿತಿಗಳ ನಡುವೆಯೇ ಕಾವ್ಯರಚನೆ ಮಾಡಿದರು. ಹೀಗೆ ಹದಗೊಂಡಿದ್ದರಿಂದಲೇ ಇರಬೇಕು, ತೊಂಬತ್ತೆಂಟರ ಇಳಿವಯಸ್ಸಿನಲ್ಲಿಯೂ ಅವರ ಛಲದ ಗುಣ ಹಾಗೆಯೇ ಉಳಿದಿದೆ, ಜೀವನೋತ್ಸಾಹ ಆರಿಲ್ಲ, ಸ್ಮರಣಶಕ್ತಿಯೂ ಕುಂದಿಲ್ಲ ; ಜತೆಗೆ ಧನಾತ್ಮಕ ದೃಷ್ಟಿಕೋನವು ಗಟ್ಟಿಗೊಂಡಿದೆ.

ಶ್ರೀನಿವಾಸಯ್ಯನವರು ತಮ್ಮ ಆತ್ಮಕಥೆಯನ್ನು 'ಬೆಂದ ಬದುಕು' ಎಂದು ಕರೆದಿದ್ದರು. ಅದು ಬೆಂದಿತ್ತು, ಆದರೆ ಕರಕಲಾಗಿರಲಿಲ್ಲ, ಬೂದಿಯಾಗಿರಲಿಲ್ಲ; ಬದಲಿಗೆ ಮಾಗಿತ್ತು. ಹಾಗಲ್ಲದಿದ್ದರೆ ಎಪ್ಪತ್ತೈದರ ಹರಯದಲ್ಲಿ ಕಾವ್ಯರಚನೆಯು ಅವರಿಗೆ ಸಾಧ್ಯವಾಗದೇ ಹೋಗುತ್ತಿತ್ತು, ತೊಂಬತ್ತೆಂಟರ ಹರಯದಲ್ಲಿ ನಗುಮೊಗ ಇರುತ್ತಿರಲಿಲ್ಲ, ಅವರ ತಲೆದಿಂಬಿನ ಪಕ್ಕಕ್ಕೆ ಪುಸ್ತಕರಾಶಿ ಇರುತ್ತಿರಲಿಲ್ಲ. ಆದ್ದರಿಂದ ಅದನ್ನು 'ಮಾಗಿದ ಬದುಕು' ಎಂದು ಬದಲಾಯಿಸಲಾಗಿದೆ.

'ಎಲ್ಲ ಸಮಸ್ಯೆಯೂ ಒಂದೊಂದು ಸದವಕಾಶ' ಎಂಬುದಕ್ಕೆ 'ಜೀವನಗಾಥ' ಒಳ್ಳೆಯ ನಿದರ್ಶನ. ಹುಟ್ಟಿನಿಂದ ತೊಡಗಿ ವೃದ್ಧಾಪ್ಯದವರೆಗೆ ಬಡತನದ ಮೂಸೆಯಲ್ಲಿಯೇ ಏಗಿದವರು ಕೆ.ಎಸ್. ವೆಂಕಟರಾಮಯ್ಯನವರು; ಒಮ್ಮೊಮ್ಮೆ ಪುಟಕ್ಕಿಟ್ಟಾಗಲೂ ಕಾಂತಿಯುಕ್ತವಾಗಿ ಹೊರಬಂದವರು. ಗಾಂಧೀಜಿಯ ಪ್ರಭಾವಲಯಕ್ಕೆ ತಮ್ಮನ್ನು ಒಪ್ಪಿಸಿಕೊಂಡು ಒಬ್ಬ 'ಗಾಂಧಿ ಮಾಸ್ಟರಾಗಿ', 'ಅಜಾತಶತ್ರು'ವಾಗಿ ಸಮಾಜಸೇವಕರಾಗಿ, ರಾಷ್ಟ್ರಸೇವಕರಾಗಿ ಬೆಳೆದವರು. ದೊಡ್ಡ ದೊಡ್ಡ ವಿಷಯಗಳಿರಲಿ, ತಾವೇ ಬಡತನದಲ್ಲಿ ಬೇಯುತ್ತಿರುವಾಗ ಇದ್ದಬದ್ದವರನ್ನೆಲ್ಲಾ, ಕೊನೆಗೆ 'ಊರವರನ್ನೆಲ್ಲಾ' ಕರೆದು ತಮ್ಮ ಪುಟ್ಟ ಗೂಡಿನಲ್ಲಿ ಅವರಿಗೂ ಜಾಗ ಕೊಟ್ಟು ತಮ್ಮ ತುತ್ತು ಹಂಚಿಕೊಳ್ಳುವವರು ಎಷ್ಟು ಮಂದಿ ಇದ್ದಾರು! ತಮ್ಮ ಪುಸ್ತಕವು ಇನ್ನೊಬ್ಬರ ಹೆಸರಿನಲ್ಲಿ ಬರಲು ಒಪ್ಪುವುದು ಹೊಟ್ಟೆಯಲ್ಲಿ ಹುಟ್ಟಿದ ಮಗುವನ್ನು ಬಲಿಕೊಡುವಷ್ಟು ಸಂಕಟಕರವೇ ಸರಿ. ಅದನ್ನೆಲ್ಲ ಗೆದ್ದು ಬಂದವರು ವೆಂಕಟರಾಮಯ್ಯನವರು. ಕೊನೆಗೂ ಅವರು 'ಸರ್ವತ್ರ ಸನ್ಮಂಗಳಾನಿ ಭವಂತು' ಎಂದೇ ಹರಸುತ್ತಾರೆ!

ಗಾಂಧೀಜಿಯು ತಮ್ಮ ಜೀವನವು ಸತ್ಯದ ಪ್ರಯೋಗಶಾಲೆ ಎಂದರು. ವೆಂಕಟರಾಮಯ್ಯನವರಿಗೆ ತಮ್ಮ ಜೀವನವು ಗಾಂಧೀತತ್ತ್ವಗಳ ಅನುಸಂಧಾನ ಶಾಲೆಯಾಗಿದೆ. ಅದರಲ್ಲಿ ಅವರು ಯಶಸ್ಸನ್ನೂ ಕಂಡಿದ್ದಾರೆ. ದೇಶವು ಭ್ರಷ್ಟಾಚಾರದಲ್ಲಿ ಬೇಯುತ್ತಿರುವುದನ್ನು ಕಂಡು ನೋಯುವುದು ಸ್ವಾತಂತ್ರ್ಯ ಹೋರಾಟಗಾರರಿಗೆ ಹೆಚ್ಚು ಸಹಜ, ವೆಂಕಟರಾಮಯ್ಯನವರೂ ನೊಂದಿದ್ದಾರೆ, ಆದರೆ ಆಶಾವಾದಿಯಾಗಿಯೇ ಉಳಿದಿದ್ದಾರೆ.

ಆರೋಗ್ಯವು ಕುಸಿದು, ಕಣ್ಣು ಮಂಜಾಗಿ, ಬೆರಳುಗಳು ದುರ್ಬಲವಾದ ಹೊತ್ತಿನಲ್ಲಿಯೂ ಅವರು ನಮ್ಮ ಕೋರಿಕೆಗೆ ಸ್ಪಂದಿಸಿದ್ದಾರೆ.

ಸಾಂಪ್ರದಾಯಿಕ ವಿದ್ಯೆಯನ್ನು ಕಲಿತು ಸಾಂಪ್ರದಾಯಿಕ ವೇಷಭೂಷಣಗಳನ್ನು ತೊಟ್ಟವರನ್ನು ಕೀಳಾಗಿ ನೋಡುತ್ತಿದ್ದ ಧೋರಣೆಯನ್ನು ಸವಾಲಾಗಿ ಸ್ವೀಕರಿಸಿದವರು ವೇ॥ ಬ್ರ॥ ಶ್ರೀ॥ ರಾಮೇಶ್ವರ ಅವಧಾನಿಗಳು. ಎಂ.ಎ. ವಿದ್ಯಾಭ್ಯಾಸ ಮಾಡಿದ್ದು 'ತಮ್ಮ' ಹೆಗ್ಗಳಿಕೆಗಲ್ಲ, ಸಾಂಪ್ರದಾಯಿಕ ವಿದ್ಯೆ ಕಲಿತವರು ಉಪೇಕ್ಷಣೀಯರಲ್ಲ ಎಂದು ತೋರಿಸುವುದಕ್ಕೆ. ಅವರು ಗಳಿಸಿದ ಸಾಂಪ್ರದಾಯಿಕ ವಿದ್ಯೆಯ ವ್ಯಾಪ್ತಿ ಮತ್ತು ವೈವಿಧ್ಯವೂ ಅವರ ಛಲವನ್ನೇ ಎತ್ತಿಹಿಡಿಯುವಂಥದು. ಆದರೆ ಅವಧಾನಿಗಳು ಪರಮ ಸಾತ್ತ್ವಿಕರು, ಗಟ್ಟಿಯಾಗಿ ಮಾತನಾಡಿದವರೂ ಅಲ್ಲ.

ಇಷ್ಟೆಲ್ಲ ವಿದ್ಯೆ ಕಲಿತಮೇಲೂ ಹಳ್ಳಿಗೆ ಹೋಗಿ ಜೀವನಾಧಾರಕ್ಕಾಗಿ ವ್ಯವಸಾಯವನ್ನೇ ಆಧರಿಸುವತ್ತಲೇ ಒಲವು ಹೊಂದಿದ್ದವರು. ವಿಧಿಯ ಆಣತಿಯಂತೆ ನಗರವನ್ನು ಸೇರಿದರು, ಆದರೂ ಹಳ್ಳಿಯಲ್ಲಿ ಒಂದಷ್ಟು ಜಮೀನು ಕೊಂಡರು; ಸಂಕೇತಿಗಳಿಗೆ ಪಾರಂಪರಿಕವಾಗಿ ಒಗ್ಗಿ ಬಂದ ಕೃಷಿಯ ನಂಟಿನಿಂದ ತಪ್ಪಿಸಿಕೊಳ್ಳಲಾಗದ ಅವರ ತಹತಹಕ್ಕೆ ಆ ಮೂಲಕ ಅಭಿವ್ಯಕ್ತಿಕೊಟ್ಟರು. ಅವರ ಅಧ್ಯಾಪನ ಮತ್ತು ಕೃತಿರಚನೆಯ ಹರಹು ಬಹು ಗಂಭೀರವೂ ವಿಶಾಲವೂ ಅಪೂರ್ವವೂ ಆದದ್ದು. ಅದಕ್ಕೆ ಅವಕಾಶ ಕಲ್ಪಿಸಿದವರ ಬಗೆಗೂ ಸಾರ್ವಜನಿಕರಲ್ಲಿ ಕೃತಜ್ಞತಾಭಾವನೆಯನ್ನು ಮೂಡಿಸುವಂಥದು. ಆದ್ದರಿಂದಲೇ ಇರಬೇಕು, ಇಷ್ಟು ಹಿರಿಯ ವಿದ್ವಾಂಸರಾದರೂ ಅವಧಾನಿಗಳು ಬರೆದ ಆತ್ಮವೃತ್ತಾಂತವು ವಂದನಾರ್ಪಣೆಯ ದೊಡ್ಡದೊಂದು ಪಟ್ಟಿಯಾಗಿತ್ತು. ತಾವು ಸಾಧಿಸಿದ್ದಕ್ಕೆಲ್ಲ, ತಮಗೆ ಅವಕಾಶ ಕಲ್ಪಿಸಿದ ಪುಣ್ಯಾತ್ಮರೇ ಕಾರಣಕರ್ತರು ಎಂಬುದು ಅವರ ಭಾವ; ಪರಮಾತ್ಮನು ತನ್ನ ಇಚ್ಛೆಯನ್ನು ಪೂರೈಸಿಕೊಂಡಿದ್ದಾನೆ ಎಂಬ ವಿನೀತಿ ಅವರ ಗುಣ. ಅವರ ಆತ್ಮಕಥೆಯ ಹೆಸರು ಕೂಡ 'ತೇನ ವಿನಾ'.

ಇನ್ನೊಂದು ವಿಶೇಷವೆಂದರೆ, ಕೇಶಿರಾಜನಿಗಿದ್ದಂತೆ ಅವಧಾನಿಗಳ ಬಂಧುಗಳದೂ ಉದ್ದಾಮಪಂಡಿತರ ಜಾಲವೇ (network) ಆಗಿದೆ. ಅವರು ಮೊದಲು ರಚಿಸಿದ್ದು ಕನ್ನಡವ್ಯಾಕರಣಗ್ರಂಥವನ್ನು ಎಂಬುದನ್ನು ಇಲ್ಲಿ ಉಲ್ಲೇಖಿಸಬೇಕು; ಅವರು ವೃತ್ತಿನಿರತ ಅಧ್ಯಾಪಕರಾಗಿ ಬೋಧಿಸಿದ್ದೂ ಕನ್ನಡವನ್ನೇ. ಅದಕ್ಕೆ ಹೊರತಾಗಿಯೇ ಅವರು ಸಂಸ್ಕೃತ ಮತ್ತು ವೇದವಾಙ್ಮಯದ ಸೇವೆ ಮಾಡಿದ್ದು. ಭಾರತೀಯ ಸಂಸ್ಕೃತಿಯ ಬಗೆಗೆ ಅವರಿಗೆ ಅಪಾರವಾದ ಪ್ರೀತಿ ಇದೆ, ಅದು ಅವರ ವಿದ್ಯೆ ಮತ್ತು ಬಾಳಿನ ಪ್ರಯೋಗಾಲಯದಲ್ಲಿ ಸಹಜವಾಗಿ ವ್ಯಕ್ತವಾದದ್ದು, ಕೇವಲ ಅಭಿಮಾನದಿಂದಲ್ಲ.

☆☆☆

ಈ ಐವರು ಗಣ್ಯರ ಇತಿವೃತ್ತಗಳೊಂದಿಗೆ 'ಸಂಕೇತಿ: ಇತಿವೃತ್ತಗಳು' ಎಂಬ ಸಂಪುಟವು ಪ್ರಕಟಣೆಗೆ ಸಿದ್ಧವಾಯಿತು. ಆ ಹೊತ್ತಿಗೆ, ಅವಶ್ಯವಾಗಿ ಈ ಸಂಪುಟದಲ್ಲಿ ಸೇರಿಸಿಕೊಳ್ಳಬೇಕಾದಂಥ ಎರಡು ಪುಸ್ತಕಗಳು ಬೇರೆಡೆ ಪ್ರಕಟಗೊಂಡವು. ಅವುಗಳಲ್ಲಿ ಒಂದು 'ತುಂಗೆಯ ಮಡಿಲಲ್ಲಿ' ಎಂಬುದು. ಅದು ಮತ್ತೂರು ಮಾರ್ಕಂಡೇಯ ಅವಧಾನಿಗಳ ಇತಿವೃತ್ತ. ಅದು 2005ರಲ್ಲಿ ಎಂ.ಪಿ. ಬಿರ್ಲಾ ಪ್ರತಿಷ್ಠಾನದಿಂದ ಪ್ರಕಟಗೊಂಡಿತ್ತು. ಹೀಗೆ ಪ್ರಕಟವಾಗಿದ್ದ ಇನ್ನೊಂದು ಗ್ರಂಥವು ಗಮಕ ಕಲಾವಿದರಾದ ಶ್ರೀ ಎಚ್.ಆರ್. ಕೇಶವಮೂರ್ತಿ ಅವರ ಸಪ್ತತಿಶಾಂತಿಯಲ್ಲಿ ಸಮರ್ಪಿತವಾದ ಸಂಭಾವನಾಗ್ರಂಥವಾಗಿತ್ತು. 'ಗಮಕಗಂಧರ್ವ' ಎಂಬ ಹೆಸರಿನ ಆ ಗ್ರಂಥದಲ್ಲಿದ್ದ (2006) ಎಚ್.ಆರ್.ಕೆ. ಅವರ ಸಂದರ್ಶನ ಭಾಗವನ್ನು ನಾವು ಅಳವಡಿಸಿಕೊಳ್ಳುವುದು ಸಾಧ್ಯವಿತ್ತು. ಈ ಸಂದರ್ಶನವನ್ನೂ ತುಂಗೆಯ ಮಡಿಲಲ್ಲಿ ಎಂಬ ಗ್ರಂಥವನ್ನೂ ನಿರೂಪಿಸಿದ್ದವರು ಶ್ರೀಮತಿ ಸುಮನಾ ವಿಶ್ವನಾಥ್ ಅವರು. ಎಚ್.ಆರ್.ಕೆ. ಅವರ ಸಂದರ್ಶನವನ್ನು ಶ್ರೀಮತಿ ಸುಮನಾ ಅವರ ಸಹಕಾರದಿಂದ ನೇರ ನಿರೂಪಣೆಯಾಗಿ ಮಾಡಿಕೊಳ್ಳಲಾಯಿತು.

'ಗಮಕಗಂಧರ್ವ' ಎಂಬುದು ಹೊಸಹಳ್ಳಿ ಕೇಶವಮೂರ್ತಿಯವರಿಗೆ ಎರಡನೆಯ ಬಾರಿ ಅರ್ಪಿತವಾದ ಸಂಭಾವನಾಗ್ರಂಥ. ಕೇಶವಮೂರ್ತಿಯವರಿಗೆ ಅನೇಕವಾದ ಯುಕ್ತಬಿರುದುಗಳು ದತ್ತವಾಗಿವೆ. 'ಗಮಕಗಂಧರ್ವ' ಎಂಬ ಪ್ರಶಸ್ತಿಯಲ್ಲಿ ಅವೆಲ್ಲ ಅಡಕಗೊಳ್ಳುವುದು ಸಾಧ್ಯ. ಇಷ್ಟು ಅಚ್ಚುಕಟ್ಟಾಗಿ ಹೊಂದುವ ಹೆಸರನ್ನು ನಾವು ಬದಲಿಸುವ ಅಗತ್ಯ ಇರಲಿಲ್ಲ. ನಾವು ಅಳವಡಿಸಿಕೊಂಡಿರುವ ಭಾಗವು ಆತ್ಮಕಥೆಯ ಸ್ವರೂಪದಲ್ಲಿರುವುದರಿಂದ 'ಗಮಕ ಕಲಾರಾಧನೆ' ಎಂದು ಇಟ್ಟುಕೊಂಡೆವು. ಅವರ ಕಲಾರಾಧನೆಯ ಆವರಣವೇ ಈ ನಿರೂಪಣೆಯಲ್ಲಿರುವಂಥದು.

ಕೇಶವಮೂರ್ತಿಯವರ ಪೂರ್ವಿಕರಲ್ಲಿ ವೇದ–ಸಂಗೀತ–ಸಾಹಿತ್ಯದ ಸಂಸ್ಕಾರವು ಚೆನ್ನಾಗಿಯೇ ಇದೆ. ಆ ಪುಣ್ಯದ (ವಂಶವಾಹಿನಿಯ) ಬಲವೂ ಸೇರಿ ಕೇಶವಮೂರ್ತಿಯವರು ಸಹಜಕಲಾವಿದರಾಗಿ ಹೊಮ್ಮಿದ್ದಾರೆ. ಅವರೊಬ್ಬ ವರ–ಗಮಕಿ. ಕಲಾರಾಧನೆಯು ಅವರ ಸಂತಾನದಲ್ಲಿ ಶ್ಲಾಘ್ಯವಾಗಿ ಮುಂದುವರಿದಿದೆ.

ತಾನು ಒಲಿದಂತೆ ಹಾಡಿದವರು ಕೇಶವಮೂರ್ತಿಯವರು. ಅವಕಾಶಗಳಿಗಾಗಿ ಅವರು ಅರಸಲಿಲ್ಲ, ಪ್ರಶಸ್ತಿಗಳನ್ನು ನಿರೀಕ್ಷಿಸಲಿಲ್ಲ, ಕೀರ್ತಿಶನಿಯಿಂದ ಬಲುದೂರದಲ್ಲಿ ಹೊಸಹಳ್ಳಿಯಲ್ಲಿ ಗಮಕಾರಾಮದಲ್ಲಿ ವಿಹರಿಸುವಷ್ಟರಲ್ಲಿ ಸಂತೃಪ್ತಿ ಕಂಡರು. ಆದರೆ ಎಲ್ಲವೂ ಅವರನ್ನು ಅರಸಿಕೊಂಡು ಬಂದವು.

"ಏ... ಹುಡುಗಾ... ನೀನೇ ಅಲ್ಲವೇ ಈ ದಿನ ಪದ್ಯಗಳನ್ನು ಓದಿದವನು. ಬಹಳ ಚೆನ್ನಾಗಿ ಓದುತ್ತೀ ಕಣೋ ನೀನು... ಚೆನ್ನಾಗಿ ಅಭ್ಯಾಸ ಮಾಡು, ಬಿಟ್ಟುಬಿಡಬೇಡಾ" – ಅದು ಅತಿಥಿ ಆಗಂತುಕರ ಅಮೃತವಾಕ್ಯವಾಗಿತ್ತು. ಕೇಶವಮೂರ್ತಿಯವರ ಸಾಧನಾಶಿಖರ ಮತ್ತು ಕೀರ್ತಿಶಿಖರದ ಬೀಜ ಅದು. ಅಂಥ ಹೊಗಳಿಕೆಗೆ ಪಾತ್ರವಾಗುವಂತೆ ಅವರು ಹಾಡಿದ್ದರು, ನಿಜ. ಆದರೆ ಆಗಂತುಕ ಅತಿಥಿಗೆ ವಚನದಾರಿದ್ರ್ಯವಿರಲಿಲ್ಲ ಎಂಬುದೂ ನಿಜವೇ. ಸಾಧಕರಿಗೆ ಧನಕನಕ ಬೇಡ, ಎದೆ ತುಂಬಿದ ಒಂದು ಮಾತು ಸಾಕು; 'ಗಮಕ ಕಲಾರಾಧನೆ'ಯ ಸಂದೇಶ ಅದು.

ವೇ॥ ಬ್ರ॥ ಶ್ರೀ ಮಾರ್ಕಂಡೇಯ ಅವಧಾನಿಯವರ 'ತುಂಗೆಯ ಮಡಿಲಲ್ಲಿ' ಅವರ ವೈಯಕ್ತಿಕ ಜೀವನವು ತುಂಗೆಯ ಮಡಿಲಲ್ಲಿ ಪಡೆದ ಬಹು ಆಯಾಮಕ್ಕೆ ಹಿಡಿದ ಕನ್ನಡಿಯಾಗಿದೆ. 'ಜೀವನೋಲ್ಲಾಸ'ವು ಸಂಕೇತಿ ಸಮುದಾಯದ ಬದುಕಿನ ಜೀವಂತಿಕೆಯನ್ನು ನೇರವಾಗಿ ಮುಟ್ಟಿದೆ, 'ತುಂಗೆಯ ಮಡಿಲಲ್ಲಿ' ಎಂಬುದು ಅದನ್ನು ಆತ್ಮಚರಿತ್ರೆಯೊಂದಿಗೆ ತಳಕು ಹಾಕಿದೆ. ಈ ಸಂಪುಟದ ಎಲ್ಲ ಆತ್ಮವೃತ್ತಾಂತಗಳಲ್ಲೂ ಅದು ನಡೆದಿದೆ, ಆದರೆ 'ತುಂಗೆಯ ಮಡಿಲಲ್ಲಿ' ಕೃತಿಯಲ್ಲಿ ಅದರ ಬೀಸು ಹೆಚ್ಚು ಢಾಳಾಗಿದೆ.

ಈ ಸಂಪುಟದ ಉಳಿದ ಎಲ್ಲ ಲೇಖಕರಿಗಿಂತ ಮಾರ್ಕಂಡೇಯ ಅವಧಾನಿಗಳ ಅಭಿವ್ಯಕ್ತಿಗೆ ಒಂದು ವಿಶಿಷ್ಟ ಪಾತಳಿ ಇದೆ. ಅವರು ವೇದೋಪನಿಷತ್ತುಗಳು, ಪುರಾಣಗಳು, ಇತಿಹಾಸ ಮಹಾಕಾವ್ಯಗಳು ಮತ್ತು ಸಂಸ್ಕೃತ ಸಾಹಿತ್ಯದಲ್ಲಿ ಪಂಡಿತರು. ಕನ್ನಡದ ಕೆಲವು ಪ್ರಾಚೀನ ಕಾವ್ಯಗಳನ್ನು ನೂರಾರು ಬಾರಿ ಪ್ರವಚನಕ್ಕಾಗಿ ಮೆಲುಕು ಹಾಕಿದವರು, ಪ್ರವಚನದ ಮೂಲಕ ಅವನ್ನು ಮತ್ತಷ್ಟು ಆವಾಹಿಸಿಕೊಂಡವರು. ಪುರೋಹಿತರೂ ಋತ್ವಿಕರೂ ಆದುದರಿಂದ ಜನರ ಒಡನಾಟ ಇರುವವರು, ಮತ್ತು ಲೋಕಲಕ್ಷಣವನ್ನು ಅರಿತವರು.

ಅವರ ಇತಿವೃತ್ತವು ತನ್ನ ಪರಿಸರವನ್ನು ಬಹುವಾಗಿ ತನ್ನಲ್ಲಿ ಅಡಕ ಮಾಡಿಕೊಂಡಿದೆ. ಅವರ ಅಭಿವ್ಯಕ್ತಿಯಲ್ಲಿ ಗಮಕ ವ್ಯಾಖ್ಯಾನದ ನುರಿಕೆ ಇದೆ, ಅವರ ಕಥನಕಲೆಯನ್ನು ಅದು ಪ್ರಭಾವಿಸಿದೆ. ಅದ್ವೈತ ಸಿದ್ಧಿಯ ವಿಶ್ವಕುಟುಂಬದ ಕಣ್ಣು ಮಾಡಿರುವ ಲೋಕಾರಾಧನೆ ಇಲ್ಲಿನ ವಿಶಾಲ ವೇದಿಕೆಯಲ್ಲಿ ರಿಂಗಣಿಸಿದೆ.

ಶ್ರೀಮತಿ ಸುಮನಾ ವಿಶ್ವನಾಥ್ ಅವರು ಮತ್ತೂರ್‌ಜೀ ಅವರ ಆತ್ಮವೃತ್ತಾಂತವನ್ನು ನಿರೂಪಿಸುತ್ತಲೇ ತಮ್ಮ ಸಿದ್ಧಲೇಖನಿಗೆ ಸಾರ್ಥಕತೆಯನ್ನು ಆವಾಹಿಸಿಕೊಂಡಿದ್ದರು. 'ಗಮಕ ಕಲಾರಾಧನೆ' ಮತ್ತು 'ತುಂಗೆಯ ಮಡಿಲಲ್ಲಿ' ಆ ನೈಪುಣ್ಯದ ಮುಂದುವರಿದ ಮಜಲುಗಳಾಗಿವೆ.

☆☆☆

ಈ ಎಲ್ಲಾ ಇತಿವೃತ್ತಗಳಲ್ಲೂ ವ್ಯಕ್ತಿಜೀವನದ ಹಂದರಕ್ಕೆ ಸಮುದಾಯ ಜೀವನದ ವಿವರಗಳ ಬಳ್ಳಿ ಹಬ್ಬಿಕೊಂಡಿದೆ. ಪ್ರತಿಯೊಂದು ಸಣ್ಣವಿವರದಲ್ಲೂ ಅದು ಕಾಣುತ್ತದೆ. ಇಲ್ಲಿನ ಲೇಖಕರೆಲ್ಲರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರೇ ಆಗಿದ್ದಾರೆ. ಆದರೆ ಅವರ ಆತ್ಮವೃತ್ತಾಂತದ ಜತೆಗೆ ಬೆಸೆದಿರುವ ಸಮುದಾಯ ಜೀವನದ ವಿವರಬಾಹುಳ್ಯದ ಕಾರಣಕ್ಕಾಗಿಯೇ ಇವನ್ನೆಲ್ಲ 'ಸಂಕೇತಿ: ಇತಿವೃತ್ತಗಳು' ಎಂಬ ಶೀರ್ಷಿಕೆಯ ಅಡಿಯಲ್ಲಿ ಸೇರಿಸಲಾಗಿದೆ. ಆದ್ದರಿಂದಲೇ ಅಮೀನ್ ವೆಂಕಟಕೃಷ್ಣಯ್ಯನವರ ಹೊರಚ್ಚಾದ ಜೀವನಚಿತ್ರಣವು ಇಂಥ ಬರಹಗಳಲ್ಲಿ (ಆಡಿದ ಹೊಲ, ಕಂಡ ವಿಚಾರ) ಬಾಹ್ಯವೆನಿಸುವುದಿಲ್ಲ; ತಿಳಿಮನಸ್ಸಿನ ಸುಲ್ತಾನನ ಒಡನಾಟವು ಗೌಣವಾಗುವುದಿಲ್ಲ (ಕಲೆಯ ಸನ್ನಿಧಿಯಲ್ಲಿ); ನಾಲ್ಕು ವಿವಾಹಗಳ ಕಥನದ ಎಳೆಯು ಭಾರವೆನಿಸುವುದಿಲ್ಲ (ಮಾಗಿದ ಬದುಕು); 'ಆಗಿನ ಸಮಾಜ'ದ ವಿಸ್ತಾರವಾದ ಚಿತ್ರಣವು (ಜೀವನಗಾಥ) 'ಅತಿ' ಎನಿಸುವುದಿಲ್ಲ. ಇನ್ನೊಂದೇ ನಿದರ್ಶನ, ಲಿಂಗದಹಳ್ಳಿಯ ಆ ಅತಿ ಸಾಮಾನ್ಯ ಮಹಿಳೆಯ ಕಾಶೀಯಾತ್ರೆಯದು (ತುಂಗೆಯ ಮಡಿಲಲ್ಲಿ). ಆ ಮಹಾ ಮಹಿಳೆಯು ಕಾಶೀಯಾತ್ರೆ ಮಾಡುವ ತನ್ನ ವೈಯಕ್ತಿಕ ಆಕಾಂಕ್ಷೆಯನ್ನು ಅದುಮಿಟ್ಟಳು, ಪಕ್ಕದ ಮನೆಯ ಬಡಕುಟುಂಬದ ಅಳಿವು ಉಳಿವಿನ ಚಿಂತೆ ಮಾಡಿದಳು, ಆ ಬಡಗರ್ಭಿಣಿ ಹುಡುಗಿಯ ಜೀವದಾಳದ ಕನಸಿಗೆ ಸ್ಪಂದಿಸಿದಳು, ಆ ಕುಟುಂಬದ ಸೇವೆಗಾಗಿ ಹಳ್ಳಿಯಲ್ಲೇ ಉಳಿದುಕೊಂಡಳು, 'ಇದೇ ನನ್ನ ಕಾಶೀಯಾತ್ರೆ, ಇಲ್ಲೇ ನನಗೆ ವಿಶ್ವನಾಥನ ದರ್ಶನ' ಎಂದು ತಿಳಿಯುವ ಎತ್ತರಕ್ಕೆ ಏರಿದಳು, ವೇದಾಂತಿಯಾದಳು, ಮಾನವತಾವಾದಿಯಾದಳು. ಇತಿವೃತ್ತವು ನಿರಾಯಾಸವಾಗಿ ಇಂಥ ಉಪಕಥನಗಳನ್ನು ತನ್ನ ಉದ್ದೇಶದ ತೆಕ್ಕೆಗೆ ಸೇರಿಸಿಕೊಂಡುಬಿಡಬಲ್ಲದು.

ಇಲ್ಲಿನ ಇತಿವೃತ್ತಗಳ ಅವಲೋಕನದ ದೃಷ್ಟಿಯಿಂದ ಓದುಗರ ಸೌಲಭ್ಯಕ್ಕಾಗಿ ಕೆಲವು ವಿವರಗಳನ್ನು ಇಲ್ಲಿ ನೀಡಬಹುದಾಗಿದೆ :

1.	ಪ್ರೊ॥ ಕೆ.ಎಸ್. ಕೃಷ್ಣಮೂರ್ತಿ	–	ಕೇರಳಾಪುರ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ, ಮಧ್ಯದೇಶ, ಅಧ್ಯಾಪಕ, ಲೇಖಕ, ಕೌಶಿಕ ಸಂಕೇತಿ – ಜನನ : 1917[a]
2.	ಸಾ. ನಾ. ಶ್ರೀಕಂಠಯ್ಯ	–	ಸಾಲಿಗ್ರಾಮ, ಕೃಷ್ಣರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆ, ಬೆಟ್ಟದಪುರ ಅಷ್ಟಗ್ರಾಮ, ಎಲ್.ಐ.ಸಿ. ಅಧಿಕಾರಿ, ನಾಟಕ ಕಲಾವಿದ, ಲೇಖಕ, ಬೆಟ್ಟದಪುರ ಸಂಕೇತಿ–ಜನನ: 1933[b]
3.	ಆರ್.ವಿ. ಶ್ರೀನಿವಾಸಯ್ಯ	–	ರುದ್ರಪಟ್ಟಣ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ, ಮಧ್ಯದೇಶ, ಕೃಷಿಕ, ವಿಮಾ ಪ್ರತಿನಿಧಿ, ಕವಿ, ಕೌಶಿಕ ಸಂಕೇತಿ–ಜನನ:1910[c]
4.	ಕೆ.ಎಸ್. ವೆಂಕಟರಾಮಯ್ಯ	–	ಕೊಂಡಗುಳ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ, ಹಾಸನ ಸೀಮೆ, ಅಧ್ಯಾಪಕ, ಕವಿ, ಕೌಶಿಕ ಸಂಕೇತಿ – ಜನನ : 1918[d]
5.	ವೇ॥ ಬ್ರ॥ ಶ್ರೀ ರಾಮೇಶ್ವರ ಅವಧಾನಿ	–	ಪೂಮಗಾಮೆ, ಹಾಸನ ತಾಲ್ಲೂಕು. ಹಾಸನ ಜಿಲ್ಲೆ, ಹಾಸನ ಸೀಮೆ, ಅಧ್ಯಾಪಕ, ಋತ್ವಿಕ, ಪುರೋಹಿತ, ಲೇಖಕ, ಕೌಶಿಕ ಸಂಕೇತಿ – ಜನನ : 1919[e]

6. ಹೊಸಹಳ್ಳಿ ಕೇಶವಮೂರ್ತಿ – ಹೊಸಹಳ್ಳಿ, ಶಿವಮೊಗ್ಗ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ, ಮತ್ತೂರು ಸೀಮೆ,
ಗಮಕ ಕಲಾವಿದ, ಕೃಷಿಕ, ಕೌಶಿಕ ಸಂಕೇತಿ
ಜನನ : 1934

7. ವೇ॥ ಬ್ರ॥ ಶ್ರೀ ಮಾರ್ಕಂಡೇಯ ಅವಧಾನಿ – ಮತ್ತೂರು, ಶಿವಮೊಗ್ಗ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ, ಮತ್ತೂರು ಸೀಮೆ,
ಋತ್ವಿಕ, ಪುರೋಹಿತ, ಕೃಷಿಕ,
ಪ್ರವಚನಕಾರ, ಗಮಕ ವ್ಯಾಖ್ಯಾನಕಾರ,
ಕೌಶಿಕ ಸಂಕೇತಿ – ಜನನ : 1933.

ಇಲ್ಲಿನ ಲೇಖಕರಲ್ಲಿ ಮಧ್ಯದೇಶದ ಇಬ್ಬರು, ಹಾಸನ ಸೀಮೆಯ ಇಬ್ಬರು, ಮತ್ತೂರು ಸೀಮೆಯ ಇಬ್ಬರು ಮತ್ತು ಬೆಟ್ಟದಪುರ ಅಷ್ಟಗ್ರಾಮದ ಒಬ್ಬರು ಸೇರಿದ್ದಾರೆ. ಸಂಕೇತಿಗಳ ಪ್ರಾದೇಶಿಕ ವೈಶಿಷ್ಟ್ಯಗಳ ದೃಷ್ಟಿಯಿಂದ ಲಿಂಗದಹಳ್ಳಿ ಸಮುದಾಯದ ಪ್ರಾತಿನಿಧ್ಯವು ಇಲ್ಲಿ ತಪ್ಪಿಹೋಗಿದೆ. ಕೇರಳ ಮತ್ತು ತಮಿಳುನಾಡಿನ ಸಂಕೇತಿಗಳ ಇತಿವೃತ್ತಗಳನ್ನೊಳಗೊಂಡ ಪ್ರತ್ಯೇಕ ಸಂಪುಟವು ಸಂಕೇತಿ ಅಧ್ಯಯನ ಮಾಲೆಯಲ್ಲಿ ಯೋಜಿತವಾಗಿದೆ. ಈ ಮಾಲೆಯಲ್ಲಿ ಬರಲಿರುವ ಆತ್ಮಕಥಾ ಸಂಪುಟದಲ್ಲಿ ಲಿಂಗದಹಳ್ಳಿಯ ಪ್ರಖ್ಯಾತ ವಿದ್ವಾಂಸರಾದ ವೇ॥ ಬ್ರ॥ ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳ ಆತ್ಮಕಥೆಯನ್ನು ಸೇರಿಸಲಾಗಿದೆ. ಇಷ್ಟಾದರೂ, ಜೀವನವಿವರಗಳ ವಿಸ್ತಾರವಾದ ಅವಲೋಕನಕ್ಕಾಗಿ ಬೇಕಾದ ಲಿಂಗದಹಳ್ಳಿಯ ಪರವಾದ ಇತಿವೃತ್ತವೊಂದರ ಕೊರತೆ ಹಾಗೆಯೇ ಉಳಿದಂತಾಗಿದೆ. ಇತರ ಪ್ರಾದೇಶಿಕ ಇತಿವೃತ್ತಗಳನ್ನು ನೋಡಿದವರಿಗೆ ಲಿಂಗದಹಳ್ಳಿಯ ಬಗೆಗಿನ ಕುತೂಹಲವು ಹೆಚ್ಚುವುದರಲ್ಲಿ ಸಂದೇಹವಿಲ್ಲ.

☆☆☆

ಒಟ್ಟಿನಲ್ಲಿ, ಇಲ್ಲಿ ಸೇರಿರುವ ಎಂಟು ಕೃತಿಗಳು ಒಟ್ಟಾಗಿ ಕಟ್ಟಿಕೊಟ್ಟಿರುವ ಜೀವನಸ್ವರೂಪವೊಂದರ ಚಿತ್ರಣವು ಈ ಸಂಪುಟದ ಸಾಧನೆಯಾಗಿದೆ.

ಡಾ॥ ಬಿ.ಎಸ್. ಪ್ರಣತಾರ್ತಿಹರನ್
ಪ್ರಧಾನ ಸಂಪಾದಕ

ಮೈಸೂರು
6ನೇ ಜೂನ್ 2007

ನಿಧನ : a 22-09-2009 b 09-06-2009 c 28-01-2011 d 22-06-2008 e 02-05-2006

-ಸಂ

೨ ಮುನ್ನುಡಿ

'ಸಂಕೇತಿ' ಐದನೆಯ ಸಂಪುಟ 'ಇತಿವೃತ್ತಗಳು' ನಿಮ್ಮ ಕೈಯಲ್ಲಿದೆ. ಇತಿವೃತ್ತ ಎಂದರೆ ಆಖ್ಯಾಯಿಕೆ, ಘಟನೆಗಳು, ಹಿಂದೆ ಘಟಿಸಿದ ಕಥೆ. ನಮ್ಮ ಜನಾಂಗದ, ಸುಮಾರು ನೂರು ವರ್ಷಗಳಷ್ಟು ಹಳೆಯ ಬದುಕಿನ ಸಂಗತಿಗಳ ಮೂಲಕ ಆಗಿನ ಸಂಕೇತಿ ಜನಾಂಗವನ್ನು ದೃಶ್ಯವತ್ತಾಗಿ ಮಾಡಿಕೊಳ್ಳುವ ಪ್ರಯತ್ನ ಇದಾಗಿದೆ. ತನ್ಮೂಲಕ ನಮ್ಮಲ್ಲಿ ಆನುವಂಶೀಯವಾಗಿ ಬಂದಿರಬಹುದಾದ ವಿಶಿಷ್ಟ ಗುಣಲಕ್ಷಣಗಳ ಬಗೆಗೂ ಬೆಳಕು ಚೆಲ್ಲಬಹುದಾಗಿದೆ. ಇಲ್ಲಿ, ಏಳು ಜನ ಹಿರಿಯರು ತಮ್ಮ ಬದುಕಿನ ಸಂಗತಿಗಳನ್ನು ನಮ್ಮ ಮುಂದಿಡುತ್ತಿದ್ದಾರೆ. ಈ ಹಿರಿಯರ ಸರಾಸರಿ ವಯಸ್ಸು 84 ವರ್ಷ ! ಅಂದರೆ ಸುಮಾರು ನಾಲ್ಕು ತಲೆಮಾರುಗಳಷ್ಟು ಹಿಂದಿನ ನಮ್ಮ ಜನಾಂಗದ ಬದುಕಿನ ಚಿತ್ರಗಳನ್ನು ನಾವಿಲ್ಲಿ ಕಾಣುತ್ತಿದ್ದೇವೆ.

ಈ ಲೇಖನಗಳೆಲ್ಲವೂ ಆತ್ಮಚರಿತ್ರೆಗಳಾದರೂ ಆತ್ಮಕಥಾನಕಗಳಲ್ಲ ! ಸಂಪರ್ಕಕ್ಕೆ ಬಂದ ಒಡನಾಡಿಗಳ, ಊರಿನ, ಸಮಾಜದ, ಪರಿಸರದ ಇತಿವೃತ್ತ ಇಲ್ಲಿ ಪ್ರಮುಖವಾಗಿ ನಮಗೆ ಲಕ್ಷ್ಯ. ಈ ಚಿತ್ರಗಳ ಹಿನ್ನೆಲೆಯಲ್ಲಿ ಸಂಕೇತಿ ಜೀವನದ ವಿವರಗಳು ಪ್ರಧಾನವಾಗಿವೆ. ಈ ಇತಿವೃತ್ತಗಳಿಗೆ ಪೂರಕವಾಗಿ ಈ ಎಲ್ಲ ಏಳು ಮಹನೀಯರ ಆತ್ಮಚರಿತ್ರೆಯೂ ಕಾಲಾಂತರದಲ್ಲಿ ಪ್ರಕಟವಾಗಲೆಂದು ಆಶಿಸುತ್ತೇನೆ. ಹಿರಿದಾಗಿ ಬಾಳಿದ ಈ ಎಲ್ಲ ಮಹನೀಯರೂ ನಮಗೆ ಪ್ರಾತಃಸ್ಮರಣೀಯರು. ನಮ್ಮ ಜನಾಂಗ ಹೆಮ್ಮೆ ಪಡುವಂತಹ ಪರಿಶುದ್ಧ ಜೀವಿಗಳು, ನಿರ್ಮಲ ಗುಣಕ್ಕೆ ಮತ್ತೊಂದು ಹೆಸರಾದವರು. ಈ ಹಿರಿಮೆಯು ಅವರ ಕಾಲದ ಬದುಕಿನ ಪ್ರತಿಬಿಂಬವಾಗಿದೆ ಎಂದು ಕಲ್ಪಿಸಿಕೊಳ್ಳುವುದೇ ರೋಮಾಂಚನದ ಸಂಗತಿ. ನೀವು ಕೃತಿಯನ್ನು ಕೆಳಗಿಡದೆ ಓದಿ ಮುಗಿಸುತ್ತೀರಿ ಮತ್ತು ಕಡೆಯಲ್ಲಿ ನಿಮಗನ್ನಿಸುವ ಮಾತು: "ನಮ್ಮವರು ಎಂದು ಹೆಮ್ಮೆಪಡಬೇಕಾಗಿಲ್ಲ, ಇಡೀ ಕರ್ನಾಟಕವೇ ಹೆಮ್ಮೆಪಡುವಂತಹ ಆದರ್ಶ ವ್ಯಕ್ತಿತ್ವವುಳ್ಳ ಜನ."

ಕೆ.ಎಸ್. ಕೃಷ್ಣಮೂರ್ತಿ : ಮೈಸೂರಿನಲ್ಲಿ ಕಾಲೇಜು ಅಧ್ಯಾಪಕರಾಗಿದ್ದು ವಿಶ್ರಾಂತರಾಗಿಯೇ ಮುವ್ವತ್ತೊಂದು ವರ್ಷವಾಯಿತು. ಹುಟ್ಟೂರು ಕೇರಳಾಪುರ. ತಮ್ಮ ಬಾಲ್ಯದ, ಕಾವೇರಿ ತೀರದ ಸಂಕೇತಿ ಗ್ರಾಮದ ಬದುಕಿನ ಚಿತ್ರಗಳನ್ನು ನೆನಪಿನಂಗಳದಿಂದ ಹೊರಗಿಟ್ಟಿದ್ದಾರೆ. ಆದ್ದರಿಂದಲೇ "ಆಡಿದ ಹೊಲ, ಕಂಡ ವಿಚಾರ" ಎಂಬುದು (ಜನ್ನ ಕವಿಯ ಯಶೋಧರ ಚರಿತೆಯಲ್ಲಿ ಬರುವ ಒಂದು ವಾಕ್ಯ) ಲೇಖನಕ್ಕೆ ಅರ್ಥಗರ್ಭಿತವಾದ ಶೀರ್ಷಿಕೆ. ಕಂಡ, ಅನುಭವಿಸಿದ, ಸುಪ್ತಮನಸ್ಸಿನ ಅನುಭವಗಳು ಹೊರಹೊಮ್ಮಿದಾಗ ಕಾವ್ಯವಾಗುತ್ತದೆ. ಅಂತೆಯೇ ಕಾವ್ಯಮಯ ಮಧುರ ಗದ್ಯ ಇಲ್ಲಿದೆ. ಕುವೆಂಪು ಅವರ ತುಂಗಾನದಿಯ ಸ್ಮರಣೆಯ ಚಿತ್ರಗಳು ನೆನಪಿಗೆ ಬರುತ್ತವೆ. ಆದರೆ ಅಲ್ಲಿಗಿಂತ ಇಲ್ಲಿ ಹೆಚ್ಚು ಆತ್ಮೀಯವೂ ಭಾವನಾತ್ಮಕವೂ ಆಗಿದೆ ಮತ್ತು ನಮಗೆ ಹತ್ತಿರವಾಗಿದೆ! ಈ ಚಿತ್ರಗಳು ನದೀ ದಂಡೆಯ ಯಾವುದೇ ಸಂಕೇತಿ ಗ್ರಾಮಕ್ಕೂ ಅನ್ವಿತ. ನದಿಯು ಇಡೀ ಊರಿನ ಸಾಂಸ್ಕೃತಿಕ ಕೇಂದ್ರವಾಗಿದ್ದು ಊರಿನ ಎಲ್ಲ ಬದುಕಿನೊಡನೆ ಹಾಸುಹೊಕ್ಕಾದ ಚಿತ್ರಣ ಇಲ್ಲಿದೆ. ಸ್ವಲ್ಪಮಾತ್ರ ಪ್ರಯತ್ನದಿಂದ ಬೃಹತ್–ಭವ್ಯ ಕಾದಂಬರಿಯನ್ನಾಗಿಸಬಹುದಾದ ಬರೆಹ ಇದಾಗಿದೆ. 1942ರ ಸರಿಸುಮಾರು, ಹೊಟ್ಟೆಪಾಡಿಗಾಗಿ ದೂರದೂರಿನಲ್ಲಿ ಸೈನ್ಯದಲ್ಲಿ ಕರಣಿಕ ವೃತ್ತಿ ಮಾಡುತ್ತಿದ್ದ ಕೆ.ಎಸ್.ಕೆ. ಅವರು ಆ ಸ್ವಾತಂತ್ರ್ಯ ಹೋರಾಟ ಕಾಲದ ಜನಗಳ / ಬದುಕಿನ ಮನೋಜ್ಞ ಚಿತ್ರಣ ನೀಡಿದ್ದಾರೆ.

ಸಾ.ನಾ. ಶ್ರೀಕಂಠಯ್ಯ : ನಾವು ಈ ಸಂಚಿಕೆಯಲ್ಲಿ ಕಾಣುವ ಹಿರಿಯರೆಲ್ಲ ತಮ್ಮ ತಮ್ಮ ಕ್ಷೇತ್ರದಲ್ಲಿ ಬಹುಶಃ ನಾಸ್ತಿದ್ವಿತೀಯರು. ನೂರಕ್ಕೂ ಹೆಚ್ಚು ನಾಟಕಗಳನ್ನು ಬರೆದ, ಆಡಿಸಿದ ಶ್ರೀಕಂಠಯ್ಯ ಅವರು ನಾಟಕ ಕ್ಷೇತ್ರದಲ್ಲಿ ಕರ್ನಾಟಕದ ಬಹು ದೊಡ್ಡ ಕಲಾವಿದರು, ಸಂಕೇತಿ ಸಮಾಜಕ್ಕೆ ಕಿರೀಟಪ್ರಾಯರು. ಅವರ ಭಾಷೆಯೇ ಕಾವ್ಯಮಯ. ಹುಟ್ಟಾ ಕವಿ, ಕಲಾವಿದ. ನಾಟಕ ಬರೆದ, ಆಡಿಸಿದ ವಿವರದ ಜೊತೆಯಲ್ಲಿಯೇ ಆ

ಕಾಲದ ತಮ್ಮ ಮತ್ತು ಪರಿಸರದ ಬದುಕಿನ ಚಿತ್ರವನ್ನು ಕೊಟ್ಟಿದ್ದಾರೆ. ವಾರದ ಸಂತೆಯ ಬೆಣ್ಣೆ ವ್ಯಾಪಾರ, ಸುತ್ತ ಹತ್ತು ಹಳ್ಳಿಯವರು ಒಂದೆಡೆ ಸೇರುವುದು, ಇತ್ಯಾದಿ. ಆ ಸಮಯ ಹಳ್ಳಿಗರ ಪಾಲಿಗೆ "ಸುದ್ದಿಯ, ಪ್ರೀತಿಯ ವಿನಿಮಯದ" ಹೊತ್ತಂತೆ! ಈ ವಿವರ ನೀಡುವಾಗ: "ಅಯ್ಯೋ, ಏತಕ್ಕಾಗಿ ಬೆಳೆದೆವೋ. ಎಲ್ಲಾ ಹೋಯಿತಲ್ಲಾ!" ಎಂದು ಉದ್ಗಾರ ಎತ್ತಿದ್ದಾರೆ. ಮನೆಗೆ ಭೇಟಿ ನೀಡುವ ದಾಸಯ್ಯನ ಬಗ್ಗೆ ಹೇಳುವಾಗ 'ಆತ ಭಿಕ್ಷುಕನಲ್ಲ' ಎಂದು ಅಭಿಮಾನದಿಂದ ಆತನ ವರ್ಣನೆ ಮಾಡುತ್ತಾರೆ. ಹಾಗೆಯೇ ತಂದೆಯ ಬಗೆಗೆ ಹೇಳುವಾಗ 'ಅವರು ಸಾಕ್ಷಾತ್ ದೇವರು' ಎನ್ನುತ್ತಾರೆ. ಇಂಥದೇ ಮಾತು ಅವಧಾನಿಗಳ ಲೇಖನದಲ್ಲೂ ಇದೆ. ಹೀಗೆ ದೈವತ್ವ ಕಾಣುವ ಈ ಮಕ್ಕಳ ಸಹೃದಯತೆ, ಸಂಸ್ಕಾರ ಕುರಿತು ಯೋಚಿಸುತ್ತೇನೆ. ದೈವತ್ವ ಹಿರಿಯರಲ್ಲಿ ಇದೆಯೋ ಅಥವಾ ಕಾಣುವ ಈ ಮಕ್ಕಳಲ್ಲಿ ಇದೆಯೋ ? ಅದ್ಭುತ ಕಾದಂಬರಿ ಶೈಲಿ. ವಿವಾಹಮಂಗಳದ ನವುರಾದ ಹಾಸ್ಯ ಚಿತ್ರಗಳು. ಈಗ ಮರೆಯಾಗುತ್ತಿರುವ ಉರುಟಣೆ ಚೆಂಡಾಟದ ವಿವರಗಳು ಇಲ್ಲಿವೆ. ಅವರ ಭಾಷೆ ಗಮನಿಸಿ: ಕಾಶೀಯಾತ್ರೆಯ ಛತ್ರಿಕಡ್ಡಿ ಚುಚ್ಚಿದಾಗ: "ಗಂಗಾ ಭಾಗೀರಥಿಗಳ್ ಮೇಳೈಸಿ ಧರೆಗಿಳಿದರ್ ಕಣ್ಣ ಕಾಲುವೆಯೊಳೊತ್ತಿ". ಗಂಡು ಮಗ ಹುಟ್ಟಿದಾಗ '.... ಪುನ್ನಾಮ ನರಕದಿಂದೀಚೆಗಿಡುವ ಅಣುಗನ ಆವಿರ್ಭಾವವಾದದ್ದು ಸಪ್ತಮ ಗರ್ಭದಲ್ಲಿ.' ಈ ವಾಕ್ಯ ನೋಡಿ: "ನನ್ನ ನೊಸಲ ನೇತ್ರಂ ಅಣಕಮಾತ್ರಮಾದುದು. ಇಲ್ಲದಿರೆ ಧರೆಯೋಳ್ ಬೂದಿತಿಲಕಮಾಗಿ ಬಿದ್ದಿರ್ಪನ್ ಅವನ್". ಕಾಳಿದಾಸ ಕವಿಯು ಕಾಮದಹನದ ಪರಿಣಾಮ ಹೇಳುವಾಗ 'ಭಸ್ಮಕೇಲಮ್' ಎಂದ ಮಾತಿನ ನವುರಾದ ಹಾಸ್ಯ ರೂಪ! ಸಾನಾ ಅವರು ಬರೆದ ನಾಟಕಗಳಲ್ಲಿ ಪ್ರಕಟಿತ ಕಡಿಮೆ, ಅಪ್ರಕಟಿತವೇ ಹೆಚ್ಚು. ಸಾಕಷ್ಟು ಪ್ರಶಸ್ತಿ, ಗೌರವಗಳು ದೊರೆತಿವೆ. ಆದರೆ ಈ ರಂಗಕಲಾವಿದನ ಬದುಕು ಸ್ವಂತಕ್ಕೆ ಪೂರ್ಣ (ಆತ್ಮ) ತೃಪ್ತಿ ತಂದಿದೆ. ಅಷ್ಟು ಸಾಕು. ಅದಕ್ಕಿಂತ ಹೆಚ್ಚಿನ ಸುಖ ಹೊರಗಣ ಪ್ರಶಸ್ತಿಗಳಿಂದಿಲ್ಲ.

ಆರ್.ವಿ. ಶ್ರೀನಿವಾಸಯ್ಯ : ಸಾನಾಶ್ರೀ ಅವರಂತೆ ಆಶುಕವಿತ್ವ ಪ್ರತಿಭೆಯ ಮಹಾನ್ ಚೇತನ ಆರ್.ವಿ. ಶ್ರೀ ಅವರು. 12–13ರ ಚಿಕ್ಕ ವಯಸ್ಸಿನಲ್ಲಿಯೇ ಆದಿಪ್ರಾಸ ಸಹಿತ ಭಾಮಿನಿಷಟ್ಪದಿಯ ರಚನೆ ಮಾಡಿರುವುದು ಅದ್ಭುತ. ಉದಾಹರಣೆ:

ಎತ್ತ ನೋಡಿದರತ್ತಲೈರ್ಲೆಂಡ್ ।
ಎತ್ತ ನೋಡಿದರತ್ತ ವೇಲಸು ।
ಎತ್ತಲುಂ ಪೊತ್ತಿಹಳು ಭೂಮಾತೆಯೀ ಜಗವ ॥

ಭಾಷೆ ಸರಳ, ಸುಭಗ, ಸುರಸ. ಆಳಿದ ಲಾರ್ಡ್‌ಗಳ ಹೆಸರುಗಳನ್ನು ನೆನಪಿಟ್ಟುಕೊಳ್ಳಲು ಶ್ಲೋಕರಚನೆ:

ಕ್ಯಾನಿಂಗಃ ಪ್ರಥಮಃ ಪ್ರೋಕ್ತೋ
ಎಲ್ಜಿನ್ನಸ್ತು ದ್ವಿತೀಯಕಃ ।
ಲಾರೆನ್ಸಸ್ತೃತೀಯಸ್ತು
ಲಾರ್ಡ್ ಮೇಯೋಶ್ಚ ಚತುರ್ಥಕಃ ॥

ತಮ್ಮ 19ನೆಯ ವಯಸ್ಸಿನಲ್ಲಿ ಪತ್ತೇದಾರಿ ಕಥೆಯೊಂದನ್ನು ಭಾಮಿನಿಷಟ್ಪದಿಯಲ್ಲಿ ಬರೆದವರು ! ಇದೇ ದಾರಿಯಲ್ಲಿ ನಡೆದಿದ್ದರೆ ಮಹಾಕವಿಯಾಗುವ ಸಾಧ್ಯತೆಯಿತ್ತು. ಪ್ರತಿಭೆಯ ಪೂರ್ಣಪ್ರಯೋಜನ ಪಡೆಯಲಿಲ್ಲ. ರೈತನ ಬಡತನದ ಬವಣೆಯು ಬಹಳಷ್ಟು ಪ್ರತಿಭೆಗಳನ್ನು ಕಮರಿಸುತ್ತದೆ? ಹೋರಾಟದ ಬದುಕಿನ ವಿವರಗಳ ಹಿನ್ನೆಲೆಯಲ್ಲಿ, ಮಾವ ಅಳಿಯಂದಿರ ಸಂಬಂಧ, ಗಂಡಸರು ಒಂದಕ್ಕಿಂತ ಹೆಚ್ಚು ಮದುವೆಯಾಗುತ್ತಿದ್ದುದು, ಪ್ಲೇಗ್ ಹಾವಳಿ, ಇತ್ಯಾದಿ ಆ ಕಾಲದ ಸಾಮಾಜಿಕ ಸ್ಥಿತ್ಯಂತರಗಳನ್ನು ಬಿಡಿಸಿಟ್ಟಿದ್ದಾರೆ. ಹಿರಿಯ ಮಗಳು ಶ್ರೀವಾಣಿ ಹುಟ್ಟುವಾಗ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಮ್.ಎನ್. ಜೋಯಿಸರ ಪತ್ನಿಯಿಂದ ಹೆರಿಗೆ ಮಾಡಿಸಿಕೊಳ್ಳಬೇಕಾಗಿ ಬಂದ ಪ್ರಸಂಗ ಗಮನಾರ್ಹವಾಗಿದೆ. ಆರ್.ವಿ.ಶ್ರೀ ಅವರು 'ಗಣಪತಿ ಜನನ', 'ಸಂಸಾರ ಪಾಶ' ಇತ್ಯಾದಿ ನಾಲ್ಕಾರು ಕಿರುಕಾವ್ಯಗಳನ್ನು ರಚಿಸಿದ್ದು ಸತ್ವಯುತವಾಗಿವೆ.

ಕೆ.ಎಸ್. ವೆಂಕಟರಾಮಯ್ಯ : ರಾಷ್ಟ್ರಭಾಷಾ ಪ್ರಚಾರಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ಹಿರಿಯ ಜೀವಿ. ಕೆ.ಎಸ್.ವಿ. ಅವರ ಹೋರಾಟದ ಬದುಕಿನ ಸಾಹಸಗಾಥೆ ಈ ಜೀವನಗಾಥೆ. ಅವರ ಪ್ರೈಮರಿಶಾಲೆಯ ಅನುಭವಗಳು: 1. ಬಗಲಲ್ಲಿ ಒಂದು ಚಿಕ್ಕ ಚಾಪೆ, ಜೊತೆಯಲ್ಲಿ ಹರಕು ಪಂಚೆ ಚೂರಿನಲ್ಲಿ ಸುತ್ತಿಟ್ಟುಕೊಂಡ ಪುಸ್ತಕಗಳ ಗಂಟನ್ನು ಶಾಲೆಗೆ ಒಯ್ಯುತ್ತಿದ್ದ ನೆನಪುಗಳು. ಈಗಿನಂತೆ ಬ್ಯಾಗುಗಳಿಲ್ಲದ ದಿನಗಳು. ಇದ್ದರೂ ಕೊಳ್ಳಲು ಹಣ ? 2. ಅಧ್ಯಾಪಕರು ಕೊಡುತ್ತಿದ್ದ ಶಿಕ್ಷಾಕ್ರಮ 3. ಪ್ರಾರ್ಥನಾ ಗೀತೆಗಳು 4. ಡ್ರೆಸ್ (ಹರಕು ಕೋಟು, ಟೋಪಿ, ವಾಷ್ ಅಂಡ್ ವೇರ್ ಲುಂಗಿ ಇತ್ಯಾದಿ.) ಸ್ವಾತಂತ್ರ್ಯ ಹೋರಾಟದ ವಿವರಗಳು, ಗಾಂಧೀಜಿಯವರ ಪ್ರಭಾವ ಲೇಖಕರ ಮೇಲಾದದ್ದು, 'ನಿನ್ನ ದಾರಿಗೆ ಮುಳ್ಳು ಹಾಕುವವರ ದಾರಿಗೆ ಹೂವು ಹಾಕು' ಎಂಬ ತತ್ತ್ವ ಕಲಿತದ್ದು ಇತ್ಯಾದಿ.

ಹಿಂದಿ ಭಾಷೆಯಲ್ಲಿ ಸಾಕಷ್ಟು ಕಥೆಗಳನ್ನು ಪ್ರಕಟಿಸಿದ್ದಾರೆ. ನೂರರಿಂದ ನೂರಿಪ್ಪತ್ತೈದು ಕವನಗಳನ್ನು ರಚಿಸಿದ್ದಾರೆ. ಪ್ರಕಟಿತ ಮೊದಲ ಕವನ ಸಂಕಲನ 'ದಕ್ಷಿಣ ಗಂಗಾ', ತುಂಬಾ ಹೆಸರು ಪಡೆದ ಸಂಕಲನ; ಎರಡನೆಯದು 'ಕವಿತಾ ಕುಸುಮಾಂಜಲಿ'; ಮೂರನೆಯದು ಗದ್ಯ ಗ್ರಂಥ. ಹಲವು ನಾಟಕಗಳನ್ನೂ ರಚಿಸಿದ್ದಾರೆ. ಬಡತನವನ್ನು ಗಣಿಸದೆ ಜೀವಿಸಿದ ಹೋರಾಟದ ಬದುಕು.

ರಾಮೇಶ್ವರಾವಧಾನಿಗಳು : ಲಿಂಗದಹಳ್ಳಿಯ ವಿದ್ವಾನ್ ನರಸಿಂಹಮೂರ್ತಿಯಂತಹ ವಿದ್ವಾಂಸರ ಸಹಾಧ್ಯಾಯಿ ಆಗಿದ್ದು ಅವರಿಂದ ತುಂಬುಹೃದಯದ ಮೆಚ್ಚುಗೆಯ ಮಾತುಗಳನ್ನು ಪಡೆದಿರುವ ಪೂಜ್ಯ ಅವಧಾನಿಯವರು ಮೊದಲ ವರ್ಗದ ಸಂಸ್ಕೃತ ವಿದ್ವಾಂಸರು. ದೇವರನ್ನು ನಂಬಿ, ನಮಮ ಭಾವದಿಂದ ಬದುಕುತ್ತಿರುವುದರಿಂದಲೇ ಇತಿವೃತ್ತಕ್ಕೆ 'ತೇನ ವಿನಾ' ಎಂದೇ ಅರ್ಥವತ್ತಾದ ನಾಮಕರಣ. ಅವರ ಕಾಲಕ್ಕೆ ಸಂಕೇತಿಗಳಲ್ಲಿ ವೇದವಿದ್ಯಾಭ್ಯಾಸ ಮಾಡದಿರುವವರ ಸಂಖ್ಯೆ ಶೂನ್ಯವಂತೆ ! ಉದ್ಯೋಗ ನೂರಕ್ಕೆ ನೂರರಷ್ಟು – ಕೃಷಿ ! ನಮ್ಮವರ ವ್ಯಸನಗಳಲ್ಲಿ ಮುಖ್ಯವಾದವುಗಳು : ಇಸ್ಪೇಟ್, ತಂಬಾಕು ಮತ್ತು ಕವಳ. 'ಅಹಂ' ಸ್ವಲ್ಪ ಜಾಸ್ತಿ ಇರುವ ಸಂಕೇತಿಗಳಿಗೆ ಕೋಪವೂ ಹೆಚ್ಚು. ಜಗಳಾಡುವುದು, ಪಾರ್ಟಿ ಮಾಡಿಕೊಳ್ಳುವುದು ಸರ್ವೇ ಸಾಮಾನ್ಯ. ಸಮುದ್ರಯಾನಕ್ಕೆ ಬಹಿಷ್ಕಾರ, ಯಾನ ಮಾಡಿದವರ ಲಂಡನ್ ಪಾರ್ಟಿ – ಶುದ್ಧಪಾರ್ಟಿಗಳು, 'ಬ್ರಾಹ್ಮಣಾನಾಮಸಂಘಾತಃ' ಇತ್ಯಾದಿ ವಿವರಗಳು. ಅವಧಾನಿಗಳು ಶಿಕ್ಷಕ ವೃತ್ತಿಯನ್ನೂ ಮಾಡಿದರು. ಆಗ್ಗೆ ಪಂಡಿತರನ್ನು ಪದವೀಧರರಿಗಿಂತ ಕೀಳಾಗಿ ಕಾಣುತ್ತಿದ್ದರಂತೆ, ಅದಕ್ಕಾಗಿ ಲೇಖಕರು ಸ್ವಪ್ರಯತ್ನದಿಂದ ಎಮ್.ಎ. ಪದವಿ ಪಡೆಯಬೇಕಾಯಿತಂತೆ ! ಮಹಾಭಾರತ, ರಾಮಾಯಣ ಮತ್ತು ವೇದಭಾಷ್ಯಾನುವಾದಗಳ ಪ್ರಕಟಣೆಯ ಕೆಲಸವನ್ನು ಮಾಡಿರುವ ಶ್ರೀಯುತರು ಶಾಶ್ವತವಾದ ಕೀರ್ತಿಯನ್ನು ಪಡೆದಿರುತ್ತಾರೆ.

ಹೆಚ್.ಆರ್. ಕೇಶವಮೂರ್ತಿ : ಗಮಕ ಕಲಾ ಕ್ಷೇತ್ರದಲ್ಲಿ ಹೆಚ್.ಆರ್.ಕೆ. ಅವರಿಗೆ ಸರಿದೂಗುವ ಇನ್ನೊಂದು ಹೆಸರು ಕರ್ನಾಟಕ ರಾಜ್ಯದಲ್ಲಿಲ್ಲ. ಶಾಸ್ತ್ರೀಯ ಸಂಗೀತ ಕಲಿಯದೆ ನೂರಾರು ರಾಗಗಳನ್ನು ಕರಗತ ಮಾಡಿಕೊಂಡಿರುವುದು ಅವರ ಒಂದು ಅದ್ಭುತ ಸಾಧನೆಯಾಗಿದೆ. ಅವರ ಜೊತೆ ಕುಳಿತು ಗಮಕ ವ್ಯಾಖ್ಯಾನ ಮಾಡುವ ಅಪೂರ್ವ ಸುಖಾನುಭವವನ್ನು ನಾನು ಪಡೆದಿದ್ದೇನೆ. ಗಮಕ ಕ್ಷೇತ್ರದಲ್ಲಿ ನೂರಾರು ಶಿಷ್ಯರನ್ನು ತಯಾರು ಮಾಡಿದ್ದಾರೆ. ಯಾರಲ್ಲಿಯೂ ಎಂದೂ ಗಂಟು ಮುಖ ಹಾಕಿದ್ದನ್ನು ನಾನು ಕಾಣೆ. ಎಷ್ಟೇ ತಪ್ಪು ಮಾಡಿದರೂ ಕೋಪ ಬಂದದ್ದಿಲ್ಲ, ಮಂದಹಾಸ ಅಳಿದದ್ದಿಲ್ಲ. ಸಹನೆಗೆ ಇನ್ನೊಂದು ಹೆಸರು ಹೆಚ್.ಆರ್. ಕೆ. ಹಲವಾರು ಊರುಗಳಲ್ಲಿ ಸಾವಿರಾರು ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಆ ಊರುಗಳ, ಜನರ ವಿಚಾರ ವಿವರ ನೀಡಿದ್ದಾರೆ. ಒಂದು ಉದಾಹರಣೆ : ಬಳ್ಳಾರಿ ಜಿಲ್ಲೆಯ ಎಮ್ಮಿಗನೂರಿಗೂ ಹೊಸಹಳ್ಳಿಗೂ ಸುಮಾರು 40 ವರ್ಷಗಳ ಗಮಕ ಬಾಂಧವ್ಯ. ಪ್ರತಿವರ್ಷ ಗಮಕ ಕಾರ್ಯಕ್ರಮಕ್ಕಾಗಿ ಹೊಸಹಳ್ಳಿಯಿಂದ ಅಲ್ಲಿಗೆ ಹೋಗುವ ರೂಢಿ. ತೊರವೆ ರಾಮಾಯಣ ಅವರಿಗೆ ಪ್ರಿಯವಾದ ಕಾವ್ಯ. ವ್ಯವಸ್ಥೆ ಮಾಡುವ

ಆತಿಥೇಯರು ಸಜ್ಜನರು, ವಿದ್ಯಾವಂತರು. ದುರದೃಷ್ಟವಶಾತ್ ಅವರ ಮನೆಯಲ್ಲಿ ಸೋದರಕಲಹ ಮೂಡಿತು. ವಿಪರೀತಕ್ಕೆ ಹೋಯಿತು. ಪರಸ್ಪರ ತಲೆ ಕಡಿಯುವಷ್ಟು ವೈರ ಬೆಳೆಯಿತು. ಹೆಚ್.ಆರ್.ಕೆ. ಅವರಿಗೆ ಚಿಂತೆ – ನಾವು ಪ್ರತಿ ವರ್ಷ ಹೋಗಿ ಪುರಾಣ ಹೇಳಿದ್ದಕ್ಕೆ ಸಾರ್ಥಕತೆ ಏನು ? ಗಾದೆ ಇರುವುದು 'ಪುರಾಣ ಹೇಳೋಕೆ, ಬದನೆಕಾಯಿ ತಿನ್ನೋಕೆ' ಅಂತ. ಆದರೆ ಇಲ್ಲಿ – 'ಪುರಾಣ ಕೇಳೋಕೆ .... ?' ನಾ ಕಂಡಂತೆ ಮೊದಲ ಬಾರಿಗೆ (ಕಡೆ ಕೂಡ) ಹೆಚ್.ಆರ್.ಕೆ. ಅವರಿಗೆ ಕೋಪ ಬಂತು. ಅಲ್ಲಿಗೆ ಹೋಗುವುದನ್ನು ಬಿಟ್ಟರು ! ನಾವು ನಂಬಿದ ಕಾರ್ಯದಲ್ಲಿ ನಮಗೆ ಇರಬೇಕಾದ ಶ್ರದ್ಧೆಯ ಗುಣವನ್ನು ನಾವಿಲ್ಲಿ ಕಲಿಯಬೇಕಾಗಿದೆ.

ಮಾರ್ಕಂಡೇಯ ಅವಧಾನಿ : ಮತ್ತೂರಿನ ಪುರೋಹಿತರು. ಪಡೆದ ದಕ್ಷಿಣೆಯ ಪೂರ್ಣ ಭಾಗವನ್ನು ಸಮಾಜಕ್ಕೇ ಅರ್ಪಿಸುವವರು. ಒಟ್ಟು ಕುಟುಂಬ. ಸೋದರರೈವರೂ ವಿದ್ವಾಂಸರೇ. ಈ ಹಿರಿಯಣ್ಣನ ಮಾತಿಗೆ ಎದುರಿಲ್ಲ. ಏಕೆಂದರೆ ಅವರ ಹೆಜ್ಜೆ ಅಷ್ಟು ಶುದ್ಧ. ತಮ್ಮ ಮನೆಯ ಯಾವುದೇ ಚಿಕ್ಕ, ದೊಡ್ಡ ಮಂಗಳ ಕಾರ್ಯ ನಡೆಯುವಾಗ ಊರಿನ ಬಡವರ ಮನೆಯ ಅಂಥದೇ ಕಾರ್ಯವನ್ನು ಜೊತೆಗೂಡಿಸಿಕೊಳ್ಳುವರು! ಸರಿಸಮವಾಗಿ ಖರ್ಚು ಮಾಡುವರು! ಆದಾಯದ ಒಂದು ಭಾಗ ದಾನಕ್ಕೆ.

'ತುಂಗೆಯ ಮಡಿಲಲ್ಲಿ' – ಈ ಸಂಪುಟದ ಸುದೀರ್ಘ ಬರಹ. ಪ್ರತಿ ಪ್ಯಾರಾವೂ, ಸಾಲೂ ಗ್ರಾಹ್ಯವೇ. ಮತ್ತೂರು ಗ್ರಾಮವು ನಡೆದು ಬಂದ ಸುಸಂಸ್ಕೃತ ದಾರಿಯನ್ನು ಇಲ್ಲಿ ಗುರ್ತಿಸುತ್ತೇವೆ. ನೂರಕ್ಕೂ ಮಿಕ್ಕಿ ಇರುವ ಪುಟಗಳಲ್ಲಿ ಅರ್ಧಕ್ಕಿಂತ ಹೆಚ್ಚು ಅವಧಾನಿಗಳ ತಂದೆ ನಾರಾಯಣ ಅವರನ್ನು ಮತ್ತು ಅವರ ಕಾಲದ ವಿವರಗಳನ್ನು ಕುರಿತದ್ದು. ಈ ಬರಹ ಪೂರ್ತ ಓದಿದ ನನ್ನ ಮೇಲೆ ಈ ಇಬ್ಬರ (ತಂದೆ–ಮಗ) ಬದುಕಿನ ಸಂಗತಿಗಳು ಎಷ್ಟು ಪ್ರಭಾವ ಬೀರಿದವೆಂದರೆ, ತಕ್ಷಣವೇ ಭೇಟಿ ಮಾಡಿ ಆಶೀರ್ವಾದ ಪಡೆಯಲೇಬೇಕೆಂಬ ಉಮೇದು ಮೂಡಿತು. ಮರುದಿನ ಮತ್ತೂರಿಗೆ ಹೋಗಿ ಇಡೀದಿನ ಅವರ ಅತಿಥಿಯಾಗಿ ಕಳೆದೆ.

ನಂಜನಗೂಡಿನ ಪಾಠಶಾಲೆಗೆ ಸೇರುವಾಗಿನ ಸಂದರ್ಭ. ಅವರು ಕೇಳಿದ ಕಷ್ಟದ ಪ್ರಶ್ನೆಗಳಿಗೆಲ್ಲ ಲೀಲಾಜಾಲವಾಗಿ ಚೆನ್ನಾಗಿ ಉತ್ತರಿಸಿದರಂತೆ. ಹೀಗೆ ಹೇಳಿ ಜೊತೆಗೆ ಸೇರಿಸುತ್ತಾರೆ 'ಬಹುಶಃ ಅವರು ಉತ್ತರ ಹೇಳಲೆಂದೇ ಸರಳ ಪ್ರಶ್ನೆ ಕೇಳಿದ್ದಿರಬೇಕು.' ಈ ಚಿಕ್ಕ ಟಿಪ್ಪಣಿಯಲ್ಲಿ ಸಂಸ್ಕೃತಿಯ ಹಿರಿಮೆ ಅಡಗಿದೆ. ವೇದ ಮಂತ್ರ ಹೇಳುವವರೆಲ್ಲ ಅರ್ಥದ ಕಡೆ ಗಮನ ಕೊಡುವರೆಂದಿಲ್ಲ. ಅವಧಾನಿಗಳು ಅಪವಾದ (ನೋಡಿ – ಪುಟ 215). ಒಮ್ಮೆ ಕತ್ತಲೆಯಲ್ಲಿ ಅವಧಾನಿಗಳನ್ನು ಗುರುತಿಸಿದ ಅವರ ಗುರುಗಳು 'ಯಾರಪ್ಪ ನೀನು?' ಎಂದು ಕೇಳಿದರಂತೆ. ಇವರ ಧೋರಣೆಯ ಉತ್ತರ: 'ನಾನು ಮನುಷ್ಯ'. ಧ್ವನಿಯಿಂದ ಗುರುತಿಸಿದ ಗುರುಗಳು ಹೇಳಿದ್ದು 'ಹೌದಪ್ಪ, ಮನುಷ್ಯನೇ ಆಗು, ಮೃಗವಾಗಬೇಡ'. ಈ ಒಂದು ಮಾತೇ ಅವಧಾನಿಗಳನ್ನು ಇಡೀ ಬದುಕಿನುದ್ದಕ್ಕೆ ರಕ್ಷಿಸಿಕೊಂಡು ಬಂದ ಶ್ರೀಕವಚ! ಒಮ್ಮೆ ಗೆಳೆಯನೊಂದಿಗೆ ಪ್ರವಾಹದಲ್ಲಿ ಈಜುವಾಗ ಗೆಳೆಯನ ಪ್ರಶ್ನೆ 'ನಾನು ಮುಳುಗಿ ಸತ್ತರೆ ನೀನೇನು ಮಾಡುವೆ?' ಒಬ್ಬನೇ ಸಜೀವ ಹಿಂದಿರುಗುವ ಪ್ರಶ್ನೆ ಇಲ್ಲ ಎಂಬುದೇ ಉತ್ತರ. ಈ ಶೌಚವೇ ನಮ್ಮ ಬದುಕಿನುದ್ದಕ್ಕೆ ಬರಬೇಕಾದ ನಡವಳಿ. ಇಂಥ ನಡವಳಿಗೆ ಮತ್ತೊಂದು ಉದಾ: ನಂಜಪ್ಪನವರ ಬದುಕು. ಅವರು ಊರಿನ ಕೇಶವ ದೇವಾಲಯದ ಅರ್ಚಕರು. ತಮ್ಮ ಸಮಸ್ತ ಆಸ್ತಿಯನ್ನು ಮಕ್ಕಳಿಗೆ ಕೊಡದೆ ದತ್ತು ಪುತ್ರನಿಗೆ ಕೊಟ್ಟು ಸದ್ಧರ್ಮ ಮೆರೆದವರು. ಒಮ್ಮೆ ಆತ್ಮೀಯರೊಬ್ಬರು ತಮ್ಮ ಮನೆಯ ಮದುವೆ ಊಟಕ್ಕೆ ಬರಲು ಒತ್ತಾಯಿಸಿದಾಗ ಅಂದದ್ದು 'ಮನೆಯಲ್ಲಿ ಕೇಶವನಿಗೆ ಕದನ್ನ. ನಾನಲ್ಲಿ ಮೃಷ್ಟಾನ್ನ ಸವಿಯಲೆ?' ಇದೇ ಧರ್ಮ. ನಾವಾಚರಿಸುವ ಈ ಧರ್ಮವೇ ನಮ್ಮನ್ನು ರಕ್ಷಿಸುವುದು. ಊರವರು ನಂಜಪ್ಪನವರ ಅಶನಾರ್ಥ ಸ್ವಲ್ಪ ಜಮೀನನ್ನು ದಾನ ಕೊಟ್ಟಾಗ ನಂಜಪ್ಪ ಅದನ್ನು ದೇವಾಲಯದ ಹೆಸರಿಗೆ ಬರೆದರಂತೆ!.

ಈ ಸಂಪುಟವನ್ನು ಸಂಪಾದಿಸಿಕೊಟ್ಟಿರುವ ಶ್ರೀ ಎನ್.ಎಸ್. ಶಾರದಾ ಪ್ರಸಾದ್ ಅವರಿಗೆ ಅಭಿನಂದನೆಗಳು, ಅವರ ಅಚ್ಚುಕಟ್ಟುತನಕ್ಕೆ ವಂದನೆಗಳು.

ಇಂಥ ಹಿರಿಯ ಜೀವಿಗಳ ಕಥಾನಕಗಳನ್ನು ದಾಖಲಿಸುತ್ತಿರುವ ಸಮುದಾಯ ಅಧ್ಯಯನ ಕೇಂದ್ರಕ್ಕೆ ಅನಂತ ನಮನಗಳು. ಈ ಎಲ್ಲ ಪ್ರಕಟಣೆಗಳ ರೂವಾರಿ ಪ್ರಣತಾರ್ತಿಹರನ್ ಅವರ ದೈತ್ಯ ಸಾಹಸಕ್ಕೆ ಎಷ್ಟು ಅಭಿನಂದನೆಗಳನ್ನು ಸಲ್ಲಿಸಿದರೂ ಕಡಿಮೆಯೇ. ನಮ್ಮ ಜನಾಂಗದ ಹಿರಿಮೆಯನ್ನು ಗುರುತಿಸಿ ಉಳಿಸುವ ಈ ಮಹತ್ ಸಾಧನೆಗಾಗಿ ಸಂಕೇತಿ ಜನಾಂಗವು ಹರನ್ ಅವರಿಗೆ ಎಷ್ಟು ಕೃತಜ್ಞರಾಗಿದ್ದರೂ ಸಾಲದು. ಈಗಿನ ಯೋಜನೆಯಂತೆ ಎಲ್ಲ ಸಂಪುಟಗಳೂ ನಿರ್ವಿಘ್ನವಾಗಿ ಹೊರಬರಲೆಂದು ಹಾರೈಸುತ್ತೇನೆ.

ದೇಶೀಯ ವಿದ್ಯಾಶಾಲೆ ಕಾಲೇಜು
ಶಿವಮೊಗ್ಗ

ಎಲ್.ಎಮ್.ಎಲ್.ಶಾಸ್ತ್ರಿ
ನಿವೃತ್ತ ಕನ್ನಡ ಪ್ರಾಧ್ಯಾಪಕರು

೩. ಪರಿವಿಡಿ

ಸಂಕೇತಿ : ಇತಿವೃತ್ತಗಳು

೪ ಗ್ರಂಥದ ಬಗೆಗೆ

ಅ. ಸಂಕೇತಿ : ಇತಿವೃತ್ತಗಳು

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಡಾ॥ ಕೆ. ಅನಂತರಾಮು
ನಿವೃತ್ತ ಕನ್ನಡ ಪ್ರಾಧ್ಯಾಪಕರು

'ಸಂಕೇತಿ : ಇತಿವೃತ್ತಗಳು' ಎಂಬೀ ಬೃಹತ್ ಸಂಪುಟವನ್ನು ಸಂಕೇತಿ ರಸವೃತ್ತಗಳು ಎಂದು ಕರೆದರೂ ಸರಿಯೆ. ಆತ್ಮಕಥೆಯ ಸಾರರೂಪವಾದ ಜೀವನಚಿತ್ರಗಳು ಅಲ್ಲಿವೆ. ನಮಗೆಲ್ಲ ಹುಟ್ಟಲು ಒಂದೇ ದಾರಿ, ಆದರೆ ಸಾಯಲು ಸಾವಿರ ದಾರಿಗಳು. ಹಾಗೆಯೇ ಸುಖವೆಂಬ ಕಲ್ಪನೆಗೆ ಒಂದೇ ಮುಖ, ದುಃಖಕ್ಕೆ ಸಾವಿರ ಮುಖಗಳು. ಇಲ್ಲಿನ ರಸವೃತ್ತಗಳಲ್ಲಿ ನಾವು ಕಾಣುವುದು ದುಃಖದರ್ಶನದ ಅನಂತಮುಖಗಳು. ಅದೇ ಬದುಕಿನ ಸ್ಥಾಯಿಭಾವ; ಮಿಕ್ಕೆಲ್ಲವೂ ಸಂಚಾರಿಗಳು. ದುಃಖವೇ ಬದುಕನ್ನು ಪರಿಷ್ಕಾರಗೊಳಿಸುವ ತತ್ತ್ವ, ಪರಿಪಕ್ವಗೊಳಿಸುವ ತತ್ತ್ವ ಎಂಬುದು ಈ ಸಂಪುಟವನ್ನು ಆಸ್ವಾದಿಸುತ್ತಿದ್ದಂತೆಲ್ಲ ಮನವರಿಕೆಯಾಗುತ್ತದೆ.

ಈ ಆತ್ಮಕಥಾಗುಚ್ಛದ ನಾಯಕರತ್ನಗಳೆಲ್ಲ ಒಂದೊಂದೂ ಬಹುದೊಡ್ಡ ಜೀವಗಳು. ಬದುಕಿನ ಸುಖದುಃಖಗಳಿಂದ ಪರಿಪಕ್ವಗೊಂಡ ಜೀವಗಳು; ವಿವಿಧ ರಂಗಗಳಲ್ಲಿ ವಿದ್ವತ್ತನ್ನು ಸಂಪಾದಿಸಿಕೊಂಡು ಲೋಕಹಿತಕ್ಕಾಗಿ ಅದನ್ನು ಸಮರ್ಪಿಸಿದ ಜೀವಗಳು; ತಮ್ಮ ಸುಖ ಚಿಕ್ಕದು, ಪರರ ದುಃಖ ದೊಡ್ಡದು ಎಂದು ಭಾವಿಸಿಕೊಂಡು ಲೋಕೋಪಕಾರ ಮಾಡಿದ ಜೀವಗಳು; ಜೀವನದ ಜಂಜಡದ ಆವುಗೆಯಲ್ಲಿ ಬೆಂದು ಮನದ ಕಾಳಿಕೆಯನ್ನೆಲ್ಲ ಕಳೆದುಕೊಂಡ ಜೀವಗಳು; ತಮ್ಮ ಜೀವನವನ್ನು ಉಜ್ಜೀವನವನ್ನಾಗಿಸಿಕೊಂಡು ಬದುಕುತ್ತ ಲೋಕವು ಅನುಕರಿಸಬಹುದಾದಂತೆ ಮಾಡಿದ ಜೀವಗಳು. ಅಂತಹ ಪುಣ್ಯಜೀವಗಳ ಚರಿತೆಯನ್ನು ಒತ್ತಟ್ಟಿಗೆ ಜೋಡಿಸಿಕೊಟ್ಟು ಮಂದಿನ ಪೀಳಿಗೆಗೆ ಪ್ರಣತಾರ್ತಿಹರನ್ ಅವರು ಬಹುದೊಡ್ಡ ಉಪಕಾರ ಮಾಡಿದ್ದಾರೆ.

ಈ ಮಹಾಸಂಪುಟದಲ್ಲಿ ಏನುಂಟು, ಏನಿಲ್ಲ ! ಅಲ್ಲಿ ಸಂಕೇತಿಗಳು ನೆಲೆಗೊಂಡಿದ್ದ ಗ್ರಾಮಗಳ ಸಿಂಹಾವಲೋಕನವಿದೆ. ಸಂಕೇತಿಗಳು ಆ ಗ್ರಾಮಗಳನ್ನು ಅನಿವಾರ್ಯವಾಗಿ ತೊರೆದು ನಗರ, ಮಹಾನಗರ, ದೇಶವಿದೇಶಗಳನ್ನು ಸೇರಿಕೊಂಡ ನೋವಿನಚಿತ್ರಗಳಿವೆ. ಮಾಗಿದ ಹೃದಯಗಳ ಸ್ವಾನುಭವಭರಿತ ಉದ್ಗಾರಗಳು ಮನಸ್ಸನ್ನು ಕಲಕುತ್ತವೆ; ಕಲಕಿ ಕಲಕಿ ಒಳಗಿನ ಕೊಳೆಯನ್ನೆಲ್ಲ ತೊಳೆದು ಹೊರಹಾಕಿ ನಿರ್ಮಲಗೊಳಿಸುತ್ತವೆ.

ಕೆ.ಎಸ್. ಕೃಷ್ಣಮೂರ್ತಿಯವರ 'ಆಡಿದ ಹೊಲ, ಕಂಡ ವಿಚಾರ' ಓದುತ್ತಿದ್ದರೆ ಅಲ್ಲಿನ ಸನ್ನಿವೇಶಗಳೆಲ್ಲ ಲೇಖಕರ ವ್ಯಕ್ತಿಗತ ಹಂತದಿಂದ ಮೇಲೆದ್ದು ಸಾಧಾರಣೀಕರಣಗೊಂಡು, ಗ್ರಾಮಜೀವನವನ್ನುಂಡ ಸರ್ವ ಸಂಕೇತಿಗಳ, ಸರ್ವ ಕನ್ನಡಿಗರ ಸ್ವಾನುಭವಗಳಾಗಿ ಮೈಮರೆಸಿಬಿಡುತ್ತವೆ. ಈಗ ಕೈತುಂಬ ಚಿನ್ನವೇ ಸಿಕ್ಕಿದರೂ ಏನಾಯ್ತು, ಮರೆಯಾದುವಲ್ಲಾ ಆ ಚಿನ್ನದಂತಹ ದಿನಗಳು ಎಂಬ ನೀರವತೆ ಮನವನ್ನು ಆಕ್ರಮಿಸುತ್ತದೆ. ದೆವ್ವಭೂತಗಳು ಇವೆಯೆ ಎಂದು ಪ್ರಶ್ನಿಸುವವರ ಕುತೂಹಲವನ್ನು ತಣಿಸುವ ಸಾಮಗ್ರಿ ಅಲ್ಲಿ ಹದವಾಗಿ ಸೇರಿಕೊಂಡಿದೆ. ಕೆ.ಎಸ್. ಕೃಷ್ಣಮೂರ್ತಿಯವರದೇ 'ಜೀವನೋಲ್ಲಾಸ'ವೂ ಅತ್ಯಂತ ಮನೋಜ್ಞವಾಗಿದೆ. ಸಂಕೇತಿಗಳ ಬದುಕಿನಾನಂದದ ರಹಸ್ಯವೇನಿತ್ತು, ಸರಳವೂ ನಿರಾಡಂಬರವೂ ನಿರುಪದ್ರವಿಯೂ ಆದ ಅವರ ಜೀವನಮಾರ್ಗ ಎಷ್ಟು ಸುವಿಶಾಲವಾಗಿತ್ತು, ಅವರು ತಮ್ಮ ಬದುಕು ಏಕತಾನವಾಗದಂತೆ ವಿವಿಧತೆಯ ಮೆರುಗನ್ನು ಹೇಗೆ ನೀಡಿದ್ದರು, ಅವರು ರೂಢಿಸಿಕೊಂಡಿದ್ದ ದಿನಚರಿಯ ವೈಶಿಷ್ಟ್ಯಗಳೇನು, ಅವರ ಊಟೋಪಚಾರಪ್ರಿಯತೆಯ ಮರ್ಮವೇನು, ಅವರ ಧೀಮಂತಿಕೆಯ ಎತ್ತರಬಿತ್ತರಗಳೇನು ಎಂಬೆಲ್ಲ ವಿಚಾರಗಳ ರಸದರ್ಶನ ಅಲ್ಲಿ ನಮಗಾಗುತ್ತದೆ. ಕಾವ್ಯಮಯವೂ ಪ್ರಾಂಜಲವೂ ಆದ ಆ ನಿರೂಪಣೆ ಮತ್ತೆ ಮತ್ತೆ ಓದಬೇಕೆಂಬ ಹಂಬಲವನ್ನು ಹುಟ್ಟಿಸುತ್ತದೆ. ಆ ಗತವೈಭವವೆಲ್ಲ ಕಾಲಗರ್ಭದಲ್ಲಿ ಕಳೆದು ಹೋದರೂ

ಕೃಷ್ಣಮೂರ್ತಿಯವರ ಕೃತಿಕರ್ಮದಿಂದ ಮರುಹುಟ್ಟು ಪಡೆದು ಬಂತಲ್ಲ ಎಂಬ ಆನಂದ ಅಳಿಸಲಾಗದಂತೆ ನಿಲ್ಲುತ್ತದೆ.

ರಂಗಕಲಾವಿದನೊಬ್ಬನು ಜಗದ ಕಹಿಯನ್ನೆಲ್ಲ ನುಂಗಿಕೊಂಡು ನಂಜುಂಡನಾಗಿ, ಮೃತ್ಯುಂಜಯನಾಗಿ, ಲೋಕಪೂಜ್ಯನಾಗುವ ವೈಭವವನ್ನು ಸಾ.ನಾ. ಶ್ರೀಕಂಠಯ್ಯನವರ 'ಕಲೆಯ ಸನ್ನಿಧಿಯಲ್ಲಿ', ಸಹೃದಯರಿಗೆ ಕಟ್ಟಿಕೊಡುತ್ತದೆ. ಶ್ರೀಕಂಠಯ್ಯನವರು ನಾಟಕಕಾರ, ಅವರೇ ನಟ, ಅವರೇ ನಿರ್ದೇಶಕ, ಅವರೇ ಮಿಕ್ಕವರನ್ನು ಗುಡ್ಡೆಹಾಕಬೇಕು, ಅವರೇ ಎಲ್ಲರನ್ನೂ ತಯಾರೂ ಮಾಡಬೇಕು, ಇಷ್ಟೆಲ್ಲ ಆದ ಮೇಲೆ ಕಲಾಭಿಮಾನಿಗಳು ಭಲೇ, ಭೇಷ್ ಎನ್ನುವಂತೆ ಮುಗಿಸಬೇಕು. ಸುಮ್ಮನಾಯಿತೇ ಈ 'ದಶಾವತಾರ', ಬಡವನ ಪಾಲಿಗೆ ಬಿದ್ದೀತೇ ಆ 'ವಿಜಯಮಾಲೆ!' ಏನು ಬಹುಮುಖ ಪ್ರತಿಭಾವಂತರಪ್ಪಾ ಈ ಜನ ಎಂದು ಓದುತ್ತ ಓದುತ್ತ ನಾವು ಮೂಕವಿಸ್ಮಿತರಾಗುತ್ತೇವೆ. ಗಳಿಗೆಗೊಮ್ಮೆ ಪಂಚೆಯನ್ನು ಮೇಲೆತ್ತಿ ಕಟ್ಟುವ, ಮತ್ತೆ ಆಗಲೇ ಇಳಿಬಿಡುವ 'ಅಭ್ಯಾಸ'ವಿರುವ ಪುರುಷನಿಂದ ದ್ರೌಪದಿಯ ಪಾತ್ರ ಮಾಡಿಸುವುದೆಂದರೆ ಭಗೀರಥನೂ ಸೋತುಸುಣ್ಣವಾಗಬೇಕು! ಆದರೆ ಶ್ರೀಕಂಠಯ್ಯನವರು ಅಂಥದರಲ್ಲೂ ಜಯಗಳಿಸಿರುವ ಕಲಾತಪಸ್ವಿ! ಹಾಸ್ಯರಸದ ಹೊನಲೇ ಅಲ್ಲಿ ಹರಿದಿದೆ!

ಕವಿಹೃದಯಸಂಪನ್ನರಾದ ಆರ್.ವಿ. ಶ್ರೀನಿವಾಸಯ್ಯನವರ 'ಮಾಗಿದ ಬದುಕು' ಓದುವಾಗ ಯಾವುದೋ ಅಪೂರ್ವವಾದ ಲೋಕದಲ್ಲಿ ವಿಹಾರಮಾಡಿದ ದಿವ್ಯಾನುಭವ ನಮಗೆ ಲಭ್ಯವಾಗುತ್ತದೆ; ಗಾನವಿಮಾನದಲ್ಲಿ ನಾವು ತೇಲಾಡುತ್ತೇವೆ; ನಾವೂ ಕವಿತೆ ಬರೆಯಬಾರದೇಕೆ, ಪ್ರಣತಾರ್ತಿಹರನ್ ಅವರ ಕೈಗೆ ಕೊಡಬಾರದೇಕೆ ಎಂದೆಲ್ಲ ಆಸೆಯ ಗರಿಗಳನ್ನಲ್ಲಿ ಚಿಗುರಿಸಿಕೊಳ್ಳುತ್ತೇವೆ. ಬದುಕಿನ ದುಃಖದುಮ್ಮಾನಗಳನ್ನು ಕಾವ್ಯರಚನಾಸಕ್ತಿ ಹೇಗೆ ತಿಳಿಗೊಳಿಸಿಕೊಡುತ್ತದೆ ಎಂಬುದನ್ನು ಶ್ರೀನಿವಾಸಯ್ಯನವರ ಮಾಗಿದ ಬದುಕಿನಿಂದ ಅರ್ಥಮಾಡಿಕೊಳ್ಳುತ್ತೇವೆ. ಮೃದುಮಧುರವಾದ ಹಾಸ್ಯ ಉದ್ದಕ್ಕೂ ಉಕ್ಕುತ್ತದೆ.

ಕೆ.ಎಸ್.ವೆಂಕಟರಾಮಯ್ಯನವರ 'ಜೀವನಗಾಥ' ಎಂಬುದು ಬದುಕಿನ ದಿವ್ಯತೆ, ಭರವಸೆ, ಪ್ರಸನ್ನತೆಗಳಿಗೆ ಇಂಬುಕೊಡುವ ಮನೋಜ್ಞ ಘಟನೆಗಳಿಂದ ತುಂಬಿತುಳುಕುತ್ತಿದೆ. ತಾಳ್ಮೆಯೆಂಬುದು ಕಹಿಯಾದರೂ ಅದು ಹೇಗೆ ಬದುಕಿನಲ್ಲಿ ಮುಂದುಮುಂದಕ್ಕೆ ಸತ್ಫಲಗಳನ್ನು ನೀಡುತ್ತದೆಯೆಂಬುದನ್ನು ವೆಂಕಟರಾಮಯ್ಯನವರ ಬದುಕಿನ ಘಟನಾವಳಿಗಳಿಂದ ಕಲಿಯಬೇಕು. ಅವ್ಯಾಜ ಮಾನವಪ್ರೇಮಿಯೊಬ್ಬನು ಹೇಗಿರುತ್ತಾನೆ, ಗಾಂಧೀವಾದದಿಂದ ಪ್ರಭಾವಿತನಾದ ರಚನಾತ್ಮಕ ಕಾರ್ಯಕರ್ತನೊಬ್ಬನು ಹೇಗಿರುತ್ತಾನೆ, ಪ್ರಾಮಾಣಿಕವಾದ ಉಪಾಧ್ಯಾಯನೊಬ್ಬನು ಹೇಗಿರುತ್ತಾನೆ ಎಂಬ ಪ್ರಶ್ನೆಗಳಿಗೆಲ್ಲ ವೆಂಕಟರಾಮಯ್ಯನವರ ಜೀವನಗಾಥೆಯೊಂದು ಮಾದರಿ ಉತ್ತರ, ಅದೊಂದು ಜೀವಂತ ಆದರ್ಶ.

ಹೊಸಹೊಸದನ್ನು ಕಾಣುವ, ಹೊಸಹೊಸದನ್ನು ಕಟ್ಟುವ, ಹೊಸ ಹೊಸದನ್ನು ಕಲಿಸುವ ಮಹಾಪುರುಷರು ಹೊರಜಗತ್ತನ್ನು ಕಾಣುವ ದೃಷ್ಟಿ ಹೇಗಿರುತ್ತದೆ, ಅವರು ಸತ್ಯಶಿವಸುಂದರಗಳನ್ನು ತಮ್ಮ ಬದುಕಿನಲ್ಲಿ ಹೇಗೆ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ, ಅವರ ಹಿತೋಪದೇಶಗಳು, ಎಷ್ಟು ಚೇತೋಹಾರಿಯಾಗಿರುತ್ತವೆ ಎಂಬುದಕ್ಕೆ ರಾಮೇಶ್ವರ ಅವಧಾನಿಗಳ 'ತೇನ ವಿನಾ' ಸಾಕ್ಷಿಯಾಗಿದೆ.

ಒಬ್ಬ ಕಲಾರಾಧಕನ ಚಿತ್ತವೃತ್ತಿಗಳು ಹೇಗೆ ಪ್ರವಹಿಸುತ್ತವೆ, ಲೋಕದ ಜನರಿಂದ ಅವನು ಏನನ್ನು ಬಯಸುತ್ತಾನೆ, ಬಯಸಿದ್ದು ದೊರೆತಾಗ ಹೇಗೆ ಸಂತೋಷದಲ್ಲಿ ಮೈಮರೆಯುತ್ತಾನೆ, ವಿಷಮ ಸನ್ನಿವೇಶಗಳಲ್ಲಿ ಎರಗಿದ ನೋವನ್ನು ನುಂಗುವಾಗ ಹೇಗೆ ತಳಮಳಗೊಳ್ಳುತ್ತಾನೆ ಎಂಬ ಮನೋವಿಜ್ಞಾನವನ್ನೆಲ್ಲ ಅರಿಯುವ ಆನಂದ ನಮಗೆ ಹೊಸಹಳ್ಳಿ ಕೇಶವಮೂರ್ತಿಯವರ 'ಗಮಕ ಕಲಾರಾಧನೆ'ಯಿಂದ ಲಭ್ಯವಾಗುತ್ತದೆ.

ಮಾರ್ಕಂಡೇಯ ಅವಧಾನಿಗಳ 'ತುಂಗೆಯ ಮಡಿಲಲ್ಲಿ' ಈ ಸಂಪುಟದ ಅತಿದೊಡ್ಡ ರಸಾಯನ. ಹಿರಿಯರನ್ನು ಗೌರವಿಸುವ ಮೌಲ್ಯಕ್ಕೆ, ಅವರ ಬೇಕು ಬೇಡಗಳಿಗೆ ಸ್ಪಂದಿಸುವ ಕಾರ್ಯಕ್ಕೆ, ಅವರ ಜೀವನಾದರ್ಶಗಳನ್ನು ಉಪಾದೇಯವೆಂದು ತಮ್ಮ ಬದುಕಿಗೆ ಹೊಂದಿಸಿಕೊಳ್ಳುವ ಹಾರೈಕೆಗೆ ಮಾರ್ಕಂಡೇಯರ ತುಂಗೆಯ ಮಡಿಲಿಗೆ ಶರಣಾಗದೆ ಅನ್ಯಮಾರ್ಗವಿಲ್ಲ. ಅದನ್ನೊಂದು ಆತ್ಮಕಥೆಯೆನ್ನುತ್ತೀರಾ, ಆತ್ಮಕಥೆಯ ವೇಷದಲ್ಲಿರುವ ಕಾದಂಬರಿಯೆನ್ನುತ್ತೀರಾ, ಜೀವನಚಿತ್ರಗಳ ಲಲಿತಪ್ರಬಂಧ ಸಂಕಲನವೆನ್ನುತ್ತೀರಾ – ಏನಾದರೂ ಹೇಳಿ, ಅವೆಲ್ಲವೂ ತುಂಗೆಯ ಮಡಿಲಲ್ಲಿ ಮೆರುಗುವಡೆಯುತ್ತವೆ. ದೈವಕೃಪೆಯೆನ್ನುವುದು ಕೇವಲ ಕಾಕತಾಳೀಯವಲ್ಲ, ಅದು ಚಿತ್ತಗೋಚರವಾಗುವಂತೆ ಕಣ್ಣೆದುರಿಗೇ ನಿಚ್ಚಳವಾಗಿ ಅನಾವರಣಗೊಳ್ಳುವಂಥದು ಎಂಬುದನ್ನು ಅವಧಾನಿಗಳ ಸ್ವಾನುಭವಭರಿತ ಘಟನಾವಳಿಗಳಿಂದ ಮನವರಿಕೆ ಮಾಡಿಕೊಳ್ಳಬೇಕು. ರಥದಿಂದ ಉರುಳಿಕೊಂಡರೂ ಬದುಕಿ ಮೇಲೆದ್ದ ಬಾಲಕನ ವೃತ್ತಾಂತವನ್ನು ಅರಿಯಬೇಕು. ಅಗೋಚರ ಶಕ್ತಿಯೊಂದು ಹೇಗೆ ಸದಾಕಾಲ ನಮ್ಮ ಬೆಂಗಾವಲಾಗಿರುತ್ತದೆಯೆಂಬುದಕ್ಕೆ ಮಾರ್ಕಂಡೇಯ ಅವಧಾನಿಗಳು ಕಠಿಣವಾದ ಶಸ್ತ್ರಚಿಕಿತ್ಸೆಗೆ ಒಳಗಾದ ಸನ್ನಿವೇಶದಲ್ಲಿ ಅವರ ಕನಸಿನಲ್ಲಿ ಮೂಡಿಬಂದಂತಾದ ಶ್ಲೋಕವೊಂದನ್ನು ಪರಿಭಾವಿಸಬೇಕು. ತಮ್ಮ ಸಂಪರ್ಕಕ್ಕೆ ಬಂದವರನ್ನೆಲ್ಲ ಹೇಗೆ ತಮ್ಮ ಸಂಪ್ರೀತಿಯ ತೆಕ್ಕೆಗೆ ಅವರು ಸೆಳೆದುಕೊಂಡಿದ್ದಾರೆಂಬುದರಿಂದ ಪಾಠಕಲಿಯಬೇಕು. ತುಂಗೆಯ ಮಡಿಲಿನ ಎರಡು ಗ್ರಾಮಗಳ ಮನಮೋಹಕವಾದ ಅದೆಷ್ಟೋ ಶಬ್ದಚಿತ್ರಗಳು ಈ ಕಥನದಲ್ಲಿ ಅಪ್ರಯತ್ನಪೂರ್ವಕವಾಗಿ ಜೋಡಣೆಗೊಂಡಿವೆ.

ಈ ಸಂಪುಟದಲ್ಲಿ ಬಿಡಿಬಿಡಿಯಾದ ಜೀವನಚಿತ್ರಗಳಿದ್ದರೂ ಅವೆಲ್ಲವುಗಳಲ್ಲಿ ಯಾವುದೋ ಅವ್ಯಕ್ತವಾದ, ಗುಪ್ತಗಾಮಿನಿಯಾದ, ಲೋಕಮಂಗಳಕಾರಿಯಾದ ಸದಾಶಯಗಳು ನಿರ್ಮಲ ಗಂಗಾಧಾರೆಯಂತೆ ಶಾಂತವಾಗಿ ಹರಿಯುತ್ತಿರುವುದನ್ನು ಸಹೃದಯರು ಗುರುತಿಸಬಹುದಾಗಿದೆ. ಜೀವನೋತ್ಸಾಹ, ಜೀವನಪ್ರೀತಿಗಳನ್ನು ನವೀಕರಣಗೊಳಿಸುವ ಜೀವನಮೌಲ್ಯಗಳಿಂದ ಅವು ತುಂಬಿತುಳುಕುತ್ತಿವೆ.

ಧರ್ಮಾರ್ಥಕಾಮಮೋಕ್ಷೇಷು ವೈಚಕ್ಷಣ್ಯಂ ಕಲಾಸು ಚ
ಕರೋತಿ ಪ್ರೀತಿಂ ಕೀರ್ತಿಂ ಚ ಸಾಧುಕಾವ್ಯನಿಬಂಧನಮ್ ॥

ಎಂಬ ನಮ್ಮ ಕಾವ್ಯಮೀಮಾಂಸಕರು ಹೇಳುವ ಕಾವ್ಯಪ್ರಯೋಜನದ ಮಾತಿಗೆ ಕೊಂಚವೂ ಲೋಪವಿಲ್ಲದಂತೆ ಈ ಸಂಪುಟವು ಸಂಘಟಿತವಾಗಿದೆ.

ಕಥಾಕೋಶಗಳಲ್ಲಿ ಬರುವ ತ್ರಿವಿಕ್ರಮನೆಂಬುವವನು ತನ್ನ ಛಲಗಾರಿಕೆಗೆ ಪ್ರಸಿದ್ಧನಾಗಿದ್ದಾನೆ. ನಮ್ಮ ಪ್ರಣತಾರ್ತಿಹರನ್‌ರಾದರೋ ಆ ತ್ರಿವಿಕ್ರಮನನ್ನೂ ಹಿಂದೆಹಾಕಿರುವ ಛಲವಂತರೆಂದರೆ ಅತಿಶಯೋಕ್ತಿಯಲ್ಲ. ಇಷ್ಟೊಂದು ವೈವಿಧ್ಯಮಯವಾದ, ನವರಸಭಾವಗಳು ಉಕ್ಕಿಹರಿಯುವ, ಹೃದಯಸ್ಪರ್ಶಿಯಾದ, ಬೋಧಪ್ರದವಾದ ಕಥಾನಕಗಳನ್ನು ಸಂಪುಟವಾಗಿ ಒಗ್ಗೂಡಿಸಿ, ಕೆಲವನ್ನು ಈ ಸಂಪುಟಕ್ಕೆಂದೇ ಬರೆಯಿಸಿ ಮಾಡಿರುವ ಉಪಕಾರ ಎಷ್ಟು ಬಣ್ಣಿಸಿದರೂ ತೀರದು. ಯಾರೇ ಬಯಸಲಿ ಬಯಸದಿರಲಿ, ಯಾರೇ ಬೆನ್ನು ತಟ್ಟಲಿ ತಟ್ಟದಿರಲಿ, ಪ್ರಣತಾರ್ತಿಹರನ್ ಮಾತ್ರ ಇದೇ ನನ್ನ Life Mission ಎನ್ನುವ ಹಾಗೆ ಈ ಮಹತ್ಕಾರ್ಯಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ಎಲ್ಲ ಕನ್ನಡಿಗರೂ ಅವರ ಈ ಕರ್ಮಯೋಗಕ್ಕೆ ಕೃತಜ್ಞತೆಯನ್ನು ಸಲ್ಲಿಸಬೇಕಾಗಿದೆ.

ಈ ಸಂಪುಟದ ಸಂಪಾದಕರಾದ ಎನ್.ಎಸ್. ಶಾರದಾ ಪ್ರಸಾದ್ ಅವರಿಗೂ, ಕೆಲವು ಆತ್ಮಚರಿತ್ರೆಗಳನ್ನು ಮಾತಿನಿಂದ ಕೃತಿಗಿಳಿಸಿರುವ ಸೋದರಿ ಸುಮನಾವಿಶ್ವನಾಥ್ ಅವರಿಗೂ ಕೃತಜ್ಞತೆಗಳು ಸಲ್ಲಬೇಕಾಗಿದೆ.

ಈ ಸಂಪುಟದ ಎಲ್ಲ ಪುಟಗಳನ್ನೂ ತಪ್ಪದೆ ಓದಬೇಕು, ಓದುತ್ತಿರಬೇಕು, ಓದುತ್ತಲೇ ಇರಬೇಕು!

☆☆☆

ಆಕಾಶವಾಣಿ **ಡಾ॥ ಎಂ.ಎಸ್. ವಿಜಯಾ ಹರನ್**
ಮೈಸೂರು ನಿರ್ದೇಶಕರು

ಒಂದು ಜನ–ಸಮುದಾಯದ ಅಧ್ಯಯನದ ದೃಷ್ಟಿಯಿಂದ ಇದೊಂದು ಹೊಸ ಮಾದರಿ; ಅಧ್ಯಯನಶೀಲರ ಕುತೂಹಲದ ಕಣ್ಣಿಗೆ ತಾಜಾ ನಿದರ್ಶನ. ಕ್ಷೇತ್ರಕಾರ್ಯ ಮಾಡಿ ಸಂಗ್ರಹಿಸಬಹುದಾದ ವಿಷಯರಾಶಿಯು ಇಲ್ಲಿ ಇತಿವೃತ್ತಗಳ ಮೂಲಕ ಬಂದೊದಗಿದೆ. ಅತಿ ಪುಟ್ಟ ಸಮುದಾಯವಿದು; ಇಲ್ಲಿ ಎಲ್ಲರ ವೃತ್ತಾಂತಗಳೂ ಎಲ್ಲರಿಗೂ ತಿಳಿದಂಥವೇ. ಹಾಗಾಗಿ ಈಗಲೂ ನಮ್ಮೊಡನಿರುವ ಲೇಖಕರ ಸಮಕಾಲೀನರ ಸಮಕ್ಷಮದಲ್ಲಿ ಇದಕ್ಕೊಂದು ಅಧಿಕೃತತೆಯ ಮುದ್ರೆ ಬಿದ್ದಿದೆ; ಸಂಕೇತಿ ಅಧ್ಯಯನವನ್ನು ಕಾಲು ಶತಮಾನದಿಂದ ಮುಂದುವರಿಸಿಕೊಂಡು ಬಂದಿರುವ ಡಾ॥ ಬಿ.ಎಸ್. ಪ್ರಣತಾರ್ತಿಹರನ್ ಅವರು ತಮ್ಮ ಆಳವೂ ವ್ಯಾಪಕವೂ ಆದ ಅನುಭವದ ಹಿನ್ನೆಲೆಯಲ್ಲಿ ಅದನ್ನು ದೃಢಗೊಳಿಸಿದ್ದಾರೆ. ಶ್ರೀ ಎನ್.ಎಸ್. ಶಾರದಾ ಪ್ರಸಾದ್ ತಮ್ಮ ಕ್ಷ–ಕಿರಣದಂಥ ಅವಲೋಕನ ಸಾಮರ್ಥ್ಯದ ಮೂಲಕ ಅದನ್ನು ಸಾಕ್ಷಿಪ್ರಜ್ಞೆಯಿಂದ ಪರಿಷ್ಕರಿಸಿದ್ದಾರೆ. ಪುಟ್ಟಪುಟ್ಟ ವಿವರಗಳ ಕುಸುರಿ ಕೆಲಸಗಳ ಮಹಾರಾಶಿ ಇಲ್ಲಿದೆ; ಅವೆಲ್ಲ ಸೇರಿ ಅದ್ಭುತವಾದ ವಾಸ್ತುವೊಂದು ಇಲ್ಲಿ ನಿರ್ಮಾಣವಾಗಿದೆ. ಕತ್ತಲಲ್ಲಿ ಕರಗಿ ಹೋಗಬಹುದಾಗಿದ್ದ ವಿವರಗಳ ಮೇಲೆ ಬೆಳಕುಚಲ್ಲಿ ಒಂದು ಜೀವನವಿಧಾನವನ್ನೇ ಇಲ್ಲಿ ಕಟ್ಟಿಕೊಡಲಾಗಿದೆ. ಇದು ಒಂದು ಪುಟ್ಟ ಸಮುದಾಯದ ಸುಮಾರು ಎರಡು ಶತಮಾನಗಳ ದೀರ್ಘ ಕಾಲಾವಧಿಯ ಜೀವನ ಚಿತ್ರಣವಾಗಿದೆ; ಇದು ಹಲವು ಶತಮಾನಗಳ ವಿದ್ಯಮಾನದ ಮುಂದುವರಿಕೆಯಾದುದರಿಂದ ಇಲ್ಲಿ ಸಾಮಾಜಿಕ ಇತಿಹಾಸದ ಸುಳುಹೂ ಇದೆ; ಸುತ್ತಣ ಒಟ್ಟು ಸಮಾಜದ ಇರಸರಿಕೆಗಳ ಕಲ್ಪನೆಯನ್ನೂ ಇದು ಒಡಮೂಡಿಸುತ್ತದೆ. 'ಸಂಕೇತಿ ಅಧ್ಯಯನ'ದ ಹಲವು ಸಾರ್ಥಕ ಪ್ರಯೋಗಗಳಿಗೆ ಇದೊಂದು ಒಳ್ಳೆಯ ಸೇರ್ಪಡೆಯಾಗಿದೆ.

☆☆☆

ಭಾರತೀಯ ವಿದ್ಯಾಭವನ **ಡಾ॥ ಮತ್ತೂರು ಕೃಷ್ಣಮೂರ್ತಿ**
ಬೆಂಗಳೂರು ಕಾರ್ಯನಿರ್ವಾಹಕ ನಿರ್ದೇಶಕರು

ಮಾರ್ಕಂಡೇಯ ಅವಧಾನಿಗಳು ಹೊರತೆಗೆದಿರುವ ನೆನಪಿನ ಮೂಲೆಯಲ್ಲಿಯೂ ತಾವು ಕಂಡ ತಮ್ಮೂರಿನ ಹಿರಿಯರ ವ್ಯಕ್ತಿವಿಶೇಷಗಳು ಹೆಚ್ಚಾಗಿವೆ! ಹಾಗೆ ಹಿರಿಯರ ವಿಷಯಗಳನ್ನು ಹೇಳುವಾಗ ತಾವು ಯಾರಿಗೂ ಹೇಗೂ ನೋವುಂಟು ಮಾಡುತ್ತಿಲ್ಲವಷ್ಟೇ ಎನ್ನುವುದು ಇವರ ಅಮಿತ ಕಾಳಜಿ, ಧರ್ಮಭೀರುತನ! ಆದರೆ ಇಲ್ಲಿನ ವ್ಯಕ್ತಿಚಿತ್ರಗಳು ಯಾವುವೂ ಕಾಲ್ಪನಿಕವಲ್ಲ. ಎಲ್ಲವನ್ನೂ ಎಲ್ಲರನ್ನೂ ಇವರು ಕಂಡು–ಕೇಳಿರುವಂಥದು. ವಾಸ್ತವವನ್ನು ಹೇಳಿರುವಂಥದು. ನಿಜಕ್ಕೂ. . . . . ಬಹಳ ಪ್ರೀತಿಯಿಂದ ತಮ್ಮೂರಿನ ಹಿರಿಯರ ಬಗ್ಗೆ ಹೇಳಿರುವುದು 'ತುಂಗೆಯ ಮಡಿಲಲ್ಲಿ'ನ ಅವಳ ಎಲ್ಲ ಮಕ್ಕಳನ್ನೂ ನೆನೆದಂತೆ ಇದೆ! ನಮ್ಮೂರಿನ ಚಿತ್ರ ತೆಗೆದಿರಿಸಿದಂತಿದೆ! ಈ ಚಿತ್ರ ಎಲ್ಲರ ಮೆಚ್ಚುಗೆಗೆ ಪಾತ್ರವಾಗುವಂತಿದೆ ಎಂದು ನನ್ನ ನಂಬಿಕೆ.

☆☆☆

ಹಾಸನ **ಡಾ. ಎಸ್.ಕೆ.ಸುಶೀಲಾಬಾಯಿ**
ವೈದ್ಯೆ

ಸಂಕೇತಿ ಅಧ್ಯಯನದ ಐದನೇ ಸಂಪುಟ ಓದುತ್ತಿದ್ದೇನೆ. ಅತೀವ ಸಂತೋಷವಾಗುತ್ತಿದೆ. ಆಯಾ ಬರಹಗಾರರ ಹಸ್ತಲಿಪಿ ಮತ್ತು ಹಸ್ತಾಕ್ಷರ ಎರಡೂ ಇದ್ದರೆ ಬಹಳ ಚೆನ್ನಾಗಿರುತ್ತಿತ್ತು ಎನ್ನಿಸುತ್ತಿದೆ... ಏಕೆಂದರೆ ಹಸ್ತಾಕ್ಷರ ಮತ್ತು ಲಿಪಿ ಶಾಶ್ವತವಾಗಿ ಇರುತ್ತವೆ. ಫೋಟೋಗಳಿಗಿಂತಲೂ ಹೆಚ್ಚಾಗಿ ವ್ಯಕ್ತಿತ್ವವನ್ನು ಬಿಂಬಿಸುತ್ತವೆ.

****

ಕೆ. ರಾಘವೇಂದ್ರರಾವ್, ಮೈಸೂರು

'ಮಾಗಿದ ಬದುಕು' ಓದುತ್ತಿದ್ದರೆ ಯಾವುದೋ ಅಪರಿಚಿತ ಕಾಲಸನ್ನಿವೇಶದಲ್ಲಿ ಓಡಾಡಿದ ಅನುಭವವಾಗುತ್ತದೆ. ಅದೊಂದು ವಿಶಿಷ್ಟ ಅನುಭವ. ಸಕಾರಾತ್ಮಕವಾದ ಬದುಕು ಅದು. ಪೂರ್ತಿಯಾಗಿಯೂ ಸಕಾರಾತ್ಮಕವಾದುದು. 'ಸಂಕೇತಿ ಸಂಪದ'ದಲ್ಲಿ ಕೆ.ಎಸ್. ಕೃಷ್ಣಮೂರ್ತಿಯವರು ಸಂಕೇತಿ ಬದುಕಿನ ಯಥಾವತ್ ಚಿತ್ರಣವನ್ನು ಸಮರ್ಥವಾಗಿ ಕೊಟ್ಟಿದ್ದಾರೆ. ಅವರು ಚಿತ್ರಿಸಿರುವ ಆ ಬದುಕಿನ ವಿವರಗಳು ಈಗ ಬಹುಪಾಲು ನಶಿಸಿಹೋಗಿರಬಹುದು. ನಗರೀಕರಣದ ಪರಿಣಾಮ ಮಾತ್ರವಲ್ಲ, ಆಧುನಿಕತೆಯ ಪರಿಣಾಮವೂ ಅದು ಹೌದು. ಪಗಡೆ ಮತ್ತು ನಶ್ಯದ ಬಗೆಗೆ ಅವರು ಒಂದೊಂದು ಪರಿಚ್ಛೇದ ರಚಿಸಿದ್ದರೆ ಆ ಬದುಕಿನ ಚಿತ್ರಣ ಪೂರ್ಣಗೊಳ್ಳುತ್ತಿತ್ತು.

ಆ. ಸಂಕೇತಿ ಅಧ್ಯಯನ

ಕೋ. ಚನ್ನಬಸಪ್ಪ

ಬೆಂಗಳೂರು — ಹಿರಿಯ ಸಾಹಿತಿ ಮತ್ತು ನಿವೃತ್ತ ನ್ಯಾಯಾಧೀಶರು

ತಮ್ಮೊಳಗಿನ ಪ್ರತಿಭೆಯನ್ನು ಚೆನ್ನಾಗಿ ದುಡಿಸಿಕೊಳ್ಳುವವರು ಸಂಕೇತಿಗಳು. ಅಪಾರ ಶ್ರಮವಹಿಸಿ ಸಾಧನೆಯ ಎತ್ತರಗಳನ್ನು ಅವರು ಕಂಡುಕೊಳ್ಳುತ್ತಾರೆ. ಸಂಗೀತ ವೇದಮಾತ್ರವಲ್ಲ ನ್ಯಾಯವೇತ್ತರಾಗಿ, ವಿಜ್ಞಾನಿಗಳಾಗಿ, ತಂತ್ರಜ್ಞರಾಗಿ... ಅವರು ಮುಟ್ಟಿರುವ ಎತ್ತರಗಳ ಹಿಂದಿನ ಗುಟ್ಟು ಅದು.

☆☆☆

ಎಂ.ವಿ. ಶಂಕರ್

ಮೈಸೂರು — ಲೆಕ್ಕ ಪರಿಶೋಧಕರು

ಹಿಂದಿನ ತಲೆಮಾರಿನವರು ಒಂದು ತಪಸ್ಸಿನಂತೆ ಮಾಡಿದ ಸಾಧನೆಗಳು ಅನೇಕವು ದಾಖಲಾಗಲೇ ಇಲ್ಲ. ಹಾಗೆ ದಾಖಲಿಸುವ ಸೌಲಭ್ಯಗಳೂ ಆಗ ಇರಲಿಲ್ಲ. ಈಗ ತಂತ್ರಜ್ಞಾನ ಬಹಳ ಮುಂದುವರಿದಿದೆ. Documentation ಗೆ ಬಹಳ ಅವಕಾಶವಿದೆ.... ಪುಸ್ತಕರೂಪದಲ್ಲಿ ದಾಖಲಾದ ಈ ಮಾಹಿತಿ ಮುಂದಿನ ತಲೆಮಾರಿನವರಿಗೆ ಪ್ರಯೋಜನಕ್ಕೆ ಬರುತ್ತದೆ. ಕೇವಲ ಮಾಹಿತಿಗಲ್ಲ, ಸ್ಫೂರ್ತಿಗೂ ಇದು ಆಕರವಾಗುತ್ತದೆ.

☆☆☆

ಹಿರೇಮಗಳೂರು ಕಣ್ಣನ್

ಹಿರೇಮಗಳೂರು — ಖ್ಯಾತ ಚಿಂತಕರು ಮತ್ತು ಪ್ರವಚನಕಾರರು

ಈ ಪುಸ್ತಕಗಳ ಸಿದ್ಧತೆಗೆ ಅದೆಷ್ಟು ಶ್ರಮವಹಿಸಿದ್ದೀರಿ ! ನಿಮ್ಮಕೆಲಸವನ್ನು ಅದೆಷ್ಟು ಗಂಭೀರವಾಗಿ ತೆಗೆದುಕೊಂಡಿದ್ದೀರಿ! ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡುತ್ತಿರುವ ಅನೇಕ ಪ್ರಾಧ್ಯಾಪಕ ಮಿತ್ರರಿಗೆ ಈ 'ಮಾದರಿ'ಯ ಬಗೆಗೆ ಹೇಳಿ ಗಮನ ಸೆಳೆದಿದ್ದೇನೆ.

☆☆☆

ಡಾ॥ ಟಿ.ವಿ. ವೆಂಕಟಾಚಲ ಶಾಸ್ತ್ರೀ

ಮೈಸೂರು — ಖ್ಯಾತ ಸಂಶೋಧಕರು

'ಸಂಕೇತಿ ಅಧ್ಯಯನ'ದ ನಿಮ್ಮ ಕೆಲಸ ಒಂದು ದಾಖಲೆಯಾಗಿದೆ, it is a record....

☆☆☆

ದೇಜಗೌ

ಮೈಸೂರು — ಖ್ಯಾತ ಸಾಹಿತಿಗಳು

ಹೀಗೆ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಬೇಕಾದದ್ದೇ,ಅದರಲ್ಲಿ ಅನುಮಾನವಿಲ್ಲ.

☆☆☆

ಲೇಖಕಿ : ಶ್ರೀಮತಿ ಸುಮನಾವಿಶ್ವನಾಥ್*

ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಹಾಗೂ, ಹಿಂದಿ ಭಾಷೆಯಲ್ಲಿ ರಾಷ್ಟ್ರಭಾಷಾ ನಿಷ್ಣಾತ್ ಪದವೀಧರೆ. 'ಕ್ಷೇತ್ರದರ್ಶನ' ಎಂಬ ಪ್ರವಾಸಕಥನದಿಂದ ಪ್ರಾರಂಭವಾಗಿರುವ ಇವರ ಸಾಹಿತ್ಯದ ಕೆಲಸ ಡಾ॥ ಮತ್ತೂರು ಕೃಷ್ಣಮೂರ್ತಿ, ಶ್ರೀ ಮಾರ್ಕಂಡೇಯ ಅವಧಾನಿ, ಶ್ರೀ ಎಚ್.ಆರ್. ಕೇಶವಮೂರ್ತಿ, ಡಾ॥ ದೇ. ಜವರೇಗೌಡ, ಪ್ರೊ॥ ಸುಜನಾ – ಈ ಎಲ್ಲಾ ಹಿರಿಯರು, ತಮ್ಮ ತಮ್ಮ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಳು ಸೇರಿದಂತೆ ಮಾಡಲಾಗಿರುವ 'ಜೀವನ ಚಿತ್ರಣ'ದವರೆಗೆ ಮುಂದುವರದಿದೆ. 'ಗಮಕ ಕಲಾಭೂಷಣ' – ಗಮಕತಪಸ್ವಿ ಶ್ರೀ ಎಚ್.ಕೆ. ರಾಮಸ್ವಾಮಿಯವರ ಜೀವನಚಿತ್ರಣ. ಪ್ರಸ್ತುತ ಶ್ರೀಮತಿ ಸುಮನಾವಿಶ್ವನಾಥರು ಶ್ರೀ ವಿಶ್ವಕವಿ ಕುವೆಂಪು ಪ್ರಥಮದರ್ಜೆ ಕಾಲೇಜು, ಮೈಸೂರು, ಇಲ್ಲಿ ಇಂಗ್ಲಿಷ್ ಭಾಷಾ ಉಪನ್ಯಾಸಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಮಹಾತ್ಮಾಗಾಂಧೀ ಸಾಹಿತ್ಯದ ಬಗ್ಗೆ ವಿಶೇಷ ಅಧ್ಯಯನ ನಡೆಸುತ್ತಿದ್ದಾರೆ. ಪ್ರಕೃತ ಸಂಪುಟದಲ್ಲಿ ಅಳವಡಿಸಿಕೊಳ್ಳಲಾಗಿರುವ 'ಗಮಕಗಂಧರ್ವ' ಮತ್ತು 'ತುಂಗೆಯ ಮಡಿಲಲ್ಲಿ' ಕೃತಿಗಳನ್ನು ನಿರೂಪಿಸಿರುವವರು ಶ್ರೀಮತಿ ಸುಮನಾ ವಿಶ್ವನಾಥ್. ಪತಿ ಶ್ರೀ ಟಿ. ಎಸ್. ವಿಶ್ವನಾಥ್, ಕೈಗಾರಿಕೋದ್ಯಮಿ; ಮಗ ಶ್ರೀಶಶಾಂಕ್ ವಿ. ಶ್ರೀವತ್ಸ (*ನಿಧನ : 03–08–2014 – ಸಂ)

ಸಂಪಾದಕರು


ಎನ್.ಎಸ್. ಶಾರದಾ ಪ್ರಸಾದ್ (ನಂಜನಗೂಡು ಸತ್ಯನಾರಾಯಣ ಶಾರದಾ ಪ್ರಸಾದ್)*

ಶ್ರೀ ಎನ್.ಆರ್. ಸತ್ಯನಾರಾಯಣ ಮತ್ತು ಶ್ರೀಮತಿ ಅನ್ನಪೂರ್ಣಮ್ಮ ಅವರ ಪುತ್ರ ; ಬಿ.ಎಸ್‌ಸಿ., ಎಂ.ಎ. (ಕನ್ನಡ), ಸ್ನಾತಕೋತ್ತರ ಭಾಷಾಂತರ ಡಿಪ್ಲೊಮ, ಸೀನಿಯರ್ ಡಿಪ್ಲೊಮ ಇನ್ ಜರ್ಮನ್, ಎಂ.ಫಿಲ್. (ಭಾಷಾಂತರ) ಪದವಿ; 1966ರಿಂದ ಮಾನಸ ಗಂಗೋತ್ರಿಯ ರಸಾಯನಶಾಸ್ತ್ರ ವಿಭಾಗದಲ್ಲಿ ಸೇವೆ; 1969ರಿಂದ 2004ರವರೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕಿರಿಯ ಭಾಷಾಂತರಕಾರ, ಸಂಶೋಧನ ಸಹಾಯಕ, ಹಿರಿಯ ಭಾಷಾಂತರಕಾರರಾಗಿ ಸೇವೆ; ಸಂಪಾದನೆ, ಭಾಷಾಂತರ ಕಾರ್ಯಗಳಲ್ಲಿ ಪರಿಣತಿ : 100ಕ್ಕೂ ಅಧಿಕ ಪಠ್ಯಪುಸ್ತಕಗಳ ಪರಿಷ್ಕರಣ, ಸಂಪಾದನೆ; ಆಡಳಿತ ಭಾಷೆಯಾಗಿ ಕನ್ನಡ ಅನುಷ್ಠಾನದ ತರಬೇತಿ ಕಾರ್ಯಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ, ಶಿಬಿರ ನಿರ್ದೇಶಕರಾಗಿ ಕಾರ್ಯನಿರ್ವಹಣೆ; ಐ.ಪಿ.ಎಸ್. ಅಧಿಕಾರಿಗಳಿಗೆ ಕನ್ನಡ ಪರಿಚಯಿಸಲು ಕರ್ನಾಟಕ ಪೊಲೀಸ್ ಅಕಾಡೆಮಿಯ ಅತಿಥಿ ಉಪನ್ಯಾಸಕರು; ಭಾಷಾಂತರದ ಕನ್ನಡ ಪ್ರತಿನಿಧಿಯಾಗಿ ಆಂಧ್ರಪ್ರದೇಶ, ಕೇರಳ, ತಮಿಳುನಾಡಿನಲ್ಲಿ ಭಾಗವಹಿಸಿದ್ದಾರೆ; ಭಾರತದ ಪ್ರೌಢ ಇತಿಹಾಸ (An Advanced History of India: ಆರ್.ಸಿ. ಮಜುಂದಾರ್, ರಾಯ್‌ಚೌಧರಿ, ಕಾಳೀಕಿಂಕರದತ್ತ), ಧರ್ಮಶಾಸ್ತ್ರದ ಇತಿಹಾಸ ಸಂ. 1, ಸಂ. 2 (ಪಿ.ವಿ. ಕಾಣೆ ಅವರ History of Dharmashastra : ಪ್ರೊ॥ ಎಸ್.ಕೆ. ರಾಮಚಂದ್ರರಾವ್ ಜತೆ ಅನುವಾದ); ಭಾರತೀಯ ಕಥೆಗಳು (ಭಾರತದ ವಿವಿಧ ಭಾಷೆಗಳಿಂದ) ಪ್ರಮುಖ ಕೃತಿಗಳು. ನಿಯತ ಕಾಲಿಕಗಳಲ್ಲಿ 50ಕ್ಕೂ ಹೆಚ್ಚು ಅನುವಾದಿತ ಕತೆಗಳು ಪ್ರಕಟವಾಗಿವೆ. ಇವು ಅವರ ಭಾಷಾಂತರ ಸಾಮರ್ಥ್ಯಕ್ಕೆ ನಿಚ್ಚಳ ನಿದರ್ಶನಗಳು.

'ಡಾ॥ ಹಾ.ಮಾ. ನಾಯಕ ಅವರನ್ನು ಕುರಿತು' ಎಂಬುದು ಸಂಪಾದಿತ ಕೃತಿ. ಮಕ್ಕಳ ಕೃತಿಗಳ ಭಾಷಾಂತರವನ್ನೂ ಮಾಡಿದ್ದಾರೆ. ಅಧ್ಯಾತ್ಮದಲ್ಲಿ ಹೆಚ್ಚು ಒಲವು; ಗೌತಮಗೋತ್ರ, ಯಜುರ್ವೇದ, ಆಪಸ್ತಂಬಸೂತ್ರ.

ಪತ್ನಿ ಶ್ರೀಮತಿ ಸವಿತಾಪ್ರಸಾದ್ ಬಿ.ಎ., ತಮಿಳು ಹಾಗೂ ತೆಲುಗು ಭಾಷೆಗಳಲ್ಲಿ ಪರಿಶ್ರಮ ಉಳ್ಳವರು; ಕೆಲವು ಧಾರ್ಮಿಕ ಕೃತಿಗಳನ್ನು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ; ಶ್ರೀಮತಿ ಲಕ್ಷ್ಮೀಪಾರ್ವತಿಯವರ ತೆಲುಗು ಕಾದಂಬರಿ 'ಶ್ರಮಣಕಂ' ಅನುವಾದ ಡಿಸೆಂಬರ್ 2004ರಲ್ಲಿ ಪ್ರಕಟವಾಗಿದೆ. ತಂದೆ : ವಿಜಯನಾರಸಿಂಹ ಕನ್ನಡ ಚಿತ್ರಗಳಿಗಾಗಿ ಸಹಸ್ರಾರು ಜನಪ್ರಿಯಗೀತೆಗಳನ್ನೂ ಭಕ್ತಿಗೀತೆಗಳನ್ನೂ ರಚಿಸಿದವರು; ಕಾದಂಬರಿಕಾರರು, ನಾಟಕಕಾರರು; ತಾಯಿ: ಸರಸ್ವತಿ ಕಥೆಗಾರ್ತಿ, ಆಕಾಶವಾಣಿ ನಾಟಕಕಾರ್ತಿ; ಧಾರ್ಮಿಕ ವಿಷಯಗಳನ್ನು ಕುರಿತು ಈಗಲೂ ಬರೆಯುತ್ತಿರುವ ಶಕ್ತ ಲೇಖಕಿ. ಎನ್.ಎಸ್.ಎಸ್. ಅವರ ಮಕ್ಕಳು: ಎನ್.ಎಸ್. ಅರ್ಚನಾ ಪ್ರಸಾದ್ ಬಿ.ಇ., ಇನ್‌ಫೋಸಿಸ್‌ನ ಲಂಡನ್ ಕೇಂದ್ರದಲ್ಲಿ ಉದ್ಯೋಗಿ (ಪತಿ ಡಾ॥ ವಿ. ನರಸಿಂಹ ಪ್ರಸಾದ್, ಎಫ್.ಆರ್.ಸಿ.ಎ., ಇಂಗ್ಲೆಂಡ್‌ನಲ್ಲಿ ಅರಿವಳಿಕೆತಜ್ಞ); ಎನ್.ಎಸ್. ಸುದತ್ತ ಗೌತಮ್ ಎಂ.ಸಿ.ಎ., ಅಮೆರಿಕದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್, ಪತ್ನಿ ಪ್ರದೀಪ ಎ, ಎಂ.ಸಿ.ಎ., ಸಾಫ್ಟ್‌ವೇರ್ ಇಂಜಿನಿಯರ್); ಎನ್.ಎಸ್. ಸಂದೀಪ ಗೌತಮ್ ಎಂ.ಬಿ.ಎ., ಉದ್ಯಮಿ.

*ಜನನ 20–05–1946 : ನಿಧನ 20–1–2015



ಸಂಪುಟ 6
ಸಂಕೇತಿ : ಆತ್ಮಕಥೆಗಳು
ಸಂ : ಸುಮನಾ ವಿಶ್ವನಾಥ್

೧ ನಿವೇದನೆ

ಈ ಮಾಲಿಕೆಯ ಆರನೆಯ ಸಂಪುಟವು ಸಂಕೇತಿ ಸಮುದಾಯದಿಂದ ಬಂದ ಐದು ಆತ್ಮಕಥೆಗಳ ಸಂಕಲನವಾಗಿದೆ. ಈಗಾಗಲೇ ಬಂದಿರುವ 'ಸಂಕೇತಿ: ಇತಿವೃತ್ತಗಳು' ಎಂಬ ಹೆಸರು ಹೊತ್ತ ಐದನೆಯ ಸಂಪುಟವೂ ಆತ್ಮಕಥೆಗಳ ಸಂಕಲನವೇ ಆಗಿದೆ. ಆದರೆ ವ್ಯಕ್ತಿಯ ಆತ್ಮಚರಿತ್ರೆಯನ್ನು ಆಧಾರವಾಗಿಟ್ಟುಕೊಂಡು ಸಮುದಾಯಜೀವನದ ವಿಸ್ತಾರವಾದ ಚಿತ್ರ ಕೊಡುವ ಕೃತಿಗಳನ್ನು 'ಇತಿವೃತ್ತಗಳು' ಎಂದು ಪ್ರತ್ಯೇಕಿಸಲಾಗಿದೆ. 'ಆತ್ಮಕಥೆ' ಎಂದು ಹೆಸರಿಸಿರುವ ಕೃತಿಗಳೂ ಸಮುದಾಯಜೀವನದ ಚಿತ್ರವನ್ನು ಅಯಾಚಿತವಾಗಿ ಕೊಟ್ಟೇಕೊಡುತ್ತವೆ. ಇತಿವೃತ್ತಗಳಲ್ಲಿಯೂ ವ್ಯಕ್ತಿಜೀವನದ ಸಾಧನಾಪಥವೊಂದು ಇದ್ದೇ ಇರುತ್ತದೆ. 'ಇತಿವೃತ್ತ' ಮತ್ತು 'ಆತ್ಮಕಥೆ'ಯ ನಡುವೆ ಇರುವ ರೇಖೆಯು ತೆಳುವಾದುದೂ ಅನಿಶ್ಚಿತವಾದುದೂ ಆಗುವ ಸಂದರ್ಭಗಳು ಇಲ್ಲದಿಲ್ಲ. ಪ್ರಕೃತ ಸಂದರ್ಭದಲ್ಲಿ ಏಕೋದ್ದೇಶದ ಪ್ರಖರ ತಪಸ್ಸು ಇಲ್ಲಿನ ಆತ್ಮಕಥೆಗಳ ನಿಚ್ಚಳ ಲಕ್ಷಣವಾಗಿದೆ.

"ಸಂಗೀತದ ಹುಚ್ಚು ಹಿಡಿದಾಗಲೇ ನಾನು ಅತ್ಯಂತ ಆನಂದವಾಗಿರುವುದು" ಇದು 'ಸಂಗೀತಗಾರನ ಮೆಲುಕುಗಳು' ಎಂಬ ಕೃತಿಯಲ್ಲಿ ಬರುವ ಸಾರಭೂತವಾದ ಮಾತು. ಇದು ಇಡೀ ಸಂಪುಟದ ಪ್ರಾತಿನಿಧಿಕ ಮಾತೂ ಆಗಬಹುದು. ಅದು ಪಾಂಡಿತ್ಯದ ಹುಚ್ಚೋ, ಸಮಾಜಸೇವೆಯ ಹುಚ್ಚೋ, ರಾಷ್ಟ್ರಭಕ್ತಿಯ ಹುಚ್ಚೋ ಆಗಬಹುದಾದುದಷ್ಟೇ ಇಲ್ಲಿ ಕಾಣುವ ಭಿನ್ನತೆ.

******

ಭಾರತದ ಸಂಗೀತಶಾಸ್ತ್ರಜ್ಞರೂ ಸಂಗೀತಕಲಾವಿದರೂ ಬಹು ಗೌರವದಿಂದ ಪರಿಗಣಿಸುವ 'ರಾಗನಿಧಿ'ಯ ಕರ್ತೃವಿನ ನೆನಪಿನ ಬುತ್ತಿ 'Musings of a Musician'. ಲೇಖಕರಾದ ಬಿ. ಸುಬ್ಬರಾವ್ ಅವರೇ ಹೇಳಿರುವಂತೆ ಅದನ್ನು ಅವರು ವಿರಾಮದ ವೇಳೆಯಲ್ಲಿ ಮೆಲುಕು ಹಾಕಿ ಆತ್ಮಸಂತೋಷಕ್ಕಾಗಿ ಬರೆದಿಟ್ಟಿದ್ದಾರೆ. (Recollected During Leisure and Recorded for Pleasure). ಅದನ್ನು ಅವರು 'Part One' ಎಂದು ನಮೂದಿಸಿದ್ದಾರೆ. ಪ್ರಾಯಶಃ ಸುಬ್ಬರಾಯರು ಬರೆದದ್ದು ಈ ಒಂದು ಭಾಗವನ್ನು ಮಾತ್ರ, ನಮಗೆ ಲಭ್ಯವಾಗಿರುವುದು ಇದೊಂದು ಭಾಗವೇ.

ಈ ಕೃತಿಯ ಹಸ್ತಪ್ರತಿ ಸುರಕ್ಷಿತವಾಗಿ ಉಳಿದುಬಂದಿರುವುದರ ಯಶಸ್ಸು ಡಾ॥ ಮೀರಾಮೂರ್ತಿ ಅವರಿಗೆ ಸಲ್ಲಬೇಕು. ಸುಬ್ಬರಾಯರಿಗೆ ಸಂಬಂಧಿಸಿದ ಹಲವು ದಾಖಲೆಗಳನ್ನು ಅವರು ಸಂರಕ್ಷಿಸಿ ಇಟ್ಟಿದ್ದಾರೆ. ಕೇವಲ 'ರಾಗನಿಧಿ'ಯ ಕರ್ತೃವಿನ ನೆನಪಿನ ಬುತ್ತಿ ಎಂಬುದಕ್ಕಾಗಿ ಅಲ್ಲ, ಅದರಲ್ಲಿರುವ ಅಮೂಲ್ಯ ಮಾಹಿತಿಗಾಗಿಯೇ ಈ ಕೃತಿಯು ತನಗೆ ತಾನೇ ಪ್ರಾಮುಖ್ಯದ್ದಾಗಿದೆ. ನಾಜೂಕಿನ ಹಾಳೆಯಲ್ಲಿ ಸೀಸದ ಕಡ್ಡಿಯಲ್ಲಿ ಬರೆದ ಈ ಕೃತಿ ನಾಶವಾಗಿ ಹೋಗಲು ಸುಲಭ ಕಾರಣಗಳಿದ್ದುವು.

ಖ್ಯಾತ ಸಂಗೀತವಿಮರ್ಶಕ ಶ್ರೀ ಕೆ. ರಾಘವೇಂದ್ರರಾವ್ ಅವರು ಈ ಅಪೂರ್ವಕೃತಿಯ ಬಗೆಗೆ ಸಮುದಾಯ ಅಧ್ಯಯನ ಕೇಂದ್ರವನ್ನು ಎಚ್ಚರಿಸಿದ್ದು ಇಲ್ಲಿಗೆ ಹತ್ತು ವರ್ಷಗಳ ಹಿಂದೆ. ಸಮುದಾಯ ಅಧ್ಯಯನ ಕೇಂದ್ರದ ಕೋರಿಕೆಯ ಮೇರೆಗೆ ಡಾ॥ ಮೀರಾಮೂರ್ತಿಯವರು ಅದನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟೇ (ಸಂಗೀತಗಾರನ ಮೆಲುಕುಗಳು) ಎರಡು ವರ್ಷಗಳು ಕಳೆದಿವೆ. ಮೀರಾಮೂರ್ತಿಯವರು ನಾಟಕಕ್ಷೇತ್ರದಲ್ಲಿ ಪರಿಣತರು, ಸಂಗೀತಕ್ಷೇತ್ರದಲ್ಲಿಯೂ ಪರಿಶ್ರಮವಿರುವವರು ಮತ್ತು ಆಸಕ್ತರು. ಅನುವಾದಕಾರ್ಯದಲ್ಲೂ ಸಿದ್ಧಹಸ್ತರು. ಈ ಕೃತಿಯ ಅನುವಾದದಲ್ಲಿಯೂ ಸರಳವೂ ಸಹಜವೂ ಆದ ಅವರ ಭಾಷಾಂತರದ ಅಭಿವ್ಯಕ್ತಿಯನ್ನು ಕಾಣಬಹುದು.

ಸುಬ್ಬರಾಯರು ಹೊಸ ರಾಗವನ್ನು ರೂಪಿಸಿದ್ದಾರೆ, ವಾಗ್ಗೇಯ ಕೃತಿಗಳನ್ನು ರಚಿಸಿದ್ದಾರೆ, ಪ್ರಾತ್ಯಕ್ಷಿಕೆಗಳನ್ನು ನೀಡಿದ್ದಾರೆ, ವಿದ್ವದ್ಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ, ಪರಿಣತ ತೀರ್ಪುಗಾರರಾಗಿದ್ದಾರೆ, ಹೊಸ ವಾದ್ಯವನ್ನು ರೂಪಿಸಿದ್ದಾರೆ.... ಹೀಗೆ ಅವರ ಸಾಧನೆಗಳ ಪಟ್ಟಿ ಬೆಳೆಯುತ್ತದೆ. ಈ ಸಾಧನೆಗಳ ಬೇರು ಇರುವುದು ಅವರ ತಂದೆ ರಾಮಸ್ವಾಮಿಯವರ ದೂರದರ್ಶಿತ್ವದಲ್ಲಿ. ಒಬ್ಬ ವ್ಯಕ್ತಿ ಹೇಗೆ ಹಲವು ಹೂವುಗಳನ್ನು ಅರಳಿಸಬಹುದು ಎಂಬುದಕ್ಕೆ ಮಾದರಿಯಾದವರು ಅವರು. ಈ ಪೀಠಿಕಾರೂಪದ ಶ್ರಮದ ಸಾರ್ಥಕಪುಷ್ಪ ಸುಬ್ಬರಾಯರು.

ರಾಮಸ್ವಾಮಿಯವರು ಹೊತ್ತಿಸಿದ ಸಂಗೀತದಾಹದ ಕಿಡಿ ಸುಬ್ಬರಾಯರಲ್ಲಿ ಹೇಗೆ ಪ್ರಖರವಾಗಿ ಮುಂದುವರಿಯಿತು ಎಂಬುದನ್ನೇ ಈ ಕೃತಿಯಲ್ಲಿ ನಾವು ಕಾಣುವಂಥದು. ಸಂಗೀತವನ್ನು ಕಲಿಯುವ, ಆ ಸಂಬಂಧದಲ್ಲಿ ಒಡನಾಡುವ, ಚರ್ಚಿಸುವ, ಪ್ರದರ್ಶಿಸುವ, ಆಕರ್ಷಿಸುವ, ಶಿಕ್ಷಣ ನೀಡುವ, ಪ್ರೋತ್ಸಾಹಿಸುವ, ಚಿಂತಿಸುವ ಯಾವ ಅವಕಾಶವನ್ನೂ ಅವರು ಕಳೆದುಕೊಳ್ಳಲಿಲ್ಲ; ಇನ್ನೂ ಸರಿಯಾಗಿ ಹೇಳುವುದಾದರೆ, ಅಂಥ ಅವಕಾಶಗಳನ್ನು ಅವರು ಸೃಷ್ಟಿಸಿಕೊಂಡರು, ಆ ತಪಸ್ಸಿನ ಕಥೆಯೇ ಇಲ್ಲಿರುವುದು.

ಸುಮಾರು ಒಂದು ನೂರು ವರ್ಷಗಳ ಸಾಂಸ್ಕೃತಿಕ ಸಡಗರವನ್ನು ನಾವಿಲ್ಲಿ ಕಾಣುತ್ತೇವೆ. ಗುಣಗ್ರಾಹಿಯಾಗಿ ಮಾತ್ರವಲ್ಲ, ನಿಷ್ಪಕ್ಷಪಾತವಾಗಿಯೂ ನಿಷ್ಠುರವಾಗಿಯೂ ಸತ್ಯವನ್ನು ಹಿಡಿದು ಸಾಗುವ ಪಥಸಂಚಲನ ಇಲ್ಲಿದೆ. ಸಂಗೀತದಿಗ್ಗಜಗಳ ಮೆರವಣಿಗೆ ಇದು. ಈ ದೇಶದ ಸಾಂಸ್ಕೃತಿಕ ಚರಿತ್ರೆಗೆ ಅಗತ್ಯವಾಗಿ ಸೇರಬಹುದಾದ ಭಾಗ ಇದು. ಮಾತ್ರವಲ್ಲ, ಅದರ ಇನ್ನೊಂದು ಭಾಗವೂ ಇಲ್ಲಿದೆ: "ಈ ಮುಂದಿನ ಪುಟಗಳಲ್ಲಿ ನೀವು ಕಾಣುವ ದಾಖಲಾತಿಯಲ್ಲಿ ನನ್ನ ಕನಸು ಹಾಗೂ ಹಂಬಲಗಳು ಸಾಫಲ್ಯ ಕಂಡಿವೆ" ಎಂದಿದ್ದಾರೆ ಲೇಖಕರು. ಈ ಸಾಫಲ್ಯಗಳಲ್ಲಿ ಮುಖ್ಯವಾದುದು 'ಹೀಗೆ ಸಂಗೀತದಲ್ಲಿ ತೊಡಗಿರುವಾಗ' ಅವರು ಅನುಭವಿಸುವ 'ಮೋಕ್ಷಾನಂದಸ್ಥಿತಿ'ಯೇ ಆಗಿದೆ. ಸಾಮಾನ್ಯ ಓದುಗನೂ ಕೊನೆಯಪಕ್ಷ ಈ ನೆನಪಿನ ಸಂಗೀತಯಾತ್ರೆಯಲ್ಲಿ ಒಂದು ಹೊಸ ಮೋದವನ್ನಂತೂ ಪಡೆಯುತ್ತಾನೆ. ಕೇವಲ 'ರಾಗನಿಧಿ' ಯಂಥ ಶಾಸ್ತ್ರೀಯ ಗ್ರಂಥದ ರಚನೆಯಲ್ಲಲ್ಲ, ಈ ಆತ್ಮಕಥನದಲ್ಲೂ ಸುಬ್ಬರಾಯರು ತಮ್ಮ ಲೇಖನಶಕ್ತಿಯನ್ನು ತೋರಿದ್ದಾರೆ. ಹಾಸ್ಯ, ವ್ಯಂಗ್ಯ, ಚಿತ್ರಕತೆ, ವಿಮರ್ಶೆ ಎಲ್ಲಕ್ಕೂ ಇಲ್ಲಿ ಎಡೆ ದೊರೆತಿದೆ. ಲೇಖಕರು ಸಂಗೀತವನ್ನೇ ಸ್ಥಾಯಿಯಾದ ಮನೋಧರ್ಮವಾಗಿ ಇಟ್ಟುಕೊಂಡಿದ್ದುದಕ್ಕೂ, ಅವರ ಅಭಿವ್ಯಕ್ತಿಯ ಲಕ್ಷಣಕ್ಕೂ, ಅಲ್ಲಲ್ಲಿ ಕಾಣುವ ತಾತ್ತ್ವಿಕ ಅಭಿವ್ಯಕ್ತಿಗೂ ನಿದರ್ಶನವಾಗಿ ಈ ಸಾಲುಗಳನ್ನು ನೋಡಬಹುದು. ಭಿಕಾರಿ ಎನ್ನಬಹುದಾದ ಯುವಕನೊಬ್ಬ ಸೊಗಸಾಗಿ ಹಾಡಿದ ಠುಮ್ರಿಯ ಬಗೆಗೆ ಅವರು ತೆಗೆದಿರುವ ಉದ್ಗಾರ ಇದು: "ಈ ತರುಣಕಾಬೂಲಿಯ ಸಂಗೀತದ ಬಗ್ಗೆ ನನಗೂ ತಿಳಿಯಬಾರದಾಗಿತ್ತೆ! ತಿಳಿದಿದ್ದರೆ ನಾನೂ ಪ್ರತಿರಾತ್ರಿ ಹೋಗುತ್ತಿದ್ದೆ ಇವನ ಸಂಗೀತ ಕೇಳಲು. ಅವರು ಅಲೆಮಾರಿ ಬದುಕು ಬದುಕುತ್ತಿದ್ದರಾದರೂ ಅವರೆಷ್ಟು ಆನಂದವಾಗಿದ್ದರು, ಸಂಗೀತ ಅವರೊಡನೆ ಎಷ್ಟು ಆನಂದವಾಗಿತ್ತು! ದೇವಿ ಸರಸ್ವತಿ ಐಶ್ವರ್ಯಕ್ಕಿಂತಲೂ ಕಾರ್ಪಣ್ಯವನ್ನೇ ತನ್ನ ನಿವಾಸಕ್ಕೆ ಇಷ್ಟಪಡುವಳೋ ಏನೋ!" ಇಂಥ ಆನಂದಾನುಭವದ ಯಾತ್ರೆಯೇ ಈ ಕೃತಿ.

****

'ಪಂಡಿತರೊಡನೆ' ಎಂಬುದು 'ಲಿಂಗದಹಳ್ಳಿಯ ಅವಧೂತ' ಎನಿಸಿದ ವೇ.ಬ್ರ.ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳ ಆತ್ಮಕಥೆ. ನರಸಿಂಹಮೂರ್ತಿಶಾಸ್ತ್ರಿಗಳು ಯಜುರ್ವೇದ ಪಂಡಿತರು; ಋಗ್ವೇದ, ಯಜುರ್ವೇದಗಳೆರಡರಲ್ಲೂ ಪ್ರಯೋಗನಿಪುಣರು; ಸಾಹಿತ್ಯ, ಅಲಂಕಾರ, ವೇದಾಂತ, ತರ್ಕ, ವ್ಯಾಕರಣ, ಜ್ಯೌತಿಷ ಹೀಗೆ ಒಂದೊಂದರಲ್ಲೂ ವಿದ್ವತ್ ಪರೀಕ್ಷೆಗಳಲ್ಲಿ ಉನ್ನತೋನ್ನತ ಶ್ರೇಣಿಯಲ್ಲಿ ಜಯಭೇರಿ ಬಾರಿಸಿದವರು. ತಮ್ಮ ವಿದ್ಯಾರ್ಜನೆಯ ಪರ್ವವನ್ನು ಮುಗಿಸಿದಾಗ ಅವರಿಗೆ 40 ವರ್ಷ! ಐದು ವರ್ಷಗಳಲ್ಲಿ ಮುಗಿಸಬಹುದಾದ ವ್ಯಾಕರಣಾಧ್ಯಯನವನ್ನು ಮೂರೇ ವರ್ಷಗಳಲ್ಲಿ ಮುಗಿಸಿದವರು ಅವರು; ಇಂಥ ವೇಗದಲ್ಲಿ ಅವರು ಉನ್ನತ ಅಧ್ಯಯನ ಮಾಡಿದ್ದು ಕಾಲು ಶತಮಾನದ ಕಾಲ!

96 ವರ್ಷದ ಶಾಸ್ತ್ರಿಗಳು ಈಗಲೂ ಪಾಣಿನಿಯ ವ್ಯಾಕರಣವನ್ನು ಮೊದಲಿಂದ ಕೊನೆಯವರೆಗೆ ಸ್ಮರಣೆಯಿಂದ ಹೇಳಬಲ್ಲರು, ವಿದ್ವಾಂಸರೊಂದಿಗೆ ಚರ್ಚಿಸಬಲ್ಲರು, ಕ್ಲಿಷ್ಟ ಭಾಗಗಳ ಜಿಜ್ಞಾಸೆಯಲ್ಲಿ ತೊಡಗಬಲ್ಲರು. ಅವರಿಗೆ 95 ವರ್ಷವಾಗಿದ್ದಾಗ ಪ್ರತಿಷ್ಠಿತ ರಾಷ್ಟ್ರೀಯ ವಾಕ್ಯಾರ್ಥ ಗೋಷ್ಠಿಯಲ್ಲಿ ಭಾಗವಹಿಸಿ ಆರೂ ಶಾಸ್ತ್ರಗಳಲ್ಲೂ ಏಕಮೇವಾದ್ವಿತೀಯ ಪಂಡಿತರಾಗಿ ಪ್ರಜ್ವಲಿಸಿ ಪ್ರಶಸ್ತಿಗಳಿಸಿದ ಪ್ರಸಂಗವು ಈ ಆತ್ಮಕಥನದಲ್ಲಿ ಸೇರಿಲ್ಲ! ಅವರಿಗೆ ಆ ಕಾಲಕ್ಕಿದ್ದ ವಿದ್ವತ್ ಪರಿಸರದ ಚಿತ್ರವು ಈ ಕೃತಿಯಲ್ಲಿ ದೊರೆಯುತ್ತದೆ.

ನರಸಿಂಹಮೂರ್ತಿಶಾಸ್ತ್ರಿಗಳಂಥ ಅಂತರ್ಮುಖಿಯನ್ನು ತಮ್ಮ ಮನೆಗೆ ಕರೆದು ಆದರಿಸಿ ಅವರಿಂದ ಇಷ್ಟು ಮಾಹಿತಿಯನ್ನು ಸಂಗ್ರಹಿಸಿರುವ ಬೀ.ಚಿ. ಜಗನ್ನಾಥ ಜೋಯಿಸರು ವಾಣಿಜ್ಯಶಾಸ್ತ್ರವನ್ನು ಅಭ್ಯಾಸಮಾಡಿ ಬ್ಯಾಂಕಿನ ಅಧಿಕಾರಿಯಾಗಿ ದುಡಿಯುತ್ತಿರುವಂಥವರು. ಇಂಥ ಮಹಾಪಂಡಿತರ ಅಂತರಾಳವನ್ನು ತಿಳಿಯುವ ಅಭೀಪ್ಸೆ ಮೂಡಿತೆಂದರೆ ಜಗನ್ನಾಥ ಜೋಯಿಸರು ವಂದ್ಯರೇ ಸರಿ.

ಇದೊಂದು ಪುಟ್ಟ ಕಥನ. ಶಾಸ್ತ್ರಿಗಳು ವಿಸ್ತಾರವಾಗಿ ನಿರೂಪಿಸಬಹುದಾಗಿದ್ದರೆ ಆ ಕಾಲದ ವಿದ್ವತ್ ಪ್ರಪಂಚದ ಚಿತ್ರಣವೇ ಬಹು ರೋಚಕವಾದ ಓದಿಗೆ ಒದಗಬಹುದಾಗಿತ್ತು. ಒಟ್ಟು ಬದುಕಿನ ವ್ಯಾಪಕವಾದ ಚಿತ್ರವನ್ನೂ ಅವರು ಕೊಡಬಹುದಾಗಿತ್ತು. ಈ ಅದಮ್ಯ ಕುತೂಹಲವನ್ನು ಮೂಡಿಸಿರುವವರು ಜಗನ್ನಾಥ ಜೋಯಿಸರು.

****

'ನನ್ನ ಬದುಕು' ಎಂಬುದು ಖ್ಯಾತ ವೈಣಿಕ ಆರ್. ಎನ್. ದೊರೆಸ್ವಾಮಿ ಅವರ ಆತ್ಮಕಥನ. ಪ್ರಾಮಾಣಿಕವಾಗಿ, ಸರಳವಾಗಿ, ನೇರವಾಗಿ ತಮ್ಮ ಕಥೆಯನ್ನು ನಿರೂಪಿಸಿರುವುದು ಈ ಗ್ರಂಥದ ದೊಡ್ಡಗುಣ. ಆ ಕಾರಣಕ್ಕಾಗಿಯೇ ಸಮುದಾಯ ಅಧ್ಯಯನ ಕೇಂದ್ರವು ಅದನ್ನು ಮೆಚ್ಚಿಕೊಂಡಿತು; ಅವರನ್ನು ಕಂಡು ಪ್ರಣಾಮಗಳನ್ನರ್ಪಿಸಿತು. ಆರ್. ಎನ್. ಡಿ. ಅವರ ಬಗೆಗಿನ ಸ್ತುತ್ಯಮಾಹಿತಿಯ ಬಹುಪಾಲು ಪ್ರಕಟವಾಗದೆ ಹಾಗೆಯೇ ಉಳಿದಿದೆ ಎಂಬುದನ್ನು ಕಂಡುಕೊಂಡಿತು. ಈ ಕುತೂಹಲವು ಕಟ್ಟೆಯೊಡೆದು 'ಮಹತೀ' ಎಂಬ ಅಭಿನಂದನ ಗ್ರಂಥವಾಗಿ ಹೊರಬಂದಿತು. ಆರ್. ಎನ್. ಡಿ. ಅವರ ವಿಸ್ತೃತ ಆತ್ಮಕಥನವೂ ಅದರಲ್ಲಿ ಸೇರಿತು. ಅವರನ್ನು ಅರಿಯಬಹುದಾದ ವೈವಿಧ್ಯಪೂರ್ಣ ಮಾಹಿತಿ ಅದರಲ್ಲಿ ಸೇರಿತು. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಬಹುಮಾನವೇ ಅವರಿಗೆ ಸಂದಿತು.

ಆರ್. ಎನ್. ಡಿ. ಅವರು ಸಂಗೀತಕಲಾಕಾರನಾಗಬೇಕೆಂದು ಸಂಕಲ್ಪಿಸಿದ್ದು ತಾವಲ್ಲ, ಅವರ ತಂದೆಯವರು. ಸಾಂಪ್ರದಾಯಿಕ ಶಿಕ್ಷಣವನ್ನು ತೊರೆದು ಆಧುನಿಕ ಶಿಕ್ಷಣದೆಡೆಗೆ ಇಡೀ ದೇಶವೇ ಮುಖಮಾಡತೊಡಗಿದ್ದ ಕಾಲ ಅದು. ಸ್ವತಃ ಅವರ ತಂದೆ ನಾರಾಯಣಸ್ವಾಮಿಯವರೂ ಇದಕ್ಕೆ ಹೊರತಾಗಿರಲಿಲ್ಲ. ಆದರೆ ಈ ಹೊಸ

ಸೆಳೆತದ ಆಕರ್ಷಣೆಯನ್ನು ನಿಗ್ರಹಿಸಿ ತಮ್ಮ ಮಗನು ಸಂಗೀತಗಾರನೇ ಆಗಬೇಕೆಂದು ಅವರು ಸಂಕಲ್ಪಿಸಿದ್ದು ಒಂದು ವಿಶೇಷ. ರುದ್ರಪಟ್ಟಣದವರಾದ ಅವರಿಗೆ ಸಂಗೀತದ ಬಗೆಗೆ ಅಚಲಭಕ್ತಿ ಇದ್ದುದು ಸಹಜವೇ ಆಗಿತ್ತು. ಆದರೆ ದೂರದ ತಮಿಳುನಾಡಿನಲ್ಲಿ ಸಂಗೀತ ಶಿಕ್ಷಣಕ್ಕಿದ್ದ ಸೌಲಭ್ಯದ ಮಾಹಿತಿಯನ್ನು ಸಂಗ್ರಹಿಸಿದ್ದೂ, ಪುಟ್ಟ ಬಾಲಕನನ್ನು ಅಲ್ಲಿಗೆ ದಾಖಲಿಸಿದ್ದೂ ಆ ಕಾಲದ ಸೌಲಭ್ಯದ ದೃಷ್ಟಿಯಿಂದ ಹೆಚ್ಚಿನದೇ ಆಗಿತ್ತು. ಎಂಥ ಎಡರುಗಳು ಬಂದರೂ, ಮಗನು ಆಸ್ಥಾನವಿದ್ವಾಂಸನೆನಿಸುವವರೆಗೂ ಹೋರಾಡಿದ್ದು ಎಲ್ಲ ಕಾಲಕ್ಕೂ ಮಾದರಿ ಎನಿಸಬಹುದಾದ ಒಂದು ಛಲವೇ ಆಗಿತ್ತು.

ಸಂಗೀತ ವಿದ್ವಾಂಸನಾಗಬೇಕೆಂಬ ಹಿರಿದಾದ ಗುರಿ ಇಟ್ಟುಕೊಂಡು ಶಾಲಾಶಿಕ್ಷಣವನ್ನು ತ್ಯಜಿಸಿದ ಆರ್.ಎನ್.ಡಿ.ಅವರು ವಿಘ್ನಪರಂಪರೆಯನ್ನೇ ಎದುರಿಸಬೇಕಾಯಿತು. ಅವರ ಸಂಗೀತಸಾಧನೆಯ ಮಾರ್ಗದ ವಿಘ್ನಗಳೂ, ಅವರು ಬಹುಆಚಾರ್ಯರನ್ನು ಆಶ್ರಯಿಸಬೇಕಾಗಿ ಬಂದುದೂ ವ್ಯರ್ಥಸಾಹಸಗಳಾಗಲಿಲ್ಲ. ಸಾಧಾರಣಪಥದಲ್ಲಿ ಕೇವಲ ಕಲಾಕಾರರಾಗಬಹುದಾಗಿದ್ದ ಅವರು ಸಂಗೀತಶಾಸ್ತ್ರಜ್ಞರಾದರು, ವಾಗ್ಗೇಯ ಕಾರರಾದರು, ಒಳ್ಳೆಯ ಶಿಕ್ಷಕರೂ ಆದರು, ಅವೆಲ್ಲದರ ಜತೆಗೆ ಕಲೋಪಾಸನೆಯೊಂದೇ ಧ್ಯೇಯವೆಂಬುದನ್ನು ಕರಗತ ಮಾಡಿಕೊಂಡ ಪಕ್ವಜೀವಿಯಾದರು. ಜೀವನವನ್ನು ಸಮಚಿತ್ತದಿಂದ ನಿರ್ವಹಿಸುವ ಸ್ನೇಹಜೀವಿಯಾದರು.

ಪಾರಂಪರಿಕವಾಗಿ ವೇದಾಧ್ಯಯನವನ್ನೂ ತೋಟಗಾರಿಕೆಯನ್ನೂ ತಪಸ್ಸಿನಂತೆ ನಿರ್ವಹಿಸಿಕೊಂಡು ಆಧ್ಯಾತ್ಮಿಕ ನೆಲೆಯಲ್ಲೇ ವಿಹರಿಸುತ್ತಾ ನೆಮ್ಮದಿಯಿಂದಿದ್ದುದು ಸಂಕೇತಿ ಸಮುದಾಯ; ಆಧುನಿಕ ಶಿಕ್ಷಣದೊಂದಿಗೆ ಪ್ರವೇಶಿಸಿದ ಹೊಸ ಸಾಹಸಸಾಧ್ಯತೆಗಳ ಸ್ಥಿತ್ಯಂತರದ ಬದುಕಿಗೆ ಹೊಂದಿಕೊಳ್ಳಲಾಗದೆ ಅದು ಮೊದ ಮೊದಲು ತತ್ತರಿಸಿ ಹೋದ ವಾಸ್ತವದ ಪ್ರತಿನಿಧಿಯಾಗಿ ಆರ್.ಎನ್.ಡಿ. ಅವರ ತಂದೆಯವರು ಇದ್ದಾರೆ. ಸಂಕೇತಿ ಅಧ್ಯಯನದ ಭಾಗವಾಗಿ ಬರುತ್ತಿರುವ ಈ ಎಲ್ಲ ಕಥನಗಳಲ್ಲೂ ಅಂಥ ಮಾಹಿತಿಯು ಹೇರಳವಾಗಿ ದೊರೆಯುವುದನ್ನು ಅಧ್ಯಯನಾಸಕ್ತರು ಗಮನಿಸಬಹುದಾಗಿದೆ.

ಪ್ರಕೃತ ಕಥನದಲ್ಲಿ ಆರ್. ಎನ್. ಡಿ. ಅವರ ಅಧ್ಯಯನಸಾಹಸದ ವಿವರವಿದೆ. ಆದರೆ ಕಲೆಯ ಬಗೆಗಿನ ಸೂಕ್ಷ್ಮ ವಿಶ್ಲೇಷಣೆ ಇಲ್ಲಿಲ್ಲ, ಆಗಿನ ಸಂಗೀತ ದಿಗ್ಗಜಗಳ ನಡುವೆ ತಾವು ವಿಶೇಷವಾಗಿ ನಿಲ್ಲುವ ನೆಲೆಯಮೇಲೆ ಬೆಳಕು ಚೆಲ್ಲಿಲ್ಲ. ವೀಣಾವೆಂಕಟಗಿರಿಯಪ್ಪನವರ ಪ್ರಖರ ಶಿಷ್ಯರಲ್ಲಿ ವೀಣಾ ದೊರೆಸ್ವಾಮಿ ಅಯ್ಯಂಗಾರ್ಯರ ಜೊತೆಗೆ ಇದ್ದವರು ಆರ್. ಎನ್. ದೊರೆಸ್ವಾಮಿಯವರು. ಗುರುಗಳು ಅವರಿಬ್ಬರನ್ನೂ ತಮ್ಮ ಎರಡು ಕಣ್ಣುಗಳು ಎಂದು ಪ್ರಶಂಸಿಸುತ್ತಿದ್ದರು. ಆ ಹೆಮ್ಮೆಯ ಅನಾವರಣ ಇಲ್ಲಿ ಆಗಿಲ್ಲ. ಆರ್. ಎನ್.ಡಿ. ಮೆದುಹೃದಯಿ. ತಮ್ಮ ಗುರುಗಳನ್ನು ಸ್ಮರಿಸುತ್ತಿದ್ದಂತೆಯೇ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಗದ್ಗದಿತರಾಗುತ್ತಿದ್ದಂಥವರು, ಅವರ ಕೊನೆಯ ದಿನಗಳವರೆಗೂ ಅವರು ಈ ಭಾವಕೋಮಲತೆಯನ್ನು ಉಳಿಸಿಕೊಂಡಿದ್ದರು. ಅದರಿಂದಾಗಿಯೇ ಅವರು ತಮ್ಮ ಆತ್ಮಕಥನದಲ್ಲಿ ತಮ್ಮ ಕಲಾ ಔನ್ನತ್ಯವನ್ನು ಸಾರುವ ವಿವರಗಳನ್ನು ಬರೆಯುವಗೊಡವೆಗೆ ಹೋಗಲಾಗಲಿಲ್ಲವೆ ಎಂಬುದು ಒಂದು ಊಹೆ ಮಾತ್ರ. ಆದರೆ ಅವರಿಗೆ ಇದ್ದ ಕಲಾಸಿದ್ಧಿ ಮತ್ತು ಔನ್ನತ್ಯದ ಪರಿಚಯದ ಆ ಭಾಗವು 'ಮಹತೀ' ಅಭಿನಂದನ ಗ್ರಂಥದ ಇತರ ಲೇಖನಗಳಲ್ಲಿ ಕಾಣಿಸುತ್ತದೆ. ತಾವೇ ಬರೆದ ವೈಚಾರಿಕ ಮತ್ತು ಶಾಸ್ತ್ರೀಯ ಲೇಖನಗಳಲ್ಲಿಯೂ, ಇತರರು ತಮ್ಮ ಬಗೆಗೆ ಬರೆದ ಲೇಖನಗಳಲ್ಲಿಯೂ ಆ ಅಂಶವು ವ್ಯಕ್ತವಾಗಿರುವುದರಿಂದಲೇ ಆರ್. ಎನ್. ಡಿ. ಆತ್ಮಕಥೆಯಲ್ಲಿ ಅದನ್ನು ಪ್ರಸ್ತಾಪಿಸಲು ಸಂಕೋಚಪಟ್ಟಿದ್ದಾರು. ಅದೂ ಒಂದು ಸಾಧ್ಯತೆ ಮಾತ್ರ.

ಆರ್.ಎನ್.ಡಿ. ಎಂಥ ದೊಡ್ಡ ವಿದ್ವಾಂಸರು, ಕಲಾಸೂಕ್ಷ್ಮವನ್ನರಿತವರು, ತಾತ್ತ್ವಿಕ ನೆಲೆಯಲ್ಲಿ ಉಪಸ್ಥಿತರಿದ್ದವರು ಎಂಬುದು ಮಾತ್ರವಲ್ಲ, ಅವರೆಂಥ ವಿನಯಶೀಲ, ಗುಣಗ್ರಾಹಿ, ವಿಶಾಲಹೃದಯಿ ಮತ್ತು ಭಾಷೆಯನ್ನು ಎಷ್ಟು ಚೆನ್ನಾಗಿ ಬಳಸಬಲ್ಲ ಲೇಖಕ ಎಂಬುದೂ ಅವರ ಲೇಖನಗಳಲ್ಲಿ ವ್ಯಕ್ತವಾಗುತ್ತದೆ.

* * * * *

ಮೇಜರ್ ಎಚ್. ಸಿ. ವೇಣುಗೋಪಾಲ್ ಅವರು ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಗಾಂಧೀಜಿಯ ಅನುಯಾಯಿಯಾಗಿಯೂ ಭೂಗತ ಹೋರಾಟಗಾರರಾಗಿಯೂ ಮಾಡಿದ ಚಳವಳಿಯ ವಿವರವು 'ಸೈನಿಕನ ನೆನಪುಗಳು' ಎಂಬ ಗ್ರಂಥದಲ್ಲಿದೆ. ಯೋಧರಾಗಿ ಭಾಗವಹಿಸಿದ ಹೋರಾಟಗಳು ಮತ್ತು ಮಾಡಿದ ಸುಧಾರಣೆಗಳ ವಿವರಗಳೂ ಇದರಲ್ಲಿ ಸೇರಿವೆ.

ಪರಮವಿಶಿಷ್ಟ ಸೇವಾ ಪದಕಕ್ಕಾಗಿ ಮಣಿಪುರ ಐ.ಜಿ.ಪಿ. ಅವರು ಮಾಡಿದ ದೀರ್ಘವಾದ ಶಿಫಾರಸುಪತ್ರದ ಕೊನೆಯ ಸಾಲುಗಳು ಇವು, "ಆತ್ಮಸಾಕ್ಷಿಯುಳ್ಳ, ಪ್ರಾಮಾಣಿಕರಾದ, ಕಾರ್ಯಶೀಲರಾದ, ಧೈರ್ಯವಂತ ಅಧಿಕಾರಿಯಾದ ಮೇಜರ್ ವೇಣುಗೋಪಾಲ್ ತಮ್ಮ ಬೆಟಾಲಿಯನ್ನಿನ ಹಲವು ವಿಭಾಗಗಳ ಕಾರ್ಯವಿಧಾನದಲ್ಲಿ ಅಪಾರವಾದ ಸುಧಾರಣೆಗಳನ್ನು ಮಾಡಿದ್ದಾರೆ. ಬಹುದೂರಸ್ಪರ್ಶಿಯಾದ ಕಾರ್ಯಾಚರಣೆಗಳನ್ನು ಸಾಧಿಸಿದ್ದಾರೆ. ತಮ್ಮ ಮಿಷನರಿ ಉತ್ಸಾಹ ಮತ್ತು ಬಹು ಉನ್ನತವರ್ಗದ ಅರ್ಪಣಾ ಮನೋಭಾವದಿಂದ ತಮ್ಮ ಯೂನಿಟ್ಟಿನ ವ್ಯಾಪ್ತಿಯಲ್ಲಿ ಬರುವ ಸ್ಥಳೀಯರ ವಿಶ್ವಾಸವನ್ನೂ ಸದ್ಭಾವನೆಯನ್ನೂ ಸಂಪಾದಿಸಿದರು". ವೇಣುಗೋಪಾಲ್ ಪಡೆದ ತರಬೇತಿಯ ಒಂದು ಮುಖ್ಯಭಾಗ 'ಮಾಡುವ ಕೆಲಸದಲ್ಲಿ ಹೆಮ್ಮೆ ಪಟ್ಟುಕೊಳ್ಳಬೇಕೆಂಬುದನ್ನು' ಕಲಿಸಿದ್ದು. ಎಂ.ಎನ್. ಜೋಯಿಸ್, ಟಿ. ಸಿದ್ದಲಿಂಗಯ್ಯ, ಎಸ್. ನಿಜಲಿಂಗಪ್ಪ, ನಿಟ್ಟೂರು ಶ್ರೀನಿವಾಸರಾವ್ ಅಂಥವರ ನಿಕಟಸಂಪರ್ಕದಲ್ಲಿದ್ದು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ಅವರು.

ಯುದ್ಧರಂಗವು ಸಂಕೇತಿ ಸಮುದಾಯಕ್ಕೆ ಹೊಸದಲ್ಲ. ಕತ್ತಿಹಿರಿದು ರಣರಂಗದಲ್ಲಿ ಭೀಕರವಾಗಿ ಕಾದಿದ ಕ್ಷಾತ್ರತೇಜಿಗಳ ವಿವರಗಳು ಸಂಕೇತಿ ಸಮುದಾಯದ ವಂಶಚರಿತ್ರೆಗಳಲ್ಲಿ ಧಾರಾಳವಾಗಿ ಸಿಗುತ್ತವೆ. ತಿರುವಾಂಕೂರು ಸಂಸ್ಥಾನದ ನಿರ್ಮಾತೃಗಳಲ್ಲಿ ಪ್ರಮುಖರಾಗಿದ್ದವರು ಈ ಸಮುದಾಯಕ್ಕೆ ಸೇರಿದ ದಳವಾರಾಮಯ್ಯರ್; ಮುಮ್ಮಡಿ ಕೃಷ್ಣರಾಜ ಒಡೆಯರನ್ನು ರೂಪಿಸಿ ವ್ಯಾಪಕ ಸುಧಾರಣೆಗಳನ್ನು ತಂದವರು ಬಕ್ಷಿ ತಿಪ್ಪಯ್ಯನವರು; ವಿಜಯನಗರದ ಸಾಮ್ರಾಜ್ಯಸ್ಥಾಪನೆ ಮಾಡಲು ಕಾರಣೀಭೂತರಾದವರು ವಿದ್ಯಾರಣ್ಯರು. ಆದರೆ ಒಬ್ಬ ಯೋಧನ ವಿಸ್ತಾರವಾದ ಮತ್ತು ವಿವರವಾದ ಚರಿತ್ರೆ ಸಿಗುವುದು ಮೊದಲಬಾರಿಗೆ 'ಸೈನಿಕನ ನೆನಪುಗಳು' ಪುಸ್ತಕದಲ್ಲಿ ಮಾತ್ರ.

ವೇಣುಗೋಪಾಲ್ ಸಾಹಸಿ, ಭೂಗತ ಚಟುವಟಿಕೆಗಳ ಸಮಯದಲ್ಲಿ ಸ್ವಲ್ಪದರಲ್ಲೇ ನೇಣುಗಂಬವನ್ನು ತಪ್ಪಿಸಿಕೊಂಡ ಹೋರಾಟಗಾರ. ಇಟಗಿಯನ್ನು ಹೈದರಾಬಾದಿನ ರಜಾಕಾರರ ಉಪಟಳದಿಂದ ಪಾರುಮಾಡಿ ಆ ಭಾಗಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಸೇನಾನಿ; ಸರ್ದಾರ್ ಪಟೇಲರು ನಡೆಸಿದ ಹೈದರಾಬಾದ್ ಕಾರ್ಯಾಚರಣೆಗೆ ಪ್ರೇರಕವಾದ ವರದಿಯನ್ನೊದಗಿಸಿದ ದೂರದರ್ಶಿ. ಯುದ್ಧರಂಗದಲ್ಲಿ ರಕ್ತಹರಿಸಿದ ವಿವರಗಳಿಗೆ ಈ ಕೃತಿಯಲ್ಲಿ ಒತ್ತು ನೀಡದಿದ್ದರೂ, ವೇಣುಗೋಪಾಲರ ಕ್ಷಾತ್ರವನ್ನು ಸಾರುವ ಪ್ರಸಂಗಗಳು ಇಲ್ಲದಿಲ್ಲ.

ಆದರೆ ವೇಣುಗೋಪಾಲರಿಗೆ ವಿಶಿಷ್ಟ ಸೇವಾಪದಕವನ್ನು ತಂದುಕೊಟ್ಟದ್ದು ಅವರ ಸುಧಾರಣಾ ಕಾರ್ಯಗಳ ಅತಿಶಯತೆ. ಮಾನವೀಯ ಮಿಡಿತಗಳೇ ಅವುಗಳ ಮೂಲದಲ್ಲಿದ್ದುದು ಮತ್ತು ಸ್ಥಾಯಿಯಾಗಿದ್ದುದು.

ಬಿಯಾಸಿನ ಸಂತ ಸದ್ಗುರುವು ನೀಡಿದ ಪ್ರಸಾದವನ್ನು ಇನ್ನೇನು ಬಾಯಿಗಿಡಬೇಕು, ಭಿಕ್ಷುಕನೊಬ್ಬ ಅದಕ್ಕಾಗಿ ಕೈನೀಡಿದ. ಜತೆಗಿದ್ದ ಗೆಳೆಯ ಕೂಗುತ್ತಿದ್ದ, 'ಅದನ್ನು ನೀವೇ ತಿನ್ನಿ, ಅದರಲ್ಲಿ ಪವಾಡಸದೃಶ ಶಕ್ತಿಗಳಿವೆ' ಎಂದು. ಆದರೆ ಮರುಯೋಚನೆ ಇಲ್ಲದೆ ಅವರು ಅಷ್ಟೂ ಪ್ರಸಾದವನ್ನು ಆ ಭಿಕ್ಷುಕನಿಗೆ ಕೊಟ್ಟುಬಿಟ್ಟರು ಮತ್ತು ಉದ್ಗರಿಸಿದರು, 'ಆ ಹುಡುಗನಿಗೆ ಆ ಶಕ್ತಿಯ ಅಗತ್ಯ ನನಗಿಂತ ಹೆಚ್ಚಾಗಿದೆ' ಎಂದು. ವಾಸ್ತವವಾಗಿ ಆ ಪ್ರಸಾದಕ್ಕಾಗಿಯೇ ವೇಣುಗೋಪಾಲ್ ನೂರಾರು ಮೈಲುಗಳ ಪ್ರಯಾಣ ಮಾಡಿ ಅಲ್ಲಿಗೆ ಬಂದಿದ್ದರು. ಯೋಧನಾದ ವೇಣುಗೋಪಾಲರ ಅಂತಃಕರಣ ಮಿಡಿಯುತ್ತಿದ್ದುದು ಹಾಗೆ. 'ರಣರಂಗಗಳಿರುವುದು ಶಾಂತಿಯನ್ನು ಕಾಪಾಡುವುದಕ್ಕೆ' ಎಂಬುದು ವಿಚಿತ್ರವಾದ ಹೇಳಿಕೆ. ಆದರೆ ಅದನ್ನು ವಿಪರ್ಯಾಸರಹಿತವಾಗಿ ಸಾಧಿಸಿದವರು ಮೇಜರ್ ವೇಣುಗೋಪಾಲ್. ವಿದ್ಯಾಭ್ಯಾಸ ಮುಂದುವರಿಸದಿದ್ದರೆ ಅಂಥ ಹೆಂಡತಿಯೇ ಬೇಡ ಎಂಬ ದೃಢ ನಿರ್ಧಾರವೂ ಮೇಲುನೋಟಕ್ಕೆ ಕ್ರೂರವಾಗಿಯೇ ಕಾಣಬಹುದು. ಆದರೆ ಇಂಥ ಕಾಠಿಣ್ಯ ಕಾಣುವುದು, ಅಂತರಂಗದಲ್ಲಿ ಪ್ರೇಮ ತುಂಬಿದಾಗಲೇ.

ಕನ್ನಡ ಸಾಹಿತ್ಯದಲ್ಲಿಯೂ ಯೋಧರ ಆತ್ಮಕಥೆಗಳು ಅಪರೂಪವೇ. ಇಂಥ ವಿಶಿಷ್ಟ ಕೃತಿಯ ಇಂಗ್ಲಿಷ್ ಮೂಲದ ಹಸ್ತಪ್ರತಿಯನ್ನು ಸಮುದಾಯ ಅಧ್ಯಯನ ಕೇಂದ್ರದ ಅವಗಾಹನೆಗೆ ತಂದವರು ಕೇಂದ್ರದ ಹಿತೈಷಿಗಳಲ್ಲೊಬ್ಬರಾದ (ಕ್ಯಾಪ್ಟನ್) ಕೃಷ್ಣಪ್ರಸಾದ್ ಅವರು. ಇದು ಇಷ್ಟು ಒಳ್ಳೆಯ ಕೃತಿಯಾದರೂ ಇದನ್ನು ಓದುಗರು ಹೇಗೆ ಸ್ವೀಕರಿಸಿಯಾರೋ ಎಂಬ ಅಳುಕು ಒಬ್ಬ ಯೋಧರಾದ ಅವರಿಗೆ ಇದ್ದುದು ಸಹಜವೇ. ವೇಣುಗೋಪಾಲ್ ಅವರ ಮಕ್ಕಳಾದ ಪ್ರೊ॥ ರವೀಂದ್ರ ಮತ್ತು ಡಾ॥ ಹೇಮಾ ಅವರು ಈ ಕೃತಿಯ ಸ್ವರೂಪವನ್ನು ಹೆಚ್ಚು ಅಚ್ಚುಕಟ್ಟಾಗಿಸಲು ಶ್ರಮಿಸಿದ್ದಾರೆ.

ಸಮುದಾಯ ಅಧ್ಯಯನ ಕೇಂದ್ರಕ್ಕಾಗಿ ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟು ಉಪಕರಿಸಿದವರು ಶ್ರೀ ಆರ್. ಎಲ್. ಅನಂತರಾಮಯ್ಯ ಅವರು. ಅದನ್ನು ಅವರು ಕೇಂದ್ರದ ಮೇಲಿನ ಪ್ರೀತಿಯಿಂದಲೇ ಮಾಡಿದರು. ಮಿಲಿಟರಿ ಪರಿಭಾಷೆಗಳನ್ನು ಕನ್ನಡಕ್ಕೆ ತರುವುದು ಕಷ್ಟದ ಕೆಲಸ. ಮಿಲಿಟರಿ ಅಧಿಕಾರಿಗಳನ್ನೇ ಸಂಪರ್ಕಿಸಿ ಆ ತೊಡಕುಗಳನ್ನು ಪರಿಹರಿಸಿಕೊಂಡು ಅನಂತರಾಮಯ್ಯನವರು ಅನುವಾದವನ್ನು ಅಂದವಾಗಿ ಮಾಡಿಕೊಟ್ಟರು. ನಮ್ಮ ಆತುರಕ್ಕೆ ಮಣಿದು ಶೀಘ್ರವಾಗಿಯೂ ಮಾಡಿಕೊಟ್ಟರು. ಅವರು ಅನೇಕಾನೇಕ ಪುಸ್ತಕಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ತಂದು ಕೈ ನುರಿತಿದ್ದವರು.

ಈ ಕೃತಿಯನ್ನು ಪ್ರಕೃತ ಸಂಪುಟಕ್ಕೆ ಸೇರಿಸಿಕೊಳ್ಳುವ ಹೊತ್ತಿನಲ್ಲಿ ಇದನ್ನು ಮತ್ತಷ್ಟು ಸುಧಾರಿಸಿಕೊಟ್ಟವರು ಭಾಷಾಂತರಕ್ಷೇತ್ರದಲ್ಲೇ ದೀರ್ಘಕಾಲ ಸೇವೆಸಲ್ಲಿಸಿರುವ ಶ್ರೀ ಎನ್. ಎಸ್. ಶಾರದಾ ಪ್ರಸಾದ್ ಅವರು. ಅದಾದರೂ ಬಹು ಸೂಕ್ಷ್ಮಜ್ಞತೆಯನ್ನೂ ತಾಳ್ಮೆಯನ್ನೂ ನಿರೀಕ್ಷಿಸುವ ಕೆಲಸ. ಶ್ರೀ ಶಾರದಾ ಪ್ರಸಾದರೂ ಕೇಂದ್ರದ ಭಾಗವೂ ಆಗಿ ಅದನ್ನು ಮಮತೆಯಿಂದ ನಿರ್ವಹಿಸಿದ್ದಾರೆ.

* * * * *

'ಮತ್ತೂರಿನಿಂದ ಬ್ರಿಟನ್‌ಗೆ' ಎಂಬ ಜೀವನಕಥೆಯಲ್ಲಿರುವುದು ಕೃಷ್ಣಮೂರ್ತಿಯವರು ತಮ್ಮ ಕಾರ್ಯಕ್ಷೇತ್ರವನ್ನು ಮತ್ತೂರಿನಿಂದ ಬ್ರಿಟನ್‌ವರೆಗೆ ವಿಸ್ತರಿಸಿಕೊಂಡ ಕಥೆ, ಎಂ.ಆರ್. ಕೃಷ್ಣಮೂರ್ತಿಯಾಗಿದ್ದವರು 'ಮಾಥೂರ್‌ಜೀ' ಆಗಿ ಬೆಳೆದ 'ಕಥೆ', ಎಸ್.ಎಸ್.ಎಲ್.ಸಿ. ವರೆಗೆ ಶಿಕ್ಷಣ ಪಡೆದವರು ಲೋಕಶಿಕ್ಷಣದಲ್ಲಿ ಹಿರಿದಾಗಿ ಬೆಳೆದು 'ಡಾಕ್ಟರ್' ಎನಿಸಿದ ಕಥೆ, ತಮ್ಮ ಲೋಕಪ್ರೀತಿಯು ಹುಟ್ಟಿಸಿದ ಶುಭಹಾರೈಕೆಯಿಂದಾಗಿ 'ಗುರು'ಗಳು 'ಸ್ವಾಮಿ'ಗಳು ಎಂಬ ಪ್ರೀತಿ ಭಕ್ತಿಗಳ ಉನ್ನತ ನೆಲೆಗೆ ಏರಿದ ಕಥೆ.

ಬಡತನವು ಬೇಯಿಸುತ್ತದೆ, ಆದರೆ ಒಳ್ಳೆಯದಕ್ಕೆ. ಮತ್ತೂರರ ಮನೆಯ ದಾರುಣ ಬಡತನವು ದೀರ್ಘಕಾಲ ಅವರನ್ನು ವಿಧವಿಧವಾಗಿ ಕಾಡಿದ ಕಥೆಯು ವಿಸ್ತಾರವಾಗಿಯೇ ಈ ಕೃತಿಯಲ್ಲಿ ನಿರೂಪಣೆಗೊಂಡಿದೆ; ಓದುಗರು ಎಷ್ಟು ಬಾರಿ ಅದನ್ನು ಓದಿದರೂ ಕಣ್ಣು ಒದ್ದೆಯಾಗಿಯೇ ಆಗುತ್ತದೆ, ಸಂಕಟವಾಗಿಯೇ ತೀರುತ್ತದೆ. ಇವೆಲ್ಲದರ ಮೇಲೆ ಈ ಕೃತಿಯು ಸಾಧಿಸಿ ತೋರಿಸುವ ತತ್ತ್ವವೆಂದರೆ ಬಡತನವು ಭಾಗ್ಯವೆಂಬುದು. ಏಕೆಂದರೆ ಜೀವನಕಮಲವು ಚೆನ್ನಾಗಿ ಅರಳುವುದು ಆ ಕೆಸರಿನಲ್ಲಿಯೇ.

ಈ ಕೃತಿಯು ಸಾಧಿಸಿ ತೋರಿಸುವ ಇನ್ನೊಂದು ಹಿರಿದಾದ ತತ್ತ್ವವು ಮಾತೃಭಕ್ತಿಯದು. ಹೆತ್ತ ತಾಯಿಯನ್ನೇ ಪ್ರೀತಿಸಲು ಅರಿಯದವನು ಲೋಕಕ್ಕೆ ಏನು ಮಾಡಿಯಾನು? ಮತ್ತೂರ್‌ಜಿ ಲೋಕವನ್ನು ಪ್ರೀತಿಸಿದ್ದಾರೆ, ಲೋಕಸೇವೆ ಮಾಡಿದ್ದಾರೆ, ಲೋಕದ ಹಿತವನ್ನು ಸಾಧಿಸಿದ್ದಾರೆ. ಏಕೆಂದರೆ ಅವರು ತಾಯಿಯನ್ನು ಸಾಕ್ಷಾತ್ ದೇವತೆಯಂತೆ ನೋಡಿಕೊಂಡಿದ್ದಾರೆ. ಮಾತೃತ್ವದ ವಿಸ್ತಾರವಾದ ನಿರೂಪಣೆ ಇಲ್ಲಿದೆ. ಸೂಕ್ಷ್ಮವಾಗಿ ಸ್ಪಂದಿಸಬಲ್ಲವರಿಗೆ ಈ ಕೃತಿಯಲ್ಲಿ ಬರುವ ಬಡತನ ಮತ್ತು ಮಾತೃತ್ವದ ಬಗೆಗಿನ ಭಾಗವೇ ಒಂದು ಸುಂದರ ಕಾವ್ಯದಂತಿದೆ.

ಮತ್ತೂರ್‌ಜಿ ಒಂದು ದಿನದಲ್ಲಿ ರೂಪುಗೊಳ್ಳಲಿಲ್ಲ. ಆರೆಂಟು ವರ್ಷಗಳು ಉನ್ನತ ವ್ಯಾಸಂಗ ಮಾಡಿ ಡಾಕ್ಟರೇಟ್ ಪದವಿ ಪಡೆದಿದ್ದರೂ ಹೀಗೆ ರೂಪುಗೊಳ್ಳಲಾಗುತ್ತಿರಲಿಲ್ಲ. ಅವರು ಕಲಿಯುವ ಕಸುವೂ ಕುತೂಹಲವೂ ಛಲವೂ ಇದ್ದ ವಯಸ್ಸಿನಲ್ಲಿ ನೇರವಾಗಿ ಲೋಕಾನುಭವದ ಯಜ್ಞಕುಂಡಕ್ಕೆ ಧುಮುಕಿಬಿಟ್ಟರು. ಶ್ರೀರಾಮಕೃಷ್ಣಾಶ್ರಮದಲ್ಲಿಯೂ, ವಾರ್ಧಾ ಆಶ್ರಮದಲ್ಲಿಯೂ ಮಹಾತ್ಮಾಜಿಯವರ ಸನಿಹದಲ್ಲಿಯೂ ಅವರ ಜೀವನದೃಷ್ಟಿ ರೂಪುಗೊಂಡಿತು. ಮೊದಲು 'ಇದು ಕೀಳು ಕೆಲಸ, ಅದು ಮೇಲು ಕೆಲಸ' ಎಂಬ ತಾರತಮ್ಯ ಭಾವವು ದಗ್ಧವಾಗಿ ಹೋಯಿತು. ಲೋಕಹಿತಕ್ಕಾಗಿ ತನ್ನನ್ನು ತಾನು ಹವಿಸ್ಸಾಗಿ ಅರ್ಪಿಸುವ ಮನಃಪಾಕ ರೂಪುಗೊಂಡಿತು. ವಾರಾನ್ನ ಭಿಕ್ಷಾನ್ನಗಳ ವೇಳೆ ಅಹಂಕಾರ ನಿರಸನಗೊಂಡಿದ್ದ ವ್ಯಕ್ತಿತ್ವಕ್ಕೆ ಸಮರ್ಪಣಭಾವದ ಕಂಪೂ ಸೇರಿಕೊಂಡಿತು.

ತನ್ನ ಮಕ್ಕಳಿಗೆ ಆರಿದ ಅನ್ನ ಹಾಕಿದರೂ ಮನೆಗೆ ಊಟಕ್ಕೆಂದೇ ಬಂದ ಬಡಬಾಲಕನಿಗೆ ಬಿಸಿಯನ್ನ ಹಾಕಬಲ್ಲ ತಾಯ್ತನವನ್ನು ಅವರು ಕಂಡಿದ್ದರು, ಮಹಾಬಲೇಶ್ವರಭಟ್ಟರಂಥ ಹೃದಯಶ್ರೀಮಂತರ ಅಂತಃಕರಣದ ಆರ್ದ್ರತೆಯನ್ನು ಅನುಭವಿಸಿದ್ದರು. ಬಡತನದಿಂದ ಬಸವಳಿದವನ ಕಣ್ಣಿಗೆ ಜೀವನಸೌಂದರ್ಯ ಇರುವುದು ಪ್ರೀತಿಯಲ್ಲಿ, ತ್ಯಾಗದಲ್ಲಿ, ಮಾನವೀಯ ತುಡಿತದಲ್ಲಿ ಎಂಬ ತತ್ತ್ವವು ರಕ್ತಕ್ಕಿಳಿಯಿತು. ಸಕಾರಾತ್ಮಕ ಚಿಂತನೆಯ ಜಾಡಿಗೆ ಸೇರಿಕೊಂಡರು. ಈ ಜೀವನಗಾಥೆ ಹರಿದಿರುವುದು ಇಂಥ ಚಕ್ರಗಳ ಮೇಲೆ.

ವಿ.ಸೀ.ಯವರ ವೈಚಾರಿಕತೆ, ಚಕ್ರವರ್ತಿಯವರ ಪಾಂಡಿತ್ಯ, ಡಿವಿಜಿಯವರ ಬಹುಮುಖ ಸಾಧನೆ, ಕೃಷ್ಣಶರ್ಮರ ಸರಳತೆ, ಶಾಮರಾಯ ಬರವಣಿಗೆ... ಹೀಗೆ ಅವರು ಹಿರಿದೆಂಬುದು ಕಂಡಕಡೆ ಕೈಮುಗಿದು ಕುಳಿತರು. ಕಂಡಕ್ಟರನ ಕೆಲಸದಿಂದ ತೊಡಗಿ ಆಕಾಶವಾಣಿಯವರೆಗೆ ನಾನಾ ರೀತಿಯ ಅನುಭವಗಳಿಗೆ ಒಡ್ಡಿಕೊಂಡರು. ಭಾಷಾಕಲಿಕೆ, ಲೇಖನ, ಅನುವಾದ, ಪ್ರವಚನ ಹೀಗೆ ಯಾವುದೇ ಸವಾಲುಗಳನ್ನೂ ಅವಕಾಶಗಳನ್ನಾಗಿ ಪರಿವರ್ತಿಸಿಕೊಂಡರು. ಭಾರತೀಯ ವಿದ್ಯಾಭವನದ ಸಾಗರಕ್ಕೆ ಮತ್ತೂರರ ಅನುಭವಸಹಸ್ರದ ತೊರೆಗಳು ಬಂದು ಸೇರಿದವು.

ಭಾರತೀಯ ವಿದ್ಯಾಭವನದ ಲಂಡನ್ ಕೇಂದ್ರದ ಹೊಣೆಹೊತ್ತು ಮತ್ತೂರ್‌ಜಿ ಬ್ರಿಟನ್‌ಗೆ ಹೊರಟದ್ದು ತಮ್ಮ 43 ನೆಯ ವಯಸ್ಸಿನಲ್ಲಿ– ಸಾಹಿತಿ, ಪತ್ರಕರ್ತ, ಪ್ರವಚನಕಾರ, ಅನುವಾದಕ, ಪಂಡಿತ, ಕಲಾವಿದ,

ಅನುಭವಿ, ಉತ್ಸಾಹಿ, ಆರೋಗ್ಯವಂತ ತರುಣ– ಇಂಥ ಸಿದ್ಧಿಹೊಂದಿದ ಸ್ಥಿತಿಯಲ್ಲಿ. ಅಲ್ಲಿ ವಿದ್ಯಾಭವನದ ಅಂಕುರಾರ್ಪಣ ಮಾಡಿ ಕೆಲಸವನ್ನು ಪ್ರಾರಂಭಿಸುವ ಹೊಣೆ ಅವರ ಮೇಲಿತ್ತು. ಲಂಡನ್ನಿಗೆ ಹೋದ ಕೆಲವೇ ತಿಂಗಳಲ್ಲಿ ಅಲ್ಲಿನ ಕುಂಠಿತ ಪ್ರಗತಿಯಿಂದ ನಿರಾಶರಾಗಿ ಆತ್ಮಹತ್ಯೆಯ ಪ್ರಯತ್ನಮಾಡಿದರು ಮತ್ತೂರರು. ಆ ಪ್ರಯತ್ನವೇ ಅವರು ಲಂಡನ್ ಕೇಂದ್ರವನ್ನು ಹೆಮ್ಮರವಾಗಿ ಬೆಳೆಸಬಲ್ಲ ದಕ್ಷ ಎಂಬುದರ ಸೂಚನೆಯಾಗಿತ್ತು. ಸಾರ್ವಜನಿಕ ಸಂಸ್ಥೆಯೊಂದು ಪ್ರಗತಿಯನ್ನು ಕಾಣಲಿಲ್ಲವೆಂದು ಚಿಂತೆ ಹಚ್ಚಿಕೊಳ್ಳುವವರಾರು? ಅದನ್ನು ಸಾಧಿಸಲು ತನ್ನಿಂದಾಗದಿದ್ದರೆ ಬದುಕೇ ಬೇಡ ಎಂದು ನಾಚುವವರು ಯಾರು? ಸಾಧಕರು! 'ಮಾಡು ಇಲ್ಲವೇ ಮಡಿ' ಎಂಬ ಮಾತು ಹೊರಡಿಸುವ ಧ್ವನಿವಿಸ್ತಾರಕ್ಕೆ ಕನ್ನಡಿಯಾಗಿರುವುದು ಈ ಗ್ರಂಥದ ಇನ್ನೊಂದು ಹಿರಿಮೆ.

ಮಹಾಸಾಧನೆಯ ಇಂಥ ಆವೇಶ ತಳೆದವರು ಹೇಗೆ ಮೈಚಳಿಬಿಟ್ಟು ತ್ರಿವಿಕ್ರಮರಾಗುತ್ತಾರೆಂಬುದರ ಕಥೆಯೇ ಲಂಡನ್ನಿನ ಶ್ರೇಯೋಗಾಥೆ. ಭಾರತದಿಂದ ಬಂದ 22 ಕೆ.ಜಿ. ಭಾರದ ಪುಸ್ತಕಗಳ ಕಟ್ಟನ್ನು ತಲೆಯಮೇಲೆ ಹೊತ್ತು ಲಂಡನ್ನಿನ ಬೀದಿಯಲ್ಲಿ ನಡೆದು ಹೋಗುವ ಮತ್ತೂರರ ಚಿತ್ರ ಆ ಆವೇಶವು ಬಿಡಿಸಿದ ಕಲೆ. ಮತ್ತೂರರು ಆಡಳಿತ ನಿರ್ವಹಣೆಗೂ ಅಲ್ಲಿ ತರಬೇತಿ ಪಡೆದರು. ಊರೂರು ಸುತ್ತಿ ಭವನದ ಪರಿಚಯದ ಬೀಜಗಳನ್ನು ಪ್ರವಚನದ ಜತೆಜತೆಗೇ ಬಿತ್ತಿ ಬಂದರು. ದಲಾಲ್‌ಜಿ ಮಾತ್ರವೇ ತಮ್ಮ ಕನಸಿನ ರಥವನ್ನು ಮುನ್ನಡೆಸಿ ಸಾಕಾರಗೊಳಿಸಬಲ್ಲರೆಂದು ಅನ್ವೇಷಿಸಿದರು. ಸಂಪನ್ಮೂಲ ವ್ಯಕ್ತಿಗಳನ್ನು ಶೋಧಿಸಿದರು. ಭವನವನ್ನು ಚಟುವಟಿಕೆಯ ಕೇಂದ್ರವಾಗಿಸಿದರು. ದಲಾಲ್‌ಜಿ, ಪ್ರೊ॥ ಬರ್ಕ್, ಜಿ.ಡಿ. ಬಿರ್ಲಾ, ಲಾರ್ಡ್ ಥಾಮ್ಸನ್ ಆಫ್ ಫ್ಲೀಟ್, ಲಾರ್ಡ್ ಮೌಂಟ್ ಬ್ಯಾಟನ್, ರಾಜಕುಮಾರ ಚಾರ್ಲ್ಸ್, ಇಂಗ್ಲೆಂಡಿನ ಮಹಾರಾಣಿ, ಇಂದಿರಾಗಾಂಧಿ... ಎಲ್ಲ ಮಹಾಸಂಪರ್ಕಗಳ ಗಗನವನ್ನು ಮುಟ್ಟಿದರು. ಬಿಬಿಸಿಯಲ್ಲಿ ಹಿಂದೂಧರ್ಮದ ಬಗೆಗೆ ನೂರಕ್ಕೂ ಹೆಚ್ಚು ಕಂತುಗಳ ಪ್ರವಚನಗಳನ್ನು ನೀಡಲು ಮೊದಲ ಬಾರಿಗೆ ಆಹ್ವಾನಿತರಾಗುವ ಗೌರವಕ್ಕೆ ಪಾತ್ರರಾದರು. ಬಿಬಿಸಿ ಆಯೋಜಿಸಿದ ಸರ್ವಧರ್ಮ ಸಮ್ಮೇಳನದಲ್ಲಿ 'ಸಂಗಚ್ಛಧ್ವಂ ಸಂವದಧ್ವಮ್' ಎಂದು ಮೊಳಗಿ ಸರ್ವಧರ್ಮೀಯರ ಗೌರವಕ್ಕೆ ಪಾತ್ರರಾದರು, ಮಹಾರಾಣಿಯವರ ಆದರಕ್ಕೆ ಪಾತ್ರರಾದರು, ವಿವೇಕಾನಂದರ ಚಿಕಾಗೋ ಭಾಷಣದ ಸಂದರ್ಭವನ್ನು ನೆನಪಿಗೆ ತಂದರು. ಜನರಲ್ಲಿ ಧಾರ್ಮಿಕತೆಯನ್ನು ಜಾಗೃತಗೊಳಿಸಿ ಸಂಸ್ಕಾರಗಳನ್ನು ನಡೆಸಿಕೊಟ್ಟರು, ಅಲ್ಲಿನ ಶಿಕ್ಷಣ ಸಂಸ್ಥೆಗಳಲ್ಲೂ ಉಪನ್ಯಾಸ ನೀಡಿ ಮನಗೆದ್ದರು. ಭಾರತೀಯ ವೈದಿಕ ಮಂತ್ರಗಳ ಅರ್ಥವಂತಿಕೆಯ ಕಡೆಗೆ ಅನ್ಯಧರ್ಮೀಯರೂ ಮುಕ್ತವಾಗಿ ಕಣ್ಣು ತೆರೆಯುವಂತೆ ಮಾಡಿದರು. ವಿದೇಶದ ನೆಲದ ಎಲ್ಲ ಒಳ್ಳೆಯ ಲಕ್ಷಣಗಳಿಗೂ ಮನಸ್ಸನ್ನು ಸದಾ ತೆರೆದಿಟ್ಟರು. ಸದಾ ಆತ್ಮಸಾಕ್ಷಿಯನ್ನೇ ಮಾರ್ಗದರ್ಶಕನನ್ನಾಗಿ ಇಟ್ಟುಕೊಂಡು ಭಾರತೀಯ ವಿದ್ಯಾಭವನದ ಲಂಡನ್ ಕೇಂದ್ರವನ್ನು ಬೃಹತ್ತಾಗಿ ಬೆಳೆಸಿದರು. ಲಂಡನ್ನಿನಲ್ಲಿರುವ ಸುಮಾರು ಕಾಲು ಶತಮಾನದಷ್ಟು ಕಾಲವೂ ವಿದ್ಯಾಭವನವೊಂದನ್ನು ಬಿಟ್ಟು ಅನ್ಯಕ್ಕೆ ಅಂಧನನ್ನಾಗಿಯೂ ಹೆಳವನನ್ನಾಗಿಯೂ ಮೂಕನನ್ನಾಗಿಯೂ ಮಾಡಿಕೊಂಡು ಇದನ್ನು ಸಾಧಿಸಿದರು. ಅದನ್ನೇ ತಪಸ್ಸು ಎನ್ನುವುದು! ಈ ಗ್ರಂಥದಲ್ಲಿರುವುದು ಆ ತಪಸ್ಸಿನ ಕಥೆ.

ತಮ್ಮ 66ನೆಯ ವಯಸ್ಸಿನಲ್ಲಿ ಭಾರತಕ್ಕೆ ಮರಳಿದ ಮತ್ತೂರರು ಭಾರತೀಯ ವಿದ್ಯಾಭವನದ ಸೇವೆಗೆ ಹೊಸದಾಗಿ ಸೇರಿಕೊಂಡ ಯುವಕನಂತೆ ಹೊಸ ಹುಮ್ಮಸ್ಸಿನಿಂದ ತೊಡಗಿಕೊಂಡರು. ತಮ್ಮ ಎಂಬತ್ತರ ಹರಯವನ್ನು ಹದಿನೆಂಟರ ಹರಯವೆಂಬಂತೆ ಮಾಡಿಕೊಂಡಿರುವ ಮತ್ತೂರರು ಅಜೇಯರಾಗಿ ಮುನ್ನುಗ್ಗುತ್ತಿರುವ ಕಥೆಯು ಈ ಕೃತಿಯ ಮೂರನೆಯ ಭಾಗದಲ್ಲಿದೆ, ಹೊಸ ಆತ್ಮಕಥೆಗೆ ವಸ್ತುವಾಗಿ ಮುಂದುವರಿಯುತ್ತಿದೆ.

'ಮತ್ತೂರಿನಿಂದ ಬ್ರಿಟನ್‌ಗೆ' ಎಂಬುದು ಸಾಧಕರ ಕೈಪಿಡಿ, ಮಹಾಪುರುಷರ ಜೀವನಪಥದ ಗಹನಕ್ಕೆ ಬೆಳಕಿಂಡಿ, ಸಾಧನೆಯ ಆಸೆ ಹೊತ್ತವರಿಗೆ ಸ್ಫೂರ್ತಿ, ಸೋತವರಿಗೆ ಆತ್ಮಸ್ಥೈರ್ಯ, ಪ್ರಪಂಚವು ತನ್ನ ತ್ಯಾಗವನ್ನು ಕಡೆಗಣಿಸಿತೆನ್ನುವವರಿಗೆ ತತ್ತ್ವಬೋಧೆ, ಕತ್ತಲಾಗಿಬಿಟ್ಟಿದೆಯೆಂದು ಅಳುವವರಿಗೆ ಬೆಳಕಾಗುವುದೆಂಬ ಆಶಾಕಿರಣ. ಮಾತಿನಲ್ಲಿಲ್ಲ ಉತ್ಪ್ರೇಕ್ಷೆ, ಮಹಾಪುರುಷರ ಸಾಧನೆಯಲ್ಲೇ ಇದೆ ಅಂಥ ಅತಿಶಯತೆ.

ಮತ್ತೂರರು ಕುಮಾರವ್ಯಾಸನ ಪರಮಭಕ್ತರು, ಮೇಲಾಗಿ ಅವನ ಕಾವ್ಯಕ್ಕೆ ವಿಸ್ತಾರವಾಗಿ ವ್ಯಾಖ್ಯಾನ ಮಾಡಿ ಜೀವನ ಕಳೆದವರು. ಹಾಗಾಗಿ ಮತ್ತೂರರ ಕಥನದ ಸಾವಧಾನಕ್ಕೆ, ವಿಸ್ತಾರಕ್ಕೆ, ರಸಪೂರ್ಣ ಹಿಂಜಿಕೆಗೆ ಕುಮಾರವ್ಯಾಸನೇ ಪ್ರೇರಣೆ ಮತ್ತು ಆದರ್ಶ. ಮತ್ತೂರರು ರಾಮಾಯಣ, ಮಹಾಭಾರತ, ಪುರಾಣ ಮತ್ತು ವೇದವಾಙ್ಮಯವನ್ನು ಅರೆದು ಕುಡಿದವರು. ಹಾಗಾಗಿ ಅವರ ಕಥನಕ್ಕೊಂದು ಪೌರಾಣಿಕತೆಯ ಸ್ಪರ್ಶವಿದೆ. ಮತ್ತೂರ್‌ಜಿ ಸಾಹಿತಿ; ರಸಸ್ಥಾನಗಳನ್ನು ಗುರುತಿಸಿ, ಅವಕ್ಕೆ ಜೀವತುಂಬಿದ್ದಾರೆ. ಮತ್ತೂರ್‌ಜಿ ಪತ್ರಕರ್ತ, ಹಾಗಾಗಿ ವಿವಿಧ ರೀತಿಯ ಓದುಗರ ನಾಡಿಯನ್ನು ಅವರು ಬಲ್ಲರು. ಇದನ್ನು ನಿರೂಪಿಸುವಾಗ ಅವರ ಮುಂದಿರುವುದು ವಿವಿಧ ಸ್ತರದ ಸಹಸ್ರ ಸಂಖ್ಯೆಯ ಶ್ರೋತೃಗಣ.

ಅವರ ಪ್ರವಚನಗಳನ್ನು ಕೇಳಿದವರಿಗಂತೂ ಮತ್ತೂರರ ಮಾತು, ಮಂದಸ್ಮಿತ, ಮಮತೆ, ಕಳಕಳಿಯೇ ಕಿವಿಗೆ ಕೇಳುತ್ತಿರುತ್ತದೆ. ಪ್ರವಚನಗಳಲ್ಲಿ ಅವರಂತೆ ರಸಸನ್ನಿವೇಶಗಳನ್ನು ಅಭಿವ್ಯಕ್ತಿಸುವವರು ಬಲುಬಲು ಅಪರೂಪ. ಅದು ಬರೆವಣಿಗೆಯಲ್ಲೂ ಅಷ್ಟೇ ಪರಿಣಾಮಕಾರಿಯಾಗಿ ಉಳಿದುಬಂದಿದೆ.

ಮಹಾಕೃತಿಯೊಂದರ ಪಾತ್ರಸೃಷ್ಟಿ ಇಲ್ಲಿದೆ. ಹೊಟೇಲಿನ ಗಲ್ಲಾ ಪೆಟ್ಟಿಗೆಯಮೇಲೆ ಕೂರುವ ಮಹಾಬಲೇಶ್ವರ ಭಟ್ಟ, ವಾರಾನ್ನವಿಕ್ಕುವ ತಾಯಿ, ಸತೀಶ್ ಧಾವರ್, ಪ್ರೇಮಾತೋತಾದ್ರಿ, ಕೌಶಲ್ಯ ಹಾರ್ವೆಲ್– ಇಲ್ಲಿರುವ ಇಂಥ ಆನುಷಂಗಿಕ ಸಣ್ಣ ಪಾತ್ರಗಳೂ ಅಮರವ್ಯಕ್ತಿತ್ವಗಳಾಗಿಬಿಟ್ಟಿವೆ. ಮತ್ತೂರ್‌ಜಿ ಈಗಲೂ ಈ ಎಂಬತ್ತರ ಇಳಿವಯಸ್ಸಿನಲ್ಲೂ(?) ದೊಡ್ಡದಾದ ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಗಾಂಧಿ ಉಪನಿಷತ್ ಎಂಬ ಹೊಸ ಉಪನಿಷತ್ತಿನ ದ್ರಷ್ಟಾರರೇ ಅವರಾಗಿಬಿಟ್ಟಿದ್ದಾರೆ. ಕಾಯಕದ ಮೂಲಕವೇ ಅಮರರಾಗುವ ಹಿರಿಯ ಅನುಷ್ಠಾನ ಮಾಡುತ್ತಿದ್ದಾರೆ. ಹಾಗಾಗಿಯೇ 'ಮತ್ತೂರಿನಿಂದ ಬ್ರಿಟನ್‌ಗೆ' ಎಂಬುದು ಒಂದು ವಿಶಿಷ್ಟ ಆತ್ಮಕಥೆಯಾಗಿದೆ.

ಹಾಸನಜಿಲ್ಲೆಯ ಮುದಲಾಪುರದ ನಿತುಂದಿಲರ ವಂಶಚರಿತ್ರೆ ಉನ್ನತವಾದುದು. ಹದಿನೈದು ತಲೆಮಾರುಗಳ ಹಿಂದೆ ವಿಜಯನಗರದ ಅರಸರಿಂದ ಸನ್ಮಾನಿತರಾದವರ ಚರಿತ್ರೆ ಅದರಲ್ಲಿದೆ. ಮೂವರು ಸೋದರರು ನಾಲ್ಕು ಜೋಡಿಗ್ರಾಮಗಳನ್ನು ಪ್ರಶಸ್ತಿರೂಪದಲ್ಲಿ ಪಡೆದ ಕಥೆ ಅದು. ಜ್ಯೇಷ್ಠನಿಗೆ ಎರಡುಬಾರಿ ಆ ಮರ್ಯಾದೆ ಸಂದಿತ್ತು. ಅವರ ತೇಜಸ್ಸು ಮತ್ತು ವರ್ಚಸ್ಸಿನ ಪುನರವತಾರವಾಗಿ ಅವರ ವಂಶದಲ್ಲಿ ಮತ್ತೂರ್‌ಜಿ ಈಗ ಕಾಣಿಸಿಕೊಂಡಿದ್ದಾರೆ.

ಸುಮನಾ ವಿಶ್ವನಾಥ್ ಅವರು ಮತ್ತೂರರ ಆತ್ಮಕಥೆಯನ್ನು ನಿರೂಪಿಸ ಹೊರಟದ್ದು ಈ ಕಾರಣಗಳಿಂದಾಗಿಯೇ ಒಂದು ಕಠಿಣಸವಾಲಾಗಿದೆ. 'ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ಚ...' ಎಂದು ಹೇಳಿ ಕೊನೆಯಲ್ಲಿ ದೇವರ ಮೇಲೆ ಭಾರ ಹಾಕಬಹುದಾದ ಕೆಲಸವಲ್ಲ ಇದು. ಹಿರಿಯ ಕಥನಕ್ಕೆ ಆಗುವ ಕಿಂಚಿತ್ ಊನವೂ ದೊಡ್ಡದೇ ಅಪರಾಧವಾಗಿಬಿಡುತ್ತದೆ. ಸುಮನಾ ವಿಶ್ವನಾಥ್ ಈ ಕೆಲಸವನ್ನು ಬಹು ಯಶಸ್ವಿಯಾಗಿ ಮಾಡಿರುವುದರಿಂದಲೇ ಈ ಕೃತಿಯು ಆಸ್ವಾದ್ಯವಾಗಿದೆ.

ಸುಮನಾ ಅವರು ಮತ್ತೂರರ ಹಿರಿಮೆಯನ್ನು ಗುರುತಿಸಿದರು! ಮತ್ತೂರರ ಹಿರಿಮೆಯೇನೋ ಎಲ್ಲರಿಗೂ ಎದ್ದು ಕಾಣುವಂಥದೇ. ಆದರೆ ಅಂಥವನ್ನು ಗುರುತಿಸುವುದಕ್ಕೆ ಬೇರೆಯೇ ಕಣ್ಣುಬೇಕು. ಹಾಗೆ ಗುರುತಿಸಿದ್ದನ್ನು ಮೆಚ್ಚಿ, ಗ್ರಂಥ ರೂಪಕ್ಕಿಳಿಸಿ, ಯಶಸ್ಸು ಹೊಂದುವುದಕ್ಕೆ ದೊಡ್ಡದಾದ ಕಲ್ಪನಾ ಶಕ್ತಿ ಬೇಕು, ಆತ್ಮಸ್ಥೈರ್ಯ ಬೇಕು. ಸುಮನಾ ತಮ್ಮ ಪ್ರಥಮ ಪ್ರಯತ್ನದಲ್ಲಿಯೇ – ಇಂಥ ಹಿರಿದಾದುದೂ ಮೌಲಿಕವಾದುದೂ ಆದ ಕೆಲಸವನ್ನು ಮಾಡಿ ಗೆದ್ದಿದ್ದಾರೆ.

ಕನ್ನಡಿಗರು ಮೆಚ್ಚುವ ಮೂವರು ಹಿರಿಯರ ಆತ್ಮಕಥೆಗಳನ್ನು ಸುಮನಾ ನಿರೂಪಿಸಿದ್ದಾರೆ. ಆ ಮೂವರೂ ತಮ್ಮ ತಮ್ಮ ಕ್ಷೇತ್ರದ ರತ್ನಗಳು, ಸುಮನಾ ಅವರು ಅವರ ಬದುಕನ್ನು ನಿರೂಪಿಸಿರುವ ಈ ಕೃತಿಗಳೂ ಕನ್ನಡದ ಅಮೂಲ್ಯ ಕೃತಿಗಳಾಗಿವೆ. ಮತ್ತೂರ್‌ಜಿ, ಶ್ರೀ ಹೊಸಹಳ್ಳಿ ಕೇಶವಮೂರ್ತಿ ಮತ್ತು ವೇ.ಬ್ರ. ಶ್ರೀ ಮಾರ್ಕಂಡೇಯ ಅವಧಾನಿಗಳ ಈ ಮೂರು ಆತ್ಮಕಥಾ ನಿರೂಪಣೆಗಳೇ ಸಂಕೇತಿ ಅಧ್ಯಯನ ಮಾಲೆಯ ಇಡೀ ಒಂದು ಬೃಹತ್ ಸಂಪುಟವನ್ನು ತುಂಬುವಷ್ಟಿವೆ. ಅದಕ್ಕಾಗಿ ಸಂಕೇತಿ ಸಮುದಾಯವೂ, ಜನಾಂಗ ಅಧ್ಯಯನದಲ್ಲಿ ಆಸಕ್ತರಾದವರೂ ಅವರಿಗೆ ವಿಶೇಷವಾಗಿ ಕೃತಜ್ಞರಾಗಿದ್ದಾರೆ.

ಮತ್ತೊಬ್ಬರು ಹೇಳುವ ತಮ್ಮ ಆತ್ಮಕಥೆಯನ್ನು ಧ್ವನಿಮುದ್ರಿಸಿಕೊಂಡು ಕೇವಲ ಬರಹಕ್ಕಿಳಿಸುವುದೂ ಕಷ್ಟದ ಕೆಲಸವೇ. ನಿರೂಪಿಸುವುದು ಮತ್ತೂ ಕಷ್ಟ. ವಕ್ತೃವಿನ ಭಾಷಾ ವಿಶೇಷ, ಶೈಲಿ, ಭಾವನೆಗಳನ್ನೆಲ್ಲ ಬರಹದಲ್ಲಿ ಜೀವಂತವಾಗಿಸಬೇಕು. ಪುನರಾವರ್ತನೆಗಳನ್ನೂ, ಹೊಂದದ ಭಾಗಗಳನ್ನೂ ಗುರುತಿಸಿ ಕೈಬಿಡಬೇಕು. ಅನುಕ್ರಮವಲ್ಲದ ಪ್ರಸಂಗಗಳನ್ನೂ ವಿವರಗಳನ್ನೂ ಕ್ರಮವರಿತು ಜೋಡಿಸಬೇಕು. ಹೀಗೆ ಜೋಡಿಸುವಾಗಲೂ ಸಾವಯವ ಸಂಬಂಧವನ್ನೂ ಅದರ ಕಲಾಸ್ವರೂಪವನ್ನೂ ಗಮನಿಸಬೇಕು. ಕಳಚಿದ ಕೊಂಡಿಗಳಿಗಾಗಿ ಮತ್ತೆ ಯತ್ನಿಸಬೇಕು. ಪದ, ವಾಕ್ಯ, ಸನ್ನಿವೇಶ, ಪ್ರಸಂಗ, ಅನುಕ್ರಮ, ಒಟ್ಟಂದ ಇವುಗಳ ಔಚಿತ್ಯವನ್ನು ಕುರಿತು ಮತ್ತೆ ಮತ್ತೆ ಧ್ಯಾನಿಸಬೇಕು, ಪರಿಶೀಲಿಸಬೇಕು, ಪರಿಷ್ಕರಿಸಬೇಕು. ಒಟ್ಟಿನಲ್ಲಿ ಇದೂ ಒಂದು ಸೃಜನಶೀಲಕಾರ್ಯ. ಸುಮನಾ ಈ ಕ್ಷೇತ್ರದಲ್ಲಿ ಪರಿಣಿತರೇ ಆಗಿದ್ದಾರೆ.

ಆತ್ಮಕಥೆಯು ಚರಿತ್ರೆಯೇ ಆದ್ದರಿಂದ ಮತ್ತು ಕಲ್ಪನೆಗಿಂತ ಬೇರೆಯದಾದ ದೊಡ್ಡ ಜವಾಬ್ದಾರಿ ಅದಕ್ಕಿರುವುದರಿಂದ ಅದರ ನಿರ್ಮಿತಿಗೆ ವಿಶೇಷವಾಗಿ ಬೇಕಾದುದು ಯುಕ್ತಾಯುಕ್ತ ವಿವೇಚನೆ. ಅದನ್ನು ಇಲ್ಲಿ ವಕ್ತೃ ಮತ್ತು ನಿರೂಪಕರಿಬ್ಬರೂ ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಈ ಸಂಪುಟದಲ್ಲಿ ಸೇರಿರುವ ಆತ್ಮಕಥೆಗಳ ಬಗೆಗಿನ ಕೆಲ ಹೊರ ವಿವರಗಳು ಇಲ್ಲಿವೆ :

1.**ಬಿ.ಸುಬ್ಬರಾವ್** (1894–1975) Musings of a Musician(1970) ಕನ್ನಡ : 'ಸಂಗೀತಗಾರನ ಮೆಲುಕುಗಳು' ಅನು: ಡಾ॥ ಮೀರಾ ಮೂರ್ತಿ	ಬಸವಾಪಟ್ಟಣ (ಹಾಸನಜಿಲ್ಲೆ)	ಮಧ್ಯದೇಶ (ಕೌಶಿಕ ಸಂಕೇತಿ)	ಕೃಷಿ ಇಲಾಖೆಯ ಉಪ ನಿರ್ದೇಶಕರು; ಸಂಗೀತಜ್ಞ, ಶಿಕ್ಷಕ, ಲೇಖಕ

2.**ವಿದ್ವಾನ್ ನರಸಿಂಹ ಮೂರ್ತಿಶಾಸ್ತ್ರಿ** (ಜ. ಏಪ್ರಿಲ್ 1912)[a] **'ಪಂಡಿತರೊಡನೆ'** ನಿರೂಪಣೆ: ಬೀ.ಚಿ. ಜಗನ್ನಾಥ ಜೋಯಿಸ್ ರಚನೆ: 2003	ಲಿಂಗದಹಳ್ಳಿ (ಚಿಕ್ಕಮಗಳೂರು ಜಿಲ್ಲೆ)	ಮಲೆನಾಡು ಸಂಕೇತಿ (ಕೌಶಿಕ ಸಂಕೇತಿ)	ವೇದ ಶಾಸ್ತ್ರ ಪಂಡಿತ, ಪುರೋಹಿತ, ಲೇಖಕ, ಶಿಕ್ಷಕ, ಕೃಷಿಕ
೩.**ಪ್ರೊ॥ಆರ್. ಎನ್.ದೊರೆಸ್ವಾಮಿ** (೧೨.೧೨.೧೯೧೬–೧೭.೦೮.೨೦೦೨), **'ನನ್ನ ಬದುಕು'** ಪುನರ್‌ರಚನೆ: ೨೦೦೦	ರುದ್ರಪಟ್ಟಣ, (ಹಾಸನ ಜಿಲ್ಲೆ)	ಬೆಟ್ಟದಪುರ ಸಂಕೇತಿ	ವೈಣಿಕ, ಸಂಗೀತ ಶಾಸ್ತ್ರಜ್ಞ, ಕೃಷಿಕ, ಶಿಕ್ಷಕ, ಲೇಖಕ
೪.**ಮೇಜರ್ ಎಚ್.ಸಿ. ವೇಣುಗೋಪಾಲ್** (೨೩.೦೯.೧೯೨೨–೦೩.೦೯.೨೦೦೩) ಮೂಲ: A soldier Remembers: 1998 ಕನ್ನಡ: 'ಸೈನಿಕನ ನೆನಪುಗಳು' ಅನು: ಆರ್.ಎಲ್. ಅನಂತರಾಮಯ್ಯ	ಹಂದನಹಾಳು (ಹಾಸನಜಿಲ್ಲೆ)	ಹಾಸನಸೀಮೆ (ಕೌಶಿಕ ಸಂಕೇತಿ)	ಸ್ವಾತಂತ್ರ್ಯ ಹೋರಾಟಗಾರ, ಯೋಧ
೫. **ಡಾ॥ ಮತ್ತೂರು ಕೃಷ್ಣ ಮೂರ್ತಿ** (ಜ. ೦೮.೦೮.೧೯೨೮)[b] **'ಮತ್ತೂರಿನಿಂದ ಬ್ರಿಟನ್‌ಗೆ'** ನಿರೂಪಣೆ : ಶ್ರೀಮತಿ ಸುಮನಾ ವಿಶ್ವನಾಥ್ (ರಚನೆ: ೨೦೦೨)	ಮತ್ತೂರು (ಶಿವಮೊಗ್ಗ ಜಿಲ್ಲೆ)	ಮತ್ತೂರುಸೀಮೆ (ಕೌಶಿಕ ಸಂಕೇತಿ)	ಭಾರತೀಯ ವಿದ್ಯಾಭವನದ ಲಂಡನ್ ಕೇಂದ್ರದ ರೂವಾರಿ, ಪತ್ರಕರ್ತ, ಲೇಖಕ, ಅನುವಾದಕ, ಪ್ರವಚನಕಾರ, ವ್ಯಾಖ್ಯಾನಕಾರ, ಆಡಳಿತಗಾರ, ಸಂಘಟಕ.

ಇದೊಂದು ತೀರಾ ಪುಟ್ಟ ಸಮುದಾಯವಾಗಿದ್ದು ಈ ಎಲ್ಲ ಆತ್ಮಕಥಾ ವೃತ್ತಾಂತಗಳಿಗೂ ಸಮುದಾಯದ ಸಮಸ್ತರೂ ಸಾಕ್ಷಿಗಳಾಗಿರುವುದರಿಂದಲೂ, ಆತ್ಮವಿಮರ್ಶೆಯಲ್ಲಿ ಈ ಸಮುದಾಯವು ಸದಾ ಮುಂದಿರುವುದರಿಂದಲೂ ಆತ್ಮಕಥೆಗೆ ಬೇಕಾದ ಪ್ರಾಮಾಣಿಕತೆಯು ಸಹಜವಾಗಿಯೇ ಇಲ್ಲಿ ಸಿದ್ಧಿಸಿದೆ. ಈ ಆತ್ಮಕಥಾ ಸಂಕಲನವು ಸಂಕೇತಿ ಸಮುದಾಯದ ಲಕ್ಷಣೀಕರಣಕ್ಕೂ, ಈ ಸಮುದಾಯವನ್ನು ಕುರಿತ ಹೆಚ್ಚಿನ ಸಂಶೋಧನೆಗೂ, ಸತ್ಪ್ರೇರಣೆಗೂ ಆಕರವಾಗುವುದಾದರೆ ನಮ್ಮ ಶ್ರಮವು ಸಾರ್ಥಕವಾದಂತೆ.

ಈ ಸಂಪಟವು ಈ ಸ್ವರೂಪದಲ್ಲಿ ಹೊರಬರಲು ಸಹಕರಿಸಿರುವ ಸಮಸ್ತ ಸಜ್ಜನ ಬಂಧುಗಳಿಗೂ, ಈ ಸಂಪುಟವನ್ನು ಪ್ರೀತಿಯಿಂದ ಸಂಪಾದಿಸಿಕೊಟ್ಟಿರುವ ಶ್ರೀಮತಿ ಸುಮನಾ ವಿಶ್ವನಾಥ್ ಅವರಿಗೂ ಸಮುದಾಯ ಅಧ್ಯಯನ ಕೇಂದ್ರದ ಪರವಾಗಿ ಕೃತಜ್ಞತೆಗಳನ್ನರ್ಪಿಸುತ್ತೇನೆ.

06.06.2008 **ಡಾ॥ ಬಿ.ಎಸ್. ಪ್ರಣತಾರ್ತಿಹರನ್**
ಮೈಸೂರು ಪ್ರಧಾನ ಸಂಪಾದಕ

ನಿಧನ : a 10-10-2010 b 06-10-2011

– ಸಂ

೨ ಮೂರನೇ ಓದುಗನ ಮೂರು ಮಾತು

ಯಾವುದೇ ಗ್ರಂಥರಚನೆ ಆದರೂ ಅದರ ಮೊದಲ ಓದುಗ ಲೇಖಕನೇ (ಅಪವಾದವಾಗಿ ಕೆಲವರು ಲೇಖಕರು ತಾವೇ ಬರೆಯುತ್ತಾರೆ ಇಲ್ಲವೇ ಹೇಳಿ ಬರೆಯಿಸುತ್ತಾರೆ. ಆದರೆ ಓದುವುದಿಲ್ಲ. ಇದಕ್ಕೆ ಪ್ರತಿಯಾಗಿ ಬರೆದ ಮೇಲೆ ಹತ್ತಾರು ಬಾರಿ ಓದಿ ಓದಿ ತಿದ್ದುವವರೂ ಇದ್ದಾರೆ.) ಸಾಮಾನ್ಯವಾಗಿ ಬಹುಮಂದಿ ಲೇಖಕರು ಬರೆದ ಮೇಲೆ ಶುದ್ಧಪ್ರತಿ ಮಾಡಲೆಂದೋ ತಪ್ಪುಗಳನ್ನು ತಿದ್ದಲೆಂದೋ ಅಥವಾ ಬಿಟ್ಟು ಹೋದ ಸಂಗತಿ ಸೇರಿಸಲೆಂದೋ ಇನ್ನೊಮ್ಮೆ ಓದುತ್ತಾರೆ. ಅನಂತರ ಎರಡನೇ ಓದುಗನೆಂದರೆ ಕರಡಚ್ಚು ತಿದ್ದುಗಾರ. ಇವನು ಒಂದೇ ಬಾರಿ ಓದುವುದಿಲ್ಲ. ಹಲವಾರು ಬಾರಿ ಓದುತ್ತಾನೆ. ಅಚ್ಚಿನ ದೋಷಗಳನ್ನು ತಿದ್ದುತ್ತಾನೆ. ಅಷ್ಟೇ ಅಲ್ಲ, ಲೇಖಕನ ದೋಷಗಳನ್ನೂ ತಿದ್ದುತ್ತಾನೆ. ಎಷ್ಟೋ ವೇಳೆ ಪ್ರತಿಭಾವಂತ ಕರಡು ತಿದ್ದುಗಾರ ಲೇಖಕನ ಕೃತಿಯನ್ನು ಸರ್ವಾಂಗಸುಂದರವಾಗಿ ಮಾಡುತ್ತಾನೆ. ಭಾಷೆ, ಶೈಲಿ, ವ್ಯಾಕರಣ, ವಿಚಾರ ಪ್ರತಿಪಾದನಾ ರೀತಿ, ಸಂಗತಿಗಳು, ಆಕರ, ಆಧಾರಗಳ ಪರಿಶೀಲನೆ ಮೊದಲಾದ ಕಾರ್ಯಗಳಿಂದ ಮೂಲಕೃತಿ ವಿಗ್ರಹವನ್ನು ಅಂದಚೆಂದಗಳಿಂದ ಅಲಂಕರಿಸುತ್ತಾನೆ. ಇನ್ನು ಮೂರನೇ ಓದುಗನೆಂದರೆ ಮುನ್ನುಡಿಕಾರ. ಕೃತಿಗೆ ಹರಕೆಯ ತಿಲಕವಿಡುವವನು. ಮೂರನೇ ಓದುಗನ ಕೆಲಸ ಕೃತಿ ರಚನೆಯ ಕೆಲಸವೂ ಅಲ್ಲ, ಪರಿಷ್ಕರಣಕಾರ್ಯವೂ ಅಲ್ಲ. ಓದಿ ತನಗಾದ ಆನಂದ ಅನುಭವ ಅನಿಸಿಕೆಗಳನ್ನು ತಿಳಿಸುವುದು, ಅಬ್ಬಬ್ಬಾ ಎಂದರೆ ಸ್ವಲ್ಪ ಮಟ್ಟಿಗೆ ಸೂಚ್ಯವಾಗಿ ಸಲಹಾರೂಪವಾಗಿ ವಿಮರ್ಶಿಸುವುದು. ಈ ಕಾರ್ಯಕ್ಕೆ ಕೃತಿಗಿಂತ ಕೃತಿಕಾರನಿಗಿಂತ ಮುನ್ನುಡಿಕಾರ ಹಿರಿಯನೂ ತಜ್ಞನೂ ಆಗಿರಬೇಕು. ಆಶೀರ್ವದಿಸುವವರೂ ತಿಲಕವಿಡುವವರೂ ಹಿರಿಯರು ತಾನೆ? ಆದರೆ ನಾನು ಮೂರನೇ ಓದುಗನಾದರೂ, ಮುನ್ನುಡಿಕಾರ ಅಲ್ಲ. ಏಕೆಂದರೆ ಈ ಗ್ರಂಥದ ವ್ಯಕ್ತಿಗಳೆಲ್ಲ ನನಗೆ ಹಿರಿಯರು, ಪೂಜ್ಯರು, ವಿದ್ವಾಂಸರು, ಕಲಾವಿದರು, ಸಾಹಿತಿಗಳು, ಹಳೆಯ ತಲೆಮಾರಿನವರು, ನಾನು ಈ ಯಾವ ಗುಂಪಿಗೂ ಸೇರಿದವನಲ್ಲ. ಕೇವಲ ಒಬ್ಬ ಕನ್ನಡ ಓದುಗ. ನನ್ನ ಆತ್ಮೀಯ ಮಿತ್ರರಾದ ಹರನ್ ಇದಕ್ಕೆ ಎರಡು ಮಾತು ಬರೆದು ಕೊಡಿ ಅಂದಾಗ ಇದರ ಬಗ್ಗೆ ಬರೆಯಬೇಕಾದವನು ನಾನಲ್ಲ ಎಂದು ಎಷ್ಟು ಹೇಳಿದರೂ 'ಪರವಾಗಿಲ್ಲ, ಒಬ್ಬ ಪ್ರಾಮಾಣಿಕ ಓದುಗನ, ಒಂದಕ್ಷರವನ್ನೂ ಬಿಡದೆ ಓದುವ, ತನಗನ್ನಿಸಿದ್ದನ್ನು ಯಾವ ಮುಲಾಜೂ ಇಲ್ಲದೆ ಹೇಳುವ ವ್ಯಕ್ತಿಯ ಮಾತು ಬೇಕಾಗಿದೆ' ಎಂದು ಹೇಳಿ ಬಲವಂತದ ಪ್ರೀತಿಯಿಂದ ಅಚ್ಚಿನ ಕರಡುಪ್ರತಿ ಕೊಟ್ಟು ಹೋದರು. ನಾನು ಬರಹಗಾರ ಅಲ್ಲ, ಮಾತುಗಾರ. ಮಾತಾಡುವವನಿಗೆ ಬಿಡುವೆಲ್ಲಿ ಇರುತ್ತದೆ? ಹಾಗಾಗಿ ತಡವಾಗಿ ಮೂರನೇ ಓದುಗನಾಗಿ ಮೂರು ಮಾತು ಬರೆಯುತ್ತಿದ್ದೇನೆ ನನ್ನ ಆತ್ಮೀಯಮಿತ್ರನ ಪ್ರೀತಿಯ ಕಾಟ ತಡೆಯಲಾರದೆ. ಸಜ್ಜನರು ಕ್ಷಮಿಸಬೇಕು.

ಸಂಗೀತಗಾರನ ಮೆಲುಕುಗಳು : ಪ್ರತಿಭಾವಂತ ಸಂಗೀತಗಾರರಾದ ಬಿ.ಸುಬ್ಬರಾವ್ ಇಂಗ್ಲಿಷಿನಲ್ಲಿ ಬರೆದ ಡಾ॥ ಮೀರಾಮೂರ್ತಿ ಕನ್ನಡಕ್ಕೆ ಅನುವಾದಿಸಿರುವ 'ಸಂಗೀತಗಾರನ ಮೆಲುಕುಗಳು' ರಸಪ್ರಸಂಗಗಳ ಆತ್ಮಕಥೆಯನ್ನು ಓದಿದಾಗ ಥಟ್ಟನೆ ನೆನಪಾದುದು ಡಿವಿಜಿ ಅವರ ಈ ಮಾತುಗಳು : "ಜೀವನಚರಿತ್ರೆಯ (ಆತ್ಮಕಥೆಯ) ಮುಖ್ಯಾಂಶಗಳನ್ನು ಎರಡು ಜಾತಿಯಾಗಿ ವಿಂಗಡಿಸಬಹುದು. 1) ಬಾಹ್ಯ ಸಂಗತಿಗಳು 2) ಅಂತಃಸ್ವಭಾವ. ಬಾಹ್ಯ ಸಂಗತಿಗಳು : ಎಂದರೆ ಚರಿತ್ರನಾಯಕ ಹುಟ್ಟಿದ ತಾರೀಖು, ಸ್ಥಳ, ಕುಲ, ವಂಶಾನುಪೂರ್ವಿ, ವಿದ್ಯಾಭ್ಯಾಸದ ಸ್ಥಳ, ಅವನು ತೇರ್ಗಡೆ ಹೊಂದಿದ ಪರೀಕ್ಷೆಗಳು, ಅವನು ಸಂಪಾದಿಸಿದ ಹುದ್ದೆಗಳು, ಅವನ ವರಮಾನ, ಅವನ ಪ್ರಯಾಣಗಳು, ಅವನು ಮಾಡಿದ ಭಾಷಣಗಳು, ಅವನ ಲೇಖನಗಳು, ಅವನಿಗೆ ಬಂದ ಜಯಪತ್ರಗಳು, ಪ್ರಶಸ್ತಿಗಳು– ಇವು ಹೊರಗಣ ಸಂಗತಿಗಳು. ಈ ಸಂಗತಿಗಳು ಒಬ್ಬಾನೊಬ್ಬ ಮನುಷ್ಯನ ಛಾಯಾಚಿತ್ರಗಳಂತೆ ಅವನ ಆಕಾರ–ವಿಕಾರಗಳನ್ನು ಕೊಂಚ ಮಟ್ಟಿಗೆ ಗುರುತು ಮಾಡಿಕೊಡುತ್ತವೆ.

ಇದಕ್ಕಿಂತ ಮುಖ್ಯವಾದದ್ದು ಅವನ ಅಂತರಂಗದ ನಿರೂಪಣೆ. ಆತನು ತುಂಬ ಪ್ರೀತಿಯಿಂದ ನೋಡುತ್ತಿದ್ದುದು ಎಂಥವರನ್ನ, ಅವನ ಆಪ್ತಮಿತ್ರರು ಯಾರ್‍ಯಾರು, ಅವನ ಸಂಭಾಷಣ ವಿಷಯಗಳೇನು, ಅವನಿಗೆ ಅತ್ಯಂತ ಪ್ರಿಯವಾದ ಕಾಲಕ್ಷೇಪದ ಮಾರ್ಗ ಯಾವುದು –ಸಂಗೀತವೇ, ಸಾಹಿತ್ಯವೇ, ತತ್ತ್ವ ವಿಚಾರಗಳೇ, ಗಣಿತ ಜ್ಞಾನಾದಿ ಶಾಸ್ತ್ರಗಳೇ, ಕಾಡುಹರಟೆಯೇ? ಅವನಿಗೆ ಅತ್ಯಂತ ಪ್ರಿಯವಾಗಿದ್ದ ಗ್ರಂಥ ಯಾವುದು?

ಆಚಾರ ಸಂಪ್ರದಾಯಗಳಲ್ಲಿ, ಸಾರ್ವಜನಿಕ ವಿಷಯಗಳಲ್ಲಿ ಅವನ ಪಂಥ ಯಾವುದು, ಅವನು ಬಹಿರಂಗವಾಗಿ ಸಾರುತ್ತಿದ್ದ ಅಭಿಪ್ರಾಯಗಳಿಗೂ, ಅಂತರಂಗವಾಗಿ ನಡೆಯುತ್ತಿದ್ದ ನಡೆವಳಿಕೆಗಳಿಗೂ ಹೊಂದಿಕೆ ಎಷ್ಟು ಮಾತ್ರ ಇತ್ತು– ಜೀವನಚರಿತ್ರೆಯಿಂದ ನಮಗೆ ತಿಳಿದಿರಬೇಕಾದ ಅಂಶಗಳು ಈ ಅಂತರಂಗದ ಜಾತಿಯವು. (ಜ್ಞಾಪಕಚಿತ್ರ ಶಾಲೆ– ಸಂಪುಟ 1)

ಡಿವಿಜಿ ಅವರು ಜೀವನಚರಿತ್ರೆ ಬಗ್ಗೆ ಹೇಳಿದ ಮಾತುಗಳನ್ನು ಯಥಾವತ್ತಾಗಿ ಆತ್ಮಕಥೆಗೂ ಅನ್ವಯಿಸಬಹುದು. ಇಲ್ಲಿ ಹೇಳುವ ವ್ಯಕ್ತಿ ಚರಿತ್ರನಾಯಕನೇ ಆಗಿರುತ್ತಾನೆ. ಅಷ್ಟೆ.

ಅಂತರಂಗದ ಜಾತಿಗೆ ಸೇರಿದ ಕೃತಿಗಳಿಗೆ ಡಿವಿಜಿ ಅವರ ಜ್ಞಾಪಕ ಚಿತ್ರಶಾಲೆ ಸಂಪುಟಗಳೇ ಸಾಕ್ಷಿ. ವಾಗ್ಗೇಯಕಾರ ವಾಸುದೇವಾಚಾರ್ಯರ 'ನೆನಪುಗಳು', ನವರತ್ನ ರಾಮರಾಯರ 'ಕೆಲವು ನೆನಪುಗಳು', ಮಾಸ್ತಿಯವರ 'ಭಾವ' ಇತ್ಯಾದಿ ಗ್ರಂಥಗಳು ಈ ವರ್ಗದವು ಎನ್ನಬಹುದು. 'ಸಂಗೀತಗಾರನ ಮೆಲುಕುಗಳು' ಈ ಗುಂಪಿಗೆ ಸೇರುವ ಗ್ರಂಥವಾಗಿದೆ.

ಲೇಖಕರೇ ಹೇಳಿಕೊಂಡಂತೆ " 'ಸಂಗೀತಗಾರನ ಮೆಲುಕುಗಳು' ಎಂಬ ಹೆಸರಿನಲ್ಲಿ ನನ್ನ ಬದುಕಿನ ಕೆಲವು ಸ್ವಾರಸ್ಯಮಯ ಪ್ರಸಂಗಗಳನ್ನು ಸಂಗೀತಕ್ಕೆ ಸಂಬಂಧಿಸಿದಂತೆ ಬರೆದಿದ್ದೇನೆ." ಜೀವನಚರಿತ್ರೆಯ ಅಂಶಗಳು ಅಲ್ಲಲ್ಲಿ ಬಂದಿದ್ದರೂ ಅದು ಗೌಣವಾಗಿದೆ. ಒಂದು ರೀತಿ ವ್ಯಕ್ತಿಚಿತ್ರಗಳ ಮಾಲೆ ಎನ್ನಬಹುದು ಈ ಆತ್ಮಕಥಾಭಾಗವನ್ನು.

ಸುಬ್ಬರಾಯರು ಸಮಕಾಲೀನ ಸುಪ್ರಸಿದ್ಧ ವಾದ್ಯಕಾರರೊಡನೆ ವಾಗ್ಗೇಯಕಾರರೊಡನೆ, ಗಾಯಕರೊಡನೆ ತಾವು ಸಲ್ಲಾಪಿಸಿದ, ಸಂದರ್ಶಿಸಿದ ಸಂದರ್ಭಗಳನ್ನು ರಸವತ್ತಾಗಿ ಬಣ್ಣಿಸಿದ್ದಾರೆ. ಎಷ್ಟೋ ಸಂಗತಿಗಳು ಇತರರಿಗೆ ತಿಳಿಯದ ಸಂಗತಿಗಳಾಗಿವೆ. ಉದಾಹರಣೆಗೆ ವಾಸುದೇವಾಚಾರ್ಯರ ಬಗ್ಗೆ ಹೇಳುತ್ತಾ ಒಮ್ಮೆ ಸುಬ್ಬರಾಯರು ಅವರ ತಂಗಿಯನ್ನು ಹಾಡಿಸಿಕೇಳಿ ಆಶೀರ್ವದಿಸಿದಾಗ ಅವರು ತಂದೆಯಲ್ಲಿ ಪಿಸುಗುಟ್ಟಿದರು, ಆಚಾರ್ಯರ ಸಂಗೀತ ಕೇಳಬೇಕೆಂದು ಬಯಸಿದರು. ಆಗ ಶ್ರುತಿಮಾಡಲು ಮನೆಯಲ್ಲಿದ್ದ ತಂಬೂರಿ ತರಿಸಿದಾಗ ಅದನ್ನು ತೆಗೆದುಕೊಂಡು ಹೋದವರು ದುರವಸ್ಥೆಯಲ್ಲಿ ಮರಳಿಸಿದ್ದರು. ಆಗ ಆಚಾರ್ಯರು ವೀಣೆಯ ತಂತಿಗಳನ್ನೇ ಶ್ರುತಿಯಾಗಿ ಬಳಸುವಂತೆ ಶ್ರುತಿ ಮಾಡಲು ಸುಬ್ಬರಾಯರ ಸೋದರಿಗೆ ಹೇಳಿದರು. ಕೆಲವಾರು ಮಟ್ಟುಗಳನ್ನು ಹಾಡಿದರು. ಹಾಗೆ ಹಾಡುತ್ತಿದ್ದಾಗ 'ಈಸು ಶಾಸ್ತ್ರ' ಎಂದು ಹಾಡುತ್ತಾ ಅದನ್ನು ಶ್ಲೇಷೆಯಲ್ಲಿ 'ಈ ಸುಶಾಸ್ತ್ರ' ಎಂದು ಹಾಡಿದರು. ಈ ಪ್ರಸಂಗವನ್ನು ವಿವರಿಸುತ್ತಾ ಸುಬ್ಬರಾವ್ ಹೇಳಿದ ಮಾತು ಮೆಲುಕು ಹಾಕುವ ಮಾತಾಗಿದೆ, "ಒಂದು ಸಣ್ಣ ಪ್ರೇಕ್ಷಕವರ್ಗಕ್ಕಾಗಿ (ಮನೆಯೊಂದರಲ್ಲಿ ಕೆಲವರಿಗಾಗಿ) ಮನೆಯ ಹಾಲಿನಲ್ಲಿ ಅವರು ಹಾಡಿದಾಗ ಇಲ್ಲವೇ ಗುನುಗುನಿಸಿದಾಗ ವಾಸುದೇವಾಚಾರ್ಯರ ಸಂಗೀತ ನಿಜಕ್ಕೂ ಆಕರ್ಷಕವಾಗಿತ್ತು." ಹೀಗೆ ರಸವತ್ತಾಗಿ ಹತ್ತಾರು ಪ್ರಸಂಗಗಳನ್ನು ಬಣ್ಣಿಸಿದ್ದಾರೆ.

ಸುಬ್ಬರಾಯರು ಹಿಂದುಸ್ತಾನಿ ಮತ್ತು ಕರ್ನಾಟಕ ಸಂಗೀತದ ಅತಿರಥ ಮಹಾರಥರನ್ನು ಕಂಡಿದ್ದಾರೆ, ಅವರೊಡನೆ ತಮ್ಮ ಒಡನಾಟವನ್ನು ಬಣ್ಣಿಸಿದ್ದಾರೆ. ಹಿಂದುಸ್ತಾನಿ ಸಂಗೀತ ಕ್ಷೇತ್ರದ ಜಿ.ಎನ್.ಜೋಶಿ, ಜಿ.ಎಲ್. ರಾನಡೆ, ಲಾಲ್ ಖಾನ್, ಡಿ.ವಿ. ಪಲುಸ್ಕರ್, ಶ್ರೀಕೃಷ್ಣರತನ್ ಜಂಕರ್, ಕರ್ನಾಟಕ ಸಂಗೀತದ ಟೈಗರ್ ವರದಾಚಾರ್, ವೀಣೆಶೇಷಣ್ಣ, ಬಿ. ವಾಸುದೇವಾಚಾರ್, ಪಲ್ಲಡಂ ಸಂಜೀವರಾವ್ ಹೀಗೆ ಸಂಗೀತ, ನಾಟಕ, ಹರಿಕಥೆ ಕ್ಷೇತ್ರದ ದಿಗ್ಗಜಗಳ ಪರಿಚಯಭಾಗ್ಯ ಹೊಂದಿದ್ದವರು ಸುಬ್ಬರಾಯರು.

ಸುಬ್ಬರಾಯರು ಪ್ರಮುಖವಾಗಿ ಒಂದು ಸಂಗತಿಯನ್ನು ಎತ್ತಿ ಹಿಡಿದಿದ್ದಾರೆ. ಅದೆಂದರೆ ಹಾರ್ಮೋನಿಯಂ ವಾದ್ಯಕ್ಕೆ ಕೊಡಲೇಬೇಕಾದ ಪ್ರಾಶಸ್ತ್ಯದ ವಿಚಾರ. ಅವರು ಹೇಳುವಂತೆ ಹಿಂದುಸ್ತಾನಿ ಸಂಗೀತಕ್ಕೆ ಹಾರ್ಮೋನಿಯಂ ಅತ್ಯುತ್ತಮ ಪಕ್ಕವಾದ್ಯ. ಅದರ ಲೋಪಗಳು ಏನೇ ಇರಲಿ, ಸಾರಂಗಿ ಅಥವಾ ಪಿಟೀಲು ವಾದ್ಯಗಳು ತಮ್ಮವೇ ಆದ ಅನಿವಾರ್ಯ ತೊಂದರೆಗಳನ್ನೆದುರಿಸುವ ಸಂದರ್ಭದಲ್ಲಿ ಹಾರ್ಮೋನಿಯಂ ಉತ್ತಮ ಬೆಂಬಲ ನೀಡುತ್ತದೆ. ಈ ಮಾತಿನ ಸಮರ್ಥನೆಗೆ ಗಾಂಧೀಜಿ, ಟಿ. ಚೌಡಯ್ಯ, ಶಂಗುಣ್ಣಿನಾಯರ್ ಅವರು ಹಾರ್ಮೋನಿಯಂ ಮೆಚ್ಚಿದ ಹಲವು ಪ್ರಸಂಗಗಳನ್ನು ಉದಾಹರಿಸಿದ್ದಾರೆ. ಸುಬ್ಬರಾಯರು ಹೇಳುವ ಪ್ರಸಂಗಗಳನ್ನು ಓದುತ್ತಾ ಹೋದರೆ ಒಂದು ಕಾಲದಲ್ಲಿ ಸಂಗೀತ ಪ್ರಪಂಚದಲ್ಲಿ ಸುವರ್ಣಯುಗವೊಂದು ಇತ್ತೆಂದು ಭಾಸವಾಗುತ್ತದೆ. ಇದು ಸುಬ್ಬರಾಯರ ಸಮಗ್ರ ಆತ್ಮಕಥೆ ಅಲ್ಲ, ಆತ್ಮಕಥೆಯ ಕೆಲವು ತುಣುಕುಗಳು, ರಸಮಯ ಪ್ರಸಂಗಗಳ ಚಿತ್ರಣ ಎನಿಸುತ್ತದೆ.

ಪಂಡಿತರೊಡನೆ : ಪಂಡಿತರೊಡನೆ ಎಂಬ ಆತ್ಮಕಥೆ ವೇ.ಬ್ರ. ಶ್ರೀ ನರಸಿಂಹಮೂರ್ತಿ ಶಾಸ್ತ್ರೀ ಅವರು ಹೇಳಿದ್ದು ಬೀಚಿ ಜಗನ್ನಾಥ ಜೋಯಿಸರು ನಿರೂಪಿಸಿದ್ದಾರೆ. ಶಾಸ್ತ್ರಿಗಳು ಹೇಳಿದ ಮಾತಿನ ಧಾಟಿ ಇಲ್ಲಿಯ ಬರಹದ ಶೈಲಿಯಲ್ಲಿ ತಿಳಿಯುವುದಿಲ್ಲ. ಬರಹದ ಶೈಲಿಯೇ ಬೇರೆ, ಮಾತಿನ ಶೈಲಿಯೇ ಬೇರೆ. ಆದರೆ ಮಾಹಿತಿ, ಸಂಗತಿಗಳು ಲೇಖಕರದೇ ಆಗಿರುತ್ತವೆ. ಏಕೆಂದರೆ ನಿಟ್ಟೂರು ಶ್ರೀನಿವಾಸರಾಯರ ಆತ್ಮಕಥೆಯನ್ನು ಹತ್ತಾರುವಾರಗಳು ಘಂಟೆಗಟ್ಟಲೆ ನಾನು, ಎಂ.ಎಚ್. ಕೃಷ್ಣಯ್ಯ, ಎಚ್.ಕೆ. ರಂಗನಾಥ್ ಕೇಳಿದಾಗ ಆದ ಅನುಭವವೇ ಬೇರೆ, ಅದು ಬರಹದಲ್ಲಿ ಮೂಡಿದ ಮೇಲೆ ಓದಿದಾಗ ಆದ ಅನುಭವವೇ ಬೇರೆ.

ಅದೇನೇ ಇರಲಿ, ಶಾಸ್ತ್ರಿಗಳು ಹೇಳಿದ ಸಂಗತಿಗಳನ್ನೆಲ್ಲ ಓದುಗರಿಗೆ ತಿಳಿಯುವಂತೆ ಮಾಡುವಲ್ಲಿ ನಿರೂಪಕರು ಯಶಸ್ವಿಯಾಗಿದ್ದಾರೆ. ಶಾಸ್ತ್ರಿಗಳ ಆತ್ಮಕಥೆ ಓದಿದಾಗ ನಮ್ಮ ಮನ ಸೆಳೆಯುವುದು ಅವರ ಅದ್ಭುತ ಅಪರಿಮಿತ ಪಾಂಡಿತ್ಯ, ಚಿಂತನಾಶಕ್ತಿ, ಜ್ಞಾಪಕಶಕ್ತಿ. ಅವರಿಗೆ ಅಂಥ ಜ್ಞಾನಶಕ್ತಿ ದೊರೆಯಲು ಕಾರಣಕರ್ತರಾದವರು ಅವರ ಗುರುಗಳು ಮತ್ತು ಮನೆತನದ ಹಿರಿಯರು ಎಂದರೆ ತಪ್ಪಿಲ್ಲ. ಶೃಂಗೇರಿಯ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು, ಬೆಟಗೇರಿ ನಾಗೇಶಶಾಸ್ತ್ರಿಗಳು, ರಾಮಚಂದ್ರಶಾಸ್ತ್ರಿಗಳು, ಸುಂದರಶಾಸ್ತ್ರಿಗಳು, ಸೀತಾರಾಮಾಚಾರ್ಯ ಒಬ್ಬರೇ ಇಬ್ಬರೇ? ಸಂಸ್ಕೃತ ವ್ಯಾಕರಣ, ತರ್ಕ, ವೇದಾಂತ, ಮೀಮಾಂಸಾಗಳಲ್ಲಿ ದಿಕ್‌ದಿಗಂತಿಗಳು ಇವರಿಗೆ ಬೋಧಕರಾಗಿ ಸಿಕ್ಕಿದ್ದು ಪೂರ್ವಾರ್ಜಿತ ಪುಣ್ಯವಾಗಿತ್ತು. ಶಾಸ್ತ್ರಿಗಳ ಆತ್ಮಕಥೆಯ ಕೆಲವು ಪ್ರಸಂಗಗಳು ರೋಚಕವಾಗಿವೆ. ಶೃಂಗೇರಿ ಪಾಠಶಾಲೆಯಲ್ಲಿದ್ದ ರಾಮಕೃಷ್ಣಶರ್ಮ ಸಂಸ್ಕೃತ ಶಬ್ದೋಚ್ಚಾರಣೆ ಸಹ ಮಾಡಲಾಗದವನು. ಹಠ, ಸತತ ಪರಿಶ್ರಮದಿಂದ ಸಂಸ್ಕೃತ ಕಲಿತು, ಕವಿ ವಿದ್ವಾಂಸನಾಗಿ ತಂಜಾವೂರಿನ ಪಂಡಿತರ ಮಾತಿನ ದೋಷವನ್ನು ಎತ್ತಿ ತೋರಿಸಿದ ಪ್ರಸಂಗ, ಷೋಡಶಕರ್ಮಗಳಲ್ಲಿ ಕಂದಾಚಾರದ ಪ್ರಾಬಲ್ಯವನ್ನು ತಿಳಿಸುತ್ತಾ "ನೀವು ತರ್ಕಮಾಡಿ, ವಿಚಾರಮಾಡಿ,

ನಿರ್ಣಯ ಮಾಡಿ, ಕೊನೆಗೆ ಎಲ್ಲವನ್ನೂ ಇಸ್ಪೀಟು ಎಲೆಯಂತೆ ಮಡಚಿಟ್ಟು ಮೇಲೇಳಿ, ಏಕೆಂದರೆ ಕಂದಾಚಾರದ ಪ್ರವಾಹಕ್ಕೆ ಧಕ್ಕೆಯುಂಟುಮಾಡುವ ಯಾವ ಕಾರ್ಯವನ್ನೂ ಮಾಡ ಹೋಗಬೇಡಿ, ಅದು ಜೇನುಹುಟ್ಟಿಗೆ ಕೈ ಹಾಕಿದಂತಾದೀತು" ಎಂಬ ಮಾತು ಮನನೀಯವಾಗಿದೆ. ಹೀಗೆ ಸ್ವಾರಸ್ಯಕರ ಪ್ರಸಂಗಗಳಿಂದ ಕೂಡಿದ ಆತ್ಮಕಥೆ 'ಪಂಡಿತರೊಡನೆ' ಕಾಣುತ್ತೇವೆ.

ನನ್ನ ಬದುಕು: 'ನನ್ನ ಬದುಕು' ಪ್ರೊ॥ ಆರ್. ಎನ್. ದೊರೆಸ್ವಾಮಿ ಅವರಿಂದ ಪುನರ್ರಚಿತ ಆತ್ಮಕಥೆ ಆಗಿದೆ. ಪ್ರಣತಾರ್ತಿಹರನ್ನರ ಪ್ರಯತ್ನದಿಂದ ಹೊರಹೊಮ್ಮಿದ ದೊರೆಸ್ವಾಮಿ ಅವರ ಆತ್ಮಕಥನ ಎಂದರೆ ತಪ್ಪಾಗದು. 'ಮಹತೀ' ಎಂಬ ಅಭಿನಂದನ ಗ್ರಂಥವೊಂದನ್ನು ಪ್ರೊ॥ ಆರ್. ಎನ್. ದೊರೆಸ್ವಾಮಿ ಅವರ ಬಗ್ಗೆ ಶ್ರಮಪಟ್ಟು ಹೊರತಂದ ಕೀರ್ತಿ ಪ್ರಣತಾರ್ತಿಹರನ್‌ರಿಗೆ ಸಲ್ಲಬೇಕು. ಆದರ ಬಿಡುಗಡೆ ಸಂದರ್ಭದಲ್ಲಿ ನಾನು ಭಾಗವಹಿಸಿದ್ದೆ.

ದೊರೆಸ್ವಾಮಿ ಅವರು ವೈಣಿಕರಾಗಿ ಹೆಸರು ಮಾಡಿದವರು. ಅವರ ತಂದೆಯ ಛಲ ಶ್ರೀರಕ್ಷೆಗಳೇ ಅವರು ವೈಣಿಕರಾಗಲು ಕಾರಣವಾಯಿತು. ಈ ಕಾಲದಲ್ಲಿ ತಮ್ಮ ಮಗನನ್ನು ಇಂಜಿನಿಯರ್ ಅಥವಾ ಡಾಕ್ಟರ್ ಮಾಡಲು ಛಲ ತೊಡುವ ತಾಯಿತಂದೆಗಳ ಹಾಗೆ ಆ ಕಾಲದಲ್ಲಿ ದೊರೆಸ್ವಾಮಿ ಅವರ ತಂದೆ ಮಗನನ್ನು ಕಲಾವಿದನನ್ನಾಗಿ ಮಾಡಲು ಪಟ್ಟ ಶ್ರಮ ಮೆಚ್ಚುವಂಥದ್ದು. ಆದರೆ ದೊರೆಸ್ವಾಮಿ ಅವರ ತಂದೆಯವರ ಧ್ಯೇಯ ಇಂದಿಗೂ ಮಾದರಿ ಧ್ಯೇಯವಾಗಿದೆ. ಸಂಗೀತಾಭ್ಯಾಸಕ್ಕಾಗಿ ಮಗನನ್ನು ತಮಿಳುನಾಡಿಗೆ ಕಳಿಸಲು ನಿರ್ಧರಿಸಿದಾಗ ಅಧ್ಯಾಪಕರು, ಬಂಧುಗಳು, ಮಿತ್ರರು ಉಗ್ರವಾಗಿ ಪ್ರತಿಭಟಿಸಿದಾಗ ತಂದೆ ಹೇಳಿದ ಮಾತು, "ನನ್ನ ಮಗ ಶಾಲೆಯಲ್ಲಿ ಓದಿ ಮುಂದೆ, ಅವನೂ ನಮ್ಮಂತೆಯೇ ಒಬ್ಬ ಸರ್ಕಾರಿ ಗುಲಾಮನಾಗಿ ಕೆಲಸ ಮಾಡುವುದು ನನಗೆ ಇಷ್ಟವಿಲ್ಲ. ಅವನು ಒಬ್ಬ ಶ್ರೇಷ್ಠ ಕಲಾವಿದನಾಗಿ ಸ್ವತಂತ್ರ ಜೀವನವನ್ನು ನಡೆಸಿ ಎಲ್ಲರಿಂದಲೂ ಗೌರವಿಸಲ್ಪಡುವ ಒಬ್ಬ ಪ್ರತಿಷ್ಠಿತ ವ್ಯಕ್ತಿ ಆಗಬೇಕೆಂಬುದೇ ನನ್ನ ಅಭಿಲಾಷೆ." ತಂದೆಯ ಈ ಅಭಿಲಾಷೆಯನ್ನು ಹೇಗೆ ನೆರವೇರಿಸಿದರು ಎಂಬುದೇ ವೈಣಿಕ ದೊರೆಸ್ವಾಮಿ ಅವರ ಆತ್ಮಕಥನವಾಗಿದೆ. ಮಕ್ಕಳ ಶಿಕ್ಷಣದಲ್ಲಿ ಧ್ಯೇಯ ಸಾಧನೆಗಳಲ್ಲಿ ತಾಯಿ ತಂದೆ ಮತ್ತು ಮಕ್ಕಳ ಇಬ್ಬರ ಪಾತ್ರವೂ ಮಹತ್ತರವಾದುದು ಎಂಬುದು ಇಲ್ಲಿ ತಿಳಿಯುತ್ತದೆ.

ನೆನಪು ಕೆದರಿದಾಗ : ಗಡಿರಕ್ಷಣಾದಳದ ಮೇಜರ್ ಎಚ್. ಸಿ. ವೇಣುಗೋಪಾಲ್ ಅವರ ಆತ್ಮಕಥೆಯನ್ನು ಆರ್. ಎಲ್. ಅನಂತರಾಮಯ್ಯ ಅವರು 'ಅನುವಾದದ ಗ್ರಂಥ' ಎನ್ನಿಸದ ಹಾಗೆ ಇಂಗ್ಲಿಷಿನಿಂದ ಕನ್ನಡಕ್ಕೆ ಇಳಿಸಿದ್ದಾರೆ. 1922 ರಲ್ಲಿ ಜನಿಸಿ 03.09.2003 ರಲ್ಲಿ ನಿಧನರಾದ ವೇಣುಗೋಪಾಲ್ ಅವರ ಆತ್ಮಕಥೆ ಓದುತ್ತಿದ್ದರೆ ಪರತಂತ್ರಭಾರತದಲ್ಲಿ ಸ್ವಾತಂತ್ರ್ಯ ಯೋಧನಾದ ಯುವಕ ಸ್ವತಂತ್ರ ಭಾರತದಲ್ಲಿ ವೀರಸೇನಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಣೆ ಮಾಡಿ ಯುದ್ಧರಂಗದಲ್ಲಿ ಅಂತೆಯೇ ಸಾಮಾಜಿಕ ರಂಗದಲ್ಲಿ ಅದ್ಭುತ ಸೇವೆ ಮಾಡಿದ ಕನ್ನಡಿಗನೊಬ್ಬನ ರೋಮಾಂಚಕಾರಿ ಕಥೆ ಆಗಿದೆ. 1942ರ ಚಳವಳಿಯಲ್ಲಿ ಭಾಗವಹಿಸಿದ ವೇಣುಗೋಪಾಲರ ಹೋರಾಟ ಆ ಕಾಲದ ಯುವಕರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಿದ್ದ ರೀತಿ ನೀತಿಗೆ ಸಾಕ್ಷಿಯಾಗಿದೆ. ಬಾಳಿನಲ್ಲಿ ಸಣ್ಣ ಘಟನೆ ಬೃಹತ್ ಪ್ರಭಾವ ಬೀರಬಲ್ಲದು, ಸಣ್ಣದೊಂದು ಹಚ್ಚಿದ ದೀಪ ದೊಡ್ಡದಾಗಿ ಪ್ರಜ್ವಲಿಸಬಹುದು. ಪಟಾಕಿ ಹಬ್ಬದ ದಿನ ಗೊರೂರಿನಲ್ಲಿದ್ದಾಗ ವೇಣುಗೋಪಾಲ್ ಅವರು ತಂದೆಯನ್ನು ಪಟಾಕಿ ಕೊಡಿಸಲು ಪೀಡಿಸುತ್ತಿದ್ದಾಗ ಅಲ್ಲೇ ಇದ್ದ ಕನ್ನಡದ ಹಿರಿಯ ಸಾಹಿತಿ ಗೊರೂರು

ರಾಮಸ್ವಾಮಿ ಅಯ್ಯಂಗಾರರು ಹೇಳಿದ ಮಾತು ಮನನೀಯವಾಗಿದೆ, "ನಿಮ್ಮ ತಂದೆ ಕಷ್ಟಪಟ್ಟು ಸಂಪಾದಿಸಿರುವ ಹಣವನ್ನು ಇಂಗ್ಲಿಷ್ ಜನರಿಗೆ ಒಪ್ಪಿಸಲು ಏಕೆ ಬಯಸುತ್ತೀಯೆ? ನಮ್ಮ ಜನಕ್ಕೇ ಸಹಾಯವಾಗುವಂತೆ ಹಣ್ಣುಗಳನ್ನು ಕೊಳ್ಳಬಾರದೇ?" ಈ ಮಾತು ವೇಣುಗೋಪಾಲರಲ್ಲಿ ಎಂಥ ಅಂತರ್ದೃಷ್ಟಿ ಮೂಡಿಸಿತು ಎಂದರೆ ಮಣಿಪುರದಲ್ಲಿ ಸೇನೆಯ ಸಬಲೀಕರಣದ ಜತೆಗೆ ಕೈಗೊಂಡ ಸಮಾಜೋದ್ಧಾರ ಕಾರ್ಯ ಕಂಡಾಗ ನಮ್ಮಲ್ಲಿ ರಾಜಕಾರಿಣಿಗಳಿಗೆ, ಸಮಾಜ ಸುಧಾರಕರಿಗೆ ಇಷ್ಟು ಮಟ್ಟಿಗೆ ಜನತೋದ್ಧಾರ ಮಾಡಲು ಶಕ್ತವೇ? ಎನ್ನಿಸುತ್ತದೆ.

ಸೇನೆಯಲ್ಲಿ ಊಟ ವಸತಿಯನ್ನು ಸುವ್ಯವಸ್ಥೆಗೊಳಿಸುವುದರ ಜತೆಗೆ ಕುಟುಂಬಗಳಿಗೆ ನಲ್ಲಿ ನೀರು ವ್ಯವಸ್ಥೆ, ಸರಳಕಕ್ಕಸು ನಿರ್ಮಾಣ, ಉತ್ತಮ ರಸ್ತೆ, ವೈದ್ಯಕೀಯ ನೆರವು ಏರ್ಪಡಿಸಿದಾಗ ಅವರು ಹೇಳಿದ ಮಾತು ಗಮನಾರ್ಹವಾಗಿದೆ, "ಕುಟುಂಬಗಳಿಗೆ ಸರಿಯಾದ ವಸತಿ ಸೌಲಭ್ಯ ಅಗತ್ಯ. ಅದನ್ನು ನಾವೇ ಕಟ್ಟಿಕೊಳ್ಳಬೇಕು. ಲೋಕೋಪಯೋಗಿ ಇಲಾಖೆಗೆ ವಹಿಸಿದರೆ ಹತ್ತು ಪಟ್ಟು ದುಬಾರಿ ಆಗುತ್ತದೆ ಮತ್ತು ಮುಗಿಯಲು ಹಲವು ವರ್ಷಗಳು ಬೇಕಾಗುತ್ತವೆ. ಮಣಿಪುರಿಗಳು ಮರ, ಬೆತ್ತ, ಮಣ್ಣು ಗಾರೆಗಳಿಂದ ಹೇಗೆ ಮನೆ ಕಟ್ಟುತ್ತಿದ್ದಾರೋ ಹಾಗೆಯೇ ಇಲ್ಲೂ ಕಟ್ಟಬಹುದು" ಎಂದು ಸ್ಥಳೀಯರಿಂದಲೇ ಮನೆಕಟ್ಟಿಸಿದರು.

ಗಡಿ ಪ್ರದೇಶದಲ್ಲಿ ಮಾರ್ಕೋಟ್ ಹಳ್ಳಿಗೆ ಸೇರುವ ರಸ್ತೆಯನ್ನು ಗ್ರಾಮಸ್ಥರಿಂದಲೇ ನಿರ್ಮಾಣ ಮಾಡಲು ಹೇಳಿ ಅದರ ಉದ್ಘಾಟನೆಗೆ ಬಂದಾಗ ಪ್ರೀತಿವಿಶ್ವಾಸದಿಂದ ಗ್ರಾಮಸ್ಥರು ರಸ್ತೆ ನಿರ್ಮಾಣ ಮಾಡಲು ಕಾರಣಕರ್ತರಾದ ವೇಣುಗೋಪಾಲ್‌ರಿಗೆ ಭವ್ಯ ಸ್ವಾಗತ ನೀಡಿದರು. ಒಂದು ಮಿಥುನವನ್ನು ಉಡುಗೊರೆಯಾಗಿ ಅರ್ಪಿಸಲು ಸಿದ್ಧರಾದರು. ಉಡುಗೊರೆ ಅರ್ಪಿಸುವುದು ಎಂದರೆ ಆ ಪ್ರಾಣಿಯನ್ನು ಕೊಂದು ಅಡುಗೆ ಮಾಡಿ ಅತಿಥಿಗಳಾದ ವೇಣುಗೋಪಾಲರಿಗೆ ಬಡಿಸುವುದು. ಸಸ್ಯಾಹಾರಿಯಾದ ಇವರಿಗೆ ಪ್ರಾಣಸಂಕಟಕ್ಕೆ ಇಟ್ಟುಕೊಂಡಿತು, ಆ ಪ್ರಾಣಿಗೆ ಸಂಕಟ ಒದಗುವುದರ ಜತೆಗೆ. ಆಗ ಅವರು ಅವರ ಪ್ರೀತಿ ವಿಶ್ವಾಸದ ಉಡುಗೊರೆಯನ್ನು ತಿರಸ್ಕರಿಸುವಂತಿಲ್ಲ. ಹಾಗಂತ ಮಾಂಸಾಹಾರ ಮಾಡುವಂತಿಲ್ಲ. ಆಗೊಂದು ಉಪಾಯ ಮಾಡಿದರು. ಅವರಿಗೆ ಹೇಳಿದರು "ಈ ಪ್ರಾಣಿ ಕಮಾಂಡೆಂಟ್ 2 ನೇ ಎಂ. ಆರ್. ಗೆ ಸೇರಿದ್ದು. ಏಕೆಂದರೆ ಅದರ ನಾಯಕ ನಾನು. ನನಗೆ ಕೊಟ್ಟಿದ್ದು ಅದಕ್ಕೆ ಸೇರಿದ್ದು. ಆದ್ದರಿಂದ ಅದರ ಹಣೆ ಮೇಲೆ 'ಈ ಪ್ರಾಣಿ ಕಮಾಂಡೆಂಟ್ 2 ನೇ ಎಂ. ಆರ್. ಗೆ ಸೇರಿದ್ದು' ಎಂದು ಪಟ್ಟಿ ಬರೆದು ಅದರ ಕೊರಳಿಗೆ ಹಾಕಿ ಕಾಡಿನಲ್ಲಿ ಸ್ವತಂತ್ರವಾಗಿ ತಿರುಗಾಡಲು ಬಿಡಿ" ಎಂದರು. 'ಹೀಗೆ ಮಾಡಿದರೆ ನೀವು ಉಡುಗೊರೆ ಕೊಟ್ಟ ಹಾಗೆ, ನಾನು ಸ್ವೀಕರಿಸಿದ ಹಾಗೆ' ಎಂದು ಸಮಸ್ಯೆಯನ್ನು ಪರಿಹರಿಸಿದರು. ಎಂದರೆ ವೇಣುಗೋಪಾಲ್ ಕೇವಲ ಉನ್ನತ ಸೇನಾಧಿಕಾರಿ ಅಷ್ಟೇ ಆಗಿರಲಿಲ್ಲ. ಚಾತುರ್ಯದ ಖಣಿ. ಜನರನ್ನು ಒಲಿಸಿಕೊಳ್ಳುವ ಹಾಗೆಯೇ ಸಮಸ್ಯೆಯನ್ನು ಪರಿಹರಿಸುವ ಕುಶಲಿಗಳಾಗಿದ್ದರು. ಇದರ ಜತೆಗೆ ಕುಟುಂಬದ ಕಥೆಯನ್ನು ಹೇಳುತ್ತಾ ಹೇಳುತ್ತಾ ಹೆಜ್ಜೆಹೆಜ್ಜೆಗೆ ಸಮಸ್ಯೆಗಳನ್ನು ಪರಿಹರಿಸುತ್ತಾ ಯೋಧನೆಂದರೆ ಹೋರಾಡುವವನಷ್ಟೇ ಅಲ್ಲ ಸಮಾಜಸುಧಾರಕನೂ ಆಗಬಲ್ಲ ಎಂಬುದನ್ನು ಸಾಬೀತುಗೊಳಿಸಿದ ಅಪೂರ್ವ ವ್ಯಕ್ತಿ ವೇಣುಗೋಪಾಲ್ ಆಗಿದ್ದಾರೆ. ಮಠದ ಉದ್ಧಾರದಲ್ಲಿ ಮನೆ ಮರೆತ ವ್ಯಕ್ತಿ ಆಗಿರಲಿಲ್ಲ. ತನ್ನ ಕುಟುಂಬದ ಕಡೆಗೂ ಸಾಕಷ್ಟು ಗಮನವಿತ್ತಿದ್ದಾರೆ. ಕನ್ನಡದಲ್ಲಿ ಯೋಧಸಾಹಿತ್ಯ ಬಹಳ ಕಡಿಮೆ. ಆತ್ಮಕಥನಗಳೇ ಕಡಿಮೆ, ಅದರಲ್ಲಿ ಕನ್ನಡ ರಣವೀರರ ಆತ್ಮಕಥೆ ಎಲ್ಲಿ ಬರಬೇಕು? ಇಂಥ ಸನ್ನಿವೇಶದಲ್ಲಿ ವೇಣುಗೋಪಾಲರ ಆತ್ಮಕಥೆ ಕನ್ನಡಕ್ಕೆ

ಒಂದು ವಿಶೇಷ ಕೊಡುಗೆ ಎಂದರೆ ತಪ್ಪಿಲ್ಲ. ನೆಲಯೋಧ ಕನ್ನಡಿಗರ ಕಥೆಗಳ ಹಾಗೆ ಜಲಯೋಧ ಕನ್ನಡಿಗರ, ಗಗನಯೋಧ ಕನ್ನಡಿಗರ ಆತ್ಮಕಥೆಗಳು ಕನ್ನಡದಲ್ಲಿ ಮೂಡಿಬರಬೇಕಾಗಿದೆ. ಕೊಡಗಿನ ವೀರರು ಈ ವಿಷಯದಲ್ಲಿ ಒಂದು ಅಪವಾದವಾಗಿದ್ದಾರೆ ಎನ್ನಬಹುದು. ಜನರಲ್ ತಿಮ್ಮಯ್ಯ, ಕಾರಿಯಪ್ಪನವರಂತಹ ಸೇನಾನಿಗಳ ಕಥೆ ಆದರ್ಶಪ್ರಾಯ, ರೋಮಾಂಚಕರವಾಗಿದೆ. ವೇಣುಗೋಪಾಲರ ಕಥೆ ಪವಾಡಸದೃಶ ಘಟನೆಗಳನ್ನು ಒಳಗೊಂಡಿದ್ದರೂ ಪುರುಷಸಾಹಸದ ಆತ್ಮಕಥೆಯಾಗಿದೆ.

ಮತ್ತೂರಿನಿಂದ ಬ್ರಿಟನ್‌ಗೆ : ಜನಪ್ರಿಯ ವಾಗ್ಮಿಗಳೂ ವ್ಯಾಖ್ಯಾನಕಾರರೂ ಆದ ಮತ್ತೂರು ಕೃಷ್ಣಮೂರ್ತಿಗಳ ಆತ್ಮಕಥನವನ್ನು 13 ಕ್ಯಾಸೆಟ್ಟುಗಳಲ್ಲಿ ಧ್ವನಿಮುದ್ರಿಸಿಕೊಂಡು ಬರಹದ ರೂಪಕ್ಕೆ ಇಳಿಸಿದವರು ಸುಮನಾ ವಿಶ್ವನಾಥ್ ಅವರು. ಒಂದು ಕಾಲದಲ್ಲಿ ಆಂಡವನ್ ಸ್ವಾಮಿಗಳ ರಾಮಾಯಣವನ್ನು ಇದೇ ರೀತಿ ಕ್ಯಾಸೆಟ್‌ಗಳಿಂದ ಮತ್ತೂರರು ಕನ್ನಡಕ್ಕೆ ತಂದಿದ್ದಾರೆ. ಒಂದು ಆತ್ಮಕಥೆಯನ್ನು ಕಾರಂತ, ಮಾಸ್ತಿ, ಮೂರ್ತಿರಾಯರು ಮೊದಲಾದವರು ಬರೆದಂತೆ ತಾವೇ ಬರೆಯುವುದು ತಾಜಾಪದ್ಧತಿ. ಹೇಳಿಬರೆಯಿಸುವುದು ಇನ್ನೊಂದು ಬಗೆ. ಕ್ಯಾಸೆಟ್ಟಿನಲ್ಲಿ ಧ್ವನಿಮುದ್ರಿಸಿ ಅದನ್ನು ಸಂಪಾದಿಸುವುದು ಮತ್ತೊಂದು ಬಗೆ. ಕ್ಯಾಸೆಟ್ಟಿನಿಂದ ಬರಹಕ್ಕೆ ಬಂದಾಗ ಧ್ವನಿ, ಧಾಟಿ, ಹಾವಭಾವ, ಒತ್ತು, ಕಾಕು, ಹೇಳುವವರ ಮತ್ತು ಕೇಳುವವರ ಮನಸ್ಸಿನ ಪ್ರತಿಕ್ರಿಯೆಗಳು ಇವುಗಳೆಲ್ಲ ಧ್ವನಿಮುದ್ರಿತರೂಪ ಪುಸ್ತಕವಾದಾಗ ಬರುವುದಿಲ್ಲ. ಆದರೆ ಸಮಗ್ರ ಮಾಹಿತಿ ವಿವರಗಳು ಸಿಗುತ್ತವೆ. ಮಾತಿನ ರೂಪ ಬರಹದ ರೂಪ ಎರಡಕ್ಕೂ ವ್ಯತ್ಯಾಸವಿದೆ. ಆದ್ದರಿಂದ ಲಿಪಿಕಾರರು ಮತ್ತು ಆತ್ಮಕಥನಕಾರರ ಪ್ರತಿಭೆ ಎಷ್ಟೆಷ್ಟು ಎಂದು ಗುರುತಿಸಲಾಗದು. ಇದು ಕ್ಯಾಸೆಟ್ ಬರಹದ ಮಿತಿ. ಆದರೂ ಸುಮನಾ ಅವರು ಸಾಕಷ್ಟು ಪರಿಶ್ರಮದಿಂದ ಮತ್ತೂರರ ಆತ್ಮಕಥೆಯನ್ನು ಬರಹದಲ್ಲಿ ಸೆರೆಹಿಡಿದಿದ್ದಾರೆ.

ಇದು ಹೇಳುತ್ತಾ ಬರೆಯಿಸಿರುವುದಲ್ಲ. ಯಾರೇ ಆದರೂ ಕ್ಯಾಸೆಟ್‌ನಲ್ಲಿ ನೆನಪುಗಳನ್ನು ಹೇಳುವಾಗ ಸಮಯ ಸನ್ನಿವೇಶಗಳನ್ನು ಒಂದಾದ ನಂತರವೇ ಹಾಗೇ ಹಾಗೆಯೇ ಹೇಳುವುದು ಅಸಾಧ್ಯ. 13 ಕ್ಯಾಸೆಟ್‌ಗಳಲ್ಲಿ ಹಂಚಿಹೋಗಿರುವ ಮತ್ತೂರರ ನೆನಪುಗಳನ್ನು ಸಮಯೋಚಿತವಾಗಿ ಸೇರಿಸಿಕೊಂಡು, ಓದುಗರಿಗೆ ಓಘವು ಎಲ್ಲೂ ತಪ್ಪದಂತೆ ಸುಮನಾ ವಿಶ್ವನಾಥ್ ಅವರು ಅದನ್ನು ಸಾಕಷ್ಟು ಯಶಸ್ವಿಯಾಗಿ ಟೇಪಿನಿಂದ ಪೇಜಿಗೆ ಇಳಿಸಿದ್ದಾರೆ.

ಮತ್ತೂರರ ಕುಟುಂಬದ ಜೀವನಕಥೆ ಕೇಳಿದರೆ ಅನೇಕ ಬಡ ಸಂಕೇತಿ ಕುಟುಂಬಗಳ ಕಥೆಗಳ ಪ್ರತಿನಿಧಿಯಂತಿದೆ. ಬಡತನ, ಇಸ್ಪೀಟು ಚಟ ಸಂಕೇತಿ ಜನಾಂಗದಲ್ಲಿ ಅವಿಭಾಜ್ಯ ಸಂಗತಿ ಆಗಿರುವುದನ್ನು ಚೆನ್ನಾಗಿ ತಿಳಿಸಿದ್ದಾರೆ. ಸಂಪ್ರದಾಯದ ಕಾಠಿಣ್ಯಕ್ಕೆ ಲಂಗೋಟಿ ಪ್ರಸಂಗ ಸಾಕ್ಷಿ ಆಗಿದೆ.

ಪರದೇಶದಲ್ಲಿ ಕೆಲಸಮಾಡಿ 'ಭಲೆ' ಎನ್ನಿಸಿಕೊಳ್ಳುವುದು ಸಾಮಾನ್ಯ ಸಂಗತಿ ಅಲ್ಲ. ಯುದ್ಧದಲ್ಲಿ ಗೆದ್ದವಾರ್ತೆ ಕೇಳಲು ಆನಂದಕರವಾಗಿರುತ್ತದೆ. ಆದರೆ ಯುದ್ಧದ ಬವಣೆಯು 'ವಾರ್ತೆ ಕೇಳಿ' ಸುಖಿಸಿದವರಿಗೆ ಅರ್ಥವಾಗದು. ಮತ್ತೂರರು ಬ್ರಿಟನ್ನಿನಲ್ಲಿ ಭಾರತೀಯ ವಿದ್ಯಾ ಭವನದ ಉನ್ನತಿಯನ್ನು ಸಾಧಿಸಿದ ಕಥೆ ಕೇಳಲು ಚೆನ್ನ, ಆದರೆ ಅವರು ಪಟ್ಟ ಪಾಡು ದೇವರಿಗೇ ಪ್ರೀತಿ. ಆದರೆ ಅವರಿಗೆ ಸಜ್ಜನಸಂಗ, ದೈವಬಲ ಒದಗಿದ್ದರಿಂದ ಅವರು ಬಚಾವಾಗಿ ಯಶಸ್ಸಿನ ಶಿಖರ ಏರಿದರು. ರಾತ್ರಿ 12 ಕ್ಕೆ ಮುಹೂರ್ತ ಇಟ್ಟುಕೊಂಡು ಆತ್ಮಹತ್ಯೆಗೆ ಮತ್ತೂರರು ಸಿದ್ಧರಾಗಿದ್ದರು ಆದಿನ. ಏಕೆಂದರೆ 8–10 ತಿಂಗಳಾದರೂ ಭವನದ ಯಾವುದೇ ಚಟುವಟಿಕೆಯನ್ನು

ನಡೆಸಲು ಸಾಧ್ಯವಾಗಿರಲಿಲ್ಲ. ಚಂದ್ರಕಾಂತ ಮಾಸ್ಟರ್ ಬಳಿ ಹೇಳಿದಾಗ ಅವರು ಇಂಡಿಯಾಕ್ಕೆ ಹಿಂತಿರುಗಲು ಟಿಕೆಟ್ ಕೊಡಲು ಬಂದರು. ಇದರಿಂದ ಅವಮಾನ, ದುಃಖ, ನಿರಾಸೆ ಉಕ್ಕಿಬಂದಿತು. ಅದು ಆತ್ಮಹತ್ಯೆ ತೀರ್ಮಾನಕ್ಕೆ ಕಾರಣವಾಗಿತ್ತು. 11.40 ರ ವೇಳೆಗೆ ನಿದ್ರೆ ಮಾತ್ರೆ ತೆಗೆದುಕೊಂಡು 12 ಘಂಟೆ ಆಗಲಿ ಅಂತ ಕಾದವರು 20 ನಿಮಿಷ ಕಾಯುವ ವೇಳೆಯಲ್ಲಿ ರಾಮಾಯಣ ತಿರುವಿ ಹಾಕಿದರು. ಹನುಮಂತ ಸೀತೆಯನ್ನು ಕಾಣದೆ ಆತ್ಮಹತ್ಯೆಯ ತೀರ್ಮಾನಕ್ಕೆ ಬಂದು ಕೊನೇ ಪ್ರಯತ್ನ ಮಾಡುತ್ತೇನೆ ಎಂದು ನಿರ್ಧರಿಸಿದ ಪ್ರಸಂಗ ಓದಿ ಕೊನೇ ಪ್ರಯತ್ನವಾಗಿ ದಲಾಲ್‌ಜೀನ ಕಾಣುವ ನಿರ್ಧಾರ ಮಾಡಿ ಆತ್ಮಹತ್ಯೆ ನಿಧಾರ ಕೈಬಿಟ್ಟರು ... ಎಂಥೆಂಥ ದುರ್ಭರ ಪ್ರಸಂಗಗಳನ್ನು ಮತ್ತೂರರು ಎದುರಿಸಿದ್ದಾರೆ ಎಂಬುದಕ್ಕೆ ಇದೊಂದು ನಿದರ್ಶನ ಅಷ್ಟೆ. ಹಾಗೆಯೇ ತಮ್ಮ ಕೈಲಿದ್ದ 60 ಪೌಂಡಿನಲ್ಲಿ 50 ಪೌಂಡನ್ನು ಖರ್ಚುಮಾಡಿ ಕೇವಲ 10 ಪೌಂಡಿನ ಖಾತೆದಾರನಾಗುವ ದುಃಸ್ಥಿತಿ ಬಂದರೂ ಆ 50 ಪೌಂಡಿನ ಆತ್ಮತ್ಯಾಗ, ನಿಃಸ್ವಾರ್ಥಕೊಡುಗೆ, ಭವನಕ್ಕೆ 10000 ಕ್ಕೂ ಮಿಗಿಲು ನೆರವನ್ನು ಕೊಟ್ಟದ್ದು ದೈವಕೃಪೆಗೆ ಸಾಕ್ಷಿ ಆಗಿದೆ. ಹೀಗೆ ರೋಮಾಂಚಕಾರಿ ಘಟನೆಗಳ ಸರಮಾಲೆಯನ್ನೇ ಭವನ್ಸ್ ಅನುಭವಗಳ ಕಥನದಲ್ಲಿ ನಿರೂಪಿಸಿದ್ದಾರೆ. ಅಪೂರ್ವ ವ್ಯಕ್ತಿಗಳ ದರ್ಶನ, ಪರಿಚಯಲಾಭ ಮತ್ತೂರರ ಪಾಲಿಗೆ ದೊರೆತ ಭಾಗ್ಯಗಳಲ್ಲಿ ಒಂದು. ಅದಕ್ಕೆ ನಿದರ್ಶನ ಪ್ರೊ॥ ಬರ್ಕ್‌ರ ಪರಿಚಯ. ಭವನದ ಪುಸ್ತಕ ಭಂಡಾರ ಬಳಸಲು ಬಂದ ಸಸ್ಯಾಹಾರಿ, ಮದ್ಯಪಾನದೂರಿ, ಸತ್ಯವ್ರತಧಾರಿ ಬರ್ಕ್ ಅವರನ್ನು ಮತ್ತೂರು ಕೇಳಿದರು, 'ಭಾರತೀಯ ವೇದಾಂತವನ್ನಲ್ಲದೆ ಪಾಶ್ಚಾತ್ಯದರ್ಶನಗಳನ್ನೆಲ್ಲಾ ಓದಿದ್ದೀರಲ್ಲಾ, ಅವುಗಳ ಒಟ್ಟು ಸಾರ ಏನು?' ಎಂದಾಗ ಅವರು ಹೇಳಿದ್ದು, "ಬಹಳ ವರ್ಷಗಳ ಕಾಲ ದೀರ್ಘಕಾಲದ ಅಧ್ಯಯನದಿಂದ, ಅದೂ ಗಂಭೀರ ಅಧ್ಯಯನದಿಂದ ಒಂದು ವಿಷಯ ಸ್ಪಷ್ಟವಾಗಿದೆ, ಅದೇನೆಂದರೆ ಪ್ರಪಂಚದ ಎಲ್ಲ ರೀತಿಯ ಸಮಸ್ಯೆಗಳಿಗೆ ಒಂದೇ ಉತ್ತರ ಅದ್ವೈತ. ಭಗವದ್ಗೀತೆಯಲ್ಲಿ ವಿವರವಾಗಿ ಹೇಳಿರುವುದೂ ಇದನ್ನೇ." ಹತ್ತಾರು ವರ್ಷ ಆಳವಾಗಿ ಜಗತ್ತಿನ ದರ್ಶನಗ್ರಂಥಗಳನ್ನೆಲ್ಲಾ ಅಧ್ಯಯನ ಮಾಡಿದ ವ್ಯಕ್ತಿ ಕಂಡುಕೊಂಡ ಸತ್ಯ ಇದು. ಇಂಥ ವ್ಯಕ್ತಿಯನ್ನು ದರ್ಶಿಸಿ ಸನ್ಮಾನಿಸಿದ ಭಾಗ್ಯ ಮತ್ತೂರರದು.

ಮಾರ್ಟಿನ್ ಸ್ಟೀವನ್ಸ್ ಎಂಬ ಮಾಂಸಾಹಾರಿ ವ್ಯಕ್ತಿ ಮತ್ತೂರರ ಜತೆ ಮೂವರು ಭಾರತದ ಗಣ್ಯ ವ್ಯಕ್ತಿಗಳನ್ನು ಔತಣಕ್ಕೆ ಆಹ್ವಾನಿಸಿದಾಗ ರಸಂ, ಕಾಯಿ ಚಟ್ನಿ, ಮಸಾಲೆದೋಸೆ, ವಡೆ, ಉಪ್ಪಿಟ್ಟು, ಪೂರಿ, ಉಪ್ಪಿನಕಾಯಿ ಎಲ್ಲವನ್ನೂ ಮಾಡಿಸಿ ಊಟಕ್ಕೆ ಟೇಬಲ್ ಮೇಲೆ ಇಡಿಸಿದ್ದರು. ಸಿಗಾರ್ ಸೇದುತ್ತಿದ್ದ, ಮದ್ಯಪಾನ ಮಾಡುತ್ತಿದ್ದ ಮಾಂಸಾಹಾರ ತಿನ್ನುತ್ತಿದ್ದ ಮಾರ್ಟಿನ್ ಬಂದ ಅತಿಥಿಗಳೊಡನೆ ಅವರ ಹಾಗೆ ಸಸ್ಯಾಹಾರ ಸ್ವೀಕರಿಸಿ ಐಸ್‌ಕ್ರೀಂ ತಿಂದಿದ್ದರು. ಆದರೆ ಇದೇ ಗಣ್ಯ ವ್ಯಕ್ತಿಗಳನ್ನು ಆಹ್ವಾನಿಸಿದ ಭಾರತೀಯರು ಬಂದವರಿಗೆ ಸ್ವಲ್ಪವೂ ಗೌರವ ತೋರಿಸಿರಲಿಲ್ಲ. ಇಂಥ ಅನೇಕ ಪ್ರಸಂಗಗಳ ಮಾಲೆಯನ್ನೇ ಮುಂದಿಡುತ್ತಾ ಹೋಗುತ್ತಾರೆ. ಈ ಎಲ್ಲ ಪ್ರಸಂಗಗಳು ಮತ್ತೂರರ ಜೀವನದ ಭಾಗವೇ ಆಗಿದ್ದರೂ ಅಲ್ಲಲ್ಲಿ ನಿರೂಪಣೆ ಜಾಸ್ತಿ ಆಯಿತು. ಕೆಲವು ಅನವಶ್ಯಕ ಸಂಗತಿಗಳು ವರ್ಣಿತವಾಗಿ ಮತ್ತೂರರ ಆತ್ಮಕಥೆ ಹಿಂದುಳಿದು ಭವನದ ಕಥೆಯೇ ಪೂರ್ಣವಾಗಿ ನಿರೂಪಿತವಾದಂತೆ ಕಾಣುತ್ತದೆ. ಈ ಲೋಪವನ್ನು ಬಿಟ್ಟರೆ ಚೆನ್ನಾಗಿ ಓದಿಸಿಕೊಂಡು ಹೋಗುವ ಅನೇಕ ಮನನೀಯ ಪ್ರಸಂಗಗಳಿಂದ ಕೂಡಿದ ದೀರ್ಘ ಆತ್ಮಕಥೆ ಮತ್ತೂರರದು.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಭಾರತೀಯ ವಿದ್ಯಾಭವನದ ಇತಿಹಾಸಕಥನಕ್ಕೆ ಹಿನ್ನೆಲೆಯಾಗಿ ಮತ್ತೂರರ ಆತ್ಮಕಥೆ ಬಂದಿದೆ. ಈ ಕೃತಿ ಓದಿದಾಗ ಮತ್ತೂರರ ಕಥೆ ಹಿಂದೆ ಸರಿದು ಭವನದ

ಕಥೆ ಕಣ್ತುಂಬಿಕೊಳ್ಳುತ್ತದೆ. ಭವನದ ಕಥೆಯನ್ನು ತಮ್ಮ ದೀರ್ಘಕಾಲದ ವೈವಿಧ್ಯಮಯ ಅನುಭವಗಳಿಂದ ರಸವತ್ತಾಗಿ ವಿವರವಾಗಿ ಚಿತ್ರಿಸಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ಈ ಕೃತಿಗೆ ಶೀರ್ಷಿಕೆಯಾಗಿ 'ವಿದ್ಯಾಭವನದ ಪ್ರಜ್ವಲ ಇತಿಹಾಸ' ಎಂದು ಹೆಸರಿಡಬಹುದೇನೋ ಎನಿಸುವಷ್ಟರ ಮಟ್ಟಿಗೆ ಇದೆ. ಅದೇನೇ ಇರಲಿ, ನಮ್ಮ ನಾಡಿನಲ್ಲಿ ಕನ್ನಡಿಗನೊಬ್ಬ ಲಂಡನ್ನಿನಲ್ಲಿ ಅಪೂರ್ವಸಾಹಸ ಮಾಡಿದ ರಂಜಕ ಸಾಹಸದ ಕಥೆ ಆಗಿದೆ ಮತ್ತೂರರ ಕಥನ ಎಂಬುದರಲ್ಲಿ ಸಂಶಯವಿಲ್ಲ. ಭವನಕ್ಕೆ ಸ್ಥಿರನೆಲೆ, ಕೀರ್ತಿ ತರುವಲ್ಲಿ ಮತ್ತೂರರ ಪುರುಷಯತ್ನ ಮತ್ತು ಅವರಿಗೆ ದೊರೆತ ದೈವಕೃಪೆ ಮತ್ತು ವಿನಯ ಸಜ್ಜನಿಕೆಗಳ ಮೂಲಕ ಎಂಥ ಸಾಧನೆ ಮಾಡಬಹುದು ಎಂಬುದಕ್ಕೆ ಈ ಕಥನ ಶ್ರೇಷ್ಠ ನಿದರ್ಶನವಾಗಿದೆ; ಮತ್ತೂರರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಿದೆ.

ಸಂಕಲನದ ಬಗ್ಗೆ : ದೊರೆಸ್ವಾಮಿ ಅವರ ಆತ್ಮಕಥೆ ಒಬ್ಬ ಸಂಗೀತ ಕಲಾವಿದ ಲೌಕಿಕವಾಗಿ ಸಾಧನೆ ಮಾಡಿದ ಕಥೆ ಆಗಿದೆಯೇ ಹೊರತು ದೈವಿಕಾಂಶದಿಂದ ಕೂಡಿದ ಪ್ರತಿಭಾವಂತನ ಕಥೆಯಾಗಿ ಕಾಣಿಸದು. ಸ್ವತಂತ್ರ ಕಲಾವಿದನಾಗಿ ಬಾಳಬೇಕೆಂಬ ತಂದೆಯ ಧ್ಯೇಯ ಸಾರ್ಥಕವಾಗಲಿಲ್ಲ ಎನ್ನಿಸುತ್ತದೆ. ಏಕೆಂದರೆ ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಮೈ.ವಿ.ವಿ. ಲಲಿತ ಕಲಾ ಕಾಲೇಜಿಗೆ ಅರ್ಜಿ ಹಾಕಿ ಅಧ್ಯಾಪಕರಾಗಿ ವೃತ್ತಿನಿರತರಾಗಿ ಮನೆ ಪಾಠಗಳನ್ನು ಹೇಳಿ ಬದುಕು ನಡೆಸಿದ್ದು. "ಶಾಲೆಯಲ್ಲಿ ಓದಿ ತಾನೂ ನನ್ನಂತೆಯೇ ಒಬ್ಬ ಸರ್ಕಾರಿ ಗುಲಾಮನಾಗಿ ಕೆಲಸ ಮಾಡುವುದು ಇಷ್ಟವಿಲ್ಲ. ಸ್ವತಂತ್ರ ಜೀವನ ನಡೆಸಿ ಎಲ್ಲರಿಂದ ಗೌರವಿಸಲ್ಪಡುವಂತಹ ಪ್ರತಿಷ್ಠಿತ ವ್ಯಕ್ತಿ ಆಗಬೇಕೆಂಬ" ಧ್ಯೇಯದಲ್ಲಿ ಪ್ರತಿಷ್ಠಿತ ವ್ಯಕ್ತಿ ಆಗಿ ಎಲ್ಲರಿಂದಲೂ ಗೌರವಿಸಲ್ಪಟ್ಟರೂ ತಂದೆಯವರ ಮೊದಲಿನ ಉದ್ದೇಶ ನೆರವೇರಲಿಲ್ಲ. ಅದೇನೇ ಇರಲಿ, ಶ್ರೇಷ್ಠ ವೈಣಿಕರೂ ವಾಗ್ಗೇಯಕಾರರೂ ಆದ ವೀಣಾವಿದ್ವಾಂಸರು ಅವರು ಎಂಬುದರಲ್ಲಿ ಸಂಶಯವಿಲ್ಲ.

ಪಂಚ ಆತ್ಮಕಥಾ ಸಂಕಲನದ ಔಚಿತ್ಯ ಕುರಿತು ಒಂದು ಮಾತು ಹೇಳಿದರೆ ತಪ್ಪಾಗದು. ಈ ಐದು ಆತ್ಮಕಥೆಗಳನ್ನು ಒಂದೆಡೆ ಓದಿದಾಗ, ಸಂಕೇತಿ ಸಮಾಜದಲ್ಲಿ ಪ್ರತಿಭಾವಂತ ಸಂಸ್ಕೃತ ವಿದ್ವಾಂಸರು, ಸಂಸ್ಥೆಯ ಸಂಘಟಕರು, ಪ್ರವಚನಕಾರರು, ಸಂಗೀತಗಾರರು, ವಾದ್ಯಕಾರರು, ವೀರಯೋಧರು ಇದ್ದಾರೆ ಎಂದು ತಿಳಿಯುತ್ತದೆ. ಇದು ಮೆಚ್ಚುವ ಅಂಶವೇ ಆದರೂ ಪಾಂಡಿತ್ಯದ ವಿದ್ವಾಂಸರೂ, ಪ್ರಸಿದ್ಧ ಪ್ರವಚನಕಾರರೂ ಆದ ಇಬ್ಬರು ವಿದ್ವಾಂಸರು, ಸಂಗೀತಗಾರರೂ ವಾದ್ಯಕಾರರೂ ಆದ ಇಬ್ಬರು ಗಾನಕಲಾವಿದರು, ಒಬ್ಬ ವೀರಯೋಧನ ಕಥೆ ಇವನ್ನು ಒಟ್ಟಿಗೆ ಸೇರಿಸಿದ್ದು ಮುತ್ತು ಮೆಣಸು ಪೋಣಿಸಿದಂತಾಗಿದೆ. ಕೇವಲ ಕಲಾವಿದರ, ಪಂಡಿತರ ಸಂಕಲನವನ್ನೇ ತಂದಿದ್ದರೆ ಚೆನ್ನಾಗಿತ್ತು.

ಪಂಚ ಆತ್ಮಕಥೆಗಳ ಸಂಕಲನದಲ್ಲಿ ಒಂದು ವೈಶಿಷ್ಟ್ಯವೂ ಅಡಗಿದೆ, ಆತ್ಮಕಥೆಯ ನಾಲ್ಕು ಪ್ರಕಾರಗಳನ್ನು ಇಲ್ಲಿ ಕಾಣಬಹುದು. ಆತ್ಮಕಥೆಯನ್ನು ಹೇಳಿದಾಗ ಎದುರಿಗಿದ್ದು ಬರಹರೂಪಕ್ಕಿಳಿಸುವ ನಿರೂಪಣಾವಿಧಾನ ("ಪಂಡಿತರೊಡನೆ" ಆತ್ಮಕಥೆ) ಒಂದನೆಯದು. ಇಲ್ಲಿ ನಿರೂಪಕ ಕಥನಕಾರ ಹೇಳಿದ್ದು ಸರಿಯಾಗದಿದ್ದಲ್ಲಿ, ಅರ್ಥವಾಗದಿದ್ದಲ್ಲಿ, ಹೆಚ್ಚಿನ ವಿವರ ಬೇಕಿದ್ದಲ್ಲಿ ಕೇಳಿ ತಿಳಿದುಕೊಳ್ಳಬಹುದು. ಧ್ವನಿಮುದ್ರಣ ಲಿಪೀಕರಣ ಎರಡನೇ ವಿಧಾನ. ಇದರಲ್ಲಿ ಕೇಳಿ ವಿವರ ಪಡೆಯುವ ಸೌಲಭ್ಯವಿಲ್ಲ ('ಮತ್ತೂರಿಂದ ಬ್ರಿಟನ್ನಿಗೆ' ಆತ್ಮಕಥೆ). ಇನ್ನು ಮೂರನೇ ವಿಧಾನ ಅನುವಾದವಿಧಾನ. ಲೇಖಕರು ಬರೆದುದನ್ನು ಇನ್ನೊಂದು ಭಾಷೆಯಲ್ಲಿ ಅನುವಾದಿಸುವುದು ('ನೆನಪು ಕೆದರಿದಾಗ' ಮತ್ತು 'ಸಂಗೀತಗಾರನ ಮೆಲುಕುಗಳು' ಆತ್ಮಕಥೆಗಳು). ಇಲ್ಲಿ ಲೇಖಕನ ಭಾಷಾಶೈಲಿ ಎಷ್ಟರಮಟ್ಟಿಗೆ ಬಂದಿದೆ ಎಂಬುದನ್ನು ಗಮನಿಸಬೇಕಾಗುತ್ತದೆ ಮತ್ತು ಮೂಲಲೇಖಕನ ಭಾಷಾಸಾಮರ್ಥ್ಯ

ಹಾಗೂ ಅನುವಾದಕನ ಭಾಷಾಸಾಮರ್ಥ್ಯ ಗಮನಿಸಬೇಕಾಗುತ್ತದೆ. ಇನ್ನೊಂದು ಅಂಶವೆಂದರೆ ಅಚ್ಚಾದ ಸಾಹಿತ್ಯದ ದೋಷಗಳು ಆತ್ಮಕಥನಕಾರರ ದೋಷಗಳಾಗಿರಬಹುದು ಆಗಿಲ್ಲದಿರಬಹುದು ಮತ್ತು ಆತ್ಮಕಥೆಯಲ್ಲಿ ಕಥನಕಾರ ತನ್ನ ಬಗ್ಗೆ ಏನನ್ನು ಹೇಗೆ ಹೇಳಿಕೊಳ್ಳುತ್ತಾನೆ, ಉಳಿದವರ ಬಗ್ಗೆ ಅವನ ಅನಿಸಿಕೆಗಳು ಎಷ್ಟರಮಟ್ಟಿಗೆ ಪೂರ್ವಾಗ್ರಹಪೀಡಿತ ಅಥವಾ ರಹಿತ ಎಂಬುದನ್ನು ಗಮನಿಸಬೇಕು. ಮತ್ತು ತಾವೇ ಬರೆದುಕೊಂಡ ಅಥವಾ ಬರೆಸಿದ ಆತ್ಮಕಥನ ಹಾಗೂ ಇನ್ನೊಬ್ಬರು ಆ ವ್ಯಕ್ತಿಯನ್ನು ಕುರಿತು ಬರೆದ ಜೀವನಚರಿತ್ರೆಯನ್ನು ಪರಿಶೀಲಿಸಿದಾಗ ವ್ಯಕ್ತಿನಿಷ್ಠ ಮತ್ತು ವಸ್ತುನಿಷ್ಠ ದೃಷ್ಟಿ ಹೇಗೆ ಸಾಹಿತ್ಯದಲ್ಲಿ ರೂಪಿತವಾಗಿದೆ ಎಂದು ತಿಳಿಯುತ್ತದೆ. ಈ ಎಲ್ಲ ಮಾದರಿಗಳ ಅಧ್ಯಯನಕ್ಕೆ ಇಲ್ಲಿ ಒಂದೆಡೆ ನಿದರ್ಶನಗಳು ಸಿಗುತ್ತವೆ.

'ಶ್ರಾದ್ಧ'ದಂಥ ಗ್ರಂಥ ಬರೆದ ಪ್ರೊ॥ ಶ್ರೀಕಂಠಕುಮಾರಸ್ವಾಮಿಗಳ ಶ್ರೇಷ್ಠ ಆತ್ಮಕಥೆ ಬಿಟ್ಟು ಹೋದದ್ದು ಏಕೋ ತಿಳಿಯದು.

ಕೊನೆಯಮಾತು : ಇಲ್ಲಿ ಒಬ್ಬ ಮಹಿಳಾ ಆತ್ಮಕಥೆ ಸೇರಬೇಕಿತ್ತು. ಪ್ರಕಟಿತ ಗ್ರಂಥ ಲಭ್ಯವಿಲ್ಲದಿದ್ದಲ್ಲಿ ಬರೆಸಬೇಕಿತ್ತು. ಮಹಿಳೆಯರಿಗೆ ಸಾಕಷ್ಟು ಸಿಗಬೇಕಾದ ಪ್ರಾಶಸ್ತ್ಯ ಎಲ್ಲ ರಂಗದಲ್ಲಿ ಸಿಕ್ಕಿಲ್ಲ ಎಂಬ ಮಾತು ಸಂಕೇತಿ ಸಮಾಜಕ್ಕೂ ಒಪ್ಪುತ್ತದೆ.

ಸಂಕೇತಿ ಸಮುದಾಯದ ಅಧ್ಯಯನದ ಭಾಗವಾಗಿ 'ಸಂಕೇತಿ ಅಧ್ಯಯನ ಮಾಲೆ'ಯಲ್ಲಿ ಈ ಆತ್ಮಕಥೆಗಳು ಬಂದಿವೆ. ಭಾರತದ ಒಟ್ಟು ಸಮಾಜದ ಬಗೆಗೂ 'ಸಾಧನಾ' ಪುಸ್ತಕಮಾಲೆಯಲ್ಲಿ ಇಂಥ ಗ್ರಂಥಗಳು ಬರುತ್ತಿವೆ. ಇದು ಒಳ್ಳೆಯ ಸಂಗತಿ. ಸಮಾಜದ ದಾನಿಗಳಿಂದ ನೆರವು ಪಡೆದು ಇಂಥ ಬೃಹತ್ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಪ್ರಣತಾರ್ತಿಹರನ್‌ರವರು ಇತರರಿಗೆ ಆದರ್ಶಮಾರ್ಗ ತೋರಿದ್ದಾರೆ. ಇವರ ಪ್ರಯತ್ನ ಮುಂದುವರೆಯಲಿ, ಇನ್ನೂ ಅರ್ಥವತ್ತಾದ ವಿಶಿಷ್ಟ ಕೃತಿಗಳನ್ನು ಪ್ರಕಟಿಸಲಿ ಎಂದು ಹಾರೈಸುತ್ತೇನೆ.

ತಾ 22.05.2008
ಬೆಂಗಳೂರು

ಪ್ರೊ॥ ಜಿ. ಅಶ್ವತ್ಥನಾರಾಯಣ
ಕನ್ನಡ ಪ್ರಾಧ್ಯಾಪಕ(ನಿವೃತ್ತ)

೩. ಅರಿಕೆ

'ಆತ್ಮಕಥೆಗಳು'– ಇದೊಂದು ಮಾತಿನಲ್ಲಿ ಅದೆಷ್ಟು ಅರ್ಥ ಅಡಗಿದೆ ಎಂದರೆ ಒಬ್ಬ ವ್ಯಕ್ತಿಯ ಇಡೀ ಜೀವನವನ್ನೇ ಬಿಂಬಿಸುವ ವ್ಯಾಪಕತೆ ಆ ಪದಕ್ಕೆ ಇದೆ ಎಂದೆನಿಸುವುದಿಲ್ಲವೇ? ಪ್ರತಿಯೊಬ್ಬರ ಜೀವನದಲ್ಲೂ ಅವರವರದೇ ಆದ ಆತ್ಮಕಥೆಯೊಂದು ಇರುತ್ತದೆ. ಒಂದು ದೊಡ್ಡ ಕುಟುಂಬದಲ್ಲಿ ಹುಟ್ಟಿ ತಾಯಿತಂದೆಯರ ಸೇವೆ ಮಾಡಿ, ತಂಗಿ, ತಮ್ಮಂದಿರ ಬದುಕನ್ನು ಕಟ್ಟಿಕೊಟ್ಟು ತಾವೂ ಕ್ರಮೇಣ ಬದುಕಿನಲ್ಲಿ ನೆಲೆಯಾಗುವುದು ಸಹ ಒಂದು ಸಾಧನೆಯೇ. ಭಾರತದಂತಹ ನಮ್ಮ ದೇಶದಲ್ಲಿ, ನಮ್ಮ ಸನಾತನಸಂಸ್ಕೃತಿಯು ಇರುವುದೇ ಹಾಗೆ. ಆ ಸಾಧನೆ ನಮ್ಮಲ್ಲಿ ಸರಿಸುಮಾರು ಎಲ್ಲರ ಮನೆಯಲ್ಲಿಯೂ ದಿನನಿತ್ಯವೂ ನಡೆಯುತ್ತಲೇ ಇರುತ್ತದೆ. ಆದ್ದರಿಂದ ಅದು ಕರ್ತವ್ಯ ಎಂದೆನಿಸಿದೆಯೇ ವಿನಾ 'ಸಾಧನೆ'ಯ ಸಾಲಿಗೆ ಸೇರುವುದಿಲ್ಲ.

ಆದರೆ ಇಂದಿನ ವೇಗದ ಬದುಕಿನ ಗಡಿಬಿಡಿಯಲ್ಲಿ ದಿನಗಳು ಕಳೆದು ಹೋಗುತ್ತಿರುವ ಈ ಸಮಯದಲ್ಲಿ ಕೌಟುಂಬಿಕ ಸಂಬಂಧಗಳ ಕೊಂಡಿಯೂ ಒಂದೊಂದಾಗಿ ಕಳಚಿಹೋಗುತ್ತಿರುವಂತೆ ಭಾಸವಾಗುತ್ತಿದೆ. ಮೊದಲಿನಂತೆ ಅವಿಭಕ್ತ ಕುಟುಂಬಗಳು ಹೆಚ್ಚಿಲ್ಲ. ಇರುವ ಕುಟುಂಬಗಳಲ್ಲಿ ಮಕ್ಕಳೂ ಕಡಿಮೆ ಇದ್ದು ದ್ವೀಪಗಳಾಗಿಬಿಡುತ್ತಿರುವ ಭಯ ಎಲ್ಲರನ್ನೂ ಕಾಡುತ್ತಿದೆ. ಅದರಿಂದಲೇ ಸಂಬಂಧಗಳನ್ನು ಉಳಿಸಿ, ಬೆಳೆಸಿ, ಕಾಯ್ದುಕೊಂಡು ಮಕ್ಕಳನ್ನು ಅದಕ್ಕೆ ಸರಿಹೊಂದಿಸಿ ನಮ್ಮ ಜತೆಗಿಟ್ಟುಕೊಳ್ಳಬೇಕಿದೆ. ಆಗ ಮನೆಯಲ್ಲಿಯೇ ತಮ್ಮ ತಮ್ಮವರು ಮಾಡುವ ಕೆಲಸ ಕಾರ್ಯಗಳ ಅರಿವು ಮೂಡಿ ಅದರ ಬಗೆಗೆ ಒಂದು ರೀತಿಯ ಕಾಳಜಿಯ ಮನೋಭಾವ ಬೆಳೆಯುತ್ತದೆ. ಹೊರಪ್ರಪಂಚಕ್ಕೆ ತೆರೆದುಕೊಳ್ಳುವುದು ಸಹಜವೇ ಆದರೂ ಮನೆಗೆ ಅಂಟಿಕೊಂಡಿರುವುದು ಸಹ ವ್ಯಕ್ತಿ–ವ್ಯಕ್ತಿಗಳ ನಡುವಿನ ಸಾಮ್ಯ ವ್ಯತ್ಯಾಸಗಳನ್ನು ಗುರ್ತಿಸುವಂತೆ ಮಾಡುತ್ತದೆ. ಈ ಅವಲೋಕನವೇ ಮುಂದೆ ಸಾಧನೆಗಳ ಶಿಖರವು ಒಂದಲ್ಲ, ಅನೇಕಾನೇಕ, ಅದನ್ನು ಒಬ್ಬಿಬ್ಬರು ಮಾತ್ರ ಏರಿರುವುದಿಲ್ಲ, ಅನೇಕಾನೇಕರು ಏರಿ ಸಾಧಿಸಿ ತೋರಿಸಿರುತ್ತಾರೆ ಎನ್ನುವ ಅರಿವನ್ನೂ ಮೂಡಿಸುತ್ತದೆ. ಈ ಹಿನ್ನೆಲೆಯಲ್ಲಿಯೇ ಈಗ ಆತ್ಮಕಥೆಗಳು ಪ್ರಾಮುಖ್ಯತೆಯನ್ನು ಪಡೆಯುವುದು. ಕನ್ನಡಸಾಹಿತ್ಯದಲ್ಲಿ ಆತ್ಮಕಥೆಗಳಿಗಿರುವ ವೈಶಿಷ್ಟ್ಯ ಬೇರೆ ಯಾವುದಕ್ಕೂ ಇಲ್ಲ ಎನ್ನುವುದು ಹಲವರ ಅಭಿಪ್ರಾಯ. ಕಾರಣ, ಇಲ್ಲಿ ಯಾವುದೇ ಕಲ್ಪನೆಗೆ ಅವಕಾಶವಿರುವುದಿಲ್ಲ. ಆತ್ಮಕಥೆಗಳು ಸಾಮಾನ್ಯವಾಗಿ ಸತ್ಯಕಥೆಗಳು ಎಂದೇ ಎಲ್ಲರಲ್ಲೂ ಇರುವ ಅಭಿಪ್ರಾಯ. ಈ ಮಾತಿಗೆ ಅಪವಾದವಾಗಿರುವುದೂ ಇದ್ದೀತು. ಆದರೆ ನಿಜವಾದ ಆತ್ಮಕಥೆಯು ಒಂದು ಆದರ್ಶದ ಪಾಲನೆ, ಒಂದು ಗುರಿಸಾಧನೆಯ ನೈಜಚಿತ್ರಣವಂತೂ ಹೌದು.

ಹಲವರ ಆಸಕ್ತಿ ಹಲವು ಕ್ಷೇತ್ರಗಳಲ್ಲಿ. ಹೀಗಾಗಿ ಸಾರ್ವಜನಿಕ ಆಸಕ್ತಿ ಬರುವ ಕ್ಷೇತ್ರಗಳಲ್ಲಿ ಆಗುವ ವೈಯಕ್ತಿಕ ಸಾಧನೆಗೆ ವಿಶೇಷವಾದ ಸ್ಥಾನವುಂಟು. ಅಂತಹ ಸಾಧನೆಗಳು ಬರಹದ, ಪುಸ್ತಕದ ರೂಪದಲ್ಲಿ ಬರಲು ಅರ್ಹವೂ ಹೌದು. ಏಕೆಂದರೆ, ಆ ಕ್ಷೇತ್ರದಲ್ಲಿ ಸಾಧನೆ ಮಾಡಬಯಸುವವರಿಗೆ ಅದೊಂದು ಮಾರ್ಗದರ್ಶಿಯಾಗುತ್ತದೆ. ಈ ಕಾರಣದಿಂದಲೇ ಆತ್ಮಕಥೆಗಳು ವೈಯಕ್ತಿಕವಾಗಿ ನನಗೂ ಬಹಳ ಪ್ರಿಯವಾದ ಸಾಹಿತ್ಯದ ಪ್ರಕಾರ. ಈವರೆಗೆ ಐದಾರುಮಂದಿ ಮಹನೀಯರ ಆತ್ಮಕಥೆಗಳನ್ನು ನಾನು ಬರವಣಿಗೆಯಲ್ಲಿ ತಂದಿರುವ ಕಾರಣ ಒಂದೊಂದು ಸಾಧನೆಯ ಹಿಂದೆಯೂ ಅದೆಷ್ಟು ಪರಿಶ್ರಮವಿರುತ್ತದೆ ಎನ್ನುವುದನ್ನು ಚೆನ್ನಾಗಿ ಅರಿತಿದ್ದೇನೆ. ಆದ್ದರಿಂದಲೇ ಡಾ॥ ಪ್ರಣತಾರ್ತಿಹರನ್ ಅವರು ಸಂಕೇತಿ ಆತ್ಮಕಥೆಗಳ ವಿಷಯವನ್ನು ತಿಳಿಸಿದಾಗ ನನಗೆ ಬಹಳ ಸಂತೋಷವೂ, ಕುತೂಹಲವೂ ಆಯಿತು. ಡಾ॥ ಹರನ್‌ರವರ ಅಪಾರ ಶ್ರಮದ ಪ್ರತಿಫಲ ಈ ಸಂಪುಟ. ಅವರು ತಮ್ಮ ಸಂಕೇತಿ ಜನಾಂಗದ ಪ್ರತಿಭಾನ್ವಿತರ ಆತ್ಮಕಥೆಗಳನ್ನು ಸಂಗ್ರಹಿಸಿ ಈ ಸಂಪುಟದಲ್ಲಿ ತಂದಿದ್ದಾರೆ. 'ಪಹಲೆ ಘರ್ ಮೇ ದಿಯಾ ಜಲಾನಾ, ಫಿರ್ ಮಂದಿರ್ ಮೇ' ಎನ್ನುವ ಒಂದು ನುಡಿಗಟ್ಟು ಹಿಂದಿಯಲ್ಲಿದೆ. 'ಮೊದಲು ನಿನ್ನ ಮನೆಯಲ್ಲಿ ದೀಪಬೆಳಗಿಸು, ನಂತರ ಮಂದಿರದಲ್ಲಿ ಬೆಳಗಿಸುವೆಯಂತೆ' ಎಂದು ಈ ಮಾತಿನ ಅರ್ಥ. ಈ ಮಾತಿನಂತೆಯೇ ಅವರು ಮೊದಲು ತಮ್ಮ ಕುಲಕ್ಕೆ

ಸೇರಿದ ಸ್ವಜನರ, ಮಾತೃಭಾಷೆಯ ಬಂಧುಗಳ ಸಾಧನೆಯ ಸರಕನ್ನು ಸಂಗ್ರಹಿಸಿ ಓದುಗರ ಕೈಗಿಡುವ ಸಾರ್ಥಕ ಪ್ರಯತ್ನ ಮಾಡಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಹರನ್‌ರವರ 'ಸಂಕೇತಿ ಅಧ್ಯಯನ'ದ ಸಂಪುಟಗಳಲ್ಲಿ ಇದು ಆರನೆಯದು. ಸಂಕೇತಿಕುಲದ ಬಗೆಗೆ, ಕುಲಜರ ಬಗೆಗೆ ಅವರು ಮಾಡಿರುವ ಸಂಶೋಧನೆ, ಸಂಗ್ರಹಿಸಿರುವ ಮಾಹಿತಿಗಳು, ದಾಖಲಿಸಿರುವ ವಿಷಯಗಳು ಇವೆಲ್ಲವೂ ಅನನ್ಯ, ಅನುಕರಣೀಯ. ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿದ್ದು ತಮ್ಮ ಕೆಲಸವನ್ನು ಸರಿದೂಗಿಸಿಕೊಂಡು, ಆರೆಂಟು ಸಂಪುಟಗಳಲ್ಲಿ ಸಮಗ್ರವಾಗಿ ಸಂಕೇತಿ ಜನಾಂಗದ ಬಗೆಗೆ ಹೊರತಂದಿರುವ ಅನೇಕಾನೇಕ ವಿಷಯಗಳು ಯಾರನ್ನೂ ಬೆರಗುಗೊಳಿಸುವಂತಿವೆ. ಅವರಂತಹ ನಿಷ್ಠಾವಂತ, ಪರಿಶ್ರಮಿ, ಸಹೃದಯಿ ಸಜ್ಜನರನ್ನು ಪಡೆದಿರುವ ಸಂಕೇತಿ ಕುಲಜರು ಪುಣ್ಯಶಾಲಿಗಳು ಎಂದು ನನ್ನ ಭಾವನೆ. ಏಕೆಂದರೆ, ಅವರ ಈ ನಿಃಸ್ಪೃಹ ಪರಿಶ್ರಮವೇ ಇಂದು ಸಂಕೇತಿ ಸಮುದಾಯದ ಬಗೆಗೆ ಆಸಕ್ತರು ವ್ಯಾಪಕವಾಗಿ ತಿಳಿದುಕೊಳ್ಳಬಹುದಾದ ಸದವಕಾಶವನ್ನು ಕಲ್ಪಿಸಿರುವುದು. ನಿಜಕ್ಕೂ ಡಾ॥ ಹರನ್‌ರು ಈ ಘನತರವಾದ ಕೆಲಸವನ್ನು ಕೈಗೊಂಡು ತಮ್ಮ ಸಮಾಜ–ಋಣವನ್ನು ಬಹುಮಟ್ಟಿಗೆ ತೀರಿಸಿಬಿಟ್ಟಿದ್ದಾರೆ ಎಂದೇ ನನ್ನ ಬಲವಾದ ಅನಿಸಿಕೆ. ಅವರಂತಹ ಒಬ್ಬ ಪುತ್ರನನ್ನಾದರೂ ಪ್ರತಿ ಸಮುದಾಯವೂ ಪಡೆದರೆ ಆ ಸಮುದಾಯಗಳ ಸಾಧಕರ ಸಾಧನೆಗಳೂ ಬೆಳಕಿಗೆ ಬಂದು ಸಾರ್ಥಕತೆಯನ್ನು ಕಂಡುಕೊಂಡಾವು.

'ಸಂಕೇತಿ ಅಧ್ಯಯನ'ದ ಆತ್ಮಕಥೆಗಳ ಸಂಪಾದಕತ್ವವನ್ನೂ ಅದರ ಅನೇಕ ಕೆಲಸಗಳನ್ನೂ ಡಾ॥ ಹರನ್‌ರೇ ಬಹುತೇಕ ಮುಗಿಸಿಬಿಟ್ಟಿದ್ದಾರೆ. ಇಲ್ಲಿ ನಾನು ಕೇವಲ ಒಬ್ಬ ಓದುಗಳಾಗಿ ಔಪಚಾರಿಕವಾಗಿ ಕೆಲವು ಮಾತುಗಳನ್ನು ಹೇಳುವುದು ಬಾಕಿ ಉಳಿದಿರುವುದಷ್ಟೆ. ಅವರ ಈ ಸಹಾಯಕ್ಕಾಗಿ ನಾನು ಅವರಿಗೆ ವಂದಿಸಿ, ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಈ ಸಂಪುಟದಲ್ಲಿರುವ ಮಹನೀಯರ ಆತ್ಮಕಥೆಗಳ ಬಗೆಗೆ ನಾನಾದರೂ ಏನನ್ನು ಹೇಳಲು ಸಾಧ್ಯ? ಶ್ರೀ ಬಿ. ಸುಬ್ಬರಾಯರ 'ಸಂಗೀತಗಾರನ ಮೆಲುಕುಗಳು', ಶ್ರೀ ನರಸಿಂಹಮೂರ್ತಿಶಾಸ್ತ್ರಿಯವರ 'ಪಂಡಿತರೊಡನೆ', ಪ್ರೊ॥ ಆರ್. ಎನ್. ದೊರೆಸ್ವಾಮಿಯವರ 'ನನ್ನ ಬದುಕು', ಮೇಜರ್ ಎಚ್. ಸಿ. ವೇಣುಗೋಪಾಲರ 'ನೆನಪುಕೆದರಿದಾಗ' (ಯೋಧನೊಬ್ಬನ ಬದುಕಿನ ನೆನಪುಗಳು) ಹಾಗೂ ಶ್ರೀ ಮತ್ತೂರು ಕೃಷ್ಣಮೂರ್ತಿಯವರ 'ಮತ್ತೂರಿನಿಂದ ಬ್ರಿಟನ್‌ಗೆ' ಈ ಎಲ್ಲ ಕೃತಿಗಳಲ್ಲಿಯೂ ಒಂದೊಂದು ವಿಭಿನ್ನ ರೀತಿಯ ಬದುಕಿಗೆ ನಾವು ಪರಿಚಿತರಾಗುತ್ತೇವೆ. ಇವು ಐದೂ ಬರಹಗಳು ಪಾರಿಜಾತ, ಜಾಜಿ, ಮಲ್ಲಿಗೆ, ಸಂಪಿಗೆ, ಕೇದಿಗೆ ಹೂಗಳಂತೆ ಐದು ಭಿನ್ನ ಪರಿಮಳಗಳನ್ನು ಸೂಸುವಂಥವಾಗಿವೆ. ಯಾವುದೋ 'ಒಂದು' ಸೊಗಸು ಎನ್ನುವಂತಿಲ್ಲ. ಇಲ್ಲಿರುವ ಎಲ್ಲರ ಸಾಧನೆಗಳೂ ಸೊಗಸೇ ಸರಿ. ಎರಡು ಕಥೆಗಳು ಸಂಗೀತ ಕ್ಷೇತ್ರವನ್ನು ಸಾಮಾನ್ಯ ಕ್ಷೇತ್ರವಾಗಿ ಹೊಂದಿದ್ದರೆ, ಎರಡನೆಯದು 'ಪಂಡಿತರೊಡನೆ' ಚಿಕ್ಕದಾದರೂ ಎಂಥ ವಿದ್ವಾಂಸರನ್ನು ಪರಿಚಯಿಸುತ್ತದೆ! ನಾಲ್ಕನೆಯದು ಯೋಧನ ಬದುಕಾದರೆ ಐದನೆಯದು ದಕ್ಷ ಆಡಳಿತ, ನಿರ್ಮಾಣಗಳ ಸಮನ್ವಯವಿರುವ ರೋಚಕ ಬದುಕು.

ಮಾನ್ಯ ಶ್ರೀ ಸುಬ್ಬರಾಯರ ಮೆಲುಕುಗಳಲ್ಲಿ ಅದೆಷ್ಟು ಸ್ವಾರಸ್ಯಕರ ಸಂಗತಿಗಳು ತುಂಬಿವೆ! ಎಳೆಯವಯಸ್ಸಿನಲ್ಲಿಯೇ ಸಂಗೀತದ ಬಗೆಗಿದ್ದ ಆಸಕ್ತಿ ನಾದಸ್ವರದ ನಾದವನ್ನು ಹೊರಡಿಸುವುದರಲ್ಲಿ ಮಾಡಿದ ಪ್ರಯತ್ನದಿಂದ ಹೊರಹೊಮ್ಮುತ್ತದೆ. ವೃತ್ತಿಯಲ್ಲಿ ಅಗ್ರಿಕಲ್ಚರಲ್ ಕಾಲೇಜಿನ ಅಧ್ಯಾಪಕರಾದರೂ ಸಂಗೀತದಮೇಲಿನ ಆಸಕ್ತಿ ಕುಂದದೆ ಇದ್ದುದು ವಿಶೇಷ. ಅವರು ಮಾಡಿಸುವ ಅವರ ಗುರುಗಳ ಪರಿಚಯ ಆ ಮಹಾನ್ ವ್ಯಕ್ತಿಗಳ ಒಂದು 'ಝಲಕ್'ನ್ನೂ ನಾವು ಕಾಣುವಂತಾಗುತ್ತದೆ. ಟೈಗರ್ ವರದಾಚಾರ್‌ರ 'ಶಾಕುಂತಲ' ನಾಟಕ ನೋಡಿದ್ದು ಓದುಗರು ತಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಳ್ಳುವಂತೆ ಮಾಡುತ್ತದೆ.

ಮೈಸೂರಿನ ಸಂಗೀತ ದಿಗ್ಗಜಗಳ ಪರಿಚಯ, ವಾಸುದೇವಾಚಾರ್ಯರಿಗೆ ರೈಲಿನಲ್ಲಿ ಮದನಮೋಹನ ಮಾಳವೀಯರ ಭೇಟಿಯ ರೋಚಕ ಪ್ರಸಂಗ, ಗಾಂಧೀಜಿಯ ಭೇಟಿ, ಇನ್ನೂ ಅನೇಕ ಕುತೂಹಲಕಾರಿ ವಿಷಯಗಳನ್ನು, ವ್ಯಕ್ತಿಗಳನ್ನು ಹೇಳುವ ಕರ್ನಾಟಕ ಹಿಂದುಸ್ತಾನಿ ಎರಡೂ ಶೈಲಿಯ ಸಂಗೀತವನ್ನು ಚೆನ್ನಾಗಿ ಬಲ್ಲ ಶ್ರೀ ಸುಬ್ಬರಾಯರ 'ಮೆಲುಕುಗಳು' ಸಂಗೀತ ಪ್ರಪಂಚದ ಪ್ರತಿಭಾನ್ವಿತರನೇಕರನ್ನು ನಮಗೆ ಭೇಟಿಮಾಡಿಸುತ್ತದೆ. ಅಂಥ ಮಹನೀಯರನ್ನು ನಾವೆಲ್ಲಿ ನೋಡಲು ಸಾಧ್ಯ? ಅವರ ಬದುಕಿಗೆ ತೆರೆದುಕೊಂಡ ಸಂಗೀತದ ಕ್ಷೇತ್ರದಲ್ಲಿ ಸಾಧಕರ ವೈಶಿಷ್ಟ್ಯದ ಬಗೆಗೂ ನಮಗೊಂದು ಇಣುಕುನೋಟವನ್ನು ಕಾಣಿಸುತ್ತದೆ. ಒಟ್ಟಾರೆ ಈ ಕಥಾನಕದ ರಸವನ್ನು ಓದಿಯೇ ಸವಿಯಬೇಕು ಎಂದು ಮಾತ್ರ ಹೇಳಬಲ್ಲೆ.

ಲಿಂಗದಹಳ್ಳಿ ನರಸಿಂಹಮೂರ್ತಿಶಾಸ್ತ್ರಿಯವರು ವಿನೀತರಾಗಿ ಶ್ರೀ ಜೋಯಿಸರಲ್ಲಿ ತಮ್ಮ ಬದುಕಿನ ಬಗೆಗೆ ಹೇಳಿದ್ದರೂ, ಅವರಲ್ಲಿದ್ದ ಅಸಾಧಾರಣ ಪ್ರತಿಭೆಯನ್ನು ಗುರ್ತಿಸದೇ ಇರುವುದಂತೂ ಯಾರಿಗೂ ಸಾಧ್ಯವಿಲ್ಲ. ಸಂಸ್ಕೃತದಲ್ಲಿ ಅವರು ರಚಿಸುತ್ತಿದ್ದ ಆಶುಕವಿತೆಗಳು, ಶೃಂಗೇರಿ ಸಂಸ್ಕೃತ ಪಾಠಶಾಲೆಯ ಅನುಭವಗಳು, ನೈಷಧದ ಪರೀಕ್ಷೆಯಲ್ಲಿ ಶಾಸ್ತ್ರಿಗಳಿಗೆ ರ್‍ಯಾಂಕ್ ಬಂದದ್ದು, ಧಾರವಾಡದ ಸಂಸ್ಕೃತ ಪಾಠಶಾಲೆಯಲ್ಲಿ ಅವರ ಕಲಿಕೆ, ತರ್ಕ ಮೀಮಾಂಸಗಳ ಕಲಿಕೆಯಲ್ಲಿ ಪರಿಣತಿ, ವೇದಾಧ್ಯಯನ ಸಂಪನ್ನರು ಏನೇನನ್ನು ಕಲಿತಿರುತ್ತಾರೆ, ಏನನ್ನು ವಿಶೇಷವಾಗಿ ಕಲಿಯಬೇಕಾಗಿದೆ, ಅದರ ಕಷ್ಟವೇನು ಇತ್ಯಾದಿ ಅನೇಕ ವಿಷಯಗಳನ್ನು ತಿಳಿಸುತ್ತದೆ. ಒಟ್ಟಾರೆ ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳು ಜೋಯಿಸರಲ್ಲಿ ತಮ್ಮ ಪೂರ್ವಿಕರ ಕೆಲವು ವಿಷಯಗಳನ್ನು ಸೇರಿಸಿ ಇಷ್ಟು ವಿಷಯಗಳನ್ನಾದರೂ ಹೇಳಿದರಲ್ಲ. ಅದು ದಾಖಲೆಯಾಗಿ ಉಳಿಯುವಂತಾಯಿತು ಎನಿಸಿ ಸಂತಸವಾಗುತ್ತದೆ. ಸಮಾಧಾನ ತರುತ್ತದೆ. ಅಂಥ ವಿದ್ವಾಂಸರುಗಳನ್ನು ನಾವು ಸುಲಭದಲ್ಲಿ ಕಾಣಲಾದೀತೆ?

ಪ್ರೊ॥ ಆರ್. ಎನ್. ದೊರೆಸ್ವಾಮಿಯವರ 'ನನ್ನ ಬದುಕು' ಬರಹವನ್ನು ನನ್ನ ತಂದೆ ಶ್ರೀ ಕೆ. ಸುಂದರರಾಜು ಅವರು ಇಂಗ್ಲಿಷಿಗೆ ಮಾಡುತ್ತಿದ್ದೇನೆ ಎಂದು ಹೇಳಿದಾಗ, ನಮ್ಮ ಜತೆ ಯಾವುದೋ ಕೆಲಸದ ನಿಮಿತ್ತವಾಗಿ ನಮ್ಮ ಮನೆಗೆ ಬಂದಿದ್ದ ಆರಡಿಕೊಪ್ಪ ವಿಶ್ವನಾಥ ಶಾಸ್ತ್ರಿಯವರ ಮಗ ಪ್ರೊ॥ ಎ.ವಿ. ನರಸಿಂಹಮೂರ್ತಿಯವರು ಮತ್ತು ಅವರ ಪತ್ನಿ ಶ್ರೀಮತಿ ಕಮಲಾಂಬ ಅವರೂ ಇದ್ದರು. ನಮ್ಮ ತಂದೆ ಹೇಳಿದುದನ್ನು ಕೇಳುತ್ತಿದ್ದ ಶ್ರೀಮತಿ ಕಮಲಾಂಬ ಅವರು ಥಟ್ಟನೆ ಎದ್ದು, "ಸರ್, ನೀವು ಪ್ರೊ॥ ಆರ್. ಎನ್. ದೊರೆಸ್ವಾಮಿಯವರ ಆತ್ಮಕಥೆಯನ್ನು ಇಂಗ್ಲಿಷಿಗೆ ಅನುವಾದಿಸುತ್ತಿದ್ದೀರಾ? ಅವರೆಂಥಾ ದೊಡ್ಡ ವಿದ್ವಾಂಸರು! ನಾನು ಅವರ ಶಿಷ್ಯೆ. ಎಂಥ ಪುಣ್ಯದ ಕೆಲಸ ಮಾಡುತ್ತಿದ್ದೀರಿ. ನಮ್ಮ ಗುರುಗಳ ಕಥೆಯನ್ನು ಅನುವಾದಿಸುತ್ತಿರುವ ನಿಮಗೇ ನಾನು ನಮಸ್ಕಾರ ಮಾಡುತ್ತೇನೆ. ಅದು ನಮ್ಮ ಗುರುಗಳಿಗೂ ಸಲ್ಲುತ್ತದೆ" ಎಂದು ಎದ್ದವರೇ ನಮ್ಮ ತಂದೆಯ ಕಾಲಿಗೆ ನಮಸ್ಕರಿಸಿದರು! ವೈಣಿಕ ವಿದ್ವಾನ್ ದೊರೆಸ್ವಾಮಿಯವರ ಬಗ್ಗೆ ಇನ್ನು ನಾನೇನು ಹೇಳುವುದು. ಶ್ರೀಮತಿ ಕಮಲಾಂಬರಂತೆ ಶ್ರೀ ದೊರೆಸ್ವಾಮಿಯವರನ್ನು ಕಂಡವರು ಅದೆಷ್ಟು ಮಂದಿ ಇರುವರೋ? ಮೈಸೂರಿನ ಮಕುಟಮಣಿಯಂತಿದ್ದ, ರಾಜಾಸ್ಥಾನದಲ್ಲಿ ಆಸ್ಥಾನ ವಿದ್ವಾಂಸರಾಗಿದ್ದ ವೀಣಾ ವೆಂಕಟಗಿರಿಯಪ್ಪನವರ ಶಿಷ್ಯರು ಇನ್ನು ಹೇಗೆ ತಾನೆ ಇರಲು ಸಾಧ್ಯ? ಸಂಗೀತವಲ್ಲದೆ ಬೇರೆ ಕಲಿಕೆ ಇಲ್ಲ ಎಂದು ಪ್ರಯತ್ನ ಪಡುತ್ತಲೇ ಇದ್ದು, ತಡವಾದರೂ ಗುರುಗಳಲ್ಲಿ ಪಾಠಕ್ಕೆ ಸೇರಿದುದು, ಕಲಿಯುತ್ತಲೇ ಅವರೊಡನೆ ಪ್ರವಾಸಗಳನ್ನು ಮಾಡಿದುದು, ರೇಡಿಯೋ ಕಾರ್ಯಕ್ರಮಕ್ಕೆ ಸಮಯಕ್ಕೆ ಸರಿಯಾಗಿ ಗುರುಗಳನ್ನು ತಲುಪಿಸಿದುದು, ಆರೋಗ್ಯ ತಪ್ಪಿದ ಗುರುಗಳನ್ನು ಸುಧಾರಿಸಿದುದು, ಗುರುಗಳು ಬಟ್ಟಬಯಲಿನಲ್ಲಿ ಕಛೇರಿ ಮಾಡಿದುದು, ದೊರೆಸ್ವಾಮಿ ಅಯ್ಯಂಗಾರ್‌ರಿಗೆ ವ್ಯಾಯಾಮ ಹೇಳಿಕೊಟ್ಟಿದ್ದು, ...ಒಂದೇ ಎರಡೇ ಸ್ವಾರಸ್ಯಕರ ಪ್ರಸಂಗಗಳು? ದುಃಖದಲ್ಲಿ ಸಾಂತ್ವನ ಹೇಳಿದ ಗುರುಗಳು ಅನಂತದಲ್ಲಿ ಲೀನವಾದದ್ದನ್ನು ಹೇಳಿದ ನಂತರವೇ ಶ್ರೀ ದೊರೆಸ್ವಾಮಿಯವರು ತಮ್ಮ ವೃತ್ತಿಜೀವನ, ಸಂಸಾರ, ಮನೆ, ಕೃತಿರಚನೆಯಂತಹಾ ಸಾಧನೆಗಳ ಬಗ್ಗೆ ವಿನೀತಭಾವದಿಂದ ಹೇಳುವುದು. ನಾವು ಈ ಆತ್ಮಕಥೆಯಲ್ಲಿ ಎಂಥ ಗುರು ಎಂಥ ಶಿಷ್ಯರನ್ನು ಕಾಣುತ್ತೇವೆ. ಎಂದರೆ ಓದಿಮುಗಿಸಿದನಂತರ ನಮಗರಿವಿಲ್ಲದಂತೆಯೇ ಧನ್ಯತಾಭಾವವೊಂದು ನಮ್ಮನ್ನು ಆವರಿಸಿರುತ್ತದೆ.

ನಾಲ್ಕನೆಯ ಆತ್ಮಕಥೆ 'ಯೋಧನ ಬದುಕು' ಇವೆಲ್ಲಕ್ಕಿಂತ ಭಿನ್ನವಾಗಿದ್ದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದು, ಅನಂತರ ಭಾರತ ಸೇನೆಯಲ್ಲಿಯೇ ಅಧಿಕಾರಿಯಾಗಿ ದೇಶಸೇವೆ ಸಲ್ಲಿಸಿದ 'ಯೋಧ' ನೊಬ್ಬನ ಸಾಹಸಮಯ ಬದುಕಿನ ಸತ್ಯದರ್ಶನವನ್ನು ಮಾಡಿಸುವಂಥದ್ದು. ಮತ್ತೂರು ಹಳ್ಳಿಯ ವಾತಾವರಣದಲ್ಲಿ ಪತ್ನಿ ಸಾವಿತ್ರಿಯನ್ನು ಶಿವಮೊಗ್ಗೆಗೆ ಸಿನೆಮಾಗೆ ಕರೆದೊಯ್ದುದು, ಕತ್ತಲಲ್ಲಿ ಈಜಿ ಹೋಗಿ ತೆಪ್ಪವನ್ನು ತಂದುದು ನಗೆ ಮೂಡಿಸಿದರೆ, ಗಾಂಧೀಜಿಯು ಹತರಾದಾಗ ಅವರ ಚಿತಾಭಸ್ಮವು ಅರೇಬಿಯನ್ ಸಮುದ್ರವನ್ನು ಬೆರೆತಾಗ ಅದರ ಸುತ್ತಲೂ ಶ್ರೀ ವೇಣುಗೋಪಾಲರು ಈಜಿ ಬಂದದ್ದು ಕಂಗಳಲ್ಲಿ ಹನಿಗೂಡಿಸುತ್ತದೆ. 'ಮರಾಠ ಲೈಟ್ ಇನ್‌ಫೆಂಟ್ರಿ', 'ವ್ಯರ್ಥ ಸಾಹಸ', 'ಮಣಿಪುರ ರೈಫಲ್ಸ್ ಪುನರ್ನಿರ್ಮಾಣ' ಇಂತಹ ಹಲವು ವಿಷಯಗಳಲ್ಲಿ ಯಾವುದು ಹೆಚ್ಚು ಚೆನ್ನಿದೆ, ಯಾವುದು ಕಡಿಮೆ ಎಂದು ಹೇಳಲು ಬರುವಂತಿಲ್ಲ. ಒಟ್ಟಾರೆ ಇಡೀ ಭಾರತದ ಒಂದು ಸಮಗ್ರ ಚಿತ್ರಣವಿದ್ದು ಅದರ ದರ್ಶನ ಮಾಡಿಸುತ್ತದೆ. ಸಾಮಾನ್ಯವಾಗಿ ಯೋಧರ ಬದುಕಿನ ನೋಟಗಳು ಎಲ್ಲರಿಗೂ ಸಿಗುವಂಥವಲ್ಲ. ಅದಕ್ಕೆ ಅದರದೇ ಆದ ವೈಶಿಷ್ಟ್ಯವಿರುತ್ತದೆ. ವ್ಯಕ್ತಿಗಳಂತೆಯೇ ಆ ಬದುಕಿನಲ್ಲಿ ಅವರ ಅನುಭವಗಳೂ ಭಿನ್ನವಾಗಿರುತ್ತವೆ. ಆದ್ದರಿಂದ ಇದೊಂದು ಹೊಸ ರೀತಿಯ ಕಥಾನಕ. ಆಸಕ್ತ ಓದುಗರ ರುಚಿಗೆ ಏನನ್ನೂ ಕಡಿಮೆ ಮಾಡದಂಥದ್ದು. ಶ್ರೀ ವೇಣುಗೋಪಾಲರ ವಿಶೇಷ ಬದುಕಿನ ಅಪರೂಪದ ಚಿತ್ರಣವು ಕಣ್ಣಿಗೆ ಕಟ್ಟಿದಂತೆ ನಮ್ಮನ್ನು ಬರಹದೊಡನೆಯೇ ತೇಲಿಸಿಕೊಂಡು ಹೋಗುತ್ತದೆ.

ಇನ್ನು 'ಮತ್ತೂರಿನಿಂದ ಬ್ರಿಟನ್‌ಗೆ' ಇದು ಡಾ॥ ಮತ್ತೂರು ಕೃಷ್ಣಮೂರ್ತಿಯವರ ಜೀವನಗಾಥೆ. ಶ್ರೀಯುತರ ಬದುಕಿನ ಚಿತ್ರಣದ ನಿರೂಪಣೆಯನ್ನು ನಾನೇ ಮಾಡಿರುವುದರಿಂದ ಇಷ್ಟನ್ನು ಮಾತ್ರ ಹೇಳಬಲ್ಲೆ. ಸಿನಿಮಾಗಳಿಗೆ ಸಂಬಂಧಿಸಿದಂತೆ ಇಂಗ್ಲಿಷಿನಲ್ಲಿ ಒಂದು ಮಾತಿದೆ, "Action packed thriller" ಎಂದು! ಈ ಮಾತು ಮಾನ್ಯ ಮತ್ತೂರ್‌ಜೀಯವರ ಜೀವನದರ್ಶನ ಮಾಡುವವರಿಗೆ ಶತಾಂಶ ನಿಜ ಎನಿಸುತ್ತದೆ. ಬಡಕುಟುಂಬವೊಂದರಲ್ಲಿ ಹುಟ್ಟಿ ಅಲ್ಲಲ್ಲಿ ವಾರಾನ್ನ ಮಾಡಿಕೊಂಡು ಕಷ್ಟಪಟ್ಟು ಹತ್ತನೇ ತರಗತಿಯವರೆಗೆ ಓದಿ, ಮುಂದೆ ಓದಲಾಗದೆ ಕ್ಯಾಂಟೀನ್ ನಡೆಸಿ, ಬಸ್ ಕಂಡಕ್ಟರನಾಗಿ, ಟಿಕೆಟ್ ಇನ್ಸ್‌ಪೆಕ್ಟರ್ ಆಗಿ, ಮಿಲ್ಲುಗಳಲ್ಲಿ ಟೈಂಕ್ಲಾರ್ಕ್ ಆಗಿ, ಪತ್ರಿಕೆಯ ವರದಿಗಾರರಾಗಿ, ಆಕಾಶವಾಣಿಯ ಕಲಾವಿದನೂ ಆಗಿ, ಕೊನೆಗೆ ಭಾರತೀಯ ವಿದ್ಯಾಭವನದ ರಿಜಿಸ್ಟ್ರಾರ್ ಆಗಿ ಸೇರಿದವರು. ಕಡಲಾಚೆಯ ಲಂಡನ್‌ನಲ್ಲಿ ಭವನವನ್ನು ನೆಲೆಗೊಳಿಸಿ ಭಾರತೀಯ ಸಂಸ್ಕೃತಿ ಪ್ರಚಾರದ ಕಂಕಣತೊಟ್ಟು ನಮ್ಮ ದೇಶದ ಕೀರ್ತಿಪತಾಕೆಯನ್ನು ಹಾರಿಸಿ, 25 ವರ್ಷಗಳ ಅನನ್ಯ ಸೇವೆಯನ್ನು ಪೂರೈಸಿ, ಸ್ವದೇಶಕ್ಕೆ ವಾಪಸಾಗಿ ಬೆಂಗಳೂರು, ಮೈಸೂರು, ಬಾಗಲಕೋಟೆ, ಮಡಿಕೇರಿ–ಈಗ ಶಿವಮೊಗ್ಗ ಭವನ ಕೇಂದ್ರಗಳನ್ನು ಸ್ಥಾಪಿಸಿ, ಇಂದಿಗೂ ಅವಿಶ್ರಾಂತರಾಗಿ ಅವಿರತವಾಗಿ ದುಡಿಯುತ್ತಲೇ ಇರುವ ಬಹುಮುಖ ಪ್ರತಿಭೆಯ ಮತ್ತೂರರ ಜೀವನದ ಸರ್ವರುಚಿಯ ಕಥೆಯನ್ನು ಓದಿಯೇ ತಿಳಿಯಬೇಕು. ಇದನ್ನು ಓದಿದ ನಂತರ ನನ್ನ ಮಾತು ಸತ್ಯ ಎಂದು ತಮಗೂ ಅನ್ನಿಸೀತು ಎಂದು ಧೈರ್ಯದಿಂದ ಹೇಳಬಲ್ಲೆ.

ಒಟ್ಟಾರೆ ಇಂಥ ಮಹನೀಯರ ಜೀವನಗಾಥೆಗಳಿರುವ ಈ ಸಂಪುಟವು ಅಮೂಲ್ಯವಾದದ್ದೆಂದು ನನ್ನ ಭಾವನೆ. ನನ್ನನ್ನು ಸಂಪುಟದ ಸಂಪಾದಕಿ ಎಂದು ಹೆಸರಿಸಿರುವ ಡಾ॥ ಹರನ್ ಅವರಿಗೆ ನಾನು ಆಭಾರಿ. ಸಮಸ್ತ ಓದುಗರೊಡನೆ ನನ್ನ ನಾಲ್ಕಾರು ಮಾತುಗಳನ್ನೂ ಅಭಿಪ್ರಾಯಗಳನ್ನೂ ವಿನಯದಿಂದ ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟ ಡಾ॥ ಹರನ್‌ರವರಿಗೆ ನನ್ನ ಕೃತಜ್ಞತೆಗಳನ್ನು ಸಮರ್ಪಿಸಿ ಮತ್ತೊಮ್ಮೆ ಶುಭ ಹಾರೈಸುತ್ತೇನೆ.

ಸುಮನಾ ವಿಶ್ವನಾಥ್
ಮೈಸೂರು

೪ ಪರಿವಿಡಿ

ಸಂಕೇತಿ : ಆತ್ಮಕಥೆಗಳು

ಅನುಬಂಧ

೫ ಗ್ರಂಥದ ಬಗೆಗೆ

ಅ. ಸಂಕೇತಿ : ಆತ್ಮಕಥೆಗಳು

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಕೆ. ಅನಂತರಾಮು
ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಆತ್ಮಕಥೆಯೆಂಬ ಸಾಹಿತ್ಯ ಪ್ರಕಾರ

ಹೊಸಗನ್ನಡದ ಸಾಹಿತ್ಯಪ್ರಕಾರಗಳಲ್ಲಿ ಜೀವನಚರಿತ್ರೆ ಮತ್ತು ಆತ್ಮಕಥೆ ಎಂಬಿವು ಅವಳಿಮಕ್ಕಳಿದ್ದಂತೆ, ಅಶ್ವಿನೀದೇವತೆಗಳಿದ್ದಂತೆ. ಮಹಾಪುರುಷನೊಬ್ಬನು ಹುಟ್ಟಿಬಂದ ಸನ್ನಿವೇಶಗಳು, ಅವನ ಬಾಲ್ಯಜೀವನ, ವಿದ್ಯೆ ಕಲಿತದ್ದು, ಬದುಕನ್ನು ಎದುರಿಸಿದ ಬಗೆ, ಮಾಡಿದ ಸಾಧನೆಗಳು, ಪಡೆದುಕೊಂಡ ಸಿದ್ಧಿಗಳು, ಎತ್ತಿಹಿಡಿದ ಜೀವನಮೌಲ್ಯಗಳು, ಬಿಟ್ಟುಹೋದ ಗುರುತುಗಳು, ಲೋಕಜೀವನದ ಒಳಿತಿಗಾಗಿ ನೀಡಿದ ಕಾಣಿಕೆಗಳು ಮೊದಲಾದ ವಿವರಗಳನ್ನು ಸಾಹಿತಿಯೊಬ್ಬನು ರಸಾತ್ಮಕವಾಗಿ ಬಣ್ಣಿಸಿದರೆ ಅದು ಜೀವನಚರಿತ್ರೆಯೆನಿಸುತ್ತದೆ. ಈ ಸಂಗತಿಗಳನ್ನು ಆ ಮಹಾಪುರುಷನೇ ಪ್ರಾಮಾಣಿಕವಾಗಿ, ಹೃದ್ಯವಾಗಿ ಬರೆದಿಟ್ಟರೆ ಅಥವಾ ತಾನೇ ಹೇಳಿದಂತೆ ಅನ್ಯರಿಂದ ಬರೆಯಿಸಿದರೆ ಅದು ಆತ್ಮಕಥೆಯೆನಿಸುತ್ತದೆ. ಜೀವನಚರಿತ್ರೆಗಿರುವ ಪರಿಪೂರ್ಣತೆ ಆತ್ಮಕಥೆಗಿರುವುದಿಲ್ಲ. ತನ್ನ ಕಥೆಯನ್ನು ಬರೆದಮೇಲೂ ಮಹಾಪುರುಷನು ಒಂದಷ್ಟು ಸಾಧನೆ ಮಾಡಬಹುದೇನೋ, 'ಶರಣರ ಗುಣವನ್ನು ಮರಣದಲ್ಲಿ ನೋಡು' ಎಂಬ ಲೋಕೋಕ್ತಿಯಂತೆ ಆತನ ಅಂತಕಾಲ ಹೇಗಾಗುವುದೋ ಎಂಬಿತ್ಯಾದಿ ಕೆಲವು ವಿವರಗಳು ಆತ್ಮಕಥೆಯಲ್ಲಿ ನಮಗೆ ಲಭ್ಯವಾಗುವುದಿಲ್ಲ. ಇಷ್ಟೆಲ್ಲ ಸಾಧನೆ ಮಾಡಿದ ಆ ಮಹಾಪುರುಷನು ಮುಂದಕ್ಕೇನಾದನು ಎಂಬುದನ್ನು ತಿಳಿಯಬಯಸುವ ವಾಚಕರ ಕುತೂಹಲವನ್ನು ಆತ್ಮಕಥೆಯು ಕಾಯ್ದಿಟ್ಟುಕೊಂಡಿರುತ್ತದೆ. ಮುಂದೆ ಆ ಮಹಾಪುರುಷನ ಜೀವನಚರಿತ್ರೆಯನ್ನು ಬರೆಯಬಯಸುವ ಲೇಖಕವೃಂದಕ್ಕೆ ಅವನ ಆತ್ಮಕಥೆಯು ಸಾಕ್ಷಾತ್ತಾದ, ನೇರವಾದ ವಿಷಯಸಾಮಗ್ರಿಯನ್ನು ದೊರಕಿಸಿಕೊಡುತ್ತದೆ.

ಕನ್ನಡ ಸಾಹಿತ್ಯದಲ್ಲಿ ಅಭಿನಂದನಗ್ರಂಥಗಳ ಸಮೃದ್ಧವಾದೊಂದು ಪರಂಪರೆಯಿದೆ. ಅಲ್ಲಿ ಅಭಿನಂದನೆಗೆ ಪಾತ್ರರಾಗುವ ಪುಣ್ಯಪುರುಷರೇ ತಮ್ಮ ಬದುಕಿನ ಪ್ರಮುಖ ಘಟನೆಗಳನ್ನು ಆ ಗ್ರಂಥಗಳಲ್ಲಿ ಮೆಲುಕುಹಾಕುವ ಪರಂಪರೆಯೂ ಇತ್ತೀಚೆಗೆ ಬೆಳೆದುಬಂದಿದೆ. ಆ ಪುಣ್ಯಪುರುಷರನ್ನು ಕುರಿತಂತೆ ಹಲವರು ಸಾಂದ್ರವಾದ ವ್ಯಕ್ತಿಚಿತ್ರಗಳನ್ನು ಆ ಗ್ರಂಥಗಳಿಗೆ ಬರೆದಿರುತ್ತಾರೆ. ಅವೆಲ್ಲವೂ ಜೀವನಚರಿತ್ರಕಾರರಿಗೆ ಕಾಮಧೇನುವಿದ್ದಂತೆ.

ವ್ಯುತ್ಪತ್ತಿಯೆಂದರೇನು ಎಂಬುದನ್ನು ವಿವರಿಸುವಾಗ ನಮ್ಮ ಲಾಕ್ಷಣಿಕರು 'ಉಚಿತಾನುಚಿತ ವಿವೇಕವೇ ವ್ಯುತ್ಪತ್ತಿ' ಎಂದು ಹೇಳಿದ್ದಾರೆ. ಕಾವ್ಯಮೀಮಾಂಸೆಯ ಪ್ರಸ್ಥಾನಗಳಲ್ಲಿ 'ಔಚಿತ್ಯ' ಎಂಬುದೂ ಸ್ಥಾನಪಡೆದುಕೊಂಡಿದೆ. ಹೀಗಿರುವಾಗ ಆತ್ಮಕಥನಕಾರನು ತನ್ನ ನಿರೂಪಣೆಯಲ್ಲಿ ತುಂಬು ಎಚ್ಚರವನ್ನು ಕಾಯ್ದುಕೊಳ್ಳಬೇಕು. ತನ್ನ ಜೀವನಗಾಥೆಯಲ್ಲಿ ಯಾವುದನ್ನು ಹೇಳಬೇಕು, ಯಾವುದನ್ನು ಸಮಾಜದ ಹಿತದೃಷ್ಟಿಯಿಂದ ಹೇಳಬಾರದು, ತನ್ನ ದೋಷ ದೌರ್ಬಲ್ಯಗಳ ಅನಾವರಣ ಯಾವ ಹದದಲ್ಲಿ ಆಗಬೇಕು ಎಂಬುದನ್ನೆಲ್ಲ ಸಾವಧಾನವಾಗಿ ಚಿಂತಿಸಬೇಕು. ತನ್ನ ಸಂಪರ್ಕಕ್ಕೆ ಬಂದವರನ್ನು ಕುರಿತು ಹೇಳುವಲ್ಲಿಯಾಗಲಿ, ಅವರುಗಳ ದೋಷಗಳನ್ನು ಬಹಿರಂಗಪಡಿಸುವುದೇನಾದರೂ ಇದ್ದರಾಗಲಿ, ಅವನು ಎಷ್ಟು ಸಂಯಮದಿಂದಿದ್ದರೂ ಸಾಕಾಗುವುದಿಲ್ಲ. ಈ ವಿಚಾರಗಳನ್ನೆಲ್ಲ ನೆನೆದರೇ ಸಾಕು, ಆತ್ಮಕಥೆ ಬರೆಯುವುದು ಎಂತಹ ಅಗ್ನಿಪರೀಕ್ಷೆಯಪ್ಪಾ ಎನ್ನಿಸದಿರದು.

ಜೀವನಚರಿತ್ರಕಾರನೊಬ್ಬನು ತನ್ನ ಕಥಾನಾಯಕನನ್ನು ಮುಕ್ತಕಂಠದಿಂದ ಕೊಂಡಾಡಿದರೆ, ಲೋಕವು ಸಹಿಸಿಕೊಳ್ಳುತ್ತದೆ, ತಪ್ಪು ತಿಳಿಯುವುದಿಲ್ಲ. ಆದರೆ ಆತ್ಮಕಥನಕಾರನು ತನ್ನನ್ನು ಆ ಮಟ್ಟದಲ್ಲಿ ಕೊಂಡಾಡಿಕೊಂಡರೆ ಆತ್ಮಪ್ರಶಂಸೆ ಹೆಚ್ಚಾಯಿತು ಎಂದು ಭಾವಿಸುವ ಭಯವಿದೆ. 'ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ' ಎಂಬ ಬಸವಣ್ಣನವರ ಸೂತ್ರಕ್ಕೆ ಕಟ್ಟು ಬಿದ್ದವನಾದರಂತೂ ತನ್ನ ಹೆಗ್ಗಳಿಕೆಯನ್ನು ಹೇಳಿಕೊಳ್ಳಲು ಸಂಕೋಚಪಟ್ಟುಕೊಳ್ಳುತ್ತಾನೆ. ಆದರೆ ಇದಿರನ್ನು ಹಳಿಯದೆ ತನ್ನನ್ನು ಒಂದಿಷ್ಟು ಬಣ್ಣಿಸಿಕೊಂಡರೂ ಆತ್ಮಕಥೆಗೆ ಕುಂದಿಲ್ಲ. ವಸ್ತುನಿಷ್ಠತೆ, ವ್ಯಕ್ತಿನಿಷ್ಠತೆಗಳು ಅಲ್ಲಿ ಸದಾ ಜಾಗೃತವಾಗಿರಬೇಕು. ಆತ್ಮಕಥೆಯು ವ್ಯಕ್ತಿನಿಷ್ಠವೆನಿಸಿದರೂ ಅದು ವೈಯಕ್ತಿಕತೆಯ ಸೀಮಿತ ವಲಯದಿಂದ ಮೇಲೆದ್ದು, ಸಾಧಾರಣೀಕರಣದ ಸೀಮಾತೀತ ವಲಯವನ್ನು ಹೊಕ್ಕು, ಸರ್ವರಿಗೂ ಸಮಾನವಾಗಿ ಆಸ್ವಾದನೆಗೆ ಯೋಗ್ಯವಾಗುವಂತಿರಬೇಕು.

ಇತ್ತೀಚೆಗೆ ಡಾ॥ ಚಂದ್ರಮತಿಸೋಂದಾ ಅವರು ಬರೆದಿರುವ 'ಆತ್ಮಕಥೆಯ ಸುತ್ತಮುತ್ತ' ಎಂಬ ಲೇಖನದ ಕೆಲವು ವಾಕ್ಯಗಳನ್ನು (ಮೈಸೂರು ಮಿತ್ರ, ೫.೨.೨೦೦೮) ಈ ಸಂದರ್ಭದಲ್ಲಿ ಮನನ ಮಾಡಬೇಕು: "ಆತ್ಮಕಥೆಯಲ್ಲಿ ಅನಾವರಣಗೊಳ್ಳುವ ನೋವು, ನಲಿವು, ರೋಚಕತೆ, ನಿಷ್ಠುರತೆ, ಅಭಿವ್ಯಕ್ತವಾಗುವ ಭಾವನೆಗಳು, ಎಲ್ಲವೂ ಆ ವ್ಯಕ್ತಿಯ ಅನುಭವಕ್ಕೆ ದಕ್ಕಿದ್ದು. ಅದು ಇತರರ ದೃಷ್ಟಿಯಲ್ಲಿ 'ಇಷ್ಟೇನಾ' ಆಗಿರಬಹುದು. 'ರೋಮಾಂಚನ'ದ್ದು ಆಗಿರಬಹುದು. ಸಮಾಜ 'ಬೆಚ್ಚಿಬೀಳುವ' ಸಂಗತಿಯೂ ಇರಬಹುದು. ಅವನ್ನೆಲ್ಲ ಅವೇ 'ಬಣ್ಣ'ಗಳಲ್ಲಿ ಗ್ರಹಿಸಲು ಪ್ರಯತ್ನಿಸಬೇಕೇ ವಿನಾ ಅವುಗಳಿಗೆ ನಮ್ಮ ಬಣ್ಣ ಕೊಡಬೇಕಿಲ್ಲ*** ಪ್ರಾಮಾಣಿಕತೆಯ ಅಳತೆಗೋಲಾಗಿ ತನ್ನೆಲ್ಲಾ ಖಾಸಗಿ ವಿಷಯವನ್ನು ಸಮಾಜದೆದುರು ತೆರೆದಿಡುವುದು 'ಹುಚ್ಚುತನ' ಎನಿಸಬಹುದು; ಕೆಲವೊಮ್ಮೆ ಹೀಗೆ ಮಾಡಿದ ವ್ಯಕ್ತಿ 'ಮಹಾತ್ಮ' ಕೂಡ ಆಗಬಹುದು. ಇದರಿಂದ ಸಮಾಜಕ್ಕೆ ಉಪಯೋಗವಿದೆ ಎಂದರೆ ಇದರಲ್ಲಿ ತಪ್ಪೇನೂ ಇಲ್ಲ *** ಹಲವರ ಆತ್ಮಕಥೆ ಆತ್ಮರತಿಯಲ್ಲಿ ಬಳಲುತ್ತಿರುವುದು ಕಂಡುಬರುತ್ತದೆ. ಆತ್ಮಕಥೆಯ ತುಂಬ 'ನಾನು' ಪ್ರಧಾನವಾಗಿ ಕುಟುಂಬ, ಸಮಾಜ, ಪರಿಸರ ಎಲ್ಲ ನಗಣ್ಯವಾಗಿಬಿಟ್ಟಿರುತ್ತದೆ. ಆತ್ಮಕಥೆ ಬರೆಯುವುದು ಇನ್ನೊಬ್ಬರ ಅವಹೇಳನಕ್ಕಾಗಲಿ, ತನ್ನ ಹಿರಿಮೆಯನ್ನು ಕಾಣಿಸಲಿಕ್ಕಾಗಲಿ ಆಗದೆ ಇತಿಹಾಸದ ಒಂದು ಘಟ್ಟದಲ್ಲಿನ ಸಾಮಾಜಿಕ ಬದುಕಿನ ಸಂದರ್ಭವನ್ನು ಅನಾವರಣಗೊಳಿಸುವಂತಿದ್ದರೆ ಅದೊಂದು ಉಪಯುಕ್ತ ದಾಖಲೆ *** ಸಾಹಿತ್ಯಕವಾಗಿ, ಸಾಮಾಜಿಕವಾಗಿ ಆತ್ಮಕಥೆಗಳಿಗೆ ಒಂದು ಮಹತ್ವದ ಸ್ಥಾನವಿದೆ. ವ್ಯಕ್ತಿಯ ಖಾಸಗಿ ಬದುಕನ್ನು ತೆರೆದಿಡದ ಆತ್ಮಕಥೆಗೆ ಜೀವಂತಿಕೆ ಇರುವುದಿಲ್ಲ; ಸಾಮಾಜಿಕ ಪರಿಸರ ಅಲ್ಲಿ ಅನಾವರಣಗೊಳ್ಳದಿದ್ದಲ್ಲಿ ಸಾರ್ವಕಾಲಿಕತೆಗೆ ಇಂಬು ದೊರೆತಿರುವುದಿಲ್ಲ. ಯಾವುದೇ ಆತ್ಮಕಥೆಯಲ್ಲಿ ಇವೆರಡೂ ಅಂಶಗಳು ಒಂದು ಹದದಲ್ಲಿ ಬೆರೆತಾಗ ಮಾತ್ರ ಅದಕ್ಕೊಂದು ಸಾಮಾಜಿಕಮುಖ ಪ್ರಾಪ್ತವಾಗುತ್ತದೆ; ಸಮಾಜದ ದೃಷ್ಟಿಯಿಂದ ಗಮನಾರ್ಹ ಎನಿಸಿಕೊಳ್ಳುತ್ತದೆ."

ಆತ್ಮಕಥೆಗಳ ಅಧ್ಯಯನದಿಂದ ಆಗುವ ಪ್ರಯೋಜನವೇನು ಎಂದು ಪ್ರಶ್ನಿಸುವುದು ಸಹಜವೇ. ನಾನು ಅನುಭವಿಸಿದ ಕಷ್ಟ ಹೇಳಿತೀರದು, ಈ ಲೋಕದಲ್ಲಿ ನನ್ನಷ್ಟು ಸಂಕಟವನ್ನು ಬೇರಾರೂ ಅನುಭವಿಸಿಲ್ಲ ಎಂದು ನಾವು ಭಾವಿಸಿರಬಹುದು; 'ನಾನು ಮಾಡಿದ ಸಾಧನೆ ಸಾಕು, ಎಷ್ಟು ಮಾಡಿದರೂ ಇಷ್ಟೆ, ನಮ್ಮನ್ನು ಕೇಳುವವರಾರೂ ಇಲ್ಲ, ಮೆಚ್ಚುವವರಾರೂ ಇಲ್ಲ, ಊರು ಉಪಕಾರ ಅರಿಯದು, ಹೆಣ ಸಿಂಗಾರ ಅರಿಯದು' ಎಂದು ಮುದುರಿ ಕುಳಿತಿರಬಹುದು; ಸಾಧನೆ ಮಾಡುತ್ತ ಮಾಡುತ್ತ ಸೋತುಕುಳಿತಿರಬಹುದು, 'ಮರಳಿ ಯತ್ನವ ಮಾಡು, ಮರಳಿ ಯತ್ನವ ಮಾಡು' ಎಂಬ ನೀತಿವಾಕ್ಯ ಉಸಿರಿಗಿಳಿಯದೇ ಹೋಗಿರಬಹುದು; ನನ್ನಂತೆ ಸಾಧನೆ ಮಾಡಬಲ್ಲವರಾರು, ನನ್ನ ಸಮಕ್ಕೆ ಬರಬಲ್ಲವರಾರು, ನನ್ನನ್ನು ಮೀರುವವರಾರು ಎಂಬ ಅಹಂಕಾರವೋ ಅತ್ಯಭಿಮಾನವೋ ನಮ್ಮನ್ನು ಮುತ್ತಿಕೊಂಡಿರಬಹುದು. ಈ ಪರಿಯ ದೌರ್ಬಲ್ಯಗಳನ್ನೆಲ್ಲ ನೀಗಿಕೊಳ್ಳಲು ಮಹಾಪುರುಷರ ಆತ್ಮಕಥೆಗಳ ಅವಲೋಕನವೇ ದಿವ್ಯೌಷಧ. ಮನಸ್ಸನ್ನು ಕಲಕಲಕಿ, ಕೊನೆಗೆ

ನಿರ್ಮಲಗೊಳಿಸುವ, ಶಾಂತಗೊಳಿಸುವ 'ವಿರೇಚನಕ್ರಿಯೆ'ಯನ್ನು ಆತ್ಮಕಥೆಗಳು ನೆರವೇರಿಸುತ್ತವೆ. ಅದೇ ಆನಂದದ ಗಣಿಯಾಗಿ, ಸಾಹಿತ್ಯದ ಪ್ರಯೋಜನದ ಮೂಲಮಂತ್ರವಾದ 'ಕಾವ್ಯಮ್ ಆನಂದಾಯ' ಎಂಬ ಸ್ಥಿತಿಯಲ್ಲಿ ನಮ್ಮನ್ನು ನೆಲೆಗೊಳಿಸುತ್ತವೆ; ಉಪದೇಶಕ್ಕೂ ಕೊರತೆಯಾಗದಂತೆ ಅವು ನೋಡಿಕೊಳ್ಳುತ್ತವೆ.

ಸಾಹಿತ್ಯವು ಕಾಲದೇಶಗಳ ಎಲ್ಲೆಕಟ್ಟನ್ನು ಮೀರಿ ಉಪಾದೇಯವಾಗುತ್ತದೆ ಎಂದು ನಾವು ನಂಬಿಕೊಂಡಿದ್ದೇವೆ. ಆ ನಂಬುಗೆಯನ್ನು ಆತ್ಮಕಥೆ, ಜೀವನಚರಿತ್ರೆಗಳು ಮತ್ತಷ್ಟು ಗಟ್ಟಿಗೊಳಿಸುತ್ತವೆ. ಸಾಹಿತ್ಯ, ವಿಜ್ಞಾನ, ಅಧ್ಯಾತ್ಮ, ಲಲಿತಕಲೆಗಳು, ರಾಷ್ಟ್ರಕಾರಣ, ಸಮಾಜಸೇವೆ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಾಪುರುಷರ ಆತ್ಮಕಥೆಗಳು ಸಹೃದಯರಿಗೆ ಸ್ಫೂರ್ತಿಯ ಚಿಲುಮೆಯಾಗುತ್ತವೆಂಬುದರಲ್ಲಿ ಸಂಶಯವಿಲ್ಲ.

ಕೃತಿಗಳ ಅವಲೋಕನ

'ಸಂಕೇತಿ : ಆತ್ಮಕಥೆಗಳು' ಎಂಬೀ ಹೆಬ್ಬೊತ್ತಗೆಯಲ್ಲಿ ಬಿ. ಸುಬ್ಬರಾವ್ ಅವರ 'ಸಂಗೀತಗಾರನ ಮೆಲುಕುಗಳು'; ನರಸಿಂಹಮೂರ್ತಿಶಾಸ್ತ್ರಿಗಳ 'ಪಂಡಿತರೊಡನೆ' ಆರ್. ಎನ್. ದೊರೆಸ್ವಾಮಿಯವರ 'ನನ್ನ ಬದುಕು'; ಎಚ್.ಸಿ. ವೇಣುಗೋಪಾಲ್ ಅವರ 'ನೆನಪು ಕೆದರಿದಾಗ' ಮತ್ತೂರು ಕೃಷ್ಣಮೂರ್ತಿಗಳ 'ಮತ್ತೂರಿನಿಂದ ಬ್ರಿಟನ್‌ಗೆ' ಎಂಬ ಐದು ವೈವಿಧ್ಯಮಯವಾದ ಕೃತಿಗಳಿವೆ. 'ಪಂಡಿತರೊಡನೆ' ಅತ್ಯಂತ ಚಿಕ್ಕದಾದರೆ, 'ಮತ್ತೂರಿನಿಂದ ಬ್ರಿಟನ್‌ಗೆ' ಅತ್ಯಂತ ದೊಡ್ಡದಾಗಿದೆ. 'ಸಂಗೀತಗಾರನ ಮೆಲುಕುಗಳು', 'ನೆನಪು ಕೆದರಿದಾಗ' ಎಂಬೆರಡು ಆತ್ಮಕಥನಕಾರರೇ ಬರೆದ ಆಂಗ್ಲಮೂಲದಿಂದ ಕನ್ನಡಕ್ಕೆ ಭಾಷಾಂತರಗೊಂಡು ಬಂದಿವೆ. 'ಪಂಡಿತರೊಡನೆ', 'ಮತ್ತೂರಿನಿಂದ ಬ್ರಿಟನ್‌ಗೆ' ಹೇಳಿ ಬರೆಯಿಸಿದ ಕೃತಿಗಳಾಗಿವೆ. 'ನನ್ನ ಬದುಕು' ಮಾತ್ರ ಆತ್ಮಕಥನಕಾರರೇ, ಕನ್ನಡದಲ್ಲೇ, ಬರೆದ ಕೃತಿಯಾಗಿದೆ. ಇಲ್ಲಿ ಒಬ್ಬ ವೀರ ಯೋಧರು, ಒಬ್ಬ ವೇದಬ್ರಹ್ಮರು, ಇಬ್ಬರು ಸಂಗೀತಸರಸ್ವತಿಯ ಸುಪುತ್ರರು, ಒಬ್ಬ ಬಹುಮುಖಪ್ರತಿಭಾಸಂಪನ್ನರಾದ ವಿದ್ವನ್ಮಣಿಗಳು ಇದ್ದಾರೆ.

ಸಂಗೀತಗಾರನ ಮೆಲುಕುಗಳು

ಬಿ.ಸುಬ್ಬರಾವ್ (೧೮೮೪–೧೯೭೫)ಅವರ 'ಸಂಗೀತಗಾರನ ಮೆಲುಕುಗಳು' ಅವರ ಬಾಲ್ಯಕಾಲದ ಅದಮ್ಯ ಸಂಗೀತಾಸಕ್ತಿಯ ಅಪೂರ್ವ ಘಟನೆಯೊಂದರೊಡನೆ ಪ್ರಾರಂಭವಾಗಿದೆ. ಅವರು ಮಧ್ಯಪ್ರದೇಶದ ಕೃಷಿಕಾಲೇಜಿನ ಅಧ್ಯಾಪಕರಾಗಿದ್ದುಕೊಂಡೇ ಸಂಗೀತ ಕೃಷಿಯನ್ನೂ ನಡೆಸಿದ ಮಹಾನುಭಾವರು. ಅವರು ಕೃಷಿ ಇಲಾಖೆಯ ನಿರ್ದೇಶಕ ಪದವಿಯನ್ನೂ ಅಲಂಕರಿಸಿದ್ದರು. ನಿವೃತ್ತರಾದಮೇಲೆ ಮೈಸೂರಿನಲ್ಲಿ ನೆಲೆಸಿ ತಮ್ಮ ಸಂಗೀತಾರಾಧನೆಯನ್ನು ಮುಂದುವರಿಸಿದರು. ಕರ್ನಾಟಕಸಂಗೀತ ಮತ್ತು ಉತ್ತರಾದಿಗಳೆಂಬೆರಡೂ ಪ್ರಕಾರಗಳಲ್ಲಿ ಪಂಡಿತರಾಗಿದ್ದ ಅವರು ಸ್ವಂತ ಬಲ್ಮೆಯಿಂದ ಪಿಟೀಲು ಮತ್ತು ವಿಚಿತ್ರವೀಣಾ ಎಂದೂ ಕರೆಯುವ ಗೊಟ್ಟುವಾದ್ಯಗಳನ್ನು ನುಡಿಸಬಲ್ಲವರಾಗಿದ್ದರು. ಸಂಗೀತ ಜಗತ್ತಿನ ಬಾಲಗಂಧರ್ವ, ಬಿಡಾರಂ ಕೃಷ್ಣಪ್ಪ, ಮೈಸೂರು ವಾಸುದೇವಾಚಾರ್ಯ, ವೀಣೆಶೇಷಣ್ಣ, ಸವಾಯಿಗಂಧರ್ವ ಮುಂತಾದ ಅಪೂರ್ವ ಸಂಗೀತ ಪ್ರತಿಭೆಗಳಿಗೆ ಅವರು ಸಮಕಾಲೀನರಾಗಿದ್ದರು. ವಿದ್ವಾನ್ ಚಿಕ್ಕರಾಮರಾಯರು ಮೈಸೂರಿನ ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ ಅವರಿಗೆ ಸಹಪಾಠಿಯಾಗಿದ್ದರು. ೧೯೦೦ರಿಂದ ೧೯೭೦ರವರೆಗಿನ ಭಾರತೀಯ ಸಂಗೀತ ಜಗತ್ತು ಸಾಧಿಸಿದ್ದ ಮಹೋನ್ನತಿಯ ಅಪರೂಪದ ಚಿತ್ರಗಳು ಈ ಕೃತಿಯಲ್ಲಿವೆ. ನಲವತ್ತು ಕಿರು ಅಧ್ಯಾಯಗಳಲ್ಲಿ ಅಂದಿನ ಸಂಗೀತ ಸಾಮ್ರಾಜ್ಯದ ಹಾಸುಬೀಸುಗಳನ್ನೆಲ್ಲ ರಸಪ್ರಪೂರ್ಣವಾದ ಮಾತುಗಳಲ್ಲಿ ಭಟ್ಟಿಯಿಳಿಸಿ ಕೊಟ್ಟಿದ್ದಾರೆ. ತಮ್ಮನ್ನು ಕುರಿತು ಹೇಳಿರುವುದಕ್ಕಿಂತ ಹೆಚ್ಚಾಗಿ ಸುಬ್ಬರಾಯರು ಸಮಕಾಲೀನ ಸಂಗೀತ ದಿಗ್ಗಜಗಳ ಮಹಿಮಾವಿಶೇಷಗಳಿಗೇ ಹೆಚ್ಚು ಒತ್ತು ನೀಡಿದ್ದಾರೆ. ಹೀಗಾಗಿ ಇದೊಂದು ಅಪೂರ್ವ ವ್ಯಕ್ತಿಚಿತ್ರಮಂಜರಿಯಾಗಿಯೂ ಉಪಾದೇಯವಾಗಿದೆ. "ನಾನು ನಿದ್ರೆಯಲ್ಲಿಯೇ ಖರಹರಪ್ರಿಯರಾಗದ 'ಚಕ್ಕನಿರಾಜ' ಕೃತಿಯನ್ನು ಎಷ್ಟು ನಿಖರವಾಗಿ ಹಾಡುತ್ತಿದ್ದೆನೆಂದರೆ, ನಾನು ಎಚ್ಚರವಾಗಿದ್ದು

ಪ್ರಜ್ಞಾಪೂರ್ವಕವಾಗಿಯೇ ಹಾಡುತ್ತಿದ್ದೇನೆಂದು ಭಾವಿಸಿದರು" ಎಂಬ ವಾಕ್ಯವು ಸುಬ್ಬರಾಯರ ಅಸೀಮ ಸಂಗೀತಾಸಕ್ತಿಗೆ ಹಿಡಿದ ಕೈಗನ್ನಡಿಯಾಗಿದೆ.

ಸವಾಯಿಗಂಧರ್ವರನ್ನು ಕುರಿತು ಸುಬ್ಬರಾಯರು ಎಷ್ಟು ಸೊಗಸಾಗಿ ಬರೆದಿದ್ದಾರೆ ನೋಡಿ; "ಸವಾಯಿಗಂಧರ್ವ ಅವರು ನಟ ಎನ್ನುವುದಕ್ಕಿಂತ ಸಂಗೀತಗಾರ ಎನ್ನುವುದೇ ಸರಿ. ಅವರಿಗೆ ಕನ್ನಡ ತಕ್ಕಮಟ್ಟಿಗೆ ಗೊತ್ತಿದ್ದು ನನ್ನಲ್ಲಿಗೆ ಬಂದಾಗಲೆಲ್ಲಾ ನನ್ನೊಡನೆ ಕನ್ನಡದಲ್ಲೇ ಮಾತನಾಡುವುದು ಅವರಿಗೆ ಪ್ರಿಯವಾಗಿತ್ತು. ನಗೆ ಹುಟ್ಟಿಸುತ್ತಿದ್ದ ವಿಷಯವೆಂದರೆ ಅವರ ಗುಂಡುಮುಖ, ಬೋಳುತಲೆಗಳಿಂದಾಗಿ ಹಾಡುವಾಗ ಇನ್ನೇನು ಅತ್ತೇ ಬಿಡುತ್ತಾರೋ ಎನ್ನುವಂತೆ ಕಾಣುತ್ತಿದ್ದ ಅವರ ಮುಖಚಹರೆ. ಅನೇಕ ಸಂಗೀತಗಾರರು ಹೀಗೆಯೇ, ಅವರನ್ನು ನೋಡುವುದಕ್ಕಿಂತ ಕೇವಲ ಆಲಿಸುವುದೇ ಒಳ್ಳೆಯದು. ಒಂದು ರಾತ್ರಿ ಅವರು ಹಾಡುತ್ತಿದ್ದರು. ಕೆಲವು ಗಮಕತಾನಗಳನ್ನು ಹಾಡುತ್ತಿದ್ದಾಗ ನನ್ನ ಕರುಳು ಅದುರುವಂತೆ ಭಾಸವಾಯಿತು. ನನ್ನ ಪಕ್ಕ ಕುಳಿತಿದ್ದ ಗೆಳೆಯರೊಬ್ಬರನ್ನು ಕೇಳಿದೆ. ಅವರೊಬ್ಬ ವೈದ್ಯರು. ಅವರಿಗೂ ಹಾಗೆಯೇ ಅನುಭವವಾಯಿತಂತೆ, ಸವಾಯಿ ಗಂಧರ್ವರ ಗಮಕತಾನಗಳಿಂದ ಇತರ ಕೆಲವರಿಗೂ ಇದೇ ಅನುಭವವಾಯಿತು." ತರುಣ ಕಾಬೂಲಿಯ ಸಂಗೀತವನ್ನು ಈ ಘನವಿದ್ವಾಂಸ ಮೆಚ್ಚಿಕೊಳ್ಳುವ ಔದಾರ್ಯವನ್ನು ನೋಡಿ: "ಈ ಕಾಬೂಲಿ ಅಲೆಮಾರಿಯಿಂದ ಸಂಗೀತವೇ! ಅದೂ ಇಷ್ಟು ಒಳ್ಳೆಯ ಸಂಗೀತ! ಅವನ ಶಾರೀರ, ಅದರ ಮಾಧುರ್ಯ, ಇಂಪಿಗೆ ನನ್ನ ಮೆಚ್ಚುಗೆಯನ್ನು ಮುಚ್ಚಿಡಲಾಗಲಿಲ್ಲ. ನನ್ನ ಮೆಚ್ಚುಗೆ ಹೇಳಿದೆ. ಅವರು ಅಲೆಮಾರಿ ಬದುಕು ಬದುಕುತ್ತಿದ್ದರಾದರೂ ಅವರೆಷ್ಟು ಆನಂದವಾಗಿದ್ದರು, ಸಂಗೀತ ಅವರೊಡನೆ ಎಷ್ಟು ಆನಂದವಾಗಿತ್ತು! ದೇವಿಸರಸ್ವತಿ ಐಶ್ವರ್ಯಕ್ಕಿಂತಲೂ ಕಾರ್ಪಣ್ಯವನ್ನೇ ತನ್ನ ನಿವಾಸಕ್ಕೆ ಇಷ್ಟ ಪಡುವಳೋ ಏನೋ!" ಈ ಇನ್ನೊಂದು ರಸನಿಮಿಷವನ್ನು ಸವಿಯಿರಿ: "ಶಂಕರಾ ಮತ್ತು ಶಂಕರಾಭರಣಗಳ ಚರ್ಚೆ ಆರಂಭವಾಗಿ ನಾನು ಟಿಕೆಟ್ ಖರೀದಿಸಲು ಮರೆತಿದ್ದೆ. ಇದನ್ನು ನಾನು ವಿವರಿಸಿದೆ. ನನ್ನ ಪ್ರಾತ್ಯಕ್ಷಿಕೆಗೆ ಸಾಕ್ಷಿಯಾಗಿದ್ದ ಇತರ ಪ್ರಯಾಣಿಕರು ನನ್ನ ಹೇಳಿಕೆಯನ್ನು ಬೆಂಬಲಿಸಿದರು. ಅಷ್ಟೇ ಅಲ್ಲಾ, ಕಂಡಕ್ಟರ್ ಕೂಡ ನನ್ನ ಸಂಗೀತದಲ್ಲಿ ಮುಳುಗಿ ಟಿಕೆಟ್ ಕೊಡಲು ಮರೆತಿದ್ದ. ಇದನ್ನೆಲ್ಲಾ ಕೇಳಿದ ಟಿಕೆಟ್ ತನಿಖಾಧಿಕಾರಿ ಕೂಡ ನಾನು ಟಿಕೆಟ್ ಖರೀದಿಸಬೇಕೆಂದು ಒತ್ತಾಯಿಸಲು ಮರೆತೇಬಿಟ್ಟರು."

ಲೇಖಕರು ಆಗಾಗ ನಡೆಸಿದ 'ಸಂಗೀತಯಾತ್ರೆ'ಯ ರಸನಿಮಿಷಗಳೂ ಇಲ್ಲಿವೆ. ಹೀಗಾಗಿ ಕೃತಿಗೆ ಅಲ್ಲಲ್ಲಿ ಪ್ರವಾಸಕಥನದ ಹಿತಮಿತವಾದ ಸ್ಪರ್ಶವೊಂದು ದಕ್ಕಿದಂತಾಗಿದೆ. "ಯಾವುದೇ ಪ್ರಕಾರದಲ್ಲಾದರೂ ಯಶಸ್ಸು ಸಾಧಿಸಲು ಅತಿಮುಖ್ಯವಾದ ಸದ್ಗುಣಗಳು ಗುರುಭಕ್ತಿ, ಆಸಕ್ತಿ ಹಾಗೂ ಶಕ್ತಿ ಎಂದು ನಾನು ಭಾವಿಸುತ್ತೇನೆ"; "ಯುವಜನತೆಯಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸಲು ಖ್ಯಾತ ಸಂಗೀತಗಾರರ ಪ್ರವಚನ ಮತ್ತು ಹರಿಕಥೆಗಳು ಬಹಳ ಸಹಕಾರಿಯಾಗಬಲ್ಲವು" ಎಂಬಂತಹ ವಾಕ್ಯಗಳನ್ನು ಮತ್ತೆ ಮತ್ತೆ ಜಪಿಸಬೇಕು. ಅಲೆಮಾರಿ ಗಾಯಕನೊಬ್ಬನು ಹೆಗಲಿಗೆ ಹಾರ್ಮೋನಿಯಂ ನೇತು ಹಾಕಿಕೊಂಡು ಮಹಾತ್ಮಗಾಂಧೀಜಿಯವರ ಮುಂದೆ ಭಜನೆಯೊಂದನ್ನು ಹಾಡಿದಾಗ ಅವರು ಮೆಚ್ಚಿಕೊಂಡಾಡಿದ ಪರಿಯನ್ನು ಸುಬ್ಬರಾಯರು ದಾಖಲಿಸಿರುವುದು ಅರ್ಥಪೂರ್ಣವಾಗಿದೆ: "ನೋಡಿ, ಭಜನ್ ಎಷ್ಟು ಉತ್ತೇಜನಕಾರಿಯಾಗಿದೆ! ಎಂತಹ ಭವ್ಯ ಶಾರೀರ! ಅವನ ಶಾರೀರ ಹಾಗೂ ಹಾರ್ಮೋನಿಯಂ ನಡುವೆ ಎಂತಹ ಹೊಂದಾಣಿಕೆ! ನೀವೆಲ್ಲರೂ ಇದನ್ನು ಕೇಳಿ ಆನಂದಿಸಿದ್ದೀರೆಂದು ಆಶಿಸುತ್ತೇನೆ. ನೀವೂ ಇದೇ ರೀತಿ ಹಾಡಬೇಕು".

ಅನುವಾದವು ಅತ್ಯಂತ ಮನೋಜ್ಞವಾಗಿದೆ. ಸುಬ್ಬರಾಯರು ಕನ್ನಡದಲ್ಲೇ ತಾವು ಬರೆದಿದ್ದರೆ ಹೇಗಿರಬಹುದಿತ್ತೋ ಅಷ್ಟೇ ಸಹಜವಾಗಿದೆ ಇಲ್ಲಿನ ಶೈಲಿ. ಅದಕ್ಕಾಗಿ ಡಾ. ಮೀರಾ ಮೂರ್ತಿಯವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಬೇಕು.

****

ಪಂಡಿತರೊಡನೆ

ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕು, ಲಿಂಗದಹಳ್ಳಿಯ ನರಸಿಂಹಮೂರ್ತಿಶಾಸ್ತ್ರಿಗಳ (೧೯೧೨) ಆತ್ಮಕಥೆ 'ಪಂಡಿತರೊಡನೆ' ಅತ್ಯಂತ ಬೋಧಪ್ರದವೂ ರಸಮಯವೂ ಆಗಿದೆ. 'ವಾಕ್ಯಂ ರಸಾತ್ಮಕಮ್ ಕಾವ್ಯಂ'– ರಸಭರಿತವಾದ ವಾಕ್ಯವೇ ಕಾವ್ಯ ಎಂಬ ಸೂತ್ರಕ್ಕೆ ಅನುಸಾರವಾಗಿ ಇಲ್ಲಿನ ವಾಕ್ಯವಾಕ್ಯವೂ ಮನೋಹಾರಿಯಾಗಿದೆ. "It is better to produce one image in a life time than to produce voluminous works" ಎಂದು ಪಾಶ್ಚಾತ್ಯ ಚಿಂತಕನೊಬ್ಬನು ಹೇಳಿದ್ದಾನೆ. ಅಂತಹ ಅನೇಕ ಇಮೇಜುಗಳು ಅಂದರೆ ಶಬ್ದಚಿತ್ರಗಳು ಈ ಕಿರುಹೊತ್ತಗೆಯಲ್ಲಿವೆ. ಕಿರಿದರಲ್ಲಿ ಪಿರಿದರ್ಥವನ್ನು ಶಾಸ್ತ್ರಿಗಳು ಹಿಡಿದುಕೊಟ್ಟಿದ್ದಾರೆ. ಅವರು ವೇದಶಾಸ್ತ್ರಗಳ ವಿದ್ಯಾವ್ಯಾಸಂಗಕ್ಕಾಗಿ ಶೃಂಗೇರಿ, ಧಾರವಾಡ, ಮತ್ತೆ ಶೃಂಗೇರಿ ಹೀಗೆ ಸುತ್ತಾಡಿ ತರ್ಕ, ಅಲಂಕಾರ, ಮೀಮಾಂಸೆ, ವ್ಯಾಕರಣ ಮುಂತಾದ ಶಾಸ್ತ್ರಗಳನ್ನು ಕರತಲಾಮಲಕ ಮಾಡಿಕೊಂಡರು; 'ಸಾಹಿತ್ಯ ಶಿರೋಮಣಿ'ಯಾದರು; ಹಲವು ಶಿಷ್ಯರಿಗೆ, ಮಠಗಳ ಯತಿವರ್ಯರಿಗೆ ಪಾಠಹೇಳಿ ಗುರುಪದವಿಗೇರಿದರು. ಹಾಗೆ ಶಾಸ್ತ್ರಜಗತ್ತನ್ನು ಬೆಳಗಿಸಿದ ಕಥೆಯೆಲ್ಲ ಅತ್ಯಂತ ಹೃದಯಸ್ಪರ್ಶಿಯಾಗಿದೆ. ಮುತ್ತಜ್ಜಿ ಮಹಾಲಕ್ಷ್ಮಮ್ಮ ಪಂಜುಗಳ್ಳರಿಂದ ಪಾರಾದ ಪರಿ ಕುತೂಹಲಕಾರಿಯಾಗಿದೆ. ಕಲಿಯುವ ಛಲದ ರಾಮಕೃಷ್ಣಶರ್ಮನ ಕಥೆ ಕರುಳುಕರಗಿಸುತ್ತದೆ. ಆಶುಕವಿತ್ವ, ಚಿತ್ರಕವಿತ್ವಗಳ ವೈಖರಿ ಚಿರಕಾಲ ನೆನಪಿನಲ್ಲಿ ಉಳಿಯುತ್ತದೆ.

ಈ ಆತ್ಮಚರಿತ್ರೆಯನ್ನು ರಸಾವೇಶ ತಗ್ಗದಂತೆ ನಿರೂಪಣೆ ಮಾಡಿಕೊಟ್ಟಿರುವ ಬೀ.ಚಿ. ಜಗನ್ನಾಥ ಜೋಯಿಸರ ಕೌಶಲವನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ!

ನನ್ನ ಬದುಕು

ಹಾಸನ ಜಿಲ್ಲೆಯ, ಅರಕಲಗೂಡು ತಾಲ್ಲೂಕು, ರುದ್ರಪಟ್ಟಣದಲ್ಲಿ ಜನಿಸಿದ ಆರ್.ಎನ್. ದೊರೆಸ್ವಾಮಿಯವರು (೧೯೧೬–೨೦೦೨) ಕರ್ನಾಟಕ ಸಂಗೀತರಂಗದ ಸಿದ್ಧಪುರುಷರಲ್ಲೊಬ್ಬರು. ಅವರೊಬ್ಬ ವಾಗ್ಗೇಯಕಾರರು. 'ಲಕ್ಷ್ಮೀರಮಣಕೃತಿಮಂಜರಿ' ಎಂಬುದು ಅವರ ಮಹತ್ತ್ವದ ಕೃತಿ. ಕರ್ನಾಟಕ ಸರ್ಕಾರದ 'ರಾಜ್ಯೋತ್ಸವಪ್ರಶಸ್ತಿ'ಯೇ ಮೊದಲಾದ ಹಲವಾರು ಗೌರವಗಳಿಗೆ ಅವರು ಪಾತ್ರರಾಗಿದಾರೆ. ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲೆಗಳ ಕಾಲೇಜಿನಲ್ಲಿ ಅವರು ಉನ್ನತ ಪದವಿಯನ್ನು ಅಲಂಕರಿಸಿ ನಿವೃತ್ತರಾಗಿದ್ದಾರೆ. ಹದಿನೈದನೆಯ ವಯಸ್ಸಿಗೇ ಸಂಗೀತ ಕಲಿಯಬೇಕೆಂದು ತಮಿಳುನಾಡಿನ ಚಿದಂಬರಂ ಪಟ್ಟಣಕ್ಕೆ ಹೋಗಿ ಅವರು ಪಟ್ಟಪಾಡು ಹೇಳಿತೀರದು. ಪೂರ್ಣ ಯೌವನಿಗರಾದಾಗ ಗೊಗ್ಗರುದನಿಗೆ ತುತ್ತಾಗಿ ವೀಣೆಯತ್ತ ಹೊರಳಿಕೊಂಡರು. ಮೈಸೂರಿನ ವೀಣಾ ವೆಂಕಟಗಿರಿಯಪ್ಪನವರ ಶಿಷ್ಯರಾಗಲು ಅವರು ಎಷ್ಟು ಶ್ರಮಪಟ್ಟರೋ! "ನನ್ನನ್ನು ತಾವು ಶಿಷ್ಯನನ್ನಾಗಿ ಸ್ವೀಕರಿಸಿದರೆ ಅಷ್ಟೇ ಸಾಕು. ತಮ್ಮ ಸೇವೆಮಾಡಿಕೊಂಡು, ತಮ್ಮ ವೀಣಾಗಾನವನ್ನು ಕೇಳುತ್ತಾ ಇರುತ್ತೇನೆ. ತಮ್ಮಿಂದ ನನಗೆ ಎರಡಕ್ಷರ ಅನುಗ್ರಹವಾದರೂ ಸಾಕು, ಅದೇ ನನ್ನ ಭಾಗ್ಯ ಎಂದು ಹೇಳಿ ಅವರ ಪಾದಗಳನ್ನು ಹಿಡಿದೆ. ನನ್ನ ನಯ, ವಿನಯ, ಗುರುಭಕ್ತಿಗಳನ್ನು ಕಂಡು ಅವರಿಗೂ ಮನಸ್ಸು ಕರಗಿರಬೇಕು" ಎಂದು ಆ ಸುಮುಹೂರ್ತವನ್ನು ದೊರೆಸ್ವಾಮಿಯವರು ಕಣ್ಣಿಗೆ ಕಟ್ಟುವಂತೆ ಬರೆದಿಟ್ಟಿದ್ದಾರೆ.

ಗುರುಕೃಪೆ ಮತ್ತು ಕಟ್ಟುನಿಟ್ಟಾದ ಸಾಧನೆಯಿಂದ ದೊರೆಸ್ವಾಮಿಯವರು ಮೈಸೂರು ಅರಮನೆಯ ಆಸ್ಥಾನ ವಿದ್ವಾಂಸರಾಗಿ ನೇಮಕಗೊಂಡರು. ಅಂದಿನ ಮಾಸಿಕ ಸಂಭಾವನೆ ಮೂವತ್ತು ರೂಪಾಯಿಗಳಾದರೂ ಪದವಿ ಮಾತ್ರ ಬಹು ದೊಡ್ಡದಾಗಿತ್ತು. ಸಂತಸದ ಆ ಕ್ಷಣಗಳನ್ನು ಅವರ ಮಾತುಗಳಲ್ಲಿಯೇ ಓದಿ ಆನಂದಿಸಬೇಕು: "ನವರಾತ್ರಿ ರಾಜದರ್ಬಾರಿಗೆ ನಾನು ಆಸ್ಥಾನವಿದ್ವಾಂಸನಾಗಿ ಹೋದ ಮೊದಲದಿನ ನಮ್ಮ ಮನೆಯಲ್ಲೆಲ್ಲಾ ಸಂಭ್ರಮವೋ ಸಂಭ್ರಮ. ದರ್ಬಾರಿಗೆ ಬೇಕಾದ ಕರಿನಿಲುವಂಗಿ, ಬಿಳಿಷರಾಯಿ, ಜರತಾರಿಪೇಟ, ಮಡಿಸಿ

ಇಸ್ತ್ರಿ ಮಾಡಿದ ಜರತಾರಿವಲ್ಲಿ ಇವುಗಳನ್ನೆಲ್ಲಾ ಸಿದ್ಧಪಡಿಸಿಕೊಂಡಿದ್ದೆ. ಈ ದರ್ಬಾರ್ ಉಡುಪನ್ನು ಧರಿಸಿದ ನನ್ನನ್ನು ನೋಡಿ ನನ್ನ ತಂದೆತಾಯಿಯವರ ಪ್ರೀತಿಯ ಕಣ್ಣುಗಳಿಗೆ ನಾನೊಬ್ಬ ರಾಜಕುಮಾರನಂತೆಯೇ ಕಂಡಿರಬೇಕು"

"ನಾನು ಮುಪ್ಪನ್ನು ಸಂತೋಷದಿಂದಲೇ ಸ್ವೀಕರಿಸಿದ್ದೇನೆ, ಸ್ವಾಗತಿಸಿದ್ದೇನೆ. ಅದರಿಂದ ಯಾರೂ ತಪ್ಪಿಸಿಕೊಳ್ಳುವಂತಿಲ್ಲ. ಆದರೆ ಮುಪ್ಪಿನಲ್ಲಿಯೂ ಒಂದು ಆನಂದವಿದೆ, ನೆಮ್ಮದಿ ಇದೆ, ತೃಪ್ತಿ ಇದೆ ಎನ್ನುವುದನ್ನು ಕಂಡುಕೊಂಡಿದ್ದೇನೆ. ಹಾಗೆ ನೋಡಿದರೆ ಅರುವತ್ತು ದಾಟಿದ ಅನಂತರವೇ ನನ್ನ ಜೀವನದ ಮಹತ್ತರ ಸಾಧನೆಗಳೆಲ್ಲವೂ ಕೈಗೂಡಿವೆ ಎಂಬುದು ಗಮನಾರ್ಹ" ಎಂದು ಅವರು ಸಮಾರೋಪದಲ್ಲಿ ಹೇಳಿರುವ ಮಾತುಗಳು ಹಿರಿಯನಾಗರಿಕರಿಗೊಂದು ಆಶಾಕಿರಣ. ದೊರೆಸ್ವಾಮಿಯವರ 'ನನ್ನ ಬದುಕು', ಸಾಧಕರೆಲ್ಲರ ಬದುಕಾದರೆ ಎಷ್ಟು ಚೆನ್ನ!

ಮೈಸೂರು ನಗರದ ಅಂದಿನ ಸಂಗೀತಪರಿಸರದ ಮೃದುಮಧುರ ಚಿತ್ರಗಳು ಈ ಕೃತಿಯಲ್ಲಿ ಹರಡಿಕೊಂಡಿವೆ. ಅವುಗಳನ್ನು ಓದುತ್ತಿದ್ದರೆ ಸಹೃದಯರ ಮನಸ್ಸು ಗತಕಾಲದ ರಸಾನಂದದಲ್ಲಿ ನಿಮಗ್ನವಾಗಿಬಿಡುತ್ತದೆ. ನಾನೀಗ ಸಂತೋಷವಾಗಿದ್ದೇನೆ, ಯಾವ ಈತಿಬಾಧೆಯೂ ಇಲ್ಲ ಎಂದುಕೊಳ್ಳುತ್ತಿರುವಾಗಲೇ ದುಃಖದ ಅಲೆಗಳು ಅಪ್ಪಳಿಸಿ ಹೇಗೆ ನಮ್ಮನ್ನು ಕಂಗೆಡಿಸುತ್ತವೆ ಎಂಬುದನ್ನು ಇಲ್ಲಿ ಓದಿಯೇ ಅರಿಯಬೇಕು.

ನೆನಪು ಕೆದರಿದಾಗ

'ನೆನಪು ಕೆದರಿದಾಗ' ಎಂಬುದು ಮೇಜರ್ ಎಚ್. ಸಿ. ವೇಣುಗೋಪಾಲ್ ಅವರ ವಿಶಿಷ್ಟವಾದ ಆತ್ಮಕಥೆ. ಈ ಗೊಂಚಲಿನಲ್ಲಿ ತನ್ನ ಪ್ರತ್ಯೇಕತೆಯನ್ನು ಸ್ಥಾಪಿಸಿಕೊಳ್ಳುವ ಶಕ್ತಿ ಅದರಲ್ಲಿ ತುಂಬಿಕೊಂಡಿದೆ. ವೇಣುಗೋಪಾಲರು ಹಾಸನಜಿಲ್ಲೆಯ ಬೇಲೂರುತಾಲ್ಲೂಕು ಹಂದನಹಾಳು ಗ್ರಾಮದಲ್ಲಿ (೧೯೨೨-೨೦೦೩) ಜನಿಸಿ, ತಮ್ಮ ಬಾಲ್ಯದ ದಿನಗಳನ್ನು ಬೇಲೂರು, ಹಾಸನ, ಗೊರೂರು, ಹೊಳೆನರಸೀಪುರಗಳಲ್ಲಿ ಕಳೆದರು. ಸೀನಿಯರ್ ಇಂಟರ್‌ಮೀಡಿಯಟ್‌ವರೆಗೆ ಓದಿ, ದೇಶಭಕ್ತಿಯನ್ನು ಎದೆಯಲ್ಲಿ ತುಂಬಿಕೊಂಡು, ಮೈಸೂರು ನಗರದಲ್ಲಿ ಸ್ವಾತಂತ್ರ್ಯಚಳವಳಿಗೆ ಧುಮುಕಿದರು. ಸ್ವಾತಂತ್ರ್ಯಯೋಧ ಎಂ.ಎನ್. ಜೋಯಿಸ್ ಅವರ ಗಾಂಧೀಮಾರ್ಗದಿಂದ ಪ್ರಭಾವಿತರಾದರು. ಶಿವಮೊಗ್ಗ ಜಿಲ್ಲೆಯ ಮತ್ತೂರಿನಲ್ಲಿ ತಮ್ಮ ಬದುಕಿನ ಕೆಲವು ರಮ್ಯ ವರ್ಷಗಳನ್ನು ಕಳೆದರು.

ವೇಣುಗೋಪಾಲ್ ಅನನ್ಯ ರಾಷ್ಟ್ರಪ್ರೇಮಿ. ಅವರಂಥವರು ಲಕ್ಷಕ್ಕೊಬ್ಬರು ಸಿಗುವುದೂ ದುರ್ಲಭ. ಸ್ವಾತಂತ್ರ್ಯಸಂಗ್ರಾಮದಲ್ಲಿ ಪಾಲ್ಗೊಂಡುದರ ಫಲವೋ ಎಂಬಂತೆ ಈ ರಾಷ್ಟ್ರರಕ್ಷಕರಾಗಿ ದುಡಿಯುವ ಸುಯೋಗ ಅವರಿಗೆ ಭಾರತೀಯ ಸೇನೆಯನ್ನು ಸೇರುವುದರ ಮೂಲಕ ಲಭಿಸಿತು. ಅವರು ಯುದ್ಧಭೂಮಿಯಲ್ಲಿ ನಿಂತುದಕ್ಕಿಂತ ಹೆಚ್ಚಾಗಿ ಮಿಲಿಟರಿಯು ಕೈಗೊಂಡ ಸುಧಾರಣಾಕಾರ್ಯಗಳಲ್ಲಿ, ಸೇವಾ ಕಾರ್ಯಗಳಲ್ಲಿ ನಿಯುಕ್ತರಾಗಿ, ಕರ್ಮಯೋಗಿಯಾಗಿ ತಮ್ಮನ್ನು ಆ ಸತ್ಕಾರ್ಯಗಳಿಗೆ ಸಮರ್ಪಿಸಿಕೊಂಡರು. ತಾವು ತೋರಿದ ಅಪೂರ್ವ ಕಾರ್ಯಕ್ಷಮತೆಗಾಗಿ ವಿಶಿಷ್ಟ ಸೇವಾಪದಕವನ್ನು ಪಡೆದ ಕೀರ್ತಿಗೆ ಅವರು ಪಾತ್ರರಾದರು. ಸೈನಿಕರು, ಸಹೋದ್ಯೋಗಿಗಳು, ಮೇಲಧಿಕಾರಿಗಳು, ಜನಸಾಮಾನ್ಯರು ಮೊದಲಾದ ಸರ್ವರ ಆದರಾಭಿಮಾನಗಳಿಗೆ ಅವರು ಪಾತ್ರರಾದರು.

ಈ ಕೃತಿಯಲ್ಲಿ ಬಂದಿರುವ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಗ್ರಾಮವಾಸದ ನೋವುನಲಿವುಗಳು, ವಿರಾಮವಾಗಿ ನಡೆಯುತ್ತಿದ್ದ ವಿವಾಹಕಾರ್ಯಗಳು ಮೊದಲಾದುವೆಲ್ಲ ಜೀವದುಂಬಿ ವರ್ಣಿತವಾಗಿವೆ.

ಕ್ಷಣಕ್ಷಣಕ್ಕೂ ನಮ್ಮ ಹೃದಯ ತಾದಾತ್ಮ್ಯದಿಂದ ಮಿಡಿಯುತ್ತದೆ. 'ಚಿರತೆ ಮತ್ತು ಪೊರಕೆ', 'ಎತ್ತು ಮತ್ತು ನನ್ನ ಅತ್ತೆ' ಎಂಬೆರಡು ಅಧ್ಯಾಯಗಳಲ್ಲಿ ವೇಣುಗೋಪಾಲರ ಸಾಹಸಗುಣ, ಸಕಾಲಕ್ಕೆ ಕಾರ್ಯೋನ್ಮುಖರಾಗುವ ಪ್ರವೃತ್ತಿಗಳು ನಿಚ್ಚಳವಾಗಿ ಮೂಡಿಬಂದಿವೆ. ಚಿರತೆಯೊಂದನ್ನು ಪೊರಕೆ ಮುಂಡಿಯಿಂದ ಹೊಡೆದುರುಳಿಸಿದ ಕಥೆ ರೋಮಾಂಚಕಾರಿಯಾಗಿದೆ. ಅದರ ಮುಕ್ತಾಯ ಎಷ್ಟು ಸಹಜವಾಗಿದೆ ನೋಡಿ : "ನನ್ನ ಗಾಯಗಳು ಬೇಗನೆ ಮಾಯ್ದವು. ಬೇಗ ಚೇತರಿಸಿಕೊಂಡೆ. ಆದರೆ ಆ ಕಸಗುಡಿಸುವವನು ಹೆಚ್ಚುಕಾಲ ಆಸ್ಪತ್ರೆಯಲ್ಲಿರಬೇಕಾಯಿತು. ಕಾಲಕ್ರಮದಲ್ಲಿ ಆತನೂ ಗುಣಹೊಂದಿದನು. ಚಿರತೆಯ ಚರ್ಮವನ್ನು ಸುಲಿಸಿ, ಶುದ್ಧಪಡಿಸಿ ಅದನ್ನು ನನ್ನ ತಂದೆಯವರಿಗೆ ಉಡುಗೊರೆಯಾಗಿ ಕೊಟ್ಟೆ. ಪ್ರಾಚೀನ ಋಷಿಗಳಂತೆ ಅದರ ಮೇಲೆ ಅವರು ಕುಳಿತುಕೊಳ್ಳುತ್ತಿದ್ದರು. ಪೊರಕೆಯ ಹಿಡಿಕೆ ಬಹಳ ಕಾಲ ನಮ್ಮ ಮನೆಯಲ್ಲಿತ್ತು. ಬಟ್ಟೆ ಹರವಲು ನನ್ನ ಅತ್ತಿಗೆ ಅದನ್ನು ಉಪಯೋಗಿಸುತ್ತಿದ್ದರು. ಕಾಲಕ್ರಮದಲ್ಲಿ ಚರ್ಮವು ಸವೆಯಿತು, ಹಿಡಿಕೆ ಮುರಿಯಿತು, ನನ್ನ ಬಳಿ ನೆನಪು ಮಾತ್ರ ಉಳಿಯಿತು" ಎಂಬ ವರ್ಣನೆಯನ್ನು ಮತ್ತೆ ಮತ್ತೆ ಓದಬೇಕೆನಿಸುತ್ತದೆ. ಇಂದು ವೇಣುಗೋಪಾಲರೂ ಇಲ್ಲ. ಆದರೆ ಅವರು ಬಿಟ್ಟುಹೋಗಿರುವ ನೆನಪುಗಳು ಮಾತ್ರ ಸಹೃದಯ ಬಳಗವನ್ನು ಚಿರಕಾಲ ರಂಜಿಸುತ್ತವೆಯೆಂಬುದರಲ್ಲಿ ಸಂದೇಹವಿಲ್ಲ.

ವೇಣುಗೋಪಾಲರು ಪರಮವಿಶಿಷ್ಟ ಸೇವಾಪದಕಕ್ಕೆ ಅರ್ಹರಾಗಲು ಏನು ಮಾಡಿದರು ಎಂಬುದನ್ನು ಹಿರಿಯ ಸೇನಾಧಿಕಾರಿಗಳು ಹದಿನೈದು ಅಂಶಗಳಲ್ಲಿ ನಿರೂಪಿಸಿರುವ ವಿವರಗಳು ಈ ಕೃತಿಯಲ್ಲಿವೆ. ಕೊನೆಯ ಅಂಶವನ್ನು ಓದಿದರೂ ಸಾಕು, ವೇಣುಗೋಪಾಲರ ಸಾಧನೆಯ ಮಹೋನ್ನತಿಯ ಪೂರ್ಣಚಿತ್ರ ನಮಗೆ ಲಭ್ಯವಾಗುತ್ತದೆ: "ಆತ್ಮಸಾಕ್ಷಿಯುಳ್ಳ, ಪ್ರಾಮಾಣಿಕರಾದ ಕಾರ್ಯಶೀಲರಾದ, ಧೈರ್ಯವಂತ ಅಧಿಕಾರಿಯಾದ ಮೇಜರ್ ವೇಣುಗೋಪಾಲ್ ತಮ್ಮ ಬೆಟಾಲಿಯನ್ನಿನ ಹಲವು ವಿಭಾಗಗಳ ಕಾರ್ಯವಿಧಾನದಲ್ಲಿ ಅಪಾರವಾದ ಸುಧಾರಣೆಗಳನ್ನು ಮಾಡಿದ್ದಾರೆ. ಬಹು ದೂರಸ್ಪರ್ಶಿಯಾದ ಕಾರ್ಯಾಚರಣೆಗಳನ್ನು ಸಾಧಿಸಿದ್ದಾರೆ. ತಮ್ಮ ಮಿಷನರಿ ಉತ್ಸಾಹ ಮತ್ತು ಬಹು ಉನ್ನತವರ್ಗದ ಅರ್ಪಣಾ ಮನೋಭಾವದಿಂದ ತಮ್ಮ ಯೂನಿಟ್ಟಿನ ವ್ಯಾಪ್ತಿಯಲ್ಲಿ ಬರುವ ಸ್ಥಳೀಯರ ವಿಶ್ವಾಸವನ್ನೂ ಸದ್ಭಾವನೆಯನ್ನೂ ಸಂಪಾದಿಸಿದ್ದಾರೆ. ಅವರು ಗೈದಿರುವ ಸೇವೆಯು 'ಪರಮವಿಶಿಷ್ಟಸೇವಾಪದಕ'ವನ್ನು ನೀಡಿ ಪುರಸ್ಕರಿಸಲು ಅತ್ಯಂತ ಅರ್ಹವಾಗಿದೆ" ಎಂಬ ಮಾತುಗಳನ್ನು ಪಠಿಸುತ್ತಿದ್ದರೆ ಯಾವ ಕನ್ನಡಿಗನು ತಾನೆ ಹೆಮ್ಮೆಯಿಂದ ಬೀಗುವುದಿಲ್ಲ! 'ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ'– ನಿನಗೆ ಕರ್ಮದಲ್ಲಿಯೇ ಅಧಿಕಾರವು, ಫಲದಲ್ಲಿ ಎಂದಿಗೂ ಅಲ್ಲ ಎಂಬ ಭಗವದ್ಗೀತೆಯ ವಾಣಿಯು ಅಂತರಂಗಕ್ಕಿಳಿಯಬೇಕಾದರೆ ವೇಣುಗೋಪಾಲರ ಈ ಆತ್ಮಕಥೆಯನ್ನು ಓದಿದರೆ ಸಾಕು!

ಅನುವಾದಕಾರ್ಯದಲ್ಲಿ ನಿಷ್ಣಾತರಾಗಿದ್ದ ಆರ್. ಎಲ್. ಅನಂತರಾಮಯ್ಯನವರು ಈ ಕೃತಿಯನ್ನು ಕನ್ನಡಕ್ಕೆ ತಂದುಕೊಟ್ಟಿದ್ದಾರೆ. ಭಾಷಾಶೈಲಿಗಳು ಅತ್ಯಂತ ರೋಚಕವಾಗಿವೆ. ಅನಂತರಾಮಯ್ಯನವರೂ ಇಂದು ನಮ್ಮೊಡನಿಲ್ಲ.

ಮತ್ತೂರಿನಿಂದ ಬ್ರಿಟನ್‌ಗೆ

ಈ ಸಂಪುಟದ ಐದು ಆತ್ಮಕಥೆಗಳಲ್ಲಿ ಮೊದಲ ನಾಲ್ಕರ ವಿಸ್ತಾರವನ್ನು ಮತ್ತೂರು ಕೃಷ್ಣಮೂರ್ತಿಗಳ(ಜ: ೦೮-೦೮-೧೯೨೮) 'ಮತ್ತೂರಿನಿಂದ ಬ್ರಿಟನ್‌ಗೆ' ಒಂದೇ ಆವರಿಸಿಕೊಂಡಿದೆ. ಕೃಷ್ಣಮೂರ್ತಿಗಳ ಬದುಕೂ ದೊಡ್ಡದು, ಕಥೆಯೂ ದೊಡ್ಡದು. 'ಸಂಸ್ಕೃತ ಗ್ರಾಮ'ವೆಂಬ ಕೀರ್ತಿಗೆ ಪಾತ್ರವಾಗಿರುವ ಶಿವಮೊಗ್ಗ ಜಿಲ್ಲೆಯ ಮತ್ತೂರಿನಲ್ಲಿ ಜನಿಸಿದ ಕೃಷ್ಣಮೂರ್ತಿಗಳು ತಮ್ಮ ಸ್ವಂತ ಸಾಧನೆಯಿಂದ, ಪರಿಶ್ರಮದಿಂದ, ಪ್ರತಿಭಾವಿಲಾಸದಿಂದ, ನಯವಿನಯ ಸಂಪನ್ನತೆಯಿಂದ, ಹಿತಮಿತಮೃದುವಚನದಿಂದ ಎತ್ತರೆತ್ತರಕ್ಕೇರಿದ ಮಹಾನುಭಾವರು. ಭಿಕ್ಷಾನ್ನ ವಾರಾನ್ನಗಳಿಂದ ವಿದ್ಯೆ ಕಲಿತ ಅವರು ಶಿವಮೊಗ್ಗೆಯಲ್ಲಿ ಪ್ರಾಥಮಿಕವಿದ್ಯೆ ಕಲಿತು ಆಮೇಲೆ ಮದರಾಸು

ನಗರವನ್ನು ಸೇರಿ ಎಸ್.ಎಸ್.ಎಲ್.ಸಿ. ಪಾಸಾದರು. ತಮ್ಮ ಬದುಕಿನ ಮೇಲಾದ ಶ್ರೀರಾಮಕೃಷ್ಣಾಶ್ರಮದ ಪ್ರಭಾವ, ಮಹಾತ್ಮಾಗಾಂಧೀಜೀಯವರ ಪ್ರಭಾವ, ತಮಿಳು ಭಾಷೆಯನ್ನು ಓದಲು ಬರೆಯಲು ಕಲಿತದ್ದು, ಪರಮಾಚಾರ್ಯರ ಆಶೀರ್ವಾದಕ್ಕೆ ಪಾತ್ರರಾದುದು ಮೊದಲಾದುವುಗಳನ್ನೆಲ್ಲ ಹಾಸುಹೊಕ್ಕಾಗಿ ಈ ಕಥೆಯಲ್ಲಿ ನೆಯ್ದುಕೊಟ್ಟಿದ್ದಾರೆ.

ಬೆಂಗಳೂರಿನ ರಾಜಾಮಿಲ್ಲಿನಲ್ಲಿ ಕೆಲಸಕ್ಕಿದ್ದವರು, 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಮೂಲಕ ಪತ್ರಿಕೋದ್ಯಮವನ್ನು ಹೊಕ್ಕರು. ಬಾಲ್ಯದಿಂದಲೇ ಸುಪ್ತವಾಗಿದ್ದ ಕನ್ನಡಪ್ರೇಮವು ಮುಂದುಮುಂದಕ್ಕೆ ಹೆಮ್ಮರವಾಗಿ ಬೆಳೆಯಿತು. ಸಾಹಿತ್ಯಕ್ಷೇತ್ರವೂ ಅವರಿಗೆ ಒಲಿದು ಹಲವು ಕೃತಿಗಳನ್ನು ಅವರು ಪ್ರಕಟಿಸಿದರು. ಜನ್ಮಜಾತಗುಣವಾಗಿ ಬಂದಿದ್ದ ಅಪೂರ್ವವಾದ ವಾಗ್ಮಿತೆಯು ಗಮಕವ್ಯಾಖ್ಯಾನದ ಕ್ಷೇತ್ರದಲ್ಲಿ ಅವರನ್ನು ಅಜರಾಮರರನ್ನಾಗಿಸಿತು. ನಾಟಕರಚನೆ ಮತ್ತು ನಿರ್ದೇಶನಗಳಲ್ಲಿಯೂ ಅವರು ಸಫಲರಾದರು.

ಲಂಡನ್ನಿನಲ್ಲಿ ತೆರೆಯಲಾದ ಭಾರತೀಯ ವಿದ್ಯಾಭವನದ ಮುಖ್ಯಸ್ಥರಾಗಿ, ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿ, ಭಾರತದ ಕೀರ್ತಿಧ್ವಜವನ್ನು ಆ ದೇಶದಲ್ಲಿ ಏರಿಸಿದ ಕೀರ್ತಿ ಕೃಷ್ಣಮೂರ್ತಿಯವರಿಗೆ ಸಲ್ಲುತ್ತದೆ. ಲಂಡನ್ನಿನಲ್ಲಿದ್ದ ಕಾಲಾವಧಿಯ ಸ್ಮೃತಿಗಳೆಲ್ಲ ಪ್ರವಾಸಕಥನದ ಹೊಳಪಿನಿಂದ ಸಹೃದಯರನ್ನು ಸಂತೋಷಸಾಗರದಲ್ಲಿ ಮುಳುಗಿಸುತ್ತವೆ. ತಮ್ಮ ಸಂಪರ್ಕಕ್ಕೆ ಬಂದವರನ್ನೆಲ್ಲ ತಾವು ಕೈಗೊಂಡ ಭಾರತೀಯ ಸಂಸ್ಕೃತಿಯ ಪ್ರಸಾರದ ಮಹಾಯಜ್ಞಕ್ಕೆ ಒಲಿಸಿಕೊಂಡ ವೃತ್ತಾಂತಗಳೆಲ್ಲ ಅತ್ಯಂತ ಮನೋಹಾರಿಯಾಗಿವೆ.

'ಪಂಡಿತರೊಡನೆ' ಎಂಬ ಕೃತಿಯಲ್ಲಿ ವೇದಮೂರ್ತಿ ನರಸಿಂಹಮೂರ್ತಿಶಾಸ್ತ್ರಿಗಳಿಂದ ಮತ್ತೂರರು ಹೇಗೆ ಕೊಂಡಾಟಕ್ಕೆ ಪಾತ್ರರಾಗಿದ್ದಾರೆಂಬುದನ್ನು ಪರಿಭಾವಿಸಿರಿ : "ಶ್ರೀಮಾನ್ ಮತ್ತೂರು ಕೃಷ್ಣಮೂರ್ತಿಗಳು ಅಪಾರ ಪಾಂಡಿತ್ಯ, ಲೋಕಸೇವಾತುರತೆ, ಸೌಜನ್ಯ, ಅಭೂತಪೂರ್ವ ವಾಗ್ಮಿತ್ವ, ಸಂಸ್ಕೃತ ಆಂಗ್ಲ ಕನ್ನಡ ಇತ್ಯಾದಿ ಅನೇಕ ಭಾಷೆಗಳಲ್ಲಿ ಪ್ರಭುತ್ವ, ಇನ್ನೂ ಅನೇಕ ಹಿರಿಯ ಗುಣಗಳಿಂದ ಭಾರತದಲ್ಲೇ– ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಅತಿ ಗೌರವಾನ್ವಿತರು. ಅವರು ನನ್ನ ಮೇಲೆ ಅಕಾರಣ ಪ್ರೀತಿಯನ್ನಿಟ್ಟಿರುವರೆಂಬುದು ನನಗೆ ಹಿಡಿಸಲಾರದಷ್ಟು ಸಂತೋಷ ತಂದಿದೆ. ಅವರ ಮುಂದೆ ಮೌನವಾಗಿ ತಲೆತಗ್ಗಿಸಿ ನಿಂತಿರುವುದೇ ಅವರಿಗೆ ಸಲ್ಲಿಸುವ ಕಾಣಿಕೆಯೆಂದು ಭಾವಿಸಿದ್ದೇನೆ." ಈ ಪ್ರಶಂಸೆಯು ಮತ್ತೂರರ ವ್ಯಕ್ತಿತ್ವಕ್ಕಿಟ್ಟ ರತ್ನ ಕಿರೀಟವಾಗಿದೆಯೆಂದರೆ ತಪ್ಪಿಲ್ಲ.

"ನೆನಪಿನ ಮಾಲೆ ಕಟ್ಟುವಾಗ ಯಾವೊಂದು ಹೂವು ಕೆಳಗೆ ಬಿದ್ದರೂ ಅಥವಾ ಬಿಟ್ಟುಹೋದರೂ ಅದಕ್ಕೆ ಅನ್ಯಾಯವಾದಂತೆ" ಎಂದು ಹೇಳಿರುವ ಮತ್ತೂರರು ಯಾವ ಹೂವೂ ಕೊರಗದ ಹಾಗೆ, ಸೊರಗದ ಹಾಗೆ ಪರಿಮಳಭರಿತವಾದ ಆತ್ಮಕಥಾಮಾಲಿಕೆಯನ್ನು ಸಿದ್ಧಪಡಿಸಿದ್ದಾರೆ. ಹೂವೆಲ್ಲ ಮತ್ತೂರರದು. ಅದನ್ನು ಆಕರ್ಷಕವಾಗುವಂತೆ, ಮುಡಿಯಲು ಯೋಗ್ಯವಾಗುವಂತೆ ಕಟ್ಟಿಕೊಟ್ಟಿರುವ ಮಾಲೆಗಾರ್ತಿ, ಹೂವನ್ನೇ ಹೆಸರಾಗಿರಿಸಿಕೊಂಡಿರುವ ಸುಮನಾ ವಿಶ್ವನಾಥ್ ಅವರು. ಈ ಕಾಯಕವೇನೂ ಅವರಿಗೆ ಸುಲಭದಲ್ಲಿ ದಕ್ಕಿಲ್ಲ. ಈ ರೂಪಕ್ಕೆ ತರಲು ಅವರು ಏಳು ಕೆರೆ ನೀರು ಕುಡಿದಿದ್ದಾರೆ. 'ಕಟ್ಟಿಯುಮೇನೋ ಮಾಲೆಗಾರನ ಪೊಸಬಾಸಿಗಂ, ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ' ಎಂದು ಕೊರಗುವ ಪ್ರಮೇಯ ಇಲ್ಲಿಲ್ಲ. ಅಂತಾರಾಷ್ಟ್ರೀಯ ಖ್ಯಾತಿಗೆ ಪಾತ್ರರಾಗಿರುವ ಮತ್ತೂರರ ಅಭಿಮಾನಿಗಳು ಎಲ್ಲೆಡೆ ಚೆಲ್ಲಿಕೊಂಡಿದ್ದಾರೆ. ಈಗಾಗಲೇ ಅದೆಷ್ಟೋ ಸಜ್ಜನರು ಈ ಆತ್ಮಕಥೆಯನ್ನೋದಿ ಆನಂದಪಟ್ಟಿದ್ದಾರೆ. ಇನ್ನೂ ಓದಿಲ್ಲವೆನ್ನುವವರಿಗೆ ಈ ಸಂಪುಟವೊಂದು ತವನಿಧಿಯಾಗಿದೆ. ಸುಮನಾವಿಶ್ವನಾಥ್ಅವರ ಶ್ರಮ ಸಾರ್ಥಕವಾಗಿದೆ. ಈ ಒಟ್ಟು ಸಂಪುಟಕ್ಕೂ ಸುಮನಾ ಅವರೇ ಸಂಪಾದಕರು. ಅವರಿಗೆ ಸಂಕೇತಿಗಳೆಲ್ಲರ, ಕನ್ನಡಿಗರೆಲ್ಲರ ಕೃತಜ್ಞತೆಗಳು ಸಲ್ಲಬೇಕು.

ಈ ಆತ್ಮಕಥಾಸಂಪುಟದ ನಾಯಕಮಣಿಗಳಲ್ಲಿ ಈಗ ಮತ್ತೂರರು ಮತ್ತು ನರಸಿಂಹಮೂರ್ತಿಶಾಸ್ತ್ರಿಗಳು ನಮ್ಮೊಡನೆ ಇರುವಂಥವರು. "ಈ ದಿನ (೨೦೦೨) ಎಪ್ಪತ್ತೈದರ 'ಹರೆಯ'ಕ್ಕೆ ಕಾಲಿಡುತ್ತಿರುವ ಶ್ರೀ ಮತ್ತೂರರ ಜನ್ಮಶತಾಬ್ದಿಯನ್ನು ನಾವೆಲ್ಲರೂ ಹೀಗೆಯೇ ಸಂಭ್ರಮ, ಸಂತೋಷದಿಂದ ಆಚರಿಸುವಂತಾಗಿ, ಇನ್ನುಳಿದ ಇಪ್ಪತ್ತೈದು ವರ್ಷಗಳ ಅವರ ಅನುಭವಗಳ ಅಮೂಲ್ಯ ಹೂಗಳ ಮತ್ತೊಂದು ಮಾಲೆಯನ್ನೂ ನಾನೇ ಕಟ್ಟುವಂಥ ಸದವಕಾಶವನ್ನೂ ದೇವರು ನನಗೆ ಕರುಣಿಸಲಿ ಎಂದು ಬೇಡುತ್ತೇನೆ" ಎಂದು ಸುಮನಾ ಅವರು ಸರ್ವೇಶ್ವರನನ್ನು ಪ್ರಾರ್ಥಿಸಿದ್ದಾರೆ. ಅವರ ಪ್ರಾರ್ಥನೆಗೆ ನಾವೂ ದನಿಗೂಡಿಸೋಣ, ಮತ್ತೂರರು ಶತಾಯುಷಿಗಳಾಗಿ ನಮ್ಮ ನಾಡುನುಡಿಗಳನ್ನು ಬೆಳಗಿಸಲೆಂದು ಹಾರೈಸೋಣ!

ಪಂಚರತ್ನ ಕೃತಿಗಳು

ಈ ಸಂಪುಟದಲ್ಲಿರುವ ಐದೂ ಕೃತಿಗಳು ಆತ್ಮಕಥೆಯ ಲಕ್ಷಣ-ಸ್ವರೂಪಾದಿಗಳನ್ನು ಸಹಜವಾಗಿಯೇ ತಮ್ಮೊಳಗೆ ತುಂಬಿಕೊಂಡಿದ್ದು ಅತ್ಯಂತ ಯಶಸ್ವಿಯಾಗಿವೆ. 'ನನ್ನ ಬದುಕು' ಎಂಬ ಕೃತಿಯಲ್ಲಿ ದೊರೆಸ್ವಾಮಿಯವರು ಅಂತ್ಯದಲ್ಲಿ ಹೇಳಿರುವ ಕೆಲವು ಮಾತುಗಳು ಆತ್ಮಕಥೆಯ ಹೂರಣ ಹೇಗಿರಬೇಕು ಎಂಬುದನ್ನು ಪರೋಕ್ಷವಾಗಿ ವಿವರಿಸುವಂತಿವೆ. "ಹೀಗೆ ನನ್ನ ಈ ಎಂಬತ್ತೂರು ವರ್ಷಗಳ ಸುದೀರ್ಘ ಜೀವನದ ವಿವಿಧ ಘಟನಾವಳಿಗಳು ಹಾಗೂ ನನ್ನ ಅನುಭವಗಳನ್ನು ಇಲ್ಲಿ ಯಥಾವತ್ತಾಗಿ ಚಿತ್ರಿಸಲು ಪ್ರಯತ್ನಿಸಿದ್ದೇನೆ. ಇದರಲ್ಲಿ ಯಾವ ಉತ್ಪ್ರೇಕ್ಷೆಗೂ ಆತ್ಮಶ್ಲಾಘನೆಗೂ ಸಲ್ಲದ ವೈಭವೀಕರಣಕ್ಕೂ ಅವಕಾಶ ಕೊಟ್ಟಿಲ್ಲವೆಂದು ದೃಢವಾಗಿ ನಂಬಿದ್ದೇನೆ. ಆತ್ಮಚರಿತ್ರೆ ಬರೆಯುವಾಗ ಬೇರೆಯವರು ನಮ್ಮ ಬಗ್ಗೆ ಆಡುವ ಶ್ಲಾಘನೆಯ, ಹೊಗಳಿಕೆಯ ಮಾತುಗಳನ್ನು, ಅದರಿಂದ ನಮಗಾಗುವ ಸಂತೋಷವನ್ನು ಹೇಳಲೇಬೇಕಾಗುತ್ತದೆ. ಆದರೆ, ಅದನ್ನು ಆತ್ಮಪ್ರಶಂಸೆ ಅಥವಾ ವೈಭವೀಕರಣವೆಂದು ಖಂಡಿತ ಯಾರೂ ಭಾವಿಸಬಾರದು. ಜೀವನದ ಉದ್ದಕ್ಕೂ ನಡೆದುಬಂದ ದಾರಿಯಲ್ಲಿ ಕಂಡ ಸುಖ-ದುಃಖ, ಆಸೆ-ನಿರಾಸೆ, ತೃಪ್ತಿ-ಅತೃಪ್ತಿ, ಸೋಲು-ಗೆಲುವು, ನೋವು-ನಲಿವು ಇಂತಹ ದ್ವಂದ್ವ ಸನ್ನಿವೇಶಗಳನ್ನು ಹೇಗೆ ಎದುರಿಸಬೇಕಾಯಿತು, ಆಯಾ ಸನ್ನಿವೇಶಗಳಲ್ಲಿ ನನ್ನ ಮನಃಸ್ಥಿತಿ ಹಾಗೂ ಪ್ರತಿಕ್ರಿಯೆಗಳು ಹೇಗಿದ್ದುವು ಎಂಬುದನ್ನೆಲ್ಲಾ ಯಾವ ಲೋಪವೂ ಇಲ್ಲದಂತೆ ಬಣ್ಣಿಸಿದ್ದೇನೆ." ದೊರೆಸ್ವಾಮಿಯವರ ಈ ಮಾತುಗಳು ಆತ್ಮಕಥೆಯ 'ರಸಸೂತ್ರ'ವೆಂದೇ ಹೇಳಬೇಕು. ಈ ಸೂತ್ರಾನುಸಾರಿಯಾಗಿಯೇ ಇಲ್ಲಿನ ಎಲ್ಲ ಕೃತಿಗಳೂ ಚೆಲ್ಲುವರಿದಿವೆಯೆಂದೇ ಹೇಳಬೇಕು.

'ಸಂಕೇತಿ: ಆತ್ಮಕಥೆಗಳು' ಎಂಬ ಶೀರ್ಷಿಕೆಯ ಈ ಸಂಪುಟದಲ್ಲಂತೂ ಸಂಕೇತಿ ಎಂಬ ಶಬ್ದವು ತನ್ನ ಪ್ರತ್ಯೇಕತೆಯನ್ನು ನಿರಸನಗೊಳಿಸಿಕೊಂಡುಬಿಡುತ್ತದೆ. ಬಿ. ಸುಬ್ಬರಾವ್, ನರಸಿಂಹಮೂರ್ತಿಶಾಸ್ತ್ರಿ, ಆರ್. ಎನ್. ದೊರೆಸ್ವಾಮಿ, ಎಚ್. ಸಿ. ವೇಣುಗೋಪಾಲ್, ಮತ್ತೂರು ಕೃಷ್ಣಮೂರ್ತಿ ಎಂಬೀ ಪಂಚಪರಮೇಶ್ವರರು ನಾಡಿಗೇ ಮಾದರಿಯಾಗಬಲ್ಲವರು; ಅಷ್ಟೇ ಏಕೆ ಭರತಖಂಡಕ್ಕೇ ಮಾದರಿಯಾಗ ಬಲ್ಲವರು. ಎಲ್ಲರೂ ಭಾರತಾಂಬೆಯ ಸುಪುತ್ರರು; ಹೆಚ್ಚಿನ ನಿಗಾವಣೆಗಾಗಿ ಅವಳು ಈ ಸುಪುತ್ರರನ್ನು ತನ್ನ ಕನ್ನಡ ತನುಜಾತೆಯ ಮಡಿಲಿಗೆ ಒಪ್ಪಿಸಿದ್ದಾಳಷ್ಟೆ! ಸಂಕೇತಿಗಳೆಂದರೆ ಅವರು ಕನ್ನಡವನ್ನೇ ಹಾಸಿ, ಕನ್ನಡವನ್ನೇ ಹೊದ್ದು, ಕನ್ನಡವನ್ನೇ ಉಸಿರಾಡಿ, ಕನ್ನಡಮಯರಾದ ಜನಾಂಗ. ಅಂತಹ ಅಪೂರ್ವ ಕನ್ನಡಿಗರ ಚರಿತೆಗಳು ಕನ್ನಡಿಗರೆಲ್ಲರ ಸ್ಫೂರ್ತಿಯ ಆಗರವಾಗಿ ಚಿರಕಾಲ ಉಳಿಯುವುದರಲ್ಲಿ ಸಂದೇಹವಿಲ್ಲ. ನಾಟಿ, ಗೌಳ, ವರಾಳಿ, ಆರಭಿ, ಶ್ರೀ ಎಂಬ ಐದು ಘನರಾಗಗಳಲ್ಲಿ ತ್ಯಾಗರಾಜರು ರಚಿಸಿರುವ ಐದು ಕೀರ್ತನೆಗಳನ್ನು 'ಪಂಚರತ್ನ ಕೃತಿಗಳು' ಎನ್ನುತ್ತಾರೆ. ಇಲ್ಲಿನ ಐದು ಆತ್ಮಕಥೆಗಳೂ ಅಷ್ಟೆ; ಆತ್ಮಕಥಾಕ್ಷೇತ್ರದ 'ಪಂಚರತ್ನ ಕೃತಿಗಳು'. ಇಲ್ಲಿನ ಎಲ್ಲ ಕೃತಿಗಳೂ ಸಂಕೇತಿಯೆಂಬ ಶೀರ್ಷಿಕೆಯ ಸಂಕೇತವನ್ನು ತೊರೆದು ಬಿಡಿಬಿಡಿ ಕೃತಿಗಳಾಗಿ ಮತ್ತೆ ಮತ್ತೆ ಪ್ರಕಟಗೊಂಡರೆ, ಕನ್ನಡ ಆತ್ಮಕಥಾಶಾರದೆಯು ಚತುರ್ಭುಜೆಯಾಗಿ ಸಂಭ್ರಮಿಸುವುದರಲ್ಲಿ ಸಂಶಯವಿಲ್ಲ.

***

ಪ್ರಣತಾರ್ತಿಹರನ್ ಸಾಹಸೋದ್ಯಮ

ಈ ಸಂಪುಟಕ್ಕೆ ಡಾ॥ ಪ್ರಣತಾರ್ತಿಹರನ್ ಪ್ರಧಾನಸಂಪಾದಕರಾಗಿದ್ದಾರೆ. ಸಂಕೇತಿ ಜನಾಂಗದ ಭಾಷೆ, ಸಂಸ್ಕೃತಿ, ಸಾಹಿತ್ಯ, ಸಾಧನೆ, ಸಾಧಕರು, ಮುಂತಾದ ಎಲ್ಲ ವಿವರಗಳನ್ನೂ ದಾಖಲಿಸಿ ಕೃತಕೃತ್ಯರಾಗುವ ದೀಕ್ಷೆತೊಟ್ಟು ಅವರು ಹತ್ತಾರು ವರ್ಷಗಳಿಂದ 'ಹುಚ್ಚರಾಗಿ' ಅಲೆದಾಡುತ್ತಲೇ ಇದ್ದಾರೆ. ಅವರ ಹುಚ್ಚಿನ ಫಲವಾಗಿ ಅಚ್ಚು ಮೆಚ್ಚಾದ ಐದು ಸಂಪುಟಗಳು ಈಗಾಗಲೇ ಲೋಕಾರ್ಪಣಗೊಂಡಿವೆ. ಆ ಸಂಪುಟಗಳೆಲ್ಲ ಕೈತೊಳೆದುಕೊಂಡು ಮುಟ್ಟಬೇಕಾದಷ್ಟು ಮುದ್ದಾಗಿ ಎದ್ದುಬಂದಿವೆ. ಅದಕ್ಕಾಗಿ ಪ್ರಣತಾರ್ತಿಹರನ್ ಅವರಿಗೆ ಸಮಸ್ತ ಸಂಕೇತಿ ಬಳಗದ ಪರವಾಗಿ, ಕನ್ನಡಿಗರೆಲ್ಲರ ಪರವಾಗಿ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

"ಮಾಡಿಮಾಡಿ ಕೆಟ್ಟರು ಮನವಿಲ್ಲದೆ । ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ । ಮಾಡುವ ನೀಡುವ ನಿಜಗುಣವುಳ್ಳೊಡೆ । ಕೂಡಿಕೊಂಬ ನಮ್ಮ ಕೂಡಲಸಂಗಮದೇವ" ಎಂದು ಬಸವಣ್ಣನವರು ಹಾಡಿದ್ದಾರೆ. ಈ ಸಂಪುಟಗಳ ನಿರ್ಮಾಣಕಾರ್ಯ ಚೆನ್ನಾಗಿ ನೆರವೇರಲೆಂದು ಸತ್ಪುರುಷರು 'ನಿಜಗುಣ'ದಿಂದ ನೀಡಿದ್ದಾರೆ. ಅದರ ಬಲದಿಂದ 'ಮಾಡುವ ನಿಜಗುಣ'ದಿಂದ ಕೂಡಿದ ಪ್ರಣತಾರ್ತಿಹರನ್ ಈ ಸಂಪುಟಗಳನ್ನು ಹೊರತರುತ್ತ ವರ್ಷದಿಂದ ವರ್ಷಕ್ಕೆ ಘನವಂತರಾಗಿ ಬೆಳೆದುಬಿಡುತ್ತಿದ್ದಾರೆ. ಅವರು ಸಂತೋಷವನ್ನೇ ಬಿತ್ತಿ, ಸಂತೋಷವನ್ನೇ ಬೆಳೆದು, ಸಂತೋಷವನ್ನೇ ಸಂತರ್ಪಣೆಮಾಡಿ ಎಲ್ಲರಿಗೂ ಉಣಬಡಿಸುತ್ತಿದ್ದಾರೆ. ಅದೇ ನಿಜವಾದ ಅರ್ಥದಲ್ಲಿ ಈಶ್ವರಪೂಜೆಯಾಗಿದೆ. ಅವರ ಈ ಪೂಜೆಗೆ ಬೆಲೆಕಟ್ಟಲುಂಟೇ!

ಮಹತ್ವದ ಸಾಧನೆ ಮಾಡಿಯೂ ಮೌನವಾಗಿ, ಆತ್ಮಾರಾಮರಾಗಿ ಕುಳಿತವರನ್ನು ಬಡಿದೆಬ್ಬಿಸಿ ಅವರಿಂದ ಕೃತಿರಚನೆಯೆಂಬ 'ಲೋಕಸಂಗ್ರಹ' ಕಾರ್ಯವನ್ನು ಮಾಡಿಸುತ್ತಿರುವ ಕೀರ್ತಿಯೂ ಪ್ರಣತಾರ್ತಿಹರನ್ ಅವರಿಗೆ ಸಲ್ಲಬೇಕಾಗಿದೆ. ದೊರೆಸ್ವಾಮಿಯವರು 'ನನ್ನ ಬದುಕು' ವಿನಲ್ಲಿ ಹೇಳಿರುವುದು ಒಂದು ಉದಾಹರಣೆ ಮಾತ್ರ: "ಪ್ರಸ್ತುತ ಈ 'ನನ್ನ ಬದುಕು' ಪುಸ್ತಕವನ್ನು ಮತ್ತೆ ನಾನು ಬರೆಯಲು ಡಾ॥ ಪ್ರಣತಾರ್ತಿಹರನ್ ಅವರ ಪ್ರೇರಣೆ ಪ್ರೋತ್ಸಾಹಗಳೇ ಮುಖ್ಯ ಕಾರಣ. ಸಂಕೇತಿ ಜನಾಂಗದ ಬಗೆಗೆ ಆಳವಾದ ಅಧ್ಯಯನ, ಸಂಶೋಧನೆ ನಡೆಸಿರುವ ಅವರು ನನ್ನ ಬದುಕಿನ ಹೆಚ್ಚಿನ ವಿವರಗಳು, ಆಗಿನ ಜನಜೀವನ, ಸಂಸ್ಕೃತಿ, ಸಾಮಾಜಿಕ ಪರಿಸರ ಇತ್ಯಾದಿ ವಿಷಯಗಳನ್ನು ಇನ್ನೂ ಸವಿಸ್ತಾರವಾಗಿ ಬರೆಯುವಂತೆ ನನ್ನನ್ನು ಪ್ರೇರೇಪಿಸಿದುದರ ಫಲವಾಗಿ ಈ ಪುಸ್ತಕ ಸಿದ್ಧವಾಗಿದೆ" ಎಂದು ಕೊಂಡಾಡಿದ್ದಾರೆ.

ಪ್ರಣತಾರ್ತಿಹರನ್ ಸಂಯೋಜಿಸಿಕೊಂಡಿರುವಂತೆ ಸಂಕೇತಿ ಅಧ್ಯಯನದ ಮಿಕ್ಕ ಸಂಪುಟಗಳೂ ಕ್ರಮಕ್ರಮವಾಗಿ ಬೆಳಕು ಕಾಣುವಂತಾಗಲಿ, ಸಂಕೇತಿ ಬಂಧುಗಳ ಪ್ರೋತ್ಸಾಹ ಅದಕ್ಕೆ ಪೂರಕವಾಗಲಿ ಎಂದು ಹಾರೈಸುತ್ತೇನೆ. ಮತ್ತೊಮ್ಮೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

***

ದೇಶೀಯ ವಿದ್ಯಾಶಾಲೆ ಕಾಲೇಜು
ಶಿವಮೊಗ್ಗ

ಪ್ರೊ|| ಎಲ್.ಎಂ.ಎಲ್. ಶಾಸ್ತ್ರಿ
ಕನ್ನಡ ಪ್ರಾಧ್ಯಾಪಕ (ನಿವೃತ್ತ)

ಸಂಕೇತಿ ಜನಾಂಗದ ಹಿರಿಯರ ಆತ್ಮಕಥೆಗಳನ್ನು ಪುನರ್ಮುದ್ರಿಸುವ ಸಾಹಸದ ಕೆಲಸವನ್ನು ಸಮುದಾಯ ಅಧ್ಯಯನ ಕೇಂದ್ರದವರು ಹಮ್ಮಿಕೊಂಡಿದ್ದಾರೆ. ನಮ್ಮ ಜನಾಂಗಕ್ಕೆ ಮಾರ್ಗದರ್ಶಕವಾಗಿರುವ ಇಲ್ಲಿನ ಹಿರಿದಾದ ಬದುಕುಗಳ ವಿವರಗಳನ್ನು ಶಾಶ್ವತಗೊಳಿಸುವ ಹರನ್ ಅವರ ಈ ಪ್ರಯತ್ನ ಶ್ಲಾಘನೀಯವಾದುದಾಗಿದೆ. ಲೇಖಕರುಗಳು ಆತ್ಮಕಥೆಯಲ್ಲಿ ತಮ್ಮ ಬದುಕಿನ ಘಟನೆಗಳನ್ನು ಹೇಳುವಾಗ, ತಮ್ಮನ್ನು ತಾವು ವಿಮರ್ಶಿಸಿಕೊಳ್ಳಬೇಕಾದ ಸಂದರ್ಭ ಬರುವುದರಿಂದ, ವಿವರಗಳು ಸತ್ಯಕ್ಕೆ ಸ್ವಲ್ಪ ದೂರವಾಗುವ ಸಾಧ್ಯತೆ ಇದ್ದೇ ಇರುತ್ತದೆ. ಇದರಿಂದ ಆಗಬಹುದಾದ ಹಾನಿ ಏನೂ ಇಲ್ಲ. ಅಲ್ಲದೆ ಇಂಥ ಅತ್ಯುಕ್ತಿಗಳನ್ನು ಓದುಗರು ಸರಿಯಾಗಿ ಗುರ್ತಿಸಬಲ್ಲರಾದ್ದರಿಂದ ಬಾಧಕವಿಲ್ಲ.

೧

ಸಂಕೇತಿ ಜನಾಂಗದಲ್ಲಿ ಇಂದು ಕಡುಬಡವರೆಂಬುವರಿಲ್ಲ. ಆದರೆ ಎರಡು ಮೂರು ತಲೆಮಾರು ಹಿಂದಿನವರ ಇತಿವೃತ್ತ ಹೀಗಿಲ್ಲ, ಕಡು ಬಡತನದ ಬದುಕು. ಬಡತನದ ಅಪಾರ ಬವಣೆಯ ನಡುವೆಯೂ ಅದ್ಭುತವಾದ ಸಿದ್ಧಿಯನ್ನವರು ಸಾಧಿಸಿದರು. ಈ ಸಂಗ್ರಹದ ಐದು ಜನರಲ್ಲಿ ನಾಲ್ವರು ಈ ಗುಂಪಿಗೆ ಸೇರಿದವರು. ಮೊದಲ ಲೇಖಕ, ಶ್ರೇಷ್ಠ ಸಂಗೀತಜ್ಞ , ಶ್ರೀ ಬಿ. ಸುಬ್ಬರಾವ್ ಅವರು ಮಾತ್ರ ಈ ಮಾತಿಗೆ ಅಪವಾದ. ಅವರು ಜಿಲ್ಲಾ ವ್ಯವಸಾಯಾಧಿಕಾರಿಯಾಗಿದ್ದವರು. ಅವರ ತಂದೆ ಜಿಲ್ಲಾ ಅರಣ್ಯಾಧಿಕಾರಿಯಾಗಿದ್ದವರು.

ಕರ್ನಾಟಕ ಬಿಟ್ಟು ಹೊರರಾಜ್ಯದಲ್ಲಿ ಅಧಿಕಾರಿಯಾಗಿದ್ದವರು ಸಂಗೀತದಲ್ಲಿ ತಲಸ್ಪರ್ಶಿಜ್ಞಾನ ಪಡೆದಿರುವುದು ಸಾಧಾರಣ ಸಂಗತಿಯಲ್ಲ. ಆದರೂ ಕಲೆಗಾಗಿ ಹೆಚ್ಚು ಕಾಲ ವಿನಿಯೋಗಿಸಲು ಸಾಧ್ಯವಾದದ್ದು ನಿವೃತ್ತಿಯ ನಂತರವೇ. ಶ್ರೀ ಸುಬ್ಬರಾಯರು ರಚಿಸಿದ ಕೃತಿ 'ರಾಗನಿಧಿ' ನೂರ್ಕಾಲ ಸಂಗೀತಕ್ಷೇತ್ರದಲ್ಲಿ ಶಾಶ್ವತವಾಗಿ ಉಳಿಯುವ ಗ್ರಂಥ. ೧೮೯೫ ರಲ್ಲಿ ಜನಿಸಿದ ಶ್ರೀ ಸುಬ್ಬರಾಯರು ೭೨ ವರ್ಷಗಳ ನಂತರ ತಮ್ಮ ಬದುಕಿನ ಮಹದಾಶಯವನ್ನು ಈಡೇರಿಸಿಕೊಂಡರು. ೧೯೬೬ ರಲ್ಲಿ ಅವರ ಮಹತ್ವದ ಕೃತಿಯಾದ 'ರಾಗನಿಧಿಯ' ನಾಲ್ಕನೆಯ ಹಾಗೂ ಕೊನೆಯ ಭಾಗ ಪ್ರಕಟವಾಯಿತು. ಈ ಕೃತಿಯು ದಕ್ಷಿಣಾದಿ ಹಾಗೂ ಉತ್ತರಾದಿ ರಾಗಗಳ ಭಂಡಾರವಾಗಿದ್ದು ಅತ್ಯಂತ ಮೌಲಿಕ ಗ್ರಂಥವಾಗಿದೆ. ಇದರ ಮುಂದಿನ ವರ್ಷ (೧೯೬೭) ಮದ್ರಾಸಿನ ಮ್ಯೂಸಿಕ್ ಅಕೆಡಮಿಯವರು ಕೊಡಮಾಡಿದ ಸನ್ಮಾನಪತ್ರ ಸುಬ್ಬರಾಯರ ಸುದೀರ್ಘ ಬದುಕಿನ ಸಾಧನೆಗೆ ಸಂದ ನಿಜವಾದ ಗೌರವವಾಗಿದೆ.

ಲೇಖನದ ಶೀರ್ಷಿಕೆಯು 'ಆತ್ಮಕಥೆ' ಎಂದಿಲ್ಲ, 'ಮೆಲುಕುಗಳು' ಎಂದಿದೆ. ಅವರ ಸಹವಾಸಕ್ಕೆ ಬಂದ, ಗೆಳೆತನಕ್ಕೆ ಸಂದ ಹಲವು ವಿದ್ವಾಂಸರ ಒಡನಾಟದ ರೋಚಕ ಸಂಗತಿಗಳು ಇಲ್ಲಿವೆ. ಹಾಗೆ ಆತ್ಮೀಯರಾದ ಮಹಾಚೇತನಗಳು : ಎ.ವಿ. ವರದಾಚಾರ್, ಟೈಗರ್ ವರದಾಚಾರ್, ಬಿ. ವಾಸುದೇವಾಚಾರ್, ಬಾಲಗಂಧರ್ವ, ಬಿಡಾರಂ ಕೃಷ್ಣಪ್ಪ, ಸೋಸಲೆ ರಾಮದಾಸ್, ವೀಣೆ ಶೇಷಣ್ಣ, ಕೃಷ್ಣ ರತನ್ ಜಂಕರ್, ಉಸ್ತಾದ್ ಲಾಲ್ ಖಾನ್, ಡಿ.ವಿ.ಪಲುಸ್ಕರ್, ಜೆ.ಎಲ್. ರಾನಡೆ, ಗುರುರಾವ್ ದೇಶಪಾಂಡೆ, ಸವಾಯಿ ಗಂಧರ್ವ, ಪಿಟೀಲು ಟಿ. ಚೌಡಯ್ಯ, ಇತ್ಯಾದಿ. ಇಪ್ಪತ್ತನೆಯ ಶತಮಾನದ ಮೊದಲ ದಶಕಗಳ ಶ್ರೇಷ್ಠ ವಿದ್ವಾಂಸರ ಪರಿಚಯ ನೀಡುವ ಈ ಲೇಖನಕ್ಕೆ ಶಾಶ್ವತತೆಯಿದೆ.

ಸುಬ್ಬರಾಯರು ಮಹೋನ್ನತ ಸಾಧನೆ ಮಾಡಲು ಸಾಧಕವಾದ ಅಂಶ ಯಾವುದು? ಅವರೇ ಹೇಳುತ್ತಾರೆ – 'ಸಂಗೀತಗಾರನಿಗೆ ಬೇಕಾದದ್ದು ಭಕ್ತಿ, ಆಸಕ್ತಿ, ಮತ್ತು ಆರೋಗ್ಯ', 'ಸಂಗೀತವೇ ನನಗೆ ಆಹಾರವಾಗಿತ್ತು' ಎಂದೊಂದು ಕಡೆ ಹೇಳಿದ್ದಾರೆ. ಹಾಡಿನ ಗುಂಗು ಎಷ್ಟಿರುತ್ತಿತ್ತೆಂದರೆ ನಿದ್ರೆಯಲ್ಲಿಯೂ ನಿಖರವಾಗಿ ರಾಗಾಲಾಪನೆ ಮಾಡುತ್ತಿದ್ದಂತೆ ಅವರ ಕನವರಿಕೆ ಕೇಳಿದವರು ಹೇಳಿದ್ದಾರೆ.

ಸಂಗೀತಗಾರರ ಬಗ್ಗೆ ನಮಗೆ ಬೇರೆಲ್ಲೂ ಸಿಗಲಾರದ ಕೆಲವು ಅಪರೂಪದ ಸಂಗತಿಗಳು ಇಲ್ಲಿವೆ. ಉದಾಹರಣೆಗೆ (ಪುಟ ೧೭೭ರಲ್ಲಿ) : "ಎ.ವಿ. ವರದಾಚಾರ್ಯರು ರಂಗಭೂಮಿಯ ಮೇಲೆ ಹಾಡುವ ಚೇತೋಹಾರಿ ರೂಪ–ಪದ್ಯಗಳಿಗೆ ಹೋಲಿಸಿದಾಗ ಬಿಡಾರಂ ಕೃಷ್ಣಪ್ಪನವರ ಸಂಗೀತ ನೀರಸವಾಗಿತ್ತು." ಕೆಲವು ಅನಿಸಿಕೆಗಳು ಇಂದಿಗೂ ಗಮನಾರ್ಹವೂ ಆದರ್ಶವೂ ಆಗಿವೆ. ಉದಾಹರಣೆಗೆ (ಪುಟ ೨೯) ಮುಂಬೈನಲ್ಲಿ ನಡೆದ ತುಳಸಿ ರಾಮಾಯಣದ ಪ್ರವಚನ (ಸಂಗೀತಾತ್ಮಕ ವಾಚನ / ಪಠನ). ಇಂಥ ಪ್ರವಚನ, ಹರಿಕಥೆಗಳು ಯುವಜನತೆಯಲ್ಲಿ ಉತ್ತಮ ಮೌಲ್ಯ ಬೆಳೆಸಲು ಸಹಕಾರಿ.

೨

ಲಿಂಗದಹಳ್ಳಿಯ ಶ್ರೀ ಎಸ್. ನರಸಿಂಹಮೂರ್ತಿಯವರಿಗೆ ೯೬ ತುಂಬಿ ೯೭ ನಡೆಯುತ್ತಿದೆ. ಅವರು ಕರ್ನಾಟಕ ಅಲ್ಲ, ರಾಷ್ಟ್ರಮಟ್ಟದ ಸಂಸ್ಕೃತ ಪಂಡಿತರಲ್ಲಿ ಅಗ್ರಗಣ್ಯರು. ವಿದ್ಯಾರತ್ನ ಮತ್ತು ವಿದ್ಯಾಸಾಗರ ಪ್ರಶಸ್ತಿ ಪುರಸ್ಕೃತರು. ಓದುವ ಕಾಲಕ್ಕೆ ಏಕಸಂಧಿಗ್ರಾಹಿಗಳು. ನಾಲ್ಕೂ ವೇದಗಳನ್ನು ಸಹಾಧ್ಯಾಯಿಗಳು ಗಟ್ಟಿಯಾಗಿ ಪಠನ ಮಾಡುವಾಗ ಕೇಳಿಯೇ ಕಲಿತವರು. ೧೯೨೭ ರಿಂದ ೩೨ರ ಅವಧಿಯಲ್ಲಿ ಶೃಂಗೇರಿಯಲ್ಲಿ ನಾಟಕಾಂತ ಸಾಹಿತ್ಯ ಮತ್ತು ವೇದಶಾಸ್ತ್ರ ವಿಭಾಗಗಳಲ್ಲಿ ಪದವಿ ಪಡೆದರು. ಮುಂದಿನ ವರ್ಷಗಳಲ್ಲಿ ಏಳು ವಿಷಯಗಳಲ್ಲಿ ವಿದ್ವತ್ ಪದವಿ ಪಡೆದರು [೧೯೩೪ : ವ್ಯಾಕರಣ (ಧಾರವಾಡ); ೧೯೩೯ : ತರ್ಕ (ಧಾರವಾಡ); ೧೯೪೦ : ಸಾಹಿತ್ಯ/ಅಲಂಕಾರ (ಮದ್ರಾಸು); ೧೯೪೬ : ವೇದಾಂತ, ಮೀಮಾಂಸಾ (ಮದ್ರಾಸು); ೧೯೫೨ : ಜ್ಯೌತಿಷ (ಶೃಂಗೇರಿ)] ಅವರು ಜ್ಯೌತಿಷ ಹಾಗೂ ಸ್ಮಾರ್ತ ಪ್ರಯೋಗಗಳಲ್ಲಿ ಪರಿಣತಿ ಪಡೆದವರು.

ನಾಲ್ಕಾರು ಸಂಸ್ಕೃತ ಕಾಲೇಜುಗಳಲ್ಲಿ ಅಧ್ಯಾಪನಕಾರ್ಯ ಮಾಡಿದ್ದಾರೆ. ಭೀಮನಕೋಣೆ, ಕೂಡಲಿ ಇತ್ಯಾದಿ ಊರುಗಳ ನಾಲ್ಕಾರು ಪೀಠಾಧಿಪತಿಗಳಿಗೆ ಪಾಠ ಹೇಳಿದ್ದಾರೆ. ಏಳು ಕೃತಿಗಳು ಪ್ರಕಟವಾಗಿವೆ. ನಾಲ್ಕು ಕೃತಿಗಳು ಪ್ರಕಟವಾಗಬೇಕಿದೆ –ಕೈ ಬರಹದಲ್ಲಿವೆ.

ಶ್ರೀ ಎಸ್.ನರಸಿಂಹಮೂರ್ತಿಯವರ ಆತ್ಮಕಥೆಯು, ಮೂರು ತಲೆಮಾರುಗಳಷ್ಟು ಹಿಂದಿನ ಲಿಂಗದಹಳ್ಳಿಯ ಬದುಕಿಗೆ ಹಿಡಿದ ಕೈಗನ್ನಡಿಯಾಗಿದೆ. ಲಿಂಗದಹಳ್ಳಿ ಅರೆಮಲೆನಾಡು, ಸುತ್ತ ಗುಡ್ಡಗಳು, ಪ್ರಕೃತಿರಮ್ಯ ಸ್ಥಳ. ಎಸ್. ನರಸಿಂಹಮೂರ್ತಿಯವರು ತಮ್ಮ ಬಾಲ್ಯದ ಸ್ಮರಣೆ ಮಾಡುತ್ತ 'ತುಂಬಾ ಆರೋಗ್ಯಕರ ವಾತಾವರಣ ಇಲ್ಲಿಯದು' ಎಂದು ನೆನೆಸಿಕೊಳ್ಳುತ್ತಾರೆ. ಆಗಿದ್ದ ಶತಾಯುಷಿಗಳನ್ನು ಜ್ಞಾಪಿಸಿಕೊಳ್ಳುತ್ತಾರೆ. ಕಷ್ಟಪಟ್ಟು ದುಡಿಯುವ ಕಟ್ಟುಮಸ್ತಾದ ದೇಹದ ಜನ. ಎಲ್ಲರೂ ವೇದಾಧ್ಯಯನ ಸಂಪನ್ನರೇ.

ಶೃಂಗೇರಿಯ ಪಾಠಶಾಲೆಯಲ್ಲಿ ಸಂಸ್ಕೃತಾಧ್ಯಯನ, ವಿರಾಮ ಕಾಲದಲ್ಲಿ ಅಂತ್ಯಾಕ್ಷರಿ, ಆಶುಕವಿತ್ವ! ಸಂದೇಹ ಪರಿಹಾರಕ್ಕೆ ಸಹಾಧ್ಯಾಯಿಗಳು ಇವರನ್ನೇ ಆಶ್ರಯಿಸುತ್ತಿದ್ದರಂತೆ. 'ನೈಷಧ ವಿದ್ವದೌಷಧ' ಎಂಬ ಮಾತಿದೆ. ಆದರೆ ನರಸಿಂಹಮೂರ್ತಿಯವರಿಗೆ ಅದು ಸುಲಿದ ಬಾಳೆ. ನೈಷಧ ಪರೀಕ್ಷೆಗಾಗಿ ಸ್ವತಃ ಶೃಂಗೇರಿಯ ಶ್ರೀಗಳೇ ಬಂದು ಕುಳಿತಿದ್ದರಂತೆ. ಎಸ್. ಎನ್. ರಿಗೆ ಮೊದಲ ಸ್ಥಾನ ಸಿಕ್ಕಿತು. ವ್ಯಾಕರಣ ಪರೀಕ್ಷೆಗೆ ಪೂನಾದಿಂದ ಬಂದಿದ್ದ ಗಜೇಂದ್ರಗಡಕರ್ ಅವರು ನರಸಿಂಹಮೂರ್ತಿಯವರನ್ನು ಸೋಲಿಸಲು ಹಟಪಟ್ಟು ವಿಫಲರಾಗಿ ಬಾಯ್ತುಂಬ ಶ್ಲಾಘಿಸಿದರಂತೆ! ಈಗ ೯೭ರ ವೃದ್ಧ. ನೆನಪು ಮಾಸಿಲ್ಲ, ಸಂಪ್ರದಾಯವಾದಿಯಾಗಿಯೂ

ವಿಚಾರವಾದಿ, ಕಂದಾಚಾರ ವಿರೋಧಿ. ಆದರೆ "ತರ್ಕಮಾಡಿ, ವಿಚಾರಮಾಡಿ, ಆದರೆ ಕೊನೆಗೆ ಕಂದಾಚಾರದ ಪ್ರವಾಹಕ್ಕೆ ಧಕ್ಕೆ ಮಾಡುವ ಕಾರ್ಯಕ್ಕೆ ಹೋಗಬೇಡಿ" ಎಂದು ವಿಷಾದದ ಕಿವಿಮಾತು ಹೇಳುತ್ತಾರೆ.

೩

ಸಂಕೇತಿ ಜನಾಂಗ ಹೆಮ್ಮೆಪಡುವಂಥ ಶ್ರೇಷ್ಠ ಸಂಗೀತ ವಿದ್ವಾಂಸರು– ಆಸ್ಥಾನ ವಿದ್ವಾನ್ ಆರ್. ಎನ್. ದೊರೆಸ್ವಾಮಿಯವರು. ಅವರ ಬದುಕಿನ ಕಥೆ ರೋಚಕವಾದದ್ದು. ಏಕಾಗ್ರತೆ, ಸಂಯಮ, ಹಟ, ಇತ್ಯಾದಿ ಗುಣಗಳ ಜೊತೆಗೆ ತಂದೆಯವರ ಕಠಿಣಸಂಕಲ್ಪ ಕೂಡ ಅವರ ಭವಿಷ್ಯ ರೂಪಿಸಲು ಕಾರಣವಾದ ಅಂಶವಾಗಿದೆ. ಶಾಲಾಶಿಕ್ಷಣವಿಲ್ಲದುದು, ಬಡತನ ಇತ್ಯಾದಿ ಯಾವ ಕಾರಣಗಳೂ ಅವರ ಮುನ್ನಡೆಗೆ ಅಡ್ಡಿಯಾಗಲಿಲ್ಲ. ತಂದೆಯವರು ಮಗನ ಶಾಲಾ ಶಿಕ್ಷಣ ತಪ್ಪಿಸಿ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಸಂಗೀತ ಕಲಿಯಲೆಂದು ಕಳಿಸಿದ್ದು ಸರಿ. ಆದರೆ ಅಲ್ಲಿ ಹುಡುಗನಿಗೆ ಪ್ರವೇಶ ಸಿಗಲೇ ಇಲ್ಲ! ಮುಂದೇನು? ಅಲ್ಲಿಯೇ ತಾವಾಗಿ ಗುರುತ್ವ ಒಪ್ಪಿ ಕಲಿಸತೊಡಗಿದ ಶ್ರೀನಿವಾಸ ಐಯ್ಯರ್ ಕಲಿಸಲಿಲ್ಲ. ಆದರೆ ತೊಂದರೆಮಾಡಿದ್ದೇ ಹೆಚ್ಚು. ಕಾಲಾಂತರದಲ್ಲಿ ಸೇಲಂ ದೊರೆಸ್ವಾಮ್ಯೆಯ್ಯಂಗಾರ್ಯರಲ್ಲಿ ಶಿಷ್ಯ ವೃತ್ತಿ. ಮೂರು ವರ್ಷ ಕಠಿಣ ಸಾಧನೆ. ೧೮ ತುಂಬಿದಾಗ ಸ್ವರವ್ಯತ್ಯಯವಾಗಿ ಕಲಿಕೆ ನಿಂತದ್ದು ವಿಧಿ ನಡೆಸಿದಂತೆ ನಡೆವ ಸ್ಥಿತಿ. ಮತ್ತೆ ಗೃಹಾಭಿಮುಖಿ. ಮನೆಯಲ್ಲಿದ್ದೇ ಸಂಸ್ಕೃತ, ಇಂಗ್ಲಿಷ್ ಕಲಿಕೆ. ಎಸಳೂರು ಕಾಡಿನ ನಡುವೆ ವ್ಯವಸಾಯ ವೃತ್ತಿ, ಜೊತೆಗೆ ಆ ಏಕಾಂತವು ಆತ್ಮವಿಶ್ವಾಸದ ಪ್ರಯೋಗಶಾಲೆಯಾದದ್ದು. ಹಾಡಿಕೆ ಬಿಟ್ಟಿಲ್ಲ. ನೂರು ಕೃತಿಗಳು ಕರಗತ. ವಿಧಿ ದೊರೆಸ್ವಾಮಿಯವರನ್ನು ಮೈಸೂರಿಗೆ ತಂದದ್ದು ಸಂಕೇತಿಗಳ ಮಹಾಭಾಗ್ಯ. ಆಸ್ಥಾನ ವಿದ್ವಾನ್ ವೆಂಕಟಗಿರಿಯಪ್ಪನವರಲ್ಲಿ ವೀಣೆಯ ಕಲಿಕೆ. ಅವರಿಂದ ಆರ್.ಎನ್. ದೊರೆಸ್ವಾಮಿಯವರ ಬಾಳು ಹಸನಾದದ್ದು. ಮನೆಯಲ್ಲಿ ಸಂಗೀತ ಕಲಿಸುತ್ತಲೆ (ಹಾಡುಗಾರಿಕೆ ಮತ್ತು ವೀಣಾವಾದನ ವಿಷಯದಲ್ಲಿ) ಸುಮೇರುಶಿಖರವನ್ನೇರಿದ ಕಥೆ. ಗುರುಗಳ ಜೊತೆ ನಾಲ್ಕುಬಾರಿ ಉತ್ತರ ಭಾರತ ಪ್ರವಾಸ, ಮುಂದೆ ತಾವು ಪ್ರಾಧ್ಯಾಪಕರಾದಾಗ ದಕ್ಷಿಣ ಭಾರತ ಪ್ರವಾಸ ಮಾಡಿದ್ದು ಬಹಳಷ್ಟು ಶಿಕ್ಷಣ, ಅನುಭವ ಮತ್ತು ಕೀರ್ತಿಯನ್ನು ತಂದುಕೊಟ್ಟಿದೆ.

ನಾವು ಅಭಿಮಾನಪಡುವಂಥ ಆದರ್ಶಪ್ರಾಯವಾದ, ಅಪರೂಪದ ಶ್ರೀಮಂತ ಬದುಕು ದೊರೆಸ್ವಾಮಿಯವರದು. ಸಹವಿದ್ವಾಂಸರಲ್ಲಿ ಅಸಹನೆ, ದ್ವೇಷವಿಲ್ಲ. "ವೈಣಿಕ ಕಲ್ಪತರು" "ನಾದನಿಧಿ" ಎಂಬ ಅರ್ಥವತ್ತಾದ, ಅನುರೂಪವೇ ಆದ ಬಿರುದು ಪಡೆದಿದ್ದಾರೆ. ಮುಂದೆ ಕೃತಿರಚನಕಾರರಾಗಿ ೬೬ ಗೇಯ ಕೃತಿಗಳ ಸಂಪುಟವನ್ನು ಪ್ರಕಟಿಸಿ 'ವಾಗ್ಗೇಯಕಾರ'ರೂ ಆಗಿ ನಮ್ಮ ಸಮಾಜಕ್ಕೆ ಹೆಮ್ಮೆ ತಂದಿದ್ದಾರೆ.

೪

ಸಂಕೇತಿ ಜನಾಂಗವು ವಿಶೇಷವಾಗಿ ರೈತ ಸಮುದಾಯ. ಸಂಗೀತ ಮತ್ತು ವೇದ ಶಾಸ್ತ್ರಗಳ ಜ್ಞಾನದ ಗುತ್ತಿಗೆ ಪಡೆದವರು. ಆದರೆ ಉಳಿದ ಕ್ಷೇತ್ರಗಳ ಸ್ಪರ್ಶವಿಲ್ಲದೆ ಇಲ್ಲ. ಹಾಗೆ ಸ್ಪರ್ಶವಾದೊಡನೆ ತಲಸ್ಪರ್ಶಿ ಜ್ಞಾನ ಪಡೆದೇ ಸಿದ್ಧ!

ನಮ್ಮ ಜನಾಂಗದಲ್ಲಿ ಸಾಹಸಪ್ರವೃತ್ತಿ ಎಷ್ಟೇ ವಿಪುಲವಾಗಿದ್ದರೂ ರಾಷ್ಟ್ರರಕ್ಷಣೆಗಾಗಿ ಸೈನ್ಯಕ್ಕೆ ಸೇರಿದವರು ವಿರಳ. ಅವರಲ್ಲೂ ಕಮೀಷನ್ಡ್ ಆಫೀಸರ್‌ಗಳಾದವರು ಇನ್ನೂ ವಿರಳ. ಹಾಗೆ ಆದವರಲ್ಲಿ ಒಬ್ಬರು ಶ್ರೀ ವೇಣುಗೋಪಾಲ್. ಸಮಾಜ ಸೇವಾ ಕೆಲಸಗಳನ್ನು ಮಾಡಿ ಮಹೋನ್ನತ ಸೈನ್ಯ ಪದಕ ಮತ್ತು ಪ್ರಶಸ್ತಿಯನ್ನು ಪಡೆದವರು, ಮುಖ್ಯಮಂತ್ರಿಗಳಿಂದಲೂ ರಾಷ್ಟ್ರಪತಿಗಳಿಂದಲೂ ಮೆಚ್ಚುಗೆ ಪಡೆದವರು ವೇಣುಗೋಪಾಲ್.

ಅವರ 'ನೆನಪು ಕೆದರಿದಾಗ' ಕೃತಿಯನ್ನು ಓದುತ್ತಾ ಹೋದಂತೆ ಮೆಚ್ಚುಗೆ ವಿಸ್ಮಯದಿಂದ ಕಣ್ಣಿರು ಧಾರೆಯಾಗಿ ಹರಿಯುತ್ತದೆ. ೪೦ ವರ್ಷಗಳ ತರುವಾಯ ತಾನು ಕೆಲಸ ಮಾಡಿದ ಇಟಗಿ ಹಳ್ಳಿಗೆ ಭೇಟಿಮಾಡಿದಾಗ ಸಿಕ್ಕಿದ ಸ್ವಾಗತ ಮತ್ತು ಆ ಹಿಂದಿನ ಕಾರ್ಯಗಳ ನೆನಪಿಗಾಗಿ ಅವರ ಪತ್ನಿಯಿಂದ ಸ್ಮಾರಕಕ್ಕಾಗಿ ಗುದ್ದಲಿಪೂಜೆ ಮಾಡಿಸಿದ ಅನುಭವ ಸಾಧಾರಣವೇ? ರೋಮಾಂಚನವಾಗಿ ಕಣ್ಣೀರು ಬಾರದೆ?

[ಕೊಣನೂರು ಕೇಶವಮೂರ್ತಿ ಮತ್ತು ಲಲಿತಮ್ಮನವರ ಮಗ ಏರ್ ವೈಸ್ ಮಾರ್ಷಲ್ ಶ್ರೀ ಕೆ. ರಾಮಸುಂದರ ಅವರು ನಮ್ಮ ಜನಾಂಗದ ಹೆಮ್ಮೆ. ಹಲವು ಹನ್ನೊಂದು ಪುರಸ್ಕಾರ ಪಡೆದವರು. ೨೦೦೬ ರಲ್ಲಿ ರಾಷ್ಟ್ರಪತಿಗಳಿಂದ ವಿಶಿಷ್ಟ ಸೇವಾ ಪದಕ ಪಡೆದಾಗ ಹೆಮ್ಮೆಯಾಯಿತು. ಈ ಸುದ್ದಿ ಕೇಳಿದಾಗ, 'ಸೈನ್ಯದಲ್ಲಿದ್ದು ಪವಾಡಸದೃಶ ಸೇವಾಕಾರ್ಯ ಮಾಡಿದ' ನಮ್ಮವರೇ ಆದ ವೇಣುಗೋಪಾಲ್ ಅವರ ನೆನಪು ಬಂದಿತು. ಈಗ ವೇಣುಗೋಪಾಲ್ ಅವರ 'ನೆನಪು ಕೆದರಿದಾಗ' ಕೃತಿಯನ್ನು ಮತ್ತೊಮ್ಮೆ ವಿವರವಾಗಿ ಓದುವ ಭಾಗ್ಯ ಸಿಕ್ಕಿದೆ.]

ಆರ್. ಎನ್. ದೊರೆಸ್ವಾಮಿಯವರು ಸಂಗೀತಗಾರರಾಗಬೇಕೆಂದು ಹೊರಟವರು. ವಿಧಿ ಸರಿದಾರಿ ರೂಪಿಸಿತೆಂಬುದು ನಿಜ. ಆದರೆ ವೇಣುಗೋಪಾಲ್ ಅವರು ಸೈನ್ಯಕ್ಕೆ ಸೇರುವ ಕನಸನ್ನೆಂದೂ ಕಂಡವರಲ್ಲ. ಅಷ್ಟೇಕೆ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ಆಗಿನ ಬ್ರಿಟಿಷ್ ಸೈನಿಕರ ವಿರುದ್ಧ ಕಾರ್ಯಾಚರಣೆ ಮಾಡಿದವರು. ಆದ್ದರಿಂದ ಇವರದು ವಿಧಿ ರೂಪಿಸಿದ ಬದುಕು. ತಂದೆಯಿಂದಾಗಲಿ, ತಾನೇ ಆಗಲಿ ರೂಪಿಸಿಕೊಂಡದ್ದಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಮುಳುಗಿ, ಎಸ್. ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ ಮುಂತಾದವರ ಒಡನಾಟ, ಸಹಜೈಲುವಾಸ ಅನುಭವಿಸಿದ ಹುಟ್ಟು ಹೋರಾಟಗಾರ ವೇಣುಗೋಪಾಲ್. ಕಾಲೇಜನ್ನೂ, ತನ್ನ ಭವಿಷ್ಯವನ್ನೂ ಜಲಾರ್ಪಣಮಾಡಿ, ಬ್ರಿಟಿಷರ ವಿರುದ್ಧ ಮದ್ದುಗುಂಡು ಸಿಡಿಸಿ, ಅವರ ಕೈನ ಪಿಸ್ತೂಲ್ ಕಸಿದವನು ಮುಂದೆ ಪಿಸ್ತೂಲ್ ಹಿಡಿವ ಯೋಧನಾದದ್ದು ಶಿವನಿಚ್ಛೆಯಲ್ಲವೆ?

ವೇಣುಗೋಪಾಲ್ ಅವರ ಬದುಕಿನ ಕೆಲವಾದರೂ ಸಾಹಸದ ಘಟನೆಗಳನ್ನು ಇಲ್ಲಿ ಸ್ಮರಿಸುತ್ತೇನೆ. ಕೇಳಿದ ನೀವು ಆತ್ಮಕಥನ ಪೂರ್ತ ಓದಿ ಹೆಮ್ಮೆ ಪಡದೆ ಇರಲಾರಿರಿ.

ನಿಜಾಮನ ಆಡಳಿತ ಕಾಲದಲ್ಲಿ ರಾಯಚೂರು ಜಿಲ್ಲೆ ಇಟಗಿಯಲ್ಲಿ ರಜಾಕರರ ಹಾವಳಿಯ ವಿರುದ್ಧ ಸಂಘಟನೆ ಮಾಡಿದ್ದು, ಬರಿಗೈಲಿ ಚಿರತೆ ಎದುರು ಹೋರಾಡಿ ಸಾಯಿಸಿದ್ದು, ಸೈನ್ಯದ ಕಮೀಷನ್ಡ್ ಹುದ್ದೆಗೆ ಆಯ್ಕೆಯಾಗಲು ಕಾರಣವಾದ ಸಾಹಸದ ಕೆಲಸಗಳು, ಮತ್ತೂರಿನಲ್ಲಿ ತನ್ನ ಅತ್ತೆಯವರ ಹೊಟ್ಟೆಗೆ ಕೋಡಿನಿಂದ ಚುಚ್ಚಿ ಮೇಲೆತ್ತಿದ ಎತ್ತಿನ ಮೂಗುದಾರ ಹಿಡಿದು ಮಣಿಸಿ ಅತ್ತೆಯವರನ್ನು ಬದುಕಿಸಿಕೊಂಡದ್ದು, ಮಣಿಪುರ ರೈಫಲ್ಸ್ ಪುನರ್ನಿರ್ಮಾಣ, ಅಲ್ಲಿ ಅಡುಗೆಮನೆ ದುರಸ್ತಿ, ಉತ್ತಮ ಊಟದ ವ್ಯವಸ್ಥೆ, ಕ್ವಾರ್ಟರ್ಸ್‌ಗಳ ನಿರ್ಮಾಣ, ಡ್ರಿಲ್‌ನ ಸುವ್ಯವಸ್ಥೆ, ಮೇಲ್ಮಟ್ಟದ ಬ್ಯಾಡ್‌ಮಿನ್ಟನ್ ಕೋರ್ಟ್ ನಿರ್ಮಾಣ ಇತ್ಯಾದಿ ವಿಷಯಗಳಲ್ಲಿ ಪವಾಡ ಸದೃಶ ಕೆಲಸಗಳು. ಶತ್ರು ನಾಶದ ರಕ್ಷಣೆಯ ವ್ಯವಸ್ಥೆ, ಹಳ್ಳಿಗರ ಸಹಕಾರದಿಂದ ಹಳ್ಳಿಗಳಿಗೆ ರಸ್ತೆ ನಿರ್ಮಾಣ, ಬೆಟ್ಟದ ಮೇಲೆ ಟ್ಯಾಂಕ್ ಕಟ್ಟಿ (ಬೊಂಬುಗಳ ಪೈಪ್ ಸಹಾಯದಿಂದ) ದೂರದೂರಿಗೆ ನೀರು ಸರಬರಾಜು ಮಾಡಿದ್ದು! ಕುಯಿವೈ ನದಿಗೆ ನಾಲ್ಕು ಅಡ್ಡ ಸೇತುವೆಗಳನ್ನು (ಅವುಗಳಲ್ಲಿ ಒಂದು ಸೇತುವೆಯ ಅಳತೆ ೪ ಅಡಿ ಅಗಲ ೨೪೦ ಅಡಿ ಉದ್ದ) ನಿರ್ಮಿಸಿದ್ದು, ಆದಿವಾಸಿಗಳಿಗೆ ಹೊಲಿಗೆ ಮಿಷನ್ ಮತ್ತು ಮಗ್ಗಗಳನ್ನು ಒದಗಿಸಿ ಬಡತನ ನಿರ್ಮೂಲನ ಕಾರ್ಯಕ್ಕೆ ಕೈಹಾಕಿದ್ದು, ನಾಗಾಲ್ಯಾಂಡ್ ತರುಣರ ಪಡೆಯೊಂದನ್ನು ಕಟ್ಟಿ ಯೋಗ್ಯ ಸೈನಿಕ

ತರಬೇತಿ ನೀಡಿದ್ದು, ಇತ್ಯಾದಿ ಒಂದಲ್ಲ ಎರಡಲ್ಲ ನೂರಾರು ಸಾಹಸದ ಕಾರ್ಯಗಳನ್ನು ಮಾಡಿದ್ದಾರೆ.

ರಾಷ್ಟ್ರಪತಿಗಳಿಂದ ವಿಶಿಷ್ಟ ಸೇವಾ ಪದಕ ಬಂದಿತು. ಆಗ ಪೊಲೀಸ್ ವರಿಷ್ಠಾಧಿಕಾರಿಗಳು ಪಟ್ಟಿ ಮಾಡಿದ ವೇಣುಗೋಪಾಲ್ ಅವರ ಸಾಧನೆಗಳನ್ನು ಪುಟ ೧೬೯–೧೭೦ ರಲ್ಲಿ ಗಮನಿಸಬಹುದು.

೫

ಮತ್ತೂರು ಕೃಷ್ಣಮೂರ್ತಿಯವರು ಬಾಲ್ಯವನ್ನು ಕಡು ಬಡತನದಲ್ಲಿಯೂ, ಮತ್ತು ಯೌವ್ವನದ ಬಹುಭಾಗವನ್ನು ಬಡತನದಲ್ಲಿಯೂ ಕಳೆದವರು. ಒಂದೊಂದು ರೂಪಾಯಿಗೂ ಹರಸಾಹಸ ಮಾಡಿದವರು. ಇಂಥ ವ್ಯಕ್ತಿಯ ಕೈಲಿ ಇಂದು ಜನ, ಸಾಮಾಜಿಕ ಕಾರ್ಯಗಳಿಗಾಗಿ ಲಕ್ಷ ಲಕ್ಷ ಹಣವನ್ನು ದಾನವಾಗಿ ನೀಡುವರೆಂದರೆ ಎಂಥ ಪವಾಡ! ಇದಕ್ಕೆ ಕಾರಣವಾದದ್ದು ಅವರ ಆಕರ್ಷಕ ವ್ಯಕ್ತಿತ್ವ, ವಿನಮ್ರ ನಡವಳಿಕೆ, ಮೃದು ಮಧುರ ವಾಕ್ಚಾತುರ್ಯ. ತನ್ನ ಮಾತುಗಾರಿಕೆಯಿಂದ ಎಂಥವರನ್ನೂ ತನ್ನ ಕಡೆ ಸೆಳೆಯುವ ಅದ್ಭುತ ಶಕ್ತಿ ಅವರಿಗಿದೆ.

ಭಾರತದ ಬಹುತೇಕ ಎಲ್ಲ ಪ್ರಧಾನಿಗಳು ಮತ್ತು ರಾಷ್ಟ್ರಪತಿಗಳ ಸಂಪರ್ಕ ಇವರಿಗಿತ್ತು. ಇಂಗ್ಲೆಂಡಿನ ಪ್ರಧಾನಿ ಲಂಡನ್ನಿನ ಇವರ ಮನೆಗೆ ಬಂದು ಕೃತಾರ್ಥರಾಗಿದ್ದಾರೆ. ಇವರ ಕಾರ್ಯಕ್ಷೇತ್ರವಾದ ಅಲ್ಲಿನ 'ಭಾರತೀಯ ವಿದ್ಯಾಭವನ'ಕ್ಕೆ ಭೇಟಿ ನೀಡಿ ಅಪಾರ ವಂತಿಗೆ ಕೊಟ್ಟಿದ್ದಾರೆ.

ವಿದ್ಯಾಭವನದ ಮೂಲಕ ಮತ್ತು ಗಮಕ ವ್ಯಾಖ್ಯಾನದ ಮೂಲಕ ಭಾರತೀಯ ಸಂಸ್ಕೃತಿಯನ್ನು ಹರಡುವ ಪವಿತ್ರ ಕಾರ್ಯವನ್ನು ಕಳೆದ ಅರ್ಧಶತಕದಿಂದ ಮಾಡುತ್ತ ಬಂದಿದ್ದಾರೆ. ನಮ್ಮ ಗಮಕ ಕಾರ್ಯಕ್ರಮಗಳಲ್ಲಿ ಸಭಾಸದರ ಸಂಖ್ಯೆ ನೂರರ ಗಡಿ ದಾಟಿದರೆ ಅಜ್ಜಿ ಪುಣ್ಯ. ಆದರೆ ಮತ್ತೂರರ ವ್ಯಾಖ್ಯಾನ ಕಾರ್ಯಕ್ರಮವಿದ್ದಲ್ಲಿ ಸಂಖ್ಯೆ ಸಾವಿರಕ್ಕೆ ಕಡಿಮೆ ಇದ್ದುದೇ ಇಲ್ಲ! ನಿರಂತರ ಒಂದು ವರ್ಷಕ್ಕೆ ಮಿಕ್ಕಿ ಟಿ.ವಿಯಲ್ಲಿಯೂ ಮತ್ತು ಬಹಿರಂಗವಾಗಿಯೂ ಕಾರ್ಯಕ್ರಮವನ್ನು ನೀಡಿರುವ ದಾಖಲೆ ಇವರ ಹೆಸರಲ್ಲಿದೆ.

ದೂರದ ವಿದೇಶದಲ್ಲಿ (ಲಂಡನ್ನಿನಲ್ಲಿ) ಸಂಸ್ಥೆ ಕಟ್ಟಿ, ಕೋಟಿಗಟ್ಟಲೆ ಹಣ ಸಂಗ್ರಹಿಸಿ ಭಾರತೀಯ ಸಂಸ್ಕೃತಿ ಪ್ರಚಾರ ಕಾರ್ಯವನ್ನು ಸುಮಾರು ೨೫ ವರ್ಷ ನಡೆಸಿ, ಈಗ ಈ ಕಾರ್ಯ ಅಲ್ಲಿ ನಿರಂತರ ನಡೆಯುವಂತೆ ವ್ಯವಸ್ಥೆ ಮಾಡಿ, ಬೆಂಗಳೂರಿಗೆ ಬಂದು ನೆಲೆಸಿದ್ದಾರೆ. ಈ ಇಳಿವಯಸ್ಸಿನಲ್ಲೂ ಬೆಂಗಳೂರಿನ ವಿದ್ಯಾಭವನದ ಕೆಲಸ ನೋಡಿಕೊಳ್ಳುತ್ತಿದ್ದಾರೆ. ಶಿವಮೊಗ್ಗೆಯಲ್ಲಿ ಭವನದ ಶಾಖೆ ತೆರೆದಿದ್ದಾರೆ. ಕಳೆದ ಜನವರಿ ತಿಂಗಳಲ್ಲಿ ಇಲ್ಲೊಂದು ಸಂಸ್ಕೃತಿ ಶಾಲೆ ತೆರೆಯುವ ಯೋಜನೆ ಅವರ ತಲೆಗೆ ಹೊಕ್ಕಿತು. ಹೊಕ್ಕ ತಿಂಗಳೊಳಗೆ ಪೂರ್ಣ ಯೋಜನೆ ಸಿದ್ಧವಾಯಿತು. [ಪ್ರೈಮರಿಯಿಂದ ಪಿ.ಯು.ವರೆಗಿನ ಶಿಕ್ಷಣ ಮತ್ತು ಎಂ.ಬಿ.ಎ. ಕಾಲೇಜು ಸ್ಥಾಪನೆ] ವರ್ಷದೊಳಗೆ ಕೆಲಸ ಮುಗಿಸಲು ನಿರ್ಧಾರ. ಮೂರುಕೋಟಿ ಗುರಿ. ಒಂದೂವರೆ ಕೋಟಿ ತಿಂಗಳೊಪ್ಪತ್ತಿನಲ್ಲಿ ಸಂಗ್ರಹವಾಗಿ ಆಗಿದೆ! ೮೦ರ ಈ ವೃದ್ಧ ಮುವತ್ತರ ಪ್ರಾಯದವನಂತೆ ಉತ್ಸಾಹದಲ್ಲಿ ಕೆಲಸ ಮಾಡುವುದು ನೋಡಿದರೆ ವಿಸ್ಮಯವಾಗದೆ ಇರದು.

ರಾಮಕೃಷ್ಣಾಶ್ರಮದಲ್ಲಿ ಮತ್ತು ಗಾಂಧೀಜಿಯವರ ವಾರ್ಧಾಶ್ರಮದಲ್ಲಿ ವಾಸಮಾಡಿದ್ದು ಇವರ ಮೇಲೆ ಅಪಾರ ಪ್ರಭಾವ ಬೀರಿದೆ. ಇದು ಇವರ ಬದುಕನ್ನು ಮೃದುವೂ, ನೇರವೂ, ಪವಿತ್ರವೂ, ಆಗಿಸಿ ಒಳ್ಳೆಯ ಸ್ನೇಹಜೀವಿಯನ್ನಾಗಿ ರೂಪಿಸಿದೆ. ಅನಿವಾರ್ಯತೆ ಬಂದಾಗ ಮನುಷ್ಯ ಏನನ್ನಾದರೂ ಸಾಧಿಸಬಲ್ಲ ಎಂಬುದಕ್ಕೆ ಇವರ ಬದುಕೇ ಒಂದು ನಿದರ್ಶನವಾಗಿದೆ. ಉದಾಹರಣೆಗೆ ಮದ್ರಾಸಿನಲ್ಲಿ ಗಾಂಧೀಜಿಯವರು ಸುಮಾರು

ಮೂರುವಾರ ಕಾಲ ವಾಸ್ತವ್ಯ ಮಾಡುವ ಕಾರ್ಯಕ್ರಮವಿತ್ತು. ಅವರ ಅಂತರಂಗದ ಸೇವೆಗಾಗಿ ಆಯ್ಕೆಯಾದ ನಾಲ್ವರು ಶಿಸ್ತಿನ ಯುವಕರಲ್ಲಿ ಕೃಷ್ಣಮೂರ್ತಿ ಒಬ್ಬರು. ಆದರೆ ಮತ್ತೂರರಿಗೆ ಹಿಂದಿಯಲ್ಲಿ ಮಾತನಾಡಲು ಬಾರದು. ಆದ್ದರಿಂದ ಸಿಕ್ಕಿದ ಅವಕಾಶದಿಂದ ವಂಚಿತರಾಗಬೇಕಾದ ದುಸ್ಥಿತಿ. ಹಿಂದಿ ಬರಲೇಬೇಕೆಂಬ ಬದ್ಧತೆ. ಹಟ ಮಾಡಿ ೧೫ ದಿನದಲ್ಲಿ ಕಲಿತೇಬಿಟ್ಟರಲ್ಲ! ಹಿಂದಿ ಭಾಷೆಯಲ್ಲಿ ನಡೆದ ಆಯ್ಕೆ ಸಮಿತಿಯ ಪ್ರಶ್ನಾವಳಿಗೆಲ್ಲ ಚೊಕ್ಕನಾಗಿ ಉತ್ತರಿಸಿ ಭೇಷ್ ಎನಿಸಿಕೊಂಡರಲ್ಲಾ!

ತಮಿಳಿನ ಬಹು ದೊಡ್ಡ ಕಾದಂಬರಿಕಾರ ಕಲ್ಕಿ ಕೃಷ್ಣಮೂರ್ತಿಯವರ ಪರಿಚಯ, ಮಾರ್ಗದರ್ಶನ ಸಿಕ್ಕಿದ್ದು, ಇವರು ಒಳ್ಳೆಯ ಬರಹಗಾರರಾಗಲು ಸಾಧ್ಯವಾಯಿತು. ಇದರಿಂದ ಮುಂದೆ ಹತ್ತಾರು ವರ್ಷಗಳ ಕಾಲ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಉಪಸಂಪಾದಕನಾಗಿ ಕೆಲಸಮಾಡಲು, ಸಂಪಾದಕರಾಗಿದ್ದ ಆರ್. ಆರ್. ದಿವಾಕರರಲ್ಲಿ ಭೇಷ್ ಎನಿಸಿಕೊಳ್ಳಲು ಸಾಧ್ಯವಾಯಿತು. ಆ ಕಾಲಕ್ಕೆ ಪ್ರೊ॥ ವಿ. ಸೀ. ಯವರಿಂದ, ಸಿದ್ಧವನ ಹಳ್ಳಿ ಕೃಷ್ಣಶರ್ಮ ಅವರಿಂದ ದೊರೆತ ಮಾರ್ಗದರ್ಶನ ಹಿರಿದಾದದ್ದು. ಬಸ್ ಕಂಡಕ್ಟರನಾಗಿದ್ದಾಗ, ಕ್ಯಾಂಟೀನಿನಲ್ಲಿ ಕೆಲಸ ಮಾಡುತ್ತಿದ್ದಾಗ, ರಾಜಾಮಿಲ್‌ನಲ್ಲಿ ಗುಮಾಸ್ತನಾಗಿದ್ದಾಗ ಹೇಗೋ ಉಪಸಂಪಾದಕನಾಗಿದ್ದಾಗಲೂ ಅದೇ ಸರಳತೆ, ಲಂಡನ್ನಿನಲ್ಲಿ ವಿದ್ಯಾಭವನದ ರಿಜಿಸ್ಟ್ರಾರ್ ಆಗಿದ್ದಾಗಲೂ ಅದೇ ಸರಳತೆ.

ಲಂಡನ್ನಿನ ಭಾರತೀಯ ವಿದ್ಯಾಭವನದಲ್ಲಿನ ಅದ್ಭುತವಾದ ಸಾಧನೆಗೆ ಕಾರಣವಾದದ್ದು, ಕರ್ನಾಟಕದ ಬಹಳಷ್ಟು ಹಿರಿಯರ ಒಡನಾಟ ದೊರೆತದ್ದು, ಆಕಾಶವಾಣಿಯಲ್ಲಿ ನಾಟಕ ವಿಭಾಗದಲ್ಲಿ ಕೆಲಸಮಾಡುವಾಗ್ಗೆ ಡಾ. ಹೆಚ್. ಕೆ. ರಂಗನಾಥ ಅವರ ಸಹಾಯಕರಾಗಿದ್ದುದರಿಂದ ಅವರ ಸ್ನೇಹ, ಮಾರ್ಗದರ್ಶನ ದೊರೆತದ್ದು. ಇವರ ಹೆಸರು ಎಂ. ಆರ್. ಕೃಷ್ಣಮೂರ್ತಿ ಎಂದಿದ್ದುದನ್ನು ಮತ್ತೂರು ಕೃಷ್ಣಮೂರ್ತಿ ಎಂದು ಪುನರ್ನಾಮಕರಣ ಮಾಡಿದವರು ಮಾಸ್ತಿಯವರು! ಡಾ.ವಿ.ಕೆ.ಆರ್.ವಿ. ರಾವ್ ಅವರ ಕೃತಿಯೊಂದನ್ನು ಅನುವಾದಮಾಡಿದ್ದುದರಿಂದ ದೊರೆತ ಅವರ ಸ್ನೇಹ ಲಾಭ, ಸಿದ್ಧವನಹಳ್ಳಿ ಕೃಷ್ಣಶರ್ಮರಿಂದ ಗಾಂಧಿ ಸಾಹಿತ್ಯ ಪರಿಚಯ ಇತ್ಯಾದಿ. ಮಲ್ಲೇಶ್ವರಂ ಟ್ಯುಟೋರಿಯಲ್ಸ್ ಅನ್ನು 'ನೋಪಾಸ್ ನೋ ಫೀಸ್' ಸಿಸ್ಟಂನಲ್ಲಿ ಸ್ಥಾಪಿಸಿದ್ದರಿಂದಾದ ಅನುಭವಗಳು.

ಇಂಗ್ಲೆಂಡ್‌ಗೆ ಭಾರತೀಯ ವಿದ್ಯಾಭವನದ ರಿಜಿಸ್ಟ್ರಾರ್ ಆಗಿ ನೇಮಕಗೊಂಡು ವಿದೇಶ ಪ್ರಯಾಣ ಮಾಡಿದ್ದಾಯಿತು. ಸಂಬಳ ಎಷ್ಟು? ಶೂನ್ಯ! ಊಟದ ಖರ್ಚು ಮತ್ತು ಪಾಕೆಟ್ ಮನಿ ಎಂದು ೧೦ ಪೌಂಡ್‌ಗಳು ಮಾತ್ರ. ಧನ, ಜನ ಎರಡನ್ನೂ ಅಲ್ಲಿ ಸಂಪಾದಿಸಬೇಕಾದ ಹೊಣೆಗಾರಿಕೆ. ಸಾಧ್ಯವಾದದ್ದು ಪವಾಡ. ಧಾರ್ಮಿಕ ಕಾರ್ಯಗಳ ಹೆಚ್ಚು ಭಾರ ವಹಿಸಿಕೊಂಡವರು ಗುಜರಾತಿಗಳು. ಕರ್ನಾಟಕದ ಮಿತ್ರರ ಕೊಡುಗೆ ಸಾಮಾನ್ಯವಲ್ಲ. ಉದಾಹರಣೆಗೆ ಇವರಿಗೆ ಅಲ್ಸರ್ ಆಪರೇಷನ್ ಆದಾಗ ಎಸ್. ನಿಜಲಿಂಗಪ್ಪರವರ ಅಳಿಯ ಮುದ್ದಪ್ಪ ಅವರು ಸೇವೆ ಮಾಡಿದ್ದು ಮಾತ್ರವಲ್ಲ, ತಮ್ಮ ಮನೆಯಲ್ಲಿ ಎರಡು ವಾರ ಇಟ್ಟುಕೊಂಡು ಉಪಚರಿಸಿದ್ದಾರೆ. ಇವರಿಗೆ ಮುಜಗರವಾಗಬಾರದೆಂದು ಮುದ್ದಪ್ಪನವರ ಮನೆಯವರು ತಾವೂ ೧೫ ದಿನ ಬೆಳ್ಳುಳ್ಳಿ, ಈರುಳ್ಳಿ ಮುಟ್ಟಿಲ್ಲ!

ವಿದ್ಯಾಭವನಕ್ಕೆ ಭೇಟಿ ನೀಡಿದ, ದಾನಕೊಟ್ಟ ಗಣ್ಯರ ಸಂಖ್ಯೆ ಅಸಂಖ್ಯ. ಉದಾಹರಣೆಗೆ ರಾಜಕುಮಾರ ಚಾರ್ಲ್ಸ್, ಮಾರ್ಗರೇಟ್ ಥ್ಯಾಚರ್, ರಿಚರ್ಡ್ ಅಟೆನ್ ಬರೋ, ಲಾರ್ಡ್ ಮೌಂಟ್ ಬ್ಯಾಟನ್, ಇತ್ಯಾದಿ. ಹಣ ಸಂಗ್ರಹಣೆಗೆ ಸಹಾಯಮಾಡಿದವರು ಲಕ್ಷ್ಮೀಶಂಕರ್, ಲತಾ ಮಂಗೇಷ್ಕರ್, ಪಂಡಿತ ರವಿಶಂಕರ್, ಎಂ.ಎಸ್. ಸುಬ್ಬುಲಕ್ಷ್ಮೀ ಇತ್ಯಾದಿ. ಕಟ್ಟಡದ ಕಾರ್ಯ ಪೂರ್ಣವಾದದ್ದು ಬಿರ್ಲಾ ಕುಟುಂಬದವರಿಂದ.

ಮತ್ತೂರರ ಬದುಕಿನ ನೂರಾರು ಅನುಭವಗಳು ನಮಗೆ ದಾರಿದೀಪವಾಗಬಲ್ಲವು. ಒಂದೆರಡು ಉದಾಹರಣೆ : ಪುಟ ೨೯೯–೩೦೨ ರಲ್ಲಿ ಬರುವ 'ಸಮಯ ಪಾಲನೆ' ಕುರಿತ ಮಾತುಗಳು, ಆತ್ಮಸಾಕ್ಷಿ

ಕುರಿತ ವಿವರಣೆ ೩೦೮–೩೯ರಲ್ಲಿ, ಇತ್ಯಾದಿ. ಮತ್ತೂರರಿಗೆ ಪ್ರಸಿದ್ಧಿ ದೊರಕಿಸಿದ್ದು– ಬಿಬಿಸಿಯಲ್ಲಿ ನಿರಂತರ ಒಂದೂವರೆ ವರ್ಷ ಮಾಡಿದ ಹಿಂದೂಧರ್ಮ ಕುರಿತ ವಿಶೇಷ ಉಪನ್ಯಾಸ ಮಾಲಿಕೆ ಹಾಗೂ ಭಾರತೀಯ ಹಬ್ಬಗಳನ್ನು ಕುರಿತು ಮಾಡಿದ ಉಪನ್ಯಾಸಗಳು. ಈ ಕೃತಿಯ ಹೆಚ್ಚು ಪುಟಗಳನ್ನು ಮತ್ತೂರರ ಲೇಖನ ಆವರಿಸಿದೆ. ಆದರೆ ಓದುತ್ತ ಹೋದಂತೆ ಅದರ ಔಚಿತ್ಯ ನಿಮಗಾಗದೆ ಇರದು. ಇಡೀ ಕೃತಿಯನ್ನು ಪೂರ್ತ ಓದಿದ ಮೇಲೆ ಒಂದು ರೀತಿಯ ಧನ್ಯತಾಭಾವ ಮೂಡುತ್ತದೆ. ಮಾಡಲೇಬೇಕಾದ ಕರ್ತವ್ಯವೊಂದನ್ನು ನಿರ್ವಹಿಸಿದಾಗ ಉಂಟಾಗುವ ಸಂತೃಪ್ತಿ ನಿಮಗೆ ಕಾದಿದೆ.

***

ಬೆಂಗಳೂರು **ಡಾ. ಬಿ.ಎಸ್. ನರಹರಿ**
ಭೌತಶಾಸ್ತ್ರ ಪ್ರಾಧ್ಯಾಪಕರು (ನಿವೃತ್ತ)

'ಸಂಕೇತಿ ಅಧ್ಯಯನ ಮಾಲೆ**'**ಯಲ್ಲಿ, ಎಲ್ಲ ಆಯಾಮಗಳಿಂದಲೂ ಸಂಕೇತಿ ಸಮುದಾಯವನ್ನು ಅಧ್ಯಯನ ಮಾಡಲು ಅನುಕೂಲವಾಗುವಂತೆ ಮಾಹಿತಿಯನ್ನು ಕ್ರಮಬದ್ಧವಾಗಿ ಕ್ರೋಡೀಕರಿಸುತ್ತಿರುವುದು ಶ್ಲಾಘ್ಯವಾಗಿದೆ. ಇಂಥ ಪುಟ್ಟ ಸಮುದಾಯದಲ್ಲಿ ಸಾಹಿತ್ಯದ ಒಂದೊಂದು ಪ್ರಕಾರದಲ್ಲೂ ಒಂದೊಂದು ಬೃಹತ್ ಸಂಪುಟಕ್ಕಾಗುವಷ್ಟು ಮಾಹಿತಿಯನ್ನು ನಿರೀಕ್ಷಿಸಲಾರೆವು. ಅಂಥ ಸಂದರ್ಭಗಳಲ್ಲಿ ಲೇಖಕರಿಂದ ಬರೆಸಿ ಅಧ್ಯಯನದ ಆಕರವನ್ನು ಸಮೃದ್ಧವಾಗಿಸುತ್ತಿರುವುದು ಎಷ್ಟು ಶ್ರಮವನ್ನು ನಿರೀಕ್ಷಿಸುತ್ತದೆನ್ನುವುದು ಅರ್ಥವಾಗುವಂಥದು; ಅದು ಕಾಲವನ್ನೂ ದೀರ್ಘವಾಗಿಯೇ ಬೇಡುವಂಥದು. ನಿಸ್ಸಂಶಯವಾಗಿ ಒಂದು ರೀತಿಯ ಆಧ್ಯಾತ್ಮಿಕವಾದ ನಿರ್ಲಿಪ್ತತೆಯ ಸ್ತರದಲ್ಲಿ ಬದುಕುತ್ತಿರುವ ಈ ಸಮುದಾಯವು ಲೌಕಿಕದಲ್ಲಿ ಅಷ್ಟು ಆಸಕ್ತವಾಗಿಲ್ಲದಿರುವುದೂ ಈ ಕೆಲಸದ ಭಾರವನ್ನು ಹೆಚ್ಚಿಸುತ್ತದೆ. ಇಷ್ಟು ಅಸಹಾಯಕ ಸ್ಥಿತಿಯಲ್ಲಿಯೂ ಈ ಯೋಜನೆಯನ್ನು ಅಚ್ಚುಕಟ್ಟಾಗಿಯೂ ಆಕರ್ಷಕವಾಗಿಯೂ ಶಾಸ್ತ್ರೀಯವಾಗಿಯೂ ಮುಂದುವರಿಸಿಕೊಂಡು ಹೋಗುತ್ತಿರುವ ಕೆಲಸವು ಪ್ರೋತ್ಸಾಹಕ್ಕೆ ಅರ್ಹವಾದುದಾಗಿದೆ. ಮುಂಬರುವ ಪೀಳಿಗೆಗಳು ಇದನ್ನು ಮಹಾ ಆಸ್ತಿಯಂತೆ ಹೆಮ್ಮೆಯಿಂದ ಸ್ವೀಕರಿಸುವುದರಲ್ಲಿ ಸಂಶಯವಿಲ್ಲ. ಸಾರ್ವತ್ರಿಕ ಸಮಾಜಕ್ಕೂ ಇದರ ಪ್ರಯೋಜನ ದೊರಕಿಯೇ ದೊರಕುತ್ತದೆ. ಜನಾಂಗ ಅಧ್ಯಯನ ಕ್ಷೇತ್ರದ ದಾಪುಗಾಲು ಇದು.

*****

ಆಕಾಶವಾಣಿ, **ಡಾ. ಎಂ.ಎಸ್. ವಿಜಯಾಹರನ್**
ಮೈಸೂರು ಕೇಂದ್ರ ನಿರ್ದೇಶಕರು

'ಸಂಕೇತಿ ಆತ್ಮಕಥೆಗಳು' ಸಂಕೇತಿ ಸಮುದಾಯದ ಬದುಕು ಮತ್ತು ಸಹಜಸ್ವಭಾವದ ರೀತಿಯ ಮೇಲೆ ಬೆಳಕು ಚೆಲ್ಲುತ್ತದೆ. ಸಂಕೇತಿಗಳ ಆಸಕ್ತಿ, ಚಿಂತನ ವಿಧಾನ, ಕಾರ್ಯವಿಧಾನ, ಜೀವನದೃಷ್ಟಿ ಇವೆಲ್ಲವೂ ಇಲ್ಲಿ ಕಾಣಿಸಿಕೊಳ್ಳುತ್ತವೆ. ಒಟ್ಟು ಭಾರತೀಯ ಜೀವನ ಚಿತ್ರದ ಭಾಗವಾಗಿಯೇ ಸಂಕೇತಿಗಳ ವೈಶಿಷ್ಟ್ಯವೂ ಇಲ್ಲಿ ಮೂಡಿಬಂದಿದೆ. ಈ ಸಂಕಲನದಲ್ಲಿ ಸೇರಿರುವ ಆತ್ಮಕಥೆಗಳಲ್ಲವೂ ಹಿರಿಯ ಚೇತನಗಳ ವೈವಿಧ್ಯಪೂರ್ಣ ಪ್ರಪಂಚವನ್ನೇ ಪ್ರತಿನಿಧಿಸುತ್ತವೆ. ಸಾಮಾನ್ಯ ಸ್ತರಗಳಿಂದ ಬಿಡಿಸಿಕೊಂಡು ಎತ್ತರೆತ್ತರದ ನೆಲೆಗಳಲ್ಲಿ ಕಾರ್ಯಶೀಲವಾದ ಜೀವಗಳು ಇವು. ಐದೂ ಸಂಪುಟಗಳನ್ನು ಒಂದೆಡೆ ತಂದುಕೊಟ್ಟಿರುವುದರಿಂದಾಗಿ ಆಸಕ್ತರಿಗೆ ಸುಲಭವಾಗಿ ಈ ಪ್ರಕಾರದ ಸಂಕೇತಿ ಸಾಹಿತ್ಯವು ಲಭಿಸುವಂತಾಗಿದೆ. ಸಂಕೇತಿಗಳ ಈವರೆಗಿನ ಸಮಗ್ರ ಆತ್ಮಕಥೆಗಳು ಇಲ್ಲಿವೆ. ಸಂಕೇತಿಗಳ ಬದುಕಿನ ದಟ್ಟವಾದ ಮಾಹಿತಿಯು ಒಂದೇ ಓದಿಗೆ ವಿಶಿಷ್ಟ ಅನುಭವದೊಡನೆ ಇಲ್ಲಿ ದಕ್ಕುತ್ತದೆ. ಇದು ಇಡೀ ಇಪ್ಪತ್ತನೆಯ ಶತಮಾನದ ಬದುಕನ್ನು ಆವರಿಸಿಕೊಳ್ಳುವುದರಿಂದಾಗಿ ಆ ಶತಮಾನದ ನೇರ ಚಿತ್ರವೂ, ಅದರಲ್ಲಿಯೇ ಆಗಿರುವ ಅನೇಕ ಸ್ಥಿತ್ಯಂತರಗಳೂ, ಪೂರ್ವದ ಶತಮಾನಗಳ ಜಾಡಿನ ಸೂಚನೆಯೂ ದೊರೆಯುತ್ತದೆ. ದಾಖಲೀಕರಣದ ಒಳ್ಳೆಯ ಪ್ರಯತ್ನ ಇದು.

****

ಪ್ರೊ॥ ಆರ್. ಎನ್. ದೊರೆಸ್ವಾಮಿ

ಈ ಪುಸ್ತಕದಲ್ಲಿ ನನ್ನ ಸ್ವಂತ ರಚನೆಗಳ ಜತೆಗೆ ನನ್ನ ಒಂದು ಸಂಕ್ಷಿಪ್ತ ಆತ್ಮಕಥೆಯನ್ನೂ ಸೇರಿಸಿದ್ದೇನೆ. ಇದರ ಉದ್ದೇಶ ನನ್ನ ದೊಡ್ಡಸ್ತಿಕೆಯನ್ನು ಮೆರೆಯುವುದು ಖಂಡಿತ ಅಲ್ಲ. ನಾನು ಆತ್ಮಚರಿತ್ರೆಯನ್ನು ಬರೆದುಕೊಳ್ಳುವಂತಹ ದೊಡ್ಡ ವ್ಯಕ್ತಿ ಎಂಬ ಭ್ರಮೆಯೂ ನನಗಿಲ್ಲ. ಹಿಂದಿನ ಮತ್ತು ಇಂದಿನ ಎರಡು ತಲೆಮಾರುಗಳನ್ನು ಹಾಗೂ ಸಂಪೂರ್ಣವಾಗಿ ಬದಲಾದ ಈಗಿನ ಕಾಲದ ಆಗುಹೋಗುಗಳನ್ನು ಕಣ್ಣಾರೆ ಕಂಡಿರುವ ನನಗೆ ಒಂದು ತುಲನಾತ್ಮಕವಾದ ಅಧ್ಯಯನ ಮಾಡುವ ಹಂಬಲವುಂಟಾಯಿತು. ಬರೆಯುವುದು ನನ್ನ ವೃತ್ತಿಯಲ್ಲವಾದರೂ, ಬರವಣಿಗೆಯಲ್ಲಿ ಸಾಕಷ್ಟು ಆಸಕ್ತಿ ಹೊಂದಿರುವ ನಾನು ಹೇಗೋ ಧೈರ್ಯವಾಗಿ ಬರೆಯಲು ಪ್ರಾರಂಭಿಸಿದೆ. ನಾನೇಕೆ ಬರೆಯುತ್ತೇನೆ ಎಂದು ಪ್ರತಿಯೊಬ್ಬ ಬರಹಗಾರನೂ ಪ್ರಶ್ನಿಸಿಕೊಳ್ಳುವಂತೆ ನಾನೂ ಈ ಪ್ರಶ್ನೆಯನ್ನು ಹಾಕಿಕೊಂಡಿದ್ದೇನೆ. ಇದರ ಬಗ್ಗೆ ಚಿಂತಿಸಿದ್ದೇನೆ. ಎಲ್ಲರೂ ಕೇವಲ ತಮ್ಮ ಆತ್ಮತೃಪ್ತಿಗಾಗಿಯೇ ಬರೆಯುತ್ತಾರೆ, ಕೃತಿರಚನೆ ಮಾಡುತ್ತಾರೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ. ನಮಗೆ ಜೀವನದಲ್ಲಿ ಲಭಿಸುವ ಅನುಭವಗಳನ್ನು, ಮಧುರ ಸ್ಮೃತಿಗಳನ್ನು ಇನ್ನೊಬ್ಬರಲ್ಲಿ ಹೇಳಿಕೊಂಡಾಗ, ಅವನ್ನು ಸುಂದರವಾದ ಮಾತುಗಳಲ್ಲಿ ಬರೆದು ಸೆರೆ ಹಿಡಿದಾಗ ನಮಗಾಗುವ ಆನಂದ ಅಷ್ಟಿಷ್ಟಲ್ಲ. ಈ ದೃಷ್ಟಿಯಿಂದ, ಸುಮಾರು ಐದಾರು ದಶಕಗಳ ಹಿಂದಿನ ನಮ್ಮ ಜನಜೀವನದ, ಸಂಗೀತ ಪ್ರಪಂಚದ ಒಂದು ಚಿತ್ರ ನನ್ನ ಅನುಭವದ ಮೂಸೆಯಲ್ಲಿ ಮೂಡಿ ಬಂದು ಈ ಬರಹಕ್ಕೆ ಸ್ಫೂರ್ತಿ ಮತ್ತು ಮೂಲ ಕಾರಣವಾಯಿತು. ಈ ನನ್ನ ಅನುಭವಗಳನ್ನು ಅಲ್ಲಿಂದ ಇಲ್ಲಿಯವರೆಗೆ ನಾನು ಕಂಡಂತೆ ನನ್ನ ತಾಯ್ನುಡಿ ಕನ್ನಡದಲ್ಲಿ ಯಥಾವತ್ತಾಗಿ ಚಿತ್ರಿಸಲು ಪ್ರಯತ್ನಿಸಿದ್ದೇನೆ. ನನ್ನ ಕೆಲವು ರಚನೆಗಳೂ ಕನ್ನಡ ಭಾಷೆಯಲ್ಲಿ ರಚಿತವಾಗಿವೆ. ಇದು ನನ್ನ ಮಾತೃಭಾಷೆಗೆ ನಾನು ಸಲ್ಲಿಸಿರುವ ಯತ್ಕಿಂಚಿತ್ ಕೈಂಕರ್ಯ, ಅಳಿಲು ಭಕ್ತಿ ಮಳಲು ಸೇವೆ. ಈ ನನ್ನ ಬರಹದಿಂದ, ನನ್ನ ರಚನೆಗಳಿಂದ ರಸಿಕವೃಂದಕ್ಕೆ ಏನಾದರೂ ಅಲ್ಪಸ್ವಲ್ಪ ರಸಾನುಭವವುಂಟಾದರೆ ಅಲ್ಲಿಗೆ ನನ್ನ ಉದ್ದೇಶ, ಶ್ರಮ, ಸಾರ್ಥಕ.(**'ನನ್ನ ಬದುಕು', 'ಅರಿಕೆ', ಲಕ್ಷ್ಮೀರಮಣ ಕೃತಿಮಂಜರಿ, ೧೯೮೯)**

****

'ಮಹತೀ'

ಸಂಪಾದಕರ ಮಾತು

"ಆರ್.ಎನ್.ಡಿ. ಅವರ ಆತ್ಮಕಥೆಯ ಈ ಪ್ರಪಂಚದಲ್ಲಿ ಕಾಣುವುದೆಲ್ಲ ಸದ್ಭಾವವೇ. ಅಹಂಕಾರ, ಅಸೂಯೆ, ದೂಷಣೆ ಮೊದಲಾದವು ಸುಳಿಯುವುದೂ ಇಲ್ಲ ಎಂದು ಹೇಳುವುದಕ್ಕಾಗಿಯೇ ಈ ಶಬ್ದಗಳನ್ನು ಬಳಸಬೇಕಾಗಿದೆ. ನಿಜಜೀವನದ ಇಲ್ಲಿನ ಪಾತ್ರಗಳೆಲ್ಲವೂ ಒಂದು ಪ್ರಸನ್ನವೂ ಸಾತ್ತ್ವಿಕವೂ ಆದ ಪ್ರಭೆಯನ್ನೇ ಕಟ್ಟಿಕೊಡುತ್ತವೆ. ದೊರೆಸ್ವಾಮಿಯವರಿಗೆ ಸಂಗೀತವೇ ಈ ಪಕ್ವತೆಯನ್ನು ಕೊಟ್ಟಿದೆಯೋ, ಅವರು ಉಂಡ ಕಷ್ಟಗಳು ಈ ದೃಷ್ಟಿಯನ್ನು ಮೂಡಿಸಿವೆಯೋ, ಇಲ್ಲ ಆ ಚೇತನವು ಪಡೆದ ಸ್ವಾಭಾವಿಕಸಂಸ್ಕಾರವೇ ಅಂಥದೋ? ಅಂತೂ, ಇಲ್ಲಿ ನಾವು ಒಂದು ಸುಂದರವಾದ ಉದ್ಯಾನವನದಲ್ಲಿ ಓಡಾಡಿದ ಅನುಭವವನ್ನೇ ಪಡೆಯುತ್ತೇವೆ. ಅವರ ಸಂಗೀತ 'ಕೃತಿ'ಗಳು ಇಂಥ ಮನೋಭೂಮಿಕೆಯಲ್ಲಿ ಅರಳಿದ ಪುಷ್ಪಗಳೆಂದ ಮೇಲೆ ಅವುಗಳಲ್ಲೂ ಸ್ವಾಭಾವಿಕವಾದ ಕಂಪು ಇರಲೇಬೇಕು."

ಇದು, ಆರ್.ಎನ್.ಡಿ. ಅವರ 'ಲಕ್ಷ್ಮೀರಮಣ ಕೃತಿಮಂಜರಿ' ಎಂಬ ಗ್ರಂಥದ ಮೊದಲ ಭಾಗದಲ್ಲಿರುವ ಅವರ ಆತ್ಮಕಥೆಗೆ ಸಂಬಂಧಿಸಿದ ಪ್ರತಿಕ್ರಿಯೆ. ಹೆಜ್ಜೆಹೆಜ್ಜೆಗೂ ವಿನಯ, ಪ್ರಾಮಾಣಿಕತೆ ಎದ್ದು ಕಾಣುವ ಲೇಖನ ಅದು. ನೇರ ಸರಳ ನಿರೂಪಣೆ, ಹೃದ್ಯವಾದ ಭಾಷೆ, ನಿರ್ಲಿಪ್ತ ಅಭಿವ್ಯಕ್ತಿ ಅದರ ಗುಣ. ಮಗನನ್ನು ಸಂಗೀತಕಲಾವಿದನಾಗಿ ಮಾಡಬೇಕೆಂಬ ತಂದೆಯ ಛಲ, ಕಲಾವಿದನಾಗಿ ಬೆಳೆದು ಉದಾತ್ತತೆಯನ್ನು ಬೆಳೆಸಿಕೊಂಡ ಮಗನ ಸಾತ್ತ್ವಿಕ ಪಕ್ವತೆ–ಇವು ಎಲ್ಲರ ಗಮನ ಸೆಳೆದಿವೆ.

****

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಆರ್. ಎಲ್. ಅನಂತರಾಮಯ್ಯ
ಭೂತಪೂರ್ವ ಉಪನಿರ್ದೇಶಕರು

ಇದು ಯೋಧನೊಬ್ಬನ ಆತ್ಮಕಥೆ ಮಾತ್ರವಲ್ಲ; ಅನೇಕ ಕಷ್ಟಗಳನ್ನೆದುರಿಸಿ, ತನ್ನ ಕಾಲ ಮೇಲೆ ನಿಂತು ತನ್ನ ವ್ಯಕ್ತಿತ್ವವನ್ನು ತಾನೇ ರೂಪಿಸಿಕೊಂಡ ಸಾಹಸಿಯೊಬ್ಬನ ವ್ಯಕ್ತಿಚಿತ್ರ. ಹಾಗೆಯೇ ಇದು ಮರಾಠಾ ರೆಜಿಮೆಂಟಿನ ಹಾಗೂ ಗಡಿ ಭದ್ರತಾ ಪಡೆಯ ಒಬ್ಬ ನೇರ್ಮೆಯುಳ್ಳ ಅಧಿಕಾರಿಯು ತನ್ನ ಕರ್ತವ್ಯಗಳನ್ನು ದಕ್ಷತೆಯಿಂದ ನಿರ್ವಹಿಸಿ, ಇತರರಿಗೆ ಮಾದರಿಯಾಗಿ ನಡೆದು ವೃತ್ತಿಜೀವನವನ್ನು ಸಾರ್ಥಕ ಪಡಿಸಿಕೊಂಡ ಕಥೆಯೂ ಆಗಿದೆ. ಮೇಜರ್ ವೇಣುಗೋಪಾಲ್ ತಮ್ಮ ಏಳ್ಗೆಗೆ ತಾವೇ ಶಿಲ್ಪಿಯಾಗಿ ಅದನ್ನು ರೂಪಿಸಿಕೊಂಡರು, ಸೈನಿಕರು ಶುಷ್ಕ ಜೀವಿಗಳಲ್ಲ, ಶಿಸ್ತಿನ ಹೆಸರಿನಲ್ಲಿ ಬದುಕನ್ನು ಯಾಂತ್ರಿಕ ಕಠೋರತೆಯನ್ನಾಗಿಸಿಕೊಂಡವರಲ್ಲ ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಅಸ್ಸಾಂ ಗಡಿಯ ಮೂಲೆಮೊಡಕುಗಳ ಗ್ರಾಮಗಳಿಗೆ ರಸ್ತೆ ಮಾಡಿಕೊಡುವಾಗ, ಭಗೀರಥ ಸಾಹಸ ಮಾಡಿ ಕುಡಿಯುವ ನೀರನ್ನು ಅವರ ಬಾಗಿಲಿಗೆ ಹರಿಸಿ ತರುವಾಗ ಅವರ ಮನೋಧರ್ಮದ ಈ ಆರ್ದ್ರತೆ, ಅನುಕಂಪೆ, ಸುವ್ಯಕ್ತವಾಗಿದೆ. ನೆನಪು ಕೆದರಿದಾಗ ಒಳ್ಳೆಯ ಓದಿಕೆ ನೀಡುವ ರಸವತ್ತಾದ ಕೃತಿ.

*****

ಮೈಸೂರು

ಡಾ. ಬಿ.ಎಸ್. ಪ್ರಣತಾರ್ತಿಹರನ್
ಕನ್ನಡ ಪ್ರಾಧ್ಯಾಪಕರು(ನಿವೃತ್ತ)

ಆತ್ಮಕಥೆಯ ಮೂಲಭೂತ ಲಕ್ಷಣವೆಂದರೆ ತನ್ನದೇ ಕಣ್ಣಳತೆಗೆ ಸಿಕ್ಕಿದ್ದನ್ನು ತನ್ನನ್ನೇ ಕೇಂದ್ರದಲ್ಲಿಟ್ಟು ಕೊಂಡು ಅಳೆಯುವುದು. ಅಲ್ಲದೆ, ಸಾಮಾನ್ಯವಾಗಿ ಅದು 'ತನ್ನ' ಪರವಾಗಿಯೇ ಕೆಲಸಮಾಡುತ್ತದೆ. ಈ ದೌರ್ಬಲ್ಯವನ್ನು ಮೀರುವುದು ಕಷ್ಟದ ಕೆಲಸ. ಶ್ರೀ ವೇಣುಗೋಪಾಲ್ ಅವರು ಇದನ್ನು ಮೀರಿರುವುದರಲ್ಲಿಯೇ ಈ ಕೃತಿಯ ವೈಶಿಷ್ಟ್ಯವಿದೆ. ಇಲ್ಲಿ ಒಬ್ಬ ಗಾಂಧೀವಾದಿ ಇದ್ದಾನೆ; ಮಾನತಾವಾದಿ ಇದ್ದಾನೆ ಎಂದೂ ಹೇಳಿದರೆ ಅದು ಪುನರುಕ್ತಿಯಾಗುತ್ತದೆ.

ಇಲ್ಲಿನ ಯೋಧ ಒಬ್ಬ ಉದಾತ್ತ ನಾಯಕ. ಅವನ ದೃಷ್ಟಿ ಶುದ್ಧವಾದುದು. ತನ್ನ ಪರಿಸರವನ್ನು ಮೇಲೆತ್ತಿ ಉದಾತ್ತಗೊಳಿಸುವುದೇ ಅವನ ತಪಸ್ಸು. ಈ ತಪಸ್ಸು ಏಕಾಂತದಲ್ಲಿ ಕಾಡಿನಲ್ಲಿ ನಡೆದಾಗ ಅದಕ್ಕೊಂದು ರಮ್ಯತೆ ಪ್ರಾಪ್ತವಾದೀತು. ಆದರೆ ಜನರ ನಡುವೆ ಇದ್ದುಕೊಂಡು ಅವರೊಡನೆ ಬೆಳ್ಳಂಬೆಳಕಿನಲ್ಲಿ ಓಡಾಡಿ ಲೋಕಕುಟುಂಬಿಯಾಗುವುದು ಕಠಿಣತಮ ತಪಸ್ಸು. ಲೇಖಕರು ಇಂಥ ತಪಸ್ಸಿನಲ್ಲಿ ಯಶಸ್ಸು ಪಡೆದಿದ್ದಾರೆ. ಆದ್ದರಿಂದಲೇ ಇಲ್ಲಿ ಉದ್ದಕ್ಕೂ ಇರುವ ವಿವರಗಳು ಸಾಹಸಯಾತ್ರೆಯ ವಿವರಗಳಷ್ಟೇ ಅಲ್ಲ, ಜನತಾಸೇವೆಯ ತೀರ್ಥಯಾತ್ರೆಯ ಪಾವಿತ್ರ್ಯವನ್ನೂ ಮೇಳೈಸಿಕೊಂಡಿವೆ. ಆದ್ದರಿಂದಲೇ ಇರಬಹುದು, ಇಲ್ಲಿ ಉದ್ದಕ್ಕೂ ಕೇಳುವುದು ಲೇಖಕನ ಸಾಕ್ಷೀಧ್ವನಿ ಮಾತ್ರ.

ಅಗಾಧ ನೆನಪಿನ ಶಕ್ತಿ, ಅದಮ್ಯ ಜೀವನೋತ್ಸಾಹ, ಕಣ್ಣಿಗೆ ಕಟ್ಟುವಂತೆ ಸುಂದರವಾಗಿ ನಿರೂಪಿಸುವ ಶಕ್ತಿ ಇಲ್ಲಿ ಎದ್ದು ಕಾಣುತ್ತದೆ. **(ಮೊದಲ ಮಾತು : ನೆನಪು ಕೆದರಿದಾಗ)**

******

ಮತ್ತೂರು **ಕ.ನಾ. ಮಾರ್ಕಂಡೇಯ ಅವಧಾನಿ**

೨೫ ವರ್ಷಗಳ ಕಾಲ ಇಂಗ್ಲೆಂಡಿನಲ್ಲಿ 'ಭಾರತದ ಸಾಂಸ್ಕೃತಿಕ ರಾಯಭಾರಿ' ಎನಿಸಿಕೊಂಡು, ಲಂಡನ್ ವಿದ್ಯಾಭವನವನ್ನು ಕಟ್ಟಿ ಬೆಳೆಸಿ, ಹಿಂದೂಧರ್ಮದ ವಿಜಯ ಪತಾಕೆಯನ್ನು ಹಾರಿಸಿ ಬೆಂಗಳೂರಿಗೆ ಬಂದು, ಈ ನಿವೃತ್ತಿಯ ವಯಸ್ಸಿನಲ್ಲೂ ಅಹರ್ನಿಶಿ ಶ್ರಮಿಸುತ್ತ ಬಳ್ಳಾರಿ, ಬಾಗಲಕೋಟೆ, ಮಡಿಕೇರಿ, ಮೈಸೂರು ಮೊದಲಾದ ಕಡೆಗಳಲ್ಲೂ ಭವನದ ಚಟುವಟಿಕೆಗಳನ್ನು ವಿಸ್ತರಿಸುತ್ತಿರುವ ಶ್ರೀ ಮತ್ತೂರು ಕೃಷ್ಣಮೂರ್ತಿಗಳ ಸಾಧನೆಗೆ, ಈಗ ನಾವು ಅರ್ಪಿಸುತ್ತಿರುವ ಸಂಭಾವನಾ ಗ್ರಂಥವು, ಸೂರ್ಯನಿಗೆ ಸೊಡರು ತೋರಿದಂತೆ ಕೇವಲ ಔಪಚಾರಿಕ. ಈತನ ಪುಣ್ಯಕರ್ಮಗಳ ಸುಗಂಧವು ವಿಶ್ವದ ಎಲ್ಲೆಡೆ ಹರಡಲಿ. **(ಮುನ್ನುಡಿಯಿಂದ: 'ಮತ್ತೂರ್ ಜೀ')**

*****

ರಾಜಾರಾಮಮೂರ್ತಿ

ಗಮಕ, ಸಾಹಿತ್ಯ, ಪತ್ರಿಕೋದ್ಯಮ, ನಾಟಕ, ಭಾರತೀಯ ಸಂಸ್ಕೃತಿಯ ಪ್ರಸರಣ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ದಶಕಗಳ ಕಾಲ ಅನುಪಮ ಸೇವೆ ಸಲ್ಲಿಸಿರುವ "ಭಾರತೀಯ ಸಾಂಸ್ಕೃತಿಕ ರಾಯಭಾರಿ" ಎಂದೇ ಖ್ಯಾತನಾಮರಾದ ಶ್ರೀ ಮತ್ತೂರ್‌ಜೀ ಅವರಿಗೆ ಈ ಗ್ರಂಥವು ಅಭಿನಂದನಾಪೂರ್ವಕವಾಗಿ ಹೊರಬರುತ್ತಿದೆ.

ಅಭಿನಂದನಾ ಗ್ರಂಥವು ಎರಡು ಭಾಗಗಳಲ್ಲಿ ಹೊರಬರುತ್ತಿದ್ದು, ಮೊದಲ ಭಾಗದಲ್ಲಿ ಮತ್ತೂರ್‌ಜೀ ಅವರ ಜೀವನಗಾಥೆಯೂ, ಇನ್ನೊಂದು ಭಾಗದಲ್ಲಿ ಅನೇಕ ಅಭಿಮಾನೀ ಸಜ್ಜನರು ಅವರ ಬಗೆಗೆ ಬರೆದ ಲೇಖನಗಳೂ ಇವೆ. ಮತ್ತೂರರ ಈ ಯಶೋಗಾಥೆ ಉತ್ತಮ ಸಂಸ್ಥೆಯೊಂದರ ಚರಿತ್ರೆಯೂ ಆಗಿ ಸಂಸ್ಥೆಯನ್ನು ಕಟ್ಟುವ ಭಾವೀ ಯೋಜಕರಿಗೆ ಉತ್ತಮ ಮಾರ್ಗದರ್ಶೀ ಕೈಪಿಡಿಯಾಗಿ ಎಲ್ಲ ಕಾಲಕ್ಕೂ ಪ್ರಸ್ತುತವೆನಿಸುವಂತಿದೆ. **(ಸಂಪಾದಕರ ನುಡಿಯಿಂದ: 'ಮತ್ತೂರ್ ಜೀ')**


****

ಸಂಪಾದಕಿ : ಶ್ರೀಮತಿ ಸುಮನಾ ವಿಶ್ವನಾಥ್*

ಇಂಗ್ಲಿಷಿನಲ್ಲಿ ಸ್ನಾತಕೋತ್ತರ ಪದವಿ, ಹಿಂದಿ ಭಾಷೆಯಲ್ಲಿ ರಾಷ್ಟ್ರ ಭಾಷಾ ನಿಷ್ಣಾತ್ ಪದವೀಧರೆ. 'ಕ್ಷೇತ್ರದರ್ಶನ" ಎಂಬ ಪ್ರವಾಸಕಥನದಿಂದ ಪ್ರಾರಂಭವಾಗಿರುವ ಇವರ ಸಾಹಿತ್ಯದ ಕೆಲಸ ಡಾ. ಮತ್ತೂರು ಕೃಷ್ಣಮೂರ್ತಿ, ವೇ.ಬ್ರ. ಶ್ರೀ ಮಾರ್ಕಂಡೇಯ ಅವಧಾನಿ, ಶ್ರೀ ಎಚ್. ಆರ್. ಕೇಶವಮೂರ್ತಿ, ಡಾ. ದೇ. ಜವರೇಗೌಡ, ಪ್ರೊ॥ ಸುಜನಾ ಈ ಎಲ್ಲಾ ಹಿರಿಯರು ತಮ್ಮ ತಮ್ಮ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಳು ಸೇರಿದಂತೆ ಮಾಡಲಾಗಿರುವ 'ಜೀವನಚಿತ್ರಣ'ದವರೆಗೆ ಮುಂದುವರೆದಿದೆ. 'ಗಮಕಕಲಾಭೂಷಣ' ಎಂಬುದು ಗಮಕತಪಸ್ವಿ ಶ್ರೀ ಎಚ್. ಕೆ. ರಾಮಸ್ವಾಮಿಯವರ ಜೀವನ ಚಿತ್ರಣ. ಪ್ರಸ್ತುತ ಸುಮನಾ ವಿಶ್ವನಾಥರು ಶ್ರೀ ವಿಶ್ವಕವಿ ಕುವೆಂಪು ಪ್ರಥಮದರ್ಜೆ ಕಾಲೇಜು, ಮೈಸೂರು ಇಲ್ಲಿ ಇಂಗ್ಲಿಷ್ ಭಾಷಾ ಉಪನ್ಯಾಸಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಮಹಾತ್ಮಾಗಾಂಧೀ ಸಾಹಿತ್ಯದ ಬಗ್ಗೆ ವಿಶೇಷ ಅಧ್ಯಯನ ನಡೆಸುತ್ತಿದ್ದಾರೆ. ಅನುವಾದಕರೂ, ಲೇಖಕರೂ ಆದ ಶ್ರೀ ಕೆ.ಸುಂದರರಾಜ್ ಮತ್ತು ಸಂಗೀತ ಸಾಹಿತ್ಯಗಳ ಬಗ್ಗೆ ಪ್ರೀತಿ ಇದ್ದ ಶ್ರೀಮತಿ ವಿಜಯಲಕ್ಷ್ಮಿ ಅವರ ಮಗಳು ಸುಮನಾ, ಇವರ ಪತಿ ಶ್ರೀ ಟಿ.ಎಸ್. ವಿಶ್ವನಾಥ್ ಕೈಗಾರಿಕೋದ್ಯಮಿ; ಪುತ್ರ: ಶಶಾಂಕ್ ವಿ. ಶ್ರೀವತ್ಸ.

ನಿಧನ * 03–08–20014

– ಸಂ



Volume 7

VIBRANT INDIA

Collected papers of Mahamahopadhyaya Dr. R. Shamasastry

Editor : Dr. T. V. Venkatachala Sastry
Dr. B.S. Prantartiharan

a SANKETI STUDIES

This work, *Vibrant India*, is a collection of research papers of **Mahamahopadhyaya** Dr. R. Shamasastry, published in various journals and volumes. It is the dream come true of Samudaya Adhyayana Kendra, Mysore which had visualised this a few years ago. This scholarly work is the result of the able editorial skill exercised by Dr. T.V. Venkatachala Sastry, a senior scholar with a rare distinction, of our times. This is the first volume of the series of papers published by the great Savant a few decades ago. Kautilya's *Arthashastra* which brought name and fame to Dr. R. Shamasastry was published hundred years ago; 2009 is the Centenary year of its publication and it has been a happy coincidence to have this work, Vibrant India, as a commemorative volume now. We are grateful to Dr. Sastry and his associates and at the same time we express our gratitude to the band of workers who have struggled althrough, day and night, to see the work in a fine, finished form like the one on hand.

Mysore **B.S. Pranatartiharan**
06-06-09

b Mahamahopadhyaya Dr. R. Shamasastry

Many years ago, His Highness Sri Krishna Raja Wodeyar IV, who was ruling over the then Mysore state, once visited Germany (regnal period 1895-1940). There he visited an university. He introduced himself at the university to a professor as the king of Mysore (a princely state in Indian continent). With evident curiosity the professor instantly asked him, "Are you from Dr. Shamasastry's Mysore?". Then the king replied "Yes, yes...We are." After he returned to Mysore, he sent for Shamasastry and asked him to meet him at the palace. When Shamasastry met him, "Mr. Shamasastry, you are our subject in our kingdom, but we are your subject in a foreign country," said the king with a laugh. Supremely pleased Sastry, expressing his gratitude, saluted the King.

Who is this Shamasastry

The Kaveri is the sacred river of Karnataka, the land of Kannada people and their language. On one of its banks is situated the village Rudrapatna. This is in Arakalgud Taluk of Hassan district. In the past it was like an *Agrahara.* It was the home of several educated Brahmin families, that had migrated from Tamilnadu. Centuries ago, many of those settlers had moved out in search of jobs and livelihood. Some families have settled there itself. The Brahmins belonging to those families are known as *Sanketis.*

Bettadapura Sanketi is a subsect among the Sanketis. Shamasastry was born in a family that belonged to this subsect. He was born on 12th January in the year 1868. His father was Venkataramaiah and Puttamma was his mother; Gopalaiah and Ramaswamy were two younger brothers of him.

Shamasastry's ancestors were vedic scholars and strict followers of tradition. As Mysore city opened all the facilities to Sanskrit learning, Sastry following the tradition of his ancestors, walked all the way to Mysore from his village when he was just thirteen. He took his first lessons in Sanskrit language and literature and scriptures (works of shastras) from one Kallikote Sastry. Later he continued his studies in Maharaja Sanskrit School (Pathashala). In 1891, at the age of 23, he got his Vidwat degree in literature.

Having keenly observed Shamasastry's Sanskrit scholarship and eloquence, the then Dewan of Mysore state Sir K. Seshadri Iyer arranged for Sastry to stay in his own house. The Dewan's wife Smt. Dharmamma used to learn about her favourite Sanskrit works by making him read them for her. The couple also had evinced keen interest in his studies and examination. When he was relishing this benevolent patronage of the Dewan couple, Sastry strongly felt a desire to learn English. Sastry, being a personal tutor to Dewan in Sanskrit and in the studies of Indian Philosophy, he was very helpful

to him. The Dewan helped Sastry in this regard also. With his support Sastry studied in Bangalore Central College choosing English, Sanskrit as languages and Physics as an optional subject. In 1899, he successfully completed the B.A., degree of Madras University. Mr. Iyer thought of finding a suitable job for Sastry, came forward to help him. He knew what Sastry's interests were. He wrote a letter to the education department indicating that if there was any provision, Sastry should be given a position at the Mysore Oriental Library (Now the Oriental Research Institute). Dewan thought as Sastry had gained proficiancy both in Sanskrit and English languages, Oriental library was the ideal place for him.

Sastry was appointed as the librarian of the Mysore Oriental Library, in 1900, the very next year, he got through his B.A degree course. After his graduation, in the library, he got invaluable contact, encouragement and guidance of the Institute's first curator and scholar Sri A. Mahadeva Sastry, B.A., and the first pandit and an erudite scholar Sri Panditaratnam Kasturi Rangacharya. With their co-operation Sastry started editing works for the institute's publication series, and along-side he started writing scholarly articles related to Indian literature and culture.

The Fame of *Arthashastra*

By this time, Sastry had earned a thorough knowledge of the myriad areas of the Indian studies. He had acquainted himself with Indian ancient scripts; Vedas and vedic astronomy were his favourite subjects of study. He published a major article on the origin of *devanagari* alphabet in Indian Antiquary in 1905. In 1908, he wrote a booklet namely *Gavam ayana* about the vedic era and he himself published the book.

The major work assigned to Sastry at the Mysore Oriental Library was, to prepare an index for the manuscripts of Sanskrit language that had been already collected and to scrutinise the manuscripts that were recently collected. He carried out both the works with earnestness and great competence. When, once he was verifying some Sanskrit manuscripts, that belonged to the library, he accidentally came across the manuscript of a treatise that dealt with statecraft which was in practice in Ancient India.

It happened to be the manuscript of the famous work *Arthashastra* authored by Kautilya. This work as well as a commentary on a part of that work by Bhatta swamy, both came in to the library sometime ago through a Tanjore scholar.

Mr. Sastry identified immediately that Kautilya's *Arthashastra* as a seminal text with source material to acquire a thorough inwardness into Ancient Indian polity. He continuously copied the manuscript and edited with great efficacy. Later he also published it through Mysore Oriental Library book series in the year 1909, exactly a century earlier to the current year 2009.

The language of *Arthashastra* was obscure and complex. The text demanded interpretations of technical terms and terms that were related to the subjects viz, political science, economics, law, commerce and military science etc. It was not possible for one either to read or to understand Kautilya's work unless one was familiar with terms from these disciplines. Mr. Sastry made strong efforts to study the text and master it himself.

He felt that people of India as well as people of different parts of the world and who do not know Sanskrit should understand this precious work of Kautilya. So he started to translate the work into English, in 1905. He published the translation serially in the periodical namely Indian Antiquary and Mysore Review. As it was expected, this translation drew the attention of India as well as the scholars of other parts of the world. Being inspired by this encouragement and exhortation Shamasastry, completely translated *Arthashastra*. Having completed the work, he published it in 1915, with a foreward by Dr. J.F. Fleet, a renowned Indologist. Dr. Fleet in his foreword eulogized the exemplary work of Sastry and even described him as the discoverer of Arthashastra. Dr. Fleet who admired the pains–taking work carried out by Sastry also credited him the achievement of bringing it out in a language that even non–Sanskrit readers could appreciate. He felt that words fail to communicate the greatness of the services rendered by Shamasastry.

After Sastry published the original work and its translation, many scholars of Oriental studies of European and American origin, congratulated him; as a result of it, Sastry wrote many articles of great scholarship on politics and financial policy and commerce etc., of the Mauryan age, got them published in many periodicals that belonged to the different parts of the country. Some of the articles were also published in the felicitation volumes brought out in the name of reputed scholars. In a short period of time, he came to be renowned as a scholar who could speak authoritatively about significant aspects of Ancient Indian political thought.

Now let us try to get the glimpses of the *Arthashastra* of Kautilya, which became famous through R. Shamasastry.

Arthashastra was written by Kautilya. He was also known as Vishnugupta, and Chanakya. He belonged to the Brahmin family of Takshasila (Taxila). There is also a conviction that he made the last king of the Nanda dynasty descend from the throne and installed Chandragupta Maurya in his place. And then, he became the chief-minister of Chandragupta and worked hard to establish order in his state. He wrote his work Arthashastra in about 325-296 B. C.; some are of the opinion that he wrote it in 3rd century A. D.

It is established that Kautilya's *Arthashastra* has decisively influenced the shaping of Indian politics, religion and social life, and also has its effects on the similar works that

came afterwards. Public administration, king's duty, officers' conduct, granting justice, war policies and varied austerities of social life and many more subjects are narrated here. The book doesn't just preach or moralize regular ethics, it is a guide to a benovolent prince who enjoys the confidence of his subjects to rule efficiently.

There are 15 adhikaranas (books) in *Arthashastra*. The subjects mentioned here are roughly in the following order.

1. Fostering of princes and their education, details about ministers and courtiers;

   details regarding management of espionage etc.,

2. A vigilance squad to supervise administration.

3. Implementation of law.

4. Restraining law breakers.

5. Collection of tax, collection in kind from agriculturists and craftmen. Distributing the wealth of the rich, and annual salary for royal employees.

6. King, minister, land, fort, treasury, military forces and friends are known as Seven

   Constituents; Relations with other nations.

7. The king's duties regarding peace, war, non-alignment, preparations for victory march, signing treaty etc.,

8. Dangers of the king becoming prey to the bad habits or addictions; Calamities, which can be caused by the fire and water etc.,

9-10. Occasions of war and war techniques.

11. Plans and techniques for breaking up of the unity of the enemy forces.

12. King, consolidating his power and killing his enemy kings with deceptive means with the help of spies and captives and others, etc.,

13. Threatening the enemies by propagating the nobility and virtues of the king. And using spies and common folk for this purpose in several ways.

14. Use of medicine and magic spells to succeed against enemies.

15. Division of the treatise and 32 principles that should be followed in argument and illustration for them.

Dr. S. Radhakrishnan has applauded Kautilya's *Arthashastra* as the work that elucidates the Ancient India's social conditions and political systems. "I must say that this is one of the most interesting and valuable sanskrit works ever procured. As a faithful and life–like representation of Indian Institutions and modes of Government, it is without a parallel.." -eulogized Dr. J. Jolly of Germany. This book had been translated to English, French and German languages. There are many commentaries and expositions on this work. English version itself has seen several prints. The above details proclaim the extraordinary utility of this work.

Many erudite scholars of foreign Countries as well as India who evinced deep interest in the *Arthashastra* used to correspond with Dr. Sastry when he was alive and even afterwards, requesting with the family people that they would like to take this work as the subject of their study. And also used to correspond requesting to allow them to use the selected passages or parts of the book to quote in their works which either they were writing or editing. Foreign universities like that of Hawaii, North Carolina, Buffalo, Washington, Columbia, California, Chicago and publishing houses like Unesco, IndianGovernment, Penguin and other private publishing houses have written both to Sastry and to members of his family. Prof. Mekinze Brown, Professor of Political science in California University has written in one of his letters that Sastry was one of the greatest scholars in the world and his work changed the entire course of the Indian indological studies.

Shamasastry's prestige and the pre-eminence of the Mysore state as well as that of Mysore Oriental Library increased hand in hand after he edited and translated the Arthashastra. Mr. Sastry was conferred many awards, honours and titles by state and foreign academic bodies. The Oriental University of Washington in USA conferred honorary Ph.D. degree on Sastry on 25th August 1919. In 1921, Sastry was honoured with the membership of the world famous Institution the Royal Asiatic Society (M. R. A. S); in the same year Bombay Branch of this society honoured Sastry, with the Campbell Memorial Gold Medal.

Arthashastra became a subject of study in many other universities in India. Sastry used to be appointed as the valuer of the research theses that submitted to Calcutta University as well as other universities. Sir. Asutosh Mookerjee, the famous educationist, a Law luminary, had adorned the chair of Vice-chancellorship of Calcutta University. He was also the founder and the president of Arts section. On his suggestion Calcutta University used to invite Sastry to deliver lectures to the M.A. degree classes. In 1919 March and April, Sastry gave about ten written lectures on the Evolution of Indian polity.

They were published in the form of a book in 1920 from the same university. In the very next year, on Mr. Mookerjee's suggestion, Calcutta University invited Sastry to Calcutta and felicitated him with an honorary Doctorate degree. He received this degree on 17th December1921. For all his achievements, viz., searching and finding of the manuscript of Kautilya's *Arthashastra* from the pile of manuscripts, then editing and publishing it, translating it to English, not only rewriting the ancient, political history of India, but also interpreting it according to the modern situations and circumstances, the Calcutta university has now adequately felicitated him for his yeoman services to the field of Humanities.

As a Professor

Dr. Shamasastry worked as the principal of Chamaraja Sanskrit College at Bangalore for about six years, from 1912 to 1918. This institution was one of the most esteemed Sanskrit study centers at that time. Sastry worked hard for the progress of this institution. With his hard earned great and wide scholarship in Sanskrit language and literature, one can think that here his service was extremely useful. To fully understand and appreciate his talent and erudition and how it came to the light in his teaching and how was his friendly relations with his colleagues, we still do not have adequate data.

It is also known, that Dr. Sastry was a member of both the executive committees of the Pathashala and Sanskrit Vidwan examination board. He also served as a member of the quarterly of Sanskrit magazine editorial committee for several years; On many occasions he used to deliver discourses to scholars associations and conferences in Sanskrit. He has also written articles for Sanskrit magazine of the Pathashala in Sanskrit language itself.

As an editor of literary works

In 1918 Dr. Shamasastry returned to Mysore, took up the curator's position in which A.Mahadeva Sastry was working. Now Sastry was back in Oriental Library where he was working earlier. After assuming the office, as a curator, many ancient works in Sanskrit and Kannada were published in his chief as well as own editorship. He also got the useful co-operation of other learned scholars and the staff of that institution in his language and literary pursuits.

Sri Shamasastry, in co-operation with the senior scholar Sri Kasturi Rangacharya, edited *Taittiriya Pratishakhya* in 1906. In 1909 he had independently edited Kautilya's *Arthashastra* and now in his chief editorship a total of 19 ancient Sanskrit works and their parts, revised editions and indices were published. Similarly 9 ancient Kannada works and their parts were also published.

Sanskrit works edited by Dr. Shamasastry

Baudhayana grihyasutra (1920)
Smritichandrika of Devanabhatta - *Ashaucha Kanda* (1921)
Ayurveda Sutra of Yogananda (1922)
Alankaramanihara, Vol III (1923)
Vidyamadhaviya of Vidyamadhava (1925)
Vidyamadhaviya Muhurta Dipika - Commentary (1926)
Abhilashitartha Chintamani of Someshwara III-3 *prakaranas* (1926)
Saraswativilasa of Prataparudra (1927)
Arthashastra's Second and third revised editions (1919, 1924), *Word index of Arthashastra* -3 volumes (1924, 1925. 1925) were also published along with the above works.
Varaha grihyasutra (1921) was published from Baroda Central Library as the 18th publication of Gaikwad Oriental Series.

Among these Sanskrit works, each one is edited conforming to the principles of texual criticism based on many manuscripts. Foreword is written for every book, either in English or in Sanskrit language. In this part, it is seen that the contents of the respective work is given and the criticism with apt details is also included.

Kannada works edited by Shamasastry:

Kumaravyasa bharata: *Virataparva* (1920)

Keladi nrpavijaya of Linganna kavi (1921)

Udbhata kavya of Somaraja (1921)

Kumaravyasa bharata: Udyogaparva (1922)

Jagannathavijaya of Rudrabhatta (1922-23)

Akruracharite of Somanatha (1923)

Dharmamrta of Nayasena (1924-26)

Kantheerava Narasaraja vijaya of Govinda Vaidya (1926)

Sastry was ably supported and greatly helped while editing the above works, by those who were working in the institution at that time – A.R.Krishnasastri, T.N. Subbarayasastry, V. Shyamacharya. They wrote forewords also; editing work might also have been done or managed by these scholars.

As an epigraphist

Dr. Shamasastry's diligence, forbearance, scholarship and fame were recognized by the then government of Mysore state. He also took charge as the Director of Mysore Archaeology Department, which was vacant after the retirement of Rao Bahaddur R. Narasimhacharya in August 1922, along with curator's post of the Oriental Library. During the same period, i.e., in 1922-23, Archaeology department for sometime, came under the jurisdiction of the Mysore University. The Director's office was also shifted from Bangalore to Mysore in September, 1922.

It is also recorded that, during this period we are told that Sastry worked for sometime as the professor of Indian history in Mysore University. But because of the pressure of the heavy official work, it seemed to him that it was difficult to manage everything with the same efficiency. Hence he retired from the post of professor and continued his service in other two posts till his retirement. Sastry retired from the posts of the curator and the director at the age of 60, in February 1929.

Now, let us take an account of Sastry's contribution as the Director of Archeology department of Mysore from 1922 to 1929, a period of seven years.

The government expects that the director of this department must tour with his department staff, in the state for some time in a year, collect ancient manuscripts, take estampange of the stone inscriptions, collect ancient copper plates and coins, inspect the conditions of the ancient temples and other monuments and make arrangements for their repairs, conduct excavations etc. The work done during the tours must be reported to the Government from time to time. Tasks like taking original texts of stone inscriptions and copper plates, copy prints of the important of them, the blueprints and pictures of the temples and monuments that seemed important and significant had to be included in the report. Not only this, an adequate foreward needed to be there. Besides these, about the details of articles found in these places, the places visited, gist of evaluation, the benefit gained from those details to enhance the study of the state history; all these would be published every year in the form of a book with the title, Mysore Archaeological Report.

Dr. Sastry used to follow his predecessor's tradition of preparing the reports and submit them to the Government. They were of three categories, viz. Archaeology, Manuscripts, and Epigraphy; contents were divided according to this arrangement. Archaeology section consisted mainly of details of temples and other monuments; in manuscripts section, literary and scientific works which were written on palm leaves during ancient times, which were in Sanskrit and Kannada were reviewed; In the epigraphy section historical issues which were revealed through stone inscriptions and copper plates are discussed.

The Annual Report of 1922-1923

This was Dr. Sastry's work in the first year. He made arrangements for the repairs of the famous Hoysala temples at Belur and Halebeedu. He suggested to the government to enact the law for the protection at the earliest to preserve the ancient monuments of the state. 53 manuscripts were collected: 130 new inscriptions were unearthed. He published his definitive findings after exploring the historical evidence he obtained regarding the installation of the Gommateshwara Colossus in Shravanabelgola, on the age of Kalkyabda, the beginning of the Gupta era and the extension of the rule of Harshavardhana. Sastry also had the expertise in astronomical methods of calculation of time. So by taking up the conclusions of foreign scholars like Fleet, Vincent Smith and Sylvin Levi, about the beginning of the reckoning of Gupta era, he elucidated with conviction the weaknesses found in them. He justified his findings elaborately and precisely.

The Annual Report of 1924

124 inscriptions were found out this year. 50 ancient coins were examined. An archaeological museum was also started at this time. The main objective of starting this museum was to increase the interest in the study of history, to develop a relationship between the history department of the university and the department of archaeology. This museum contains coins, copper plates, ancient artifacts (utensils and objects), pictures of ancient monuments, estampages of the inscriptions etc., This report reveals a detailed and exhaustive study of the problems pertaining to some of the manuscripts, and their historical significance. Along with this, the geniuneness of the inscriptions of the ancient Ganga kings, their chronological problems have all been specially discussed here.

The Annual Report of 1925

120 inscriptions were found out. 500 manuscripts were examined. Collection of coins was also carried out. A survey of Harihareshwara temple at Harihara, Sowmyakeshava temple at Nagamangala etc., was undertaken.

The Annual Report of 1926

125 new inscriptions were unearthed this year. Collection of coins continued. The report of this year was strikingly different in many angles. It is argued at length that the words other than Greek found in a Greek drama of the 2nd century were Kannada terms. The report also deals with the ancient as well as famous *katantra vyakarana* and the time of its composition. The evidence provided by a Sanskrit work about the travels of the famous Chinese traveller Fa-hien is pointed out here. It reports an interesting discussion in the olden times about the much argued caste system. It cannot be said that, Sastry's investigations and assessments in the above report were accepted by one and all. They are

not free from shortcomings. But Sastry's commendable intelligence in his hair-splitting discussion on the subject matter by making it fascinating reading, definitely demands appreciation.

Annual report of 1927

172 inscriptions were identified. Ancient idols were collected. Here date of the Mahabharata war, issues regarding Kautilya's *Arthashastra* and *Panchatantra*, the nature of secret writing (gudhalekhya) were included. Bhamaha, the author of *Kavyalankara* (a work on poetics), the date of Vachaspatimishra and Mallinathasuri were ably discussed here and it included discussion on the Gupta era, Jaina and Bauddha sects and customs. They are strikingly significant and of great importance to Indian culture and Sanskrit language.

Annual report of 1928

113 inscriptions were identified. The state and condition of Kannada language during the period of Mauryas and Shatavahanas, and Sringeri Mutt and the genealogy of its pontiffs have been discussed. These are of great significance to linguistic and cultural studies of the region.

If we study closely these reports, prepared by Dr. Sastry, it becomes obvious that he had an astonishing erudition and grasp of Indian culture, religion and history; and how he used to proceed with zeal in his research assignments pertaining to these subjects with exceptional courage and enthusiasm. Identifying ancient manuscripts, introducing the subject matter contained in them elaborately, discussing the problems found in them and recognising how these evidences and sources shed light on the history of South India were subjects that held very close to his heart. Opening of museums, publishing the texts of epigraphs, criticism of the subject matter and the language of the Greek play, the state and condition of the Kannada language in ancient times, fixing the periods of the reign of the royal families of ancient India etc., are the important documents and signal contributions in the reports of his official tenure.

In the beginning, for the first 2 years the texts of the epigraphs were in English transliteration; from 1925 onwards, the practice of printing in Kannada script was also initiated by Sastry.

Felicitations and awards

His Highness Maharaja of Mysore Sri Krishnaraja Wodeyar IV commended Dr. Shamasastry's scholarship, efficiency, integrity and hard work, which he revealed in his offices as the Curator of the Mysore Oriental Library and Director of the Archaeological department. The king honoured him by conferring the title *Arthashastra visharada* in

1926 during *Navaratri* celebrations at his *darbar* in the presence of a mammoth gathering. Sastry also expressed his deep gratitude towards the *king*. He composed some Sanskrit verses in honour of the king, eulogizing the kings magnanimity. In 1930, the Government of India conferred on him the title *Mahamahopadhyaya*.

Bharata Dharma Mahamandali, Varanasi, which had already honoured him with the title *Vidyalankara* in 1924, conferred on him the title *Panditaraja* in 1935. In recognition of his peerless services in popularizing Jain canonical works through his translation and criticism, the Jain association of Mysore presented him a citation, in June 1930. The awards and titles conferred on him are the solid enduring evidences of the depth and vastness of his scholarship and the multifaceted services he rendered in the field of education and learning.

As an author

Dr. Sastry did not rest even after his retirement. He continued his research on the subjects he loved and authored several books; he also wrote good number articles which were published in the learned journals. He authored seven books and contributed about 100 articles to various journals and volumes.

Sastry loved and adored the *Vedas*. Among them he was especially fond of astronomy that was considered one of the six constituents of the *Vedas*. The differences in the measure of time and the cycle of seasons depending upon the movement of the planets, procedures related to sacrifices and oblations, how all these found a place in *Vedas*, how *rishis* of the Vedic age calculated the time factor on the basis of the above knowledge, whether there were any inner meanings revealed through were subjects of great curiosity to Dr. Sastry in his research work. Rituals related to the *Yajnas*, hymns of prayer, superhuman and legendary stories, daily routine of the ancients – have all been critically analysed in his writings.

With the help of Indian Mathematics, he tried to bring out the meanings of specially identified numbers and words in the *Vedas*. In all we notice how Sastry had attempted to reconstruct the culture of the Vedic times.

His works which deal with the kind of subjects or topics mentioned above are all in English and he himself had published them. They are:

Gavam Ayana: The Vedic Era

When Sastry was the librarian of the Mysore Oriental Library, this book was published on 15th August 1908. It may be recalled that 40 years later, the new era of independent India commenced on the 15th August itself. The forgotten details of the

almanac related to the *yajnas* of the vedic times as well as the epoch on the basis of the *Vedas* and the contemporary history and culture of the western countries-have been written by Sastry in this small booklet.

Vedangajyautisha

This was the work of about 8th Cen. B.C. It was an ancient and obscure treatise on Vedic astronomy, which was edited, translated and elucidated by Sastry. It was published in 1936. There are 44 Sanskrit verses in the original text comprising the astronomical details as found in the *vedas*. Having published this, Sastry wrote a lucid commentary for it entitled *Deepika*, in which it has been explained. This commentary is also in Sanskrit. The English translation of the original and explanation is in the beginning of the book. L.D. Barnett, A.B. Keith, J.W.T. Mason and others have expressed their profound appreciation for this book. Mason has applauded Sastry's genius as a translator and has stated that it is an astonishing feat. He has also praised his deep knowledge of Jain astronomical works and has also added that it is a matter of great relief, scholars like Sastry, who are capable of interpreting ancient subjects are still living in this world. His few words on this text deserve serious attention. The essence of it it may be put in the following words:

Ancient sects of primordial age had unique insight in to the truths of life. Now, we have almost lost it. It is true that science has achieved so many wonders in order to make us understand the outwarldly values of our life and to over come our physical ailments. But, for the people of the ancient times who had not cared only for the superficial affairs, the inner significance and inner truths must have been self generating.

The ancients have expressed these truths as they understood them; but they do not seem to be clear for us on all occasions. Now it is imperative on our part to interpret it, to suit the modern sensibility.

Drapsa: The Vedic cycle of eclipses - a Key to unlock the treasures of the Vedas.

This work was published in 1938. This book is about Vedic almanac and different cycles of time measures etc. The purpose here also is, the calculation of day, year, era and epochs as well as examination of problems related to Vedic numerals. Dr. Sastry has said that on the basis of available suggestions in ancient Jain works of astronomy and Handbook of astronomy by Chambers, the research has been carried out on some of the Vedic astrological problems. At that time, the then professor of Sanskrit in Oxford University Mr. F.W. Thomas appreciated and encouraged Sastry's work; Prof. L. D. Barnett, Prof. Sten Konow, Dr. E. Abegg and other eminent scholars showered praises on the greatness of the work.

Eclipse – Cult in the Vedas, Bible and the Koran

This book is in the form of a supplement to *Drapsa*. This was published in 1940. The idea of the eclipse behind the symbols of war between *Devas* and *Asuras* etc., the background of the legendary history of puranas and epics, the philosophical elucidation of Vedic numerals are dealtwith, in this work. In this deliberation, the Bible and the Koran have been considered along with the *Vedas* and it has been alluded to expose commoness among them. Dr. A. Venkatasubbaiah, appreciating this book for its independent scholarship and reflections, says that this work draws our attention for a still more exhaustive comparative study of the *Vedas* the *Bible* and the *Koran*.

All the above works deal with Dr. Sastry's in grasp in the study of the *vedas* and astronomy. Apart from these, he has authored other works also. A few words can be said about those works:

Evolution of Indian Polity

This book is a compilation of ten lectures(written) delivered in Calcutta University in 1919. It was published by the same University in 1920. In this work ancient Indian administrative system and various levels of the administrative set-up are critically examined on the basis of the *Vedas*, legends, *Taittiriya Samhita*, *Arthashastra*, the *Mahabharata*, inscriptions, *Jainagama* works etc., Opinions of some other scholars have also been discussed.

A few words from the foreword can be cited here: "It is true that we regret to miss such sweet and bewitching words as Equality, Fraternity, Liberty, self-determination and the like in the political history of India. Yet I am inclined to believe that such religious and moral restrains as self-denial, conquest of the six Passions, Preparation for *Moksha* or *Nirvana* by renunciation frequently preached to the prince and the poor alike were scarcely less powerful than the constitutional and legal checks of Western nations of modern times. How far the modern constitutional checks based more on utilitarian than ethical principles are preferable to religious or philosophical restraints which are applicable to all is a question yet to be decided."

In order to sensitize north Indian readers liberal view, love of citizen, faith in *dharma*, devotion to god found in the administration of South Indian kings, Sastry had written a few words at the end of his foreword to his work.

This book is dedicated to Sri Asutosh Mookerjee, who had invited Sastry to Calcutta to deliver these discourses. Sastry had eulogized Sri Mookerjee's generosity and love for scholarship with great humility and reverence.

Meena athava Sainikana bhagya

This is the translation of one of the plays of Lessing, a German poet. This has been published in 1921 as the 88th book in the *Karnataka Granthamale*. Being a noted scholar, it is really a specialty of Sastry to have made-up his mind to write simple literature also. It can be seen that a foreign play adapted to suit the ethos of our land with Indian names for the various characters.

South Indian Inscriptions – Volume 9, Parts 1 & 2

Dr. Sastry has edited Parts 1&2 of the 9th Volume of the S.I.I on the request of Archaeological Department of the Government of India. These have been published in 1939 and 1941 respectively. Sastry carried out this stupendous task with the assistance of Sri N. Lakshminarayana Rao who was there as the epigraphical assistant, in the department. The Kannada inscriptions were found and collected from the different places, like Bellary, Ananthapura, Kadapa, Karnool, Coimbatore, Chittor, South Canara — which belonged to the then Madras presidency, were included in a collection published in these volumes. The unique editorial work of this volume has earned him lasting fame and in the field of the study of epigraphy.

As a contributor to learned journals and volumes

The variety of literary works of Dr. Shamasastry can be understood from the perusal of his various research articles. Some of the journals which published his articles are as follows:

Annals of the Bhandarkar Oriental Research Institute, Puna;
Proceedings of the All India Oriental Conference
Calcutta Review, Calcutta;
Half yearly Journal of the Mysore University, Mysore;
Indian Antiquary, Bombay;
Journal of the Bombay Branch Royal Asiatic Society, Bombay;
Journal of the Cama Oriental Research Institute, Bombay;
Journal of the Ganganath Jha Research Institute, Allahabad;
Journal of the Royal Asiatic Society, London;
Journal of the Indian Society of Oriental Arts, Calcutta;
Astrological Magazine, Bangalore;
New Indian Antiquary, Bombay;
Poona Orientalist, Poona
Quarterly Journal of the Mythic Society, Bangalore;

Prabuddha Karnataka, Mysore;
Jayakarnataka, Dharwar etc.,

Sastry's articles published in felicitation and commemoration volumes brought in the name of Scholars are as follows:

B.C. Law, R.K. Mookerjee, Kuppuswamy Sastry, M. Winternitz, P.V. Kane, Jha, Asutosh Mookerjee, D.R. Bhandarkar, F.W. Thomas, Harbilas Sarada, S.K. Aiyangar, K.B. Pathak, C.R. Reddy.

A short list of articles is as follows (those that are in bold letters are actual titles and they are included in the present volume, *vibrant India*.):

1. *Topics|Articles related to social conditions prevailing in Ancient India and her administrative systems:*

Polity of Ancient India; Land acts and and types and methodology of tax laws; Chanakya's land and revenue system; **The Home of the Ancient Hindus and their Policy of Racial Fusion**; Glimpses of the ancient Indian social sciences; Economic view of the Ancient Indians; Rights of Women in *Sruthis*; **The Brahman Hierocracy and the Body Politic** in ancient Hindu states;**Evolution of Castes**; **Raghunath Varman on the Right of the Low-castes People to Brahma–Knowledge**; **Domestic Rites of the Jainas**; **Dice-play on the First day of the White half of the Month, Kartika** etc.,

2. *Topics|Articles related to language and script:*

Theory of the origin of the Devanagari Alphabet; *Gudhalekhya* etc.,

3. *Topics|Articles on date, place, authorship and literature:*

The Date of Abhinava Kalidasa; **Sivananda's Life of Appayya Dikshit**; **Jaina Teachers and their Contemporary kings**; **The *Vivekasara* of Shankara-nanda**; **The Author of *Gadayuddha***; **The Life and work of Keshiraja**, time of *Arthashastra*; **A Note on the Supposed Identity of Vatsyayana and Kautilya** etc.,

4. *Topics|Articles on Philosophy:*

Works(Books) on ancient Indian Philosophy; Truth in Ancient Judicial system; **The Conception of Sin in the *Vedas***; **Avidya – Psychology**; **The Concept of Mukti in Indian Philosophy**; **Political Philosophy of the Hindus** etc.

5. *Topics|Articles on Scope of Vedic Astronomy, its form and uses:*

The meanings of symbols of gods and goddess; Vedic almanac; *Veda* and science; Adityas; Indra as conceived by the Iranians; The origin (basis) of weeks; ***Vyushthi* or The New Year's Day**; *Purva rashi* of Vedic astrology; **Ayodhya, the City of the Gods**; **Rohita: A Sure Test of the Vedic Eclipse–cycle**; **Test of the Vedic Eclipse – cycle**, Daniel dream in the *Vedas*; Vedic time cycle of 33 years; Indian eclipses and planets; Kalpa or world cycle; Kapila eclipse; **Vedic chronology**; *Dya vaprithvi*. (The sky and the earth); Three steps of Vishnu; **The Ashvins;** Vishnu's incarnations; **Indra's Wars with Shambara; The Birth of the Panchajans; Panchajans;** Indra and Ahalya; **The Ribhus and the Four Soma-cups;** *Vayu and Visha - kapi;* Agni (fire) in the vedas; vedas and planets; Planets in Vedas; The origin of Panchajanas; **Vedic Gods** etc.

6. Topics/Articles on Indian history and culture:

   The Eras of Vikrama and Shalivahana; Daily rituals of Jains; Tamil Sangam period; Kuna pandya-Tirujnana Sambandhar; Trumangai Alwar; habitat of ancient Indians and other racial assimilation; Vikramaditya era and the lineage of Gardabhilas as well as Murundas; The culture of Dravidians; distinctive *nature* of temple architecture; *vedic scriptures*;**The Date of *Arthashastra;* A few Inscriptions of the Ancient Kings of Anegundi**;**Malnad Chiefs** etc.

7. Translation of the work: ***Suryaprajnapti***

   It is a book of astronomy in Jaina *traditions*; its author is Mahaviracharya. There are 20 chapters in this book written in Prakrit language; having translated it in brief, Sastry published it in the quarterly issues the Mythic Society of Bangalore (1927, 28) brought out by, in its esteemed Journal.

Dr. Sastry's Kannada articles do not exceed half a dozen in all, published in the *Prabhuddha Karnataka*, *Jayakarnataka* and *Vagbhushana Anadyadi Dampati* is the script of his speech in Sanskrit in the fourth colloquium of *pandita mandala*. '*Daniel swapnaha vedamoolo va* ' is one other article in Sanskrit published in the magazine of Maharaja Sanskrit Pathashala.

It is as a result of his unstinting studies, contemplation and research ability shown at various stages all through his professional life that he has written all these articles. Apart from studying, research and writing he had no other habits at all. Even during his old age, with the same enthusiasm, that is found natural in youth, he would select new subjects and engage himself in research work. We get a feeling that he knew English, Sanskrit, Prakrit, Kannada, Greek, and German languages. He learnt Greek language in order to identify the words other than Greek used in a Greek drama written on the bark

which belonged to the second century A.D. and found in a place called oxyrhynchus. He would become highly enthusiastic whenever he began learning new subjects and languages. During his walking sessions he would ponder over what all he studied sitting in his house or office. He had that tenacity and patience and earnestness to concentrate on a given subject for months together and work on it till the end. It was only due to this perseverance and earnestness that it was possible for him to discover, edit and translate Kautilya's' *Arthashastra*. Whenever learned people pointed out mistakes he rectified them in his revised version. He never felt that whatever he wrote was correct and need no change to be effected at any time. Many a time it was his fond intention to take up new areas in which work had not yet been commenced and begin discussions on it. He was never arrogant and felt that his word ought to be the last word on any subject.

He wished to learn things from everyone whether young or old without discrimination. When others criticized and pointed out mistakes in what he wrote, he would simply smile and correct them without losing his patience. He has said on many occasions that interested persons should correct the mistakes that might have been committed by him due to haste or lethargy and continue their studies in the areas of their choice. He was of the opinion that 50 years of his service to the society was not at all sufficient. He believed that he had to live for some more time to be able to complete a grandiose achievement. Dr. Sastry had very strong memory as well as retentive powers like that of honoured orthodox, traditional Indian scholars. Similarly, he had all the attributes of a modern scholar trained in the western tradition with liberalism, critical acumen and also an astounding capacity for balanced thinking. He had the qualities of a born teacher. As literary adventurist, he exuded self-confidence and irrepressible optimism. Wherever he spoke or cited views and opinions of those scholars he had admired and held them esteem. He used to acknowledge with gratitude the help that he received from them.

He used to express disagreements with scholars vehemently and courageously but with disarming humility. He did not spare sporadic, destructive and distorted critical views of western writers who lacked inwardness in understanding issues relating to Indian history and culture.

A fine illustration can be found in the way he decided the authentic origin of *Devana-gari* script and established that it was not foreign in origin but indigenous, on the basis of technical literature of Sanskrit and other evidences.

The Polestar among scholars

Dr.R. Shamasastry was one of the greatest scholars of our past generation. Greatness of this exceptional man was his simplicity. Though titles, positions and awards were heaped on him, he did not feel placated. On all occasions he showed his humility

and cordiality to everyone equally. “In no work are there defects without merits or merits without defects. Let the merits be to the credit of Inspirer; and let the defects heavily fall on my own head” – averred Sastry with humility in a selfcomposed poem(Dedication: Evolution of IndianPolity).

The humility and simplicity of this polyglot phenomenon and scholar gained him the friendship of many erudite scholars of national and international repute. He had contacts with myriad scholars of our country viz., Rabindranath Tagore, B.N. Seal, R.K. Mookherjee, Harprasad Sastry, R. Narasimhacharya, A. Venkatasubbaiah, N.P. Chakravarthy, A.A. Krishnaswamy ayyangar, B.A. Saletore, Padam S.M. Godrej and others. He also had contacts with foreign scholars like Vincent Smith, L.D. Barnett, Sir Richard Temple, F.W. Thomas, Sten Konow, R. Harnle, A.A. Macdonnel, A.B. Keith, Henry Trumanwood, J. Jolly and others.

Many of them have expressed their critically analysed appreciation of Sastry’s work and paid tributes to his excellence. They corresponded with him on various occasions.

Mahadeva Desai, the personal secretary of Mahatma Gandhiji has reported briefly Sastry’s meeting with Gandhiji on an occasion on 11th August 1927. Dr. Sastry met Gandhiji when he was at Nandi Hills near Bangalore. If we carefully study a part of that report, it becomes obvious to us the extent to which he was dedicated to the values of Indian culture. Desai’s narrative is as follows (here, retold):

“Sastry came to Gandhiji to present him a copy of the *Arthashastra* and the annual report of that year of Mysore Archaeological Department for which he himself was the Director. Pandit Dharmananda Kosambi learnt ABC of English after he had mastered *Pali*; as Sri Kosambi did Sastry also learnt English after his Sanskrit education.

Sastry told Gandhiji “Self-sacrifice was a dictum for ancient Hindus. Now also if cultured centres like ancient *Viharas* come up, everything will be alright. Ashoka had Upagupta, Pushyamitra had Patanjali, and Kumarapala had Hemachandra. Vidyaranya was there to advice and inspired, to the kings of Vijayanagara. Now we too want an army of highly cultured, selfless, educated men to proclaim the ideal of self–sacrifice wherever we go. We too will then acquire lasting peace and happiness through it.”

Gandhiji mischievously smiled and asked “Yes! But who will bell the cat?”

“If it was possible for the Buddha to establish 5,000 *viharas*, then why not now?” – Sastry asked Gandhiji. Gandhiji replied “It is not possible for me. Though I do not doubt

my ideals, I do not know to execute your idea. Neither I have adequate *tapas* and *siddhi* enough for it. And how were those days? Life was frugal simple, boys were not corpses, bodies of today's men have gone sick and moreover the minds have become rotten. It is my desire to reconstruct something with these pieces."

Sastry said instantly "You are the right person for it." He had grit in his tone, which was in keeping with a true scholar.

Continuing the conversation, Gandhiji said that he had been accomplishing the desired ideals of Sastry in a new way in the affairs of his *ashram*.

At least for some, it might seem that Sastry's desire was to rejuvenate the ancient *viharas* of the age of the Buddha. But anybody can understand by the conversation with Gandhiji that Sastry's strong desire was, that the Indians must lead a life of high culture and ethics.

Simple living, high thinking was Sastry's life principle. When he was 30–35, his physical health had gone awry. He spent his life with simple diet. But still he continued his studies and research work with self-confidence and love of scholarship. His personality was evolved earlier by the patronship of the Dewan Sir K. Seshadri Iyer and later by the magnanimity of Sir Asutosh Mookerjee, the Vice-Chancellor of the Calcutta University. Sastry led a life of fulfillment till the age of 77. On 23rd January 1944, he left for his heavenly abode at his residence *Asutosha* . It will be no overstatement to say that Sastry became a Polestar (*Dhruvanakshatra*) in the galaxy of Indian scholars, for his peerless achievements in Indian history and culture

***

It is now a hundred years since the first complete edition of Kautilya's *Arthashastra* was published (1909–2009). It was the late Dr. R. Shamasastry who was the first, in the early part of the 20th century, to have recognized its importance as one "which changed the entire direction of Indic studies." It was also he who ably edited and published it and brought it to the notice of the world by translating it into English. Later the work saw many editions and prints. Translations appreared in English, French and German. Many academic institutions of the world, scholars and those interested in political science and economics were struck with surprise, studied it and derived benefit from it. The ancient indian social and political organizations and their constitution became to a large extent clarified by the publication of this work and the brilliant imaginative and intellectual genius of india gained world wide recognition. The fame of Karnataka and the fame of Mysore Oriental Research institute came to occupy the foreground. The person who was

the first to have led to this achivement was Mahamahopadhyaya, Arthashastravisarada, Dr. R. Shamasastry.

It is quite timely that the Gokhale Institute of Public Affairs, Bangalore, should have organized a programme in memory of the centenary of this work's publication.

Making use of this occasion a collection of about 44 research articles, excepting one book-review and one letter of correspondence, which Dr. Sastry had himself published during his lifetime, is now being published. This is a happy venture. Depending upon an encouraging occasion in the future, one or two volumes of Sastry's stray writings may be published.

The name and fame which the editing and reprints of the *Arthashastra* brought to Dr. Sastry is only one facet of his achivements. In fact, his achievement is still greater. The details of it have been already given to some extent in the first part comprising his life and works.

The articles in the present volume were published in established academic journals in English and in commemoration volumes presented to honour senior scholors. These writings are of a high standared written in accordance with the high academic ideals of the time and in tune with the tireless curiosity of academic research.

Some of the early writings are about the dieties of the Vedic age, chronology, semantics, concepts of vedic hymns, beliefs and mythical incidents. These are thoroughly discussed with extensive quotations and calculations of astronomy. While doing this, Dr. Sastry advances agruments depending on the strength of his own scholorship and personal discrimination without, excepting rarely, criticising the opinions of foreign scholors. In this he reminds us of another scholor of his time, Dr. A. Venkatasubbaiah.

Though matters of secular Sanskrit literature do not appear to any larger extent in this volume, some topics of special study are discussed here. They are related to *Shastra*. The authorship and time of composition of the *Arthashastra*, the question whether Kautilya and Vatsyayana are identical, introducing the *Vivekasara* of *Acharya* Shankarananda, a leading monk of the *Advaitic* sect, the time of Abhinava Kalidasa of the *Vellala* lineage, who was the author of contemporary historical work, *Rajashekharacharita*, Appayya Dikshita's biography written by his pupil Shivananda – these topics are included here. The abridged translation of the Prakrit work, *Suryaprajnapti*, consisting of 20 lessons about astronomy, taught by Vardhamana Mahavira to his pupil Gautama, reveals Dr. Sastry's wide interest. In truth, it is a lengthy article of the size of a book.

Another area of Dr. Sastry's interest is the study of the socio-religious affairs. While engaged in identifying the geographical habitats of ancient India he has brought to light many curious details of the nature to the racial fusion of the local community of people including the Brahmins and the Jains. Primarily he has discussed in detail the background of the class (*varna*) organization. In this regard the treatment of inter–caste marriage and co-dining are noteworthy. While dealing with the class–organization, two articles, critically assessing the assumptions of foreign scholors in this regard, discuss how this organization has grown from pre-historic times and from the Vedic age till the age of the *Puranas* and the commnetaries on poems are relevant even today. While relating that the medieval thinker, Raghunatha varma, has stated that even the non-Brahmins have the right to *Brahmajnana*, another article traces the manner in which this discussion has comedown from the Vedic age. In this article are found many details which may be of use to modern liberals and rationalists. Another short article here concerns itself with the practice of playing dice on the *Balipadyami* day and its inner meaning is explained. In another essay dealing with the roles played by kings and brahmins in administration are found the details of the administrative procedures of ancient India.

In some essays on philosophy, appear the Hindu view of life, the course of political thought, the nature of salvation and its nature in Jainism and Buddhism, and how it is a matter of belief. The much debated issue of *Advaita*, *Avidya* or *Maya*, the contents of *Prabhavikacharita*, a collection of the lives of Jaina Saints, and the description of the sixteen Sacraments of Jaina householders as given in the digest of Brahmasuri, constitute the contents of this section.

History is included in the variety of Dr. Sastry's interests. The attempt to show, by stating that the historically famous Ayodhya is the world of the Gods, that the name of the place and the Ramayana too are related to the Zodaical myth is astounding. Here also Dr. Sastry's Knowledge of astronomy is patent. Some inscriptions which tell us of the pre-history of Anegundi famous through the history of Vijayanagara are given here with the text and translation. As known through local chronicles which appear to have been composed during circa 1820, the abridged versions of the history of chieftans of these historically famous places like Sagara, Gerusoppe, Sogani Agrahara of Shivamogga, Bilagi, Belagutti, Magadi, Santebennur, Hoddiggere, Chitradurga etc. This can be said to be a service helping the re-construction of the history of the minor dynasties of Karnataka.

Dr. Sastry, who is mainly interested in considering matters in the context of the whole of India, has done very little concerning the problems of Kannada literature. Only two such essays are included in the present volume. One concerns the authorship of poet

Ranna's *Gadayuddha*. The other about the life and work of Keshiraja, the grammarian. In the first, attempt has been made to show that the Rannas of *Ajitapurana* and *Gadayuddha* are different. This essay appears to have been written to support the argument of Pandit Srinivasarangacharya. But the arguments here are controversial, and weak. Now it has already been established through strong external and internal evidences that the author of both the works is a single Ranna. The second essay concerns Keshiraja. Even this may be said to have been written to support the argument of the previously mentioned Pandit. Mainly the topic here is the presentation of the thesis that Keshiraja is a Brahmin and not a Jain. This idea may be said to be, to a large extent, correct; Scholors of the new generation are supporting it.

Dr. Sastry was one of the foremost scholors of his day. His scholorship and experience great, his interests wide and varied. His interest in Vedic, Jain and Buddhist philosophy was great. He would discuss any topic deeply and logically and sees to it that his discriminations are critically sound. He provides illustrations and quotations in plenty from the original sources in support of his stand and judgements. He provides their translation which everyone can understand.

With scholorship in Sanskrit acquired through the traditional system he has exhibited the progressive critical power and attitudes earned from English education and knowledge of the English language. Thus, although he took stand and published his judgements based on Sanskrit sources, his researcher's point of view is liberal enough to make them acceptable in accordance with the scientific outlook. He does not entertain hearsay, blind belies and mythological faith. He is an ideal scholor and researcher. Hereby I salute his memory.

It is a matter of pride that this volume is being published by the Community Study Centre, Mysore,

I have carried out the editorial work of this volume in association with Dr. B.S.Pranatartiharan, the founder of the Community Study Centre. But for his self, this work would not have been accomplished. He deserves special thanks by the *Sanketi* community and those interested in the community studies on the whole for having publihsed (through the Community Study Centre) many valuable works pertaining to the *Sanketi* community.

In collecting Dr. Sastry's writings from various sources, Smt. V. Ambika Devi, the librarian of the office of the Chief Epigraphist, Government of India has been of great help. The first section of the English translation of the Introduction has been ably prepared

by Smt. Sumana Viswanath, lecturer in English, Kuvempu First Grade College, Mysore, whose helping hand can be seen in other ways also. I am extremely thankful to Prof. N. Balasubrahmanya, retired professor of english, University of Mysore and Chief editor, The Mysore University English-Kannada Dictionary for translating this second section of the introduction in a very short time. Sri N.S. Sharadaprasad, (Rtd. Translator, Kuvempu Institute of Kannada Studies) has helped in going through the proofs.

The persons who prepared the material for photo-typesetting process is Prof. C.S. Yogananda, Prof. and Head of the department of Mathematics, S.J.C.E, Mysore and his associate Sri D. Shivashankar. It is a happy event that the work though rapidly done, has been done quite creditably. The printing has been beautifully carried out by Sri Ashok Kumar of the famous printing press, *Lakshmi Mudranalaya*, of Bangalore. My hearty thanks to all of them.

Mysore **T.V. Venkatachala Sastry**
06-06-2009

c Table of Contents

d. Extracts and Opinions

OPINIONS OF EMINENT ORIENTAL SCHOLARS ON THE IMPORTANCE OF THE ARTHASHASTRA

Dr. F. W. Thomas, Librarian, India Office Library, London, writes(on p.466, F.R.A.S., for April, 1909): "Professor Hillebrand, has recently drawn attention to the importance of the work named portions of which have been translated by Mr. Shamasastry in the MYSORE REVIEW,for 1906-1909, and the INDIAN ANTIQUARY for 1905, articles which have been consulted by Mr. Vincent Smith for his HISTORY OF ANCIENT INDIA (see 2nd Ed., pp. 120n., 1J2n;). Having been favoured by Mr. Shamasastry, through Mr. Vincent Smith, with an opportunity of persuing the proof-sheets of an edition of the text, which is to appear in .the Mysore Government Oriental Series, I can testify to the great value of the work, which sheds more light upon the realities of ancient India, especially as concerns administration, law, trade, war, and peace, than any text which we possess, and which will enrich our lexica with an immense accession of technical and other expressions, belonging to all departments of life."

In his Preface to the 2nd edition of ASOKA, Mr. Vincent Smith writes:

"The description of the Maurya empire and administration in Chapter I I has been revised with special regard to the discovery and partial publication by Mr. R. Shamasastry of the ancient treatise on the art of government, ascribed to Chanakya or Kautilya, the minister of Chandragupta Maurya."

Again in a note on page 83 of the same work, Mr. Vincent Smith says:

"Mr. R. Shamasastry is entitled to the credit of bringing to public notice for the first time a manuscript of the *Arthashastra* and an imperfect manuscript of a commentary by Bhattasvami on the same, which have been deposited by a Pandit in the Mysore Government Oriental Library."

ln his letter, dated November 23, 1908, to the translator, Dr. J. Jolly says:

"l must say that this is one of the most interesting and valuable Sanskrit works ever procured. As a faithful and life-like representation of Indian institutions and modes of government, it is without a parallel. It throws a great deal of new light on Indian constitutional history, and on the development of Indian Law. You may be sincerely congratulated on having undertaken this important work and conducted it thus far ......"

Dr. L. D. Barnett, Professor of Sanskrit, University College, London, writes, in a letter dated 7th September, 1909, addressing the translator:

"......The latter (the *Arthashastra*) is evidently a work of the highest importance for the study of Indian history and law, and I gladly offer my tribute of admiration for the industry and skill with which you have approached the task of translating it..."

In his letter dated 26th January, 1944, to the author's son, Dr. M. H. Krishna, M.A.,D.LIT., says:

".. ... He was a great scholar of International reputation and an able and indefatigable worker who made Mysore famous in the world of Oriental scholarship......"

OTHER WORKS BY THE SAME AUTHOR

DRAPSA:

The Vedic Cycle of Eclipses

A Key to unlock the Treasures of the Vedas

"I owe my inspiration to no less an authority than Chambers who, in his Hand-book of Astronomy, interpreted exactly similar number-puzzles of the Bible as those referring to the cycle of eclipses and other self-correcting luni-solar cycles. What is ascribed to the Vedic poets in the following pages is not a knowledge of mathematical astronomy which they never had, nor prediction of eclipses with mathematical accuracy which they never did. All that is claimed for them is a knowledge of the famous eclipse cycle which they seem to have been using in common with the Chaldeans, Israelites, and other contemporary nations. Like those nations they had luni-solar cycles expressed not merely in terms of a thousand and multiples of a thousand days with an intercalary month per thousand days, but also in terms of 5, 17, 19, 20, 30, 33, 57 and 60 years with two intercalary months per cycle of five years. But for the clue furnished by ancient Jaina Astronomical works and the Hand-book of Astronomy by Chambers, I could have hardly ventured upon such an interpretation of the Vedas " (Extract from the Preface)

OPINIONS

'It is a work of extraordinary learning and ingenuity, which I am sure will throw light on some obscurities in the Vedic texts.'

-Prof. L. D. Barnett, M. A., University of London.

'I have received your new book on Drapsa, the Vedic Cycle of Eclipses, which I have read with the highest interest. Hitherto I knew you only as the famous

discoverer and editor of the Kautilya Arthashastra, the text of which I have treated with my students several times. Now I see with admiration that you are also a thorough scholar in the difficult problems of Vedic astronomy and calendar, things of which European Indianists have very rarely a true knowledge.'

'I shall be glad to making students of Sanskrit acquainted with them; one of the two copies (of Drapsa) will be forwarded to the University Library of Zurich.'

-Dr. E. Abegg, Zurich (Switzerland).

'He has undoubtedly made a strong case for his new theory, a result of 30 years prolonged research and contemplation which will call for the most careful investigation by those who are experts in the obscure field of Vedic astronomy. The author deserves our commendation for his valuable contribution to the Vedic literature'

-The Bombay Chronicle.

VEDANGAJYAUTISHA

A Vedic Manual of Astronomy, 8th century B C.
(According to the Late Swamikannu Pillai)
With Sanskrit Commentary and English Translation

"It is very curious to find that while the Brahmans took to the Siddhanthas leaving the rough method of calculation of the Vedangajyautisha in spite of their persistent attachment to whatever is ancient, the Jainas should preserve the Sacrificial calendar in spite of their revolt against the Vedic sacrifices. The system of the Vedangajyautisha is almost exactly reproduced in the Jaina astronomical works.

"The reading of the text is as found in Dr. Thibaut's edition and the obscure verses are explained on the analogy of the problems and formulas contained in the Jaina astronomical works, the Suryapragnapti, the Jyautishkaranda and the Kalalokaprakasha. The Sanskrit text is accompanied by a commentary in Sanskrit. There is also an English translation and the transliteration of the text in Roman script." **(Extract from the Preface)**

'It is a work of very high scientific value and I congratulate you on its completion.'

-Prof. L. D. Barnett, M.A., University of London.

'The use which you make of Jaina evidence is very important and so far as I can judge you have made out a strong cae for your new version of the text which will call for

the most careful investion by those who are experts in the abstruse field of Vedic and later Indian astronomy. I congratulate you, therefore, on this addition to your many services to the cause of Sanskrit Scholarship.'

-Dr. A. Berriedale Keith, M.A., University of Edinburg.

ECLIPSE-CULT

in the Vedas, Bible, and Koran

A Supplement to the "Drapsa"

"The Eclipse-Cult in the Vedas, Bible, and Koran as a supplement to the author's earlier work 'The Drapsa.' The mathematical aspect of eclipse-cycles is treated at great length and eclipse-tables have been appended. The author's theory is based on *the* text in the Taittiriya Aranyaka in which the colours and frequences of eclipses are described in the same terms as in the Panchasiddhantica of Varahamihira and the Suryasiddhantica.

A perusal of the work will amply repay the reader by providing him with a fund of useful information which he could not have collected for himself so readily from the myth love of the Aryans or modern astronomical treatises. Vedic symbolism is a neglected aspect of Vedic culture. All honour is due to Dr. R. Shamasastry for focussing our attention on this recondite chapter of Vedic ritualism."

e ಗ್ರಂಥದ ಬಗೆಗೆ

ಡಾ. ಬಿ. ಚನ್ನಕೇಶವ
ಸಂಸ್ಕೃತ ಪ್ರಾಧ್ಯಾಪಕರು (ವಿಶ್ರಾಂತ)
ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ವಿದ್ವತ್ತ್ವಂಚ ನೃಪತ್ವಂಚ ನೈವ ತುಲ್ಯಂ ಕದಾಚನ |
ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ಸರ್ವತ್ರ ಪೂಜ್ಯತೇ || ಸುಭಾಷಿತಾವಲೀ

ವಿದ್ವತ್ತು ಮತ್ತು ನೃಪತ್ವ (ಪ್ರಭುತ್ವ) ಇವೆರಡೂ ಸಮಾನವಾದುವುಗಳಲ್ಲ. ರಾಜನು ತನ್ನ ರಾಜ್ಯದಲ್ಲಿ ಪೂಜಿತನಾದರೆ ವಿದ್ವಾಂಸನು ಎಲ್ಲೆಡೆಯೂ ಪೂಜಿತನಾಗುತ್ತಾನೆ.

ಇಪ್ಪತ್ತನೆಯ ಶತಮಾನದಲ್ಲಿ ನಮ್ಮ ನಾಡು ಕಂಡ ಅತಿಶ್ರೇಷ್ಠ ಸಂಸ್ಕೃತ ವಿದ್ವಾಂಸರಲ್ಲಿ ಪುಣ್ಯಶ್ಲೋಕರಾದ ರುದ್ರಪಟ್ಟಣ ಶಾಮಾಶಾಸ್ತ್ರಿಗಳು ಅಗ್ರಗಣ್ಯರು ಹಾಗೂ ಅಗ್ರಮಾನ್ಯರು. ಸಂಸ್ಕೃತಮೂಲವಾದ ಭಾರತೀಯವಿದ್ಯೆಗಳಲ್ಲಿ ಅವರಿಗಿದ್ದ ಪಾಂಡಿತ್ಯ ಅಗಾಧವಾದುದೂ ಅಪರಿಮಿತವಾದುದೂ ಆಗಿದ್ದಿತು. ಇಂತಹ ಒಬ್ಬ ಬಹುಶ್ರುತಪಂಡಿತರು ನಾಲ್ಕಾರು ದಶಕಗಳ ಕಾಲ ಬರೆದಂತಹ ನೂರಾರು ವಿದ್ವಲ್ಲೇಖನಗಳು, ಸಂಶೋಧನ ಪ್ರಬಂಧಗಳು ಪ್ರಪಂಚದ ಮೂಲೆಮೂಲೆಗಳಿಂದ ಪ್ರಕಟಗೊಳ್ಳುತ್ತಿದ್ದ ವಿದ್ವತ್ಪತ್ರಿಕೆಗಳಲ್ಲಿ, ನಿಯತಕಾಲಿಕಗಳಲ್ಲಿ, ಸಂಶೋಧನ ಸಂಚಿಕೆಗಳಲ್ಲಿ, ಅಭಿನಂದನ-ಸಂಸ್ಮರಣ ಗ್ರಂಥಗಳಲ್ಲಿ, ಸಮ್ಮೇಲನಗಳ ವರದಿಗಳಲ್ಲಿ ಕಾಲದಿಂದ ಕಾಲಕ್ಕೆ ಬೆಳಕು ಕಂಡಿವೆ. ಹೀಗೆ ನಾನಾ ಕಡೆ ಚದುರಿಹೋಗಿದ್ದ ಅವರ ಅತ್ಯಮೂಲ್ಯ ಲೇಖನಗಳನ್ನು ಏಕತ್ರ ಸಂಗ್ರಹಿಸಿ, ಪರಿಷ್ಕರಿಸಿ, ವಿಷಯಾನುಸಾರ

ಜೋಡಿಸಿ ಗ್ರಂಥರೂಪದಲ್ಲಿ ಪ್ರಕಟಿಸುವುದು ಬಹುಶ್ರಮಸಾಧ್ಯವಾದ ಒಂದು ಅಸಾಧಾರಣಕಾರ್ಯವೇ ಸರಿ. ಪ್ರಕೃತ ನಮ್ಮ ಮುಂದಿರುವ 'ವೈಬ್ರಂಟ್ ಇಂಡಿಯಾ' ಇಂತಹ ಒಂದು ಅಸಾಧಾರಣವಾದ, ಬಹು ಪರಿಶ್ರಮದಿಂದ ಸಂಪಾದಿಸಿ ಕೊಟ್ಟಿರುವ ಶಾಮಾಶಾಸ್ತ್ರಿಗಳ ಲೇಖನಗಳ ಸಂಗ್ರಹ ರೂಪದ ಒಂದು ಸಂಸ್ಮರಣ ಗ್ರಂಥ. ಶಾಮಾಶಾಸ್ತ್ರಿಗಳು ಪ್ರಪ್ರಥಮವಾಗಿ ಬೆಳಕಿಗೆ ತಂದ ಕೌಟಿಲ್ಯನ ಮೇರುಕೃತಿ 'ಅರ್ಥಶಾಸ್ತ್ರ'ಕ್ಕೆ ನೂರು ವರ್ಷಗಳು ತುಂಬಿದ ಸವಿನೆನಪಿಗಾಗಿ ಈ ಗ್ರಂಥವನ್ನು ಸಮುದಾಯ ಅಧ್ಯಯನ ಕೇಂದ್ರದಿಂದ ಹೊರತರಲಾಗಿದೆ. ವಿದ್ಯಾಕ್ಷೇತ್ರದಲ್ಲಿ ಪುರಾತನ ಭಾರತೀಯರು ಮಾಡಿರುವ, ಎಂದೆಂದಿಗೂ ಕುಂದದ, ಮಾಸದ, ಅವಿನಾಶಿ ಸಾಧನೆಯನ್ನು 'ವೈಬ್ರಂಟ್ ಇಂಡಿಯಾ' ನಾಮಧೇಯವು ಸಮರ್ಥವಾಗಿ ಸೂಚಿಸುತ್ತದೆ. ವೇದಯುಗದ ಋಷಿಮುನಿಗಳಿಂದ ಪ್ರಾರಂಭವಾಗಿ ಮಧ್ಯಯುಗದ ವ್ಯಾಸ-ವಾಲ್ಮೀಕಿ-ಕಾಳಿದಾಸಾದಿಗಳಿಂದ ಸಮೃದ್ಧವಾಗಿ ಆಧುನಿಕಯುಗದ ಶಾಮಾಶಾಸ್ತ್ರಿಗಳಂತಹ ದಿಗ್ಗಜ ಪಂಡಿತರಿಂದ ಜೀವಂತವಾಗಿ ಸ್ಪಂದನಶೀಲವಾಗಿರುವ ಪರಂಪರೆಯನ್ನು ಈ ನುಡಿಗಟ್ಟು ರಮಣೀಯವಾಗಿ ಧ್ವನಿಸುತ್ತದೆ. ಜಗತ್ತಿನಲ್ಲಿ ಇಂದು ಇಂಡಿಯಾದೇಶವು ವೈಬ್ರಂಟ್ ಆಗಿ ಕಂಗೊಳಿಸುತ್ತಿದ್ದರೆ ಅದಕ್ಕೆ ಬಹುಮಟ್ಟಿಗೆ ಶಾಮಾಶಾಸ್ತ್ರಿಗಳಂಥ ಪುಣ್ಯಾತ್ಮರಾದ ಮೇಧಾವಿಗಳೇ ಕಾರಣವೆಂದರೆ ಅತ್ಯುಕ್ತಿಯಾಗಲೀ, ಅಲೀಕೋಕ್ತಿಯಾಗಲೀ ಆಗುವುದಿಲ್ಲ. 'ವೈಬ್ರಂಟ್ ಇಂಡಿಯಾ' ನುಡಿಯು ಬೇರೆಡೆ ಅಂದರೆ ಜನಸಾಮಾನ್ಯರ ಸಂದರ್ಭದಲ್ಲಿ ಭಾರತದ ಆರ್ಥಿಕ ಸಂಪತ್ತು, ಭೌತಿಕ ಅಭಿವೃದ್ಧಿಗಳನ್ನು ಸೂಚಿಸಿದರೆ ಇಲ್ಲಿ ಅಂದರೆ ಸಾರಸ್ವತರ ಸಂದರ್ಭದಲ್ಲಿ ನಮ್ಮ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಸಮೃದ್ಧಿಗೆ ಸೂಚಕವಾಗಿದೆ.

ಪೀಠಿಕೆ, ಅನುಬಂಧ ಮುಂತಾದವು ಸೇರಿ ಸುಮಾರು 530 ಪುಟಗಳಷ್ಟು ದೀರ್ಘವಾಗಿ ಹರಡಿರುವ ಈ ಗ್ರಂಥದಲ್ಲಿ ಶಾಮಾಶಾಸ್ತ್ರಿಗಳ 46 ಲೇಖನಗಳನ್ನು ಸಂಗ್ರಹಿಸಿಕೊಡಲಾಗಿದೆ. ಶಾಸ್ತ್ರಿಗಳ ಲೇಖನಗಳಲ್ಲಿ ಕಂಡುಬರುವ ವಿಷಯವೈವಿಧ್ಯ, ಹರಹು; ವಿಷಯಗಳನ್ನು ಅವರು ಆಧಾರಸಹಿತವಾಗಿ ಪ್ರತಿಪಾದಿಸಿ ವಿಮರ್ಶೆಗೆ ಒಳಪಡಿಸುವ ಪರಿ ಮನೋಜ್ಞವಾಗಿವೆ. ಗ್ರಂಥದಲ್ಲಿ ಕೊಟ್ಟಿರುವ ಲೇಖನಗಳು ಮುಖ್ಯವಾಗಿ ಈ ಮುಂದಿನ ವಿಷಯಗಳಿಗೆ ಸಂಬಂಧಿಸಿವೆ - ವೇದಗಳು ಮತ್ತು ವೇದಾಂಗಗಳು (ವೇದಾಂಗಗಳಲ್ಲಿ ಪ್ರಧಾನವಾಗಿ ಕಂಡುಬರುವುದು ಜ್ಯೋತಿಷ ಮತ್ತು ವ್ಯಾಕರಣ), ಸ್ಮೃತಿಗಳು, ಜೈನ-ಬೌದ್ಧ ಪುರಾಣ ಮತ್ತು ದರ್ಶನಗಳು, ಸಂಸ್ಕೃತ ಸಾಹಿತ್ಯ, ಲಿಪಿ ಮತ್ತು ಭಾಷೆ, ಅದ್ವೈತ ದರ್ಶನ, ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿ, ಶಾಸನಗಳು, ಮತ್ತು ಅರ್ಥಶಾಸ್ತ್ರ. ಲೇಖನಗಳನ್ನು ವಿಷಯಾನುಕ್ರಮವಾಗಿ ಹೀಗೆ ಪಟ್ಟಿ ಮಾಡಬಹುದು:

1.	ಪ್ರಾಚೀನ ಭಾರತದ ಆಡಳಿತಪದ್ಧತಿ ಮತ್ತು ಸಾಮಾಜಿಕ ಸ್ಥಿತಿಗತಿಗಳು	- 7
2.	ಕವಿ-ಕಾವ್ಯಗಳು, ಶಾಸ್ತ್ರಗ್ರಂಥಗಳು; ಇವುಗಳ ಕಾಲ-ದೇಶ-ಕರ್ತೃ ಇತ್ಯಾದಿ	- 8
3.	ಭಾರತೀಯದರ್ಶನಗಳಿಗೆ ಸಂಬಂಧಿಸಿದವು	- 4
4.	ವೇದ-ವೇದಾಂಗ, ವಿಶೇಷವಾಗಿ ಜ್ಯೋತಿಷ	-12
5.	ಭಾರತದ ಇತಿಹಾಸ, ಸಂಸ್ಕೃತಿ ಇತ್ಯಾದಿ	- 6
6.	ಸೂರ್ಯಪ್ರಜ್ಞಪ್ತಿ (ಜೈನ ಜ್ಯೋತಿಷ ಗ್ರಂಥ)	- 6
7.	ವಿವೇಕಸಾರ (ಅದ್ವೈತವೇದಾಂತ, ಶಂಕರಾನಂದ)	- 3
	ಒಟ್ಟು	-46

ಶಾಮಾಶಾಸ್ತ್ರಿಗಳು ಬರೆದ ಲೇಖನಗಳಲ್ಲಿ ಬಹಳಷ್ಟು ಪೂನಾ ಓರಿಯಂಟಲಿಸ್ಟ್ (Poona Orientalist) ಮತ್ತು ಮಿಥಿಕ್ ಸೊಸೈಟಿ ಜರ್ನಲ್ (Mythic Society Journal)ಗಳಲ್ಲಿ ಪ್ರಕಟವಾಗಿವೆ. ಇವುಗಳಲ್ಲದೆ ಮತ್ತೆ ಕೆಲವು ಬಾಂಬೆ, ಅಲಹಾಬಾದ್, ಕಲ್ಕತ್ತ ನಗರಗಳ ಪ್ರಾಚ್ಯವಿದ್ಯಾಸಂಶೋಧನಾಲಯಗಳು, ರಾಯಲ್ ಏಷಿಯಾಟಿಕ್ ಸಂಸ್ಥೆಗಳು,

ಮೈಸೂರು ವಿಶ್ವವಿದ್ಯಾನಿಲಯ, ಇಂಡಿಯನ್ ಆ್ಯಂಟಿಕ್ವೇರಿ, ಪ್ರಾಚ್ಯವಿದ್ಯಾಸಮ್ಮೇಲನಗಳ ವರದಿಗಳು ಮುಂತಾದವುಗಳ ಮೂಲಕವೂ ಬೆಳಕು ಕಂಡಿವೆ. ಶಾಮಾಶಾಸ್ತ್ರಿಗಳು ಜೀವಿಸಿದ್ದ ಕಾಲ ಭಾರತದ ವಿದ್ವತ್ ಕ್ಷೇತ್ರದಲ್ಲಿ ಅನೇಕ ವಿದ್ವನ್ಮಣಿಗಳು, ಪ್ರಕಾಂಡಪಂಡಿತರು, ಮಹಾ ಸಂಶೋಧಕರು ಜೀವಿಸಿದ್ದಂತಹ ಸುವರ್ಣಯುಗವಾಗಿದ್ದಿತು. ಮಹಾಮಹೋಪಾಧ್ಯಾಯರಾದ ಕುಪ್ಪುಸ್ವಾಮಿಶಾಸ್ತ್ರಿಗಳು, ಗಂಗಾನಾಥ ಝಾ ಮತ್ತು ಪಿ.ವಿ. ಕಾಣೆಯವರು; ಮಹಾವಿದ್ವಾಂಸರಾಗಿದ್ದ ಆರ್.ಕೆ. ಮುಖರ್ಜಿ, ಡಿ.ಆರ್. ಭಂಡಾರ್ಕರ್, ಕೆ.ಬಿ. ಪಾಠಕ್ ಮತ್ತು ಆಶುತೋಷ ಮುಖರ್ಜಿ; ಭಾರತೀಯ ಪ್ರಾಚೀನ ವಿದ್ಯೆಗಳಲ್ಲಿ ಅಪಾರ ಸಾಧನೆಯನ್ನು ಮಾಡಿ ಅಮೂಲ್ಯ ಸೇವೆಯನ್ನು ಸಲ್ಲಿಸಿರುವ ಪಾಶ್ಚಾತ್ಯ ಸಂಶೋಧಕರಾದ ವಿನ್ಸೆಂಟ್ ಸ್ಮಿತ್, ಫ್ಲೀಟ್, ಎಫ್. ಡಬ್ಲ್ಯು. ಥಾಮಸ್, ಎಲ್.ಡಿ. ಬಾರ್ನೆಟ್, ಸ್ಟೆನ್‌ಕೊನೊ, ಎ.ಬಿ. ಕೀತ್, ಎ. ಎ. ಮ್ಯಾಕ್ಡೋನೆಲ್, ಜೆ. ಜಾಲಿ ಮುಂತಾದವರು ಶಾಸ್ತ್ರಿಗಳ ಪರಿಚಿತವರ್ಗದಲ್ಲೋ, ಆಪ್ತವಲಯದಲ್ಲೋ ಇದ್ದವರಾಗಿದ್ದರು. ಇವರಲ್ಲಿ ಅನೇಕ ಪಂಡಿತರೊಡನೆ ಶಾಸ್ತ್ರಿಗಳಿಗೆ ಪತ್ರಸಂಪರ್ಕವೂ ಇದ್ದಿತು. ಮೇಲ್ಕಾಣಿಸಿರುವ ಮಹಾವಿದ್ವಾಂಸರ ಗೌರವಾರ್ಥ ಅಥವಾ ಸ್ಮರಣಾರ್ಥ ಕಾಲದಿಂದ ಕಾಲಕ್ಕೆ ಹೊರತರುತ್ತಿದ್ದಂತಹ 'ಅಭಿನಂದನ' ಮತ್ತು 'ಸಂಸ್ಮರಣ' ಗ್ರಂಥಗಳಲ್ಲಿ ಪ್ರಕಟವಾಗಿರುವ ಶಾಸ್ತ್ರಿಗಳ ಲೇಖನಗಳು ಆ ಗ್ರಂಥಗಳ ಶೋಭೆಯನ್ನೂ ಮೌಲ್ಯವನ್ನೂ ಹೆಚ್ಚಿಸಿವೆ.

'ವೈಬ್ರಂಟ್ ಇಂಡಿಯಾ'ದಲ್ಲಿರುವ ಲೇಖನಗಳು ಒಬ್ಬ ಶ್ರೇಷ್ಠ ವಿದ್ವಾಂಸರು ವಿದ್ವಾಂಸವಾಚಕರಿಗಾಗಿ ಬರೆದವುಗಳಾಗಿರುವುದರಿಂದ ಸಹಜವಾಗಿಯೇ ಅವುಗಳ ವ್ಯಾಪ್ತಿ ಸೀಮಿತವಾಗಿದೆ. ಶಾಸ್ತ್ರಿಗಳು ಲೇಖನಗಳಲ್ಲಿ ಪ್ರತಿಪಾದಿಸಿರುವ ವಿಷಯಗಳಲ್ಲಿ ತತ್ಪೂರ್ವ ಸಾಕಷ್ಟು ಜ್ಞಾನವಿಲ್ಲದವರಿಗೆ ಅವು ಸುಲಭಗ್ರಾಹ್ಯವಲ್ಲ. ಶಾಸ್ತ್ರಗಳು ಹೇಳುವ 'ಅನುಬಂಧ ಚತುಷ್ಟಯ'ಗಳಲ್ಲೊಂದಾದ 'ಅಧಿಕಾರಿ' (ಪ್ರತಿಪಾದ್ಯವಿಷಯವನ್ನು ಅಧ್ಯಯನ ಮಾಡಲು ಯೋಗ್ಯತೆ ಉಳ್ಳವನು)ಗಳಿಗೆ ಮಾತ್ರ ಇವು ಮಹಾಪ್ರಬೋಧಕಗಳಾಗಿವೆ. ಹೀಗಂದಮಾತ್ರಕ್ಕೆ ಈ ಗ್ರಂಥದ ಮಹತ್ತ್ವವನ್ನು ಕುಗ್ಗಿಸಿದಂತೇನೂ ಆಗುವುದಿಲ್ಲ. ಏಕೆಂದರೆ ಈ ಜಾತಿಗೆ ಸೇರಿದ ಇಂತಹ ಎಲ್ಲ ಗ್ರಂಥಗಳ ಪರಿಸ್ಥಿತಿಯೂ ಇಷ್ಟೇ ಅಲ್ಲವೇ? ಈ ಗ್ರಂಥದಲ್ಲಿ ಕಂಡುಬರುವ ಶಾಸ್ತ್ರಿಗಳ ಲೇಖನಗಳೆಲ್ಲವೂ ಉತ್ಕೃಷ್ಟಕೋಟಿಗೆ ಸೇರಿವೆ. ಅದ್ವೈತವೇದಾಂತಕ್ಕೆ ಸಂಬಂಧಿಸಿದ ಅವರ ಲೇಖನಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಜ್ಯೋತಿಷಕ್ಕೆ ಸಂಬಂಧಿಸಿದ ಲೇಖನಗಳು ಮಾತ್ರ ಅತ್ಯಂತ ದುರ್ಗಮವಾಗಿವೆ. ವೇದಸಂಬಂಧಿ ಸಂಶೋಧನೆಗೆ ಜ್ಯೋತಿಷವನ್ನು ಉಪಯೋಗಿಸಿಕೊಳ್ಳುವುದರಲ್ಲಿ ಶಾಸ್ತ್ರಿಗಳು ತಿಲಕರು ಮತ್ತು ಅರವಿಂದರ ಸಾಲಿಗೆ ಸೇರುತ್ತಾರೆ.

ಇಷ್ಟೆಲ್ಲ ಸಾಧನೆಗೈದ ಶಾಮಾಶಾಸ್ತ್ರಿಗಳನ್ನು ಪ್ರಪಂಚದ ನಾನಾಕಡೆಗಳಿಂದ ಪ್ರಶಸ್ತಿಪುರಸ್ಕಾರಗಳು ಹುಡುಕಿಕೊಂಡು ಬಂದದ್ದರಲ್ಲಿ ಆಶ್ಚರ್ಯವೇನಿಲ್ಲ. ದೇಶವಿದೇಶಗಳ ವಿಶ್ವವಿದ್ಯಾನಿಲಯಗಳು, ಸರ್ಕಾರಗಳು, ಸಂಘಸಂಸ್ಥೆಗಳು, ಸಂಶೋಧನ ಕೇಂದ್ರಗಳು ಸ್ವಪ್ರೇರಣೆಯಿಂದ ನಾಮುಂದು ತಾಮುಂದು ಎಂದು ಇವರನ್ನು ಸಮ್ಮಾನಿಸಿವೆ. ಮಹಾತ್ಮಾಗಾಂಧಿ, ರವೀಂದ್ರನಾಥ ಠಾಗೂರ್, ನಾಲ್ವಡಿ ಕೃಷ್ಣರಾಜ ಒಡೆಯರು, ರಾಧಾಕೃಷ್ಣನ್, ಬ್ರಜೇಂದ್ರನಾಥ ಸೀಲ್, ಆಶುತೋಷ ಮುಖರ್ಜಿ, ಎಫ್.ಡಬ್ಲ್ಯು. ಥಾಮಸ್, ವಿನ್ಸೆಂಟ್ ಸ್ಮಿತ್, ಎ.ಬಿ. ಕೀತ್, ಜೆ. ಜಾಲಿ, ಎಲ್.ಡಿ. ಬಾರ್ನೆಟ್ ಮುಂತಾದ ಮಹಾಗಣ್ಯರೂ, ವಿದ್ವಾಂಸರೂ ಇವರನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಇವರಿಗೆ ಸಂದ ಪ್ರಶಸ್ತಿಗಳಲ್ಲಿ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ನೀಡಿದ 'ಅರ್ಥಶಾಸ್ತ್ರವಿಶಾರದ', ವಾರಾಣಸಿಯ 'ಭಾರತಧರ್ಮಮಹಾಮಂಡಲಿ'ಯಿಂದ ಪ್ರಾಪ್ತವಾದ 'ವಿದ್ಯಾಲಂಕಾರ' ಮತ್ತು 'ಪಂಡಿತರಾಜ' ಪ್ರಶಸ್ತಿಗಳು ಬಹುಮುಖ್ಯವಾದುವು. ಇವುಗಳಿಗೆ ಕಲಶವಿಟ್ಟಂತೆ ಸ್ವತಃ ಬ್ರಿಟನ್ನಿನ ಮಹಾರಾಣಿಯವರು ಭಾರತಸರ್ಕಾರದ ಮೂಲಕ ದಯಪಾಲಿಸಿದ 'ಮಹಾಮಹೋಪಾಧ್ಯಾಯ' ಪ್ರಶಸ್ತಿ. ಇಂದಿನ ದಿನಗಳಲ್ಲಿ ಗೊತ್ತುಗುರಿ ಇಲ್ಲದೆ ನಾಯಿಕೊಡೆಗಳಂತೆ ಹುಟ್ಟಿಕೊಳ್ಳುವ ಸಂಘಸಂಸ್ಥೆಗಳಿಂದ ಹಣಕೊಟ್ಟು ಅಥವಾ ಮತ್ತಾವುದಾದರೂ ಉಪಕಾರದ ಹಂಗಿನಿಂದ ಪಡೆಯಬಹುದಾದ

ಮಹೋಪಾಧ್ಯಾಯ, ಡಾಕ್ಟರ್, ರತ್ನ, ಭೂಷಣ ಮುಂತಾದ ಪ್ರಶಸ್ತಿಗಳಂತಲ್ಲದೆ ಮೇಲ್ಕಾಣಿಸಿರುವ ಪ್ರಶಸ್ತಿಗಳಿಗೆ ತಮ್ಮದೇ ಆದ ಘನತೆಗೌರವಗಳಿದ್ದವು. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ನೀಡಲಾಗುತ್ತಿದ್ದ 'ಮಹಾಮಹೋಪಾಧ್ಯಾಯ' ಬಿರುದನ್ನು ಪಡೆದ ವಿರಳಾತಿವಿರಳ ಭಾಗ್ಯವಂತ ಪಂಡಿತರ ಪೈಕಿ (ಹಳೆಯ ಮೈಸೂರು ಪ್ರಾಂತದಲ್ಲಿ ಹೆಚ್ಚೆಂದರೆ ೨-೩ ಜನರಿದ್ದಿರಬಹುದು). ಶಾಮಾಶಾಸ್ತ್ರಿಯವರೂ ಒಬ್ಬರು. ಸಂಕೇತಿಗಳಲ್ಲಿ ಪ್ರಪ್ರಥಮರು, ಅದ್ವಿತೀಯರು. ಶಾಮಾಶಾಸ್ತ್ರಿಯವರು ಪ್ರಪ್ರಥಮವಾಗಿ ಕೌಟಿಲ್ಯನ ಅರ್ಥಶಾಸ್ತ್ರವನ್ನು ಮೈಸೂರಿನ ಓರಿಯಂಟಲ್ ಲೈಬ್ರರಿಯ ಮೂಲಕ ಪ್ರಕಟಿಸಿದ ಮೇಲೆ ವಿದೇಶಗಳಲ್ಲಿ ಮೈಸೂರುನಗರ ಮತ್ತು ಮೈಸೂರು ಮಹಾರಾಜರನ್ನು ಶಾಮಾಶಾಸ್ತ್ರಿಗಳ ಹೆಸರಿನಿಂದ ಗುರುತಿಸಲಾಗುತ್ತಿತ್ತೆಂದರೆ ಒಬ್ಬ ಪಂಡಿತನಿಗೆ ಇದಕ್ಕಿಂತ ಹೆಚ್ಚಿನ ಪ್ರಶಸ್ತಿ ಮತ್ತಾವುದಿದ್ದೀತು? ಅರ್ಥಶಾಸ್ತ್ರದ ಪ್ರಕಟಣೆಯು ಶಾಸ್ತ್ರಿಗಳಿಗೆ ಅಭೂತಪೂರ್ವವಾದ, ದಿಗಂತವಿಶ್ರಾಂತವಾದ ಕೀರ್ತಿಯನ್ನು ತಂದು ಕೊಟ್ಟಿತು.

ಈ ಗ್ರಂಥದ ಸಂಪಾದಕರಲ್ಲೊಬ್ಬರಾದ, ಸಮಕಾಲೀನ ಕನ್ನಡ ವಿದ್ವಾಂಸರಲ್ಲಿ ಅಗ್ರಪಂಕ್ತಿಯಲ್ಲಿ ಪರಿಗಣಿಸಲ್ಪಡುವವರಾದ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಈ ಗ್ರಂಥಕ್ಕೆ ೩೦ ಪುಟಗಳಷ್ಟು ದೀರ್ಘವಾದ ಒಂದು ಪೀಠಿಕೆಯನ್ನು ಬರೆದು ಇದರ ಉಪಾದೇಯತೆಯನ್ನು ಹೆಚ್ಚಿಸಿದ್ದಾರೆ. ಈ ಪೀಠಿಕೆಯಲ್ಲಿ ಶಾಮಾಶಾಸ್ತ್ರಿಗಳ ಜೀವನಚರಿತ್ರೆ, ಅವರು ಸಂಪಾದಿಸಿ ಓರಿಯಂಟಲ್ ಲೈಬ್ರರಿಯಿಂದ ಪ್ರಕಟಿಸಿದ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು; ಶಾಸನ ಮತ್ತು ಲಿಪಿತಜ್ಞರಾಗಿ ಅವರು ಮಾಡಿದ ಕೆಲಸಗಳು; ಅವರು ಹೊರತಂದ ವಾರ್ಷಿಕ ವರದಿಗಳು; ಅವರಿಗೆ ಸಂದ ಸಮ್ಮಾನಗಳು ಮತ್ತು ಪ್ರಶಸ್ತಿಪುರಸ್ಕಾರಗಳು ಮುಂತಾದ ಹಲವು ಹತ್ತು ವಿಷಯಗಳನ್ನು ತಿಳಿಸಿಕೊಡಲಾಗಿದೆ.

'ಸಮುದಾಯ ಅಧ್ಯಯನ ಕೇಂದ್ರ'ದ 'ಸಂಕೇತಿ ಅಧ್ಯಯನ ಮಾಲೆ'ಯಲ್ಲಿ ಪ್ರಕಟವಾಗಿರುವ ಈ ಗ್ರಂಥವು ಸಂಕೇತಿ ಜನಾಂಗದ ಅಧ್ಯಯನಕ್ಕೆ ಸಂಬಂಧಪಟ್ಟುದಲ್ಲ ಎಂಬ ಆಕ್ಷೇಪವು ಸಹಜವಾಗಿಯೇ ಕೆಲವು ವಿದ್ವಾಂಸರಿಂದ ವ್ಯಕ್ತವಾಗಿದೆ. ನಿಜ, ಈ ಗ್ರಂಥವು ಸಮಷ್ಟಿರೂಪದಲ್ಲಿ ಸಂಕೇತಿಗಳಿಗೆ ಸಂಬಂಧಿಸಿಲ್ಲ. ಆದರೆ ವ್ಯಷ್ಟಿರೂಪದಲ್ಲಿ ಒಬ್ಬ ಮಹಾನ್ ಸಂಕೇತಿ ಪಂಡಿತರಿಗೆ ಸಂಬಂಧಿಸಿರುವುದರಿಂದ ಯಾವ ರೀತಿಯ ಅನೌಚಿತ್ಯವಾಗಲೀ ಅಧ್ಯಯನ ಕೇಂದ್ರದ ಧ್ಯೇಯಾದರ್ಶಗಳಿಗೆ ಯಾವ ರೀತಿಯ ನ್ಯೂನತೆಯಾಗಲೀ ಉಂಟಾಗುವುದಿಲ್ಲ.

'ವೈಬ್ರಂಟ್ ಇಂಡಿಯಾ' ಗ್ರಂಥವನ್ನು ಬಹಳ ಅಚ್ಚುಕಟ್ಟಾಗಿ ಸಿದ್ಧಪಡಿಸಲಾಗಿದ್ದು ಜಾಗತಿಕ ಸ್ತರದ ಗುಣಮಟ್ಟವನ್ನು ಹೊಂದಿದೆ. ನಿಶ್ಚಿತವಾಗಿಯೂ ಇದು ಪಂಡಿತರ ಮನೆಯನ್ನು ಅಲಂಕರಿಸಲು ಯೋಗ್ಯವಾಗಿದೆ. ಕೊನೆಯಲ್ಲಿ ಒಂದು ಪದಸೂಚಿ (Word Index)ಯನ್ನು ಕೊಟ್ಟು ಇದರ ಉಪಯುಕ್ತತೆಯನ್ನು ಮತ್ತಷ್ಟು ಹೆಚ್ಚಿಸಬಹುದಾಗಿತ್ತು. ಮಿತ್ರ ಹರನ್ ಇಲ್ಲಿಯವರೆಗೆ ಸಂಕೇತಿ ಅಧ್ಯಯನ ಮಾಲೆಯಲ್ಲಿ ಪ್ರಕಟಿಸಿರುವ ಗ್ರಂಥಗಳಲ್ಲಿ ಇದು ಸರ್ವಶ್ರೇಷ್ಠವಾಗಿದೆ.

ಇಲ್ಲಿಯವರೆಗೆ ಶಾಮಾಶಾಸ್ತ್ರಿಗಳ ಬಗ್ಗೆ ಹೊರಜಗತ್ತಿಗೆ ತಿಳಿದಿದ್ದಕ್ಕಿಂತ ತಿಳಿಯದಿದ್ದುದೇ ಅಧಿಕವಾಗಿತ್ತು. ಪೂಜ್ಯ ಶ್ರೀ ವೆಂಕಟಾಚಲಶಾಸ್ತ್ರಿಗಳು ಮತ್ತು ಮಿತ್ರ ಹರನ್ ಈ ಒಂದು ಕೊರತೆಯನ್ನು ನೀಗಿ ವಿದ್ವಜ್ಜನರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಇಂತಹ ಒಂದು ಅದ್ಭುತವಾದ ಅಸಾಧಾರಣವಾದ ಗ್ರಂಥವನ್ನು ವಿದ್ವಜ್ಜನರ, ವಿದ್ವತ್‌ಪ್ರಿಯರ ಕೈಗಿತ್ತ ಕೀರ್ತಿ, ಧನ್ಯತೆ ಅವರದಾಗಿದೆ. ಭಗವಂತನು ಇವರ ಮೂಲಕ ಇಂತಹ ಇನ್ನೂ ಅನೇಕ ಸತ್ಕಾರ್ಯಗಳನ್ನು ಮಾಡಿಸಲಿ ಎಂದು ಆಶಿಸುತ್ತಾ ವಿರಮಿಸುತ್ತೇನೆ.

***

f. Our Editor

Dr. T.V. Venkatachala Sastry was born in Kanakapura of Ramanagara district, on 26.08.1933. He completed his secondary education in his native town. Then he moved to Mysore city for college education, and got his post graduate degree in Kannada in 1954 and the doctoral degree in 1972, both from the university of Mysore.

Dr. Sastry who began his professional career as a lecturer, worked in some private colleges and Osmania University, Hyderabad before joining The University of Mysore. He retired from his serivce as professor and director, Institute of Kannada studies with a good record of eventful years in the year 1994.


Dr. Sastry is keenly interested and has worked with great ability in the field of classical learning. He is the author of about sixty notable works which include the fields of grammar, prosody, poetics, textual criticism and lexicography spanning over a period of five decades. These apart, he is also the author of short and long biographies of several senior scholars of yesteryears together with many types of anthologies which added upto forty in number.

Dr. Sastry has also rendered useful and valuable service as member of the prestigeous Kannada dictionary project of Kannada Sahitya Parishat, Bangalore and as chief editor also for some time in the revision and reprint project of the same Dictionary. He did a commendable work as the editor of the first five volumes of the History of Kannada literature, a special publication of the Institute of Kannada Studies, Mysore.

Some of his notable works are as follows: A *Comparative study of Neminathapuranas in Kannada*, *Shrivatsa nighantu*, *Gajashastra shabdakosha*, *Kannada Chitrakavya*, *Kannada Chandahswarupa*, *Kannada Chandomimamse*, *Kannada Chennudi*, new editions of classical kannada works of Pampa, Brahmashiva, Keshiraja, and Kempunarayana, besides seven sumptuos volumes of research articles in the name of *Shastriya*.

In view of the invaluable service rendered by Dr. Sastry in the field of classical studies he has been honoured with many awards and felicitations. Karnataka Rajyotsava Prashasti, Karnataka Sahitya Academy Prashasti, Bhasha Samman award of Sahitya Academi, New Delhi and Pampa prashasti are notable among them. *Srimukha* (1997) and *Kannada Meru* (2008) are the two felicitation volumes presented to him.

***



ಸಂಪುಟ 8
ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು
ಎನ್. ಕೇಶವಮೂರ್ತಿ

೧ ಸಂಕೇತಿ ಅಧ್ಯಯನ

ಇದೀಗ ಓದುಗರ ಮುಂದಿರುವುದು ಸಂಕೇತಿ ಅಧ್ಯಯನ ಮಾಲೆಯ ಎಂಟನೆಯ ಸಂಪುಟ. ಇದು ಸಂಕೇತಿ ಸಮುದಾಯದ ಕೃಷಿಯ ಅನನ್ಯತೆಯನ್ನು ಶೋಧಿಸಲು ಹೊರಟ ಕೃತಿ. ಸಂಕೇತಿ ಸಮುದಾಯದ ಬಹುಮುಖಸಾಧನೆಯ ಮೂಲಪೋಷಕಶಕ್ತಿಯು ಅವರ 'ಕೃಷಿ'ಯೇ ಆಗಿದೆ. ಹಾಗಾಗಿ ಈ ಸಮುದಾಯದ ಕೃಷಿಯ ಅಂತರಂಗವನ್ನು ಭೇದಿಸುವುದೆಂದರೆ ಒಂದು ಸಮಷ್ಟಿ ಬದುಕಿನ ಕ್ರತುಶಕ್ತಿಯ ಸೆಲೆಯನ್ನು ಅನಾವರಣಗೊಳಿಸಿದಂತೆ. ಆ ಕಾರಣದಿಂದಲೇ ಇದೊಂದು ಸಂಕೀರ್ಣ ಸ್ವರೂಪದ ಅಧ್ಯಯನವೂ ಹೌದು, ಕಠಿಣ ಸಾಧನೆಯೂ ಹೌದು.

ಬೆರಗು ಹುಟ್ಟಿಸುವ ಸಂಗತಿ: ಮೊದಲ ನೋಟದಲ್ಲೇ ಬೆರಗು ಹುಟ್ಟಿಸುವ ಸಂಗತಿ ಎಂದರೆ ಬ್ರಾಹ್ಮಣ ಸಮುದಾಯವೊಂದು ಇಷ್ಟೊಂದು ಗಾಢವಾಗಿ ಕೃಷಿಯನ್ನು ಆವಾಹಿಸಿಕೊಂಡಿದೆ ಎಂಬುದು. ಮಾನವವಿಕಾಸದ ಭಾಗವೇ ಆಗಿರುವ ಬ್ರಾಹ್ಮಣ ಸಮುದಾಯಗಳೆಲ್ಲವು ಕೂಡ ಕೃಷಿಯನ್ನು ಮೈಮನಗೂಡಿಸಿಕೊಂಡೇ ಬಂದಿರುವಂಥವು, ಸನ್ನಿವೇಶಗಳ ಅನುಕೂಲಗಳ ಲಾಭ ಪಡೆದು ಕಠಿಣ ದುಡಿಮೆಯ ಮಾರ್ಗವನ್ನು ತೊರೆದು ಸುಲಭ ಜೀವನದ ಕವಲುಗಳಿಗೆ ಒಡ್ಡಿಕೊಂಡಂಥವು. ಅದು ಜಗತ್ತಿನ ಎಲ್ಲೆಡೆಯ ಮಾನವಸಾಮಾನ್ಯಕ್ಕೆ ಅನ್ವಯವಾಗುವ ಸತ್ಯ. ಇಂಥ ಸುಲಭ ಕವಲುಗಳ ಸುಲಭಾವಕಾಶಗಳ ನಡುವೆಯೂ ಕೃಷಿಯ ಕರುಳನ್ನು ತನ್ನದಾಗಿಸಿಕೊಂಡು ಇನ್ನೂ ಆ ಗಾಢ ಭಾವದಲ್ಲೇ ಮುಂದುವರಿದಿರುವುದು ಸಂಕೇತಿ ಸಮುದಾಯ ಎಂಬುದೇ ಆ ಬೆರಗು. ಸಂಕೇತಿ ಸಮುದಾಯದಷ್ಟೇ ಕೃಷಿಭಾವವನ್ನು ಜೀವಂತವಾಗಿಯೂ ಗಾಢವಾಗಿಯೂ ಪ್ರಾಣಪ್ರಿಯವೆನಿಸುವ ಹಾಗೂ ಇಂದಿಗೂ ಮುಂದುವರಿಸಿಕೊಂಡು ಹೋಗುತ್ತಿರುವ ಇನ್ನಿತರ ಬ್ರಾಹ್ಮಣ ಸಮುದಾಯಗಳಿವೆ. ಅವುಗಳಲ್ಲಿ ಹವ್ಯಕ, ಚಿತ್ಪಾವನ ಸಮುದಾಯಗಳಂಥ ಕೆಲವು ನಿಕಟಗೋಚರದವು. ಕೃಷಿಗೆ ಹೊರತಾದ ಇನ್ನಿತರ ಸಾಮ್ಯಗಳ ಆಧಾರವನ್ನೂ ಇಟ್ಟುಕೊಂಡು ಈ ಬ್ರಾಹ್ಮಣ ಉಪಸಮುದಾಯಗಳ ಪರಸ್ಪರ ಸಂಬಂಧದ ಸ್ವರೂಪವನ್ನು ಅಧ್ಯಯನ ಮಾಡಲೂ ಅವಕಾಶವಿದೆ.

ಆಶ್ರಮ ಜೀವನದ ಬೇರು: 'ಸಂಕೇತಿ ಸಮುದಾಯದ ಕೃಷಿ' ಎನ್ನುವಾಗ ನಿಚ್ಚಳವಾಗಿ ನಮ್ಮ ಕಣ್ಣ ಮುಂದಿರುವುದು ಅವರ ಬಾಗಾಯ್ತು. ಅಡಿಕೆ ಬೆಳೆಯು ಅವರ ತೋಟಗಳನ್ನು ಪ್ರವೇಶಿಸುವುದಕ್ಕೂ ಮೊದಲು ಅದು ಆಶ್ರಮ ಸದೃಶವಾಗಿದ್ದಿರಬೇಕು. ನಾವೀಗ ಸಂಕೇತಿ ವ್ಯಷ್ಟಿ, ಸಮಷ್ಟಿಯ ವಿಶೇಷಗಳೆಂದು ಗುರುತಿಸುವ ಕೃಷಿಸಹಿತವಾದ ಎಲ್ಲವೂ ಅದರ ಮುಂದುವರಿಕೆ, ಅದರ ಪಳೆಯುಳಿಕೆ. ಇಲ್ಲಿಯೂ, ಆ ಜೀವಸತ್ತ್ವದ ವಾಸನೆಯನ್ನು ಇಂದಿಗೂ ಸಂಕೇತಿ ಸಮುದಾಯವು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಉಳಿಸಿಕೊಂಡು ಬಂದಿದೆ ಎಂಬುದು ವಿಶೇಷ. ಈಗ ನಾವು ಸಂಕೇತಿಗಳ ವೈಶಿಷ್ಟ್ಯವೆಂದು ಗುರುತಿಸುವ ವೇದಾಧ್ಯಯನ, ಶಾಸ್ತ್ರಾಧ್ಯಯನ, ಸಂಗೀತ, ಗಮಕ, ಆಧ್ಯಾತ್ಮಿಕತೆ ಇವುಗಳನ್ನು ಅಂಥದೊಂದು ಪರಿಸರದಲ್ಲಿ ಬೆಳೆದ ಪ್ರವೃತ್ತಿ ಎಂದು ಗುರುತಿಸಬಹುದು. ಕೃಷಿ ಮತ್ತು ವೈದಿಕತೆಯ ಸಮನ್ವಯವು ಅವರ ಸಹಜಯೋಗ.

ಅಡಿಕೆ ಬೆಳೆಯೊಂದಿಗೆ ರಾಜಿ: ದಕ್ಷಿಣದ (ತಮಿಳುನಾಡು,ಕೇರಳ) ಸಂಕೇತಿಗಳು ಮೊದಲು ತಮ್ಮ ಹಿತ್ತಲಿನಲ್ಲಿ ಕುತೂಹಲಕ್ಕಾಗಿ ಒಂದೆರಡು ಅಡಿಕೆ ಸಸಿಗಳನ್ನು ಬೆಳೆದರು. ಅದರ ವಾಣಿಜ್ಯ ಮುಖದಿಂದ ಆಕರ್ಷಿತರಾದರು. ಪ್ರತ್ಯೇಕವಾದ ಅಡಿಕೆ ತೋಟಗಳನ್ನು ಮಾಡತೊಡಗಿದರು. ಇದು ಅಲ್ಲಿನ ಸಂಕೇತಿಗಳ ನೆನಪು. ಸಂಕೇತಿಗಳು ಕರ್ನಾಟಕಕ್ಕೆ ವಲಸೆ ಬರುವ ಮೊದಲೇ ಆಗಿದ್ದ ಬೆಳವಣಿಗೆ ಇದು. ಅಡಿಕೆ ಬೇಸಾಯದ ಪರಿಣತಿ ಹೊಂದಿದ ನಂತರವೇ ಕರ್ನಾಟಕಕ್ಕೆ ಸಂಕೇತಿಗಳ ವಲಸೆ ನಡೆದಿರಬೇಕೆಂಬುದು ಅನೇಕ ಚಿಂತಕರ ಅಭಿಪ್ರಾಯ.

ಅಡಿಕೆ ಬೆಳೆಯ ಮೂಲಚೂಲಗಳನ್ನು ಶೋಧಿಸಿ ಸಂಕೇತಿ ಸಮುದಾಯವು ಅದಕ್ಕೆ ಯಾವಾಗ ಒಲಿಯಿತು ಎಂಬುದನ್ನು ಪತ್ತೆ ಮಾಡಬೇಕಾದ ಕೆಲಸ ಹಾಗೆಯೇ ಉಳಿದಿದೆ. ಆದರೆ 'ಸಂಕೇತಿಯೊಬ್ಬನು ಅಡಿಕೆ ಸಸಿಯನ್ನು ಕೈಲಿ ಹಿಡಿದುಕೊಂಡೇ ಹುಟ್ಟುತ್ತಾನೆ' ಎಂಬ ಅರ್ಥಪೂರ್ಣ ರೂಪಕವೊಂದು ಪಡೆದುಕೊಂಡಿರುವ ಪ್ರಚಲಿತತೆಯು, ಅಡಿಕೆ ಬೆಳೆ ಮತ್ತು ಸಂಕೇತಿ ಸಮುದಾಯದ ನಡುವಿನ ಅವಿನಾಭಾವ ಸಂಬಂಧಕ್ಕೆ ಸಮರ್ಥವಾಗಿ ಕನ್ನಡಿ ಹಿಡಿಯುತ್ತದೆ.

ಸಂಕೇತಿಗಳು ಅಡಿಕೆ ಬೆಳೆಗೆ ಹೊಂದಿಕೊಂಡಿರುವ ರೀತಿಯು ಅನೇಕ ಅರ್ಥಗಳನ್ನೂ ಬೆರಗುಗಳನ್ನೂ ಹುಟ್ಟಿಸುತ್ತದೆ. ಮೊದಲನೆಯದಾಗಿ, ಆರ್ಥಿಕ ಬೆಳೆಯಾಗಿ ಅಡಿಕೆಯ ಪ್ರವೇಶವು ಸಂಕೇತಿ ಸಮುದಾಯದ ಆಶ್ರಮಜೀವನ ಹದಕ್ಕೊಂದು ಆಘಾತವಾಗಿಯೇ ಬಂದಿದೆ. ನಮಗೆ ಈಗ ತಿಳಿದಿರುವಂತೆ ಸುಮಾರು ಒಂಬತ್ತು ಶತಮಾನಗಳಷ್ಟು ದೀರ್ಘಕಾಲ ಅದು ಈ ಸಮುದಾಯದ ಬದುಕಿನ ಜೀವಸೆಲೆಯಾಗಿದೆ.

ಶೆಂಕೋಟ್ಟೈನಿಂದ ವಲಸೆ ಬಂದ ಸಂಕೇತಿ ಸಮುದಾಯವು ಕರ್ನಾಟಕದಲ್ಲಿ ಮೊದಲು (ಈಗಿನ ದಾವಣಗೆರೆ ಜಿಲ್ಲೆಯ) ಹರಪನಹಳ್ಳಿ ಕೇಂದ್ರದಲ್ಲಿ ನೆಲೆಸಿತಾದರೂ ಅನತಿ ಕಾಲದಲ್ಲಿ ಅದು ಮತ್ತೆ ವಲಸೆ ಬಂದು ಭದ್ರವಾಗಿ ಬೇರೂರಿದ್ದು ಅಡಿಕೆ ವಹಿವಾಟಿನ ಪ್ರಮುಖ ಕೇಂದ್ರವಾಗಿದ್ದ (ಈಗಿನ ಚಿಕ್ಕಮಗಳೂರು ಜಿಲ್ಲೆಯ) ಕಡೂರಿನಲ್ಲಿ. ಮತ್ತೆ ಆದ ಮರುವಲಸೆಗಳೆಲ್ಲವೂ ಅಡಿಕೆ ಬೆಳೆಯ ಸಾಧ್ಯತೆಯೊಂದಿಗೇ ತಳುಕು ಹಾಕಿಕೊಂಡಿವೆ. ಇಪ್ಪತ್ತನೆಯ ಶತಮಾನದ ಮಧ್ಯಭಾಗದವರೆಗೆ ನಿರಂತರವಾಗಿ ಸಂಕೇತಿ ಸಮುದಾಯದ ಬದುಕಿನೊಂದಿಗೆ ಗಾಢವಾಗಿ ಬೆರೆತು ಬಂದುದು ಇದೊಂದೇ ಆರ್ಥಿಕ ಬೆಳೆ.

ಸನ್ನಿವೇಶದ ಒತ್ತಡವು ಮನುಷ್ಯನ ಅಳವಡಿಕೆಗಳನ್ನು ಅನಿವಾರ್ಯಗೊಳಿಸುತ್ತದೆ ಎಂಬುದಕ್ಕೆ ಸಂಕೇತಿ ಸಮುದಾಯವು ಆಶ್ರಮ ಜೀವನದಿಂದ ಸರಿದು ಆರ್ಥಿಕತೆಗೆ ಒತ್ತುಬಿದ್ದ ಅಡಿಕೆ ಬೆಳೆಯೊಂದಿಗೆ ಹೊಂದಿಕೊಂಡುದು ದೊಡ್ಡ ಸಾಕ್ಷಿ. ಸಂಪ್ರದಾಯಕ್ಕೆ ತೀವ್ರವಾಗಿ ಬದ್ಧವಾದ ಈ ಸಮುದಾಯವು ಹೊಸ ಪ್ರವೃತ್ತಿ ಮತ್ತು ಅಗತ್ಯಗಳೊಂದಿಗೆ ಮಾಡಿಕೊಂಡ ರಾಜಿಯ ಪ್ರಮುಖ ಘಟ್ಟ ಅದು.

ಪರಿವರ್ತನೆಗಳ ಸ್ಫೋಟ: ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆದ ಪರಿವರ್ತನೆಗಳ ಸ್ಫೋಟವು ಸಂಕೇತಿ ಸಮುದಾಯದ ಸಮಗ್ರ ಬದುಕನ್ನು ಮೊದಲ ಬಾರಿಗೆ ಪರಿಣಾಮಗೊಳಿಸಿದೆ. ಈ ಕಾಲಘಟ್ಟದಲ್ಲಿ ಸಂಕೇತಿ ಸಮುದಾಯವು ಆಧುನಿಕ ವಿದ್ಯೆ, ಚಿಂತನೆ, ಉದ್ಯೋಗ, ನಗರೀಕರಣಕ್ಕೆ ಮುಕ್ತವಾಗಿ ತೆರೆದುಕೊಂಡಿದೆ, ಧಾವಿಸಿದೆ, ಸ್ಪರ್ಧಿಸಿದೆ, ಹೊಸ ಜಗತ್ತಿನ ಮುಂಚೂಣಿಯವರೆಗೆ ನುಗ್ಗಿದೆ. ಅಡಿಕೆಯ ಜತೆಜತೆಗೆ ಹೊಲಗದ್ದೆಗಳ ಬೇಸಾಯದಲ್ಲಿ ಹೊಸ ಪ್ರಯೋಗಗಳನ್ನು ಮಾಡಿದೆ, ಹೊಸ ಹೊಸ ಆರ್ಥಿಕ ಬೆಳೆಗಳನ್ನು ಸ್ವಾಗತಿಸುವಲ್ಲಿ ಒಟ್ಟು ಕೃಷಿ ಸಮಾಜಕ್ಕೆ ಮಾರ್ಗದರ್ಶಿಯಾಗಿದೆ. ತೋಟದಲ್ಲೂ ಅಡಿಕೆ ಮತ್ತು ಇತರ ಸಾಂಪ್ರದಾಯಿಕ ಬೆಳೆಗಳ ಜತೆಗೆ ಹೊಸ ಆರ್ಥಿಕ ಸಾಧ್ಯತೆಗಳಿಗೆ ಬಾಗಿಲು ತೆರೆದಿದೆ. ಇವೆಲ್ಲದರ ಪರಿಣಾಮವಾಗಿ 'ಬಡಬ್ರಾಹ್ಮಣ' ಎನಿಸಿದ್ದ ಸಮುದಾಯವು ಬದಲಾಗಿದೆ. ಕೃಷಿಯಲ್ಲಿಯೂ ಮೈಮುರಿದು ದುಡಿಯುತ್ತಿದ್ದ ಜಾಗದಲ್ಲಿ ಯಂತ್ರೋಪಕರಣಗಳ ಪ್ರಯೋಜನ ದೊರೆತು ಕೆಲಸವು ಹಗುರವಾಗಿದೆ. ಆಹಾರ, ವಸತಿ, ಉಡುಪು, ಸಂವಹನಮಾಧ್ಯಮ ಹೀಗೆ ಪ್ರತಿಯೊಂದರಲ್ಲೂ ಈ ಸಮುದಾಯವು ಇತರ ಎಲ್ಲರಂತೆ ಈಗ ಉತ್ತಮಸ್ಥಿತಿಯಲ್ಲಿದೆ.

ಆದರೆ, ಗಮನಿಸಬೇಕಾದ ಮಾತೆಂದರೆ ಆರ್ಥಿಕಬೆಳೆಯಾಗಿ ಬಂದ ಅಡಿಕೆಯೂ ಬಾಗಾಯಿತಿನ ಆಶ್ರಮಸದೃಶ ನೈಸರ್ಗಿಕತೆಗೆ ಭಂಗ ತಂದಿರಲಿಲ್ಲ, ಬದಲಿಗೆ ಅದನ್ನು ಪೋಷಿಸಿತ್ತು. ಅದು ತಂದ ಆರ್ಥಿಕ ಸಾಧ್ಯತೆಯು ಜೀವನ ನಿರ್ವಹಣೆಯ ಕನಿಷ್ಠ ಅಗತ್ಯಗಳನ್ನು ಪೂರಯಿಸುವ ಮಿತಿಯಲ್ಲಿತ್ತು, ಭೋಗದ ಕಟ್ಟೆಗೆ ಕಾಲಿಟ್ಟಿರಲಿಲ್ಲ. ಬದುಕಿನ ಈ ಹೋರಾಟದ ನಡುವೆಯೂ ಪಾರಂಪರಿಕ ವಿದ್ಯೆ, ಆಚಾರ ವಿಚಾರ, ಕೌಟುಂಬಿಕ ಸಾಮಾಜಿಕ ಸಂಬಂಧ ಮತ್ತು ಆಧ್ಯಾತ್ಮಿಕ ಮನಪಾಕವನ್ನು ಅದು ಉನ್ನತಮಟ್ಟದಲ್ಲಿ ಕಾಪಾಡಿಕೊಂಡು ಬಂದಿತೆಂಬುದು ಆಶ್ಚರ್ಯ ಹುಟ್ಟಿಸುತ್ತದೆ. ಬ್ರಿಟಿಷ್ ಭಾರತದ ವಿದ್ಯೆ, ನಗರಜೀವನ ಮತ್ತು ಉಪಭೋಗಗಳ ಆಕರ್ಷಣೆಯನ್ನು ೨೦ನೆಯ ಶತಮಾನದ ಮಧ್ಯಭಾಗದವರೆಗೆ ಅದು ಮೆಟ್ಟಿ ನಿಂತಿತು ಎಂಬುದು ಕೂಡ ಗಮನಾರ್ಹವಾದ ಸಂಗತಿ. ಒಟ್ಟು ಚಿಂತನೆ ಮತ್ತು ಜೀವನದೃಷ್ಟಿಯು ಆಧ್ಯಾತ್ಮಿಕತೆಯ ಪೊರೆಯಲ್ಲಿ ಸುರಕ್ಷಿತವಾಗಿತ್ತು. ಆದರೆ ಇದೀಗ ಒಮ್ಮೆಗೇ ಬಂದಿರುವ ಮುಕ್ತತೆ, ಜಾಗತಿಕ ಸಾಧ್ಯತೆ, ಆರ್ಥಿಕ ಉನ್ನತಿ, ಭೋಗೋಪಭೋಗದ ಸಾಧ್ಯತೆ ಇವು ಸಮಾಜವನ್ನು ವಿವಿಧ ಪ್ರಮಾಣದಲ್ಲಿಯಾದರೂ ಆಮೂಲಾಗ್ರವಾಗಿ ಕಂಪಿಸಿವೆ. ಒಟ್ಟು ಸಮಾಜದ ಮುಖ್ಯಪ್ರವಾಹದ ಜತೆ ಈ ರಾಜಿಯಾದ ಹೊರತು ಅಸ್ತಿತ್ವವೇ ಸಾಧ್ಯವಾಗದ ಸ್ಥಿತಿ ಅದು.

ಪ್ರಯೋಜನಗಳೂ ಆಗಿವೆ. ಇಪ್ಪತ್ತನೆಯ ಶತಮಾನದ ಮಧ್ಯಭಾಗದವರೆಗೆ ಮುಗ್ಧತೆ, ಸಾತ್ತ್ವಿಕತೆ, ಆಧ್ಯಾತ್ಮಿಕತೆಯ ಚಿಪ್ಪಿನೊಳಗೆ ಆತ್ಮಾನಂದದಲ್ಲಿ ವಿಹರಿಸುತ್ತಿದ್ದ ಈ ಸಮುದಾಯವು ಒಟ್ಟು ಸಮಾಜದಿಂದ ನಾನಾ ರೀತಿಯ ಶೋಷಣೆಗೆ ಒಳಗಾದ ಚಿತ್ರವು ಅವರ ವಂಶಚರಿತ್ರೆಗಳಲ್ಲಿ ದೊರೆಯುತ್ತದೆ. ಹೊಸ ವಿದ್ಯೆಯೊಂದಿಗೆ ಅದು ತಪ್ಪಿದೆ.

ಆದರೂ ಉಳಿದುಕೊಂಡ ಪ್ರಶ್ನೆ ಇದು. ಕೆಲಸವು ಹಗುರವಾದುದರಿಂದ, ಹಣವು ಹೆಚ್ಚಾಗಿ ದೊರೆತುದರಿಂದ, ಭೋಗೋಪಭೋಗಗಳ ಸಾಧ್ಯತೆ ಉಂಟಾದುದರಿಂದ ಮತ್ತು ನಗರೀಕರಣದಿಂದ ನೆಮ್ಮದಿ ಹೆಚ್ಚಿದೆಯೆ? ಇದು ಮೂಲಭೂತವಾದ ಪ್ರಶ್ನೆ, ಆದರೆ ಯಾರಿಗೂ ಆಕರ್ಷಕವೆನಿಸದ ಪ್ರಶ್ನೆ.

ಉಳಿಯಲು ಅರ್ಹವಾದ ಸಂಕೇತಿ ಬಾಗಾಯ್ತು ಸಂಸ್ಕೃತಿ: ಸಂಕೇತಿಗಳು ಪರಿಣತಿಯನ್ನು ಮೆರೆದ ಬಾಗಾಯ್ತು ದೃಢ ಶರೀರವನ್ನೂ, ಅದ್ಭುತವಾದ ಆರೋಗ್ಯವನ್ನೂ, ಕೃಷಿಮೂಲವಾದ ಔದಾರ್ಯವನ್ನೂ, ಪ್ರೀತಿಯನ್ನೂ ಹುಟ್ಟಿಸಿತು. ಅದರೊಂದಿಗೆ ಸಹಜವಾಗಿ ಹೊಂದಿಕೊಂಡ ಅಧ್ಯಾತ್ಮವು ಮಾನಸಿಕ ಧೃತಿಯನ್ನೂ, ಔನ್ನತ್ಯವನ್ನೂ ಉಂಟುಮಾಡಿತು. ಅಂಥ ಆಶ್ರಮಜೀವನದ ಮಡಿಲಲ್ಲಿ ನೆಮ್ಮದಿ ನೆಲೆಸಿತು, ವಿದ್ಯೆ ಬೆಳೆಯಿತು, ಕಲೆ ಅರಳಿತು. ಸದ್ಯ ಕಾಣುತ್ತಿರುವ ಸಮುದಾಯದ ಬಹುಮುಖ ಪ್ರತಿಭೆಯ ಮೂಲದ್ರವ್ಯವು ಅತಿಶಯವಾಗಿ ಬಂದುದು ಇಂಥ ಕೃಷಿಪರಂಪರೆಯ ಬೇರುಗಳಿಂದ.

ತಾವು ಅರ್ಥೈಸಿಕೊಂಡ, ರೂಢಿಸಿಕೊಂಡ, ಪರಿಣತಿ ಪಡೆದ ಆಶ್ರಮಸದೃಶವಾದ ಬಾಗಾಯ್ತಿಗೆ ಜಗತ್ತನ್ನು ಸಾಕ್ಷೀಪ್ರಜ್ಞೆಯಿಂದ ನೋಡುತ್ತ ಆಧ್ಯಾತ್ಮಿಕ ಪೊರೆಯಲ್ಲಿ ಸುರಕ್ಷಿತವಾಗಿದ್ದು ಆತ್ಮಬಲವನ್ನೂ ದೇಹಬಲವನ್ನೂ ಹೆಚ್ಚಿಸಿಕೊಳ್ಳಬಹುದಾದ ಬಾಗಾಯ್ತಿಗೆ ಭೋಗೋಪಭೋಗಗಳಲ್ಲಿ ಕರಗಿ ಹೋಗದೆ ಕಲೆಯನ್ನೂ ಸುಖ ಸಾಧನಗಳನ್ನೂ ಅಧೀನದಲ್ಲಿರಿಸಿಕೊಂಡು ನೆಮ್ಮದಿ ಸಾಧಿಸಬಹುದಾದ ಬಾಗಾಯ್ತಿಗೆ ತಮ್ಮೆಲ್ಲ ಕಸುವಿನ ಮೂಲಸ್ರೋತವಾದ ಬಾಗಾಯ್ತಿಗೆ ಮರಳಲು ಸಂಕೇತಿ ಸಮುದಾಯಕ್ಕೆ ಇನ್ನೂ ಅವಕಾಶ ಉಳಿದಿದೆ ಎಂಬುದು ಈ ಸಮುದಾಯದ ಪರವಾದ ಅಂಶ. ಹಳ್ಳಿಗಳಲ್ಲಿಯೇ ಉಳಿದು ಶತಮಾನಗಳ ಕಾಲದಿಂದ ಜತನ ಮಾಡಿಕೊಂಡು ಬಂದಿರುವ ಒಂದು ವಿಶಿಷ್ಟ ಕೃಷಿಪರಂಪರೆಯನ್ನು ಕಾಪಾಡುತ್ತಿರುವ ಸಂಕೇತಿಗಳ ಸಂಖ್ಯೆ ಈಗಲೂ ಗಣನೀಯವಾಗಿದೆ. ಭಾರತದ ವಿಶಿಷ್ಟ ಸಾಂಸ್ಕೃತಿಕ ಸಂವೇದನೆಗಳೆಲ್ಲವೂ ನಿಸರ್ಗಕ್ಕೆ ಹೊಂದಿಕೊಂಡಂಥವು. ಆ ಅರ್ಥದಲ್ಲಿ ಕೂಡ ಸಂಕೇತಿ ಸಮುದಾಯದ ಬಾಗಾಯ್ತು ಸಂಸ್ಕೃತಿ ಉಳಿದು ಬಾಳಲು ಅರ್ಹವಾಗಿದೆ. ಅದು ಭಾರತದ ವಿಶಿಷ್ಟ ಧಾರ್ಮಿಕ ಹದದ ಮುಂದುವರಿಕೆಗಾಗಿ ಅಗತ್ಯವೂ ಆಗಿದೆ.

ಬದುಕಿಗೆ ಬೇಕಾದ ನಿರಾತಂಕದ ತಳಾಧಾರ, ವಿಕೃತಿಗಳಿಗೆ ಎಡೆಯಿಡದ ಕಠಿಣ ದುಡಿಮೆಯನ್ನಾಧರಿಸಿದ ಮಿತವರಮಾನ, ಕೃಷಿಮೂಲದ ಹೃದಯ ಶ್ರೀಮಂತಿಕೆ, ಸಕಾರಾತ್ಮಕವಾದ ಎಲ್ಲ ವಿಕಾಸಗಳಿಗೆ ಬೇಕಾದ ತಿಳಿಮನ, ಸಾವಧಾನ, ಶಾಂತಿ, ನೆಮ್ಮದಿಗಾಗಿ ಬಾಗಾಯ್ತಿನ ಆಶ್ರಮಧರ್ಮವು ಮಾತ್ರವೇ ಏಕೈಕ ಮಾರ್ಗವಾಗಿದೆ.

ಮೂಷಿಕವರ್ಗದ ಲೆಮಿಂಗ್‌ಗಳು (LEMMINGS) ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತವೆ ಎಂಬುದು ಬಹಳ ಬಳಕೆಯಲ್ಲಿರುವ ರೂಪಕ. ಕೃಷಿಯ ಬೇರನ್ನು ಕಡಿದುಕೊಂಡು ನಗರೀಕರಣವು ಹುಟ್ಟಿಸಿರುವ ಮರೀಚಿಕೆಗಳ ಹಿಂದೆ ಬೀಳುವವನು ಲೆಮಿಂಗ್‌ಗಳಂತೆ ನಾಶವಾಗಿ ಹೋಗುತ್ತಾನೆ ಎಂದು ಈ ಅರ್ಥದಲ್ಲಿ ಹೇಳಬಹುದು.

ಇರಬೇಕಾದ ಎಚ್ಚರ: ಈ ಮಾತಿಗೆ ಇದೇ ಉಸಿರಿನಲ್ಲಿಯೇ ಅತ್ಯಗತ್ಯವಾಗಿ ಸೇರಿಸಬೇಕಾದ ಅಂಶವೊಂದಿದೆ. ಸಮಕಾಲೀನ ವಿದ್ಯೆ, ಉದ್ದಿಮೆ, ವಿದ್ಯಮಾನಗಳಿಗೆ ತೆರೆದುಕೊಳ್ಳದೆ ಮಾನವ ಕಲ್ಯಾಣಕ್ಕಾಗಿ ತೆರೆದುಕೊಳ್ಳುತ್ತಿರುವ ವಿವಿಧ ಮಾರ್ಗಗಳನ್ನು ಹಿಗ್ಗಲಿಸುವ ಪ್ರಜ್ಞೆ ಇಟ್ಟುಕೊಳ್ಳದೆ ಹೊರಜಗತ್ತಿನ ವಿವಿಧ ಸ್ತರಗಳ ಸವಾಲುಗಳನ್ನೆದುರಿಸಲು ಸನ್ನದ್ಧರಾಗದೆ ಬಾಗಾಯ್ತಿನಲ್ಲಿ ಆಶ್ರಯ ಹೊಂದುವುದೆಂದರೆ ದಯನೀಯವಾಗಿ ಕರಗಿ ಹೋಗುವುದೆಂದೇ ಅರ್ಥ. ಅಂಥ ಜಾಗತಿಕ ಒತ್ತಡ ಈಗ ಎಲ್ಲರ ಮೇಲಿದೆ. ಬದುಕಿನ ಹೋರಾಟದ ಅನಿವಾರ್ಯ ರಾಜಿಗಳೊಂದಿಗೆ ಬಾಗಾಯ್ತನ್ನು ನಮ್ಮ ಜೀವನದ ಅರ್ಥಪೂರ್ಣ ಭಾಗವಾಗಿಸಿಕೊಳ್ಳುವುದು ಸಾಧ್ಯವಾಗುವುದಾದರೆ ಮಾತ್ರ ಬಾಗಾಯ್ತಿನ ಪರವಾದ ಧ್ವನಿಯು ಸಹ್ಯವೆನಿಸುತ್ತದೆ. ಆಧುನಿಕ ಜಗತ್ತಿನ ಹಲವು ಆಯಾಮಗಳ ಅನಿವಾರ್ಯತೆಯನ್ನು ಮೆಟ್ಟಿ ಶಾಂತಿ, ಸಂತೃಪ್ತಿ ಮತ್ತು ನೆಮ್ಮದಿಯ ಕಡೆಗೆ ಮುಖಮಾಡಬಲ್ಲ ವಿವೇಕವು ಆಯಾ ಸನ್ನಿವೇಶದ ಮಡಿಲಿನಿಂದಲೇ ಮೂಡಿ ಬರಬೇಕಾಗಿದೆ.

ಶ್ರೀ ಎನ್.ಕೇಶವಮೂರ್ತಿಯವರ ಅಧ್ಯಯನದ ಫಲಶ್ರುತಿ: 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬ ಈ ಸಂಶೋಧನ ಕೃತಿಯು ಸಂಕೇತಿ ಸಮುದಾಯದ ಬಾಗಾಯ್ತು ಸಂಸ್ಕೃತಿಯ ಪರವಾಗಿ ತೀರ್ಪಿತ್ತಿದೆ: "ಬದುಕಿನ ಮಟ್ಟವನ್ನು 'ಹಣ' ಆಳಲು ಆರಂಭಿಸಿದಾಗ ಹಳ್ಳಿಯ ಬದುಕು ಛಿದ್ರವಾಗಿರಬಹುದು ಎಂದು ನನ್ನ ಅನಿಸಿಕೆ. ಯಾಕೆಂದರೆ ಹಿಂದಿನ ದಿನಗಳಲ್ಲಿ ಕೃಷಿಯ ಮೂಲ ಉದ್ದೇಶ ಹಣಸಂಪಾದನೆ ಆಗಿರಲಿಲ್ಲ. ಭೂಮಿಯಿಂದ ಬದುಕು ಕಟ್ಟುವ ಕಲೆ ಸಂಕೇತಿಗಳಿಗೆ ಕರಗತವಾಗಿತ್ತು. ಕೇವಲ ಹತ್ತು ಗುಂಟೆ ಜಮೀನಿನಲ್ಲಿ ಬದುಕುವ ಕೃಷಿ ಸಂಕೇತಿಗಳಲ್ಲಿತ್ತು. ಹಣ ಸಂಪಾದನೆ ಜೀವನದ ಒಂದು ಭಾಗವಾಗಿತ್ತೇ ಹೊರತು ಹಣವೇ ಜೀವನವಾಗಿರಲಿಲ್ಲ. ಬಹುಮಹಡಿ ಪದ್ಧತಿಯ ಬಾಗಾಯ್ತು ಕೃಷಿ ಸ್ವಲ್ಪ ಹಣ ಹಾಗೂ ಸಂಪೂರ್ಣ ನೆಮ್ಮದಿ ಗಳಿಸಲು ಹಿರಿಯ ಸಂಕೇತಿಗಳು ಕಂಡುಕೊಂಡ ಒಂದು ಮಾರ್ಗ ಅಷ್ಟೆ. ಭೂಮಿ, ಬದುಕನ್ನು ಪ್ರೀತಿಸುತ್ತಿದ್ದ ಅವರಿಗೆ ಹಳ್ಳಿ ಆಸರೆಯಾಗಿತ್ತು, ಗ್ರಾಮೀಣ ಬದುಕು ಸುಸ್ಥಿರವಾಗಿತ್ತು. ಬದುಕಲು ಹಣ ಬೇಕು ಎನ್ನುವ ಗ್ರಾಮೀಣ ಚಿಂತನೆ ಕುಸಿದು, ಹಣ ಮಾಡಲು ಬದುಕಬೇಕು ಎಂಬ ಪಟ್ಟಣದ ವ್ಯಾಪಾರೀ ಚಿಂತನೆ ಬಂದಾಗ ಬದುಕಿನ ಮೌಲ್ಯಗಳು ಬದಲಾದುವು."

ಜಗತ್ತು ಈಗ ಹೊಸ ಭ್ರಮೆಗಳನ್ನು ಹುಟ್ಟುಹಾಕುತ್ತಿದೆ, ಅವುಗಳನ್ನು ಅನಿವಾರ್ಯಗೊಳಿಸುತ್ತಲೂ ಇದೆ. ಅದನ್ನು ಅರ್ಥಮಾಡಿಕೊಳ್ಳುವುದು ಕಷ್ಟ, ಅರ್ಥಮಾಡಿಕೊಂಡವರೂ ಬಿಡಿಸಿಕೊಳ್ಳುವುದು ಇನ್ನೂ ಕಷ್ಟ. ಇಂಥ ಭ್ರಮೆಗಳನ್ನು ಪಕ್ಕಕ್ಕೆ ಸರಿಸಿ ಯೋಚಿಸಬಲ್ಲವರಿಗಾಗಿ ಒಂದೆರಡು ಹೆಚ್ಚಿನ ಮಾತುಗಳು ಇದೇ ಸಂಪ್ರಬಂಧದ ಫಲಶ್ರುತಿಯಾಗಿ ಬಂದಿವೆ.

"ಕೃಷಿ ಸಂಕೇತಿಗಳ ಪಾಲಿಗೆ ಸಂಸ್ಕೃತಿಯಾಗಿತ್ತು, ಜೀವನದ ರೀತಿಯಾಗಿತ್ತು. ತಮಗೆ ಬೇಕಾದ್ದನ್ನೆಲ್ಲಾ ಒಂದು ತುಂಡು ಭೂಮಿಯಲ್ಲೇ ಬೆಳೆಯುವ ಚಿಂತನೆಯಿತ್ತು. ಬಾಗಾಯ್ತು ಅವರ ಪಾಲಿಗೆ ಒಂದು ಪಾಠಶಾಲೆ. ಕೃಷಿಗೆ ಈ ಭಾಷ್ಯ ನೀಡಿದ ಸಂಕೇತಿಗಳು ನಿಜಕ್ಕೂ ಅಭಿನಂದನಾರ್ಹರು. ಹೊಸ ಕೃಷಿ ಚಿಂತನೆಗಳು ಹೊಳೆಯಂತೆ ಹರಿದು, ಹಳೆಯ ಬದುಕಿನ

ಮೌಲ್ಯಗಳನ್ನು ಬುಡಮೇಲು ಮಾಡಿದರೂ ಅಂದು, ಇಂದು, ಎಂದೆಂದಿಗೂ ಬದಲಾಗದ ಗಟ್ಟಿಯಾದ ಕೃಷಿಪರಂಪರೆಯನ್ನು ಹುಟ್ಟುಹಾಕಿದ್ದು ಸಂಕೇತಿಗಳ ಬಾಗಾಯ್ತಿನ ಕೃಷಿ ರೀತಿ, ನೀತಿಗಳು. ಇಂದು ಪ್ರಸ್ತುತವಾಗಿರುವ ಸುಸ್ಥಿರ ಕೃಷಿ ಬದುಕಿಗೆ ಬಹಳ ಹಿಂದೆಯೇ ಅಡಿಪಾಯ ಹಾಕಿದ್ದು ಸಂಕೇತಿಗಳು. ಯಾವುದೇ ರೀತಿಯ ಆಧುನಿಕ ವಿಚಾರಗಳನ್ನು ಸಹ ಕೇಳದೆ, ನೋಡದೆ, ಕೇವಲ ತಮ್ಮ ಸಂಸ್ಕಾರದಿಂದ, ಸಂಸ್ಕೃತಿಯಿಂದ ತಮ್ಮ ಬಾಗಾಯ್ತಿನ ಮಣ್ಣನ್ನು ಸತ್ತ್ವಗೊಳಿಸಿ, ತಮ್ಮ ಬಾಳನ್ನು ಬಂಗಾರ ಮಾಡಿಕೊಂಡ ಹಿರಿಯ ಸಂಕೇತಿಗಳಿಗೆ ಗೌರವ ಸಲ್ಲಬೇಕು ತಾನೆ? ಸಾವಯವ ಕೃಷಿ ಪದ್ಧತಿ ಅನುಸರಿಸಿ, ಮಿಶ್ರಬೆಳೆ ಬೇಸಾಯದಿಂದ ಮಣ್ಣನ್ನು ಫಲವತ್ತುಗೊಳಿಸಿ, ವಿವಿಧ ಬೆಳೆಗಳನ್ನು ಒಂದೇ ಜಮೀನಿನಲ್ಲಿ ಉನ್ನತ ವಿಚಾರದಲ್ಲಿ ಬೆಳೆದು, ಸತ್ವಯುತ ಆಹಾರ ಸೇವಿಸಿ, ತಮ್ಮ ಆರೋಗ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬಲಭೀಮರಾಗಿ ಬಾಳಿದ ಹಿರಿಯರ ಬದುಕು ಅವಿಸ್ಮರಣೀಯವಲ್ಲವೆ? ಇಷ್ಟೆಲ್ಲಾ ವೈಶಿಷ್ಟ್ಯಗಳನ್ನು ಒಳಗೊಂಡ ಈ ಕೃಷಿ ಮುಂದಿನ ಪೀಳಿಗೆಗೂ ಉಳಿಯಲೇಬೇಕು ತಾನೆ?"

ಕೃಷಿತಜ್ಞ: ಇಷ್ಟೊಂದು ಕಳಕಳಿಯಿಂದ ಸಂಕೇತಿಗಳ ಬಾಗಾಯ್ತು ಸಂಸ್ಕೃತಿಯ ಪರವಾಗಿ ವಾದಿಸುವ ಶ್ರೀ ಎನ್. ಕೇಶವಮೂರ್ತಿ ಒಬ್ಬ ಕೃಷಿತಜ್ಞ. ಕೃಷಿ ವಿಜ್ಞಾನವನ್ನು ಅಭ್ಯಸಿಸಿ, ಆಕಾಶವಾಣಿಯ ಮಾಧ್ಯಮವು ಕೃಷಿಕರ ಪಾಲಿಗೆ ವರದಾನವಾಗುವಂತೆ ದಶಕಗಳಿಂದ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿರುವ ಕೃಷಿ ಅಧಿಕಾರಿ. ದೃಶ್ಯಮಾಧ್ಯಮಗಳ ಹುಚ್ಚು ಆಕರ್ಷಣೆಯ ನಡುವೆಯೂ ತಮ್ಮ ಕೃಷಿ ಕಾರ್ಯಕ್ರಮಗಳಿಂದ ರೈತರನ್ನು ಆಕರ್ಷಿಸಿ ಶಿಕ್ಷಣ ನೀಡಿ, ಅವರಲ್ಲಿ ಭರವಸೆ ಹುಟ್ಟಿಸಿ ರೈತಮಿತ್ರನಾಗಿ ಬೆಳೆದಿರುವ ನಿಷ್ಠಾವಂತ ಪ್ರಸಾರಕ. ಕೃಷಿಕಾರ್ಯಕ್ರಮಗಳ ಮೂಲಕವಾಗಿಯೇ ಆಕಾಶವಾಣಿಯ ಶ್ರೋತೃವರ್ಗವನ್ನು ಗಣನೀಯವಾಗಿ ಹೆಚ್ಚಿಸುವಲ್ಲಿ ಸಫಲರಾಗಿರುವ ಕಾರ್ಯಕ್ರಮ ನಿರ್ಮಾಪಕ. ಪ್ರಸ್ತುತ ಅಧ್ಯಯನವು ನಡೆದಿರುವುದು ಅಂಥ ಸಮರ್ಥರಿಂದ.

ಸಂಕೇತಿ ಸಮುದಾಯದ ಕೃಷಿಜೀವನಕ್ಕೆ ವ್ಯಾಪಕವಾಗಿ ಆಶ್ರಯ ನೀಡಿರುವುದು ಹಾಸನ ಜಿಲ್ಲೆ. ಹಾಸನದ ಬಾನುಲಿಯು ಬಿತ್ತರಗೊಳಿಸುತ್ತಿದ್ದ ಕೃಷಿ ಕಾರ್ಯಕ್ರಮಗಳಲ್ಲಿ ಸಹಜವಾಗಿಯೇ ಸಂಕೇತಿ ಕೃಷಿಕರ ಬಗೆಗಿನ ವಿಚಾರಗಳೂ ಇರುತ್ತಿದ್ದವು. ಅತಿಶಯವಾದ ತನ್ನ ಕೃಷಿ ಕಾರ್ಯಕ್ರಮಗಳಿಂದಾಗಿ ಆ ಕೇಂದ್ರವು ಜನಪ್ರಿಯವಾಗಿತ್ತು. ಶ್ರೀ ಎನ್.ಕೇಶವಮೂರ್ತಿ ಮತ್ತು ಶ್ರೀ ವಿಜಯ ಅಂಗಡಿ ಎಂಬ ಕೃಷಿ ಅಧಿಕಾರಿಗಳು ಅದನ್ನು ನಿರ್ವಹಿಸುತ್ತಿದ್ದರು. ಆ ಸಮಯದಲ್ಲಿ ಹಾಸನದ ಬಾನುಲಿ ಕೇಂದ್ರದ ನಿರ್ದೇಶಕಿಯಾಗಿದ್ದವರು ಡಾ|| ಎಂ.ಎಸ್. ವಿಜಯ ಅವರು. ಹಾಸನ ಕೇಂದ್ರದ ಸಮಗ್ರವಾದ ಯಶಸ್ಸಿಗೆ ಅವರು ಕಾರಣರಾಗಿದ್ದರು. ಆ ಮೂವರು ಪ್ರತಿಭಾವಂತರನ್ನೂ ಸಮುದಾಯ ಅಧ್ಯಯನ ಕೇಂದ್ರವು ೨೦೦೨ರ ನವೆಂಬರ್‌ನಲ್ಲಿ ಸಂಪರ್ಕಿಸಿತು. 'ಸಂಕೇತಿ ಕೃಷಿ'ಯನ್ನು ಕುರಿತಾಗಿಯೇ ಸಂಕೇತಿ ಅಧ್ಯಯನ ಮಾಲೆಗೆ ಒಂದು ಸಂಪುಟವನ್ನು ಸಿದ್ಧಪಡಿಸಿಕೊಡುವಂತೆ ಕೋರಿತು. ಆ ಅಧಿಕಾರಿಗಳನ್ನು ಸಂಕೇತಿಗಳ ವಿಶಿಷ್ಟ ಕೃಷಿಯು ಎಷ್ಟು ಆಕರ್ಷಿಸಿತೆಂದರೆ ಅದು ಸಾರ್ವತ್ರಿಕವಾಗಿ ನೆಲೆಸಿರುವ ಸಮಗ್ರ ಸಂಕೇತಿಗಳ ಕೃಷಿ ಅಧ್ಯಯನವಾಗಿ ಬೆಳೆಯಿತು. ಅವರ ಸಂಶೋಧನೆಯ ಟಿಪ್ಪಣಿಗಳು ಎರಡು ಸಂಪುಟಗಳಷ್ಟಾದುವು. ಈಗ ಓದುಗರ ಮುಂದಿರುವುದು ಶ್ರೀ ಎನ್.ಕೇಶವಮೂರ್ತಿಯವರು ಸಂಕೇತಿ ಕೃಷಿಯ ಬಗೆಗೆ ನಡೆಸಿರುವ ಸಂಶೋಧನ ಕೃತಿ.

ಅಧ್ಯಯನ ವಿಸ್ತಾರ: ಶ್ರೀ ಕೇಶವಮೂರ್ತಿಯವರು ಈ ಅಧ್ಯಯನಕ್ಕಾಗಿ ಹಾಸನ ಜಿಲ್ಲೆಯಲ್ಲದೆ ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣಕನ್ನಡ, ಕೊಡಗು, ಮಂಡ್ಯ, ಮೈಸೂರು, ಬೆಂಗಳೂರು ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ಮಾಡಿದ್ದಾರೆ. ಊಟಿಯೂ ಈ ಪಟ್ಟಿಯಲ್ಲಿ ಸೇರಿದೆ. ಒಟ್ಟು 33 ನೆಲೆಗಳ 96 ಕೃಷಿಕರನ್ನು ಈ ಅಧ್ಯಯನಕ್ಕಾಗಿ ಸಂದರ್ಶಿಸಿಕೊಳ್ಳಲಾಗಿದೆ.

ಪ್ರತಿ ಕೃಷಿಕ್ಷೇತ್ರದ ಪ್ರತ್ಯಕ್ಷ ಅವಲೋಕನ ಇದರ ಅಂಗವಾಗಿ ನಡೆದಿದೆ. ಪ್ರಾತ್ಯಕ್ಷಿಕೆಗಳ ಛಾಯಾಚಿತ್ರಗಳನ್ನೂ ಇದರಲ್ಲಿ ಯಥೇಚ್ಛವಾಗಿ ಒದಗಿಸಲಾಗಿದೆ.

ಸಾಂಪ್ರದಾಯಿಕವಾಗಿ ಬೆಳೆಸಿ ನಿರ್ವಹಿಸುತ್ತಿರುವ ಅಡಿಕೆ ತೋಟದ ಬೇಸಾಯದಿಂದ ತೊಡಗಿ, ಬಾಗಾಯ್ತಿನಲ್ಲಿಯೇ ವಿವಿಧ ಕಾಲಘಟ್ಟಗಳಲ್ಲಿ ನಡೆಸಿರುವ ಹೊಸ ಬೆಳೆಗಳ ಪ್ರಯೋಗಗಳ ಮಾಹಿತಿ ಇದರಲ್ಲಿ ಸೇರಿದೆ. ಹೊಲಗದ್ದೆಗಳಲ್ಲಿ ಕೂಡ ಸಾಂಪ್ರದಾಯಿಕವಾಗಿ ಬೆಳೆದ ರಾಗಿ, ಬತ್ತದ ಬೆಳೆಗಳಲ್ಲದೆ ವೈವಿಧ್ಯಪೂರ್ಣವಾದ ಗೃಹೋಪಯೋಗಿ ಬೆಳೆಗಳನ್ನೂ, ತರಕಾರಿಗಳನ್ನೂ, ವಾಣಿಜ್ಯ ಬೆಳೆಗಳನ್ನೂ ಈ ಅಧ್ಯಯನವು ಪರೀಕ್ಷಿಸಿದೆ.

ಸಂಕೇತಿಗಳು ಅನೂಚಾನವಾಗಿ ನೆಲೆಸಿದ ಜಿಲ್ಲೆಗಳಿಗೆ ಹೊರತಾಗಿ ಮಡಿಕೇರಿ, ಊಟಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಮೊದಲಾದ ಎಡೆಗಳಲ್ಲಿ ಮಾಡಿರುವ ಕಾಫಿ, ಟೀ ಮೊದಲಾದ ಅಸಾಂಪ್ರದಾಯಿಕ ಕೃಷಿಯ ಸಾಹಸವನ್ನೂ ಇಲ್ಲಿ ಗಮನಿಸಲಾಗಿದೆ.

ಕೃಷಿಗೆ ಹೊಂದಿಕೊಂಡ ಗ್ರಾಮೀಣ ಬದುಕಿಗೆ ಬೇಸತ್ತು ಪಟ್ಟಣದ ಜೀವನಕ್ಕೆ ಹಾತೊರೆದವರು, ಅನಿವಾರ್ಯವಾಗಿ ತಮ್ಮ ಕೃಷಿಯನ್ನು ಕೊನೆಗೊಳಿಸಿಕೊಂಡವರು, ತಮ್ಮ ಗ್ರಾಮೀಣ ಕೃಷಿಯನ್ನು ಹೆಚ್ಚಿನ ಉತ್ಸಾಹ ಮತ್ತು ಕನಸುಗಾರಿಕೆಯಿಂದ ಮುಂದುವರಿಸುತ್ತಿರುವವರು, ನಗರವಾಸದ ಜಂಜಡಕ್ಕೆ ಹೇಸಿ ಮರಳಿ ಮಣ್ಣಿನ ವಾಸನೆಗೆ ಒಲಿದವರು, ನಗರವಾಸವನ್ನೂ ಅದರಲ್ಲಿನ ಹೋರಾಟವನ್ನೂ ಬಿಡದೆ ಕೃಷಿಯ ನೆಮ್ಮದಿಗಾಗಿ ಕೈಚಾಚಿ ನಿರ್ವಹಣೆ ಮಾಡುತ್ತಿರುವವರು ಹೀಗೆ ನಡೆಯುತ್ತಿರುವ ಸಂಕೇತಿಗಳ ಕೃಷಿಸಂಬಂಧಿಯಾದ ತುಡಿತದ ಚಿತ್ರಣವೂ ಇಲ್ಲಿದೆ.

ಸ್ತ್ರೀಯರು ಪುರುಷರೊಂದಿಗೆ ಸಮಸಮವಾಗಿ ಕೃಷಿಕಾರ್ಯದಲ್ಲಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ತೊಡಗಿಸಿಕೊಂಡಿರುವುದು ಕೃತಿಯ ಉದ್ದಕ್ಕೂ ಕಾಣುವ ಅಂಶ. ಕೆಲವೊಮ್ಮೆ ಸ್ತ್ರೀಯರು ಮುನ್ನಡೆ ಸಾಧಿಸಿ ಪುರುಷರಿಗೆ ಸರಿಮಿಗಿಲಾಗಿ ಕೃಷಿಸಾಧನೆ ಮಾಡಿರುವ ಚಿತ್ರವೂ ಇಲ್ಲಿದೆ.

ತಮ್ಮ ಕೃಷಿಸಾಧನೆಗಳಿಗಾಗಿ ವಿವಿಧ ಪ್ರಶಸ್ತಿಗಳನ್ನು ಪಡೆದು ಈ ಕ್ಷೇತ್ರದಲ್ಲಿ ಮೇಲುಗೈ ಸಾಧಿಸಿದವರ ಬಗೆಗಿನ ಮಾಹಿತಿ ಇಲ್ಲಿದೆ. ಕೃಷಿಗೆ ಹೊಂದಿಕೊಂಡ ವಿವಿಧ ಆಯಾಮಗಳು ಮತ್ತು ಉಪವೃತ್ತಿಗಳಲ್ಲಿ ಸಂಕೇತಿಗಳು ಸಾಧಿಸಿರುವ ಪರಿಣತಿಯ ವಿವರವೂ ಇಲ್ಲಿದೆ.

ಅಧ್ಯಯನ ಸ್ವರೂಪ: ಶ್ರೀ ಎನ್.ಕೇಶವಮೂರ್ತಿಯವರನ್ನು ಕೃಷಿಸಂಪುಟದ ರಚನೆಗಾಗಿ ಪ್ರಾರ್ಥಿಸಿಕೊಂಡಾಗ ಈ ಸಂಪುಟದ ಸ್ವರೂಪವು ಯಾರಿಗೂ ಸ್ಪಷ್ಟವಾಗಿರಲಿಲ್ಲ. ತಮ್ಮ ಅಧ್ಯಯನಕ್ಕೆ ತೊಡಗಿಕೊಳ್ಳುವ ಮೊದಲು ಕೇಶವಮೂರ್ತಿಯವರು ಸಂಕೇತಿ ಸಮುದಾಯ ಮತ್ತು ಅವರ ಕೃಷಿಯ ಪರಿಚಯ ಮಾಡಿಕೊಳ್ಳಲು ಪೂರ್ವಾಧ್ಯಯನ ಪ್ರವಾಸ ಮಾಡಿದರು, ಸಾರ್ವತ್ರಿಕವಾದ ಒಟ್ಟು ಸಮಾಜದ ಪ್ರಜ್ಞಾವಂತರೊಂದಿಗೆ ಚರ್ಚಿಸಿದರು. ತಮ್ಮ ಕೃತಿಯ ಸ್ವರೂಪದ ರೂಪುರೇಖೆಯನ್ನು ಕಲ್ಪಿಸಿಕೊಂಡರು. ಕ್ಷೇತ್ರಕಾರ್ಯಾಧ್ಯಯನವು ಮುಂದುವರಿದಂತೆ ಸಂದರ್ಶನ, ನೇರ ನಿರೂಪಣೆ, ಪರೋಕ್ಷ ನಿರೂಪಣೆಯ ತಂತ್ರಗಳನ್ನೆಲ್ಲ ಸಮನ್ವಯಗೊಳಿಸಿಕೊಂಡರು. ತಮ್ಮ ಮುಕ್ತ ಪ್ರಶ್ನಾವಳಿಗಳು ಅನುಭವವಿಸ್ತಾರದ ಕಾವಿನಲ್ಲಿ ಹೇಗೆ ವೈವಿಧ್ಯಪೂರ್ಣವಾಗಿ ಹೊಸ ರೂಪ ಪಡೆಯುತ್ತಿವೆ ಎಂಬುದನ್ನು ತಾವೇ ಕಂಡುಕೊಂಡರು, ಮಿತ ಕಾಲಾವಧಿಯಲ್ಲಿ ರೈತರೊಡನೆ ನಡೆಸುವ ಇಂಥ ಗಂಭೀರ ಸಂದರ್ಶನಗಳಲ್ಲಿ ಲೋಪ ಉಂಟಾಗಬಾರದೆಂದು ಭಾವಿಸಿ ಸಮಗ್ರವಾದ ಪ್ರಶ್ನಾವಳಿಯೊಂದನ್ನು ಸಿದ್ಧಪಡಿಸಿ ಅದರ ಪ್ರತಿಗಳನ್ನು ರೈತರಿಗೆ ಪೂರ್ವಭಾವಿಯಾಗಿ ಹಂಚಿದರು. ಹೊಸ ವಕ್ರ, ಹೊಸ ಬೆಳೆ, ಹೊಸ ಸವಾಲುಗಳಿಗೆ ಅನುಗುಣವಾಗಿ ತಮ್ಮ ಪ್ರಶ್ನಾವಳಿಯ ಚೌಕಟ್ಟಿಗೆ ಹೊಸ ಪಟ್ಟುಗಳನ್ನು

ಸಮಯೋಚಿತವಾಗಿ ಸೇರಿಸಿದರು. ಕೊನೆಗೆ ಸಿದ್ಧವಾದ ಅವರ ಸಂಶೋಧನ ಪ್ರಬಂಧದ ಸ್ವರೂಪವು ಬೆರಗು ಹುಟ್ಟಿಸುವ ಆಕೃತಿಯನ್ನು ಕಂಡುಕೊಂಡಿತು. ಪ್ರತಿ ಸಂದರ್ಶನದ ಪ್ರಾರಂಭದಲ್ಲಿ ಅದರ ಸಾರಭೂತವಾದ ಇಲ್ಲವೆ ಗಮನ ಸೆಳೆಯಬೇಕಾದ ಮಾತು, ವಕ್ತೃವಿನ ಹಿನ್ನೆಲೆ ಮತ್ತು ಮಹತ್ತ್ವದ ಸಾರ, ವಕ್ತೃವಿನ ಕೌಟುಂಬಿಕ ಹಿನ್ನೆಲೆ ಹಳ್ಳಿಯ ಪರಿಸರದ ಚಿತ್ರ ಬೆಳೆಯ ಪರಿಣತ ಮಾಹಿತಿ ಕೃಷಿ ಜೀವನವು ಒದಗಿಸಿದ ಜೀವನದೃಷ್ಟಿ ಕೃಷಿಗೆ ಹೊಂದಿಕೊಂಡ ಇತರ ಮಾಹಿತಿ ಇವು ನಿಯತವಾದ ಕ್ರಮದಲ್ಲಿ ಬಂದಿವೆ.

ಓದುಗನು ಪ್ರತಿ ಸಂದರ್ಶನದ ಪ್ರಾರಂಭದ ಸಾರಭೂತ ಮಾತುಗಳನ್ನಷ್ಟೇ ಓದಿದರೂ ಸಾಕು, ಸಂಕೇತಿ ಕೃಷಿಸಿದ್ಧಾಂತದ ಸ್ಪಷ್ಟ ದರ್ಶನವಾಗುತ್ತದೆ. ವಕ್ತೃವಿನ ಕೌಟುಂಬಿಕ ಹಿನ್ನೆಲೆಯ ವಿವರಗಳು ಸಂಕೇತಿ ಸಮುದಾಯದ ವ್ಯಕ್ತಿಗಳು, ಕುಟುಂಬಗಳು, ಐತಿಹ್ಯಗಳು, ಜೀವನವಿಧಾನ, ಸಂಬಂಧಗಳ ಸ್ವರೂಪ ಇವುಗಳ ವಿಸ್ತಾರವಾದ ಪ್ರಪಂಚದ ಪರಿಚಯ ಮಾಡಿಕೊಡುತ್ತವೆ. ಪ್ರತಿ ವಕ್ತೃವು ನೀಡಿರುವ ಕೃಷಿವಿಧಾನದ ಚಿತ್ರವು ಕಾಲ ದೇಶ ಸನ್ನಿವೇಶದ ಹಿನ್ನೆಲೆಯಲ್ಲಿ ವೈವಿಧ್ಯಪೂರ್ಣವಾಗಿದೆ. ವಿವಿಧ ವಕ್ತೃಗಳು ನೀಡಿರುವ ಈ ವಿವರಗಳು ಕೃಷಿಯ ಶಾಸ್ತ್ರೀಯ ಭಾಗಗಳು. ಎನ್.ಕೇಶವಮೂರ್ತಿಯವರ ಈ ಸಂಶೋಧನ ಕೃತಿಯು, ಸಂಕೇತಿ ಅಧ್ಯಯನ ಮಾಲೆಯಲ್ಲಿ (ಸಂಪುಟ-೨) ಬಂದ 'ಶತಮಾನದ ಪತ್ರಗಳು' ಎಂಬ ಕೃತಿಯಂತೆ ಹಲವು ಸಂಶೋಧನೆಗಳ ಆಶ್ರಯಸ್ಥಾನವಾಗುವ ಮಹತ್ತ್ವವನ್ನೂ ಪಡೆದಿದೆ.

ಸಾಂಪ್ರದಾಯಿಕ ಕೃಷಿಯ ಸಾಮಾನ್ಯ ಮಾಹಿತಿಯ ಸಂದರ್ಶನಗಳು ಸಂಕೇತಿ ಕೃಷಿಯ ಮೂಲಚಿತ್ರವನ್ನು ಕೊಡುತ್ತವೆ. ಪ್ರಯೋಗಶೀಲರ ಸಂದರ್ಶನಗಳು ಹೊಸ ತುಡಿತಗಳ ದಿಕ್ಕುದೆಸೆಗಳಿಗೆ ತೋರುಗಲ್ಲುಗಳಾಗಿವೆ. ಕಾಫಿ, ಟೀಯಂಥ ಹೊಸ ಬೆಳೆಗಳ ಸಾಹಸವು ಸಂಕೇತಿಗಳ ಅದಮ್ಯ ಕೃಷಿರಕ್ತಿಯ ಹೊಸ ಶಾಖೆಗಳಂತಿವೆ. ಪಟ್ಟಣಿಗರ ಕೃಷಿಯು ಕೇವಲ ಅವರ ಪೂರ್ವವಾಸನೆಯ ಸೆಳೆತದ ಪಳೆಯುಳಿಕೆಯಲ್ಲ, ನಗರ ಜೀವನದ ನೀರವತೆಯ ಪರಿಹಾರಸೂಚಿಯೂ ಹೌದು. ಈ ಸಂದರ್ಶನಗಳಲ್ಲಿ ವೇ.ಬ್ರ.ಶ್ರೀ ಅಶ್ವತ್ಥನಾರಾಯಣ ಅವಧಾನಿ, ಕೆ.ಕೆ.ವಿಶ್ವನಾಥ, ಡಾ.ರಾಮಕೃಷ್ಣ, ಕ್ಯಾಪ್ಟನ್ ಕೆ.ಕೆ.ವೆಂಕಟೇಶ್, ಬಿ.ಎನ್.ವಿ.ಸುಬ್ರಹ್ಮಣ್ಯ, ಟಿ.ಎನ್.ಸುಬ್ಬರಾವ್ ಮೊದಲಾದವರ ಸಂದರ್ಶನಗಳು ಸ್ಫೂರ್ತಿ ಮತ್ತು ಚಿಂತನೆಯ ಪ್ರಖರ ಕಿಡಿಗಳಾಗಿ ಅನುಭವದ ಮೂಸೆಯಿಂದ ಹೊರಬಿದ್ದಿವೆ. ಸಂಪ್ರಬಂಧಕ್ಕೆ ಹೊಸ ಆಯಾಮವನ್ನೇ ನೀಡಿವೆ.

ಕೇವಲ ಕೃಷಿಪ್ರೀತಿಯಿಂದ: ಇಷ್ಟೊಂದು ವೈವಿಧ್ಯಪೂರ್ಣವಾದ ಹಾಸುಬೀಸುಳ್ಳ ಕ್ಷೇತ್ರಸಂದರ್ಶನಗಳ ಮೂಲಕ ಕೇಶವಮೂರ್ತಿಯವರು ಸಂಕೇತಿ ಕೃಷಿಯ ನಾಡಿಗಳನ್ನು ಹಿಡಿಯುವ ಹರಸಾಹಸ ಮಾಡಿದ್ದಾರೆ. ಆಕಾಶವಾಣಿಯಂಥ ಅಗತ್ಯ ಸೇವೆಯನ್ನು ನಿರ್ವಹಿಸಿಕೊಂಡೂ ಪ್ರವಾಸಸಂದರ್ಶನಲೇಖನ ಮಾತ್ರವಲ್ಲದೆ ಸತತ ಚಿಂತನದ ತಪಸ್ಸು ಮಾಡಿದ್ದಾರೆ. ಈ ಬಗೆಗಿನ ಅವರ ಶ್ರದ್ಧೆಯು ಕೃಷಿಯ ಪರವಾದ ಅವರ ತೀವ್ರ ಮಿಡಿತದಿಂದಲೇ ಹುಟ್ಟಿಕೊಂಡಿದ್ದಾಗಿದೆ. ಅವರ ಅಪಾರ ತಾಳ್ಮೆ, ಕುತೂಹಲ, ಶ್ರಮಸಹಿಷ್ಣುತೆ, ತೊಡಗಿಕೊಳ್ಳುವಿಕೆ ಇವೆಲ್ಲವೂ ಅವರ ಕೃಷಿಪ್ರೀತಿಯಿಂದಲೇ ಬಂದಂಥವು. ಒಂದು ಉದ್ದೇಶಕ್ಕಾಗಿ, ಈ ದೇಶದ ಬೆನ್ನೆಲುಬಾದ ಕೃಷಿ ಮತ್ತು ಕೃಷಿಕರ ಹಿತಸಾಧನೆಯ ಒಂದೇ ಉದ್ದೇಶಕ್ಕಾಗಿ, ತಮ್ಮ ಅಮೂಲ್ಯವಾದ ಮೂರು ವರುಷಗಳನ್ನು ಸಂಕೇತಿ ಕೃಷಿಯ ಅಧ್ಯಯನಕ್ಕಾಗಿಯೂ ಮೀಸಲಿಟ್ಟಿದ್ದಾರೆ. ಭೌಗೋಳಿಕ ಪರಿಸರ, ಕೃಷಿಕನ ವ್ಯಕ್ತಿತ್ವ ಮತ್ತು ಕೌಟುಂಬಿಕ ಹಿನ್ನೆಲೆ, ಸಮಕಾಲೀನ ಕೃಷಿಯ ಸವಾಲುಗಳು ಮತ್ತು ಸಾಧ್ಯತೆಗಳು, ಕೃಷಿಕನ ಜೀವನದೃಷ್ಟಿ ಇವೆಲ್ಲವೂ ಬೇರೆಬೇರೆಯಾದ ಘಟಕಗಳಲ್ಲ, ಬದಲಿಗೆ ಒಟ್ಟು ಒಂದು ಕೃಷಿಸಂಸ್ಕೃತಿಯ ಹೆಣಿಗೆಗಳು ಎಂಬ ದೃಢಪ್ರಜ್ಞೆಯಿಂದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಿದ್ದಾರೆ, ಕಣಕಣದ ಮಾಹಿತಿಯನ್ನೂ ಹೆಕ್ಕಿ ತೆಗೆದಿದ್ದಾರೆ. ಅವನ್ನೆಲ್ಲ ತಮ್ಮ ಸರಳವೂ ನಿಖರವೂ ಹದವೂ ಆದ ಭಾಷೆಯಲ್ಲಿ ಮನಮುಟ್ಟುವಂತೆ ನಿರೂಪಿಸಿದ್ದಾರೆ. 'ಪೀಠಿಕೆ'ಯಲ್ಲಿ ತಮ್ಮ ಗುರಿ ಏನು? ಮಾರ್ಗ ಯಾವುದು? ಎಂಬುದರ ಹುಡುಕಾಟದಲ್ಲಿ ತೊಡಗಿಕೊಂಡು ತಮಗೆ ಈ ಸಂಶೋಧನೆಯ ಬಗೆಗೆ ಇರುವ

ಬದ್ಧತೆಯನ್ನು ಪ್ರಕಟಿಸಿದ್ದಾರೆ. ತಮ್ಮ ದೀರ್ಘ ಸಂದರ್ಶನಗಳು, ಕಲೆ ಹಾಕಿದ ಅಪಾರ ಮಾಹಿತಿ, ಪ್ರಾತ್ಯಕ್ಷಿಕೆ ಮತ್ತು ಪಡೆದ ವಿಸ್ತಾರವಾದ ಅನುಭವದ ಹಿನ್ನೆಲೆಯಲ್ಲಿ ತಮಗಿರುವ ಕೃಷಿ ಪರಿಣತಿಯನ್ನು ಬಳಸಿಕೊಂಡು ಉಪಸಂಹಾರದಲ್ಲಿ ಸಂಕೇತಿಕೃಷಿಯ ಬಗೆಗೆ ತಮ್ಮೊಳಗಿನ ತಜ್ಞನೊಬ್ಬನ ನಿರ್ಣಾಯಕ ಮಾತುಗಳನ್ನು ಮಂಡಿಸಿದ್ದಾರೆ. 1-4 ಕ್ರೌನ್ ಆಕಾರದ 482 ಪುಟಗಳಲ್ಲಿ ಈ ಸಂಪ್ರಬಂಧವು ಸಂಕೇತಿ ಕೃಷಿಯ ಸ್ಪಷ್ಟ ಚಿತ್ರಣ ಮೂಡಿಸುತ್ತದೆ, ಸಂಕೇತಿ ನೆಲೆಗಳ ಪ್ರವಾಸವನ್ನೂ ಮಾಡಿಸುತ್ತದೆ.

ಅಧ್ಯಯನದ ಕಾಲಘಟ್ಟ: ನವೆಂಬರ್ ೨೦೦೨ - ೨೦೦೫: 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬ ಈ ಅಧ್ಯಯನವು ಸಂಕೇತಿಕೃಷಿಯ ಯಾವ ಕಾಲಘಟ್ಟದ ಮೂರು ವರ್ಷಗಳಲ್ಲಿ ನಡೆದಿದೆ ಎಂಬುದನ್ನು ಅವಶ್ಯವಾಗಿ ಮನದಟ್ಟುಮಾಡಿಕೊಳ್ಳಬೇಕು.

ಸಂಕೇತಿಯೊಬ್ಬನು ಹುಟ್ಟುತ್ತಲೇ ತಾನು ಕಲಿಯಬೇಕಾಗಿರುವುದು ವೇದಶಾಸ್ತ್ರಗಳನ್ನು, ತನ್ನದು ಕಠಿಣ ದುಡಿಮೆಯ ವ್ರತ, ತನ್ನ ವೃತ್ತಿ ಬಾಗಾಯ್ತು, ತನ್ನದು ವೈದಿಕ ದಿನಚರಿ, ತನ್ನ ಜೀವನದ ಉದ್ದೇಶವು ನೆಮ್ಮದಿಯ ಬಾಳು, ತನಗೆ ಬೇಕಾದುದು ಅದ್ವೈತದ ಆಧ್ಯಾತ್ಮಿಕತೆ ಎಂಬುದನ್ನು ಖಚಿತಪಡಿಸಿಕೊಂಡಿರುತ್ತಿದ್ದ ದಿನಗಳು ೧೯ನೆಯ ಶತಮಾನದ ಕೊನೆಯವರೆಗೆ ದೃಢವಾಗಿ ಮುಂದುವರಿದವು. ಇಡೀ ಸಮುದಾಯದಲ್ಲಿ ಆವರೆಗಿನ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಜೀವನವು ಪೂರ್ಣವಾಗಿ ದೈಹಿಕಶ್ರಮ ಮತ್ತು ಆಧ್ಯಾತ್ಮಿಕತೆಯಿಂದ ಕೂಡಿತ್ತು.

೨೦ನೆಯ ಶತಮಾನದ ಮೊದಲ ಪಾದದಲ್ಲಿ ಲೌಕಿಕ ಪ್ರಾಧಾನ್ಯದ ಕಿಟಕಿಗಳು ಅಲ್ಲಲ್ಲಿ ತೆರೆದುಕೊಳ್ಳತೊಡಗಿದವು. ಎರಡನೆಯ ಪಾದದಲ್ಲಿ ಅದರ ಬಾಗಿಲುಗಳೂ ತೆರೆದುಕೊಳ್ಳತೊಡಗಿದವು. ಆದರೆ ಈ ಅವಧಿಯಲ್ಲಿ ಹೊಸ ಶಿಕ್ಷಣ ಮತ್ತು ನಗರೀಕರಣದ ಬಗೆಗೆ ಮೈಚಳಿಬಿಟ್ಟ ಆಕರ್ಷಣೆಯೇನೂ ಇರಲಿಲ್ಲ. ವಾಸ್ತವವಾಗಿ ಆ ದಿಕ್ಕಿನಲ್ಲಿ ಕಾಲಿಟ್ಟ ಆ ಕೆಲವರಲ್ಲಿಯೂ ಬಹುಪಾಲು ಜನರು ಅರೆಮನಸ್ಸಿನಿಂದಲೂ ವೈದಿಕ ಪರಂಪರೆಯಿಂದ ದೂರಸರಿಯುತ್ತಿರುವರೆಂಬ ಪಾಪಪ್ರಜ್ಞೆಯಿಂದಲೂ ಹಾಗೆ ಮಾಡಿದರು. ಆ ಮೂಲಕ ವೇದಾಧ್ಯಯನದ ಅವಕಾಶವನ್ನು ಕಳೆದುಕೊಂಡರೂ ಸಣ್ಣಕಾರಣಗಳನ್ನೇ ಮುಂದೊಡ್ಡಿ ಕೃಷಿಯ ಸೆಳೆತಕ್ಕೆ ಸ್ವಯಂಪ್ರೇರಣೆಯಿಂದ ಒಪ್ಪಿಸಿಕೊಂಡರು. ಅಂಥವರೆಲ್ಲ ಕೃಷಿಗೆ ಮರಳಿದರು. ೧೯೫೦-೬೦ರವರೆಗೂ ಪೂರ್ಣವಾದ ದೈಹಿಕ ಶ್ರಮ ಮತ್ತು ಆಧ್ಯಾತ್ಮಿಕ ಪರಂಪರೆಯ ದಟ್ಟಛಾಯೆಯೇ ಸಂಕೇತಿ ರೈತರ ಬದುಕನ್ನು ಆವರಿಸಿತ್ತು. ದಟ್ಟ ವೈದಿಕಪರಂಪರೆಯೂ ಮುಂದುವರಿದಿತ್ತು.

ಇಪ್ಪತ್ತನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಹುಟ್ಟಿದ ಸಂಕೇತಿ ಮಕ್ಕಳಿಗೆ ತಾವು ಶಾಲೆಗೆ ಸೇರಿ ಶಿಕ್ಷಣ ಹೊಂದಬೇಕೆಂಬ ಗುರಿ ಸ್ಪಷ್ಟವಾಗಿಹೋಗಿತ್ತು. ಆಧುನಿಕ ಶಿಕ್ಷಣ-ನೌಕರಿ-ನಗರೀಕರಣ-ಸ್ತ್ರೀಶಿಕ್ಷಣ-ಸ್ತ್ರೀ ಉದ್ಯೋಗ ಹೀಗೆ ಅದು ಅಲೆ ಅಲೆಯಾಗಿ ಸಂಕ್ರಮಿಸಿತು. ಆದರೂ ೨೦ನೆಯ ಶತಮಾನದ ಮೂರನೆಯ ಪಾದದ ಈ ಮಕ್ಕಳಿಗೆ ಬಾಗಾಯ್ತು, ಖುಷ್ಕಿ, ವೈದಿಕ ಪರಿಸರ, ಪಾರಂಪರಿಕ ಗ್ರಾಮೀಣ ಜೀವನದ ಸಂಸ್ಕಾರವಿತ್ತು, ಆ ಕಾರಣದಿಂದ ಆ ಬಗೆಗಿನ ಒಲವೂ ಇತ್ತು. ಆ ಅವಧಿಯಲ್ಲಿ ನೌಕರಿಗಾಗಿ ಗ್ರಾಮ ತೊರೆದವರ ಸಂಖ್ಯೆ ಹೆಚ್ಚಿತು. ಕೃಷಿಕರು ದೈಹಿಕ ಶ್ರಮದ ಜಾಗದಲ್ಲಿ ಯಂತ್ರಗಳ ಬಳಕೆ ಮಾಡಿಕೊಳ್ಳುವುದಕ್ಕೆ ಅವಕಾಶವಾಯಿತು. ನಗರಸಂಪರ್ಕ ಮತ್ತು ನಗರಸಂಸ್ಕಾರ ದಟ್ಟವಾಯಿತು. ಜಾಗತಿಕ ಒತ್ತಡದ ಸನ್ನಿವೇಶದಲ್ಲಿ ಆರ್ಥಿಕತೆಗೆ ಒತ್ತುಕೊಟ್ಟರು. ಬಾಗಾಯ್ತಿನ ಆಶ್ರಮ ಸಂಸ್ಕಾರವು ಶಿಥಿಲವಾಗತೊಡಗಿತು.

೨೦ನೆಯ ಶತಮಾನದ ನಾಲ್ಕನೆಯ ಪಾದವು ವೈದಿಕತೆ ಮತ್ತು ಬಾಗಾಯ್ತು ಧರ್ಮದ ಶೈಥಿಲ್ಯದ ಕಾಲ. ಆರ್ಥಿಕ ಪ್ರಾಧಾನ್ಯದ ಕಾಲ. ನಗರೀಕರಣ ಹೆಚ್ಚಿದ ಕಾಲ. ಹಳ್ಳಿಯವರೂ ನಗರ ಸಂಸ್ಕೃತಿಗೆ ಪಕ್ಕಾದ ಕಾಲ. ಕೃಷಿಕರೂ ವೈದಿಕರೂ ಕೀಳರಿಮೆಗೆ ಬಿದ್ದ ಕಾಲ.

೨೦೦೨ರ ನವೆಂಬರ್‌ನಿಂದ ೨೦೦೫ರ ನವೆಂಬರ್‌ವರೆಗೆ ನಡೆದ ಅಧ್ಯಯನದ ಸಂದರ್ಭದಲ್ಲಿ ಶ್ರೀ ಎನ್.ಕೇಶವಮೂರ್ತಿಯವರಿಗೆ ದೊರೆತ ವಕ್ತೃಗಳು ೨೫ ರಿಂದ ೯೫ ವರ್ಷಗಳ ಅಂತರದವರು; ೨೦ನೆಯ ಶತಮಾನದ

ವಿವಿಧ ಮಜಲುಗಳ ಪ್ರತಿನಿಧಿಗಳು. ಅಂದರೆ ಪೂರ್ಣ ದೈಹಿಕ ಶ್ರಮವಿದ್ದ ಬಾಗಾಯ್ತು ಧರ್ಮವನ್ನೂ ಅಧ್ಯಾತ್ಮವನ್ನೂ ಸಮಾಜಧರ್ಮವನ್ನೂ ಸಮರಸಗೊಳಿಸಿಕೊಂಡ ಬಾಳಿನ ಇಳಿಗಾಲದ ಅವಸ್ಥೆಯ ಪ್ರತಿನಿಧಿಗಳು. ಆದರೆ ಈ ಇಳಿಗಾಲದ ಚಿತ್ರವೂ ಸಂಕೇತಿ ಸಮುದಾಯದ ಕೃಷಿ ಜೀವನದ ವೈಶಿಷ್ಟ್ಯ, ಅಧ್ಯಾತ್ಮಪ್ರಚೋದಿತ ಚಿಂತನ ವಿಧಾನ, ದೈಹಿಕ ಮತ್ತು ಬೌದ್ಧಿಕ ಕಸುವು ಇವುಗಳ ವಾಸನಾಶೇಷವನ್ನು ಸಮರ್ಥವಾಗಿ ಪ್ರಕಟಿಸಿದೆ. ಸಂಕೇತಿ ಬಾಗಾಯ್ತು ಸಂಸ್ಕೃತಿಯ ಪುನರುಜ್ಜೀವನದ ಸಾಧ್ಯತೆ ಮತ್ತು ಅಗತ್ಯಕ್ಕೆ ಇಂಬುಕೊಟ್ಟಿದೆ.

ಹಲವು ಕುದಿತಗಳ ನಡುವೆ ಶೋಧನೆಯ ಯಶಸ್ಸು: ಈ ಅಧ್ಯಯನ ನಡೆದ ಕಾಲದಲ್ಲಿ ರೈತರು ಹಲವು ಸವಾಲುಗಳಿಗೂ ಗೊಂದಲಗಳಿಗೂ ಪಕ್ಕಾಗಿದ್ದರು. ಬರಗಾಲ, ಮಾರುಕಟ್ಟೆಯ ಅನಿಶ್ಚಿತತೆ, ವಿದ್ಯುಚ್ಛಕ್ತಿಯ ಕಣ್ಣಮುಚ್ಚಾಲೆ, ಗ್ರಾಮೀಣ ಪ್ರದೇಶಗಳಲ್ಲಿನ ಮೂಲಭೂತ ಸೌಕರ್ಯಗಳ ಕೊರತೆ, ನಗರದ ಹೊಸ ಗಾಳಿಯ ಆಕರ್ಷಣೆ, ನಗರ ಜೀವನದ ನಡುವೆಯೇ ಮರುಕಳಿಸಿದ ಕೃಷಿ ವಾಸನೆ, ಕೃಷಿಯ ಸಾಂಪ್ರದಾಯಿಕ ಮಾರ್ಗದ ಬಗೆಗಿನ ಅಂಟು, ಅದೇ ಹೊತ್ತಿನಲ್ಲಿ ಹೊಸ ಆರ್ಥಿಕ ಅಗತ್ಯಗಳಿಗಾಗಿ ವಾಣಿಜ್ಯಬೆಳೆಗಳ ತಡಕಾಟ, ಹೊಸ ರಾಜಕೀಯ ಸಾಮಾಜಿಕ ಒತ್ತಡಗಳು, ಆಧುನಿಕ ಶಿಕ್ಷಣ, ನೌಕರಿ, ಕೃಷಿ ಸಂಶೋಧನೆಗಳಲ್ಲಿ ಕೃಷಿಯಷ್ಟೇ ಗಂಭೀರವಾಗಿಯೂ ಅರ್ಥಪೂರ್ಣವಾಗಿಯೂ ತೊಡಗಿಸಿಕೊಳ್ಳಬಲ್ಲ ಸತ್ತ್ವ–ಇವೆಲ್ಲವೂ ಒಟ್ಟಾಗಿ ಉಂಟುಮಾಡಿರುವ ಕುದಿತದ ನಡುವೆಯೇ ಸಂಕೇತಿ ಕೃಷಿ ಮತ್ತು ಅದಕ್ಕೆ ಹೊಂದಿಕೊಂಡ ಬಾಳಿನ ಮೂಲಸ್ವರೂಪವನ್ನೂ ಸತ್ತ್ವವನ್ನೂ ಶೋಧಿಸುವ ಕೆಲಸವನ್ನು ಶ್ರೀ ಎನ್.ಕೇಶವಮೂರ್ತಿ ಯಶಸ್ವಿಯಾಗಿ ಮಾಡಿದ್ದಾರೆ. ಸಂಕೇತಿ ಸಮುದಾಯಕ್ಕೂ, ಒಟ್ಟು ಕೃಷಿಕವರ್ಗಕ್ಕೂ ಇದೊಂದು ದಾಖಲೆಯ ಕೊಡುಗೆ. ಅದಕ್ಕಾಗಿ ಶ್ರೀ ಎನ್.ಕೇಶವಮೂರ್ತಿಯವರನ್ನು ಸಮುದಾಯ ಅಧ್ಯಯನ ಕೇಂದ್ರವು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

೧೫.೮.೨೦೦೮ **ಡಾ|| ಬಿ.ಎಸ್.ಪ್ರಣತಾರ್ತಿಹರನ್**
ಮೈಸೂರು ಪ್ರಧಾನ ಸಂಪಾದಕ

೨ ಮುನ್ನುಡಿ

ಹೊಸಗನ್ನಡ ಸಾಹಿತ್ಯದಲ್ಲಿ ಆತ್ಮಕಥನ ಒಂದು ವಿಶಿಷ್ಟ ಸಾಹಿತ್ಯಪ್ರಕಾರ. ಆತ್ಮಕಥೆ, ಜೀವನ ಚರಿತ್ರೆಗಳು ಹೊಸಗನ್ನಡ ಗದ್ಯಕ್ಕೆ ತಮ್ಮವೇ ಆದ ಕೊಡುಗೆ ನೀಡಿವೆ. ನವರತ್ನ ರಾಮರಾಯರ 'ಕೆಲವು ನೆನಪುಗಳು', ಮಾಸ್ತಿಯವರ 'ಭಾವ', ಕುವೆಂಪುರವರ 'ನೆನಪಿನ ದೋಣಿಯಲ್ಲಿ', ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಮುಂತಾದ ಅನೇಕ ಪ್ರಸಿದ್ಧ ಆತ್ಮಕಥನಗಳು ಕನ್ನಡ ಸಾಹಿತ್ಯ ವಲಯದಲ್ಲಿ ಜನಪ್ರಿಯವಾಗಿದ್ದು ಇಂದಿಗೂ ಮನನೀಯವಾಗಿವೆ. ಧಾರವಾಡದ ಮಿಂಚಿನಬಳ್ಳಿ ಪ್ರಕಾಶನದವರು 'ಕಂನಾಡ ಸಾಹಿತ್ಯಜ್ಞರ ಆತ್ಮಕಥನ' ಪ್ರಕಟಿಸಿ ಸಾಹಿತ್ಯಲೋಕಕ್ಕೆ ಆತ್ಮಕಥೆಯ ರುಚಿ ಉಣಬಡಿಸಿದ ತರುವಾಯ ಕನ್ನಡದಲ್ಲಿ ಈ ಪ್ರಕಾರ ಹೆಚ್ಚು ಪ್ರಚಲಿತವಾದಂತೆ ಕಾಣುತ್ತದೆ. ಇದು ಸಾಹಿತಿಗಳ ಮಾತಾದರೆ ಆತ್ಮಕಥನ ಕೃಷಿಕರ ಮುಖದಿಂದ ಮೂಡುವ ಗಾಥೆಯಾಗಿ ಅವರ ಬದುಕಿನ ರಾಗ ಭಾವಗಳ, ನೋವುನಲಿವುಗಳ ನೆನಪಿನ ಸುಂದರ ಅಭಿವ್ಯಕ್ತಿಯಾಗಿ, ಮಣ್ಣಿನ ಸುಗಂಧದ ಕುಸುಮವಾಗಿ ಸಾಮಾನ್ಯ ಹಾಗೂ ಅಸಾಮಾನ್ಯ ಕೃಷಿಕರ ಸತ್ಯಕಥನವಾಗಿ ಶ್ರೀ ಎನ್.ಕೇಶವಮೂರ್ತಿಯವರ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಕೃತಿಯಲ್ಲಿ ಸಂದರ್ಶನ ರೂಪದಲ್ಲಿ ಮೈತಳೆದಿದೆ. ನಮ್ಮ ಸಾಹಿತಿಗಳ ಬದುಕು, ಪರಿಶ್ರಮ, ಸಾಧನೆ, ಅಂದಂದಿನ ಸಾಹಿತ್ಯದ ಅಭಿರುಚಿಗಳು, ಆಶಯಗಳನ್ನು ತಿಳಿಯಲು ಅಲ್ಲಿ ಆತ್ಮಕಥನ ಸಹಕಾರಿಯಾದಂತೆ ಪ್ರಸ್ತುತ ಕೃತಿಯಲ್ಲಿ ಸಂಕೇತಿ ಸಮುದಾಯದ ಮಣ್ಣಿನಮಕ್ಕಳ ವ್ಯವಸಾಯದ ಹುಮ್ಮಸ್ಸಿನ, ಹೋರಾಟದ ಬಾಳು, ಸಾಂಸ್ಕೃತಿಕ ಆವರಣದ ಬದುಕಿನ ವಿಕಾಸ ತಿಳಿಯಲು ಇಲ್ಲಿ ಸಹಕಾರಿಯಾಗಿದೆ.

ಸುಮಾರು ೫೦೦ ಪುಟಗಳ ಈ ಕೃತಿಯಲ್ಲಿ ೩೩ ಪ್ರದೇಶಗಳ ೯೬ ಕೃಷಿಕರ ಕೃಷಿಜೀವನದ ಆಗುಹೋಗುಗಳ ಆತ್ಮನಿವೇದನೆಯಿದ್ದು, ಕನ್ನಡದ 'ಸಂದರ್ಶನ ಸಾಹಿತ್ಯ' ಎಂದು ಕರೆಯಬಹುದಾದ ಒಂದು ನೂತನ ಪ್ರಯೋಗ ಇದಾಗಿದೆ. ಶ್ರೀ ಎನ್.ಕೇಶವಮೂರ್ತಿಯವರು ಆಕಾಶವಾಣಿ ಕಲಾವಿದರಾಗಿ, 'ಕೃಷಿರಂಗ' ಕಾರ್ಯಕ್ರಮದ ಜಯಣ್ಣನಾಗಿ ರೈತರಿಗೆ ಮಾತ್ರವಲ್ಲದೆ ಕರ್ನಾಟಕದ ಆಕಾಶವಾಣಿ ಶ್ರೋತೃಗಳಿಗೆಲ್ಲಾ ಚಿರಪರಿಚಿತರಾದವರು. ಪತ್ರಿಕೆಗಳಲ್ಲಿ ಲೇಖನಗಳ ಮೂಲಕ ಬರಹಗಾರನ ಬಲುಹನ್ನು, ವೈಚಾರಿಕತೆಯನ್ನು ತೋರಿರುವವರು. ಸಂಕೇತಿ ಕೃಷಿಯ ಆಳ ಅಗಲದ ವಿವಿಧ ನೆಲೆಗಳನ್ನು ಅಧ್ಯಯನ ಮಾಡಲು, ಗ್ರಂಥ ರಚಿಸಲು ಡಾ.ಪ್ರಣತಾರ್ತಿಹರನ್ ಅವರ ಸೂಚನೆ ಸಹಕಾರ ಕಾರಣವಾಗಿ ಸಾಧ್ಯಾಸಾಧ್ಯತೆಗಳ ವಿಚಾರ ನಡೆದು ಇಂಥ ಒಂದು ಸಾಹಸದ ಕಾರ್ಯಕ್ಕೆ ಕೈಹಚ್ಚಿ ಯಶಸ್ವಿಯಾಗಿದ್ದಾರೆ. ಒಂದು ಜನಾಂಗದ ಕೃಷಿಜೀವನವನ್ನು ಕೃಷಿಕರ ಮನೆಬಾಗಿಲಿಗೆ ಹೋಗಿ ಅವರೊಡನೆ ಕಲೆತು ಬೆರೆತು ಸಂದರ್ಶಿಸಿ, ಧ್ವನಿ ಮುದ್ರಿಸಿಕೊಂಡು ಮತ್ತೆ ಅದಕ್ಕೆ ಉಚಿತ ಲಿಖಿತರೂಪ ಕೊಟ್ಟು, ಸಂಕೇತಿ ಕೃಷಿ ಬದುಕಿನ ವಿಸ್ತಾರ, ವೈಭವ, ವೈವಿಧ್ಯಗಳ ಅದ್ಭುತ ಚಿತ್ರಣ ಮನಮುಟ್ಟುವಂತೆ ಕಟ್ಟಿಕೊಟ್ಟಿದ್ದಾರೆ. ಲೇಖಕರು ಹೇಳುವಂತೆ ಈ ಬೃಹತ್ಕೃತಿ 'ಕೃಷಿಯನ್ನೇ ತಮ್ಮ ಉಸಿರನ್ನಾಗಿಸಿ ಬದುಕಿದ ಮಹನೀಯರ ವ್ಯವಸಾಯದ ಇತಿಹಾಸದ ಸಂಶೋಧನೆ '. ಇಂಥ ಕೃತಿಯೊಂದನ್ನು ರಚಿಸಬೇಕೆಂದಾದಾಗ ಸಂದರ್ಶನಕ್ಕೆ ಮುನ್ನ ಲೇಖಕರಿಗೆ ಸಂಕೇತಿ ಕೃಷಿ ಬದುಕಿನ ಬಗೆಗೆ ಉಂಟಾಗಿರುವ ಪ್ರಶ್ನೆಗಳು, ಸಂದೇಹಗಳು (ಸಂಕೇತಿಗಳು ಕೇವಲ ಬಾಗಾಯ್ತನ್ನು ಮಾತ್ರ ಅವಲಂಬಿಸಿದ್ದು ಏಕೆ? ಕೃಷಿ ಮಾಡುತ್ತಲೇ ವೇದವನ್ನೂ, ಸಂಗೀತವನ್ನೂ ಅಭ್ಯಾಸ ಮಾಡುವ ಸಂಪ್ರದಾಯ ಬಂದುದು ಹೇಗೆ? ಇತ್ಯಾದಿ) ಅವರ ಸಂಶೋಧನೆಯ ಹಾದಿಗೆ ದಾರಿದೀಪವಾಗಿ ಅಧ್ಯಯನ ಸುಗಮವಾಗಿ ಸಾಗಲು ನೆರವಾಗಿರುವುದು ಅರಿವಿಗೆ ಬರುತ್ತದೆ. ಕಾಲದಿಂದಲೂ ಸಂಕೇತಿಗಳು ವ್ಯವಸಾಯದೊಡನೆ ವೇದಾಭ್ಯಾಸ, ಪೌರೋಹಿತ್ಯ, ಸಂಗೀತ, ವೈದ್ಯ ಇನ್ನಿತರ ವೃತ್ತಿಗಳನ್ನು ನಡೆಸುತ್ತಾ ಬ್ರಾಹ್ಮಣವರ್ಗದಲ್ಲಿ ತಮ್ಮದೇ ಆದ ವೈಶಿಷ್ಟ್ಯ ಉಳಿಸಿಕೊಂಡು ಬಂದರು. ಕಾಲಕ್ರಮೇಣ ಕೃಷಿಯನ್ನು ಏಕೆ ಕಡೆಗಣಿಸಿದರು? ಎಂಬುದೇ ಲೇಖಕರಾದ ಶ್ರೀ ಎನ್.ಕೇಶವಮೂರ್ತಿಯವರ ಇತಿಹಾಸ ಸಂಶೋಧನೆಗೆ ನೆರವಾಗಬಹುದಾದ ಕೃತಿಯಲ್ಲಿನ ಮೂಲಭೂತ ಪ್ರಶ್ನೆ. ಸಂಕೇತಿ ಕೃಷಿ ನಶಿಸಲು 'ಉಳುವವನಿಗೇ ಭೂಮಿ' ಎಂಬ ಸರ್ಕಾರದ ಕಾನೂನು, ಆಧುನಿಕ ಶಿಕ್ಷಣ ಪದ್ಧತಿ, ವಿಜ್ಞಾನತಂತ್ರಜ್ಞಾನಗಳ ಆವಿಷ್ಕಾರದ ಪ್ರಭಾವ, ನಗರ ಜೀವನದ ಆಕರ್ಷಣೆ ಮುಂತಾದ

ಕಾರಣಗಳು ಸುವ್ಯಕ್ತವಾಗಿದ್ದು, ಇವು ಎಲ್ಲ ಬ್ರಾಹ್ಮಣ ವರ್ಗದವರಿಗೂ ಅನ್ವಯಿಸುವುದಾಗಿದ್ದು ವಿಶೇಷವಾಗಿ ಸಂಕೇತಿ ವರ್ಗಕ್ಕೆ ಜ್ಞಾತ, ಅಜ್ಞಾತ ನಿಮಿತ್ತಗಳೇನಾದರೂ ಉಂಟೇ ಎಂಬುದನ್ನು ತಿಳಿಯಲು ಲೇಖಕರು ಒಂದು ಸಿದ್ಧ ಪ್ರಶ್ನಾವಳಿಯನ್ನು ಸಂದರ್ಶನಕ್ಕೆ ಅಳವಡಿಸಿಕೊಂಡಿದ್ದಾರೆ. ಪ್ರತಿ ಕೃಷಿಕನ ವಂಶದ ಕೌಟುಂಬಿಕ ಹಿನ್ನೆಲೆ, ಪರಿಸರ, ಪತ್ನಿಯ ಸಹಕಾರ, ಬೆಳೆಗಳು, ಬೆಳೆಯುವ ವಿಧಾನ, ಮಕ್ಕಳ ಭವಿಷ್ಯ, ಸಂಪ್ರದಾಯ ಇತ್ಯಾದಿ ಮಾನದಂಡಗಳೊಡನೆ ಸಂದರ್ಶನಕ್ಕೆ ಸಜ್ಜಾಗಿ ಸಂದರ್ಶಿಸುವ ವ್ಯಕ್ತಿಗೆ ಸಂದರ್ಭಕ್ಕೆ ಹೊಂದುವಂತೆ ಪ್ರಶ್ನೆಗಳನ್ನು ಎಸೆದು ಉತ್ತರ ಪಡೆದು ಆತ್ಮಕಥೆಗಳಿಂದ ಅಪಾರ ಮಾಹಿತಿಯನ್ನು ಕಲೆ ಹಾಕಿದ್ದಾರೆ. ಸಂದರ್ಶಿಸಿದವರ ಕೃಷಿ ಮುಂದುವರೆಯುವ ಬಗ್ಗೆ ಸಾಮಾನ್ಯವಾಗಿ ಲೇಖಕರಿಗೆ ಕುತೂಹಲವಿರುವುದು ಎಲ್ಲ ಸಂದರ್ಶನಗಳಲ್ಲೂ ವೇದ್ಯವಾಗುವ ವಿಚಾರವಾಗಿದ್ದು ಕೆಲವೆಡೆ ಪ್ರತ್ಯಾಶೆ ಕೆಲವೆಡೆ ನಿರಾಶೆಗಳು ಮೂಡುವುದೂ ಉಂಟು. ಸಂಕೇತಿಗಳು ಸಮಾಜದ ಬೇರೆ ಯಾವ ಕ್ಷೇತ್ರದಲ್ಲಿ ಬೆಳೆದರೂ ಕೃಷಿಯನ್ನು ಮಾತ್ರ ನಿಲ್ಲಿಸಬಾರದು ಎಂಬ ಲೇಖಕರ ಕಾಳಜಿ, ಕಳಕಳಿ ಗ್ರಂಥದ ತುಂಬೆಲ್ಲಾ ಎದ್ದು ಕಾಣುತ್ತಿದ್ದು ಅವರ ಆಳವಾದ ಶೋಧನೆಗೆ ನೆರವಾಗಿದೆ.

ಕೃಷಿಕರ ಸಂದರ್ಶನ ಅವರ ಮನೆಗಳಲ್ಲಿ, ಕೆಲವೊಮ್ಮೆ ತೋಟದ ಸಹಜ ಪರಿಸರದಲ್ಲಿ ನಡೆದಿದ್ದು ಕೃಷಿಯಲ್ಲಿ ಮಹಿಳೆಯರ ಪಾಲೂ ಸಾಕಷ್ಟಿರುವುದರಿಂದ ಅಲ್ಲಲ್ಲಿ ಅವರೂ ಆಗಾಗ ಭಾಗಿಯಾಗಿರುತ್ತಾರೆ. ಇಂಥ ಒಂದು ಕೃತಿಯನ್ನು ಓದುವ ಓದುಗ ಏನನ್ನು ನಿರೀಕ್ಷಿಸುತ್ತಾನೆ ಎಂದು ಬರಹಗಾರರು ಚಿಂತನೆ ನಡೆಸಿದ್ದಾರೆ. ಏಕೆಂದರೆ ಕೃತಿ ಕಡೆಗೆ ಸಹೃದಯನನ್ನು ಮುಟ್ಟಬೇಕು. ಓದುಗರ ಭಾವನೆಗಳಿಗೆ ಸ್ಪಂದಿಸುವ ಸಾಹಿತ್ಯವಾಗಬೇಕು. 'ವ್ಯಕ್ತಿ ಮುಖ್ಯವೋ, ವಿಷಯ ಮುಖ್ಯವೋ' ಎಂಬ ವಿಚಾರವೂ 'ಸಂದರ್ಶನ ಸಾಹಿತ್ಯ'ದಲ್ಲಿ ಚರ್ಚಿತವಾಗಬೇಕು. ವ್ಯಕ್ತಿ ವಿಚಾರಗಳು ಪ್ರಾಸಂಗಿಕವಾದರೂ ಇಂಥ ಕೃತಿಗಳಲ್ಲಿ ವ್ಯಕ್ತಿಗಳಿಂದಲೇ ಕೃಷಿ ಬದುಕಿನ ಸ್ವರೂಪ ನಿರ್ಣಯವಾಗಬೇಕಾಗಿರುವುದರಿಂದ ವ್ಯಕ್ತಿಗಳ ಪಾತ್ರವೂ ಅಷ್ಟೇ ಗಮನಾರ್ಹವಾಗುತ್ತದೆ. ವ್ಯಕ್ತಿಚಿತ್ರಣ ಸಂಕೇತಿ ಬದುಕಿನ ಸಾಮುದಾಯಿಕ ಸಮಗ್ರಚಿತ್ರಣಕ್ಕೆ ಇರುವ ಏಕೈಕ ಆಧಾರವಾಗಿದ್ದು ಪ್ರಸ್ತುತ ಕೃತಿಯಲ್ಲಿ ಸಂದರ್ಭಕ್ಕೆ ತಕ್ಕಂತೆ ಬಹುಮಟ್ಟಿಗೆ ಪೂರಕವಾಗಿದೆ. 'Honest criticism and sensitive appreciation is directed not upon the poet but upon the poetry' (T.S.Eliot) ಎಂಬ ಮಾತು ಸಾಹಿತ್ಯವಲಯಕ್ಕೆ ಸರಿ. ಆದರೆ, ಕೃಷಿಕರನ್ನೇ ಗೌಣ ಮಾಡಿ ಸಂಕೇತಿ ಕೃಷಿಯ ಇತಿಹಾಸದ ವಿಕಾಸವನ್ನು ಅನ್ವೇಷಿಸುವುದು ಸಂಶೋಧನೆಯ ಮಾರ್ಗವಲ್ಲ. ಹಾಗಾಗಿ ಸಂದರ್ಶನದಲ್ಲಿ ಪ್ರಶ್ನೆಗಳನ್ನು ಕೇಳುವುದು, ಮಾಹಿತಿ ಪಡೆಯುವುದು ಕೆಲವೊಮ್ಮೆ ಚರ್ವಿತಚರ್ವಣವೆನಿಸಿದರೂ ಅನಿವಾರ್ಯವಿದ್ದು ಕೃಷಿಕರು ಹೇಳುವ ಆತ್ಮಕಥೆಗಳು ವ್ಯಕ್ತಿಚಿತ್ರಗಳೂ ಆಗಿ ಕಡೆಗೆ ಒಟ್ಟಾರೆ 'ಸಂಕೇತಿ ಕೃಷಿಯ ಸಾಂಸ್ಕೃತಿಕ ಬದುಕಿನ' ಚಿತ್ರವನ್ನೇ ಕಂಡಂತಾಗುತ್ತದೆ.

'ಸಂದರ್ಶನ ಸಾಹಿತ್ಯ' ಕೃತಿಯೊಂದರ ರಚನೆ ಒಂದು ಸಾಹಸಮಯವಾದ ಸಾಧನೆ. ದೈಹಿಕ ಶ್ರಮ, ಅಪಾರ ಶ್ರದ್ಧೆ, ಅತ್ಯಂತ ಸಂಯಮ ಹಾಗೂ ಕೃಷಿ ಬದುಕಿನ ಅನನ್ಯ ಚಿಂತನ ಬಯಸುವ ಈ 'ಕ್ಷೇತ್ರಕಾರ್ಯ' (Field work) ಸಂಶೋಧನೆಯ ಒಂದು ಪ್ರಮುಖ ಅಂಗ. ಸಂದರ್ಶನದಿಂದ ಸಂದರ್ಶನಕ್ಕೆ ವಿಚಾರಗಳು, ಆಸಕ್ತಿಗಳು ಬೆಳೆಯುತ್ತಾ ಹೋಗುತ್ತವೆ. ಹೆಚ್ಚು ಸಮಯ, ನಿಷ್ಠೆ ಬೇಡುವ ಈ ಕಾಯಕ ಹೊಸ ಹೊಸ ಹೊಳಹುಗಳನ್ನು ತೆರೆಯುತ್ತಾ ವಸ್ತುನಿಷ್ಠ ದೃಷ್ಟಿಕೋನಕ್ಕೆ ಕಾರಣವಾಗಬೇಕು. ಏಕತಾನತೆಯ ಬೇಸರಕ್ಕೆ ಆಸ್ಪದ ಕೊಡದೆ ವೈವಿಧ್ಯತೆಯ ಲೋಕಕ್ಕೆ ತೆರೆದುಕೊಳ್ಳುವಂತೆ ಸಂದರ್ಶಕ ಸದಾ ಜಾಗೃತನಾಗಿರಬೇಕು. ಈ ನಿಟ್ಟಿನಲ್ಲಿ ಈ ಕೃತಿಯಲ್ಲಿ ಸಂದರ್ಶಕರು ಸಂದರ್ಶನದ ಹೂರಣವನ್ನು ಸೂಕ್ತ ತಂತ್ರಗಳಿಂದ (ನೇರ ಸಂದರ್ಶನದ ಮಾದರಿ, ಸಂದರ್ಶನದ ಸಂಗ್ರಹದ ಮಾದರಿ ಇತ್ಯಾದಿ) ಸ್ವಾರಸ್ಯವಾಗಿ ನಿರ್ವಹಿಸಿದ್ದಾರೆ.

ವಸ್ತುಪ್ರದರ್ಶನದಲ್ಲಿ ಒಂದಾದ ಮೇಲೊಂದು ವಸ್ತುವನ್ನು ನೋಡುತ್ತಾ ಸಾಗುವಂತೆ ಈ ಕೃತಿಯಲ್ಲಿ ಕೃಷಿಗೆ ಸಂಬಂಧಿಸಿದ ವಿವರಗಳು ಒಂದೊಂದು ಸಂದರ್ಶನದಲ್ಲೂ ತಾನಾಗಿ ಪ್ರತ್ಯಕ್ಷವಾಗುತ್ತಾ ಹೋಗುತ್ತವೆ. ಇಡೀ ಕೃತಿಯನ್ನು

ಓದಿ ಮುಗಿಸುವ ವೇಳೆಗೆ ತೋಟದ ಅಭಿವೃದ್ಧಿ ಹಾಗೂ ಮಣ್ಣಿನ ವ್ಯವಸಾಯ, ಅಡಿಕೆ, ಬತ್ತ, ತೆಂಗು, ತಂಬಾಕು, ವಿಳ್ಳೇದೆಲೆ, ಬಾಳೆ, ರೇಶ್ಮೆ, ಕಬ್ಬು, ಕಾಫಿ, ಟೀ, ಏಲಕ್ಕಿ, ತರಕಾರಿ ಬೆಳೆಗಳು ಇತ್ಯಾದಿ ಬೆಳೆ ವಿಧಾನ, ಗೊಬ್ಬರದ ತಯಾರಿ, ಉಪಯೋಗ, ಎತ್ತಿನ ಲಕ್ಷಣ, ಹನಿ ನೀರಾವರಿ, ಮಿಶ್ರಬೆಳೆ, ಗೋಬರ್ ಗ್ಯಾಸ್, ಸಹಕಾರ ಸಂಘ, ರೈತರ ಉತ್ಪನ್ನಗಳಿಗೆ ಮಾರುಕಟ್ಟೆ ಮುಂತಾದ ಅತ್ಯಂತ ಗಹನವಾದ, ರೈತ ಸಮುದಾಯಕ್ಕೆ ಅತ್ಯುಪಯುಕ್ತವಾದ ಸಂಗತಿ, ಮಾಹಿತಿ ದೊರೆತು ಈ ಕೃತಿ ಒಂದು 'ಕೃಷಿ ಕೈಪಿಡಿ'ಯೇ ಆಗಿದೆ.

ಈ ವಿಸ್ತಾರವಾದ ಕೃತಿ ಅವಲೋಕಿಸಿದರೆ ಕರ್ನಾಟಕದಲ್ಲಿ ಬ್ರಾಹ್ಮಣವರ್ಗದಲ್ಲಿ ಸಂಕೇತಿ ವರ್ಗದ ಶ್ರಮದ ಬದುಕಿನ ಅಸಾಧಾರಣ ಸ್ವರೂಪ ಮನದ ಮುಂದೆ ನಿಲ್ಲುತ್ತದೆ. ಒಂದು ಕಾಲಕ್ಕೆ ತಮಿಳುನಾಡು, ಕೇರಳ ಗಡಿಭಾಗ "ಶೆಂಕೋಟ್ಟೈ"ನಿಂದ ನದೀಪಾತ್ರದ ಕೆಳಗಿನ ಪ್ರದೇಶಗಳಲ್ಲಿ ವಾಸಿಸುತ್ತಾ ಕರ್ನಾಟಕಕ್ಕೆ ಆಗಮಿಸಿದ ಸಂಕೇತಿಗಳು ತೋಟದ ವ್ಯವಸಾಯವನ್ನೇ ಜೀವನೋಪಾಯಕ್ಕಾಗಿ ಮುಖ್ಯವೃತ್ತಿಯನ್ನಾಗಿಸಿ ಬಾಳು ಕಂಡವರು. ನಿಸರ್ಗದೊಡನೆ ಬೆರೆತು, ಹಿಂಸೆ ಆಚರಿಸದೆ ನೆಲವನ್ನು ಉಳುಮೆ ಮಾಡಿ, ಬಾಗಾಯ್ತನ್ನೇ ನಂಬಿ, ಜ್ಞಾನಕ್ಕಾಗಿ ವೇದಾಧ್ಯಯನ ಮಾಡಿ, ಸಂಗೀತ ಕಲೆಯಲ್ಲಿ ಪರಿಣತಿ ಪಡೆವ ಸಾಧನೆ ಮಾಡಿದವರು. ಕೃಷಿಯೇ ವಂಶಪಾರಂಪರ್ಯವಾಗಿ ಬಂದ ಪ್ರಧಾನ ವೃತ್ತಿ. ಕೃಷಿಕನಿಗೆ ಬಹುಮಟ್ಟಿಗೆ ತಂದೆಯೇ ಮೇಲ್ಪಂಕ್ತಿ, ಆದರ್ಶ. ['ಕೈಯಿ, ಬಾಯಿ, ಕಚ್ಚೆ ಈ ಮೂರನ್ನು ನೀನು ಕಾಪಾಡಿಕೊಂಡು ಬಾ; ನೀನು ಎಲ್ಲಿದ್ರೂ ನಿನಗೆ ತೊಂದರೆ ಆಗೋದಿಲ್ಲ' (ಪು.೧೪೧) ಎಂಬ ತಂದೆಯ ಮಾತು.] ದೈವದಲ್ಲಿ, ಕೃಷಿಯಲ್ಲಿ, ಹಿರಿಯರಲ್ಲಿ ಇರುವ ದೃಢವಾದ ನಂಬಿಕೆ, ಶ್ರದ್ಧೆಗಳೇ ಸಂಕೇತಿ ಕುಟುಂಬವನ್ನು ಅನಂತಕಾಲವೂ ರಕ್ಷಿಸಿವೆ. ವೇದಾಭ್ಯಾಸ ಹಾಗೂ ಸಂಗೀತಾಭ್ಯಾಸ ನಡೆದ ಸ್ಥಳಗಳಲ್ಲಿ ವೃಕ್ಷ ಹಾಗೂ ಫಲಗಳೂ ಸಮೃದ್ಧಿಯಾಗುತ್ತವೆ ಎಂಬ ಅಚಲ ನಂಬಿಕೆ - ಅದೃಷ್ಟವನ್ನು ನೆಚ್ಚಬೇಕು; ವ್ಯವಸಾಯದಲ್ಲಿ ಹುಲ್ಲು, ನೀರು, ಸೌದೆ, ಹಸು ಬೇಕೇ ಬೇಕು ಎಂಬ ಆಶಯ - ದೇವರಲ್ಲಿ ಭಕ್ತಿಯಿಟ್ಟು ಧರ್ಮಕಾರ್ಯಗಳನ್ನು ಮಾಡಿದರೆ, ಪ್ರಾಮಾಣಿಕತೆಯಿದ್ದರೆ ಒಳ್ಳೆಯದಾಗುತ್ತದೆ ಎಂಬ ವಿಶ್ವಾಸ - ವ್ಯವಸಾಯದಲ್ಲಿ ಉತ್ಪತ್ತಿ, ವರಮಾನ ಮಾತ್ರ ಮುಖ್ಯವಾಗದೆ ದುಡಿಮೆಯೇ ಪ್ರಧಾನವಾಗಿ ಬದುಕುವುದು ಮುಖ್ಯ ಎಂಬ ಸಂಗತಿಗಳು ಇಲ್ಲಿ ಕಾಣುತ್ತವೆ. ಸುಸಂಸ್ಕೃತ ಭಾವನಾತ್ಮಕ ಬದುಕು ಸಂಕೇತಿ ವರ್ಗದ ಜೀವನರೀತಿ. ವೈಯಕ್ತಿಕ ಪರಿಶ್ರಮ, ಅನ್ಯ ಅವಲಂಬನೆಯಿಲ್ಲದ ಸ್ವಾಭಿಮಾನದ ಬದುಕು ಹಾಗೂ ಛಲ ರಕ್ತಗತವಾಗಿ ಬಂದಂತೆ ಕಾಣುತ್ತದೆ. 'ಜೀವನದಲ್ಲಿ ಏನಾದ್ರೂ ಆಗಲಿ; ಇನ್ನೊಬ್ಬನನ್ನು ಹೊಡೆದು ತಿನ್ನಬಾರದು. ನಮ್ಮ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟು ದುಡಿದು ತಿನ್ನಬೇಕು. ಇದು ಸಂಕೇತಿಗಳಲ್ಲೇ ಬಂದಿದೆ. ಅದಕ್ಕೇ ಅವರು ಆರಕ್ಕೇರದೆ, ಮೂರಕ್ಕಿಳಿಯದೇ ಇದಾರೆ. ಇದ್ದುದರಲ್ಲಿ ತೃಪ್ತರಾಗಿದ್ದಾರೆ' (ಪುಟ ೩೩೦) ಎಂಬ ಮಾತು ಸ್ವಾಭಿಮಾನ ಮೂಲವಲ್ಲದೆ ಬೇರೆ ಅಲ್ಲ. ಮಳೆಗಾಗಿ ರೋಮಪಾದ ಋಷ್ಯಶೃಂಗರನ್ನು ದಶರಥನ ಆಸ್ಥಾನಕ್ಕೆ ಕರೆತಂದ ಪೌರಾಣಿಕ ಪ್ರಸಂಗದ (ಪು.೨೬೧) ಮೂರು ಶ್ಲೋಕವನ್ನು ನೂರೆಂಟು ಬಾರಿ ಜಪಿಸಬೇಕೆಂಬ ವಿಚಾರ ಆ ಬಗೆಗಿನ ದೈವನಿಷ್ಠೆಗೆ ದ್ಯೋತಕವಾಗಿದೆ. 'ನಮಗೆ ಜನ ಮೋಸ ಮಾಡಬಹುದು, ಆದರೆ ಭೂಮಿ ಮೋಸ ಮಾಡೋಲ್ಲ' (ಪು.೩೫೮), 'ಇದು ನಮ್ಮದಲ್ಲ; ಭೂಮಿ ತಾಯೀದು ಎಂಬ ಮನೋಭಾವನೆಯಿಂದ ನಾವು ವ್ಯವಸಾಯ ಮಾಡ್ತೀವಿ' (ಪು.೩೫೯), 'ನನ್ನ ಪ್ರಕಾರ ಈ ಭೂಮಿಗೆ ಜೀವ ಇದೆ. ನಮ್ಮ ಮಕ್ಕಳನ್ನು ನಾವು ಸರಿಯಾಗಿ ಬೆಳೆಸಿದ್ರೆ ಹ್ಯಾಗೆ ಮೇಲೆ ಬರ್ತಾರೋ ಅದೇ ತರಹಾ ಈ ಭೂಮೀನಾ ಆರೈಕೆ ಮಾಡಿದ್ರೆ ಅವಳು ನಮ್ಮ ಕೈ ಬಿಡೋದಿಲ್ಲ' (ಪು.೩೭೬) ಎಂಬ ಉದಾಹೃತ ಮಾತುಗಳಿಂದ ಸಂಕೇತಿ ಕೃಷಿಕ ಜನಾಂಗದ ಆತ್ಮವಿಶ್ವಾಸದ ಮನೋಭಾವ, ನಡೆಸಿರುವ ಶ್ರದ್ಧಾಮೂಲವಾದ ಜೀವನ ವ್ಯಕ್ತವಾಗುತ್ತದೆ. ಈ ರೀತಿ ದೃಢವಾದ ಭೂಮಿಯ, ಮಳೆಯ ಬಗೆಗಿನ ಕಾಳಜಿಯನ್ನು ವ್ಯವಸಾಯದಲ್ಲಿ ಹೊಂದಿರುವ ಕೃಷಿಕರು ಸಂದರ್ಶನದಲ್ಲಿ ಕಂಡುಬರುತ್ತಾರೆ. ಮನುಷ್ಯ ಸ್ವಾರ್ಥಿಯಾಗದೆ ಕೊಟ್ಟು ಪಡೆಯುವ ಸದ್ಗುಣ ಉಳ್ಳವನಾಗಬೇಕು. ಪ್ರಕೃತಿಯ ಮುಂದೆ ಮಾನವ ತುಂಬಾ ಚಿಕ್ಕವನು. ಮಹತ್ತಾದುದರ ಮುಂದೆ ಮಾನವವ್ಯಕ್ತಿತ್ವ ತತ್ತರಿಸುತ್ತದೆ ಎಂದು ಕವಿ ಕುವೆಂಪುರವರು ಹೇಳುವಂತೆ ಭವ್ಯತೆಯ ಅನುಭವ ಪಡೆದಿರುವ,

ತಮ್ಮ ತೋಟಕ್ಕೆ, ಹಸಿರಿಗೆ ಎಲ್ಲವನ್ನೂ ಸಮರ್ಪಿಸಿಕೊಂಡಿರುವ ಕೃಷಿಕರ ಉದಾಹರಣೆಗಳು ಮನಮುಟ್ಟುವಂತಿವೆ. 'Agricultureನಲ್ಲಿ ಯಾವಾಗಲೂ There is scope for innovation.... ಹೆದರಬಾರದು ..... Agriculture teaches you patience.... ನಾನು ನನ್ನ ತಮ್ಮ ಬೆಳದಿಂಗಳ ರಾತ್ರೀಲಿ ತೋಟದಲ್ಲಿ ಕುಳಿತುಕೊಳ್ತೀವಿ. ಇಲ್ಲಿನ ಪ್ರಕೃತಿ, ಗಿಡ, ಮರ ಎಲ್ಲ ಎಷ್ಟು ದೊಡ್ಡದಾಗಿರುತ್ತೆ. ಆದರೆ ನಾವು ಅದರ ಮುಂದೆ ಎಷ್ಟು ಚಿಕ್ಕವರಾಗಿ ಕಾಣ್ತೀವಿ. ನಮ್ಮ ಅಹಂಕಾರ ನಿಜವಾಗಿಯೂ ಆಗ ಕಡಿಮೆಯಾಗುತ್ತೆ. ಗಿಡಮರಗಳು ಸ್ವಾರ್ಥಿಯಲ್ಲ. ನೀವು ಅದರ ನಿರ್ವಹಣೆ ಮಾಡಿ, ಅದು ನಿಮಗೆ ಫಲ ನೀಡುತ್ತೆ' (ಪು.೩೮೦).

'ನನ್ನ ತೋಟಕ್ಕೆ ಹೋದ್ರೆ ನನ್ನ Battery charge ಆಗುತ್ತೆ. ಬೆಳಿಗ್ಗೆಯಿಂದ ನೂರೆಂಟು ತಾಪತ್ರಯ ಅನುಭವಿಸಿ ತೋಟಕ್ಕೆ ಹೋದ್ರೆ ಪ್ರಕೃತಿ ಒಳಗೆ ನಾವು ಎಲ್ಲಾ ಮರೀತೀವಿ. ಗಿಡ, ಹಣ್ಣು, ಹೂವು ನೋಡ್ತಾನೇ ಆಂತರಿಕ ಶಕ್ತಿ ಹೆಚ್ಚಾಗುತ್ತೆ... ಜನ ನಮಗೆ ಮೋಸ ಮಾಡಬಹುದು, ಆದ್ರೆ ಪ್ರಕೃತಿ ನಮಗೆ ಮೋಸ ಮಾಡೋಲ್ಲ' (ಪು.೪೧೮) ಇಂಥ ಅನುಭವಾಮೃತದ ಮಾತುಗಳು ಕೃಷಿಯೇ ಜೀವನವೆಂದು ಭಾವಿಸಿರುವವರಿಗೆ ವೇದವಾಕ್ಯದಂತಿದ್ದು ಮನದಾಳದಿಂದ ಸಹಜವಾಗಿ ಬಂದ ಮಾತುಗಳೆಂಬುದರಲ್ಲಿ ಸಂದೇಹವಿಲ್ಲ. ಪ್ರಕೃತಿಯನ್ನು ನಂಬಿ ಆಧರಿಸಿ ಅದರಲ್ಲೇ ಲೀನರಾಗಿ ಅದರ ಗಂಭೀರ, ಬೃಹತ್ತು, ಮಹತ್ತುಗಳಿಗೆ ತತ್ತರಿಸಿ ದೈವವೆಂದು ಪೂಜಿಸಿ ಅಹಂಕಾರವರ್ಜಿತರಾಗಿ ವ್ಯವಸಾಯ ವೃತ್ತಿಯನ್ನು ಆಚರಿಸಿರುವ ಸಂಕೇತಿ ಕುಟುಂಬಗಳ ಶ್ರೀಮಂತ-ಬಡತನದ-ಎಲ್ಲ ವರ್ಗಗಳ ಚಿತ್ರಮಾಲಿಕೆಗಳು ಒಟ್ಟಾರೆ ಈ ಸಂದರ್ಶನ ಸಾಹಿತ್ಯದಲ್ಲಿ ಸಮೃದ್ಧಿಯಾಗಿ ದೊರೆಯುತ್ತವೆ.

'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಗ್ರಂಥದ ಅಂತಸ್ಸಾರವಿರುವುದು ನಿಜವಾಗಿ ವಿವಿಧ ಬೆಳೆಗಳ ಬೇಸಾಯ ಕ್ರಮದ ವಿವರಣೆಯಲ್ಲಿ. ಸಂಕೇತಿ ಪಂಗಡದ ಕೃಷಿ ಬೆಳವಣಿಗೆ ಶತಮಾನಗಳಿಂದ ಪರಂಪರಾನುಗತವಾಗಿ ಹೇಗೆ ವಿಕಾಸಗೊಂಡಿದೆಯೆಂಬುದು ಲೇಖಕರು ನಡೆಸಿರುವ ಸಂದರ್ಶನಗಳಲ್ಲಿ ಅರ್ಥಪೂರ್ಣವಾಗಿ ಮೈದಳೆದಿದೆ. ಸಂಕೇತಿಗಳು ಅನೇಕ ಉಪವೃತ್ತಿಗಳೊಡನೆ ವ್ಯವಸಾಯವನ್ನೇ ಮುಖ್ಯವೃತ್ತಿಯನ್ನಾಗಿ, ವ್ಯವಸಾಯದಲ್ಲೂ ತೋಟದ ಕೃಷಿಯನ್ನು ವಿಶೇಷವಾಗಿ ಆಧರಿಸಿರುವುದು ಗಮನೀಯ. ನದಿ, ಕೆರೆ ಮುಂತಾದ ಜಲಸಮೃದ್ಧಿಯಿರುವ ಸ್ಥಳಗಳನ್ನೇ ಆಶ್ರಯಿಸಿ, ಕಾಡನ್ನು ಕಡಿದು ತೋಟ ಮಾಡಿ ಅತ್ಯಂತ ಪರಿಶ್ರಮದ ಜೀವನ ನಡೆಸಿದ ಸಂಕೇತಿಗಳು ಬೆಳೆದ ಬೆಳೆಗಳಲ್ಲಿ ವೈವಿಧ್ಯವಿದೆ. ಬೆಳೆಗಳಿಗೆ ಅಗತ್ಯವಾದ ನೆಲ, ನೀರಿನ ಆಸರೆ, ಬಿತ್ತನೆ, ಕಾಲಮಾನ, ಮಾರುಕಟ್ಟೆ ಮುಂತಾದ ವಿಚಾರಗಳಿಗೆ ಅಗತ್ಯ ಮಾಹಿತಿ ಸಂದರ್ಶನಗಳಲ್ಲಿ ಸಾಕಷ್ಟು ದೊರೆಯುತ್ತಿದ್ದು ಅಂಥ ವಿಚಾರಗಳನ್ನು ಗಮನಿಸದೆ ಸಂಕೇತಿಗಳ ಆಸಕ್ತಿ ಸೆಳೆದ ಕೆಲ ಬೆಳೆಗಳ ಬಗ್ಗೆ ಗಮನಿಸಬಹುದು.

ಅಡಿಕೆ ಬೆಳೆ ಸಂಕೇತಿಗಳನ್ನು ಉಳಿಸಿ ಬೆಳೆಸಿದ ಬೆಳೆ ಎಂಬಂತೆ ಕೃಷಿಕರ ಮಾತುಗಳಿಂದ ತಿಳಿಯುತ್ತದೆ. ಸಂಕೇತಿಗಳಿಗೆ ಅಡಿಕೆ ಬೆಳೆ ಪ್ರಮುಖ ಆಧಾರ ಹಾಗೂ ಒಂದು ಕಾಲಕ್ಕೆ ಅನಿವಾರ್ಯವೂ ಆಗಿತ್ತೆಂಬ ಅಂಶ (ಪುಟ ೩೬೫), ಇಂದು ಏನಾಗಿದೆ ಎಂಬ ವಾಸ್ತವ ಸ್ಥಿತಿ, 'ಹಿಂದೆ ಅಡಿಕೆ ಬೆಳೆದೋರಲ್ಲಿ ನೂರಕ್ಕೆ ತೊಂಬತ್ತು ಭಾಗ ಸಂಕೇತಿಗಳು. ಎಡೀತಾ ಇದ್ದೋರು ಸಹ ನೂರಕ್ಕೆ ತೊಂಬತ್ತು ಭಾಗ ಸಂಕೇತಿಗಳು. ವಾಸ್ತವವಾಗಿ ಹೇಳಬೇಕೆಂದರೆ ಹಣಕಾಸಿನ ಮುಗ್ಗಟ್ಟು ಸಂಕೇತಿಗಳಲ್ಲಿ ಬಹಳ ಇತ್ತು ... ಅಂತೆಯೇ ಇಂದು ಅಡಿಕೆ ಎಡಿಯೋರು ಶೇ.ಒಂದರಷ್ಟೂ ಇಲ್ಲ' ಎಂಬ ಮಾತುಗಳು ಬಡತನದ ಅಪರಿಹಾರ್ಯತೆಯನ್ನು ಸೂಚಿಸುತ್ತವೆ, ಅಡಿಕೆಗೆ, ಒಬ್ಬರು 'ಹಟ್ಟಿಗೊಬ್ಬರ ಮಾತ್ರ ತಕ್ಕದೆಂದು, ಸೀಮೆಗೊಬ್ಬರ ಹಾಕಿದರೆ ಪ್ರಯೋಜನವಿಲ್ಲ'ವೆಂದು ಹೇಳಿದರೆ (ಪು.೩೫೭) ಮತ್ತೊಬ್ಬರು, 'ಅಡಿಕೆಯಲ್ಲಿ ಹಿಂದಿನವರು ಪಾಲಿಸಿದ ವಿಧಾನವನ್ನೇ ಅನುಸರಿಸುತ್ತಾ ಇದೀವಿ. ಅಡಿಕೆಗೂ ನಾವು ಗೊಬ್ಬರ ಕೊಡ್ತೀವಿ (N:P:K) ಯಾಕೆ ಕೊಡ್ತೀವಿ ಎನ್ನುವುದು ಗೊತ್ತಿಲ್ಲ. ಸುಮ್ಮನೆ ಎಕರೆಗೆ ಎರಡು ಚೀಲ ಹಾಕ್ತೀವಿ' (ಪು.೩೧೪) - ಎನ್ನುತ್ತಾರೆ. ಈ ರೀತಿಯ ಅಭಿಪ್ರಾಯಗಳು ಎಲ್ಲ ಕಡೆಯಲ್ಲೂ

ಅಡಿಕೆ ಬೆಳೆಯ ವಿಧಾನ ನಿಶ್ಚಿತ ರೀತಿಯಲ್ಲಿಲ್ಲವೆಂದೂ ಈ ಬೆಳೆಯ ವೈಜ್ಞಾನಿಕ ವಿಧಾನದ ವಿಚಾರದ ಕಡೆಗೆ ನಮ್ಮ ಗಮನ ಸೆಳೆಯುತ್ತವೆ. ಪ್ರದೇಶವಾರು ಬೆಳೆ ವಿಧಾನಕ್ಕೆ ಸಂಬಂಧಿಸಿದಂತೆ ಇರುವ ವ್ಯತ್ಯಾಸಗಳು ಮತ್ತು ಇಳುವರಿ ಬಗೆಗಿನ ಮಾಹಿತಿ (ಪುಟ ೩೭೩-೩೮೦) ಕೃಷಿಕರಿಗೆ ಪ್ರಯೋಜನಕಾರಿಯಾಗಿದೆ. ಅಡಿಕೆ ತೋಟ ಮಾಡುವ ವಿಧಾನ, ಮುನ್ನೆಚ್ಚರಿಕೆ, ನಾಟಿ, ಕಳೆ ತೆಗೆಯುವುದು, ವೆಚ್ಚ, ನೀರು ಕೊಡುವುದು, ಮನೆಗೊಬ್ಬರ ಹಾಗೂ ರಾಸಾಯನಿಕ ಗೊಬ್ಬರ ಹಾಕುವ ಬಗೆ, ಮಣ್ಣಿನ ಪರೀಕ್ಷೆ, ಇಳುವರಿ ಮುಂತಾದ ವಿವರಗಳು (ಪುಟ ೨೮೭) ಸಂಗ್ರಹಯೋಗ್ಯವಾಗಿವೆ. ಅದೇ ರೀತಿ ತೆಂಗಿನ ಬೆಳೆಯ ಬಗ್ಗೆಯೂ (ಪುಟ ೭೧) ಬೆಳೆಯ ವಿಧಾನದ ಒಕ್ಕಣೆಯಿದೆ. ತೆಂಗು, ಅಡಿಕೆ, ಅಡಿಕೆಯೊಳಗೆ ವಿಳ್ಳೇದೆಲೆ ಹಂಬು, ಸಪೋಟ, ಹೂವಿನ ಗಿಡಗಳು, ತೆಂಗಿನ ನರ್ಸರಿ ಎಲ್ಲವನ್ನೂ ತೋಟದಲ್ಲಿ ಬೆಳೆದ ವ್ಯವಸಾಯಗಾರರಿದ್ದಾರೆ. ಅಡಿಕೆ, ವಿಳ್ಳೇದೆಲೆ ಒಟ್ಟಿಗೆ ಬೆಳೆಯುವುದರಿಂದ ಇರುವ ಆರ್ಥಿಕ ಅನುಕೂಲ ಬಲ್ಲ ಕೃಷಿಗಾರರಿದ್ದಾರೆ (ಪು.೨೮) 'ಅಡಿಕೆ ಇದ್ರೇನೆ ವಿಳ್ಳೇದೆಲೆ. ಇವೆರಡೂ ಹಣ ನೀಡುವ ಸಸ್ಯಗಳು' (ಪು.೩೯) ಎಂದು ಭಾವಿಸಿರುವ ಬೆಳೆಗಾರರೊಬ್ಬರು ಅಡಿಕೆ ತೋಟದ ವ್ಯವಸಾಯ ಮತ್ತು ವಿಳ್ಳೇದೆಲೆ ಬೇಸಾಯದ ಬಗ್ಗೆ ತಮ್ಮ ಸ್ವಂತ ಅನುಭವ ಬಿತ್ತರಿಸಿದ್ದಾರೆ. ಕೃಷಿ ಸಂಕೇತಿಗಳ ಪಾರಂಪರಿಕ ಕಸುಬಾದರೂ ಕೆಲವು ಕೃಷಿಕರು ತಮ್ಮ ಬೆಳೆ ಪ್ರಯೋಗಗಳಲ್ಲಿ ಸ್ವಾರಸ್ಯದ ವಿಚಾರಗಳನ್ನು ಕಂಡು ಅನುಭವಿಸಿದ್ದಾರೆ. '... ಸಕಾಲದಲ್ಲಿ ನೀರು, ಗೋಡು, ಗೊಬ್ಬರ ಕೊಡಬೇಕು. ವ್ಯವಸಾಯದಲ್ಲಿ ಆತುರಪಡಬಾರದು, ತಾತ್ಸಾರ ಮಾಡಬಾರದು... ರಾಗಿ, ಜೋಳ, ನವಣೆ, ಸಜ್ಜೆ ಬೆಳೆಯನ್ನು ಹೊಂದಿಸಿ ಬೆಳೆಯುವಾಗ ಭೂಮಿ ಸಮತೋಲವಾಗಿರುತ್ತೆ. ಕೆಲವು ಬೆಳೆಗಳು ಒಳಗೆ ನೀರು ಇಳಿಸಿ ಸತ್ವ ಹೀರುತ್ವೆ. ಕೆಲವು ಬೆಳೆಗಳು ಭೂಮಿಯ ಮೇಲ್ಪದರದಲ್ಲಿ ರಸ ಹೀರುತ್ವೆ. ಭೂಮಿಯ ಒಳಗಿನ ಗಾಳಿ ಹೊರಗೆ ಹಾಗೂ ಹೊರಗಿನ ಗಾಳಿ ಒಳಗೆ ಹೋದಾಗ ಮಣ್ಣಿನ ಆರೋಗ್ಯ ಸುಧಾರಣೆಯಾಗುತ್ತೆ'. (ಪುಟ ೬೪) - ಹೀಗೆ ಕೃಷಿಯಲ್ಲಿ ತಾವು ತಾವೇ ಕಂಡುಕೊಂಡ ಪ್ರಕೃತಿಯ ಸತ್ವ, ಸತ್ಯ, ರಹಸ್ಯಗಳ ಸ್ವಾನುಭವದ ಭಂಡಾರವೇ ಈ ಕೃತಿಯಲ್ಲಿ ತುಂಬಿದೆ. ವ್ಯವಸಾಯದಲ್ಲಿ ಸ್ವಂತ ಶ್ರಮಕ್ಕೇ ತೆರೆದುಕೊಂಡು ಪ್ರಯೋಗಶೀಲರಾಗಿ ಬಡತನವಿರಲಿ, ಆರ್ಥಿಕ ಸವಲತ್ತುಗಳಿರಲಿ ನಿಷ್ಠೆಯಿಂದ ದುಡಿದು ಸ್ವಾವಲಂಬನೆಯ ಜೀವನ ಸಂಕೇತಿಗಳು ನಡೆಸಿರುವ ನಿದರ್ಶನಗಳು ಈ ಕೃತಿಯಲ್ಲಿ ಹೇರಳವಾಗಿವೆ.

ತೋಟದ ಬೆಳೆಗಳ ಹಾಗೆ ಬತ್ತದ ಬೆಳೆ ಮಾಡಿರುವ ಸಾಧಕರೂ ಇದ್ದಾರೆ. ಥಾಯ್‌ಚುಂಗ್ ಎಂಬ ಬತ್ತದ ತಳಿಯನ್ನು ಜಪಾನ್ ಮಾದರಿಯಲ್ಲಿ ಬೆಳೆದವರು (ಪು.೨೮೬) ಒಳ್ಳೆ ಇಳುವರಿ ಪಡೆದಿದ್ದು ಹೊಸ ಹೊಸ ಬತ್ತದ ತಳಿಗಳು ಬಂದಂತೆಲ್ಲಾ ಅವುಗಳ ಪ್ರಯೋಗ ಮಾಡಿರುವವರೂ ಇದ್ದಾರೆ. (ಪು.೩೬೭, ೩೦೦) ಸಂಕೇತಿಗಳಿಗೆ ಬಹು ವಿಭಿನ್ನವಾದ ಕೃಷಿ ಕಾಫಿ ತೋಟದ ವ್ಯವಸಾಯ. Airforce ನಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿ ನಂತರ ಕೃಷಿ ಪ್ರವೃತ್ತಿ ಹಿಡಿದು ಕಾಫಿ ಬೇಸಾಯದ ಯೋಜನೆ ಕೈಗೊಂಡು ಯಶಸ್ವಿಯಾದ ಒಂದು ಆತ್ಮಕಥೆ (ಪುಟ. ೩೦೬, ೩೦೭) ಇತರರಿಗೆ ಸ್ಫೂರ್ತಿದಾಯಕವಾದುದು. ಕಾಫಿ ಬೆಳೆಗೆ ಸಂಬಂಧಿಸಿದ ತಾಂತ್ರಿಕ ವಿಚಾರಗಳು ಗಹನವಾದದ್ದು. ಕೃಷಿಕರ ಮಡದಿ (ಶ್ರೀಮತಿ ಭಾಗ್ಯಲಕ್ಷ್ಮಿ)ಯ ಕೃಷಿ ವಿವರಣೆ ಸಂಕೇತಿಗಳಲ್ಲಿ ಮಹಿಳೆಯರ ಪಾತ್ರ, ಸಾಧನೆಗೆ ಅಳತೆಗೋಲಾಗಿದೆ. ಅವರ ನಿರೂಪಣೆಯಲ್ಲಿ ಅವರ ಮುತ್ತಜ್ಜಿಯ ವ್ಯವಸಾಯದ ರೀತಿ ಮಹಿಳೆಯರ ಆತ್ಮಬಲಕ್ಕೆ ಪುಷ್ಟಿಯೊದಗಿಸುವಂಥದು. ('ನೀವು ನನ್ನಷ್ಟು ಕೆಲಸ ಮಾಡಬೇಡಿ; ನಾನು ಮಾಡುವ ಕೆಲಸದಲ್ಲಿ ಅರ್ಧ ಕೆಲಸ ಮಾಡಿ ಸಾಕು' - ಎಂದು ಆಳುಗಳಿಗೆ ಬೇರೆಯವರು ಕೊಡುವ ಕೂಲಿಗಿಂತ ಜಾಸ್ತಿ ಕೂಲಿ ಕೊಡುತ್ತಿದ್ದರು') ಮಹಿಳೆಯರ ವ್ಯವಸಾಯದ ಶೈಲಿಗೆ ಕೈಗನ್ನಡಿ ಈ ನಿರೂಪಣೆ. ಸರ್ಕಾರಿ-ಸರ್ಕಾರೇತರ ಸಂಸ್ಥೆಗಳಲ್ಲಿ ವೃತ್ತಿಪರರಾಗಿದ್ದು ವೃತ್ತಿಯಲ್ಲಿದ್ದುಕೊಂಡೇ ಹಾಗೂ ಅದನ್ನು ಬಿಟ್ಟೂ ಕೃಷಿಯ ಕಡೆಗೆ ಪ್ರವೃತ್ತರಾದ ಅನೇಕ ಸಂಕೇತಿ ವ್ಯವಸಾಯಸ್ಥರ ಉದಾಹರಣೆಗಳು ನಮಗೆ ಕಾಣಸಿಗುತ್ತವೆ.

ಗೊಬ್ಬರ, ಔಷಧಿಗಳಿಗೆ ವೈಜ್ಞಾನಿಕ ವಿಧಾನ ಅನುಸರಿಸಿ ಮಣ್ಣಿನ ಸಾವಯವ ಅಂಶ, ಸತ್ವ ಹೆಚ್ಚಿಸಿ ಗುಣಮಟ್ಟದ ಕಾಫಿ, ಏಲಕ್ಕಿ, ಮೆಣಸು ಬೆಳೆದಿರುವ ಮಡಿಕೇರಿಯ (ಶ್ರೀ ಕೆ.ವಿಶ್ವನಾಥ್, ಪು.೩೩೨) ಕಾಫಿ ಕೃಷಿಕರ ವಿಧಾನ ಅಪರೂಪವೆನ್ನಬಹುದು.

ರೊಬಸ್ಟಾ, ಅರೇಬಿಕಾ ಕಾಫಿ ಹೇಗೆ ಬೆಳೆಯಬಹುದೆಂಬ ತಾಂತ್ರಿಕ ಸಂಗತಿಗಳು ಮತ್ತು ಕಾಫಿ ಬೆಳೆಗಾರರು ಏಲಕ್ಕಿಯನ್ನೂ ಸಹ ಹೇಗೆ ಕೃಷಿ ಮಾಡಬಹುದೆಂದು ಸುದೀರ್ಘವಾಗಿ ನಿರೂಪಿಸಿದ್ದಾರೆ. ಅಡಿಕೆ ಪಟ್ಟೆಯಿಂದ ಅಡಿಕೆ ತಟ್ಟೆಗಳನ್ನು ಮಾಡಿ ಮಾರಿ ಜೀವನ ಸಾಗಿಸಿರುವ ಕುಟುಂಬಗಳ ಕಥೆಯೂ (ಪು.೩೫೧) ಸಂಕೇತಿಗಳ ಶ್ರಮದ ಬದುಕಿಗೆ ಸಾಕ್ಷಿಯಾಗಿದೆ.

Navyಯಲ್ಲಿ Captain ಆಗಿದ್ದ ಮೈಸೂರಿನ ಶ್ರೀ ಕೆ.ಕೆ.ವೆಂಕಟೇಶ್ ಆರು ತಿಂಗಳು ಭೂಮಿಯ ಮೇಲೆ ಆರು ತಿಂಗಳು ನೀರಿನ ಮೇಲೆ ತಮ್ಮೆಲ್ಲ ಸೇವೆಯನ್ನು ಪ್ರಪಂಚ ಸುತ್ತುವುದರಲ್ಲೇ ಕಳೆದಿರುವ ಇವರು ತಮ್ಮ ವೃತ್ತಿಯ ಜೊತೆಗೆ ಪತ್ನಿ ಸಹಕಾರದಿಂದ Tea Estate ವೈಜ್ಞಾನಿಕವಾಗಿ ನಿರ್ವಹಣೆ ಮಾಡಿ ಕೃಷಿಯಲ್ಲಿ ಅಸಾಧಾರಣ ಸಾಧನೆ ಮಾಡಿದಂಥವರು (ಪು.೬೯೦) Tea ಗಿಡದ ಸೊಪ್ಪು, ನೆರಳಿಗೆ Silver oak ಮರ ಬೆಳೆಸುವುದು, Factoryಗಳಿಗೆ ಎಲೆ ಮಾರುವುದು, ಟೀ ಸಂಸ್ಕರಣೆ ವಿಚಾರಗಳು, ಉತ್ತಮ ಗುಣಮಟ್ಟದ ಟೀ ತಯಾರಿಸುವ ಬಗೆ, ಅದರ ಇಳವರಿ- ಹೀಗೆ ಟೀ ಬೆಳೆಯ ಸಮಗ್ರ ವಿಚಾರಗಳನ್ನು ಹೃದ್ಯವಾಗಿ ನಿವೇದಿಸಿದ್ದು, ಓದುಗರಿಗೆ, ಆ ಕ್ಷೇತ್ರದ ಪರಿಚಯ ಪಡೆಯಬೇಕೆನ್ನುವವರಿಗೆ ತುಂಬಾ ಸಹಕಾರಿಯಾಗಿದೆ. ಇದು ವೃತ್ತಿಯಲ್ಲಿದ್ದು ಮಾಡಿದ ಅಸಾಮಾನ್ಯಕಾರ್ಯ. ಕೃಷಿ ಹಿನ್ನೆಲೆ ಇರದ ವ್ಯಕ್ತಿಯೊಬ್ಬರ ಚಿಕ್ಕ ತೋಟದ ವಿಚಾರವೂ ಲೇಖಕರಿಗೆ 'ದಾಖಲಿಸಲು ಯೋಗ್ಯವಾದ ವಿಚಾರ'ವಾಗಿ ಕಂಡಿದ್ದು ಇದರಿಂದ ಲೇಖಕರ ಕೃಷಿ ಕಾಳಜಿ ನಮಗೆ ಅರಿವಾಗುತ್ತದೆ.

ಬೆಂಗಳೂರಿನಲ್ಲಿ ನೆಲೆಸಿ ಪ್ರವೃತ್ತಿಯಲ್ಲಿ ತಮ್ಮ ತನುಮನಗಳನ್ನು ಕೃಷಿಗೆ ಒಪ್ಪಿಸಿಕೊಂಡಿರುವ ನಾಲ್ವರ ಸಂದರ್ಶನ ಗ್ರಂಥದ ಕಡೆಯ ಭಾಗದಲ್ಲಿದ್ದು ಒಂದೊಂದೂ ತನ್ನದೇ ಆದ ವಿಚಾರವಂತಿಕೆಯಿಂದ, ಬೌದ್ಧಿಕತೆಯ ದೃಷ್ಟಿಯಿಂದ ಸುಸಂಗತವಾಗಿದೆ. ವಿದ್ಯಾಭ್ಯಾಸಕ್ಕಾಗಿ ಬೆಂಗಳೂರು ಸೇರಿದರೂ ಗ್ರಾಮಾಂತರದ ವ್ಯವಸಾಯದ ಬದುಕಿನಿಂದ ವಿಮುಖರಾಗದೆ ನಗರದಲ್ಲಿದ್ದುಕೊಂಡೇ ಕೃಷಿಕಾರ್ಯ ನಡೆಸಿ ಅಭಿನಂದನಾರ್ಹರಾಗಿದ್ದಾರೆ. ಕೆಲವರು ವೃತ್ತಿಯಲ್ಲಿ ಪ್ರಶಸ್ತಿ ಮಾತ್ರವಲ್ಲದೆ ಕೃಷಿಯಲ್ಲೂ ಪ್ರಶಸ್ತಿ ಪಡೆದಿದ್ದಾರೆ. (ಪು.೪೦೨) ಡಾ.ಬಿ.ಆರ್.ರಾಮಕೃಷ್ಣ ಆಯುರ್ವೇದ ವೈದ್ಯರಾಗಿದ್ದು ಇಬ್ಬರು ಸ್ನೇಹಿತರು ಜಮೀನು ಕೇಳಿದರೆಂದು ಅವರಿಗೂ ಕೊಟ್ಟು, ತಾವೂ ಉಳಿಸಿಕೊಂಡು ಕೃಷಿ ನಡೆಸಿದ ಉದಾತ್ತರು ('ನಮ್ಮ ಮನೇಲಿ ಹಂಚಿಕೊಂಡು ಬಾಳುವ ಮಾರ್ಗದರ್ಶನ ಇತ್ತು. ಯಾರಾದ್ರೂ ಅಪೇಕ್ಷೆಪಟ್ರೆ ಅದನ್ನು ಉಪೇಕ್ಷೆ ಮಾಡಬಾರದು. ಕೊಟ್ಟೇ ಕೊಡಬೇಕು ಎನ್ನುವುದು ತತ್ತ್ವ') ತೇಗದ ಬೆಳೆ ಬಗೆಗೆ, ಆದಾಯದ ಬಗೆಗೆ ತಮ್ಮ ಪ್ರತ್ಯಕ್ಷ ಅನುಭವ ಹಂಚಿಕೊಂಡಿರುವುದು ಮಾತ್ರವಲ್ಲದೆ ತಮ್ಮ ವೃತ್ತಿಗೆ ಪೂರಕವಾಗಿ ಗಿಡಮೂಲಿಕೆಗಳ ೨೫೦ಕ್ಕೂ ಹೆಚ್ಚು ಔಷಧಿ ಸಸ್ಯಗಳನ್ನು ಬೆಳೆಯುವ ಪ್ರಯತ್ನ ಮಾಡಿದ್ದಾರೆ. ವಿವರವನ್ನೆಲ್ಲಾ ಪುಸ್ತಕವನ್ನು ಓದಿಯೇ ತಿಳಿಯಬೇಕು. Clinicನಲ್ಲಿ ಶಾಲೆ ಆರಂಭಿಸಿ ೩೦೦ಕ್ಕೂ ಹೆಚ್ಚು ಬಡಮಕ್ಕಳಿಗೆ, ಕೊಳೆಗೇರಿ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ನೀಡುವ ಇವರ ಸಾಮಾಜಿಕ ಕಳಕಳಿ ಸಂಕೇತಿ ಸಮುದಾಯಕ್ಕೇ ಗೌರವ ತರುವಂಥಾದ್ದಾಗಿದೆ.

ಶ್ರೀ ಬಿ.ಎನ್.ವಿ.ಸುಬ್ರಹ್ಮಣ್ಯ ಅವರೊಡನೆ ನಡೆಸಿರುವ ಸುಮಾರು ೧೫ ಪುಟಗಳ ವಿಸ್ತಾರವಾದ ಸಂದರ್ಶನ ಕೃಷಿಗೆ ಮಾತ್ರ ಸೀಮಿತವಾಗದೆ ಬ್ರಾಹ್ಮಣ ವರ್ಗದ ಸ್ಥಿತಿಗತಿಯ ಬಗ್ಗೆ, ಇಂದಿನ ಜೀವನ, ಶಿಕ್ಷಣ ಪದ್ಧತಿಯ ಬಗ್ಗೆ, ಸಂಕೇತಿ ಕೃಷಿ ಉಳಿಯುವ ಬಗ್ಗೆ ಗಾಢವಾದ ಚಿಂತನೆಗಳಿಂದ ಕೂಡಿದ್ದು ಮೌಲಿಕವಾಗಿದೆ. ಸಂಕೇತಿ ನೆಲೆಗಳು, ಕೃಷಿಯ ಬಗ್ಗೆ ಅವರ ಆಳವಾದ ಜ್ಞಾನ, ಅನುಭವ ಸಂದರ್ಶನದಲ್ಲಿ ಎದ್ದು ಕಾಣುತ್ತಿದೆ. 'ಮಿಶ್ರ ಬೇಸಾಯ'ದ ಅಗತ್ಯ ಕಂಡುಕೊಂಡು ಆಚರಿಸಿದವರು ಇವರು. ಇಡೀ ಬ್ರಾಹ್ಮಣವರ್ಗಕ್ಕೇ ಅನ್ವಯಿಸುವಂತೆ ಅವರ ಮಾತುಗಳು ವಾಸ್ತವವನ್ನು ತೆರೆದಿಡುವ ಪ್ರಯತ್ನ. ['ಬ್ರಾಹ್ಮಣ ಇಡೀ ಪ್ರಪಂಚಕ್ಕೆ ಮಾರ್ಗದರ್ಶನ ತೋರಿಸ್ತಿದ್ದ. ಈಗ ಬ್ರಾಹ್ಮಣನಿಗೆ ಮಾರ್ಗದರ್ಶನ ತೋರಿಸುವ ಸ್ಥಿತಿ ಬಂದಿದೆ'. 'ಬ್ರಾಹ್ಮಣರಲ್ಲಿ ಸಂಘಟನೆ ಇಲ್ಲ. ಅದಕ್ಕೇ ನಾವು ಎಲ್ಲವನ್ನೂ ಕಳೆದುಕೊಂಡಿದ್ದೇವೆ'. (ಪು.೪೨೪) 'ನಾನು ಸಂಕೇತಿ

ಗಳಷ್ಟೇ ಅಲ್ಲ. ಬ್ರಾಹ್ಮಣರು ಜಮೀನು ಇಟ್ಟು ಬೆಳೆಸಬೇಕು ಅಂತೀನಿ... ನಾನು ಬ್ರಾಹ್ಮಣ ಸಂಘದ ಅಧ್ಯಕ್ಷನಾಗಿ ಎಲ್ಲಾ ಕಡೆ ಪ್ರಾರ್ಥನೆ ಮಾಡೋದು ಅಂದ್ರೆ ದಯವಿಟ್ಟು ಜಮೀನು ಮಾರಬೇಡಿ, ಉಳಿಸಿಕೊಳ್ಳಿ ಅಂತ' (ಪು.೪೧೯)] ಲೇಖಕರು 'ಇದು ಅವರ ಸಂದರ್ಶನ ಎನ್ನುವುದಕ್ಕಿಂತ ಅವರ ಆತ್ಮಾವಲೋಕನ ಎಂದರೆ ಹೆಚ್ಚು ಅರ್ಥ ಬಂದೀತೇನೋ' (ಪು.೪೧೪) ಎನ್ನುತ್ತಾರೆ. ಅದು ಸರಿ; ಆದರೆ ಬ್ರಾಹ್ಮಣವರ್ಗದ ಎಲ್ಲರಿಗೂ ಸಂದರ್ಶನ ಓದುತ್ತಿದ್ದರೆ ಅವರವರ ಆತ್ಮಾವಲೋಕನ ಮಾಡಿಕೊಳ್ಳುವಷ್ಟು ಜಾಗೃತಗೊಳಿಸುವ ಚೈತನ್ಯ, ಕಳಕಳಿ ಅತ್ಯಂತ ಪರಿಣಾಮಕಾರಿಯಾಗಿ ಇಲ್ಲಿ ಸ್ಫುರಿಸಿದೆ.

ಬೆಂಗಳೂರಿನ ಪ್ರಭಾ ಕಣ್ಣಿನ ಆಸ್ಪತ್ರೆಯ ಡಾ.ರಾಮಚಂದ್ರಮೂರ್ತಿ ಹಾಗೂ ಅವರ ಶ್ರೀಮತಿಯವರ ತೋಟಗಾರಿಕೆಯ ವಿವರಗಳು ತೋಟಗಾರಿಕೆಯನ್ನು ಒಂದು ಒಳ್ಳೆಯ ಹವ್ಯಾಸವನ್ನಾಗಿ ಮಾಡಿಕೊಂಡು ಅದರಲ್ಲಿ ಆನಂದ ಕಾಣುವ ಮನೋಭಾವಕ್ಕೆ ನಿದರ್ಶನವಾಗಿದೆ. ಐದು ಬೋರ್‌ವೆಲ್ ಹಾಕಿಸಿ ಹನಿ ನೀರಾವರಿಯಿಂದ ತೆಂಗು, ಬತ್ತ, ಗೋಧಿ, ತೊಗರಿ ಮಾತ್ರವಲ್ಲದೆ ಭಾರತದಲ್ಲಿ ಬೆಳೆಯುವ ಎಲ್ಲ ಜಾತಿಯ ಮಾವಿನ ತಳಿಯನ್ನೂ ಇತರ ಹಣ್ಣುಗಳನ್ನೂ ಬೆಳೆದಿದ್ದಾರೆ. ತೇಗ, ಗಂಧ ಇತ್ಯಾದಿ ಮರಗಿಡಗಳನ್ನು ಬೆಳೆದಿರುವ ಇವರ ತೋಟ ಒಂದು ಆದರ್ಶ ತೋಟವಾಗಿದೆ. ವೃತ್ತಿಯಷ್ಟೇ ಹವ್ಯಾಸವನ್ನು ಗಂಭೀರವಾಗಿ ಸ್ವೀಕರಿಸಿ ಬೆಳೆಗಳ ವೈಜ್ಞಾನಿಕ ಅಧ್ಯಯನ ಮಾಡಿ ಅರಣ್ಯಾಧಿಕಾರಿಗಳ ಜೊತೆ ಸಂವಾದ ಮಾಡಿ, ತೋಟಕ್ಕೆ ಗಾಳಿ ತಡೆಯುವ ಬೇಲಿ ನಿರ್ಮಾಣ ಮಾಡಿಸಿ ತೋಟದ ನಿರ್ವಹಣೆ ಮಾಡಿರುವುದು ಗಮನಾರ್ಹ.

ಬೆಂಗಳೂರಿನ Mahyco ಕಚೇರಿಯಲ್ಲಿ ರಾಷ್ಟ್ರೀಯ ಮಾರುಕಟ್ಟೆ ಅಧಿಕಾರಿಯಾಗಿರುವ ಶ್ರೀ ಟಿ.ಎನ್.ಸುಬ್ಬರಾವ್ ಅವರ ಚಿಂತನೆಗಳು ಈ ಗ್ರಂಥದ ಉದ್ದೇಶ, ಆಶಯಗಳಿಗೆ ಕಳಸಪ್ರಾಯವಾಗಿವೆ. (ಪು.೪೩೫) ಕೃಷಿ ಹಿನ್ನೆಲೆಯಿಂದ ಬಂದು ಕೃಷಿ ಪದವೀಧರರಾಗಿ ಹಳ್ಳಿಯ ವ್ಯವಸಾಯದ ರೀತಿಯನ್ನು ಬದಲಿಸುವ ಅದಮ್ಯ ಆಸೆಯನ್ನು ಹೊಂದಿ ಹಳ್ಳಿಯಲ್ಲಿ ಎಕರೆಗೆ ಹತ್ತು ಪಲ್ಲ ರಾಗಿ ಬೆಳೆದು ರೈತರ ಗಮನ ಸೆಳೆದವರು. ಸಂಕೇತಿ ಕೃಷಿ ನಶಿಸಲು ಕೇವಲ ತೋಟದ ಬೆಳೆಯೊಂದನ್ನೇ ನಂಬಿ ಅದರಲ್ಲಿನ ಉತ್ಪತ್ತಿಯೇ ಸಾಕೆಂದು ಇತರ ಬೇಸಾಯದತ್ತ ಗಮನ ನೀಡದೆ ತಪ್ಪು ಮಾಡಿದರೆಂದು ಭಾವಿಸುವ ಸುಬ್ಬರಾವ್ ರೈತನಿಗೆ ಉತ್ತಮ ತಾಂತ್ರಿಕತೆಯಿಂದ ಬಿತ್ತನೆ ಬೀಜ ನೀಡಿ ಉತ್ತಮ ಸೇವೆ ಒದಗಿಸಿದರೆ ಅಭಿವೃದ್ಧಿ ಸಾಧ್ಯ ಎಂದು ನಂಬಿ ರೈತರನ್ನು ಜಾಗೃತಗೊಳಿಸುವ ಮಹಾಸಾಧನೆ ಮಾಡಿದವರು. ಹೈಬ್ರಿಡ್ ಕೋಸು ಬೀಜವನ್ನು ತಂದು ಹಾಸನದ ರೈತರಿಗೆ ಕೊಟ್ಟು ಒಂದು ಎಕರೆಗೆ ಅರುವತ್ತು ಸಾವಿರ ಲಾಭ ಗಳಿಸಲು ಪ್ರೇರಕಶಕ್ತಿಯಾಗಿ ಕಾರ್ಯಪ್ರವೃತ್ತರಾದವರು. ರೈತರೊಬ್ಬರ ಪ್ರಶಂಸೆ ಕೇಳಿದ ಮೇಲೆ '... ನಮ್ಮ ಜೀವನದಲ್ಲಿ ನಿಜವಾದ ಮಾರ್ಪಾಡು ಯಾವಾಗ ಆಗುತ್ತೆ ಅಂದ್ರೆ ನಮ್ಮಿಂದ ಇತರರಿಗೆ ಯಾವಾಗಲಾದರೂ ಅನುಕೂಲವಾದಾಗ... ರೈತರಿಗೆ ಇನ್ನೂ ಹೆಚ್ಚಿನ ತಂತ್ರಜ್ಞಾನ ಮುಟ್ಟಿಸಬೇಕು ಅಂತ ಸಂಕಲ್ಪ ಮಾಡಿದೆ' (ಪು.೪೪೧) ಎಂದು ಅಂದುಕೊಂಡಂತೆ ಒಬ್ಬ ಅಧಿಕಾರಿಯಾಗಿ ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಕೃಷಿಕರಿಗೆ ಮುಟ್ಟಿಸುವ ಕಾರ್ಯ ಮಾಡಿದ್ದಾರೆ. ಕೃಷಿ ನಿರಾತಂಕವಾಗಿ ಮುಂದುವರೆಯಲು ಉತ್ತಮ ಬಿತ್ತನೆ ಬೀಜ, ಸರಿಯಾದ ಮಾರ್ಗದರ್ಶನ ಹಾಗೂ ವೈಜ್ಞಾನಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕೆಂಬುದೂ, ರೈತನ ಬೆಳೆಗೆ ಸರಿಯಾದ ಬೆಲೆ ಸಿಗಬೇಕೆಂಬ ಸುಬ್ಬರಾವ್ ಅವರ ನಿಲುವೂ ವೃತ್ತಿಯಿಂದ ಕಂಡುಕೊಂಡದ್ದು.

ನಿವೃತ್ತಿ ಹೊಂದಿದ ಅನಂತರ ಹುಟ್ಟೂರಿಗೆ ಬಂದು ವ್ಯವಸಾಯನಿರತರಾಗುವ, ಯುವ ಪೀಳಿಗೆಗೆ ಮಾದರಿಯಾಗಬಲ್ಲ ಆದರ್ಶದಂಪತಿಗಳ ಚಿತ್ರಣ (ಪು.೨೭೬) ಹಾಗೇ ಕೆಲಸ ಬಿಟ್ಟು ಬೆಂಗಳೂರಿನಿಂದ ಗ್ರಾಮಕ್ಕೆ ಬಂದು ಜಮೀನು ಕ್ರಯಿಸಿ ವ್ಯವಸಾಯಕ್ಕೆ ನಿಲ್ಲುವ ಒಂದು ಮನಸ್ಸಿನ ಮುಕ್ತ ಅಭಿಪ್ರಾಯ (ಪು.೩೭೬) ಜಮೀನಿಗೆ ಬಂದಾಗ 'ಏನೋ ಒಂದು ತರಹದ vibration ನನಗಾಯ್ತು! ಇದು ನನ್ನ ಜಾಗ ಅಂತ ಅನ್ನಿಸಿತು' - ಕೇವಲ ಭಾವುಕತೆ ಆಗದೆ ಬೌದ್ಧಿಕ ನೆಲೆಗಟ್ಟು ಉಳ್ಳದ್ದಾಗಿದೆ. ವ್ಯವಸಾಯಕ್ಷೇತ್ರದ ನಾನಾ ಅನುಭವಗಳನ್ನುಳ್ಳ ಕೃಷಿಕರ ಆತ್ಮಬಿನ್ನಹ ಈ ಕೃತಿಯಲ್ಲಿ ವಿಸ್ತೃತವಾಗಿದ್ದು ಈ ಲೇಖನದ ಮಿತಿ

ಯಲ್ಲಿ ಎಲ್ಲರ ಪ್ರಸ್ತಾಪ ಮಾಡಲು ಅವಕಾಶವಾಗಿರುವುದಿಲ್ಲ. ಎಲ್ಲರನ್ನೂ ಹೆಸರಿಸಲೂ ಸಾಧ್ಯವಿಲ್ಲ. ಎಲ್ಲ ಬೆಳೆಗಳ ಬಗ್ಗೆ ತಿಳಿಯಲು ಪುಸ್ತಕವನ್ನೇ ಆಸಕ್ತರು ಸಾದ್ಯಂತ ಓದುವುದು ಉತ್ತಮ. ಲೇಖಕರು ವಿವಿಧ ಬೆಳೆಗಳಿಗೆ ಸಂಬಂಧಿಸಿದಂತೆ ಪುಟ ಸೂಚಿಸಲು ಒಂದು ಸೂಚಿಯನ್ನು ಒದಗಿಸುವುದು ಒಳ್ಳೆಯದು. ಅಂತೆಯೇ ಸಂದರ್ಶನ ನಡೆಸಿದ ದಿನಾಂಕವನ್ನೂ ಸೂಚಿಸಿದಲ್ಲಿ ಒಂದು ಕಾಲದ ಕೃಷಿಯ ಐತಿಹಾಸಿಕತೆಯ ಮಹತ್ವ ದೊರೆತಂತಾಗುತ್ತದೆ.

ಸಂಕೇತಿ ಕೃಷಿಕರು ತಮ್ಮ ವ್ಯವಸಾಯದ ಅನುಭವಸಾರವನ್ನೇ ಇಲ್ಲಿ ಹರಿಸಿದ್ದಾರೆ. 'ಎಲ್ಲವುದಕ್ಕೂ ಒಂದು life cycle ಅಂತ ಇರುತ್ತೆ. Marketingನಲ್ಲಿ we build brands. ಆ Brandಗೂ life ಇರುತ್ತೆ. ಅದೊಂದು cycle. ಬೆಳೀತಾ ಬೆಳೀತಾ curve ಮೇಲೆ ಹೋಗುತ್ತೆ. ಆಮೇಲೆ curve ತಿರಗಾ ಕೆಳಗೆ ಬರುತ್ತೆ. Brandಗೂ ಸಾವಿದೆ. ಆದ್ರೆ ನಾವು ಅದನ್ನು ಸಾಯದೇ ಇರೋ ತರಹಾ ಜೋಪಾನವಾಗಿ ಕಾದಿಡ್ತೀವಿ ಅಷ್ಟೆ' -(ಪು.೩೮೦) - ಎಂಬ ಮಾತು ಅನುಭವದಿಂದ ಕಂಡುಕೊಂಡ ವಾಣಿಜ್ಯ ರಹಸ್ಯ. ಕೃಷಿಕರ ನಿವೇದನೆಗಳಲ್ಲಿ ಸೊಗಸಾದ ಕಲ್ಪನೆಗಳು, ಕಾವ್ಯದ ಪ್ರತಿಭಾ ಸ್ಪರ್ಶವಿರುವುದು ಮಾತ್ರವಲ್ಲದೆ ಜೀವನದಲ್ಲಿ ಕಂಡ ಸತ್ಯದರ್ಶನದ ಪ್ರಾಮಾಣಿಕ ಅನಿಸಿಕೆಗಳಿವೆ. ತಮ್ಮ ಬದುಕಿನ ಧ್ಯೇಯೋದ್ದೇಶಗಳನ್ನು ನಿರ್ಮಲ ಮನಸ್ಸಿನಿಂದ ಹೇಳಿಕೊಂಡಿದ್ದಾರೆ. ಕೆಲವನ್ನು ಉದಾಹರಿಸಬಹುದು :

'ಎಲ್ಲರೊಳಗಾಗಿ ಬದುಕುವುದೇ ನನ್ನ ಜೀವನಧರ್ಮ.' (ಪು.೧೯)

'ಹಣದ ಮುಗ್ಗಟ್ಟಿನಿಂದ ಬೋರ್ ಕೊರೆಸಲು ಆಗಿಲ್ಲ. ಅದಕ್ಕೇ ಗಿಡಗಳು ಬೇಸಗೇಲಿ ಒಣಗುತ್ವೆ, ಮಳೆಗಾಲದಲ್ಲಿ ಚಿಗುರುತ್ವೆ. ಅವು ಚಿಗುರಿದಾಗ ನನ್ನ ಕನಸುಗಳೂ ಚಿಗುರುತ್ವೆ.' (ಪು.೬೯)

'ಬಾಗಾಯ್ತನ್ನು ಪೂರ್ಣವಾಗಿ ಒಂದು ಸಂಸಾರಕ್ಕೆ ಹೋಲಿಸಬಹುದು. ಯಾವಾಗಲೂ ಸಹ ತೆಂಗಿನಮರ ತಲೇಲಿ ಎಳನೀರನ್ನು ಹೊತ್ತಿರುತ್ತೆ. ಅದು ಮನೆಯ ಯಜಮಾನನ ತರಹ. ಯಾವ Timeನಲ್ಲಿ ಯಾರೇ ಬಂದ್ರೂ "ಬನ್ನಿ ಒಳಗೆ" ಅಂತ ಕರೆಯೋ ರೀತಿಯಲ್ಲಿ ತೆಂಗಿನಮರ. ಮನೆಯಲ್ಲಿ ನಾಲ್ಕಾರು ಜನ ದುಡಿಯೋ ಮಕ್ಕಳಿಗೆ ಅಡಿಕೆ ಮರಗಳನ್ನು ಹೋಲಿಸಬಹುದು. ಮನೆಯನ್ನು ಶುಚಿಯಾಗಿ ಇಟ್ಟುಕೊಂಡಿರುವ ಗೃಹಿಣೀನ ಎಲೆ ಹಂಬಿಗೆ ಹೋಲಿಸಬಹುದು. ಸಂಸಾರದಲ್ಲಿ ನಾಲ್ಕಾರು ಜನ ಮಕ್ಕಳು ಮರಿ ಇರುವ ರೀತಿಯಲ್ಲಿ ಬಾಳೆಗಿಡ ಇರುತ್ತೆ. ಬಾಗಾಯ್ತು ಎನ್ನುವ ವ್ಯವಸಾಯವೂ ಒಂದೇ ಸಂಸಾರವೂ ಒಂದೇ ಅಂತ ಹಿರಿಯರು ಹೇಳಿದ್ರಲ್ಲಿ ಅರ್ಥವಿದೆ' (ಪು.೨೦೯)

'ಹಿಮಾಲಯದಲ್ಲಿ ಮಿಲಿಟರಿಯವರು ಯಾವ ರೀತಿ ಶಿಸ್ತಿನಿಂದ ಇರ್ತಾರೋ ನಾವೂ ಅದೇ ರೀತಿ ಶಿಸ್ತಿನಿಂದ ಇರಬೇಕು. ಸೋಮಾರಿಗಳಾಗಬಾರದು.' (ಪು.೨೪೯)

'ನಾನು ಅಲ್ಪತೃಪ್ತ... ಭೂಮಿ ಕೊಟ್ಟಷ್ಟರಲ್ಲಿ ತೃಪ್ತನಾಗಿದೀನಿ. ಪುಸ್ತಕದ ವಾಸನೆ ತಲೆಗೆ ಹೋಗದಾದಾಗ ಮಣ್ಣಿನ ವಾಸನೆ ತಂತಾನೆ ಬರುತ್ತೆ.' (ಪು.೩೨೪)

'ಹತ್ತು ರೂಪಾಯಿ ಕೊಟ್ಟು ಮಾವಿನ ಹಣ್ಣು ಖರೀದಿ ಮಾಡಿ ತಿನ್ನೋದಕ್ಕಿಂತ, ನಮ್ಮ ತೋಟದಲ್ಲಿ ಬೆಳೆದ ನೂರು ಮಾವಿನ ಹಣ್ಣನ್ನು ನೋಡಿದ್ರೇ ಸಂತೋಷ.' (ಪು.೨೦೬)

'ನಮ್ಮ ಮನೇಲಿ ಎಲ್ಲರಿಗೂ ವ್ಯವಸಾಯದ ಮೇಲೆ ಆಸಕ್ತಿ. ಗೋಡೆ ಇದ್ರೆ ತಾನೆ ಚಿತ್ತಾರ ಬರೀಬಹುದು. ಅದಕ್ಕೆ ಈ ಗೋಡೇನ ಮಕ್ಕಳಿಗೆ ಉಳಿಸಬೇಕು ಅಂತ ಮಾಡಿದೀನಿ.' (ಪು.೧೭೨)

ತಮ್ಮ ತರುವಾಯ ಮಕ್ಕಳು ಕೃಷಿ ಮುಂದುವರಿಸುವ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳು ಕೃತಿಯ ಸಂದರ್ಶನಗಳಲ್ಲೆಲ್ಲಾ ಒಡಮೂಡಿವೆ. ಸಂಕೇತಿ ಕೃಷಿ ನಶಿಸದೆ ಮುಂದೆಯೂ ದೇಶ ಕಾಲಗಳಲ್ಲಿ ಸತತ ಉಳಿಯಬೇಕು ಎಂಬ ಲೇಖಕರ ಕಾಳಜಿ ಎಲ್ಲರಿಂದ ಸಂಕೇತಿ ಕೃಷಿಯ ಭವಿಷ್ಯದ ಬಗ್ಗೆ ತಿಳಿಯುವ, ಕೇಳುವ ಕುತೂಹಲಕ್ಕೆ ಹಚ್ಚಿದೆ. ಕೆಲವರಿಂದ ಆಶಾಭಾವ ಉಂಟಾದರೆ ಮತ್ತೆ ಕೆಲವರ ಮಾತುಗಳಿಂದ ನಿರಾಶೆಯ ಛಾಯೆ ಕವಿಯುತ್ತದೆ.

'ಮತ್ತೂರಿನ ಎಲ್ಲ ಸಂಕೇತಿ ಕುಟುಂಬದಲ್ಲೂ ಒಬ್ಬನಿದ್ದು ವ್ಯವಸಾಯ ನೋಡಿಕೋತಿದಾನೆ. ಸಂಕೇತಿಗಳ ಕೃಷಿ ಇಲ್ಲಿ ಮುಂದುವರಿಯುತ್ತೆ.' (ಪು.೨೨೫)

'ವ್ಯರ್ಥವಾಗಿ ಕಾಲ ಕಳೆಯದೆ ಬದುಕನ್ನು ರೂಢಿಸಿದ್ದೇನೆ. ವ್ಯವಸಾಯಕ್ಕೆ ಕೊನೆ ಮೊದಲಿಲ್ಲ... ಒಬ್ಬ ಮಗ ಡಾಕ್ಟರ್ ಆದ. ಮತ್ತೊಬ್ಬ ಇಂಜಿನಿಯರ್ ಆದ... ಹಣಕಾಸಿನ ಸೌಕರ್ಯವಿಲ್ಲದೇ ಹಾಗೇ ಜಮೀನನ್ನು ಹಾಳುಬಿಟ್ಟಿದ್ದೆ. ಈಗ ಇಲ್ಲಿ ವೈದ್ಯನಾಗಿರುವ ನನ್ನ ಮಗ ಅದನ್ನು ಅಭಿವೃದ್ಧಿ ಮಾಡಿ ತೋಟ ಮಾಡಿದ್ದಾನೆ. ವ್ಯವಸಾಯದ ಬಗ್ಗೆ ಅವನಿಗೆ ಒಲವಿದೆ. ನಮ್ಮ ಕುಟುಂಬದ ಕೃಷಿ ಮುಂದುವರಿಯುತ್ತೆ ಅನ್ನುವುದಕ್ಕೆ ಇದು ಸಾಕ್ಷಿ.' (ಪು.೧೯೪)

'ತಂದೆ ತಾಯಂದಿರೇ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಹೊರಗೆ ಕಳಿಸುವುದೂ ಒಂದು (ಕೃಷಿಯನ್ನು ಬಿಡಲು) ಕಾರಣ. ತಾವು ಯಾವುದನ್ನು ನಂಬಿ ಬದುಕಿದಾರೋ ಅದರ ಬಗ್ಗೇನೇ ಅವರಿಗೆ ವಿಶ್ವಾಸ ಇಲ್ಲ.' (ಪು.೨೬೯)

'ನನ್ನ ಮಗ ವ್ಯವಸಾಯಸ್ಥನೇ ಆಗಬೇಕು ಅಂತ ನನ್ನ ಬಲವಂತವೇನಿಲ್ಲ. ಅವನ ಕ್ಷೇತ್ರವನ್ನು ಅವನು ಆರಿಸಿಕೊಳ್ಳಬಹುದು. ನನ್ನ ತಂದೇನೂ ನನಗೆ ಇಂಥಾದ್ದನ್ನೇ ಮಾಡು ಅಂತ ಬಲವಂತ ಮಾಡಲಿಲ್ಲ.' (ಪು.೨೯೬)

'ನಮ್ಮ ನಂತರ ಅದು (ವ್ಯವಸಾಯದ ಗತಿ) ದೇವರೇ ಗತಿ! (ನಗು) ಈಗಿನ ವಾತಾವರಣದಲ್ಲಿ ನಾಳೆಗೆ ಏನಾಗುತ್ತೆ ಹೇಳೋದೆ ಕಷ್ಟ ಅಂತಾದ್ರಲ್ಲಿ! ಈಗ ನಮ್ಮನ್ನು ಕೇಳಿದರೆ ನಾವು ಹೇಗೆ ಹೇಳುವುದು.' (ಪು. ೩೨೩)

ಕೃಷಿ ಪರಂಪರೆಯ ನಿರಂತರತೆಯ ಬಗ್ಗೆ ಸಕಾರಾತ್ಮಕ ಹಾಗೂ ನಕಾರಾತ್ಮಕ ಧೋರಣೆಗಳು ಮೇಲ್ಕಂಡ ಅನಿಸಿಕೆಗಳಲ್ಲಿ ಮಾತ್ರವಲ್ಲದೆ ಇಡೀ ಕೃತಿಯ ತುಂಬೆಲ್ಲ ವ್ಯಾಪಿಸಿವೆ. ಮುಂದಿನ ಪೀಳಿಗೆಗೆ ಸಂಕೇತಿ ಕೃಷಿ ಉಳಿಯುತ್ತದೆಯೆ? ಉಳಿಯಬೇಕು ಎಂಬ ಲೇಖಕರ ಆತಂಕ, ಆಶಯ ಸಂದರ್ಶನದ ಪುಟಪುಟಗಳಲ್ಲೂ ಢಾಳಾಗಿ ಎದ್ದು ಕಾಣುತ್ತದೆ. ಅವರೇ ಹೇಳುವಂತೆ 'ಈ ಕಾಲಘಟ್ಟವೇ ಹಾಗಿದೆ. ಹಳೆಯದನ್ನು ಬಿಡಲಾಗದ, ಹೊಸದನ್ನು ಗಟ್ಟಿಯಾಗಿ ಅಪ್ಪಿಕೊಳ್ಳಲಾಗದ ಸ್ಥಿತಿಯಲ್ಲಿ ನಾವಿದ್ದೇವೆ... ಪಟ್ಟಣಗಳಲ್ಲಿ ನೆಲೆಸಿರುವವರ ಹಳ್ಳಿಪ್ರೀತಿಯನ್ನು, ಹಳ್ಳಿಯಲ್ಲಿರುವವರ ಪಟ್ಟಣದ ಪ್ರೀತಿಯನ್ನು ಒಟ್ಟಿಗೆ ನೋಡಿದ್ದೇನೆ.' (ಪು.೪೪೬)- ಎಂಬ ಮಾತು ಸದ್ಯದ ಬದುಕಿನ ಸಂಕ್ರಮಣ ಸ್ಥಿತಿಯನ್ನು, ಜೀವನದ ಅಸಹಾಯಕತೆ, ಅನಿವಾರ್ಯತೆಗಳನ್ನು ಸೂಚಿಸುತ್ತದೆ. 'ಉಪಸಂಹಾರ'ದ ಗ್ರಂಥದ ಕಡೆಯ ಪುಟಗಳಲ್ಲಿ ಲೇಖಕರು ಸಂದರ್ಶನಗಳಿಂದ ತಾವು ಗ್ರಹಿಸಿದ ಸಂಕೇತಿ ಕುಟುಂಬಗಳ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳ ಬಗೆಗೆ ವಿಚಾರಾತ್ಮಕವಾದ, ಇನ್ನೂ ಹೆಚ್ಚಿನ ಸಂಶೋಧನೆಗಳಿಗೆ ಹಚ್ಚಬಹುದಾದ ವಿಷಯಗಳನ್ನು ಪ್ರಸ್ತಾಪಿಸಿದ್ದು ತುಂಬಾ ಮೌಲಿಕವಾಗಿದೆ. 'ಉಳುವವನಿಗೇ ಜಮೀನು' ಕಾಯ್ದೆಯ ದುಷ್ಪರಿಣಾಮಗಳು, ಬಾಗಾಯ್ತನ್ನು ಮಾತ್ರ ಅವಲಂಬಿಸಿದ್ದು, ವ್ಯವಸಾಯಕ್ಕೆ ಪೂರಕವಲ್ಲದ ಆಧುನಿಕ ಶಿಕ್ಷಣ, ಮಕ್ಕಳಿಂದ ಕೃಷಿ ಅಸಾಧ್ಯ ಎಂಬ ಕೆಲವು ಹಿರಿಯರ ನಿಲುವು, ಕೃಷಿ ಉಳಿಯಲು ಹೆಣ್ಣು ಮಕ್ಕಳ ಪಾತ್ರ, ಪೂರಕ ವಿದ್ಯೆಗಳಾದ ವೇದ, ಸಂಗೀತಕ್ಕೆ ನಗರಗಳಲ್ಲಿ ದೊರೆತ ಮಾನ್ಯತೆ-ಇಂಥ ಹಲವು ವಿಚಾರಗಳು ಲೇಖಕರ ನಿಶಿತ ಮತಿಯಿಂದ ಚರ್ಚಿತವಾಗಿವೆ. ಅಮೆರಿಕಾದ ರೆಡ್ ಇಂಡಿಯನ್ನರ ಭೂಮಿ ಪ್ರೀತಿ, ಭಕ್ತಿಯನ್ನು ಉದಾಹರಿಸಿ 'ಪ್ರಕೃತಿಯ ವಿರಾಟ್ ಸ್ವರೂಪದ ಮುಂದೆ ನಮ್ಮ ಕೃಷಿ ಬದುಕು ಎಷ್ಟರಮಟ್ಟಿನದು? ಒಮ್ಮೆ ಯೋಚಿಸಿದರೆ, ಭೂಮಿಯನ್ನೂ, ಪ್ರಕೃತಿಯನ್ನೂ ಇದ್ದ ಹಾಗೆ ಬಿಟ್ಟು

ತನ್ನ ಬದುಕಿಗೆ ಬೇಕಾದ್ದನ್ನು ಮಾತ್ರ ಪಡೆದು, ನಿಸ್ವಾರ್ಥವಾಗಿ ಜೀವಿಸುವ ಕಲೆ ಎಂದರೆ ಕೃಷಿ ಎನ್ನುವಂತಾಗಬೇಕು. ನಮ್ಮ ಕೃಷಿ ಎಂದಿಗೂ ಪರಿಸರಕ್ಕೆ ಭಾರವಾಗಬಾರದು' (ಪು.೪೫೨) - ಎಂದು ಉದಾರ, ಉದಾತ್ತ ಭಾವವನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿನ ವಿಚಾರಮಂಥನ ಸಂಕೇತಿವರ್ಗಕ್ಕೆ ಮಾತ್ರ ಸೀಮಿತವಾಗದೆ ಕೃಷಿಯನ್ನು ಗ್ರಾಮೀಣ ಪ್ರದೇಶದಲ್ಲಿ ಅವಲಂಬಿಸಿದ್ದು ಸ್ಥಿತ್ಯಂತರಗೊಂಡ ಎಲ್ಲ ಬ್ರಾಹ್ಮಣವರ್ಗಕ್ಕೂ ಅನ್ವಯಿಸುವಂಥದ್ದಾಗಿದೆ.

'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' - ಗ್ರಂಥದ ಮತ್ತೊಂದು ಉಲ್ಲೇಖಿಸಬೇಕಾದ ಅಂಶ ಎಂದರೆ ಪ್ರಸ್ತುತ ಕೃತಿಯಲ್ಲಿ ಭಾಷಾ ಜಿಜ್ಞಾಸುಗಳಿಗೆ ಬೇಕಾದ ಸ್ಥಳನಾಮದ ವಿವರವಿದ್ದು ಸಂದರ್ಶಕರು ಅದರ ಬಗ್ಗೆ ವಿಶೇಷ ಬೆಳಕು ಚೆಲ್ಲುವ ಕೆಲಸ ಮಾಡಿದ್ದಾರೆ. ಒಂದು ಗ್ರಾಮಕ್ಕೆ, ಸ್ಥಳಕ್ಕೆ ಹೆಸರು ಬರಲು ಇರುವ ಕಾರಣ ಹಾಗೂ ಕಾಲಾನಂತರದಲ್ಲಿ ಜನಗಳ ಬಾಯಲ್ಲಿ ಆ ಹೆಸರು ಹೇಗೆ ರೂಪಾಂತರವಾಯಿತೆಂದು ಶೋಧಿಸುವುದು ಭಾಷಾ ವಿಜ್ಞಾನದ ಕಾರ್ಯ. ಲೇಖಕರು ತಾವು ಸಂದರ್ಶನದ ಸಲುವಾಗಿ ಭೇಟಿ ಮಾಡಿದ ಅನೇಕ ಸ್ಥಳಗಳ ಹೆಸರುಗಳ ನಿಷ್ಪತ್ತಿಯ ಬಗೆಗೆ ಚಿಂತನೆ ನಡೆಸಿದ್ದಾರೆ. ಅರಕಲಗೂಡು ತಾಲ್ಲೂಕು ಹಾನಗಲ್‌ನಿಂದ ಹಿಡಿದು (ಹಳ್ಳೀಮೈಸೂರು, ಪೂಮಗಾಮೆ, ಕೌಶಿಕ, ಚಿಲ್ಕುಂದ, ಮತ್ತೂರು, ಮಡಿಕೇರಿ, ಕೇರಳಾಪುರ ಇತ್ಯಾದಿ) ಬೆಂಗಳೂರಿನವರೆಗೆ ಏಳೆಂಟು ಜಿಲ್ಲೆಗಳ ಗ್ರಾಮಗಳಿಗೆ ಹೋದಾಗ ಅಲ್ಲಿನ ಹೆಸರುಗಳ ವೈಶಿಷ್ಟ್ಯದ ಬಗ್ಗೆ ವಿಚಾರಿಸಿ ಸ್ವಾರಸ್ಯವಿರುವ ಸ್ಥಳನಾಮಗಳನ್ನು ಪರಿಶೀಲಿಸಿದ್ದಾರೆ. ನಿದರ್ಶನಕ್ಕೆ 'ಹಳ್ಳೀಮೈಸೂರು'. "ಇದು ನಿಜವಾಗಿ ಹಳ್ಳೀಮೈಸೂರಲ್ಲ, 'ಹಳೇಮೈಸೂರು'. ಈಗಿರುವ ಮೈಸೂರು 'ಮಹಿಶೂರು'. ಶಾಸನಗಳನ್ನು ನೋಡಿದಾಗ ಇದು ತಿಳಿಯುತ್ತೆ." . . . (ಪು.೧೬) ಎಂದು ಹೇಳಿ ಮುಂದೆ ಅಲ್ಲಿಗೆ ಸಮೀಪದ ಗೋಹಳ್ಳಿ, ಆನೇಕನ್ನಂಬಾಡಿ, ತೇಜೂರು, ಸಿಂಗಲಕುಪ್ಪೆ, ಮಂಗಳವಾಡಿಹೆಸರಿನ ಸ್ಥಳಗಳ ವಿವರಣೆ ನೀಡಿರುವುದು ಅರ್ಥಪೂರ್ಣವಾಗಿದೆ. ತಾವು ಸಂದರ್ಶಿಸಲಿರುವ ಗ್ರಾಮಗಳ ಬಗ್ಗೆ ಲೇಖಕರು ಮೊದಲು ಪೀಠಿಕಾರೂಪದಲ್ಲಿ ತಿಳಿಸಿ ಅನಂತರದಲ್ಲಿ ಸಂದರ್ಶನ ನಡೆಸಿದ್ದು, ಆ ಪೀಠಿಕೆಗಳನ್ನು ಪ್ರತ್ಯೇಕವಾಗಿ ಸಂಕಲಿಸಿದರೆ ಅದೇ ಒಂದು ಉತ್ತಮ ಗ್ರಾಮ ಕೈಪಿಡಿ ಆಗುತ್ತದೆ. ಹಾಗೆಯೇ ತಾತನಹಳ್ಳಿ- ತೀರ್ಥೇಶ್ವರ ಸ್ವಾಮಿ ದೇವಸ್ಥಾನವಿರುವ ತೀರ್ಥಹಳ್ಳಿ- ಇಂದು ಜನಗಳ ಬಾಯಲ್ಲಿ ತಾತನಹಳ್ಳಿ ಆಗಿದೆ. ಸಂಪೂರ್ಣ ಬ್ರಾಹ್ಮಣರೇ ಇದ್ದ ಸಲುವಾಗಿ 'ಪೂರ್ಣಗ್ರಾಮ' ಅಂತ ಹಿಂದೆ ಹೆಸರಾಗಿದ್ದ ಊರು ಇಂದು 'ಪೂಮಗಾಮೆ' (ಪು.೬೫) ಆಗಿದೆ. ಆದರೆ, 'ಕೇರಳಾಪುರ' ಸ್ಥಳನಾಮದ ಬಗೆಗಿನ ವಿವರಣೆ ಇನ್ನೂ ಹೆಚ್ಚಿನ ಸಂಶೋಧನೆಗೆ ಕಾರಣವಾಗುವಂತಿದೆ. ಸ್ಥಳೀಯರೊಬ್ಬರ ವಿವರದಂತೆ "ಐದು ಶತಮಾನಗಳ ಹಿಂದೆ 'ವೀರಭದ್ರಪುರ' ಎಂದಿದ್ದ ಹೆಸರು ತಮಿಳುನಾಡು ಹಾಗೂ ಕೇರಳದ ಗಡಿಭಾಗ 'ಶೆಂಕೋಟ್ಟೈ'ನಿಂದ ಸಂಕೇತಿಗಳು ಇಲ್ಲಿಗೆ ಬಂದದ್ದರಿಂದ ಕೇರಳಾಪುರವೆಂದು' ಬದಲಾಯಿತು" ಎಂಬುದು ಇತಿಹಾಸದ ಕಲ್ಪಿತ ಮಾಹಿತಿಯೋ ಏನೋ ಎಂಬುದರ ಬಗೆಗೆ ಇನ್ನೂ ಆಳವಾದ ವಿಚಾರ ನಡೆಯಬೇಕು. (ಪು.೩೪೬). ಅದೇ ರೀತಿ ಈಚಲಕುಂದ>ಚಿಲ್ಕುಂದ. ಸ್ಥಳೀಯರೊಬ್ಬರ ಅನಿಸಿಕೆಯಂತೆ 'ಈ ಊರಿಗೆ ಮೊದಲು ಈಚಲಕುಂದ ಎಂದು ಹೆಸರಿತ್ತಂತೆ. ಈಚಲು ಮರಗಳ ಸಮೂಹ ಇತ್ತಂತೆ. ಕಾಲಕ್ರಮೇಣ ಈಚಲಕುಂದ ಹೋಗಿ ಚಿಲ್ಕುಂದ ಆಗಿದೆ. ಅಲ್ಲದೆ "ಚಿಲಕ" ಎಂದರೆ ಗಿಳಿಗಳು ಅಂತ ಅರ್ಥ. ಕುಂದ ಅಂದ್ರೆ ಗ್ರಾಮ ಅಥವಾ ಸಮೂಹ ಅಂತ. ಗಿಳಿಗಳ ಸಮೂಹ ಅಂತಾನೂ ಚಿಲ್ಕುಂದಕ್ಕೆ ಹೆಸರಿದೆ ಅಂತ ಹಿರಿಯರು ಹೇಳುತ್ತಿದ್ದರು' (ಪು.೧೭೩) -ಹೀಗೆ ಅರ್ಥದ ಅಸ್ಪಷ್ಟತೆಯಿರುವ ಸ್ಥಳನಾಮಗಳನ್ನು ಕುರಿತು ಲೇಖಕರು ತಮ್ಮ ಚಿಂತನಾಲಹರಿ ಹರಿಸಿರುವುದು ಅತ್ಯಂತ ಉಪಯುಕ್ತವಾಗಿದೆ.

ಒಟ್ಟಿನಲ್ಲಿ ಶ್ರೀ ಎನ್.ಕೇಶವಮೂರ್ತಿಯವರ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' - ಒಂದು ವಿಶಿಷ್ಟ ಶೈಲಿಯ, ವಿನೂತನ ಮಾದರಿಯ ಕನ್ನಡ ಸಾಹಿತ್ಯದ ಒಂದು ಸುಂದರ ಸಂದರ್ಶನಗಳ ಸಾರ ಸತ್ವಗಳ ಸಾಹಿತ್ಯ ಕೃತಿ. ಗ್ರಾಮೀಣ-ನಗರ ಪ್ರದೇಶವೆನ್ನದೆ ಕೃಷಿ ಮಾಹಿತಿ ಪಡೆಯಬೇಕೆನ್ನುವವರಿಗೆ, ಬ್ರಾಹ್ಮಣ ವರ್ಗದ ಸಂಕೇತಿ ಸಮುದಾಯದ ಸಾಹಸದ, ಬದುಕಿನ ಕೃಷಿ ಸಾಧನೆ ತಿಳಿಯಬೇಕೆನ್ನುವವರಿಗೆ, ಕುಟುಂಬಗಳ ವಿಘಟನೆಯ ಆಧುನಿಕ ಸಮಾಜದಲ್ಲಿ ಕೃಷಿ ಭವಿಷ್ಯದ ಚಿಂತನೆ ಮಾಡುವವರಿಗೆ ಒಂದು ವೈಚಾರಿಕ ಆಕರ ಗ್ರಂಥ. ಸಾಹಿತ್ಯ ಜನಮುಖಿಯಾಗಬೇಕೆಂಬ ಒಂದು ಮಾತಿದೆ. ಹಾಗೆ ಈ

ಕೃತಿಯಲ್ಲಿ ವಿಶೇಷವಾಗಿ ನಮ್ಮ ಹಳ್ಳಿಗಾಡಿನ ಸಣ್ಣ, ಮಧ್ಯಮವರ್ಗದ ಕೃಷಿಕರ ಆತ್ಮಕಥೆಗಳು ಸೂಕ್ತ ಭಾವಚಿತ್ರಗಳೊಡನೆ ದಾಖಲಾಗಿದ್ದು ಸಂದರ್ಶನಗಳು ಸಹಜತೆಯಿಂದ ಸ್ಫುರಿಸಿವೆ. ಓರ್ವ ಓದುಗನಾಗಿ ಕೃತಿಯನ್ನು ಒಳಹೊಕ್ಕಾಗ ನನಗನಿಸಿದ ಭಾವನೆಗಳನ್ನು ಇಲ್ಲಿ ನಿಮ್ಮೊಡನೆ ಹಂಚಿಕೊಂಡಿದ್ದೇನೆ. ಗ್ರಂಥದ-ಬೆಳೆ - ಬೆಳೆ ವಿಧಾನಗಳಿಗೆ ಸಂಬಂಧಿಸಿದಂತೆ ಕೃಷಿತಜ್ಞರು ಮಾತ್ರ ಅಧಿಕೃತವಾಗಿ ಹೇಳಬಲ್ಲರು. ಕನ್ನಡ ಸಾಹಿತ್ಯದ ಸಾರಸ್ವತ ಲೋಕಕ್ಕೆ ಇಂಥ ಒಂದು ಅಪರೂಪದ ಕೃತಿಯನ್ನು ನೀಡಿದ ಶ್ರೀ ಎನ್.ಕೇಶವಮೂರ್ತಿ ಅವರು ಹಾಗೂ ಇದಕ್ಕೆ ಪ್ರೇರಕರಾದ ಡಾ.ಪ್ರಣತಾರ್ತಿಹರನ್ ಅವರು ಅಭಿನಂದನೀಯರು.

ಕಾಲೇಜು ಶಿಕ್ಷಣ ಇಲಾಖೆ
ಬೆಂಗಳೂರು

ಕೆ.ಎಸ್.ನರಸಿಂಗರಾವ್
ನಿವೃತ್ತ ಕನ್ನಡ ಪ್ರಾಧ್ಯಾಪಕರು

೩ ಅರಿಕೆ

ಕೃಷಿ ಇದ್ದಲ್ಲಿ ದುರ್ಭಿಕ್ಷವಿಲ್ಲ ಎಂಬುದು ಹಿರಿಯರ ಅನುಭವದ ನುಡಿ. ಸಮುದಾಯ ಅಧ್ಯಯನ ಕೇಂದ್ರವು ಸಂಕೇತಿ ಕೃಷಿಯ ಬಗ್ಗೆ ಒಂದು ಸಂಶೋಧನ ಕೃತಿಯನ್ನು ಸಿದ್ಧಪಡಿಸಿಕೊಡಬೇಕೆಂದು ಕೋರಿದಾಗ ನನಗೆ ಸಂತೋಷವೇ ಆಯಿತು. ಚಿಕ್ಕಂದಿನಿಂದಲೂ ನನ್ನ ಪ್ರೀತಿಯ ಕ್ಷೇತ್ರ ಕೃಷಿ. ಕೃಷಿಯಲ್ಲಿನ ನನ್ನ ಅರಿವಿಗೆ ನನ್ನ ತಂದೆ ಚನ್ನರಾಯಪಟ್ಟಣ ತಾಲ್ಲೂಕು ದೊಡ್ಡಗನ್ನಿಯ ಸಿ.ಎಸ್.ನಾರಾಯಣರಾವ್ (ಮಣಯ್ಯ) ಹಾಗೂ ತಾಯಿ ಜಯಲಕ್ಷ್ಮಿ ಕಾರಣ. ಹಳ್ಳಿ ಬದುಕಿನ ಪರಿಚಯ ತಂದೆಯಿಂದ ಆದ್ರೆ ಹಳ್ಳಿ ಆಹಾರದ ಸಂಸ್ಕೃತಿಯ ಪರಿಚಯ ಆದದ್ದು ತಾಯಿಯಿಂದ. ನಮ್ಮ ಮನೆಯಲ್ಲಿ ನಮ್ಮೆಲ್ಲರ ಸಹಭೋಜನ ನಡೀತಿದ್ದದ್ದು ರೈತರ ಜತೆಯಲ್ಲಿಯೇ. ಕೃಷಿ ಕಾಲೇಜಿನಲ್ಲಿ ವಿದ್ಯಾಭ್ಯಾಸವಾದ ಮೇಲೆ ಮತ್ತೆ ನನ್ನನ್ನು ಸೆಳೆದದ್ದು ಕೃಷಿ ಕ್ಷೇತ್ರವೇ. ಪ್ರತಿನಿತ್ಯವೂ ರೈತರ ಒಡನಾಟದಲ್ಲಿದ್ದ ನನಗೆ ಸಮುದಾಯ ಅಧ್ಯಯನ ಕೇಂದ್ರದ ಕೋರಿಕೆ 'ರೋಗಿ ಬಯಸಿದ್ದೂ ಹಾಲು ಅನ್ನ ವೈದ್ಯ ಹೇಳಿದ್ದೂ ಹಾಲು ಅನ್ನ' ಅಂದಂತಾಯ್ತು. ಈ ಕೆಲಸ ನನ್ನಿಂದ ಸಾಧ್ಯವೇ ಅಂತ ಮನ ಮೊದಲು ಅಳುಕಿದ್ದೂ ನಿಜ. ಆದರೆ ಅನುಕಾಲವೂ ನನ್ನ ಜತೆಯಲ್ಲಿದ್ದು ನನ್ನೊಳಗೇ ಒಬ್ಬರಾಗಿ ಹೋಗಿದ್ದ ಡಾ.ಪ್ರಣತಾರ್ತಿಹರನ್ ನನ್ನಿಂದ ಈ ಕೆಲಸ ಮಾಡಿಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ನಾನು ಈ ಕೆಲಸ ಮಾಡಬಲ್ಲೆ, ನನ್ನಲ್ಲಿ ಈ ಸಾಮರ್ಥ್ಯ ಇದೆ ಎಂದು ಗುರುತಿಸಿದ್ದು ನನ್ನ ಮಾರ್ಗದರ್ಶಿಗಳಾದ ಆಕಾಶವಾಣಿಯ ನಿರ್ದೇಶಕರಾದ ಡಾ|| ಎಂ.ಎಸ್.ವಿಜಯಹರನ್ ಅವರು. ಡಾ|| ಪ್ರಣತಾರ್ತಿಹರನ್ ಹಾಗೂ ಡಾ|| ವಿಜಯಹರನ್ ದಂಪತಿಗಳಿಗೆ ನಾನೆಷ್ಟು ಆಭಾರಿಯಾಗಿದ್ದರೂ ಸಾಲದು. ಅವರು ನನ್ನ ಮೇಲಿಟ್ಟಿದ್ದ ನಂಬಿಕೆ, ನಿರೀಕ್ಷೆಗಳನ್ನು ನಾನೆಷ್ಟು ನಿಜ ಮಾಡಿದ್ದೇನೆ ಎಂಬುದನ್ನು ಓದುಗರಾದ ನೀವೇ ಹೇಳಬೇಕು.

ನನ್ನ ಕೃಷಿ ಶಿಕ್ಷಣಕ್ಕೆ ಬೆನ್ನೆಲುಬಾಗಿ ನಿಂತ ನನ್ನ ಅಣ್ಣ ಶ್ರೀ ಎನ್.ಶ್ರೀನಿವಾಸಮೂರ್ತಿ, ಈ ಕೆಲಸದಲ್ಲಿ ಸಹಕರಿಸಿದ ಶ್ರೀ ವೆಂಕಟನಾರಾಯಣ, ಬಸವಾಪಟ್ಟಣದ ಶ್ರೀ ಪ್ರಕಾಶ್ ಹಾಗೂ ಎಲ್ಲ ಸಂಕೇತಿ ಕೃಷಿಕರಿಗೂ ನಾನು ಆಭಾರಿಯಾಗಿದ್ದೇನೆ. ನನ್ನ ಈ ಅಧ್ಯಯನಕಾರ್ಯದ ಅವಧಿಯಲ್ಲಾದ ಹೆಚ್ಚಿನ ಇಹಕೃತ್ಯದ ಭಾರಗಳನ್ನು ನಿರ್ವಹಿಸಿ ಸಹಕರಿಸಿದ ನನ್ನ ಪತ್ನಿ ಬಿ.ಎಸ್.ವೀಣಾ ಹಾಗೂ ನನ್ನ ಮಕ್ಕಳಾದ ಚಿ.ವಿಂಧ್ಯಾ ಹಾಗೂ ಚಿ.ವರ್ಷಾ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಸಮುದಾಯ ಅಧ್ಯಯನ ಕೇಂದ್ರವು ನನಗೆ ವಹಿಸಿರುವ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ್ದೇನೆ. ಈ ಅವಕಾಶವನ್ನು ನನಗೆ ನೀಡಿದ ಮೈಸೂರಿನ ಸಮುದಾಯ ಅಧ್ಯಯನ ಕೇಂದ್ರಕ್ಕೆ ನಾನು ಚಿರಋಣಿ.

ಎನ್.ಕೇಶವಮೂರ್ತಿ
ಪ್ರಸಾರ ನಿರ್ವಹಣಾಧಿಕಾರಿ (ಕೃಷಿ)
ಆಕಾಶವಾಣಿ, ಮೈಸೂರು

ಮೈಸೂರು
೧೫.೦೮.೦೯

೪ ಪರಿವಿಡಿ

೫ ಪ್ರಶ್ನಾವಳಿಯ ಮಾದರಿ

೧.ಕೌಟುಂಬಿಕ ಹಿನ್ನೆಲೆ

ತಂದೆ-ತಾಯಿ-ಅಜ್ಜಿ-ತಾತಂದಿರ ಬಗ್ಗೆ-ಅವರ ವಿಶೇಷ ಗುಣಗಳ ಬಗ್ಗೆ-ಅವರಿಗಿದ್ದ ಪ್ರಾವೀಣ್ಯ-ಅವರು ಜೀವಿಸಿದ ರೀತಿ-ಪಾಲಿಸಿದ ನೀತಿ-ಬದುಕಿ ಬಂದ ಹಾದಿ-ಅವರು ಊರಿಗೆ ಸಲ್ಲಿಸಿದ ಕೊಡುಗೆ-ಸೇವೆ-ಅವರ ಬಗ್ಗೆ ಗೊತ್ತಿರುವ ವಿಶೇಷ ಸನ್ನಿವೇಶಗಳು-ಕುಟುಂಬದ ಹಿರಿಯರ ಬಗೆಗಿನ ಐತಿಹ್ಯಗಳು-ಕಿರಿಯರಿಗೆ ಅವರು ಹೇಳುತ್ತಿದ್ದ ನೀತಿ-ಹಳ್ಳಿ ಪರಿಸರದಲ್ಲಿದ್ದುಕೊಂಡೇ ಕಿರಿಯರ ಬದುಕನ್ನು ಅವರು ರೂಪಿಸಿದ ರೀತಿ-ಅವರ ಕೃಷಿ ಪದ್ಧತಿ -ಒಳ ವಿವರ-ಬೇಸಾಯ ವಿಧಾನಗಳು-ವ್ಯವಸಾಯ-ವ್ಯಾಪಾರದಿಂದ ಬದುಕು ರೂಪಿಸಿಕೊಂಡ ಹಿನ್ನೆಲೆ-ಅವರ ಉಪಕಸುಬುಗಳು-ವ್ಯವಸಾಯದ ಹಳೆ ರೀತಿ ರಿವಾಜುಗಳು.

೨. ಊರಿನ ಹಿನ್ನೆಲೆ

ಊರಿನ ವಿಶೇಷಗಳು-ದೇವಸ್ಥಾನಗಳು-ಕೆರೆ ಕಟ್ಟೆ-ಜಾತ್ರೆ-ಹಬ್ಬ ಹರಿದಿನಗಳು-ಹಿಂದೆ ಊರಿದ್ದ ಪರಿಸ್ಥಿತಿ-ಈಗಿನ ಪರಿಸ್ಥಿತಿ-ಊರ ಪರಿಸರ-ಊರ ಕೃಷಿ ಪದ್ಧತಿಗಳು-ಈ ಊರಿಗೆ ಸಂಕೇತಿಗಳ ಆಗಮನ ಯಾವಾಗ-ಹೇಗೆ-ಯಾರಿಂದ-ಸಂಕೇತಿಗಳು ಈ ಊರಲ್ಲಿ ಅಭಿವೃದ್ಧಿ ಹೊಂದಿದ್ದು ಹ್ಯಾಗೆ-ಊರು ಬಿಟ್ಟು ತೆರಳಿದ್ರೆ ಅದಕ್ಕೆ ಕಾರಣಗಳು-ಊರಿನ ಇತರೇ ಜನರೊಂದಿಗೆ ಸಂಕೇತಿಗಳ ಸಂಬಂಧ-ಎಲ್ಲರೂ ಸೇರಿ ಆಚರಿಸುವ ಕಾರ್ಯಕ್ರಮಗಳು-ಸಂಕೇತಿಗಳ ವ್ಯವಸಾಯಕ್ಕೆ ಇತರೇ ಜನರ ಕೊಡುಗೆ-ನೆರವು-ಸಹಕಾರ.

೩.ವೈಯಕ್ತಿಕ ಹಿನ್ನೆಲೆ

ತನ್ನ ಬಗ್ಗೆ-ವಿದ್ಯಾಭ್ಯಾಸದ ಬಗ್ಗೆ-ಬಾಲ್ಯದ ಕನಸುಗಳ ಬಗ್ಗೆ-ಹಿರಿಯರೊಂದಿಗಿನ ಸಂಬಂಧಗಳ ಬಗ್ಗೆ- ಗುರು-ಹಿರಿಯರ ಬಗ್ಗೆ-ಶಾಲೆಯ ಬಗ್ಗೆ-ಆಟಪಾಠಗಳ ಬಗ್ಗೆ- ವಿಶೇಷ ಗುಣಗಳ ಬಗ್ಗೆ-ಬದುಕಿನಲ್ಲಿ ಮರೆಯಲಾಗದ ಬಾಲ್ಯ ಘಟನೆಗಳು-ಬದುಕನ್ನು ರೂಪಿಸಿಕೊಳ್ಳಲು ನಿರ್ಧಾರ ಮಾಡುವಾಗಿನ ಪರಿಸ್ಥಿತಿ-ಆಸ್ತಿಪಾಸ್ತಿಯ ಹಿನ್ನೆಲೆ-ನೀರಾವರಿ ಆಶ್ರಯ ವಿಚಾರ.

೪. ವ್ಯವಹಾರ ಹಾಗೂ ಇತರೇ ಕಸುಬುಗಳು

ವ್ಯವಸಾಯದ ಜತೆ-ಅದರ ಬಗ್ಗೆ ಪ್ರಾವೀಣ್ಯ-ರೂಢಿಸಿಕೊಂಡಿದ್ದು ಯಾಕೆ? ಹ್ಯಾಗೆ? ಏನು ಅನುಕೂಲ-ಆದಾಯ ಖರ್ಚು-ವೆಚ್ಚ.

೫. ವ್ಯವಸಾಯದ ಹಿನ್ನೆಲೆ

ಸಂಕೇತಿ ಕೃಷಿಕರು ಇತರೇ ಕೃಷಿಕರಿಗಿಂತ ಹ್ಯಾಗೆ ಭಿನ್ನ? ವಿವಿಧ ಬೆಳೆ ಬೇಸಾಯದ ವಿಧಾನಗಳು-ತಾಂತ್ರಿಕ ಕುಶಲತೆ (ಪ್ರತಿ ಬೆಳೆ ಬೇಸಾಯಕ್ಕೆ ಸಂಬಂಧಿಸಿದಂತೆ) ಅನುಭವಕ್ಕೆ ಬಂದ ಅಮೂಲ್ಯ ವಿಚಾರಗಳು-ಪ್ರತಿಯೊಂದು ಬೆಳೆಯ ಬೇಸಾಯದ ವಿಧಾನ (ಬೀಜದಿಂದ ಖಟಾವಿನವರೆಗೆ)-ಬೆಳೆಯ ಮಾರಾಟದ ಬಗ್ಗೆ-ವ್ಯವಸಾಯದ ಬಗ್ಗೆ ಇತರರಿಂದ ಕಲಿತದ್ದು-ತಂದೆ ತಾಯಿಯಿಂದ ಕಲಿತದ್ದು-ತೊಡಗಿಸಿದ ಬಂಡವಾಳ-ಮಾಡಿದ ಸಾಲ ಸೋಲ-ತೀರಿಸಿದ ಬಗ್ಗೆ-ಅನುಭವಿಸಿದ ಕಷ್ಟನಷ್ಟಗಳು?

ಬೇಸರವಾಗಿ ಹಿಂದೆ ಸರಿಯುವ ನಿರ್ಧಾರ ಮಾಡಿದ್ರಾ -ಯಾರ ನೆರವು ಸಿಕ್ಕಿತು-ಯಾರು ನಿಮ್ಮ ಬದುಕಿನ ಆದರ್ಶ- ಬದುಕಿನಲ್ಲಿ ನೀವು ಪಾಲಿಸಲಾಗದ ಆದರ್ಶಗಳು-ಪಾಲಿಸಿದ ರೀತಿ ನೀತಿ-ಹಾದಿ ತಪ್ಪಿದ ನಿದರ್ಶನಗಳು-ಘಟನೆಗಳು-ವ್ಯವಸಾಯದ ಜೀವನ ನೆಮ್ಮದಿ ತಂದಿದೆಯಾ-ನಿಮ್ಮ ಜೀವನದ ಆನಂದವನ್ನು ಹ್ಯಾಗೆ ಪಡೆಯುತ್ತಿದ್ದೀರಿ? ಪ್ರತಿ ಕ್ಷಣ ಹ್ಯಾಗೆ ಜೀವಿಸುತ್ತೀರಿ? ವೇದದಲ್ಲಿ ಕೃಷಿ?

೬. ಪತ್ನಿಯ ಸಹಕಾರ

ಅತ್ತೆ-ಮಾವಂದಿರ ಬಗ್ಗೆ-ಅವರ ಹಿನ್ನೆಲೆ-ಆಸ್ತಿ ಪಾಸ್ತಿ - ಮಕ್ಕಳು- ಅವರ ಕಸುಬು-ನಿಮಗೆ ಹೆಣ್ಣು ಸಿಗಲು ಕಷ್ಟವಾಯ್ತ? ಆಗಿನ ಮದುವೆ ಪದ್ಧತಿಗಳು- ನಿಮ್ಮ ಮದುವೆಯ ಬಗ್ಗೆ-ವರದಕ್ಷಿಣೆ, ವರೋಪಚಾರ-ಪತಿ ಪತ್ನಿಯ ಸಂಬಂಧ-ಅತ್ತೆ-ಸೊಸೆ ಸಂಬಂಧ-ಅಳಿಯನಾಗಿ ನೀವು ಅತ್ತೆ ಮಾವಂಗೆ ಮಾಡಿದ ನೆರವು-ನೀವು ನಿಮ್ಮ ಹೆಂಡತಿ ನಿಮ್ಮ ಕುಟುಂಬಕ್ಕೆ ಮಾಡಿದ ಸೇವೆ-ನಿಮ್ಮ ಅಭಿವೃದ್ಧಿಯಲ್ಲಿ ಹೆಂಡತಿಯ ಪಾತ್ರ-ನಿಮ್ಮ ಕುಟುಂಬದ ಸದಸ್ಯರೊಂದಿಗೆ ನಿಮ್ಮ ಹೆಂಡತಿಯ ಸಂಬಂಧ-ನಿಮ್ಮ ಅಭಿವೃದ್ಧಿಯಲ್ಲಿ ನಿಮ್ಮ ಕುಟುಂಬದ ಪಾತ್ರ-ನಿಮ್ಮದು ಒಟ್ಟು ಕುಟುಂಬಾನಾ? ಅದರ ಅನುಕೂಲ -ಅನಾನುಕೂಲಗಳು-ಗಂಡ ಹೆಂಡತಿ ಒಟ್ಟಾಗಿ ಮಾಡಿದ ಕೆಲಸ-ಪ್ರವಾಸ-ಸದಾ ಆನಂದವಾಗಿರಲು ಏನು ಮಾಡ್ತಿದ್ರಿ?

೭. ಪರಿಸರದ ಹಿನ್ನೆಲೆ

ನೆಂಟರು ಇಷ್ಟರು-ಸ್ನೇಹಿತರ ಜತೆ ನಿಮ್ಮ ಸಂಬಂಧ-ಚಟಗಳು-ದೌರ್ಬಲ್ಯಗಳು-ಅವುಗಳನ್ನು ಮೆಟ್ಟಿ ನಿಂತ ರೀತಿ-ಪಾಠ ಕಲಿಸಿದ ಘಟನೆಗಳು-ಇತರರಿಗೆ ನೀವು ನೀಡಿದ ಸಹಕಾರ-ಗ್ರಾಮಕ್ಕೆ ನಿಮ್ಮ ಕೊಡುಗೆ-ಬೇರೆಯವರಿಂದ ನಿಮಗಾದ ಸಹಕಾರ-ಕಷ್ಟ ನಷ್ಟಗಳ ವಿವರ.

೮. ಮಕ್ಕಳ ಭವಿಷ್ಯ

ಮಕ್ಕಳು-ಅವರ ವಿದ್ಯಾಭ್ಯಾಸ-ಅವರ ಇಷ್ಟಕಷ್ಟಗಳು-ಅವರೇನಾಗಬೇಕೆಂಬ ಆಸೆ ನಿಮ್ಮದು-ನಿಮ್ಮ ಅವರ ನಡುವಿನ ಸಂಬಂಧ-ಅವರ ಬದುಕು ರೂಪಿಸಲು ನೀವು ಪಟ್ಟ ಶ್ರಮ-ಅವರನ್ನು ವ್ಯವಸಾಯಸ್ಥರನ್ನಾಗಿ ಮಾಡ್ತೀರಾ? ಹೌದು-ಇಲ್ಲ ಅಂದ್ರೆ ಯಾಕೆ? ಇಲ್ಲವಾದ್ರೆ ಬಹಳ ಜತನದಿಂದ ಸಂಕೇತಿಗಳು ಕಾಪಾಡಿಕೊಂಡು ಬಂದ ವ್ಯವಸಾಯ ಮುಂದೆ ಮಣ್ಣಾಗಬೇಕೆ? ನಿಮ್ಮ ವಿಚಾರಗಳು ಏನು? ಕೃಷಿ ಸಂಕೇತಿಗಳಲ್ಲಿ ಮುಂದೆ ನಿಲ್ಲಬಲ್ಲದೆ? ಕಿರಿಯರಿಗೆ ಆಸಕ್ತಿಯಿಲ್ಲವೆಂದರೆ ಅದಕ್ಕೆ ಯಾರು ಕಾರಣ- ನಿಮ್ಮ ಹಿರಿಯರು ಈ ಪರಿಸ್ಥಿತೀನ ಯಾವ ರೀತಿ ನಿಭಾಯಿಸಿದ್ರು? ಸಂಕೇತಿಗಳ ಕೃಷಿಯ ಮುಂದಿನ ಭವಿಷ್ಯ ಏನು?

೯. ಜೀವನದುದ್ದಕ್ಕೂ ನೀವು ಅನುಸರಿಸಿದ ತತ್ವ

ಆದರ್ಶಗಳು-ಹಿರಿಯರ ವಿಚಾರಗಳು-ಮಾತುಗಳು-ಬಾಳಿಗೆ ದಾರಿದೀಪವಾದ ಘಟನೆಗಳು-ಪುಸ್ತಕಗಳು-ವ್ಯಕ್ತಿಗಳು.

೧೦. ಹೀಗೇ ಬಾಳಬೇಕೆಂಬ ಛಲ ಇತ್ತಾ?

ನಿಮ್ಮ ಗುರಿಗಳು-ಆದ್ಯತೆಗಳು, ಅದನ್ನು ಸಾಧಿಸಲು ನೀವು ಅನುಸರಿಸಿದ ಮಾರ್ಗ, ನಿಮ್ಮ ಸಾಧನೆಗಳು, (ವೈಯಕ್ತಿಕ-ಕೌಟುಂಬಿಕ)ಬದುಕಿನಲ್ಲಿ ಬಾಳಿದ ರೀತಿಯಲ್ಲಿ ಸಂತೃಪ್ತಿ ಇದೆಯಾ? ಇನ್ನೂ ಚೆನ್ನಾಗಿ ಬಾಳಬಹುದಿತ್ತು ಎಂಬ ಕೊರತೆ ಇದೆಯಾ? ಅಂದುಕೊಂಡ ಗುರಿ ಸಾಧಿಸಿದ್ದೀರಾ? ಮುಂದಿನ ಯೋಜನೆಗಳು?

೧೧. ನಿಮ್ಮ ಸಂಕೇತಿ ಕೃಷಿ ಪರಂಪರೆಗೆ ನಿಮ್ಮ ಕೊಡುಗೆ

ಸಮುದಾಯದ ಅಭಿವೃದ್ಧಿಗೆ ನೀವು ಪಟ್ಟ ಶ್ರಮ-ಹಳ್ಳಿಗಳಲ್ಲಿ ಇನ್ನು ಮುಂದೆ ಸಂಕೇತಿಗಳು ಉಳಿಯಬಲ್ಲರೇ? ರಾಜಕೀಯ ವಿಚಾರಗಳು-ಸಮುದಾಯದ ಅಭಿವೃದ್ಧಿಗಿಂತ ವೈಯಕ್ತಿಕ ಅಭಿವೃದ್ಧಿ ಮುಖ್ಯವಾ? ಸಮುದಾಯದಿಂದ ನಾವೋ ನಮ್ಮಿಂದ ಸಮುದಾಯವೋ? ಸಂಕೇತಿ ಒಗ್ಗಟ್ಟು ಹ್ಯಾಗೆ? ನಿಮ್ಮ ವಿಚಾರಗಳು ಏನು?

೧೨. ತೋಟದಲ್ಲಿ ಕೃಷಿ ಮಾಡುತ್ತಾ ವೇದಗಳನ್ನು ಕಲಿಯುತ್ತಿದ್ದ ರೀತಿ?

೧೩. ಅವರ ದೃಢಕಾಯ,

ಕತ್ತಿ, ಗುರಾಣಿ, ಇತ್ಯಾದಿ ಲಭ್ಯವೇ? ಅನುಭವಿಸಿದ ಯಾವುದಾದರೂ ಕ್ಷಾಮದ ನೆನಪು, ನದಿಯ ಒಡನಾಟ, ಸ್ಥಳಪುರಾಣ (ಕೆರೆ, ನೀರಾವರಿ, ಫಲವತ್ತತೆ) ಸಂಕೇತಿಗಳು ಕೆರೆ, ಮಂಟಪ, ದೇವಾಲಯ ಕಟ್ಟಿಸಿದ್ದು, ಗಡ್ಡೆ ರೋಗ (ಹಿರಿಗನಹಳ್ಳಿ), ಬೇಚಿರಾಕ್ ಗ್ರಾಮಗಳ ಬಗೆಗೆ, ಸಂಕೇತಿಗಳು ಮಾತ್ರ ತೊರೆದ ನೆಲೆಗಳ ಬಗೆಗೆ, ಬೇಸಾಯ- ಅನುಷ್ಠಾನ ಹೇಗೆ ಹೊಂದಿಸಿಕೊಂಡರು

೧೪. ವ್ಯವಸಾಯ ಸಾಧನೆ-ಬಹುಮಾನ:

ಗೊದಮಟ್ಟೆ ಸಂಕೇತಿ, ಸ್ವಂತ ಉಳುಮೆ? ಇತರ ದುಡಿಮೆ? ಪ್ರಗತಿಶೀಲ ರೈತ-ತೋಟದ ಪ್ರಾದೇಶಿಕ ಭಿನ್ನತೆ, ತೋಟದ ಪಾರಿಭಾಷಿಕ ಪದಗಳು, ಹೊಲ, ಪ್ರಾದೇಶಿಕ ಸ್ವೀಕಾರ, ವನಭೋಜನ, ಜಾನಪದ ಸಂಪ್ರದಾಯ (ಹಾಡು, ಪೂಜೆ), ವಿಧಿ, ನಿಷೇಧ (ಸೋಮವಾರ ಉಳದಿರುವುದು), ಗೋಚಿಕಿತ್ಸೆ? ಜಾತ್ರೆಯಲ್ಲಿ ಎತ್ತು ಮಾರುವುದು, ಹಸುಗಳ ಹೆಸರುಗಳು, ಸುಳಿ, ಉಪಕಸುಬು, ವಾಣಿಜ್ಯ ಬೆಳೆ? ತರಕಾರಿ? ರಾಗಿ ಬಳಕೆ? ವೃಕ್ಷ, ಪ್ರಾಣಿ ಆರಾಧನೆ.

೬ ರೈತಮಿತ್ರ ಶ್ರೀ ಎನ್. ಕೇಶವಮೂರ್ತಿ
(ಈ ಸಂಪುಟದ ಲೇಖಕರು)

- ಬ.ಸು.ಪ್ರ

ಶ್ರೀ ನಾರಾಯಣರಾವ್ ಕೇಶವಮೂರ್ತಿ (ಜ: 20-07-1967) ಒಬ್ಬ ಕೃಷಿತಜ್ಞ, ಕೃಷಿ ಪ್ರಸಾರಕ, ಕೃಷಿಕರ ಪರವಾದ ಸತತ ಚಿಂತಕ, ಕನಸುಗಾರ, ದುಡಿಮೆಗಾರ ಮತ್ತು ರೈತಮಿತ್ರ.

ಎನ್. ಕೇಶವಮೂರ್ತಿ ಅವರು ಸದ್ಯ ಮೈಸೂರಿನ ಆಕಾಶವಾಣಿ ಕೇಂದ್ರದಲ್ಲಿ ಪ್ರಸಾರ ನಿರ್ವಾಹಕರಾಗಿ Farm and Home ವಿಭಾಗದಲ್ಲಿ ವಿಶೇಷ ಸೇವೆ ಸಲ್ಲಿಸುತ್ತಿದ್ದಾರೆ.

ಹಾಸನಜಿಲ್ಲೆ ಚನ್ನರಾಯಪಟ್ಟಣದ ಶ್ರೀ ಸಿ.ಎಸ್. ನಾರಾಯಣರಾವ್ ಮತ್ತು ಶ್ರೀಮತಿ ಜಯಲಕ್ಷ್ಮಿ ದಂಪತಿಯ ನಾಲ್ವರು ಮಕ್ಕಳಲ್ಲಿ ಕೊನೆಯವರು ಶ್ರೀ ಎನ್. ಕೇಶವಮೂರ್ತಿ. ಧಾರವಾಡದ University of Agricultural Sciencesನಲ್ಲಿ ಬಿ.ಎಸ್‌ಸಿ. (ಕೃಷಿ) ಪದವಿಯನ್ನು ಉನ್ನತ ಶ್ರೇಯಾಂಕದಲ್ಲಿ ಪಡೆದ (1990) ಕೇಶವಮೂರ್ತಿ ಇದೀಗ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ Mass Communication and Journalism ವಿಷಯದಲ್ಲಿ M.A., ಪದವಿಗಾಗಿ ಕಲಿಕೆಯನ್ನು ಮುಂದುವರಿಸಿದ್ದಾರೆ. ತಮ್ಮ ಮೂಲ ಶಿಕ್ಷಣ, ವೃತ್ತಿ ಮತ್ತು ಕೃಷಿಸಾಧನೆಗಳಿಗೆ ಕಸುವು ತುಂಬಿಕೊಳ್ಳುವ ನಿರಂತರ ಪ್ರಯತ್ನ ಅವರದು.

ಕೇಶವಮೂರ್ತಿ ಬೆಂಗಳೂರಿನ Indo-American Hybrid Seedsನಲ್ಲಿ Sales Promotion Officer ಆಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. 1991-94ರ ನಡುವಿನ ಮೂರು ವರ್ಷಗಳ ಸಾಧನೆಗಾಗಿ ರಾಷ್ಟ್ರಮಟ್ಟದ Best Sales Promotion Officer Awardಗೆ ಪಾತ್ರರಾದರು. 1994ರಲ್ಲಿ ಆಕಾಶವಾಣಿಯ ಸೇವೆಗೆ ಸೇರುವ ಹೊತ್ತಿಗೆ ಅವರ ಕಾರ್ಯಕ್ಷಮತೆಗೆ ಹೀಗೆ ಮಾನ್ಯತೆ ದೊರೆತಿತ್ತು.

ಇದೀಗ ಗ್ರಾಮೀಣ ಕಾರ್ಯಕ್ರಮಗಳ ಪ್ರಸಾರಕರಾಗಿ ಕೇಶವಮೂರ್ತಿ 16 ವರ್ಷಗಳ ಸಾರ್ಥಕ ಸೇವೆಯನ್ನು ಪೂರೈಸಿದ್ದಾರೆ. ದಕ್ಷತೆ ಮತ್ತು ಕಾರ್ಯಕ್ಷಮತೆ ಅವರ ಶಕ್ತಿಯಾಗಿದೆ. ಅದನ್ನು ಜನಸಮ್ಮುಖವಾಗಿ ತೊಡಗಿಸಿಕೊಂಡಿದ್ದಾರೆ. 'ಮಾಹಿತಿಯ ಮೂಲಕ ರೈತರ ಜೀವನ ಸುಧಾರಣೆ' ಎಂಬುದು ಅವರ ಮಂತ್ರವಾಗಿದೆ. ಅವರ ಈ ದಿಕ್ಕಿನ ಶ್ರಮವು Public Service Broadcasting and Rural Development ಎಂಬ ಮಾತಿಗೆ ಅರ್ಥ ತಂದುಕೊಟ್ಟಿದೆ. ಅವರು ತಮ್ಮ ಸೇವೆಯನ್ನು ಪ್ರಾರಂಭಿಸಿದ್ದು ಆಕಾಶವಾಣಿಯ ಹಾಸನ ಕೇಂದ್ರದಲ್ಲಿ (12-09-1994). Effectiveness of Farm Broadcasts - A Cost Benefit Analysis ಎಂಬುದು ಹಾಸನದ ಬಾನುಲಿ ಕೇಂದ್ರದ ಕಾರ್ಯಕ್ರಮವನ್ನಾಧರಿಸಿದ ಪ್ರಸಾರ-ಶೋಧನ ವರದಿ. ಈ ಸಂಶೋಧನೆಯ ತಂಡದಲ್ಲಿ ಕೇಶವಮೂರ್ತಿಯವರೂ ಒಬ್ಬ ಸದಸ್ಯರಾಗಿದ್ದುದು ಗಮನಾರ್ಹ. ಈ ಸಂಶೋಧನ ವರದಿಗಾಗಿ National Akashavani Award ಲಭ್ಯವಾಯಿತೆಂಬುದು ಈ ಕೇಂದ್ರ ಮತ್ತು ಸಿಬ್ಬಂದಿಯ ಪರವಾದ ಪ್ರೋತ್ಸಾಹಕ ಸಂಗತಿಯೇ ಸರಿ.

ಶಿಕ್ಷಣ, ಮಾಹಿತಿ ಮತ್ತು ಮನೋರಂಜನೆ ಇವು ಬಾನುಲಿಯ ಮೂರು ಮೂಲಭೂತ ಆಶಯಗಳು. ಇವನ್ನು ಸಾಧಿಸುವುದಕ್ಕಾಗಿ ಕೇಶವಮೂರ್ತಿಯವರು ಕಲ್ಪಿಸಿದ ಹೊಸ ತತ್ತ್ವವೆಂದರೆ Radio Village - A New Definition for Rural Development ಎಂಬುದು. ಇದೀಗ ಮೈಸೂರು ಬಾನುಲಿ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಕೇಶವಮೂರ್ತಿಯವರು ಮಂಡ್ಯಜಿಲ್ಲೆಯ ಹೆಚ್. ಕೋಡಿಹಳ್ಳಿಯನ್ನು ಮೈಸೂರು ಬಾನುಲಿಕೇಂದ್ರದ ಬಾನುಲಿಗ್ರಾಮವನ್ನಾಗಿ (Radio Village) ರೂಪಿಸಿದ್ದಾರೆ. ರೈತರು ಅಲ್ಪವೆಚ್ಚದ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವಂತೆ ಮಾಡಲು ತಮ್ಮ ಪ್ರಸಾರ ಕಾರ್ಯಕ್ರಮಗಳ ಮೂಲಕ ಶ್ರಮಿಸಿದ್ದಾರೆ. ಅದರ ಫಲವಾಗಿ ಗ್ರಾಮದ ಪ್ರತಿ ರೈತನೂ ಪ್ರಗತಿಶೀಲನಾಗಿದ್ದಾನೆ. ಬಾನುಲಿಯ ಬಗೆಗೆ ಗೌರವವನ್ನು ಬೆಳೆಸಿಕೊಂಡಿದ್ದಾನೆ.

ಅವರ ಇಂಥ ಶ್ರಮದಿಂದಾಗಿ ಮೈಸೂರು ಬಾನುಲಿಯ ಕೃಷಿಕಾರ್ಯಕ್ರಮಗಳನ್ನು ನಿತ್ಯವೂ ಸುಮಾರು 18-20 ಲಕ್ಷ ಜನ ಕೇಳುತ್ತಾರೆ. ಅವರೆಲ್ಲರೂ ಅಲ್ಪವೆಚ್ಚದ ತಾಂತ್ರಿಕತೆಯನ್ನು ಕುರಿತ ಮಾಹಿತಿಯನ್ನು ಆಲಿಸುತ್ತಿದ್ದಾರೆ, ಅಳವಡಿಸಿಕೊಳ್ಳುತ್ತಿದ್ದಾರೆ. ಅದು ಒಳ್ಳೆಯ ಫಲಿತಾಂಶ ನೀಡಿದೆ. ಅದರಿಂದಾಗಿ ರೈತರು ತಮಗೆ ತಿಳಿದ ಇತರ ರೈತರಿಗೆ ಅದನ್ನು ಮುಟ್ಟಿಸುತ್ತಿದ್ದಾರೆ. Rural development is the development of the individual, and not the development of rural areas ಎಂಬ ದೃಢವಾದ ತಿಳಿವಿನ ನೆಲೆಯಲ್ಲಿ ಕೇಶವಮೂರ್ತಿಯವರು ಮುಂದುವರಿದಿದ್ದಾರೆ.

ಬಾನುಲಿಯು ಒಂದು ಶ್ರವ್ಯ ಮಾಧ್ಯಮ. ಅದನ್ನು ದೃಶ್ಯಮಾಧ್ಯಮವಾಗಿ ವಿಸ್ತರಿಸಿದ್ದು ಕೇಶವಮೂರ್ತಿ ಅವರು. ಅದಕ್ಕಾಗಿ ಅವರು ಬಾನುಲಿಯನ್ನೇ ಹೊಲಕ್ಕೆ ಒಯ್ಯುತ್ತಾರೆ. ಪ್ರತಿ ತಿಂಗಳೂ 'ಬಾನುಲಿ ಕೃಷಿ ಬೆಳಗು' ಕಾರ್ಯಕ್ರಮವನ್ನು ರೈತರಿಗಾಗಿ ನಡೆಸುತ್ತಾರೆ. 2006ರ ಮೇ ತಿಂಗಳಿನಿಂದ ತೊಡಗಿ ಇಲ್ಲಿಯವರೆಗೆ 42 ಅಂಥ ಕ್ಷೇತ್ರಕಾರ್ಯಕ್ರಮ ನಡೆಸಿದ್ದಾರೆ. ಈ ರೈತ-ತರಬೇತಿ ಶಿಬಿರಗಳಿಗೆ ಸುತ್ತಣ ಜಿಲ್ಲೆಗಳಿಂದ ಸುಮಾರು 300-400 ರೈತರು ಬಂದು ಭಾಗವಹಿಸುತ್ತಾರೆ. ಇದರಿಂದ ಪ್ರಚೋದಿತರಾದ ರೈತರು 'ಬಾನುಲಿ ಕೃಷಿಕರ ಬಳಗ'ಗಳನ್ನು ಕಟ್ಟಿಕೊಂಡಿದ್ದಾರೆ. 2009ರಲ್ಲಿ ಮಂಡ್ಯದಲ್ಲಿ ನಡೆದ ರಾಜ್ಯಮಟ್ಟದ ಬಾನುಲಿ ಕೃಷಿಕರ ಸಮಾವೇಶದಲ್ಲಿ ರೈತಕಮ್ಮಟದ ಐದು ಉತ್ಪಾದನೆಗಳು ಬಿಡುಗಡೆಗೊಂಡಿವೆ. ಇವೆಲ್ಲದರ ಪರಿಣಾಮವಾಗಿ ರೈತರು ತಮ್ಮ ಕೃಷಿಕಾಯಕದ ಬಗೆಗೆ ಹೆಮ್ಮೆ ತಾಳುತ್ತಿದ್ದಾರೆ. ಕೇಶವಮೂರ್ತಿಯವರು ತಮ್ಮ ಬದುಕಿನ ಸಾರ್ಥಕ್ಯವನ್ನು ಕಂಡುಕೊಳ್ಳುತ್ತಿರುವುದು ರೈತರ ಮುಖದಲ್ಲಿ ಬೆಳಗುವ ಈ ಆತ್ಮವಿಶ್ವಾಸದಲ್ಲಿ.

ಎನ್. ಕೇಶವಮೂರ್ತಿ ಚೆನ್ನಾಗಿ ಹಾಡುತ್ತಾರೆ, ಚೆನ್ನಾಗಿ ಉಪನ್ಯಾಸ ನೀಡುತ್ತಾರೆ, ರಂಗ ಕಲಾವಿದರು ಕೂಡ ಆಗಿದ್ದಾರೆ. ವಲಯ ಮಟ್ಟದ ಯುವಜನೋತ್ಸವದಲ್ಲಿ ತಮ್ಮ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ್ದವರು ಅವರು.

ಶ್ರೀಯುತರು ಬರೆದ 'ಸಾವಯವ ತೋಟಗಾರಿಕೆ' ಎಂಬ ಕೃತಿ 2006ರಲ್ಲಿ ತೋಟಗಾರಿಕೆ ಇಲಾಖೆಯಿಂದ ಪ್ರಕಟಗೊಂಡಿದೆ. 'ಹಸಿರು ಸಿರಿ' ಎಂಬುದು ಸಾವಯವ ಕೃಷಿಯನ್ನು ಕುರಿತ ವಿಶ್ಲೇಷಣಾತ್ಮಕ ಕೃತಿ. ಇದನ್ನು ಕೃಷಿ ವಿಜ್ಞಾನ ಕೇಂದ್ರ, ಮಂಡ್ಯ ಮತ್ತು NABARD ಸೇರಿ 2007ರಲ್ಲಿ ಪ್ರಕಟಿಸಿದ್ದಾರೆ. ಈ ಸಾಲಿಗೆ ಸೇರುವ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬುದು ಅವರ ಸಂಶೋಧನ ಕೃತಿಯಾಗಿದೆ.

ಇವಲ್ಲದೆ ಶ್ರೀಯುತರು 'ನೇಗಿಲಯೋಗಿ' ಎಂಬ ಹೆಸರಿನಲ್ಲಿ ತಿಂಗಳ ವಾರ್ತಾಪತ್ರವೊಂದನ್ನು ಬಾನುಲಿ ಕೃಷಿಕರ ಬಳಗದ ಸಹಯೋಗದಲ್ಲಿ ಪ್ರಕಟಿಸುತ್ತ ಬಂದಿದ್ದಾರೆ. 2009ರ ಫೆಬ್ರವರಿಯಲ್ಲಿ ಮೊದಲ ಸಂಚಿಕೆ ಬಿಡುಗಡೆಯಾಗಿ ಈವರೆಗೆ ಎಂಟು ಸಂಚಿಕೆಗಳು ಬೆಳಕು ಕಂಡಿವೆ. ಜಗತ್ತಿನಾದ್ಯಂತ ಈ ಕುರಿತ ಮಾಹಿತಿ ತಲುಪಬೇಕೆಂಬ ಗುರಿ ಇಟ್ಟುಕೊಂಡ ಬ್ಲಾಗ್‌ಸ್ಪಾಟ್ www.negilayogi.blogspot.com. ಎನ್. ಕೇಶವಮೂರ್ತಿಯವರ ಇನ್ನೊಂದು ಉಪಕ್ರಮವಾಗಿದೆ. ಇವೆಲ್ಲವೂ ಅವರ ಎಲ್ಲೆಯರಿಯದ ರೈತಪ್ರೀತಿಯನ್ನೇ ತೋರಿಸುತ್ತವೆ.

ಹಾಸನ ಜಿಲ್ಲೆ ದೊಡ್ಡಗನ್ನಿಯ ಕೃಷಿಕರ ಕುಟುಂಬದಿಂದ ಬಂದವರು ಎನ್. ಕೇಶವಮೂರ್ತಿ. ಲಕ್ಷ್ಮಯ್ಯ-ವೆಂಕಟ ಲಕ್ಷ್ಮಮ್ಮ; ಅವರ ಮಗ ಜಿ. ಸುಬ್ಬರಾವ್-ನಂಜಮ್ಮ; ಅವರ ಮಗ ಸಿ.ಎಸ್.ನಾರಾಯಣರಾವ್ (ಮಣಯ್ಯ)-ಜಯಲಕ್ಷ್ಮಿ; ಅವರ ಮಗ ಎನ್. ಕೇಶವಮೂರ್ತಿ. ಸುಬ್ಬರಾವ್ ದೊಡ್ಡಗನ್ನಿಯ ಶಾನುಭೋಗರಾಗಿದ್ದವರು, ಶ್ರಮಜೀವಿ. ಹಿತ್ತಿಲನ್ನೇ ನಂದನವನವಾಗಿ ಬೆಳೆಸಿದವರು. ತೋಟಗಾರಿಕೆ ಇಲಾಖೆಯ ಬಹುಮಾನಗಳಿಗೆ ಪಾತ್ರರಾದವರು.

ನಾರಾಯಣರಾವ್ ಕೌಟುಂಬಿಕ ಸಂಕಷ್ಟಗಳನ್ನು ಗೆದ್ದು ಕೋ ಆಪರೇಟಿವ್ ತರಬೇತಿ ಪಡೆದು ಕೋ ಆಪರೇಟಿವ್ ಸೊಸೈಟಿಯ ಕಾರ್ಯದರ್ಶಿಯಾದರು. ಕಂಟ್ರೋಲ್ ಕಾಲದಲ್ಲಿ ಕಾಡಿ ಬರುತ್ತಿದ್ದ ನಾನಾ ರೀತಿಯ ಆಮಿಷಗಳನ್ನು ನೂಕಿ ಹಸ್ತಶುದ್ಧಿಯನ್ನುಳಿಸಿಕೊಂಡವರು. "ನಾವು ಮಾಡಿದ ತಪ್ಪು ಮಕ್ಕಳನ್ನು ಕಾಡುತ್ತದೆ. ಬೇರೆಯವರ ಹಣಕ್ಕೆ ಆಸೆ ಪಡಬಾರದು. ಕಷ್ಟಪಟ್ಟು ದುಡಿಯಬೇಕು. ಮನಸ್ಸು ಶುದ್ಧವಾಗಿದ್ದರೆ ಅದೇ ದೇವರು. ಜಾತಿ ನೋಡಬೇಡ, ಜನ ನೋಡು" ಎಂಬುದು ಮಕ್ಕಳಿಗೆ ಅವರ ನಿತ್ಯಬೋಧನೆಯಾಗಿತ್ತು. ವ್ಯವಸಾಯದಲ್ಲಿ ಅವರಿಗೆ ಪ್ರೀತಿ. ಸ್ವಂತ ಉಳುಮೆ ಮಾಡಿದವರು. ರೈತರಿಗೆ ಜಮೀನು ಪತ್ರಗಳನ್ನು ಬರೆದುಕೊಡುವುದು, ಅವರ ವ್ಯಾಜ್ಯಗಳನ್ನು ಪರಿಹರಿಸುವುದು ಅವರ ಹವ್ಯಾಸ. ರಾಸುಗಳನ್ನು ಸಾಕುವ ಮೋಹ. ಹೈಬ್ರಿಡ್ ತಳಿಗಳನ್ನು ಉತ್ಪಾದಿಸಿದ ಸಾಧನೆ. ಮನೆಯಲ್ಲಿ ಅನ್ನಪಾನದ ಪರಂತವಣೆಗೆ ಆದ್ಯತೆ. ಮಕ್ಕಳೆಲ್ಲರಿಗೆ ಸಂಗೀತ ಹೇಳಿಸಿದರು. ಆದ್ಯತೆಯ ಮೇಲೆ ಶಿಕ್ಷಣ ಕೊಡಿಸಿದರು. ದನಕರುಗಳ ಪಾಲನೆ ಮತ್ತು ಕೃಷಿಗೆ ಸಂಬಂಧಿಸಿದಂತೆ ಮಕ್ಕಳನ್ನು ದುಡಿಮೆಗೆ ಹಚ್ಚಿ ದುಡಿಮೆಯ ಗೌರವವನ್ನು ಮೈಗೂಡಿಸಿದರು.

ಶ್ರೀ ನಾರಾಯಣರಾಯರ ಧರ್ಮಪತ್ನಿ ಶ್ರೀಮತಿ ಜಯಲಕ್ಷ್ಮಿ ಅವರು ಶ್ರವಣಬೆಳಗೊಳದ ಹತ್ತಿರದ ಕೊತ್ತನ್ ಘಟ್ಟ ಹಳ್ಳಿಯಿಂದ ಬಂದವರು. ಅವರ ತಂದೆ ಎ.ಎಸ್. ಕೇಶವಯ್ಯನವರು ವಿದ್ವಾಂಸರಾಗಿದ್ದರು. ಮೊಮ್ಮಕ್ಕಳಿಗೆಲ್ಲ ಇಂಗ್ಲಿಷ್ ಕಲಿಸಿದವರು ಅವರೇ. ಶ್ರೀಮದ್ಭಗವದ್ಗೀತೆಯ ಇಂಗ್ಲಿಷ್ ಅನುವಾದ ಅವರ ಸಾಧನೆ. ನೈಪುಣ್ಯದಿಂದ ಸಂಸಾರ ನಿರ್ವಹಣೆ ಮಾಡಿ ಸದ್ಗೃಹಿಣಿ ಎನಿಸಿದವರು ಜಯಲಕ್ಷ್ಮಿ. ಕಷ್ಟದಲ್ಲಿದ್ದವರಿಗೆ ಸ್ಪಂದಿಸಿ ಉಚಿತವರಿತು ನೆರವಾಗುತ್ತಿದ್ದ ಜಯಲಕ್ಷ್ಮಿಯವರನ್ನು ಊರಿನವರು ಈಗಲೂ ನೆನೆಯುವುದು ಅವರ ದಯಾಪರತೆಗಾಗಿ.

ಶ್ರೀ ಎನ್. ಕೇಶವಮೂರ್ತಿಯವರ ಧರ್ಮಪತ್ನಿ ಶ್ರೀಮತಿ ಬಿ.ಎಸ್. ವೀಣಾ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕು ಬೆಲಗೂರು ಗ್ರಾಮದವರು. ವೀಣಾ ಅವರ ತಂದೆ ಬಿ.ಎಸ್. ಸುಬ್ಬರಾವ್ ಅಧ್ಯಾಪಕರು. ತಾಯಿ ಶಾಂತರತ್ನ ಅವರು ಅರಸೀಕೆರೆ ತಾಲ್ಲೂಕು ಕುರವಂಕ ಗ್ರಾಮದ ಜಮೀನುದಾರರ ಮಗಳು. ವ್ಯವಸಾಯದಲ್ಲಿ ಅವರಿಗೆ ಪರಿಶ್ರಮ. ತುಂಬುಕುಟುಂಬದ ಹಿನ್ನೆಲೆಯಿಂದ ಬಂದ ವೀಣಾ ಸಹಜವಾಗಿಯೇ ಅತ್ತೆಮಾವಂದಿರ ಮೆಚ್ಚಿನ ಸೊಸೆಯಾದರು. ಪತಿಯ ಅವಿರತ ದುಡಿಮೆಯ ಹಿಂದಿನ ಪೂರಕ ಶಕ್ತಿಯಾದರು. ಚಿ|| ವಿಂಧ್ಯಾ ಕೇಶವ್ (7ನೇ ತರಗತಿ) ಮತ್ತು ಚಿ|| ವರ್ಷಾ ಕೇಶವ್ (ಎಲ್.ಕೆ.ಜಿ.) ಅವರ ಮುದ್ದಿನ ಮಕ್ಕಳು. ತಮ್ಮ ಪತಿ ಎನ್. ಕೇಶವಮೂರ್ತಿ ಧೈರ್ಯದಿಂದ ಮುನ್ನುಗ್ಗುವ ಗುಣದವರು ಎಂದು ವೀಣಾ ಹೆಮ್ಮೆಯಿಂದ ಹೇಳುತ್ತಾರೆ. ಅರಿವು ಮತ್ತು ಲೋಕಪ್ರೀತಿ ಇದ್ದ ಕಡೆ ಅಳುಕಿಲ್ಲದೆ ಮುನ್ನುಗ್ಗುವ ಛಲ ತಾನಾಗಿಯೇ ಬರುತ್ತದೆ. ಇದಕ್ಕೆ ಕೇಶವಮೂರ್ತಿಯವರ ಸಾಧನೆಗಳು ಸಾಕ್ಷಿಯಾಗಿವೆ.

ಶ್ರೀ ಎನ್. ಕೇಶವಮೂರ್ತಿ, ಪ್ರಸಾರ ನಿರ್ವಹಣಾಧಿಕಾರಿ (Farm and Home)**,**
ಆಕಾಶವಾಣಿ, ಯಾದವಗಿರಿ, ಮೈಸೂರು 570 002 ;
ದೂ.ವಾ. 91-0821-2414789 (R), 91-0821-2416232 (O), ಮೊಬೈಲ್ 9480056960
ಫ್ಯಾಕ್ಸ್ 91-0821-2514222, ಇ-ಮೈಲ್: keshavamurthy.n@gmail.com

೭ ಗ್ರಂಥದ ಬಗೆಗೆ

ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಡಾ. ಕೆ. ಅನಂತರಾಮು
ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು
ಮಹೋನ್ನತ ಸಾಧನೆ

ಎನ್. ಕೇಶವಮೂರ್ತಿಯವರ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬುದು ಕನ್ನಡನಾಡಿನ ಕೃಷಿರಂಗಕ್ಕೆ ಸಮರ್ಪಿತವಾಗಿರುವ ಬೃಹದಾಕಾರದ ಗ್ರಂಥವಾಗಿದೆ. ಹಾಸನ, ಮೈಸೂರು, ಮಂಡ್ಯ, ಕೊಡಗು, ಚಿಕ್ಕಮಗಳೂರು, ಬೆಂಗಳೂರು, ಶಿವಮೊಗ್ಗ, ದಕ್ಷಿಣಕನ್ನಡ ಮೊದಲಾದ ಜಿಲ್ಲೆಗಳಲ್ಲಿ ನೆಲೆಯಾಗಿ, ಕೃಷಿಯಲ್ಲಿ ತೊಡಗಿರುವ ಸಂಕೇತಿಗಳ ಕೃಷಿಪದ್ಧತಿಯ ತಲಸ್ಪರ್ಶಿಯಾದ ಅಧ್ಯಯನ ಈ ಗ್ರಂಥದಲ್ಲಿದೆ. ಸಂಕೇತಿಗಳ ಕೃಷಿಪದ್ಧತಿಗೂ ಮಿಕ್ಕ ರೈತರ ಕೃಷಿಪದ್ಧತಿಗೂ ಅಲ್ಪಸ್ವಲ್ಪ ವ್ಯತ್ಯಾಸಗಳು ಕಂಡುಬಂದರೂ, ವಿಶಾಲವಾದ ನೆಲೆಯಲ್ಲಿ ಆ ವ್ಯತ್ಯಾಸಗಳು ಹೆಚ್ಚಿನ ಮಹತ್ವವನ್ನೇನೂ ತಳೆದಂತೆ ತೋರುವುದಿಲ್ಲ. ಹೀಗಾಗಿ ಈ ಕೃಷಿಸಂಪುಟವು ಕನ್ನಡನಾಡಿನ ಎಲ್ಲ ಕೃಷಿಕರಿಗೂ ಸರಿಸಮಾನವಾಗಿ ಪ್ರಿಯವಾಗುವ ಉದ್ಗ್ರಂಥವಾಗಿದೆ.

ಕೇಶವಮೂರ್ತಿಯವರು ಸಂಕೇತಿಗಳು ನೆಲೆಸಿರುವ – ಕೆಲವು ನಗರಗಳೂ ಸೇರಿದಂತೆ – ೩೩ ಪ್ರಮುಖ ಗ್ರಾಮಗಳಿಗೆ ಭೇಟಿಕೊಟ್ಟು ಆ ಹೊತ್ತಿಗೊದಗಿದ ೯೭ ಮಂದಿ ಪ್ರಮುಖ ಕೃಷಿಕರನ್ನು ಸಂದರ್ಶಿಸಿ, ಅವರೊಡನೆ ನಡೆಸಿದ ವಿಚಾರಮಂಥನದ ಫಲವಾಗಿ ಲಭ್ಯವಾಗಿರುವ ನವನೀತವನ್ನು ಓದುಗರಿಗೆ ಸಮರ್ಪಿಸಿದ್ದಾರೆ. ಅಡಿಕೆ, ವೀಳ್ಯದೆಲೆ, ತೆಂಗು, ಬಾಳೆಗಳು ಸಂಕೇತಿಗಳು ಹಿಂದಿನಿಂದಲೂ ರೂಢಿಸಿಕೊಂಡು ಬಂದ ತೋಟದ ಬೆಳೆಗಳಾಗಿವೆ. ಅದರಲ್ಲಿಯೂ ಅಡಿಕೆಕೃಷಿ ಅವರ ಜೀವದುಸಿರಾಗಿ ಸಾಗಿಬಂದಿದೆ. ಸಂಕೇತಿ ಶಿಶುವೊಂದು ಮಾತೃಗರ್ಭದಿಂದಲೇ ಅಡಿಕೆ ಸಸಿಯೊಂದನ್ನು ಕೈಲಿಹಿಡಿದು ಭೂಮಿಗಿಳಿಯುತ್ತದೆ – ಎಂದು ಈ ಕೃತಿಯಲ್ಲಿ ಯಾರೋ ಆಲಂಕಾರಿಕವಾಗಿ ಹೇಳಿದ್ದಾರೆ. ತೋಟವೇ ಪ್ರಮುಖ ಕೃಷಿರಂಗವಾದರೂ ಗದ್ದೆಯ ವ್ಯವಸಾಯಕ್ಕೂ ಹೊಲದ ವ್ಯವಸಾಯಕ್ಕೂ ಅವರು ತಮ್ಮನ್ನು ಪಳಗಿಸಿಕೊಂಡಿದ್ದಾರೆ. ಸಮಕಾಲೀನ ಅಗತ್ಯಗಳಿಗೆ ಓಗೊಟ್ಟು ತಂಬಾಕು, ಹತ್ತಿ, ಕಬ್ಬು, ಕಾಫಿ, ವೆನಿಲ್ಲಾ, ಸೂರ್ಯಕಾಂತಿ, ಅರಿಶಿನ, ಏಲಕ್ಕಿ, ಕಾಳುಮೆಣಸು, ಶುಂಠಿ ಮೊದಲಾದುವನ್ನೆಲ್ಲ ತಮ್ಮ ಕೃಷಿವಲಯಕ್ಕೆ ತಂದುಕೊಂಡಿದ್ದಾರೆ.

ಆರ್ಥಿಕವಾಗಿ ದಿನದಿನವೂ ಆಸರೆಯಾಗುವ ಬಿನೀಸು, ಕೋಸು, ಈರುಳ್ಳಿ, ಬೆಳ್ಳುಳ್ಳಿ, ಆಲೂಗೆಡ್ಡೆ, ಬದನೆ, ಹಸಿರು ಮೆಣಸಿನಕಾಯಿ, ಬೀಟ್‌ರೂಟ್, ಬೆಂಡೆ, ಹೀರೆ, ಕ್ಯಾರೆಟ್ಟು, ಟೊಮೇಟೋ, ನುಗ್ಗೆ, ನಿಂಬೆ ಮುಂತಾದ ತರಕಾರಿಗಳನ್ನೂ ಬೆಳೆದು ಮಾರುತ್ತಿದ್ದಾರೆ. ಹಣ್ಣುಗಳನ್ನು ಕೈಗೆತ್ತಿಕೊಂಡು ಮಾವು, ಪರಂಗಿ, ಹಲಸು, ಸಪೋಟಾ, ಚೆರ್ರಿ, ನೇರಳೆ, ಸೀಬೆ, ದ್ರಾಕ್ಷಿ, ಕಲ್ಲಂಗಡಿ ಮುಂತಾದುವುಗಳನ್ನೂ ಬೆಳೆದು ದಕ್ಕಿಸಿಕೊಂಡಿದ್ದಾರೆ. ಅವರು ಬೆಳೆದಿರುವ ರಸಪುರಿ, ತೋತಾಪುರಿ, ಬಾದಾಮಿ, ಆಮ್ರಪಾಲಿ, ರತ್ನಗಿರಿ, ಮಲಗೋವಾ ಮುಂತಾದ ವಿವಿಧ ಮಾವುಗಳ ಹೆಸರು ಕೇಳುವಾಗಲೇ ಬಾಯಲ್ಲಿ ನೀರೂರುತ್ತದೆ. ಗದ್ದೆಯಲ್ಲಿ ರಾಜಮುಡಿ, ರಾಜಭೋಗ, ರತ್ನಚೂಡಿ, ಅರಿಸಿಣಕೆಂಬೂತಿ, ಸಣ್ಣಕೆಂಬೂತಿ, ಹೊಟ್ಟೆಕೆಂಬೂತಿ, ಗೌರಿಸಣ್ಣ ಮುಂತಾದ ಜಾತಿಗಳನ್ನು ಬೆಳೆದು ಭತ್ತದ ಕೃಷಿಯಲ್ಲಿಯೂ ಗಟ್ಟಿಗರೆನಿಸಿದ್ದಾರೆ. ಆ ಬೆಳೆಗಾಗಿ ಕೃಷಿಪ್ರಶಸ್ತಿಯನ್ನೂ ಗೆದ್ದುಕೊಂಡಿದ್ದಾರೆ. ರಾಗಿ, ಹುರುಳಿ, ಎಳ್ಳು, ತಡಗುಣಿ, ಮ್ಯಂತ್ಯ, ಕೊತ್ತಂಬರಿ, ತೊಗರಿ, ಕಡಲೆ, ನೆಲಗಡಲೆ, ಅವರೆ, ಜೋಳ, ಮುಸುಕಿನ ಜೋಳ ಮೊದಲಾದ ಹೊಲದ ಬೆಳೆಗಳಲ್ಲೂ ಯಶಸ್ಸು ಗಳಿಸಿದ್ದಾರೆ. ಕೊಡಗಿಗೆ ಕಾಲಿಟ್ಟು ಎಸ್ಟೇಟುಗಳನ್ನು ಮಾಡಿ ಅಲ್ಲಿನ ಎಲ್ಲ ಬೆಳೆಗಳನ್ನೂ ಮಾಡಿ ಉತ್ತೀರ್ಣರಾಗಿದ್ದಾರೆ. ಊಟಿಗೆ

ಲಗ್ಗೆಯಿಟ್ಟು ಟೀ ಬೆಳೆಯುವುದಕ್ಕೆ ಪ್ರಶಿಕ್ಷಣ ಪಡೆದು, ಟೀ ಎಸ್ಟೇಟು ಎಬ್ಬಿಸಿದ್ದಾರೆ. ಪುಷ್ಪಕೃಷಿಯಲ್ಲೂ ಅಲ್ಲಲ್ಲಿ ತಾವಿದ್ದೇವೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಗಿಡಮೂಲಿಕೆಗಳನ್ನು ಬೆಳೆದು ವಿದೇಶಗಳಿಗೆ ರಫ್ತು ಮಾಡಿದ್ದಾರೆ. ನೋಡಿಯೇ ಬಿಡೋಣ ಎಂದು ಕೆಲವರು ಗೋಧಿಯನ್ನೂ ಬೆಳೆದಿದ್ದಾರೆ. ಕನ್ನಡನಾಡಿನಲ್ಲಿ ತೋಟ, ಗದ್ದೆ, ಹೊಲ ಎಂಬ ತ್ರಿವಿಧ ಬೇಸಾಯವೇನಿದೆಯೋ, ಅವುಗಳಲ್ಲಿ ಬೆಳೆಯಬಹುದಾದ ವಸ್ತುಗಳು ಏನೇನಿವೆಯೋ - ಅವೆಲ್ಲವನ್ನೂ ಸಂಕೇತಿ ಕೃಷಿಕರು ಬೆಳೆದು ಜಯಭೇರಿ ಬಾರಿಸಿದ್ದಾರೆ. 'ಚಿಲ್ಕುಂದಕ್ಕೆ ಹೋಗಿ ನೋಡಿ, ಸಂಕೇತಿಗಳು ತೋಟದಲ್ಲಿ ಕಚ್ಚೆಬಿಗಿದು ಹೇಗೆ ದುಡಿಯುತ್ತಾರೆಂಬುದನ್ನು ತಿಳಿಯಿರಿ' ಎಂದು ಕನ್ನಡನಾಡಿನ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸು ಅವರಿಂದಲೇ ಶಹಬಾಸುಗಿರಿ ಪಡೆದವರಾಗಿದ್ದಾರೆ ಸಂಕೇತಿಗಳು. ಮರಗಳನ್ನು ಬೆಳೆಸುವುದರಲ್ಲಿಯೂ ಮುಂದಾಗಿ ತೇಗದ ಮರಕ್ಕೆ ಪ್ರಾಶಸ್ತ್ಯ ನೀಡಿದ್ದಾರೆ. ಸರ್ವೆಮರ, ಸೌದೆಮರಗಳು, ಸಿಲ್ವರ್ ಗಿಡ, ಸುಬಾಬುಲ್ ಎಲ್ಲವನ್ನೂ ಬೆಳೆಸಿದ್ದಾರೆ. ರೇಷ್ಮೆ ಬೇಸಾಯಕ್ಕೂ ಕೈಯಿಕ್ಕಿ ಅದು ಪ್ರಾಣಿ ಹಿಂಸೆಗೆ ದಾರಿಯಾಗುತ್ತದೆಯೆಂದು ನೊಂದು ಕೈಬಿಟ್ಟಿದ್ದಾರೆ.

ತ್ರಿವಿಧಕ್ಷೇತ್ರಗಳಲ್ಲಿ ಸಂಕೇತಿಗಳು ಒಂದೊಂದೂ ಬೆಳೆಯನ್ನು ಹೇಗೆ ಮೇಲೆ ತರುತ್ತಾರೆ, ಕಾಲಕಾಲಕ್ಕೆ ಅವರು ಮಾಡುವ ಆರೈಕೆಗಳೇನು, ರೋಗಗಳನ್ನು ತಡೆಗಟ್ಟಲು ಏನು ಕ್ರಮ ಕೈಗೊಳ್ಳುತ್ತಾರೆ, ಬೆಳೆ ಕೈಗೆ ಬಂದಾಗ ಅದನ್ನು ಸಂಸ್ಕರಿಸಿ ಮನೆದುಂಬಿಸಿಕೊಳ್ಳುವ ಬಗೆ ಹೇಗೆ, ಸಂಗ್ರಹಣೆಯ ವಿಧಾನಗಳೇನು, ಮಾರಾಟದ ಕ್ರಮವೇನು ಮುಂತಾದ ಎಲ್ಲ ವಿವರಗಳೂ ಇಲ್ಲಿ ದಾಖಲಾಗಿವೆ. ಹೊಸದಾಗಿ ತೋಟವೆಬ್ಬಿಸಬೇಕೆ, ಕೃಷಿ ಮಾಡದೆ ಪಾಳುಗೆಡವಿರುವ ತೋಟಗಳಿಗೆ ಪ್ರಾಣಪ್ರತಿಷ್ಠೆಯಾಗಬೇಕೆ, ಬಂಜರುಭೂಮಿಯನ್ನು ಸುಂದರಭೂಮಿಯಾಗಿಸಬೇಕೆ, ಬಗನಿಮರ ಗಜ್ಜುಗದಮೆಳೆಯ ನಿರುಪಯುಕ್ತ ಕಾಡನ್ನು ನಂದನವನವಾಗಿಸಬೇಕೆ, ಒಂದೇ ನೆಲದಲ್ಲಿ ವೈವಿಧ್ಯಮಯವಾದ ಬೆಳೆಗಳನ್ನು ರೂಢಿಸಬೇಕೆ, ಬರಗಾಲದಲ್ಲಿ ತೋಟಗಳು ಸಾಯದಂತೆ ಸಂರಕ್ಷಿಸಬೇಕೆ - ಅದೆಲ್ಲವನ್ನೂ ಸಂಕೇತಿಕೃಷಿಕರು ಮಾಡಿತೋರಿಸಿದ್ದಾರೆ.

ಈ ಎಲ್ಲ ವಿಚಾರಗಳನ್ನೂ ಕೇಶವಮೂರ್ತಿಯವರು ಸಂಕೇತಿಗಳ ಬಾಯಿಯಿಂದಲೇ ಧ್ವನಿಮುದ್ರಿಸಿಕೊಂಡು, ಅದನ್ನು ಕ್ರಮಬದ್ಧವಾಗಿ ಬರಹರೂಪಕ್ಕೆ ತಂದಿದ್ದಾರೆ. 'ಸಂಕೇತಿ' ಎಂಬ ನೆಪದಲ್ಲಿ ಅವರು ಈ ಗ್ರಂಥದ ಮೂಲಕ ಕನ್ನಡನಾಡಿನ ಕೃಷಿಜಗತ್ತಿನ ವಿಶ್ವರೂಪದರ್ಶನವನ್ನೇ ನಮಗೆ ಮಾಡಿಸಿದ್ದಾರೆ; ಕೃತಾರ್ಥರಾಗಿದ್ದಾರೆ. ಚನ್ನರಾಯಪಟ್ಟಣದವರಾದ ಕೇಶವಮೂರ್ತಿಗಳು ಬ್ರಾಹ್ಮಣರಲ್ಲಿ ಬಬ್ಬೂರುಕಮ್ಮೆ ಪಂಗಡದವರು, ಸಂಕೇತಿಗಳಲ್ಲ. ಕೃಷಿವಿಜ್ಞಾನದಲ್ಲಿ ಎಂ.ಎಸ್ಸಿ. ಪದವೀಧರರಾದ ಅವರು ಸಂಕೇತಿ ಕೃಷಿಯಲ್ಲಿ ಏನೋ ಒಂದಿಷ್ಟು ವೈಶಿಷ್ಟ್ಯವಿದೆಯೆಂಬುದನ್ನು ತೌಲನಿಕವಾಗಿ ಕಂಡುಕೊಂಡಿದ್ದಾರೆ. ಆಕಾಶವಾಣಿಯಲ್ಲಿರುವ ಅವರಿಗೆ ಅಲ್ಲಿಯೂ ಕೃಷಿತರಂಗಗಳದೇ ಸ್ಪಂದನ. ಹೀಗಾಗಿ ಅವರು ಕೈಗೊಂಡ ಕಾರ್ಯಕ್ಕೆ ಪೂರ್ಣಯಶಸ್ಸು ಲಭ್ಯವಾಗಿದೆ.

ಕೇಶವಮೂರ್ತಿಗಳು ಅಷ್ಟರಿಂದಲೇ ತೃಪ್ತರಾಗಿಲ್ಲ. ತಾವು ಕ್ಷೇತ್ರಕಾರ್ಯದಲ್ಲಿ ಮಾತನಾಡಿಸಿದ ಸಂಕೇತಿ ಕೃಷಿಕರ ವಂಶಾನುಚರಿತೆ, ಹಿಂದಿನವರು ಕೃಷಿಯಲ್ಲಿ ಅನುಭವಿಸಿದ ಕಷ್ಟಪರಂಪರೆಗಳು, ವರ್ತಮಾನದಲ್ಲಿ ಸಂಕೇತಿ ಕೃಷಿಕರಿಗೆ ಲಭ್ಯವಾಗಿರುವ ಸೌಲಭ್ಯಗಳು, ಕೃಷಿಯಲ್ಲಿ ಅವರ ಪ್ರಯೋಗಶೀಲತೆ, ಕೃಷಿಯ ಜನಪದೀಯ ಆಚರಣೆಗಳು, ಅವರ ಸಮಾಜಸೇವಾಕಾರ್ಯಗಳು, ಮನೋರಂಜನೆಯ ಆಶ್ರಯಗಳು, ವಿವಾಹಾದಿ ಸಾಂಸ್ಕೃತಿಕ ವೈಭವ, ವಿವಿಧ ಕ್ಷೇತ್ರಗಳಲ್ಲಿ ಅವರ ಪ್ರತಿಭಾವಿಲಾಸ, ಅವರ ಜೀವನಶೈಲಿ, ಅವರ ಉಪಕಸುಬುಗಳು, ಅವರ ಅತಿಥಿಸತ್ಕಾರಪ್ರಿಯತೆ, ಅವರು ಅಪ್ಪಿಕೊಂಡ ಜೀವನಮೌಲ್ಯಗಳು, ಅವರ ಕಾಣ್ಕೆಗಳು, ಕನಸುಗಳು, ನನಸುಗಳು, ಭವಿಷ್ಯದಲ್ಲಿ ಕೃಷಿಕರೆಂಬ ಪಟ್ಟ ಅವರಿಗೆ ಉಳಿಯುತ್ತದೆಯೇ ಮುಂತಾದುವನ್ನೆಲ್ಲ ಪ್ರಾಸಂಗಿಕವಾಗಿ ದಾಖಲಿಸಿದ್ದಾರೆ. ಭೂತವರ್ತಮಾನಭವಿಷ್ಯತ್ತುಗಳನ್ನೆಲ್ಲ

ನವರಸಭರಿತವಾಗಿ ಕರತಲಾಮಲಕವಾಗಿಸಿದ್ದಾರೆ. ಈ ಮೂಲಕ ಈ ಗ್ರಂಥವು ಸಂಕೇತಿ ಬದುಕಿನ ವಿಶ್ವಕೋಶವಾಗಿ ಪರಿಣಮಿಸಿದೆ. ಬಿಡಿಬಿಡಿ ಸಂದರ್ಶನಗಳು ಅಷ್ಟರಲ್ಲೇ ಮುಗಿಯದೆ, 'ದರ್ಶನ'ಗಳಾಗಿ ಅನುರಣನಗೊಂಡಿವೆ. ಕೇಶವಮೂರ್ತಿಗಳು ಕೃಷಿಲೇಖನಗಳನ್ನು ಬರೆದಿರಬಹುದು, ಗ್ರಂಥಗಳನ್ನು ಸಂಪಾದಿಸಿ ಕೊಟ್ಟಿರಬಹುದು; ಆದರೆ ಈ ಉದ್ಗ್ರಂಥದ ಮೂಲಕ ಅವರು ಅಜರಾಮರ ಕೀರ್ತಿಗೆ ಪಾತ್ರರಾಗಿದ್ದಾರೆ.

ಸಂಕೇತಿ ಕೃಷಿಕರ ಹಿರಿಮೆಗರಿಮೆಗಳು

ಹಳೆಯ ಪೀಳಿಗೆಯ ಸಂಕೇತಿಗಳ ಹಿರಿಮೆಗರಿಮೆಮಹಿಮೆಗಳನ್ನೂ ಕೇಶವಮೂರ್ತಿಗಳು ಈ ಕೃತಿಯಲ್ಲಿ ಸೆರೆಹಿಡಿದಿದ್ದಾರೆ. ಹಳಬರು ಹೆಚ್ಚು ಸ್ವಾವಲಂಬಿಗಳಾಗಿದ್ದರು. ತಾವೇ ಗಟ್ಟಿಮುಟ್ಟಾದ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದರು. ಬಡಗಿ ಕೆಲಸವನ್ನೂ ಕೆಲವರು ತಾವೇ ಮಾಡುತ್ತ ಕಂಬಗಳಿಗೆ ಚಿತ್ತಾರ ಬಿಡಿಸುತ್ತಿದ್ದರು. ಕೆಲವು ಮನೆಗಳಂತೂ ನೂರಾರು ಜನ ಕುಳಿತು ಊಟಮಾಡಬಹುದಾದಷ್ಟು ದೇಶೋವಿಶಾಲವಾಗಿವೆ. ಹಂಚು ಕೈಯಾಡುವುದು, ಸೌದೆಸೀಳುವುದು, ಹಗ್ಗಹೊಸೆಯುವುದು, ಚಾಪೆಹೆಣೆಯುವುದು, ನೇಗಿಲು ಕೆತ್ತುವುದು, ಗೊಬ್ಬರತಯಾರಿಸುವುದು, ಬಾವಿತೋಡುವುದು ಮುಂತಾದ ಕೆಲಸಗಳನ್ನೆಲ್ಲ ಕೈಯಾರೆ ಮಾಡುತ್ತಿದ್ದರು. ಹುಣಿಸೆಮರದ ನೇಗಿಲಿನಲ್ಲಿ ಉತ್ತರೆ, ಉತ್ತರೆ ಮಳೆಯ ಸಿಡಿಲು ಬಡಿಯುತ್ತದೆಂದು ಆ ಮರವನ್ನು ಉಪಯೋಗಿಸುತ್ತಿರಲಿಲ್ಲ. ಕಲ್ಲುಹೊಡೆದೇ ಕಾಯಿಬೀಳಿಸುವ ಗುರಿಕಾರರಿದ್ದರು. ಅಡಕೆ ಕೀಳಲು ಮೊದಲ ಮರಕ್ಕೆ ಹತ್ತಿದರೆ, ಮರದಿಂದ ಮರಕ್ಕೆ ಆಂಜನೇಯಸ್ವಾಮಿಯಂತೆ ಅಲ್ಲಲ್ಲೇ ತಮ್ಮನ್ನು ವರ್ಗಾಯಿಸಿಕೊಳ್ಳುತ್ತ, ಕೊನೆಯ ಮರದಿಂದ ಇಳಿಯುವ ಚಾತುರ್ಯವನ್ನು ಮೆರೆಯುತ್ತಿದ್ದರು.

ಕೃಷಿಯ ಜೊತೆಗೇ ವೇದಾಧ್ಯಯನ ಸಂಪನ್ನರೂ ಆಗುತ್ತಿದ್ದರು. ಗುಣಿಹಾಕುತ್ತಲೇ, ಹಂಬುಕಟ್ಟುತ್ತಲೇ, ನೀರು ಹಾಯಿಸುತ್ತಲೇ ತಮ್ಮ ಶಿಷ್ಯರಿಗೆ, ಮಕ್ಕಳಿಗೆ ವೇದಾಧ್ಯಯನ ಮಾಡಿಸುವವರೂ ಇದ್ದರು. ಅಂತಹ ವೇದಬ್ರಹ್ಮರನ್ನು ಸಭೆಸಮಾರಂಭಗಳಾದಾಗ ವಿದ್ವತ್ತಾಂಬೂಲವನ್ನಿತ್ತು ಗೌರವಿಸುತ್ತಿದ್ದರು. ತೋಟಗಳಲ್ಲಿಯೇ ಸಂಗೀತವನ್ನು ಕಲಿಸುವವರೂ ಇದ್ದರು. ತಮ್ಮದೇ ಪಶುವಿಜ್ಞಾನವನ್ನು ಅವರು ರೂಢಿಸಿಕೊಂಡಿದ್ದರು. ದನಕರುಗಳಿಗೆ ತಗಲುತ್ತಿದ್ದ ರೋಗಗಳಿಗೆ ತಾವೇ ಔಷಧಿ ಮಾಡುತ್ತಿದ್ದರು. ಜಾತ್ರೆಗಳಿಗೆ ಹೋಗಿ ಎತ್ತುಹೋರಿಹಸುಗಳನ್ನು ಮಾರಾಟ ಮಾಡುತ್ತಿದ್ದರು, ಕೊಂಡುತರುತ್ತಲೂ ಇದ್ದರು. ಮುಖಲಕ್ಷಣ, ಕೊಂಬುಗಳು, ಹಲ್ಲುಗಳು, ಕಣ್ಣುಗಳು, ಮೈಬಣ್ಣ, ಕಾಲುಗಳು, ಗೊರಸುಗಳು, ಸುಳಿಗಳು -ಒಂದೊಂದೂ ಹೇಗಿರಬೇಕು ಎಂಬುದನ್ನೆಲ್ಲ ಹಸನಾಗಿ ಅರಿತುಕೊಂಡಿದ್ದರು. ರಾಜಸುಳಿ, ಹೀನಸುಳಿ, ಕೀಲುಸುಳಿ, ಕಾಗೆಸುಳಿ, ಬೇಡಿಸುಳಿ, ಪಾತಾಳಸುಳಿ, ಪರಸುಳಿ ಮುಂತಾದ ಸುಳಿಶಾಸ್ತ್ರವನ್ನು ಪೂರ್ಣವಾಗಿ ತಿಳಿದಿದ್ದರು. 'ಇಂಗುತೆಂಗು ಇದ್ದರೆ ಮಂಗಮ್ಮನೂ ಅಟ್ಟಾಳು' ಎಂಬ ಗಾದೆಯಂತೆ ನೀರು ಗೊಬ್ಬರವಿದ್ದರೆ ದಡ್ಡನೂ ಕೃಷಿ ಮಾಡಿಯಾನು ಎಂದು ಹೇಳುತ್ತ ಕೃಷಿಯಲ್ಲಿ ಲೀಲಾಜಾಲವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಅರಮನೆಗಳ ಸಂಪರ್ಕವೂ ಅಂದಿನ ಕೃಷಿಕರಿಗಿತ್ತು. ವೇದಶಾಸ್ತ್ರಪಾರಂಗತರಾಗಿ, ಆಯುರ್ವೇದ ವೈದ್ಯರಾಗಿ, ಸಂಗೀತ ವಿದ್ವಾಂಸರಾಗಿ ಆಸ್ಥಾನಗಳನ್ನು ಅಲಂಕರಿಸುತ್ತಿದ್ದರು. ಆ ಗುಂಪಿನಲ್ಲಿ ಆಂಜನೇಯ ಆರಾಧಕರೂ, ದತ್ತೋಪಾಸಕರೂ ಇರುತ್ತಿದ್ದರು. ಮಹಾರಾಜರ ಎದುರೇ ಅರಮನೆ ಜಟ್ಟಿಗಳನ್ನು ಮಣ್ಣುಮುಕ್ಕಿಸಿದ ಸಂಕೇತಿಗಳು ಆಗಿಹೋಗಿದ್ದಾರೆ. ಆ ರಾಜಸಂಪರ್ಕದ ಕುರುಹಾಗಿ ಇಂದಿಗೂ ಕೆಲವರ ಮನೆಗಳಲ್ಲಿ ಖಡ್ಗಗಳು ಉಳಿದುಬಂದಿವೆ.

ಸುಖವು ಏಕಮುಖಿ ದುಃಖವು ಸಹಸ್ರಮುಖಿ

ನಮಗೆಲ್ಲ ಹುಟ್ಟಿಬರಲು ಒಂದೇ ಮಾರ್ಗ, ಸಾಯಲು ಸಾವಿರ ಮಾರ್ಗಗಳು. ಸುಖಕ್ಕೆ ಒಂದೇ ಮುಖ, ದುಃಖಕ್ಕೆ ಸಾವಿರ ಮುಖಗಳು. ಹಿಂದೆ ಸಂಕೇತಿ ಕೃಷಿಕರು ಗ್ರಾಮಜೀವನದಲ್ಲಿ ಅನಂತ ಕಷ್ಟಗಳನ್ನು ಅನುಭವಿಸುತ್ತಿದ್ದರು. ಸಂಸ್ಕೃತದಲ್ಲಿ ನೀರಿಗಿರುವ ಪರ್ಯಾಯಶಬ್ದಗಳಲ್ಲಿ ಜೀವನ ಎಂಬುದೂ ಒಂದು. ಆ 'ಜೀವನ'ಕ್ಕೆ ಕ್ಷಾಮವಾಗಿ ಪಡಬಾರದ ಪಾಡು ಪಡುತ್ತಿದ್ದರು. ಆರು ತಿಂಗಳು ನೀರಿಲ್ಲ, ಆರು ತಿಂಗಳು ಕೂಳಿಲ್ಲ ಎಂಬ ಪರಿಸ್ಥಿತಿ. ಬಾವಿಗಳು ಬತ್ತಿ-ಹೋಗುತ್ತಿದ್ದುವು. ಹುಣ್ಣಿಮೆಯಲ್ಲಿ ತುಂಬಿದರೆ ಅಮಾವಾಸ್ಯೆಗೆ ಬರಿದಾಗುವ ತಟ್ಟೆಕೆರೆಗಳನ್ನು ನಂಬಿ ಬಾಳಬೇಕಾಗಿತ್ತು. ಕೆರೆಯಿಂದ ನೀರುಹೊತ್ತು ತೋಟವನ್ನು ಕಾಪಾಡಬೇಕು, ತೋಟದಿಂದ ನೀರು ಹೊತ್ತು ಮನೆಯನ್ನು ಕಾಪಾಡಬೇಕು. ಗೋಡುಗೊಬ್ಬರಗಳನ್ನು ತಲೆಯ ಮೇಲೆಯೇ ಹೊತ್ತು ತೋಟಕ್ಕೆ ಸಾಗಿಸುತ್ತಿದ್ದರು. ವೀಳ್ಯದೆಲೆಯೋ ಬಾಳೆಗೊನೆಯೋ ತಲೆಯಮೇಲೆ ಹೊತ್ತು, ಸಂತೆಗಳಿಗೆ ಹೋಗಿ, ಮಾರಾಟಮಾಡಿ ಬರುತ್ತಿದ್ದರು. ಕಳ್ಳರಕಾಟ ಹೆಚ್ಚಾದಾಗ ಹಗಲೂರಾತ್ರಿ ತೋಟ ಕಾಯುತ್ತಿದ್ದರು. ಬಿತ್ತನೆಗೆ ತೆಂಗು ಬೇಕಾದಾಗ ಮರವೇರಿ ಮಾಲೀಕನಿಗೆ ಕೆಡವಿಕೊಟ್ಟು, ಮರಕ್ಕೊಂದು ಕೂಲಿಕಾಯಿ ಪಡೆದು, ತೋಟ ಬೆಳೆಸುತ್ತಿದ್ದರು. ಸೈಕಲ್ಲುಗಳು ಸಿಕ್ಕಿದರಂತೂ ಪುಷ್ಪಕವಿಮಾನವೇ ಸಿಕ್ಕಿದಷ್ಟು ಹಿಗ್ಗುತ್ತಿದ್ದರು. ಅದರ ಮೇಲೆಯೇ ಹೊರೆಗಳನ್ನು ಏರಿಸಿ ವಿಲೇವಾರಿ ಮಾಡುತ್ತಿದ್ದರು. ತಮ್ಮ ಊರಿನಮೇಲೆ ದಿವಾನ್ ಪೂರ್ಣಯ್ಯನವರು ಕುದುರೆಯೇರಿ ಹೋಗುವಾಗ, ವಾರದ ಖರ್ಚಿಗೆ ನಾಲ್ಕುಕಾಸು ಸಿಗಲೆಂದು, ಹಳ್ಳಿಮೈಸೂರು ಸಂಕೇತಿಗಳು ಅವರನ್ನು ಕಾಡಿಬೇಡಿ, ವಾರದಸಂತೆ ಹಾಕಿಸಿಕೊಂಡದ್ದೇ ಅಂದಿನ ದೊಡ್ಡ ಸಾಧನೆಯಾಗಿತ್ತು. ವಿದ್ಯಾಭ್ಯಾಸಕ್ಕೆಂದು ನಗರಕ್ಕೆ ಹೋದ ಹುಡುಗರು ಭಿಕ್ಷಾನ್ನ, ವಾರಾನ್ನಗಳಲ್ಲಿ ಕಾಲತಳ್ಳುತ್ತಿದ್ದರು.

ಕಷ್ಟದ ದಿನಗಳಲ್ಲಿ ಅಕ್ಕಿತೌಡಿನ ಸಣ್ಣನುಚ್ಚುಗಳನ್ನು ಶೇಖರಿಸಿ ಉಪ್ಪಿಟ್ಟು ಮಾಡಿ ಕಾಲನೂಕುತ್ತಿದ್ದರು. ರಾತ್ರಿವೇಳೆಗಳಲ್ಲಿ ಇದ್ದಷ್ಟನ್ನೇ ಒಟ್ಟಿಗೆ ಕಲಸಿ, ಕೈತುತ್ತು ಹಂಚಿ, ಕೈತೊಳೆದುಕೊಳ್ಳುತ್ತಿದ್ದರು. ಕಡಲೇಕಾಯಿ, ಸೀಬೇಕಾಯಿಗಳಲ್ಲೇ ಕೆಲವು ರಾತ್ರಿಗಳು ಕಳೆಯುತ್ತಿದ್ದುವು. ಈ ಹೊತ್ತು ಸೋಮವಾರ, ಈ ಹೊತ್ತು ಏಕಾದಶಿ, ಈ ಹೊತ್ತು ಶನಿವಾರ ಎಂದು ಊಟವಿಲ್ಲದ ರಾತ್ರಿಗಳನ್ನು ವ್ರತಗಳಾಗಿ ಪರಿವರ್ತಿಸಿಕೊಳ್ಳುತ್ತಿದ್ದರು. ನೆಂಟರು ಬಂದರೆ 'ನಮಗೇ ತಿನ್ನಲು ಇಲ್ಲ, ಯಾಕಾದರೂ ಇವರು ಬಂದರಪ್ಪಾ' ಎಂದು ಪರಿತಪಿಸುತ್ತಿದ್ದರು.

ಮಹಿಳೆಯರಂತೂ ಗಾಣದೆತ್ತಿನಂತೆ ದುಡಿದರೂ ತೀರುತ್ತಿರಲಿಲ್ಲ. ಟಿಬೇಟಿಯನರಂತೆ ಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡು ನೀರು ಹೊರುತ್ತಿದ್ದರು. ಭತ್ತ ಕುಟ್ಟಬೇಕು, ಅಕ್ಕಿ ರಾಗಿ ಬೀಸಬೇಕು, ಹಾಲುಕರೆಯಬೇಕು, ಮೊಸರು ಕಡೆಯಬೇಕು, ದನಕರುಗಳ ಯೋಗಕ್ಷೇಮ ನೋಡಿಕೊಳ್ಳಬೇಕು, ಅಡಿಗೆ ಕೆಲಸಗಳು ಸರಿಯೇ ಸರಿ. ಕೆಲವು ಹೆಣ್ಣುಮಕ್ಕಳಿಗಂತೂ 'ಹುಟ್ಟಿದಮನೆ ಶಿವರಾತ್ರಿ, ಹೊಕ್ಕಮನೆ ಏಕಾದಶಿ' ಎನ್ನುವಂತಾಗುತ್ತಿತ್ತು. ಮನೆಯಲ್ಲಿ ನಾಲ್ಕಾರು ಮಕ್ಕಳು. ಬದುಕನ್ನು ಸರಿದೂಗಿಸಲು ಉಳ್ಳವರ ಮನೆಗಳಿಗೆ ಹೋಗಿ ಭತ್ತ, ಅವಲಕ್ಕಿ, ಮೆಣಸಿನಪುಡಿ ಕುಟ್ಟಿಕೊಡುವುದು, ಅಡಿಕೆ ಸುಲಿಯುವುದು, ನೀರುಸೇದಿ ತುಂಬಿಸಿಕೊಡುವುದು, ಬಾಣಂತನ ಮಾಡುವುದು, ಮುತ್ತುಗದ ಎಲೆ ಹಚ್ಚುವುದು ಮುಂತಾದ ದುಡಿಮೆಯಿಂದ ಸಿಕ್ಕಿದಷ್ಟನ್ನು ಸಂಗ್ರಹಿಸಿಕೊಳ್ಳುತ್ತಿದ್ದರು. ಪುರುಷರು ತೋಟದಲ್ಲಿ ಕೂಲಿಕೆಲಸ ಮಾಡುವುದು, ದನಕರುಗಳನ್ನು ಮೇಯಿಸಿಕೊಡುವುದು, ಮರಹತ್ತಿ ಕಾಯಿಕೀಳುವುದು ಮೊದಲಾದ ಕೆಲಸಗಳನ್ನು ಮಾಡುತ್ತಿದ್ದರು. ಕಣ್ಣೀರಿನಲ್ಲಿ ಕೈತೊಳೆಯುವ ದಿನಗಳು ತುಂಬಾ ಇರುತ್ತಿದ್ದುವು. 'ನಾವೇಕೆ ಬದುಕಿದ್ದೇವೆ, ಸತ್ತು ಹೋಗಬಾರದೇ' ಎನ್ನುವಂತಹ ದುರ್ಭರ ಸನ್ನಿವೇಶಗಳಿಗೆ ತಳ್ಳಲ್ಪಡುತ್ತಿದ್ದರು. ಗಂಡುಮಕ್ಕಳನ್ನು ಓದಿಸುವುದಕ್ಕೋ, ಹೆಣ್ಣುಮಕ್ಕಳನ್ನು ದಾಟಿಸುವುದಕ್ಕೋ ಚಿನ್ನಾಭರಣಗಳನ್ನೂ ಜಮೀನುಗಳನ್ನೂ ಮಾರಾಟಮಾಡಿ ಬರಿದಾಗುತ್ತಿದ್ದರು.

ಇಷ್ಟು ಕಷ್ಟಗಳೇ ಸಾಲದು ಎನ್ನುವಂತೆ ಆಗಾಗ ಪಂಜುಗಳ್ಳರು ರಾತ್ರಿಯಲ್ಲಿ ಮನೆಗಳಿಗೆ ನುಗ್ಗಿ, ಮುಖವನ್ನೇ ಸೀಯುತ್ತೇವೆಂದು ಅಂಜಿಸಿ, ಇದ್ದ ನಗನಾಣ್ಯಗಳನ್ನೆಲ್ಲ ಗೋರಿಕೊಂಡು ಹೋಗುತ್ತಿದ್ದರು. ಪ್ಲೇಗುಬಂದಾಗ ಮನೆಯನ್ನೇ ತೊರೆದು, ಊರಹೊರಗೆ ಗುಡಿಸಲು ಹಾಕಿಕೊಂಡು ಎರಡೆರಡು ತಿಂಗಳು ವನವಾಸ ಅನುಭವಿಸುತ್ತಿದ್ದರು. ಆಗಾಗ ಸಾಲಬಾಧೆಗೆ ಸಿಲುಕಿ ಕಂಗೆಡುತ್ತಿದ್ದರು. ಹಣ ತೀರಿಸುವುದರೊಳಗೇ ಸತ್ತುಹೋದರೆ 'ಮೊದಲು ಹಣತೀರಿಸಿ, ಆಮೇಲೆ ಹೆಣ ಎತ್ತಿ' ಎಂದು ಹೇಳಿಸಿಕೊಳ್ಳುವಂತಹ ಕ್ರೂರಸನ್ನಿವೇಶಗಳನ್ನು ಎದುರಿಸುತ್ತಿದ್ದರು. ಇನ್ನು ಭೂಮಿಕಾಣಿಯೇನೂ ಇಲ್ಲದ ಸಂಕೇತಿಗಳು ಅದೆಷ್ಟು ಕಷ್ಟಗಳನ್ನು ಅನುಭವಿಸುತ್ತಿದ್ದರೋ ಬಲ್ಲವರಾರು!

ಸಮಕಾಲೀನ ಸ್ಥಿತಿಗತಿಗಳು

ಹಿಂದಿನ ಕಾಲದ ಸಂಕೇತಿ ಕೃಷಿಕರು ಅನುಭವಿಸುತ್ತಿದ್ದ ಕಷ್ಟಗಳಲ್ಲಿ ಎಷ್ಟೋಪಾಲು ಈಗಿಲ್ಲ. ಎಲ್ಲ ದಿಕ್ಕುಗಳಲ್ಲೂ ಗ್ರಾಮಗಳು ಸುಧಾರಣೆಗೊಂಡಿವೆ. ಕೃಷಿಕ್ಷೇತ್ರದ ಹೊಸಹೊಸ ಆವಿಷ್ಕಾರಗಳಿಗೆ ಸಂಕೇತಿಗಳು ಸ್ಪಂದಿಸುತ್ತ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದ್ದಾರೆ. ಎತ್ತುಗಾಡಿನೇಗಿಲುದನಕರುಗಳ ಜೊತೆಗೆ ಟ್ರಾಕ್ಟರ್, ಟಿಲ್ಲರ್‌ಗಳನ್ನು ತಾವೇ ಚಲಾಯಿಸುತ್ತ ಹೊಸಕೃಷಿಗೆ ಹಳಬರಾಗುತ್ತಿದ್ದಾರೆ. ಕೆಲವರು ಮೈಕ್ರೋಟ್ಯೂಬ್‌ಸಿಸ್ಟಂನಿಂದ ತೋಟಕ್ಕೆಲ್ಲ ಹನಿನೀರಾವರಿಪದ್ಧತಿಯನ್ನು ಜೋಡಿಸಿಕೊಂಡಿದ್ದಾರೆ. ಸುಧಾರಿತ ಟೈರ್‌ಗಾಡಿಗಳನ್ನು ತಾವೇ ನಿರ್ಮಿಸಿಕೊಂಡಿದ್ದಾರೆ. ಅಡಕೆ ಕತ್ತರಿಸಲು ಸರಳಸಾಧನವೊಂದನ್ನು ತಾವೇ ಕಂಡುಹಿಡಿದಿದ್ದಾರೆ. ಕೃಷಿವಿಜ್ಞಾನ ಪದವೀಧರರು, ಡಾಕ್ಟರೇಟ್ ಪದವೀಧರರು ಹಲವರಿದ್ದಾರೆ. ಯಾವ ಮಳೆಯಿಂದ ಕೃಷಿಭೂಮಿಯಮೇಲೆ ಯಾವ ಪರಿಣಾಮ, ಯಾವ ಕಾಲಕ್ಕೆ ಯಾವ ಬೆಳೆ, ಯಾವ ಆರೈಕೆ ಎಂಬ ಋತುಪರಿವರ್ತನೆಯ ಹಿನ್ನೆಲೆಯನ್ನೆಲ್ಲ ಚೆನ್ನಾಗಿ ಅರಿತು ಕಾರ್ಯೋನ್ಮುಖರಾಗುತ್ತಿದ್ದಾರೆ. ಪರಂಪರಾಗತವಾದ ತಮ್ಮ ಕೃಷಿಜ್ಞಾನಕ್ಕೆ, ಆಧುನಿಕ ಕೃಷಿವಿಜ್ಞಾನದ ಸದ್ವಿಚಾರಗಳನ್ನು ಕಸಿಮಾಡಿ ಪುರೋಭಿವೃದ್ಧಿಯನ್ನು ಸಾಧಿಸುತ್ತಿದ್ದಾರೆ. ಹೊಸಹೊಸ ವಾಣಿಜ್ಯ ಬೆಳೆಗಳು, ರಾಸಾಯನಿಕಗಳು, ಹೈಬ್ರಿಡ್ ತಳಿಗಳು, ವೃಕ್ಷಾಯುರ್ವೇದ ಮುಂತಾದ ಎಲ್ಲವನ್ನೂ ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದಾರೆ. ಅಡಿಕೆ ತೆಂಗು ಮುಂತಾದುವುಗಳ ನರ್ಸರಿ ಮಾಡುತ್ತ ಅದನ್ನೂ ತಮ್ಮ ಕೃಷಿಯ ಒಂದಂಗವಾಗಿಸಿಕೊಂಡಿದ್ದಾರೆ. ಮನೆಗಳಲ್ಲಿ ಬಳಸುತ್ತಿದ್ದ ಸೊಪ್ಪು, ಸುಂಡೇಕಾಯಿ, ಚಕ್ಕಲುಬಾಳೇಕಾಯಿ, ಪರಂಗಿಕಾಯಿ, ಕುಂಬಳಕಾಯಿ, ಕೆಸುವುಗಳ ಸರಳ ತರಕಾರಿಗಳನ್ನು ಹಾಯ್ದು ಮುಂದೆ ಬಂದಿದ್ದಾರೆ. ಕೊಳವೆಬಾವಿಗಳು ವರದಾನವಾಗಿವೆ.

ಸಂಕೇತಿಕೃಷಿಕರು ತಾವೇ ತೆಪ್ಪಗಳನ್ನು ಹುಟ್ಟುಹಾಕುತ್ತಾರೆ. ಕೋತಿಗಳ ಕಾಟ ಮಿತಿಮೀರಿದಾಗ ತಾವೇ ನಿರ್ಮಿಸಿದ ಬೋನುಗಳಿಗೆ ಬೀಳಿಸಿ, ಉಪವಾಸ ಕೆಡವಿ, ಮೆತ್ತಗಾದಾಗ ಕಾಡುಗಳಿಗೆ ಬಿಟ್ಟು ಬರುತ್ತಾರೆ. ಎರೆಹುಳುಗಳನ್ನು ಸಾಕುತ್ತಿದ್ದಾರೆ. ಗೋಶಾಲೆಗಳನ್ನು ವಿಸ್ತರಿಸಿಕೊಂಡು ಗೋಬರ್‌ಗ್ಯಾಸ್‌ಪ್ಲಾಂಟುಗಳನ್ನು ಹೂಡಿಕೊಂಡಿದ್ದಾರೆ. ಕೀಟನಿರ್ವಹಣಶಾಸ್ತ್ರವನ್ನೆಲ್ಲ ಕರತಲಾಮಲಕ ಮಾಡಿಕೊಂಡಿದ್ದಾರೆ. 'ಒಂಟೆತ್ತಿನ ಬೇಸಾಯ' ಎಂಬ ಹೊಸ ಬಗೆಯನ್ನು ಕಂಡುಕೊಂಡಿದ್ದಾರೆ. ಒಬ್ಬರ ತೋಟಕ್ಕೊಬ್ಬರು ಹೋಗಿ ದುಡಿದು ಬರುವ ಮುಯ್ಯಾಳು ಪದ್ಧತಿಯನ್ನು ಪುನರುಜ್ಜೀವನಗೊಳಿಸುತ್ತಿದ್ದಾರೆ. ಒಂದು ಬೆಳೆ ಒಮ್ಮೆ ಕೈಕೊಟ್ಟರೆ, ಅದೇ ಬೆಳೆ ಮತ್ತೊಮ್ಮೆ ಕೈಹಿಡಿಯುತ್ತದೆಂಬುದನ್ನು ಅನುಭವಿಸಿ ತಿಳಿದಿದ್ದಾರೆ. ಅನೇಕರು ವಿದೇಶಗಳನ್ನು ಸುತ್ತಿಬಂದಿದ್ದಾರೆ. ಗ್ರಾಮಗಳಲ್ಲಿ ಒಳ್ಳೊಳ್ಳೆಯ ಶಿಕ್ಷಣಸಂಸ್ಥೆಗಳನ್ನು ಕಟ್ಟುತ್ತಿದ್ದಾರೆ. ಸಾಮವೇದದ ಮಂತ್ರಗಳಿಗೆ, ಸಂಗೀತಕ್ಕೆ ಬೆಳೆಗಳು ಹುಲುಸುತ್ತವೆಂದು ಪರೀಕ್ಷೆಮಾಡಿ ತಿಳಿದಿದ್ದಾರೆ. ಹಳ್ಳಿಯಾದರೇನು, ಪಟ್ಟಣವಾದರೇನು, ಮನೆಗೆಲಸ ಮಾಡಿಕೊಂಡು ನಾವು ಸುಖವಾಗಿದ್ದೇವೆ ಎಂದು ಹೇಳುವ ಅನೇಕ ಹೆಣ್ಣುಮಕ್ಕಳಿದ್ದಾರೆ. ಕೆಲಸಗಳು ಹಂಚಿಕೆಯಾಗಿ ಹೆಚ್ಚು ಪ್ರಗತಿ ಸಾಧಿತವಾಗುತ್ತದೆಂದು ಕೂಡುಕುಟುಂಬಗಳನ್ನು ರಕ್ಷಿಸಿಕೊಳ್ಳುತ್ತಿದ್ದಾರೆ.

ಸಮಕಾಲೀನ ಕೃಷಿಕರ ಕೃಷಿಪ್ರೇಮವೂ ಅಸಾಮಾನ್ಯವಾದುದೇ ಆಗಿದೆ. 'ಸಗಣಿಮುಟ್ಟಿ ಅನ್ನತಿನ್ನು ಅಂದರೂ ತಿನ್ನುತ್ತೇನೆ, ವ್ಯವಸಾಯದ ಮಟ್ಟಿಗೆ ನನಗೆ ಬೇಸರವಿಲ್ಲ' ಎಂದು ಹೇಳಿದವರೂ ಇದ್ದಾರೆ. ಪರೀಕ್ಷೆಯಲ್ಲಿ ಪಾಸಾದರೆ ಮುಂದಕ್ಕೆ ಓದಲು ಒತ್ತಾಯಿಸುತ್ತಾರೆಂದು ಖಾಲಿ ಪೇಪರ್ ಕೊಟ್ಟು ಫೇಲಾಗಿ, ಕೃಷಿಯಲ್ಲಿ ಉತ್ತೀರ್ಣರಾದವರಿದ್ದಾರೆ. ಕಠಿಣವಾಗಿ ಶಿಕ್ಷಿಸಿದರೆಂದು ಮೇಷ್ಟರಿಗೇ ಕಲ್ಲುಹೊಡೆದು, ವಿದ್ಯಾಭ್ಯಾಸಕ್ಕೆ ಕಲ್ಲುಹಾಕಿಕೊಂಡು, ಕೃಷಿಗೆ ಮಣ್ಣುಹೊತ್ತವರಿದ್ದಾರೆ. ನಗರಗಳಲ್ಲಿರುವವರು ತಮ್ಮ ಹಳ್ಳಿಯಲ್ಲಿ ಕೃಷಿಯ ಅಭಿವೃದ್ಧಿಗಾಗಿ ದ್ರವ್ಯಬಲವನ್ನು ದೊರಕಿಸಿಕೊಡುತ್ತಿದ್ದಾರೆ. ರಜೆಯ ದಿನಗಳಲ್ಲಿ ತಾವೂ ಬಂದು ದುಡಿಯುತ್ತಿದ್ದಾರೆ. ವಿದ್ಯಾವಂತರಾಗಿದ್ದರೂ ಪರಾವಲಂಬನೆಯನ್ನೊಲ್ಲದೆ ಗ್ರಾಮದಲ್ಲೇ ನಿಂತು ಕೃಷಿಗೆ ಸಮರ್ಪಿಸಿಕೊಂಡವರೂ ಇದ್ದಾರೆ. ಕೃಷಿಭೂಮಿಯಿಲ್ಲದವರನ್ನು ಬರಮಾಡಿಕೊಂಡು, ಭೂಮಿಯನ್ನು ದೊರಕಿಸಿಕೊಟ್ಟು, ಅವರು ಕೃಷಿಯಲ್ಲಿ ನೆಲೆಯಾಗುವಂತೆ ಮಾಡಿದ್ದಾರೆ. ಹೊಸದಾಗಿ ಜಮೀನುಗಳನ್ನು ಕೊಂಡು ಕೃಷಿವಿಸ್ತರಣೆ ಮಾಡುತ್ತಿದ್ದಾರೆ. ದನಕರುಗಳನ್ನು ತಮ್ಮ ಮನೆಯ ಬಳಗದಂತೆ ಸಾಕುತ್ತಿದ್ದಾರೆ. ಗಂಗೆ, ಗೌರಿ, ತುಂಗೆ, ಭದ್ರೆ ಎಂದು ಅವುಗಳಿಗೆ ಹೆಸರಿಟ್ಟು ಕರೆಯುವುದೆಂದರೆ ಅದೆಷ್ಟು ಪ್ರೀತಿಯೋ ! ಮುಪ್ಪು ಅಡರಿದಾಗ ಅವುಗಳನ್ನು ಕಟುಕರಿಗೊಪ್ಪಿಸದೆ, ಸಹಜಮರಣದವರೆಗೆ ಕಾಪಾಡುತ್ತಾರೆ. ಕೃಷಿಜೀವನದ ಬೆನಕನಪೂಜೆ, ಕಣದಪೂಜೆ, ಕೂಗೋಹಬ್ಬ, ಗೋಪೂಜೆ, ಕಣಬಡಿದಾಗ ಧಾನ್ಯದಾನ ಮುಂತಾದುವನ್ನೆಲ್ಲ ನೆರವೇರಿಸುತ್ತಿದ್ದಾರೆ.

ಕೃಷಿಜೀವನಕ್ಕೆ ಬೆಂಬಲ ದೊರಕಿಸಿಕೊಳ್ಳಲು ಸಂಕೇತಿಕೃಷಿಕರು, ತಮ್ಮ ಪರಿಸರದಲ್ಲಿಯೇ ಹಲವುಹತ್ತು ಉಪಕಸುಬುಗಳನ್ನು ಮಾಡುತ್ತಿದ್ದಾರೆ. ಪೌರೋಹಿತ್ಯ, ದೇವಾಲಯಗಳ ಅರ್ಚಕತನ, ಹಣದ ಲೇವಾದೇವಿ, ಚಿಲ್ಲರೆ ಅಂಗಡಿ, ಹಾಲಿನ ವ್ಯಾಪಾರ, ಬಾಡಿಗೆಗೆ ರಿಕ್ಷಾಗಾಡಿ, ಎತ್ತಿನಗಾಡಿ ಓಡಿಸುವುದು, ಅಡಿಗೆಕಂಟ್ರಾಕ್ಟ್, ರೈಸ್‌ಮಿಲ್, ಫ್ಲೋರ್ ಮಿಲ್ ನಡೆಸುವುದು, ಮುತ್ತುಗದ ಎಲೆ ಹಚ್ಚುವುದು, ದೊನ್ನೆಕಟ್ಟುವುದು, ಅಡಿಕೆಪಟ್ಟೆಯಿಂದ ತಟ್ಟೆತಯಾರಿಸುವುದು, ಹೊಲಿಗೆ ಕೆಲಸ, ಅಡಿಕೆ ತೆಂಗು ಭತ್ತ ಮುಂತಾದುವನ್ನು ಕೊಂಡು ಮಾರಾಟ ಮಾಡುವುದು, ಸ್ಥಳೀಯ ಸೊಸೈಟಿಗಳನ್ನು ನಿರ್ವಹಿಸುವುದು, ನೂಲು ತೆಗೆದು ಜನಿವಾರ ಮಾಡುವುದು, ಊದುಬತ್ತಿ, ಅಡಕೆಪುಡಿ, ಮೇಣದಬತ್ತಿ ತಯಾರಿಸುವುದು, ಹಪ್ಪಳಸಂಡಿಗೆಉಪ್ಪಿನಕಾಯಿ ತಯಾರಿಕೆ ಮುಂತಾದ ಉಪಕಸುಬುಗಳಲ್ಲಿ ಯಶಸ್ಸನ್ನು ಕಾಣುತ್ತಿದ್ದಾರೆ, ದ್ರವ್ಯಮೂಲವಾದ ಕಷ್ಟಗಳಿಂದ ಬಿಡುಗಡೆಗೊಳ್ಳುತ್ತಿದ್ದಾರೆ.

ಮನುಷ್ಯದೇಹವನ್ನು ಹೊತ್ತುಬಂದಮೇಲೆ 'ಕಷ್ಟಗಳನ್ನು ಅನುಭವಿಸಲಾರೆ' ಎಂದು ಯಾರೂ ಹೇಳುವಂತಿಲ್ಲ. ಕಷ್ಟಗಳು ತಮ್ಮ ಮುಖವಾಡಗಳನ್ನು ಬದಲಾಯಿಸಿಕೊಂಡು ಬರುತ್ತವೆ ಎಂದಷ್ಟೇ ಹೇಳಬಹುದು.

ಕೇಶವಮೂರ್ತಿಗಳು ಸಂಕೇತಿಕೃಷಿಕರಿಂದ ಅನೇಕ ಮನಕರಗಿಸುವ, ಚಿರಸ್ಮರಣೀಯವಾದ ಘಟನೆಗಳನ್ನು ಹೇಳಿ ಸಿದ್ದಾರೆ. ಪಂಚಾಂಗದ ತಿಮ್ಮಾಭಟ್ಟರು ತಮ್ಮ ಜಪದ ಬಲದಿಂದ ಬರಗಾಲದಲ್ಲಿ ದೊರೆಗಳ ಮುಂದೆ ಕುಂಭದ್ರೋಣಮಳೆ ಸುರಿಯುವಂತೆ ಮಾಡಿದ್ದು; ಮತ್ತೂರಿನ ಸುಬ್ರಾಯಶಾಸ್ತ್ರಿಗಳು ಊರನ್ನು ಕೊಳ್ಳೆಹೊಡೆಯಲು ಬಂದ ದುಷ್ಟಧಾಂಡಿಗರನ್ನು ರುದ್ರಾವೇಶಭರಿತರಾಗಿ ಬಡಿದು ಹಿಮ್ಮೆಟ್ಟಿಸಿದ್ದು, ಊರವರು ಕದ್ದುತಂದ ಬಾಳೆಗೊನೆಗಳನ್ನು ಬಸವಣ್ಣದೇವರ ಮೊರೆಹೊಕ್ಕು ರಸಬಾಳೆಗೊನೆಗಳಾಗಿ ಪರಿವರ್ತಿಸಿ ಕಳ್ಳರೆಂಬ ಅಪವಾದದಿಂದ ಊರನ್ನು ಮುಕ್ತಗೊಳಿಸಿದ್ದು, ಸಾಲುಮರಗಳ ಸೊಪ್ಪನ್ನು ಕಡಿಕಡಿದು ಒಂಟೆಗಳಿಗೆ ತಿನ್ನಿಸುತ್ತ ದುರಹಂಕಾರದಿಂದ ಮೆರೆದು ಬರುತ್ತಿದ್ದ ಒಂಟೆಸರದಾರನ ತಂಡವನ್ನು ಒನಕೆಯಿಂದ ಬಡಿದೋಡಿಸಿದ್ದು, ಮನೆಯ ಹಿರಿಯರು ತೀರಿಹೋದಾಗ ದನಕರುಗಳು ಮೇವುಬಿಟ್ಟು ಕಣ್ಣೀರು ಹರಿಸುತ್ತ ನಿಂತುಕೊಂಡದ್ದು, ಭೀಮಗಾತ್ರದ ಬದನೆಕಾಯಿ ಬೆಳೆದು ಮುಮ್ಮಡಿಕೃಷ್ಣರಾಜ ಒಡೆಯರಿಂದ ಶಾಲು ಹೊದಿಸಿಕೊಂಡದ್ದು, ಬೀರಬಲ್ಲನ ಮಡದಿಯನ್ನು ಅಕ್ಬರ್ ಮೋಹಿಸಿದ್ದು ಮುಂತಾದ ಅದೆಷ್ಟೋ ಸ್ವಾರಸ್ಯಗಳನ್ನು ಓದಿಯೇ ಆನಂದಪಡಬೇಕು.

ಹೆಜ್ಜೇನುಹುಳುಗಳ ಕಡಿತಕ್ಕೆ ಸಿಕ್ಕಿ ತಲೆಯೆಲ್ಲ ಮುಳ್ಳಾಗಿ, ಮುಖವೆಲ್ಲ ಗಂಟಾಗಿ, ವರ್ಷವೆಲ್ಲ ಹಣ್ಣಾಗಿ ಮಲಗಿದ್ದನ್ನು ಮರೆಯಲಾದೀತೇ ! ಗಂಡುಮಗುವನ್ನು ಕಳೆದುಕೊಂಡಿದ್ದ ತನ್ನ ದಣಿಗೆ ಬೇಗನೆ ಇನ್ನೊಂದು ಗಂಡುಮಗುವಾಗಲೆಂದು ಪಳನಿಸ್ವಾಮಿ ಬನ್ನಾರಿಯಮ್ಮನಿಗೆ ಮುಡಿಕೊಡುತ್ತೇನೆಂದು ಹರಸಿಕೊಂಡದ್ದು, ಅದರಂತೆ ಆ ದೇವಿಯು ಕಣ್ಣುಬಿಟ್ಟು ಗಂಡನ್ನೇ ಕರುಣಿಸಿದ್ದು ಸಾಮಾನ್ಯ ಸಂಗತಿಯೆ !

ಮನೋರಂಜನೆಯ ಮಾರ್ಗಗಳು

ವ್ಯವಸಾಯದ ಏಕತಾನತೆಯಿಂದ ಬಿಡುಗಡೆಗೊಂಡು ಮನಸ್ಸನ್ನು ಹಗುರಗೊಳಿಸಿಕೊಳ್ಳಲು ಸಂಕೇತಿಕೃಷಿಕರು ಹಲವಾರು ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಚಟ ಎಂದು ನಾವು ಕರೆಯುವಂಥವೂ ಮನೋರಂಜನೆಯ ಸಾಧನಗಳೇ ಆಗಿವೆ. ಸಂಕೇತಿಗಳು ನಶ್ಯಪ್ರಿಯರು, ಜ್ಞಾನಚೂರ್ಣವೆಂದೇ ಅದು ಖ್ಯಾತಿ ಪಡೆದಿದೆ. ಹಿಂದಿನ ಕಾಲದಲ್ಲಿ ಹೆಣ್ಣುಕೊಡುವ ಮಾವನು ಅಳಿಯನಿಗೊಂದು ಬೆಳ್ಳಿನಶ್ಯದಡಬ್ಬಿಯನ್ನೇ ನಶ್ಯತುಂಬಿಸಿ ಉಡುಗೊರೆಯಾಗಿ ಕೊಡುತ್ತಿದ್ದನಂತೆ. ಮಹಾರಾಜರು ಪ್ರತ್ಯಕ್ಷರಾದರೂ ಅವರಿಂದ ಏನನ್ನೂ ಬಯಸದೆ 'ಒಂದು ಚಿಟಿಕಿ ನಶ್ಯ ಪ್ರಭುಗಳು ದಯಪಾಲಿಸೋಣವಾಗಲಿ' ಎಂದು ಕೇಳಿಕೊಂಡವರೂ ಇದ್ದಾರಂತೆ. ತಾಂಬೂಲಚರ್ವಣವೂ ಅವರಿಗೆ ಆನಂದದಾಯಕವೇ. 'ನಾವು ಬೆಳೆದ ವಸ್ತುವನ್ನು ನಾವೇ ತಿನ್ನದಿದ್ದರೆ ಹೇಗೆ' ಎಂದು ಅವರು ಪ್ರಶ್ನಿಸುತ್ತಾರೆ. ಸದಾಕಾಲ ಅದನ್ನು ದವಡೆಯಲ್ಲಿ ಊರಿಟ್ಟುಕೊಂಡು ಸುಖಿಸುವವರೂ ಇದ್ದಾರೆ; ಆಗ ಮಾತು ಮಿತವಾಗುತ್ತದೆ, ಕಾರ್ಯಚಿಂತನೆಗಳು ಅಮಿತವಾಗುತ್ತವೆ ಎಂದು ಹೇಳುವವರೂ ಇದ್ದಾರೆ. ನಶ್ಯತಾಂಬೂಲಗಳಂತೆಯೇ ಇಸ್ಪೀಟು ಆಟವೂ ಅವರಿಗೆ ಹಿಂದಿನಿಂದ ಅಂಟಿಕೊಂಡೇ ಬಂದಿದೆ. ಅದೊಂದು ಉಪವೃತ್ತಿಯೋ ಅನ್ನುವಹಾಗೆ ದ್ರವ್ಯಸಂಪಾದನೆ ಮಾಡಿಕೊಂಡವರೂ ಇದ್ದಾರೆ. 'ನಾನು ಮುಖವನ್ನೂ ತೊಳೆಯದೆ ಎರಡು ಮೂರುದಿನ ಆಡಿದ್ದೇನೆ. ಆಡಿಯಾಡಿಯೇ ಈವರೆಗೆ ಐದಾರುಲಕ್ಷ ಸಂಪಾದಿಸಿದ್ದೇನೆ. ಅದೃಷ್ಟ ಅನ್ನುವುದು ನನಗೆ ಇಸ್ಪೀಟಿನಲ್ಲಿಯೇ ಇರಬಹುದೇನೋ' ಎಂಬ ಮಾತುಗಳನ್ನು ಕೇಳಿದರೆ ಮೂಗಿನ ಮೇಲೆ ಬೆರಳೇರಿಸುವಂತಾಗುತ್ತದೆ.

ಸಂಕೇತಿಗಳಾರೂ ಅನಕ್ಷರಸ್ಥರಲ್ಲವಾದ್ದರಿಂದ ವಾಚನಾಭಿರುಚಿಯೂ ಅವರಿಗೆ ಸಹಾಯಕವಾಗಿದೆ. ಪಗಡೆ ಹಾಸುತ್ತಾರೆ, ಕೇರಂ ಆಡುತ್ತಾರೆ. ಹೊರಾಂಗಣ ಕ್ರೀಡೆಗಳಲ್ಲೂ ಪಾಲ್ಗೊಳ್ಳುತ್ತಾರೆ. ಬಾಲ್ಯದಲ್ಲಿ ಆಡಿದ್ದ ವಾಲಿಬಾಲ್ ಕ್ರೀಡೆಯನ್ನು ಮಧ್ಯವಯಸ್ಸಿನಲ್ಲಿ ಆಡಲು ಹೋಗಿ ಆಯತಪ್ಪಿಬಿದ್ದು ಕೈಮುರಿದುಕೊಂಡವರೂ ಇದ್ದಾರೆ. ಅವರ ಸಂಗೀತಾಭಿರುಚಿ ಜಗತ್ಪ್ರಸಿದ್ಧವಾಗಿದೆ. ಗಮಕವಾಚನ ವ್ಯಾಖ್ಯಾನಗಳಲ್ಲೂ ಅವರು ಎತ್ತಿದ ಕೈ. ಹರಿಕಥೆ ಮಾಡುತ್ತಾರೆ, ಪುರಾಣಪ್ರವಚನ ಮಾಡುತ್ತಾರೆ, ವೇದಾಂತ ಪ್ರವಚನ ಮಾಡುತ್ತಾರೆ. ನಾಟಕವೆಂದರೆ ಪಂಚಪ್ರಾಣ. ಸುಪ್ರಸಿದ್ಧ ನಾಟಕಕಂಪನಿಗಳಲ್ಲಿ ಅಭಿನಯಿಸುತ್ತಿದ್ದರಲ್ಲದೆ, ಸ್ವತಂತ್ರವಾಗಿ ನಾಟಕಕಂಪನಿಗಳನ್ನೇ ಕಟ್ಟಿ ಮೆರೆದವರೂ, ಮುರಿದವರೂ ಇದ್ದಾರೆ. ಈಗ ಗ್ರಾಮಗಳಲ್ಲಿ ತಾವೇ ಕಲಿತು ಅಭಿನಯಿಸುತ್ತಾರೆ.

ಭಕ್ತಿಮೂಲವಾದ ಮನೋರಂಜನೆಗಳೂ ಇವೆ. ಸಾಮಾನ್ಯವಾಗಿ ಎಲ್ಲ ಗ್ರಾಮಗಳಲ್ಲೂ ರಾಮಮಂದಿರಗಳನ್ನು ನಿರ್ಮಿಸಿಕೊಂಡಿದ್ದು ಅಲ್ಲಿ ನಡೆಯುವ ಭಜನೆ, ದೇವರನಾಮಗಳಲ್ಲಿ ಪಾಲ್ಗೊಳ್ಳುತ್ತಾರೆ. ರಾಮೋತ್ಸವದ ವೈಭವವನ್ನಂತೂ ಬಣ್ಣಿಸುವುದೇ ಬೇಡ. ವೈವಿಧ್ಯಮಯವಾದ ಸಾಂಸ್ಕೃತಿಕ ಕಾರ್ಯಕ್ರಮಗಳ ಸಹಿತವಾಗಿ, ಶಾಸ್ತ್ರೋಕ್ತವಾಗಿ ಅದನ್ನು ಆಚರಿಸುತ್ತಾರೆ. ಗ್ರಾಮಗಳನ್ನು ತೊರೆದು ನಗರಗಳನ್ನು ಸೇರಿರುವವರೂ ಊರ ಮೇಲಣ ಪ್ರೀತಿಯಿಂದ ಆ ಮಹೋತ್ಸವಕ್ಕೆ ಆಗಮಿಸಿ, ಪ್ರೋತ್ಸಾಹಿಸಿ, ಉಲ್ಲಾಸವನ್ನು ತುಂಬಿಕೊಂಡು ಮರಳುತ್ತಾರೆ. ಸ್ಥಳೀಯ ಗ್ರಾಮದೇವತೆಗಳ ಹಬ್ಬಜಾತ್ರೆಉತ್ಸವಗಳಲ್ಲೂ ಹಿಂದೆಬೀಳದೆ ಮುಂದೆ ನಿಲ್ಲುತ್ತಾರೆ. ಶರನ್ನವರಾತ್ರಿಯ ದಿನಗಳಂತೂ ಆಮೋದವನ್ನು ಉಕ್ಕಿಸುತ್ತವೆ. ಮನೆದೇವರ ಕ್ಷೇತ್ರಗಳಿಗೆ, ಕಾಶಿರಾಮೇಶ್ವರಾದಿ ತೀರ್ಥಗಳಿಗೆ, ಯಾತ್ರೆ ಹೋಗಿ ಬರುತ್ತಾರೆ. ಬಹುಪಾಲು

ಸಂಕೇತಿಗಳ ತೀರ್ಥಕ್ಷೇತ್ರವಾದ ಕೌಶಿಕದ ಲಕ್ಷ್ಮೀಕೇಶವನ ವಾರ್ಷಿಕ ರಥೋತ್ಸವವು ಭಕ್ತರನ್ನು ವಿಶೇಷವಾಗಿ ತನ್ನೆಡೆಗೆ ಸೆಳೆದುಕೊಳ್ಳುತ್ತದೆ. ಯೋಗ, ಧ್ಯಾನ, ಪ್ರಾಣಾಯಾಮ, ವೇದಪಾರಾಯಣ ಮೊದಲಾದುವೆಲ್ಲವೂ ಅವರನ್ನು ಆನಂದದಲ್ಲಿರಿಸುವ ಸಾಧನಗಳೇ ಆಗಿವೆ.

ಹಾಸ್ಯಪ್ರಿಯತೆ ಅವರಿಗೆ ಹುಟ್ಟುಗುಣವಾಗಿದೆ. ನಗುನಗುತ್ತ ಬಾಳುವುದನ್ನು ಬಯಸುತ್ತಾರೆ. ಜೋಕರ್ ಎಂದೇ ಕರೆಸಿಕೊಳ್ಳುತ್ತಿದ್ದ ಶ್ರೀನಿವಾಸಯ್ಯ ಎಲ್ಲರನ್ನೂ ನಗಿಸುತ್ತಿದ್ದರಂತೆ. ಕೇಶವಮೂರ್ತಿಗಳು ಸೀರಿಯಸ್ಸಾಗಿ ಕೇಳಿರುವ ಕೆಲವು ಪ್ರಶ್ನೆಗಳಿಗೂ ಇಲ್ಲಿ ನಗೆಯುತ್ತರಗಳಿವೆ. 'ನೀವು ಓದದೆ ಹೋಗಿದ್ದರೆ ಏನಾಗಿರುತ್ತಿದ್ದಿರಿ?' 'ಓದದೆ ಇರುವವರ ಗುಂಪಿಗೆ ಸೇರಿದವನಾಗುತ್ತಿದ್ದೆ!' 'ನಿಮ್ಮನಂತರ ವ್ಯವಸಾಯ ಮುಂದುವರಿಯುತ್ತದೆಯೇ ಎಂಬ ಚಿಂತೆ ನಿಮಗಿಲ್ಲವೇ?' 'ನನ್ನನಂತರ ಅಂದರೆ ನಾನೇ ಇರುವುದಿಲ್ಲವಲ್ಲಾ, ಚಿಂತೆಯೆಲ್ಲಿ ಬಂತು !' ಎಂಬುದನ್ನು ಸವಿಯಬೇಕು. 'ನಾನು ಐ.ಎ.ಎಸ್. ಅಧಿಕಾರಿಯಾಗಬೇಕೆಂದು ಆಸೆ ಪಟ್ಟಿದ್ದೆ. ಆದರೆ ಬಿ.ಎಸ್ಸಿಗೇ ಊರಿಗೆ ಮರಳಿಬಿಟ್ಟೆ. ಜೀವನದಲ್ಲಿ ಹೆಚ್ಚು ಆಶೆ ಇಟ್ಟುಕೊಳ್ಳಬಾರದೆಂಬ ಬುದ್ಧನ ತತ್ವವನ್ನು ಅಳವಡಿಸಿಕೊಂಡುಬಿಟ್ಟೆ'; 'ಶುಕ್ರವಾರ ತಂದೆಶ್ರಾದ್ಧ, ರಜಾಕೊಡಿ' ಎಂದು ಕೇಳಿದರೆ 'ಶುಕ್ರವಾರ ರಜಾಕೊಡೋಕಾಗೋಲ್ಲ, ಭಾನುವಾರ ಮಾಡ್ಕೋಳಿ' ಎಂದು ಹೇಳುತ್ತಿದ್ದ ಕಾಲವೂ ಇತ್ತು. 'ನಾವು ವೆಂಕಟರಮಣನ ಒಕ್ಕಲು, ದುಡ್ಡು ಉಳಿಯುವುದಿಲ್ಲ. ಕೇಶವದೇವರ ಒಕ್ಕಲಾಗಿದ್ದರೆ ಉಳಿಸಬಹುದಿತ್ತೇನೋ' - ಎಂಬಿತ್ಯಾದಿ ಸಂಭಾಷಣೆಗಳೂ ರೋಚಕವಾಗಿವೆ.

ಸಂಕೇತಿಗಳ ಸಮಾಜಸೇವೆ

ಗ್ರಾಮಗಳಲ್ಲಿರಲಿ, ನಗರಗಳಲ್ಲಿರಲಿ, ಕೆಲವರು ಸಂಕೇತಿಗಳು ಸಮಾಜದ ಶ್ರೇಯಸ್ಸಿಗಾಗಿ ತಮ್ಮ ಕೈಲಾದ ಸೇವೆಯನ್ನು ಪ್ರತಿಫಲಾಪೇಕ್ಷೆಯಿಲ್ಲದೆ ಈಶ್ವರಾರ್ಪಣಬುದ್ಧಿಯಿಂದ ಸಲ್ಲಿಸುತ್ತಿದ್ದಾರೆ. ಅದುವೇ ಕರ್ಮಯೋಗ. ಸೇವಾಯೋಗ ಎಂದು ಕರೆದರೂ ಸರಿಯೆ. ಕೇಶವಮೂರ್ತಿಯವರು ತಮ್ಮ ಈ ಕೃತಿಯಲ್ಲಿ ನಮಗೆ ಹಲವು ಸೇವಾಯೋಗಿಗಳ ದರ್ಶನ ಮಾಡಿಸಿದ್ದಾರೆ. ನನ್ನ ಮನೆಯನ್ನೂ ನನ್ನ ಗ್ರಾಮವನ್ನೂ ನಾನು ಚೆನ್ನಾಗಿ ಕಟ್ಟಿದರೆ ಅದೇ ದೇಶಕಟ್ಟುವ ಮಾರ್ಗ ಎಂದು ಸಂಕೇತಿಗಳು ಭಾವಿಸಿದ್ದಾರೆ. ನಾವು ಸಂಘಟಿತರಾಗಿ ಸಮಾಜವನ್ನು ನಿರ್ಮಾಣ ಮಾಡಿದರೆ ದೇವತೆಗಳೇ ಬಂದು ಆಶೀರ್ವಾದ ಮಾಡುತ್ತಾರೆ ಎಂಬ ನಂಬಿಕೆ ಅವರಲ್ಲಿ ನೆಲೆಯೂರಿದೆ.

ಪರೋಪಕಾರಕ್ಕಾಗಿಯೇ ಈ ಶರೀರ ನಮಗೆ ಬಂದಿದೆ ಎಂದು ಹೇಳುವ ಚಿಕ್ಕಮೇನಹಳ್ಳಿ ನಾಗಪ್ಪನವರು, ಗ್ರಾಮಸ್ಥರ ಸಹಾಯಕರಾಗಿ ಸರ್ಕಾರಿ ಕಛೇರಿಗಳಿಗೆ, ಆಸ್ಪತ್ರೆಗಳಿಗೆ ಹೋಗುತ್ತಾರೆ. ಕೈಲಾದ ಆರ್ಥಿಕ ನೆರವು ನೀಡುತ್ತಾರೆ. ಕೆಲವರು ಬಡಬಗ್ಗರ ದ್ರವ್ಯವನ್ನು ತಮ್ಮ ಮನೆಯಲ್ಲಿ ಜೋಪಾನವಾಗಿಟ್ಟು, ಅವರು ಕೇಳಿದಾಗ ಕೊಟ್ಟು ಉಪಕರಿಸುತ್ತಾರೆ. ಸಾಲಿಗ್ರಾಮದ ನಾರಾಯಣಸ್ವಾಮಿಗಳು ಸಕಲಜಾತಿಯ ಮಕ್ಕಳನ್ನೂ ಮನೆಯಲ್ಲಿಟ್ಟುಕೊಂಡು ಅವರಿಗೆ ಉಚಿತವಾಗಿ ಪಾಠಹೇಳಿಕೊಡುತ್ತಾರೆ. ತಾವು ಕಲಿತ ಸಂಗೀತ, ಹಾರ್ಮೋನಿಯಂ, ಪಿಟೀಲು, ಮೃದಂಗ, ಗಮಕ ಮುಂತಾದ ವಿದ್ಯೆಗಳನ್ನು ಕೆಲವರು ಬಯಸಿ ಬಂದವರಿಗೆ ಉಚಿತವಾಗಿ ಧಾರೆಯೆರೆಯುತ್ತಿದ್ದಾರೆ. ಗ್ರಾಮಗಳು ಕ್ಷಾಮದ ದವಡೆಗೆ ಸಿಲುಕಿದಾಗ ಕೆಲವರು, ಸೊಸೈಟಿಗಳ ಹೊಣೆಗಾರಿಕೆಯನ್ನು ಹೊತ್ತು, ಸರ್ಕಾರವು ಕೊಡುವ ದವಸಧಾನ್ಯಾದಿಗಳನ್ನು ಪ್ರಾಮಾಣಿಕವಾಗಿ ವಿತರಣೆ ಮಾಡಿ, ಜನರನ್ನು ಹಸಿವಿನ ದವಡೆಯಿಂದ ಬಿಡಿಸಿದ್ದಾರೆ. ನಷ್ಟಕ್ಕೆ ಗುರಿಯಾಗಿ ನರಳುತ್ತಿದ್ದ ಹಲವು ಸೊಸೈಟಿಗಳನ್ನು ಪ್ರವರ್ಧಮಾನಕ್ಕೆ ತಂದು, ಲಕ್ಷಾಂತರ ರೂಪಾಯಿಗಳ ಬಂಡವಾಳವನ್ನು ರೂಢಿಸಿಕೊಟ್ಟಿದ್ದಾರೆ.

ಸಂಕೇತಿಗಳಲ್ಲಿ ಕೆಲವರು ನಾಟಿ ಔಷಧಿಗಳನ್ನು ಬಲ್ಲವರಾಗಿದ್ದು ಗೆಜ್ಜೆಮಂಡಲ, ಉರಿಮಂಡಲ, ಕೊಳಕುಮಂಡಲ, ಬಾವುಮಂಡಲ ಮುಂತಾದ ಹಾವುಗಳ ವಿಷದ ಉಸುರಿಗೆ ಚಿಕಿತ್ಸೆ ನೀಡುತ್ತಾರೆ. ಬಸುರಿಯರ ಹೊಟ್ಟೆನೋವು, ಮುಟ್ಟಾದಾಗ ಬರುವ ಹೊಟ್ಟೆನೋವು, ಬಿಳಿಸೆರಗು, ಮಕ್ಕಳ ಹಕ್ಕಿರೋಗ, ವಿಷಮಶೀತಜ್ವರ, ವಾಂತಿಭೇದಿ, ಕೈಮಸ್ಕು, ವಿಷಬು, ಹುಚ್ಚುನಾಯಿ ಕಡಿತ, ಅರಿಶಿನಕಾಮಾಲೆ, ಹಲ್ಲುನೋವು ಮುಂತಾದ ಕಾಯಿಲೆಗಳನ್ನು ಹಸಿರು ಔಷಧಿಗಳಿಂದ ಉಚಿತವಾಗಿ ಗುಣಪಡಿಸುತ್ತಿದ್ದಾರೆ. 'ಅದು ಯಾವ ಗಿಡ, ಯಾವ ಮೂಲಿಕೆ' ಎಂದು ಕೇಳಿದರೆ ಅವರು ಸುಲಭದಲ್ಲಿ ಹೇಳುವುದಿಲ್ಲ. ಒಂದು ವೇಳೆ ಹೇಳಿದರೆ ಅವರು 'ಅಯ್ಯೋ ಇದೇನಾ, ಅಯ್ಯೋ ಇಷ್ಟೇನಾ' ಎಂದು ರಾಗವೆಳೆದರೆ ಔಷಧಿಯ ಮಹಿಮೆ ಮಂಕಾಗಿಬಿಡುತ್ತದೆಯೆಂದು ಅಂಜುತ್ತಾರೆ, ದುರುಪಯೋಗವೂ ಆಗಬಹುದು ಎಂದು ಅಳುಕುತ್ತಾರೆ. ಕೆಲವರಲ್ಲಿ ಸರ್ವರೋಗೋಪಯೋಗಿಯಾದ ಕುಪ್ಪಿಮಾತ್ರೆಗಳೂ ಇವೆ.

ಕೆಲವರು ರಾಜಕಾರಣದಲ್ಲಿದ್ದುಕೊಂಡು ಗ್ರಾಮಕ್ಕೆ ಅನುಕೂಲವಾಗುವಂತೆ ರಸ್ತೆ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ, ಸಮುದಾಯ ಭವನಗಳ ನಿರ್ಮಾಣ ಮುಂತಾದ ಸತ್ಕಾರ್ಯಗಳನ್ನು ಆಗುಮಾಡಿಕೊಟ್ಟಿದ್ದಾರೆ. ಪೂಮಗಾಮೆ ಸಂಕೇತಿಗಳು ತಾವೇ ಬೋರ್‌ಕೊರೆಸಿ, ಭೂಮಿಯೊಳಗೇ ಪೈಪು ಜೋಡಿಸಿ, ಸಾಮೂಹಿಕವಾಗಿ ತಮ್ಮ ಮನೆಗಳಿಗೆ ಸಿಹಿನೀರಿನ ವ್ಯವಸ್ಥೆ ಮಾಡಿಕೊಂಡಿರುವುದು ಅದ್ಭುತ ಸಾಧನೆಯಾಗಿದೆ. ಕೆಲವರು ದಾರಿನಡೆಯುವಾಗ ತಂಪಾಗಲೆಂದು ಸಾಲುಮರಗಳನ್ನು ನೆಟ್ಟು ನೀರೆರೆದಿದ್ದಾರೆ. ಗ್ರಾಮಗಳ ಪುರಾತನ ಶಿಥಿಲ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿದ್ದಾರೆ. ತಮ್ಮ ಜಮೀನಿನಲ್ಲಿ ಸಿಕ್ಕಿದ ಶಿವಲಿಂಗಕ್ಕೆ ಸ್ವತಂತ್ರವಾದ ಗುಡಿಯನ್ನು ಕಟ್ಟಿಸಿ, ನಿತ್ಯಪೂಜೆಯ ವ್ಯವಸ್ಥೆ ಮಾಡಿದ್ದಾರೆ. ಕೆಲವರು ತಾವು ಕಲಿತ ವಿದ್ಯುತ್ ಉಪಕರಣಗಳ ರಿಪೇರಿಯೇ ಮುಂತಾದ ಕೈಕಸುಬುಗಳ ಮೂಲಕ ಸಾಮಾನ್ಯಜನರ ಸಮಯಕ್ಕೊದಗಿ ಬರುತ್ತಿದ್ದಾರೆ.

ಸ್ವಾತಂತ್ರ್ಯಸಂಗ್ರಾಮದಲ್ಲಿ ಹೋರಾಡಿ, ತರುವಾಯ ದೇಶಸೇವೆಗೇ ತಮ್ಮನ್ನು ತೆತ್ತುಕೊಂಡ ಬಸವಾನಿ ರಾಮಶರ್ಮರ ಸೇವಾಕಾರ್ಯಗಳನ್ನೂ, ಈಗ ಆ ಸೇವಾಕಾರ್ಯವನ್ನು ಮುನ್ನಡೆಸುತ್ತಿರುವ ಬಸವಾನಿ ಸಾವಿತ್ರಮ್ಮನವರನ್ನೂ ಓದುವಾಗ ಹೃದಯವು ತುಂಬಿಬರುತ್ತದೆ. ಬೆಂಗಳೂರಿನಲ್ಲಿ ಬಿ.ಆರ್. ರಾಮಕೃಷ್ಣರು ಕೊಳೆಗೇರಿಯ ಮಕ್ಕಳಿಗಾಗಿಯೇ ಶಾಲೆಗಳನ್ನು ತೆರೆದು, ಅವರಿಗೆ ಉಚಿತವಾಗಿ ಊಟ, ಪುಸ್ತಕ, ಸಮವಸ್ತ್ರಾದಿಗಳನ್ನು ಕೊಟ್ಟು ಅವರನ್ನು ವಿದ್ಯಾವಂತರನ್ನಾಗಿ ಮಾಡುತ್ತಿರುವುದನ್ನಾಗಲಿ; ಬೆಂಗಳೂರಿನಲ್ಲಿಯೇ ಬಿ.ಎನ್.ವಿ. ಸುಬ್ರಹ್ಮಣ್ಯ ಅವರು ವೇದ ಪಾಠಶಾಲೆ, ಹೆಣ್ಣುಮಕ್ಕಳ ನಿಲಯ ಮುಂತಾದುವನ್ನು ಸ್ಥಾಪಿಸಿ ಸಮಾಜಸೇವೆಯಲ್ಲಿ ತತ್ಪರರಾಗಿರುವುದನ್ನಾಗಲಿ ಕಂಡಾಗ ಇಂತಹ ಉದಾರಚರಿತರಿಂದಲೇ ಅಲ್ಲವೇ ಸಂಕೇತಿಸಮಾಜಕ್ಕೆ ಕೀರ್ತಿ ಬಂದಿರುವುದು ಎಂದು ಉದ್ಗರಿಸುವಂತಾಗುತ್ತದೆ. ಕೃಷಿವಿಜ್ಞಾನದಲ್ಲಿ ಡಾಕ್ಟರೇಟ್ ಪದವಿಗಳಿಸಿ, ಮಹಿಕೋ ಸಂಸ್ಥೆಯ ಉದ್ಯೋಗಿಯಾಗಿ ಆ ಸಂಸ್ಥೆಯನ್ನು ಮುಗಿಲೆತ್ತರಕ್ಕೇರಿಸಿದ ಟಿ.ಎನ್. ಸುಬ್ಬರಾವ್ ಅವರು ಕೃಷಿಕರ ಏಳಿಗೆಗಾಗಿ ಮಾಡಿರುವ ಸೇವೆಯಂತೂ ಪರಮಾದ್ಭುತವಾದುದು. ಕೃಷಿಪ್ರೇಮದಲ್ಲಿ ಅವರನ್ನು ಸರಿಗಟ್ಟಬಲ್ಲವರು ಮತ್ತೊಬ್ಬರಿಲ್ಲ. ನಿವೃತ್ತಿಯ ನಂತರ ಹೊಸದಾಗಿ ಕೃಷಿಯನ್ನು ಪ್ರಾರಂಭಿಸಿ ಮಾಡುತ್ತಿರುವ ಸಾಧನೆಯೂ ಅನುಕರಣೀಯ.

ಕೃಷಿಜೀವನಮೌಲ್ಯಗಳು

ಸಂಕೇತಿ ಕೃಷಿಕರು ಯಾವ ಜೀವನಮೌಲ್ಯಗಳನ್ನು ತಮ್ಮ ಬದುಕಿಗೆ ಅಳವಡಿಸಿಕೊಂಡಿದ್ದಾರೆ ಎಂಬುದನ್ನೆಲ್ಲ ಕೇಶವಮೂರ್ತಿಗಳು ಅವರ ಬಾಯಿಂದಲೇ ಹೇಳಿಸಿದ್ದಾರೆ. ಕೃಷಿಜೀವನದಲ್ಲಿ ಕುಳಿತು ಉಣ್ಣುವುದು ಸಾಧ್ಯವಿಲ್ಲ. ದುಡಿಮೆಯೇ ದೇವರೆಂದು ತಿಳಿಯಬೇಕು. ಮಾಡುವ ಕಾರ್ಯಗಳನ್ನೆಲ್ಲ ಚೆನ್ನಾಗಿಮಾಡಿ, ಕೊನೆಯಲ್ಲಿ ದೇವರಮೇಲೆ

ಭಾರಹಾಕಬೇಕು. ಶ್ರಮಜೀವಿಗಳಿಗೆ ದೇವರು ಕರುಣೆದೋರುತ್ತಾನೆ. ಕೈಕೆಸರಾದರೆ ಬಾಯಿ ಮೊಸರು. ಪಾಲಿಗೆ ಬಂದದ್ದು ಪಂಚಾಮೃತವೆಂದು ಎಷ್ಟು ದೊರಕಿದರೆ ಅಷ್ಟರಿಂದ ತೃಪ್ತಿಪಟ್ಟುಕೊಳ್ಳಬೇಕು. ಹೆಚ್ಚು ಆದಾಯವೇನೂ ಬರಲಿಲ್ಲ, ಎಣ್ಣೆಬತ್ತಿಗೆ ನೇರವಾಯಿತು ಎಂಬಂತಾದರೂ ಧೃತಿಗೆಡಬಾರದು. ತೃಪ್ತಿಯಿಲ್ಲದಿದ್ದರೆ ಬದುಕೆಂಬುದೇ ಇಲ್ಲ. ನಮಗಿಂತ ಕೆಳಗಿನವರನ್ನು ನೋಡಿ 'ದೇವರು ನಮ್ಮನ್ನು ಚೆನ್ನಾಗಿಟ್ಟಿದ್ದಾನೆ' ಎಂದು ಸಮಾಧಾನಪಡಬೇಕು. ವೈದ್ಯರು ಮತ್ತು ಅಡಿಗೆಯವರು ಹಸ್ತಸಿದ್ಧಿ ಇರುವವರೆಗೆ ಮಾತ್ರ ಕೆಲಸಮಾಡಬೇಕು. ಕೃಷಿಕರು ಹೆಚ್ಚಿನ ಬೆಳೆಯ ಆಸೆಯಿಂದ ಭೂದೇವಿಯ ಮೇಲೆ ಅತಿಯಾದ ಒತ್ತಡ ಹೇರಬಾರದು. ನೆನ್ನೆಯನ್ನು ವೃಥಾ ನೆನೆಯಬಾರದು, ನಾಳೆಗೆಂತೆಂದು ಅಂಜಬಾರದು, ವರ್ತಮಾನವನ್ನು ಸಾರ್ಥಕವಾಗಿ ಬಳಸಿಕೊಳ್ಳಬೇಕು.

ಕೃಷಿಯೆಂದರೆ ಅದೊಂದು ತಪಸ್ಸು, ತೋಟವೇ ತಪೋಭೂಮಿ. ಚಿಕ್ಕದಾಗಿ ಪ್ರಾರಂಭಿಸಬೇಕು, ಆರಂಭದಲ್ಲೇ ದೊಡ್ಡದಾಗಿ ಹೂಡಿಕೊಳ್ಳಬಾರದು. ನಾಲ್ಕಾರು ಕಡೆ ಕಾಲಿಡಬಾರದು. ಮನೆಯೆಂಬುದು ರಾತ್ರಿಯ ತಂಗುದಾಣವಷ್ಟೇ; ಹಗಲೆಲ್ಲ ತೋಟಗದ್ದೆಗಳ ಕಾರ್ಯಗಳಲ್ಲೇ ಮುಳುಗಬೇಕು. ಹಿಮಾಲಯದಲ್ಲಿ ವೀರಸೈನಿಕರು ಹೇಗೆ ಸದಾ ಜಾಗೃತರಾಗಿರುತ್ತಾರೋ ಹಾಗೆಯೇ ಕೃಷಿಕರು ಯಾವಾಗಲೂ ಎಚ್ಚರವಾಗಿರಬೇಕು. ನಾಳೆ ಮಾಡಬಹುದಾದುದನ್ನು ಇಂದೇ ಮಾಡೋಣ ಎನ್ನುವ ಉತ್ಸಾಹವಿರಬೇಕು. ಸೋಮಾರಿತನ ಕೃಷಿಯ ಮೊದಲಶತ್ರು. ಸತತ ಪರಿಶ್ರಮವು ನಮ್ಮನ್ನು ಮೇಲೆತ್ತುತ್ತದೆ. 'ಬೇರೆಯವರೇನು ಮಾಡುವುದು ಮಹಾ, ನಾನೂ ಮಾಡಿ ತೋರಿಸುತ್ತೇನೆ' ಎಂಬ ಹುಮ್ಮಸ್ಸಿರಬೇಕು. ನಮ್ಮ ಹವಾಮಾನ, ನೆಲದಗುಣಗಳಿಗೆ ಹೊಂದಿಕೆಯಾಗುವ ವ್ಯವಸಾಯಪದ್ಧತಿಯನ್ನು ಅನುಭವದಿಂದ ರೂಪಿಸಿಕೊಳ್ಳಬೇಕು; ಅಂಧಾನುಕರಣೆ ಸಲ್ಲದು.

ಸುಳ್ಳು ಹೇಳಬಾರದು. ನಮ್ಮ ವರ್ತನೆಯಿಂದ ಯಾರಿಗೂ ಅನ್ಯಾಯವಾಗದಂತೆ ಎಚ್ಚರವಹಿಸಬೇಕು. ತಂದೆತಾಯಿಗಳೇ ಸುಳ್ಳುಹೇಳುತ್ತ, ಮಕ್ಕಳನ್ನು 'ನೀನು ಸತ್ಯವಂತನಾಗು' ಎಂದು ಬೋಧಿಸಿದರೆ ಅದು ಫಲಕೊಡುವುದಿಲ್ಲ. ಹೆಣ್ಣುಮಕ್ಕಳು ಕೆಟ್ಟು ತವರುಮನೆ ಸೇರಬಾರದು. ಗ್ರಾಮಜೀವನದಲ್ಲಿ ಪರಸ್ಪರ ಪ್ರೀತಿಯೇ ಪ್ರಧಾನವಾದ ಬೆಸುಗೆ. ಶಾಂತಿ ಸಹಿಷ್ಣುತೆಗಳೇ ಇಲ್ಲಿನ ಜೀವನಮಂತ್ರ. ಪಟ್ಟಣಿಗರ 'ತಬ್ಬಲಿತನ'ಕ್ಕೆ ಇಲ್ಲಿ ಪುರಸ್ಕಾರವಿಲ್ಲ. ತಂದೆತಾಯಿಗಳ ವಿಷಯದಲ್ಲಿ ಮಕ್ಕಳು ಗೌರವತೋರಬೇಕು, ಕಡೆಗಣಿಸಿದರೆ ಅದು ಪತನಕ್ಕೆ ನಾಂದಿ. ದೊಡ್ಡವರ ಮಾತಿಗೆ, ಅವರ ಸಲಹೆಗೆ, ಅವರ ಅನುಭವಕ್ಕೆ ಬೆಲೆಕೊಡಬೇಕು. ಅವರ ಆಶೀರ್ವಾದಕ್ಕೆ ತಲೆಬಾಗಬೇಕು. ಯಾರಾದರೂ ನಮ್ಮಿಂದ ಏನನ್ನಾದರೂ ಅಪೇಕ್ಷಿಪಟ್ಟರೆ, ಅದನ್ನು ಉಪೇಕ್ಷಿಮಾಡದೆ ಅಷ್ಟೋ ಇಷ್ಟೋ ಕೊಡಬೇಕು. ಬೇಕು ಬೇಕು ಎಂಬ ಮನೋಭಾವನೆ ಆವರಿಸಿಬಿಟ್ಟರೆ ಒಂದು ಮನೆಯಲ್ಲ, ಹತ್ತುಮನೆ ಕಟ್ಟಿದರೂ ಸಾಕೆನಿಸುವುದಿಲ್ಲ, ಕೊನೆಗೆ ಅರಮನೆಯಾದರೂ ಅರೆಮನೆಯೆನಿಸಿಬಿಡುತ್ತದೆ. ಸಂತೋಷವೆಂಬುದು ಮನಗಳಲ್ಲಿರುತ್ತದೆ, ಮನೆಗಳಲ್ಲಿ ಅಲ್ಲ.

ಭೋಗಾಸಕ್ತಿ ಹೆಚ್ಚಾದರೆ ಅದರಿಂದ ಬ್ರಹ್ಮಶಕ್ತಿ, ಕ್ಷಾತ್ರಶಕ್ತಿ, ಅನ್ಯಾಯವನ್ನು ಪ್ರತಿಭಟಿಸುವ ಶಕ್ತಿ - ಎಲ್ಲವೂ ಉಡುಗಿಹೋಗುತ್ತವೆ. ದುಡಿಯದೆ ಉಂಡರೆ ಅದು ಅನ್ನದ್ರೋಹವೆನಿಸುತ್ತದೆ. ನಮ್ಮ ಕೃಷಿವೃತ್ತಿಯ ಹಿನ್ನೆಲೆಯಲ್ಲಿರುವ ಸಾಂಸ್ಕೃತಿಕ ಸಂಬಂಧವನ್ನು ಸ್ಮರಿಸುತ್ತಿರಬೇಕು. ಪರರ ಉಪಕಾರವನ್ನೂ ಸ್ಮರಿಸುತ್ತಿರಬೇಕು. ನಾನು ಬದುಕಿನಲ್ಲಿ ಎಷ್ಟೇ ಮೇಲೇರಿದರೂ ಈ ಹಿಂದೆ ಹೇಗಿದ್ದೆ ಎಂಬುದನ್ನು ಮರೆಯಬಾರದು, ಮರೆತರೆ ಮನುಷ್ಯತ್ವ ಉಳಿಯುವುದಿಲ್ಲ. ಇನ್ನೊಬ್ಬರ ಹೊಟ್ಟೆಯಮೇಲೆ ಹೊಡೆದು ತಾನು ಸಿರಿವಂತನಾಗಲು ಬಯಸಬಾರದು. 'ನಾನು ಕೊಡುವ ವಸ್ತುಗಳನ್ನು ನೀನು ಮಾರಾಟಮಾಡಿ ಬಾ, ಒಂದು ವೇಳೆ ನಿನಗೆ ನಷ್ಟವಾದರೆ ನನ್ನ ಲಾಭದಲ್ಲಿ ಬಿಟ್ಟುಕೊಡುತ್ತೇನೆ' ಎಂದು ಹೇಳುವ ಔದಾರ್ಯವಿರಬೇಕು. ನಮ್ಮ ಸಂಪರ್ಕಕ್ಕೆ ಬರುವವರನ್ನು ವಿರಸದಿಂದಲ್ಲ, ಸರಸದಿಂದ ಗೆಲ್ಲಬೇಕು. ಜಗಳಬವರಗಳು ನಾಲ್ಕು

ಜನರ ಮುಂದೆ ನಮ್ಮ ಮರ್ಯಾದೆಯನ್ನು ಕಸಿಯುತ್ತವೆ ಎಂಬುದನ್ನು ಮರೆಯಬಾರದು. ಮೋಸವಂಚನೆಗಳಾಗುವಾಗ ಕಣ್ಣಾರೆ ನೋಡಿಕೊಂಡು ಸುಮ್ಮನಿರದೆ ಶಾಂತಿಮಾರ್ಗದಲ್ಲಿ ಖಂಡಿಸಬೇಕು.

ಅಡಿಗೆಯ ಕೆಲಸವಾಗಲಿ, ಬಡಗಿಯ ಕೆಲಸವಾಗಲಿ ದುಶ್ಚಟಗಳಿಗೆ ಬಲಿಯಾಗದೆಯೂ ನಿರ್ವಹಣೆ ಮಾಡಬಹುದು ಎಂಬ ದೃಢವಾದ ನಿಶ್ಚಯವಿರಬೇಕು. ಪೌರೋಹಿತ್ಯವನ್ನು ಸಮಾಹಿತಚಿತ್ತರಾಗಿ, ಕರ್ಮಕ್ಕೆ ಕುಂದಾಗದಂತೆ ಮಾಡಿಸಬೇಕು. ಲೋಪವಾದರೆ ಪುರೋಹಿತನೇ ಆ ಪಾಪಗಳನ್ನು ಅನುಭವಿಸಬೇಕಾಗುತ್ತದೆ. ಬಡ್ಡಿಗೆ ದುಡ್ಡುಕೊಟ್ಟರೆ ಅದು ದುಡಿದುಕೊಡುವುದು ಮೊದಲಿಗೆ ಆಕರ್ಷಕವೆನಿಸಬಹುದು. ಆದರೆ ಕಾಲಾಂತರದಲ್ಲಿ ಅಸಲಿಗೇ ಮೋಸವಾಗಬಹುದು. ಆದರೆ ಕೃಷಿಯಲ್ಲಿ ಹಾಗಾಗುವುದಿಲ್ಲ. ನಾವು ಭೂಮಿಯಲ್ಲಿ ನೆಡುವ ಒಂದೇ ಒಂದು ತೆಂಗು ಕೊಡುವ ಫಲಕ್ಕೆ ಮಿತಿ ಯೆಂಬುದೇ ಇಲ್ಲ.

ಗೋಸೇವೆ, ಗೋದಾನ ಅತ್ಯಂತ ಶ್ರೇಷ್ಠ ವಿಚಾರಗಳು. 'ಗಾವೋ ವಿಶ್ವಸ್ಯ ಮಾತರಃ' ಎಂದು ಹೇಳಿದೆ. ಮೂವತ್ತುಮೂರು ಕೋಟಿ ದೇವತೆಗಳೂ ಗೋವಿನ ಶರೀರದಲ್ಲಿ ವಾಸಮಾಡುತ್ತಾರೆ. ಗೋವುಗಳು ಸಂಚರಿಸುವ ಭೂಮಿಯಲ್ಲಿ ವಾತಾವರಣವು ಪವಿತ್ರವಾಗಿರುತ್ತದೆ, ಗಿಡಮರಗಳು ಚೆನ್ನಾಗಿ ಹುಲುಸುತ್ತವೆ. ಮನುಷ್ಯನೇ ಹೊಟ್ಟೆಯ ಸಲುವಾಗಿ ಮಾಡಬಾರದ್ದನ್ನು ಮಾಡುವಾಗ, ಮೂಕಪ್ರಾಣಿಗಳು ಹೊಲಗದ್ದೆಗಳನ್ನು ಅಪ್ಪಿತಪ್ಪಿ ಮೇದುಬಿಟ್ಟರೆ, ಅವುಗಳನ್ನು ಹಿಂಡಿ ಹಿಂಸಿಸಬಾರದು. ನಮ್ಮದೇ ಸ್ವಲ್ಪ ಹೋದರೂ ಚಿಂತೆಯಿಲ್ಲ ಎಂಬ ಭಾವನೆಯಿರಬೇಕು. 'ಅಯ್ಯೋ ಹೋಯಿತಲ್ಲ' ಎಂದು ಕೊರಗಬಾರದು.

ಕೃಷಿಜೀವನಕ್ಕೊಂದು ವ್ಯವಸ್ಥಿತ ದಿನಚರಿಯಿರಬೇಕು. ಸ್ನಾನ, ಸಂಧ್ಯಾವಂದನೆ, ದೇವತಾರ್ಚನೆ, ನಿತ್ಯಕರ್ಮಗಳು, ಕೃಷಿಯ ಕಾರ್ಯಗಳು ಎಂಬಂತೆ ಶಿಸ್ತು ಇರಬೇಕು. ದೇವರಲ್ಲಿ ನಂಬಿಕೆಯಿರಬೇಕು. ಮನೆಗಳಲ್ಲಿ ದೇವಕಾರ್ಯಗಳನ್ನೂ ಪಿತೃಕಾರ್ಯಗಳನ್ನೂ ಮಾಡಬೇಕು. ದೇವರ ಉತ್ಸವಗಳಲ್ಲಿ ಪಾಲ್ಗೊಳ್ಳಬೇಕು. ದೇವರ ಕೃಪೆಗಾಗಿ ಹಂಬಲಿಸಬೇಕು.

ಹಿಂಸೆಯಿಲ್ಲದೆ ಜೀವನವೇ ಇಲ್ಲ. ಧಾನ್ಯಗಳಲ್ಲಿ, ತರಕಾರಿಗಳಲ್ಲಿ, ಸಸ್ಯಗಳಲ್ಲಿ ಜೀವವಿರುತ್ತದೆ. ಅವುಗಳನ್ನು ಕೊಂದುಹಾಕಿಯೇ ನಾವು ಜೀವನನಿರ್ವಹಣೆ ಮಾಡುತ್ತೇವೆ. ಅದು ಅಪರಿಹಾರ್ಯವಾದ ಹಿಂಸೆ. ಕೃಷಿಮಾಡುವುದೂ ಒಂದರ್ಥದಲ್ಲಿ ಹಿಂಸೆಯೇ. ಭೂಮಿಯಲ್ಲಿರುವ ಎಷ್ಟೋ ಜೀವರಾಶಿಗಳನ್ನು ಕೊಂದವರಾಗುತ್ತೇವೆ. ಆದರೆ ಯಾವ ಕೃಷಿಯಲ್ಲಿ ಪರಿಮಿತ ಪ್ರಮಾಣದಲ್ಲಿ ಹಿಂಸೆಯೋ ಅಂತಹ ತೋಟದ ಕೃಷಿಯನ್ನು ಆರಂಭದಲ್ಲಿ ಸಂಕೇತಿಗಳು ಆಯ್ದುಕೊಂಡಿದ್ದರು. ಭೂಮಿಯ ಮೇಲಿರುವ ವೃತ್ತಿಗಳಲ್ಲೆಲ್ಲ ಅದು ಪವಿತ್ರವಾದುದು ಎಂದು ನಂಬಿಕೊಂಡಿದ್ದರು. 'ಹಲಾಂತಂ ಬ್ರಹ್ಮವರ್ಚಸಂ' - ನೇಗಿಲುಹಿಡಿದು ಉಳುಮೆಮಾಡಿದರೆ ಬ್ರಹ್ಮವರ್ಚಸ್ಸು ಇಳಿಮುಖವಾಗುತ್ತದೆ ಎಂಬ ಶಾಸ್ತ್ರವಾಕ್ಯದಂತೆ ಎತ್ತುಕಟ್ಟಿ ಉಳುವ ವ್ಯವಸಾಯಕ್ಕೆ ಹಿಂದೆ ಹೆಚ್ಚು ಗಮನ ಕೊಡಲಿಲ್ಲ. ಈಗ ಆ ಶಾಸ್ತ್ರವಾಕ್ಯಪರಿಪಾಲನೆ ಎಲ್ಲರಿಂದಲೂ ಸಾಧ್ಯವಾಗುತ್ತಿಲ್ಲ.

ಪರಿಪೂರ್ಣವಾದ ಬ್ರಾಹ್ಮಣಕುಟುಂಬಕ್ಕೆ ತೋಟವೊಂದು ಇರಲೇಬೇಕು. ತೋಟವಿದ್ದಮೇಲೆ ದನಕರುಗಳನ್ನು ಅವನು ಸಾಕಲೇಬೇಕು. ಆ ದನಕರುಗಳನ್ನು ಕುಟುಂಬದ ಸದಸ್ಯರನ್ನು ಹೇಗೋ ಹಾಗೆ, ಅಕ್ಕರೆಯಿಂದ ಕಾಪಾಡಬೇಕು. ತೋಟದ ಕೃಷಿಯೆಂದರೆ ಅದೇ ಸಂಸಾರದ ಪ್ರತೀಕ. ತೆಂಗಿನಮರವೆಂದರೆ ಯಜಮಾನ, ಎಲೆಯ ಹಂಬೆಂದರೆ ಯಜಮಾಂತಿ, ಅಡಕೆಯ ಮರಗಳೆಂದರೆ ದುಡಿಯುವ ಯುವಕರು, ಬಾಳೆಯಗಿಡಗಳೆಂದರೆ ಬಾಲೆಯರು, ಬಾಲಕರು. ಪರಿಪೂರ್ಣಜೀವನಕ್ಕೆ ಕೃಷಿಯೇ ಪರಮಾಪ್ತಮಾರ್ಗ. ಪ್ರತಿಯೊಂದು ಗಿಡಮರವೂ ಅವರಿಗೆ ದೇವರ ಸಮಾನ. ಅವುಗಳನ್ನು ನಾವೇ ಮಮತೆ

ಯಿಂದ ಮುಟ್ಟಿ ಆರೈಕೆ ಮಾಡಿ ಸ್ನೇಹಸಂಬಂಧವನ್ನು ಏರ್ಪಡಿಸಿಕೊಳ್ಳಬೇಕು. ನಾವು ಕೈಯಾರೆ ಮಾಡದೆ ಆಳುಗಳ ಕೈಲೇ ಮಾಡಿಸಿದರೆ, ಆಯಾಗಳ ಕೈಲಿ ಮಕ್ಕಳನ್ನು ಬೆಳೆಸಿದಂತಾಗುತ್ತದೆ.

ವಿದ್ಯೆ, ಅನ್ನ, ಹಾಲು, ಔಷಧಗಳನ್ನು ಬ್ರಾಹ್ಮಣನು ಮಾರಾಟಮಾಡಬಾರದು ಎಂದು ಹೇಳಲಾಗಿದೆ. ಅಂತಹ ಮೌಲ್ಯಗಳ ಸಂರಕ್ಷಣೆ ಈಗ ಕಷ್ಟವಾಗಿದೆ. ಆ ಮೌಲ್ಯವನ್ನು ಸ್ಮರಿಸಿ ಕಾಲಿಟ್ಟರೂ ಎಷ್ಟೋ ಸುಧಾರಣೆಯಾಗುತ್ತದೆ.

ಸಂಕೇತಿಗಳು ಕೃಷಿಕರಾಗಿ ಉಳಿಯುತ್ತಾರೆಯೆ ?

ಸಂಕೇತಿ ಕೃಷಿಯು ಮುಂದಕ್ಕೂ ಉಳಿಯುತ್ತದೆಯೆ ಎಂಬ ಪ್ರಶ್ನೆ ಲೇಖಕರಾದ ಕೇಶವಮೂರ್ತಿಗಳನ್ನು ಗ್ರಂಥದುದ್ದಕ್ಕೂ ಕಾಡಿದೆ. ಅವರು ಸಂದರ್ಶಿಸಿದ ಸಂಕೇತಿಕೃಷಿಕರನ್ನೂ ಕಾಡಿದೆ. ಈ ಗ್ರಂಥವನ್ನೋದುವ ಎಲ್ಲರನ್ನೂ ಅದು ಕಾಡುತ್ತದೆ. ಆ ಪ್ರಶ್ನೆಗೆ ಖಚಿತವಾದ ಉತ್ತರಕೊಡಲು ಕಾಲಪುರುಷನಿಂದ ಮಾತ್ರವೇ ಸಾಧ್ಯ; ಏಕೆಂದರೆ ನಾವೆಲ್ಲ ಅಕಾಲಪುರುಷರು. ಬ್ರಾಹ್ಮಣರಲ್ಲಿ ಒಗ್ಗಟ್ಟು ಇಲ್ಲದಿರಲಿ ಎಂದು ಪರಶುರಾಮದೇವನೇ ಶಾಪಕೊಟ್ಟಿದ್ದಾನಂತೆ. ಅದೇನೇ ಇದ್ದರೂ ಬ್ರಾಹ್ಮಣರ ಸಂಘಜೀವನ ಮಾತ್ರ ಅಲ್ಲಲ್ಲಿ ದಿನದಿಂದ ದಿನಕ್ಕೆ ಕುಸಿದುಹೋಗುತ್ತಿದೆ.

ಭೋಗಜೀವನಕ್ಕೆ, ಕೈಕೆಸರು ಮಾಡಿಕೊಳ್ಳದ ಜೀವನಕ್ಕೆ, ಮಳೆಬರಲಿ ಬಿಡಲಿ - ಹರಿದುಬರುವ ಸಂಬಳದ ಜೀವನಕ್ಕೆ ಎಲ್ಲರೂ ಮರುಳಾಗುತ್ತಿದ್ದಾರೆ. ಹೀಗಾಗಿ ವ್ಯವಸಾಯವೆಂದರೆ ಅಲರ್ಜಿ. ಆಸೆಪಟ್ಟು ಕೃಷಿಯಲ್ಲಿ ತೊಡಗುವ ಯುವಕರಿಗೆ ಹಳ್ಳಿಗರೇ ಆದ ಗೃಹಸ್ಥರು ತಮ್ಮ ಹೆಣ್ಣುಮಕ್ಕಳನ್ನು ಅವರಿಗೆ ಮದುವೆಮಾಡಿಕೊಡಲು ಹಿಂದೇಟು ಹಾಕುತ್ತಿದ್ದಾರೆ. ಗ್ರಾಮಗಳಿಗೆ ಹೆಣ್ಣು ಕೊಟ್ಟರೆ ಅಲ್ಲಿ ಹೆಚ್ಚು ಶ್ರಮಪಡಬೇಕಾಗುತ್ತದೆ, ಪಟ್ಟಣಗಳಲ್ಲಿ ಸುಖವಾಗಿರಲಿ ಎಂದು ಆ ತಂದೆತಾಯಿಗಳು ಭಾವಿಸುತ್ತಾರೆ. ಹೆಣ್ಣುಮಕ್ಕಳೂ ಹಾಗೆಯೇ ಭಾವಿಸುತ್ತಾರೆ. ಗ್ರಾಮದ ಯುವಕನಿಗಿಂತ ನಗರದ ಯುವಕನಿಗೆ ಕಡಿಮೆಯೇ ಆದಾಯ ಬರುತ್ತಿದೆ ಎಂಬ ಪರಿಸ್ಥಿತಿಯಿದ್ದರೂ, ನಗರದ ಯುವಕನನ್ನೇ ಆಯ್ಕೆಮಾಡಿಕೊಳ್ಳುತ್ತಾರೆ. ನಗರಜೀವನದಲ್ಲಿರುವ ಎಲ್ಲ ಸುಖಸೌಲಭ್ಯಗಳೂ ಗ್ರಾಮಜೀವನದಲ್ಲೂ ಇವೆಯಲ್ಲಾ ಎಂದರೂ ಅವರು ಅದರಿಂದ ಸಮಾಧಾನ ಹೊಂದಲಾರರು. ಈಗೀಗ ಹೆಣ್ಣುಸಂತತಿಯೂ ಕ್ಷೀಣಿಸಿಬಿಟ್ಟಿದೆ.

ನಗರಜೀವನದ ಸಂಬಳಗಾರ ಯುವಕನಿಗಿರುವ ಸಾಮಾಜಿಕ ಅಂತಸ್ತು ಗೌರವಗಳು ಗ್ರಾಮೀಣ ಸುಸಂಸ್ಕೃತ ಯುವಕನಿಗೂ ಇಲ್ಲ. ಈಗಾಗಲೇ ನಗರಗಳನ್ನು ಸೇರಿರುವ ಸಂಕೇತಿಗಳು 'ತೋಟತುಡಿಕೆಗಳನ್ನು ಮಾರಾಟ ಮಾಡಿ ಇಲ್ಲಿಗೇ ಬಂದುಬಿಡಿ' ಎಂದು ಕರೆನೀಡುತ್ತಿದ್ದಾರೆ. ಕೃಷಿಕರಾದ ತಂದೆ ತಾಯಿಗಳೇ 'ನೀನು ಹಳ್ಳಿಯಲ್ಲಿರುವುದು ಬೇಡ, ದಿಳ್ಳಿಯ ದಾರಿಯನ್ನೇ ಹಿಡಿ, ಕೃಷಿ ನಿನ್ನಿಂದಾಗದು, ನನಗೇ ಕೊನೆಯಾಗಲಿ' ಎಂದು ಹೇಳಿದರೆ, ಅದು ಮುಂದುವರಿಯುವುದಾದರೂ ಹೇಗೆ? ಅನಿಶ್ಚಿತವಾದ ಮಳೆಗಾಲ, ಕರೆಂಟಿನ ಕ್ಷಾಮ, ಮಾರುಕಟ್ಟೆ ಬಿದ್ದುಹೋಗುವುದು, ಬೆಳೆಗಾರರ ನಡುವೆ ಪೈಪೋಟಿ, ಕೆಲಸದಾಳುಗಳ ಸಮಸ್ಯೆ, ಅನ್ಯ ರೈತಾಪಿಗಳ ಕಿರುಕುಳ ಮತ್ತು ಅಸಹಕಾರ, ಕಳ್ಳಕಾಕರ ಕಾಟ ಈ ಮುಂತಾದುವು ಕೂಡ ಸಂಕೇತಿ ಕೃಷಿಕರನ್ನು ಧೃತಿಗೆಡಿಸಿವೆ. ಉಯ್ಯಾಲೆಯ ಮೇಲೆ ಕುಳಿತು ತೂಗಿಕೊಳ್ಳುವುದು ಸಂಕೇತಿಗಳಿಗೆ ಪ್ರಿಯವಾದ ವಿಷಯಗಳಲ್ಲೊಂದು. ಕೇಶವಮೂರ್ತಿಯವರು ಆ ತೂಗುಯ್ಯಾಲೆಯನ್ನು ಸಂಕೇತಿಕೃಷಿ ಉಳಿಯುತ್ತದೆಯೆ ಎಂಬುದಕ್ಕೆ ಸಂಕೇತವಾಗಿಸಿದ್ದಾರೆ.

'ಉಳುವವನಿಗೇ ಜಮೀನು' ಎಂಬ ಕಾಯ್ದೆ ಜಾರಿಗೆ ಬಂದಾಗ ಅನೇಕ ಸಂಕೇತಿಗಳು ತಮ್ಮ ಜಮೀನುಗಳನ್ನು ಕಳೆದುಕೊಂಡರು. ಅಷ್ಟುಹೊತ್ತಿಗಾಗಲೆ ಮೈಸೇರಿಕೊಂಡಿದ್ದ ಸೋಮಾರಿತನವೂ ಅದಕ್ಕೆ ಕಾರಣವಾಯಿತು ಎಂದು ಕೆಲವರು ಹೇಳಿದ್ದಾರೆ. ಕೃಷಿ ಉಳಿಯಬೇಕಾದರೆ ಏನಾಗಬೇಕು ಎಂಬುದಕ್ಕೆ ಸಂಕೇತಿಗಳೇ ಕೆಲವು ಸಲಹೆಗಳನ್ನೂ ಕೊಟ್ಟಿದ್ದಾರೆ.

ಗ್ರಾಮಗಳಲ್ಲಿ ವೇದಾಧ್ಯಯನ ಪ್ರಾರಂಭವಾಗಬೇಕು, ಅದು ಪೌರೋಹಿತ್ಯವೆಂಬ ಉಪಕಸುಬಿಗೂ ದಾರಿದೀಪವಾಗಬಹುದು. ಅನಿವಾರ್ಯವಾಗಿ ಸಂಕೇತಿಗಳು ಮಾರುವ ಜಮೀನನ್ನು ಅವರಲ್ಲೇ ಸಿರಿವಂತರಾದವರು ಕೊಳ್ಳುವಂತಾಗಬೇಕು. ಕೈಗಾರಿಕೆ ನಡೆಸುವ ಹಾಗೆ ದೊಡ್ಡ ಹಿಡುವಳಿಗಳನ್ನು ಖರೀದಿಸಿ, ಯುವಕರನ್ನು ಸಂಘಟಿಸಿಕೊಂಡು, ಹೆಚ್ಚು ಲಾಭದಾಯಕವಾಗುವಂತೆ ಮಾಡಬೇಕು ಎಂದು ಮುಂತಾಗಿ ಅವರು ಸೂಚಿಸಿದ್ದಾರೆ.

ಸಂಕೇತಿ ಕೃಷಿಯ ಆಶಾದಾಯಕ ದೃಷ್ಟಿಕೋನವೂ ಈ ಕೃತಿಯಲ್ಲಿ ನಿರೂಪಿತವಾಗಿದೆ. "ನಾವು ನಂಬಿರುವ ಜಮೀನೇ ನಮಗೆ ದೇವರು. ಮಕ್ಕಳು ಹೊರಗೆ ಇದ್ದುಕೊಂಡು ಕೆಲಸಮಾಡಿ ನಿವೃತ್ತಿಗೊಂಡು ಬರಲಿ, ಅಲ್ಲಿಯವರೆಗೆ ನಾವೇ ರಕ್ಷಿಸಿಕೊಂಡಿರುತ್ತೇವೆ. ಗೋಡೆಯಿದ್ದರೆ ಚಿತ್ತಾರ, ಭೂಮಿಯಿದ್ದರೆ ಬೇಸಾಯ, ಅದನ್ನು ನಾವು ಕಾಪಾಡಿಕೊಂಡಿರುತ್ತೇವೆ. ಭೂಮಿಯನ್ನು ಬಿಡಬೇಕೆಂದರೆ ನಮಗೆ ಅಳುವಷ್ಟು ಸಂಕಟವಾಗುತ್ತದೆ" ಎಂಬ ಮಾತುಗಳು ಸಂಕೇತಿಕೃಷಿಗೆ ಭವಿಷ್ಯವಿದೆಯೆನ್ನುವುದಕ್ಕೆ ಸೂಚಕಗಳಾಗಿವೆ. ಆಧುನಿಕ ವಿದ್ಯಾವಂತಿಕೆ ಮತ್ತು ತೋಟಗಾರಿಕೆ ಎಂಬುವು ಒಂದಕ್ಕೊಂದು ಸಂಗಮಿಸದ ದಿಕ್ಕುಗಳಂತೆ ತೋರುತ್ತಿವೆ. ತೋಟದಲ್ಲಿ ಆಸಕ್ತಿ ಹುಟ್ಟಲೆಂದು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡದಿರಲು ಸಾಧ್ಯವಿಲ್ಲ. ಇಷ್ಟವಾದವರು ಕೃಷಿಮಾಡಲಿ, ಕಷ್ಟವಾದವರು ನಗರಗಳ ಉದ್ಯೋಗಕ್ಕೆ ಹೋಗಲಿ ಎಂದು ಹೇಳಿದರೆ ಮಿತಸಂತಾನವು ಆ ದಿಕ್ಕಿನಲ್ಲಿ ದೊಡ್ಡ ಪೆಟ್ಟನ್ನೇ ಕೊಟ್ಟಿದೆ. ನಗರಜೀವನವು ಉಂಟುಮಾಡುವ ಪರಾವಲಂಬನೆ, ಯಾಂತ್ರಿಕ ಜೀವನ, ಆರೋಗ್ಯಹಾನಿ, ನೆಮ್ಮದಿಯ ನಾಶ, ಅನಾಥಪ್ರಜ್ಞೆ, ಮನುಷ್ಯತ್ವದ ನಾಶ ಮುಂತಾದುವುಗಳ ಅರಿವು ಯುವಪೀಳಿಗೆಗೆ ಆಗಬೇಕು, ದ್ರವ್ಯಸಂಪಾದನೆಯ ಹೊರತಾಗಿಯೂ ಅನುಭವಿಸಬೇಕಾದ ಆನಂದಮಯವಾದ ಋಷಿಜೀವನವೊಂದಿದೆ ಎಂಬ ತಿಳಿವಳಿಕೆ ಹುಟ್ಟಬೇಕು, ಕೃಷಿಯಲ್ಲದೆ ನಮ್ಮ ಜೀವನಕ್ಕೆ ಬೇರೆ ದಾರಿಯಿಲ್ಲ ಎಂಬ ಅನಿವಾರ್ಯತೆಯುಂಟಾಗಬೇಕು. ಆಗ ಮಾತ್ರ ಕೃಷಿಯ ಸುವರ್ಣದ್ವಾರಗಳು ತೆರೆದುಕೊಳ್ಳುತ್ತವೆಯೆಂದು ನಾನು ಭಾವಿಸುತ್ತೇನೆ. ಈ ದಿಕ್ಕಿನಲ್ಲಿ ನಮಗೆ ಮತ್ತೂರು, ಹೊಸಹಳ್ಳಿ ಗ್ರಾಮಗಳು ಮಾರ್ಗದರ್ಶಿಯಾಗಿವೆ. ಚಿಲ್ಕುಂದ, ಬಸವಾಪಟ್ಟಣ, ಅಗ್ರಹಾರ, ಸೋಮನಹಳ್ಳಿ, ಲಿಂಗದಹಳ್ಳಿ, ಕೇರಳಾಪುರ, ಹಾನಗಲ್ಲು, ಮುಂತಾದ ಗ್ರಾಮಗಳು ಆಶಾಕಿರಣಗಳಾಗಿವೆ. 'ಈ ಸಂಕೇತಿ ಕೃಷಿಯನ್ನು ಸಂರಕ್ಷಿಸಲು ಯುಗಪುರುಷನೊಬ್ಬನು ಹುಟ್ಟಿಬರಬಾರದೇ' ಎಂದು ಕೇಶವಮೂರ್ತಿಗಳು ಹಂಬಲಿಸಿರುವುದು ಎಷ್ಟು ಅರ್ಥಪೂರ್ಣವಾಗಿದೆ! ಅವರು ಈ ಗ್ರಂಥದ ಉಪಸಂಹಾರದಲ್ಲಿ ಈ ಅಳಿವುಉಳಿವಿನ ಪ್ರಶ್ನೆಯನ್ನೇ ಕೈಗೆತ್ತಿಕೊಂಡು ಚಿಂತನಮಂಥನ ನಡೆಸಿರುವುದನ್ನು ತಪ್ಪದೆ ಎಲ್ಲರೂ ಓದಬೇಕಾಗಿದೆ. ಟಿ.ಎನ್. ಸುಬ್ಬರಾವ್, ಪ್ರಣತಾರ್ತಿಹರನ್ ಅವರ ಚಿಂತನೆಗಳೂ ಈ ಸನ್ನಿವೇಶಕ್ಕೆ ಮನನಯೋಗ್ಯವಾಗಿವೆ.

ಕೇಶವ-ಹರನ್ ಭಲೇ ಜೋಡಿ

ಕೃಷಿ ವಿಜ್ಞಾನಿಯಾಗಿ ಕೀರ್ತಿಗಳಿಸಿರುವ, ಕೃಷಿಕಾರ್ಯಗಳಲ್ಲೂ ಅನುಭವ ಪಡೆದಿರುವ ಕೇಶವಮೂರ್ತಿಗಳು ಮೂಡಿಸಿರುವ ಈ ಮಹಾಸಂಪುಟವು ಅವರ ಜ್ಞಾನವಿಜ್ಞಾನಗಳಿಗೆ ಕಿರೀಟವಿಟ್ಟಂತಾಗಿದೆ. ತಮ್ಮ ಪ್ರಶ್ನಾವಳಿಯನ್ನು ಸಂಕೇತಿ ಕೃಷಿಗಷ್ಟೇ ಮಿತಗೊಳಿಸಿಕೊಳ್ಳದೆ, ಅವರ ಅಪರಿಮಿತವಾದ ಬದುಕನ್ನೆಲ್ಲ ಸೆರೆಹಿಡಿಯುವಷ್ಟು ವೈಶಾಲ್ಯಕ್ಕೆ ಬೀಸಿದ್ದಾರೆ. ಸಂಕೇತಿಕೃಷಿಯ ಒಳಹೊರಗುಗಳು, ಸಂಕೇತಿಕೃಷಿಕರ ಜೀವನದ ಒಳಹೊರಗುಗಳು ಎಲ್ಲವೂ ಇಲ್ಲಿ ದಾಖಲಾಗಿವೆ. ಏನನ್ನು ಕೇಳಬೇಕು, ಹೇಗೆ ಕೇಳಬೇಕು ಎಂಬುದನ್ನೆಲ್ಲ ಮೊದಲೇ ಹದವಾಗಿ ನಿರ್ಧರಿಸಿಕೊಂಡು, ತಮ್ಮ ಕ್ಷೇತ್ರಕಾರ್ಯಕ್ಕೆ ಮೆರುಗು ಮೂಡಿಸಿಕೊಂಡಿದ್ದಾರೆ. ತಾವಾಯಿತು, ತಮ್ಮ ಕೆಲಸವಾಯಿತು ಎಂದು ನಿರ್ಲಿಪ್ತರಾಗಿ ಬಾಳುವ ಕೃಷಿಕರನ್ನು ಮಾತಿಗೆಳೆದು, ಅವರಿಂದ ನಮಗೆ ಬೇಕು ಬೇಕಾದುದನ್ನು ಹೆಕ್ಕಿಕೊಳ್ಳುವುದೇನೂ ಸುಲಭದ ಮಾತಲ್ಲ. ಕ್ಷೇತ್ರಕಾರ್ಯವೆಂದರೆ ಅದೊಂದು ಪ್ರತಿಭಾಪೂರ್ಣ ಅನ್ವೇಷಣೆ; ಅದರಲ್ಲಿ ಕೇಶವಮೂರ್ತಿಗಳು ಪರಿಪೂರ್ಣವಾದ ಯಶಸ್ಸು ಸಾಧಿಸಿದ್ದಾರೆ.

ಈ ಕೃತಿಯಲ್ಲಿ ಕೃಷಿಜಗತ್ತಿನ ಸಾರಸರ್ವಸ್ವವೂ ಅಡಕವಾಗಿದೆ. ಇಲ್ಲಿ ಗ್ರಾಮಚರಿತ್ರೆಯ ಪಕ್ಷಿನೋಟವಿದೆ, ಗ್ರಾಮ ಸಂಸ್ಕೃತಿಯ ಸಿಂಹಾವಲೋಕನವಿದೆ, ಗ್ರಾಮನಾಮಗಳ ಚರ್ಚೆಯಿದೆ. ಇಲ್ಲಿ ಜೀವನಚರಿತ್ರೆಯ ಹೂರಣವಿದೆ, ಆತ್ಮಕಥೆಯ ಅಂತರಂಗವಿದೆ. ಇಲ್ಲಿ ಲಲಿತ ಪ್ರಬಂಧದ, ಪ್ರವಾಸ ಕಥನದ ಸಂಘಟನೆಯಿದೆ, ನಾಟಕದಂತೆ ದೃಶ್ಯಾವಳಿಗಳ ಹೊಳಪಿದೆ. ಇದು ಕೇವಲ ಕೃಷಿಶಾಸ್ತ್ರವೂ ಅಲ್ಲ, ಕೇವಲ ಕಾವ್ಯವೂ ಅಲ್ಲ. ಶಾಸ್ತ್ರಕ್ಕೆ ಶಾಸ್ತ್ರವಾಗಿ ಕಾವ್ಯಕ್ಕೆ ಕಾವ್ಯವಾಗಿ, ಉತ್ತಮಗುಣಗಳನ್ನು ಏಕಕಾಲದಲ್ಲಿ ತನ್ನಲ್ಲಿ ಸಮಾವೇಶಗೊಳಿಸಿಕೊಂಡು ಬೆಳಗುತ್ತಿದೆ.

ಈ ಕೃತಿಯು ಕೃಷಿಕರಿಗೆ, ಕೃಷಿ ಪ್ರೇಮಿಗಳಿಗೆ, ಜಾನಪದ ವಿದ್ವಾಂಸರಿಗೆ, ಕೃಷಿಜಿಜ್ಞಾಸುಗಳಿಗೆ, ಕೃಷಿಪದಕೋಶ ನಿರ್ಮಾಪಕರಿಗೆ, ಕೃಷಿವಿಜ್ಞಾನದ ಕಾಲೇಜುವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ, ಅಧ್ಯಾಪಕರಿಗೆ ಸರ್ವಸಮಾನವಾಗಿ ಪ್ರಿಯವಾಗುತ್ತದೆಯೆಂದು ನಾನು ಭಾವಿಸಿದ್ದೇನೆ. ಈ ಕೃತಿಯನ್ನು ಸಂಕೇತಿಗಳು ನಿತ್ಯಪಾರಾಯಣಮಾಡುತ್ತ, ನವರಾತ್ರಿ ಬಂದಾಗ ಪೀಠದ ಮೇಲಿಟ್ಟು ಪೂಜಿಸುವುದಕ್ಕೂ ತಕ್ಕುದಾಗಿದೆ. ಆಹಾ, ಇಂತಹ ಸಚಿತ್ರಸಂಪುಟ ಯಾರಿಗೆ ಬೇಡ !

ಈ ಸಂಪುಟದ ಪ್ರಧಾನಸಂಪಾದಕರಾದ ಪ್ರಣತಾರ್ತಿಹರನ್ ಅವರು ಬಸವಾಪಟ್ಟಣದವರು. ಕೃಷಿಕುಟುಂಬದಿಂದಲೇ ಮೇಲೆ ಬಂದವರು. ಕನ್ನಡ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ ಈಗ ನಿವೃತ್ತರಾಗಿದ್ದಾರೆ. ತಮ್ಮ ಬಾಲ್ಯದ ಹಾಗೂ ಯೌವನದ ದಿನಗಳಲ್ಲಿ ಅಗತೆ ಮಾಡುವುದು, ಕಳೆಕೀಳುವುದು, ನೀರುಹಾಯಿಸುವುದು, ಗಾಡಿಹೊಡೆಯುವುದು, ಗೊಬ್ಬರಹಾಕುವುದು, ತೋಟ ಕಾಯುವುದು, ಹಂಬು ಇಳುಕುವುದು, ಕಣ ಮಾಡುವುದು, ಭತ್ತ ತೂರುವುದು ಮುಂತಾದ ಎಲ್ಲ ಕೃಷಿ ಚಟುವಟಿಕೆಗಳಲ್ಲೂ ನೇರವಾಗಿ ಪಾಲ್ಗೊಂಡಿದ್ದಾರೆ. ಸಂಕೇತಿಗಳು ಮಾಡುತ್ತಿರುವ ಕೃಷಿಕಾರ್ಯವು ಅಧ್ಯಯನಯೋಗ್ಯವಾದುದು ಎಂಬುದನ್ನು ಅವರು ತಮ್ಮ ಒಳಗಣ್ಣಿಂದ ಕಂಡುಕೊಂಡು ಕಾರ್ಯೋನ್ಮುಖರಾಗಿರುವುದು ಪ್ರತ್ಯೇಕವಾಗಿ ಮೆಚ್ಚತಕ್ಕ ಸಂಗತಿಯಾಗಿದೆ. ಆ ಮಹತ್ಕಾರ್ಯಕ್ಕೆ ಕೃಷಿವಿಜ್ಞಾನಿಯೇ ಆಗಿ ಪಳಗಿದವರಾದ, ಆಕಾಶವಾಣಿಯಲ್ಲಿ ಕೃಷಿಕಾರ್ಯಕ್ರಮಗಳನ್ನು ಸಂಯೋಜಿಸಿದವರಾದ ಕೇಶವಮೂರ್ತಿಗಳನ್ನು ನಿಯೋಜಿಸಿ, ತಮ್ಮ ಕನಸನ್ನು ನನಸಾಗಿ ಸಿಕೊಂಡಿದ್ದಾರೆ.

ಪ್ರಣತಾರ್ತಿಹರನ್ ಈವರೆಗೆ ಹಲವು ಸಂಕೇತಿ ಸಂಪುಟಗಳನ್ನು ಸಂಘಟಿಸಿರುವುದರಿಂದ, ಸಂಕೇತಿಗ್ರಾಮಗಳಲ್ಲಿ ಅವರು ಚಿರಪರಿಚಿತರಾಗಿದ್ದಾರೆ. ಕೇಶವಮೂರ್ತಿಯವರೊಡನೆ ತಾವೂ ಅನೇಕ ಗ್ರಾಮಗಳಿಗೆ ಭೇಟಿಕೊಟ್ಟು, ಕ್ಷೇತ್ರಕಾರ್ಯವು ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಿದ್ದಾರೆ. ಪ್ರಣತಾರ್ತಿಹರನ್ ಅವರ ದೂರದೃಷ್ಟಿ, ಸಾಹಸಪ್ರಿಯತೆ, ವಿದ್ವತ್ತು, ಸಾಮಾಜಿಕ ಕಳಕಳಿ, ಲೋಕಹಿತದೃಷ್ಟಿಗಳೆಲ್ಲವೂ ಇಲ್ಲಿ ಸಂಗಮಿಸಿ ಸಾರ್ವಕಾಲಿಕ ಮಹತ್ವದ ಗ್ರಂಥರತ್ನವೊಂದಕ್ಕೆ ತಳಹದಿ ಯಾಗಿದೆಯೆಂಬುದನ್ನು ಮರೆಯದೆ ಹೇಳಬೇಕು. ಸಂಕೇತಿಗಳು ಮಾತ್ರವಲ್ಲ, ಇಡೀ ಕನ್ನಡನಾಡಿನ ಕೃಷಿಕಸಮಾಜವೇ ಇಂತಹ ಸದ್ಗ್ರಂಥಕ್ಕಾಗಿ ಪ್ರಣತಾರ್ತಿಹರನ್ ಅವರನ್ನು ಕೊಂಡಾಡಬೇಕಾಗಿದೆ. ಅವರ ಎಡೆಬಿಡದ ಪ್ರಯತ್ನಶೀಲತೆಯನ್ನೂ, ಕಾರ್ಯತನ್ಮಯತೆಯನ್ನೂ ಭಗೀರಥನಾದರೂ ಸರಿಯೆ 'ಜೈ ಹೋ' ಎಂದು ಘೋಷಿಸಬೇಕಾಗಿದೆ. ಕನ್ನಡನಾಡಿನ ಕೃಷಿಯ ಎಲ್ಲ ಮುಖಗಳನ್ನೂ, ಸಂಕೇತಿಗಳ ನೆಪದಲ್ಲಿ, ಸಾಕ್ಷಾತ್ಕಾರಗೊಳಿಸಿರುವ ಇಂತಹ ಬೇರೊಂದು ವಿಶಾಲಕಾಯ ಸಂಪುಟವನ್ನು ನಾನು ನೋಡಿಲ್ಲ. ಹೋರಿಗಳನ್ನು ನಮ್ಮ ಕೃಷಿಕರು ಜಾತ್ರೆಗಳಲ್ಲಿ ಜೋಡಿಹಾಕುತ್ತಾರಲ್ಲಾ, ಹಾಗೆ ಕೇಶವ-ಹರನ್ ಜೋಡಿಯು ಪರಮೇಶ್ವರನೇ ಈ ಸತ್ಕಾರ್ಯಕ್ಕೆ ಹಾಕಿದ ಜೋಡಿಯಾಗಿದೆ. ಈ ಜೋಡಿಯನ್ನು 'ಭಲೇ ಜೋಡಿ' ಎಂದೇ ಸಾರಿ ಹೇಳಬೇಕಾಗಿದೆ. ಕ್ಷೇತ್ರಕಾರ್ಯದಲ್ಲಿ ಕೇಶವಮೂರ್ತಿಯವರೊಡನೆ ಬಿ.ವಿ. ವೆಂಕಟನಾರಾಯಣರು ಹಲವು ಗ್ರಾಮಗಳಿಗೆ ಭೇಟಿಕೊಟ್ಟು ಸಹಕರಿಸಿರುವುದನ್ನೂ ಮರೆಯುವಂತಿಲ್ಲ.

***

ದೇಶೀಯ ವಿದ್ಯಾಶಾಲೆ ಕಾಲೇಜು
ಶಿವಮೊಗ್ಗ

ಪ್ರೊ. ಎಲ್.ಎಮ್.ಎಲ್. ಶಾಸ್ತ್ರೀ
ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಸಂಕೇತಿ ಕೃಷಿ ಕುರಿತ ಎರಡು ಸಂಪುಟಗಳು ಹೊರಬರುತ್ತಿವೆ ಎಂಬ ವಿಚಾರ ತಿಳಿದಾಗ ನನಗೆ ತುಂಬಾ ಕುತೂಹಲಮೂಡಲಿಲ್ಲ. ಏನು ಮಹಾ ನಮಗೆ ತಿಳಿಯದ ಹೆಚ್ಚಿನ ವಿಚಾರ ಸಿಕ್ಕೀತು ಎಂಬ ಭಾವವಿತ್ತು. ಆದರೆ ಈಗ ಈ ಸಂಪುಟ ನೋಡಿದ ಮೇಲೆ ಇದು ನಿಜವಾಗಿಯೂ ಅದ್ಭುತ ಎನಿಸಿದೆ. ಎಲ್ಲ ಜನಾಂಗದ ರೈತಾಪಿ ಜನಗಳೂ ಓದಲೇಬೇಕಾದ ಕೃತಿಯಾಗಿದೆ. ರೈತರಿಗೆ ಮಾರ್ಗದರ್ಶಕ ಕೃತಿಯೂ ಆಗಿದೆ. ಸಂಕೇತಿ ಲೇಬಲ್ ತೆಗೆದು ಲೋಕಸಾಧಾರಣಗೊಳಿಸಿ ಕರ್ನಾಟಕದ ಯಾವುದಾದರೂ ವಿಶ್ವವಿದ್ಯಾಲಯವು ಬೃಹತ್ಪ್ರಮಾಣದಲ್ಲಿ ಪ್ರಕಟಿಸುವಂತಾಗಲೆಂದು ಆಶಿಸುತ್ತೇನೆ.

ವ್ಯಕ್ತಿಗಳ ಸಂದರ್ಶನ, ಅನುಭವಗಳ ದಾಖಲಾತಿ ತುಂಬಾ ಕಷ್ಟಸಾಧ್ಯವಾದ ಕೆಲಸ. ಅದೂ ನೂರಾರು ಊರುಗಳಿಗೆ ಹೋಗಿ ವಿಷಯ ಸಂಗ್ರಹಿಸುವ ಕಾರ್ಯವು ಒಂದೆರಡು ತಿಂಗಳುಗಳಲ್ಲಿ ಆಗುವ ಕೆಲಸವೂ ಅಲ್ಲ. ಅದೂ ಸ್ವಾರ್ಥರಹಿತವಾದ ಕೆಲಸ. ಇದಕ್ಕೆ ಕಮಿಟ್‌ಮೆಂಟ್ ಬೇಕು. ಇಂಥ ಕೆಲಸ ಪರಿಪೂರ್ಣವಾಗಿ ಇಲ್ಲಿ ಸಾಧ್ಯವಾಗಿದೆ. ಮೊದಲ ಪುಟದಲ್ಲಿ ಹಾಕಿಕೊಂಡ "ಈ ಕಲೆ ಹೇಗೆ ಅವರಿಗೆ ಬಂತು? ಕೃಷಿಯಲ್ಲಿ ಹೊಸದೇನಾದ್ರೂ ಇದೆಯೇ? ಕ್ಷಾತ್ರತೇಜದ ಆಜಾನುಬಾಹುತ್ವ ಮುಂದಿನ ಪೀಳಿಗೆಗೆ ನಶಿಸಿದ್ದು ಹೇಗೆ" ಇತ್ಯಾದಿ ಪ್ರಶ್ನೆಗಳಿಗೆ ಮುಂದಿನ ಪುಟಗಳಲ್ಲಿ ಸೂಕ್ತ ಉತ್ತರ ದೊರೆತಿದೆ. ತಾಂತ್ರಿಕತೆಗಿಂತ 'ಕೃಷಿಯು ಬದುಕಿಗೆ ಅಂಗ' ಎಂಬ ಹಿನ್ನೆಲೆಯಲ್ಲಿ ಸಂದರ್ಶನ ನಡೆದಿದೆ. ಇದು ಸರಿಯಾಗಿದೆ. ತಾಂತ್ರಿಕತೆಯ ಹಿನ್ನೆಲೆಯಲ್ಲಿ ದಾಖಲಾತಿ ಆಗಬೇಕಾದರೆ ಅಗ್ರಿಕಲ್ಚರಲ್ ಕಾಲೇಜಿನ ಪ್ರಾಧ್ಯಾಪಕರನ್ನು ಸಂದರ್ಶಿಸಿದರೆ ಸಾಕಲ್ಲವೆ? ಬದುಕಿಗೆ ಅಂಗ ಎಂಬ ಹಿನ್ನೆಲೆಯಲ್ಲಿ ಸಂದರ್ಶನವಾಗಿರುವುದರಿಂದ ನಮ್ಮ ಜನಾಂಗದ ಅಧ್ಯಯನಕ್ಕೆ ಪೂರಕವಾಗಿದೆ.

ಪ್ರಧಾನವಾಗಿ ಐದಂಶಗಳನ್ನು ನಾವಿಲ್ಲಿ ಗಮನಿಸಬಹುದು: ೧. ಸಂಕೇತಿಗಳ ಕೃಷಿ, ೨. ಗ್ರಾಮೀಣ ಸಂಕೇತಿ ಜನಾಂಗದ ಬದುಕು, ೩. ಸಂಕೇತಿ ಜನಾಂಗದ ಶಕ್ತಿ-ಸಾಮರ್ಥ್ಯ, ನಿಷ್ಠೆ, ೪. ಕೃಷಿಯಲ್ಲಿ ಪ್ರಯೋಗಶೀಲತೆ-ಹೊಸತನ, ೫. ಆದರ್ಶ. ಜೊತೆಗೆ ನಾನು ನಿಮ್ಮ ಗಮನ ಸೆಳೆಯುವ ಅಂಶಗಳು: ಕೃಷಿಕರ ಅನುಭವಗಳು, ಮೆಲುಕು ಹಾಕುವಂಥ ಘಟನೆಗಳು, ವಿಶಿಷ್ಟ ಹಳ್ಳಿಗಳು, ಸಂಕೇತಿತನ, ಸಂಗೀತ/ವೇದ. ಕೃಷಿ, ಆದರ್ಶ ಮತ್ತು ಸ್ವ-ಅನುಭವಗಳನ್ನು ಕುರಿತು ದಾಖಲಾದ ಕೆಲವು ಮಾತುಗಳ ಕಡೆ ನಿಮ್ಮ ಗಮನ ತರಲಾಶಿಸುತ್ತೇನೆ.

'ಕೃಷಿಯ ಚಿತ್ರಗಳು' ಅಂತ ಈ ಪುಸ್ತಕ ನೋಡಲು ತೆಗೆದೆ. ಪ್ರಧಾನವಾಗಿ ನಾನು ಕಂಡದ್ದು ಕೃಷಿಕರ ಚಿತ್ರಗಳು. ಈ ಹೊತ್ತಿಗೆಗೆ 'ಕೃಷಿ ಕಥಾಕೋಶ' ಅಂತ ಹೆಸರಿಡಬಹುದಿತ್ತು. ಅಷ್ಟು ಬದುಕಿನ ಕಥೆಗಳು ಇಲ್ಲಿವೆ. ಒಳಹೊಕ್ಕಾಗ ಕಾಣಿಸಿದ್ದು ಇಡೀ ಸಂಕೇತಿ ಸಮುದಾಯದ ಹಾಗೂ ಸಂಕೇತಿಗಳ ಗ್ರಾಮೀಣ ಬದುಕಿನ ರೋಚಕ ವಿವರಗಳು. ಸಂಕೇತಿ ಜನಾಂಗವೇ ನನ್ನ ಕುಟುಂಬ ಎಂಬ ಭಾವದಿಂದ ಓದಿದರೆ ಸಂಕೇತಿಗಳ ಹಿರಿಯರ ಹಿರಿತನದ ಪರಿಚಯದಿಂದ ರೋಮಾಂಚನವಾಗದೆ ಇರದು. ಸಂಕೇತಿ ಬದುಕನ್ನು ಅಂಗೈ ಹಿಡಿಯಲ್ಲಿ ಅಡಗಿಸಿಕೊಟ್ಟಿರುವ ಸಮುದಾಯ ಅಧ್ಯಯನ ಕೇಂದ್ರದವರಿಗೆ ಎಷ್ಟು ವಂದನೆ ಸಲ್ಲಿಸಿದರೂ ಕಡಿಮೆಯೇ.

ಇಲ್ಲಿನ ಅಧ್ಯಯನ ಒಂದು ಗಾಬರಿಯ ಅಂಶವನ್ನು ಸೂಚಿಸುತ್ತಿದೆ. ಅದು 'ಸಂಕೇತಿ ಗ್ರಾಮಗಳು ಮಾಯವಾಗುವ ದಿನಗಳು ಹತ್ತಿರ ಬರುತ್ತಿವೆ' ಎಂಬುದು. ಉದಾಹರಣೆಗೆ: ಹಾನಗಲ್ಲಿನಲ್ಲಿ ೬೦ ಕುಟುಂಬಗಳಿದ್ದುದು ೧೬ಕ್ಕೆ ಬಂದಿದೆ. ಕೌಶಿಕದಲ್ಲಿ ೭೦೦ ಕುಟುಂಬಗಳಿದ್ದುದು ೧೬ಕ್ಕೆ ಬಂದಿದೆ. ತೇಗನಹಳ್ಳಿ: ೧೦>೬; ಬೆಟ್ಟದಪುರ: ೭೫>೭; ಹಳ್ಳಿ ಮೈಸೂರು: ೪೫>೮; ಜೋಡಿ ಕೃಷ್ಣಾಪುರ : ೩೩>(೩+೩)=೬; ದೊಡ್ಡಹನಸೋಗೆ : ೬೦>೨; ಬಸವಾನಿ: ೨೦>೨;

ಬೆಟ್ಟದಪುರದಲ್ಲಿ ೩೦೦ ಇದ್ದದ್ದು ೭೦ ಆಗಿ ಈಗ ಬೆರಳೆಣಿಕೆಯಷ್ಟು ಮಾತ್ರ. [ಮತ್ತೂರಿನಲ್ಲಿ ಮಾತ್ರ ಏರಿಕೆಯಾಗಿದೆ. ಹೊರಗಡೆ ಕೆಲಸದಲ್ಲಿರುವವರು ಕೂಡ ವಿ.ಆರ್.ಎಸ್. ಪಡೆದು ಮತ್ತೂರಿಗೆ ಹಿಂತಿರುಗಲು ಆಶಿಸುತ್ತಿದ್ದಾರೆ ! ೪೦ ಕುಟುಂಬಗಳಿದ್ದುದು ಎಂಬತ್ತಾಗಿದೆ.]

ಎಲ್ಲ ಸಂಕೇತಿಗಳು ಈ ಪುಸ್ತಕ ಪೂರ್ತ ಓದಬೇಕು. ಎಲ್ಲ ಮನೆಗಳಲ್ಲಿ ಈ ಪುಸ್ತಕ ಇರಲೇಬೇಕು. (ಯೋಗ್ಯತೆ ಇರುವವರು ಸದಸ್ಯರಾಗಿ ಪುಸ್ತಕ ಸಂಗ್ರಹಿಸಬೇಕು.) ಇಡೀ ಕೃತಿಯಲ್ಲಿ ತಿಲಕಪ್ರಾಯವೂ ಭೂಷಣವೂ ಆದ ಭಾಗ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳೊಡನೆ ನಡೆಸಿದ ಸಂಭಾಷಣೆ. ಸಾಮಾಜಿಕ ಹಾಗೂ ಧಾರ್ಮಿಕ ಸಂಗತಿಗಳು ಸಂಕ್ಷಿಪ್ತವೂ ಮೇಲ್ಮಟ್ಟದ್ದಾಗಿಯೂ ಇವೆ. ನನಗೆ ಹೆಚ್ಚು ಖುಷಿಕೊಟ್ಟ ಸಂವಾದ (ಬದುಕಿನ ಅನುಭವಗಳ ಚಿತ್ರ) ಕ್ಯಾಪ್ಟನ್ ವೆಂಕಟೇಶ್ ಮತ್ತು ವೀಣಾರೊಂದಿಗೆ ಮತ್ತು ಗಮನಾರ್ಹವಾದ ಮೂರನೆಯ ಸಂವಾದ ಬಿ.ಎನ್.ವಿ. ಅವರೊಡನೆ. ಅಲ್ಲದೆ ಓದಲೇಬೇಕಾದ ಭಾಗ - ಈ ಕೃತಿಗೆ ಪೂರಕವಾಗಿರುವ ಉಪಸಂಹಾರದ ಪುಟಗಳು.

ಸಂಕೇತಿ ಜನಾಂಗದ ವಿಶಿಷ್ಟ ಹಳ್ಳಿಗಳೊಂದೆರಡನ್ನು ಮೊದಲಿಗೆ ಸ್ಮರಿಸುತ್ತೇನೆ. ಮೊದಲಿಗೆ ಹಳ್ಳಿಮೈಸೂರು, ನಂತರ ಸಾಲಿಗ್ರಾಮ, ಮೂರನೆಯದು ಮತ್ತೂರು. ನನಗೆ ಹೆಚ್ಚು ಖುಷಿಕೊಟ್ಟ ಸ್ಮರಣೀಯ ವ್ಯಕ್ತಿಗಳು ಕ್ಯಾಪ್ಟನ್ ವೆಂಕಟೇಶ್ ಮತ್ತು ಅವರ ಪತ್ನಿ ವೀಣಾ ಹಾಗೂ ಬೆಂಗಳೂರಿನ ಡಾ. ರಾಮಕೃಷ್ಣ.

ಭೂಮಿ ಹಸನುಮಾಡಿ, ನೀರಿಗಾಗಿ ಭಾವಿತೋಡಿ, ನೀರು ಹೊತ್ತು ಹಾಕಿ, ಏತ ಹೊಡೆದು, ತೋಟ ಬೆಳೆಸಿ, ಹಂಬು ಹಾಕಿ, ಸಾಕಿ, ಮಾರಿ - ಇತ್ಯಾದಿ ಕಷ್ಟದ ಬದುಕು ಎಲ್ಲರದಾದ್ದರಿಂದ ಓದುತ್ತ ಓದುತ್ತ ಇದೆಲ್ಲ ಏನು ಮಹಾ ಸಾಧಾರಣ ಸಂಗತಿ ಅನ್ನಿಸುತ್ತೆ. ಇಡೀ ಸಂಕೇತಿ ಜನಾಂಗದ ಸರ್ವೇಸಾಧಾರಣ ಅನುಭವಗಳಿವು. ಆದರೆ ಅನುಭವಿಸಿದವರಿಗೆ ಗೊತ್ತು ಅದರ ಕಷ್ಟ. ಸರಿಯಾಗಿ ಅನ್ನಾಹಾರವಿಲ್ಲದ, ಗೋಳಿನ, ಕಷ್ಟದ, ಬಡತನದ ಬದುಕಿನ ಹಿನ್ನೆಲೆಯ ಗಟ್ಟಿತನ ವಿಸ್ಮಯಕರವಾದದ್ದು. ಅಂದು ದೈಹಿಕ ಶ್ರಮ ಜಾಸ್ತಿ ಇತ್ತು. ಪ್ರತಿಫಲ ಕಡಿಮೆ ಇತ್ತು. ಇಂದು ಬಾಗಾಯ್ತು ಪ್ರಮಾಣ ಜಾಸ್ತಿ. Drip Irrigation ಹಾಗೂ ಕೃತಕ ಗೊಬ್ಬರಗಳ ಬಳಕೆಯುಂಟು. ಇಳುವರಿ ಹೆಚ್ಚು. ಆದಾಯ ಪ್ರಮಾಣ (ಬೆಳೆ) ಜಾಸ್ತಿ. ಜೊತೆಗೆ Commercial cropಗಳೂ ಉಂಟು.

ವ್ಯವಸಾಯ ಯಾವದಡ್ಡನೂ ಮಾಡಬಹುದಾದ ಕೆಲಸ ಎಂದು ಬೀರೂರಿನ ಶಿವರಾಮಶಾಸ್ತ್ರಿ ಹೇಳುತ್ತಾರೆ. ಅದು ಸರಿಯಲ್ಲ. ಅವರನ್ನು ನಾನು ೬೦ ವರ್ಷದಿಂದ ಬಲ್ಲೆ. ವಿದ್ಯಾವಂತರು, ಚಿಂತನೆಯುಳ್ಳವರು, ಶ್ರಮಜೀವಿ, ಕಮಿಟ್ ಮೆಂಟ್ ಇರುವ ವ್ಯಕ್ತಿ, ಬದುಕನ್ನೇ ದ್ವಿತೀಯವನ್ನಾಗಿ ತಿಳಿದವರು, ಕಡುಬಡತನ ಕಂಡವರು. ಇಂದು ಅವರ ಮಕ್ಕಳು ಶ್ರೀಮಂತ ಪುತ್ರರು ! Inherited ಆಗಿರುವ ಅವರ ಸತ್ವ ಅವರಿಗರಿವಿಲ್ಲ, ಅಷ್ಟೆ.

ಕೃಷ್ಣಸ್ವಾಮಿ ಶಿವಮೊಗ್ಗೆಯ ಡಿ.ವಿ.ಎಸ್. ಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ಎಂಟು ಕಿ.ಮೀ. ದೂರದ ಹೊಸಹಳ್ಳಿಯಲ್ಲಿ ಮನೆಮಾಡಿ ಓಡಾಡಿಕೊಂಡಿದ್ದೇ ಕೃಷಿ ಮಾಡಿದವರು. ಸಂಬಳ ಸಾಲದೆಂದು ಈ ಜಮೀನಿನ ಕೆಲಸ. ತೋಟ ಬೆಳೆಸಿ ಬಡತನವನ್ನು ಪೂರ್ಣ ನೀಗಿಕೊಂಡ ಸಾಹಸಿ, ಮತ್ತೂರು ಹೊಸಹಳ್ಳಿಗಳ ನಡುವೆ ಸಂಪರ್ಕ ಸೇತುವೆಯೊಂದನ್ನು ಕಟ್ಟಿಸಿದ ಪುಣ್ಯಜೀವಿ. ಶ್ರಮ, ನಿಷ್ಠೆ ಇದ್ದರೆ ಏನೂ ಸಾಧಿಸಬಹುದೆಂದು ತೋರಿಸಿದ ಸಾಧಕ. ಇಂಥ ವ್ಯಕ್ತಿತ್ವಕ್ಕೆ ಅಪವಾದಗಳೂ ಈ ಊರಲ್ಲುಂಟು. ಸಂಕೇತಿಗಳು ದೈಹಿಕ ಶ್ರಮಕ್ಕೆ ಸಂಕೇತಗಳಲ್ಲ ಎಂಬ ರಾಜಾರಾಮಮೂರ್ತಿಯವರ ಮಾತು ಬದಲಾದ ಇಂದಿನ ಜನಾಂಗದ ಮನೋಭಾವವನ್ನು ಕುರಿತದ್ದೆನ್ನಬಹುದಷ್ಟೆ.

ಕೃಷಿಯಲ್ಲಿ ಸಂಕೇತಿ ಕೃಷಿ ಅಂತ ಪ್ರತ್ಯೇಕ ಮಾಡಲು ಬರುವುದಿಲ್ಲ. ಆದರೆ ಸಂಕೇತಿಗಳ ಕೃಷಿ ಅಂತ ಬೇರೆಮಾಡಲು

ಬರುತ್ತದೆ. ಯಾಕೆಂದರೆ ಅವರು ಏನು ಮಾಡಿದರೂ ಒಂದು ವಿಶಿಷ್ಟತೆ ಇದ್ದೇ ಇರುತ್ತೆ. ಅದ್ಭುತ ಇರುತ್ತೆ. ಅಂಥ ಕೆಲವು ಸಾಹಸಗಳನ್ನು ಮೆಲುಕು ಹಾಕುತ್ತೇನೆ. ವೇದವಿದ್ವಾಂಸರಾದ ಎಲ್.ವಿ. ಕೃಷ್ಣಮೂರ್ತಿಗಳು ಲಿಂಗದಹಳ್ಳಿಯಿಂದ ಹೊಸಹಳ್ಳಿಗೆ ಬಂದು ಕಾಡು ಕಡಿದು ಗದ್ದೆ ಮಾಡಿದ್ದು, ಲಿಂಗದಹಳ್ಳಿಯ ಸುಬ್ಬರಾಯರು ಕೆಮ್ಮಣ್ಣುಗುಂಡಿ ಸಮೀಪ ಕಾಡು ಕಡಿದು ಹಣ್ಣಿನ ತೋಟ ಮಾಡಿದ್ದು ಸಾಹಸಗಾಥೆ. ಹೊಸದಾಗಿ ಕಾಫಿ ತೋಟ ಮಾಡುವುದು ಬಹಳ ಕಷ್ಟದ ಕೆಲಸ. ಮಡಕೇರಿಯ ಕೆ.ಕೆ. ವಿಶ್ವನಾಥ್ ಹಾಗೆ ತೋಟ ಮಾಡಿದ್ದಲ್ಲದೆ ಜೊತೆಗೆ ನಾಲ್ಕಾರು ಎಸ್ಟೇಟ್‌ಗಳ ಮೇಲ್ವಿಚಾರಣೆಯನ್ನೂ ಮಾಡಿದ್ದಾರೆ. ಅಲ್ಲದೆ ಹೆಚ್ಚು ಸಂಖ್ಯೆಯಲ್ಲಿ ಹೂವಿನ ಬೆಳೆ ಬೆಳೆದಿದ್ದಾರೆ.

* * * * *

ಮೈಸೂರಿನ ಕ್ಯಾಪ್ಟನ್ ಕೆ.ಕೆ. ವೆಂಕಟೇಶ ಅವರು ನಿರಂತರ ಸಮುದ್ರಯಾನ ಮಾಡುತ್ತ ೭೮ ದೇಶಗಳ ದರ್ಶನಮಾಡಿರುವುದು, ಹಾಗೂ ಹತ್ತಾರು ವಿದೇಶಿ ಭಾಷೆ ಕಲಿತಿರುವುದು, ವೀಣಾ ವೆಂಕಟೇಶ್ ಪತಿಯ ಎಂಟು ತಿಂಗಳ ಅನುಪಸ್ಥಿತಿಯಲ್ಲಿ ತೋಟದ ನಿರ್ವಹಣೆ ಮಾಡಿದ್ದಲ್ಲದೆ ೬೦೦ ಕೆ.ಜಿ. ಟೀ ಬರ್ತಿದ್ದನ್ನ ೨೪,೦೦೦ ಕೆ.ಜಿ. ಬರುವಂತೆ ಅಭಿವೃದ್ಧಿಮಾಡಿದ್ದು ಅಸಾಧಾರಣ ಸಂಗತಿ. ಮೂರು ಮಿಲಿಯ ಟನ್ ಟೀ ಕಲಬೆರಕೆ ಅಂತ ರಷ್ಯಾದಿಂದ ವಾಪಸ್ ಬಂದದ್ದು. ಇದರಿಂದ ಭಾರತದ ಟೀ ಬೆಳೆಗಾರರ ಸರ್ವನಾಶವಾಯಿತಂತೆ. ಬೆಂಗಳೂರಿನ ಡಾ. ಬಿ.ಆರ್. ರಾಮಕೃಷ್ಣ ಅವರು ೩/೪ ಎಕರೆ ಜಮೀನು ಕೊಂಡು ತೇಗದ ತೋಟ ಬೆಳೆಸಿ ಬೆಂಗಳೂರಿನಲ್ಲಿದ್ದೇ ನಿರ್ವಹಿಸಿದ್ದು ಸಾಹಸ. ಫಲ ೨೦ ವರ್ಷಕ್ಕೆ. ಖರ್ಚು ಪ್ರತಿ ವರ್ಷ ೩೬೦೦೦/-. ನಿರೀಕ್ಷೆ ೨೦,೦೦೦ ಘನ ಅಡಿ ಮರ x ೨೦೦೦ = ಒಟ್ಟು ಲಾಭ ೪ ಕೋಟಿ. ಆರ್.ಡಿ. ಮಾಡಿದರೆ ಬರಬಹುದಾದ ಹಣ ೧೨ ಲಕ್ಷ ಮಾತ್ರ. ಅವರು ಬೆಂಗಳೂರಿನಲ್ಲಿ ಔಷಧಿ ಸಸ್ಯಗಳಿಗಾಗಿ ಚಿಕ್ಕ ತೋಟ ಮಾಡಿದ್ದಾರೆ. - ೮೦೦ ನುಗ್ಗೆ, ಚೆರ್‍ರಿ, ಮಾವು, ನೇರಳೆ, ಚಕ್ಕೋತ, ಮೂಸಂಬಿ, ಹೇರಳೆಕಾಯಿ, ಸೀಬೆ, ದಾಳಿಂಬೆ, ಗೋಡಂಬಿ, ಅಂಜೂರ ಹಾಗೂ ಬಾಳೆಗಿಡಗಳು ! ವೊಸಳೆಗ್ರಾಮದ ಎಂ.ಎನ್. ಶ್ರೀನಿವಾಸಮೂರ್ತಿ ಅವರು ಬೋರೇಲಿ ಜಮೀನು ಮಾಡಿದ್ದು, ೨೦ ಹಸು ಸಾಕಿದ್ದು outstanding merit ಅನ್ನಿಸುತ್ತೆ. ಹನಸೋಗೆಯ ರಾಮಸ್ವಾಮಿಯವರನ್ನು ಬದನೆಕಾಯಿ ವಂಶಸ್ಥರು ಎಂದು ಕರೆಯುತ್ತಾರೆ. ಇದು ಹೆಮ್ಮೆಯ ಸಂಗತಿ. ಬದನೆಕಾಯಿ ಗಾತ್ರ ನೋಡಿ [ಅಡ್ಡೆಗೆ ಎರಡು ಮಾತ್ರ] ವಿಸ್ಮಿತರಾದ ಕೃಷ್ಣರಾಜ ಒಡೆಯರು ತಾವೇ ಅವರ ತೋಟಕ್ಕೆ ಬಂದು ಇವರಜ್ಜ ಚಿಕ್ಕರಾಮಸ್ವಾಮಯ್ಯನವರಿಗೆ ಶಾಲು ಹೊದಿಸಿ ಸನ್ಮಾನಿಸಿದರಂತೆ ! ಕೆರೆ ಕೆಳಗಿನ ೨೨ ಎಕರೆ ಜಮೀನು ದಾನಕೊಟ್ಟರಂತೆ. ಮತ್ತೂರಿನ ಕೆ.ಕೆ. ಸುಬ್ರಾಯ ಶಾಸ್ತ್ರಿ ಬರಿಗೈಲಿ ಈ ಊರಿಗೆ ಬಂದವರು. ಈಗ ಸಾಕಷ್ಟಿದೆ. ಬೇರೆಯವರಿಗಾಗಿ ೭೦ ಎಕರೆ ತೋಟ ಎಬ್ಬಿಸಿಕೊಟ್ಟಿದ್ದಾರಂತೆ !

ಗಮನಾರ್ಹ ಸಂಗತಿಗಳು ಮತ್ತು ವೈಜ್ಞಾನಿಕ ಬೇಸಾಯ: ಹೊಸಹಳ್ಳಿಯ ಎಲ್.ವಿ. ಸುಬ್ರಹ್ಮಣ್ಯ ಅವರು PWDನಲ್ಲಿ ಎಗ್ಸಿಕ್ಯೂಟಿವ್ ಇಂಜನಿಯರ್ ಆಗಿದ್ದು ಲಂಚದ ರಾಜಕೀಯಕ್ಕೆ ಬೇಸತ್ತು VRS ತಗೊಂಡು ಗದ್ದೆ ಮಾಡಿದವರು. ಈಗ ಮಗ ಮುರಳೀಧರ ನೋಡಿಕೊಳ್ಳುತ್ತಿದ್ದಾರೆ. ೧) ಹಳ್ಳಿಗರ ನೀರಾವರಿ ತೊಂದರೆ ನಿವಾರಣೆಗೆ ಕೋರ್ಟ್‌ನ ಸಹಾಯ ಪಡೆದವರು. ೨) ತೆಂಗಿನ ಮರಕ್ಕೆ ರೈನೋಸಿರಸ್ ದುಂಬಿಯ ಹತೋಟಿಗಾಗಿ ತೋಟಕ್ಕೆ ಟ್ಯೂಬ್‌ಲೈಟ್ ಹಾಕಿಸಿದವರು. ೩) ಒಂದು ಸಾರಿ ಗೊಬ್ಬರಕೊಡುವ ರೂಢಿ. ಅದನ್ನೇ ಸ್ಪ್ಲಿಟ್ ಮಾಡಿ ಎರಡು ಸಾರಿ ಕೊಡುವರು. ೪) ಗದ್ದೆಯಲ್ಲಿ ಸೋದರರ ಮೂರು ಮನೆಗಳಿರುವುದರಿಂದ ದರೋಡೆಕಾರರಿಂದ ರಕ್ಷಣೆಗಾಗಿ ಮೂರೂ ಮನೆಗೆ ಕಾಲಿಂಗ್ ವ್ಯವಸ್ಥೆ ಮಾಡಿರುವುದು. ಉತ್ತಮ ದರ್ಜೆಯ ಬಂದೂಕ ಸಹ ಇದೆ. ೫) ಓಪನ್ ಭಾವಿಗೆ ಹ್ಯಾಂಡ್‌ಪಂಪ್. ಇದರಿಂದ ಕೊಟ್ಟಿಗೆಗೆ ಮನೆಗೆ ಹಸುಗಳಿಗೆ ಪೈಪ್ ಮೂಲಕ ನೀರಿನ ವ್ಯವಸ್ಥೆ.

ಮತ್ತೂರಿನ ಗೋಪಾಲ ಅವಧಾನಿಯವರ ಸಾಹಸ ಗಮನಿಸಿ, ತಮ್ಮ ಟೈರ್ ಗಾಡಿಯ ಅಚ್ಚನ್ನು ಮಧ್ಯದಲ್ಲಿ ಡೊಂಕು ಮಾಡಿ ಸ್ವಲ್ಪ ಎತ್ತರವಾಗುವಂತೆ ಮಾಡಿಕೊಂಡಿದ್ದಾರೆ. ಜೊತೆಗೆ ಬೋರಿಂಗ್ ವ್ಯವಸ್ಥೆ ಇದ್ದುದರಿಂದ ಬೇರೆಯವರದಕ್ಕಿಂತ ನಾಲ್ಕುಪಟ್ಟು ಹೆಚ್ಚು ಭಾರ ಎಳೆಯಲು ಸಾಧ್ಯವಾಗಿದೆ. ಇವರಂತು ಇಂಜನಿಯರ್. ಆದರೆ ಇವರ ತಂದೆ ಇಂಜನಿಯರಿಂಗ್ ಮೈಂಡ್ ಇದ್ದವರಂತೆ. ಅಡಿಕೆ ಸುಲಿಯಲು ಯಂತ್ರ ಕಂಡುಹಿಡಿಯಲು ಯತ್ನಿಸಿ ವಿಫಲರಾದರು. ಆದರೆ ಹೋಳುಮಾಡುವ ಸಾಧನ ಕಂಡುಹಿಡಿದರು. ತುಂಬಾ ಒಳ್ಳೆಯದಾಯಿತು ಎಂದು ಸ್ಮರಿಸುತ್ತಾರೆ ಎಮ್.ಎನ್.ಗೋಪಾಲ ಅವಧಾನಿ. ಅವರು ಮೊದಲಿಗೆ ಟ್ರಾಕ್ಟರ್ ತಂದ ಮೇಲೆ ಇಡೀ ಊರಿನ ಉತ್ಪನ್ನ ಒಂದಕ್ಕೆರಡಾಯಿತಂತೆ. ಅಡಿಕೆ ಬೇಯಿಸುವ ಹಂಡೆ-ಒಲೆಯನ್ನು ರೂಪಿಸಿದ್ದಾರೆ, ಇದರಿಂದ ಬೇಯುವ ಕಾಲ ೨/೩ರಷ್ಟು ಕಡಿಮೆಯಾಗಿದೆ !

ಮಂಡಕ್ಕಿಯನ್ನು ಕಡಲೆ ಹೊಲದಲ್ಲಿ ಚೆಲ್ಲಿದರೆ ಅದರ ಆಸೆಗೆ ಬಂದ ಹಕ್ಕಿಗಳು ಕೀಟವನ್ನೂ ತಿಂದು ಕಡಲೆಗೆ ರಕ್ಷಣೆ ಕೊಡುತ್ತವೆ ಎನ್ನುತ್ತಾರೆ ಲಿಂಗದಹಳ್ಳಿಯ ನಾಗರಾಜ್ ಅವರು.

ಸಂಕೇತಿತನದ ಕೆಲ ಗೌರವದ ಸಂಗತಿಗಳನ್ನು ಮೆಲುಕುತ್ತೇನೆ. ಹಿಂದಿನ ತಲೆಮಾರಿನವರ ಕ್ಷಾತ್ರತೇಜ ಈಗೆಲ್ಲಿ? ಇದರ ಸಂಕೇತವಾಗಿ ಗೆಜ್ಜಗನಹಳ್ಳಿಯ ಮನೆಯಲ್ಲಿ ಕತ್ತಿ ಪಿತ್ರಾರ್ಜಿತವಾಗಿ ಬಂದಿದೆ. ಲಿಂಗದಹಳ್ಳಿಯ ನನ್ನ ತಾಯಿ ಮನೆಯಲ್ಲಿ ನಾಲ್ಕು ಕತ್ತಿಗಳು ಹಿಂದಿನಿಂದ ಬಂದಿದ್ದು ನವರಾತ್ರಿಯಲ್ಲಿ ಇತ್ತೀಚಿನವರೆಗೂ ಆಯುಧಪೂಜೆ ನಡೆಯುತ್ತಿತ್ತು.

ಕುಪ್ಪಹಳ್ಳಿಯ ವೆಂಕಟರಮಣಯ್ಯ ಸ್ಮರಿಸುತ್ತಾರೆ. ೫೦ ಸಾಲುಮರಗಳನ್ನು ನೆಡಿಸಿದ್ದು ಇಲ್ಲಿ ಮಾತ್ರ ! ಹಾಗೆಯೇ ನಾವು ಸ್ಮರಿಸಬೇಕಾದ ಇನ್ನೊಂದು ಹೆಸರು ೨೫೦-೩೦೦ ಸಾಲುಮರ ಬೆಳೆಸಿದ ಕೆ.ಆರ್. ನಗರದ ಶೀಗವಾಳು ಶಿವರಾಮಯ್ಯ ಅವರು. ಇವರ ಸಾಧನೆ ಸಾಲುಮರದ ತಿಮ್ಮಕ್ಕನದಕ್ಕಿಂತ ಕಡಿಮೆಯಾದ್ದಲ್ಲ.

* * * * *

ವ್ಯವಸಾಯದ ಜೊತೆ ವೇದಾಭ್ಯಾಸ ನಮ್ಮ ಕಾಲದ ರೂಢಿ ಎಂದು ಸ್ಮರಿಸುತ್ತಾರೆ ಬೆಟ್ಟದಪುರದ ೮೧ರ ವೃದ್ಧ ಕೃಷ್ಣಾವಧಾನಿಗಳು. ಇಲ್ಲಿನ ಪ್ರಭಾಶಂಕರ ಅವರೂ ಈ ಮಾತನ್ನು ಸ್ಮರಿಸುತ್ತಾರೆ. "ಒಟ್ಟಾಗಿ ತೋಟದಲ್ಲಿ ವೇದ ಕಲಿಯುತ್ತಿದ್ದೆವು ಮತ್ತು ಸಂಜೆಯಲ್ಲಿ ದೇವಾಲಯದಲ್ಲಿ ಕೂಡ ಒಟ್ಟಾಗಿ ಸಂಗೀತ ಕಲಿಯುತ್ತಿದ್ದೆವು." ವೇದ, ಸಂಸ್ಕೃತ ಮತ್ತು ಕೃಷಿಯ ಬಗೆಗೆ ಚಿಕ್ಕ ವಯಸ್ಸಿನಿಂದ ಆಸಕ್ತಿ ಬೆಳೆಸುತ್ತೇವೆ, ಕಲಿಸುತ್ತೇವೆ ಎನ್ನುತ್ತಾರೆ ಮತ್ತೂರಿನ ಎನ್.ಕೆ. ಚನ್ನಕೇಶವಯ್ಯ.

ನಮ್ಮ ಮೂಲ ಕಸುಬು ಕೃಷಿ, ಪೂರಕ ಕಲಿಕೆ ವೇದ ಮತ್ತು ಸಂಗೀತ. ಈ ಮೂರು ಸಂಕೇತಿಗಳ ಲಾಂಛನ ಎನ್ನುತ್ತಾರೆ - ಮತ್ತೂರಿನ ಅಶ್ವತ್ಥ ಅವಧಾನಿ. ಕೃಷಿ ಅಂದರೆ ತೋಟ ಮಾತ್ರ. ಉಳುಮೆ ಬ್ರಾಹ್ಮಣನಿಗೆ ನಿಷಿದ್ಧ ಎಂದೂ ಅವರು ಹೇಳುತ್ತಾರೆ. ವ್ಯವಸಾಯದ ಏಕತಾನತೆಯ ಬೇಸರ ಕಳೆಯಲು ಮಂತ್ರ ಕಲೀತೇನೆ, ಮೃದಂಗ ಬಾರಿಸುತ್ತೇನೆ. ಸ್ವಲ್ಪ ಪರಿಶ್ರಮವೂ ಇದೆ ಎನ್ನುತ್ತಾರೆ ಲಿಂಗದಹಳ್ಳಿಯ ಎಲ್.ಕೆ. ಗೋಪಾಲ ಅವರು.

* * * * *

ಎಲ್ಲ ಸಂಕೇತಿ ಕುಟುಂಬಗಳೂ ಒಂದಲ್ಲ ಒಂದು ಆದರ್ಶಕ್ಕೆ ಬದ್ಧವಾಗಿರುವುದು ಕಾಣುತ್ತದೆ. ಆ ಆದರ್ಶ ಭಿನ್ನವಾದರೂ ಶ್ರೇಷ್ಠತಮ ಬದುಕಿಗೆ ಪೂರಕವಾದುವೇ. ಇದನ್ನು ಕಾಣುವಾಗ ಹೆಮ್ಮೆ ಎನಿಸುತ್ತದೆ. ಬಡತನ,

ಸಿರಿತನ ಎಂಬುದು ಗೌಣ. ನಾವು ದೇವರು ಮೆಚ್ಚುವಂತೆ ಬದುಕಿದ್ದೇವೆ/ಬದುಕುತ್ತಿದ್ದೇವೆ ಎಂಬ ಸಂಗತಿ ಪೂರ್ಣ ತೃಪ್ತಿಕೊಡುವಂಥದಾಗಿದೆ. ಇದನ್ನು ಓದುವಾಗ ಸಂಕೇತಿಗಳ ಹಿರಿಮೆಯು ಈ ಅನುವಂಶಿಕ ಆದರ್ಶದ ಹಿರಿತನ ದಿಂದಾಗಿರಬಹುದೆನಿಸುತ್ತದೆ. ನೋಡಿ:

'ಅಡಿಕೆ ಬೇಯಿಸಲು ತಂದೆ ಒಲೆಮುಂದೆ ಕೂರ್ತಾರೇಂತ ಅಡಿಕೆ ಬೇಯಿಸುವುದನ್ನೇ ಬಿಟ್ಟುಬಿಟ್ಟೆ' ಎನ್ನುತ್ತಾರೆ ಹಾನಗಲ್ ಸೀತಾರಾಮಯ್ಯ. 'ತಂದೆತಾಯಿಯರೇ ನನಗೆ ದೇವರು. ಬೇರೆ ದೇವಸ್ಥಾನಕ್ಕೆ ನಾನು ಹೋಗೋಲ್ಲ' ಎನ್ನುತ್ತಾರೆ ಮತ್ತೂರಿನ ಎನ್.ಕೆ. ಚನ್ನಕೇಶವ. ಅವರ ಪಿತೃಪ್ರೇಮ ಅನ್ಯಾದೃಶ.

ಹಾನಗಲ್‌ನ ಈ ಹಿರಿಯರನ್ನು ನೋಡಿ. ಇದ್ದುದರಲ್ಲಿ ಜೀವಿಸಬೇಕು ಎನ್ನುವ ಸುಬ್ಬರಾಯರು; ನೆನಪು ಕಹಿ, ಅದು ನನಗೆ ಬೇಡ, ನಾನು ನಾಳೆಯದಕ್ಕೆ ಇಷ್ಟಪಡ್ತೀನಿ, ಕಳೆದದ್ದಕ್ಕೆ ಕೊರಗುವುದಿಲ್ಲ ಎನ್ನುವ ಹೆಚ್.ಎನ್. ಶಂಕರ್; ತಾಳ್ಮೆ ನನ್ನ ಆದರ್ಶ, ಕಷ್ಟ ಬಂದಾಗ ಕುಗ್ಗಲಿಲ್ಲ - ಎನ್ನುವ ಹೆಚ್.ಎಸ್. ಸುಬ್ಬರಾಯರು.

ಹಳ್ಳಿಮೈಸೂರಿನ ಹೆಚ್.ಕೆ. ರಾಮಚಂದ್ರಯ್ಯ ಅವರು 'ಹೆಚ್ಚಿಗೆ ಆಸೆ ಇಟ್ಟುಕೊಂಡಿದ್ದರಿಂದ ತೀರ ಕೆಳಕ್ಕೆ ಬಂದೆ. ಈಗ ಆಸೆ ಇಟ್ಟುಕೊಳ್ಳಬಾರದೆಂಬ ಬುದ್ಧನ ತತ್ತ್ವ ಅಳವಡಿಸಿಕೊಂಡೆ.' 'ಎಲ್ಲರೊಳಗೊಂದಾಗಿ ಬದುಕಬೇಕೆಂಬುದೇ ನನ್ನ ಆದರ್ಶ' ಎಂದರೆ, 'ನನಗಿಂತ ಕೆಳಗಿರುವವರನ್ನು ನೋಡಿ ದೇವರು ನನ್ನನ್ನು ಚೆನ್ನಾಗಿಟ್ಟಿದ್ದಾನೆ ಅಂದುಕೊಳ್ಳುತ್ತೇನೆ' ಎನ್ನುತ್ತಾರೆ ಮುದ್ದಾಪುರದ ಎಮ್.ಎಸ್. ಕೇಶವಮೂರ್ತಿ.

ಸೋಮನಹಳ್ಳಿಯ ಸುಬ್ರಹ್ಮಣ್ಯ ಅವರು 'ತೋಟದಲ್ಲಾಗಲಿ, ಊರಲ್ಲಾಗಲಿ ಕಳ್ಳತನ ಸಾಧ್ಯವೇ ಇಲ್ಲ. ಇದಕ್ಕೆ ಕಾರಣ ನಮ್ಮ ಒಗ್ಗಟ್ಟು. ಏನು ಬೇಕಾದರೂ ಹೊರಗೆ ಬಿಸಾಕಿ ಹೋಗಿ, ಅದು ಅಲ್ಲೇ ಬಿದ್ದಿರುತ್ತೆ' ಅನ್ನುತ್ತಾರೆ. ನಾಗೇಂದ್ರ ಅವರು, 'ವಿಶ್ವಾಸದಿಂದ ಜನರನ್ನು ಗೆಲ್ಲಬೇಕು, ವಿರಸದಿಂದಲ್ಲ' ಎನ್ನುತ್ತಾರೆ. ಸಾಲಿಗ್ರಾಮದ ನಾರಾಯಣಸ್ವಾಮಿಯವರು, 'ನಾನು ಯಾರೊಡನೆಯೂ ಜಗಳ ಆಡಿಲ್ಲ. ಯಾರ ಸಹಾಯಾನೂ ಪಡೆದಿಲ್ಲ. ಇನ್ನೊಬ್ಬರ ವಿಚಾರದಲ್ಲಿ ಮೂಗು ತೂರಿಸಿಲ್ಲ' - ಎನ್ನುತ್ತಾರೆ. ಎಂಥ ಸುಸಂಸ್ಕೃತ ನಡವಳಿ !

ಮುದ್ದಾಪುರದ ಎಂ.ಆರ್. ಚನ್ನಕೇಶವಯ್ಯ - 'ವ್ಯವಸಾಯ ಅಂದರೆ ಹುಚ್ಚು ನನಗೆ' ಎನ್ನುತ್ತಾರೆ. 'ಕಷ್ಟಪಡದೆ ಊಟ ಸಾಧ್ಯವಿಲ್ಲ. ಅದಕ್ಕೇ ಇಂದಿಗೂ ಹೊಲದಲ್ಲಿ ಊಟ ಮಾಡ್ತೇನೆ' ಎನ್ನುತ್ತಾರೆ ಹಳ್ಳಿಮೈಸೂರಿನ ಹೆಚ್.ಎನ್. ಅನಂತರಾಮಯ್ಯ. ಹಾಗೆಯೇ ಮುದ್ದಾಪುರದ ಎಮ್.ಎಸ್. ಶ್ರೀನಿವಾಸಮೂರ್ತಿ 'ಕಷ್ಟಪಟ್ಟರೆ ಫಲವುಂಟು ಎಂಬ ಹಿರಿಯರ ಗಾದೆ ನನ್ನ ಮಟ್ಟಿಗೆ ನಿಜವಾಗಿದೆ' ಎನ್ನುತ್ತಾರೆ.

ನನ್ನ ಬದುಕು ಇಂದು ಶ್ರೀಮಂತವಾಗಿರಲು ಕಾರಣ 'ಸೋಮಾರಿತನವಿಲ್ಲದ ದುಡಿಮೆ' - ಎಂದು ತಮ್ಮ ಬದುಕಿನ ರಹಸ್ಯವನ್ನು ಹಂಚಿಕೊಂಡಿದ್ದಾರೆ ಮತ್ತೂರಿನ ಎನ್.ಕೆ. ಚೆನ್ನಕೇಶವ. ಹಾಗೆಯೇ ೭೦ ವಸಂತಗಳನ್ನು ಕ್ರಿಯಾಶೀಲರಾಗಿಯೇ ಬದುಕಿದ ಹೊಸಹಳ್ಳಿಯ ಕೃಷ್ಣರಾವ್ ಹೇಳುತ್ತಾರೆ : "ಕೆಲಸಮಾಡದಿದ್ದರೆ ಕೀಳು ಎಂಬ ಭಾವ ಬರ್ತಿತ್ತು". ಪರೋಪಕಾರಾರ್ಥಂ ಇದಂ ಶರೀರಂ ಎಂಬುದು ಚಿಕ್ಕಮೇನಹಳ್ಳಿಯ ನಾಗಪ್ಪ, ಬೆಟ್ಟದಪುರದ ಅನಂತಕೃಷ್ಣಪ್ಪ, ಹೊಸಹಳ್ಳಿಯ ಶ್ರೀಕಂಠ ಅವರ ಧ್ಯೇಯ. ಮತ್ತೂರಿನ ಕೃಷಿಕ ಇಂಜನಿಯರ್ ಎಮ್.ಎನ್.ಗೋಪಾಲ ಅವಧಾನಿ ಹೇಳುತ್ತಾರೆ : "ಜೀವನದುದ್ದಕ್ಕೆ ನಾವು ಪಾಲಿಸಿಕೊಂಡು ಬಂದ ತತ್ವ ಒಂದೇ: ದಾನ ಧರ್ಮ ಮಾಡಬೇಕು ಎಂಬುದು. ಅದನ್ನು ಬಿಡದೆ ಐದೂ ಸೋದರರೂ ಪಾಲಿಸಿಕೊಂಡು ಬಂದಿದ್ದೇವೆ." ಸ್ನೇಹವನ ಎಂಬ ಹಣ್ಣಿನ ತೋಟವನ್ನು ದಾನಕ್ಕಾಗಿಯೇ ಬೆಳೆಸಿದ್ದಾರೆ ! "ಉಪಕಾರ ಮಾಡಬೇಕು. ಒಂದಾಗಿ ಕಾಣಬೇಕು, ಭೇದಭಾವ ಎಣಿಸಬಾರದು."

ಎಂಬುದು ಲಿಂಗದಹಳ್ಳಿಯ ಎಲ್. ನಾಗರಾಜ ಅವರ ಆದರ್ಶ. ವಿರಾಮಕಾಲದಲ್ಲಿ ಎಲೆಕ್ಟ್ರಿಶಿಯನ್ ಕೆಲಸ ಮಾಡ್ತಾರೆ. ಆದರೆ ಯಾರಿಂದಲೂ ಹಣ ತಗೋಳೋಲ್ಲವಂತೆ. ಸಮಾಜಕ್ಕೆ ನಾವೇನನ್ನಾದರೂ ಕೊಡಬೇಕು ಎನ್ನುವ ಬಿ.ಎನ್.ವಿ. ಸುಬ್ರಹ್ಮಣ್ಯ ನಾವು ಕಂಡಂತೆ ಕೊಡುಗೈ ದಾನಿಗಳು.

ಜೋಡಿ ಕೃಷ್ಣಾಪುರದ ಕೆ.ಎಸ್. ನರಸಿಂಹಮೂರ್ತಿ ಅವರು 'ದೂರತಃ ಪರ್ವತೋ ರಮ್ಯಃ; ಇದ್ದುದರಲ್ಲಿ ಹೆಚ್ಚು ದುಡೀಬೇಕು, ಸಂತೋಷವಾಗಿರಬೇಕು', ಎಂದರೆ ಅಲ್ಲಿಯ ಕೆ. ನಾಗರಾಜ ಹೇಳುತ್ತಾರೆ 'ಇಲ್ಲದ್ದಕ್ಕೆ ಆಸೆಪಡದೆ, ಹಿಂದಕ್ಕೆ ನೋಡದೆ ಮುಂದೆ ಹೆಜ್ಜೆ ಹಾಕೋಣ'. 'ನುಡಿದಂತೆ ನಡೆದಿದ್ದೇನೆ ಎಂಬ ತೃಪ್ತಿ ಇದೆ' - ಮೊಸಳೆಯ ಗುಂಡೂರಾಮಯ್ಯ ಅವರಿಗೆ.

ಕುಪ್ಪಹಳ್ಳಿಯ ವೆಂಕಟರಮಣಯ್ಯ ಹೇಳುತ್ತಾರೆ. 'ನಾನು ಸ್ವಾತಂತ್ರ್ಯ ಹೋರಾಟಗಾರರ ಮಾಸಾಶನ ತಗೊಳ್ಳಲಿಲ್ಲ. ರಾಜಕೀಯವನ್ನು ಸ್ವಂತಕ್ಕೆ ಬಳಸಲಿಲ್ಲ.' ಕರ್ನಾಟಕದಲ್ಲಿ ಇಂಥ ಇನ್ನೊಬ್ಬರು ಸಿಗಬಹುದೆ? ಅನುಮಾನ. 'ಇತರರ ಜೊತೆ ಜಗಳಕಾಯಲ್ಲ' ಅನ್ನುತ್ತಾರೆ ಹರಿಹರಪುರ ರಮೇಶ್ ಜೋಯಿಸ್; ಹಾಗೆಯೆ 'ಯಾರಿಗೂ ದ್ರೋಹ ಮಾಡಿಲ್ಲ' ಅನ್ನುತ್ತಾರೆ ಚಿಲುಕುಂದದ ರಾಮಣ್ಣ, 'ಅನ್ಯಾಯವನ್ನು ಖಂಡಿಸುವುದು ನನ್ನ ಗುಣ' ಎನ್ನುತ್ತಾರೆ ಚಿಲುಕುಂದದ ಗುರುಮೂರ್ತಿ ಅವರು. ನ್ಯಾಯದ ವಿಷಯದಲ್ಲಿ ವಿಶೇಷ ಒಲವು. ಯಾರು (ಹೊರಗಿನವರಾದರೂ) ತಪ್ಪು ಮಾಡಿದರೂ ಸಹಿಸುತ್ತಿರಲಿಲ್ಲ. ತಿದ್ದಲು ಹೋಗುವರು, ನಿಷ್ಠುರ ಆಗುವರು.

'ಹೃದಯದಲ್ಲಿರುವ ಸ್ವಾಮಿಗೆ ಕೈ ಮುಗಿದರೆ ಸಾಕು, ಕಾಶಿ ಏಕೆ ಬೇಕು? ವ್ಯವಸಾಯವೇ ಪೂಜೆ, ಮನಸ್ಸು ಶುದ್ಧವಾಗಿರಬೇಕು. ಬೇರೆ ಪೂಜೆ ಬೇಡ' ಎಂಬುದು ಚಿಲ್ಕುಂದದ ಸಿ.ಎಸ್. ಸುಬ್ಬರಾಯ ಅವರ ಮಾತು. 'ಹಾಸಿಗೆ ಇದ್ದಷ್ಟು ಕಾಲು ಚಾಚಿ ವ್ಯರ್ಥ ಕಾಲ ಹರಣ ಮಾಡದೆ ಬದುಕನ್ನು ರೂಢಿಸಿದ್ದೇವೆ' ಎನ್ನುತ್ತಾರೆ ಪಿರಿಯಾಪಟ್ಟಣದ ಪಿ.ಎಸ್. ಶ್ರೀನಿವಾಸಮೂರ್ತಿ. 'ವಿರಸ ಬರಬಾರದೂಂತ ಬೇರೆ ಮನೇಲಿದೇವೆ. ಆದರೆ ನಮ್ಮ ಸ್ನೇಹ ಬಾಂಧವ್ಯ ಕಂಡು ಊರೇ ಬೆರಗಾಗಿದೆ' ಎನ್ನುತ್ತಾರೆ ಮತ್ತೂರಿನ ಎನ್.ಕೆ. ಚನ್ನಕೇಶವ ಅವರು. 'ಸುಳ್ಳು ನನಗೆ ಆಗೋದಿಲ್ಲ. ಸತ್ಯವೇ ನಮ್ಮನ್ನು ಕಾಪಾಡಿದ್ದು' ಎಂದು ತುಂಬುಹೃದಯದಿಂದ ನುಡಿದಿದ್ದಾರೆ ಹೊಸಹಳ್ಳಿ ಕೃಷ್ಣರಾವ್.

'ಸತ್ಯವನ್ನು ಹೇಳಬೇಕು. ಯಾರಿಗೂ ಮೋಸಮಾಡಬಾರದು' ಎಂಬ ಮಾತು ಭಕ್ತರಹಳ್ಳಿಯ ಭಾಗ್ಯಲಕ್ಷ್ಮಿ ಅವರದು ಕೂಡ. 'ಮನಸ್ಸಿಗೆ ಬಂದ ತಕ್ಷಣ ಮಾಡಬೇಕು. ನಾಳೆ ಎಂಬುದು ಸರಿಯಲ್ಲ' ಎನ್ನುತ್ತಾರೆ ಹೊಸಹಳ್ಳಿಯ ಕೆ. ಕೃಷ್ಣಸ್ವಾಮಿ. ಭಕ್ತರಹಳ್ಳಿಯ ಡಾ. ಕೆ.ಪಿ. ರಘುನಾಥ್ ಅವರ ನುಡಿ, 'I have lived like a king, and die like a king'. 'ಇಡೀ ಸಂಕೇತಿ ಜನಾಂಗಕ್ಕಿರುವ ಆದರ್ಶವೇ ನನ್ನದೂ. ಕಂಡವರ ಗಂಟು ಹೊಡಕೊಂಡು ತಿನ್ನಬೇಡ ಎಂಬುದು. ಆರಕ್ಕೇರದೆ ಮೂರಕ್ಕಿಳಿಯದ ಬದುಕು ನನಗೆ ಸಾಕು' ಎನ್ನುತ್ತಾರೆ ಲಿಂಗದಹಳ್ಳಿಯ ಎಲ್.ಕೆ. ಗೋಪಾಲ.

* * * * *

ಕೃಷಿಯ ಅನುಭವಗಳು ರೋಚಕವಾಗಿವೆ. ಸ್ಮರಿಸಬಹುದಾದ, ಕೃಷಿಗೆ ಸಂಬಂಧಿಸಿದಂತೆ ಸಂಕೇತಿಗಳ ಮಾತುಗಳನ್ನು ಕೆಲವನ್ನಿಲ್ಲಿ ಸಂಗ್ರಹಿಸಿದ್ದೇನೆ.

ತತ್ರ ವಿಪ್ರೈಃ ನವಾಸ್ತವ್ಯಂ ನಾಸ್ತಿ ಯತ್ರ ಚತುಷ್ಟಯಮ್
ಋಣದಾತಾ ಚ ವೈದ್ಯಶ್ಚ ಶ್ರೋತ್ರಿಯಶ್ಚ ನದೀಜಲಮ್||

ಸಾಲವನ್ನು ಹಿಂದಿರುಗಿಸುವವನು, ವೈದ್ಯ, ಶ್ರೋತ್ರಿಯ ಮತ್ತು ನದೀಜಲ ಈ ನಾಲ್ಕೂ ಇರದ ಕಡೆ ಬ್ರಾಹ್ಮಣರು ವಾಸಮಾಡಬಾರದು.

ಕೇರಳಾಪುರದ ರಾಮಚಂದ್ರ ಜೋಯಿಸರು ಹೇಳಿದ ಈ ಶ್ಲೋಕ ಸಂಕೇತಿ ಕೃಷಿಕರಿಗೆ ಶೇ. ೧೦೦ ಅನ್ವಯಿಸುತ್ತದೆ.

ಹಳ್ಳಿ ಮೈಸೂರಿನ ಇ.ಎಸ್. ನಾಗರಾಜು ಅವರು ಬೆಳಿಗ್ಗೆ ಆರಕ್ಕೆ ತೋಟಕ್ಕೆ ಹೋದರೆ ಸಂಜೆಯವರೆಗೂ ಅಲ್ಲಿರುತ್ತಾರೆ. ಮಧ್ಯೆ ತಿಂಡಿಗಾಗಿ ಒಮ್ಮೆ ಮನೆಗೆ ಬಂದು ಹೋಗುತ್ತಾರೆ. ಸ್ವಂತವಾಗಿ ನರ್ಸರಿ ಮಾಡಿದ್ದಾರೆ. ವರ್ಷಕ್ಕೆ ೫೦೦೦ ಅಡಿಕೆ ಸಸಿ, ೨೦೦೦ ತೆಂಗಿನ ಸಸಿ ಮಾರ್‍ತಾರೆ! ಹೀಗೆ ಕ್ರಿಯಾಶೀಲರಾಗಿರುವವರು ಅಪರೂಪ, ಅಲ್ಲವೆ? 'ವ್ಯವಸಾಯದ ಜೊತೆಗೆ ಅಡಿಕೆ/ಅಡಿಕೆ ಪುಡಿ ವ್ಯಾಪಾರ, ಮೇಣದ ಬತ್ತಿ ವ್ಯಾಪಾರ ಎಲ್ಲ ಮಾಡಿ ಆಯಿತು. ಈಗ ಶಿವಾಂತ ಪೌರೋಹಿತ್ಯದಲ್ಲಿ ಬದುಕುತ್ತಿದ್ದೇನೆ' ಎನ್ನುತ್ತಾರೆ ಸೋಮನಹಳ್ಳಿಯ ರಾಮನಾಥ ಶರ್ಮ! ಇಲ್ಲಿಯ ಎಸ್.ಎಸ್. ಸುಬ್ರಹ್ಮಣ್ಯ ಅವರ ಅನುಭವವೂ ಗಮನಾರ್ಹ: 'ವ್ಯವಸಾಯದ ಜೊತೆಗೆ ಏನಾದರೂ ಒಂದು ಉಪವೃತ್ತಿ ಇದ್ದೇ ಇರಬೇಕು'.

ಪೂಮಗಾಮೆಯ ರಾಮಣ್ಣ ಅವರ ಅನುಭವ ನೋಡಿ - 'ಜಮೀನು ಜಾಸ್ತಿ ಇದ್ದರೆ ಖರ್ಚು ಜಾಸ್ತಿ. ಆದಾಯ ಕಡಿಮೆ. ಆದರೂ ವ್ಯವಸಾಯ ತೃಪ್ತಿ ತಂದಿದೆ. ದಿಲ್ಲಿ ಸೌಲಭ್ಯ ಹಳ್ಳಿಯಲ್ಲಿ ಕಂಡಿದ್ದೇವೆ' ಅಂತಾನೇ ಹೇಳುತ್ತಾರೆ. ಅವರ ಸಾಹಸ ಗಮನಿಸಿ. ವಿದ್ಯುತ್ ಸಮಸ್ಯೆ ನಿವಾರಣೆಗಾಗಿ ಸಿಮೆಂಟ್ ತೊಟ್ಟಿ ನಿರ್ಮಿಸಿ (೪೦ x ೨೦ X ೮ LBH) ತೋಟದಿಂದ ಗದ್ದೆವರೆಗೂ ಪೈಪ್ ಹೂಳಿಸಿದ್ದಾರೆ. ಇಂಥ ಸಾಹಸ ಸಂಕೇತಿತನದಿಂದ ಮಾತ್ರ ಮಾಡುವಂಥದು. ಇನ್ನೊಂದು ಉದಾಹರಣೆ ಲಿಂಗದಹಳ್ಳಿಯ ವಸಂತಕುಮಾರ್, ಜಯರಾಮ ಅವರುಗಳು ತಮ್ಮ ತೋಟದಿಂದ ಮನೆವರೆಗೆ ಮೈನ್ ರೋಡ್ ದಾಟಿ ಸುಮಾರು ಎರಡು ಕಿ.ಮೀ. ಪೈಪ್ ಜೋಡಿಸಿಕೊಂಡಿದ್ದಾರೆ !

ಕುಪ್ಪಳ್ಳಿಯ ಕೆ.ವಿ. ಕೃಷ್ಣಮೂರ್ತಿಯವರ ಅನುಭವ ಗಮನಿಸಿ - "ಕೊಟ್ಟಿಗೆಗೆ ಕಾಂಕ್ರೀಟ್ ಹಾಕಿಸಿಲ್ಲ. ಅರ್ಧ ಅಡಿ ಮಣ್ಣು ಹರಡ್ತೀನಿ. ಅದು ಗೊಬ್ಬರ ಆಗುತ್ತೆ. ೧೫ ದಿನಕ್ಕೆ ಬದಲಾಯಿಸುತ್ತೇನೆ." ಮಲೆನಾಡಿನ ಬಸವಾನಿ ಇತ್ಯಾದಿ ಊರುಗಳಲ್ಲಿ ಮಣ್ಣಿನ ಬದಲು ಅರ್ಧ ಅಡಿ (ಮರದ) ಹಸಿ ಎಲೆ ಹರಡುತ್ತಾರೆ. ದಿನಾ ಬದಲಾಯಿಸುತ್ತಾರೆ. ಹಸೂಗೂ ಖುಷಿ. ಅವರಿಗೂ ಹತ್ತುಪಟ್ಟು ಗೊಬ್ಬರ ! ಹರಿಹರಪುರದಲ್ಲಿ ಇರುವುದು ರಮೇಶ್ ಜೋಯಿಸ್ ಅವರ ಒಂದೇ ಸಂಕೇತಿ ಕುಟುಂಬ. ಅವರು ೫೦ ವರ್ಷದ ಹಿಂದೆ ವಿಠಲಾಪುರದಿಂದ ಇಲ್ಲಿ ಬಂದು ನೆಲಸಿದವರು. ದೇವಾಲಯದ ೩೪ ಗುಂಟೆ ಜಮೀನು ಜೀವನಾಧಾರ. ಜೊತೆಗೆ ಜ್ಯೋತಿಷ್ಯ. ಸ್ವಂತಕ್ಕೆ ತೋಟ ಮಾಡಿದ್ದಾರೆ. ಅನುಕೂಲವಾಗಿದ್ದಾರೆ. 'ನನ್ನಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ A to Z ಉಪಕರಣಗಳಿವೆ. ಯಾರನ್ನೂ ಏನನ್ನೂ ಬೇಡಬೇಕಿಲ್ಲ' ಎನ್ನುತ್ತಾರೆ ಜೋಯಿಸರು.ಆ ಊರಿನ ಸಂಕೇತಿಕೃಷಿಯ ಕೊನೆಯಕೊಂಡಿ ಹರವೆ ನರಸಿಂಹಯ್ಯ ಅವರಿಗೆ ೮೬ರ ಪ್ರಾಯ. ಅವರೂ ಕೊನೆಯದಾಗಿ ಊರು ಬಿಡಲು ಎಲ್ಲ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇಲ್ಲಿರುವಷ್ಟು ದಿನ ನಾಲ್ಕು ಜನಕ್ಕೆ ಉಪಕಾರಿಯಾಗಿ ಬದುಕಿದ ತೃಪ್ತಿ ಇದೆ ಎಂಬ ಸಂತಸ ಅವರಿಗಿದೆ.

"ಚಿಲ್ಕುಂದದ ಬ್ರಾಹ್ಮಣರು ಕಚ್ಚೆ ಹಾಕಿ ಸ್ವತಃ ತೋಟದಲ್ಲಿ ದುಡಿಯುತ್ತಾರೆ" - ಎಂದು ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಉದ್ಗಾರವೆತ್ತಿದ್ದರು. ೫೨ ಸಂಕೇತಿ ಮನೆಗಳ ಈ ಗ್ರಾಮ ಸಂಕೇತಿಗಳ ಸ್ವರ್ಗ ! ಇಲ್ಲಿನ ಕೇಶವಮೂರ್ತಿಗಳ ಪ್ರಕಾರ 'ಮತ್ತೂರಿನವರು ಲ್ಯಾಂಡ್ ಲಾರ್ಡ್ಸ್, ನಾವು ಲ್ಯಾಂಡ್ ಹೋಲ್ಡರ್ಸ್. ಯಾಕಂದ್ರೆ ನಮ್ಮಲ್ಲಿ ಎರಡು ಎಕರೆ ಮೀರಿ ಯಾರಿಗೂ ಜಮೀನಿಲ್ಲ'. ಅವರ ಸಂಸಾರವೇ ತೋಟ. ಅಲ್ಲಿನ ಸಂಕೇತಿಗಳು ಬೆಳೆಯದ ಬೆಳೆಯಿಲ್ಲ. ಚಿಲ್ಕುಂದದ ರಾಮಣ್ಣನವರ ಉಪವೃತ್ತಿ ಊದುಬತ್ತಿ ವ್ಯಾಪಾರ. ಅವರ ತಮ್ಮ ಬೆಂಗಳೂರಿನಲ್ಲಿ ಪ್ಲಾಸ್ಟಿಕ್ ಇಂಡಸ್ಟ್ರಿ ದೊಡ್ಡ ಪ್ರಮಾಣದಲ್ಲಿ ನಡೆಸುತ್ತಾರೆ. ಚಿಲ್ಕುಂದದ ಕೇಶವಮೂರ್ತಿಯವರ ಮನೆಯಲ್ಲಿ ನಾಲ್ಕು ಜೊತೆ ಎತ್ತುಗಳು, ೨೦ ಹಸು, ೧೦ ಎಮ್ಮೆ, ಎರಡು ಗಾಡಿ ಇತ್ತಂತೆ. ಅವರ ಎರಡು ಹೋರಿ ಕರುವಿಗೆ ದೇವರಾಜ ಅರಸು ಅವರು ಚಿನ್ನದ

ಹೊದಿಕೆಯಿದ್ದ ಗೌನ್ ಹೊದಿಸಿ ಸನ್ಮಾನಿಸಿದರಂತೆ ! 'ನಮ್ಮ ವ್ಯವಸಾಯದಲ್ಲಿ ನೀಟ್‌ನೆಸ್ ಇದೆ' ಎನ್ನುತ್ತಾರೆ ಇಲ್ಲಿಯ ಗುರುಮೂರ್ತಿ. 'ಸಂಕೇತಿಗಳಲ್ಲಿ ರೇಷ್ಮೆ ಮೊದಲಿಗೆ ಬೆಳೆದದ್ದು ನಾನೇ' ಎನ್ನುತ್ತಾರೆ ಚಿಲ್ಕುಂದದ ಸತ್ಯನಾರಾಯಣ. ಲಾಭ ಆಗಲಿಲ್ಲ. ನಂತರ ತರಕಾರಿ. ಅದೂ ಫೇಲ್. ನಂತರ ತಂಬಾಕು ಬೆಳೆದರು. ನಂತರ ಕಾಕಡ ಬೆಳೆ. ಅಲ್ಲೂ ನಷ್ಟ. ಕಡೆಗೆ ಉಳಿದದ್ದು ಅಡಿಕೆ ತೆಂಗು ಮಾತ್ರ. ಜೊತೆಗೆ ಅಡಿಕೆ ನರ್ಸರಿ ಇದೆ. ಇಷ್ಟಾದರೂ 'ವ್ಯವಸಾಯಗಾರನಾಗಿ ಹುಟ್ಟುವುದು ಶಾಪ' ಎಂದೇ ಹೇಳುವರು !

ಪಿರಿಯಾಪಟ್ಟಣದಲ್ಲಿ ೩೦ ಕುಟುಂಬ. 'ಹಿಂದೆ – ವೃತ್ತಿ: ವೈದ್ಯ, ಪ್ರವೃತ್ತಿ: ಕೃಷಿ: ಈಗ ಅದಲು ಬದಲು. ಲೈಫ್‌ನಲ್ಲಿ ಚಾರಮ್ ಇರೋದು ರಿಸ್ಕ್‌ನಲ್ಲಿ' ಅನ್ನುತ್ತಾರೆ ಇಲ್ಲಿನ ಪಿ.ಎಸ್. ವೆಂಕಟರಾಮಯ್ಯ. ಉತ್ಪತ್ತಿ ನೋಡಿಕೊಂಡು, ರೇಷಿಯೋ ಹಾಕಿಕೊಂಡು, ಖರ್ಚುಮಾಡಬೇಕೆನ್ನುತ್ತಾರೆ ನರಸಿಂಹಮೂರ್ತಿ. 'ಅಡಿಕೆ ಒಂದು ಬೆಳೆಯಾದ್ರೆ ಎಲೆ ಹಂಬು ೧೦ ಬೆಳೆ' ಎನ್ನುತ್ತಾರೆ ಶ್ರೀನಿವಾಸಮೂರ್ತಿ. ಅವರು ಅಡಿಕೆಯನ್ನು ಅಂತಸ್ತಿನಲ್ಲಿ ಬೆಳೆಸಿದ್ದಾರೆ. ೧೦, ೨೫, ೪೦, ೬೦ ವರ್ಷದ ಗಿಡಗಳಿವೆ. ಇದರಿಂದ ಎಲ್ಲ ಗಿಡಗಳಿಗೂ ಗಾಳಿ ಬೆಳಕು ಚೆನ್ನಾಗಿ ಬರುತ್ತದೆ. ಇಲ್ಲಿನ ಡಾ. ಪಿ.ಎಸ್. ಸುಬ್ರಹ್ಮಣ್ಯ ಅವರು ಕೃಷಿಯನ್ನು ಉಪವೃತ್ತಿಯಾಗಿ ಹೊಂದಿದ್ದರೂ ತುಂಬಾ ವಿಶೇಷ ರೀತಿಯಲ್ಲಿಯೇ ನಡೆಸಿಕೊಂಡು ಬಂದಿದ್ದಾರೆ. ಉದಾಹರಣೆಗೆ: ನೆಲ ಸಮ ಮಾಡಿಸಲು ೬೦೦೦ ಟ್ರಾಕ್ಟರ್ ಲೋಡ್ ಮಣ್ಣು ಹೊಡೆಸಿದ್ದಾರೆ!

ಬೆಟ್ಟದಪುರದಲ್ಲಿ ಹಿಂದೆ ಇದ್ದ ಸಂಖ್ಯೆಯ ಶೇ. ೧೦ ಮಾತ್ರ ಸಂಕೇತಿಗಳಿದ್ದಾರೆ. 'ಈಗೆಲ್ಲ ಬೇರೆ ಹುಡುಗರ ಪಾಳ್ಯ. ಉಳಿದವರೂ ಪಟ್ಟಣ ಸೇರಬೇಕಾದ ಸ್ಥಿತಿ' ಎಂಬುದು ಕೃಷ್ಣಾವಧಾನಿಗಳ ಅಳಲು. 'ನಾನೆಂದೂ ತೋಟದ ಕೆಲಸಕ್ಕೆ ಕೂಲಿ ಕೊಡಲಿಲ್ಲ' ಎನ್ನುತ್ತಾರೆ ಬಿ.ಎಸ್. ಶ್ರೀಧರಮೂರ್ತಿ. ಆದ್ದರಿಂದಲೇ ಅವರ ದೇಹ ಇಷ್ಟು ದೃಢವಾಗಿದೆ. 'ಸಂತೋಷವಾಗಿದ್ದೇನೆ, ದೇವರು ಕೊಟ್ಟಿರುವುದು ಸಾಕು' ಎನ್ನುತ್ತಾರೆ. 'ಅಡಿಕೆಗಿಂತ ತಂಬಾಕು ಬೆಳೆ ವಾಸಿ, ಎರಡು ತಿಂಗಳ ಬೆಳೆ, ಮೂರು ಹದ ಮಳೆ ಸಾಕು' ಅಂತಾರೆ ಇಲ್ಲಿನ ಪ್ರಭಾಶಂಕರ್. ಅನಂತಕೃಷ್ಣಪ್ಪ ಅವರ ಮಾತು ಕೇಳಿ: 'ಬಾಗಾಯ್ತು ನಮ್ಮ ಬದುಕಿನ ಅವಿಭಾಜ್ಯ ಅಂಗ. ಅದನ್ನು ಒಂದು ಸಂಸಾರಕ್ಕೆ ಹೋಲಿಸಬಹುದು:

ಮನೆ ಯಜಮಾನನು: ಬನ್ನೀಂತ ಕರೆಯುವ ಎಳನೀರು ಹೊತ್ತ ತೆಂಗು;
ದುಡಿಯೋ ಯುವಕರು ಅಡಿಕೆ ಮರದ ತರಹ;
ಶುಚಿಯಾಗಿಟ್ಟುಕೊಳ್ಳುವ ಗೃಹಿಣಿ ಎಲೆ ಹಂಬು; ಮಕ್ಕಳು ಮರಿಗಳು ಬಾಳೆಗಿಡದಂತೆ.

ಕೃಷಿ ಹಿತಕರವೆ ? 'ಕಷ್ಟ ಅಂದುಕೊಂಡರೆ ಕಷ್ಟ; ಸುಖ ಅಂದುಕೊಂಡರೆ ಸುಖ' ಎನ್ನುತ್ತಾರೆ ಹಾನಗಲ್ ಸೀತಾರಾಮಯ್ಯ. ಅಂದರೆ ಅವರ ಅಭಿಪ್ರಾಯ - 'ಸುಲಭವಲ್ಲ, ಆದರೆ ನನಗೆ ಕಮಿಟ್‌ಮೆಂಟ್ ಇರುವುದರಿಂದ ಸುಖವಾಗಿಯೇ ಭಾವಿಸಿದ್ದೇನೆ, ಸ್ವೀಕರಿಸಿದ್ದೇನೆ !' ಮತ್ತೂರಿನ ಅಶ್ವತ್ಥ ಅವಧಾನಿಗಳ ಪ್ರಕಾರ ಗಿಡಗಳೊಡನೆ ನಮ್ಮ ಸಂಬಂಧ ಮಗು ತಾಯಿ ಸಂಬಂಧ ಇದ್ದಹಾಗೆ! (ಮಕ್ಕಳಂತೆ ಗಿಡಗಳನ್ನು ನೋಡಿಕೊಳ್ಳಬೇಕೆಂಬ ಮಾತು ಹೊಸಹಳ್ಳಿಯ ಕೃಷ್ಣಸ್ವಾಮಿ ಅವರದು) 'ಈ ಭಾವನಾತ್ಮಕ ಸಂಬಂಧ ಈಗ ಇಲ್ಲ. ಆಗ ವೇದಶಿಕ್ಷಣದಂತೆ ಕೃಷಿಶಿಕ್ಷಣ ಕೂಡ ತಂದೆಯವರಿಂದ ಸಿಗುತ್ತಿತ್ತು' ಎಂದೂ ಅವರು ಹೇಳುತ್ತಾರೆ. ಇಲ್ಲಿನ ಸುಬ್ರಾಯ ಅವಧಾನಿಯವರು ಒಬ್ಬ ವ್ಯಕ್ತಿ ಕೃಷಿಯಿಂದ ಎಷ್ಟು ಸಾಧನೆ ಮಾಡಬಹುದೆಂದು ತೋರಿಸಿಕೊಟ್ಟಿದ್ದಾರೆ. ತಮ್ಮ ಐದೂ ಮಕ್ಕಳಿಗೆ ಮನೆ ಕಟ್ಟಿಸಿ ಕೊಟ್ಟಿದ್ದಾರೆ. ವೇದಾಧ್ಯಯನ ಮಾಡಿಸಿದ್ದಾರೆ. ಅಡಿಕೆ ಕೆಡುವುವುದು, ಸುಲಿಯುವುದು, ಬೇಯಿಸುವುದು, ಹರವುವುದು, ಶುದ್ಧಿಮಾಡುವುದು ಇತ್ಯಾದಿ ತೋಟದ ಎಲ್ಲ ಕೆಲಸವನ್ನೂ ಸ್ವತಃ ಮಾಡುವುದನ್ನು ಕಲಿಸಿದ್ದಾರೆ. "ಏನು ಊಟ ಮಾಡ್ತೀವೋ ಅದಕ್ಕೆ ತಕ್ಕಷ್ಟು ದುಡಿಯಬೇಕು, ಇಲ್ಲವಾದರೆ ಅನ್ನದ್ರೋಹ" - ಎನ್ನುತ್ತಾರೆ.

ಬಸವಾನಿಯ ಕಸ್ತೂರಿಯವರು ಆದರ್ಶ ಕೃಷಿಕರು. ಮಲೆನಾಡಾದ್ದರಿಂದ ಹಸುವಿಗೆ ಬಿಸಿನೀರು ಕುಡಿಸುತ್ತಾರೆ. ಜೊತೆಗೆ ಪಾಲಿಷ್ ತೌಡು, ತರಕಾರಿ ಸಿಪ್ಪೆ, ಉಪ್ಪು, ಕಲಗಚ್ಚು ಸೇರಿಸುತ್ತಾರೆ. ಪತಿ-ಪತ್ನಿ ಇಬ್ಬರೂ ಸಮಸಮ

ದುಡಿಯುತ್ತಾರೆ. (ಹೊಸಹಳ್ಳಿಯ ಶ್ರೀಕಂಠ ಅವರು ಕೂಡ ತಾವಿಬ್ಬರೂ ಸಮಸಮ ದುಡಿಯುತ್ತೇವೆ ಎಂದು ಹೇಳುತ್ತಾರೆ.) ಮೇಲುಸ್ತುವಾರಿ ಕಸ್ತೂರಿಯದೇ.

ಹೊಸಹಳ್ಳಿಯ ಕೃಷ್ಣರಾವ್ ಅವರು ಕೃಷಿಪಂಡಿತ ಬಿರುದು ಪಡೆದರು. ಅದು ಸಂಕೇತಿ ಕೃಷಿಗೆ ಸಂದ ಗೌರವ. ೪೦ ಎಕರೆಯಲ್ಲಿ ಕಬ್ಬು ಬೆಳೆದರು. ಈಗ ಎಲ್ಲವನ್ನೂ ತೋಟ ಮಾಡಿದ್ದಾರೆ. ಹಾಗೆಯೇ ಹೊಸಹಳ್ಳಿಯ ಕೃಷ್ಣಸ್ವಾಮಿ ಅವರಿಗೆ ಕೃಷಿಪ್ರಶಸ್ತಿ ಬಂತು. ಇವರು ಮೂಲತಃ ಶಾಲಾ ಅಧ್ಯಾಪಕರು !

* * * * *

ಕೃಷಿಕರು ಸ್ವಾನುಭವದ ಸಂಗತಿಗಳನ್ನು ನಮ್ಮೊಡನೆ ಹಂಚಿಕೊಂಡಿದ್ದಾರೆ. ಕೆಲವನ್ನಿಲ್ಲಿ ಸಂಗ್ರಹಿಸಿದ್ದೇನೆ. 'ಹಸುವಿಗೆ ತಿಂಡಿಹಾಕಿ ಹಾಲು ಕರೆದಂತೆ ಅಡಿಕೆ ವಿಳ್ಳೇದೆಲೆ ತೋಟ ಕೂಡ ಉಪಚಾರ ಮಾಡಿದಷ್ಟು ಫಲ ಕೊಡುತ್ವೆ' ಎನ್ನುತ್ತಾರೆ ಹಾನಗಲ್ಲಿನ ಸುಬ್ಬರಾಯರು. 'ಕಳ್ಳರಿಗೇ ತೋಟದಕೆಲಸ ವಹಿಸಿದೆ, ಅವರಿಗೂ ಹೊಟ್ಟೆಪಾಡು ಆಯಿತು, ಈಗ ಕಳ್ಳತನ ತನಗೆ ತಾನೇ ನಿಂತಿದೆ' ಎಂದಿದ್ದಾರೆ ಹಳ್ಳಿಮೈಸೂರಿನ ಇ.ಎಸ್. ನಾಗರಾಜು ಅವರು. ಕಲ್ಪನಾತೀತ ಪ್ರಯೋಗ ! 'ಬಡತನ ಕೆಟ್ಟದ್ದು. ಹೆಣ್ಣೂ ಕೊಡೋಲ್ಲ? ಹತ್ತು ಪೈಸೆಗಾಗಿ ತೆಂಗಿನ ಮರ ಹತ್ತುತ್ತಿದ್ದೆ' ಎನ್ನುವ, ಸೋಮನಹಳ್ಳಿಯ ಅಡಿಗೆ ಕೆಲಸದ ನಾಗರಾಜ್ ಹೇಳುತ್ತಾರೆ - 'ನನಗಿಂತ ಅವರು ಹೆಚ್ಚು ಬಡವರಾದ್ದರಿಂದ ನನಗೆ ಹೆಣ್ಣು ಕೊಟ್ಟರು !' ನೆನೆಸಿಕೊಳ್ಳುತ್ತಾರೆ - "ತುಂಬಾ ಕಷ್ಟ ಅನುಭವಿಸಿದ್ದೀವಿ. ಕಡ್ಲೆಕಾಯಿ ತಿಂದು ಮಲಗಿದ ದಿನ ಹಲವು. ಅದನ್ನು ಮರೆತಿಲ್ಲ. ಮರೆಯಲೂಬಾರದು. ಆಗ ಮಾತ್ರ ಮನುಷ್ಯತ್ವ ಉಳಿಯುತ್ತದೆ". ನಿಜಕ್ಕೂ ಈ ಕಲಿತ ಪಾಠ ಅಮೋಘ. ಇದೇ ಮಾತನ್ನು ಇಲ್ಲಿಯ ಕೇಶವನಾರಾಯಣ ಅವರು ಕೂಡ ಹೇಳುತ್ತಾರೆ. 'ತುಂಬಾ ಕಷ್ಟ ಅನುಭವಿಸಿದ್ದೀವಿ, ನಿಜ. ನಾಲ್ವರ ಸಹಾಯಾನೂ ಪಡೆದಿದ್ದೀವಿ. ಈಗ, ಮೇಲೆ ಬಂದಾಗ ನಾಲ್ವರಿಗೆ ಕೊಡಬೇಕು, ಅದೇ ಜೀವನ.' ಇದೇ ಊರಿನ ಸುಬ್ಬರಾಯರು - 'ವ್ಯವಸಾಯದಿಂದ ನಮ್ಮ ಬದುಕು ಕಳೀತಿದ್ದದ್ದು ಬರೀ ಆರು ತಿಂಗಳು ಮಾತ್ರ. ಉಳಿದಂತೆ ಹೇಗೆ ಕಳೆದೆವೋ, ಬದುಕಿ ಉಳಿದೆವೋ ವಿಸ್ಮಯ' ಎಂದು ನೆನಪಿಸಿಕೊಳ್ಳುತ್ತಾರೆ. 'ಒಂದು ರೂಪಾಯಿ ಕೂಲಿಗೆ ವಿಳ್ಳೇದೆಲೆ ಕುಯ್ಯಲು ಹೋಗಿದ್ದೇನೆ. ಜನಿವಾರ ಹೊಸೆದು ನಾಲ್ಕಾರು ರೂಪಾಯಿ ಸಂಪಾದಿಸಿದ್ದೇನೆ. ಇಂದು ಹಣ ಇದೆ ಅಂತ ದುಂದು ಮಾಡುವವರನ್ನು ಕಂಡರೆ ನನಗಾಗುವುದಿಲ್ಲ' ಎನ್ನುತ್ತಾರೆ.

'ಸಹಕಾರತತ್ವದ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಂಡಿದ್ದೇವೆ' ಎನ್ನುತ್ತಾರೆ ಪೂಮಗಾಮೆಯ ಯೋಗಾನರಸಿಂಹ. 'ವ್ಯವಸಾಯದಲ್ಲಿ ಮಾರ್ಗ ಬದಲಿಸುತ್ತ ಹೋಗಬಾರದು, ಮಾರ್ಗ ಬದಲಿಸುತ್ತ ಹೋದರೆ ಯಾವುದರಲ್ಲಿಯೂ ಮುಂದುವರೆಯಲು ಆಗದು' ಎನ್ನುವುದು ಗೆಜ್ಜಗನಹಳ್ಳಿಯ ಜಿ.ಆರ್. ನಾಗರಾಜ್ ಕಂಡುಕೊಂಡ ಅನುಭವ ! ಮಕ್ಕಳನ್ನು ಹೇಗೆ ಬೆಳೆಸಬೇಕೆಂಬ ಅನುಭವವನ್ನು ಹಂಚಿಕೊಂಡಿದ್ದಾರೆ ಮೊಸಳೆಯ ಎಮ್.ಎನ್. ಶ್ರೀನಿವಾಸಮೂರ್ತಿ: "ತುಂಬಾ ಬಿಗಿ ಮಾಡಿದರೆ ಹಾಳಾಗುತ್ತಾರೆ. ಕಟ್ಟಿಹಾಕಿದರೆ ದಾರಿ ತಪ್ಪುತ್ತಾರೆ. ಸ್ನೇಹಿತರಂತೆ ಕಂಡಾಗ ಮಾತ್ರ ಒಳ್ಳೆ ದಾರೀಲಿ ನಡೆಯುವಂತಾಗುವುದು ಸಾಧ್ಯ."

ಹತ್ತು ವರ್ಷಕಾಲ ಚಿಲ್ಕುಂದದ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿದ್ದ ಚನ್ನಕೇಶವಯ್ಯ ಅವರು ತಮ್ಮ ೩೦೦೦ ಚ.ಅ. ಜಾಗವನ್ನು ಗ್ರಾಮಪಂಚಾಯ್ತಿಗಾಗಿ ದಾನ ಮಾಡಿದರು. ಹಾಗೆಯೇ ಲಿಂಗದಹಳ್ಳಿಯ ಗ್ರಾಮಪಂಚಾಯ್ತಿ ಅಧ್ಯಕ್ಷರಾಗಿದ್ದ ವೆಂಕಟರಮಣಯ್ಯ ಅವರು ಗ್ರಾಮಪಂಚಾಯ್ತಿಗಾಗಿ ಒಂದು ಭವನವನ್ನೂ ಸುತ್ತ ಇದ್ದ ಮಾವಿನ ತೋಪನ್ನೂ ದಾನವಾಗಿ ನೀಡಿದರು. ಜಾಗ ಸಿಕ್ಕೊಡನೆ ತಿನ್ನುವುದನ್ನು ಅಭ್ಯಾಸ ಮಾಡಿಕೊಳ್ಳುವ ಇಂದಿನ ರಾಜಕಾರಣಿಗಳಿಗೆ ಹೋಲಿಸಿದರೆ ಇವರುಗಳ ಹಿರಿಮೆ ತಿಳಿಯಬಹುದು.

ಈಚಲಕುಂದ ಚಿಲಕುಂದ ಆಗಿದೆ ಎನ್ನುತ್ತಾರೆ ಸಿ.ವಿ. ಸೂರ್ಯನಾರಾಯಣ. ಚಿಲುಕ ಎಂದರೆ ಗಿಳಿ ಎಂದರ್ಥ. ಚಿಲ್ಕುಂದದ ಸಿ.ಎನ್. ಸುಬ್ಬರಾಯರ ಸ್ವಾನುಭವ ಕೇಳಿ - ೧೨ರ ಹುಡುಗ. ಮರ ಏರಿದ. ಅಲ್ಲಿಂದ ೧೮ ಅಡಿ ಆಳದ ಭಾವಿಗೆ ಬಿದ್ದ. ಬದುಕಿದ! ಸೊಂಟ ಮುರಿದು ಮೂರು ತಿಂಗಳು ಅನುಭವಿಸಿದ. ೨೫ ಆದಾಗ ಇನ್ನೊಮ್ಮೆ ಮಾವಿನ ಮರದ ತುದಿರೆಂಬೆಯಿಂದ ಬಿದ್ದ, ಕೆಳಗೆ ಸಣ್ಣ ರೆಂಬೆ ರಕ್ಷಿಸಿತು. ಮೂರನೆಯ ಬಾರಿ ಹೊಸಮನೆ ಕಟ್ಟುವಾಗ ಕರೆಂಟ್ ಶಾಕ್ ಆಗಿ ಬಿದ್ದ. ಬದುಕುಳಿದ! ಸಿ.ಎನ್. ಸುಬ್ಬರಾಯರು ಕೃಷಿಕಾರ್ಯದ ಬಗೆಗೆ ಬೇಸರದ ಮಾತಾಡುವುದಿಲ್ಲ. 'ವ್ಯಕ್ತಿಸ್ವಾತಂತ್ರ್ಯವಿರುತ್ತದೆ. ಯಾಂತ್ರಿಕತೆಯಿರುವುದಿಲ್ಲ. ವಿರಾಮ ಸಾಕಷ್ಟಿರುತ್ತದೆ. ನೆರೆಹೊರೆಯವರೊಡನೆ ಉತ್ತಮ ಬಾಂಧವ್ಯವಿರುತ್ತದೆ' ಎನ್ನುತ್ತಾರೆ. ಹುಣಸೂರಿನ ಏಕೈಕ ಸಂಕೇತಿ ರೈತ ಜಗದೀಶಕುಮಾರ ಕೂಡ ಇದೇ ರೀತಿ ಒಳ್ಳೆಯ ಭಾವ ವ್ಯಕ್ತಪಡಿಸಿದರು. 'ನಂಬಿದವರಿಗೆ ಈ ವೃತ್ತಿಯಲ್ಲಿ ಮೋಸವಿಲ್ಲ' ಎನ್ನುವರು. ತರಕಾರಿ ಕೃಷಿಯಲ್ಲಿ ವಿಶೇಷ ಸಾಧನೆ ಮಾಡಿದವರು ಅವರು. ಅಲ್ಲದೆ ತೆಂಗು, ಅಡಿಕೆ, ಮಾವು, ಸುಬಾಬುಲ್, ಬಾಳೆ, ತೇಗ, ಹಿಪ್ಪುನೇರಳೆ, ಸಪೋಟ, ಅರಿಶಿಣ, ಭತ್ತ ಕೂಡ ಬೆಳೆವವರು.

'ಸಂತೋಷವಾಗಿದ್ದೇನೆ, ದೇವರು ಕೊಟ್ಟಿರುವುದು ಸಾಕು' ಎನ್ನುತ್ತಾರೆ ಬೆಟ್ಟದಪುರದ ಶ್ರೀಧರಮೂರ್ತಿ. ಆದರೆ ಇಲ್ಲಿನ ಸೂರ್ಯನಾರಾಯಣರ ಅಭಿಪ್ರಾಯ ಇದಕ್ಕೆ ವಿರುದ್ಧ: 'ವ್ಯವಸಾಯದಲ್ಲಿ ಸುಖವಿಲ್ಲ. ಕಷ್ಟಪಟ್ಟರೂ ಫಲವಿಲ್ಲ. ನೆರೆಹೊರೆ ಸರಿಯಿಲ್ಲ. ಪಟ್ಟಣ ಸೇರುವ ಆಸೆ'.

ಮತ್ತೂರಿನ ಎನ್.ಕೆ. ಚನ್ನಕೇಶವ ಅವರು ಇಂದು ಚೆನ್ನಾಗಿದ್ದಾರೆ. ಆದರೆ ಒಂದು ಕಾಲದಲ್ಲಿ ತುಂಬ ಬಡತನ. ದಯನೀಯ ಸ್ಥಿತಿ ಅನುಭವಿಸಿದವರು. ಮನೆ ಕೆಲಸಕ್ಕೆ ಹೋಗುವ ತಮ್ಮ ಅತ್ತೆಮಾವನನ್ನು ಬ್ರಾಹ್ಮಣರ ಮನೆಯಲ್ಲಿಯೇ ಹಿಂದುಗಡೆ ಬಾಗಿಲಿನಿಂದ ಬಾ ಅನ್ನುತ್ತಿದ್ದರಂತೆ ! 'ಅವರು ನನಗೆ ಹೆಣ್ಣುಕೊಟ್ಟು ಕಣ್ಣು ಕೊಟ್ಟರು. ಅದಕ್ಕೆ ಅವರಿಗೆ ಸಾಕಷ್ಟು ಸಹಾಯ ಮಾಡಿದ್ದೇನೆ, ಅವರ ಮಕ್ಕಳಿಗಾಗಿ ಭದ್ರಾವತೀಲಿ ಎರಡು ಮನೆ ಕಟ್ಟಿಸಿಕೊಟ್ಟಿದ್ದೀನಿ' ಎಂದು ಸಂತೃಪ್ತಿಯಿಂದ ನುಡಿಯುತ್ತಾರೆ. ಬಸವಾನಿಯ ಕಸ್ತೂರಿಯವರೂ ಈ ಮಾತು ಹೇಳಿದ್ದಾರೆ. 'ಬಡವರು ಅಂತ ನಿಕೃಷ್ಟ ಮಾಡುತ್ತಾರೆ. ನಾನು ಮನಸ್ಸಿಗೆ ತಗೋಳೋಲ್ಲ. ತಗೊಂಡರೆ ತಾನೆ ಕಸಿವಿಸಿ?'

ಕೃಷಿಯಲ್ಲಿ ಸಿಗುವ ಸಂತೋಷ ಅನ್ಯತ್ರ ಇಲ್ಲ ಎನ್ನುತ್ತಾರೆ ಬಸವಾನಿಯ ಸಾವಿತ್ರಮ್ಮ ರಾಮಶರ್ಮ. ಪತಿಯು ರಾಜಕೀಯ ಚಳವಳಿಗೆ ಅರ್ಪಿಸಿಕೊಂಡ ಕಾರಣ ಸುಮಾರು ೫೦ ವರ್ಷ ಇವರೇ ತೋಟದ ಆಡಳಿತವನ್ನು ವಿಶೇಷವಾಗಿ ನೋಡಿಕೊಂಡಿದ್ದಾರೆ. ಸಾಲತೀರಿಸಲಿಲ್ಲ ಅಂತ ಒಮ್ಮೆ ೫೦ ಗಂಡಾಳು ತೋಟಕ್ಕೆ ನುಗ್ಗಿ ಮರ ಹತ್ತಲು ಹೊರಟಾಗ ಒಬ್ಬರೇ ಮಚ್ಚು ಹಿಡಿದು ಎದುರಿಸಿ, ಅಬ್ಬರಿಸಿ ಹಿಮ್ಮೆಟ್ಟಿಸಿದ್ದಾರೆ ! ತಾವೂ ಸ್ವಾತಂತ್ರ್ಯ ಚಳವಳಿಯ ಜೊತೆಗೆ ಸಮಾಜ ಸೇವೆ ಮಾಡುತ್ತ ಬಂದಿದ್ದಾರೆ. ಒಂದು ಉದಾಹರಣೆ: ಇವರು ಕಟ್ಟಿದ ಅಬಲಾಶ್ರಮದ ಹುಡುಗಿಯೊಬ್ಬಳು (ಹೆಸರು ಸರೋಜ) ಆಗಿನ ಮಂತ್ರಿ ದಾಸಪ್ಪ ಅವರ ಸೊಸೆಯಾದರು ! ಅವರು ನಡೆಸಿದ ಮಾತೃಮಂದಿರ 'ಋಷ್ಯಾಶ್ರಮದಂತಿದೆ' ಎಂದು ಆಗಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಶ್ಲಾಘಿಸಿದರಂತೆ.

ಯಾರೇ ಆಗಲಿ ಸ್ವಂತ ವಿಷಯ ಹೇಳುವಾಗ ಬೇರೆಯವರಿಗೆ ಗೊತ್ತಿಲ್ಲದ ಸಣ್ಣ, ಸೂಕ್ಷ್ಮ ಸಂಗತಿಗಳೂ ದಾಖಲಾಗಲು ಸಾಧ್ಯ. ಅವರು ಮಾತ್ರ ಹೇಳಲು ಸಾಧ್ಯವಾದ ವಿಷಯಗಳು, ಈ ಹೊಳವು ಮೇಲಿನ ಎಲ್ಲ ಪುಟಗಳಲ್ಲಿವೆ. ತಮ್ಮ ಬಗ್ಗೆ ಹೇಳುವಾಗ ಸ್ವಲ್ಪ ಹಿಗ್ಗಿಸಬಹುದು ಎಂಬ ಅನುಮಾನವು ಕೆಲವರಿಗೆ ಬರಬಹುದು. ಎಲ್ಲರೂ ಗಾಂಧಿಗಳಲ್ಲವಷ್ಟೆ, ಆದರೆ ಹೇಳಿದ್ದು ನಿರಂತರ ಬೇರೆಯವರ ಕಣ್ಣಿಗೆ ಬೀಳುತ್ತಿರುವುದರಿಂದ ಸುಳ್ಳು ಹೇಳಿ ದಕ್ಕಿಸಿಕೊಳ್ಳುವುದೂ ಸಾಧ್ಯವಿಲ್ಲ. ಅಲ್ಲವೆ? ಒಟ್ಟಾರೆ ಇಲ್ಲಿನ ಅಧ್ಯಯನ ಸಾರ್ಥಕವಾಗಿದೆ, ಫಲಪ್ರದವಾಗಿದೆ.

*****

ವಿಶ್ವವಿದ್ಯಾನಿಲಯ ಸಂಜೆ ಕಾಲೇಜು **ಡಾ. ಬಿ. ಚನ್ನಕೇಶವ**
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಸಂಸ್ಕೃತ ಪ್ರಾಧ್ಯಾಪಕರು (ನಿವೃತ್ತ)

ವಿದ್ವಾನೇವ ವಿಜಾನಾತಿ ವಿದ್ವಜ್ಜನಪರಿಶ್ರಮಮ್ |
ನ ಹಿ ವಂಧ್ಯಾ ವಿಜಾನಾತಿ ಗುರ್ವೀಂ ಪ್ರಸವವೇದನಾಮ್ || ಕುವಲಯಾನಂದ

ವಿದ್ವಜ್ಜನರ ಪರಿಶ್ರಮವನ್ನು ವಿದ್ವಾಂಸನು ಮಾತ್ರ ತಿಳಿಯಬಲ್ಲನು. ಹೆರಿಗೆಯ ತೀವ್ರವಾದ ವೇದನೆಯು ಬಂಜೆಗೆ ತಿಳಿಯುವುದಿಲ್ಲ.

ಸ್ವಾತಂತ್ರ್ಯಪೂರ್ವಭಾರತದಲ್ಲಿ ಸಾಮಾನ್ಯವಾಗಿ ಬ್ರಾಹ್ಮಣರು ಕೃಷಿಯಿಂದಲೋ, ಪಾರಂಪರಿಕವಾಗಿ ತಾವು ಕಲಿತಿರುವ ವಿದ್ಯೆಗಳಿಂದಲೋ ಇಲ್ಲಾ ಬಹುವಿರಳವಾಗಿ ದೊರೆಯುತ್ತಿದ್ದ ಅರಮನೆಯ ನೌಕರಿಯಿಂದಲೋ ಜೀವನ ಸಾಗಿಸುತ್ತಿದ್ದರು. ಬ್ರಾಹ್ಮಣರ ಒಂದು ಉಪಪಂಗಡವಾದ ಸಂಕೇತಿ ಜನಾಂಗಕ್ಕೆ ಪ್ರಾಚೀನಕಾಲದಿಂದಲೂ ವ್ಯವಸಾಯವೇ ಮುಖ್ಯ ಕಸುಬು. ಇಲ್ಲಿ ಸಂಕೇತಿಗಳಿಗೆ ಸಂಬಂಧಿಸಿದಂತೆ ವ್ಯವಸಾಯವೆಂದರೆ ಪ್ರಧಾನವಾಗಿ ಅಡಿಕೆ, ತೆಂಗು, ಬಾಳೆ, ವಿಳ್ಯೇದೆಲೆ ಮತ್ತು ಭತ್ತ ಇವುಗಳನ್ನು ಬೆಳೆಯುವುದು. ಹೀಗೆ ಬೆಳೆದ ಈ ಬೆಳೆಗಳ ಜೊತೆಜೊತೆಗೇ ಕೆಲವರು ಸಹಜವಾಗಿ ಅವುಗಳ ಕ್ರಯವಿಕ್ರಯವ್ಯವಹಾರವನ್ನೂ ರೂಢಿಸಿಕೊಂಡರು. ಎಲ್ಲೋ ಅಲ್ಲೊಬ್ಬರು ಇಲ್ಲೊಬ್ಬರು ವಿರಳವಾಗಿ ತಮ್ಮ ಕುಲಕ್ರಮಾಗತವಿದ್ಯೆಗಳಾದ ವೇದ, ವೈದ್ಯ, ಜ್ಯೋತಿಷ, ಸಂಗೀತ ಮುಂತಾದವನ್ನು ಕೃಷಿಯ ಜೊತೆಯಲ್ಲಿ, ಕೆಲವೊಮ್ಮೆ ವಿವಿಕ್ತವಾಗಿಯೂ, ವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ನಮ್ಮ ಜ್ಞಾನ ತಲಪಬಹುದಾದಷ್ಟು ಪ್ರಾಚೀನಕಾಲದಿಂದಲೂ ಕೃಷಿ ಮತ್ತು ಅದನ್ನೇ ಆಧರಿಸಿದ ಕೆಲವು ಉಪಕಸುಬುಗಳು ಸಂಕೇತಿ ಜನಾಂಗದ ಪ್ರಧಾನವಾದ ಜೀವನೋಪಾಯಗಳಾಗಿದ್ದವೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಪಶುಪಾಲನೆ ಮತ್ತು ವ್ಯವಸಾಯ ಆರ್ಯರ ಮುಖ್ಯ ಕಸುಬುಗಳಾಗಿದ್ದವೆಂಬುದನ್ನು ಸ್ಮರಿಸಿಕೊಂಡರೆ ಈ ಮಾತು ಸ್ಪಷ್ಟವಾಗುತ್ತದೆ. ಹೀಗೆ ಹಿಂದಿನಿಂದಲೂ ಕೃಷಿಯ ಸುತ್ತಮುತ್ತ ಬೆಳೆದು ಬಂದ ಸಂಕೇತಿಗಳ ಜೀವನಕ್ರಮದಲ್ಲಿ ಸ್ವಾತಂತ್ರ್ಯೋತ್ತರಕಾಲದಲ್ಲಿ ಒಮ್ಮಿಂದೊಮ್ಮೆಗೇ ಕಂಡುಕೇಳರಿಯದಷ್ಟು, ಬೆಚ್ಚಿಬೀಳಿಸುವಷ್ಟು ಬದಲಾವಣೆಗಳಾಗುವುದನ್ನು ಕಾಣುತ್ತೇವೆ. ಇದಕ್ಕೆ ಕಾರಣಗಳು ಹಲವಾರು ಇದ್ದರೂ ಮುಖ್ಯವಾಗಿ ಆಂಗ್ಲರಿಂದ ಪ್ರಾರಂಭವಾದ ಆಧುನಿಕ ವಿದ್ಯಾಪದ್ಧತಿ, ಅದರಿಂದ ದೊರೆಯುವ ನಾನಾ ಬಗೆಯ ವೃತ್ತಿಗಳು ಮತ್ತು ಸುಖಸೌಲಭ್ಯಗಳು, ಇವುಗಳ ಪರಿಣಾಮದಿಂದ ಮುರಿದುಬಿದ್ದ ಅವಿಭಕ್ತಕುಟುಂಬಪದ್ಧತಿ ಇವು ಕಾರಣಗಳೆಂಬುದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಸ್ವಾತಂತ್ರ್ಯಪೂರ್ವದ ಒಂದೆರಡು ದಶಕಗಳಿಂದೀಚೆಗೆ ಹುಟ್ಟಿ ಬೆಳೆದ ಸಂಕೇತಿಗಳಲ್ಲಿ ಬಹುಪಾಲು ಜನ ಇಂದು ದೇಶವಿದೇಶಗಳ ನಗರಗಳಲ್ಲಿ ಒಳ್ಳೆಯ ನೌಕರಿಗಳನ್ನು ಹಿಡಿದು ಜೀವನ ಸಾಗಿಸುತ್ತಿರುವುದರಿಂದ ಅವರಿಗೆ ತಮ್ಮ ಪೂರ್ವಿಕರ ನೆಲೆಗಳೊಡನೆ ಸಂಪರ್ಕ ತಪ್ಪಿಹೋಗಿ ಹಳ್ಳಿಗಳಲ್ಲಿ ವಾಸಿಸುತ್ತಿದ್ದ ಸಂಕೇತಿಗಳ ಬದುಕು ಹೇಗೆ ಕೃಷಿಯೊಡನೆ ಹಾಸುಕೊಕ್ಕಾಗಿ ಬೆರೆತುಕೊಂಡಿದ್ದಿತು ಎಂಬುದರ ಕಲ್ಪನೆಯೂ ಇಲ್ಲವಾಗಿದೆ. ಹೀಗೇ ವರ್ಷಗಳು ಉರುಳುತ್ತಾ ಹೋದಂತೆ ವ್ಯವಸಾಯಕ್ಕೂ ಸಂಕೇತಿ ಜನಾಂಗಕ್ಕೂ ಇದ್ದಂತಹ ಅವಿನಾಭಾವಸಂಬಂಧದ ಚಿತ್ರ ಮತ್ತಷ್ಟು ಮಸುಕಾಗುತ್ತಾ ಹೋಗಿ ಕೊನೆಗೊಂದು ದಿನ ಸಂಪೂರ್ಣವಾಗಿ ಕ್ಷೀಣಿಸಿಬಿಡುವ ಅಪಾಯ ನಮ್ಮ ಕಣ್ಮುಂದಿದೆ. ಇದನ್ನು ಗಮನಿಸಿದ ಸನ್ಮಿತ್ರ ಶ್ರೀ ಹರನ್ ಅವರು ಸಂಕೇತಿಗಳ ಕೃಷಿಕಜೀವನವನ್ನು ಅದರ ಸಮಸ್ತ ಆಯಾಮಗಳೊಡನೆ ತುರ್ತಾಗಿ ದಾಖಲಿಸಬೇಕಾದ ಅಗತ್ಯವನ್ನು ಮನಗಂಡು ಕಾರ್ಯಪ್ರವೃತ್ತರಾದುದರ ಫಲವಾಗಿಯೇ 'ಸಂಕೇತಿಕೃಷಿಯ ವಿಭಿನ್ನನೆಲೆಗಳು' ಎಂಬ ೪೫೨ ಪುಟಗಳ ಈ ಬೃಹದ್ಗ್ರಂಥ ಸಂಕೇತಿ ಅಧ್ಯಯನ ಮಾಲೆಯ ಎಂಟನೇ ಸಂಪುಟದ ರೂಪದಲ್ಲಿ ಬೆಳಕು ಕಾಣುತ್ತಿರುವುದು. ಇಂತಹ ಒಂದು ಅದ್ಭುತಗ್ರಂಥದ ರಚನೆಗೆ ಹರನ್ ಪ್ರೇರಕಶಕ್ತಿಯಾದರೆ ಮೈಸೂರು ಆಕಾಶವಾಣಿ ಕೇಂದ್ರದಲ್ಲಿ ಕೃಷಿತಜ್ಞರಾಗಿರುವ ಶ್ರೀ ಎನ್. ಕೇಶವಮೂರ್ತಿ ಅವರು ಕಾರಕಶಕ್ತಿಯಾಗಿದ್ದಾರೆ.

ಕೇಶವಮೂರ್ತಿಯವರು ಈ ಗ್ರಂಥರಚನೆಯಲ್ಲಿ ಒಂದು ವಿಶಿಷ್ಟವಾದ ಕ್ರಮವನ್ನು ಅನುಸರಿಸುತ್ತಾರೆ. ಇದು ಸಂಕೇತಿಗಳ ಕೃಷಿಮಾತ್ರದ ಅಧ್ಯಯನವಾಗದೇ ಕೃಷಿಯೊಡನೆ ಸಮರಸವಾಗಿ ಬೆರೆತಿರುವ ಅವರ ಜೀವನದ ಅಧ್ಯಯನವೂ ಆಗಬೇಕೆಂಬುದು ಅವರ ಆಶಯವಾಗಿದೆ. ಅದಕ್ಕಾಗಿ ಅವರು ಒಂದು ಚೌಕಟ್ಟನ್ನು ಹಾಕಿಕ್ಕೊಂಡು ಆ ಚೌಕಟ್ಟಿನೊಳಗೆ ಸಂಕೇತಿಕೃಷಿಯ ಮತ್ತು ಅವರ ಸಮಗ್ರ ಜೀವನಕ್ರಮದ ಚಿತ್ರವನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಈ ಕಾರ್ಯವನ್ನು ಸಾಧ್ಯವಾದಷ್ಟು ಪರಿಪೂರ್ಣವನ್ನಾಗಿ ಮಾಡಬೇಕೆಂಬ ಸತ್ಸಂಕಲ್ಪದಿಂದ ಕಾರ್ಯಪ್ರವೃತ್ತರಾಗುವ ಅವರು ಸುಮಾರು ಎರಡು ವರ್ಷಗಳ ಕಾಲ ಊರೂರು ಸುತ್ತಿ ಕ್ಷೇತ್ರಕಾರ್ಯವನ್ನು (Field Survey) ನಡೆಸಿ ಸಂಕೇತಿ ವ್ಯವಸಾಯಗಾರರನ್ನು ಸಂದರ್ಶಿಸಿ ಪ್ರಶ್ನಾವಳಿಯಮೂಲಕ ಪ್ರತ್ಯಕ್ಷಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಈ ರೀತಿ ಮಾಹಿತಿ ಸಂಗ್ರಹಕ್ಕಾಗಿ ಕೇಶವಮೂರ್ತಿ ಆರು ಜಿಲ್ಲೆಗಳಲ್ಲಿ ಹರಡಿರುವ ೩೩ ಗ್ರಾಮಗಳಿಗೆ ಭೇಟಿಕೊಟ್ಟು ಸುಮಾರು ೯೬ ಜನ ಸಂಕೇತಿ ಕೃಷಿಕರೊಡನೆ ಖುದ್ದಾಗಿ ಸಂದರ್ಶನ ನಡೆಸಿದ್ದಾರೆ. ಅವರು ಭೇಟಿಕೊಟ್ಟಿರುವ ಸ್ಥಳಗಳಲ್ಲಿ ಚಿಕಮೇನಹಳ್ಳಿ, ಮುದ್ಲಾಪುರ, ಕೃಷ್ಣಾಪುರ, ಹರವೆ, ಶೀಗವಾಳು, ಗೆಜಗನಹಳ್ಳಿ, ನಿಟ್ಟೂರು, ಹರಿಹರಪುರದಂತಹ ಕೇವಲ ಒಂದೆರಡು ಕುಟುಂಬಗಳಿರುವ ಸಣ್ಣ ಸಣ್ಣ ಹಳ್ಳಿಗಳೂ; ಅಂಡೆಕುಳಿ, ಗದ್ದೆಮನೆ, ಭಕ್ತರಹಳ್ಳಿ, ಆಲಂದಡಕದಂತಹ ಸಂಕೇತಿಗಳಿಗೆ ಹೆಚ್ಚು ಪರಿಚಿತವಲ್ಲದ ಹಳ್ಳಿಗಳೂ; ಮೈಸೂರು, ಬೆಂಗಳೂರು, ಮಡಕೇರಿಯಂತಹ ನಗರಗಳೂ ಸೇರಿವೆ. ಅವರು ಸಂದರ್ಶಿಸಿರುವವರಲ್ಲಿ ವೈದ್ಯರಿದ್ದಾರೆ, ಎಂಜನಿಯರುಗಳಿದ್ದಾರೆ, ಕೃಷಿವಿಜ್ಞಾನಿಗಳಿದ್ದಾರೆ, ವಿವಿಧ ಪದವಿಗಳನ್ನು ಪಡೆದಿರುವ ಅನೇಕ ಪದವೀಧರರಿದ್ದಾರೆ. ಆಧುನಿಕ ವಿದ್ಯಾಭ್ಯಾಸದಿಂದ ದೊರೆಯಬಹುದಾದ ನೌಕರಿಯನ್ನು ಪಡೆದು ಸುಖವಾಗಿ ಜೀವನ ಸಾಗಿಸುವ ಸಾಧ್ಯತೆಯಿದ್ದರೂ ಅದನ್ನು ತುಚ್ಛೀಕರಿಸಿ ಸ್ವತಂತ್ರಬದುಕನ್ನು ಕಟ್ಟಿಕೊಳ್ಳಬೇಕೆಂಬ ಹಂಬಲದಿಂದ ಹಳ್ಳಿಗಳಿಗೆ ಹಿಂದಿರುಗಿರುವ ವಿದ್ಯಾವಂತಕೃಷಿಕರನ್ನು ಕಂಡು, ಅವರ ಬಗ್ಗೆ ಓದಿ ಹೆಮ್ಮೆಯಿಂದ ಮನಸ್ಸು ತುಂಬಿಬರುತ್ತದೆ. ಇಂದಿಗೂ ಹಳ್ಳಿಗಳಲ್ಲಿ ವಾಸಿಸುತ್ತಿರುವ ಸಂಕೇತಿಗಳಿಗೆ ವ್ಯವಸಾಯವು ಜೀವನಾಧಾರವಾಗಿದ್ದರೆ ಮೈಸೂರು ಬೆಂಗಳೂರುಗಳಂತಹ ನಗರಗಳಲ್ಲಿ ವಾಸವಾಗಿರುವ ಕೆಲವು ಸಂಕೇತಿಗಳಿಗೆ ವ್ಯವಸಾಯವು ಅದು ನೀಡುವ ಸಂತೋಷಕ್ಕಾಗಿರುವ ಮತ್ತು ಅದರೊಡನಿರುವ ಒಂದು ರೀತಿಯ ಭಾವನಾತ್ಮಕ ಸಂಬಂಧವನ್ನು ಜತನದಿಂದ ಜೋಪಾನವಾಗಿ ಕಾಪಾಡಿಕೊಳ್ಳಲು ಅನುಕೂಲವಾಗಿರುವ ಒಂದು ಹವ್ಯಾಸವಾಗಿದೆ. ಇಂದು ಅನೇಕ ವಿದ್ಯಾವಂತಕೃಷಿಕರು ವಿಜ್ಞಾನವು ಒದಗಿಸುವ ಹೊಸಹೊಸ ಸಾಧನಸಲಕರಣೆಗಳನ್ನು ಉಪಯೋಗಿಸಿಕೊಂಡು ಕೃಷಿಯಲ್ಲಿ ಹೊಸಹೊಸ ಪ್ರಯೋಗಗಳನ್ನು ಮಾಡಲು ಮತ್ತು ಪರಂಪರಾಗತ ಬೆಳೆಗಳಿಗಿಂತ ಭಿನ್ನವಾಗಿ ವಾಣಿಜ್ಯಪ್ರಧಾನ ಬೆಳೆಗಳನ್ನು ಬೆಳೆಯಲು ಮುಂದಾಗುತ್ತಿರುವುದು ಮೆಚ್ಚಿ ಪ್ರೋತ್ಸಾಹಿಸಬೇಕಾದ ವಿಷಯವಾಗಿದೆ.

ಕೃಷಿತಜ್ಞರಾದ ಎನ್. ಕೇಶವಮೂರ್ತಿಯವರು ಸಂಕೇತಿ ಪಂಗಡದಿಂದ ಹೊರಗಿನವರಾಗಿರುವುದರಿಂದ ಅವರಿಗೆ ವಿಷಯವನ್ನು ಸುಲಭವಾಗಿ ನಿರಾಸಕ್ತಮನಸ್ಸಿನಿಂದ ನೋಡಲು, ಪರಾಮರ್ಶಿಸಿ ಗುಣದೋಷಗಳನ್ನು ಎತ್ತಿ ತೋರಿಸಲು ಸಾಧ್ಯವಾಗಿದೆ. ಅವರು ನಡೆಸಿರುವ ೯೬ ಸಂದರ್ಶನಗಳೂ ಸುಂದರವಾದ ೯೬ ವ್ಯಕ್ತಿಚಿತ್ರಗಳಾಗಿ ರೂಪಿತವಾಗಿವೆ. ಇಡೀ ಗ್ರಂಥವು ಒಂದೇ ವಿಷಯಕ್ಕೆ ಸಂಬಂಧಿಸಿದ್ದು ಸಂದರ್ಶನಗಳೂ ಸಾಮಾನ್ಯವಾಗಿ ಒಂದೇ ರೀತಿ ಇರುವುದರಿಂದ ಅನಿವಾರ್ಯವಾಗಿ ಒಂದು ರೀತಿಯ ಏಕತಾನತೆ ಕಂಡುಬಂದರೂ ಅವರು ತಮ್ಮ ವಿಶಿಷ್ಟವಾದ ಶೈಲಿಯಿಂದ ಮತ್ತು ವಿಭಿನ್ನವಾದ ಪ್ರಶ್ನೆಗಳ ಮೂಲಕ ಇದನ್ನು ಕಮ್ಮಿಮಾಡಲು ಪ್ರಯತ್ನಿಸಿದ್ದಾರೆ. ಉಪಸಂಹಾರದಲ್ಲಿ ಸಂಕೇತಿಗಳ ವ್ಯವಸಾಯ ಮತ್ತು ವೇದಾಧ್ಯಯನ-ಅಧ್ಯಾಪನಗಳು ಹೇಗೆ ಜೊತೆಜೊತೆಯಲ್ಲಿ ಬೆಳೆದು ಬಂದವು ಎಂಬುದನ್ನು ತಿಳಿಸುತ್ತಾ - 'ನಿರ್ಜನಪ್ರದೇಶದ ಭೀತಿಯನ್ನು ಹೊಡೆದೋಡಿಸಲು' ...... 'ಜೋರಾಗಿ ಮಂತ್ರಗಳನ್ನು ಪಠಿಸಿದರೆ ಭೀತಿ ದೂರಾಗಬಹುದು' ..... ಹಾಗೆ ಆರಂಭವಾಗಿರಬಹುದು ತೋಟದಲ್ಲಿ ವೇದವಿದ್ಯಾಕಲಿಕೆ - ಎಂದು ಅವರು ವ್ಯಕ್ತಪಡಿಸಿರುವ ಅಭಿಪ್ರಾಯ ಸಮ್ಮತವಲ್ಲ.

ದಿನಕ್ಕೆ ಸರಾಸರಿ ೧೨-೧೪ ಗಂಟೆಗಳಂತೆ ಸುಮಾರು ೧೨ ವರ್ಷಗಳ ಕಾಲ ನಿರಂತರವಾಗಿ ಕಲಿಯಬೇಕಾದುದು ವೇದವಿದ್ಯೆ. ಆದ್ದರಿಂದ ಸಂಕೇತಿಗಳಿಗೆ ಗತ್ಯಂತರವಿಲ್ಲದೆ ಅನಿವಾರ್ಯವಾಗಿ ಕೃಷಿ ಮತ್ತು ವೇದಕಲಿಕೆ ಎರಡನ್ನೂ ಏಕಕಾಲದಲ್ಲಿ ಒಟ್ಟಿಗೇ ಮಾಡಬೇಕಿತ್ತೇ ಹೊರತು ಅದಕ್ಕೆ ಕೇಶವಮೂರ್ತಿ ವ್ಯಕ್ತಪಡಿಸಿರುವ ಅಭಿಪ್ರಾಯ ಕಾರಣವಲ್ಲ. ಉದ್ದಕ್ಕೂ ಪ್ರಕೃತಿಯ ಮಡಿಲಲ್ಲೇ ಬದುಕನ್ನು ರೂಪಿಸಿಕೊಂಡ ಮತ್ತು ಕಲಿತ ವೇದಗಳ ರಕ್ಷಣೆಯಲ್ಲಿ ನಿರ್ಭಯವಾಗಿದ್ದ ಸಂಕೇತಿಗಳು ಎಂದೂ ಯಾವುದಕ್ಕೂ ಭಯಪಟ್ಟವರಲ್ಲ ಎಂದು ಹೇಳಿದರೆ ಅದನ್ನು ಯಾರೂ ಅಹಂಕಾರದ ಮಾತಾಗಿ ಭಾವಿಸಬಾರದು.

ಕೇಶವಮೂರ್ತಿಗಳು ಈ ಗ್ರಂಥರಚನೆಗಾಗಿ ಪಟ್ಟಿರುವ ಶ್ರಮ ಅಗಾಧವಾದುದು, ಅಚ್ಚರಿಮೂಡಿಸುವಂತಹುದು ಮಾತ್ರವಲ್ಲ ಸಾರ್ಥಕವಾದುದೂ ಆಗಿದೆ. ಸಂಗ್ರಹಿಸಿದ ಅಪಾರವಾದ ಮಾಹಿತಿಯನ್ನು ಬರಹರೂಪದಲ್ಲಿ ನಮ್ಮ ಮುಂದೆ ಇಟ್ಟಿರುವ ಪರಿ ಬಹಳ ಮನೋಜ್ಞವಾಗಿದೆ. ಅವರ ಭಾಷೆ ಸರಳವೂ, ಸುಂದರವೂ ಮತ್ತು ಸುಲಭಗ್ರಾಹ್ಯವೂ ಆಗಿದೆ. ಅವರ ಈ ಗ್ರಂಥ ಸತ್ತ್ವ, ಮಹತ್ತ್ವ ಮತ್ತು ಬೃಹತ್ತ್ವಗಳಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸುವ ಮಹಾಪ್ರಬಂಧಕ್ಕೆ ಸರಿಸಮಾನವಾಗಿದೆ. ನನ್ನ ಜ್ಞಾನದ ಪರಿಮಿತಿಯಲ್ಲಿ ಹೇಳುವುದಾದರೆ ಇದು ಸಂಕೇತಿಕೃಷಿಗೆ ಸಂಬಂಧಪಟ್ಟಂತೆ ಪ್ರಪ್ರಥಮ ಮತ್ತು ಏಕಮಾತ್ರ ಗ್ರಂಥವಾಗಿದೆ. ಇಂತಹ ಈ ಗ್ರಂಥ ಬಹುಮೌಲಿಕವಾದುದು ಮತ್ತು ನಾಲ್ಕು ಕಾಲ ಉಳಿಯುವಂತಹುದು ಎಂಬುದರಲ್ಲಿ ಸಂದೇಹವಿಲ್ಲ. ಕೇಶವಮೂರ್ತಿಯವರ ಧನ್ಯತೆಯನ್ನು, ಕೃತಕೃತ್ಯತೆಯನ್ನು ಮನಸಾ ಪ್ರಶಂಸಿಸುತ್ತಿರುವ ಈ ಸಮಯದಲ್ಲಿ ನನಗೆ ಭಾಸನ ಒಂದು ಸೂಕ್ತಿ ನೆನಪಿಗೆ ಬರುತ್ತಿದೆ -

> ಕಾಷ್ಠಾದಗ್ನಿರ್ಜಾಯತೇ ಮಥ್ಯಮಾನಾತ್
> ಭೂಮಿಸ್ತೋಯಂ ಖನ್ಯಮಾನಾ ದದಾತಿ |
> ಸೋತ್ಸಾಹಾನಾಂ ನಾಸ್ತ್ಯಸಾಧ್ಯಂ ನರಾಣಾಮ್
> ಮಾರ್ಗಾರಬ್ಧಾಃ ಸರ್ವಯತ್ನಾಃ ಫಲಂತಿ || ಪ್ರತಿಜ್ಞಾಯೌಗಂಧರಾಯಣ

ಕಡೆದರೆ (ಉಜ್ಜಿದರೆ) ಮರದ ತುಂಡುಗಳಿಂದ (ಅರಣಿಯಿಂದ) ಬೆಂಕಿ ಹುಟ್ಟುತ್ತದೆ. ತೋಡಿದರೆ ಭೂಮಿಯು (ಬಾವಿ) ನೀರನ್ನು ಕೊಡುತ್ತದೆ. ಉತ್ಸಾಹಿಗಳಾದ ಮನುಷ್ಯರಿಗೆ ಅಸಾಧ್ಯವೆಂಬುದಿಲ್ಲ. ಸರಿಯಾದ ರೀತಿಯಲ್ಲಿ ಮಾಡಿದ ಎಲ್ಲ ಕೆಲಸಗಳೂ ಫಲಿಸುತ್ತವೆ.

ಕೇಶವಮೂರ್ತಿ ಸಂಕೇತಿಕೃಷಿಗೆ ಸಂಬಂಧಿಸಿದಂತೆ ಹೇಳಿರುವ ವಿಷಯ ಬಹಳ ಮತ್ತು ಸರ್ವತೋಮುಖ. ಅವರು ಹೇಳದೇ ಬಿಟ್ಟಿರುವುದು ಅತ್ಯಲ್ಪ. ಆದ್ದರಿಂದ ಅವರು ಹೇಳಿರುವುದನ್ನೇ ಮತ್ತೆ ಹೇಳದೇ ಅವರ ಗಮನಕ್ಕೆ ಬಾರದಿರುವ ಒಂದೆರಡು ವಿಷಯಗಳ ಬಗ್ಗೆ ಇಲ್ಲಿ ಹೇಳುವುದು ಉಚಿತವಾಗಿ ಕಾಣುತ್ತದೆ. ಸಂಕೇತಿಗಳ ಅಡಿಕೆತೋಟಗಳಲ್ಲಿ ಅಡಿಕೆ ಮರಗಳಿಗೆ ಸಾಮಾನ್ಯವಾಗಿ ವೀಳ್ಯದೆಲೆಯ (ವಿಳ್ಳೇದೆಲೆ, ವೆತ್ತಲ) ಹಂಬನ್ನು ಹಬ್ಬಿಸಲಾಗುತ್ತದೆ. ಈ ಹಂಬು ಸುಮಾರು ೧೫-೨೦ ಹಂತದವರೆಗೆ ಅಂದರೆ ೨೫-೩೦ ಅಡಿ ಎತ್ತರದವರೆಗೆ ಹಬ್ಬಿಕೊಂಡು ನಾಲ್ಕು ದಿಕ್ಕುಗಳಿಗೂ ಕೈಲೊಡೆದು ಹುಲುಸಾಗಿ ಹರಡುತ್ತದೆ. ಈ ಹಂಬುಗಳಿಂದ ವರ್ಷಕ್ಕೆರಡು ಸಲ ಎಲೆಗಳನ್ನು ಕುಯ್ಯಲು (ಒಡಗುಯ್ಲು, ಮರಗುಯ್ಲು) ಮತ್ತು ವರ್ಷಕ್ಕೊಮ್ಮೆ ಹಂಬನ್ನು ಕೆಳಕ್ಕಿಳಿಸಿ ಗುಂಡಿಗಳಲ್ಲಿ ಚಕ್ರಾಕಾರವಾಗಿ ನೆಲಕ್ಕೆ ಸೇರಿಸಲು (ಹಂಬನ್ನು ತೆಕ್ಕೆಬಿಡಲು) ೧೮-೨೦ ಹಂತಗಳ (ಮೆಟ್ಟಿಲುಗಳ) ದೊಡ್ಡದೊಡ್ಡ ಬಿದಿರಿನ ಏಣಿಗಳನ್ನು ಉಪಯೋಗಿಸಲಾಗುತ್ತದೆ. ಈ ಏಣಿಗಳನ್ನು ಅಡಿಕೆ ಮರಗಳಿಗೆ ಒರಗಿಸಿ ನಿಲ್ಲಿಸದೆ (ಹಾಗೆ ಮಾಡಿದರೆ ಹಂಬು ಹಾಳಾಗುತ್ತದೆ) ಏಣಿಯ ಮೇಲ್ಗಡೆಯಿಂದ ಮೂರನೆಯ ಅಥವಾ ನಾಲ್ಕನೆಯ ಹಂತಕ್ಕೆ ವೆಜ್ಜ (ರಂಧ್ರ) ತೆಗೆದು ಸೇರಿಸಿದ ಎರಡು ದೊಡ್ಡ ಬಿದಿರಿನ ಕಾಲುಗಳ ಆಧಾರದಿಂದ ಮರದ ಸಮೀಪದಲ್ಲಿ ನಿಲ್ಲಿಸಲಾಗುತ್ತದೆ. ಹೀಗೆ ನಿಲ್ಲಿಸಿದ ಏಣಿಯ ಮೇಲೆ ಹತ್ತಿ ಕೆಳಗಿನ

ಹಂತದಲ್ಲಿ ಒಂದು ಕಾಲನ್ನು ಮತ್ತು ಅದರ ಮೇಲಿನ ಹಂತದಲ್ಲಿ ಒಂದು ಕಾಲನ್ನು ಊರಿ ಅಥವಾ ಮೇಲಿನ ಹಂತವನ್ನು ದಾಟಿ ಕೆಳಗಿನ ಹಂತದ ಮೇಲೆ ಕಾಲನ್ನು ಊರಿ ಎರಡೂ ಕೈಗಳನ್ನು ಸ್ವತಂತ್ರಗೊಳಿಸಿಕೊಂಡು ಕೆಲಸಮಾಡುವುದನ್ನು ನೋಡುವುದೇ ಒಂದು ರೋಮಾಂಚಕ ಅನುಭವ. ಎಷ್ಟೋ ಸಮಯ ಸಹಾಯಕ್ಕೆ ಬೇರೊಬ್ಬರಿಲ್ಲದೇ ಒಬ್ಬರೇ ಏಣಿಯ ಕಾಲುಗಳನ್ನು ಒಂದಾದ ಮೇಲೊಂದರಂತೆ ಪರ್ಯಾಯವಾಗಿ ಸರಿದೂಗಿಸಿಕೊಂಡು (Balance) ನೂಕಿಕೊಂಡು ಏಣಿಯನ್ನು ಮರದಿಂದ ಮರಕ್ಕೆ ಎತ್ತಿಡುವ ಕೆಲಸದಲ್ಲಿ ಸ್ವಲ್ಪ ವ್ಯತ್ಯಾಸವಾದರೂ ೨೫-೩೦ ಅಡಿಯ ದೊಡ್ಡಏಣಿ ಎರಡೂ ಕಾಲುಗಳೊಡನೆ ನೆಲಕ್ಕೆ ಧೊಪ್ಪೆಂದು ಬಿದ್ದುಬಿಡುತ್ತದೆ. ಹೀಗೆ ನಿಲ್ಲಿಸಿದ ಏಣಿಯ ಮೇಲೆ ಹತ್ತಿ ಹಂಬುಕಟ್ಟುವುದು, ತೆಂಗಿನಗರಿಯ ಬುಟ್ಟಿಯಲ್ಲಿ ಎಲೆಯನ್ನು ಕುಯ್ದು ತುಂಬಿಸಿಕೊಳ್ಳುವುದು ಸುಲಭಸಾಧ್ಯ ಕೆಲಸವಲ್ಲ. ಎತ್ತರಕ್ಕೆ ಬೆಳೆದ ಹಂಬುಗಳನ್ನು ತೆಕ್ಕೆಬಿಡಲು ಒಮ್ಮೊಮ್ಮೆ ದೊಡ್ಡ ಹಗ್ಗ ಮತ್ತು ರಾಟೆಗಳನ್ನು ಉಪಯೋಗಿಸಬೇಕಾಗುತ್ತದೆ. ಸಂಕೇತಿ ಕೃಷಿಯ ಮತ್ತೊಂತು ವೈಶಿಷ್ಟ್ಯವೆಂದರೆ ಅಡಿಕೆಯ ಕುಯ್ಲು. ಅಡಿಕೆಗೊನೆಗಳನ್ನು ಹದನೋಡಿ ಕುಯ್ಯುವುದು ನಿಜಕ್ಕೂ ಬಹು ಕಷ್ಟವಾದ ಮತ್ತು ಅಷ್ಟೇ ಅಪಾಯಕಾರಿಯಾದ ಕೆಲಸ. ಸಂಕೇತಿಗಳು ಅಡಿಕೆಯನ್ನು ಕುಯ್ಯಲು ಬೇರೆಯವರಂತೆ ಮರದ ತೆಂಡೆಯವರೆಗೂ ಹೋಗಿ ಗೊನೆಗಳನ್ನು ಕುಯ್ದು ಹಗ್ಗದ ಮೂಲಕ ಇಳಿಸುವುದಿಲ್ಲ. ಸಾಮಾನ್ಯವಾಗಿ ಎಲ್ಲರ ತೋಟಗಳಲ್ಲಿ ವಿಳ್ಳೇದೆಲೆ ಹಂಬು ಇರುವುದರಿಂದ ಅವುಗಳಿಗೆ ಹಾನಿಯಾಗದಂತೆ ಅಡಿಕೆಯನ್ನು ಕೆಡಹಬೇಕಾಗುತ್ತದೆ. ಇದಕ್ಕಾಗಿ ಸಂಕೇತಿ ಗೊನೆಕಾರರು ತುದಿಗೆ ಹರಿತವಾದ ಕತ್ತಿಯನ್ನು ಬಿಗಿದುಕಟ್ಟಿರುವ ೧೫-೨೦ ಅಡಿಗಳ ದೊಡ್ಡ ಬಿದಿರಿನ ಜಲ್ಲೆಯನ್ನು ಉಪಯೋಗಿಸುತ್ತಾರೆ. ಐವತ್ತು ಅರುವತ್ತು ಅಡಿ ಎತ್ತರಕ್ಕೆ ಬೆಳೆದ ಅಡಿಕೆಮರಗಳ ಮುಕ್ಕಾಲುಭಾಗ ಕಾಲಿಗೆ ಗುದಿ ಹಾಕಿಕ್ಕೊಂಡು ಹತ್ತಿ ಜಲ್ಲೆಯ ಕತ್ತಿಯಿಂದ ಗೊನೆಯನ್ನು ಹಿಡಿದು ಮರವನ್ನು ತೊಯ್ದಾಡಿಸಿ ಮರಗಳ ಮಧ್ಯದಲ್ಲಿ ಬೀಳುವಂತೆ ಕಚಕ್ಕನೆ ಕುಯ್ದು ಹಂಬಿಗೆ ಸ್ವಲ್ಪವೂ ನೋವಾಗದಂತೆ ಕೆಳಕ್ಕೆ ಬೀಳಿಸುತ್ತಾರೆ. ಪಕ್ಕದ ಮರದಿಂದ ಗೊನೆ ಎಟುಕದಾದಾಗ ಒಮ್ಮೊಮ್ಮೆ ಅದೇ ಮರದಲ್ಲಿದ್ದುಕೊಂಡೇ ತಮಗಾಗಲೀ ಹಂಬಿಗಾಗಲೀ ಪೆಟ್ಟಾಗದಂತೆ ಗೊನೆಯನ್ನು ಕುಯ್ದು ಬೀಳಿಸುವ ಕೌಶಲ ಅದ್ಭುತವಾದದ್ದು. ಹೀಗೆ ಒಂದು ಮರದ ಅಡಿಕೆ ಕುಯ್ದಮೇಲೆ ಮರದಿಂದ ಕೆಳಕ್ಕಿಳಿಯದೇ ಜಲ್ಲೆಯಿಂದ ಪಕ್ಕದ ಮರವನ್ನು ಎಳೆದುಕೊಂಡು ಜಲ್ಲೆಸಮೇತ ಅದಕ್ಕೆ ಜಿಗಿಯುವುದು ನಯನಮನೋಹರವಾದ ದೃಶ್ಯವಾಗಿರುತ್ತದೆ. ಬೆಳಿಗ್ಗೆ ೭.೩೦ ರಿಂದ ೮.೦೦ ಗಂಟೆಗೆ ಮೊದಲ ಮರ ಹತ್ತಿದರೆ ಆ ತೋಟದ ಸುಮಾರು ೩೦೦-೩೫೦ ಮರಗಳ ಅಡಿಕೆ ಕಿತ್ತ ಬಳಿಕವೇ ಮರದಿಂದ ಕೆಳಕ್ಕೆ ಇಳಿಯುವುದು. ಹೀಗೆ ಗೊನೆಕಾರರು ಅಡಿಕೆಮರಗಳ ಮೇಲೆ ತೋರಿಸುವ ಹನುಮದ್ವಿಲಾಸವನ್ನು ನೋಡಿ ನೋಡಿ ಕೆಳಗೆ ಭೂಮಿಯಮೇಲೆ ನಿಂತವರಿಗೆ ಕತ್ತು ನೋಯುತ್ತದೆಯೇ ಹೊರತು ಮರಗಳನ್ನು ಬಿಗಿಹಿಡಿದಪ್ಪುವ ಗೊನೆಕಾರರ ಕಾಲುಗಳಿಗಾಗಲೀ, ದೈತ್ಯಾಕಾರದ ಜಲ್ಲೆಯನ್ನು ಒಂದೇ ಸಮನೆ ಹಿಡಿದು ಕೆಲಸಮಾಡುವ ಅವರ ಕೈಗಳಿಗಾಗಲೀ ನೋವೆಂಬುದು ಇರುವುದಿಲ್ಲ. ನೆಲದಮೇಲೆ ನಿಂತುಕೊಂಡೇ ಜಲ್ಲೆಯನ್ನು ಹಿಡಿದು ಒಂದೆರಡು ಮರಗಳಿಂದ ಗೊನೆಗಳನ್ನು ಕುಯ್ಯಲಾಗದ ನಮ್ಮ ಶಕ್ತಿಗೆ ಹೋಲಿಸಿಕೊಂಡರೆ ಆ ಗೊನೆಕಾರರ ಅದ್ಭುತಶಕ್ತಿಯ ಅರಿವಾಗುತ್ತದೆ.

ಕೇಶವಮೂರ್ತಿಯವರು ಗ್ರಂಥದಲ್ಲಿ ಸಾಕಷ್ಟು ಭಾವಚಿತ್ರಗಳನ್ನು ಕೊಟ್ಟು ಇದರ ಉಪಯುಕ್ತತೆಯನ್ನು ಹೆಚ್ಚಿಸಿದ್ದಾರೆ. ಸಂಕೇತಿಪುರುಷರು ತೋಟ, ಗದ್ದೆಗಳಲ್ಲಿ ಉಪಯೋಗಿಸುವ ಹಾರೆ, ಗುದ್ದಲಿ, ಕೊಡಲಿ, ಮಚ್ಚು, ಗುದಿ, ದಸಿ, ಕೊಕ್ಕೆ, ತಿಕ್ಕಡಿ, ಕಾಲೇಣಿ, ಬಾನಿ ಮುಂತಾದ ಉಪಕರಣಗಳ ಮತ್ತು ಸ್ತ್ರೀಯರು ಮನೆಗಳಲ್ಲಿ ಸಾಮಾನ್ಯವಾಗಿ ಉಪಯೋಗಿಸುವ, ಏತ, ಬೀಸುಕಲ್ಲು, ಹಗ್ಗ, ಒನಕೆ, ಕತ್ತಿ, ತುರೀಮಣೆ, ಕೈಹಾರೆ, ಮಸತಟ್ಟೆ ಮುಂತಾದ ಉಪಕರಣಗಳ ಭಾವಚಿತ್ರಗಳನ್ನು ಕೊಡಬಹುದಿತ್ತೆನ್ನಿಸುತ್ತದೆ. ಕೃಷಿಗೆ ಸಂಬಂಧಿಸಿದಂತೆ ಸಂಕೇತಿಭಾಷೆಯಲ್ಲಿ ಬಳಕೆಯಲ್ಲಿರುವ ಶಬ್ದಗಳ ಒಂದು ಕೋಶವನ್ನು ಸೇರಿಸಿದ್ದರೆ ಈ ಗ್ರಂಥದ ಉಪಯುಕ್ತತೆ ನಿಶ್ಚಿತವಾಗಿ ಹೆಚ್ಚುತ್ತಿತ್ತು.

ಅಪೂರ್ವರೀತಿಯ ಇಂತಹ ಒಂದು ಗ್ರಂಥರಚನೆಗೆ ಪ್ರೇರಕಶಕ್ತಿಯಾಗಿ ನಿಂತು 'ಸಂಕೇತಿ ಅಧ್ಯಯನ ಮಾಲೆ'ಯಲ್ಲಿ ಹೊರತರುತ್ತಿರುವ ಮಿತ್ರ ಹರನ್ ನಿಜಕ್ಕೂ ಸಂಕೇತಿಗಳ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಭಗೀರಥಪ್ರಯತ್ನದೊಡನೆ ಕಾರ್ಯಪ್ರವೃತ್ತರಾಗಿರುವ ಶ್ರೀ ಹರನ್ ಅವರಿಗೆ ಸಂಕೇತಿಗಳ ನೈತಿಕ ಮತ್ತು ಆರ್ಥಿಕ ಬೆಂಬಲ ದೊರೆಯಲಿ. ಅವರ ಮೇಲೆ ಸದಾ ಶ್ರೀ ಲಕ್ಷ್ಮೀಕೇಶವನ ಅನುಗ್ರಹವಿರಲಿ ಎಂದು ಆಶಿಸುತ್ತೇನೆ.

ಗುಣಾನಾಂ ವಾ ವಿಶಾಲಾನಾಂ ಸತ್ಕಾರಾಣಾಂ ಚ ನಿತ್ಯಶಃ |
ಕರ್ತಾರಸ್ಸುಲಭಾ ಲೋಕೇ ವಿಜ್ಞಾತಾರಸ್ತು ದುರ್ಲಭಾಃ || — ಸ್ವಪ್ನವಾಸವದತ್ತ

ಲೋಕದಲ್ಲಿ ಉದಾತ್ತವಾದ ಗುಣಗಳಿಂದ ಕೂಡಿದವರನ್ನು ಸುಲಭವಾಗಿ ಕಾಣಬಹುದು. ಒಳ್ಳೆಯ ಸತ್ಕಾರಗಳನ್ನು ಮಾಡುವವರನ್ನೂ ಕಾಣಬಹುದು. ಆದರೆ ಗುಣಗಳನ್ನೂ ಸತ್ಕಾರಗಳನ್ನೂ ಅರಿಯುವವರು ದುರ್ಲಭ.

***

ಕಮಿಷನರೇಟ್ ಆಫ್ ಕೊಲಿಜಿಯೇಟ್ ಎಜುಕೇಷನ್ ಪ್ರೊ. ಜಿ. ಅಶ್ವತ್ಥನಾರಾಯಣ
ಬೆಂಗಳೂರು ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಕ್ಷೇತ್ರಕಾರ್ಯ ಸಾಹಿತ್ಯದಲ್ಲಿ ಮೈಲಿಗಲ್ಲಿನ ಕೃತಿ

ನಮ್ಮಲ್ಲಿ ಸಾಹಿತ್ಯ ನಿರ್ಮಾಣ ಎರಡು ಬಗೆಯದು - ಒಂದು ಗ್ರಂಥಾಭ್ಯಾಸಬಲದಿಂದ ನಿರ್ಮಿಸಿದ್ದು; ಇನ್ನೊಂದು ಸ್ವಾನುಭವ ಮತ್ತು ಸ್ವಯಂಪ್ರೇರಣೆಯಿಂದ ರಚಿಸಿದ್ದು. ಮೂರನೆಯ ರೀತಿಯ ಸಾಹಿತ್ಯ ನಿರ್ಮಾಣ, ಸಂಶೋಧನ ಸಾಹಿತ್ಯ ಅಸ್ತಿತ್ವಕ್ಕೆ ಬಂದಾಗ ಬಂದಿದ್ದು - ಕ್ಷೇತ್ರಕಾರ್ಯದಿಂದ ಮೂಡಿಸಿದ ಸತ್ಯದರ್ಶನದ ಸಾಹಿತ್ಯ. ಇದರಲ್ಲಿ ಗ್ರಂಥಾಭ್ಯಾಸ ಗೌಣ, ಸ್ವಾನುಭವ ಮುಖ್ಯ. ಆದರೆ ಅಭಿವ್ಯಕ್ತಿ ಸ್ವಾನುಭವದ ವ್ಯಕ್ತಿಯದಲ್ಲ, ಸಮೀಕ್ಷಕನದು. ವ್ಯಕ್ತಿ ಬದಲಾದರೆ ಅಭಿವ್ಯಕ್ತಿ ಬದಲಾಗದೆ? ಆಗುತ್ತದೆ. ಆದರೆ ಇಲ್ಲಿ ಧ್ವನಿಮುದ್ರಣ, ಚಿತ್ರಮುದ್ರಣ, ವಿದ್ಯುನ್ಮಾನಮಾಧ್ಯಮಗಳ ನೆರವನ್ನು ಪಡೆದು ಸ್ವಾನುಭವದ ವ್ಯಕ್ತಿಯ ಕಥನವೇ ಆತನ ಮಾತುಗಳಲ್ಲೇ ನಮ್ಮ ಕಣ್ಣ ಮುಂದೆ ಬಂದು ನಿಲ್ಲುವಂತೆ ಮಾಡಿರುವುದು ಈ ಗ್ರಂಥದ ವೈಶಿಷ್ಟ್ಯಗಳಲ್ಲಿ ಒಂದು. ಈ ಗ್ರಂಥ ಸಂದರ್ಶನ ಸಾಹಿತ್ಯ; ಕ್ಷೇತ್ರಕಾರ್ಯ ಸಾಹಿತ್ಯ; ವ್ಯಕ್ತಿ ಚಿತ್ರ ಸಾಹಿತ್ಯ; ಕೃಷಿ ಸಾಹಿತ್ಯ; ಉಪಪಂಗಡ ಸಾಹಿತ್ಯ; ಸಮಕಾಲೀನ ಸಮಾಜದ ಒಂದು ವರ್ಗದ ಅಂತರಂಗ ಪ್ರತಿಫಲನ ಸಾಹಿತ್ಯ; ಪ್ರಶ್ನೋತ್ತರ ಸಾಹಿತ್ಯ; ಆತ್ಮಕಥನ ಸಾಹಿತ್ಯ ಇತ್ಯಾದಿ ಎಲ್ಲವನ್ನೂ ಒಳಗೊಂಡ ವಿಶಿಷ್ಟ ವಿನೂತನ ಕೃತಿ.

ಕ್ಷೇತ್ರಕಾರ್ಯ ಕನ್ನಡಕ್ಕೆ ಹೊಸದೇನಲ್ಲ. ಈಗಾಗಲೇ ಕ್ಷೇತ್ರಕಾರ್ಯವಿಧಾನ ಕುರಿತು, ಹಾಗೆಯೇ ಕ್ಷೇತ್ರಕಾರ್ಯದಿಂದ ಸಂಶೋಧನೆ ನಡೆಸಿದ ಫಲಿತದ ಗ್ರಂಥಗಳು ಬಂದಿವೆ. ಐತಿಹಾಸಿಕ ಸ್ಥಳಗಳ, ಕವಿ ಜನ್ಮಸ್ಥಳಗಳ, ವ್ಯಕ್ತಿ ಸಂದರ್ಶನದ, ಜನಗಳಲ್ಲಿ ಪ್ರಚಲಿತವಿರುವ ಜಾನಪದ ಸಾಹಿತ್ಯದ ಸಂಗ್ರಹಕ್ಕೆ ಕ್ಷೇತ್ರಕಾರ್ಯಗಳು ನಡೆದಿವೆ. ಆದರೆ ಬ್ರಾಹ್ಮಣ ಸಮುದಾಯವನ್ನೇ ಗುರಿಯಾಗಿಟ್ಟುಕೊಂಡು ಅದರಲ್ಲೂ ವ್ಯವಸಾಯವನ್ನೇ ವೃತ್ತಿಮಾಡಿಕೊಂಡು ಅದೇ ಕಾಲದಲ್ಲಿ ಕಲೆ ಸಾಹಿತ್ಯ ಸಾಂಸ್ಕೃತಿಕ ಆಚಾರ ವಿಚಾರಗಳಲ್ಲಿ ತಮ್ಮದೇ ಆದ ವೈಶಿಷ್ಟ್ಯ ಹೊಂದಿರುವ ಸಂಕೇತಿ ಸಮುದಾಯವನ್ನು ಕುರಿತು ಅಧ್ಯಯನ ನಡೆಸಿರುವ ಈ ಗ್ರಂಥ ಯಾವ ಪಿಎಚ್.ಡಿ. ಗ್ರಂಥಕ್ಕಾಗಲಿ, ಡಿ.ಲಿಟ್. ಗ್ರಂಥಕ್ಕಾಗಲಿ, ಸಂಶೋಧನ ಗ್ರಂಥಕ್ಕಾಗಲಿ ಕಡಿಮೆಯಲ್ಲ. ನಿಜ ಹೇಳಬೇಕೆಂದರೆ ಈ ಬಗೆಯ ಇನ್ನೊಂದು ಗ್ರಂಥ ಕಾಣಬೇಕಾದರೆ ಹವ್ಯಕ ಸಮಾಜದವರ ಅಧ್ಯಯನ ಗ್ರಂಥ ಹೊರಬರಬೇಕು. ಅವರೂ ಸಂಕೇತಿಗಳಂತೆ ಕೃಷಿವೃತ್ತಿದ್ವಿಜರು. ಜೈನ ಧರ್ಮದಲ್ಲಿ ಪುಣ್ಯಗಳ ಬಗ್ಗೆ ಮಾತೊಂದಿದೆ. ಕೃತ ಪುಣ್ಯ, ಕಾರಿತ ಪುಣ್ಯ, ಅನುಮೋದನ ಪುಣ್ಯ ಎಂದು ಮೂರು ಬಗೆ ಕರ್ಮಗಳಿವೆ. ಒಳ್ಳೆಯ ಕೆಲಸವನ್ನು ತಾನೇ ಮಾಡುವುದು ಕೃತ ಪುಣ್ಯ; ಒಳ್ಳೆಯ ಕೆಲಸ ಮಾಡಲು ನೆರವಾಗುವುದು ಕಾರಿತ ಪುಣ್ಯ; ಇತರರು ಮಾಡಿದ ಒಳ್ಳೆಯ ಕೆಲಸಗಳನ್ನು ಪ್ರೋತ್ಸಾಹಿಸುವುದು ಅನುಮೋದನ ಪುಣ್ಯ. ಮಿತ್ರರಾದ ಪ್ರಣತಾರ್ತಿಹರನ್ ಈ ಮೂರೂ ಬಗೆಯ ಪುಣ್ಯಶಾಲಿಗಳು. ದಕ್ಷ ಅರ್ಹ ಅನುಭವಿ ಕೃಷಿ ಅಧಿಕಾರಿಗಳಾದ

ಎನ್. ಕೇಶವಮೂರ್ತಿ ಅವರನ್ನು ಒಲಿಸಿ ಒತ್ತಾಯಿಸಿ ಜತೆಗೂಡಿ ಈ ಕೃತಿ ಬರುವಂತೆ ಮಾಡಿದ್ದಾರೆ. ಇದು ನಿಜಕ್ಕೂ ಸಾಹಸ. ಟಿ.ಎಸ್. ವೆಂಕಣ್ಣಯ್ಯನವರನ್ನು ಯಾರೋ ಕೇಳಿದರಂತೆ, "ನೀವು ನಿಮ್ಮ ಶಿಷ್ಯ ಕುವೆಂಪು ಅವರು ಮಹಾಕಾವ್ಯ ಬರೆಯುವಂತೆ ಮಾಡಿದಿರಲ್ಲ. ನೀವೇ ಏಕೆ ಬರೆಯಬಾರದಿತ್ತು?" ಅದಕ್ಕೆ ಅವರು ಕೊಟ್ಟ ಉತ್ತರ, "ಕನ್ನಡ ಸಾಹಿತ್ಯ ನಂದನದಲ್ಲಿ ನಾನೇ ಒಂದು ಮರವಾಗುವುದಕ್ಕಿಂತ ನೂರಾರು ಕಲ್ಪವೃಕ್ಷಗಳನ್ನು ಬೆಳೆಸುವ ತೋಟದ ಮಾಲಿ ಆಗುವುದು ನನ್ನ ಆಸೆ" ಎಂದರಂತೆ. ಹಾಗೇ ಹರನ್ ಸಂಕೇತಿ ನಂದನದಲ್ಲಿ ನೂರಾರು ಸಾಹಿತ್ಯ ವೃಕ್ಷಗಳನ್ನು ನೆಟ್ಟು ಬೆಳೆಸುವ ಮಾಲಿ ಆಗಿದ್ದಾರೆ. ಅವರ ಕೃಷಿಯ ಸಾರ್ಥಕತೆಗೆ ಈ ಗ್ರಂಥ ಕೇಶವಮೂರ್ತಿಗಳ ಪರಿಶ್ರಮ ಪಾಂಡಿತ್ಯದ ಫಲ ಸಾಕ್ಷಿ ಆಗಿದೆ.

ಕರ್ನಾಟಕದ ೩೩ ಹಳ್ಳಿಗಳಲ್ಲಿರುವ ೯೬ ರೈತರನ್ನು ಸಂದರ್ಶಿಸಿ, ಅವರ ಜೀವನ ಸಾಧನೆಗಳನ್ನು ಕಣ್ಣಾರೆ ಕಂಡು ಸಂದರ್ಶನದ ಪ್ರಶ್ನೋತ್ತರಗಳ ಮೂಲಕ ಅವರ ಅಂತರಂಗ ಅರಿತು, ಅವರೇ ಹೇಳಿದ ಮಾತುಗಳ ಮೂಲಕ ವ್ಯಕ್ತಿಚಿತ್ರಣದ ಜತೆಗೆ ಸಂಕೇತಿ ಜನರ ಕೃಷಿರಂಗ ಇಂದು ಏನಾಗಿದೆ, ಏಕೆ ಹೀಗಾಗಿದೆ ಎಂಬ ಸತ್ಯ ಕಥನವನ್ನು ನಮ್ಮ ಮುಂದಿಟ್ಟಿದ್ದಾರೆ. ಐತಿಹಾಸಿಕ ದಾಖಲೆ ಆಗುವ ರೀತಿಯಲ್ಲಿ ಕೃಷಿಕರ ಚಿತ್ರಗಳನ್ನು ಕೊಡಲಾಗಿದೆ. ಪರಂಪರಾಗತವಾಗಿ ಕುಟುಂಬ ವೃತ್ತಿಯನ್ನು ಮಕ್ಕಳು ಅನುಸರಿಸುವ ಸನ್ನಿವೇಶ ಹೋಗಿ ಕಾಲಪರಿಸ್ಥಿತಿ ಬದಲಾವಣೆ ಆದಾಗ, ಮಕ್ಕಳು ಬೇರೆ ವೃತ್ತಿ ಹಿಡಿದಾಗ, ಕುಟುಂಬಪರಿಸ್ಥಿತಿಗಳು ವಂಶವೃತ್ತಿಗಳು ಏನಾಗಿವೆ ಎಂಬುದರ ಚಿತ್ರಣ ಇಲ್ಲಿದೆ. ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಅಭೂತಪೂರ್ವ ಸಾಮಗ್ರಿ ಇಲ್ಲಿಯ ಬರಹಗಳಲ್ಲಿದೆ. ಸಾಮಾನ್ಯವಾಗಿ ರೈತವರ್ಗ ಎಂದಾಗ ನಮ್ಮ ದೇಶದಲ್ಲಿ ಶ್ರಮಿಕವರ್ಗ ಮತ್ತು ಅನಕ್ಷರಸ್ಥವರ್ಗ. ಆದರೆ ಸಂಕೇತಿ ಸಮುದಾಯದಲ್ಲಿ ಎಲ್ಲರೂ ಅಕ್ಷರಸ್ಥ ವರ್ಗ ಮತ್ತು ಸಾಮಾಜಿಕವಾಗಿ ಸಾಕಷ್ಟು ಮಾನ್ಯತೆ ಪಡೆದವರ್ಗ. ಇಂಥ ಸಮುದಾಯ ರೈತವರ್ಗವಾಗಿರುವಾಗ ಅವರ ರೈತಸಮಸ್ಯೆಗಳು, ಜೀವನವಿಧಾನ, ಸಂಸ್ಕೃತಿ ಎಲ್ಲವೂ ವಿಭಿನ್ನವಾದವು. ಹೀಗಾಗಿ ನಮ್ಮ ದೇಶದಲ್ಲಿ ರೈತವರ್ಗದ ಬಗ್ಗೆ, ಸಮಸ್ಯೆಗಳ ಬಗ್ಗೆ ಚಿಂತಿಸುವಾಗ, ಅವರನ್ನು ಕುರಿತು ಭಿನ್ನವಾಗಿ ಚಿಂತಿಸಬೇಕಾಗುತ್ತದೆ. ಆಗಲೇ ರೈತಸಮುದಾಯದ ನಿಜಚಿತ್ರಣ ಸಿಗಲು ಸಾಧ್ಯ. ಈ ದೃಷ್ಟಿಯಲ್ಲಿ ಈ ಗ್ರಂಥ ಕನ್ನಡಕ್ಕೆ ವಿನೂತನ ಕೊಡುಗೆ. ಇದನ್ನು ಕನ್ನಡಕ್ಕೆ ಕೊಟ್ಟ ಲೇಖಕರು, ಪ್ರಕಾಶಕರಿಗೆ ಸರ್ಕಾರ, ಸಮಾಜ ಕೃತಜ್ಞರಾಗಬೇಕಾಗಿದೆ. ಎಲ್ಲಾ ಸಮಾಜಶಾಸ್ತ್ರಾಭ್ಯಾಸಿಗಳೂ ರೈತವರ್ಗದವರೂ ಸಾಮಾಜಿಕ ಕಳಕಳಿಯ ಧುರೀಣರೂ ಕನ್ನಡ ಸಾಹಿತ್ಯಾಸಕ್ತರೂ ಓದಲೇಬೇಕಾದ ಗ್ರಂಥ ಇದಾಗಿದೆ.


***

- ಶ್ರೀ ಎನ್.ಎಲ್.ಸೋಮಶೇಖರ್

ಕನ್ನಡ ಪಂಡಿತ್, ಎಂ.ಎ., ನಿವೃತ್ತ ಶಿಕ್ಷಕರು, ಮೈಸೂರು

ವೇದಗಳ ಕಾಲದಲ್ಲಿ 'ಬ್ರಾಹ್ಮಣೋ ಬಹುಜನಪ್ರಿಯಃ' ಎನಿಸಿಕೊಂಡಿದ್ದರು. ಕಲಿಯುಗದಲ್ಲಿ 'ಬ್ರಾಹ್ಮಣೋ ಭೋಜನಪ್ರಿಯಃ' ಎನ್ನುವ ಹಂತಕ್ಕೆ ಕೆಲವರು ಬಂದು ತಲುಪಿದರು. ಸಂಕೇತಿಗಳ ಅಧ್ಯಯನದ ಅಷ್ಟಸಂಪುಟಗಳನ್ನು ಅವಲೋಕಿಸಿದಾಗ ಬಹುಶಃ 'ಸಂಕೇತಿ ಬ್ರಾಹ್ಮಣಃ ಬಾಗಾಯ್ತು ಕೃಷಿಪ್ರಿಯಃ' ಅಂದುಕೊಂಡರೆ ತಪ್ಪಾಗಲಾರದು ಅಲ್ಲವೇ?

***



ಸಂಪುಟ 9
ಸಂಕೇತಿ : ಬೇಸಾಯದ ಬದುಕು
ಡಾ. ವಿಜಯ್ ಅಂಗಡಿ
ಡಾ. ಎಂ.ಎಸ್. ವಿಜಯಾ ಹರನ್

೧ ಸಂಕೇತಿ ಬೇಸಾಯ

ಬೇಸಾಯಗಾರ ಎಂದರೆ ಮೈಮುರಿದು ದುಡಿಯುವವನು ಎಂದೇ ಅರ್ಥ. ಅಂಥ ಬೇಸಾಯಗಾರನಿಗೆ ನಿಸರ್ಗಮಾತೆಯು ಆರೋಗ್ಯವನ್ನು ಕರುಣಿಸುತ್ತಾಳೆ. ಅದು ದೈಹಿಕ ಮತ್ತು ಮಾನಸಿಕ ಆರೋಗ್ಯವೆರಡೂ ಹೌದು. ಅದು ಕೇವಲ ಆರೋಗ್ಯವೇ ಅಲ್ಲ, ಸದೃಢ ಮೈಕಟ್ಟಿನಲ್ಲಿ ಶಕ್ತಿಶಾಲಿಯಾಗಿರುವ ಮನಸ್ಸು ಕೆಲಸ ಮಾಡುವ ಅವಸ್ಥೆ. ಅದರ ಜತೆಗೆ ಮೈಗೂಡಿ ಬರುವ ಇತರ ಲಕ್ಷಣಗಳೂ ಇರುತ್ತವೆ. ಸರಳತೆ, ವಿನಯಶೀಲತೆ, ಮೃದುತ್ವ, ಔದಾರ್ಯ, ಮಾನವೀಯ ಸ್ಪಂದನದ ಗುಣಗಳೆಲ್ಲ ಬೇಸಾಯಗಾರನಿಗೆ ಸಹಜವಾಗಿ ಸಿದ್ಧಿಸುವಂಥವು. ದೇಹವು ಒರಟಾಗಿ, ವರ್ತನೆಯು ಅನೇಕ ವೇಳೆ ನಾಗರಿಕತೆಯಿಂದ ದೂರವಾಗಿ, ಮಾತು ಗಟ್ಟಿಯಾಗಿ, ವರ್ತನೆಯು ನಯದೂರವಾಗಿ ಕಾಣುವ ಸಂದರ್ಭವುಂಟು; ಆದರೆ ಅವನಲ್ಲಿ ಶಾಂತಿ ಮನೆ ಮಾಡಿರುತ್ತದೆ, ಮನಸ್ಸು ನಿಷ್ಕಳಂಕವಾಗಿರುತ್ತದೆ, ಹೃದಯವು ವಿಶಾಲವಾಗಿರುತ್ತದೆ. ಅವನನ್ನು ಅರ್ಥಮಾಡಿಕೊಂಡವರಿಗೆ ಅವನ ಹೃದಯದಲ್ಲಿ ಬೆಳಗುತ್ತಿರುವ ನಂದಾದೀಪ ಕಾಣುತ್ತದೆ. ಹಾಗೆ ದುಡಿದವನ ದೇಹ ಮತ್ತು ಮನಸ್ಸಿನ ಕಷ್ಮಲಗಳೆಲ್ಲ ಬೆವರಿನ ರೂಪದಲ್ಲಿ ಹೊರಟುಹೋಗಿ ಅವನು ಸಹಜವಾದ ಅಧ್ಯಾತ್ಮದ ನೆಲೆಗೆ ಸಂದುಬಿಟ್ಟಿರುತ್ತಾನೆ. ಸಂಕೇತಿ ಸಮುದಾಯವು ಶತಮಾನಗಳಿಂದ ತುಂಡರಿಸದಂತೆ ಬೇಸಾಯವನ್ನು ಮಾಡಿಕೊಂಡುಬಂದಿದೆ. ಇವತ್ತಿಗೂ ಆ ಬೇಸಾಯದ ವಾಸನೆ ಮುಂದುವರಿದಿದೆ. ಸಂಕೇತಿ ಸಮುದಾಯವು ತನ್ನ ಇರಸರಿಕೆಗಳ ಬಗ್ಗೆ ಹೆಮ್ಮೆ ತಾಳಲು ಅದು ಸಾಕು.

ಸಂಕೇತಿಗಳದು ಬಾಗಾಯಿತಿನ ಆಶ್ರಮಧರ್ಮ. ದುಡಿಮೆಯ ಜತೆಜತೆಗೆ, ಅದರ ಭಾಗವಾಗಿ ಅವರು ವೇದಾಧ್ಯಯನ ಮಾಡಿದ್ದಾರೆ, ಶಾಸ್ತ್ರಾಧ್ಯಯನ ಮಾಡಿದ್ದಾರೆ, ಸಂಗೀತಾದಿ ಕಲೆಗಳನ್ನು ರೂಢಿಸಿಕೊಂಡಿದ್ದಾರೆ, ನಿರುಪ್ರದವಿಯಾದ ಮನೋರಂಜನೆಯ ಸಾಧನಗಳನ್ನು ರೂಢಿಸಿಕೊಂಡಿದ್ದಾರೆ. ಬೇಸಾಯದ ಬೆವರು ಅವರಿಗೆ ದಕ್ಕಿಸಿಕೊಟ್ಟ ಧೃತಿ, ಗುರಿಮುಟ್ಟಿಸುವ ಛಲ, ತೀವ್ರವಾಗಿ ತೊಡಗಿಸಿಕೊಳ್ಳುವ ಗುಣ, ಆಲಸ್ಯರಾಹಿತ್ಯ, ದೀರ್ಘಕ್ಷಮತ್ವ ಇವುಗಳಿಂದಾಗಿ ಅವರ ವೇದಘೋಷಕ್ಕೆ, ಸಂಗೀತಕ್ಕೆ ಒಂದು ವಿಶೇಷ ಶಕ್ತಿ ಬಂದಿದೆ, ಶಾಸ್ತ್ರಜ್ಞಾನಕ್ಕೆ ಖಚಿತತೆ ಬಂದಿದೆ. ಮುಖ್ಯವಾಗಿ ಸಾಮಾಜಿಕ ಜವಾಬ್ದಾರಿಗಳನ್ನು ಮುಂಚೂಣಿಯಲ್ಲಿ ನಿಂತು ನಿರ್ವಹಿಸುವ ಜಾಯಮಾನ ಬಂದಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಬಾಗಾಯಿತುಬೇಸಾಯ ಮಾಡುತ್ತ ವೈದಿಕಜೀವನ ನಡೆಸುತ್ತ ಇರುವ ಸಂಕೇತಿಯು ಆದರ್ಶ ಸಂಕೇತಿ ಎನಿಸುತ್ತಾನೆ. ಅವನು ಅಲ್ಪತೃಪ್ತ. ಅದ್ವೈತದ ಅಧ್ಯಾತ್ಮಾನುಭವದಲ್ಲಿ ಕೃಷಿಸಹಜ ಗುಣದಿಂದಲೂ ಶಾಸ್ತ್ರಾಧ್ಯಯನದ ಬಲದಿಂದಲೂ ವೈದಿಕಾನುಷ್ಠಾನಗಳಿಂದಲೂ ಅವನು ನಿರಂತರವಾಗಿ ವಿಹರಿಸುತ್ತಿರುತ್ತಾನೆ. ಪಾರಮಾರ್ಥಿಕವಾದ ಪರಮ ಶ್ರೀಮಂತಿಕೆಯ ಅನುಭವದಲ್ಲಿ ಅವನಿರುತ್ತಾನೆ.

ಹೀಗೆ ಆದರ್ಶ ಬೇಸಾಯಗಾರರಾದ ಸಂಕೇತಿಗಳ ಸಂಖ್ಯೆ ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದ ಕ್ಷೀಣಿಸುತ್ತಲೇ ಬಂದಿದೆ. ಸಮಕಾಲೀನವಾದ ಅನಿವಾರ್ಯ ಒತ್ತಡಗಳನ್ನು ಮೆಟ್ಟಿ ನಿಂತು ತಮ್ಮ ಸಹಜಧರ್ಮಕ್ಕೆ ಅಂಟಿಕೊಳ್ಳುವುದು ಸಂಕೇತಿಗಳ ರೀತಿ. ಆದರೆ ಯಂತ್ರಯುಗ, ನಗರೀಕರಣ, ಜಾಗತೀಕರಣ, ಸುತ್ತಣ ವಿದ್ಯಮಾನಗಳ ಆಕ್ರಮಣಶೀಲತೆ ಇವು ಇಪ್ಪತ್ತನೆಯ ಶತಮಾನದ ಮಧ್ಯಭಾಗದಿಂದ ಈಚೆಗೆ ವಿಪರೀತವಾಗುತ್ತ ನಡೆದಿವೆ. ಒಂದು ಜಾತಿ, ಒಂದು ಧರ್ಮ, ಒಂದು ದೇಶದ ಮಾತಲ್ಲ ಇದು, ಸಾರ್ವತ್ರಿಕವಾಗಿ ಎಲ್ಲೆಡೆ ಮಾನ್ಯತೆ ಬರುತ್ತಿರುವುದು ಆಧುನಿಕತೆಯ ಹೆಸರಿನ ವಿಕಾರಗಳಿಗೆ. ಈ ವಿಕಾರದ ವಿಜೃಂಭಣೆಗೆ ಈಗ ಎಗ್ಗಿಲ್ಲ. ಇಂಥ ಸನ್ನಿವೇಶದಲ್ಲಿ ಸಂಕೇತಿ ಸಮುದಾಯವು ಕೂಡ ಜಾಗತಿಕ ಮುಖ್ಯಪ್ರವಾಹದಲ್ಲಿ ಒಂದಾಗುತ್ತಿದೆ. 'ಪ್ರಗತಿ'ಯನ್ನೂ ಕಾಣುತ್ತಿದೆ. ಪಾರಂಪರಿಕವಾದ ಬಾಗಾಯಿತು ಧರ್ಮ ಮೊದಲಿನ ಗುಣಾತ್ಮಕತೆಯನ್ನು ಕಳೆದುಕೊಳ್ಳುತ್ತಿದೆ, ಬಾಗಾಯಿತು ಬೇಸಾಯಗಾರರ ಪ್ರಮಾಣವೂ ಕಡಮೆಯಾಗುತ್ತಿದೆ. ಬಾಗಾಯಿತು ಬೇಸಾಯದಲ್ಲಿಯೂ ಯಂತ್ರೋಪಕರಣಗಳ ಪ್ರವೇಶವಾಗಿದೆ. ಯಂತ್ರಗಳು ಪ್ರವೇಶಿಸಿ ಮಾನವನ ದೇಹಶ್ರಮವು ಹಿಂದೆ ಬಿದ್ದಿರುವುದು ಈಗಿನ ಸಾರ್ವತ್ರಿಕ ವಿದ್ಯಮಾನವಾಗಿದೆ. ದೈಹಿಕಪರಿಶ್ರಮ ಕಡಿಮೆಯಾಗಿ ದ್ರವ್ಯ ಸಂಪಾದನೆಯ ವಿವಿಧ ರೀತಿಯ ಮಾರ್ಗಗಳು ಹೆಚ್ಚಿ, ಭೋಗಸಾಧ್ಯತೆಗಳೂ ಹೆಚ್ಚಿರುವ ಸನ್ನಿವೇಶದ ಬದುಕಿನಲ್ಲಿ ಸಹಜವಾಗಿ ಇಣುಕಬಹುದಾದ ವಿಕೃತಿಗಳು, ದೌರ್ಬಲ್ಯಗಳು ಸಂಕೇತಿ ಸಮುದಾಯವನ್ನೂ ಪ್ರವೇಶಿಸಿವೆ. ಬಾಗಾಯಿತು ಧರ್ಮದ ಇಂಥ ಇಳಿಗಾಲದ ಹೊತ್ತಿನಲ್ಲಿ ಸಂಕೇತಿಗಳ ಬೇಸಾಯದ ಬದುಕಿನ ಅಧ್ಯಯನ ನಡೆದಿದೆ.

ಇಂಥ ವಿಷಮ ಸ್ಥಿತಿಯಲ್ಲಿಯೂ, ಪಾರಂಪರಿಕ ಬಾಗಾಯಿತು ಧರ್ಮದ ಅಳಿದುಳಿದ ಸೆಳೆಗಳನ್ನು ಹಿಡಿದು ಮೂಲರೂಪವನ್ನು ಕಟ್ಟಿಕೊಳ್ಳಲು ಸಾಧ್ಯವೇ ಎಂಬ ಆಲೋಚನೆಯಿಂದ ಸಮುದಾಯ ಅಧ್ಯಯನ ಕೇಂದ್ರವು ಸಂಕೇತಿ ಕೃಷಿ ಅಧ್ಯಯನದ ಈ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಯ ಭಾಗವಾಗಿ ಶ್ರೀ ಎನ್.ಕೇಶವಮೂರ್ತಿ ಅವರು ಸಿದ್ಧಪಡಿಸಿಕೊಟ್ಟ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬ ಸಂಶೋಧನ ಕೃತಿಯು ಸಂಕೇತಿ ಅಧ್ಯಯನ ಮಾಲೆಯ ಎಂಟನೆಯ ಸಂಪುಟವಾಗಿ ಪ್ರಕಟಗೊಂಡಿದೆ. ಇದೀಗ ಓದುಗರ ಕೈಲಿರುವುದು ಶ್ರೀ ವಿಜಯ್ ಅಂಗಡಿ ಮತ್ತು ಡಾ. ಎಂ.ಎಸ್.ವಿಜಯಾ ಹರನ್ ಅವರು ಸಿದ್ಧಪಡಿಸಿಕೊಟ್ಟಿರುವ 'ಸಂಕೇತಿ: ಬೇಸಾಯದ ಬದುಕು'. ಇದು ಈ ಮಾಲೆಯ ಒಂಬತ್ತನೆಯ ಸಂಪುಟವಾಗಿ ಬಂದಿದೆ.

ಸಂಕೇತಿ ಕೃಷಿಯ ಬಗೆಗೆ ಅಧ್ಯಯನ ನಡೆಸುವ ಮೂಲಪ್ರೇರಣೆ ಕೊಟ್ಟುದು ಹಾಸನದ ಆಕಾಶವಾಣಿ ಕೇಂದ್ರ. ಅದು ೨೦೦೨ನೆಯ ಇಸವಿ. ದೂರದರ್ಶನದ ನೂರಾರು ವಾಹಿನಿಗಳ ಆಕರ್ಷಣೆಗಳ ನಡುವೆಯೂ ಹಾಸನದ ಬಾನುಲಿ ಕೇಂದ್ರವು ವಿಸ್ತಾರವಾದ ಶ್ರೋತೃವರ್ಗವನ್ನು ಹಿಡಿದಿಟ್ಟಿತ್ತು. ಆ ಕೇಂದ್ರದ ಜನಪ್ರಿಯತೆಗೆ ಅದು ಪ್ರಸಾರ ಮಾಡುತ್ತಿದ್ದ ಕಾರ್ಯಕ್ರಮಗಳ ಗುಣಮಟ್ಟ, ಜನಪರತೆ, ಶೈಕ್ಷಣಿಕ ಪ್ರಯೋಜಕತೆ ಮುಖ್ಯ ಕಾರಣವಾಗಿದ್ದವು. ಕೃಷಿ ಕಾರ್ಯಕ್ರಮಗಳಂತೂ ರೈತರ ಪಾಲಿಗೆ ವರದಾನದಂತೆ ಇದ್ದವು. ಹಾಸನಜಿಲ್ಲೆಯು ಸಂಕೇತಿ ರೈತರು ದಟ್ಟವಾಗಿ ನೆಲೆಸಿರುವ ಜಿಲ್ಲೆ. ಸಹಜವಾಗಿಯೇ ಹಾಸನದ ಬಾನುಲಿ ಕೇಂದ್ರದ ಕೃಷಿಕಾರ್ಯಕ್ರಮಗಳಲ್ಲಿ ಸಂಕೇತಿ ರೈತರು ಮತ್ತು ಅವರ ನೆಲೆಗಳ ಬಗೆಗಿನ ಮಾಹಿತಿಗಳೂ ಸೇರಿರುತ್ತಿದ್ದವು. ಸಂಕೇತಿ ರೈತರ ಕೃಷಿಜೀವನದ ಕ್ರಮಬದ್ಧ ಅಧ್ಯಯನವನ್ನೇಕೆ ನಡೆಸಬಾರದು ಎಂಬ ಚಿಂತನೆ ಮೂಡಿದ್ದು ಆಗ. ಆ ದಿನಗಳಲ್ಲಿ ಹಾಸನದ ಬಾನುಲಿ ಕೇಂದ್ರದ ಸಿಬ್ಬಂದಿ ವರ್ಗವು ಹೊಸ ಹುರುಪಿನಿಂದ ಕಾರ್ಯಕ್ರಮಗಳನ್ನು ತಯಾರಿಸಿ ಪ್ರಸಾರ ಮಾಡುತ್ತಿತ್ತು. ಅದರ ಆಗಿನ ನಿರ್ದೇಶಕಿ ಡಾ.ಎಂ.ಎಸ್.ವಿಜಯಾ ಹರನ್ ಸ್ವತಃ ಕೆಲವು ಮಾರ್ಗದರ್ಶಕ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದರು, ಅವುಗಳಲ್ಲಿ ಭಾಗವಹಿಸುತ್ತಲೂ ಇದ್ದರು. ಬಾನುಲಿಯ ಪ್ರಸ್ತುತತೆಯನ್ನು ಶ್ರೀ ವಿಜಯ್ ಅಂಗಡಿ ಮತ್ತು ಶ್ರೀ ಎನ್.ಕೇಶವಮೂರ್ತಿ ಎಂಬ ಕೃಷಿತಜ್ಞರು ತಮ್ಮ ಕಾರ್ಯಕ್ರಮಗಳ ಮೂಲಕ ಉತ್ತುಂಗಕ್ಕೆ ಏರಿಸಿದ್ದರು. ಈ ಮೂವರು ಪ್ರತಿಭಾವಂತರನ್ನೂ, ಸಂಕೇತಿ ಕೃಷಿ ಅಧ್ಯಯನ ಯೋಜನೆಯಲ್ಲಿ ಪಾಲ್ಗೊಳ್ಳುವಂತೆ ಸಮುದಾಯ ಅಧ್ಯಯನ

ಕೇಂದ್ರವು ಪ್ರಾರ್ಥಿಸಿತು, ಆಹ್ವಾನಿಸಿತು. ಆ ಅಧಿಕಾರಿಗಳು ಪ್ರೀತಿಯಿಂದ ಒಪ್ಪಿ ತಮ್ಮನ್ನು ಈ ಕೆಲಸದಲ್ಲಿ ತೀವ್ರವಾಗಿ ತೊಡಗಿಸಿಕೊಂಡುದರ ಫಲ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಮತ್ತು 'ಸಂಕೇತಿ: ಬೇಸಾಯದ ಬದುಕು' ಎಂಬ ಈ ಎರಡು ಸಂಶೋಧನ ಕೃತಿಗಳು.

'ಸಂಕೇತಿ: ಬೇಸಾಯದ ಬದುಕು' ಎಂಬ ಕೃತಿಯ ಮೊದಲ ಭಾಗವು ಶ್ರೀ ವಿಜಯ್ ಅಂಗಡಿ ಅವರು ೨೦೦೨ -೨೦೦೩ ರ ಅವಧಿಯಲ್ಲಿ ಸಂಕೇತಿ ಕೃಷಿ ನೆಲೆಗಳಲ್ಲಿ ಕ್ಷೇತ್ರಕಾರ್ಯ ಮಾಡಿ ಸಿದ್ಧಪಡಿಸಿದ ಅಧ್ಯಯನ ವರದಿ. ಅದನ್ನು 'ಅವಲೋಕನ' ಎಂದು ಹೆಸರಿಸಲಾಗಿದೆ; ಅದು ಕೃಷಿ ತಜ್ಞನೊಬ್ಬನ ಸಾಹಸ. ವಿವಿಧ ಕಾಲಘಟ್ಟಗಳಲ್ಲಿ ಸಂಕೇತಿ ಬೇಸಾಯದ ಮಾಹಿತಿಯು ವಿವಿಧ ರೀತಿಯಲ್ಲಿ ಅಭಿವ್ಯಕ್ತವಾಗಿದೆ. ವಿವಿಧ ಮೂಲಗಳಿಂದ ಅವುಗಳ ಪ್ರಾತಿನಿಧಿಕವಾದ ಮತ್ತು ಸಾರಯುಕ್ತವಾದ ಮಾತುಗಳನ್ನು ಇಲ್ಲವೆ ಭಾಗಗಳು ಅಥವ ಲೇಖನಗಳನ್ನು ಅಥವ ಅಪ್ರಕಟಿತ ಟಿಪ್ಪಣಿಗಳನ್ನು ಯಥೋಚಿತವಾಗಿ ಸಂಗ್ರಹಿಸಿಕೊಡುವ ಶ್ರಮಪೂರ್ಣ ಕೆಲಸವನ್ನು ಡಾ.ವಿಜಯಾ ಹರನ್ ನೆರವೇರಿಸಿಕೊಟ್ಟಿದ್ದಾರೆ. ಅದನ್ನು ಈ ಕೃತಿಯ ಎರಡನೆಯ ಭಾಗದಲ್ಲಿ 'ಅನೂಚಾನ' ಎಂಬ ಹೆಸರಿನಲ್ಲಿ ಸೇರಿಸಲಾಗಿದೆ. ಈ ಇಬ್ಬರು ಅಧ್ಯಯನಕಾರರೂ ಕೇವಲ ಕೃಷಿಪ್ರೀತಿಯಿಂದ ಈ ಕೆಲಸವನ್ನು ನಿರ್ವಹಿಸಿಕೊಟ್ಟಿದ್ದಾರೆ. ಈ ಇಬ್ಬರು ಸಹೃದಯ ಬಂಧುಗಳಿಗೂ ಅವರ ಈ ಉಪಕಾರಕ್ಕಾಗಿ ಸಂಕೇತಿ ಸಮುದಾಯವು ಆಭಾರಿಯಾಗಿದೆ.

ಅವಲೋಕನ

ಶ್ರೀ ವಿಜಯ್ ಅಂಗಡಿ ತಮ್ಮ ಅಧ್ಯಯನದ ಅಂಗವಾಗಿ ಸಂಕೇತಿಗಳ ೧೭ ಕೃಷಿ ನೆಲೆಗಳಲ್ಲಿ ಕ್ಷೇತ್ರಕಾರ್ಯ ಮಾಡಿದ್ದಾರೆ. ಪ್ರತಿ ಹಳ್ಳಿಯಲ್ಲೂ ಅವರಿಗೆ ಮುಖ್ಯವಾಗಿ ಕಂಡ ಅಥವ ಒದಗಿ ಬಂದ ಹಲವರನ್ನು ಸಂದರ್ಶಿಸಿ ಮಾಹಿತಿ ಸಂಗ್ರಹ ಮಾಡಿದ್ದಾರೆ. ಅವರು ಮಾಹಿತಿ ಸಂಗ್ರಹಿಸಿರುವವರಲ್ಲಿ ಸಂಕೇತಿಯೇತರರೂ ಬ್ರಾಹ್ಮಣೇತರರೂ ಸೇರಿದ್ದಾರೆ. ಅವರ ಅಧ್ಯಯನವು ಹಾಸನಜಿಲ್ಲೆಯ ಕೃಷಿಗೆ ಸಂಬಂಧಿಸಿದಂತೆ ನಡೆದಿದೆ.

ಅಂಗಡಿ ಅವರು ಪ್ರತಿ ಗ್ರಾಮದಲ್ಲಿ ಸಂಕೇತಿ ಬೇಸಾಯದ ಸರ್ವೇಕ್ಷಣ ನಡೆಸುವಾಗಲೂ ಮೊದಲು ಸಮಗ್ರವಾಗಿ ಇಡೀ ಗ್ರಾಮವನ್ನೇ ವಿವಿಧ ಮಗ್ಗುಲುಗಳಿಂದ ಅಧ್ಯಯನ ಮಾಡಿದ್ದಾರೆ. ಅದರಲ್ಲಿ ಗ್ರಾಮದ ಭೌಗೋಳಿಕ ಸನ್ನಿವೇಶವನ್ನು ಕೊಡುವುದರ ಜತೆಗೆ ಗ್ರಾಮಜೀವನವನ್ನು ಪರಿಚಯಿಸುವ ಅನೇಕ ವಸ್ತುಸ್ಥಿತಿಗಳನ್ನು ನೀಡಿದ್ದಾರೆ. ಗ್ರಾಮದ ಸೌಲಭ್ಯಗಳು, ಹಬ್ಬ, ಆಚರಣೆಗಳು, ಬೆಳೆ, ನೀರುಣಿಸುವಿಕೆ, ಗೊಬ್ಬರ ಪೂರೈಕೆ, ಬದಲಾಗುತ್ತಿರುವ ಬದುಕು, ಗಣ್ಯರು, ದಾಖಲೆ ಇಳುವರಿ, ಏರಿದ ಗೊಬ್ಬರದ ಬೆಲೆ, ನಶಿಸಿದ ತೊಟ್ಟಿ ಮನೆಗಳು, ಸಾಮಾಜಿಕ ರಚನೆ, ರೀತಿನೀತಿ, ಐತಿಹ್ಯಗಳು ಇಂಥ ನಾನಾ ವಿಷಯಗಳು ಅದರಲ್ಲಿ ಸೇರಿವೆ. ಇಡೀ ಸಮಾಜವನ್ನೂ, ಜೀವನ ವಿಧಾನವನ್ನೂ, ಬೇಸಾಯದ ಆಗುಹೋಗುಗಳನ್ನೂ ಜತೆಜತೆಗೇ ಸಮೀಕ್ಷಿಸಿರುವುದಕ್ಕೆ ಅದು ಸಾಕ್ಷಿ. ಬೇಸಾಯವು ಜೀವನದ ಅವಿಭಾಜ್ಯ ಅಂಗವೆಂಬುದನ್ನೇ ಅದು ಸೂಚಿಸುತ್ತದೆ. ಅನಂತರ ವಕ್ತೃವಿನ ಪೂರ್ವಿಕರು ಮತ್ತು ಕುಟುಂಬಜೀವನದ ಪರಿಚಯವಾಗುತ್ತದೆ. ಇಷ್ಟೆಲ್ಲ ವಿವರಗಳ ಮೂಲಕ ರೈತನನ್ನು ಓದುಗನಿಗೆ ಆತ್ಮೀಯನನ್ನಾಗಿಸಿದ ಮೇಲೆ ಆತನ ಜೊತೆಗೆ ಸಂದರ್ಶನ ನಡೆಯುತ್ತದೆ. ಆ ವಕ್ತೃಗಳ ಸಮೂಹದಲ್ಲಿ ಸೇರಿರುವ ಕೆಲವರು ಇಂಥವರು: "ಜಮೀನು ನೋಡಿಕೊಂಡು ಮನೆ ಬಳಿ ಬಂದಾಗ ಅಜ್ಜಿಯೊಬ್ಬರು ಹಪ್ಪಳ ಮಾಡುವುದರಲ್ಲಿ ತೊಡಗಿದ್ದರು. ಅವರ ಬಗ್ಗೆ ವಿಚಾರ ಕೇಳಿದೆ. ಹೆಸರು ನಾಗಲಕ್ಷ್ಮಿ, ೮೦ ಮೀರಿದೆ. ಕಣ್ಣು ಕಾಣುತ್ತಿಲ್ಲ, ಕಿವಿ ಕೇಳಿಸುತ್ತಿಲ್ಲ..."; "ಸುಮಾರು ೪೦ ದೇಶಗಳಿಗೆ ಭೇಟಿ ನೀಡಿ ಬಂದಿರುವ ರಮೇಶ್ ಹರವೆ ಅವರು ಸಾವಯವ ಕೃಷಿಯನ್ನು ಜನಪ್ರಿಯಗೊಳಿಸುವಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡುತ್ತಿದ್ದಾರೆ."

ಸಂಕೇತಿ ರೈತರು ಪ್ರಗತಿಪರರೂ ಸಾಹಸಿಗಳೂ ಆಗಿರುವುದರ ವಿವರಗಳು ಸ್ವಾರಸ್ಯಕರವಾಗಿಯೂ, ಸ್ಫೂರ್ತಿದಾಯಕವಾಗಿಯೂ, ಮಾರ್ಗದರ್ಶಕವಾಗಿಯೂ ಇರುವುದನ್ನು ಇಲ್ಲಿ ಕಾಣಬಹುದು. 'ಈ ಭೂಮಿಯಲ್ಲಿ ತೆಂಗು ಬೆಳೆಯುವುದಿಲ್ಲ'ವೆಂದು ಹಿರಿಯರು ಪರಂಪರಾಗತವಾಗಿ ನಂಬಿದ್ದನ್ನು ಧಿಕ್ಕರಿಸಿ ತೆಂಗಿನ ತೋಟ ಮಾಡಿದ್ದು, ತರಕಾರಿಗೆ ಬೆಲೆ ಬಾರದಾಗ ಧೃತಿಗೆಡದೆ ಪರ್ಯಾಯ ಬೆಳೆ ಮಾಡಿದ್ದು, ತಮ್ಮ ಸುತ್ತಿಗೆ ಮೊದಲಿಗರಾಗಿ ಹಣ್ಣಿನ ತೋಟವನ್ನು ಬೆಳೆಸಿದ್ದು, ಅಣ್ಣತಮ್ಮಂದಿರು ಸೇರಿ ಎರಡು ತಿಂಗಳಲ್ಲಿ ಬಾವಿ ತೋಡಿದ್ದು- ಇಂಥ ವಿವರಗಳೆಲ್ಲ ಅದರಲ್ಲಿ ಸೇರಿವೆ.

'ಬರೀ ಆದಾಯದ ದೃಷ್ಟಿಯಲ್ಲಿ ಕಸಬನ್ನು ನೋಡಬಾರದು' ಎಂಬ ರೈತನ ಮಾತು ಬಹುಮುಖವಾದ ಸಕಾರಾತ್ಮಕ ಅರ್ಥಗಳನ್ನು ಹೊರಡಿಸುತ್ತದೆ. 'ಹಣದ ಆಸೆಗೆ ತಂಬಾಕನ್ನು ಹಾಕಿ ಅದನ್ನು ಹದ ಮಾಡಲು ದೇಶದ ಹಸಿರು ಸಂಪತ್ತು ನಾಶವಾಯ್ತು, ಕಾಡು ಲೂಟಿಯಾಯ್ತು. ನಮ್ಮ ಹೊಲಗಳಲ್ಲಿದ್ದ ಮರಗಳೆಲ್ಲಾ ಸರ್ವನಾಶವಾದವಲ್ಲಾ, ಮುಂದೆ ಏನೇನು ಆಗುತ್ತೋ ತಿಳಿಯದು.' ಇದು ತಂಬಾಕು ಬೆಳೆಗಾರನೊಬ್ಬನ ಆತ್ಮನಿರೀಕ್ಷೆ. ಇಂಥ ಸಾಮಾಜಿಕಪ್ರಜ್ಞೆ ನಗರವಾಸಿಗಳಲ್ಲೂ ವಿದ್ಯಾವಂತರಲ್ಲೂ ಸರ್ಕಾರಿ ಉದ್ಯೋಗಿಗಳಲ್ಲೂ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನಾವೇ ಪರೀಕ್ಷಿಸಿಕೊಳ್ಳಬಹುದು. ಆ ಕಾರಣಕ್ಕಾಗಿ ಆ ರೈತರು ಸ್ವಯಂಪ್ರೇರಿತರಾಗಿ ತಂಬಾಕು ಹದ ಮಾಡಲು ಪರ್ಯಾಯ ಇಂಧನಗಳನ್ನು ಕಂಡುಕೊಂಡರು ಇಲ್ಲವೆ ಆ ಬೆಳೆಗೇ ಪರ್ಯಾಯಗಳನ್ನು ಕಂಡುಕೊಂಡರು ಎಂಬುದನ್ನೂ ಇಲ್ಲಿ ದಾಖಲಿಸಬೇಕು.

ವೀಳೆಬಳ್ಳಿ ಇಳಿಸಲು ಚಳಿಗಾಲವೇ ಸೂಕ್ತ, ಸೋನೆ ಇದ್ದಾಗ ಎಲೆ ಕೊಯ್ದರೆ ಹಂಬಿಗೆ ಹಾನಿ -ಸುಣ್ಣಕಲ್ಲು ಜಮೀನಿನಲ್ಲಿವೀಳೆ ಚೆನ್ನಾಗಿ ಬರುತ್ತದೆ - ಸ್ವಾತಿಮಳೆ ಬಂದು ಚಳಿ ಬಿದ್ರೆ ಅಡಿಕೆಯಲ್ಲಿ ಒಳ್ಳೆಯ ತೂಕ - ಇಂಥ ಕೃಷಿಸೂತ್ರಗಳು ಈ ಅಧ್ಯಯನದ ಫಲಶ್ರುತಿಯ ಕೆನೆಗಳು. ಸಂಕೇತಿ ಬೇಸಾಯದ ಬದುಕನ್ನು ಅವಲೋಕಿಸಿ ವಿಶ್ಲೇಷಿಸಿ ಅಂಗಡಿಯವರು ಅಲ್ಲಲ್ಲಿಯೇ ರೈತರಿಗೆ ಪರಿಣತ ಮಾರ್ಗದರ್ಶನವನ್ನೂ ಮಾಡಿದ್ದಾರೆ.

ವಿವಿಧ ಬೆಳೆಗಳ ಬೇಸಾಯದ ವಿವರಗಳು ಕೃಷಿಶಾಸ್ತ್ರದ ಭಾಗಗಳಾಗಿ ಬಂದಿವೆ. ಈ ವಿವರಗಳಲ್ಲಿ ಬೇಸಾಯಗಾರರ ವೈಯಕ್ತಿಕ ಚಿಂತನೆಗಳನ್ನೂ, ಸಾಧನೆಗಳನ್ನೂ ಕಾಣಬಹುದು. ಭೂಮಿಯ ಗುಣ, ಹವಾಮಾನ, ಮಾರುಕಟ್ಟೆ ಮೊದಲಾದ ಸನ್ನಿವೇಶಗಳಿಗೆ ಅನುಗುಣವಾಗಿ ಇರುವ ಪ್ರಾದೇಶಿಕ ವ್ಯತ್ಯಾಸಗಳೂ ಇವೆ. ಇವೆಲ್ಲವೂ ಕೃಷಿಶಾಸ್ತ್ರವನ್ನು ಪುಷ್ಟಿಗೊಳಿಸಿವೆ. ಗೋಪಾಲನೆಯ ವಿವರಗಳೂ ಇದರೊಂದಿಗೆ ಸೇರಿರುವುದು ಸಹಜವಾಗಿದೆ.

ಪ್ರತಿ ಗ್ರಾಮ ಮತ್ತು ವ್ಯಕ್ತಿಯ ಕೃಷಿವಿಧಾನದ ಪರಿಚಯ ಮಾಡಿಕೊಡುವಾಗಲೂ ಅಂಗಡಿ ಅವರು ಆಯಾ ಹೊತ್ತಿನ ಅನುಭವಗಳನ್ನು ಆಧರಿಸಿ ಬೇರೆ ಬೇರೆಯ ನಿರೂಪಣಾ ತಂತ್ರಗಳನ್ನು ಅನುಸರಿಸಿದ್ದಾರೆ. ವ್ಯಕ್ತಿಯ ನೇರ ಸಂದರ್ಶನವೂ ಅದರ ಭಾಗವಾಗಿ ಬಂದಿದೆ. ವ್ಯವಸಾಯ ವಿಧಾನಗಳಿಗೆ ಅವರು ಒತ್ತುನೀಡಿದ್ದಾರೆ. ಅದಕ್ಕೆ ಹೊಂದಿಕೊಂಡ ಬದುಕಿನ ಭಾವನಾತ್ಮಕ ನೆಲೆಗಳಿಗಿಂತ ಅಂಗಡಿ ಅವರಿಗೆ ಕೃಷಿಯ ತಾಂತ್ರಿಕತೆಯೇ ಮುಖ್ಯವಾಗಿರುವಂತೆ ತೋರುತ್ತದೆ. ಕ್ಷೇತ್ರಕಾರ್ಯಕಥನ ಮತ್ತು ಬೇಸಾಯದ ಅವಲೋಕನ ಎರಡೂ ಜತೆಜತೆಗೆ ಸಾಗುವ ಪರಿ ಇಲ್ಲಿಯದು. ಇದರಿಂದಾಗಿ ಓದುಗನು ತಾನೇ ಓಡಾಡಿದ ಅನುಭವವಾಗುತ್ತದೆ. ಆಕಾಶವಾಣಿಯ ಕೃಷಿಸಂಬಂಧಿತ ಕಾರ್ಯಕ್ರಮಗಳಿಗಿಂತ ಲಿಖಿತರೂಪದ ಈ ನಿರೂಪಣೆಯು ಭಿನ್ನವಾಗಿರಬೇಕಾದುದು ಸಹಜವೇ. ಅಂಗಡಿಯವರು ಈ ಹೊಸ ಮಾಧ್ಯಮವನ್ನು ಸಾರ್ಥಕಪಡಿಸಿಕೊಂಡು ರೈತರಿಗೆ ಇದು ಉಪಯುಕ್ತವಾಗುವಂತೆ ಮಾಡಿದ್ದಾರೆ. ಕೆಲವೊಮ್ಮೆ ವೀಕ್ಷಕ ವಿವರಣೆಯಂತೆ ಮುಂದುವರಿಯುವ ಈ ನಿರೂಪಣೆಯು ಕುತೂಹಲವನ್ನು ಕಾಯ್ದುಕೊಳ್ಳುತ್ತದೆ. ಜೀವನದ ಅತಿ ಸರಳ ಮತ್ತು ಸಾಮಾನ್ಯ ವಿವರಗಳೇ ಸೇರಿ ಒಂದು ಬದುಕಾಗುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಸಂಕೇತಿ ಬೇಸಾಯವನ್ನು ಅಧ್ಯಯನ ಮಾಡಿರುವ ಎಲ್ಲರನ್ನೂ ಕಾಡಿರುವ ಪ್ರಶ್ನೆ ಎಂದರೆ 'ಸಂಕೇತಿಗಳ ಕೃಷಿ ಮುಂದುವರಿಯುತ್ತದೆಯೆ' ಎಂಬುದು. ಮಕ್ಕಳೆಲ್ಲ ಆಧುನಿಕ ಶಿಕ್ಷಣ ಪಡೆದು, ನೌಕರಿ ಹೊಂದಿ ಪಟ್ಟಣಗಳಿಗೆ ವಲಸೆ ಹೋಗುತ್ತಿರುವುದು ಅದಕ್ಕೆ ಒಂದು ಕಾರಣ. ಸಂಕೇತಿ ಬೇಸಾಯಗಾರರೆಲ್ಲರೂ ತಮ್ಮ ಕೃಷಿಯಲ್ಲಿ ತೊಡಗಿಕೊಂಡಿರುವ ರೀತಿಯು ಎಷ್ಟು ಗಾಢವಾಗಿದೆ ಎಂದರೆ, ವಾರಸುದಾರರೇ ಇಲ್ಲ ಎಂಬುದು ಖಚಿತವೇ ಆಗಿದ್ದರೂ ಅಷ್ಟರಮಟ್ಟಿಗೆ ಇವರು ಹೇಗೆ ತೊಡಗಿಸಿಕೊಂಡಿದ್ದಾರೆ ಎಂಬ ಬೆರಗು ಹುಟ್ಟುವುದು ಎರಡನೆಯ ಕಾರಣ. ಆದಾಯಕ್ಕೆ ಒತ್ತು ಕೊಡದ, ದುಡಿಮೆಯ ಮೇಲಿನ ಪ್ರೀತಿ ಮತ್ತು ಗಿಡಗಳೊಂದಿಗಿನ ಭಾವನಾತ್ಮಕ ಸಂಬಂಧದಿಂದಾಗಿಯೇ ಇಷ್ಟೊಂದು ತಾದಾತ್ಮ್ಯ ಸಾಧ್ಯವಾಗಿದೆ ಎಂದು ಅದಕ್ಕೆ ಒಂದು ಬಗೆಯ ಕಾರಣ ನೀಡಬಹುದು. ಇಷ್ಟರ ನಡುವೆ ಅಧ್ಯಯನಕಾರರೆಲ್ಲರಿಗೂ ಸಂಕೇತಿ ಬಾಗಾಯಿತು ಸಂಸ್ಕೃತಿ ಉಳಿಯಲು ಅರ್ಹವಾದುದೆಂದು ಅನಿಸಿರುವುದು ಗಮನಾರ್ಹ ಅಂಶವಾಗಿದೆ.

ಅನೂಚಾನ

ಈ ಭಾಗದ ಲೇಖನಗಳನ್ನು ಸಾಮಾನ್ಯವಾಗಿ ಕಾಲಾನುಕ್ರಮದ ರೀತಿಯಲ್ಲೇ ಜೋಡಿಸಲಾಗಿದೆ. ಸಂಕೇತಿಗಳಿಗೆ ಪಾರಂಪರಿಕವಾಗಿ ಬಂದ ಕೃಷಿಯ ನಂಟು ವಿವಿಧ ಘಟ್ಟಗಳಲ್ಲಿ ಹೇಗೆ ದಾಖಲಾಗಿದೆ ಎಂಬುದನ್ನು ಕಾಣಿಸುವುದು ಈ ಭಾಗದ ಉದ್ದೇಶವಾಗಿದೆ. ಈ ಮಾತಿಗೆ ಹೊರತಾದಂತೆ 'ನನ್ನ ಊರು' ಎಂಬ ಕವನವು ಈ ಭಾಗದ ಪ್ರಾರಂಭದಲ್ಲಿಯೇ (ಸಾರ್ಥಕವಾಗಿ) ಬಂದಿದೆ. ಮತ್ತೂರು ನಂದ ಅವರ ಈ ಕವನವು ಇತ್ತೀಚಿನದು. ಆದರೂ ಸಂಕೇತಿಗಳ ಕೃಷಿ ನೆಲೆಯನ್ನೇ ವಸ್ತುವಾಗಿಸಿಕೊಂಡು ಬರೆದ ಪದ್ಯ ಇದು. ಇದು ಬಾಗಾಯಿತು ಸಂಸ್ಕೃತಿಯ ಮುಗ್ಧರ ಸ್ನೇಹವನ್ನೂ ದುಡಿಮೆ ಮತ್ತು ಮೋಕ್ಷಗಳ ನಡುವಿನ ಕನಸಿನ ಸೇತುವೆಯನ್ನೂ ಮಧುರವಾಗಿ ಚಿತ್ರಿಸಿದೆ. ಸಂಕೇತಿ ಗ್ರಾಮಗಳ ಒಳವಿವರಗಳು ಮುಂದಿನ ಲೇಖನಗಳಲ್ಲಿ ವಿಸ್ತರಿಸಿಕೊಂಡಿವೆ.

ಎರಡನೆಯ ಪರಿಚ್ಛೇದದಲ್ಲಿ ಬಂದಿರುವ ಪ್ರಾರಂಭದ ವಾಕ್ಯಗುಚ್ಛವು ೧೮೭೧ರಷ್ಟು ಹಿಂದಿನ ದಾಖಲಾತಿ. ಅದು ಸಂಕೇತಿ ಸಮುದಾಯದ ಕಠಿಣ ದುಡಿಮೆ ಮತ್ತು ವೇದಾಧ್ಯಯನದ ಸಮನ್ವಯದ ಬಾಗಾಯಿತು ಸಂಸ್ಕೃತಿಯನ್ನು ಮುಕ್ತಕಂಠದಿಂದ ಶ್ಲಾಘಿಸಿದೆ. ಅದೊಂದೇ ವಾಕ್ಯಗುಚ್ಛವೇ ಸಂಕೇತಿಗಳ ಹಿರಿಮೆಯನ್ನೂ ಪರಂಪರೆಯನ್ನೂ ಅನನ್ಯತೆಯನ್ನೂ ಅನಂತ ಪರಿಭಾವನೆಗೆ ಒಳಪಡಿಸಬಹುದಾದಷ್ಟು ಶಕ್ತವಾಗಿದೆ. ಮಿಕ್ಕ ಸಮಸ್ತ ವಿವರಗಳೂ ಅದರ ವ್ಯಾಖ್ಯಾನವೆನ್ನಬಹುದು. ಶೆಂಕೋಟ್ಟೈನಿಂದ ಕೌಶಿಕದವರೆಗೆ ನಡೆದ ಅವರ ಮಹಾವಲಸೆಯ ದಾರಿಯಲ್ಲಿನ-ಹೆಮ್ಮಿಗೆ, ಕೌಶಿಕ, ಮತ್ತೂರು, ಎಡತೊರೆ, ಶೃಂಗೇರಿ - ಅದಾವ ನೆಲೆಯೇ ಇರಲಿ, ಅವರನ್ನು ಆಕರ್ಷಿಸಿದ್ದು ಬೇಸಾಯಕ್ಕೆ ಫಲವತ್ತಾದ ಭೂಮಿ ಮತ್ತು ಅದಕ್ಕೆ ಹೊಂದಿಕೊಂಡ ವೈದಿಕ ಅನುಷ್ಠಾನ ಸಾಧ್ಯತೆ. ಒಣ ಭೂಮಿಗಳನ್ನು ಹಸಿರುವನಗಳಾಗಿ ಪರಿವರ್ತಿಸುತ್ತ, ಕೆರೆಗಳನ್ನು ಕಟ್ಟಿಸುತ್ತ, ದೇವಸ್ಥಾನ ಛತ್ರ ಮಂಟಪಗಳನ್ನು ಕಟ್ಟಿಸುತ್ತಲೇ ಅವರು ಮುಂದೆ ಮುಂದೆ ನಡೆದರು.

ಮೈಸೂರು ಸಂಸ್ಥಾನದಲ್ಲಿ ಮಂತ್ರಿ ಪದವಿಯನ್ನಲಂಕರಿಸಿದ ತಿಪ್ಪಯ್ಯನವರು ಕಾರಂಜಿ ಕೆರೆಯನ್ನು ನಿರ್ಮಿಸಿದ್ದು, ಅದರ ಕೆಳಗೆ 'ತಿಪ್ಪಯ್ಯ-ತೋಟ'ಗಳನ್ನು ಬೆಳೆಸಿದ್ದು, ತಿಪ್ಪೂರಿನಿಂದ ಕಾವೇರಿ ಕಾಲುವೆಯನ್ನು ಮೈಸೂರಿಗೆ ಹರಿಸಿದ್ದು, ಕಟ್ಟೆಪುರದಕಟ್ಟೆ ಮತ್ತು ಲಕ್ಷ್ಮಣತೀರ್ಥ ಕಟ್ಟೆಯನ್ನು ಕಟ್ಟಿಸಿದ್ದು-ಇವೆಲ್ಲವೂ ಸಂಕೇತಿ ಸಮುದಾಯದ ಕೃಷಿಯ ನಂಟನ್ನೂ ಕೃಷಿಯ ಪ್ರೀತಿಯನ್ನೂ ವ್ಯಕ್ತಪಡಿಸುವ ಐತಿಹಾಸಿಕ ಅಂಶಗಳೇ ಆಗಿವೆ. ಅವರ ಮನೋಧರ್ಮದ ಮೂಲದಲ್ಲಿ ಬಾಗಾಯಿತು ಸಂಸ್ಕೃತಿಯೇ ಕೆಲಸ ಮಾಡಿದೆ.

ಮೂರನೆಯ ಪರಿಚ್ಛೇದವು, ಶ್ರೇಷ್ಠ ಕೃಷಿಕನೆಂಬ ಕಾರಣಕ್ಕೆ ಎರಡು ಬಾರಿ ರಾಜ್ಯಮಟ್ಟದ ಪ್ರಶಸ್ತಿ ಗಳಿಸಿದ ಎಚ್.ವಿ.ಕೃಷ್ಣರಾವ್ ಬಗೆಗಿನ ಮಾಹಿತಿ ಹೊಂದಿದೆ. ಅವರು ತೆಗೆದ ವಿಶೇಷ ಇಳುವರಿಗಾಗಿ ಜಪಾನ್ ಸರ್ಕಾರವು ಎರಡು ಟ್ರ್ಯಾಕ್ಟರುಗಳನ್ನು ಬಹುಮಾನವಾಗಿ ಕೊಟ್ಟಿತೆಂದರೆ ಯಾರಿಗೆ ತಾನೇ ಹೆಮ್ಮೆ ಎನಿಸದು?

ಸರ್ದಾರ್ ಕೆ.ಬಸವರಾಜೇ ಅರಸಿನವರು (ಕನ್ನಡ ಸಾಮ್ರಾಜ್ಯ, ಕೈಪಿಡಿ-೧ದಲ್ಲಿ) ಸಂಕೇತಿ ಕೃಷಿಯನ್ನು ಹತ್ತಿರದಿಂದ ಕಂಡು ಹೇಳಿರುವ 'ಇವರು ಬಹು ಕಷ್ಟಪಟ್ಟು ಲಾಲಸೆಯಿಂದ ವ್ಯವಸಾಯವನ್ನು ಮಾಡುತ್ತಾರೆ....' ಎಂಬ ಒಂದು ಮಾತೇ ಒಂದು ದೊಡ್ಡ ಪ್ರಶಸ್ತಿಪತ್ರದಂತಿದೆ.

ಐದನೆಯ ಪರಿಚ್ಛೇದದಲ್ಲಿ 'ಸಂಕೇತಿತ್ವ' ಎಂಬ ವಿಶೇಷ ಪದವೇ ರೂಪುಗೊಂಡಿದೆ; ಅದರ ವಿವರಣೆಯೂ ಸ್ವಾರಸ್ಯಕರವಾಗಿಯೂ, ಪ್ರೇರಕವಾಗಿಯೂ ಇದೆ. ಆ ಪರಿಚ್ಛೇದದಲ್ಲಿಯೇ ಬಂದಿರುವ 'ಸಂಕೇತಿ ಹವ್ಯಾಸಗಳು' ಎಂಬ ಭಾಗವು ಸಂಕೇತಿಗಳ ವಿವಿಧ ಹವ್ಯಾಸಗಳನ್ನು ಅನುಭವಗಮ್ಯವಾಗುವಂತೆ ಚಿತ್ರಿಸಿದೆ; ಅದು 'ಸಂಕೇತಿತ್ವ'ವನ್ನು ಇನ್ನೂ ವಿಶದವಾಗಿ ಪರಿಚಯಿಸುತ್ತದೆ.

'ಅವರವರ ಮಾತಿನಲಿ' ಎಂಬ ಆರನೆಯ ಪರಿಚ್ಛೇದವು ಅನುಭವಿಗಳಾದ ಸಂಕೇತಿಗಳ ಹೇಳಿಕೆಗಳ ಸಂಗ್ರಹ. ಕೃಷಿಯೊಂದಿಗೇ ನಡೆಯುತ್ತಿದ್ದ ಅಧ್ಯಯನ, ಸರಕುಗಳ ಚಿಲ್ಲರೆ ಮಾರಾಟದಿಂದ ಆಗುತ್ತಿದ್ದ ಜೀವನ, ಮೋಡ ಮತ್ತು ಮಳೆ, ಗೋಪಾಲನೆ, ಸಸ್ಯರೋಗಗಳು, ಜಾನಪದ ಆಚರಣೆಗಳು, ಹೊಸದಾಗಿ ತೋಟ ಏಳಿಸುವ ರೀತಿ, ಪೌರೋಹಿತ್ಯ, ಬಡತನ, ಮನೆಯ ಅಣಿ, ಕೃಷಿ ಪರಿಕರಗಳ ಸಜ್ಜಿಕೆ, ಬಾಗಾಯಿತಿನ ರೀತಿ ರಿವಾಜು, ಹೆಣ್ಣುಮಕ್ಕಳ ಬೇಸಾಯ, ಸಾಹಸಗುಣ ಇಂಥ ವ್ಯಾಪಕವಾದ ವಿಷಯಗಳನ್ನು ಕುರಿತ ಅನುಭವಸಾರವು ಇಲ್ಲಿ ದಾಖಲಾಗಿದೆ. ಇದೊಂದೇ ಭಾಗವೇ ಸಂಕೇತಿಗಳ ಕೃಷಿ ಜೀವನದ ಒಂದು ಚಿತ್ರ ಕಟ್ಟಿಕೊಡಲು ಸಮರ್ಥವಾಗಿದೆ.

ಏಳನೆಯ ಪರಿಚ್ಛೇದದಲ್ಲಿ ಸಂಕೇತಿ ಸಮುದಾಯಕ್ಕೆ ಅಡಕೆ ಬೇಸಾಯವು ಒಗ್ಗಿ ಬಂದಿರುವ ರೀತಿಯನ್ನೂ, ಕರ್ನಾಟಕದಲ್ಲಿ ಅವರು ಈ ಬೇಸಾಯವನ್ನು ಹೊಸದಾಗಿ ತೊಡಗಿಸಿದರೆಂಬ ವಿಷಯವನ್ನೂ ವಿವರಿಸಲಾಗಿದೆ. ಮುಖ್ಯವಾಗಿ ಪ್ರೊ.ಕೆ.ಎಸ್.ಕೃಷ್ಣಮೂರ್ತಿ ಅವರು ಸಂಕೇತಿಗಳ ಜೀವನವಿಧಾನವು ಕಾಲಕ್ರಮದಲ್ಲಿ ಬದಲಾಗಿ ಈಗ ನಗರದ ಯಾಂತ್ರಿಕ ಜೀವನಕ್ಕೆ ಅವರು ಒಗ್ಗಿಕೊಂಡಿರುವ ಸಂಗತಿಯನ್ನು ಎಳೆ ಎಳೆಯಾಗಿ ವಿವರಿಸಿದ್ದಾರೆ.

ಸಂಕೇತಿ ಕೃಷಿಯ ಬಗೆಗಿನ ದಾಖಲೆಗಳನ್ನು ಕ್ರೋಢೀಕರಿಸುವ ಸಮಯದಲ್ಲಿ ಯಾವುದೇ ಒಂದು ದೃಷ್ಟಿಕೋನ ಅಥವಾ ಪ್ರಸಂಗ ಅಥವಾ ವಸ್ತುವಿಗೆ ನಿರ್ದಿಷ್ಟಪಡಿಸಿಕೊಂಡು ವರ್ಗೀಕರಿಸುವುದು ಗೋಜಲಿನ ಕೆಲಸವಾಗಬಹುದು. ಹಾಗಾಗಿ ಎಂ.ಎಸ್.ವಿಜಯಾ ಹರನ್ ಅವರು ಆಯಾ ಕಾಲಘಟ್ಟದ ಪತ್ರಿಕೆ ಇಲ್ಲವೆ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ವಿಷಯಸಂಗ್ರಹ ಮಾಡಿರುವುದು ಸರಿಯಾದ ಕ್ರಮವಾಗಿದೆ. ಹಾಗೆ ಮಾಡಿದಾಗಲೂ ಆಯಾ ಪರಿಚ್ಛೇದವು ಪ್ರಸ್ತಾಪಿಸುವ ವಿಷಯಗಳಲ್ಲಿ ಒಂದು ಸಮಾನ ದಿಕ್ಕು ಇರುವುದನ್ನು ಗುರುತಿಸಬಹುದು.

ಎಂಟನೆಯ ಪರಿಚ್ಛೇದವು 'ಸಂಕೇತಿ ಸಂಪದ' ಎಂಬ ಕೃತಿಯಿಂದ ಆಯ್ದ ಭಾಗಗಳನ್ನು ಸಂಗ್ರಹಿಸಿದೆ. ಪ್ರೊ.ಕೆ.ಎಸ್.ಕೃಷ್ಣಮೂರ್ತಿ ಅವರ ಈ ಕೃತಿಯು ಸಂಕೇತಿಗಳ ಸಮಗ್ರ ಜೀವನದ ವಿವಿಧ ಮುಖ್ಯ ಮುಖಗಳನ್ನು ಬಹು ನವಿರಾಗಿ ಪರಿಚಯಿಸುತ್ತದೆ. ಸಂಕೇತಿ ಸಮುದಾಯದ ಅಂತರಂಗವನ್ನು ಕಣ್ಣಿಗೆ ಕಟ್ಟುವಂತೆಯೂ, ಜೀವಂತವಾಗಿಯೂ ಅಭಿವ್ಯಕ್ತಿಸಿರುವ ಬಹು ಅಪರೂಪದ ಕೃತಿ. ಎಂ.ಎಸ್.ವಿಜಯಾ ಹರನ್ ಅವರು ಅದರ ಸಾರಭೂತ ಭಾಗಗಳನ್ನು ಬಹು ಜಾಗರೂಕತೆಯಿಂದ ಇಲ್ಲಿ ಹೆಕ್ಕಿಕೊಟ್ಟಿದ್ದಾರೆ. ಊಟ ಮಾಡುವಾಗ ನಡೆಯುವ ಹರಟೆಯ ಲಹರಿ, ಕಷ್ಟಪಟ್ಟು ಬೆಳೆಯುವ ರೈತನಿಗೆ ಮಾರುಕಟ್ಟೆಯಲ್ಲಾಗುವ ಹತಾಶೆ, ಗುರು-ಶಿಷ್ಯರ ಅಪೂರ್ವ ಸಹಯೋಗ, ಪಂಚಾಯಿತಿಯ ಹದ, ಅಡಕೆಯ ರೇಖೆ, ಹಸು ತಪ್ಪಿಸಿಕೊಳ್ಳುವುದು- ಈ ಪ್ರಸಂಗಗಳು ಒಂದೊಂದು ವಿಶಿಷ್ಟ ಅನುಭವ ಪ್ರಪಂಚವನ್ನೇ ತೆರೆದಿಡುತ್ತವೆ.

ಪ್ರೊ.ಕೆ.ಎಸ್.ಕೃಷ್ಣಮೂರ್ತಿಯವರು ಬಾಗಾಯಿತು ಸಂಸ್ಕೃತಿಯು ಇನ್ನೂ ಉತ್ತುಂಗಾವಸ್ಥೆಯಲ್ಲಿದ್ದಾಗಲೇ ಹಳ್ಳಿಗಳಲ್ಲಿ ಬೆಳೆದವರು. ಮೇಲಾಗಿ ಅವರು ಸಂಕೇತಿ ಸಮುದಾಯದ ಈ ವಿಶಿಷ್ಟ ಜೀವನ ವಿಧಾನವನ್ನು ಗುರುತಿಸಿದ್ದಾರೆ, ಅದಕ್ಕೆ ಸಹಜವಾಗಿಯೇ ಮಾರುಹೋಗಿದ್ದಾರೆ. ಅದನ್ನು ಯಥಾರ್ಥವಾಗಿ ಸಾವಧಾನದಿಂದ ಸವಿವರವಾಗಿ ಮಂಡಿಸುವ ಶಕ್ತಿಯೂ ಅವರಿಗೆ ದಕ್ಕಿದೆ. 'ಕೌಶಿಕ' ಎಂಬ ಸ್ಮರಣ ಸಂಪುಟಕ್ಕಾಗಿ ೧೯೯೫ರಲ್ಲಿ ಅವರು ಬರೆದ ಲೇಖನದಲ್ಲಿ ಮೋಹಕವಾಗಿ ಅದು ಬಂದಿದೆ. 'ಸಂಕೇತಿಗಳು ಪರಿಸರಪ್ರೇಮಿಗಳು, ಆರಾಧಕರು, ಪ್ರಕೃತಿಯ ಸಹಚರರು' ಎಂಬ ಆ ಲೇಖನದ ಮುಕ್ತಾಯದ ಮಾತುಗಳು ಮನನೀಯವಾಗಿವೆ.

'ನೆನಪು ಸಿಹಿ' ಎಂಬ ಲೇಖನದಲ್ಲಿ ಆರ್.ಎಲ್.ಅನಂತರಾಮಯ್ಯನವರು ಇಲ್ಲಿಗೆ ಆರು ದಶಕಗಳ ಹಿಂದಿನ ಗ್ರಾಮೀಣ ಬದುಕಿನ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ. ಕೇವಲ ನಗರದವರಲ್ಲ, ಗ್ರಾಮೀಣ ಶಾಂತಿಯನ್ನೂ ಹಸಿರು ಸಮೃದ್ಧಿಯನ್ನೂ ಅಷ್ಟಿಷ್ಟು ಮುಕ್ಕು ಮಾಡಿಕೊಂಡಿರುವ ಹಳ್ಳಿಗರೂ ಕಳೆದುಹೋದ ಆ ದಿನಗಳನ್ನು ನೆನೆದು ಮೂಕರಾಗಿ ಕೂರುವಂತೆ ಮಾಡುತ್ತದೆ ಈ ಲೇಖನ. ಸಂತುಷ್ಟಿ ಎಂಬ ಕೃತಿಯಲ್ಲೇ ಸೇರಿರುವ ಡಾ.ಟಿ.ಎಸ್.ಶಂಕರನ್ ಅವರ 'ಭೂರಿಭೋಜನಗಳು ಮತ್ತು ಹಬ್ಬಗಳು' ಎಂಬ ಲೇಖನದಲ್ಲಿ ತಮಿಳುನಾಡಿನ ಹಳ್ಳಿಗಳಲ್ಲಿ ಹಿಂದೆ ನಡೆಯುತ್ತಿದ್ದ ಭೂರಿಭೋಜನಗಳು ಉಂಟುಮಾಡುತ್ತಿದ್ದ ಸಡಗರವನ್ನು ಚಿತ್ರಿಸಲಾಗಿದೆ. 'ಹೊನ್ನು ಹೊನ್ನು' ಎಂಬ ಲೇಖನದಲ್ಲಿ, ಬಲಿಪಾಡ್ಯಮಿಯಂದು ಪೂಜೆಗೆ ಬಳಸುವ ಹೊನ್ನಾವರಿಕೆ ಹೂವಿನಸುತ್ತ ಗ್ರಾಮೀಣ ಬಡಜನರು ಕಟ್ಟಿಕೊಳ್ಳುವ ಸುಂದರ ಕನಸಿನ ವಿಶಿಷ್ಟ ಚಿತ್ರಣವಿದೆ.

ಹನ್ನೊಂದನೆಯ ಪರಿಚ್ಛೇದದಲ್ಲಿ 'ನೆನಪು ಕೆದರಿದಾಗ' ಎಂಬ ಗ್ರಂಥದಿಂದ ಎರಡು ಪ್ರಸಂಗಗಳನ್ನು ಎತ್ತಿಕೊಡಲಾಗಿದೆ. ಕಥಾನಾಯಕನು ಮತ್ತೂರು ಗ್ರಾಮವನ್ನು ಪ್ರವೇಶಿಸುತ್ತಾನೆ. ಆ ಬೀದಿಯಲ್ಲಿನ ೧೨-೧೩ ವಯಸ್ಸಿನ ಹೆಣ್ಣುಮಗಳೊಬ್ಬಳು ಚಂಗನೆ ಮರವೊಂದನ್ನೇರಿಬಿಡುತ್ತಾಳೆ. ತನಗೆ ಬೇಕಾದ ಹೂಗಳನ್ನು ಕುಯ್ದುಕೊಂಡು ಇಳಿಯುತ್ತಾಳೆ. ಆತ ಆಕೆಯನ್ನು ವರಿಸಬೇಕೆಂದು ಅಲ್ಲಿಯೇ ನಿಶ್ಚಯಿಸಿಕೊಂಡುಬಿಡುತ್ತಾನೆ! ಹಾಗಿರುತ್ತದೆ ಆಕೆಯ ಚುರುಕು! ವಿವಾಹವಾದ ಮೇಲೆ ಒಂದು ದಿನ ಮಧ್ಯಾಹ್ನ ಕೊಟ್ಟಿಗೆಯಿಂದ ಹುಯಿಲೊಂದು ಕೇಳಿಬರುತ್ತದೆ. ಎತ್ತೊಂದು ಮನೆಯೊಡತಿಯನ್ನು ಕೋಡುಗಳಲ್ಲಿ ತಿವಿದು ಎತ್ತಿಬಿಟ್ಟಿರುತ್ತದೆ! ಬೇಸಾಯಗಾರರ ಬದುಕು ಇಂಥ ಹೆಜ್ಜೆಗಳ ಮೇಲೆಯೇ ಸಾಗುತ್ತದೆ!

"ಹೋರಾಟಗಾರನ ನೆನಪುಗಳು" ಎಂಬುದು 'ಸಂಸಕ್ತ' ಎಂಬ ಕೃತಿಯಲ್ಲಿ (೧೯೯೮) ಬಂದ ಲೇಖನ. ಅದರಲ್ಲಿರುವುದು ಸ್ವಾತಂತ್ರ್ಯ ಹೋರಾಟಕ್ಕಾಗಿ ರೈತನೊಬ್ಬ ತನ್ನ ಸಮಸ್ತವನ್ನೂ ಹಾಳುಮಾಡಿಕೊಂಡು ಮನೆಯವರನ್ನು ಬೀದಿಪಾಲು ಮಾಡಿದ ವೃತ್ತಾಂತ. ಈ ಕಥೆಯ ಮುಂದಿನ ಭಾಗವೂ ಉದಾತ್ತವಾದುದು. ಸ್ವಾತಂತ್ರ್ಯಸೇನಾನಿಯು ಮೃತನಾಗುತ್ತಾನೆ, ದೇಶಕ್ಕಾಗಿ ಸಮಸ್ತ ಸಂಪತ್ತನ್ನೂ ಕೊನೆಗೆ ಪ್ರಾಣವನ್ನೂ ತೆತ್ತ ಆ ರೈತನ ಮನೆಯವರಿಗೆ ತೋಟಗಳನ್ನು ಊರ ಜನರು ಹಿಂದಿರುಗಿಸಿ ಆ ಸಂಸಾರವು ನೆಲೆ ನಿಲ್ಲುವಂತೆ ಮಾಡುತ್ತಾರೆ! ಇದು ಸಂಕೇತಿ ಕುಟುಂಬವೊಂದರ 'ಕಥೆ' ಅಲ್ಲ, 'ಚರಿತ್ರೆ'!

'ಸಂವಾದ' ಎಂಬುದು ಇತರರು ಸಂಕೇತಿ ಸಮುದಾಯದ ಬಗ್ಗೆ ಬರೆದಿರುವ ಲೇಖನಗಳ ಸಂಗ್ರಹ. ಕನ್ನಡದ ಮೇರುಕಥೆಗಾರ ಪೂಜ್ಯ ಮಾಸ್ತಿಯವರ ಲೇಖನವೂ ಇದರಲ್ಲಿ ಸೇರಿದೆ. ಸಾಂದರ್ಭಿಕ ಇಕ್ಕಟ್ಟಿಗೆ ಸಿಲುಕಿದ ಸಂಕೇತಿ ರೈತನೊಬ್ಬನ ಪ್ರಾಮಾಣಿಕತೆಯನ್ನು ಅದು ಗುರುತಿಸಿದೆ. ಸದಾನಂದ ಅವರ ಲೇಖನ 'ಸಂಸ್ಕೃತ ಗ್ರಾಮ ಮತ್ತೂರು' ಆ ಗ್ರಾಮದ ಪರಿಚಯವನ್ನು ಮಾಡಿಸುತ್ತದೆ. "ಹಾಗೇ ಬನ್ನಿ. ಕಚ್ಚೆಪಂಚೆ ಉಟ್ಟು ಮೇಲ್ವಸ್ತ್ರ ಹೊದ್ದು ಶಿಖೆ ಬಿಟ್ಟವರು ಕೈಯಲ್ಲಿ ಗುದ್ದಲಿ, ಪಿಕಾಸಿ, ಕುಡುಗೋಲು ಹಿಡಿದು ಸಂಸ್ಕೃತದಲ್ಲಿ ಸಂಭಾಷಿಸುತ್ತ ತಮ್ಮ ತೋಟಕ್ಕೆ ಹಾದುಹೋಗುವುದನ್ನು ನೋಡಬಹುದು". ಈಗಲೂ ಜೀವಂತವಾಗಿರುವ ಚಿತ್ರ ಇದು, ಪ್ರಾಚೀನ ಬಾಗಾಯಿತು ಸಂಸ್ಕೃತಿಯ ಅಪರೂಪದ ಮುಂದುವರಿಕೆ. "ಸಂಕೇತಿಗಳು ಕಾಯಕಕ್ಕೆ ಹೆಚ್ಚು ಮಹತ್ವ ಕೊಡುತ್ತಾರೆ. ಕಷ್ಟಪಟ್ಟು ಕೆಲಸ ಮಾಡಿ ಊಟ ಮಾಡುವರು. ಕೆಲಸ ಮಾಡದೆ ಊಟ

ಮಾಡುವುದು ಮಹಾಪಾಪವೆಂದು ಅವರು ಗ್ರಹಿಸುತ್ತಾರೆ" ಇದು ಸಂಕೇತಿ ಬೇಸಾಯಗಾರರ ನಡುವೆಯೇ ಅತ್ಯಂತ ನಿಕಟವಾಗಿ ಅರ್ಧ ಶತಮಾನ ಕಾಲ ವಾಸಿಸಿದ ಡಾ.ಎ.ಜಿ.ಸುಬ್ಬರಾವ್ 'ಸಂಕೇತಿ ಸಮುದಾಯ-ನಾನು ಕಂಡಂತೆ' ಎಂಬ ಲೇಖನದಲ್ಲಿ ಒತ್ತುಕೊಟ್ಟು ಹೇಳಿರುವ ಮಾತು.

'ಸಂಕೇತ ಸಂಪದ' ಮತ್ತು 'ಸಂಕೇತಿ ಸಂಗಮ' ಎಂಬ ನಿಯತಕಾಲಿಕಗಳಲ್ಲಿ ಆಗಾಗ ಬಂದ ವೈವಿಧ್ಯಪೂರ್ಣ ಮಾಹಿತಿಯು ೧೪ನೆಯ ಪರಿಚ್ಛೇದದ ವಸ್ತುವಾಗಿದೆ. ಸಹಜವಾಗಿಯೇ ಕಾಲಕಾಲದ ಅಗತ್ಯಗಳನ್ನು ಪೂರೈಸುವ ಲೇಖನಗಳೇ ಇಂಥಲ್ಲಿ ಹೆಚ್ಚಾಗಿರುವುದು ಸಹಜ. ಅದೇ ಕಾರಣಕ್ಕಾಗಿಯೇ ಇಲ್ಲಿಸಂಕೇತಿಗಳ ಬೇಸಾಯದ ಬದುಕಿನ ವಿವಿಧ ಆಯಾಮಗಳನ್ನು ಪರಿಚಯಿಸುವ ಲೇಖನಗಳಿವೆ. 'ಎಂಗ್‌ಡ್ ಭಾಗ್ಯ' ಎಂಬ ಲೇಖನದಲ್ಲಿ ಗೋವಿನೊಂದಿಗಿನ ಭಾವನಾತ್ಮಕ ಸಂಬಂಧದ ಆಳ ಎಷ್ಟೆಂಬುದು ತಿಳಿಯುತ್ತದೆ. ಅದೊಂದು ಗದ್ಯಕಾವ್ಯದಂತೆಯೇ ಇದೆ. ನಿಸರ್ಗದ ಜತೆಗಿನ ಅಂಥದೇ ಸಂಬಂಧದ ಲೇಖನಗಳೂ ಇಲ್ಲಿವೆ. ಪ್ರಶಸ್ತಿ ಗಳಿಸಿದ ಕೃಷಿ ಪಂಡಿತರ ಪರಿಚಯವಿದೆ. ಮುಖ್ಯವಾಗಿ 'ಜಗುಲಿ'ಯಲ್ಲಿ ಸಂಕೇತಿ ಕೃಷಿಯ ಬಗೆಗಿನ ಚರ್ಚೆ ಕಾಣಿಸಿಕೊಂಡಿದೆ. ಇಂಥ ಎಲ್ಲ ಜಿಜ್ಞಾಸೆಗಳಿಗೆ ಮಾರ್ಗದರ್ಶಕವಾಗಬಹುದಾದ ಮಾತು 'ಪರಿಸರ ಹೊಂದಾಣಿಕೆ' ಎಂಬ ಲೇಖನದಲ್ಲಿದೆ. "ಸಂಕೇತಿಗಳು ನಮ್ಮ ಹಿಂದಿನವರ ಉನ್ನತವಾದ ಬೌದ್ಧಿಕ ಶಕ್ತಿಯನ್ನೂ, ಹಿಡಿದ ಕೆಲಸವನ್ನು ಬಿಡದೆ ಮಾಡಿ ಪೂರೈಸುವ ಛಲವನ್ನೂ, ಹಿಂದಿನವರ ಸಂಸ್ಕೃತಿ-ಆಚಾರಗಳನ್ನೂ ಉಳಿಸಿಕೊಂಡು ಕೀರ್ತಿಶಾಲಿಗಳಾಗಿ ಸ್ವದೇಶ-ಪರದೇಶಗಳಲ್ಲಿ ಮೆರೆದಿದ್ದಾರೆ ನಿಜ. ಆದರೆ ಪರಿಸರ ಬದಲಾವಣೆಯಿಂದ ಹಿಂದಿನವರ ಆ ಸಮತೋಲಿತ ಜೀವನ, ದೈಹಿಕ ಸ್ವಾಸ್ಥ್ಯ ಇಂದಿನವರಲ್ಲಿ ಕಡಿಮೆಯಾಗಿದೆ ಎನ್ನಬಹುದು. ಪ್ರಕೃತಿ ಸಹಜವಾದ ಬೌದ್ಧಿಕ-ದೈಹಿಕ ಸಾಮರ್ಥ್ಯಗಳೆರಡನ್ನೂ ಸಮತೋಲವಾಗಿ ವೃದ್ಧಿಪಡಿಸಿಕೊಳ್ಳಲು ಏನು ಮಾಡಬೇಕು ಎಂಬ ಬಗ್ಗೆ ಸಂಶೋಧನೆ ನಡೆಸಬೇಕಾದ ಕಾಲಬಂದಿದೆ." ಪ್ರೊ.ಕೆ.ಎಸ್.ಕೃಷ್ಣಮೂರ್ತಿಯವರ ಈ ಮಾತು ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದ ಮಕ್ಕಳ ಗಂಭೀರ ಗಣನೆಗೆ ಅರ್ಹವಾಗಿದೆ.

ಸ್ಕಾಟ್ಲೆಂಡಿನ ಎಡಿನ್‌ಬರೊ ವಿಶ್ವವಿದ್ಯಾಲಯದಲ್ಲಿ ನಡೆದ ಅಂತಾರಾಷ್ಟ್ರೀಯ ಇತಿಹಾಸ ಸಮ್ಮೇಳನದಲ್ಲಿ ಡಾ. ಬಿ.ವಿ.ಸುಧಾಮಣಿ ಅವರು, 'ಕೃಷಿಕರಾಗಿ ಕರ್ನಾಟಕದ ಸಂಕೇತಿ ಬ್ರಾಹ್ಮಣರು' ಎಂಬ ಶೀರ್ಷಿಕೆಯ ಸಂಶೋಧನಪ್ರಬಂಧವನ್ನು ಮಂಡಿಸಿದರು. ಈ ಸಂಗತಿಯೇ ಸಂಕೇತಿ ಸಮುದಾಯದ ಕೃಷಿಯ ವೈಶಿಷ್ಟ್ಯಕ್ಕೆ ಒಂದು ಮನ್ನಣೆಯಂತಿದೆ. ಮುಖ್ಯವಾಗಿ, ಈ ಪ್ರಬಂಧದಲ್ಲಿ, ಬ್ರಾಹ್ಮಣರು ಕೃಷಿಕಾರ್ಯದಲ್ಲಿ ತೊಡಗಿಕೊಳ್ಳುವುದು ಅಧಾರ್ಮಿಕವೆಂದಿರುವುದಾದರೂ ಅವರು ಏಕಾಗಿ ಅದರಲ್ಲಿ ತೊಡಗಿಕೊಂಡರು ಎಂಬ ಪ್ರಶ್ನೆಯನ್ನು ಪ್ರಧಾನವಾಗಿ ಎತ್ತಿಕೊಂಡು ವಿಶ್ಲೇಷಿಸುವ ಯತ್ನ ಮಾಡಿದ್ದಾರೆ. ಅವರು ಮಂಡಿಸಿದ ಈ ಪ್ರಬಂಧವನ್ನೂ, ಅದಕ್ಕಾಗಿ ಅವರು ಮಾಡಿಕೊಂಡ ಕೆಲವು ಟಿಪ್ಪಣಿಗಳನ್ನೂ ೧೫ನೆಯ ಪರಿಚ್ಛೇದದಲ್ಲಿ ಸೇರಿಸಲಾಗಿದೆ.

ಮೈಸೂರು ಮಹಾರಾಜರ ಸಮ್ಮುಖದಲ್ಲಿ ಅರಮನೆಯ ಅಂಗಳದಲ್ಲಿ ಸಂಕೇತಿ ರೈತನೊಬ್ಬನು ಜಗಜಟ್ಟಿಯೊಬ್ಬನನ್ನು ಸೋಲಿಸಿದ ಘಟನೆಯು ಸಂಕೇತಿಗಳ ವಂಶಚರಿತ್ರೆಯ ಆಕರ್ಷಕ ಭಾಗ. ಹಾಸನಜಿಲ್ಲೆಯ ಗೆಜ್ಜಗನಹಳ್ಳಿ ಎಂಬ ಗ್ರಾಮದಲ್ಲಿ ಆತನ ವಂಶಜರು ಈಗಲೂ ಇದ್ದಾರೆ. ಜಗಜಟ್ಟಿಯನ್ನು ಸೋಲಿಸಿದ ಅವರ ತಾತ ಚನ್ನಪ್ಪಯ್ಯನವರಿಗೆ ಮಹಾರಾಜರಿಂದ ಬಹುಮಾನವಾಗಿ ಬಂದ ರಣಗತ್ತಿಯು ಈಗಲೂ ಅವರ ಮನೆಯಲ್ಲಿದೆ. ಈ ನೈಜ ಘಟನೆಯು ಜನಪದ ಕಥೆಯೊಂದರ ಸ್ವರೂಪ ಪಡೆದು ವ್ಯಾಪಕ ಪ್ರಚಾರ ಪಡೆದಿರುವುದು ಈ ಘಟನೆಯ ಮಹತ್ವವನ್ನೇ ಸಾರುತ್ತದೆ. 'ಛಲ್ಲೂಕಪುರದ ಅಪ್ಪಾಜಿಭಟ್ಟ' ಎಂಬ ಕಥಾರೂಪವು ಈ ಗ್ರಂಥದ ೧೬ನೆಯ ಪರಿಚ್ಛೇದವಾಗಿ ಬಂದಿದೆ: ಉತ್ತರ ಭಾರತದ ಜಟ್ಟಿಯೊಬ್ಬ ಬಂದು ಮೈಸೂರು ಸಂಸ್ಥಾನದ ಉತ್ತಮೋತ್ತಮ ಜಟ್ಟಿಗಳನ್ನೆಲ್ಲ ಸೋಲಿಸಿದ. ಸಂಸ್ಥಾನಕ್ಕೇ ಅಪಮಾನವಾದ ಸಂದರ್ಭ ಅದು. ಪ್ರೇಕ್ಷಕರ

ನಡುವಿನಿಂದ ರೈತನೊಬ್ಬ ಜಟ್ಟಿಯನ್ನು ಸೋಲಿಸುವುದಾಗಿ ಮುನ್ನುಗ್ಗಿ ಬಂದ. ಜನರು ಅವನನ್ನು ತಡೆದರು. ಮಹಾರಾಜರಿಗೆ ವಿಷಯ ತಿಳಿಯಿತು. ಒಬ್ಬ ಬ್ರಾಹ್ಮಣನು ಜಗಜಟ್ಟಿಯೊಬ್ಬನನ್ನು ಸೋಲಿಸಬಲ್ಲನೆ? ಅವರಿಗೂ ಅನುಮಾನ ಮೂಡಿ ನಿಂತಿತು. ಆಗ ಅವರ ಭಕ್ಷಿಯು ಉತ್ತೇಜಿಸಿ ಹೇಳಿದ ಮಾತು ಇದು, "ಒಳ್ಳೆಯ ಶಕ್ತನಾಗಿ ಕಾಣುತ್ತಾನೆ ಮಹಾಸ್ವಾಮಿ. ಇನ್ನೂ ಇಪ್ಪತ್ತೆಂಟು-ಮೂವತ್ತರ ಪ್ರಾಯ. ಅಲ್ಲದೆ ಆತ ಸಂಕೇತಿ ಬ್ರಾಹ್ಮಣ!"

'ಸಂಚರ' ಒಂದು ಕ್ಷೇತ್ರಕಾರ್ಯ ಕಥನ. ಬಿ.ಎಸ್.ಪ್ರಣತಾರ್ತಿಹರನ್ ಅವರು ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಮಾಡಿದ ಕ್ಷೇತ್ರಕಾರ್ಯಗಳ ವಿವರಗಳು ಅದರಲ್ಲಿ ಸೇರಿವೆ. ನಮಗಿಲ್ಲಿ ಪ್ರಸ್ತುತವಾದ ಅದರ ಫಲಶ್ರುತಿ ಇದು: "ಕರ್ನಾಟಕದ ಸಂಕೇತಿಗಳ ಪಾರಂಪರಿಕವೂ ಪರಿಣತವೂ ಆದ ವ್ಯವಸಾಯ ಪದ್ಧತಿಗೆ ಹಿನ್ನೆಲೆ ಇರುವುದು (ಈಗಿನ) ಕೇರಳದ ಘಟ್ಟಸಾಲಿನಲ್ಲಿ; ಕೊಲ್ಲಂ-ತಿರುವನಂತಪುರಂ-ಶೆಂಕೋಟ್ಟೈ ತ್ರಿಕೋನದಲ್ಲಿ. ಕರ್ನಾಟಕದ ಸಂಕೇತಿಗಳ ಗಾಢವಾದ ಕೃಷಿಕತೆಯು ಕೇವಲ ಪಲ್ಲಟಗೊಂಡ ಜೀವನದ ಅನಿವಾರ್ಯ ಕೊಡುಗೆಯಲ್ಲ, ಅದಕ್ಕೆ ಪರಂಪರೆಯ ಬೇರು ಇದ್ದಲ್ಲದೆ ಅಂಥ ತನ್ಮಯತೆ, ನೈಪುಣ್ಯ ಸಾಧ್ಯವಾಗದು."

ಶ್ರೀವಲ್ಲಿ ಮಂಜುನಾಥ, ಪ್ರೊ.ಎಲ್ಎಮ್ಎಲ್ ಶಾಸ್ತ್ರಿ ಮತ್ತು ಪ್ರೊ.ಟಿ.ಎಸ್.ರಾಜಾಮಣಿ ಅವರು ಈ ಸಂಪುಟಕ್ಕಾಗಿಯೇ ಬರೆದು ಕಳಿಸಿದ ಲೇಖನಗಳನ್ನು ೧೮ನೆಯ ಪರಿಚ್ಛೇದದಲ್ಲಿ ಸೇರಿಸಲಾಗಿದೆ. ಶ್ರೀವಲ್ಲಿ ಅವರು ಸಂದರ್ಶಿಸಿರುವ ಆರ್.ಎನ್.ಸುಬ್ಬರಾಯರು ಕರ್ನಾಟಕ ಸರ್ಕಾರದ ಕೃಷಿ ವಿಭಾಗದಲ್ಲಿ ಡೆಪ್ಯುಟಿ ಡೈರೆಕ್ಟರಾಗಿ ಸೇವೆ ಸಲ್ಲಿಸಿ ನಿವೃತ್ತರಾದವರು, ಅನಂತರ ತಮ್ಮ ಹಳ್ಳಿ ರುದ್ರಪಟ್ಟಣದಲ್ಲಿ ಬಾಗಾಯಿತು ವ್ಯವಸಾಯದಲ್ಲಿ ತೊಡಗಿಕೊಂಡವರು. ಪ್ರೊ.ಎಲ್ಎಮ್ಎಲ್ ಶಾಸ್ತ್ರಿಯವರಾದರೋ ಬೇಸಾಯ ಮಾಡಲೆಂದು ನಿಂತು ಗದ್ದೆಯ ನಡುವೆಯೇ ಕೇಶಿರಾಜನನ್ನು ಉರು ಹೊಡೆದವರು, ಮುಂದೆ ಪ್ರಾಧ್ಯಾಪಕರಾದವರು, ತಮ್ಮ ಪೂರ್ವಿಕರು ಗಾಢವಾದ ಸಂಬಂಧವಿಟ್ಟುಕೊಂಡ ಕೃಷಿಯನ್ನು ತೀರ ಸುಲಭವಾಗಿ ಬಿಟ್ಟುಕೊಡುವ ನವಪೀಳಿಗೆಯ ಪ್ರತಿನಿಧಿಯಾದವರು. ಆದರೆ ಎಲ್ಎಮ್ಎಲ್ ಶಾಸ್ತ್ರಿಯವರ ಪ್ರಾಮಾಣಿಕ ನಿರೂಪಣೆಯು ಓದುಗರಿಗೆ ವಸ್ತುಸ್ಥಿತಿಯನ್ನು ಮುಕ್ಕಾಗದಂತೆ ತಲುಪಿಸಿದೆ. ಅದೇ ಸಹಜ ನಿರೂಪಣೆಯಿಂದಾಗಿಯೇ ಹಳೆಯ ತಲೆಮಾರಿನ ಕೃಷಿಯ ಸ್ವರೂಪಕ್ಕೆ ರಮ್ಯತೆ ಆವರಿಸಿದೆ. ಬಾಗಾಯಿತಿನ ಸಾಂಪ್ರದಾಯಿಕ ಬೆಳೆಗಳ ಕೃಷಿ ವಿಧಾನವನ್ನೂ ಪ್ರಯೋಜನಗಳನ್ನೂ ರಾಜಾಮಣಿಯವರು ವಿಸ್ತಾರವಾಗಿ ಕಟ್ಟಿಕೊಟ್ಟಿದ್ದಾರೆ. ಅಗ್ರಹಾರದ ಶ್ರೀಮತಿ ಬಿ.ಎಸ್. ಲಲಿತಾ ಚಂದ್ರಶೇಖರ್ ಅವರ ಲೇಖನವು ಬಹು ಪುಟ್ಟದಾದರೂ ಸಂಕೇತಿಗಳ ಪಾರಂಪರಿಕ ಕೃಷಿಧರ್ಮವನ್ನು ಪರಿಚಯಿಸಲು ಶಕ್ತವಾಗಿದೆ. ಎಲ್.ವಿ. ವಸಂತಕುಮಾರ್ ಅವರ ಲೇಖನದಲ್ಲಿ, ಕೃಷಿಯ ಬಗೆಗೆ ಇರುವ ತರೀಕೆರೆ ತಾಲ್ಲೂಕು ಲಿಂಗದಹಳ್ಳಿಯ ವಿಶಿಷ್ಟ ಸಂದರ್ಭವನ್ನು ಗುರುತಿಸಬಹುದು. ಸತ್ಯಮಾಧವ ಅವರ ಲೇಖನವಂತೂ ಸಂಕೇತಿ ರೈತನೊಬ್ಬನ ಆಧುನಿಕ-ಕ್ರಿಯಾಶೀಲತೆಯ ಅವತಾರವೇ ಆಗಿದೆ.

೧೯ನೆಯ ಪರಿಚ್ಛೇದವು ಬಿ.ಎಸ್.ಪ್ರಣತಾರ್ತಿಹರನ್ ಅವರು ನಡೆಸಿದ ಪ್ರಕೃತ ಕೃಷಿ ಅಧ್ಯಯನದ ವಿವರಗಳನ್ನೊಳಗೊಂಡಿದೆ. ಇಲ್ಲಿರುವುದು ತಮಿಳುನಾಡು ಮತ್ತು ಕೇರಳ ರಾಜ್ಯಗಳ ಸಂಕೇತಿ ನೆಲೆಗಳಲ್ಲಿ ಮಾಡಿದ ಕ್ಷೇತ್ರಕಾರ್ಯ ವರದಿ. ರೂಪ, ಸ್ವರೂಪ, ಸ್ವಭಾವ, ಆಚಾರವಿಚಾರ, ನಡೆವಳಿಕೆ, ವೃತ್ತಿ ಎಲ್ಲದರಲ್ಲೂ ಎಲ್ಲೆಡೆಯ ಸಂಕೇತಿಗಳೂ ತದ್ವತ್ತಾಗಿ ಒಂದೇ ಆಗಿದ್ದಾರೆ. ದಕ್ಷಿಣದ ಸಂಕೇತಿಗಳ ಬಾಗಾಯಿತು-ಸಂಸ್ಕೃತಿ ಕರ್ನಾಟಕಕ್ಕೆ ಸಮಾನವಾಗಿತ್ತು. ಅದು ನೇಗಿಲು ಹಿಡಿದು ಉಳುಮೆ ಮಾಡಿದ ಹೊಲದ ಬೇಸಾಯದ ವಿಷಯದಲ್ಲೂ ಸತ್ಯವಾದುದೇ. ಅನ್ಯ ಸಮುದಾಯದ ಜತೆಗಿನ ವಿವಾಹ ಮತ್ತು ನಗರೀಕರಣದ ವಿಷಯದಲ್ಲಿ ದಕ್ಷಿಣದ ಸಂಕೇತಿಗಳು ಕರ್ನಾಟಕದ ತಮ್ಮ ಬಂಧುಗಳಿಗಿಂತ ೪-೫ ದಶಕಗಳಷ್ಟು ಮುಂದಿದ್ದಾರೆ. ಪ್ರಕೃತ ಕ್ಷೇತ್ರಕಾರ್ಯದ ಅವಧಿಯಲ್ಲಿಯೇ ಗ್ರಾಮವಾಸ ಮತ್ತು ವ್ಯವಸಾಯದ ಕಟ್ಟಕಡೆಯ

ಮೆಟ್ಟಿಲನ್ನು ಅಲ್ಲಿನವರು ಇಳಿಯಲು ಅಣಿಯಾಗಿದ್ದ ಅವಸ್ಥೆ ಕಂಡಿದೆ. ಕೀಳ್‌ಪುಲಿಯೂರ್‌ನ ಕೆ.ಪಿ.ಶಿವರಾಮನ್ ಅವರ ಜತೆಗಿನ ಸಂದರ್ಶನವು ಅವಶ್ಯವಾಗಿಯೂ ಕರ್ನಾಟಕದ ಸಂಕೇತಿಗಳಿಗೆ ತತ್ಸಮಾನ ಸಂಕೇತಿ ಪ್ರಪಂಚವೊಂದನ್ನು ತೆರೆದಿಡುತ್ತದೆ. ದರ್ಶನಂಕೋಪಿನ ಲಕ್ಷ್ಮಣನ್ ಹೇಳಿದ ಒಂದು ಮಾತನ್ನು ಅವಶ್ಯವಾಗಿ ಇಲ್ಲಿಯೇ ಉದ್ಧರಿಸಬೇಕು. ನಶ್ಯದ ಚಿಟಿಕೆ ಹಿಡಿದು, ತತ್ತ್ವಬೋಧದ ಆ ಪ್ರಸಿದ್ಧ ಭಂಗಿಯಲ್ಲಿ ಅವರು ಕೊಟ್ಟ ನಿರ್ಣಯ, "ಸಂಕೇತಿಗಳಿಗೆ ಎರಡೇ ವೃತ್ತಿ ಮಾರಾಯ! ಒಂದು ವ್ಯವಸಾಯ; ಇನ್ನೊಂದು ವೈದಿಕ ಸೇವೆ." "ಉಳುಮೆ?" ಎಂದು ಕೆದಕಿದರೆ ಚೌಕದಿಂದ ಮೂಗು ಸೀಟಿಕೊಂಡು, ಕಣ್ಣಿನಲ್ಲಿ ನೋವು ತುಂಬಿಕೊಂಡು ಹೇಳುತ್ತಾರೆ "ಅದನ್ನು ಬ್ರಾಹ್ಮಣರು ಮಾಡಬಾರದು ಮಾರಾಯ! ಗೋವಿಗೆ ಹೊಡೆಯಬೇಕಾಗುತ್ತೆ, ಅದು ಮಹಾಪಾಪ!" ಟಿ.ಎಸ್.ರಾಜಾಮಣಿ ಅವರ ಆತ್ಮಕಥೆಯ ಆಯ್ದ ಭಾಗಗಳು ದಕ್ಷಿಣದ ಬಾಗಾಯಿತು ಸಂಸ್ಕೃತಿಯ ಕಳೆದುಹೋದ ದೃಶ್ಯಗಳನ್ನು ಕಣ್ಣಿಗೆ ಕಟ್ಟಿಸುತ್ತವೆ. ಕರ್ನಾಟಕದ ಸಂಕೇತಿಗಳ 'ಬಾಗಾಯ್ತು ಸಂಸ್ಕೃತಿಯ ಪರಿಣತ ಮುನ್ನಡೆ' ಎಂಬ ಭಾಗವು ಈ ವಿಭಾಗದ ತಾರ್ಕಿಕ ಕೊನೆಯಾಗಿ ಸಾರ್ಥಕವಾಗಿದೆ. ವಿಕಾಸಕ್ಕೆ ಮುಖ ಮಾಡಿದ ಗತಿಶೀಲತೆಯು ಬ್ರಾಹ್ಮಣರಿಗೆ ಸಾಮಾನ್ಯವಾದ ಗುಣ. ತೀವ್ರವಾಗಿ ತೊಡಗಿಸಿಕೊಂಡಂತೆ ಕಾಣುವಾಗಲೇ ಈ ಜಂಗಮತೆಯನ್ನು ಲೀಲಾಜಾಲವಾದ ಜೀವನವಿಧಾನವಾಗಿ ಮಾಡಿಕೊಳ್ಳುವುದರಲ್ಲಿ ಸಂಕೇತಿಗಳ ವಿಶಿಷ್ಟತೆ ಇದೆ. ಆ ಕಾರಣದಿಂದಲೇ, ಬಾಗಾಯಿತು ಸಂಸ್ಕೃತಿಯ ಬೇರುಗಳನ್ನು ಕಡಿದುಕೊಂಡರೆ ಆಧುನಿಕತೆಯ ಹೆಸರಿನಲ್ಲಿಯೇ ಅನೇಕ ರೀತಿಯಲ್ಲಿ ಹರಡುವ ವಿಷವನ್ನು ಜಯಿಸುವುದು ಸಾಧ್ಯವೆ ಎಂಬುದನ್ನು ಸಂಕೇತಿಗಳೇ ಹೆಚ್ಚಾಗಿ ಪರಿಭಾವಿಸಬೇಕಾಗಿದೆ.

೨೦ನೆಯ ಪರಿಚ್ಛೇದದಲ್ಲಿ ಪ್ರಣತಾರ್ತಿಹರನ್ ಅವರು ಕರ್ನಾಟಕದ ಸಂಕೇತಿ ನೆಲೆಗಳಲ್ಲಿ ನಡೆಸಿದ ಕ್ಷೇತ್ರಕಾರ್ಯದ ಟಿಪ್ಪಣಿಗಳು ಸೇರಿವೆ. ಕರ್ನಾಟಕದ ಹಳ್ಳಿಗಳಲ್ಲಿರುವ ಪಾರಂಪರಿಕ ಬೇಸಾಯದ ಜೊತೆಗಿನ ಪಾರಂಪರಿಕ ಜೀವನವಿಧಾನದ ವೈಶಿಷ್ಟ್ಯಗಳೂ, ಆಗುತ್ತಿರುವ ಬದಲಾವಣೆಗಳ ಸ್ವರೂಪದ ಚಿತ್ರವೂ ಇಲ್ಲಿ ದಟ್ಟವಾಗಿ ದೊರೆಯುತ್ತವೆ. ಕರ್ನಾಟಕದ ನಗರಗಳಲ್ಲಿ ಮಾಡಿರುವ ಕ್ಷೇತ್ರಕಾರ್ಯ ವರದಿಯು, ಸಂಕೇತಿಗಳಿಗೆ ರಕ್ತಗತವಾಗಿ ಬಂದ ಬೇಸಾಯದ ಒಲುಮೆಯು ಆಧುನಿಕ ಅಗತ್ಯ ಮತ್ತು ನಿರೀಕ್ಷೆಗಳಿಗೆ ತಕ್ಕಂತೆ ಹೇಗೆ ವೈವಿಧ್ಯಪೂರ್ಣವಾಗಿ ಹೊಮ್ಮಿ ಕಾಣಿಸಿಕೊಂಡಿದೆ ಎಂಬುದರ ಪರಿಚಯ ಮಾಡಿಕೊಡುತ್ತದೆ. ೨೦೦೬ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಕಟವಾದ ಪುಸ್ತಕವೊಂದಕ್ಕಾಗಿ ಡಾ. ಕೃಷ್ಣ ಸುಬ್ಬರಾವ್ ಬರೆದ ಲೇಖನದ ಕನ್ನಡ ರೂಪವನ್ನು ೨೨ನೆಯ ಪರಿಚ್ಛೇದದಲ್ಲಿ ಕೊಟ್ಟಿದೆ. ಅದರ ಮುಂದಿನ ಭಾಗದಲ್ಲಿ, ಹೊರದೇಶದ ಸೌಲಭ್ಯಗಳನ್ನು ಬಳಸಿಕೊಂಡು ಕೃಷಿ ಸಂಶೋಧನೆಯ ಅತ್ಯುನ್ನತ ನೆಲೆಯನ್ನು ತಲುಪಿರುವ ಶ್ರೇಷ್ಠ ಕೃಷಿ ವಿಜ್ಞಾನಿಯ ಜತೆಗೆ ನಡೆಸಿರುವ ಸಂದರ್ಶನವು ಈ ಕ್ಷೇತ್ರದ ಇತ್ತೀಚಿನ ಅಮೂಲ್ಯ ಮಾಹಿತಿಗಳನ್ನು ಒದಗಿಸಿದೆ.

ಈಗಾಗಲೇ ನಡೆದಿರುವ ಸಂಶೋಧನೆಯ ಫಲಶ್ರುತಿಗಳು ೨೪ನೆಯ ಪರಿಚ್ಛೇದದಲ್ಲಿ ಸಂಗ್ರಹವಾಗಿ ಕಾಣಿಸಿಕೊಂಡಿವೆ.

'ಸಂಕೇತಿ: ಒಂದು ಅಧ್ಯಯನ' ಎಂಬುದು ಸಂಕೇತಿ ಸಮುದಾಯದ ಬಗೆಗೆ ನಡೆದ ಸಮಗ್ರ ಸಂಶೋಧನೆ. ಅದರಲ್ಲಿ ಈ ಸಮುದಾಯದ ಕೃಷಿ ಸಂಬಂಧವಾಗಿ ಬಂದಿರುವ ಸೂತ್ರಪ್ರಾಯವಾದ ತೀರ್ಮಾನಗಳನ್ನು ಆಯ್ದು ಇಲ್ಲಿ ಸೇರಿಸಲಾಗಿದೆ.

'ಶತಮಾನದ ಪತ್ರಗಳು' ಎಂಬ ಕೃತಿಯಲ್ಲಿ ಸೇರಿರುವ ಸಂಕೇತಿ ಕೌಟುಂಬಿಕ ಪತ್ರಗಳು ಈ ಸಮುದಾಯದ ಬೇಸಾಯದ ಬದುಕಿನ ಅಂತರಂಗವನ್ನು ಮುಕ್ತವಾಗಿ ತೆರೆದಿಟ್ಟಿವೆ.

'ಸಂಕೇತಿ: ಅಭಿನಂದನ', 'ಸಂಕೇತಿ: ಇತಿವೃತ್ತಗಳು', ಮತ್ತು 'ಸಂಕೇತಿ: ಆತ್ಮಕಥೆಗಳು' ಎಂಬ ಗ್ರಂಥಗಳಲ್ಲಿ ವ್ಯಕ್ತಿಜೀವನದ ಪರಿಚಯಮಾಡಿಕೊಡುವಾಗ ಆನುಷಂಗಿಕವಾಗಿ ಅವರ ಕೃಷಿಕ್ಷೇತ್ರದ ಪರಿಚಯ ಭಾಗಗಳು ಬಂದಿವೆ. ಅವನ್ನು ಆರಿಸಿ ಕೊಡಲಾಗಿದೆ.

'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಮತ್ತು 'ಸಂಕೇತಿ: ಬೇಸಾಯದ ಬದುಕು' ಎಂಬ ಗ್ರಂಥಗಳಲ್ಲಿ ಕೃಷಿಕರೂ ಅಧ್ಯಯನಕಾರರೂ ಆಡಿರುವ ಸಾರಭೂತ ಮಾತುಗಳನ್ನು ಸಂಗ್ರಹಿಸಲಾಗಿದೆ. ಆ ಓದು ಸಂಕೇತಿಕೃಷಿಯ ಸ್ವರೂಪ ಸಿದ್ಧಾಂತಗಳನ್ನು ಮಾತ್ರವಲ್ಲ, ಅದರಾಚೆಗಿನ ಬಾಳಿನ ಹದದ ದರ್ಶನವನ್ನೂ ಮಾಡಿಸುತ್ತದೆ.

ಸಂಕೇತಿ ಕೃಷಿಗೆ ಸಂಬಂಧಿಸಿದ ಮಾಹಿತಿಯು 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಮತ್ತು 'ಸಂಕೇತಿ: ಬೇಸಾಯದ ಬದುಕು' ಎಂಬ ಪ್ರತ್ಯೇಕ ಸಂಪುಟಗಳಲ್ಲಿ ಪ್ರಕಟಗೊಂಡಿರುವುದು ನಿಜವೆ. ಇವೆಲ್ಲವೂ ಒಂದು ಯೋಜಿತ ಕ್ರಮದಲ್ಲಿ ಎರಕಗೊಂಡಿರುವುದನ್ನು ಸಹೃದಯರು ಗಮನಿಸಬೇಕು. 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬ ಕೃತಿಯು ಸಂಕೇತಿಗಳ ವ್ಯವಸಾಯದ ವಿವರಗಳನ್ನು ವಿಸ್ತಾರವಾಗಿಯೇ ಒಳಗೊಂಡಿದೆ. ಆದರೆ ಅದು ಈ ವಿವರಗಳಲ್ಲಿ ವಿರಮಿಸದೆ ಅಥವಾ ಪರಿತೃಪ್ತವಾಗದೆ ಭಾರತೀಯ ಸನಾತನ ಪರಂಪರೆಯ ಜೀವಿತವೊಂದರ ದರ್ಶನಮೀಮಾಂಸೆಯಾಗಿ ವಿಹರಿಸಿದೆ. 'ಅವಲೋಕನ' ಎಂಬ ಭಾಗವು ಈ ಜೀವಿತದ ಒಟ್ಟು ಸನ್ನಿವೇಶವನ್ನು ಹಿಡಿದುಕೊಡುತ್ತದೆ. ಆದರೆ ಚಿಕಿತ್ಸಕತೆಗೆ ಅದರ ಒತ್ತು ಇದೆ. 'ಅನೂಚಾನ' ಎಂಬ ಭಾಗವು ಸಂಕೀರ್ಣಸ್ವರೂಪದ್ದು. ಮುಖ್ಯವಾಗಿ ಅದರದು ಸಂಕೇತಿ ಕೃಷಿ ಜೀವನದ ಪ್ರಭಾವಲಯದ ಹಲವು ಸುತ್ತುಗಳನ್ನು ಕಟ್ಟಿಕೊಡುವ ಪ್ರಯತ್ನ. ೧೯ನೆಯ ಶತಮಾನದ ಆರನೇ ದಶಕವು ಕೃಷಿಯಲ್ಲಿ ದೈಹಿಕ ಶ್ರಮ, ಕಡುಬಡತನ, ಧಾರ್ಮಿಕತೆ, ಅಧ್ಯಾತ್ಮದ ಎತ್ತರ ಇವುಗಳ ದೃಷ್ಟಿಯಿಂದ ಸ್ಥಿತ್ಯಂತರದ ಕಾಲ. ೨೦೦೨-೦೩ರಲ್ಲಿ - ಅಂದರೆ ಸುಮಾರು ನಾಲ್ಕು ದಶಕಗಳ ಕೃಷಿಸ್ಥಿತಿಯ ಸಂಕ್ರಮಣದ ನಂತರ - ನಡೆದ ಅಧ್ಯಯನವಿದು. ಪಾರಂಪರಿಕವಾಗಿ ಹಲವು ಶತಮಾನಗಳ ಕಾಲ ಅವಿಚ್ಛಿನ್ನವಾಗಿ ಹರಿದುಬಂದ ಸಂಕೇತಿ ಬಾಗಾಯಿತು ಸಂಸ್ಕೃತಿಯ ಬನಿಯು ವಿಸ್ಮೃತಿಗೆ ಸಂದುಹೋಗುತ್ತಿರುವ ಕಾಲದ ಅಧ್ಯಯನ. ಸ್ವಾತಂತ್ರ್ಯಪೂರ್ವದ ಈ ಬನಿಯ ಚಿತ್ರವನ್ನು ತುಸುವಾದರೂ ಕಟ್ಟಿಕೊಡಲು 'ಅನೂಚಾನ'ವು ವಿವಿಧ ಮೂಲಗಳಿಗೆ ಕೈಹಾಕಿದೆ. ಕೃಷಿಗೆ ನೇರವಾಗಿ ಸಂಬಂಧವಿಲ್ಲದಂತೆ ಕಾಣುವ, ಆದರೆ ಅದರ ಹೊಕ್ಕಳಬಳ್ಳಿಯ ಮೇಲೇ ನಿಂತ ವಿದ್ಯಮಾನಗಳನ್ನು ಹುಡುಕಿ ದಾಖಲಿಸಿದೆ. ಈ ವಿದ್ಯಮಾನಗಳು ಕೃಷಿ ಪ್ರಭಾವಳಿಯ ಬೇರೆ ಬೇರೆ ಸುತ್ತಿನವೂ ಆಗಿವೆ. ಅವೆಲ್ಲ ಸೇರಿ ಸಂಕೇತಿ ಕೃಷಿ ಪರಂಪರೆಯ ಸ್ವಾತಂತ್ರ್ಯಪೂರ್ವ ಸ್ಥಿತಿಯ ಚಿತ್ರ ಕೊಡಬಹುದೆಂಬುದು ಅದರ ನಿರೀಕ್ಷೆ.

ಹೀಗೆ ಎನ್. ಕೇಶವಮೂರ್ತಿ, ವಿಜಯ್ ಅಂಗಡಿ ಮತ್ತು ಡಾ. ವಿಜಯಾ ಹರನ್ ಅವರು ಸಂಕೇತಿ ಕೃಷಿಯ ಅಧ್ಯಯನಕ್ಕೆ ಮೂರು ಸ್ಪಷ್ಟ ಆಯಾಮಗಳನ್ನು ಒದಗಿಸಿದ್ದಾರೆ. ಈ ಮೂರೂ ತಮ್ಮಷ್ಟಕ್ಕೇ ಯಶಸ್ವಿಯಾದ ಪ್ರಯತ್ನಗಳಾಗಿವೆ. ಮೂರೂ ಸೇರಿ ಸಂಕೇತಿ ಕೃಷಿಯ ಪಾರಂಪರಿಕತೆಯನ್ನು ಸಮಗ್ರವಾಗಿ ದರ್ಶನ ಮಾಡಿಸಲು ಪ್ರಾಮಾಣಿಕವಾಗಿ ಮತ್ತು ಶ್ರಮಪೂರ್ಣವಾಗಿ ದುಡಿದಿವೆ.

ಸಂಕೇತಿ ಸಮುದಾಯದ ಬೇಸಾಯಕ್ಕೆ ಸಂಬಂಧಿಸಿದಂತೆ ಸಂಶೋಧನೆ ನಡೆಯಬೇಕಾದ ಕ್ಷೇತ್ರಗಳು ಇದ್ದೇ ಇವೆ. ಅಡಕೆಯ ಬೇಸಾಯ ಇವರಿಗೆ ಯಾವಾಗ ಒಲಿಯಿತು? ತಮಿಳುನಾಡಿನಲ್ಲಿ ವೀಳೆಯ ಬೇಸಾಯವನ್ನು ಅಬ್ರಾಹ್ಮಣರಾದ ಮೂಪನಾರ್‌ಗಳು ಮಾತ್ರ ಮಾಡುತ್ತಾರೆ, ಅದು ಅವರ ಜಾತಿಯ ವೃತ್ತಿ; ಇತರ ಸಮುದಾಯಗಳ ನಡುವೆ, ಅದರಲ್ಲೂ ಬ್ರಾಹ್ಮಣರ ಒಂದು ಉಪಸಮುದಾಯಕ್ಕೆ ವೀಳೆಯ ಬೇಸಾಯವು ಅಡಕೆಗಿಂತಲೂ ಒಂದು ಕೈ ಹೆಚ್ಚು ಎನ್ನುವಂತೆ ಗೌರವಯುತವಾಗಿ ಅಂಟಿಬಂದಿದ್ದು ಹೇಗೆ, ಎಲ್ಲಿ, ಯಾವಾಗ? ಅಂಥ ಪರಮ ವೈದಿಕರ ನಡುವಿನಿಂದಲೇ ಗಣನೀಯ ಸಂಖ್ಯೆಯ ಸಂಕೇತಿ ರೈತರು ನೇಗಿಲು ಹಿಡಿದು ಹೊರಟು ಬ್ರಾಹ್ಮಣ್ಯವನ್ನೂ ಉಳಿಸಿಕೊಂಡದ್ದು ಹೇಗೆ? ಸಂಕೇತಿ ಸಮುದಾಯವು ಕಾಲಕಾಲದ ಅಗತ್ಯವನ್ನನುಸರಿಸಿದ ಗತಿಶೀಲತೆಯನ್ನು ಮಾತ್ರವೇ ನೆಚ್ಚಬೇಕೆ, ಅಥವಾ ಬಾಗಾಯಿತು ಸಂಸ್ಕೃತಿಯ ಬೇರುಗಳಿಂದಲೇ ಹೊಸ ಹೆಜ್ಜೆಗಳಿಗೆ ಕಸುವು ತುಂಬಿಕೊಳ್ಳುವುದು ಒಳಿತೆ? ಇವೆಲ್ಲವೂ ಇನ್ನೂ ಜೀವಂತ ಪ್ರಶ್ನೆಗಳಾಗಿಯೇ ಉಳಿದಿವೆ. ಈ

ಎಲ್ಲ ಜಿಜ್ಞಾಸೆಗಳ ನಡುವೆಯೂ ನಾವು ಸದ್ಯಕ್ಕೆ ಈ ಸಮುದಾಯದ ಬಾಗಾಯಿತು ಸಂಸ್ಕೃತಿಯ ಸಾರ್ಥಕ್ಯದ ದೃಷ್ಟಿಯಿಂದ ಸಹೃದಯಿಗಳ ಈ ಮಾತುಗಳನ್ನು ಪರಿಭಾವಿಸಬೇಕು: "...ಹಲವಾರು ವರ್ಷಗಳು ಅವರ ಕೃಷಿಯ ಒಡನಾಟದಲ್ಲಿ ಇದ್ದ ನನಗೆ ಆ ಕುರಿತು ಅಪಾರ ಗೌರವ, ಆದರ, ಅಭಿಮಾನವಿದೆ. ಆ ವಿಚಾರದಲ್ಲಿ ಅವರುಗಳಿಗೆ ಇರುವ ಮಮತೆ, ಪ್ರೀತಿ, ಕೃಷಿ ಹಣ ಗಳಿಸುವ ಕಾರ್ಖಾನೆಯಲ್ಲ; ನೆಮ್ಮದಿಯ, ನಿರ್ಲಿಪ್ತತೆಯ, ತೃಪ್ತಿಯ ತಪೋಭೂಮಿ ಎನ್ನುವ ಅವರುಗಳ ಭಾವನೆಗಳಿಗೆ ಇದೋ ನನ್ನ ಸಾಷ್ಟಾಂಗ ನಮಸ್ಕಾರಗಳು."

ಈ ಸಂಪುಟಕ್ಕೆ ಮೌಲಿಕ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರುವ ವಿದ್ವಾಂಸ ಡಾ. ಬಿ. ಚನ್ನಕೇಶವ ಅವರಿಗೆ ಸಮುದಾಯ ಅಧ್ಯಯನ ಕೇಂದ್ರವು ಆಭಾರಿಯಾಗಿದೆ.

೨೭.೯.೨೦೦೦ **ಪ್ರಣತಾರ್ತಿಹರನ್**
ಮೈಸೂರು ಪ್ರಧಾನ ಸಂಪಾದಕ

೨ ಮುನ್ನುಡಿ

ನ ಹಾಯನೈಃ ನ ಪಲಿತೈಃ ನ ವಿತ್ತೇನ ನ ಬಂಧುಭಿಃ |
ಋಷಯಶ್ಚಕ್ರಿರೇ ಧರ್ಮಂ ಯೋಽನೂಚಾನಸ್ಸನೋ ಮಹಾನ್ || ಮನು ೨.೧೫೪

ವಯಸ್ಸಿನಿಂದಾಗಲೀ, ಕೂದಲು ನರೆತದ್ದರಿಂದಾಗಲೀ, ಹಣದಿಂದಾಗಲೀ ಅಥವಾ ಬಂಧುಗಳಿಂದಾಗಲೀ ಯಾರೂ ದೊಡ್ಡವರಾಗುವುದಿಲ್ಲ. ಯಾರು ಸಾಂಗವೇದಾಧ್ಯಾಯಿಯೋ ಅವನೇ ದೊಡ್ಡವನು. ಇದೇ ಋಷಿಗಳಿಗೆ ಸಮ್ಮತವಾದ ಧರ್ಮ.

ಸಂಕೇತಿ ಅಧ್ಯಯನ ಮಾಲೆಯಲ್ಲಿ ಒಂಬತ್ತನೆಯ ಸಂಪುಟವಾಗಿ ಪ್ರಕಟವಾಗುತ್ತಿರುವ 'ಸಂಕೇತಿ : ಬೇಸಾಯದ ಬದುಕು' ಎಂಬ ಈ ಗ್ರಂಥ ಇದರ ಹಿಂದಿನ ಸಂಪುಟವಾದ 'ಸಂಕೇತಿಕೃಷಿಯ ವಿಭಿನ್ನನೆಲೆಗಳು' ಗ್ರಂಥದ ಮುಂದುವರಿದ ಭಾಗವಾಗಿ (sequel) ಕಾಣುತ್ತದೆ. ಉದ್ದೇಶ, ಗುಣ, ಗಾತ್ರ, ವಿಷಯ ಮುಂತಾದ ವಿಚಾರಗಳಲ್ಲಿ ಇದು ಹಿಂದಿನ ಗ್ರಂಥಕ್ಕೆ ಸದೃಶವಾಗಿದ್ದರೂ ಸ್ವರೂಪದಲ್ಲಿ ಅದಕ್ಕಿಂತ ಸ್ವಲ್ಪ ಭಿನ್ನವಾಗಿರುವುದು ಸಂಪಾದಕರು ಇದನ್ನು 'ಅವಲೋಕನ' ಮತ್ತು 'ಅನೂಚಾನ' ಎಂದು ಎರಡು ಭಾಗಗಳಾಗಿ ವಿಂಗಡಿಸಿರುವುದರಿಂದಲೇ ವ್ಯಕ್ತವಾಗುತ್ತದೆ.

ಪ್ರಥಮಭಾಗವಾದ 'ಅವಲೋಕನ'ವನ್ನು ಈ ಹಿಂದಿನ ಸಂಪುಟದ ಕರ್ತೃವಾದ ಶ್ರೀ ಕೇಶವಮೂರ್ತಿಯವರಂತೆಯೇ ಆಕಾಶವಾಣಿಯಲ್ಲಿ ಕೃಷಿತಜ್ಞರಾಗಿರುವ ಶ್ರೀ ವಿಜಯ್ ಅಂಗಡಿಯವರು ಬರೆದಿದ್ದಾರೆ. ಅಂಗಡಿಯವರೂ ಕೇಶವಮೂರ್ತಿಯವರಂತೆಯೇ ಹಳ್ಳಿಹಳ್ಳಿಗಳಿಗೆ ಹೋಗಿ ಸಂಕೇತಿಕೃಷಿಕರನ್ನು ಸಂದರ್ಶಿಸಿ ಕ್ಷೇತ್ರಸಮೀಕ್ಷೆಯನ್ನು ಮಾಡಿ ಪ್ರಶ್ನಾವಳಿಯ ಮೂಲಕ ವಿಷಯವನ್ನು ಖುದ್ದಾಗಿ ಸಂಗ್ರಹಿಸಿದ್ದಾರೆ. ಪ್ರಾಯಃ ಈ ಇಬ್ಬರು ಕೃಷಿವಿಜ್ಞಾನಿಗಳೂ ಪೂರ್ವನಿಶ್ಚಯದಂತೆ ಹಂಚಿಕೊಂಡು ಕೆಲಸವನ್ನು ಮಾಡಿರುವಂತೆ ಕಾಣುತ್ತದೆ. ಕೇಶವಮೂರ್ತಿಯವರು ಸಂದರ್ಶಿಸದಿದ್ದ ಕೆಲವು (ಸುಮಾರು ೧೭) ಗ್ರಾಮಗಳನ್ನು ಅಂಗಡಿಯವರು ಆಯ್ಕೆಮಾಡಿಕೊಂಡು ಅವರ ಕೆಲಸವನ್ನು ಮುಂದುವರಿಸಿರುವಂತೆ ಭಾಸವಾಗುತ್ತದೆ. ಕೆಲವು ಗ್ರಾಮಗಳು ಇವರ ಸಮೀಕ್ಷೆಯ ಅಳವಿಗೂ ಒಳಪಡದೆ ತಪ್ಪಿಹೋಗಿರುವುದು ಪ್ರಾಯಃ ಆಕಸ್ಮಿಕವಿರಬಹುದು ಅಥವಾ ಈ ಗ್ರಾಮಗಳಲ್ಲಿ ಈಗ ಸಂಕೇತಿಕೃಷಿಕರು ವಾಸಿಸುತ್ತಿಲ್ಲದೆಯೂ ಇರಬಹುದು.

ಅಂಗಡಿಯವರ ಶೈಲಿ ಮತ್ತು ವಿಷಯಪ್ರತಿಪಾದನರೀತಿ ಕೇಶವಮೂರ್ತಿಯವರಿಗಿಂತ ವಿಭಿನ್ನವಾಗಿದೆ. ಸಂಕೇತಿಗಳ ವ್ಯವಸಾಯ ಕ್ರಮದಲ್ಲಿ ಕಂಡುಬರುವ ಗುಣದೋಷಗಳನ್ನು, ಕುಂದುಕೊರತೆಗಳನ್ನು ಆಮೂಲಾಗ್ರ ಪರಿಶೀಲಿಸುವ ಅಂಗಡಿಯವರು ಒಬ್ಬ ನುರಿತ ಚಿಕಿತ್ಸಕನ ಹಾಗೆ ಅಗತ್ಯಕಂಡಲ್ಲಿ ಅಲ್ಲಲ್ಲಿಯೇ ಪರಿಹಾರಗಳನ್ನೂ ಸೂಚಿಸುತ್ತಾ ಹೋಗುತ್ತಾರೆ. ಅವರ ಇಂತಹ ಕಾರ್ಯೋಪಯೋಗಿ ಪರಿಶೀಲನಕ್ರಮದಿಂದಾಗಿ (practical approach) ಕೆಲವಾದರೂ ಕೃಷಿಕರಿಗೆ ಸಹಾಯವಾಗಿರುವ ಸಾಧ್ಯತೆಯಿದೆ. ಅವರು ಸಂಕೇತಿಗಳ ಕೃಷಿಜೀವನದ ಕಡೆಗೆ ಮಾತ್ರ ಗಮನ ಹರಿಸದೇ ಕೆಲವೊಮ್ಮೆ ಅವರ ಕೃಷೀತರ ಚಟುವಟಿಕೆಗಳ ಕಡೆಗೂ ಗಮನಹರಿಸುತ್ತಾರೆ. ನಾಲ್ಕೈದು ದಶಕಗಳಷ್ಟು ಹಿಂದಿನವರೆಗೂ ಬಹುತೇಕ ಸಂಕೇತಿಗಳ ಬದುಕು ಕೃಷಿಕೇಂದ್ರಿತವಾಗಿದ್ದುದರಿಂದ ಅವರು ಹೀಗೆ ಕೃಷಿಕರ ವೈಯಕ್ತಿಕ ಬದುಕಿನಕಡೆಗೂ ಇಣುಕುನೋಟವನ್ನು ಹರಿಸುವುದು ಸಹಜವೂ ಅಗತ್ಯವೂ ಆಗಿ ಕಾಣಿಸುತ್ತದೆಯೇ ಹೊರತು ಅತಿಕ್ರಮವೆನಿಸುವುದಿಲ್ಲ.

ಇದರಿಂದ ನಮ್ಮ ಹಿಂದಿನತಲೆಮಾರಿನವರು ವ್ಯವಸಾಯವನ್ನೇ ನಂಬಿ ಅನುಭವಿಸಿದ ಕಷ್ಟಕಾರ್ಪಣ್ಯಗಳೇನು, ಅವರ ಬದುಕಿನ ಬವಣೆಗಳೇನು ಎಂಬುದನ್ನು ಮತ್ತು ಅವರ ಪರಿಶ್ರಮದಫಲವಾಗಿ ಇಂದಿನ ಕೃಷೀತರ ತಲೆಮಾರಿನವರು ಹೇಗೆ ನಗರಗಳಲ್ಲಿ ಸುಖವಾದ ಜೀವನವನ್ನು ನಡೆಸುತ್ತಿದ್ದಾರೆ ಎಂಬುದನ್ನೂ ತಿಳಿಯಲು ಸಹಾಯವಾಗುತ್ತದೆ. ಪ್ರತಿ ಸಂದರ್ಶನದ ಕೊನೆಯಲ್ಲಿ ಅಂಗಡಿಯವರು ಅದರ ಸಾರಾಂಶವನ್ನು ಸಂಗ್ರಹಿಸಿಕೊಡುವ ರೀತಿ ರಮ್ಯವೂ, ಪ್ರಯೋಜನಕಾರಿಯೂ ಆಗಿದೆ.

ಎರಡನೆಯ ಭಾಗವಾದ 'ಅನೂಚಾನ'ವನ್ನು ಡಾ. ವಿಜಯಾ ಹರನ್ ಬಹಳ ಪ್ರಬುದ್ಧವಾಗಿ ಮತ್ತು ಸಮರ್ಥವಾಗಿ ಸಂಪಾದಿಸಿಕೊಟ್ಟಿದ್ದಾರೆ. ಅನೂಚಾನವೆಂದರೆ ವೇದವೇದಾಂಗಗಳನ್ನು ತಿಳಿದವನು ಎಂದರ್ಥ. (ಅನೂಚಾನಃ ಪ್ರವಚನೇ ಸಾಂಗೇಽಧೀತೀ - ಅಮರಕೋಶ; ಅನೂಚಾನೋ ವಿನೀತೇ ಸ್ಯಾತ್ ಸಾಂಗವೇದವಿಚಕ್ಷಣೇ - ವಿಶ್ವಕೋಶ.) ಈ ವಾಚ್ಯಾರ್ಥಕ್ಕಿಂತ ಭಿನ್ನವಾಗಿ ಈ ಶಬ್ದವು ವೈದಿಕರು ಹಾಕಿಕೊಟ್ಟಮಾರ್ಗ, ವೈದಿಕರ ವಿಚಾರಗಳ ನಿರಂತರ ಪರಂಪರೆ, ವೈದಿಕರ ಅವಿಚ್ಛಿನ್ನವಾದ ಪ್ರಾಚೀನ ಸಂಪ್ರದಾಯ ಎಂಬ ವಾಚ್ಯಾಕ್ಷಿಪ್ತವಾದ ಅರ್ಥವನ್ನು ಹೊಂದಿ ಕಾಲಕ್ರಮದಲ್ಲಿ ಪರಂಪರೆ, ಪ್ರಾಚೀನಸಂಪ್ರದಾಯ, ಹಿಂದಿನಿಂದ ಬಂದ ಪದ್ಧತಿ ಎಂಬ ಅರ್ಥವನ್ನು ಹೊಂದಿರಬಹುದು (ಈ ಅರ್ಥ ಇನ್ನೂ ಕೋಶವನ್ನು ಸೇರಿಲ್ಲ). ಮುಖ್ಯಾರ್ಥವು ಇಲ್ಲಿ ಅಪ್ರಸ್ತುತವಾಗುವುದರಿಂದ ಪ್ರಾಯಃ ಮೇಲೆ ಹೇಳಿದ ಗೌಣಾರ್ಥದಲ್ಲಿ ಈ ಶಬ್ದವು ಪ್ರಯೋಗಿಸಲ್ಪಟ್ಟಿದೆಯೆಂದು ತಿಳಿಯಬಹುದಾಗಿದೆ. ಇಲ್ಲಿ 'ಅನೂಚೀನ' ಇದಕ್ಕಿಂತ ಸಮೀಚೀನಶಬ್ದವಾಗಿ ಕಾಣುತ್ತದೆ. ಈ ಭಾಗದಲ್ಲಿ ಕಾಣಬರುವ ಲೇಖನಗಳು ನೇರವಾಗಿ ಸಂಕೇತಿಕೃಷಿಗೆ ಸಂಬಂಧಪಡದೇ ಇರುವುದರಿಂದ ಗ್ರಂಥದ ಏಕರೂಪತೆಗೆ ಒಂದು ರೀತಿಯಲ್ಲಿ ಧಕ್ಕೆಯುಂಟಾಗಿರುವಂತೆ ಅನಿಸುತ್ತದೆ. ಆದರೆ ಈ ಲೇಖನಗಳು ಪರೋಕ್ಷವಾಗಿಯಾದರೂ ಸಂಕೇತಿ (ಬೇಸಾಯ) ಬದುಕಿನೊಡನೆ ಸಂಬಂಧಹೊಂದಿವೆಯಾದ್ದರಿಂದ ಈ ಏಕರೂಪತೆಯ ಅಭಾವ ಅಂತಹ ಕೊರತೆಯಾಗಿ ಕಾಣಿಸುವುದಿಲ್ಲ. ಇದರಿಂದ ಗ್ರಂಥದ ಮೌಲ್ಯಕ್ಕೇನೂ ಚ್ಯುತಿ ಬಂದಿಲ್ಲ.

ಈ ಭಾಗದಲ್ಲಿ ಪ್ರಸ್ತಾವಿಸಲ್ಪಟ್ಟಿರುವ ವಿಷಯಗಳು ಎರಡು ಪ್ರಕಾರಗಳಾಗಿವೆ. ಕೃಷಿಗೆ ಸಂಬಂಧಿಸಿದಂತೆ ಬೇರೆಬೇರೆ ವ್ಯಕ್ತಿಗಳಿಂದ ಅಭಿವ್ಯಕ್ತವಾದ ಅಭಿಪ್ರಾಯರೂಪದಲ್ಲಿರುವ ಬಿಡಿಬಿಡಿ ವಾಕ್ಯಗಳ ಸಂಗ್ರಹ ಒಂದು ಪ್ರಕಾರವಾದರೆ ಬೇರೆಬೇರೆ ಕಾಲದಲ್ಲಿ ಪ್ರಕಟವಾದ ಗ್ರಂಥಗಳಲ್ಲಿ, ನಿಯತಕಾಲಿಕಗಳಲ್ಲಿ, ವಿದ್ವತ್ಪತ್ರಿಕೆಗಳಲ್ಲಿ, ಸಂಶೋಧನಪತ್ರಿಕೆಗಳಲ್ಲಿ, ದಿನಪತ್ರಿಕೆಗಳಲ್ಲಿ ಈಗಾಗಲೇ ಬೆಳಕುಕಂಡಿರುವ ಲೇಖನಗಳ, ವರದಿಗಳ, ವ್ಯಕ್ತಿಚಿತ್ರಗಳ, ಐತಿಹ್ಯಗಳ, ಇತಿವೃತ್ತಗಳ ಮತ್ತು ಸಂದರ್ಶನಗಳ ಸಂಗ್ರಹ ಎರಡನೆಯದು. ಇದರಲ್ಲಿ ಮಿತ್ರ ಹರನ್ ಕ್ಷೇತ್ರಕಾರ್ಯದೊಡನೆ ನಡೆಸಿರುವ ಕೆಲವು ಸಂದರ್ಶನಗಳೂ ಸೇರಿವೆ. ಹರನ್ ನಡೆಸಿರುವ ಸಂದರ್ಶನಗಳಲ್ಲಿ ತಮಿಳುನಾಡು ಮತ್ತು ಕೇರಳಗಳ ಸೀಮಾಪ್ರದೇಶದಲ್ಲಿ ವಾಸಿಸುತ್ತಿರುವ ಸಂಕೇತಿ ಅಯ್ಯರ್ ಕೆಲವರ ಸಚಿತ್ರಸಂದರ್ಶನ ಕುತೂಹಲಜನಕವಾಗಿರುವುದಷ್ಟೇ ಅಲ್ಲದೆ ಕರ್ಣಾಟಕದ ಸಂಕೇತಿಗಳ ಮೂಲನೆಲೆಯನ್ನು ಗುರ್ತಿಸಲು ಸಹಾಯವಾಗುವಂತಹ ಅಮೂಲ್ಯ ಸಂಶೋಧನೆಯೂ ಆಗಿದೆ. ಸಂಕೇತಿ ಅಧ್ಯಯನಕ್ಕೆ ಭದ್ರಬುನಾದಿಯನ್ನು ಹಾಕಿಕೊಟ್ಟ ಶ್ರೀ ಎಮ್. ಕೇಶವಯ್ಯ ಮತ್ತು ಸಂಕೇತಿ ಅಧ್ಯಯನದೊಂದು ವಿಷಯದಲ್ಲಿ ಅಪಾರವಾದ ಆಸಕ್ತಿಯನ್ನು ಬೆಳಸಿಕೊಂಡು ಹಲವಾರು ಲೇಖನಗಳನ್ನು ಬರೆದಿರುವ ಪ್ರೊ. ಕೆ.ಎಸ್. ಕೃಷ್ಣಮೂರ್ತಿ ಇವರುಗಳ ಲೇಖನಗಳಿಂದಾಗಿ ಈ ಗ್ರಂಥದ ಗೌರವ ಹೆಚ್ಚಿದೆ. ಡಾ. ಬಿ.ವಿ. ಸುಧಾಮಣಿ ಅವರು ಜಾಗತಿಕಮಟ್ಟದ ಇತಿಹಾಸಸಮ್ಮೇಲನದಲ್ಲಿ ಸಾದರಪಡಿಸಿದ "ಕರ್ಣಾಟಕದ ಬ್ರಾಹ್ಮಣಕೃಷಿಕರಾಗಿ ಸಂಕೇತಿಗಳು" ಎಂಬ ಸಂಶೋಧನಲೇಖನ ಮತ್ತು ಶ್ರೀ ಹರನ್ ಅವರು ಅಮೇರಿಕಾಕ್ಕೆ ಹೋಗಿದ್ದಾಗ ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿರುವ ಪಿರಿಯಾಪಟ್ಟಣದವರಾದ ಖ್ಯಾತ ಕೃಷಿವಿಜ್ಞಾನಿ ಡಾ. ಕೃಷ್ಣಸುಬ್ಬರಾವ್ ಅವರನ್ನು ಕಂಡು ನಡಸಿರುವ ಸಂದರ್ಶನ ಇವೆರಡು ವಿಶೇಷವಾಗಿ ಗಮನ ಸೆಳೆಯುತ್ತವೆ. ಇಲ್ಲಿ ಕಾಳಿದಾಸನ ಕುಮಾರಸಂಭವದ ಒಂದು ಮಾತು ನೆನಪಿಗೆ ಬರುತ್ತದೆ -' ನ ರತ್ನಮನ್ವಿಷ್ಯತಿ ಮೃಗ್ಯತೇ ಹಿ ತತ್' (ಕು.ಸಂ. ೫-೪೫) ರತ್ನವು ಹುಡುಕುವುದಿಲ್ಲ, ಹುಡುಕಲ್ಪಡುತ್ತದೆ.

- ಗೌರಿಯನ್ನು ಪರೀಕ್ಷಿಸಲು ಜಟಿಲ (ಬ್ರಹ್ಮಚಾರಿ) ವೇಷಧಾರಿಯಾಗಿ ಅವಳ ಬಳಿಗೆ ಹೋಗುವ ಶಿವನ ಮಾತುಗಳಿವು. ಹೀಗೆ ಕೃಷ್ಣಸುಬ್ಬರಾವ್‌ರಂತಹ ಸಂಕೇತಿರತ್ನಗಳನ್ನು ಹುಡುಕಿಕೊಂಡುಹೋಗಿ ಪತ್ತೆಮಾಡುವುದರಲ್ಲಿ ಹರನ್ ಸಿದ್ಧಹಸ್ತರು.

ಬ್ರಾಹ್ಮಣಕೃಷಿಯ ಬಗ್ಗೆ ಒಂದಷ್ಟು ಗೊಂದಲಗಳೂ ತಪ್ಪುಗ್ರಹಿಕೆಗಳೂ ಇದ್ದಂತಿವೆ. ಆದ್ದರಿಂದ ಇಲ್ಲಿ ಅದರ ಬಗ್ಗೆ ಸ್ಮೃತಿಗಳಲ್ಲಿ ಕಂಡುಬರುವ ಕೆಲವು ವಿಚಾರಗಳನ್ನು ತಿಳಿಸಿದರೆ ಅಪ್ರಸ್ತುತವಾಗಲಾರದು. ಸಾಮಾನ್ಯವಾಗಿ ಸ್ಮೃತಿಕಾರರು ದ್ವಿಜರಿಗೆ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ) ಈ ಕೆಳಗಿನಂತೆ ವೃತ್ತಿಗಳನ್ನು ವಿಧಿಸುತ್ತಾರೆ -

ಅಧ್ಯಾಪನಮಧ್ಯಯನಂ ಯಜನಂ ಯಾಜನಂ ತಥಾ |
ದಾನಂ ಪ್ರತಿಗ್ರಹಶ್ಚೈವ ಷಟ್ಕರ್ಮಾಣ್ಯಗ್ರಜನ್ಮನಃ || ಮನು *10-75*

ಅಧ್ಯಯನ-ಅಧ್ಯಾಪನ, ಯಜನ-ಯಾಜನ, ದಾನ-ಪ್ರತಿಗ್ರಹ ಇವು ಬ್ರಾಹ್ಮಣನು ಆಚರಿಸಬೇಕಾದ ಷಟ್ಕರ್ಮಗಳು. ಇವುಗಳಲ್ಲಿ ಅಧ್ಯಯನ, ಯಜನ ಮತ್ತು ದಾನ ಇವು ಮೂರು ತನ್ನ ಮತ್ತು ತನ್ನ ಕುಟುಂಬದ ಶ್ರೇಯಸ್ಸಿಗಾಗಿ ಹೇಳಿರುವ ಕರ್ಮಗಳಾಗಿದ್ದರೆ (ಆಮುಷ್ಮಿಕಧರ್ಮ) ಅಧ್ಯಾಪನ, ಯಾಜನ ಮತ್ತು ಪ್ರತಿಗ್ರಹ ಇವು ಮೂರು ಜೀವನವನ್ನು ಸಾಗಿಸಲು ಹೇಳಿರುವ ಕರ್ಮಗಳಾಗಿವೆ (ಐಹಿಕ ಧರ್ಮ).

ಷಣ್ಣಾಣಂತು ಕರ್ಮಣಾಮಸ್ಯ ತ್ರೀಣಿ ಕರ್ಮಾಣಿ ಜೀವಿಕಾ |
ಯಾಜನಾಧ್ಯಾಪನೇ ಚೈವ ವಿಶುದ್ಧಾಚ್ಚ ಪ್ರತಿಗ್ರಹಃ || ಮನು *10.76*
'ಯಾಜನಾಧ್ಯಾಪನಪ್ರತಿಗ್ರಹೈರೇವ ಬ್ರಾಹ್ಮಣೋ ದ್ರವ್ಯಮಾರ್ಜಯೇತ್, ನ ಕೃಷಿವಾಣಿಜ್ಯಾದಿನಾ' -

ಹರದತ್ತ, ಆಪ. ಧರ್ಮ - 1.1

ಮೇಲೆ ಹೇಳಿರುವ ಷಟ್ಕರ್ಮಗಳಲ್ಲಿ ಅಧ್ಯಯನ, ಯಜನ, ದಾನ ಈ ಮೂರನ್ನು ಬ್ರಾಹ್ಮಣರಂತೆಯೇ ಕ್ಷತ್ರಿಯ ಮತ್ತು ವೈಶ್ಯರಿಗೂ ಶ್ರೇಯಸ್ಸಾಧಕ ಕರ್ಮಗಳೆಂದು ಹೇಳಲಾಗಿದೆ. ಆದರೆ ಇವರು ಬ್ರಾಹ್ಮಣನಂತೆ ಅಧ್ಯಾಪನ, ಯಾಜನ ಮತ್ತು ಪ್ರತಿಗ್ರಹಗಳನ್ನು ಮಾಡುವಂತಿಲ್ಲ. ಶಸ್ತ್ರಾಸ್ತ್ರಗಳನ್ನು ಹಿಡಿದು ಪ್ರಜಾರಕ್ಷಣೆ ಮಾಡುವುದನ್ನು ಕ್ಷತ್ರಿಯರಿಗೂ ಮತ್ತು ವಾಣಿಜ್ಯ, ಪಶುಪಾಲನ ಮತ್ತು ಕೃಷಿಗಳನ್ನು ವೈಶ್ಯರಿಗೂ ಜೀವನಾರ್ಥಕರ್ಮಗಳೆಂದು ಹೇಳಲಾಗಿದೆ.

ಶಸ್ತ್ರಾಸ್ತ್ರಭೃತ್ತ್ವಂ ಕ್ಷತ್ರಸ್ಯ ವಣಿಕ್ಪಶುಕೃಷಿರ್ವಿಶಃ |
ಆಜೀವನಾರ್ಥಂ, ಧರ್ಮಸ್ತು ದಾನಮಧ್ಯಯನಂ ಯಜಿಃ || ಮನು 10.79

ಪ್ರಧಾನಂ ಕ್ಷತ್ರಿಯೇ ಕರ್ಮ ಪ್ರಜಾನಾಂ ಪರಿಪಾಲನಮ್ |
ಕುಸೀದಕೃಷಿವಾಣಿಜ್ಯಪಾಶುಪಾಲ್ಯಂ ವಿಶಃ ಸ್ಮೃತಮ್ || ಯಾಜ್ಞ. 1.119
ಕುಸೀದಂ = ವೃದ್ಧ್ಯರ್ಥಂ ದ್ರವ್ಯಪ್ರಯೋಗಃ (ಬಡ್ಡಿಗೆ ಹಣವನ್ನು ಕೊಡುವುದು)

ಹೀಗೆ ಸ್ಮೃತಿಗಳು ಬ್ರಾಹ್ಮಣನಿಗೆ ಕ್ಷತ್ರಿಯಧರ್ಮವಾದ ಶಸ್ತ್ರಾಸ್ತ್ರ ಹಿಡಿಯುವುದನ್ನು ಮತ್ತು ವೈಶ್ಯಧರ್ಮವಾದ ಕುಸೀದ, ಕೃಷಿ, ವಾಣಿಜ್ಯ ಮತ್ತು ಪಶುಪಾಲನೆಗಳನ್ನು ಸಾಮಾನ್ಯವಾಗಿ ನಿಷೇಧಿಸಿದ್ದರೂ ಆತ್ಯಂತಿಕವಾಗಿ ನಿಷೇಧಿಸಿರುವುದು ಎಲ್ಲೂ ಕಂಡುಬರುವುದಿಲ್ಲ. ಏನಿದ್ದರೂ ಇವುಗಳ ನಿಷೇಧ ಆಂಶಿಕವಾಗಿ ಮಾತ್ರ. ಬ್ರಾಹ್ಮಣನಿಗೆ ಮುಖ್ಯವೃತ್ತಿಯಾಗಿ ಇವುಗಳನ್ನು ನಿಷೇಧಿಸಲಾಗಿದೆಯೇ ಹೊರತು ಆಪದ್ಧರ್ಮವಾಗಿ ಗೌಣವೃತ್ತಿಯನ್ನಾಗಿ ಆಶ್ರಯಿಸಲು ಕೆಲವೊಂದು ನಿಬಂಧನೆಗಳೊಡನೆ ಸ್ಮೃತಿಗಳಲ್ಲಿ ಅವಕಾಶಕಲ್ಪಿಸಿಕೊಡಲಾಗಿದೆ.

ವೇದಃ ಕೃಷಿವಿನಾಶಾಯ ಕೃಷಿರ್ವೇದವಿನಾಶಿನೀ |
ಶಕ್ತಿಮಾನುಭಯಂ ಕುರ್ಯಾದಶಕ್ತಸ್ತು ಕೃಷಿಂ ತ್ಯಜೇತ್ || ಬೌಧಾಯನ, ಧರ್ಮಸೂತ್ರ

ವೇದ (ಅಧ್ಯಯನ)ವು ಕೃಷಿಯನ್ನೇ ಹಾಳುಮಾಡುತ್ತದೆ, ಕೃಷಿಯು ವೇದವನ್ನು. ಶಕ್ತಿಯಿರುವವನು ಎರಡನ್ನೂ ಮಾಡಬಹುದು. ಶಕ್ತಿಯಿಲ್ಲದಿದ್ದಲ್ಲಿ ಕೃಷಿಯನ್ನು ಕೈಬಿಡಬೇಕು.

ಅಜೀವಂಸ್ತು ಯಥೋಕ್ತೇನ ಬ್ರಾಹ್ಮಣಃ ಸ್ವೇನ ಕರ್ಮಣಾ |
ಜೀವೇತ್ಕ್ಷತ್ರಿಯಧರ್ಮೇಣ ಸ ಹ್ಯಸ್ಯ ಪ್ರತ್ಯನಂತರಃ ||

ಉಭಾಭ್ಯಾಮಪ್ಯಜೀವಂಸ್ತು ಕಥಂ ಸ್ಯಾದಿತಿ ಚೇತ್ಭವೇತ್ |
ಕೃಷಿಗೋರಕ್ಷಾಮಾಸ್ಥಾಯ ಜೀವೇದ್ವೈಶ್ಯಸ್ಯ ಜೀವಿಕಾಮ್ || ಮನು *10.81-82*

ಬ್ರಾಹ್ಮಣನು ಯಥೋಕ್ತವಾದ ಕರ್ಮಗಳಿಂದ ಜೀವಿಸಲು ಸಾಧ್ಯವಿಲ್ಲದಿದ್ದಲ್ಲಿ ತನಗೆ ಸಮೀಪವರ್ಣವಾದ ಕ್ಷತ್ರಿಯಧರ್ಮದಿಂದ ಜೀವಿಸಬಹುದು. ಅದೂ ಸಾಧ್ಯವಿಲ್ಲದಿದ್ದಲ್ಲಿ ವೈಶ್ಯಧರ್ಮವಾದ ಕೃಷಿ ಮತ್ತು ಪಶುಪಾಲನೆಗಳಿಂದ ಜೀವನ ಮಾಡಬಹುದು.

ಬ್ರಾಹ್ಮಣನಿಗೆ ಕ್ಷತ್ರಿಯಧರ್ಮವಾದ ಪ್ರಜಾರಕ್ಷಣೆ ಮತ್ತು ವೈಶ್ಯಧರ್ಮವಾದ ಕೃಷಿ, ಪಶುಪಾಲನೆಗಳನ್ನು ನಿಷೇಧಿಸಲು ಮುಖ್ಯಕಾರಣವೆಂದರೆ ಅವುಗಳೊಡನೆ ಸೇರಿರುವ ಪ್ರಾಣಿಹಿಂಸೆ. ಮನುವು ಇದನ್ನು ಸ್ಪಷ್ಟವಾದ ಮಾತುಗಳಲ್ಲಿಯೇ ವ್ಯಕ್ತಪಡಿಸುತ್ತಾನೆ-

ವೈಶ್ಯವೃತ್ತ್ಯಾಪಿ ಜೀವಂಸ್ತು ಬ್ರಾಹ್ಮಣಃ ಕ್ಷತ್ರಿಯೋಽಪಿ ವಾ |
ಹಿಂಸಾಪ್ರಾಯಾಂ ಪರಾಧೀನಾಂ ಕೃಷಿಂ ಯತ್ನೇನ ವರ್ಜಯೇತ್ ||

ಕೃಷಿಂ ಸಾಧ್ವಿತಿ ಮನ್ಯಂತೇ ಸಾ ವೃತ್ತಿಃ ಸದ್ವಿಗರ್ಹಿತಾ |
ಭೂಮಿಂ ಭೂಮಿಶಯಾಂಶ್ಚೈವ ಹಂತಿ ಕಾಷ್ಠಮಯೋಮುಖಮ್ || ಮನು *10.83-84*

ವೈಶ್ಯವೃತ್ತಿ (ಕೃಷಿ, ಪಶುಪಾಲನೆ)ಯಿಂದ ಜೀವಿಸಬೇಕಾದ ಬ್ರಾಹ್ಮಣನಾಗಲೀ ಕ್ಷತ್ರಿಯನಾಗಲೀ ಹಿಂಸಾಬಾಹುಳ್ಯದಿಂದ ಕೂಡಿರುವ ಮತ್ತು ಅನ್ಯಾಶ್ರಯದಿಂದ ಮಾಡಬೇಕಾಗುವಂತಹ ಕೃಷಿಯನ್ನು (ಅಂದರೆ ಉಳುವುದು, ಗಾಡಿಗೆ ಎತ್ತುಕಟ್ಟುವುದು, ಅಗೆಯುವುದು ಇತ್ಯಾದಿ) ಪ್ರಯತ್ನಪೂರ್ವಕ ಬಿಡಬೇಕು. ಕೃಷಿಯನ್ನು ಸದ್ವೃತ್ತಿಯೆಂದು ತಿಳಿಯಲಾಗುತ್ತದೆ. ಆದರೆ ಅದು ಸಜ್ಜನರಿಂದ ನಿಂದಿತವಾದುದು. ಏಕೆಂದರೆ ನೇಗಿಲು (ಗುದ್ದಲಿ, ಹಾರೆ ಇತ್ಯಾದಿ) ಭೂಮಿಯನ್ನು ಮತ್ತು ಭೂಮಿಯೊಳಗೆ ಜೀವಿಸುವ ಪ್ರಾಣಿಗಳನ್ನು ಕೊಲ್ಲುತ್ತದೆ.

ಈ ಮಾತುಗಳಲ್ಲಿ ಮನುವು ಸ್ಪಷ್ಟವಾಗಿ ಪ್ರಾಣಿಹಿಂಸಾಸಹಿತವಾದ ಕೃಷಿಯನ್ನು ನಿಷೇಧಿಸಿ ಅದಿಲ್ಲದಿರುವ ಕೃಷಿಯನ್ನು ಬ್ರಾಹ್ಮಣಕ್ಷತ್ರಿಯರು ಮಾಡಬಹುದೆಂದು ಹೇಳುತ್ತಾನೆ. ಆದ್ದರಿಂದಲೇ ಪ್ರಾಯಃ ಸಂಕೇತಿಗಳು ಹೆಚ್ಚು ಹೊಲಗದ್ದೆಗಳ ಕೆಲಸವನ್ನು ತಾವು ಮಾಡದೆ ಆಳುಕಾಳುಗಳಿಂದ ಮಾಡಿಸುವುದಲ್ಲದೆ ಅಡಿಕೆ, ತೆಂಗು, ವಿಳ್ಳೇದೆಲೆ ಇತ್ಯಾದಿ ಹಿಂಸಾಲೇಪವಿಲ್ಲದಂತೆ ಬೆಳೆಯಬಹುದಾದ ತೋಟಗಾರಿಕೆಯನ್ನು ರೂಢಿಸಿಕೊಂಡರೆಂದು ಕಾಣುತ್ತದೆ. ಬ್ರಾಹ್ಮಣಕೃಷಿಗೆ ನಿರ್ಬಂಧಗಳನ್ನು ಹಾಕಿರುವಂತೆಯೇ ಅವನ ವಾಣಿಜ್ಯಕ್ಕೂ ಕೆಲವೊಂದು ನಿರ್ಬಂಧಗಳನ್ನು ಹಾಕಲಾಗಿದೆ. ಬ್ರಾಹ್ಮಣನು ಮಾರಾಟಮಾಡಕೂಡದೆಂದು ಹೇಳಿರುವ ವಸ್ತುಗಳ ಪಟ್ಟಿ ಬಹಳ ದೊಡ್ಡದಿದೆ. ಅವುಗಳಲ್ಲಿ ಮುಖ್ಯವಾದ ಕೆಲವೆಂದರೆ

- ರಸಗಳು, ಅನ್ನ, ಎಳ್ಳು, ಕಲ್ಲು, ಉಪ್ಪು, ಪಶುಗಳು, ಹತ್ತಿ, ರೇಷ್ಮೆ ಮತ್ತು ಉಣ್ಣೆಯ ವಸ್ತ್ರಗಳು, ಫಲಮೂಲಗಳು, ಔಷಧಗಳು, ನೀರು, ಶಸ್ತ್ರಗಳು, ವಿಷ, ಮಾಂಸ, ಮದ್ಯ, ಸುಗಂಧದ್ರವ್ಯಗಳು (ಕರ್ಪೂರ, ಊದುಗಡ್ಡಿ ಇತ್ಯಾದಿ), ಜೇನು, ಹಾಲು, ಮೊಸರು, ತುಪ್ಪ, ಬೆಲ್ಲ, ದರ್ಭೆ, ಚಿನ್ನ ಬೆಳ್ಳಿ ಮುಂತಾದ ಆಭರಣಗಳು, ಲೋಹದ ಪಾತ್ರೆಗಳು ಇತ್ಯಾದಿ. ಇಷ್ಟೆಲ್ಲ ನಿರ್ಬಂಧಗಳಿಗೊಳಪಟ್ಟ ಬ್ರಾಹ್ಮಣನು ವಾಣಿಜ್ಯವನ್ನು ಮಾಡುವುದಾದರೂ ಹೇಗೆ? ಆದ್ದರಿಂದಲೇ ಅವರು ಅನೂಚೀನವಾಗಿ ಯಾಜನ, ಅಧ್ಯಾಪನ ಮತ್ತು ಪ್ರತಿಗ್ರಹಗಳನ್ನು ತಮ್ಮ ಮುಖ್ಯವೃತ್ತಿಯನ್ನಾಗಿ ಮತ್ತು ಹಿಂಸಾಪರಾಶ್ರಯಗಳಿಲ್ಲದ ಕೃಷಿಯನ್ನು ಆಪತ್ಕಾಲೀನ ವೃತ್ತಿಯನ್ನಾಗಿ ಮಾಡಿಕೊಂಡು ಜೀವಿಸುತ್ತಾ ಬಂದಿದ್ದಾರೆಂದು ಕಾಣುತ್ತದೆ.

ಇಲ್ಲಿ ಮತ್ತೊಂದು ವಿಚಾರವನ್ನು ನಾವು ಗಮನಿಸಬಹುದಾಗಿದೆ. ಬ್ರಾಹ್ಮಣ-ಕ್ಷತ್ರಿಯ-ವೈಶ್ಯ ವರ್ಣಗಳು ತಮತಮಗೆ ವಿಹಿತವಾದ ವೃತ್ತಿಯನ್ನು ಮಾತ್ರ ಮಾಡಬಹುದಿತ್ತು. ಆಪದ್ಧರ್ಮವಾಗಿ ಬೇರೆವರ್ಣಗಳ ವೃತ್ತಿಯನ್ನು ಮಾಡಬೇಕಾಗಿಬಂದರೂ ಅದನ್ನು ಅನುಲೋಮಕ್ರಮದಲ್ಲಿ ಮಾಡಬಹುದಿದ್ದಿತೇ ಹೊರತು ವಿಲೋಮಕ್ರಮದಲ್ಲಿ ಮಾಡುವಂತಿರಲಿಲ್ಲ. ಅಂದರೆ ಬ್ರಾಹ್ಮಣನು ಕ್ಷತ್ರಿಯರ ಮತ್ತು ವೈಶ್ಯರ, ಕ್ಷತ್ರಿಯನು ಕೇವಲ ವೈಶ್ಯರ ವೃತ್ತಿಯನ್ನು ಮಾಡಬಹುದಿತ್ತು. ವೈಶ್ಯನು ಕ್ಷತ್ರಿಯ-ಬ್ರಾಹ್ಮಣರ, ಕ್ಷತ್ರಿಯನು ಬ್ರಾಹ್ಮಣರ ವೃತ್ತಿಯನ್ನು ಮಾಡುವಂತಿರಲಿಲ್ಲ. ಆದರೆ ವೇದಗಳ ಕಾಲದಲ್ಲಿ ವಸ್ತುಸ್ಥಿತಿ ಇದಕ್ಕಿಂತ ಭಿನ್ನವಾಗಿದ್ದಂತೆ ಕಾಣುತ್ತದೆ. ಋಗ್ವೇದದ ಕಿತವಸೂಕ್ತದಲ್ಲಿ ಹೇಳುವ - ಅಕ್ಷೈರ್ಮಾ ದೀವ್ಯಃ ಕೃಷಿಮಿತ್ಕೃಷಸ್ವ 34.10-13 (ಜೂಜಾಡಬೇಡ, ಕೃಷಿಯನ್ನು ಮಾಡು) ಮತ್ತು ತೈತ್ತಿರೀಯೋಪನಿಷತ್ತಿನಲ್ಲಿ ಹೇಳುವ - ಅನ್ನಂ ಬಹುಕುರ್ವೀತ, ತದ್ವ್ರತಮ್ 3.9 (ಆಹಾರವನ್ನು ಹೆಚ್ಚು ಬೆಳೆಯಬೇಕು. ಅದು ವ್ರತ) ಇಂತಹ ಆದೇಶದ ಮಾತುಗಳು ಕೇವಲ ಯಾವುದೋ ಒಂದು ನಿರ್ದಿಷ್ಟ ವರ್ಣವನ್ನು ಕುರಿತು ಹೇಳಿದಂತಿಲ್ಲ. ಪ್ರಾಚೀನ ಕಾಲದಿಂದಲೂ ಬ್ರಾಹ್ಮಣರು ಕೃಷಿಯನ್ನು ಮತ್ತು ಕ್ವಚಿತ್ತಾಗಿ ವಾಣಿಜ್ಯವನ್ನು ಮಾಡುತ್ತಾ ಬಂದಿದ್ದಾರೆಂಬುದಕ್ಕೆ ಪುರಾತನ ಸಂಸ್ಕೃತ ಸಾಹಿತ್ಯದಲ್ಲಿ ವಿಪುಲವಾಗಿ ಉದಾಹರಣೆ ದೊರೆಯುತ್ತವೆ. ಇದಿಷ್ಟೂ ವಿಚಾರಗಳು ಇಂದಿನ ಸಮಾಜದಲ್ಲಿ ಅಪ್ರಸ್ತುತವಾಗಿ ಕಾಣಬಹುದಾದರೂ ಕೇವಲ ವಿಷಯ ಕುತೂಹಲದಿಂದ (theoretical curiosity) ಹೇಳಲಾಗಿದೆಯೇ ಹೊರತು ಅನ್ಯಥಾ ಅಲ್ಲ.

ಒಂದು ಸುಸಜ್ಜಿತಸಂಸ್ಥೆ ಮಾಡಬಹುದಾದ ಕೆಲಸವನ್ನು ಮಿತ್ರ ಹರನ್ ಏಕಾಂಗಿಯಾಗಿ ಮಾಡುತ್ತಾ ಬಂದಿದ್ದಾರೆ. ಸಾಮಾನ್ಯವಾಗಿ ಲೇಖಕರಿಗೆ ಅವರ ಜೀವಿತಕಾಲದಲ್ಲಿ ಪ್ರೋತ್ಸಾಹ ದೊರೆಯುವುದು ಬಹುವಿರಳ. ಎಲ್ಲೋ ಅಲ್ಲೊಬ್ಬ ಇಲ್ಲೊಬ್ಬ ಪುಣ್ಯವಂತರಿಗೆ ಮಾತ್ರ ಅದು ಲಭ್ಯ. ಹರನ್ ಅಂತಹ ಪುಣ್ಯವಂತರಾಗಲಿ, ಅವರ ಪ್ರಯತ್ನಕ್ಕೆ ತಕ್ಕ ಪುರಸ್ಕಾರ ಅವರಿಗೆ ಲಭಿಸಲಿ ಎಂದು ಆಶಿಸುತ್ತೇನೆ.

ಡಾ. ಬಿ. ಚನ್ನಕೇಶವ
ಸಂಸ್ಕೃತ ಪ್ರಾಧ್ಯಾಪಕರು (ವಿಶ್ರಾಂತ)

ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

೩ ಪರಿವಿಡಿ

೪ ಗ್ರಂಥದ ಬಗೆಗೆ

ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಡಾ. ಕೆ. ಅನಂತರಾಮು
ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಸಂಕೇತಿ : ಬೇಸಾಯದ ಬದುಕು

ರತ್ನಕರಂಡಕ ಕೃಷಿಕಾಚಾರ

ಹಾಸನ ಜಿಲ್ಲೆಯು ಸಂಕೇತಿ ಕೃಷಿಕರ ಪ್ರಧಾನ ನೆಲೆಯಾಗಿದೆ. ವಿಜಯ್ ಅಂಗಡಿಯವರು ಆ ಜಿಲ್ಲೆಯ ಅಗ್ರಹಾರ, ಮಗ್ಗೆ, ನಿಲುವಾಗಿಲು, ನವಿಲೆ, ಮಾದಾಪುರ, ಮಲ್ಲರಾಜಪಟ್ಟಣ, ಬಸವಾಪಟ್ಟಣ, ರಾಮನಾಥಪುರ, ಸರಗೂರು, ಕಟ್ಟೇಪುರ, ರುದ್ರಪಟ್ಟಣ, ಆನಂದೂರು, ಕಟ್ಟೆಹೊಸಹಳ್ಳಿ, ಹಿರೇಹಳ್ಳಿಕೊಪ್ಪಲು, ಹಂದ್ರಾಳು, ಕಾರೇಬೋರೆಕಾವಲು, ಎಂಬೀಗ್ರಾಮುಗಳಲ್ಲಿ ಸಂಚರಿಸಿ, ಸುಸಂಬದ್ಧವೂ ವೈಜ್ಞಾನಿಕವೂ ಆದ ಕ್ಷೇತ್ರಕಾರ್ಯದ ಮೂಲಕ ಆ ಕೃಷಿಕರ ಜೀವನಮಾರ್ಗವನ್ನೆಲ್ಲ ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದಾರೆ. ಅದರ ಫಲಿತಾಂಶಗಳನ್ನೆಲ್ಲ ಈ ಸಂಪುಟದ 'ಸಂಕೇತಿ ಬೇಸಾಯದ ಬದುಕು : ಅವಲೋಕನ' ಎಂಬ ಮೊದಲ ಭಾಗದಲ್ಲಿ ಪರಿಷ್ಕಾರವಾಗಿ ದಾಖಲಿಸಿದ್ದಾರೆ. ಜಿಜ್ಞಾಸುಗಳಾದ ಕೃಷಿಕರಿಗೆ, ಕೃಷಿಪ್ರೇಮಿಗಳಿಗೆ, ಸಾಹಿತ್ಯಪ್ರೇಮಿಗಳಿಗೆ ಅದೊಂದು 'ಕೃಷಿರತ್ನಕರಂಡಕ'ವಾಗಿ ಪರಿಣಮಿಸಿದೆಯೆಂದರೆ ಅತಿಶಯೋಕ್ತಿಯಲ್ಲ.

ಸಂಕೇತಿ ಕೃಷಿಯ ಸರ್ವತೋಮುಖ ಚಿಂತನೆ

ವಿಜಯ್ ಅಂಗಡಿಯವರು ಸಂಕೇತಿ ಕೃಷಿಕರ ಜೀವನಮಾರ್ಗದ ಸಾರಸರ್ವಸ್ವವನ್ನೆಲ್ಲ 'ಅವಲೋಕನ'ದಲ್ಲಿ ಸಚಿತ್ರವಾಗಿ ಹಿಡಿದಿಟ್ಟಿದ್ದಾರೆ. ಅಲ್ಲಿನ ಸಂಕೇತಿಗಳು ಅಡಕೆ, ತೆಂಗು, ಬಾಳೆ, ಭತ್ತ, ತಂಬಾಕು, ಮುಸುಕಿನಜೋಳ, ಹತ್ತಿ, ನೆಲಗಡಲೆ, ಕಾಫಿ, ಶುಂಠಿ, ಕಾಳುಮೆಣಸು, ನಿಂಬೆ, ರಾಗಿ, ವೀಳ್ಯದೆಲೆ, ವೆನಿಲ್ಲಾ, ತರಕಾರಿಗಳು, ಹಣ್ಣುಗಳು ಮುಂತಾದುವನ್ನು ಬೆಳೆಯುತ್ತಾರೆ. ನೀರಿಗಾಗಿ ಕೆರೆಗಳಿಂದ ಉಪಯೋಗ ಪಡೆಯುತ್ತಾರೆ. ಇತ್ತೀಚೆಗೆ ಹಾರಂಗಿ ಅಣೆಕಟ್ಟು, ಗೊರೂರು ಅಣೆಕಟ್ಟುಗಳೂ ಅವರ ಉಪಕಾರಕ್ಕೆ ಒದಗಿಬಂದಿವೆ. ತೋಟಗಳಲ್ಲಿ ಈ ಹಿಂದೆ ತೋಡಿದ ಬಾವಿಗಳ ಜೊತೆಗೆ ಹೊಸದಾಗಿ ಕೊರೆದ ಬೋರ್‌ವೆಲ್‌ಗಳೂ ಇವೆ. ಗ್ರಾಮದೊಳಗೂ ಮನೆಬಳಕೆಗೆ ನಲ್ಲಿನೀರಲ್ಲದೆ, ರಾಟೆಬಾವಿಗಳನ್ನೂ ರಕ್ಷಿಸಿಕೊಂಡಿದ್ದಾರೆ. ಎತ್ತಿನಗಾಡಿಗಳ ಜೊತೆಗೆ ಟ್ರ್ಯಾಕ್ಟರ್‌ಗಳನ್ನೂ, ಟಿಲ್ಲರ್‌ಗಳನ್ನೂ ಬಳಸುತ್ತಿದ್ದಾರೆ. ಎಮ್ಮೆಗಳನ್ನೂ, ಹಳ್ಳಿಕಾರು, ಸಿಂಧಿ ಮತ್ತು ನಾಟಿಹಸುಗಳನ್ನೂ ಸಾಕಿಕೊಂಡು ಹೈನುಗಾರಿಕೆಯಿಂದಲೂ ಸಬಲರಾಗುತ್ತಿದ್ದಾರೆ. ಸಾವಯವ ಗೊಬ್ಬರಗಳನ್ನು ತಯಾರಿಸಿಕೊಳ್ಳಲು ಪಶುಪಾಲನೆಯು ಆಸರೆಯಾಗಿದೆ. ಗೋಬರ್‌ಗ್ಯಾಸ್ ಪ್ಲಾಂಟುಗಳನ್ನೂ ಸೌರಶಕ್ತಿದೀಪಗಳನ್ನೂ ಅಳವಡಿಸಿಕೊಳ್ಳುತ್ತಿದ್ದಾರೆ. ಅವರು ಬೆಳೆಯುವ ಅಡಕೆಗೆ ಶಿವಮೊಗ್ಗ ಮತ್ತು ಸಾಗರ ಪ್ರಮುಖ ಮಾರಾಟ ಕೇಂದ್ರಗಳಾಗಿವೆ. ತಂಬಾಕನ್ನು ಹದಗೊಳಿಸಲು ಬ್ಯಾರನ್ ಕಟ್ಟಿಕೊಂಡಿದ್ದಾರೆ. ಅದರ ಮಾರಾಟಕ್ಕೆ ರಾಮನಾಥಪುರದಲ್ಲೊಂದು ಹರಾಜು ಮಾರುಕಟ್ಟೆಯಿದೆ. ಹಣ್ಣಿನ ತೋಟಗಳನ್ನು ಬೆಳೆಸಿ ಮೇಲೆ ಬಂದವರೂ ಇದ್ದಾರೆ.

ಸರಳ ಜೀವನ, ಸಹಜ ಜೀವನ

ಸಂಕೇತಿ ಕೃಷಿಕರು ಸರಳಜೀವನಕ್ಕೆ ಒಗ್ಗಿಕೊಂಡಿದ್ದಾರೆ. ಮಣ್ಣಿನ ಗೋಡೆಗಳಿಂದ ಕೂಡಿದ ನಾಡುಹಂಚಿನ ಮನೆಗಳು ಈಗಲೂ ಇವೆ. ತೊಟ್ಟಿಮನೆಗಳು ತಮ್ಮ ವಿಶಿಷ್ಟ ವಾಸ್ತುಶೈಲಿಯಿಂದ ನಗರವಾಸಿಗಳ ಗಮನವನ್ನು

ಸೆಳೆಯುತ್ತವೆ. ತೋಟಕ್ಕೆ ಓಡಾಡಲು, ಅಲ್ಲಿಂದ ಹೊರೆಹೊತ್ತು ತರಲು, ಈಗಲೂ ಸೈಕಲ್ಲುಗಳನ್ನು ಬಳಸುತ್ತಾರೆ. ಸಮೀಪದ ಪಟ್ಟಣಗಳಿಗೆ ಹೋಗಿಬರಲು ಹೊಸಹೊಸ ದ್ವಿಚಕ್ರವಾಹನಗಳನ್ನಿಟ್ಟುಕೊಂಡಿದ್ದಾರೆ. ಶ್ರಮಜೀವನಕ್ಕೆ ತಮ್ಮನ್ನು ಒಗ್ಗಿಸಿಕೊಂಡಿದ್ದರೂ ಕೆಲಸದಾಳುಗಳ ಸಹಾಯವಿಲ್ಲದೆ ಬೇಸಾಯದ ಬದುಕು ನಡೆಯುವುದಿಲ್ಲ. ಪಶುಪಾಲನೆಗೆ ಗೋಪಾಲಕರನ್ನಿಟ್ಟುಕೊಂಡಿದ್ದಾರೆ. ಅಡಕೆಯ ಸುಗ್ಗಿಬಂದಾಗ ಹಬ್ಬದ ವಾತಾವರಣ ನಿರ್ಮಾಣವಾಗುತ್ತದೆ. ಎಡೆಯುವುದು, ಬೇಯಿಸುವುದು ಮುಂತಾದ ಸಂಸ್ಕರಣ ಕಾರ್ಯಗಳನ್ನು ಹುರುಪಿನಿಂದ ಮಾಡುತ್ತಾರೆ. ತೆಂಗನ್ನು ಹಾಗೆಯೇ ಮಾರುವುದೇ ಹೊರತು ಕೊಬ್ಬರಿಯಾಗಿಸುವುದು ಕಡಿಮೆ. ಸ್ತ್ರೀಯರಿಗೆ ಮೈತುಂಬ ಮನೆಗೆಲಸಗಳೇ ಸುತ್ತಿಕೊಳ್ಳುವುದರಿಂದ ಕೃಷಿಕಾರ್ಯಗಳಲ್ಲಿ ಅವರು ಪರೋಕ್ಷವಾಗಿ ಭಾಗವಹಿಸಬಲ್ಲರೇ ಹೊರತು, ತೋಟವನ್ನು ಹೊಕ್ಕು ದುಡಿಯಲಾರರು. ಊರಿಂದ ದೂರದೂರದಲ್ಲಿರುವ ತೋಟಗಳು, ಗೌರವದ ಪ್ರಶ್ನೆ, ಒರಟುಸ್ವಭಾವದ ಕೆಲಸಗಾರರು - ಮುಂತಾದವು ಸ್ತ್ರೀಯರ ಪ್ರತ್ಯಕ್ಷ ಪಾಲ್ಗೊಳ್ಳುವಿಕೆಗೆ ಅಡ್ಡಿಯಾಗಿವೆ. ಮನೆಯಲ್ಲಿಯೇ ಅವರು ವೀಳ್ಯದೆಲೆ ರೇಖೆಮಾಡಿ ಜೋಡಿಸುವುದು, ಅಡಕೆಪಟ್ಟೆ ಸುಲಿಯುವುದು, ಬಿದ್ದ ಅಡಕೆಗಳನ್ನು ಸುಲಿದು ಒಣಗಿಸುವುದು ಮುಂತಾದ ಕೆಲಸಗಳನ್ನು ನಿರ್ವಹಿಸುತ್ತಾರೆ. ಅತಿಥಿಸತ್ಕಾರದಲ್ಲಿ ಎಂದೂ ಅವರು ಹಿಂದೆಬಿದ್ದವರಲ್ಲ. ಬಳಪದಕಲ್ಲಿನ ಬಾನಿ, ಕಲ್ಲುಬಾಂಡಲಿ, ಕಲ್ಲುಮರಿಗೆ, ಗೇರುಕುಕ್ಕೆ, ಮರದ ಸೇರು ಬಳ್ಳಗಳು ಮುಂತಾದ ಸರಳಸಾಮಗ್ರಿಗಳಲ್ಲಿ ಕೆಲವು ಮಾತ್ರ ಈಗ ಬಳಕೆಯಾಗುತ್ತಿವೆ. ನಾಲ್ಕಾರುಬಾರಿ ಕಾಫಿ ಕುಡಿಯಬೇಕು, ಐದಾರುಬಾರಿ ತಾಂಬೂಲ ಚರ್ವಣವಾಗಬೇಕು, ಹತ್ತಾರುಬಾರಿ ನಶ್ಯವೇರಿಸಬೇಕು - ಅವೆಲ್ಲ ಅವರನ್ನು ಚುರುಕುಗೊಳಿಸುವ ಸರಳಸಾಧನಗಳು.

ಕೃಷಿಯಲ್ಲಿ ಪೂರ್ಣಪಂಡಿತರು

ಒಂದೊಂದೂ ಬೆಳೆಯ ಆರಂಭದ ಹಂತದಿಂದ ಹಿಡಿದು, ಅದರ ಸುಗ್ಗಿಮಾಡುವವರೆಗಿನ ಎಲ್ಲ ಹಂತಗಳ ಕೃಷಿ ಸ್ವರೂಪವನ್ನೂ ಸಂಕೇತಿ ಕೃಷಿಕರು ಕರತಲಾಮಲಕವಾಗಿಸಿಕೊಂಡಿದ್ದಾರೆ. ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ, ವ್ಯವಸಾಯ ಇಲಾಖೆ ಮುಂತಾದುವುಗಳೊಡನೆ ಸಂಪರ್ಕವಿರಿಸಿಕೊಂಡು, ಹೊಸಹೊಸ ವಿಚಾರಗಳು ಮೂಡಿಬಂದರೆ, ಅವುಗಳನ್ನು ತಮ್ಮ ಕೃಷಿಕಾರ್ಯಕ್ಕೆ ಜೋಡಿಸಿಕೊಳ್ಳುತ್ತಾರೆ. ಪರಂಪರೆಯಿಂದ ರೂಢಿಯಾಗಿ ಬಂದ ವ್ಯವಸಾಯ ಪದ್ಧತಿಯ ಸಾರಪೂರ್ಣವಾದ ವಿಚಾರಗಳನ್ನು ರಕ್ಷಿಸಿಕೊಂಡಿದ್ದಾರೆ. ಸರ್ಕಾರವು ನೀಡುವ ಸಾಲಸೌಲಭ್ಯಗಳನ್ನೂ, ಸಬ್ಸಿಡಿಯ ಸೌಕರ್ಯಗಳನ್ನೂ ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ. ರಾಸಾಯನಿಕ ಗೊಬ್ಬರಗಳ ದುಷ್ಪರಿಣಾಮಗಳ ಅರಿವಿದ್ದರೂ ಬೇರೆ ದಾರಿಯಿಲ್ಲದೆ ಸಾವಯವಗೊಬ್ಬರಗಳ ಜೊತೆಗೆ ಅವುಗಳನ್ನೂ ಮಿತವಾಗಿ ಬಳಸುತ್ತಿದ್ದಾರೆ. ವರ್ಷವರ್ಷವೂ ತೋಟಕ್ಕೆ ಹೊಸಮಣ್ಣನ್ನು ಹರಡಿಸಿ ಫಲವತ್ತತೆಯನ್ನು ಸಂರಕ್ಷಿಸಿಕೊಳ್ಳುತ್ತಿದ್ದಾರೆ. ತೋಟಗಳ ಅಂಚಿನಲ್ಲಿ ಹಲಸು, ಹುಣಿಸೆ, ನೇರಳೆ, ಮಾವು, ತೇಗ, ಹೊನ್ನೆ, ಬೇಲ, ಚಕ್ಕೋತ, ಹೇರಳೆ, ಸೀಬೆ, ಬಿದಿರು, ಅಕೇಶಿಯಾ, ಹಾಲುವಾಣ ಮುಂತಾದುವನ್ನು ನೆಟ್ಟು ಅಭಿವೃದ್ಧಿಯನ್ನು ಸಾಧಿಸುತ್ತಿದ್ದಾರೆ. ಭತ್ತದ ತಳಿಗಳಲ್ಲಿ ರಾಜಮುಡಿ, ರಾಜಭೋಗಗಳನ್ನು ಅವರು ಹೆಚ್ಚು ಇಷ್ಟಪಡುತ್ತಾರೆ. ಅವುಗಳಿಗೆ ರೋಗಬಾಧೆ, ಕೀಟಬಾಧೆಗಳು ಕಡಿಮೆ ಎಂಬುದೇ ಅದಕ್ಕೆ ಕಾರಣವಾಗಿದೆ. ಬಾಳೆಯಲ್ಲಂತೂ ದೇವಬಾಳೆ, ಮರಬಾಳೆ, ಪುಟ್ಟಬಾಳೆ, ಬೂದುಬಾಳೆ, ಚಂದ್ರಬಾಳೆ, ಆನೆಬಾಳೆ ಮುಂತಾದುವನ್ನೆಲ್ಲ ಅಳವಡಿಸಿಕೊಂಡಿದ್ದಾರೆ. ಬಾದಾಮಿ, ರಸಪುರಿ, ನೀಲಂ, ಮಲಗೋಬ, ಜೀರಿಗೆಮಿಡಿ ಮುಂತಾದ ಮಾವಿನ ಜಾತಿಗಳನ್ನು ಅವರು ಬೆಳೆಯುತ್ತಿದ್ದಾರೆ.

ಲೋಕದ ಬದುಕೇ ದುಃಖಾಲಯ

ದುಃಖಗಳು ಎಲ್ಲರನ್ನೂ ಕಾಡುತ್ತವೆ. ಅವು ತಮ್ಮ ಮುಖವಾಡಗಳನ್ನು ಮಾತ್ರವೇ ಬದಲಾಯಿಸಿಕೊಳ್ಳುತ್ತವೆ. ಕೃಷಿ ಜೀವನಕ್ಕೇ ಹೇಳಿಮಾಡಿಸಿದ ದುಃಖಗಳು ಅನೇಕವಾಗಿವೆ. ಅಡಕೆಗೆ ಅಣಬೆರೋಗ, ಬಾಳೆಗೆ ಕಟ್ಟೆರೋಗ, ತೆಂಗಿಗೆ

ನುಸಿರೋಗ, ವೀಳ್ಯದೆಲೆಗೆ ಬೂದಿರೋಗ - ಒಂದೇ ಎರಡೇ! ಎಲ್ಲವನ್ನೂ ನಿಯಂತ್ರಿಸಿ ಫಸಲನ್ನು ಕೈವಶಪಡಿಸಿಕೊಳ್ಳುವ ಹೊತ್ತಿಗೆ ಕಣ್ಣುಗಳಲ್ಲಿ ರಕ್ತ ಹರಿದಿರುತ್ತದೆ. ಅಣಬೆರೋಗ ಬಂದ ಮರದ ಬಳಿ ಉಪ್ಪುಸುರಿದು ಮುಚ್ಚಿದರೆ ರೋಗಾಣು ಹರಡುವುದಿಲ್ಲ, ಬುಡವನ್ನು ಜಜ್ಜಿ ಸೀಮೆಎಣ್ಣೆ ಸುರಿದರೆ ನಿಯಂತ್ರಣಕ್ಕೆ ಬರುತ್ತದೆ ಎಂಬ ಉಪಚಾರಗಳನ್ನು ಸ್ವಾನುಭವದಿಂದ ಸಾಧಿಸಿಕೊಂಡು ಬಂದಿದ್ದಾರೆ. ರಾಸಾಯನಿಕ ಗೊಬ್ಬರವನ್ನು ಒಮ್ಮೆ ಕೊಟ್ಟರೆ, ಸಸ್ಯಗಳಿಗೆ ಅದೇ ಅಭ್ಯಾಸವಾಗಿ, ಅದನ್ನೇ ಮುಂದುವರಿಸಬೇಕಾಗುತ್ತದೆಂದು ಅಂಜುತ್ತಾರೆ. ಭತ್ತಕ್ಕೆ ಹಕ್ಕಿಗಳ ಕಾಟವಿರುತ್ತದೆ, ಅಡಕೆಗೆ ಬಾವಲಿಗಳ ಕಾಟವಿರುತ್ತದೆ, ತೆಂಗಿಗೆ ಕೋತಿಗಳ ಕಾಟವಿರುತ್ತದೆ, ರಾಗಿಗೆ ನವಿಲುಗಳ ಕಾಟವಿರುತ್ತದೆ. ಕಾಡುಹಂದಿ, ಗುಳ್ಳೇನರಿಗಳೂ ಬೆಳೆಗಳನ್ನು ನಾಶಮಾಡುತ್ತವೆ. ಗುಳ್ಳೇನರಿಗಳು ಬೆಳೆಗಳನ್ನಲ್ಲದೆ ಹನಿ ನೀರಾವರಿ ಕೊಳವೆಗಳನ್ನು ಕಡಿದು ನಾಶಮಾಡುತ್ತವೆ. ಪರಮಾತ್ಮನು ಸೃಷ್ಟಿಸಿರುವ ಭೂತಕೋಟಿಗಳನ್ನು ಅವನೇ ಸಾಕಬೇಕಲ್ಲವೆ, ಅವುಗಳಿಗೂ ಪಾಲುಬೇಡವೇ ಎಂದು ಶಾಂತರಾಗುತ್ತಾರೆ. ಸೊಳ್ಳೆಗಳು ರಕ್ತಹೀರುತ್ತಿದ್ದರೂ 'ಅವುಗಳಿಗೆ ನಮ್ಮ ರಕ್ತದ ಋಣವಿದೆ' ಎಂದು ಸಮಾಧಾನಪಡಲು ದಾರಿಕಂಡುಕೊಳ್ಳುತ್ತಾರೆ. ಈಗ ಕೂಲಿಯಾಳುಗಳಲ್ಲಿ ಪ್ರಾಮಾಣಿಕತೆಯ ತೀವ್ರವಾದ ಕೊರತೆಯುಂಟಾಗಿದೆ. ತಾವು ಪಡೆದ ಕೂಲಿಗೆ ಸರಿದೂಗುವಷ್ಟು ದುಡಿದುಕೊಡಬೇಕೆಂಬ ಭಾವನೆ ಮರೆಯಾಗುತ್ತಿದೆ. ಸಗಣಿಗೊಬ್ಬರ ಎಂದು ಆಸೆಯಿಂದ ಕೊಂಡು ತರಿಸಿದರೆ, ಅದರಲ್ಲಿ ಕರೀಮಣ್ಣು ಬೆರೆಸಿರುವುದೇ ಹೆಚ್ಚು.

ಆಚಾರ ವಿಚಾರಗಳು

ಗೋವುಗಳನ್ನು ಅಕ್ಕರೆಯಿಂದ ಸಾಕುತ್ತಾರೆ. ವಾರಕ್ಕೊಮ್ಮೆ ಹಿತಕರವಾಗಿ ಸ್ನಾನ ಮಾಡಿಸುತ್ತಾರೆ. ಕರುಗಳು ನೊಂದಾವೆಂದು ಬಿಸಿನೀರನ್ನೇ ಎರೆಯುತ್ತಾರೆ. ಕಡಸುಗಳನ್ನು ಮಾತ್ರ ಉಳುಮೆಗೆ ಬಳಸುತ್ತಾರೆ. ಉಳಲು ಹಸುಗಳನ್ನು ಕಟ್ಟುವುದಿಲ್ಲ. ಕೆರೆಗಳ, ಗೋಮಾಳಗಳ ಒತ್ತುವರಿಯಾಗಿ ಪಶುಪಾಲನೆ ದುಸ್ತರವಾಗಿದೆ. ಬರೀ ಉಗುರಿನಲ್ಲಿ ಎಲೆ ಕೊಯ್ಯಬಾರದು, ಮುಟ್ಟಾದ ಹೆಂಗಸರು ತೋಟವನ್ನು ಪ್ರವೇಶಿಸಬಾರದು, ಪಾದರಕ್ಷೆ ಮೆಟ್ಟಿಕೊಂಡು ತೋಟದಲ್ಲಿ ಓಡಾಡಬಾರದು ಎಂಬ ಕಟ್ಟಳೆಗಳನ್ನೆಲ್ಲ ಪಾಲಿಸುತ್ತಾರೆ. ಗರ್ಭಪಾತಕ್ಕೆ ಈ ಹಿಂದೆ ಬಿದಿರಿನ ಕಳಲೆಯ ಪಲ್ಯವನ್ನು ಬಳಸುತ್ತಿದ್ದರು. ಕಣ್ಣಿಗೆ ಮುತ್ತಿಕೊಂಡು ಹಿಂಸೆಕೊಡುವ ಗುಂಗುರು ಎಂಬ ಕೀಟಗಳನ್ನು ನಿಯಂತ್ರಿಸಲು ಮನೆಯಲ್ಲಿ ಲೋಳೆಸರವನ್ನು ನೇತುಹಾಕುತ್ತಾರೆ. ದೇವಾಲಯಗಳನ್ನೂ ರಾಮಮಂದಿರಗಳನ್ನೂ ನಿರ್ಮಿಸಿಕೊಂಡು ಜಾತ್ರೆ, ಉತ್ಸವ, ಭಜನೆ, ಕೀರ್ತನೆಗಳಲ್ಲಿ ಪಾಲ್ಗೊಂಡು, ದೇವರ ಕೃಪೆಗೆ ಪಾತ್ರರಾಗುತ್ತಾರೆ. ವೇದಾಧ್ಯಯನ, ಗಮಕವಾಚನ, ಸಂಗೀತ, ನಾಟಕಾಭಿನಯ, ಪೌರೋಹಿತ್ಯ ಮುಂತಾದವು ಅವರ ಕೃಷಿಜೀವನವನ್ನು ವರ್ಣಮಯವಾಗಿಸುವ ಸಂಗತಿಗಳಾಗಿವೆ.

ಯುವಪೀಳಿಗೆಯ ಸುಖಾಭಿಲಾಷೆ

ಜವಾಬ್ದಾರಿಯಿಂದಲೂ ಮುತುವರ್ಜಿಯಿಂದಲೂ ಕೆಲಸ ಮಾಡಿದರೆ ಬೇಸಾಯದಲ್ಲಿ ಮರ್ಯಾದೆಯಿಂದ ಇರಬಹುದು. ಅಷ್ಟುಹೊರತು ಭೋಗಜೀವನ ಸಾಧ್ಯವಾಗುವುದಿಲ್ಲ ಎಂಬುದನ್ನು ಸಂಕೇತಿ ಕೃಷಿಕರು ಕಂಡುಕೊಂಡಿದ್ದಾರೆ. ಆದರೆ ಇತ್ತೀಚಿನ ಯುವಪೀಳಿಗೆಗೆ ಕಷ್ಟದ ದುಡಿಮೆ ಬೇಡವಾಗಿದೆ. ಬೆಳವಣಿಗೆಯ ಹಾದಿಯಲ್ಲಿ ಆರ್ಥಿಕ ತೊಂದರೆಗಳು ತನ್ಮೂಲಕವೇ ಎದುರಾಗುತ್ತಿವೆ. ಆಧುನಿಕತೆಯ ಸೋಗಿನಲ್ಲಿ ಗೌರವಕ್ಕಾಗಿ ನಾಜೂಕನ್ನು ಆಮಂತ್ರಿಸಿಕೊಳ್ಳುತ್ತಿದ್ದಾರೆ. ವಿದ್ಯೆಕಲಿತ ಜನ ಕೈಮುಟ್ಟಿ ಕೆಲಸಮಾಡುವುದಿಲ್ಲ. ವಿದ್ಯುಚ್ಛಕ್ತಿ ಮತ್ತು ರಸಗೊಬ್ಬರಗಳ ಪರಾವಲಂಬನೆ, ಕೂಲಿಕಾರರನ್ನು ಕುರಿಯುವ ಪರಾವಲಂಬನೆ, ಕೃಷಿಯ ಉತ್ಪನ್ನಗಳ ಮಾರಾಟದಲ್ಲಿ ಪರಾವಲಂಬನೆಗಳನ್ನು ಅವರು ಎದುರಿಸಿ ನಿಲ್ಲಲು ಸಮರ್ಥರಾಗಿಲ್ಲ. ದೂರದರ್ಶನದ ಧಾರಾವಾಹಿಗಳಿಗೆ ಯುವಕರೂ ಮಿಕ್ಕವರೂ ದಾಸರಾಗುತ್ತಿದ್ದಾರೆ. ದೇಹಶಕ್ತಿಯೂ ಕುಗ್ಗಿಹೋಗುತ್ತಿದೆ. ಹಿಂದೆ ಜನರಿಗೆ ಜ್ಞಾನದಾಹವಿತ್ತು, ಈಗ ಧನದಾಹ ಹೆಚ್ಚಾಗಿ ನೆಮ್ಮದಿ ಹಾಳಾಗಿದೆ.

— ಹೀಗೆ ವಿಜಯ್ ಅಂಗಡಿಯವರ ಸಮೀಕ್ಷೆಯು ಕೃಷಿವಿಚಾರಗಳ ಜೊತೆಗೆ ಸಂಕೇತಿಗಳ ಜೀವನಪದ್ಧತಿಯ ಹಲವು ಮುಖಗಳನ್ನು ಅನಾವರಣಗೊಳಿಸಿಕೊಟ್ಟಿದೆ.

ಕೃಷಿರಂಗದ ಕೃತಿರತ್ನ

ವಿಜಯ್ ಅಂಗಡಿಯವರ ಈ 'ಅವಲೋಕನ'ವು ಕನ್ನಡನಾಡಿನ ಕೃಷಿರಂಗಕ್ಕೆ ಸಮರ್ಪಿತವಾಗಿರುವ ಅತ್ಯಮೂಲ್ಯ ಕೃತಿರತ್ನವಾಗಿದೆ. ಅದು ಸಂಕೇತಿಗಳಿಗೆ ಮಾತ್ರವಲ್ಲದೆ, ಭೂಮಾತೆಯ ಮಕ್ಕಳಾಗಿ ದುಡಿಯುತ್ತಿರುವ ಎಲ್ಲ ರೈತರಿಗೂ ಕೈದೀವಿಗೆಯಾಗಿದೆ. ಕೃಷಿಯ ವಿಚಾರಗಳ ಜೊತೆಗೆ ಗ್ರಾಮಪರಿಚಯ, ಗ್ರಾಮದ ವೈಶಿಷ್ಟ್ಯಗಳು, ಅಲ್ಲಿನ ಸಮಕಾಲೀನ ಸ್ಥಿತಿಗತಿಗಳು, ಸ್ಥಿತ್ಯಂತರಗಳು, ಕೃಷಿಜೀವನದಲ್ಲಿ ಎದುರಾಗುತ್ತಿರುವ ಎಡರುತೊಡರುಗಳು, ಮಹಾನಗರಗಳು ಸುಖಜೀವನದ ಆಕರ್ಷಣೆಯನ್ನೊಡ್ಡಿ ಕೃಷಿಕರನ್ನು ತನ್ನತ್ತ ಸೆಳೆದುಕೊಂಡು, ಗ್ರಾಮೀಣ ಕೃಷಿಯನ್ನು ಮೂಲೆಗುಂಪು ಮಾಡುತ್ತಿರುವುದು ಮುಂತಾದ ವಿವರಗಳನ್ನೆಲ್ಲ ಹೃದ್ಯವಾಗಿ ನಿರೂಪಿಸಿದ್ದಾರೆ. "ಅಗ್ರಹಾರದ ಸಂಕೇತಿಗಳ ಕೃಷಿಬದುಕು ಈಗೀಗ ಬದಲಾಗುತ್ತಿದೆ. ಹೆಚ್ಚು ವ್ಯಾಸಂಗ ಮಾಡಿರುವವರು ಊರಲ್ಲಿ ಉಳಿಯುತ್ತಿಲ್ಲ. ನೌಕರಿ ಮತ್ತು ಉದ್ಯೋಗವನ್ನು ಅರಸಿಕೊಂಡು ಹೋಗುವುದು ಸಹಜವಾಗಿದೆ. ಕೈಮುಟ್ಟಿ ಕೆಲಸಮಾಡುವ ಜನ ಕಮ್ಮಿಯಾಗುತ್ತಿದ್ದಾರೆ" ಎಂಬಂತಹ ಮಾತುಗಳು ಸ್ಥಿತ್ಯಂತರದ ದಿಕ್ಸೂಚಿಯಾಗಿವೆ. ಇದರ ನಡುವೆಯೂ ಕೃಷಿಗೆ ಪ್ರೀತಿಯಿಂದ ತಮ್ಮನ್ನು ಸಮರ್ಪಿಸಿಕೊಂಡಿರುವವರ ವಿವರಗಳೂ ಅಲ್ಲಿವೆ. "ಅಗ್ರಹಾರ ಗ್ರಾಮದ ಸಂಕೇತಿ ಜನಾಂಗದ ಕೃಷಿಕರು ಹೆಚ್ಚಾಗಿ ಅಡಿಕೆ ಮತ್ತು ಭತ್ತವನ್ನು ಬೆಳೆಯುತ್ತಿದ್ದಾರೆ. ಇಲ್ಲಿಯ ಕೇಶವಮೂರ್ತಿ, ಶಂಕರಮೂರ್ತಿ, ಶ್ರೀನಿವಾಸಮೂರ್ತಿ, ಸುಂದರೇಶ್ ಮತ್ತು ಚಂದ್ರಶೇಖರ್ ಎಂಬುವವರು ಆಸಕ್ತಿಯಿಂದ ತಮ್ಮನ್ನು ಬೇಸಾಯದಲ್ಲಿ ತೊಡಗಿಸಿಕೊಂಡಿದ್ದಾರೆ. ಎಲ್ಲರಿಗಿಂತ ಭಿನ್ನವಾಗಿ ಕೆ. ನಟೇಶ್ ಎಂಬುವವರು ಇಲ್ಲಿ ತೋಟಮಾಡಿದ್ದಾರೆ. ಅದರಲ್ಲೂ ಇವರ ಹಣ್ಣಿನ ತೋಟ ನಿಮ್ಮ ಗಮನ ಸೆಳೆಯಬಲ್ಲದು. ಕೃಷಿ ವಿಶ್ವವಿದ್ಯಾಲಯ, ತೋಟಗಾರಿಕೆ ಇಲಾಖೆ, ನರ್ಸರಿಗಳು - ಹೀಗೆ ಸಂಬಂಧಿಸಿದ ಸಂಘಸಂಸ್ಥೆಗಳನ್ನು ಸಂಪರ್ಕಿಸಿ ತಮ್ಮ ಜಮೀನಿನಲ್ಲಿ ಭಿನ್ನವಾದ ಬೆಳೆಗಳನ್ನು ಬೆಳೆದಿದ್ದಾರೆ" ಎಂಬಂತಹ ವಾಕ್ಯಗಳನ್ನು ಓದುವಾಗ ಮುದುಡಿದ ಮನಸ್ಸು ಅರಳುತ್ತದೆ.

ಪ್ರವಾಸಕಥನದ ಸ್ವಾರಸ್ಯ

ವಿಜಯ್ ಅಂಗಡಿಯವರು ತಮ್ಮ ವಿವಿಧ ಗ್ರಾಮಸಮೀಕ್ಷೆಗಳಿಗೆ - ನಿಲುವಾಗಿಲಿನಲ್ಲಿ ನಿರಂತರ ಕೃಷಿ, ಕಷ್ಟದಿಂದ ಕಾಸುಗಳಿಸಿದ ನವಿಲೆ ಕೇಶವಮೂರ್ತಿ, ಮಾದಾಪುರದಲ್ಲಿ ಮುಪ್ಪುಕಾಣದ ಬೇಸಾಯ, ಆನಂದೂರು ಕೃಷಿಯಲ್ಲಿ ಆನಂದವಿಲ್ಲ, ಕಟ್ಟೇಪುರದಲ್ಲಿ ಕಳೆಗುಂದುತ್ತಿರುವ ಬೇಸಾಯ, ಹಂದ್ರಾಳುಗ್ರಾಮದ ಆರುಜನ ಆರಂಬಸ್ಥರು ಎಂಬಂತೆ ಗಮನ ಸೆಳೆಯುವ ಶೀರ್ಷಿಕೆಗಳನ್ನು ಕೊಟ್ಟಿದ್ದಾರೆ. ಅವರ ಕನ್ನಡಶೈಲಿಯೂ ಮನಮೋಹಕವಾಗಿದೆ. ತುಂಬಿಹರಿಯುವ ಹೇಮಾವತಿಯಂತೆ ಅದು ನೆಮ್ಮದಿಯಿಂದ ಸಾಗುತ್ತದೆ. ಈ 'ಅವಲೋಕನ'ವು ಒಂದು ಪ್ರವಾಸಕಥನವಾಗಿಯೂ ಯಶಸ್ವಿಯಾಗುವಷ್ಟು ಸಾಹಿತ್ಯಗುಣದಿಂದ ತುಂಬಿ ತುಳುಕುತ್ತಿದೆ. "ಅದೊಂದು ವಿಶಾಲವಾದ ಓಣಿ. ಒಂದೇ ರೀತಿಯ ಮನೆಗಳು. ಚಾಪೆಮೇಲೆ ಅಡಿಕೆ ಹಾಕಿದ್ದ ವ್ಯಕ್ತಿಯ ಬಳಿಗೆ ಹೋಗಿ ಕುಶಲೋಪರಿ ಮಾತಾಡಿ ಪರಿಚಯಿಸಿಕೊಂಡೆವು. ಅಡಿಕೆ ಬೆಳೆಗಾರ ಸೀತಾರಾಂ ತಮ್ಮ ಮನೆಗೆ ಕರೆದೊಯ್ದು ಅಡಿಕೆ ಬೇಸಾಯದ ಅನುಭವಗಳನ್ನು ಹೇಳಿಕೊಂಡರು. ಇಲ್ಲೊಬ್ಬರು ಶ್ರೀನಿವಾಸ ಅನ್ನೋರು ಚೆನ್ನಾಗಿ ತೋಟ ಮಾಡ್ತಾರೆ ಎಂದು ಸೀತಾರಾಂ ಹೇಳಿದರು. ಸರಿ, ಲಕ್ಷ್ಮೀನಾರಾಯಣರು ತಿಂಡಿ ಸೇವಿಸಿಕೊಂಡು ಸಿದ್ಧರಾಗಿದ್ದರು. ಶ್ರೀನಿವಾಸರವರು ಜೊತೆ ಸೇರಿದರು. ದೊಡ್ಡಮಗ್ಗೆಯಿಂದ ಕೇವಲ ಎರಡು ಕಿ.ಮೀ. ದೂರದಲ್ಲಿರುವ ಅವರ ತೋಟಕ್ಕೆ ತಲಪಿದೆವು. ಹೋಗುವ ದಾರಿಯಲ್ಲಿ ಚಿಕ್ಕಮಗ್ಗೆ ಗ್ರಾಮ ಕಾಣಿಸಿತು" ಎಂಬಂತೆ ಅವರು ನೀಡಿರುವ ಪ್ರವಾಸಾನುಭವಗಳು ಉದ್ದಕ್ಕೂ ಅತ್ಯಂತ ಚೇತೋಹಾರಿಯೂ ವೈವಿಧ್ಯಮಯವೂ ಆಗಿವೆ.

ಆಕರ್ಷಕ ಶಬ್ದಚಿತ್ರಗಳು

"ಬಸವಾಪಟ್ಟಣದ ತೋಟಗಳಲ್ಲಿ ಹೇರಳ ಸಂಖ್ಯೆಯಲ್ಲಿ ಬಾವಲಿಗಳು ಮನೆಮಾಡಿಕೊಂಡಿವೆ. ಅತ್ತಿ, ಆಲ, ಕಾಫಿ ಮುಂತಾದ ಹಣ್ಣುಗಳನ್ನು ಅವು ತಿನ್ನುತ್ತವೆ. ಹಣ್ಣಾದ ಅಡಿಕೆ ಕಾಯಿಗಳನ್ನೂ ತಿಂದು ಚೀಪಿ ಬಿಸಾಡುವುದಿದೆ. ರಾಮಚಂದ್ರರ ತೋಟದಲ್ಲಿ ಗ್ಲಿರಿಸೀಡಿಯಾ ಗಿಡಗಳು ಗಟ್ಟಿಯಾಗಿ ಬೆಳೆದಿರುವುದನ್ನು ಕಂಡು 'ಇಲ್ಲಿ ಇವಕ್ಕೆ ಏನಂತಾರೆ, ಯಾವಾಗ ಇಲ್ಲಿಗೆ ಬಂದುವು' ಎಂದೆ. 'ಅಯ್ಯೋ! ಈ ಗೊಬ್ಬರದ ಗಿಡಗಳನ್ನು ಮೂವತ್ತು ವರ್ಷಗಳಿಂದ ಕಾಣ್ತಾ ಇದೀವಿ. ಇವನ್ನು ಗೊಬ್ಬರ ಮಾಡ್ಲಿಕ್ಕೆ, ಬೇಲಿಯ ಭದ್ರತೆಗೆ, ಮಣ್ಣಿನ ಕೊರೆತ ತಪ್ಪಿಸ್ಲಿಕ್ಕೆ ಬಳಸ್ತೀವಿ' ಎಂದು ರಾಮಚಂದ್ರ ಹೇಳಿದರು. 'ನಮ್ಮಲ್ಲಿ ರಸಪುರಿ ಮಾವು ಇದೆ. ಹಳೆಯ ಮರಗಳು. ಸ್ವಲ್ಪ ಬಾದಾಮಿ, ಮಲಗೋವ ಇವೆ. ಹಲಸಿನ ಮರಗಳೂ ಇವೆ. ಹಣ್ಣಿನ ರುಚಿಯೂ ಚೆನ್ನಾಗಿದೆ. ಹೊಂಗೆಯ ಮರಗಳೂ ತೋಟದ ಅಂಚಿನಲ್ಲಿವೆ. ನಾವು ತೋಟವನ್ನು ದೇವರಂತೆ ಕಾಣ್ತೀವಿ. ಚಪ್ಪಲಿಯನ್ನು ಹಾಕಿಕೊಂಡು ಒಳಗೆ ಹೋಗಲ್ಲ'" ಎಂಬಂತೆ ವಿಜಯ್ ಅಂಗಡಿಯವರು ಆಯಾ ಪರಿಸರದ ಶಬ್ದಚಿತ್ರಗಳನ್ನು ಕಣ್ಣಿಗೆ ಕಟ್ಟುವಂತೆ ಓದುಗರಿಗೆ ನೀಡಿದ್ದಾರೆ. ಪ್ರಶ್ನೋತ್ತರ ಶೈಲಿ ನಡುನಡುವೆ ಅಳವಟ್ಟಿರುವುದರಿಂದ ನಾಟಕೀಯಗುಣವೂ ಅನಾಯಾಸವಾಗಿ ಬೆರೆತುಹೋಗಿದೆ.

ಸ್ವಭಾವೋಕ್ತಿ ಅಲಂಕಾರದ ಸೊಗಸು

ಸ್ವಭಾವೋಕ್ತಿ ಎಂಬುದು ಕಾವ್ಯಗಳಲ್ಲಿ ಕಾಣಿಸಿಕೊಳ್ಳುವ ಅಲಂಕಾರಗಳಲ್ಲೊಂದು. ಕಂಡುದನ್ನು ಕಂಡಂತೆ ಹೇಳುವ, ಇದ್ದುದನ್ನು ಇದ್ದಂತೆ ಬಣ್ಣಿಸುವ ನಿರಾಡಂಬರ ನಿರೂಪಣೆಯೇ ಸ್ವಭಾವೋಕ್ತಿ ಅಲಂಕಾರ. 'ಇದ್ಯಾವ ಎಲೆ? ರುಚಿ ಹೇಗಿರುತ್ತೆ? ಅಡಿಕೆ ಇಟ್ಕೊಂಡಿದೀರಾ' ಎಂದು ಪ್ರಶ್ನಿಸಿದೆವು. 'ಇದೆ, ಬನ್ನಿ, ತಗೊಳ್ಳಿ. ಈ ಹಸೀ ಅಡಿಕೇನಾ ಹೆಚ್ಚು ತಿನ್ಬೇಡಿ, ತಲೆ ತಿರುಗಬಹುದು. ಈ ಎಲೆಗೆ ಸುಣ್ಣವಿದ್ದರೇನೇ ರುಚಿ' ಎಂದು ಹೇಳುತ್ತಿರುವಾಗಲೇ ಚಿಗುರೆಲೆಯನ್ನು ಕಿತ್ತದ್ದಾಗಿತ್ತು. 'ಸುಣ್ಣವಿಲ್ಲದಿದ್ರೂ ತೊಂದ್ರೆ ಇಲ್ಲ' ಎಂದು ಅವರಿಗೆ ತಿಳಿಸುತ್ತ ಅಡಿಕೆಯೊಂದಿಗೆ ಜಗಿಯಲು ಶುರು ಮಾಡಿದೆವು. ಜೊತೆಯಲ್ಲಿ ತಗೊಂಡು ಹೋಗಿದ್ದ ದಿನಪತ್ರಿಕೆಗಳನ್ನು ಹಾಸಿಕೊಂಡು ವಿಚಾರಗಳನ್ನು ಕಲೆಹಾಕುತ್ತಾ ಹೋದೆವು" ಎಂಬಲ್ಲಿ ಸ್ವಭಾವೋಕ್ತಿ ಅಲಂಕಾರದ ಸೊಬಗು ಮೆರೆದಾಡಿದೆ. ಈ ಬಗೆಯ ನಿರಾಭರಣ ಬಣ್ಣನೆಗಳಿಂದ ವಿಜಯ್ ಅಂಗಡಿಯವರು ಈ ಕೃತಿಯ ಗುಣಗೌರವಗಳನ್ನು ಹೆಚ್ಚು ಎತ್ತರಕ್ಕೇರಿಸಿದ್ದಾರೆ. "ಎಳೆಯ ಬಿಸಿಲು ಇದ್ದ ಆ ಸಂದರ್ಭದಲ್ಲಿ ಅಲ್ಲಿನ ಜನರ ಕೃಷಿಜೀವನವನ್ನು ಎಳೆಎಳೆಯಾಗಿ ಬಿಡಿಸಿ ತಿಳಿಯಲು ಅನುಕೂಲವಾಯಿತೇನೋ ಅನ್ನಿಸಿತು" ಎಂಬ ವಾಕ್ಯ ಎಷ್ಟು ಕಾವ್ಯಗುಣಭರಿತವಾಗಿದೆ ನೋಡಿ !

ಅನುಪಮ ವ್ಯಕ್ತಿಚಿತ್ರಗಳು

ವ್ಯಕ್ತಿವೈಶಿಷ್ಟ್ಯಗಳನ್ನು ಎತ್ತಿಹಿಡಿಯುವುದರಲ್ಲಿಯೂ ವಿಜಯ್ ಅಂಗಡಿಯವರು ನಿಷ್ಣಾತರಾಗಿದ್ದಾರೆ. ಅಗ್ರಹಾರದ ಕೆ. ನಟೇಶ, ಮಗ್ಗೆಯ ಲಕ್ಷ್ಮೀನಾರಾಯಣ, ಕೀರನಕಟ್ಟೆಯ ಕೇಶವಮೂರ್ತಿ, ಮಾದಾಪುರದ ಎಂ.ಕೆ. ಶೇಷಮೂರ್ತಿ, ಬಸವಾಪಟ್ಟಣದ ಸರೋಜಮ್ಮ ಮೊದಲಾದವರ ಸಾರವತ್ತಾದ ವ್ಯಕ್ತಿಚಿತ್ರಗಳನ್ನು ಹೃದಯಂಗಮವಾಗುವಂತೆ ಕಟ್ಟಿಕೊಟ್ಟಿದ್ದಾರೆ. ಅಲ್ಲಲ್ಲ ಲಲಿತಪ್ರಬಂಧವೆಂದು ಕರೆಯುವ ಗದ್ಯಗೀತೆಯ ಪರಿಮಳವನ್ನು ಅಂಗಡಿಯವರು ಪಸರಿಸಿದ್ದಾರೆ. "ಹಣದ ಆಸೆಗೆ ತಂಬಾಕನ್ನು ಹಾಕಿ ಅದನ್ನು ಹದಮಾಡಲು ದೇಶದ ಹಸಿರು ಸಂಪತ್ತು ಹೇಳತೀರದಷ್ಟು ನಾಶವಾಯ್ತು. ಎಂಟು ಹತ್ತು ವರ್ಷಗಳಲ್ಲಿ ಕಾಡೂ ಲೂಟಿಯಾಯಿತು. ಮರಗಳನ್ನು ಜನ ಬೋಳಿಸಿದರು. ತಂಬಾಕಿನಿಂದ ಹಣ ಬಂದಿರ ಬಹುದು, ಆದ್ರೆ ನಮ್ಮ ಮರಗಳೆಲ್ಲ ಸರ್ವನಾಶವಾದವಲ್ಲಾ, ಮುಂದೇ ಏನೇನು ಆಗುತ್ತೋ ತಿಳಿಯದು" ಎಂಬ ನಟೇಶರ ಮಾತಿನಲ್ಲಿರುವ ಪರಿಸರ ಸಂರಕ್ಷಣೆಯ ಕಾಳಜಿಯನ್ನು ಗಮನಿಸಬೇಕು. 'ಪುಟ್ಟಸಕ್ಕರೆ' ಲಕ್ಷ್ಮೀನಾರಾಯಣರಾಯರ ಕೃಷಿಪ್ರೇಮ ಅನನ್ಯವಾದುದು. ಅದರೊಟ್ಟಿಗೇ ಇರುವ ಸಮಾಜಸೇವಾಪ್ರೀತಿ ಕೂಡ ಕಡಿಮೆಯದೇನಲ್ಲ. ದೊಡ್ಡಮಗ್ಗೆಯಲ್ಲಿ

ಪ್ರೌಢಶಾಲೆಯನ್ನು ಹುಟ್ಟುಹಾಕಿ ಬೆಳೆಸಿದ್ದಾರೆ. ಮಕ್ಕಳೆಲ್ಲ ಅಮೇರಿಕದಲ್ಲಿದ್ದಾರೆ. "ನಾನು ಕಷ್ಟಪಟ್ಟು ಈ ಜಮೀನನ್ನು ಉಳಿಸಿಕೊಂಡಿದೀನಿ. ಇನ್ನು ನನಗೆ ನೋಡೋ ಶಕ್ತಿ ಕಮ್ಮಿ ಆಯ್ತು. ಮಕ್ಕಳು ಇಲ್ಲಿಗೆ ಬಂದು ನೆಲೆಸುವ ಸಂದರ್ಭ ಕಾಣುತ್ತಿಲ್ಲ. ನಾನಾಗೇ ತೋಟ ಕೊಡಲಿಕ್ಕೆ ಹೋದರೆ ಬೆಲೆ ಬರೋಲ್ಲ. ಬೇರೆಯವರು ಆಸೆಪಟ್ಟಾಗ ಮಾತ್ರ ಮೌಲ್ಯ ಸಿಗುತ್ತೆ. ಒಳ್ಳೆ ಬೆಲೆ ಬಂದ್ರೆ ಕೊಡೋಣ ಅಂತ ನಿರ್ಧರಿಸಿದೀನಿ" ಎಂಬ ಅವರ ಮಾತುಗಳನ್ನು ಓದುವಾಗ 'ಅಯ್ಯೋ, ಹೋಯಿತಲ್ಲಾ ಸಂಕೇತಿ ಕೃಷಿ' ಎಂದು ಪರಿತಪಿಸುವಂತಾಗುತ್ತದೆ. ಅಮೇರಿಕೆಯನ್ನು ಸುತ್ತಿಬಂದಿರುವ 'ಪುಟ್ಟಸಕ್ಕರೆ' ಯವರು ಅಲ್ಲಿನ ವ್ಯವಸಾಯದ ಕೆಲವು ವೈಶಿಷ್ಟ್ಯಗಳನ್ನು ಗುರುತಿಸಿಕೊಟ್ಟಿದ್ದಾರೆ. ಅಲ್ಲಿನ ರೆಡ್‌ಇಂಡಿಯನ್ನರು ಬೇಸಾಯಕ್ಕೆ ಯಂತ್ರಗಳನ್ನಾಗಲಿ ವಿದ್ಯುತ್ತಿನ ಬಲವನ್ನಾಗಲಿ ಬಳಸದೆ, ಕುದುರೆಗಳನ್ನು ಕಟ್ಟಿ ಬೇಸಾಯ ಮಾಡುವುದು ಕುತೂಹಲಕಾರಿ ಯಾಗಿದೆ.

ಬೇಚರಾಕ್ ಗ್ರಾಮವಾಗಿದ್ದ ಕೀರನಕಟ್ಟೆಯನ್ನು ನಳನಳಿಸುವ ಗ್ರಾಮವನ್ನಾಗಿ ಪುನರುಜ್ಜೀವನಗೊಳಿಸಿದ ಕೇಶವಮೂರ್ತಿಯವರ ಸಾಹಸಪೂರ್ಣವಾದ ಕೃಷಿಪ್ರೇಮವನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಆಗುತ್ತದೆ. 'ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲಿರ್ದಡೇನು, ಅದು ಪಟ್ಟಣವೆಂದೆನಿಸುವುದು' ಎಂಬ ವಚನಕಾರ ದೇವರದಾಸಿಮಯ್ಯನ ಮಾತು ಈ ಸಂದರ್ಭದಲ್ಲಿ ಸ್ಮರಣೆಗೆ ಬರುತ್ತದೆ. ಅದೀಗ ಹದಿನೈದು ಕೃಷಿಕುಟುಂಬಗಳ ಪುಟ್ಟ ಗ್ರಾಮವಾಗಿದೆ. ಏಳೂರಮ್ಮ ಗ್ರಾಮದೇವತೆ; ಅವಳ ಗುಡಿಯ ಜೀರ್ಣೋದ್ಧಾರ ಮಾಡಿದ್ದಾರೆ. ರಾಮಮಂದಿರವೂ ಇದೆ. ಅದ್ದೂರಿಯಾಗಿ ರಾಮೋತ್ಸವವನ್ನು ಜರುಗಿಸುತ್ತಾರೆ. ಕೃಷಿಯ ಜೊತೆಗೆ ಚಿತ್ರಕಲೆಯಲ್ಲಿಯೂ ಪ್ರಾವೀಣ್ಯ ಗಳಿಸಿರುವುದು ಮಾದಾಪುರದ ಎಂ.ಕೆ. ಶೇಷಮೂರ್ತಿಯವರ ಹಿರಿಮೆಗೆ ತಿಲಕವಿಟ್ಟಂತಾಗಿದೆ. ಅಷ್ಟೇ ಸಾಲದೆಂಬಂತೆ ಅವರು ಹೋಮಿಯೋಪತಿ ವೈದ್ಯರಾಗಿ ಅಲ್ಲಿಯೂ ಹಸ್ತಸಿದ್ಧಿಯಿದ್ದು, ಸಿರೋಸಿಸ್‌ನಂತಹ ಬದುಕನ್ನೇ ಭಾರವಾಗಿಸಿಬಿಡುವ ಕ್ರೂರವ್ಯಾಧಿಗಳನ್ನೆಲ್ಲ ಗುಣಪಡಿಸಿದ್ದಾರೆ. ಬಸವಾಪಟ್ಟಣದ ಸರೋಜಮ್ಮನವರಂತೂ ಧೀರ ಮಹಿಳೆ. ಎಪ್ಪತ್ತು ವರ್ಷ ದಾಟಿದ್ದಾರೆ. ಒಂಬತ್ತು ಜನ ಮಕ್ಕಳು, ಅವರೆಲ್ಲ ಬೇರೆ ಬೇರೆ ಊರುಗಳನ್ನು ಸೇರಿಬಿಟ್ಟಿದ್ದಾರೆ. ಯಜಮಾನರಾದ ಬಿ.ಎಸ್. ನಾಗಪ್ಪನವರೂ ಹಲವು ವರ್ಷಗಳ ಹಿಂದೆ ತೀರಿಹೋಗಿ ಅವರೀಗ ಏಕಾಂಗಿ. "ನನ್ನ ತಾತ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಲಿಲ್ಲ. ನನ್ನ ತಾಯಿ ಮನೆಯಲ್ಲೇ ವಿದ್ಯಾಭ್ಯಾಸ ನೀಡಿದರು. ಕದ್ದು ಸಂಗೀತ ಕಲಿತೆ. ನಾನು ಬರೆಯುತ್ತೇನೆ. ರಾಮಾಯಣ, ಗುರುಚರಿತ್ರೆಗಳನ್ನು ಓದುತ್ತೇನೆ. ನನಗೆ ಒಂಭತ್ತು ವರ್ಷಕ್ಕೆ ಮದುವೆಯಾಯ್ತು, ನನ್ನ ಯಜಮಾನರ ಜೊತೆ ತುಂಬಾ ಅನ್ಯೋನ್ಯವಾಗಿ ಬದುಕಿದೆ. ಹೆಣ್ಣುಮಕ್ಕಳಿಗೆ ಕಿರಿವಯಸ್ಸಿನಲ್ಲಿ ಮದುವೆ ಮಾಡಿದರೆ ಹೊಂದಾಣಿಕೆ ಚೆನ್ನಾಗಿರುತ್ತದೆ. ಈಗಿನ ಕಾಲದಲ್ಲಿ ನೋಡಿ, ಬರೀ ಗಂಡಸರ ಹಣಕ್ಕೆ ಹೆಂಗಸರು ಬೆಲೆ ಕೊಡ್ತಾರೆ. ನನ್ನದು ಸ್ವಾವಲಂಬನೆಯ ಜೀವನ. ನಾನೇ ಕಸ ಹೊಡಕೊಳ್ತೀನಿ, ಬಟ್ಟೆ ಒಗೀತೀನಿ, ಬೇಸರವೇ ಇಲ್ಲ. ಕಷ್ಟ ಬಂದಾಗ ಕೊರಗಲಿಲ್ಲ, ಸುಖಬಂದಾಗ ಹಿಗ್ಗಲಿಲ್ಲ. ನನಗೆ ಎಷ್ಟು ದುಡ್ಡು ಬೇಕು, ಎಷ್ಟು ಆಹಾರ ಬೇಕು" ಎಂಬ ಅವರ ಮಾತುಗಳನ್ನು ಸದಾಕಾಲ ಮೆಲುಕುಹಾಕುತ್ತಿರಬೇಕು. ಭಗವದ್ಗೀತೆಯ ತತ್ವಗಳಲ್ಲಿ ಬಾಳುವುದು ಹೇಗೆ ಎಂಬುದನ್ನು ಅರಿಯಬೇಕಾದರೆ ಸರೋಜಮ್ಮನವರನ್ನೇ ನೆನೆಯಬೇಕು. ಹೀಗೆ ವಿಜಯ್ ಅಂಗಡಿಯವರು ಕೃಷಿಯ ಕ್ಷೇತ್ರಕಾರ್ಯದ ನೆಪದಲ್ಲಿ ಗ್ರಾಮೀಣವಲಯದ ಪ್ರತಿಭಾಮೂರ್ತಿಗಳನ್ನೂ ಸೇವಾಯೋಗಿಗಳನ್ನೂ ಮುಂಚೂಣಿಗೆ ತಂದು ನಿಲ್ಲಿಸಿದ್ದಾರೆ.

ಚಿರಕಾಲ ನಿಲ್ಲುವ ಕೃತಿ

ವಿಜಯ್ ಅಂಗಡಿಯವರ ಈ ಕೃತಿ ಅತ್ಯಂತ ಪ್ರಯೋಜನಕಾರಿಯಾಗಿ ಮೂಡಿಬಂದಿದೆ. ಚಿರಕಾಲ ಬಾಳುತ್ತ, ಕೃಷಿ ಜೀವನಕ್ಕೆ ಮಾರ್ಗದರ್ಶನ ನೀಡಬಲ್ಲ ಶಕ್ತಿಯನ್ನು ಅಂಗಡಿಯವರು ಅದಕ್ಕೆ ತುಂಬಿಸಿಕೊಟ್ಟಿದ್ದಾರೆ. ಜ್ಞಾನಸ್ಫೋಟವಾಗುತ್ತಿರುವ ಇಂದಿನ ಯುಗದಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಕಂಪ್ಯೂಟರ್‌ಶಾಸ್ತ್ರ, ಮುಂತಾದ ಕ್ಷೇತ್ರಗಳ

ಜ್ಞಾನ ಬೇಗಬೇಗನೆ ಹಳತಾಗಿಬಿಡುತ್ತದೆ. ಆಗ ಆ ಕ್ಷೇತ್ರಕ್ಕೆ ಸಂಬಂಧಪಟ್ಟ ಗ್ರಂಥಗಳೂ ಮನ್ನಣೆ ಕಳೆದುಕೊಂಡುಬಿಡುತ್ತವೆ. ಆದರೆ ಕೃಷಿರಂಗದಲ್ಲಿ ಅಂತಹ ಕ್ರಾಂತಿಕಾರಕ ಬದಲಾವಣೆಗಳಾಗುವುದು ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲವಾದ್ದರಿಂದ ಅಂಗಡಿಯವರ ಗ್ರಂಥ ಮುಂಬರುವ ದಶಕಗಳಲ್ಲಿಯೂ ಹೊಸಹೊಸದಾಗಿಯೇ ಕಂಗೊಳಿಸುತ್ತಿರುತ್ತದೆಂದು ಭಾವಿಸುತ್ತೇನೆ. ಕೃಷಿತಜ್ಞರಾದ ಅವರು ಸಂಕೇತಿ ಕೃಷಿಕರ ಬೇಸಾಯದ ವಿಧಿವಿಧಾನಗಳನ್ನು ಸಾಧುವೆಂದು ಸ್ವೀಕರಿಸಿದ್ದಾರೆ. ಈ ಮೂಲಕ ವೈಜ್ಞಾನಿಕ ದೃಷ್ಟಿಕೋನಕ್ಕೂ ಸಂಕೇತಿ ಬೇಸಾಯವು ಹೊಂದಿಕೊಳ್ಳುತ್ತದೆಂಬುದು ಪ್ರಮಾಣೀಕೃತವಾದಂತಾಗಿದೆ. ಕೆಲವು ಸಂದರ್ಭಗಳಲ್ಲಿ ಅಂಗಡಿಯವರು ಈಗಿನ ಸಂಕೇತಿ ಕೃಷಿ ಪದ್ಧತಿಯನ್ನು ಮತ್ತಷ್ಟು ಪರಿಣಾಮಕಾರಿಯಾಗಿಸುವ ಸಲಹೆಗಳನ್ನೂ ಆಧುನಿಕ ಕೃಷಿವಿಜ್ಞಾನದ ಹಿನ್ನೆಲೆಯಲ್ಲಿ ನೀಡಿ ಉಪಕರಿಸಿದ್ದಾರೆ. ಒಂದೊಂದು ತೋಟವನ್ನು ಸಮೀಕ್ಷೆ ಮಾಡಿದಾಗಲೂ ಅಲ್ಲಿನ ಲೋಪದೋಷಗಳನ್ನು ಪತ್ತೆಮಾಡಿ, ಅವುಗಳ ನಿವಾರಣೆಗೆ ಸೂಕ್ತವಾದ ಸಲಹೆಗಳನ್ನೂ ಅಲ್ಲಲ್ಲಿಯೇ ಪಟ್ಟಿಮಾಡಿಕೊಟ್ಟಿದ್ದಾರೆ.

ಪುನರುಕ್ತಿಯೂ ಅಲಂಕಾರವಾಗಿದೆ

ಕಾವ್ಯಗಳಲ್ಲಿ ಕೆಲವೆಡೆ ಹೇಳಿದ್ದನ್ನೇ ಹೇಳಿದರೂ ದೋಷವಿಲ್ಲವೆಂದು ಎತ್ತಿಹಿಡಿಯುವ ಕ್ರಮವಿದೆ. ಅಂತಹ ವರ್ಣನೆಯು 'ಪುನರುಕ್ತಿ' ಎಂಬ ಹೆಸರಿನ ಕಾವ್ಯಾಲಂಕಾರದ ಗುಂಪಿಗೆ ಸೇರಿಬಿಡುತ್ತದೆ. ಪ್ರಸ್ತುತ ಗ್ರಂಥದಲ್ಲಿಯೂ ಆ ಬಗೆಯ ಪುನರುಕ್ತಿಗಳಿವೆ. ಆದರೆ ಇಲ್ಲಿಯೂ ಆ ಪುನರುಕ್ತಿಗಳು ಒಂದರಂತೆ ಮತ್ತೊಂದಿಲ್ಲದೆ ವೈವಿಧ್ಯಮಯವಾಗಿದ್ದು ಕೃತಿಗೆ ಅಲಂಕಾರಗಳೇ ಆಗಿವೆ. ಇಂತಹ ಸತ್ಕೃತಿಯನ್ನು ಕನ್ನಡನಾಡಿಗೆ ನೀಡಿದ ಕೃಷಿರಂಗದ ವಿದ್ವನ್ಮಣಿಗಳಾದ ವಿಜಯ್ ಅಂಗಡಿಯವರ ಕೀರ್ತಿ ದಿಗಂತವಿಸ್ತಾರವಾಗಲೆಂದು ಆಸೆಪಡುತ್ತೇನೆ. ಕೃಷಿರಂಗದಲ್ಲಿ ಕ್ಷೇತ್ರಕಾರ್ಯ ಮಾಡಿದರೆ ವಿಜಯ್ ಅಂಗಡಿಯವರ ಹಾಗೆ ಮಾಡಬೇಕು; ಕೃಷಿರಂಗದಲ್ಲಿ ಕೃತಿರಚನೆ ಮಾಡಿದರೆ ವಿಜಯ್ ಅಂಗಡಿ ಅವರ ಹಾಗೆ ಮಾಡಬೇಕು ಎಂದು ಕೊಂಡಾಡುವಂತೆ ಒಂದು 'ಆದರ್ಶಮಾದರಿ'ಗೆ ಅವರು ಜನಕರಾಗಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಲ್ಲ.

ಪ್ರಣತಾರ್ತಿಹರನ್ ಅವರ ದಿಗ್ದರ್ಶನ

ಪ್ರಣತಾರ್ತಿಹರನ್ ಅವರು ಕೃಷಿಪ್ರೇಮಿ, ಸಾಹಿತ್ಯಪ್ರೇಮಿ, ಕಾಯಕಪ್ರೇಮಿ, ಎಲ್ಲಕ್ಕಿಂತ ಮಿಗಿಲಾಗಿ ನಾಡಪ್ರೇಮಿ. ಈವರೆಗೆ ಅವರು ತಮ್ಮ ಪ್ರಧಾನ ಸಂಪಾದಕತ್ವದಲ್ಲಿ ಬೃಹದಾಕಾರದ ಎಂಟು ಸಂಕೇತಿ ಸಂಪುಟಗಳನ್ನು ಲೋಕಾರ್ಪಣ ಮಾಡಿದ್ದಾರೆಂದರೆ ಹುಡುಗಾಟವಾಯಿತೆ! ಅದಕ್ಕಾಗಿ ಅವರು ಅದೆಷ್ಟು ಅಲೆದಲೆದು ಅತ್ತಿಕಾಯಿ ತಿನ್ನಲಿಲ್ಲ, ಸೊರಸೊರಗಿ ಸೊಪ್ಪಾಗಲಿಲ್ಲ, ಕೊರಕೊರಗಿ ಕೋಳಿಯಾಗಲಿಲ್ಲ! ಅವರು ತಮ್ಮ ಜೀವಮಾನದ ದುಡಿಮೆಯನ್ನೆಲ್ಲ ಈ ಬೃಹತ್ ಸಂಪುಟಗಳನ್ನು ಬೆಳಕು ಕಾಣಿಸುವುದಕ್ಕೇ ಸಮರ್ಪಿಸಿಬಿಟ್ಟಿದ್ದಾರೆ. ಬದುಕಿಗೊಂದು ಗುರಿಯಿರಬೇಕಲ್ಲವೆ, ಸಾರ್ಥಕತೆ ಇರಬೇಕಲ್ಲವೆ? ಹರನ್ ಅವರು ತಾವು ಕಣ್ಣಿಟ್ಟ ಗುರಿಯನ್ನು ಸಾಹಸಪಟ್ಟು ತಲುಪಿದ್ದಾರೆ. ವಿಜಯ್ ಅಂಗಡಿ ಸಂಕೇತಿಗಳೇನಲ್ಲ. ಆದರೆ ಈ ಅಧ್ಯಯನಕ್ಕೆ, ಶೋಧನೆಗೆ ಅವರೇ ತಕ್ಕವರೆಂದು ಹರನ್ 'ಪ್ರತಿಭಾಶೋಧ' ನಡೆಸಿ, ಅಂಗಡಿಯವರಿಗೆ ಈ ಮಹತ್ಕಾರ್ಯವನ್ನು ಒಪ್ಪಿಸಿಕೊಟ್ಟಿದ್ದಾರೆ. ತಾವೂ ಅವರೊಡನೆ ಗ್ರಾಮಗಳಲ್ಲಿ ಸುತ್ತಾಡಿ ಕ್ಷೇತ್ರಕಾರ್ಯಕ್ಕೆ ಪ್ರಾಣಪ್ರತಿಷ್ಠೆ ನೆರವೇರಿಸಿ ಕೊಟ್ಟಿದ್ದಾರೆ. ಹರನ್ ಅವರು ಕ್ರಿಯಾಶೀಲರಾದ ಯಾರ ಮಗ್ಗುಲಲ್ಲಿ ನಿಂತರೂ 'ಭಲೇಜೋಡಿ'ಯಾಗಿಬಿಡುತ್ತಾರೆ. ಹಾಗೆಂದೇ ಇಲ್ಲಿ ವಿಜಯ್ ಅಂಗಡಿ ಮತ್ತು ಪ್ರಣತಾರ್ತಿಹರನ್ 'ಭಲೇಜೋಡಿ' ಎನಿಸಿದ್ದಾರೆ. ಅಂತಹ ಹರನ್ ಅವರಿಗೆ ಕನ್ನಡನಾಡವರೆಲ್ಲರ ಅಭಿನಂದನೆಗಳು ಸಲ್ಲಬೇಕಾಗಿದೆ.

ಸಂಕೇತಿ: ಬೇಸಾಯದ ಬದುಕು: ಅನೂಚಾನ

'ಸಂಕೇತಿ ಬೇಸಾಯದ ಬದುಕು' ಎಂಬೀ ಸಂಪುಟದ ಎರಡನೆಯ ಭಾಗವನ್ನು 'ಸಂಕೇತಿ: ಬೇಸಾಯದ ಬದುಕು: ಅನೂಚಾನ' ಎಂದು ಕರೆಯಲಾಗಿದೆ. ಪ್ರಣತಾರ್ತಿಹರನ್ ಅವರ ಮಡದಿ ಡಾ. ವಿಜಯಾಹರನ್ ಅವರು ಈ ಭಾಗವನ್ನು ಸಂಕಲನ ಮಾಡಿಕೊಟ್ಟು ದೊಡ್ಡ ಉಪಕಾರವೆಸಗಿದ್ದಾರೆ. ಸಂಕೇತಿಗಳನ್ನು ಕುರಿತು ಇದುವರೆಗೆ ಪ್ರಕಟವಾಗಿರುವ ಸಾಹಿತ್ಯವನ್ನೆಲ್ಲ ಒಂದೆಡೆ ರಾಶಿಹಾಕಿಕೊಂಡು, ಅದನ್ನೆಲ್ಲ ಸಾವಧಾನವಾಗಿ, ಪರಿಪೂರ್ಣವಾಗಿ ಅಧ್ಯಯನ ಮಾಡಿ, ಅವುಗಳ ಹೃದಯಸ್ಥಾನಗಳನ್ನು ಪತ್ತೆಮಾಡಿ, ಅಷ್ಟಿಷ್ಟು ಭಾಗಗಳನ್ನು ಅರ್ಥಪೂರ್ಣವಾಗಿ ಉದ್ಧರಿಸಿಕೊಟ್ಟು, ಸಂಕೇತಿ ಕೃಷಿಜೀವನದ ಸಮಗ್ರ ಪರಿಕಲ್ಪನೆ ಓದುಗರ ಚಿತ್ತದಲ್ಲಿ ಮೂಡುವಂತೆ ಮಾಡಿದ್ದಾರೆ. ಈ ಗುಂಪಿನಲ್ಲಿ ಸಂಕೇತಿ ಸಮುದಾಯದ ನಿಯತಕಾಲಿಕೆಗಳಿಂದ ಆಯ್ದುಕೊಂಡ ವಿಚಾರಗಳಿವೆ; ವಿಭಿನ್ನ ಮುಹೂರ್ತಗಳಲ್ಲಿ ಸಂಕೇತಿಗಳು ಪ್ರಕಟಿಸಿರುವ ಸ್ಮರಣಸಂಚಿಕೆಗಳಿಂದ ಸಂಗ್ರಹಿಸಿಕೊಂಡ ಸಂಗತಿಗಳಿವೆ; ಪ್ರಣತಾರ್ತಿಹರನ್ ಅವರೇ ಹೊರತಂದಿರುವ ಸಂತುಷ್ಟಿ, ಸಂಸಕ್ತ, ಸಂವಾದ ಮೊದಲಾದ ಕೃತಿಗಳ ಕೆಲವು ಸಾರವತ್ತಾದ ನಿರೂಪಣೆಗಳಿವೆ. ಅವುಗಳಿಗೆಲ್ಲ ಕಿರೀಟವಿಟ್ಟಂತೆ 'ಸಂಕೇತಿ: ಒಂದು ಅಧ್ಯಯನ', 'ಸಂಕೇತಿ: ಶತಮಾನದ ಪತ್ರಗಳು', 'ಸಂಕೇತಿ: ಕೃಷಿಯ ವಿಭಿನ್ನ ನೆಲೆಗಳು' ಮೊದಲಾದ ಬೃಹತ್ ಸಂಪುಟಗಳ ಸಾರವತ್ತಾದ ಉದ್ಧರಣಗಳಿವೆ.

ಅಪ್ರಕಟಿತ ಬರೆಹಗಳು

ಪ್ರಕಟಿತ ಗ್ರಂಥಗಳಿಂದ ಆಯ್ದುಕೊಂಡ ಮುತ್ತುರತ್ನಗಳ ಪ್ರಪಂಚ ಒಂದು ಕಡೆಗಾದರೆ, ಇದೇ ವಿಭಾಗದಲ್ಲಿ ಈವರೆಗೆ ಬೆಳಕು ಕಾಣದಿದ್ದ ಹತ್ತಾರು ಅಮೂಲ್ಯ ಲೇಖನಗಳನ್ನು ವಿಜಯಾಹರನ್ ಅವರು ಹುಡುಕಾಡಿ ಸಂಗ್ರಹಿಸಿ, ಇಲ್ಲಿ ಸ್ಥಾನಕಲ್ಪಿಸಿಕೊಟ್ಟಿದ್ದಾರೆ. ಅವುಗಳೇ ಈ ವಿಭಾಗದಲ್ಲಿ ಹೆಚ್ಚಿನ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಡಾ. ಬಿ.ವಿ. ಸುಧಾಮಣಿಯವರು ಇತಿಹಾಸ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಸ್ಕಾಟ್ಲೆಂಡಿನ ಎಡಿನ್‌ಬರೋ ವಿಶ್ವವಿದ್ಯಾನಿಲಯದ ಇತಿಹಾಸ ಸಮ್ಮೇಳನದಲ್ಲಿ ಭಾಗವಹಿಸಿ, "ಕೃಷಿಕರಾಗಿ ಸಂಕೇತಿ ಬ್ರಾಹ್ಮಣರು" ಸವೆಸಿದ ಮಾರ್ಗವನ್ನು ಕುರಿತು ವಿದ್ವತ್ಪೂರ್ಣವಾದ ಆಂಗ್ಲ ಪ್ರಬಂಧವೊಂದನ್ನು ಮಂಡಿಸಿ, ಜಯಶೀಲೆಯಾಗಿ ಬಂದಿದ್ದಾರೆ. ಆ ಪ್ರಬಂಧಕ್ಕಾಗಿ ಅವರು ಹತ್ತಾರು ಗ್ರಂಥಗಳನ್ನು ಅಧ್ಯಯನ ಮಾಡಿರುವುದಲ್ಲದೆ, ಕ್ಷೇತ್ರಕಾರ್ಯದ ಮೂಲಕವೂ ಶಕ್ತಿಸಂಚಯನ ಮಾಡಿಕೊಂಡಿದ್ದಾರೆ; ಟಿಪ್ಪಣಿಗಳನ್ನು ಬರೆದುಕೊಂಡಿದ್ದಾರೆ. ಆ ಟಿಪ್ಪಣಿ, ಆ ಲೇಖನ ಎಲ್ಲವೂ ಈ ಸಂಪುಟದಲ್ಲಿ ಮೊದಲಬಾರಿಗೆ ಸೇರ್ಪಡೆಗೊಂಡು ಅದರ ಮಹಿಮೆಗೆ ಕಣ್ಣುಮೂಡಿಸಿವೆ. ಅಂತೆಯೇ ಚಿಂತಕರೂ ವಿಮರ್ಶಕರೂ ಆದ ಪ್ರೊ. ಟಿ.ಎಸ್. ರಾಜಾಮಣಿ ಅವರು ಸಂಕೇತಿಗಳ ವ್ಯವಸಾಯದ ಬದುಕನ್ನು ಕುರಿತು ಬರೆದಿರುವ ವಿಸ್ತಾರವಾದ ಆಂಗ್ಲ ಲೇಖನವೊಂದು ಇಲ್ಲಿ ಮೊದಲಬಾರಿಗೆ ಬೆಳಕು ಕಂಡಿದೆ. ರಾಜಾಮಣಿಯವರು ಕೇರಳದ ಕೊಲ್ಲಂ ಎಂಬಲ್ಲಿಗೆ ಸೇರಿದವರು. ಅವರು ತಮಿಳುನಾಡಿನ ಸಂಕೇತಿಗಳನ್ನು ಮಾತ್ರವಲ್ಲದೆ ಮೈಸೂರು-ಬೆಂಗಳೂರುಗಳಲ್ಲಿಯೂ ನೆಲೆಸಿ, ಕನ್ನಡನಾಡಿನ ಸಂಕೇತಿಗಳನ್ನೂ ಹತ್ತಿರದಿಂದ ಅರಿತವರಾಗಿದ್ದಾರೆ. ಹೀಗಾಗಿ ಅವರ ಲೇಖನ ಹೆಚ್ಚು ಅರ್ಥಪೂರ್ಣವಾಗಿದೆ.

ಪ್ರಣತಾರ್ತಿಹರನ್ ಸುತ್ತಿಸುತ್ತಿ ಸುಣ್ಣವಾಗಿದ್ದಾರೆ

ಸಂಕೇತಿಗಳನ್ನು ಅಧ್ಯಯನ ಮಾಡುವ ಸಲುವಾಗಿ ತಮಿಳುನಾಡು ಮತ್ತು ಕರ್ನಾಟಕಗಳಲ್ಲಿ ಪ್ರಣತಾರ್ತಿಹರನ್ ಅವರಂತೆ ಕ್ಷೇತ್ರಕಾರ್ಯಕ್ಕೆಂದು ಸುತ್ತಿಸುತ್ತಿ ಸುಣ್ಣವಾದವರು ಬೇರೊಬ್ಬರಿಲ್ಲ. 'ಕಲ್ಲರಳಿ ಹೂವಾಗಿ | ಎಲ್ಲರಿಗು ಬೇಕಾಗಿ | ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ' ಎಂದು ಸುಣ್ಣಕ್ಕೆ ಒಂದು ಒಗಟಿದೆ. ಪ್ರಣತಾರ್ತಿಹರನ್ ಎಂದರೆ

ಹಾಗೆ, ಸುತ್ತಿಸುತ್ತಿ ಸುಣ್ಣವಾದರೂ ಸಂಕೇತಿಜನಾಂಗವೆಂಬ ಶಿಖರಕ್ಕೆ ಅವರು ಬೆಳಕಾಗಿದ್ದಾರೆ. ತಮಿಳುನಾಡಿನ ಎಲತ್ತೂರು, ಅಯ್‌ಕುಡಿ, ಶಾಂಬವರ್‌ವಡಹರ್‍ಯ, ಕಡೆನಲ್ಲೂರುಕೃಷ್ಣಾಪುರಂ, ಶೆಂಕೋಟ್ಟೈ, ಎರಚ್ಚಕೊಳಂ, ದರ್ಶನಂಕೋಪು, ತೆಂಕಾಸಿ, ಕೀಳ್‌ಪುಲಿಯೂರ್ - ಎಂಬೀ ಗ್ರಾಮಗಳಲ್ಲಿ ಅವರು ನಡೆಸಿದ ಸಂದರ್ಶನದ ಸಾರಸಂಗತಿಗಳು ಇಲ್ಲಿ ಮೊದಲಬಾರಿಗೆ ಜೋಡಣೆಗೊಂಡಿವೆ. ಆಯಾ ಮನೆತನದ ವಿಚಾರಗಳ ಜೊತೆಗೆ, ಅವರ ಸಮಕಾಲೀನ ಸ್ಥಿತಿಗತಿಗಳ ಜೊತೆಗೆ, ಅವರ ಕೃಷಿಜೀವನದ ಸಂಗತಿಗಳ ಜೊತೆಗೆ ಅಲ್ಲಿ ಪ್ರವಾಸಕಥನದ ಸ್ವಾರಸ್ಯವೂ ಕೂಡಿಕೊಂಡಿರುವುದು ಚಿನ್ನದಲ್ಲಿ ಪರಿಮಳ ಬೆರೆತುಕೊಂಡಂತಾಗಿದೆ. ತಮಿಳುನಾಡು ಮಾತ್ರವಲ್ಲದೆ ಕರ್ನಾಟಕದ ಬಸವಾಪಟ್ಟಣ (ಅದು ಹರನ್ ಅವರ ಹುಟ್ಟೂರು), ಹಾಸನ, ಅಗ್ರಹಾರ, ಮಲ್ಲಾಪುರ, ಹಿರಿಗನಹಳ್ಳಿ, ಹಾನಗಲ್ಲು, ಐಚನಹಳ್ಳಿ, ಚಾಗಳ್ಳಿ, ಮರಿತಮ್ಮನಹಳ್ಳಿ, ಮೈಸೂರು, ಬೆಂಗಳೂರುಗಳಲ್ಲೂ ಕ್ಷೇತ್ರಕಾರ್ಯ ನಡೆಸಿ, ವಸ್ತುಸಂಗ್ರಹ ಮಾಡಿಕೊಂಡಿದ್ದಾರೆ. ಅವೆಲ್ಲವೂ ಇಲ್ಲಿ ಮೊದಲಬಾರಿಗೆ ಸೇರ್ಪಡೆಯಾಗಿವೆ. ಈ ಗ್ರಾಮಗಳಲ್ಲಿ ಸಂಕೇತಿ ಕೃಷಿವಿಚಾರಗಳಿಗೆಂದೇ ಕೇಶವಮೂರ್ತಿ, ವಿಜಯ್ ಅಂಗಡಿ ಅವರುಗಳೂ ಕ್ಷೇತ್ರಕಾರ್ಯ ನಡೆಸಿದ್ದಾರೆ. ಆದರೆ ಕ್ಷೇತ್ರಕಾರ್ಯವೆಂಬುದು ಎಷ್ಟು ಮೊಗೆದರೂ ತೀರದ ತವನಿಧಿ. ಕ್ಷೇತ್ರಕಾರ್ಯದಲ್ಲಿ ತೊಡಗಿದವರ ಮನೋಧರ್ಮ, ಅವರು ಭೇಟಿಯಾಗುವ ವ್ಯಕ್ತಿಗಳು, ಅವರು ಕೇಳುವ ಪ್ರಶ್ನೆಗಳು, ಕೇಳುವ ಸನ್ನಿವೇಶಗಳು ಮುಂತಾದ ಎಲ್ಲವೂ ಬೇರೆಬೇರೆಯಾಗಿಬಿಡುವುದರಿಂದ ಅವರಿಗೆ ಲಭಿಸುವ ಫಲಿತಾಂಶಗಳೂ ವೈವಿಧ್ಯಮಯವಾಗಿರುತ್ತವೆ. ಆ ಬಗೆಯ ತುಲನಾತ್ಮಕ ಅಧ್ಯಯನಕ್ಕೆ ಹರನ್ ಅವರ ಕ್ಷೇತ್ರಕಾರ್ಯದ ಸಂದರ್ಶನ ಬರಹಗಳು ಪ್ರೇರಣೆ ನೀಡುವುದರಲ್ಲಿ ಸಂಶಯವಿಲ್ಲ.

ಅಮೇರಿಕೆಗೆ ತಮ್ಮ ಮಡದಿಯೊಡನೆ ಮಗಳ ಮನೆಗೆ ಹೋದರೂ 'ಸದಾಶಿವನಿಗೆ ಅದೇ ಧ್ಯಾನ' ಎಂಬ ಗಾದೆಯಂತೆ ಪ್ರಣತಾರ್ತಿಹರನ್ ಅವರಿಗೆ ಕೃಷಿಯದೇ ಸ್ಮರಣೆ, ಕ್ಷೇತ್ರಕಾರ್ಯದ್ದೇ ಚಿಂತನೆ. ಅಲ್ಲಿ ಯಾರಾದರೂ ಕರ್ನಾಟಕದ ಸಂಕೇತಿಗಳು ಕೃಷಿರಂಗದಲ್ಲಿದ್ದಾರೆಯೇ ಎಂದು ಹುಡುಕಾಡಿ ಸಫಲರಾಗಿದ್ದಾರೆ. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಮೂಲದ ಸುಬ್ಬರಾವ್ ಅವರನ್ನು ಸಂಧಿಸಿ, ಅವರ ಸಾಧನೆಸಿದ್ಧಿಗಳನ್ನೆಲ್ಲ ದಾಖಲಿಸಿದ್ದಾರೆ. ಸುಬ್ಬರಾವ್ ಎಂದರೆ ಸಾಮಾನ್ಯರಲ್ಲ. ಅವರೊಬ್ಬ ಕೃಷಿವಿಜ್ಞಾನಿ, ತಮ್ಮ ಹೊಸಹೊಸ ಶೋಧನೆಗಳಿಗಾಗಿ ಅವರು ಜಗತ್ತಿನ ಅತ್ಯಂತ ಶ್ರೇಷ್ಠ ಕೃಷಿವಿಜ್ಞಾನಿಗಳಲ್ಲೊಬ್ಬರಾಗಿ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ ಎಂದರೆ ಅಚ್ಚರಿಯಲ್ಲವೆ! ನಾಲ್ಕನೆಯ ಅಕ್ಕ ವಿಶ್ವಕನ್ನಡ ಸಮ್ಮೇಳನದಲ್ಲಿ ಜೈವಿಕ ಆಹಾರವನ್ನು ಕುರಿತಂತೆ ಸುಬ್ಬರಾವ್ ಮಂಡಿಸಿದ್ದ ಲೇಖನವೊಂದನ್ನು ಅನುವಾದ ಮಾಡಿಸಿ, ಅದನ್ನು ಅವರ ಸಂದರ್ಶನದ ಬೆನ್ನಿಗೇ ಜೋಡಿಸಿದ್ದಾರೆ. ರಾಸಾಯನಿಕ ಗೊಬ್ಬರಗಳನ್ನೂ ಕೀಟನಾಶಕಗಳನ್ನೂ ಬಳಸದೆ ಬೆಳೆದ ಆಹಾರಪದಾರ್ಥಗಳನ್ನು ಜೈವಿಕ ಆಹಾರ ಎನ್ನುತ್ತಾರೆ. ಸಾವಯವಕೃಷಿ ಎಂದು ಹೇಳಬಹುದಾದ ಆ ಜೈವಿಕ ಕೃಷಿಯ ಸಾಧಕಬಾಧಕಗಳ ನಿರೂಪಣೆ ಆ ಲೇಖನದಲ್ಲಿದ್ದು, ಅದು ನಮ್ಮ ಕೃಷಿಕರಿಗೂ ಅತ್ಯಂತ ಪ್ರಯೋಜನಕಾರಿಯಾಗಿದೆ.

ದೀದಾರ್‌ಸಿಂಗ್ ಮತ್ತು ಚರನ್‌ಜಿತ್‌ಸಿಂಗ್

ಅಮೆರಿಕೆಗೆ ಹೋದ ಕೆಲವು ಭಾರತೀಯರು ಅಲ್ಲಿ ಕೃಷಿಗೆ ತಮ್ಮನ್ನು ಸಮರ್ಪಿಸಿಕೊಂಡು 'ನ ಭೂತೋ ನ ಭವಿಷ್ಯತಿ' ಎಂಬಂತೆ ಮೇಲೇರಿದ ವೃತ್ತಾಂತಗಳ ಸುಬ್ಬರಾಯರ ನಿರೂಪಣೆ ಅತ್ಯಂತ ರೋಚಕವಾಗಿದೆ. ಪೀಚ್ ಎಂದು ಕರೆಯುವ ಒಂದು ಜಾತಿಯ ಹಣ್ಣಿನ ತೋಟಕ್ಕೆ ನೀರು ಹಾಕುವ ಕೂಲಿಕಾರನಾಗಿ ದೀದಾರ್‌ಸಿಂಗ್ ಕೆಲಸ ಮಾಡುತ್ತಿದ್ದ. ತನ್ನ ಯಜಮಾನ ಆ ತೋಟವನ್ನು ಮಾರಾಟಕ್ಕಿಟ್ಟಾಗ, ತಾನು ಗಳಿಸಿದ ಹಣದಿಂದ ಆ ತೋಟವನ್ನು ತಾನೇ ಕೊಂಡುಕೊಂಡನು. ತರುವಾಯದಲ್ಲಿ ದೂರದೂರದ ಊರುಗಳಲ್ಲಿ ಪೀಚ್‌ತೋಟಗಳನ್ನು ಕೊಂಡು ಬೆಳೆಸಿದ ಅವನು, ಮೇಲುಸ್ತುವಾರಿ ನೋಡಲು ಒಂದು ತೋಟದಿಂದ ಇನ್ನೊಂದು ತೋಟಕ್ಕೆ ತನ್ನದೇ ಆದ ವಿಮಾನದಲ್ಲಿ

ಓಡಾಡುತ್ತಾನೆ; ಅವನು ಪ್ರಸ್ತುತದಲ್ಲಿ ಜಗತ್ತಿನ ಅತಿಹೆಚ್ಚು ಪೀಚ್ ಹಣ್ಣನ್ನು ಬೆಳೆಯುವ ರೈತರ ಅಗ್ರಪಂಕ್ತಿಯಲ್ಲಿದ್ದಾನೆ ಎಂದರೆ ನಂಬಲು ಸಾಧ್ಯವೆ ! ಅವನಂತೆಯೇ ಇನ್ನೊಬ್ಬ ಸಾಹಸಿ ಚರನ್‌ಜಿತ್‌ಸಿಂಗ್. ದ್ರಾಕ್ಷಿತೋಟದ ಕೂಲಿಕಾರನಾಗಿ ಹೋದವನು, ತಾನೇ ತೋಟಗಳನ್ನು ಖರೀದಿಸಿ, ಇಂದು ಜಗತ್ತಿನ ಅತಿಹೆಚ್ಚು ಒಣದ್ರಾಕ್ಷಿ ಉತ್ಪಾದಿಸುವವರ ಸಾಲಿನಲ್ಲಿ ಒಬ್ಬನಾಗಿದ್ದಾನೆ; ೧೪,೪೦೦ ಎಕರೆ ದ್ರಾಕ್ಷಿತೋಟಗಳ ಮಾಲೀಕನಾಗಿದ್ದಾನೆ ಎಂದರೆ ನಂಬಬಹುದೆ! ಅಮೆರಿಕ ಮತ್ತು ಭಾರತದ ನಡುವಣ ಕೃಷಿರಂಗದ ಅನೇಕ ಸ್ವಾರಸ್ಯಕರ ತೌಲನಿಕ ವಿಚಾರಗಳನ್ನು ಸುಬ್ಬರಾವ್ ಅವರಿಂದ ಕೇಳಿ ತಿಳಿದು, ಪ್ರಣತಾರ್ತಿಹರನ್ ಅವರು ಸಂಗ್ರಹಿಸಿರುವುದು ಅತ್ಯಮೂಲ್ಯವಾದ ದಾಖಲೀಕರಣವಾಗಿದೆ. ಹೀಗೆ ನಂಬಲಸಾಧ್ಯವಾದ ಅಚ್ಚರಿಗಳನ್ನು ಕನ್ನಡಿಗರಿಗೆ ದೊರಕಿಸಿಕೊಟ್ಟಿರುವ ಹರನ್ ಅವರನ್ನು ಎಷ್ಟೆಷ್ಟು ಅಭಿನಂದಿಸಿದರೂ ಸಾಕಾಗುವುದಿಲ್ಲ.

ಮತ್ತಷ್ಟು ಸಾಹಸಿ ಕೃಷಿಕರು

ಬಾಬು ಎಂದು ಪ್ರೀತಿಯಿಂದ ಕರೆಯುವ ಮೈಸೂರಿನ ಎಸ್.ಕೆ. ಲಕ್ಷ್ಮೀನಾರಾಯಣ ಅವರು ಮುದ್ರಣೋದ್ಯಮದಿಂದ ಕೃಷಿಗೆ ಹೊರಳಿಕೊಂಡ ಪ್ರಸಂಗ ಅತ್ಯಂತ ರೋಚಕವಾಗಿದೆ. ಹನ್ನೆರಡು ಎಕರೆ ಭೂಮಿಯನ್ನು ಕೊಂಡು, ಸಾವಯವ ಕೃಷಿಗೆ ಒತ್ತುಕೊಟ್ಟು ತೆಂಗು, ಬಾಳೆ, ಕಬ್ಬು, ಬತ್ತ, ತರಕಾರಿಗಳು ಮುಂತಾದ ಬೇಕುಬೇಕಾದ್ದನ್ನು ಸಮೃದ್ಧವಾಗಿ ಬೆಳೆಯುತ್ತಿದ್ದಾರೆ. ಹಿಂದುಳಿದ ಜಾತಿವರ್ಗಗಳ ಮಕ್ಕಳ ಬಗ್ಗೆ ಕರುಣೆದೋರಿ ಅವರಿಗೆ ಕಂಪ್ಯೂಟರ್ ವಿದ್ಯೆ, ಮುದ್ರಣಕಾರ್ಯ, ಜೆರಾಕ್ಸ್‌ಕಾರ್ಯ, ವಾಹನಚಾಲನೆ ಮುಂದಾದುವುಗಳನ್ನು ಕಲಿಸಿಕೊಟ್ಟು, ಹಲವು ಹತ್ತು ಕುಟುಂಬಗಳನ್ನು ಸ್ವಾವಲಂಬಿಯಾಗುವಂತೆ ಮೇಲೆ ತಂದಿದ್ದಾರೆ. 'ನಾನು ಕೃಷಿಕನಾದುದರಿಂದ ಇದೆಲ್ಲ ಸಾಧ್ಯವಾಯಿತು' ಎಂಬ ಅವರ ಮಾತಿನಲ್ಲಿ ಕೃಷಿಯ ಅಂತಃಶಕ್ತಿಯು ವ್ಯಕ್ತವಾಗಿದೆ.

ನಮ್ಮ ನಾಡಿನ ಸುಪ್ರಸಿದ್ಧ ಗಮಕ ವಿದ್ವನ್ಮಣಿಗಳಾದ ಬಿ.ಎಸ್.ಎಸ್. ಕೌಶಿಕ್ ಅವರ ಸುಪುತ್ರ ಎಂ.ಡಿ. ಕೌಶಿಕ್ ಅವರು ಚಲನಚಿತ್ರ ನಿರ್ದೇಶಕರಾಗಿ, ಹಲವು ಧಾರಾವಾಹಿಗಳ ನಾಯಕನಟರಾಗಿ ಮೇಲೆ ಬಂದ ಸಂಗತಿ ಸಾಮಾನ್ಯವಾದುದಲ್ಲ. ಅವರ ನಿರ್ದೇಶನದ ಕೆಲವು ಚಿತ್ರಗಳು ರಾಜ್ಯಪ್ರಶಸ್ತಿ, ರಾಷ್ಟ್ರಪ್ರಶಸ್ತಿಗಳನ್ನು ಗೆದ್ದುಕೊಂಡಿವೆ. ಅವರು ಕೃಷಿಗೆ ಮನಸ್ಸುಕೊಟ್ಟು, ಬೆಂಗಳೂರು ಹೊರವಲಯದಲ್ಲಿ ನಾಲ್ಕು ಎಕರೆ ಬೆಂಗಾಡು ಭೂಮಿಯನ್ನು ಖರೀದಿಸಿ, ಅದನ್ನು ನಂದನವನವಾಗುವಂತೆ ಮಾಡಿದ್ದು ಪವಾಡಸದೃಶವಾದ ಘಟನೆಯಲ್ಲದೆ ಬೇರೆಯಲ್ಲ. ಅಷ್ಟಕ್ಕೇ ತೃಪ್ತರಾಗದೆ ಆ ತೋಟದಲ್ಲಿ ತಮ್ಮ ಚಿತ್ರರಂಗದ ಗುರುಗಳಾದ ಪುಟ್ಟಣ್ಣ ಕಣಗಾಲ್ ಅವರ ಹೆಸರಿನಲ್ಲಿ ಸ್ಟುಡಿಯೋ ನಿರ್ಮಿಸಿ ಕೀರ್ತಿಸಂಪನ್ನರಾಗಿದ್ದಾರೆ. ಕೃಷಿಯಲ್ಲಿ ಜಯವಂತರಾದುದೇ ಅವರು ಸ್ಟುಡಿಯೋ ನಿರ್ಮಿಸಿ ಯಶಸ್ವಿಯಾಗಲು ಕಾರಣವಾಯಿತೆಂದರೆ ಅದು ಅತಿಶಯೋಕ್ತಿಯಲ್ಲ. ಕೃಷಿಕರಾಗಬಯಸುವವರಿಗೆ ಅವರು ಕೊಟ್ಟಿರುವ ಒಂದಲ್ಲ, ಎರಡಲ್ಲ, ಇಪ್ಪತ್ತಮೂರು ಸಲಹೆಗಳನ್ನು ಹರನ್ ಅವರು ಅಚ್ಚುಕಟ್ಟಾಗಿ ದಾಖಲಿಸಿದ್ದಾರೆ. ಎನ್. ಸುಬ್ಬರಾವ್ ಎಂಬುವವರು ಬೆಂಗಳೂರಿನ ತಮ್ಮ ಮನೆಯನ್ನು ಲತಾಗೃಹವೆಂಬಂತೆ, ಸಸ್ಯೋದ್ಯಾನವೆಂಬಂತೆ ಅತ್ಯಾಧುನಿಕವಾಗಿ ಅಲಂಕರಿಸಿರುವುದು ಸಂಕೇತಿಗಳ ಕೃಷಿಪ್ರೇಮಕ್ಕೆ ಅತ್ಯಂತ ಶ್ರೇಷ್ಠವಾದ ಉದಾಹರಣೆಯಾಗಿದೆ.

ಮೂಲತಃ ಹಾಸನಜಿಲ್ಲೆಯ ಮೊಸಳೆ ಎಂಬ ಗ್ರಾಮದ ಲಕ್ಷ್ಮೀಕಾಂತಯ್ಯನವರು ಕಗ್ಗಾಡಾಗಿದ್ದ ಬೆಂಗಳೂರಿನ ಪದ್ಮನಾಭನಗರದ ಮಧ್ಯದ ದೇವರಗುಡ್ಡವನ್ನು ನಿಜವಾದ ಅರ್ಥದಲ್ಲಿಯೂ ದೇವರಗುಡ್ಡವನ್ನಾಗಿ ಪರಿವರ್ತಿಸಿದ ಕಥೆ ರೋಮಾಂಚಕಾರಿಯಾಗಿದೆ. ಕನ್ನಡಪಂಡಿತರಾಗಿದ್ದ ಅವರಿಗೆ ಚಿಕ್ಕಮಗಳೂರು ಜಿಲ್ಲೆಯ ಕಡೂರತಾಲ್ಲೂಕಿನ ಲಕ್ಷ್ಮೀಕಾಂತಸ್ವಾಮಿ ಮನೆದೇವರಾಗಿದ್ದನು. ಒಂದೂವರೆ ಎಕರೆ ವಿಸ್ತೀರ್ಣದ ಆ ಕಲ್ಲುಮೊರಡಿಯನ್ನು ತಾವೇ ಹದಗೊಳಿಸಿ, ಅಲ್ಲಿ ಲಕ್ಷ್ಮೀಕಾಂತದೇವಾಲಯವೊಂದನ್ನು ಕಟ್ಟಿ, ಅದರ ಸುತ್ತ ಹೂದೋಟವೊಂದನ್ನು ಎಬ್ಬಿಸಿ ಕೃತಕೃತ್ಯರಾಗಿದ್ದಾರೆ.

ಅವರ ಸುಪುತ್ರಿ ಡಾ. ಲಲಿತಮ್ಮ ಆ ಬೆಳವಣಿಗೆಯ ದಿಕ್ಕಿನಲ್ಲಿ ಇನ್ನಷ್ಟು ಮುಂದೆ ಸಾಗಿದ್ದಾರೆ. ಗುಡ್ಡವನ್ನೇ ಮತ್ತಷ್ಟು ವಿಸ್ತರಿಸಿ ಅಲ್ಲಿ 'ಆರೋಗ್ಯವನ'ವೊಂದನ್ನು ನಿರ್ಮಿಸಿರುವುದು ಭಗೀರಥ ಸಾಹಸಗಾಥೆಯಲ್ಲದೆ ಬೇರೆಯಲ್ಲ. ಕದಂಬವನ, ಬಿಲ್ವವನ, ಮೂಲಿಕಾವನ, ಅಶ್ವತ್ಥವನ, ಪಂಚವಟಿ ಮುಂತಾದುವನ್ನೆಲ್ಲ ಅಲ್ಲಿ ಬೆಳೆಸಿ, ಲಲಿತಮ್ಮನವರು ಜಗತ್ತಿನ ಗಮನವನ್ನೇ ಸೆಳೆದಿದ್ದಾರೆ.

ಹಳ್ಳಿಗಳಲ್ಲಿ ನೆಲೆಸಿರುವ ಸಂಕೇತಿಗಳು ಹಿತ್ತಿಲತೋಟಗಳನ್ನು ಬೆಳೆಸುವುದು ಹಿಂದಿನಿಂದಲೂ ನಡೆದುಬಂದಿದೆ. ಅದೇ ಸಂಕೇತಿಗಳು ನಗರಗಳಿಗೆ ಬಿದ್ದಮೇಲೆ, ಮುಂಬಾಗಿಲ ತೋಟಗಳನ್ನು ಬೆಳೆಸುವ ಕ್ರಮವನ್ನು ರೂಢಿಸಿಕೊಂಡಿದ್ದಾರೆ. ಹಳ್ಳಿಮೈಸೂರು ಮೂಲದ ರಾಮಚಂದ್ರಯ್ಯನವರು ಮೈಸೂರಿನಲ್ಲಿ ನೆಲೆನಿಂತು ತಮ್ಮ ಮನೆಯ ಮುಂದೆ ತೆಂಗು, ಅಡಕೆ, ವೀಳ್ಯದೆಲೆಗಳನ್ನು ಬೆಳೆಸಿ ಯಶಸ್ವಿಯಾಗಿದ್ದಾರೆ. ಹಾಸನ, ಬೆಂಗಳೂರುಗಳಲ್ಲೂ ಕೆಲವು ಸಂಕೇತಿಗಳು ಈ ಬಗೆಯ ಕೃಷಿಪ್ರೇಮವನ್ನು ಅನಾಯಾಸವಾಗಿ ಮೆರೆದಿದ್ದಾರೆ.

ಸಂಕೇತಿಗಳ ಪೂರ್ವೇತಿಹಾಸ

ಸಂಕೇತಿಗಳ ಪೂರ್ವೇತಿಹಾಸವನ್ನು ಗ್ರಂಥವಾಗಿ ಬರೆದವರಲ್ಲಿ ಎಂ. ಕೇಶವಯ್ಯನವರು ಮೊದಲಿಗರೆನಿಸಿದ್ದಾರೆ. Life of Nacharamma: History of Her Migration ಎಂಬ ಹೆಸರಿನಲ್ಲಿ ಆಂಗ್ಲದಲ್ಲೂ 'ಶ್ರೀನಾಚಾರಮ್ಮನ ಜೀವನ ಚರಿತ್ರೆ: ಆಕೆಯ ಪ್ರವಾಸ' ಎಂಬ ಹೆಸರಿನಲ್ಲಿ ಕನ್ನಡದಲ್ಲೂ ಅವರ ಕೃತಿಗಳಿವೆ. ವಿಜಯಾಹರನ್ ಅವರು ಆ ಕೃತಿಗಳಿಂದ ಸಂಕೇತಿಗಳ ವಲಸೆಗೆ, ಅವರ ಕೃಷಿಜೀವನಕ್ಕೆ ಸಂಬಂಧಿಸಿದ ಸಾರವತ್ತಾದ ವಾಕ್ಯಪುಂಜಗಳನ್ನು ಎತ್ತಿಕೊಟ್ಟಿದ್ದಾರೆ. ಸುಧಾಮಣಿಯವರ ಆಂಗ್ಲ ಲೇಖನದಲ್ಲಿಯೂ ಈ ಸಂಗತಿಗಳು ನಿರೂಪಿತವಾಗಿವೆ. ಕೆಲವು ಸಂದರ್ಶನಗಳಲ್ಲಿಯೂ ಸಂಕೇತಿಗಳ ಪೂರ್ವೇತಿಹಾಸದ ಸುಳುಹುಗಳಿವೆ.

ಕನ್ನಡ ನಾಡಿನ ಬ್ರಾಹ್ಮಣ ಸಮುದಾಯಗಳಲ್ಲೊಂದಾದ ಸಂಕೇತಿಗಳು ಸು. ೯೦೦ ವರ್ಷಗಳ ಹಿಂದೆ ತಮಿಳುನಾಡಿನಿಂದ ವಲಸೆ ಬಂದು ನೆಲೆಗೊಂಡವರಾಗಿದ್ದಾರೆ. ಅಲ್ಲಿ ಅವರು ಶೆಂಕೋಟ್ಟೈ, ಮಧುರೈ, ಕಂಚಿ ಮುಂತಾದ ಊರುಗಳಲ್ಲಿ ವಾಸವಾಗಿದ್ದರು. ಅವರು ಕನ್ನಡ ನಾಡಿಗೆ ಬಂದುದೇಕೆ ಎಂಬುದಕ್ಕೆ ಹೃದಯಸ್ಪರ್ಶಿಯಾದ ಐತಿಹ್ಯವೊಂದು ವ್ಯಾಪಕವಾಗಿ ಪ್ರಚಾರದಲ್ಲಿದೆ. ತಿರುನೆಲ್ವೇಲಿ ಜಿಲ್ಲೆಯ ಆಳ್ವಾರ್‌ಕುರುಚಿ ಎಂಬುದು ಅಂದಿನ ಕಾಲಕ್ಕೆ ಪ್ರಸಿದ್ಧವಾದೊಂದು ಬ್ರಾಹ್ಮಣ ಅಗ್ರಹಾರವಾಗಿತ್ತು. ಅಲ್ಲಿನ ಬ್ರಾಹ್ಮಣ ಸಮುದಾಯದಲ್ಲಿ ಆರ್ಯಶರ್ಮನೂ ಒಬ್ಬನಾಗಿದ್ದನು. ನಾಚಾರಮ್ಮ ಎಂಬ ಸಾಧ್ವಿಯು ಅವನ ಮಡದಿಯಾಗಿದ್ದಳು. ಆ ದಂಪತಿಗಳಿಗೆ ಒಬ್ಬನೇ ಮಗನಿದ್ದನು. ಆ ಕುಟುಂಬವು ಕ್ರೂರವಾದ ಬಡತನಕ್ಕೆ ತುತ್ತಾಗಿ ಸಂಕಟವನ್ನು ಅನುಭವಿಸುತ್ತಿತ್ತು. ಜ್ಯೋತಿಷ್ಮತಿ ಎಂಬ ತೈಲವನ್ನು ಸೇವಿಸಿದರೆ ಬುದ್ಧಿಬಲವು ಅತಿಶಯವಾಗಿ ತೋರಿಕೊಳ್ಳುತ್ತದೆ ಎಂಬ ವಿಚಾರ ಆ ದಂಪತಿಗಳಿಗೆ ತಿಳಿದಿತ್ತು. ಆ ಬುದ್ಧಿಶಕ್ತಿಯ ಆಸರೆಯಿಂದಲಾದರೂ ತಮ್ಮ ಸಂತತಿಯ ಬಡತನವನ್ನು ನೀಗಿಕೊಳ್ಳಬೇಕೆಂದು ಅವರು ನಿರ್ಧರಿಸಿದರು. ಬಲ್ಲವರನ್ನು ಮುಂದಿಟ್ಟುಕೊಂಡು ಜ್ಯೋತಿಷ್ಮತಿ ತೈಲವನ್ನು ಸಿದ್ಧಪಡಿಸಿದರು. ಹೋಮಹವನಾದಿಗಳನ್ನು ಮಾಡಿ, ಆ ತೈಲವನ್ನು ದೇವತೆಗಳಿಗೆ ನೈವೇದ್ಯಮಾಡಿ, ಬಳಿಕ ತಾವು ಸೇವಿಸಿದರು. ಆ ತೈಲವನ್ನು ಪಾನಮಾಡಿದ ಎಲ್ಲರೂ ಜ್ಞಾನಿಗಳಾಗುತ್ತಾರೆಂದು ನಿರೀಕ್ಷಿಸುವಂತಿರಲಿಲ್ಲ. ಪಾನಮಾಡಿದ ಮೂವರಲ್ಲಿ ಒಬ್ಬರು ಜ್ಞಾನಿಗಳಾಗುತ್ತಾರೆ, ಒಬ್ಬರು ಹುಚ್ಚರಾಗುತ್ತಾರೆ, ಒಬ್ಬರು ಸಾವನ್ನಪ್ಪುತ್ತಾರೆ ಎಂಬ ವಿಚಾರವೂ ಪ್ರಚಲಿತವಾಗಿತ್ತು. 'ನಾವು ಸತ್ತರೇನು, ಹುಚ್ಚರಾದರೇನು, ಜ್ಞಾನಿಯಾಗುವ ಪುಣ್ಯ ನಮ್ಮ ಮಗನಿಗೇ ಪ್ರಾಪ್ತವಾಗಲಿ' ಎಂದು ಅವರು ಧೈರ್ಯಮಾಡಿ ತೈಲವನ್ನು ಸ್ವೀಕರಿಸಿದ್ದರು. ಆದರೆ ಪರಮಾತ್ಮನ ಇಚ್ಛೆಯೇ ಬೇರೆಯಾಗಿತ್ತು. ಆ ತೈಲದ ಪ್ರಭಾವದಿಂದ ಕುಟುಂಬದ ಕಣ್ಣಾಗಿದ್ದ ಮಗನೇ ತೀರಿಹೋದನು. ಆರ್ಯಶರ್ಮನು ಹುಚ್ಚನಾಗಿ ಎತ್ತಲೋ

ಓಡಿಹೋದನು. ನಾಚಾರಮ್ಮನಿಗೆ ಜ್ಞಾನಿಯಾಗುವ ಸರದಿ ಕೂಡಿಬಂದಿತು. ಆದರೆ ಅದಕ್ಕೂ ಮುನ್ನ ಆ ತೈಲವು ದೇಹಾದ್ಯಂತ ಅವಳಿಗೆ ಅಸಹನೀಯವಾದ ಉರಿಯನ್ನು ಉಂಟುಮಾಡಿತು. ಅದರ ಜೊತೆಗೆ ಪುತ್ರನ ಮರಣ, ಗಂಡನು ಹುಚ್ಚನಾಗಿ ಓಡಿಹೋದುದು, ಅವಳ ಸಂಕಟವನ್ನು ನೂರ್ಮಡಿಗೊಳಿಸಿದವು. ತಾನಿನ್ನು ಬದುಕಿ ಫಲವೇನು ಎಂದು ಅವಳು ಅಲ್ಲಿಯೇ ಇದ್ದ ಬಾವಿಗೆ ಮಗುಚಿಕೊಂಡಳು. ಎಲ್ಲವೂ ದೈವೇಚ್ಛೆಯಂತೆ ನಡೆಯುತ್ತಿರುವಾಗ ಸಾಯಲು ನಾವಾರು, ಬದುಕಲು ನಾವಾರು! ಅಗ್ರಹಾರದ ಬ್ರಾಹ್ಮಣರು ಓಡಿಬಂದು ಅವಳನ್ನು ಬಾವಿಯಿಂದ ಮೇಲೆತ್ತಿ ತಂದರು.

ಬಾವಿಯಿಂದ ಮೇಲೆ ಬಂದನಂತರ ತೈಲದ ಪ್ರಭಾವವು ಶಾಂತವಾಗಿ ಉರಿಯು ಹತೋಟಿಗೆ ಬಂದಿತು. ಅವಳ ಮುಖವು ದಿವ್ಯಕಾಂತಿಯಿಂದ ದೇದೀಪ್ಯಮಾನವಾಯಿತು. ಅವಳ ಮನೋಧರ್ಮವೇ ಬದಲಾಗಿಹೋಯಿತು. ಅವಿದ್ಯಾವತಿಯಾಗಿದ್ದ ಅವಳಿಗೆ ಅಧ್ಯಯನಯೋಗ್ಯವಾದ ಅನೇಕ ಶಾಸ್ತ್ರಗಳು ಮುಖೋದ್ಗತವಾಗಿಬಿಟ್ಟುವು. ಅವಳ ತೇಜಸ್ಸನ್ನೂ ಪ್ರತಿಭೆಯನ್ನೂ ಕಂಡು ಅಗ್ರಹಾರದ ಬ್ರಾಹ್ಮಣರು ಅಪ್ರತಿಭರಾಗಿ ಬಿಟ್ಟರು. ಆಕೆಯ ವಿದ್ವತ್ತಿನ ಮುಂದೆ ತಾವೆಲ್ಲರೂ ತಲೆತಗ್ಗಿಸಬೇಕಾಗುತ್ತದೆ ಎಂಬ ಆತಂಕ ಅವರನ್ನು ಕಾಡತೊಡಗಿತು. 'ಯಾವ ವಿಚಾರದಲ್ಲಾದರೂ ಸರಿಯೆ, ನೀವು ನನ್ನೊಡನೆ ವಾದಮಾಡಬಹುದು' ಎಂದು ನಾಚಾರಮ್ಮ ಅಗ್ರಹಾರದ ವಿದ್ವಾಂಸರಿಗೆ ಆಹ್ವಾನ ನೀಡಿದಳು. 'ನಿನ್ನ ಮಗನ ಉತ್ತರ ಕ್ರಿಯಾದಿಗಳು ಪೂರ್ಣವಾಗಲಿ, ಆಮೇಲೆ ವಾದ ಮಾಡೋಣ' ಎಂದು ಹೇಗೋ ಅವರು ತಪ್ಪಿಸಿಕೊಂಡರು.

'ನಾಚಾರಮ್ಮನು ಈ ಅಗ್ರಹಾರದಲ್ಲಿದ್ದರೆ ತಮಗೆ ಉಳಿಗಾಲವಿಲ್ಲ, ಅವಳನ್ನು ಹೇಗಾದರೂ ಅವಮಾನಿಸಿ ಇಲ್ಲಿಂದ ಅಟ್ಟಿಬಿಡೋಣ' ಎಂದು ಆ ವಿದ್ವಾಂಸರು ಸಂಚೊಂದನ್ನು ರೂಪಿಸಿದರು. ಮಗನ ಉತ್ತರಕ್ರಿಯೆಯ ಅಂಗವಾದ ಬ್ರಾಹ್ಮಣ ಸಂತರ್ಪಣೆಯ ದಿನ ನಾಚಾರಮ್ಮನಿಗೊಂದು ಸೀರೆಯನ್ನು ಸಮರ್ಪಿಸಿ 'ಇದನ್ನು ನೀನು ಉಟ್ಟುಕೋ ತಾಯಿ, ಸಂತರ್ಪಣೆಯಲ್ಲಿ ನೀನೇ ತುಪ್ಪಬಡಿಸಬೇಕು' ಎಂದು ಉಪಾಯವಾಗಿ ಹೇಳಿದರು. ಪ್ರತಿಭಾವಿಲಾಸದಲ್ಲಿಯೇ ಮುಳುಗಿದ್ದ ಅವಳಿಗೆ ವಿದ್ವಾಂಸರ ಸಂಚು ಗೋಚರಿಸಲಿಲ್ಲ. ತುಪ್ಪಬಡಿಸುವಾಗ ನಾಚಾರಮ್ಮನು ಉಟ್ಟಿದ್ದ ಸೀರೆ ಕಳಚಿಹೋಗಿ ಅಪಮಾನಕ್ಕೆ ತುತ್ತಾಗಿಬಿಟ್ಟಳು. ಒಡನೆಯೆ ಅದನ್ನು ವಿಶೇಷವಾದ ರೀತಿಯಲ್ಲಿ ಗಂಟುಬಿಗಿದು ಉಟ್ಟು, ಸರಿಪಡಿಸಿಕೊಂಡಳು. ಬಳಪದಕಲ್ಲಿನಪುಡಿ, ಕುಂಕುಮ ಮೊದಲಾದ ನುಣಪಾದ ದ್ರವ್ಯಗಳನ್ನು ಆ ಸೀರೆಗೆ ಲೇಪಿಸಿ ಒಣಗಿಸಿದ್ದರು. ಅದೇ ಕಾರಣವಾಗಿ ಅದು ಭದ್ರವಾಗಿ ನಿಲ್ಲದೆ ಜಾರಿತು. ವಿದ್ವಾಂಸರು ಮಾಡಿದ ಕುತಂತ್ರವು ಅವಳಿಗೆ ಅರ್ಥವಾಯಿತು. ಕ್ರೋಧಪರವಶಳಾದ ಅವಳು ಆ ಬ್ರಾಹ್ಮಣಸಮುದಾಯವನ್ನು ಉದ್ದೇಶಿಸಿ 'ನಿಮ್ಮನ್ನು ಅಲ್ಪಾಯುಷ್ಯ, ಸಂತಾನಹೀನತೆ, ದಾರಿದ್ರ್ಯ, ಜಗಳಗಂಟಿತನ ಮುಂತಾದ ಸಂಕಟಗಳು ಕಾಡಲಿ' ಎಂದು ಶಪಿಸಿಬಿಟ್ಟಳು. ಆ ಹೊತ್ತಿನಲ್ಲಿ ಅವಳುಟ್ಟ ಸೀರೆಯ ಶೈಲಿ 'ಗಂಡಿಸೀರೆ' ಎಂದು ಪ್ರಸಿದ್ಧವಾಯಿತು.

ಅವಳ ಶಾಪವಾಕ್ಯಗಳನ್ನು ಕೇಳಿ ಎಲ್ಲರೂ ಕಂಗಾಲಾಗಿಬಿಟ್ಟರು. ಸಾಕ್ಷಾತ್ ದುರ್ಗಾದೇವಿಯೇ ನಾಚಾರಮ್ಮನ ರೂಪದಲ್ಲಿ ತಮ್ಮ ಮುಂದೆ ನಿಂತಿದ್ದಾಳೆ ಎಂಬಂತೆ ಅವರಿಗೆ ಭಾಸವಾಯಿತು. 'ನಮ್ಮಿಂದ ಎಂತಹ ಘೋರ ಅಪರಾಧ ನಡೆದುಹೋಯಿತು' ಎಂದು ಅವರೆಲ್ಲರೂ ಪಶ್ಚಾತ್ತಾಪದಿಂದ ಬೆಂದುಹೋದರು. ಆಗಿಂದಾಗಲೇ ನಾಚಾರಮ್ಮನ ಪಾದಗಳಿಗೆ ಬಿದ್ದು 'ನೀನೇ ನಮಗೆ ತಾಯಿ, ನೀನೇ ನಮಗೆ ಗುರು, ನೀನೇ ನಮ್ಮ ಕುಲದೇವತೆ, ನಮ್ಮ ಅಪರಾಧವನ್ನು ಮನ್ನಿಸು, ನಮ್ಮನ್ನು ಕಾಪಾಡು' ಎಂದು ದೀನರಾಗಿ ಮೊರೆಯಿಟ್ಟರು. ನಾಚಾರಮ್ಮನು ಶಾಂತಳಾದಳು. ಅವಳ ಹೃದಯವೂ ಆ ಮೊರೆಯಿಂದ ಕರಗಿತು. ಆದರೆ ಏನೂ ಮಾಡುವಂತಿರಲಿಲ್ಲ. 'ನಾನೇನೂ ಮಾಡಲಾರೆ, ಶಾಪವಾಕ್ಯವು ಪರಮಾತ್ಮನ ಇಚ್ಛೆಯಂತೆ ಹೊರಬಿದ್ದಿದೆ. ಸುಂದರವಾದ ಈ ಗ್ರಾಮವು ಕೂಡ ಮುಂದೆ ನಾಶವಾಗುತ್ತದೆ. ನನಗೂ ಇಲ್ಲಿ ವಾಸಮಾಡಲು ಇಷ್ಟವಿಲ್ಲ. ಮನಬಂದತ್ತ ಹೊರಟುಹೋಗುತ್ತೇನೆ. ಇಷ್ಟವಿದ್ದವರು ನನ್ನನ್ನು ಹಿಂಬಾಲಿಸಿ ಬರಬಹುದು' ಎಂದು ಘೋಷಿಸಿ

ನಡೆದೇಬಿಟ್ಟಳು. ಆಳ್ವಾರ್‌ಕುರುಚಿ ಮಾತ್ರವಲ್ಲದೆ ಶೆಂಕೋಟ್ಟೈ, ಮಧುರೆ, ಕಂಚಿ ಮುಂತಾದ ಊರುಗಳಿಂದಲೂ ಬಂದ ಸರಿಸುಮಾರು ಏಳುನೂರು ಬ್ರಾಹ್ಮಣ ಕುಟುಂಬಗಳು ಅವಳನ್ನು ಅನುಸರಿಸಿ ನಡೆದುವು. 'ನಾಚಾರಮ್ಮನಿದ್ದಲ್ಲಿ ನಮಗೆ ರಕ್ಷಣೆಯಿರುತ್ತದೆ' ಎಂದು ಆ ಜನರು ಭಾವಿಸಿದರು. ಊರು ಬಿಡಲಾರದೆ ಅದೆಷ್ಟೋ ಕುಟುಂಬಗಳು ಅಲ್ಲಿಯೇ ಉಳಿದುವು.

ಕಾವೇರಿನದಿಯ ಹರಿವನ್ನೇ ಅನುಸರಿಸಿ ಶಿವನಸಮುದ್ರದ ಮಾರ್ಗವಾಗಿ ಕರ್ನಾಟಕವನ್ನು ಪ್ರವೇಶಿಸಿದ ಆ ಬ್ರಾಹ್ಮಣರಲ್ಲಿ ಕೆಲವರು ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರದ ಕಾವೇರಿತೀರದ ಹೆಮ್ಮಿಗೆ ಎಂಬ ಗ್ರಾಮದಲ್ಲಿ ನೆಲೆಸಿದರು. ತರುವಾಯ ಅವರು ಶ್ರೀವೈಷ್ಣವರಾದರು. ಬಳಿಕ ಮುಂದೆ ಸಾಗುತ್ತ ಹಾಸನಜಿಲ್ಲೆಯ ಕೌಶಿಕ ಎಂಬ ಗ್ರಾಮದಲ್ಲಿ ದೊಡ್ಡ ಸಮುದಾಯವೊಂದು ನೆಲೆಗೊಂಡಿತು. ಸಂಕೇತಿಗಳು ಎಂದು ಕರೆಯಲ್ಪಡುತ್ತಿದ್ದ ಆ ಬ್ರಾಹ್ಮಣರೆಲ್ಲರೂ ಕಾಲಾಂತರದಲ್ಲಿ ಶಿವಮೊಗ್ಗಜಿಲ್ಲೆಯ ಮತ್ತೂರು, ಚಿಕ್ಕಮಗಳೂರುಜಿಲ್ಲೆಯ ಲಿಂಗದಹಳ್ಳಿ ಮೊದಲಾದ ಹಲವಾರು ಗ್ರಾಮಗಳತ್ತ ಪ್ರಯಾಣ ಮಾಡಿ ಅಲ್ಲಲ್ಲಿ ಚೆದುರಿನೆಲೆಸಿದರು. ಮತ್ತೆ ಹನ್ನೆರಡು ವರ್ಷಗಳ ತರುವಾಯ ಸುಮಾರು ಮುನ್ನೂರು ಕುಟುಂಬಗಳು ಶೆಂಕೋಟ್ಟೈ ಮುಂತಾದ ಪ್ರಾಂತಗಳಿಂದಲೇ ವಲಸೆಬಂದು ಮೈಸೂರು ಜಿಲ್ಲೆಯ ಬೆಟ್ಟದಪುರ ಎಂಬಲ್ಲಿ ತಳವೂರಿದರು. ಪ್ರಾಂತಭೇದದಿಂದಾಗಿ ಕೌಶಿಕಸಂಕೇತಿಗಳು, ಬೆಟ್ಟದಪುರದಸಂಕೇತಿಗಳು ಎಂದು ಅವರು ಎರಡು ಪಂಗಡವಾಗಿ ಬೆಳೆದರು. ಅವರಾಡುವ ಭಾಷೆ ತಮಿಳಿನ ಒಂದು ಉಪಭಾಷಾಸ್ವರೂಪವನ್ನು ತಾಳಿ ಅವರ ಸಂವಹನ ಮಾಧ್ಯಮವಾಯಿತು. ತಮ್ಮ ಮೂಲಸ್ಥಾನದಲ್ಲಿದ್ದಾಗ ವೇದಾಧ್ಯಯನ, ವೈದಿಕವೃತ್ತಿಗಳ ಜೊತೆಗೆ ಕೃಷಿಯನ್ನೂ ಅವಲಂಬಿಸಿದ್ದರು. ಕನ್ನಡನಾಡಿಗೆ ಬಂದ ಮೇಲೂ ಹೆಚ್ಚಿನ ಪ್ರಾಣಿಹಿಂಸೆಯಿಲ್ಲದ, ಅಡಕೆತೆಂಗುಬಾಳೆ ತೋಟಗಳ ಕೃಷಿಕಾರ್ಯವನ್ನು ವೇದಾಧ್ಯಯನದಜೊತೆಗೆ ಮೈಗೂಡಿಸಿಕೊಂಡರು. ವರ್ಣಾಶ್ರಮಧರ್ಮ ವ್ಯವಸ್ಥೆಯಲ್ಲಿ ಬೇಸಾಯವು ಬ್ರಾಹ್ಮಣನಿಗೆ ಹೇಳಿಲ್ಲ, ಅವರು ಎತ್ತುಗಳಿಗೆ ಹಿಂಸೆಯಾಗುವ ಉಳುವ ಕಾರ್ಯ ಮಾಡಬಾರದು; ಆದರೆ ಆಪತ್ಕಾಲದಲ್ಲಿ ಅನ್ಯವರ್ಣದ ಧರ್ಮವನ್ನು ಕೈಗೊಂಡರೂ ದೋಷವಿಲ್ಲ ಎಂದು ಧರ್ಮಶಾಸ್ತ್ರಗಳು ತಿಳಿಸಿಕೊಟ್ಟಿವೆ. ಹೀಗಾಗಿ ಸಂಕೇತಿಗಳು ಅಂದಿನ ಕಾಲಕ್ಕೆ ಉಳುವ ಕಾರ್ಯಕ್ಕೆ ಕೈಹಾಕದೆ ಮನುಷ್ಯರ ದುಡಿಮೆಯೇ ಪ್ರಧಾನವಾದ ತೋಟಗಾರಿಕೆಯನ್ನು ತಮ್ಮದಾಗಿಸಿಕೊಂಡರು. ಸಂಕೇತಿಗಳ ಮೊದಲ ವಲಸೆ ಕ್ರಿ.ಶ. ೧೦೭೪ರ ಸುಮಾರಿನಲ್ಲಿ ನಡೆದಿರಬಹುದೆಂದು ತಿಳಿಯಲಾಗಿದೆ.

ಸಂಕೇತಿ ವೈಶಿಷ್ಟ್ಯಗಳು

ಸಂಕೇತಿಗಳ ಕೃಷಿವೈಶಿಷ್ಟ್ಯಗಳನ್ನೂ ಜೀವನವೈಶಿಷ್ಟ್ಯಗಳನ್ನೂ ಸಾರಿ ಹೇಳುವ ಅನೇಕ ವಿಚಾರಗಳು ಇಲ್ಲಿ ಇಡಿಕಿರಿದು ತುಂಬಿವೆ. ಸಂಕೇತಿಗಳು ವ್ಯುತ್ಪನ್ನಮತಿಗಳು. ತೋಟಕ್ಕೆ ಹೋಗುವಾಗ ಗುರುಗಳು ವೇದಾಂತಪಾಠಗಳನ್ನು ನಿರೂಪಿಸುತ್ತಿದರೆ ಅವರ ಹಿಂದೆ ನಡೆದುಹೋಗುತ್ತಿದ್ದ ಶಿಷ್ಯರು ಕೇಳಿಯೇ ಕಲಿತು ತೃಪ್ತರಾಗಿಬಿಡುತ್ತಿದ್ದರು. ವೇದಪಾಠಗಳನ್ನು ಕೂಡ ತೋಟದ ಕೆಲಸಗಳಲ್ಲಿ ಮಗ್ನರಾಗಿದ್ದುಕೊಂಡೇ ಕಂಠಪಾಠಮಾಡಿಕೊಂಡುಬಿಡುತ್ತಿದ್ದರು. ಕೂಲಿಕೊಟ್ಟು ಕೆಲಸ ಮಾಡಿಸುವ ಕ್ರಮವಿರಲಿಲ್ಲ. ತಾವೇ ದುಡಿಯುವುದು, ಮುಯ್ಯಾಳು ಪದ್ಧತಿಯಿಂದ ನಿರ್ವಹಿಸುವುದು ಅಂದಿನ ಕ್ರಮವಾಯಿತು. ಮೋಡಗಳ ಸಂಚಾರ, ವಾಯುಸಂಚಾರ, ಸೂರ್ಯರಶ್ಮಿಗಳನ್ನು ನೋಡಿಯೇ ಮಳೆಯ ಬರುವಿಕೆಯನ್ನೂ ಬರದಿರುವಿಕೆಯನ್ನೂ ಗೊತ್ತುಮಾಡಿಕೊಳ್ಳುತ್ತಿದ್ದರು. ವೇದಾಧ್ಯಯನವನ್ನೇ ಪ್ರಧಾನವಾಗಿಟ್ಟುಕೊಂಡು, ಜೀವನಯಾಪನೆಗೆ ಎಷ್ಟೋ ಅಷ್ಟಾಗುವಂತೆ ಮಾತ್ರವೇ ತೋಟದ ಕೃಷಿಯಲ್ಲಿ ನಂಬಿಕೊಂಡಿದ್ದರು. ರೋಗರುಜಿನಗಳಿಗೆ ತುತ್ತಾಗುವವರು ಹೆಚ್ಚು ಸಂಖ್ಯೆಯಲ್ಲಿರುತ್ತಿರಲಿಲ್ಲ. ಕಠಿಣವಾದ ದುಡಿಮೆ, ಶುದ್ಧವಾದ ಆಹಾರಸೇವನೆ ಅದಕ್ಕೆ ಕಾರಣಗಳಾಗಿದ್ದುವು.

ಮೈಸೂರು ಮಹಾರಾಜರು 'ನೀವು ತೋಟದ ವ್ಯವಸಾಯವನ್ನೇ ಏಕೆ ಆರಿಸಿಕೊಂಡಿದ್ದೀರಿ?' ಎಂದು ಕೇಳಿದಕ್ಕೆ, 'ನೇಗಿಲಿಗೆ ಮೂಕ ಪ್ರಾಣಿಗಳನ್ನು ಕಟ್ಟಿ ಹಿಂಸೆಕೊಡುವುದು ಬ್ರಾಹ್ಮಣರಿಗೆ ಶಾಸ್ತ್ರನಿಷಿದ್ಧವಾದ್ದರಿಂದ ಸ್ವಂತ ದೇಹಪರಿಶ್ರಮದಿಂದ ನೆರವೇರುವ ತೋಟದ ಕೃಷಿಯನ್ನು ಕೈಗೊಂಡಿದ್ದೇವೆ, ಮಹಾಸ್ವಾಮಿ' ಎಂದು ಉತ್ತರಿಸಿದ್ದರು. ಕಪಿಗಳು ಅಡಕೆಕಾಯಿ ತಿನ್ನದಿದ್ದರೂ ಮರದಿಂದ ಕಿತ್ತು ಕೆಳಗೆ ಬಾಳೆಗಿಡದ ಎಲೆಯಮೇಲೆ ಬೀಳಿಸಿ, ಮೇಲೇಳುವ ಸದ್ದನ್ನು ಕೇಳಿ ಹಿಗ್ಗುತ್ತವೆಯಂತೆ! ಅಷ್ಟಾದರೂ ಸಂಕೇತಿಗಳು ಅವುಗಳನ್ನು ಹಿಂಸಿಸದೆ, ಹಿಡಿಸಿ ಕಾಡಿಗೆ ಅಟ್ಟಿಬಿಡುತ್ತಿದ್ದರು. ಮದುವೆಮುಂಜಿಗಳಲ್ಲಿ ಸಮಸ್ತ ಸೇವಾಕಾರ್ಯಗಳನ್ನೂ ಪರಸ್ಪರ ಸಹಕಾರದಿಂದಲೇ ಪರಿಷ್ಕಾರವಾಗಿ ಮಾಡಿ ಮುಗಿಸುತ್ತಿದ್ದರು. ನಿಜವಾದ ಅರ್ಥದಲ್ಲಿ ಅದು ಸಹಕಾರಚಳವಳಿಯೇ ಆಗಿತ್ತು.

ಮೈಸೂರಿನ ಅನಾಥಾಲಯದ ಸಂಸ್ಥಾಪಕರಾದ ವೃದ್ಧಪಿತಾಮಹ ವೆಂಕಟಕೃಷ್ಣಯ್ಯನವರು "ಸಂಕೇತಿಗಳು ಕಷ್ಟಪಟ್ಟು ಕೆಲಸಮಾಡುವವರು, ಸತ್ಯವಂತರು, ಸಾತ್ವಿಕರು, ನಂಬಿಕೆಗೆ ಅರ್ಹರು, ತೃಪ್ತರು" ಎಂದು ಕೊಂಡಾಡುತ್ತಿದ್ದರು. ಕಾಲಹರಣವೆಂಬುದು ಸಂಕೇತಿಗಳ ಜಾಯಮಾನಕ್ಕೆ ಒಗ್ಗುವಂಥದಾಗಿರಲಿಲ್ಲ. ವಿರಾಮದ ವೇಳೆಯಲ್ಲಿ ಸೊಗಸಾಗಿ ಜನಿವಾರಗಳನ್ನು ತಯಾರಿಸುತ್ತಿದ್ದರು. ಅತಿಥಿಸತ್ಕಾರದ ವೈಭವ ಅದೆಷ್ಟಿತ್ತೆಂದರೆ 'ಸಂಕೇತಿಗಳ ಮನೆಯ ಊಟ' ಎಂದರೆ ಅವರು ಬಡಿಸುವಷ್ಟು ತಿಂದು ಅರಗಿಸಿಕೊಳ್ಳುವುದು ಹೇಗಪ್ಪ ಎಂದು ಅಂಜುತ್ತಿದ್ದರು. ಇಂತಹ ಅನೇಕ ವೈಶಿಷ್ಟ್ಯಗಳು, ಕುತೂಹಲಕಾರಿ ಸಂಗತಿಗಳು ಈ ಸಂಪುಟದಲ್ಲಿ ತುಂಬಿ ಮೆರೆಯುತ್ತಿವೆ.

ಅಪೂರ್ವವಾದ ಓಜಸ್ಸು ತೇಜಸ್ಸುಗಳು

ವಿಜಯಾಹರನ್ ಅವರ ಈ ಅನೂಚಾನವು, ಸಂಕೇತಿ ಕೃಷಿಜೀವನದ ಸಮಗ್ರವಾದ 'ವಿವರಣಾತ್ಮಕ ವಸ್ತುಸೂಚಿ'ಯಾಗುವಂತೆ, 'ಸಂಕ್ಷಿಪ್ತ ವಿಶ್ವಕೋಶ'ವಾಗುವಂತೆ ರೂಪುತಳೆದಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅದಕ್ಕಿರುವ ಆಯಾಮಗಳು ಬಹುಮುಖವಾಗಿವೆ. ಸಂಕೇತಿ ಸಮುದಾಯವನ್ನು ಕುರಿತು ಬಿಡಿಬಿಡಿಯಾದ ಕೃತಿಗಳನ್ನು ರಚಿಸಲು ಆಸೆ ಪಡುವವರಿಗಾಗಲಿ, ಸಂಶೋಧನಪ್ರಬಂಧಗಳನ್ನು ಮಂಡಿಸಲು ಹಂಬಲಿಸುವವರಿಗಾಗಲಿ, ವಿಪುಲವಾದ ಸಾಮಗ್ರಿಯಿದೆ ಎಂಬುದನ್ನು ಈ ಸಂಪುಟವು ಅವರಿಗೆ ಮನವರಿಕೆ ಮಾಡಿಕೊಡುತ್ತದೆ. ಇಲ್ಲಿರುವ ಸಂಕೀರ್ಣ ಸ್ವರೂಪದಲ್ಲಿಯೇ ಅದರ ಅಂತಃಶಕ್ತಿಯು ಅಡಗಿದೆಯೆಂಬುದುನ್ನು ಮರೆಯುವಂತಿಲ್ಲ. ನಿಯತಕಾಲಿಕೆಗಳು, ಸ್ಮರಣಸಂಚಿಕೆಗಳು ಕಾಲಗರ್ಭದಲ್ಲಿ ಮರೆಯಾಗಿಬಿಡುತ್ತವೆ. ಆದರೆ ಅವುಗಳ ಹೆಸರುಗಳು ಅಳಿಯದಂತೆ ಮಾಡಿರುವ, ಅವುಗಳ ಸಾರವತ್ತಾದ ಸಂಗತಿಗಳು ದೀರ್ಘಕಾಲ ಉಳಿಯುವಂತೆ ಮಾಡಿರುವ, ವಿಜಯಾಹರನ್ ಅವರ ಕಳಕಳಿಯನ್ನು ವಿಶೇಷವಾಗಿ ಮೆಚ್ಚಿಕೊಳ್ಳಬೇಕಾಗಿದೆ. ಅವರು ತಮ್ಮ ಅಧ್ಯಯನಶೀಲತೆ, ಸಹೃದಯತೆ, ವಿಮರ್ಶನ ಪ್ರಜ್ಞೆ, ಉಚಿತಾನುಚಿತ ವಿವೇಕ ಮುಂತಾದುವೆಲ್ಲವನ್ನೂ ಜಾಗೃತವಾಗಿಟ್ಟುಕೊಂಡಿದ್ದು, ಈ ಸಂಪುಟಕ್ಕೆ ಅಪೂರ್ವವಾದ ಓಜಸ್ಸು ತೇಜಸ್ಸುಗಳನ್ನು ಆವಾಹನೆ ಮಾಡಿದ್ದಾರೆ.

ಮುಡಿಯುವ ಭೋಗಿಗಳು

ಆಕಾಶವಾಣಿಯ ನಿರ್ದೇಶಕರಾಗಿ ಸೇವೆಸಲ್ಲಿಸುತ್ತ ಡಾ. ವಿಜಯಾಹರನ್ ಅವರು ಒಳ್ಳೆಯ ಹೆಸರು ಗಳಿಸಿದ್ದಾರೆ. ಕನ್ನಡಸಾಹಿತ್ಯರಂಗದಲ್ಲಿಯೂ ಹೆಚ್ಚಿನ ಸಾಧನೆ ಮಾಡಿದ್ದಾರೆ. ಕತೆಗಾರ ಆನಂದರನ್ನು ಕುರಿತು ಸಂಶೋಧನೆ ನಡೆಸಿ, ಡಾಕ್ಟರೇಟ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಆ ಸಂಶೋಧನ ಪ್ರಬಂಧವನ್ನು ಪ್ರಕಟಿಸಿಯೂ ಇದ್ದಾರೆ. ತರುವಾಯದಲ್ಲಿ 'ಆಲೋಕ' ಎಂಬ ಹೆಸರಿನಲ್ಲಿ ಸಾಹಿತ್ಯವಿಮರ್ಶೆಗೆ ಸಂಬಂಧಿಸಿದ ಲೇಖನಗಳ ಸಂಕಲನವೊಂದನ್ನು ಹೊರತಂದಿದ್ದಾರೆ. 'ಕಟ್ಟಿಯುಮೇನೋ ಮಾಲೆಗಾರನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ' ಎಂಬ

ಜನ್ನಕವಿಯ ಮಾತನ್ನಿಲ್ಲಿ ನೆನೆಯಬೇಕು. ಸಂಕೇತಿ ಸಾಹಿತ್ಯೋದ್ಯಾನದಿಂದ ವಿಜಯಾಹರನ್ ಅವರು ಪರಿಮಳಪೂರ್ಣವಾದ ಕುಸುಮಗಳನ್ನೇ ಆಯ್ದು ಸುಂದರವಾದ ಮಾಲೆಯೊಂದನ್ನು ಪೋಣಿಸಿಕೊಟ್ಟಿದ್ದಾರೆ. ಅವೆಲ್ಲ ಅನೂಚಾನ ಕುಸುಮಗಳು; ತತ್ಫಲವಾದ ಮಾಲೆಯೂ ಅನೂಚಾನವಾದುದು. ಅನೂಚಾನವಾದುದಕ್ಕೆ ಎಂದಿಗೂ ಅಳಿವಿಲ್ಲ, ಬಾಡುವ ಭಯವಿಲ್ಲ. ಅದು ಮಂದಾರ, ಸಂತಾನಕದಂತೆ ಎಂದಿಗೂ ಬಾಡದ ದೇವಲೋಕದ ಕುಸುಮ. ಸಹೃದಯರು ಅದನ್ನು ಅನೂಚಾನವಾಗಿ ಮುಡಿಯುತ್ತ ಮಾಲೆಗಾರ್ತಿ ವಿಜಯಾಹರನ್ ಅವರ ಕೌಶಲವನ್ನು ನಿರಂತರವಾಗಿ ಪ್ರಶಂಸಿಸುತ್ತಲೇ ಇರುತ್ತಾರೆ. ಹಿಂದಿನಿಂದಲೂ ಪರಂಪರೆಯಾಗಿ ನಡೆದುಬಂದ ವಿಚಾರವು ಅನೂಚಾನವೆನಿಸುತ್ತದೆ. ಅಂತಹ ಪರಂಪರೆಗೆ ಸೋಲುಂಟೆ ! ಈ ಸತ್ಕಾರ್ಯವನ್ನು ನೆರವೇರಿಸಿ ಕೊಟ್ಟಿರುವ ವಿಜಯಾ ಹರನ್ ಅವರಿಗೆ ಕನ್ನಡಿಗರೆಲ್ಲರ ಪರವಾಗಿ ವಿಶೇಷವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರ ಮಹತ್ಕಾರ್ಯಕ್ಕೆ ಬೆನ್ನೆಲುಬಾಗಿ ನಿಂತ ಅವರ ಪತಿ ಡಾ. ಪ್ರಣತಾರ್ತಿಹರನ್ ಅವರನ್ನು ಮೆಚ್ಚಿಕೊಳ್ಳಬೇಕಾಗಿದೆ. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬ ದೇವರದಾಸಿಮಯ್ಯನ ವಚನವನ್ನು ನೆನೆಯುತ್ತ, ಆ 'ಭಲೇಜೋಡಿ'ಗೆ ಮತ್ತೆ ಮತ್ತೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ತಾಪತ್ರಯಕ್ಕೆ ತುತ್ತಾಗಬಾರದು

ವೇದಶಾಸ್ತ್ರಪುರಾಣಗಳನ್ನು ಅಧ್ಯಯನ ಮಾಡಿದ್ದಾಯಿತು. ಕೃಷಿ ಮಾಡಿದ್ದಾಯಿತು. ಆಧುನಿಕ ವಿದ್ಯೆಗಳಿಗೆ ತೆರೆದುಕೊಂಡದ್ದಾಯಿತು. ಜೀವನೋಪಾಯವನ್ನು ಅರಸಿ ದೇಶವಿದೇಶಗಳಲ್ಲೆಲ್ಲ ಹರಡಿಕೊಂಡದ್ದಾಯಿತು. ಏನಾದರೇನು, 'ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ' ಎಂದು ಕನಕದಾಸರು ಹಾಡಿಲ್ಲವೇ! ಮಹಾರಾಜನಾಗಿ ಸಿಂಹಾಸನದ ಮೇಲೆ ಮಂಡಿಸುವುದು, ಸನ್ಯಾಸಿಯಾಗಿ ಕಾವಿ ಸ್ವೀಕರಿಸುವುದು ಎಲ್ಲವೂ ಹೊಟ್ಟೆಗಾಗಿ ಗೇಣುಬಟ್ಟೆಗಾಗಿ ಎಂದು ಅವರು ಹೇಳುವಾಗ ಮೈ ಜುಂ ಎನ್ನುತ್ತದೆ. ಹೊಟ್ಟೆಬಟ್ಟೆಗಳಿಗಾಗಿ ಸಂಕೇತಿಗಳು ಪಟ್ಟಪಾಡು ಪರಮ ಪುರುಷಾರ್ಥವೆನಿಸಿದ ಮೋಕ್ಷಸಾಧನೆಯಲ್ಲಿ ಮುಕ್ತಾಯವಾಗಬೇಕಲ್ಲವೆ? ಈ ಸಂಸಾರಪ್ರವಾಹವನ್ನು ಈ ಜನ್ಮದಲ್ಲಿಯೇ ದಾಟಿಬಿಡಬೇಕು. ಮತ್ತೆಮತ್ತೆ ಈಜಿಗೆ ಬೀಳುವ, ದಾಟಲಾಗದೆ ಗೋಳಾಡುವ ತಾಪತ್ರಯಕ್ಕೆ ತುತ್ತಾಗಬಾರದು. ಮುಕ್ತಿಯ ಕರೆಗೆ ಓಗೊಡದೆ ಮೈಮರೆಯಬಾರದು. ಈ ಸಂಪುಟದ ಆರಂಭದಲ್ಲಿರುವ ಮತ್ತೂರು ನಂದ ಅವರ 'ನನ್ನ ಊರು' ಎಂಬ ಕವಿತೆಯ ನಾಲ್ಕು ಪಾದಗಳನ್ನು ಇಲ್ಲಿ ಬರೆದು ವಿರಮಿಸುತ್ತೇನೆ:

ಮೌನದಲಿ ಹರಿದಿರುವ ಪುಟ್ಟೊಂದು ನದಿಯಿಹುದು
ಕನಸಿನೂರಿಗೆ ದೋಣಿ ಇಲ್ಲಿಂದಲೇ |
ಇದು ಕಡೆಯ ದಾಟಂತೆ ಮತ್ತೆ ಇತ್ತಿಲ್ಲಂತೆ
ಕರೆ ಬಂತು ಇದೊ ನೇರ ಅಲ್ಲಿಂದಲೇ ||

*****

ದೇಶೀಯ ವಿದ್ಯಾಶಾಲೆ ಕಾಲೇಜು
ಶಿವಮೊಗ್ಗ

ಪ್ರೊ. ಎಲ್.ಎಮ್.ಎಲ್. ಶಾಸ್ತ್ರೀ
ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಸಂಕೇತಿ : ಬೇಸಾಯದ ಬದುಕು

ಘನ ಉದ್ದೇಶವೊಂದನ್ನಿಟ್ಟುಕೊಂಡು ಬಹು ಕಷ್ಟದಿಂದ ರಚಿಸಿದ ಕೃತಿಯಿದು. ಪ್ರತಿಯೊಂದು ಕುಟುಂಬವನ್ನೂ ನಾಲ್ಕಾರು ಘಂಟೆ ಮಾತನಾಡಿಸುತ್ತ ೧೩ ತಿಂಗಳ ಕಾಲ ನಿರಂತರ ಪರಿಶ್ರಮದಿಂದ ಮೂಡಿಬಂದದ್ದು ಈ ಸಂಪುಟ.

ಆದ್ದರಿಂದ ಇದರ ಬೆಲೆ ಕಟ್ಟಲು ಸಾಧ್ಯವಿಲ್ಲ. ಇಂದು ಸಂಕೇತಿಗಳು ಎಲ್ಲ ರಂಗದಲ್ಲಿದ್ದಾರೆ. ಆದರೆ ನೂರಾರು ವರ್ಷಗಳ ಹಿಂದೆ ಎಲ್ಲಿಂದಲೋ ಬಂದು ಕರ್ನಾಟಕದಲ್ಲಿ ಬೇರುಬಿಟ್ಟು, ಅವರು ನೆಲೆ ಕಂಡುಕೊಂಡದ್ದು ಕೃಷಿಯಿಂದ. ಆದ್ದರಿಂದ ಸಂಕೇತಿ ಸಮುದಾಯದ ಅಧ್ಯಯನವೆಂದರೆ ಒಂದರ್ಥದಲ್ಲಿ ಅದು ಕೃಷಿಯ ಅಧ್ಯಯನ !

ಸಮುದಾಯ ಅಧ್ಯಯನ ಕೇಂದ್ರದವರು ತುಂಬಾ ವ್ಯವಸ್ಥಿತವಾದ ರೀತಿಯಲ್ಲಿ ಈ ಅಧ್ಯಯನ ನಡೆಸಿದ್ದಾರೆ. ಕ್ಷೇತ್ರಕಾರ್ಯ, ಮಾಹಿತಿ ಸಂಗ್ರಹ, ಮಾಹಿತಿ ವಿಶ್ಲೇಷಣೆಯು ತುಂಬಾ ವೈಜ್ಞಾನಿಕವಾಗಿದೆ. ಅಧ್ಯಯನ ಕಾರ್ಯವು ನ್ಯೂನತೆಯಿಲ್ಲದೆ ಪೂರ್ಣಪ್ರಮಾಣದಲ್ಲಿ ಶುದ್ಧವಾಗಿದೆ. "ಬೇಸಾಯದ ಬದುಕು" ಎಂಬಲ್ಲಿ ವಿಜಯ್ ಅಂಗಡಿಯವರು ಸಂಕೇತಿಗಳ ಬೇಸಾಯವನ್ನು ಮತ್ತು ಬದುಕನ್ನು ಎರಡೂ ಮುಖಗಳನ್ನು ಚಿತ್ರಿಸಿದ್ದಾರೆ. ಕೃತಿಯ ಉದ್ದಕ್ಕೂ ಕೃಷಿಯ ಬಗೆಗೆ ಸಲಹೆ ಸೂಚನೆಗಳಿದ್ದು ಯಾವುದೇ ರೈತರಿಗೆ ಒಳ್ಳೆಯ ಮಾರ್ಗದರ್ಶನವನ್ನು ನೀಡಿದೆ. ವಿಜಯ್ ಅಂಗಡಿಯವರ ಕಾರ್ಯವು ಸ್ತುತ್ಯವಾಗಿದೆ. ಎರಡೂ ಕೃಷಿ ಸಂಚಿಕೆಗಳ ಗಮನಾರ್ಹ ಸಂಗತಿಗಳನ್ನು ಸಂಕ್ಷಿಪ್ತವಾಗಿ ಈ ಸಂಚಿಕೆಯ ಕಡೆಯಲ್ಲಿ ಕೊಟ್ಟಿದೆ. ಆದರೂ ಅಂಗಡಿಯವರು ನೀಡಿದ ವಿವರಗಳಿಂದ ಕೃತಿಯ ಮಹತ್ವವನ್ನು ಗುರ್ತಿಸಲು ಸಾಧ್ಯವಾಗುವಂತೆ ಒಂದೆರಡು ಚಿತ್ರಗಳನ್ನು ನೆನಪಿಸಿಕೊಳ್ಳುತ್ತೇನೆ.

ಮಧ್ಯಮ, ಕೆಳಮಧ್ಯಮ ವರ್ಗದ ಗ್ರಾಮೀಣ ಸಂಕೇತಿ ಕುಟುಂಬಗಳನ್ನು ಪ್ರಾತಿನಿಧಿಕವಾಗಿ ಅಗ್ರಹಾರದ ಚಿತ್ರದಲ್ಲಿ ಗಮನಿಸಿ: "ಸುಮಾರು ೫೦ ಸಂಕೇತಿ ಮನೆಗಳು. ಎಲ್ಲರೂ ಕೃಷಿಕರು. ಹೆಂಚಿನ ಮನೆಗಳು ಹೆಚ್ಚು. ೨೦೦ ವರ್ಷ ಮೀರಿದ ಮಣ್ಣಿನ ಮನೆಗಳಲ್ಲಿ ವಾಸಮಾಡುತ್ತಿರುವ ಕುಟುಂಬಗಳಿವೆ. ನೀರಿಗಾಗಿ ಸುಮಾರು ೩೦ ತೆರೆದ ಭಾವಿಗಳು. ಅಂದಾಜು ೩೦ ಅಡಿ ಆಳ" ಇತ್ಯಾದಿ. ಅಗ್ರಹಾರದ ನಟೇಶ ಅವರ ದಿನಚರಿ : (ಇದು ಸಂಕೇತಿ ಕೃಷಿಕರೆಲ್ಲರ ಕ್ರಿಯಾಶೀಲತೆಯ ಸಹಜ ಪ್ರಾತಿನಿಧಿಕ ಉದಾಹರಣೆಯೇ ಹೊರತು ವೈಯಕ್ತಿಕ ಅಪರೂಪದ್ದಲ್ಲ.) : 1) '೧೬ನೇ ವಯಸ್ಸಿನಿಂದ ಕೃಷಿಕ. ಮುಂಜಾನೆ ೨.೩೦ಕ್ಕೆ ಏಳುವುದು. ಬೆಳದಿಂಗಳ ಬೆಳಕಿನಲ್ಲಿ ಗಿಡಗಳಿಗೆ ಅಡ್ಡೆಯಲ್ಲಿ ನೀರು ಹುಯ್ಯುವುದು. ಬಿಸಿಲು ಬರುವವರೆಗೂ ಈ ಕಾರ್ಯ' ! 2) 'ಒಂದು ಸಾರಿ ಅರಕಲಗೂಡಿಗೆ ಬದನೆಕಾಯಿ ಮಾರಲು ತಗೊಂಡು ಹೋಗಿದ್ದೆ. ಒಂದು ಚೀಲಕ್ಕೆ ಎರಡೂವರೆ ರೂ. ಬೆಲೆ ಕಟ್ಟಿದರು. ಬೇಸತ್ತು ಅಲ್ಲೇ ಬಿಸಾಕಿ ಬಂದೆ. ಇದಕ್ಕೆ ಪರ್ಯಾಯವನ್ನು ಯೋಚಿಸಿದೆ. ಆಗ ಹೊಳೆದದ್ದು ತೆಂಗು ಬೆಳೆ.'

ಮಗ್ಗೆಯ ಲಕ್ಷ್ಮೀನಾರಾಯಣ ಅವರು ವಿಶಿಷ್ಟ ವ್ಯಕ್ತಿ. ವ್ಯವಸಾಯದಷ್ಟೇ ಇತರ ಸಾಮಾಜಿಕ ಕೆಲಸಗಳಲ್ಲೂ ಆಸಕ್ತಿ. ದೊಡ್ಡಮಗ್ಗೆಯಲ್ಲಿ ಹೈಸ್ಕೂಲು ಸ್ಥಾಪಿಸಿದ್ದಾರೆ. ಮೂರು ಕೊಠಡಿಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ೨,೫೦೦/- ರೂ ಬಡ್ಡಿ ಬರುವಂತೆ ಠೇವಣಿಯಿಟ್ಟು ವಿದ್ಯಾದಾನಕ್ಕೆ ಶಾಶ್ವತ ವ್ಯವಸ್ಥೆ ಮಾಡಿದ್ದಾರೆ. ಬಸವಾಪಟ್ಟಣದ ರಾಮಚಂದ್ರ ಅವರ ಮಾತು: 'ನಾವು ಚಪ್ಪಲಿ ಹಾಕಿಕೊಂಡು ತೋಟಕ್ಕೆ ಹೋಗುವುದಿಲ್ಲ. ತೋಟವನ್ನು ದೇವರಂತೆ ಕಾಣುತ್ತೇವೆ' ಎಂಬ ಮಾತನ್ನು ನೆನೆದರೇ ರೋಮಾಂಚನ. ದಿಟ್ಟ ಮಹಿಳೆ ಬಸವಾಪಟ್ಟಣದ ಸರೋಜಮ್ಮ ಅವರಿಗೆ ಈಗ ೭೧ ವರ್ಷ. ಮಕ್ಕಳು ಜೊತೆಯಲ್ಲಿಲ್ಲ. ಆದರೆ ಸುಖಿ! ಕಷ್ಟ ಬಂದಾಗ ಕೊರಗಲಿಲ್ಲ, ಸುಖ ಬಂದಾಗ ಹಿಗ್ಗಲಿಲ್ಲ! ಎಂದೂ ಯಾರಿಗೂ ಅವಲಂಬನೆಯಾಗದೆ ಬದುಕುತ್ತಿರುವ ಹಿರಿಯ ಜೀವ. ಇವರನ್ನು ಕಂಡಾಗ ಇಷ್ಟೇ ವಯಸ್ಸಿನ ರಾಮನಾಥಪುರದ ಸೀತಮ್ಮ ಅವರೂ ನೆನಪಿಗೆ ಬರುತ್ತಾರೆ. ಮಕ್ಕಳಿಲ್ಲದ ಅವರು ಸಮಾಜವನ್ನೇ ಮಕ್ಕಳಂತೆ ಕಂಡುಕೊಂಡು ಬಂದವರು! ದತ್ತು ತಗೊಳ್ಳಬೇಕೆಂದು ಎಂದೂ ಯೋಚಿಸಿದವರಲ್ಲ. ಒಂಬತ್ತು ಎಕರೆ ಜಮೀನನ್ನು (ನಾಲ್ಕು ಎಕರೆ ಅಡಿಕೆ ತೋಟ) ತಾವೇ ನಿರ್ವಹಿಸುತ್ತಾರೆ.

ಐಚನಹಳ್ಳಿಯ ಕಾವೇರಿ ಬೀರೂರಿನವರು. ಹಳ್ಳಿಗೆ ಬಂದದ್ದಕ್ಕೆ ಬೇಸರವಿಲ್ಲ. ಜೀವನಕ್ಕೆ ಪೂರಕವಾಗಲೆಂದು ಒಂದು ಅಂಗಡಿಯನ್ನೂ ಇಟ್ಟುಕೊಂಡಿದ್ದಾರೆ. ಸ್ವಯಂ ಉದ್ಯೋಗ ತರಬೇತಿಯನ್ನೂ ಪಡೆದಿದ್ದಾರೆ. ಅಡಿಕೆ ಸುಲಿಯುವ, ಬೇಯಿಸುವ, ಒಣಗಿಸುವ ಕೆಲಸಗಳಲ್ಲೂ ಭಾಗಿ. ಸಂತೋಷವಾಗಿದ್ದೇನೆ ಎಂದು ತುಂಬು ಹೃದಯದಿಂದ ಹೇಳುತ್ತಾರೆ. ಚಾಗಹಳ್ಳಿಯ ಕೇಶವಮೂರ್ತಿ ಟಿಪಿಕಲ್ ಕಷ್ಟಸಹಿಷ್ಣು ಸಂಕೇತಿ: ೧೨ನೇ ವಯಸ್ಸಿನಲ್ಲಿ ಕೃಷಿ ಆರಂಭಿಸಿದರು. ಇದ್ದದ್ದು ಅರ್ಧ ಎಕರೆ ತೋಟ. ಎಲೆ ಕೊಯ್ದು ದಿನಾ ಎಂಟಾಣೆ ಕೂಲಿ ಪಡೆದು ಜೀವನ ನಿರ್ವಹಣೆ! (ಈಗ ಸ್ಥಿತಿವಂತರು)

ಚಲನಚಿತ್ರ ನಿರ್ದೇಶಕ, ನಟ ಎಂ.ಡಿ. ಕೌಶಿಕ್ ಅವರ ಸಂದರ್ಶನ ಕೃತಿಯ ಘನತೆಯನ್ನು ಹೆಚ್ಚಿಸಿದೆ ಮತ್ತು ಸಂಕೇತಿ ಓದುಗರ ಪಾಲಿಗೆ ಅಭಿಮಾನದ ಸಂಗತಿಯಾಗಿದೆ.

ಡಾ. ಎಂ.ಎಸ್. ವಿಜಯಾ ಹರನ್ ಅವರು ನಿತ್ಯ ಮೆಲಕು ಹಾಕಬೇಕಾದ ಮರೆಯಬಾರದ ಸಂಗತಿಗಳನ್ನು ಹತ್ತಾರು ಕಡೆಗಳಿಂದ ಸಂಗ್ರಹಿಸಿ ಕೊಟ್ಟಿದ್ದಾರೆ. ಇದು ಸಂಚಿಕೆಯ ಗುಣವನ್ನು ಹೆಚ್ಚಿಸಿದೆ. ಉದಾಹರಣೆಗೆ, ಹತ್ತು ವರ್ಷದ ಹಿಂದಿನ ಸಂಕೇತಿ ಸಂಗಮದ ಸಂಚಿಕೆಯೊಂದರಿಂದ ಮತ್ತೂರು ನಂದ ಅವರ ಕವನದ ಸಾಲುಗಳು -

'ಯಾವಲ್ಲಿ ಹಳತುಗಳು ಹೊಸತರೊಳು ಸಂಗಮಿಸಿ
ಬದುಕನನುಗೊಳಿಸಿಹುದೊ ಆ ಪುಟ್ಟ ಊರು:
ಕಪಟವರಿಯದ ಸಾಧು ಸಭ್ಯ ಜನಗಳ ಸೀಮೆ
ನಗರವಾಸನೆಯಿದ್ದೂ ಇರದ ಊರು'.

ಹೀಗೆಯೇ ನಾಚಾರಮ್ಮನನ್ನು ಕುರಿತ ವರದಿಗಳ ಸಂಗ್ರಹ, ೯೮ರಲ್ಲಿ ಕೃಷ್ಣರಾವ್ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದ ಸಂದರ್ಭದ ಮಾತುಗಳು, ಚಿಲ್ಕುಂದದ ಚಿತ್ರ ನೀಡುವ ಕೈಪಿಡಿ, ಬೇಸಾಯದ ಬದುಕು - ಅವಲೋಕನ /ಅವರವರ ಮಾತಿನಲಿ; ಬೆಟ್ಟದಪುರ ಹಾಗೂ ಕೌಶಿಕ ಸಂಕೇತಿ ಸಂಘಗಳ ಸ್ಮರಣ ಸಂಚಿಕೆಗಳು, ಸಂಕೇತಿ ಸಂಗಮದ ಹತ್ತಾರು ವರ್ಷಗಳಷ್ಟು ಹಳೆಯ ಲೇಖನಗಳು ಸ್ಮರಣೀಯವಾಗಿವೆ. ಕೆ. ರಾಘವೇಂದ್ರರಾಯರ ೧೯೫೫ರ ನೆನಪಿನ ಚಿತ್ರ: 'ಸಂಕೇತಿಗಳಿಗೆ ಪುಷ್ಕಳ ಭೋಜನ, ತಾಂಬೂಲ ಚರ್ವಣ, ಪಗಡೆಯ ವ್ಯಾಮೋಹ. ಇಸ್ಪೀಟು (೨೮ರ ಆಟ ಅಥವಾ ಜಾಕಿ ಆಟ), ಪಾಕಕೌಶಲ್ಯ, ಸಂಸ್ಕೃತ ವಿದ್ವತ್ತು, ಜೊತೆಗೆ ಲಲಿತಕಲೆಗಳಲ್ಲಿ ವಿಶೇಷವಾಗಿ ಶಾಸ್ತ್ರೀಯ ಸಂಗೀತದಲ್ಲಿ ಅವರಿಗೆ ಪ್ರಾವೀಣ್ಯ.'

ಪರಿಸರಪ್ರೇಮ ಕುರಿತ ರಾಮದಾಸ್, ಬಸವಾನಿ ಅವರ ಲೇಖನ (ಸಂಕೇತಿ ಸಂಪದ ೧೯೯೮) ನಿತ್ಯನೂತನವಾಗಿದೆ. ಡಾ. ಬಿ.ವಿ. ಸುಧಾಮಣಿ ಅವರ ಟಿಪ್ಪಣಿಗಳು, ಲೇಖನಗಳ ಭಾಗವು ಮನನೀಯವಾಗಿದೆ. ಕೇರಳ ತಮಿಳುನಾಡುಗಳಲ್ಲಿ ಸಂಚರಿಸಿ ಅಲ್ಲಿನ ಸಂಕೇತಿಗಳ ಕೃಷಿಯ ಬಗೆಗೆ ಮಾಹಿತಿ ನೀಡಿರುವುದು ಮೌಲಿಕವಾಗಿದೆ. ಇದಕ್ಕಾಗಿ ಡಾ. ಸುಧಾಮಣಿ ಮತ್ತು ಡಾ. ಹರನ್ ಅವರಿಗೆ ಎಷ್ಟು ಕೃತಜ್ಞತೆ ಹೇಳಿದರೂ ಕಡಿಮೆಯೇ.

ಕೇರಳದುದ್ದಕ್ಕೂ ಕರ್ನಾಟಕದ ಸಂಕೇತಿ ನೆಲೆಯ ಪರಿಸರವನ್ನೇ ಕಾಣುತ್ತಾರೆ ಹರನ್. ಕನ್ಯಾಕುಮಾರಿ ಜಿಲ್ಲೆಯ ತಕ್ಕಲೈನಲ್ಲಿ, ಪಕ್ಕದ ಪುಲಿಯೂರ್ ಕುರುಚಿಯಲ್ಲಿ ಸಂಕೇತಿಗಳಿದ್ದಾರೆ. ತಿರುವನಂತಪುರಂ, ಕೊಲ್ಲಂ, ಶೆಂಕೋಟ್ಟೈ ಭಾಗಗಳೇ ಸಂಕೇತಿಗಳ ತರುವಾಯದ ನೆಲೆಗಳು. ಶೆಂಕೋಟ್ಟೈನ ರಿವರ್‌ಸ್ಟ್ರೀಟ್ ತುಂಬ ಸಂಕೇತಿಗಳೇ ಇದ್ದರಂತೆ. ಬಡತನವೇ ಕಾರಣವಾಗಿ ನೆಲೆಯನ್ನರಸುತ್ತ ತೆರಳಿದವರು. ಮೊದಲಿಗೆ ವಲಸೆಯಾದದ್ದು ಶುಚೀಂದ್ರಂ, ನಾಗರಕೋಯಿಲ್,

ತ್ರಿವೇಂದ್ರಂ, ಕನ್ಯಾಕುಮಾರಿಯೆಡೆಗೆ. ಕಡೇನಲ್ಲೂರು ಕೃಷ್ಣಾಪುರಂನಲ್ಲಿ ಇತ್ತೀಚಿನವರೆಗೂ ಸಂಕೇತಿಗಳಿದ್ದರಂತೆ. ಪೆರುಮಾಳ್ ದೇವಾಲಯದ ಚಿತ್ರ ನೋಡುವಾಗ ರೋಮಾಂಚನವಾಗುತ್ತದೆ. ಶೆಂಕೋಟ್ಟೈನಲ್ಲಿ ಈಗಲೂ ಹತ್ತು ಸಂಕೇತಿ ಕುಟುಂಬಗಳಿವೆ. ಅದರ ಪೂರ್ಣ ವಿವರ, ಚಿತ್ರಗಳ ಸಹಿತ ಹರನ್ ನೀಡಿದ್ದಾರೆ. ಎರಚ್ಚಕೊಳಂನ ೨೦ ಬ್ರಾಹ್ಮಣರ ಮನೆಗಳಲ್ಲಿ ಅರ್ಧದಷ್ಟು ಈಗಲೂ ಸಂಕೇತಿಗಳದೇ. ನಾಗರಕೋಯಿಲ್ ಬಳಿಯ ವಡೀಶ್ವರಂನಲ್ಲಿ ಪೂರಾ ಸಂಕೇತಿಗಳೇ ಇದ್ದರಂತೆ. ಕಾಂಚಿ ಶಂಕರಮಠದಲ್ಲಿ ಈಗಲೂ ಹಲವು ಸಂಕೇತಿ ವಿದ್ವಾಂಸರು ಸೇವೆಸಲ್ಲಿಸುತ್ತಿದ್ದಾರೆ. ಇಲ್ಲಿನ ಸಂಕೇತಿಗಳಿಗೆ ಶಾಸ್ತ್ರೀಯ ಸಂಗೀತ ತಿಳಿದಿತ್ತು. ಭಜನೆಮಾಡುವ ಹವ್ಯಾಸವಿತ್ತು. ಮನೆಗಳಲ್ಲಿ ಸಂಪ್ರದಾಯದ ಹಾಡನ್ನು ಹೇಳುವವರಿದ್ದರು ಎಂಬ ಮಾತುಗಳೆಲ್ಲ ಕರ್ನಾಟಕದ ಸಂಕೇತಿಗಳನ್ನೇ ನೆನಪಿಸುತ್ತವೆ. ಕೀಳ್ ಪುಲಿಯೂರ್, ಕಾಲಡೈಕುರಿಚ್ಚಿಯಲ್ಲಿ ಸಂಕೇತಿಗಳಿದ್ದಾರೆ. ಕಾಲಡೈಕುರಿಚ್ಚಿಯ ಕಾಲುವೆಯೊಂದನ್ನು ತೆಗೆದವನು (ಕನ್ನಾಡಿಯಾನ್ ಕಾಲವಾಯ್) ಕನ್ನಡನಾಡಿನಿಂದ ಹೋದವನೆಂಬ ಪ್ರತೀತಿಯಿದೆ !

ಕರ್ನಾಟಕ ಕೃಷಿ ಪರಂಪರೆಯ ಸಂವಾದಿ ವ್ಯಕ್ತಿಯನ್ನು ದಕ್ಷಿಣದಲ್ಲಿ ಕಂಡಿದ್ದಾರೆ ಹರನ್. ಅವರೇ 'ಕೀಳ್‌ಪುಲಿಯೂರ್ ಶಿವರಾಮನ್' '೬೦೦ ವರ್ಷಗಳ ಅಗಲಿಕೆಯ ನಂತರದ ಭೇಟಿಯ ವಿಸ್ಮಯ' ಎಂದು ಹರನ್ ಅವರು ಬೆರಗಿನಲ್ಲಿ ನುಡಿದಿದ್ದಾರೆ. ತಮಿಳುನಾಡಿನಲ್ಲಿ ಒಟ್ಟು ೩೦೦ ಕುಟುಂಬಗಳಿದ್ದು ಚದುರಿಹೋಗಿದ್ದಾರೆ ಎನ್ನುತ್ತಾರೆ ಶಿವರಾಮನ್. "ನಮ್ಮ ಬೇರು ಹಳ್ಳಿಗಳಲ್ಲಿವೆ. ಮೂಲತಃ ನಾವು ಕೀಳ್‌ಕಾಡಿನವರು. ಅದು ಸಂಕೇತಿಗಳ ಪಾರಂಪರಿಕ ನೆಲೆ. ನಮಗಲ್ಲಿ ೭೦೦ ಎಕರೆ ಜಮೀನಿದ್ದು ಸ್ವಾತಂತ್ರ್ಯ ಹೋರಾಟಕಾಲಕ್ಕೆ ಸಮರ್ಪಿಸಿದೆವು. ಈಗ ಆ ಸಂಬಂಧವಿಲ್ಲ" ಎಂದೂ ಅವರು ಹೇಳಿದ್ದಾರೆ. ಇಡೀ ಸಂದರ್ಶನ ಈ ರೀತಿಯ ಮಹತ್ವವನ್ನು ಹೆಚ್ಚಿಸಿದೆ. 'Sharp nose with complexion. Special feature of a Sanketi' ಎಂಬ ಅವರ ಮಾತು ಸರಿ ! (ಪೂಮಗಾಮೆ ಜನರ ವಿಷಯದಲ್ಲಿ ನೂರಕ್ಕೆ ನೂರರಷ್ಟು ಸರಿ.) ಆಂಡಿ ವಾದ್ಯಾರರ ಬಗೆಗೆ ಅವರ ಮಾತು ಗಮನಾರ್ಹ: "ಸಂಕೇತಿ ಪುರೋಹಿತರ ಆತ್ಮವಿಶ್ವಾಸ ಬಹಳ ದೊಡ್ಡದು. ಆಂಡಿ ವಾದ್ಯಾರರನ್ನೇ ನೋಡಿ. He was an authority. ಶೃಂಗೇರಿ, ಕಂಚಿ ಸ್ವಾಮಿಗಳು ಅವರ ಮನೇಗೆ ಬರೋರು. ಯಾವ ಪ್ರಶ್ನೆಗೂ ಸ್ಥಳದಲ್ಲೇ ಪರಿಹಾರ ಕೊಡುತ್ತಿದ್ದರು. Scholar performer ಎರಡೂ ಆಗಿ ಅವರು ಗಟ್ಟಿಗರಾಗಿದ್ದರು." ತಿರುನೆಲ್‌ವೇಲಿಯ ಟಿ.ಎಸ್. ರಾಜಾಮಣಿಯವರ ಆತ್ಮಕಥೆ ಬಹಳಷ್ಟು ಅಲ್ಲಿನ ವಿಷಯಗಳನ್ನು ನಮಗೆ ತಿಳಿಸುತ್ತದೆ. ಒಟ್ಟಿನಲ್ಲಿ ಸಂಪುಟವು ಸಂಗ್ರಹಯೋಗ್ಯ ಕೃತಿಯಾಗಿದೆ.

*****

ಕಮಿಷನರೇಟ್ ಆಫ್ ಕೊಲಿಜಿಯೇಟ್ ಎಜುಕೇಷನ್
ಬೆಂಗಳೂರು

ಪ್ರೊ. ಕೆ.ಎಸ್. ನರಸಿಂಗರಾವ್
ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಸಂಕೇತಿ: ಬೇಸಾಯದ ಬದುಕು

'ಭಾರತ ಹಳ್ಳಿಗಳ ದೇಶ' - ಎಂದು ಹೇಳುವ ಮಾತು ಇಂದಿಗೂ ಪ್ರಚಲಿತವಿದೆ. ಹಳ್ಳಿ ಎಂದೊಡನೆ ಬೇಸಾಯ, ಅದರ ರೂವಾರಿಗಳಾದ ಮಣ್ಣಿನಮಕ್ಕಳು, ಅವರ ದೈಹಿಕಶ್ರಮವನ್ನವಲಂಬಿಸಿದ ದುಡಿಮೆ, ಬೆಳೆಯುವ ಬೆಳೆಗಳು, ಆದಾಯ-ನಷ್ಟ - ಮುಂತಾದ ವಿಚಾರಗಳು ಮನಸ್ಸಿನಲ್ಲಿ ಸುಳಿದುಹೋಗುತ್ತವೆ. 'ಕೃಷಿಯ ಬದುಕೇ ಬದುಕು' - ಎಂದು ತೃಪ್ತಿಯಿಂದ ಹೇಳುವಂತೆ 'ಬೇಸಾಯ ನೀ ಸಾಯ' ಎಂದು ಬೇಸತ್ತು ಹೇಳುವ ಮಾತುಗಳೂ ಸಾಂದರ್ಭಿಕವಾಗಿ ಭಾರತದ ಪಾರಂಪರಿಕ ಕೃಷಿಯ ಸಾಧ್ಯಾಸಾಧ್ಯತೆಗಳನ್ನು, ಸರಳತೆ-ಜಟಿಲತೆಗಳನ್ನು ಮನಗಾಣಿಸುತ್ತವೆ. ದೇಶದ ಆರ್ಥಿಕಸ್ಥಿತಿಗತಿಯ ನಿರ್ಣಾಯಕಮಾನದಂಡಗಳಲ್ಲಿ ಒಂದಾದ, ಅತ್ಯಂತ ಪ್ರಮುಖವಾದ ಕೃಷಿಕ್ಷೇತ್ರದ ಬಗ್ಗೆ ಆಡಳಿತಗಾರರ, ಸಂಶೋಧಕರ, ರೈತಾಪಿವರ್ಗದ, ಜನಸಮಷ್ಟಿಯ ವಿಚಾರಧಾರೆ ಜಾಗತೀಕರಣದ ಈ ದಿನಗಳಲ್ಲಿ ಅಗತ್ಯವಾಗಿದ್ದು, ಎಲ್ಲ ಹಂತದ ಕೃಷಿ ಸುಧಾರಣೆಗಳ ಚಿಂತನ-ಮಂಥನ ನಡೆದು ಒಕ್ಕಲುಮಕ್ಕಳ, ಕೃಷಿಗಾರರ ಸಾಮಾಜಿಕ-ಆರ್ಥಿಕ ಸ್ಥಿತಿಗತಿ ಉತ್ತಮಗೊಳ್ಳಬೇಕಾಗಿದೆ. ಸರ್ಕಾರಗಳ ವಾರ್ಷಿಕ ಮುಂಗಡಪತ್ರಗಳಲ್ಲಿ ವ್ಯವಸಾಯಸ್ಥರ ಬೇಸಾಯದ ಅಭ್ಯುದಯಕ್ಕೆ ಕೋಟಿಗಟ್ಟಲೆ ಧನವಿನಿಯೋಗ ಮಾಡುವ ಘೋಷಣೆಗಳು ಹಾಗೇ ಉಳಿಯದೆ ತ್ವರಿತಗತಿಯಲ್ಲಿ ಕಾರ್ಯಗತವಾಗಬೇಕಿದೆ. ಕೃಷಿಕಾರರ ಕಷ್ಟ-ನಷ್ಟಗಳು ಸಮಾಜಕ್ಕೆ ತಿಳಿಯದ ಸಂಗತಿಯಲ್ಲ. ಕೃಷಿಭೂಮಿಯ ಫಲವತ್ತತೆಯಿಂದ ಆರಂಭಗೊಂಡು ನೀರಿನ ಆಸರೆ, ಬಿತ್ತನೆ ಬೀಜ, ಗೊಬ್ಬರ, ಕೀಟ ಹಾಗೂ ಕಳ್ಳರ ಕಾಟ, ಇಳುವರಿ, ಮಧ್ಯವರ್ತಿಗಳು, ಬೆಲೆಕುಸಿತ, ಪೂರೈಕೆ, ಮುಂತಾದ ಸಮಸ್ಯೆಗಳಿಂದ ನಲುಗಿರುವ ರೈತರ ಪಾಡು ಸರ್ಕಾರ-ಜನತೆಗೆ ಸ್ಪಷ್ಟವಾಗಿ ತಿಳಿದಿದ್ದರೂ ಯಾವುದೋ 'ಅಸಹಾಯಕ ಪರಿಸ್ಥಿತಿ'ಯಲ್ಲಿ ಕೃಷಿಕನಿದ್ದಾನೆ. ಅಂತೆಯೇ ಕೃಷಿಯಲ್ಲಿ ಇರಬಹುದಾದ ಧನ್ಯತೆಯ, ಆನಂದದ ಇನ್ನೊಂದು ಮುಖ - ಭೂಮಿಯನ್ನು ತಾಯಿಯೆಂದು ಗೌರವಿಸಿ, ಉತ್ತು ಬಿತ್ತು ಬೆಳೆದು, ನಷ್ಟದಿಂದ ಕೆಲವೊಮ್ಮೆ ನೊಂದರೂ ನುಂಗಿಕೊಂಡು, ಅದರಲ್ಲೇ ಕಾಯಕನಿಷ್ಠೆ ಮೆರೆದು ಬಾಳುವ ನೇಗಿಲಯೋಗಿಯ ಹಾಡಿನ ಭವ್ಯಚಿತ್ರವೂ ಇದೆ. ಇಂಥ ಬೇಸಾಯಗಾರರ ಪಾಡು-ಹಾಡಿನ ಅನುಭವಚಿತ್ರಣ ಅವರ ಮಾತುಗಳಲ್ಲೇ ದಾಖಲಿಸುವುದು ಮುಂದಿನ ಪೀಳಿಗೆಗೆ, ಸಮಾಜಕ್ಕೆ ಅತ್ಯುಪಯುಕ್ತ ಕಾರ್ಯವಾಗಿದೆ. ಕೃಷಿಯಲ್ಲಿ ತೊಡಗಿದ ಎಲ್ಲ ಜನ-ಜನಾಂಗಗಳ ಕೃಷಿಜೀವನದ ಅನುಭವಗಳು ನಿವೇದನೆಯ, ಮಾತಿನ ಮೂರ್ತರೂಪ ತಳೆದು ಸಾಹಿತ್ಯವಾಗಿ ದೊರೆತಲ್ಲಿ ನಮ್ಮದೇಶದ ಗ್ರಾಮೀಣಭಾಗದ ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಪೂರಕವಾಗುವುದರಲ್ಲಿ ಸಂಶಯವಿಲ್ಲ. ಕೃಷಿಕರು ಬಹುಮಟ್ಟಿಗೆ ಜನಸಾಮಾನ್ಯರು. ಧರ್ಮ, ಜಾತಿಯ ಭೇದವಿಲ್ಲದೆ ಹಳ್ಳಿಗಳಲ್ಲಿ ಕೃಷಿಯನ್ನು ಜೀವನಾಧಾರ ವೃತ್ತಿಯನ್ನಾಗಿಸಿ ಜೀವಿಸುತ್ತಿರುವ ಅನ್ನದಾತರ ಅನಿಸಿಕೆಗಳೇನು ಎಂಬುದನ್ನು ಆಧುನಿಕ ಸಮಾಜ ಗಮನಿಸಬೇಕಾಗಿದೆ. ಈ ಸಂಬಂಧ ಆಗಾಗ ಪತ್ರಿಕೆಗಳಲ್ಲಿ, ದೂರದರ್ಶನ ಮುಂತಾದ ಮಾಧ್ಯಮಗಳಲ್ಲಿ ವರದಿ, ಲೇಖನ, ಸಂದರ್ಶನ, ದೃಶ್ಯಾವಳಿಗಳು ಬಿತ್ತರವಾಗುತ್ತಿರುತ್ತವೆ. ಇದರೊಡನೆ ಕೃಷಿಕರ ಸಂದರ್ಶನ, ಪರಾಮರ್ಶನಗಳು ಪುಸ್ತಕರೂಪದಲ್ಲಿ ಬಂದಲ್ಲಿ ಓದಿಗೆ ಅನುಕೂಲವಾಗಿ ಸಾಹಿತ್ಯಲೋಕದಲ್ಲಿ ಶಾಶ್ವತದಾಖಲೆಯಾಗಿ ಉಳಿಯುತ್ತವೆ. ಈ ನಿಟ್ಟಿನಲ್ಲಿ ಬ್ರಾಹ್ಮಣವರ್ಗದ 'ಸಂಕೇತಿ ಬೇಸಾಯದ ಬದುಕು' - ಕೃತಿ ಶ್ರೀ ವಿಜಯ್ ಅಂಗಡಿ ಹಾಗೂ ಡಾ. ಎಂ.ಎಸ್. ವಿಜಯಾ ಹರನ್‌ರವರ ಪರಿಶ್ರಮದ ಫಲವಾಗಿ ರೂಪುಗೊಂಡಿದ್ದು, ಔಚಿತ್ಯಪೂರ್ಣವಾಗಿದೆ.

'ಸಂಕೇತಿ: ಬೇಸಾಯದ ಬದುಕು' - ಕೃತಿಯಲ್ಲಿ ಒಳಶೀರ್ಷಿಕೆಗಳು ಎರಡುಮುಖಗಳ ಸ್ವರೂಪ ಹೊಂದಿವೆ. ಹಾಸನದ ಆಕಾಶವಾಣಿ ಕೃಷಿರಂಗ ವಿಭಾಗದ ಶ್ರೀ ವಿಜಯ್ ಅಂಗಡಿಯವರು ಸಂಕೇತಿಕೃಷಿಕರೊಡನೆ ನಡೆಸಿದ ಸಂದರ್ಶನ

ಸುಮಾರು ಒಂದುನೂರು ಪುಟಗಳಿದ್ದು ಈ ಭಾಗಕ್ಕೆ 'ಅವಲೋಕನ' ಎಂಬ ಹೆಸರು ಅನ್ವರ್ಥವಾಗಿದೆ. ಅನಂತರದಲ್ಲಿ ಡಾ. ಎಂ.ಎಸ್. ವಿಜಯಾ ಹರನ್‌ರವರು ವಿವಿಧಕಾಲಗಳಲ್ಲಿ ವಿವಿಧಲೇಖಕರು, ವಿದ್ವಾಂಸರು ಬರೆದಿರುವ, ಪತ್ರಿಕೆಗಳಲ್ಲಿ ಪ್ರಕಟಿಸಿರುವ ಸಂಕೇತಿ ಜೀವನ, ಕೃಷಿಗೆ ಸಂಬಂಧಿಸಿದ ಲೇಖನಗಳನ್ನು, ವಿಚಾರಗಳನ್ನು ಸಂಕಲಿಸಿದ್ದು 'ಅನೂಚಾನ' ಎಂಬ ಶೀರ್ಷಿಕೆಯಿಂದ ಸವಿಸ್ತಾರದಿಂದ ಕೂಡಿ ಗಮನ ಸೆಳೆಯುವಂತಿದೆ. ತಮಿಳುನಾಡು, ಕರ್ನಾಟಕದ ಬ್ರಾಹ್ಮಣರಲ್ಲಿ ಸಂಕೇತಿಗಳು ನಡೆದುಬಂದ ದಾರಿಯ ಬಗ್ಗೆ, ಸಂಕೇತಿ ಸಮುದಾಯದ ವ್ಯವಸಾಯವಿಧಾನಗಳ ಬಗ್ಗೆ - ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳ ಹಿನ್ನೆಲೆಯಲ್ಲಿ ಸಂದರ್ಶನ, ಸಂಶೋಧನ, ಪ್ರಕಟಣ ಕಾರ್ಯಗಳಲ್ಲಿ ತಮ್ಮೆಲ್ಲ ಆಸಕ್ತಿಗಳನ್ನು ತೊಡಗಿಸಿಕೊಂಡಿರುವ ಡಾ. ಪ್ರಣತಾರ್ತಿಹರನ್ ಹಾಗೂ ಮೈಸೂರು ಆಕಾಶವಾಣಿ ಕೇಂದ್ರದ ನಿರ್ದೇಶಕರೂ ಡಾ. ಹರನ್ ಅವರ ಶ್ರೀಮತಿಯವರೂ ಆದ ಡಾ. ಎಂ.ಎಸ್. ವಿಜಯಾ ಹರನ್‌ರವರ ಪ್ರೇರಣೆ, ಸಹಕಾರ ಕಾರಣವಾಗಿ ಪ್ರಸ್ತುತ ಕೃತಿ ಪ್ರಕಟಗೊಂಡಿದೆ. "ಸಂಕೇತಿ ಬಳಗದ ಕೃಷಿಯ ಈ ಅಪರೂಪದ ಗ್ರಂಥವು ಜೋಪಾನವಾಗಿ ಸಂಗ್ರಹಿಸಿ ಆಗಾಗ್ಗೆ ಬಳಸಲು ಯೋಗ್ಯವಾಗಿದೆ ಎಂಬುದು ನನ್ನ ಭಾವನೆ" - ಎಂಬ ಲೇಖಕರ ಮಾತು ಗಮನಾರ್ಹ. ಕೃತಿಯ ಮೊದಲಭಾಗ 12-10-2002 ರಿಂದ 15-11-2003ರ ನಡುವೆ ನಡೆಸಿರುವ ಕ್ಷೇತ್ರಕಾರ್ಯವಾಗಿದ್ದು 2010ರಲ್ಲಿ ಪ್ರಕಟಗೊಳ್ಳುತ್ತಿದೆ. ಈ ಅವಧಿಯಲ್ಲಿ ವ್ಯವಸಾಯಸ್ಥ ಸಂಕೇತಿಕುಟುಂಬಗಳ ಜೀವನಚಿತ್ರ ಸ್ಥಿತ್ಯಂತರಗಳನ್ನು ಕಂಡಿರಬಹುದಾದರೂ ವ್ಯವಸಾಯಕ್ಕೆ ಸಂಬಂಧಿಸಿದಂತೆ ಪ್ರಸ್ತುತವೆನ್ನಬಹುದಾದ, ಇಂದು ಮುಂದಿನ ಪೀಳಿಗೆಯವರೂ ಗುರುತಿಸಿಕೊಳ್ಳಬಹುದಾದ ವಿಚಾರಗಳು, ಸಂಗತಿಗಳು ಕೃತಿಯ ಗೌರವವನ್ನು ಹೆಚ್ಚಿಸುತ್ತವೆ. ಒಂದು ಕಾಲದ ಒಂದು ಜನಾಂಗದ ಕೃಷಿಯ ಪ್ರಾದೇಶಿಕ ಆವರಣ ದಾಖಲಾಗಿ ಅಧ್ಯಯನಯೋಗ್ಯವಾಗುವುದೇ ಇಲ್ಲಿಯ ಪ್ರಯೋಜನ. ಕಾವ್ಯಪ್ರಕಾಶಕಾರ ಮಮ್ಮಟ ಕಾವ್ಯ ಪ್ರಯೋಜನಗಳಲ್ಲಿ ಒಂದಾಗಿ 'ವ್ಯವಹಾರವಿದೇ' ಕಾವ್ಯದಿಂದ ವ್ಯವಹಾರಜ್ಞಾನ ಉಂಟಾಗುತ್ತದೆ ಎಂದಿದ್ದಾನೆ. ಅಂತೆಯೇ ಕೃಷಿಕರು ಕೃಷಿಸಂಬಂಧದ ಗ್ರಂಥಗಳನ್ನು ಓದಿದಲ್ಲಿ ವ್ಯವಸಾಯದ ಬಗೆಗೆ ವ್ಯವಹರಿಸುವ ಅರಿವು ಜಾಗೃತವಾಗದೆ ಇರುವುದಿಲ್ಲ. ಲೇಖಕರ 'ಆಗಾಗ್ಗೆ ಬಳಸಲು ಯೋಗ್ಯವಾಗಿದೆ' - ಎಂಬ ಮಾತಿನ ಅರ್ಥ ಇದೇ ಆಗಿದೆ.

'ಅವಲೋಕನ' ವಿಭಾಗದಲ್ಲಿ ಹಾಸನಜಿಲ್ಲೆಯ ಅಗ್ರಹಾರ, ಮಗ್ಗೆ, ನವಿಲೆ, ಮಾದಾಪುರ, ಬಸವಾಪಟ್ಟಣ, ರುದ್ರಪಟ್ಟಣ ಮುಂತಾದ ಸುಮಾರು ಹದಿನೈದು ಗ್ರಾಮಪ್ರದೇಶಗಳಲ್ಲಿ ಕೃಷಿಬದುಕು ನಡೆಸುತ್ತಿರುವ ಸಂಕೇತಿಕುಟುಂಬಗಳನ್ನು ಸಂದರ್ಶಿಸಿ ಅವರ ಅನಿಸಿಕೆಗಳನ್ನು ಇದ್ದಂತೆ ಸಂಗ್ರಹಿಸಿಕೊಡುವ ಪ್ರಾಮಾಣಿಕ ಪ್ರಯತ್ನವಿದೆ. ಅನೇಕ ಕಡೆ ಸಂದರ್ಶನದ ದಿನಾಂಕ, ಸಂದರ್ಶಿಸಿದವರ ವಿಳಾಸ, ದೂರವಾಣಿ ಸಂಖ್ಯೆ ಒದಗಿಸಿರುವುದು ಸಮುಚಿತವಾಗಿದೆ. ಪ್ರತಿಗ್ರಾಮದ ಬೇಸಾಯಗಾರರ ಸಂದರ್ಶನವಿವರ ನೀಡುವ ಮೊದಲು ಒಟ್ಟಾರೆಯಾಗಿ ಆ ಗ್ರಾಮದ ಕೃಷಿಯ ಅನುಕೂಲ-ಅನಾನುಕೂಲಗಳ ಬಗ್ಗೆ ವಿಶೇಷಗಳೇನಾದರೂ ಇದ್ದಲ್ಲಿ ಅದರ ಬಗ್ಗೆ ಆದಷ್ಟು ಸಂಗ್ರಹವಾಗಿ ಮಾಹಿತಿ ನೀಡಲಾಗಿದ್ದು ಸಂದರ್ಶನಕ್ಕೆ ಒಳ್ಳೆಯ ಪೀಠಿಕೆಯನ್ನೊದಗಿಸಿದೆ. ಮಾದಾಪುರದಲ್ಲಿ 'ಅಡಿಕೆಯು ಇಲ್ಲಿ ಪ್ರಮುಖವಾದ ಬೆಳೆಯಾದರೂ ಬತ್ತ, ತಂಬಾಕು ಮತ್ತು ಶುಂಠಿಯನ್ನು ಕೈಬಿಟ್ಟಿಲ್ಲ. ಆಸಕ್ತಿ ಇಲ್ಲಿ ಕುಂದಿಲ್ಲ. ಶೇಷಮೂರ್ತಿಯವರ ಬದುಕು ಮಾದರಿ ಅನ್ನಿಸುತ್ತದೆ' - ಎಂಬ ಟಿಪ್ಪಣಿ ಸಂದರ್ಶನದ ಸಾರಸಂಗ್ರಹದಂತಿದೆ. ಓದುಗರನ್ನು ಓದಿಗೆ ಹಚ್ಚಲೂ ಸಹಾಯಕವಾಗಿದೆ. ಸಂದರ್ಶನದ ಕಡೆಯಲ್ಲಿ 'ನನಗನಿಸಿದ್ದು ಹೀಗೆ...', 'ನಾನು ಕಂಡದ್ದು, ಗಮನಿಸಿದ್ದು', 'ಮುಗಿಸುವ ಮುನ್ನ' - ಮುಂತಾಗಿ ಸಲಹಾರೂಪವಾಗಿ ಕೆಲವು ಅಭಿಪ್ರಾಯಗಳನ್ನು ಕೊಟ್ಟಿರುವುದು ಒಂದು ವಿನೂತನ ತಂತ್ರವಾಗಿ ರೈತ-ಓದುಗರಿಗೆ ತುಂಬಾ ಉಪಯುಕ್ತವಾಗಿದೆ. ನಿದರ್ಶನಕ್ಕೆ - ಅಗ್ರಹಾರದ ನಟೇಶರ ಗಮನ ಸೆಳೆದ ಹಣ್ಣಿನ ತೋಟ, ತಂಬಾಕು ಬೆಳೆಯ ವಿಧಾನಗಳನ್ನು ಗಮನಿಸಿ. 'ಹಣ್ಣಿನ ತೋಟದ ಅಂಚಿನಲ್ಲಿ ಗಿಡಮರಗಳು ಒತ್ತೊತ್ತಾಗಿ ಬೆಳೆಯುತ್ತಿವೆ. ಬಿಸಿಲು, ನೀರು, ಪೋಷಕಾಂಶಗಳು ಸರಿಯಾಗಿ ಸಿಗದೆ ಯಾವೂ ಸರಿಯಾಗಿ ಬರುವುದಿಲ್ಲ. ಅಗತ್ಯವಾದವುಗಳನ್ನು ಉಳಿಸಿಕೊಂಡು ಉಳಿದವುಗಳನ್ನು ಸ್ಥಳಾಂತರಿಸುವುದು

ಇಲ್ಲವೇ ತೆಗೆದು ಹಾಕುವುದು ಸೂಕ್ತವಾದುದು'; 'ಮಳೆ ನೀರನ್ನು ಜಮೀನಿನಲ್ಲಿ ನಿಲ್ಲಿಸಿ ಇಂಗಿಸುವ ಕ್ರಮಗಳನ್ನು ಕೈಗೊಳ್ಳುವುದು ಇಂದಿನ ದಿನಗಳಲ್ಲಿ ಅಗತ್ಯವೆನಿಸುತ್ತದೆ' - ಎಂಬ ಸಲಹೆಗಳು ಅರ್ಥಪೂರ್ಣವಾಗಿವೆ. ಇದೇ ರೀತಿ ತೆಂಗಿಗೆ ಸಂಬಂಧಿಸಿದಂತೆ, ಸರಗೂರು ಕೃಷಿಕರ ಆಸಕ್ತಿಯ ಬಗ್ಗೆ, ಬಸವಾಪಟ್ಟಣದ ಬೇಸಾಯಸ್ಥರ ಬದಲಾದ ಜೀವನಕ್ರಮಗಳ ಬಗ್ಗೆ ಲೇಖಕರ ಪರಿಶೀಲನಾತ್ಮಕ ದೃಷ್ಟಿ ಬರವಣಿಗೆಗೆ ಒಂದು ಸೊಗಸನ್ನು ತಂದಿರುವುದಲ್ಲದೆ, ಮಾಹಿತಿಯ ನಿಟ್ಟಿನಿಂದ ಮೌಲಿಕವಾಗಿದೆ. ಸ್ವತಃ ಕೃಷಿ ಪದವೀಧರರಾಗಿ, ಆಳವಾಗಿ ಕೃಷಿಲೋಕವನ್ನು ಅಧ್ಯಯನ ಮಾಡಿರುವ ಶ್ರೀ ವಿಜಯ್ ಅಂಗಡಿಯವರು ಸಂಕೇತಿಜನಾಂಗದ ಕೃಷಿಯ ಒಲವುನಿಲವುಗಳನ್ನು, ಕಷ್ಟಕಾರ್ಪಣ್ಯಗಳನ್ನು, ಆರ್ಥಿಕಸ್ಥಿತಿಯನ್ನು ಸೂಕ್ಷ್ಮವಾಗಿ ಕಂಡು ರೈತಸಮಸ್ಯೆಗಳಿಗೆ ಸೂಕ್ತಪರಿಹಾರೋಪಾಯಗಳನ್ನು ನೀಡಿದ್ದಾರೆ. ಹೊರಜಗತ್ತಿಗೆ ತೆರೆದುಕೊಳ್ಳದ ಸಂಕೇತಿಬೇಸಾಯದ, ಆಧುನಿಕತೆಯ ಪರಿಣಾಮಗಳಿಗೆ ಒಳಗಾದ ಕುಟುಂಬಗಳ ಚಿತ್ರಣ ನಿಷ್ಠುರವಾದ ಮಾತುಗಳಲ್ಲಿ ಹೊರಹೊಮ್ಮಿದೆ. ಸಂಕೇತಿ ಸಾಂಸ್ಕೃತಿಕನೆಲೆ, ಬತ್ತ, ಶುಂಠಿ, ತೆಂಗು, ವಿಳ್ಯೇದೆಲೆ ಮುಂತಾದ ಬೆಳೆಗಳಿಗೆ ಹೆಸರಾದ ರುದ್ರಪಟ್ಟಣವು ಇಂದು ಎಷ್ಟು ಬದಲಾಗಿದೆ ಎಂಬುದನ್ನು - 'ರುದ್ರರ ಕೊರತೆ - ವೃತ್ತಿಯೇ ಒಗರು', 'ನಶಿಸಿದ ಇಲ್ಲಿಯ ತೊಟ್ಟಿಮನೆ, ಕುಗ್ಗಿದ ಸಂಕೇತಿಗಳ ಜನಸಂಖ್ಯೆ, ವಿದ್ಯಾವಂತರಾಗಿ ನೌಕರಿ ಸೇರಿದವರಲ್ಲಿ ಕೃಷಿ ಬಗೆಗಿನ ನಿರಾಸಕ್ತಿ - ಇವೆಲ್ಲಾ ರುದ್ರಪಟ್ಟಣದಲ್ಲಿ ಕಾಣುತ್ತಿರುವ ಸಂಗತಿಗಳು' - ಎಂಬ ಮೊದಲ ಮಾತುಗಳಲ್ಲಿ ಸಂದರ್ಶನದ ಹೂರಣವನ್ನೇ ಒದಗಿಸಿ ನಿರೂಪಿಸಲಾಗಿದೆ.

ಸಂಕೇತಿಕೃಷಿಯಲ್ಲಿ ಅಡಿಕೆಬೆಳೆಗೆ ಬಹಳ ಪ್ರಾಶಸ್ತ್ಯ. ಅಡಿಕೆಯ ನಾಟಿ, ಪೋಷಣೆ, ರೋಗ, ತುಡಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ, ಇಳುವರಿ, ಮಾರಾಟ, ಹಿಂದಿನ, ಇಂದಿನ ಅಡಿಕೆ ವ್ಯಾಪಾರ, ಅಡಿಕೆ ತುಡಿಕೆ ಮಾಡುವ ಸರಗೂರಿನ ರೈತರ ಕ್ರಮ - ಇವು ವ್ಯವಸಾಯದ ಯಥಾರ್ಥ ವರದಿಯಾಗಿದ್ದು ನಿಷ್ಪಕ್ಷಪಾತೆಯಿಂದ ಕೂಡಿವೆ. ಬತ್ತದ ತಳಿ, ಬೆಳೆಯ ಬಗ್ಗೆ, ಬತ್ತದ ಕಣದ ಬಗ್ಗೆ ಸಂಗ್ರಹವಾಗಿ ಮಾಹಿತಿಯಿದೆ. ಮಲ್ಲರಾಜಪಟ್ಟಣದಲ್ಲಿ ವಿಳ್ಯೇದೆಲೆ ಸೊಬಗು - ಉಳಿವೇ ನಲಿವಾಗಿರುವುದರ ವಿವರ ಹೃದ್ಯವಾಗಿದೆ. ಅಡಿಕೆ ತೋಟದಲ್ಲಿ ವಿಳ್ಯೇದೆಲೆ ಬೆಳೆಯುವ, ಇಳಿಸುವ ವಿಧಾನ, ಪಿಂಡಿ ಕಟ್ಟುವ, ಮಾರಾಟದ ಕ್ರಮ, ಪ್ರಶ್ನೋತ್ತರ ರೂಪದಲ್ಲಿದ್ದು ಬೇಸಾಯಸ್ಥರ ಆಚಾರ, ನಂಬಿಕೆಗಳನ್ನು ಮನಗಾಣಿಸುವಂತಿದೆ ('ಸೋನೆ ಇದ್ದಾಗ ಎಲೆ ಕೊಯ್ಯೋದಿಲ್ಲ, ಹಂಬಿಗೆ ಹಾನಿ ಆಗಬಹುದೆಂಬ ನಂಬಿಕೆ ಇದೆ.' 'ಬರೀ ಉಗುರಿನಲ್ಲಿ ಎಲೇನ ಕೊಯ್ಯಬಾರದು..... ಚಪ್ಪಲಿ ಹಾಕಿಕೊಂಡು ತೋಟಕ್ಕೆ ಪ್ರವೇಶ ಮಾಡೋದಿಲ್ಲ') ವಿಳ್ಯೇದೆಲೆ ವ್ಯಾಪಾರದಲ್ಲಿ ಒಳ್ಳೆಯ ಲಾಭವಿರುವ ಸಂಗತಿ, ಇಬ್ಬರು ಕೃಷಿಕರಿಂದ ಲಭ್ಯವಿದ್ದು, 'ಅಡಿಕೆ ಬೆಳೆ ಮಂಕಾದ ಮೇಲೆ ವಿಳ್ಯೇದೆಲೆಗೆ ಪ್ರಾಮುಖ್ಯ ಬಂತು', 'ಹಿಂದೆ ಜನ ಜ್ಞಾನದಾಹಿಗಳಾಗಿದ್ದರು. ಈಗ ಹಣದಾಹ ಹೆಚ್ಚಾಗಿದೆ. ಇದರಿಂದಲೇ ನಾವು ನೆಮ್ಮದಿಯಾಗಿಲ್ಲ' ಎಂಬ ಅವರ ಅನಿಸಿಕೆಗಳು ಇಂದಿನ ವಸ್ತುಸ್ಥಿತಿಗೆ ಕನ್ನಡಿಯಾಗಿವೆ. ಇದೇ ರೀತಿ ತಂಬಾಕು, ಬಾಳೆ, ತೆಂಗು, ತೇಗ ಮುಂತಾದ ಬೆಳೆಗಳ ಪ್ರಸ್ತಾಪ ಪ್ರಾಸಂಗಿಕವಾಗಿ ಆಗಿದೆ. ಎರೆಹುಳು ಗೊಬ್ಬರ ಮಾಡಿ ರಾಸಾಯನಿಕಗಳನ್ನು ಬಳಸದೆ ಬೆಳೆ ಮಾಡುವ ರೈತರು, ಕುರಿಗೊಬ್ಬರದ ಲಭ್ಯತೆ, ಸರಗೂರಿನ ಕೃಷಿಕರ ಪರಿಸರಪ್ರಿಯ ಶುದ್ಧ ಕೃಷಿವಿಧಾನ, ಅಡಿಕೆಯಲ್ಲಿ ಕಿತ್ತಳೆ, ಮೂಸಂಬಿ, ನಿಂಬೆ ಮುಂತಾದ ಬೆಳೆ ಬೆಳೆವ ಬಹು ಮಹಡಿ ಬೆಳೆ ಪದ್ಧತಿ, ಹಿಂದಿನಕಾಲದ ಅಳತೆಗಳಾದ ಬಳ್ಳ, ಖಂಡಗ, ಹೇರು, ಸೇರು - ಇವುಗಳ ವಿವರ ವಿಶೇಷ ಮಾಹಿತಿ ಎನ್ನಬಹುದು. ಮೂಲ ಕಸುಬಾದ ಕೃಷಿಯನ್ನು ಸಂಕೇತಿ ಸಮುದಾಯ ಕೈಬಿಟ್ಟು ಜೀವನದ ಬೇರೆ ದಾರಿಗಳನ್ನು ಕಂಡುಕೊಳ್ಳಲು ಮುಂದಾಗಿರುವ ಕಾರಣಗಳು ಆಗಾಗ ಸಂದರ್ಶನಗಳಲ್ಲಿ ವ್ಯಕ್ತವಾಗಿದ್ದು ಇದು ಎಲ್ಲ ಕೃಷಿ ಅವಲಂಬಿತ ಜನಾಂಗಗಳಲ್ಲೂ ಇಂದು ಸರ್ವೇಸಾಮಾನ್ಯವಾಗಿದೆ. ಕೃಷಿಯ ಪರ್ಯಾಯ ಮಾರ್ಗಗಳಿಗೆ ಇನ್ನೂ ಪೂರ್ಣ ತೆರೆದುಕೊಳ್ಳದೆ, ಪಾರಂಪರಿಕ ವಿಧಾನಗಳಲ್ಲೇ ಸಾಗುತ್ತಿರುವ ಕೆಲವು ಕೃಷಿಕರ ಅನುಭವದ ಮಾತುಗಳು ಓದುಗರನ್ನು ತಟ್ಟುತ್ತವೆ: 'ಕೈಮುಟ್ಟಿ ಶ್ರದ್ಧೆಯಿಂದ ದುಡಿದಷ್ಟೂ ಏಳ್ಗೆ ಖಚಿತ', 'ತಂಬಾಕು ಅವಲಂಬನೆಯ ಕೃಷಿ :

ಅವಲಂಬನೆಯನ್ನು ಸಂಕೇತಿಗಳು ಇಷ್ಟಪಡಲ್ಲ', 'ನಾವು ತೋಟವನ್ನು ದೇವರಂತೆ ಕಾಣ್ತೇವಿ, ಚಪ್ಪಲಿಯನ್ನು ಹಾಕಿಕೊಂಡು ಒಳಗೆ ಹೋಗಲ್ಲ'. ಸಂದರ್ಶನದುದ್ದಕ್ಕೂ ಪೂರಕವಾಗಿ ಕೊಟ್ಟಿರುವ ಭಾವಚಿತ್ರಗಳು ಅರ್ಥಪೂರ್ಣವಾಗಿವೆ. ಕೆಲವು ಕೃಷಿಕರ ಸಂಗ್ರಹ ವಿವರವಿದ್ದ ಸಂದರ್ಶನಕ್ರಮ ಅನುಸರಿಸದಿರುವುದು ಬಹುಶಃ ಕಾಲಾವಕಾಶವಾಗದ ಕಾರಣವಿರಬಹುದು. ಕೃಷಿ ಸಂಶೋಧನಾ ಪ್ರತಿಷ್ಠಾನದಲ್ಲಿ ಕಾರ್ಪೋರೇಟ್ ಸಲಹೆಗಾರರಾದ ಶ್ರೀ ರಮೇಶ್ ಹರವೆ ಅವರ ಸಂದರ್ಶನ ವಿಸ್ತೃತವಾಗಿ ಒದಗಿಸಿದ್ದರೆ ರೈತರಿಗೆ ಬಹಳ ಪ್ರಯೋಜನವಾಗುತ್ತಿತ್ತು. ಒಟ್ಟಿನಲ್ಲಿ ಶ್ರೀ ವಿಜಯ್ ಅಂಗಡಿಯವರ ಈ ಕ್ಷೇತ್ರಕಾರ್ಯ ರೈತರಿಗೆ, ಸಂಶೋಧಕರಿಗೆ, ಓದುಗರೆಲ್ಲರಿಗೆ ಉಪಯುಕ್ತವಾಗಿದ್ದು ಹಾಸನಜಿಲ್ಲೆಯ ಸಂಕೇತಿಕೃಷಿಯ ಸ್ವರೂಪವನ್ನು ಯಥಾಸ್ಥಿತಿ ಮನಗಾಣಿಸುವಂತಿದ್ದು ಸಾರ್ಥಕ ಬರಹವಾಗಿದೆ.

ಗ್ರಂಥದ ಮುಂದಿನಭಾಗ 'ಅನೂಚಾನ' ಪ್ರತ್ಯೇಕವಾದ ತನ್ನದೇ ಆದ ಸಾಹಿತ್ಯಸ್ವರೂಪವನ್ನು ಹೊಂದಿದ್ದು ಮಾಹಿತಿಭರಿತವಾಗಿದೆ. ರೈತರ ಸಂದರ್ಶನಗಳು, ಸ್ಮರಣಸಂಚಿಕೆಗಳ ಉದ್ಧೃತ ಬರಹಗಳು, ಕವನಗಳು, ಮೈಸೂರು ಜನಗಣತಿ ವರದಿ, ಸಂಕೇತಿಬದುಕನ್ನು ಕುರಿತಾದ ವಿಮರ್ಶೆ, ಸಮೀಕ್ಷೆಗಳು, ಸಂಶೋಧನಾ ಕಡತಗಳ ಉದ್ಧರಣಗಳು, ದೇಶ-ವಿದೇಶಗಳ ಸಂಕೇತಿ ಸಮುದಾಯದ ಉಲ್ಲೇಖಗಳು ಮುಂತಾಗಿ ವೈವಿಧ್ಯಮಯವಾದ ಬರಹಗಳಿಂದ ಕೂಡಿದ್ದು ಆಕರ್ಷಕವಾಗಿದೆ. ಕನ್ನಡಸಾಹಿತ್ಯದಲ್ಲಿ ಬೆಳೆಯೇನೋ ಸಾಕಷ್ಟಿದೆ; ಆದರೆ ಕೊಯ್ಯುವವರು ಕಡಿಮೆ - ಎಂದು ನಮ್ಮ ಹಿರಿಯ ಸಾಹಿತಿ ಬಿ. ಎಂ. ಶ್ರೀ ಅವರು ಉದ್ಗರಿಸಿದಂತೆ - ಸಂಕೇತಿ ಬದುಕು ಮತ್ತು ಕೃಷಿಯ ಬಗ್ಗೆ ಹಿಂದಿನಿಂದಲೂ ಸಾಕಷ್ಟು ಸಂವಾದಗಳು, ವಿಚಾರಗಳು, ಬರಹಗಳಿದ್ದರೂ ಎಲ್ಲವೂ ಎಲ್ಲರಿಗೂ ತಲುಪುವ ಮಾರ್ಗೋಪಾಯಗಳು ಕಡಿಮೆ. ಈ ನಿಟ್ಟಿನಿಂದ 'ಸಂಕಲನ' - 'ಸಂವಹನ' ಅತ್ಯಂತ ಮುಖ್ಯವಾಗುತ್ತದೆ. ಇದೊಂದು ಸಾಹಸದ, ಸಾಧನಾಕಾರ್ಯ. ಸಂಕಲನಕಾರನ ಉತ್ಸಾಹ, ಆಸಕ್ತಿ, ಶ್ರಮ, ವ್ಯಾಪಕವಾದ ಅಧ್ಯಯನಶೀಲತೆಯಿಂದ ಮಾತ್ರ ಇಂಥ ಜನೋಪಯೋಗಿ ಕಾರ್ಯಗಳು ಸಾಧ್ಯ. ಇದು ಬಣ್ಣಬಣ್ಣದ ಮಣಿಗಳನ್ನು ಆಯ್ದು ಒಂದು ಕ್ರಮದಲ್ಲಿ ದಾರದಲ್ಲಿ ಪೋಣಿಸಿ ಅದಕ್ಕೆ ಸುಂದರವಾದ ಹಾರದ ಸೊಬಗನ್ನು ತಂದುಕೊಡುವ ಕಲೆಯಂತೆ. ಡಾ. ಎಂ.ಎಸ್. ವಿಜಯಾ ಹರನ್‌ರವರು ಸಂಕೇತಿ ಕೃಷಿ, ಬದುಕಿನ ಸಾಹಿತ್ಯದ ಸಂಪಾದನಾ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೊಂಡು ಯಶಸ್ವಿಯಾಗಿದ್ದಾರೆ. ಯಾವುದು ಪರಂಪರೆಯನ್ನು ಎಡೆಬಿಡದೆ ಅನುಸರಿಸುವುದೋ, ಅಭ್ಯಾಸ, ಅಧ್ಯಯನದಲ್ಲಿ ಅತೀತವಾದ ಆಸಕ್ತಿಯುಳ್ಳದ್ದೋ ಅದು 'ಅನೂಚಾನ'. ಸಂಕೇತಿ ಜೀವನ ಪರಂಪರೆಯ ಅನೇಕ ಸಮೃದ್ಧ ವರ್ಣಚಿತ್ರಗಳಿಂದ ಕೂಡಿರುವ ಈ ಗ್ರಂಥಭಾಗಕ್ಕೆ 'ಅನೂಚಾನ' - ಎಂದು ಹೆಸರಿಸಿರುವುದು ಒಪ್ಪುವಂತಿದೆ.

ತಮಿಳುನಾಡಿನಿಂದ ಕರ್ನಾಟಕಕ್ಕೆ ವಲಸೆ ಬಂದ ನಾಚಾರಮ್ಮನ ಜೀವನ ಚರಿತ್ರೆಯ (ಶ್ರೀ ಎಂ. ಕೇಶವಯ್ಯ, 1938) ಮೊದಲ ಲೇಖನ ಸಂಕ್ಷಿಪ್ತವಾಗಿದ್ದರೂ ಮೊದಲಿನಿಂದಲೂ ಭೂವ್ಯವಸಾಯ ಹಾಗೂ ವೇದಶಾಸ್ತ್ರಗಳ ಅಭ್ಯಾಸದ ಜ್ಞಾನದಾಹ ಸಂಕೇತಿವರ್ಗಕ್ಕೆ ಕರಗತವಾಗಿತ್ತು ಎಂಬುದನ್ನು ಸಾರಿ ಹೇಳುತ್ತದೆ. ಟಿಪ್ಪುಸುಲ್ತಾನನಿಂದ ಜಹಗೀರು ಪಡೆದು, ಕೃಷ್ಣರಾಜ ಒಡೆಯರ ಆಳ್ವಿಕೆಯ ಅವಧಿಯಲ್ಲಿ ಕಾರಂಜಿಕೆರೆ ನಿರ್ಮಾಣ, ಅನಂತರದಲ್ಲಿ ಮೈಸೂರಿನಲ್ಲಿ 'ಅಂಚೆ ಅಮೃತ ಮಹಲ್ ಭಕ್ಷಿ'ಯಾಗಿ ನೇಮಕಗೊಂಡು ಹಲವಾರು ಸಮಾಜ ಸೇವಾಕಾರ್ಯಗಳನ್ನು ಮಾಡಿರುವ ತಿಪ್ಪಯ್ಯ ಅವರನ್ನು 'ಅಂಚೆ ತಿಪ್ಪಯ್ಯ' ಎಂದೇ ಕರೆಯುವುದುಂಟು. ಇವರ ವ್ಯಕ್ತಿಚಿತ್ರ ಸಂಗ್ರಹವಾದರೂ ಅವರ ಸಾಧನೆಯನ್ನು ಎತ್ತಿತೋರಿಸುವಂತಿದೆ. "ಮಳೆ ನಮ್ಮಲ್ಲಿ ಬೀಳದೆ ಮುಂದೆ ಹೋದಾಗ 'ಹಂಗಾಮಿ ಆಯ್ತು' ಎನ್ನುತ್ತೇವೆ." 'ಅಡಿಕೆಮರಕ್ಕೆ ತೂಕ (ನೀರು)' ಹಾಕುವ ವ್ಯಾಯಾಮ ಒಂದೇ ಸಾಕು. ಅದು ಸೂರ್ಯನಮಸ್ಕಾರ ಮಾಡಿದ್ದಕ್ಕೆ ಸಮ. ಸರ್ವಾಂಗಕ್ಕೂ ಅದು ಒಳ್ಳೆಯದು. 'ತೆಂಗು ತೇಲಿಸಿ ನೆಡು, ಅಡಕೆ ಆಳಕ್ಕೆ ನೆಡು, ಬಾಳೆ ಬಗದು ನೆಡು' ಮುಂತಾದ ಸ್ವಂತಪರಿಶ್ರಮದ ವ್ಯವಸಾಯಸ್ಥರ ಸ್ವಾನುಭವಾಮೃತ 'ಅವರವರ ಮಾತಿನಲಿ' ಭಾಗದಲ್ಲಿ ಕಾಣಬಹುದು. ಸಂಕೇತಿಗಳ ಅತಿಥಿ ಸತ್ಕಾರ, ಅಡುಗೆ, ಊಟ, ಹೆಂಗಸರು ಬಡಿಸುವ ವೈಖರಿ, ಜನಿವಾರ ಮಾಡುವುದು, ಗರಡಿ ಸಾಧನೆ ಇನ್ನಿತರ ಸಂಕೇತಿ ಹವ್ಯಾಸಗಳ

ಬಗ್ಗೆ, ವ್ಯವಸಾಯ ವೃತ್ತಿಯ ಧ್ಯೇಯದ ಬಗ್ಗೆ, ಸಂಘಜೀವನದ ಬಗ್ಗೆ ಮೆಚ್ಚುವ ಮಾತುಗಳಿವೆ. 'ವ್ಯವಸಾಯಕ್ಕೆ ಪ್ರಾಣಿಗಳನ್ನು ಉಪಯೋಗಿಸದೆ, ಕೈಕಾಲುಗಳನ್ನು ಬಳಸಿ ಸ್ವಂತಪರಿಶ್ರಮದಿಂದ ಬಾಳಬೇಕು ಎಂಬುದು ಸಂಕೇತಿಗಳ ಧ್ಯೇಯವಾಗಿತ್ತು. ಸ್ವಾವಲಂಬನೆ ಇವರ ಜೀವನದ ಗುರಿ.' 'ಸಂಕೇತಿಗಳ ಸಾಂಘಿಕಜೀವನದ ಸಾರ ಒಗ್ಗಟ್ಟು, ಪರಸ್ಪರ ಸಹಕಾರ ಇವುಗಳೇ ಆಗಿದ್ದವು'. ಪ್ರೊ. ಕೆ.ಎಸ್. ಕೃಷ್ಣಮೂರ್ತಿ ಅವರ 'ಸಂಕೇತಿ ಸಂಪದ' (1994) ಗ್ರಂಥದಿಂದ ತೆಗೆದ ಭಾಗ ಸಂಕೇತಿ 'ಗುರುಶಿಷ್ಯ ಪರಂಪರೆ' - ಗುರು ಹೇಳುವ ವೇದಮಂತ್ರವನ್ನು ಶಿಷ್ಯರು ಆಲಿಸುತ್ತಾ, ಹೇಳುತ್ತಾ, ಕಲಿಯುತ್ತಾ ಸಾಗುವ ರೀತಿ 'ಕಿವಿಗಳಿಗೆ ಇಂಪು, ಮೆದುಳಿಗೆ ತಂಪು. ಪ್ರಕೃತಿಯ ಮಡಿಲಲ್ಲಿ ವೇದೋಪಾಸನೆ, ಇದುವೆ ನಾದೋಪಾಸನೆ' - ಎಂಬ ಮಾತುಗಳಲ್ಲಿ ಆ ಪರಂಪರೆಯ ಚಿತ್ರ ಮೂಡುವಂತಿದೆ.

ಡಾ. ಬಿ.ಎಸ್. ಪ್ರಣತಾರ್ತಿಹರನ್ ಸಂಪಾದನೆಯ 'ಸಂತುಷ್ಟಿ'ಯಲ್ಲಿನ ಶ್ರೀ ಆರ್.ಎಲ್. ಅನಂತರಾಮಯ್ಯನವರ ರುದ್ರಪಟ್ಟಣದ ಮಧುರ ನೆನಪುಗಳು ಅತ್ಯಂತ ಸಹಜವಾಗಿ ಓದುಗರಿಗೆ ಮುದವೀಯುವಂತಿವೆ. 'ಸಂಸಕ್ತ' ಸಂಚಿಕೆಯ "ಹೋರಾಟಗಾರನ ನೆನಪುಗಳು" - ಭಾಗದಲ್ಲಿ ದೇಶಕ್ಕಾಗಿ ಸಂಪತ್ತು, ಜಮೀನು ವಿಲೇವಾರಿಯಾದ ಕಥನದಲ್ಲಿ ನಿಜಕ್ಕೂ ಸಾಧಕನೊಬ್ಬನ ಬದುಕು ಮನಕರಗಿಸುವಂತಿದೆ. ಬಾಗಾಯ್ತು ಕೃಷಿನಿರ್ವಹಣೆ, ತಮಿಳುನಾಡು, ಕರ್ಣಾಟಕದ ಸಂಕೇತಿಗಳಲ್ಲಿ ವಲಸೆಯಿಂದುಂಟಾದ ಭಿನ್ನತೆ - ಇವು ಆ ಜನಾಂಗದ ವಿಕಾಸ ನಿರೂಪಿಸುತ್ತಿವೆ. ಬೆಟ್ಟದಪುರದಲ್ಲಿ ಶಾಸ್ತ್ರಿಯವರು ತಮ್ಮ ತೋಟಕ್ಕೆ ಸೇರಿದಂತೆ ಒತ್ತುವರಿ ಮಾಡಿದ್ದಾರೆ ಎಂಬ ಸರ್ವೆ ಇಲಾಖೆಯ ಆಪಾದನೆಗೆ ಸಂಬಂಧಿಸಿದಂತೆ ಮಾಸ್ತಿಯವರ 'ಒಂದು ತಕರಾರ್ ತಖ್ತೆ' ಒಂದು ಸಣ್ಣ ಕಥೆಯೇ ಆಗಿ ಶಾಸ್ತ್ರಿಯವರ ಪ್ರಾಮಾಣಿಕತೆಯನ್ನು ಚಿತ್ರಿಸುತ್ತದೆ. ಸಂಸ್ಕೃತಗ್ರಾಮ ಮತ್ತೂರಿನ ಸಂಕೇತಿಗಳ ಸಂಸ್ಕೃತಭಾಷೆಯ ಬಳಕೆಯ ವೈಶಿಷ್ಟ್ಯ, ಪ್ರಜಾವಾಣಿ ಭೂಬಾಣದಲ್ಲಿ ಬಂದಿರುವ ಪತ್ರಿಕೆ ಸಮಾಚಾರ, ಸಂಕೇತಿ ಭಾಷೆಯಲ್ಲಿನ ಸಂಗ್ರಹಬರಹಗಳು ಮನ ಸೆಳೆಯುವಂತಿವೆ. ಸಂಕೇತಿ ಜನಾಂಗದ ಸುಸಂಸ್ಕೃತಿ ಇಂಥ ಚಿತ್ರಣಗಳಲ್ಲಿ ಮೂಡಿದೆ. 'ಪ್ರಕೃತಿ ಮತ್ತು ನಾನು' - ಲೇಖನದಲ್ಲಿ ಕಾವ್ಯಮಯ ಗದ್ಯದ ಭಾವಚಿತ್ರಣವಿದೆ. ಡಾ. ಬಿ.ವಿ. ಸುಧಾಮಣಿಯವರು ನಡೆಸಿರುವ ಓರ್ವ ವಯೋವೃದ್ಧರ ಕೃಷಿಯ ಅನುಭವದ ಸಂದರ್ಶನ, ಅಂತರ್ರಾಷ್ಟ್ರೀಯ ಸಮ್ಮೇಳನದ ಅನುಭವ, 'ಸಂಕೇತಿ' ಶಬ್ದದ ನಿಷ್ಪತ್ತಿಯ ವಿಚಾರಗಳು ಗಮನಾರ್ಹವಾಗಿವೆ. ಜಟ್ಟಿಯ ಕೈಯಲ್ಲೂ ಸೋಲಿಸಲಾಗದ ಅಪ್ಪಾಜಿಭಟ್ಟನ ಆಳ್ತನ (ಕಥಾವಸ್ತುವಾಗಿ ಸಂಕೇತಿಗಳು) ಸಂಕೇತಿಗಳ ಸಾಹಸಪ್ರವೃತ್ತಿಗೆ ಸಾಕ್ಷಿಯಾಗಿದೆ.

ಕರ್ಣಾಟಕ ಹೊರತಾಗಿ ತಮಿಳುನಾಡು, ಕೇರಳದ ದಕ್ಷಿಣಭಾರತದ ಕೆಲ ಗ್ರಾಮಪ್ರದೇಶಗಳಲ್ಲಿ ಡಾ. ಬಿ.ಎಸ್.ಪ್ರಣತಾರ್ತಿಹರನ್‌ರವರು ನಡೆಸಿರುವ ಸಂಕೇತಿ ಜನಾಂಗದ ಕೃಷಿಯ ಕ್ಷೇತ್ರಕಾರ್ಯವರದಿ ಈ ಗ್ರಂಥದ ಬೆಲೆಯುಳ್ಳ ಒಂದು ವಿಶೇಷ ಸಂಕಲನ ಎನ್ನಬಹುದು. ಆಧುನಿಕತೆ ಕಾರಣವಾಗಿ ಗ್ರಾಮಜೀವನ ತೊರೆದು ನಗರ ಸೇರಿರುವ ಸಂಕೇತಿ ಕುಟುಂಬಗಳ ನಿದರ್ಶನಗಳು ಈ ಸಂದರ್ಶನಗಳಲ್ಲಿ ದೊರೆಯುತ್ತವೆ. ಎಲತ್ತೂರು, ಅಯ್‌ಕುಡಿ, ಶಾಂಬವರ್ ವಡಹರೈ, ಶೆಂಕೊಟ್ಟೈ ಮುಂತಾದ ಪ್ರದೇಶಗಳ ಕೃಷಿಕರ ಐತಿಹಾಸಿಕ ಜೀವನವಿವರ ಕೆಲವರ ವಂಶವೃಕ್ಷದೊಡನೆ ನೀಡಲಾಗಿದೆ. ಕಾಲಡಿಯಿಂದ ಸಂಕೇತಿ ನೆಲೆಯನ್ನು ಗುರುತಿಸಿ, ಘಟ್ಟದ ಕೆಳಗೆ ಸಂಕೇತಿ ಬದುಕಿನ ವಿಸ್ತಾರವಿರುವುದಾದರೂ ಅದರ ಬೇರುಗಳು ಘಟ್ಟಗಳಲ್ಲಿತ್ತು ಎಂಬ ವಿಚಾರದೊಡನೆ ಬ್ರಾಹ್ಮಣರಲ್ಲಿ ಸಂಕೇತಿ ಚಹರೆಯ ಬಗ್ಗೆ ಮತ್ತು ಅಮಿಶ್ರಿತ ಸಂಕೇತಿ ಮನೆತನಗಳ ಲಕ್ಷಣದ ಬಗ್ಗೆ ಅಧ್ಯಯನಯೋಗ್ಯ ಸಂಗತಿಗಳನ್ನು ಪ್ರಸ್ತಾಪಿಸಲಾಗಿದೆ. ಸಂದರ್ಶನವೊಂದರಲ್ಲಿ ಪಟ್ಟಿಮಾಡಿರುವ ಸಂಕೇತಿಗಳ ಸ್ವಭಾವ ಅಂಥ ಬದುಕನ್ನು ಬಾಳಿದ ಎಷ್ಟೋ ಕುಟುಂಬಗಳ, ವ್ಯಕ್ತಿಗಳ ಆತ್ಮಕತೆಗಳನ್ನು ನೆನಪಿಸುವಂತಿದೆ. ನಗರೀಕರಣದಿಂದ ಸಂಕೇತಿಗಳು ಗ್ರಾಮಜೀವನಕ್ಕೆ ವಿಮುಖವಾದರೂ, ಹಿಂದಿನ ಸುಸಂಸ್ಕೃತ ಪರಂಪರೆ ಮರೆಯಾಗುತ್ತಿದ್ದು ಇದರಿಂದ ಬೇಸರವಾಗಬಹುದಾದರೂ ಸಂಕ್ರಮಣಾವಸ್ಥೆ ಅನಿವಾರ್ಯವಾದುದರಿಂದ ವಸ್ತುಸ್ಥಿತಿಯನ್ನು ಒಪ್ಪಿ ಮುಂದೆ ಸಾಗಬೇಕಾಗುತ್ತದೆ. ಎಂತಲೇ ಡಾ. ಹರನ್‌ರವರು - "ಸಂಕೇತಿಗಳ ಮೂಲದ್ರವ್ಯವಿರುವುದು ಈ ಚಲನಶೀಲತೆಯಲ್ಲಿ. ವಿಕಾಸಕ್ಕೆ ಮುಖಮಾಡಿದ ಗತಿಶೀಲತೆಯಲ್ಲಿ. ಇದು ಬ್ರಾಹ್ಮಣರಿಗೆ ವಿಶಿಷ್ಟವಾದ ಸಾಮಾನ್ಯ

ಗುಣ. ತೀವ್ರವಾಗಿ ತೊಡಗಿಸಿಕೊಂಡಂತೆ ಕಾಣುವಾಗಲೇ ಈ ಜಂಗಮತೆಯನ್ನು ಲೀಲಾಜಾಲವಾದ ಜೀವನವಿಧಾನವಾಗಿ ಮಾಡಿಕೊಳ್ಳುವುದರಲ್ಲಿ ಸಂಕೇತಿಗಳ ವಿಶಿಷ್ಟತೆ ಇದೆ" ಎಂದು ಪರಾಮರ್ಶಿಸಿದ್ದಾರೆ. ಮುಂದೆ ಬಸವಾಪಟ್ಟಣದ ಕೆಲ ವ್ಯವಸಾಯಗಾರರ ಅನಿಸಿಕೆಗಳಿದ್ದು ಅದರಲ್ಲಿ ಅಡಿಕೆ ತುಡಿಕೆಯ ಬಗ್ಗೆ ನುರಿತ ಉದ್ಯಮಿಯೊಬ್ಬರ ನಿರೂಪಣೆಯಿದ್ದು ಅಡಿಕೆ ಸಂಸ್ಕರಣ ವಿಧಾನ, ವ್ಯಾಪಾರ ವ್ಯವಹಾರದ ರೀತಿ ನೀತಿಗಳ ಅತ್ಯುಪಯುಕ್ತ ಉಚಿತ ಮಾಹಿತಿ ಆಗಿದೆ. ಹಾಸನಜಿಲ್ಲೆಯ ಸಂದರ್ಶನಗಳಲ್ಲದೆ ಕರ್ಣಾಟಕದ ಇತರ ನಗರಗಳಲ್ಲಿನ ಕೃಷಿಕರ ಸಂದರ್ಶನಗಳೂ ಈ ಸಂಕಲನದಲ್ಲಿವೆ. 'ನಗರಗಳ ಕೈ ತೋಟಗಳು' - ಶೀರ್ಷಿಕೆಯಲ್ಲಿ 'ಪುಟ್ಟಣ್ಣ ಶೂಟಿಂಗ್ ಮನೆ' - ಭಾವಚಿತ್ರಗಳೊಡನೆ ಪುಟ್ಟಣ್ಣನವರ ಶಿಷ್ಯರೊಬ್ಬರ ಗುರುಭಕ್ತಿ, ಸಾಧನೆಗೆ ದ್ಯೋತಕವಾಗಿದೆ. ಕೃಷಿಕನಾಗುವವನಿಗೆ ನೀಡಿರುವ ಅಮೂಲ್ಯ ಸಲಹೆಗಳಂತೂ ಕೃಷಿಕರು ಬರೆದಿಟ್ಟುಕೊಳ್ಳಬೇಕಾದದ್ದು. 'ಹಿತ್ತಲತೋಟ', 'ಆರೋಗ್ಯವನ'ಗಳ ಪರಿಚಯ ಮೌಲಿಕವಾದದ್ದು. ಔಷಧಯುಕ್ತ ಗಿಡಮೂಲಿಕೆಗಳು, ಪರಿಮಳ ಪತ್ರಪುಷ್ಪಗಳಿಂದ ಕೂಡಿರುವ ಬೆಂಗಳೂರಿನ ದೇವರಗುಡ್ಡ ಆರೋಗ್ಯವನ "ಒಂದು ದಿನದ ಸಾಧನೆಯಲ್ಲ; ಒಂದು ಜೀವಿತದ ತಪಸ್ಸು. ಇದು ಕೇವಲ ಹವ್ಯಾಸಕ್ಕಾಗಿ ಮಾಡಿದ ಕೆಲಸವಲ್ಲ, ರಾಷ್ಟ್ರಕ್ಕೆ ಅರ್ಪಣೆ ಮಾಡಲೆಂದು ಮಾಡಿದ ಹಲವು ದಶಕಗಳ ಯೋಜನೆ" - ಎಂಬ ಮಾತಿನಲ್ಲಿ ದೇಶಭಕ್ತಿ, ಸೇವಾದೃಷ್ಟಿ, ಸಾಮಾಜಿಕ ಪ್ರಜ್ಞೆ ಅಡಗಿದೆ.

ಹೊರದೇಶದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಡಾ. ಹರನ್‌ರವರು ನಡೆಸಿರುವ ಸಂದರ್ಶನವೂ ಗ್ರಂಥದ ಕಡೆಯಲ್ಲಿದ್ದು ಡಾ. ಕೃಷ್ಣ ಸುಬ್ಬರಾವ್‌ರವರ ಸಂಕ್ಷಿಪ್ತವಾದ ಜೀವನ ಚಿತ್ರ ಕೊಟ್ಟು ಕೃಷಿಕ್ಷೇತ್ರಕ್ಕೆ ಶ್ರೀಯುತರ ಕೊಡುಗೆಯನ್ನು ಹಲವು ನಿದರ್ಶನಗಳಿಂದ ವಿವರಿಸಿದ್ದಾರೆ. ಗೋಧಿಸಸಿಗೆ ಖಾಯಿಲೆಯಿದ್ದಾಗ, ಇಲ್ಲದಿದ್ದಾಗ ಇಳುವರಿ ಹೇಗೆಂಬುದನ್ನೂ ಎರಡು ಎಲೆಗಳಿಂದಲೇ ಎಲ್ಲ ಫಸಲು ಹೇಗೆ ಪಡೆಯಬಹುದೆಂಬುದನ್ನೂ ಸಂಶೋಧಿಸಿರುವುದು, ಒಂದೇ ಸಸ್ಯದಲ್ಲಿ ಔಷಧಿಯೂ ಇದೆ ಮತ್ತು ಕ್ರಿಮಿನಾಶಕ ಗುಣವೂ ಇದೆ ಎಂಬ ಸಂಶೋಧನೆಯನ್ನು ಅಮೆರಿಕಾದಲ್ಲಿ ಕನ್ನಡದವರೊಬ್ಬರು ಮಾಡಿರುವುದು ಹೆಮ್ಮೆಯ ಸಂಗತಿಯಾಗಿದೆ. ಅದೇ ಕೃಷಿಸಂಶೋಧಕರ ಲೇಖನದ ಅನುವಾದಿತ ಲೇಖನ 'ಜೈವಿಕ ಅಥವಾ ಸಾಂಪ್ರದಾಯಿಕ ಕೃಷಿ: ಒಂದು ಇನ್ನೊಂದಕ್ಕಿಂತ ಉತ್ತಮವೆ?' - ಒಂದು ವೈಚಾರಿಕ ಲೇಖನವಾಗಿದ್ದು ಕೇವಲ ಬೇಸಾಯಗಾರರಿಗೆ ಮಾತ್ರವಲ್ಲದೆ ಎಲ್ಲರಿಗೂ ಬೆಳೆಯ, ಆರೋಗ್ಯದ ಬಗ್ಗೆ ಮಾರ್ಗದರ್ಶನ ತೋರುವ ಬರವಣಿಗೆಯಾಗಿದೆ. ಡಾ. ಹರನ್ ಸಂಪಾದನೆಯ 'ಸಂಕೇತಿ: ಶತಮಾನದ ಪತ್ರಗಳು' ಹಾಗೂ 'ಸಂಕೇತಿ : ಒಂದು ಅಧ್ಯಯನ' ಗ್ರಂಥಗಳಿಂದ ಅನೇಕ ಉದ್ಧೃತಭಾಗಗಳಿವೆ. ಕಡೆಯಲ್ಲಿ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' - ಗ್ರಂಥದಿಂದ ಬಹಳಷ್ಟು ಕೃಷಿಕರಾಡಿದ ಮಾತುಗಳು ಸಂಗ್ರಹಿತವಾಗಿವೆ.

ಸಂಕೇತಿ ಬದುಕಿನ, ವ್ಯವಸಾಯದ ವಿವಿಧ ಕಾಲದ, ನಾನಾ ಆಯಾಮಗಳು ಈ ಸಂಕಲನದ ಸಂದರ್ಶನ, ಲೇಖನ, ಪರಿಚಯ, ಕವನಗಳಲ್ಲಿ ಹುದುಗಿವೆ. ಇಂಥ ಸಂಕಲನಗಳ ಆಶಯ, ಉದ್ದೇಶಗಳಾದರೂ ಬ್ರಾಹ್ಮಣವರ್ಗದ ಸಂಕೇತಿಜನಾಂಗದ ಸಾಮಾಜಿಕ, ಸಾಂಸ್ಕೃತಿಕ ನೆಲೆಬೆಲೆಗಳನ್ನು ಗೊತ್ತುಪಡಿಸುವುದಾಗಿದೆ. 'ಅನೂಚಾನ'ದ ಸಂಕಲನಗಳಲ್ಲಿ ವಸ್ತುವೈವಿಧ್ಯತೆಯಿದ್ದು ಡಾ. ಎಂ.ಎಸ್. ವಿಜಯಾ ಹರನ್‌ರವರು ಸಹೃದಯ ಓದುಗರಿಗೆ ಸೂಕ್ತ ಭಾವಚಿತ್ರಗಳನ್ನೊಳಗೊಂಡ ಒಂದು ಸುಂದರಕೃತಿಯನ್ನು ಒದಗಿಸಿದ್ದಾರೆ. 'ಸಂಕೇತಿ: ಬೇಸಾಯದ ಬದುಕು' - ಗ್ರಂಥದ ಇದೊಂದು ಸಾಮಾನ್ಯ ಅವಲೋಕನವಷ್ಟೆ. ವಿವರಗಳಿಗೆ, ವಿಚಾರಕ್ಕೆ ವಾಚಕರು ಕೃತಿಯನ್ನೇ ಓದಬೇಕು.

****

ಮೂರು ತಲೆಮಾರಿನ ಚಿತ್ರಣ

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಭಾಷಾವಿಜ್ಞಾನ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

ಡಾ. ಸಿ.ಎಸ್. ರಾಮಚಂದ್ರ
ಮೈಸೂರು

ಇದೊಂದು ಪ್ರವಾಸಕಥನದಂತೆ ಕಾಣುವ ಸಂಶೋಧನಾ ಕೃತಿ. ಈಗಿನ ತಮಿಳುನಾಡು-ಕೇರಳದ ಗಡಿಭಾಗದಲ್ಲಿ, ಮುಖ್ಯವಾಗಿ ಶೆಂಕೋಟ್ಟೈ ಪ್ರಾಂತದಲ್ಲಿ ನೆಲೆಸಿದ್ದ ಸಂಕೇತಿಗಳು ಅಡಿಕೆ ಬೇಸಾಯವನ್ನು ಪ್ರಧಾನವಾಗಿ ನಿರ್ವಹಿಸುತ್ತಿದ್ದ ಕೃಷಿಕರು. ೮೦೦ ವರ್ಷಗಳ ಹಿಂದೆ ಅಲ್ಲಿಂದ ಬಹುಪಾಲು ಸಂಕೇತಿಗಳು (ಈಗಿನ) ಕರ್ನಾಟಕಕ್ಕೆ ವಲಸೆ ಬಂದರು. ಇಲ್ಲಿಯೂ ಅವರು ಮಾಡಿದ್ದು ಪ್ರಧಾನವಾಗಿ ತೋಟಗಾರಿಕೆಯನ್ನೇ. ಅವರಿಗೆ ಕಾಯಕವೇ ಕೈಲಾಸ. ಅದರ ಜತೆಗೆ ಅವರ ಕೌಟುಂಬಿಕ, ಸಾಮಾಜಿಕ ಬದುಕು, ಅನನ್ಯತೆ ಇಲ್ಲಿ ಚಿತ್ರಿತವಾಗಿದೆ. ಬದುಕಿನ ಸವಾಲುಗಳನ್ನು ಎದೆಗುಂದದೆ ಸ್ವೀಕರಿಸಿದವರು ಇವರು. ಕಾಲಕ್ರಮದಲ್ಲಿ ತರಿ, ಖುಷ್ಕಿ ಬೇಸಾಯವನ್ನೂ, ಅಳವಡಿಸಿಕೊಂಡಿದ್ದಾರೆ, ಇತರ ವಾಣಿಜ್ಯ ಬೆಳೆ ಬೆಳೆದಿದ್ದಾರೆ, ಆಧುನಿಕ ಜ್ಞಾನವನ್ನು ಅದಕ್ಕಾಗಿ ಬಳಸಿಕೊಂಡಿದ್ದಾರೆ. ಆಶ್ರಯ ನೀಡಿದ ಕರ್ನಾಟಕದ ಜನರೂ ಪ್ರಭುಗಳೂ ಆಶ್ಚರ್ಯಪಡುವಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಪಶುಪಾಲನೆ ಮತ್ತು ಅಡಕೆ ವಹಿವಾಟು ಅವರ ಬದುಕಿಗೆ ಹೊಂದಿಕೊಂಡ ಪೂರಕ ಕ್ಷೇತ್ರಗಳು. ಬಹು ಹಿಂದಿನಿಂದಲೂ ಸಾವಯವ ಕೃಷಿಯನ್ನು ಅಳವಡಿಸಿಕೊಂಡಿದ್ದಾರೆ. ಎಲೆ, ಕಳೆ, ಬಾಳೆ, ತರಗು, ಸೋಗೆ ಇತ್ಯಾದಿ ವಸ್ತುಗಳನ್ನು ಗೊಬ್ಬರಕ್ಕೆ ಬಳಸಿದ್ದಾರೆ, ಉರವಲಾಗಿಸಿಕೊಂಡಿದ್ದಾರೆ; ಅಡಕೆಪಟ್ಟೆ, ಬಾಳೆಚೆಲ್ಲು, ಬಾಳೆನಾರು, ತೆಂಗಿನ ಜುಂಗು ಇವನ್ನು ಗೃಹಕೈಗಾರಿಕೆಯ ವಸ್ತುಗಳಾಗಿಸಿಕೊಂಡಿದ್ದಾರೆ. ಮುತ್ತುಗದ ಎಲೆ, ದೊನ್ನೆ ತಯಾರಿಕೆ, ಹಗ್ಗ ಸಿದ್ಧಪಡಿಸುವುದು, ಹುಣಸೆಹಣ್ಣು ರೇಖೆ ಮಾಡುವುದು ಅವರ ಗೃಹ ಕೈಗಾರಿಕೆಯ ಕೆಲ ನಿದರ್ಶನಗಳು. ಅಡುಗೆ ಮಾಡುವುದರಲ್ಲಿ ಅವರ ವಿಶೇಷವಿದೆ. ಸಾರು, ಮಜ್ಜಿಗೆಹುಳಿ, ಆಂಬೊಡೆ, ಜಿಲೇಬಿ, ಉದ್ದಿನ ಕಡುಬು, ಒತ್ತು ಶಾವಿಗೆ, ಎರಿಯಪ್ಪ ಅವರ ವಿಶಿಷ್ಟ ತಯಾರಿಗಳು. ಜನಿವಾರ ತಯಾರಿ, ನಾಟಿ ಔಷಧಿ, ಅಡಕೆ ಎಡೆಯುವುದು, ತುಡಿಕೆ ನಿರ್ವಹಣೆ ಅವರ ಇನ್ನಿತರ ಪರಿಣತ ಕ್ಷೇತ್ರಗಳು. ಗೃಹಕೃತ್ಯವಿರಲಿ, ವ್ಯವಸಾಯವಿರಲಿ ಪುರುಷರಿಗೆ ಸಮಾನವಾಗಿ ದುಡಿದವರು ಸಂಕೇತಿ ಸ್ತ್ರೀಯರು. ಪರಿಶ್ರಮ ಮತ್ತು ಬಡತನದಲ್ಲೂ ನೆಮ್ಮದಿ ಕಂಡವರು. ಸಂಗೀತ, ಕಲಾಕುಸುರಿ ಕೆಲಸ, ಪೋಷಾಕು ತಯಾರಿಕೆ ಇತ್ಯಾದಿ ನಾಜೂಕು ಕೆಲಸಗಳಿರಲಿ; ಅತಿಥಿ ಸತ್ಕಾರವಿರಲಿ; ದನ ಮೇಯಿಸುವುದು, ನೀರು ಹೊರುವುದು ಇಂಥ ಏನೇ ಇದ್ದರೂ ಸ್ತ್ರೀಯರು ಮುಂದು. ಮುಖ್ಯವಾಗಿ ಇಲ್ಲಿ ಎರಡು-ಮೂರು ತಲೆಮಾರಿನ ಜೀವನಚಿತ್ರಣವೇ ಇದೆ.

***

ಕಮಿಷನರೇಟ್ ಆಫ್ ಕೊಲಿಜಿಯೇಟ್ ಎಜುಕೇಷನ್
ಬೆಂಗಳೂರು

ಡಾ. ಬಿ.ಎಸ್. ನರಹರಿ
ಭೌತಶಾಸ್ತ್ರ ಪ್ರಾಧ್ಯಾಪಕರು (ನಿವೃತ್ತ)

ಇದು ಸಂಕೇತಿ ಗದ್ಯಮಹಾಕಾವ್ಯ

ಒಂದೆಡೆ ವೈದಿಕತೆ, ಇನ್ನೊಂದೆಡೆ ಕಠಿಣ ದೈಹಿಕ ದುಡಿಮೆ; ಒಂದೆಡೆ ಬೌದ್ಧಿಕತೆ, ಇನ್ನೊಂದೆಡೆ ಹೃದಯವಂತಿಕೆ; ಒಂದೆಡೆ ಉನ್ನತ ಆಧ್ಯಾತ್ಮಿಕತೆ, ಇನ್ನೊಂದೆಡೆ ಲೌಕಿಕದ ಸರಳತೆ - ಇದು ಸಂಕೇತಿ ಸಮುದಾಯದ ಬದುಕಿನ ಪಾಕ. ವೇದಾಧ್ಯಯನ, ಶಾಸ್ತ್ರಾಧ್ಯಯನ ಮತ್ತು ಬಾಗಾಯ್ತು ಕೃಷಿ - ಇವುಗಳು ಪರಿಣಾಮಿಸಿದ ಸಮರಸ ಅದು. ಜತೆಗೆ ಸಂಗೀತವು ತಾನಾಗಿಯೇ ಹುಟ್ಟಿ ನಾದಬ್ರಹ್ಮದ ಆರಾಧನೆ ಇನ್ನೊಂದು ಮಗ್ಗುಲಿನಿಂದ ನಡೆದಿದೆ. ಪಾರಂಪರಿಕ ಸಂಕೇತಿ ಬದುಕು ಎಂದರೆ ಈ ಎಲ್ಲದರ ಸಮುಚ್ಚಯವು ಕಟ್ಟಿದ ಶಿಖರದಲ್ಲಿ ಆತ್ಮಾರಾಮರಾಗಿರುವುದು. ಅದರಾಚೆಗಿನ ಎಲ್ಲವೂ

ದಾಹವಡಗಿಸದ ಪರದಾಟ. 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು', 'ಸಂಕೇತಿ ಬೇಸಾಯದ ಬದುಕು' ಎಂಬ ಎರಡೂ ಸಂಪುಟಗಳೂ ಸಂಕೇತಿ ಕೃಷಿಯ ಸಂಸ್ಮರಣ ಗ್ರಂಥಗಳಾಗಿ ಉಳಿದುಬಿಡುವ ಕ್ಷಿಪ್ರ ಸ್ಥಿತ್ಯಂತರವು ಸಂಕೇತಿ ಸಮುದಾಯದ ಬದುಕಿನಲ್ಲಿ ಆಗುತ್ತಿದೆ. ಹಾಗಿದ್ದೂ ಒಂದು ಆದರ್ಶ ಜೀವನಕ್ಕೆ 'ಮಾದರಿ'ಯನ್ನು ಈ ಸಂಪುಟಗಳು ಕಾಪಿಟ್ಟಿವೆ. ಶ್ರೀ ಎನ್. ಕೇಶವಮೂರ್ತಿಯವರ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬುದು ಪಕ್ಕಾ ಸಂಶೋಧನ ಕೃತಿ ಎಂಬುದು ನಿಜ. ಆದರೆ ಅದು ಅಷ್ಟೇ ಆಗಿ ಉಳಿದಿಲ್ಲ. ಅದೊಂದು ಗದ್ಯ-ಮಹಾಕಾವ್ಯವೇ ಆಗಿ ಅರಳಿಕೊಂಡಿದೆ. ಶ್ರೀ ಎನ್. ಕೇಶವಮೂರ್ತಿ ಕೇವಲ ಒಬ್ಬ ಕೃಷಿತಜ್ಞನಾಗಿದ್ದರೆ ಅದು ಈ ಎತ್ತರಕ್ಕೆ ಏರುತ್ತಿರಲಿಲ್ಲವೆನಿಸುತ್ತದೆ. ಅವರ ವ್ಯಕ್ತಿತ್ವದಲ್ಲಿ ತಪಸ್ಸು, ಸಹೃದಯತೆ, ಮುಕ್ತಮನ, ಕುತೂಹಲ, ವಿನಯಶೀಲತೆ, ಕಠಿಣ ಪರಿಶ್ರಮ, ಚಿಂತನೆ, ಸ್ಪಷ್ಟ ನಿಲುವು, ಲೇಖನ ಕಲೆ ಎಲ್ಲವೂ ಇವೆ. ಅವುಗಳ ಜತೆಗೆ ದ್ರಷ್ಟಾರನೊಬ್ಬನ ಒಳನೋಟವೂ ಇದೆ. ಹಾಗೆಂದೇ ಇದೊಂದು ಮಹಾಕಾವ್ಯದ ಶ್ರೇಷ್ಠತೆಯನ್ನು ಹೊಂದಿದೆ. ಖಂಡಿತವಾಗಿಯೂ 'ಸಂಕೇತಿ ಬೇಸಾಯದ ಬದುಕು' ಇದರ ಪ್ರಭಾವಳಿಯನ್ನು ಹಿಗ್ಗಲಿಸಿದೆ. ಹಾಗಾಗಿ ಶ್ರೀ ವಿಜಯ್ ಅಂಗಡಿ ಮತ್ತು ಡಾ. ಎಂ.ಎಸ್. ವಿಜಯಾ ಹರನ್ ಅವರೂ ಅಭಿನಂದನಾರ್ಹರಾಗಿದ್ದಾರೆ.

***

ಸಂಕೇತಿ ಅಧ್ಯಯನ ಮಾಲೆ

ಮೈಸೂರು

ಕೆ. ರಾಘವೇಂದ್ರರಾವ್
ಸಂಗೀತ ವಿಮರ್ಶಕರು

ಇಂಥ ಕೆಲಸ ಮಾಡುವವರಲ್ಲಿ ಈಗ Sincerityಯೂ ಇಲ್ಲ, involvement ಕೂಡ ಇಲ್ಲ; ಸುಮ್ಮನೆ ಮಾಡಬೇಕೆಂದು ಮಾಡುತ್ತಾರೆ. But, you are an exception.

*****

ಬೆಂಗಳೂರು

ಚಕ್ರಗಿರಿ ನಾಗೇಶ್
ಭಾರತೀಯ ಆಹಾರ ನಿಗಮ

ಸಣ್ಣದಾಗಿ ಪ್ರಾರಂಭಿಸಿ, ಅದ್ಭುತವನ್ನು ಸಾಧಿಸುತ್ತಿದ್ದೀರಿ. Yours is a perennial achievement.

*****

ಮೈಸೂರು

ವಿ.ಟಿ.ದೊರೆಸ್ವಾಮಿ ಶಿಕ್ಷಣತಜ್ಞರು

..... it is a monumental work

*****

ಮೈಸೂರು **ಡಾ|| ಕೆ. ಕೆಂಪೇಗೌಡ**

ಖ್ಯಾತ ಭಾಷಾಶಾಸ್ತ್ರಜ್ಞರು

ಹತ್ತು ಕಡೆ ಕೈಹಾಕಿ ಚದುರಿದ ಕೆಲಸ ಮಾಡುವ ಪರಿಪಾಠ ಈಗ ನಿಂತಿದೆ; ಏಕಮುಖವಾದ ಆಳ ಅಧ್ಯಯನ ಮತ್ತು ಬರವಣಿಗೆ ಈಗಿನ ರೀತಿ. ಅದರಿಂದಲೇ ಏನಾದರೂ ಕೊಡುಗೆ ಸಾಧ್ಯವಾಗುವಂಥದು. ನನ್ನ ದೃಷ್ಟಿಯಲ್ಲಿ ಅದೇ ಶ್ಲಾಘ್ಯವಾದುದು ಕೂಡ.

*****

ಪ್ರೊ. ವೈ.ಎನ್. ಶ್ರೀನಿವಾಸ್, ಮೈಸೂರು

ನಿಮ್ಮನ್ನು ತ್ರಿವಿಕ್ರಮ ಎನ್ನಬಹುದು; ಹಿಡಿದ ಕೆಲಸವನ್ನು ಬಿಡದೆ ಸಾಧಿಸುತ್ತಿದ್ದೀರಿ. Fantastic work....... Hats off to you.

***

ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ, ಮೈಸೂರು

ಯಾರೂ ಮಾಡಿಲ್ಲದ ಸಾಹಸ ಮಾಡುತ್ತಿದ್ದೀರಿ. ಈ ಸಂಬಂಧದ ನಿರಂತರ ತಪಸ್ಸು ಸಾಧಾರಣವಾದುದಲ್ಲ. ಸಮಾಜದಲ್ಲಿ ಇದಕ್ಕೆ ಒದಗುವ ವಿಘ್ನಗಳು, ಉಪವಿಘ್ನಗಳು, ಸರಣಿವಿಘ್ನಗಳನ್ನು ನಿಭಾಯಿಸುವುದಂತೂ ಇನ್ನೂ ಕಷ್ಟಸಾಧ್ಯವಾದ ಕೆಲಸ.

***

ಗೋಪಾಲಕೃಷ್ಣ, ಪ್ರಕಾಶಕರು, ಗೀತಾ ಬುಕ್ ಹೌಸ್, ಮೈಸೂರು

ನಿಮ್ಮದು ಕಠಿಣವ್ರತ. ಪುಸ್ತಕಪ್ರಕಾಶಕನಾಗಿ ಇದನ್ನು ಹೇಳುತ್ತಿದ್ದೇನೆ. ಹೇಗೂ ಸುಖವನ್ನು ಬಿಟ್ಟಿದ್ದೀರಿ, ವ್ರತವನ್ನು ಪೂರ್ಣಗೊಳಿಸಿ. ನಮ್ಮ ದೇಶದಲ್ಲಿ ಸಂಸ್ಥೆಗಳೂ ತಂಡಗಳೂ ಗುಣಾತ್ಮಕವಾಗಿಯೂ ಅಚ್ಚುಕಟ್ಟಾಗಿಯೂ ಕ್ಷಿಪ್ರವಾಗಿಯೂ ಪ್ರಾಮಾಣಿಕವಾಗಿಯೂ ಯೋಜನೆಗಳನ್ನು ಪೂರ್ಣಗೊಳಿಸುವುದು ತೀರಾ ಅಪರೂಪದ ಸಂಗತಿ. ಯಾವ ಸಿದ್ಧನಿಧಿಯೂ ಇಲ್ಲದೆ ನೀವು ಏಕಾಕಿಯಾಗಿ ಇದನ್ನು ನಿಭಾಯಿಸುತ್ತಿರುವ ರೀತಿ ನಮಗೆ ಹೊಸತು.

***

ರಾಮಶೇಷ, ಮಾದಾಪುರ

ಸಂಕೇತಿ ಅಧ್ಯಯನ ಮಾಲೆಯು ಐತಿಹಾಸಿಕ ಕೆಲಸ. ಅದರ ಸ್ವರೂಪವು ಅಮೂರ್ತವಾದುದು, ಆದರೆ ದೂರಗಾಮಿಯಾದ ಸಾರ್ಥಕವೂ ಶಾಶ್ವತವೂ ಆದ ಪರಿಣಾಮ ಬೀರುವಂಥದು.

***

ಪಿ. ರಘುಚಂದ್ರ ಭಟ್, ಹಾಸನ

ಈ ಸಂಪುಟಗಳ ಮೂಲಕ ನೀವು ತಲೆಮಾರುಗಳ ನಡುವೆ ಸೇತುವೆಯನ್ನು ನಿರ್ಮಿಸಿದ್ದೀರಿ.

ಕೆ. ರಾಘುವೇಂದ್ರರಾವ್, ಮೈಸೂರು

ಎಲ್ಲ ಸಮುದಾಯಗಳ ಜೀವನವಿಧಾನ ಮತ್ತು ಸ್ವರೂಪವೂ ಈಗ ತೀವ್ರವಾಗಿ ಬದಲಾಗುತ್ತಿದೆ. ನೀವು ಒಂದು 'ಮಾದರಿ'ಯ ನೆನಪನ್ನು ಉಳಿಸುತ್ತಿದ್ದೀರಿ.

***

ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ, ಮೈಸೂರು

ಎಷ್ಟೇ ಸಣ್ಣದೆನಿಸುವ ಮಾಹಿತಿಯಾದರೂ ದಾಖಲಾಗಬೇಕು. ಇಲ್ಲದಿದ್ದರೆ ನಮ್ಮ ಮೌಖಿಕ ಇತಿಹಾಸಕ್ಕೆ (Oral History) ನಷ್ಟವಾಗುತ್ತದೆ. ಎಷ್ಟೋ ಹೊಸ ಸಂಗತಿಗಳೂ ಆಂತರಿಕ ವಿಷಯಗಳೂ ರಹಸ್ಯಗಳೂ ನಮಗೆ ತಿಳಿಯುವುದು ಈ ಮೌಖಿಕ ಇತಿಹಾಸದಿಂದಲೇ. ಕಳೆದ ಶತಮಾನದಲ್ಲಿ ಕೆಲವರು ಮುಂದಾಲೋಚಿಸಿ ಬರೆದ ಕೆಲವು ಪುಸ್ತಕಗಳಿಂದ ನಮಗೆ ಅಮೂಲ್ಯ ಸಂಗತಿಗಳು ತಿಳಿಯುತ್ತಿವೆ. You have established yourself as a good worker... ಇತರ ಸಮುದಾಯದವರು ನಾಚಿಕೊಳ್ಳುವ ಹಾಗೆ (ನಿಮ್ಮ ಸಮುದಾಯದ ಬಗೆಗೆ ಅಧ್ಯಯನ ನಡೆಸಿ) ಪುಸ್ತಕಗಳನ್ನು ತರುತ್ತಿದ್ದೀರಿ....... ಅದು ನಿಮ್ಮ ರಕ್ತದಲ್ಲೇ ಇದೆ.

***

ಹೆಚ್.ಕೆ. ನಾಗಲಕ್ಷ್ಮಿ, ಮೈಸೂರು

ಇದು ಶಾಶ್ವತವಾದ ಕೆಲಸ. ಮುಂದೆ ನಮ್ಮ ಮೊಮ್ಮಕ್ಕಳೂ ಮರಿಮಕ್ಕಳೂ ಓದಿ 'ನಮ್ಮ ಸಂಕೇತಿಗಳು ಹಾಗಿದ್ದರಾ?' ಎಂದು ಬೆರಗುಪಡುವಂತೆ ವಿಸ್ತಾರವಾಗಿಯೂ ಅಚ್ಚುಕಟ್ಟಾಗಿಯೂ ಮಾಹಿತಿಯನ್ನು ಕ್ರೋಡೀಕರಿಸುತ್ತಿದ್ದೀರಿ. ಇದು ಶ್ಲಾಘ್ಯ.

***

ಸಂಸ್ಕೃತಿ ಸುಬ್ರಹ್ಮಣ್ಯ, ಮೈಸೂರು

'ಸಂಕೇತಿ' ಎಂಬ ಹೆಸರಿನಲ್ಲಿ ಬರುತ್ತಿದ್ದ ಪುಸ್ತಕಗಳನ್ನು ಕಂಡು 'ಇದೇನು, ಹೀಗೆ ಜಾತಿಗಳ ಬಗೆಗೆ ಬರೆಯುವುದು?' ಎಂದು ಮೂಗುಮುರಿಯುತ್ತಿದ್ದೆ. ಪುಸ್ತಕಗಳನ್ನು ಓದಿದಮೇಲೆ ತಿಳಿಯಿತು, ಇದು ಸಂಸ್ಕೃತಿಯ ಗಂಭೀರ ಅಧ್ಯಯನವೆಂದು. ಭಾರತದ ಎಲ್ಲ ಜಾತಿಗಳೂ ಒಂದೊಂದು ಸಂಸ್ಕೃತಿ ಘಟಕಗಳು, ಅವನ್ನೆಲ್ಲ ಅಧ್ಯಯನ ಮಾಡಬೇಕಾದ ಅಗತ್ಯ ಇದೆ ಅನಿಸಿತು. ನಿಮ್ಮ ಕೆಲಸ ಒಂದು ಸಾಹಸ. ವೃತ್ತಿಪರ ಪ್ರಕಾಶಕರಿಗಿಂತ ಹೆಚ್ಚು ಗುಣಾತ್ಮಕವಾಗಿ ಪುಸ್ತಕ ತಂದಿದ್ದೀರಿ.

***

ಪ್ರೊ. ಎ.ವಿ. ನರಸಿಂಹಮೂರ್ತಿ, ಮೈಸೂರು

ಇದು ಒಂದು ಸಂಸ್ಥೆ ಮಾಡಬಹುದಾದ ಕೆಲಸ.

***

ವಿ.ಟಿ. ದೊರೆಸ್ವಾಮಿ, ಶಿಕ್ಷಣತಜ್ಞರು, ಮೈಸೂರು

It is an amazing presentation. It took me off my feet. Margaret Meed ಎಂಬುವವಳು Growing in Samoa ಎಂಬ ಒಳ್ಳೆಯ ಪುಸ್ತಕ ಬರೆದಿದ್ದಾಳೆ. ಹಾಗೆ ಒಂದೊಂದು ಬುಡಕಟ್ಟುಗಳನ್ನು ಅಧ್ಯಯನ ಮಾಡಿದ ಪುಸ್ತಕಗಳೂ ಅಂಥ ಲೇಖನಗಳೂ ಬರುತ್ತಿರುತ್ತವೆ. ಆದರೆ ಆಂಥ್ರಪಲಾಜಿಕಲ್ ಅಧ್ಯಯನ ವಲಯದಲ್ಲಿ

ಜಗತ್ತಿನ ಎಲ್ಲೂ ಯಾವುದೇ ಒಂದು ಜಾತಿಯ ಬಗ್ಗೆ ಇಷ್ಟು ವ್ಯಾಪಕವಾಗಿಯೂ ಆಳವಾಗಿಯೂ ಮಾಡಿರುವ ಅಧ್ಯಯನ ನನ್ನ ಗಮನಕ್ಕೆ ಬಂದಿಲ್ಲ. ಸುಸಂಸ್ಕೃತವೂ ಮುಂದುವರಿದುದೂ ಆದ ಒಂದು ಸಮುದಾಯದ ಬಗ್ಗೆ ಅದರ ಮೂಲದಿಂದ ತೊಡಗಿ ಸದ್ಯದವರೆಗಿನ ಅಪಾರ ಮಾಹಿತಿಯನ್ನು ನೀವು ಅಚ್ಚುಕಟ್ಟಾಗಿ ಕಲೆಹಾಕಿದ್ದೀರಿ. Hats off to you.

***

ಶಿಕಾರಿಪುರ ಹರಿಹರೇಶ್ವರ

ನಿಮ್ಮ ಕಲ್ಪನೆ ಮತ್ತು ಕ್ರತುಶಕ್ತಿ ತುಂಬಾ ದೊಡ್ಡದು. ಆದ್ದರಿಂದಲೇ ಈ ಮಾದರಿಯನ್ನು ಅನುಕರಿಸುತ್ತಿರುವ ಯಾರೂ ನಿಮ್ಮ ಮಟ್ಟದ ಸಾಧನೆ ಮಾಡಲು ಸಾಧ್ಯವಾಗಿಲ್ಲ.

***

ಕೆ.ಎನ್. ಶ್ರೀಹರಿ, ಬೆಂಗಳೂರು

ನಿಮ್ಮ ಇಚ್ಛಾಶಕ್ತಿ ಮತ್ತು ಕ್ರತುಶಕ್ತಿಯಿಂದ ಮಾತ್ರವೇ ಇಂಥ ದೊಡ್ಡ ಕೆಲಸ ಮಾಡುವುದು ಸಾಧ್ಯವಾಗಿದೆ. ಬದುಕನ್ನು ಅರ್ಥಮಾಡಿಕೊಳ್ಳಲು ಆಸಕ್ತರಾದ ನನ್ನಂಥವರಿಗೆ ಈ ಗ್ರಂಥಗಳು ರಸದೌತಣವಾಗಿ ದೊರೆಯುವಂತಾಗಿದೆ.

***

ನಾಡೋಜ ದೇಜಗೌ, ಮೈಸೂರು

ಸಂಕೇತಿಗಳು ಗಟ್ಟಿಗರು; ಯಾವ ಕೆಲಸವನ್ನೂ ಹಠಹಿಡಿದು ಸಾಧಿಸುವ ಸ್ವಭಾವದವರು.

***

ಎನ್.ಎಸ್. ಶಾರದಾ ಪ್ರಸಾದ್, ಮೈಸೂರು

ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು
ಎಂದರೆ
ಹರನ್
ಒಂದು ಮುತ್ತು ಕಟ್ಟುವ ಕಡೆ ಹತ್ತನೂ ಕಟ್ಟುತೇನೆ
ಎಂದು
ಹತ್ತು ಸಂಪುಟಗಳ ಈ ಕಟ್ಟನು ಕಟ್ಟಿದರು
ದಶಾವತಾರದ ಪರಿಕಲ್ಪನೆಗೆ, ವಿಕಾಸಕೆ
ರೂಪು ನೀಡಿದರು

***

೫ ಲೇಖಕರು
ಡಾ. ವಿಜಯ್ ಅಂಗಡಿ

ಮೂಲತಃ ಬಳ್ಳಾರಿ ಜಿಲ್ಲೆಯವರಾದ ಶ್ರೀ ವಿಜಯ್ ಅಂಗಡಿ (ಜ: ೨೨-೭-೧೯೬೫) ಒಬ್ಬ ಕೃಷಿತಜ್ಞ, ಪರಿಸರಪ್ರಿಯ, ಕೃಷಿಬರಹಗಾರ, ಪ್ರಯೋಗಶೀಲ ಧೀರ, ಮುಕ್ತಮನದ ರೈತಬಂಧು.

ಸದ್ಯ ಆಕಾಶವಾಣಿಯ ಹಾಸನ ಕೇಂದ್ರದಲ್ಲಿ ಪ್ರಸಾರ ನಿರ್ವಾಹಕರಾಗಿ ಸೇವೆ ಸಲ್ಲಿಸುತ್ತಿರುವ ವಿಜಯ್ ಅಂಗಡಿ ಕೃಷಿ ವಿಭಾಗದ ಮೂಲಕ ಶ್ರೋತೃವರ್ಗವನ್ನು ಗಣನೀಯವಾಗಿ ವರ್ಧಿಸಿದ ಸಾಹಸಿ.

ವಿಜಯ್ ಅಂಗಡಿ ಹುಟ್ಟಿದ್ದು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು ಎಂ.ಬಿ. ಅಯ್ಯನಹಳ್ಳಿಯ ಬಡ ರೈತ ಕುಟುಂಬದಲ್ಲಿ. ತಾತ ಜವಳಿ ಅಂಗಡಿ ಇಟ್ಟಿದ್ದರಿಂದ 'ವಿಜಯ್' ಜೊತೆಗೆ 'ಅಂಗಡಿ'ಯೂ ಹೆಸರಾಗಿ ಸೇರಿ 'ವಿಜಯ್ ಅಂಗಡಿ' ಆದರು. ತಂದೆ ಶ್ರೀ ಅಂಗಡಿ ತಾಳ್ಕೇರಪ್ಪ ಮತ್ತು ತಾಯಿ ಶ್ರೀಮತಿ ತಿಪ್ಪಮ್ಮ ನೇಗಿಲಯೋಗಿಗಳು; ಬಡವರು, ಆದರೆ ಮರ್ಯಾದೆಯಿಂದ ಬಾಳಿದವರು. ಅವರ ಹತ್ತು ಮಕ್ಕಳಲ್ಲಿ ವಿಜಯ್ ಅಂಗಡಿ ಏಳನೆಯವರು. ಮಿತ ಆಸೆ, ಸರಳತೆ, ಶ್ರಮದ ದುಡಿಮೆಗೆ ಹೆಸರಾದವರು ತಾಳ್ಕೇರಪ್ಪ; ಇದ್ದಷ್ಟರಲ್ಲಿಯೇ ನೆಮ್ಮದಿಕಂಡ ಅವರು ಮಕ್ಕಳನ್ನು ಸನ್ಮಾರ್ಗದಲ್ಲಿ ಬೆಳೆಸಿದರು. ನಿತ್ಯವೂ ಕೃಷಿಕಾಯಕ ಮಾಡಿ ಐದು ಕಿಲೋಮೀಟರ್ ನಡೆದು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದವರು ವಿಜಯ್ ಅಂಗಡಿ. ಹಳ್ಳಿಯ ಶಾಲೆ, ಕನ್ನಡ ಮಾಧ್ಯಮ. ಪ್ರೌಢಶಾಲಾ ಅಧ್ಯಾಪಕರಾದ ಶ್ರೀ ಎಚ್.ಎಸ್. ಶೇಷಗಿರಿರಾವ್-ಶ್ರೀಮತಿ ಕೃಷ್ಣಕುಮಾರಿ ದಂಪತಿಯ ಆಶ್ರಯ, ಪ್ರೋತ್ಸಾಹ; ಮೂಡಿದ ಆತ್ಮವಿಶ್ವಾಸ, ಛಲ. ಪಿಯುಸಿಯಲ್ಲಿ ವಿಜ್ಞಾನ ಕಲಿಕೆ, ಪ್ರಥಮ ದರ್ಜೆಯ ಶ್ರೇಯಸ್ಸು. ತಾಂತ್ರಿಕ, ವೈದ್ಯಕೀಯ ಶಿಕ್ಷಣಕ್ಕೆ ಅವಕಾಶವಿದ್ದರೂ ಕೃಷಿ ಅಧ್ಯಯನದ ಆಯ್ಕೆ, ಬಡತನದ ಬೇಗೆಯನ್ನೆದುರಿಸಲು ಡಾ. ಎ.ಎಸ್. ಹಾದಿಮನಿ, ಶ್ರೀ ಸುರೇಶ್ ರೆಡ್ಡಿಯಂಥ ಉದಾರಿಗಳ ಆಸರೆ. ಬುದ್ಧಿವಂತ ಬಾಲಕನಿಗೆ ಎಲ್ಲ ಗುರುಗಳ ಉತ್ತೇಜನ. ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡಾ ಮತ್ತು ಸಾಹಿತ್ಯ ವಿಭಾಗಗಳಲ್ಲಿ ಎಲ್ಲರಿಗಿಂತ ವಿಶೇಷವಾಗಿ ಕಂಡದ್ದರಿಂದ ರಾಯಚೂರಿನ ಕೃಷಿ ಮಹಾವಿದ್ಯಾಲಯದಿಂದ 'ಅತ್ಯುತ್ತಮ ವಿದ್ಯಾರ್ಥಿ' ಎಂಬ ಪುರಸ್ಕಾರ. ಧಾರವಾಡದಲ್ಲಿ ಎಂ.ಎಸ್ಸಿ (ಕೃಷಿ) ಅಧ್ಯಯನ (೧೯೮೮-೯೦). ತೋಟಗಾರಿಕೆಯಲ್ಲಿ ವಿಶೇಷ ಆಸಕ್ತಿ, ಡಾ. ಎನ್.ಸಿ. ಹುಲಮನಿ ಅವರ ಮಾರ್ಗದರ್ಶನ. ದ್ರಾಕ್ಷಿ ಬೆಳೆಯ ವಿಶೇಷ ಅಧ್ಯಯನ. ಉದ್ದಕ್ಕೂ ಶ್ರೇಷ್ಠ ಶ್ರೇಯಾಂಕ. ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ. ಬಡತನ ಅವರನ್ನು ಕ್ರಿಯಾಶೀಲಗೊಳಿಸಿತು. ಸಾಮಾಜಿಕ ಋಣದ ಪ್ರಜ್ಞೆ ಕಾಡಿತು. ಈ ಕಾರಣಗಳು ಅವರನ್ನು ಅವಿರತವಾಗಿ ಮುನ್ನಡೆಸಿದವು.

೧೯೮೮ರಲ್ಲಿ ವಿದ್ಯಾರ್ಥಿದೆಸೆಯಲ್ಲೇ ನಾಡಿನ ವಿವಿಧ ಪತ್ರಿಕೆಗಳಿಗೆ ಲೇಖನ ಬರೆಯತೊಡಗಿದ ವಿಜಯ್ ಅಂಗಡಿ ಈವರೆಗೆ ಎರಡೂವರೆ ಸಾವಿರಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿದ್ದಾರೆ, ೩೬ಕ್ಕೂ ಹೆಚ್ಚು ಕೃಷಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ನಿರಂತರ ಅಧ್ಯಯನಶೀಲರಾದ ಅವರು ಎರಡು ಸಾವಿರಕ್ಕೂ ಹೆಚ್ಚಿನ ಕೃಷಿಗ್ರಂಥಗಳ ಖಾಸಗಿ ಭಂಡಾರವನ್ನು ಹೊಂದಿದ್ದಾರೆ. ಒಂಬತ್ತು ಪುಸ್ತಕಗಳನ್ನು ಸಂಪಾದಿಸಿದ್ದಾರೆ, ಇಂಗ್ಲಿಷಿನಿಂದ ಕನ್ನಡಕ್ಕೆ ಪುಸ್ತಕ ಅನುವಾದಿಸಿದ್ದಾರೆ. ಅವರ ಶೈಲಿ ಸರಳ. ಜನಸಾಮಾನ್ಯರಿಗೆ ಅರ್ಥವಾಗದ ಬರಹ ವ್ಯರ್ಥವೆಂಬುದು ಅವರ ಅಭಿಮತ.

ತಮ್ಮ ಸಾಧನೆಗಳ ಆಧಾರದಿಂದಲೇ ಆಕಾಶವಾಣಿಗೆ ಆಯ್ಕೆಯಾದ ಅಂಗಡಿ ತಮ್ಮ ವ್ಯಕ್ತಿಜೀವನವನ್ನು ಹಾಸನ ಕೇಂದ್ರದಲ್ಲಿ ಆರಂಭಿಸಿದರು (೯-೧೧-೧೯೯೧). ತಮ್ಮ ಓದಿನ ಜ್ಞಾನದ ಜತೆಗೆ ಸ್ವತಃ ಬೇಸಾಯ ಮಾಡಿ ಅನುಭವವನ್ನು ಶ್ರೀಮಂತಗೊಳಿಸಿಕೊಂಡೇ ರೈತರಿಗೆ ಉಪಯುಕ್ತವಾಗುವಂತೆ ಕಾರ್ಯಕ್ರಮಗಳನ್ನು ನೀಡುತ್ತ ಹೋದರು. ೧೯೯೬ರಲ್ಲಿ 'ಪರಿಸರಪ್ರಿಯ ಕೃಷಿಕರ ಸಂಘಟನೆ'ಯನ್ನು ಹುಟ್ಟುಹಾಕಿದರು. ತಾವು 'ವಿಜಯಣ್ಣ'ನಾಗಿ, ತಮ್ಮ ಸಹೋದ್ಯೋಗಿ ಮಿತ್ರ

ಶ್ರೀ ಎನ್. ಕೇಶವಮೂರ್ತಿಯವರು 'ಜಯಣ್ಣ'ನಾಗಿ ಕೃಷಿಕರ ಕಾರ್ಯಕ್ರಮಗಳಿಗೆ ಹೊಸ ರೂಪು ಕೊಟ್ಟರು. ಕೇಳುಗರ ಸಂಖ್ಯೆ ಗಣನೀಯವಾಗಿ ಹೆಚ್ಚಿತು. ರೈತರ ಕೃಷಿ ವಿಧಾನದಲ್ಲಿ ಅಗಾಧ ಸುಧಾರಣೆ ಕಂಡಿತು. ಈ ಕುರಿತೇ ಬೆಂಗಳೂರು ಕೇಂದ್ರದ ಸಹಯೋಗದಿಂದ ಸಂಶೋಧನೆ ನಡೆಸಿದರು. ಈ ಸಂಶೋಧನಾ ವರದಿಗೆ ಅಖಿಲಭಾರತ ಆಕಾಶವಾಣಿ ವಾರ್ಷಿಕ ಸ್ಪರ್ಧೆಯಲ್ಲಿ ಎರಡನೆಯ ಪುರಸ್ಕಾರ ದೊರೆಯಿತು. ಆಕಾಶವಾಣಿಗೆ ಪ್ರಾಯೋಜಿತ ಕಾರ್ಯಕ್ರಮಗಳಿಗೆ ಸಂಪನ್ಮೂಲವನ್ನು ಕ್ರೋಡೀಕರಿಸುವುದರಲ್ಲೂ ಕೃಷಿಕರ ವಿಭಾಗವು ಎಲ್ಲರಿಗಿಂತ ಮುಂದಾಯಿತು. ಹಾಸನದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಘಟಕವನ್ನು ಸ್ಥಾಪಿಸಿದರು. ರೈತರ ಕಲ್ಯಾಣ ಕಾರ್ಯಕ್ರಮಗಳಿಗೆ ಗಮನಕೊಟ್ಟರು. ಈವರೆಗೆ ಅವರು ನಡೆಸಿರುವ ಪರಿಸರಪ್ರಿಯ ಕೃಷಿಕರ ಸಮಾರಂಭಗಳು ೧೯೯. ಅವುಗಳ ಅಂಗವಾಗಿ ಅನುಭವಿ ರೈತರ ಉಪನ್ಯಾಸಗಳು ನಡೆದವು. ಪ್ರಾತ್ಯಕ್ಷಿಕೆಗಾಗಿ ಕೃಷಿ ಪ್ರವಾಸಗಳನ್ನು ಆಯೋಜಿಸಿದರು. ತೋಟಗಳಲ್ಲಿ ಉಳುಮೆ ನಿಲ್ಲಿಸಿದ್ದು, ರಾಸಾಯನಿಕ ಗೊಬ್ಬರ ಮತ್ತು ವಿಷಗಳ ಬಳಕೆಯನ್ನು ಗರಿಷ್ಠವಾಗಿ ತಗ್ಗಿಸಿದ್ದು, ಸಾವಯವ ಗೊಬ್ಬರ ತಯಾರಿಸಿಕೊಂಡಿದ್ದು ಇವರ ಸಾಧನೆ. ಮಣ್ಣಿಗೆ ಹೊದಿಕೆ, ಮಿಶ್ರಬೆಳೆ ಬೇಸಾಯ, ಕೃಷಿ ತ್ಯಾಜ್ಯಗಳ ಮರು ಬಳಕೆ, ನೆಲ-ಜಲ ಸಂರಕ್ಷಣೆ - ಇಂಥ ಉಪಯುಕ್ತ ವಿಚಾರಗಳನ್ನು ರೈತರು ಅಳವಡಿಸಿಕೊಂಡರು, ಲಾಭ ಪಡೆದರು. ಸಂಘಟನೆಗೆ ಶಾಶ್ವತ ನೆಲೆಯನ್ನು ಕಲ್ಪಿಸಲು ವಿಜಯ್ ಅಂಗಡಿ 'ಪುಣ್ಯಭೂಮಿ' ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು (೪-೪-೦೪). ಅದು ರೈತ ಚಟುವಟಿಕೆಗಳ ಪ್ರಯೋಗವೇದಿಕೆಯಾಯಿತು. ಆಕಾಶವಾಣಿಯ ಆಯಾ ಸಾಲುಗಳಲ್ಲಿ ಹಾಸನ ಕೇಂದ್ರದ ಸಹಾಯಕ ನಿರ್ದೇಶಕರಾಗಿದ್ದ ಶ್ರೀಮತಿ ಎಸ್.ವಿ. ಪದ್ಮ ಮತ್ತು ನಿರ್ದೇಶಕರಾಗಿದ್ದ ಡಾ. ವಿಜಯಾ ಹರನ್ ಅವರ ಮಾರ್ಗದರ್ಶನ, ಸಹಕಾರ ಮತ್ತು ಪ್ರೋತ್ಸಾಹ ಇವರಿಗೆ ಪೂರಕವಾಗಿ ಕೂಡಿಬಂತೆಂಬುದು ವಿಜಯ್ ಅಂಗಡಿಯವರ ಕೃತಜ್ಞತಾಪೂರ್ವಕ ನೆನಕೆ.

ರೈತರು, ಸಮಾಜ ಮತ್ತು ದೇಶದ ನೆಮ್ಮದಿಗೆ ಪೂರಕವಾದ ಉಪಕ್ರಮಗಳಿಂದಾಗಿಯೂ ವಿಜಯ್ ಅಂಗಡಿ ಗಮನಾರ್ಹರು. ಅವರು ಸಾಬೂನಿನ ಬದಲು ಬಳಸುವುದು ಹುತ್ತದ ಮಣ್ಣು, ಮುಖಕ್ಷೌರಕ್ಕೆ ಕ್ರೀಮಿನ ಬದಲು ಬಳಸುವುದು ಲೋಳೆಸರದ ರಸ, ಹಲ್ಲುಜ್ಜಲು ಬಳಸುವುದು ಕೆನೆಮಣ್ಣು ಮತ್ತು ಬೆರಳು, ಹಲ್ಲು ಮತ್ತು ಸಮಗ್ರ ಆರೋಗ್ಯಕ್ಕೆ ಕಂಡುಕೊಂಡ ಉಪಾಯ ಹಿತಮಿತನಿಯತ ತಾಂಬೂಲ ಸೇವನೆ, ರೋಗ ಹರಡದಂತೆ ಜಾಗ್ರತೆ ವಹಿಸಲು ಹಿಡಿದದ್ದು ಸ್ವಯಂ ಆಯುಷ್ಕರ್ಮ, ಚರ್ಮಸಂಸ್ಕರಣೆಯಿಂದ ಪರಿಸರಕ್ಕೆ ಆಗುವ ಹಾನಿ ತಪ್ಪಿಸಲು ರೂಢಿಮಾಡಿಕೊಂಡಿದ್ದು ಚಪ್ಪಲಿ ಇಲ್ಲದ ನಡಿಗೆ. ಅವರಿಗೆ ಕೃಷಿ ಪ್ರವಾಸವೇ ತೀರ್ಥಯಾತ್ರೆ, ಕೃಷಿಕರ ನೆಮ್ಮದಿ ಸಾಧನೆಯೇ ದೇವರಪೂಜೆ. ಪರಿಸರ ರಕ್ಷಣೆಗಾಗಿ ಪೆಟ್ರೋಲ್‌ಗಾಡಿಯ ಬಳಕೆ ತಗ್ಗಿಸಿ ಹೆಚ್ಚಾಗಿ ಓಡಾಡುವುದು ಸೈಕಲ್‌ನಲ್ಲಿ. ಮಳೆ ಕೊಯ್ಲು, ತಣ್ಣೀರು ಸ್ನಾನ ಪರಾವಲಂಬನೆ ತಪ್ಪಿಸುವ ಇತರ ಕ್ರಮಗಳು. ಗುಂಡುಸೂಜಿಯ ಬದಲು ಬಳಸುವುದು ಮುಳ್ಳುಗಳನ್ನು. ತಾರಸಿ ತೋಟದ ಮಾಲೀಕನಾಗಿ ಈ ಎಲ್ಲ ಕ್ರಮಗಳ ಹಿಂದೆ ಸರಳತೆ, ಸ್ವದೇಶೀ ನೀತಿ, ಪರಿಸರ ಕಾಳಜಿ, ವಿದೇಶಿ ವಿನಿಮಯದ ಉಳಿತಾಯ, ಆರೋಗ್ಯಪರತೆ, ಮೊದಲಾದ ತತ್ವಗಳಿವೆ. ಜಗತ್ತಿನ ಆಧುನೀಕರಣದ ಹೆಸರಿನ ಹುಚ್ಚು ಪ್ರವಾಹದ ವಿರುದ್ಧ ಈಜುವ ಸಾಹಸ ಅವರದು. ಸದಾ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವುದು ಅವರ ಗುಣ. 'ನಿಸರ್ಗವೇ ಪ್ರತಿಯೊಂದನ್ನೂ ನಿಯಂತ್ರಿಸುತ್ತದೆ. ನಮ್ಮ ಉಳಿವಿಗಾಗಿ ನಾವು ಅತಿಕ್ರಮಿಸಲು ಯತ್ನಿಸಿದರೆ ಅನಾಹುತ ಖಂಡಿತ, ಪರಿಸರ ಸಂರಕ್ಷಣೆಯಲ್ಲಿ ನಾವೇನು ಮಾಡುತ್ತಿದ್ದೇವೆ ಎಂಬುದನ್ನು ಪ್ರತಿಯೊಬ್ಬರೂ ಯೋಚಿಸಬೇಕು' ಎಂಬುದು ಅವರ ಆಗ್ರಹದ ಕರೆ.

ಶುದ್ಧ ಅಭ್ಯಾಸಗಳುಳ್ಳ ವಿಜಯ್ ಅಂಗಡಿಯವರಿಗೆ ಹಳೆಯ ಮತ್ತು ಮಲಿನವಾದ ನಾಣ್ಯ ಮತ್ತು ನೋಟುಗಳನ್ನು ಸಂಗ್ರಹಿಸುವ, ಅಂಚೆ ಚೀಟಿಗಳನ್ನು ಸಂಗ್ರಹಿಸುವ, ಹೊಸ ಅಡುಗೆಗಳನ್ನು ಮಾಡುವ ಹವ್ಯಾಸವಿದೆ. ಕೃಷಿ ನಿದರ್ಶನದ ೨೫೦ಂಕ್ಕೂ ಹೆಚ್ಚು ಧ್ವನಿಸುರುಳಿಗಳು ಅವರ ಬಳಿ ಇವೆ. ೨೫೦೦ಂಕ್ಕೂ ಹೆಚ್ಚು ಕೃಷಿ ಛಾಯಾಚಿತ್ರಗಳಿವೆ. ಸಂಶೋಧನ ಸಾಮಗ್ರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿರುವುದು ಅವರ ಹೆಗ್ಗಳಿಕೆ. ಅವರ ಧರ್ಮಪತ್ನಿ ಶ್ರೀಮತಿ ಕೆ.ಎಂ.

ಮಂಜುಳಾ. ವಿಜಯ್ ಅಂಗಡಿಯವರ ಸಾಧನೆಗಳ ಹಿಂದೆ ಅವರ ತ್ಯಾಗವೂ ಸೇರಿದೆ. ಚಿ. ಅಪೂರ್ವ, ಚಿ. ಅಮೂಲ್ಯ ಅವರ ಮುದ್ದುಮಕ್ಕಳು.

ವಿಜಯ್ ಅಂಗಡಿ ಭಾಗವಹಿಸಿರುವ ಕಾರ್ಯಾಗಾರಗಳು, ನಡೆಸಿಕೊಟ್ಟಿರುವ ಉಪನ್ಯಾಸ, ಪ್ರಾತ್ಯಕ್ಷಿಕೆ, ಕಮ್ಮಟಗಳು, ತಾವು ಸದಸ್ಯರಾಗಿರುವ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಅವರು ತೊಡಗಿಕೊಂಡಿರುವ ರೀತಿ ಅಸಾಧಾರಣ.

ತಮ್ಮ ವೈವಿಧ್ಯಪೂರ್ಣವೂ, ನಿರಂತರವೂ, ಶ್ರದ್ಧಾಪೂರ್ಣವೂ ಆದ ಸಾಧನೆಗಳಿಗೆ ಹತ್ತಾರು ಪ್ರಶಸ್ತಿ, ಪುರಸ್ಕಾರಗಳನ್ನು ವಿಜಯ್ ಅಂಗಡಿಯವರು ಸಹಜವಾಗಿಯೇ ಪಡೆದಿದ್ದಾರೆ. ಶಾಲಾಕಾಲೇಜುಗಳ ಸಾಂಸ್ಕೃತಿಕ, ಕ್ರೀಡಾಸ್ಪರ್ಧೆಗಳಿಗೂ, ವೃತ್ತಿ ಜೀವನದ ಕೃಷಿ ಸಾಧನೆಗಳಿಗೂ ಅವು ಸಂದಿವೆ. ರಾಷ್ಟ್ರೀಯ ಸೇವಾ ಯೋಜನೆಯ 'ಅತ್ಯುತ್ತಮ ಶಿಬಿರಾರ್ಥಿ' ಪ್ರಶಂಸೆ (೧೯೮೮) ಎರಡೂ ಸಾರಿ ರಾಜ್ಯಮಟ್ಟದ ಪ್ರಶಸ್ತಿ(೧೯೮೯-೯೦, ೯೦-೯೧); ಸುಸ್ಥಿರ ಕೃಷಿಯನ್ನು ಹಾಸನಜಿಲ್ಲೆಯಲ್ಲಿ ಜನಪ್ರಿಯಗೊಳಿಸುತ್ತಿರುವುದಕ್ಕೆ ಗುಜರಾತ್‌ನ 'ಸೃಷ್ಟಿಸಮ್ಮಾನ್' ಪುರಸ್ಕಾರ (೨೦೦೩); ಕರ್ನಾಟಕ ರಾಜ್ಯ ಮಟ್ಟದ ಸಮಾಜರತ್ನಪ್ರಶಸ್ತಿ (೨೦೦೫); ರಾಜ್ಯಮಟ್ಟದ ಸುವರ್ಣಕರ್ನಾಟಕರತ್ನ ಪ್ರಶಸ್ತಿ (೨೦೦೬); ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ (೨೦೦೭); ಕೃಷಿರತ್ನ ಪ್ರಶಸ್ತಿ (೨೦೦೮); ಬಾನುಲಿ ಹಸಿರುಸಿರಿ ಪ್ರಶಸ್ತಿ (೨೦೦೯) - ಹೀಗೆ ಈ ಪಟ್ಟಿ ಮುಂದುವರಿಯುತ್ತದೆ.

ಹಾಸನಜಿಲ್ಲೆಯ ರೈತರ ಪರವಾಗಿ ತಿರುಪತಿಹಳ್ಳಿ ಶ್ರೀ ಶಿವಶಂಕರಪ್ಪ ಅವರು ಶ್ರೀ ವಿಜಯ್ ಅಂಗಡಿಯವರನ್ನೂ ಅವರ ಸಾಧನೆಗಳನ್ನೂ ಕುರಿತೇ ಬರೆದಿರುವ ಹೊತ್ತಗೆಯ ಹೆಸರು 'ಪ್ರಕೃತಿಪ್ರಿಯ'; ಚೊಕ್ಕವಾದ ಬರವಣಿಗೆಯಿಂದ ಕೂಡಿದ ಅಚ್ಚುಕಟ್ಟಾದ ನಿರೂಪಣೆಯ ಪುಸ್ತಕ. 'ಪರಿಸರ ಕಾಳಜಿಯ ಮಾದರಿ ಬದುಕಿನ ಡಾ. ವಿಜಯ್ ಅಂಗಡಿ ಅವರನ್ನು ಕುರಿತ ಬರಹ' ಎಂಬುದು ಲೇಖಕರು ತಮ್ಮ ಹೊತ್ತಗೆಯ ಶೀರ್ಷಿಕೆಗೆ ಕೊಟ್ಟ ವಿವರಣೆ. ಅದನ್ನು ವಿಜಯ್ ಅಂಗಡಿ ಅವರ ಸಾಧನೆಗಳಿಗಾಗಿ ರೈತರು ಸೇರಿ ಅರ್ಪಿಸಿದ ಸಂಭಾವನಾ ಗ್ರಂಥ ಎಂದು ಭಾವಿಸಬಹುದು. ಜನರ ಪ್ರೀತಿಗೆ ಪಾತ್ರರಾಗುವುದೂ ಒಂದು ಪ್ರಶಸ್ತಿಯೇ ಸರಿ.

ಡಾ. ಎಂ.ಎಸ್. ವಿಜಯಾ ಹರನ್

ಸದ್ಯ ಆಕಾಶವಾಣಿಯ ಮೈಸೂರು ಕೇಂದ್ರದ ನಿಲಯನಿರ್ದೇಶಕಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಎಂ.ಎಸ್. ವಿಜಯಾ ಅವರು ಐಬಿಪಿಎಸ್ (Indian Broadcasting Programme Service): ಇದು ಭಾರತ ಸರ್ಕಾರದ ಕೇಂದ್ರಪ್ರಸಾರ ಮಂತ್ರಾಲಯದವರು, ಭಾರತೀಯ ಪ್ರಸಾರ ಕಾರ್ಯಕ್ರಮ ಸೇವೆ ಎಂದರೆ 'ಪ್ರಸಾರಭಾರತಿಯ ಉನ್ನತ ಶ್ರೇಣಿಯ ಅಧಿಕಾರಿ' ಎಂದು ಗುರುತಿಸಿ ನೀಡುವ ಗೌರವವಾಗಿದೆ. ಮೂಲತಃ ಕೋಲಾರಜಿಲ್ಲೆಯವರು. ಕೋಲಾರ ಚಿನ್ನದಗಣಿಯ ಸಮೀಪದ 'ಮಷಿಕಂ' ಎಂಬುದು ಅವರ ಪೂರ್ವಿಕರ ಊರು. ಅವರದು ಶಾನುಭೋಗರ ಮನೆತನ. ಅವರ ತಂದೆ ಶ್ರೀ ಎಂ.ವಿ. ಶ್ರೀನಿವಾಸಮೂರ್ತಿಯವರು ಶಾನುಭೋಗರಾಗಿದ್ದು ಶಾಲಾ ಅಧ್ಯಾಪಕರಾಗಿ ಸೇವೆಗೆ ಸೇರಿ ಸ್ಕೂಲ್ ಇನ್‌ಸ್ಪೆಕ್ಟರ್ ಆಗಿ ನಿವೃತ್ತಿಗೊಂಡರು. ಅವರು ರಂಗನಾಟಕಗಳಲ್ಲಿ ಭಾಗವಹಿಸುತ್ತಿದ್ದವರು, ರಂಗಗೀತೆಗಳನ್ನು ಚೆನ್ನಾಗಿ ಹಾಡುತ್ತಿದ್ದವರು. ನಿವೃತ್ತರಾದ ಮೇಲೂ ಬಹುವರ್ಷಗಳವರೆಗೆ ಉಪಾಧ್ಯಾಯರಾಗಿಯೂ ಕಲಾವಿದರಾಗಿಯೂ ಕಾರ್ಯನಿರತರಾಗಿದ್ದರು. ವಿಜಯಾ ಅವರ ತಾಯಿ ಶ್ರೀಮತಿ ನರಸಮ್ಮನವರು ಕ್ಯಾತಮಾರನಹಳ್ಳಿ ಶಾನುಭೋಗರಾಗಿದ್ದ ಶ್ರೀ ಪುಟ್ಟನರಸಯ್ಯನವರ ಮಗಳು. ಪುಟ್ಟನರಸಯ್ಯನವರು ಸಮಾಜ ಹಿತವನ್ನು ಸಾಧಿಸಿ ಜನಾನುರಾಗಿಯಾಗಿದ್ದು ಶತಾಯುಷಿಯಾಗಿ ಜೀವಿಸಿದ್ದರು. ಶ್ರೀಮತಿ ನರಸಮ್ಮನವರು

ಸಂಪ್ರದಾಯಸ್ಥೆ, ಜಾಣಗೃಹಿಣಿ. ಅವರೂ ಸಂಪ್ರದಾಯಗೀತೆಗಳನ್ನು ಹಾಡುತ್ತಿದ್ದರು, ನಾಟಕಗಳಲ್ಲಿ ಆಸಕ್ತರಾಗಿದ್ದರು, ಕಥೆ ಹೇಳುವ ಕಲೆಯನ್ನು ರಕ್ತಗತಮಾಡಿಕೊಂಡಿದ್ದರು. ಎಂ.ಎಸ್. ವಿಜಯಾ ಅವರ ತಂದೆಯ ತಾಯಿ ಹೆಜ್ಜೆಗೊಂದು ಹಾಡು ಹೇಳುತಿದ್ದ, ಸಂಪ್ರದಾಯಗೀತೆಗಳ ಖಣಿ; ವಿಶೇಷ ರಂಗೋಲಿಗಳನ್ನು ಹಾಕುವುದರಲ್ಲಿ ನಿಪುಣೆ; ಜನಪದ ಕಥೆ, ಗಾದೆಗಳನ್ನು ಹೇಳುವುದರಲ್ಲಿ ಸಿದ್ಧಹಸ್ತರು. ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯರು ಅವರ ಸೋದರಮಾವ; ಅವರ ತಂದೆ ಶ್ರೀಮುಷ್ಣಂ ಪದ್ಮನಾಭರಾಯರು ರಾಜಗುರುಗಳು; ಸಂಸ್ಕೃತ, ತರ್ಕ, ಮೀಮಾಂಸಾ ಶಾಸ್ತ್ರಗಳನ್ನು ಪಾಠ ಹೇಳಿದವರು.


ಸಹಜವಾಗಿಯೇ ಜನಪದ ಗೀತೆಗಳು, ಶಾಸ್ತ್ರೀಯ ಸಂಗೀತ, ನಾಟಕಗಳು, ಗಮಕ ಸಂಗೀತ ಇವುಗಳಲ್ಲಿ ಆಸಕ್ತಿ ಬೆಳೆಸಿಕೊಂಡು ಪರಿಶ್ರಮ ಪಡೆದವರು ಎಂ.ಎಸ್. ವಿಜಯ. ಬೆಂಗಳೂರಿನಲ್ಲಿ ಓದಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಆನರ್ಸ್ ಕನ್ನಡ (೧೯೭೧) ಮತ್ತು ಎಂ.ಎ. (ಕನ್ನಡ) (೧೯೭೩) ಪದವಿಗಳನ್ನು ಪಡೆದುಕೊಂಡ ಅವರು ಖ್ಯಾತರಾದ ಪ್ರೊ. ಎಂ.ವಿ. ಸೀತಾರಾಮಯ್ಯ, ರಂ.ಶ್ರೀ ಮುಗಳಿ, ಜಿ.ಎಸ್‌ಶಿವರುದ್ರಪ್ಪ, ಚಿದಾನಂದಮೂರ್ತಿ, ಹಂಪನಾ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಮೊದಲಾದ ಪಂಡಿತಶಿಕ್ಷಕರ ಶಿಷ್ಯೆ, ಮೈಸೂರು ಆಕಾಶವಾಣಿಯಲ್ಲಿ ಸೇವೆಸಲ್ಲಿಸುತ್ತಿರುವಾಗಲೇ ಡಾಕ್ಟರೇಟ್ ಪದವಿಗಾಗಿ ಅಧ್ಯಯನ ಮಾಡಿದರು. ಖ್ಯಾತ ವಿದ್ವಾಂಸ ಮತ್ತು ಅಂಕಣಕಾರ ಡಾ. ಹಾಮಾನಾ ಅವರೇ ಮಾರ್ಗದರ್ಶಕರು. 'ಆನಂದರ ಬದುಕು ಬರಹ - ಒಂದು ಅಧ್ಯಯನ' ಎಂಬುದು ಅವರ ಸಂಪ್ರಬಂಧದ ವಿಷಯ. ಆ ವಿಷಯಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯವು ೧೯೯೮ರಲ್ಲಿ ಡಾಕ್ಟರೇಟ್ ಪದವಿ ನೀಡಿತು. ಮೈಸೂರಿನ ಪ್ರಸಿದ್ಧ ಕಾವ್ಯಾಲಯ ಪ್ರಕಾಶನದವರು ಅದನ್ನು ಪ್ರಕಟಿಸಿದ್ದಾರೆ. 'ಆಲೋಕ' ಎಂಬುದು ಅವರ ಸಾಹಿತ್ಯಿಕ ವಿಮರ್ಶಾ ಲೇಖನಗಳ ಸಂಗ್ರಹ. ಮೈಸೂರಿನ ಸಂವಹನ ಪ್ರಕಾಶನದವರು ಅದನ್ನು ಪ್ರಕಟಿಸಿದ್ದಾರೆ. ಅನೇಕ ನಿಯತಕಾಲಿಕಗಳಲ್ಲಿ ಅವರ ಲೇಖನಗಳು ಪ್ರಕಟವಾಗುತ್ತಿರುತ್ತವೆ. ರಾಷ್ಟ್ರಮಟ್ಟದ ಬಾನುಲಿ ಸೆಮಿನಾರುಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿದ ಅನುಭವ ಅವರಿಗಿದೆ. ಮೈಸೂರು ಆಕಾಶವಾಣಿಯ ಅಮೃತಮಹೋತ್ಸವದ ಸಂದರ್ಭದಲ್ಲಿ ಎಂ.ಎಸ್. ವಿಜಯಾ ಅವರ ಸಂಪಾದಕತ್ವದಲ್ಲಿ ಬಂದ ಸ್ಮರಣ ಸಂಚಿಕೆಯು ಅಂಥ ಸಂಚಿಕೆಗಳ ಇತಿಹಾಸದಲ್ಲಿಯೇ ಅಪೂರ್ವವಾದುದೆಂಬ ಕೊಂಡಾಟಕ್ಕೆ ಪಾತ್ರವಾಗಿದೆ. ಮಾಧ್ಯಮಕ್ಷೇತ್ರದಲ್ಲಿ ಅದೊಂದು ಆಕರಗ್ರಂಥವೇ ಆಗಿದೆ. ಅವರ ಆಡಳಿತ, ಪ್ರಸಾರಸೇವೆ, ಸಾಹಿತ್ಯಾಸಕ್ತಿಯನ್ನು ಗುರುತಿಸಿ ಕರ್ನಾಟಕ ಲೇಖಕಿಯರ ಸಂಘವೂ ಸೇರಿ ಅನೇಕ ಸಂಘಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ.

೨೦-೭-೧೯೫೨ರಲ್ಲಿ ಕೋಲಾರ ಚಿನ್ನದಗಣಿಯಲ್ಲಿ (ಕೆಜಿಎಫ್) ಜನಿಸಿದ ಎಂ.ಎಸ್. ವಿಜಯ ಆಕಾಶವಾಣಿಯಲ್ಲಿ ೩೫ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಉದ್ಘೋಷಕಿ, ಕಾರ್ಯಕ್ರಮ ನಿರ್ವಹಣಾಧಿಕಾರಿ, ಸಹಾಯಕ ನಿರ್ದೇಶಕಿ ಹೀಗೆ ನಾನಾ ಹುದ್ದೆಗಳನ್ನಲಂಕರಿಸಿ ಕಳೆದ ಹತ್ತು ವರ್ಷಗಳಿಂದ ನಿರ್ದೇಶಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮೈಸೂರು, ಬೆಂಗಳೂರು, ಮಂಗಳೂರು, ಭದ್ರಾವತಿ, ಗುಲ್ಬರ್ಗಾ, ಹಾಸನ ಬಾನುಲಿಕೇಂದ್ರಗಳಲ್ಲಿ ಸೇವೆಸಲ್ಲಿಸಿದ ವಿಸ್ತಾರವಾದ ಅನುಭವ ಅವರಿಗಿದೆ. ಗ್ರಾಮೀಣ ಆರ್ಥಿಕತೆ, ಗ್ರಾಮ್ಯಭಾಷೆಗಳು, ಸಾಂಸ್ಕೃತಿಕ ವೈವಿಧ್ಯ ಮತ್ತು ಸ್ಥಳೀಯ ಇತಿಹಾಸದ ತೃಣಮೂಲ ಅರಿವು ಲಭ್ಯವಾಗಿದೆ. ಬಾನುಲಿ ಭಾಷಣ, ರೂಪಕ, ನಾಟಕಗಳನ್ನು ರಚಿಸಿ, ಸಿದ್ಧಪಡಿಸಿ, ಪ್ರಸ್ತುತಪಡಿಸಿದ್ದಾರೆ. ಸ್ಥಳೀಯ, ಪ್ರಾಂತೀಯ ಮತ್ತು ರಾಷ್ಟ್ರೀಯ ನಾಟಕಗಳನ್ನು ನಿರ್ದೇಶಿಸಿ ನಿರ್ಮಾಣ ಮಾಡಿದ್ದಾರೆ. ಸ್ವತಃ 'ಎ' ಗ್ರೇಡ್ ನಾಟಕ ಕಲಾವಿದೆ. ಗಾದೆಗಳನ್ನಾಧರಿಸಿ ಅವರು ರಚಿಸಿ ಪ್ರಸ್ತುತಪಡಿಸುತ್ತಿರುವ 'ಗಾದೆಗದ್ದುಗೆ' ಎಂಬ ಕಿರುನಾಟಕ ಸರಣಿಯೂ, ಗ್ರಾಮೀಣ ಶಿಕ್ಷಣಕ್ಕಾಗಿ ಅವರು ಪ್ರಸ್ತುತಪಡಿಸುತ್ತಿರುವ 'ಹಟ್ಟಿಹರಟೆ'ಯೂ ವರ್ಷಗಳಿಂದ ನಿಯತವಾಗಿ ಪ್ರಕಟವಾಗುತ್ತಿವೆ; ಅವರಿಗೆ ಅಪಾರ ಜನಮನ್ನಣೆ ತಂದುಕೊಟ್ಟಿವೆ. ಮಂಡ್ಯ, ಮೈಸೂರು ಮತ್ತು ಚಾಮರಾಜನಗರ

ಜಿಲ್ಲೆಯ ಅಸಂಖ್ಯಾತ ಕೇಳುಗರಿಗೆ, ರೈತಬಂಧುಗಳಿಗೆ ಸಮಗ್ರ ಗ್ರಾಮೀಣ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳ ಪ್ರಸಾರವನ್ನೂ ತರಬೇತಿಯನ್ನೂ ಆಯೋಜಿಸಿದ್ದಾರೆ. ಪ್ರಸಾರಕ್ಷೇತ್ರದಲ್ಲಿ ಇದೊಂದು ಮಹತ್ವದ ಹೆಜ್ಜೆ. ಮೈಸೂರು ಬಾನುಲಿ ಕೇಂದ್ರದ ಪ್ರಸಾರಾವಧಿಯನ್ನು ಹೆಚ್ಚಿಸಿದ್ದು ಅವರ ಆಡಳಿತಸಾಧನೆಯ ಮೈಲಿಗಲ್ಲುಗಳಲ್ಲೊಂದು. ಇದೀಗ ಈ ಕೇಂದ್ರದಲ್ಲಿ ಬೆಳಿಗ್ಗೆ ೬ ರಿಂದ ರಾತ್ರಿ ೧೧.೦೫ರವರೆಗೆ ನಿರಂತರ ಪ್ರಸಾರ ನಡೆಯುತ್ತಿದೆ.

ವಿಜಯಾ ಅವರ ಪತಿ ಡಾ. ಬಿ.ಎಸ್. ಪ್ರಣತಾರ್ತಿಹರನ್ ಕಮಿಷನರೇಟ್ ಆಫ್ ಕೊಲಿಜಿಯೇಟ್ ಎಜುಕೇಷನ್ ಸೇವೆಯಲ್ಲಿದ್ದು ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದಾರೆ. ಭಾರತದ ಸಾಂಸ್ಕೃತಿಕ ಅಧ್ಯಯನಕ್ಕಾಗಿ ಮೈಸೂರಿನಲ್ಲಿರುವ ಸಮುದಾಯ ಅಧ್ಯಯನ ಕೇಂದ್ರದ ಸ್ಥಾಪಕ ನಿರ್ದೇಶಕರು. ಅನೇಕ ಕೃತಿಗಳನ್ನು ಬರೆದು, ಸಂಪಾದಿಸಿ, ಪ್ರಕಟಿಸಿದ್ದಾರೆ. ಮಗಳು ಇಂ. ಶರ್ವಾಣಿ ಹರನ್ ಎಸ್.ಎಸ್.ಎಲ್.ಸಿ. ರ್‍ಯಾಂಕ್ ವಿಜೇತೆ, ಚಿತ್ರಕಲೆಯಲ್ಲಿಯೂ ಸಾಹಿತ್ಯದಲ್ಲೂ ಆಸಕ್ತೆ. ಹಾಸನದ ಮಲ್ನಾಡ್ ಕಾಲೇಜ್ ಆಫ್ ಇಂಜನಿಯರಿಂಗ್ ಸಂಸ್ಥೆಯ ವಿದ್ಯಾರ್ಥಿನಿ; ಉದ್ದಕ್ಕೂ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆ ಹೊಂದಿ ಖ್ಯಾತ ಇನ್‌ಫೋಸಿಸ್ ಸಂಸ್ಥೆಯಲ್ಲಿ ಸಾಫ್ಟ್‌ವೇರ್ ಇಂಜಿನಿಯರಾಗಿ ಸೇವೆ ಸಲ್ಲಿಸಿದ್ದಾರೆ. ಪೂಜ್ಯ ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ'ವನ್ನು ಇಂಗ್ಲಿಷ್‌ಗೆ ಅನುವಾದಿಸಿದ ಖ್ಯಾತಿ ಅವರದು; ಸೇವೆಗೆ ಸೇರಿದ ತರುಣದಲ್ಲೇ ಇನ್‌ಫೋಸಿಸ್ ಸಂಸ್ಥೆಯ ಬುಲೆಟಿನ್ ಬೋರ್ಡ್‌ನ ಗೌರವದ ದಾಖಲೆ ಕೂಡ. ಶರ್ವಾಣಿ ಅವರ ಪತಿ ಇಂ. ಭಾನುಪ್ರಕಾಶ್ ಅಮೆರಿಕದ ಸಾನ್ಹೋಸೆಯಲ್ಲಿ ಜೂನಿಪರ್ ನೆಟ್‌ವರ್ಕ್ ಸಂಸ್ಥೆಯಲ್ಲಿ ಹಾರ್ಡ್‌ವೇರ್ ಇಂಜಿನಿಯರ್; ಪ್ರತಿಭಾವಂತನೆಂದು ಸಂಸ್ಥೆ ಉತ್ತೇಜಿಸಿದೆ. ಚಿ. ಶರ್ವಾಣಿ ಪತಿ ಭಾನುಪ್ರಕಾಶ್ ಅವರೊಂದಿಗೆ ಈಗ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದ್ದಾರೆ. ಶ್ರೀಮತಿ ಶರ್ವಾಣಿ - ಶ್ರೀ ಭಾನುಪ್ರಕಾಶ್ ದಂಪತಿಯ ಮಗಳು ಚಿ. ಆರ್ಯಾ ಪ್ರಕಾಶ್ (೨). ಸಂಸಾರವನ್ನು ಜಾಗರೂಕತೆಯಿಂದ ನಿರ್ವಹಿಸಿಕೊಂಡು, ಯಶಸ್ವಿಯಾಗಿ ಸಾರ್ವಜನಿಕ ಸೇವೆಯನ್ನೂ ನಡೆಸಿಕೊಂಡು ಹೋಗುತ್ತಿರುವ ಪ್ರತಿಭಾವಂತ ಮಹಿಳೆಯರ ಸಾಲಿನಲ್ಲಿ ಡಾ. ಎಂ.ಎಸ್. ವಿಜಯಾ ಹರನ್ ಸೇರಿದ್ದಾರೆ.

***



Volume 10

Sanketi : Autobiographies

Editor : K .Sundara Raju

a. SANKETI STUDIES

This volume entitled 'Sanketi: Autobiographies' is a collection of five autobiographies of the Sanketi community. The fifth volume called 'Sanketi Itivruththagalu' (Kannada) is also a collection of autobiographies. The works that portray community life in depth, based on an autobiography, have been separated into a category named 'Sanketi Itivruththagalu'. The works considered under 'Autobiographies' also give a picture of contemporary social life incidentally. 'Sanketi Itivruththagalu' also have a track of personal achievements running through them. There are also instances wherein the demarcating line between "Ithivruththa" and "Autobiography" is very thin and uncertain. In the present instance, a dedicated attempt towards a definite goal is a clear feature of the autobiographies that are included in this volume.

"I am most happy when I am mad with Music." This is the seminal line that sums up the work 'Musings of a Musician'. This could also be the representative statement of the whole work. The variations are just that it might be a madness of Scholarship, Social-work or patriotism.

'Musings of a Musician' is a rendering of the memoirs of the author of "Raganidhi", a work held in great esteem by the musicians and musicologists of India. As Sri B.Subba Rao, the author himself states, has recollected them during leisure and recorded them for personal pleasure. He has called it Volume-I. This is the only volume available, and perhaps this is the only volume Mr. Subba Rao ever wrote.

It has been several years since the reputed Music critic Sri K.Raghavendra Rao hinted the Samudaya Adhyayana Kendra about this rare work. In addition to its being a record of the author of "Raganidhi", this work is significant in its own right, because of the valuable information therein. This work written in pencil on brittle paper could

easily have been destroyed. The credit of preserving this manuscript goes to Dr. Meera Murthy. She has preserved several records pertaining to Mr. Subba Rao. Dr. Meera Murthy is an expert in the field of Drama; she is also competent in and an enthusiast of Karnatak Music.

Mr. Subba Rao has created new Ragas, composed Musical compositions, made presentations pertaining to music, participated in scholarly interactions, served as a judge, developed new musical instruments. The list of his achievements goes on. The root of all his achievements lies in the vision of his father Mr. Ramaswamy. He can be cited as model personality as to the possibility of one man nurturing several talents. Mr. Subba Rao is a successful example of his efforts.

The progress and development of the love for music kindled in Mr. Subba Rao by his father is portrayed in this work. Mr. Subba Rao never missed any opportunity either for learning Music or for interacting, discussing, exhibiting, enthusing and encouraging others about, teaching or pondering about Music; in fact, he himself created such occasions for himself. It is the story of such a lifelong penance that is recorded here.

This work portrays the cultural celebration of about a century. The passage here is impartial and truthful in addition to being discerning. This in fact is a procession of the legends of Music. This work needs to be a part of the cultural history of this nation. There is another aspect of it. "When a musician/instrumentalist can fulfil his job completely and satisfies the audience then he will enjoy the bliss of music" says the author. Even a lay reader experiences at least a fresh sense of pleasure when he traverses along this journey of Music. Mr. Rao has proved here his competence as an author in addition to his skill capability in the creation of a scholarly work like "Raganidhi". Humour, irony, word-picture, critique - all find their places here. Regarding a beautiful Thumri sung by a beggarly lad this is what he remarks "How I wish I had known about this young Kabuli's music! I would have gone too, every night to listen to him. Although they were leading a nomadic life, how happy they were and how happy music was with them! Goddess Saraswathi perhaps prefers for her home adversity rather than opulent prosperity." This work is a portrayal of such a journey of bliss.

'Amidst Scholars' is an autobiography of Vedabrahma Sri Narasimhamurthy Shastry, popularly known as "the Avadhootha of Lingadahalli' (a village in the present Chickmagalore District of Karnataka). Sri Narasimhamurthy Shastry is a scholar of Yajurveda; in fact he is well versed in Rigveda and Yajurveda; he has distinguished himself in each of the scholarly examinations pertaining to Sahitya, Alankara, Vedanta,

Tharka, Vyakarana, Jyothishya etc. He was forty when he completed his education! He could study Vyakarana in three years while it normally entails a study of five years; with such a competence he devoted a quarter century for higher education!

At the ripe old age of 96, Sri Shastry can even today recite Paanini's Vyakarana (grammar) in its entirety, and participate in scholarly discussions about it and undertake a detailed critique of the tough aspects of it. His participation in the reputed National Vakyartha Goshti at the age of 95, where in he could outwit all the others in all the six Shastras and win the awards has not been mentioned in this work. This work gives us a picture of the calibre of his scholarly associations.

Sri Bi.Chi. Jagannatha Jois who managed to invite, host and gather all this information from an introvert like Sri Narasimhamurthy Shastry, is himself an officer in a bank, having studied Commerce. His desire to delve into the psyche of such a great scholar is to be appreciated.

This is a very short narrative. If Sri Shastry could give a detailed narration the picture of the scholarly world of the bygone days would have provided a very interesting reading. Sri Jagannatha Jois has instilled such an irrepressible curiosity in us.

'My Life' is an autobiography of the noted Vainika (exponent of Veena) Prof. R.N.Doreswamy (R.N.D.). A straight, simple and sincere narrative is the commendable feature of this work. It is this characteristic that prompted Samudaya Adhyayana Kendra to appreciate the work; it also realized that a considerable part of the noteworthy credentials of Prof. R.N.D. remained unpublished. This lead to the publication of a Felicitation Volume entitled 'Mahati'. Prof. R.N.D.s autobiography came to be included in it. All the varied information pertaining to him came into public view and he won the Central Sangeetha Naatak Academy's Award as well.

It was the ambition of Sri R.N.D.'s father that he should develop into a musician, and not his own. The times were such that the whole nation had turned away from our traditional education towards Modern Education. That Prof. R.N.D.'s father Sri Narayanaswamy overcame his own attraction for modern education and decided that his son would become a musician, is something remarkable. Being a native of Rudrapatna, his devotion to music was but natural. But gathering information regarding the opportunities for learning music that were available in the distant Tamilnaadu, and enrolling his little son there were commendable when we consider the limited facilities available in those days. His efforts to see his son achieve the status of an 'Aashtaana Vidwan' in spite of all odds, could be a model for determination for all times.

Sri R.N.D. who gave up school education with the ambition of becoming a musician, had to face quite a series of obstacles on his way. His battle with these odds, and the numerous Gurus he had to learn under - these were not in vain; instead of turning out to be a common artist, he developed into a Musicologist, a Composer and a great teacher; in addition he grew to be a mature person, worshipping Art as the sole mission of his life; he grew to be a friendly human being accepting life with equanimity against all odds.

The Sanketi Community followed Vedaadhyayana (the Study of the Vedas), and Garden-farming in the traditional way and was peacefully pursuing the metaphysical values of life; Prof. R.N.D.'s father represents the turmoil it underwent in its inability to adapt to the changing life patterns, posing new challenges and offering new opportunities. In all these narratives that are the components of Sanketi Adhyayana such instances abound.

The present narrative gives details of the struggles of R.N .D.'s education; but deep insights into Art are not found here; neither does it throw any light on his standing as compared to the Musical giants of his time. R.N.D. along with Veena Doreswamy Iyyengaar was among the talented students of the great Veena Venkatagiriyappa; he considered them as his eyes; the sense of being thus valued has not been exposed here. Tears would swell in the eyes of Prof. R.N.D., being the kind-hearted man he was, whenever he remembered his Guru, and his voice would choke; he had this tenderness towards his Guru till his last days. We might consider this as the reason for his failing to record the details of his own artistic achievements in his autobiography. But his greatness and artistic achievements are seen in the other articles in his Felicitation Volume "Mahati". Prof. R.N.D. might have abstained from referring to them as they have been brought in his own scholarly articles and in the articles written by others about him. This too is just a conjecture.

Prof. R.N.D.'s articles show us as to what a modest, discerning and broad-minded man he was, in addition to exhibiting his scholarship, his expertise in the nuances of Art, and his hold of the Theoretical aspects of it.

The details of the protests that Major H.C. Venugopal undertook, as a follower of Gandhiji and from the underground, during the national struggle for independence, have been recorded in the work entitled, 'A Soldier Remembers'. This also includes the struggles in which he participated as a soldier and the details of the reforms he undertook in the army. The final lines of the long recommendation letter by the I.G.P.

of Manipur, who proposed the name of Mr.Venugopal for 'Parama Visishta Seva Padak' reads thus," A thoroughly conscientious, honest, industrious, and courageous officer, Major Venugopal has affected enormous improvement in the working of his battalion in various departments, gained far-reaching operational achievements, and earned the goodwill and confidence of the locals in the area of responsibility of his unit by his missionary zeal and dedication of very high order."

A major part of his training was to inculcate the practice of "seeking satisfaction in whatever job one undertakes"; Mr. Venugopal was in close contact with men like M.N. Jois, T.Siddalingaiah, S.Nijalingappa, Nittur Sreenivasa Rao while he participated in the struggle for the national independence.

The Battlefield is nothing new to the Sanketi Community. Ample examples of valiants that held swords and fought battles are seen in the Histories of the Sanketi Community. Dalvoy Raamayyar, a prominent builder of Thiruvaankoor Dynasty belonged to this community; Bhakshi Thippayya groomed Krishna Raja Wodeyar III and brought about a wide range of reforms; Vidyaranya was instrumental in the establishment of Vijayanagara Dynasty; But 'A Soldier Remembers' is the only work that gives a broad and detailed account of a soldier's saga.

Venugopal was a daring warrior; he escaped the noose by a narrow margin while he was involved in underground activities; he was the General that saved Itagi from the clutches of the Razakars of Hyderabad and won its independence for it; he was the observer that provided the reports which led Sardar Patel's Hyderabad Police Action in 1948 there. Even though the details of bloodshed in the battlefield have not been emphasized here, there are instances that provide testimony to Venugopal's valour.

It is the exceptional nature of the reforms that he brought about that won the 'Visishta Seva Medal' to Venugopal. Humanitarian impulses and their continued presence were at the root of these reforms. A beggar stretched his hand at the instance when Venugopal was about to eat the "Prasaadam" that the Saint Guru of Beas had bestowed; a friend by his side shouted, "You eat it yourself; it has magical powers"; but without a second thought, he gave it to the beggar and remarked," This boy is in need of its strength, more than me". Mr. Venugopal had travelled hundreds of miles for the sake of that "Prasadam". It was in this way that the impulses of Venugopal, the soldier, functioned. "Battlefields are meant to protect peace", sounds paradoxical. But Major Venugopal could prove it true. His decision that he did not want a wife who

refused to continue education, appears tough; but such toughness is seen only when the mind is full of Love.

Autobiographies of soldiers are uncommon even in Kannada literature. The original English manuscript of such a distinctive work was brought to the notice of the Kendra by Captain (Retd.) Krishna Prasad, a well-wisher of the Kendra. Even though this is such a valuable work, being himself a soldier, he was uncertain of it receiving the approval of the readers. Prof. Ravindra and Dr. Hema, children of Venugopal have taken pains to improve the overall form of this work.

The Autobiography, 'From Mathoor to Britain' is a story of Krishnamurti stretching his field of work from Mathoor to Britain. It is a tale of M.R.Krishnamurthi developing into "Mathoorji"; it is a story of someone that had a formal schooling upto S.S.L.C. growing on to become popular as a "Doctor", through the education imparted by life; it is also a tale of how such a person won the goodwill of the community by his own love towards society and attained the stature of a "Guru" and a "Swamy".

Poverty subjects one to hardships; sometimes there may be positive outcomes too. The various ways in which the abject poverty of Mathoor's family exposed it to hardships has been portrayed in considerable detail in this work; even after repeated readings one cannot help being moved by it . Inspite of this, ultimately poverty should be considered a blessing in disguise; the lotus of life blooms amidst the very same poverty.

Another great value that this work upholds pertains to one's reverence towards one's mother. What good can we expect from someone towards society if he has not learnt to love his own mother! Mathoorji has loved society, he has served society and he has been able to benefit society; he could do all this because he cared for his mother as if she were God incarnate. There is an extensive portrayal of motherhood here. A sensitive reader can appreciate beautiful poetry in the portrayal of poverty and motherhood in this work.

It was not a single day that formed Mathoorji. He would not have been transformed thus even by earning a Doctorate degree by pursuing higher education or research for several years. During the very period of his life when his craving and determination for learning were at their peak he dived into the holy fire of life. He developed a vision of life in Sri Ramakrishnashrama and in the proximity of Mahatmaji at Vardha. The discrimination between various tasks as worthy and otherwise

was destroyed at the first instance. The mental make-up of considering oneself as the holy offering for the welfare of society developed. The personality that had been purified of ego during the period of availing weekly meals (varanna) as a regular guest in generous households, now developed the fragrance of voluntarily offering oneself.

He had witnessed the motherly generosity of women who served fresh food to the poor boys that came for the purpose of having lunch (varanna) while leftovers were served for their own children; he had experienced the generosity of people like Mahabaleshwara Bhatta; he realized that it is the experience of love, sacrifice and humane responsiveness that shows the beauty of life to the eyes of people suffering and weakened from poverty. He joined the bandwagon of positive thinkers. The life story portrayed here is based on such things. V.Seetharamaiah's rationality, M.V. Chakravarthy's scholarship, D.V.G.'s multidimensional achievements, the simplicity of Siddavanahalli Krishna Sharma, Shama Rao's writing skills - he worshipped greatness whenever and wherever he found them. Having lost his father at a tender age Mathoorji opened himself up for varied occupations, starting from that of a bus conductor and reaching up to Akaashavani (the All India Radio). Learning of languages, writing skills, translation, lecturing - he could transform all these challenges into opportunities for developing himself. All the streams of his experiences joined the ocean of Bharatiya Vidya Bhavan.

Mathoorji left for England to shoulder the responsibility of the London Centre of Bharatiya Vidya Bhavan when he was 43 in 1972; by then he had gained the status of litterateur, journalist, speaker, scholar, artist, an experienced person, an enthusiast, and a healthy youth. He had the responsibility of initiating Vidya Bhavan there and commencing its activities. Within a few months after going there the disappointment caused by the slow progress of work lead Mathoor to attempt suicide. Such an attempt itself was an indicator of his ability to develop the London centre into an eminent institution. Where do we find people who take it to their heart that a public institution does not progress well? Who are the souls that shy away from very life itself, because they are unable to achieve such progress? Being a living mirror to the adage "Do or Die" is another of the achievements of this autobiographical work.

The success story of London is the story of how a person charged with such an ambition breaks through all inhibitions and grows to become a giant. Mathoorji walking through the streets of London carrying a load of books - this image of Mathoorji is itself a personification of his enthusiasm. He travelled from place to place, sowing the seeds introducing Bhavan along with his lectures. He realized that none other than

Dalalji could aid in promoting and realizing his dreams. He unearthed resource persons; developed Bhavan into a centre for various activities. Dalalji, Prof. Burke, J.D.Birla, Lord Thomson of Fleet, Lord Mountbatten, Prince Charles, the Queen of England, Indira Gandhi - he attained the peak of contacts with great people. He had the honour of being the first to be invited by the B.B.C. to deliver one hundred lectures on Hinduism. He gained the respect of the people of all religions by proclaiming, 'Sangachchadhvam Samvadadhvam Sam Vo Manaamsi Janatham' he gained the regard of the Queen too; he lead one to recall the instance of Vivekananda's speech at Chicago. He awakened the religious sentiments of people and took lead in the conduct of religious ceremonies. He also lectured in the Educational institutions and won acclaim. He facilitated people of other religions also to comprehend the meaning of Indian Vaidika Manthras. He was always open to all the positive features of the foreign land. Always following his own conscience he developed the London centre of Bharatiya Vidya Bhavan into a great institution. All through the quarter century of his stay at London he was lame, blind and deaf to everything other than Vidya Bhavan to achieve this. This is nothing but penance; it is the story of this penance that we find here.

Mathoorji who returned to India in his 66th year, applied himself to the service of Bharatiya Vidya bhavan with the enthusiasm befitting a young man commencing his career. The third part of this tale portrays the story of 80 year old Mathoorji who charges ahead as if he were a lad of eighteen; this continues as a subject for a future autobiography.

'From Mathoor to Britain', a handbook of this achiever is a peephole into the mystery of the life of a great soul; it is an inspiration to those with a desire to achieve; it instills courage to the unsuccessful; it provides consolation to those who lament that their own sacrifice goes unnoticed; it is a ray of hope to those who lament that darkness has set in. There is no exaggeration in the narrative; all the impressiveness is due to the achievement of the great man.

Mathoorji is a great devotee of Kumaravyasa, the great Kannada poet of 15th century. He has engaged in extensive interpretation of his poetry all his life. Kumaravyasa is the inspiration and model for the leisurely spread and the engaging details of Mathoorji's narrative. Mathoorji - has virtually assimilated the Ramayana, the Mahabharatha, the Puranas and the Vedic literature. That gives the touch of the Mythical to his writing. Mathoorji is a litterateur, he has identified the exact points of aesthetic

potential and given life to them. He is a Journalist, and thus is sure of the sensibility of a wide range of readers. It is a multilayered audience numbering thousands, that he addresses while he carries on his narrative.

For those that have heard him, in particular, Mathoorji's words, his smiling face, his affection and his concern keep reverberating. Seldom do we come across people who are competent to give expression to the emotionally charged situations, as well as Mathoorji. This quality has been retained in his writings in an equally effective manner.

The characterization here is comparable to that of an epic. Mahabaleshwara Bhatta, the cashier behind the cash box in a hotel, the motherly lady who serves food on the specific day of the week, Satish Dawar, Prema Totadri, Kaushalya Harwell - even such incidental, minor characters portrayed here have been immortalized. Even now at this ripe age of 80 Mathoorji has some major projects in view. He has envisioned a new 'Gandhi Upanishad'. The art of gaining immortality through hard labour is being practised by him. This is what turns from 'Mathoor to Britain' into a very distinguished autobiography.

The lineage of the Nithundilas of Mudalapura in Hassan District is held in great esteem. The history of people who were honoured by Vijayanagara kings fifteen generations ago is a part of it. It is a tale of three brothers who were awarded four pairs of villages. The eldest of the brothers had won it twice. Mathoorji of the same lineage is the present incarnation of their luminance and stature.

Really it was a challenging job for Sumana Vishwanath, when she took up the task of penning Mathoorji's autobiography in Kannada.

Details of Autobiographies included in this volume:

1. **Musings of a Musician** (1970): B. Subbarao (1894-1975), Basavapatna, Hassan District - Kaushika Sanketi - Deputy Director; Agriculture Department - Musicologist, Educationist and Writer.

2. **Amidst Scholars** (2003): Vidwan Narasimhamurthy Shastry (1912)[a] - Lingadahally, Chikmagalur Dist. - Malenadu Sanketi - Veda Shastra Pandit, Writer, teacher and agriculturist.

3. **My Life** (2000), Kannada Narration: Prof. R.N. Doreswamy, (12.12.1916 - 17.8.2002) - Rudrapatna, Hassan Dist. - Bettadapura Sanketi - Veena Vidwan, Musicologist, Agriculturist, Teacher.

4. **A Soldier Remembers** (1998), Major H.C. Venugopal (23.9.1922 - 3.9.2003) - Handarahalu, Hassan Dist. - Kaushika Sanketi - Freedom fighter, Soldier.

5. **Mathoor to Britain,** Padmasri Mathoor Krishnamurti (B. 08.8.1929)[b], Mathoor, Shivamoga Dist. - Kaushika Sanketi - Promoter Bharatiya Vidya Bhavan, Journalist, Translator, Public Speaker, Commentator, Administrator, Organiser.

An autobiography being a form of History, it enthrols a sense of responsibility that is distinct from imagination, and a sense of propriety gains paramount significance here. This being a very small community, all the members of the community play witness to all these autobiographies. The capacity to criticize the self being a salient feature of the community, the sincerity and truthfulness demanded of an autobiography are natural features of these works. Our effort would be amply rewarded if this collection of autobiographies could form a source of information for identifying the common traits of this community and for further research about it.

I express my gratitude to all the people who have lent their support to the publication of this collection and to Sri K. Sundara Raju who has edited it.

Infact readers have been insisting all along that all the volumes of Sanketi Studies be brought out in English version as well. This would be an expensive and arduous task. Though it is imperative to do so, so as to make it accessible to the readers not conversant with Kannada, Samudaya Adhyayana Kendra has taken the stand that English translations could be considered after the publication of the works in Kannada. Meanwhile certain developments facilitated the publication of the English version of the volume entitled "Sanketi Aatmakathegalu". Mr. B. Subba Rao's 'Musings of a Musician' and Mr. H.C.Venugopal's 'A Soldier Remembers' were both originally written in English. Sri K. Sundara Raju had brought out Mathoorji's Autobiography in English and it had been published under the title 'Mathoor in Britain'. Among the five Kannada works included in the Volume 'Sanketi Aatmakathegalu', these were the larger ones. Sri K. Sundara Raju kindly consented to translate Prof. R.N.Doreswamy's 'My Life', as well as Bi.Chi. Jagannatha Jois's rendering centering on Ve. Br. Sri Narasimhamurthy Shastry, entitled 'Amidst Scholars'. He graciously accepted the responsibility of editing the whole volume as well. Samudaya Adhyayana Kendra is indebted to Sri K. Sundara Raju for this laborious task.

06-06-2010 **Dr. B.S. Pranatartiharan**

Mysore Chief Editor

ನಿಧನ : a 10-10-2010 b 06-10-2011

– ಸಂ

b. EDITORIAL

My daughter Smt. Sumana Vishwanath introduced me to Dr. B.S. Pranatartiharan in her house at Mysore. At the time he was there to consult her on the issue of including Padmasri Dr. Mathoor Krishnamurti's Autobiography 'Mathoorji Jeevanagaathe' narrated by Smt. Sumana in Kannada in the volume of 'Sanketi Adhyayana-6' along with the autobiographies of four other eminent personalities viz great musician Sri B. Subba Rao, Veda Ratna Sri Narasimhamurthy Sastry, music scholar Prof. R.N. Doreswamy and Major H.C. Venugopal. Smt. Sumana Vishwanath was made the 'Editor' of this volume.

I translated 'Mathoorji Jeevanagaathe' into English as 'Mathoorji in Britain'. Having read this Dr. B.S. Pranatartiharan expressed his wholehearted appreciation about my work but did not stop at that. He entrusted to me the work of translating the autobiography of Veda Ratna, Vidya Sagara Sri Narasimhamurthy Sastry and Veena Vidwan, Sangeeta Kala Ratna Prof. R.N. Doreswamy into English and there was no time constraint also. In addition to the translation I had the opportunity of persuing the autobiographies of both Sri B.Subba Rao and Major H.C. Venugopal. Each one of these distinguished personalities have struggled hard to acquire the name and fame which they richly deserve and have excelled in them. Their devoted and dedicated lives standout as the ideals for all the people and especially so far the younger generation to get inspired and to imbibe the moral values that are intertwisted in their mode of life.

What Dr. B.S. Pranatartiharan as the Chief Editor of 'Sanketi Adhyayana' has been doing in collecting, compiling and publishing the Sanketi autobiographies under the aegis of 'Samudaya Adhyayana Kendra Charitable Trust (Reg.)', is really praiseworthy. Though this work has the 'Sankethi Stamp' on it, it belongs to the whole of mankind and set guidelines for other people to follow.

Dr. B.S. Pranatartiharan has designated me as the editor of this Volume by virtue of my translation and proof reading work. I confess that I am really benefitted by this valuable work. I thank Dr. B.S. Pranatartiharan profusely for having entrusted to me this work and I must thank my daughter Smt. Sumana Vishwanath also for having enabled me to carryout this work to my hearts content.

- K. Sundara Raju

c. CONTENTS

PART - TWO

PART - THREE

d. Contributors

Dr. Meera Murthy & Sri K.R. Ramakrishna

Mr. K.R. Ramakrishna is a Master degree holder in Education, English and Kannada from Mysore University. He has to his credit an M.B.A. degree and a Diploma in Marketing Management from the U.K. He is a super-time scale officer from the Karnataka Administrative Service, and has held several responsible positions in the Government of Karnataka. Currently he serves as Additional Resident Commissioner, Karnataka Bhavan, New Delhi.

Dr. Meera Murthy is Professor and Head of the Department of Dramatics in the University College of Fine Arts, Masasagangotri, Mysore. She has been associated with the Theatre as an artist, as a Director and as a Costume Designer. She has written monographs depicting the life and works of Girish Karnad and Samsa. She has translated Henrik Ibsen's "A Doll's House" and Athol Fugard's "The Valley Song" into Kannada from English. She has also contributed to the translation of Will Durant's "A Story of Civilization" to Kannada.

Sri K. Sundara Raju & Smt. Vijayalakshmi

Born in the year 1936, on 4th August Sri K. Sundara Raju is a native of Ramasamudra, which has no Samudra (Sea) actually, a small village in Chamarajanagar taluk. Sri D. Krishnamurthy & Smt. Jayalakshmamma were his parents. Being the eldest son of a teacher, Sundara Raju joined Govt. High School Teacher's profession, after completing B.Sc., and then B.Ed. in the year 1956 and worked in rural areas of Chamarajanagar, Kolar and Mysore districts. His concern and care for his students made him work hard to improve the conditions of the schools wherever he worked. Even today many of his students who have excelled in their studies and are placed in very good positions cherish the memories of their school days with their favourite teacher and express their heartful gratitude and thanks whenever they meet him. Sundara Raju feels very proud of his students.

Sundara Raju has written many plays for the sake of his students. They have staged them on many occasions and have been applauded by parents as well as the audience. Though a science teacher he has much interest in literature also. His interest in 'Kumaravyasa Bharata' made him a 'gamaki' under the able guidance and training of Gamaka Kalabhushana Sri H.K. Ramaswamy.

Smt. Vijayalakshmi, the only daughter of Shanbhog Sri A. Srinivasamurthy of Amachavadi of Chamarajanagar taluk was married to Sundara Raju in the year 1958. Though Smt. Vijayalakshmi could not study high school, she had great love for classical music. She herself used to sing very well. Her interest in the epics made her read the entire 'Kumaravyasa Bharata' twice using only 3 to 4 ragas she knew at home in front of the Gods kept in the niche ! The couple are blessed with three daughters and a son. Smt. Vijayalakshmi passed away in 1991, leaving her loving family behind.

Sri Sundara Raju's literary career started with his translation of 'Mathoorji' from Kannada into English and till now he has seven works of translation to his credit.

ಅನುಬಂಧ

ಸಮೀಕ್ಷೆ

ಒಂದರಿಂದ ಹತ್ತನೆಯ ಸಂಪುಟದವರೆಗೆ

ದೇಶ ವಿದೇಶಗಳಲ್ಲಿ ನಡೆದ ಸಮಾರಂಭಗಳಲ್ಲಿ ಓದುಗರು ಸಂಕೇತಿ ಅಧ್ಯಯನ ಮಾಲೆಯ ಮಹಾಸಂಪುಟ ಸರಣಿಯ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು. 'ಸಂವಾಚಿ' ಎಂಬ ಇ–ಮ್ಯಾಗಜಿನ್‌ನಲ್ಲಿ ಕೂಡ ಇಂಥ ಪ್ರಶ್ನೆಗಳನ್ನು ಕೇಳಲಾಗುತ್ತಿತ್ತು. ಪ್ರಶ್ನೆಗಳನ್ನೂ ಅವಕ್ಕೆ ಡಾ. ಪ್ರಣತಾರ್ತಿಹರನ್ ಅವರು ಕೊಟ್ಟ ಉತ್ತರಗಳನ್ನೂ ಒಂದು ಕ್ರಮದಲ್ಲಿ ಜೋಡಿಸಿ ಇಲ್ಲಿ ಕೊಡಲಾಗಿದೆ.

1. ಸಂಕೇತಿ ಸಮುದಾಯಕ್ಕೆ ಸಂಬಂಧಪಟ್ಟಂತೆ ಹೊರತಂದಿರುವ ಹತ್ತು ಮಹಾಸಂಪುಟಗಳನ್ನು ಕುರಿತಾಗಿ 'ಸಮೀಕ್ಷೆ' ಎಂಬ ಮಹಾಸಂಪುಟವನ್ನು ಹೊರತರುತ್ತಿದ್ದೀರಿ. ಇದರ ಮಹತ್ತ್ವವೇನು?

ಈ ಸಂಪುಟದ ಸ್ವರೂಪದಲ್ಲಿಯೇ ಇದರ ಮಹತ್ತ್ವವಿದೆ. ಇದರಲ್ಲಿ ಎಲ್ಲ ಹತ್ತು ಸಂಪುಟಗಳ ಪ್ರಧಾನ ಸಂಪಾದಕರ ಮಾತು, ಸಂಪಾದಕರ ಮಾತು, ಮುನ್ನುಡಿ ಸೇರಿವೆ. ಪರಿವಿಡಿಯು ವಿವರವಾಗಿಯೇ ಇದೆ. ಪ್ರತಿ ಸಂಪುಟದ ಬಗೆಗೆ ವಿಮರ್ಶಾತ್ಮಕ ಲೇಖನಗಳಿವೆ, ಓದುಗರ ಪ್ರತಿಕ್ರಿಯೆಗಳಿವೆ. ಮೊದಲ ಸಂಪುಟದ ವೈಶಿಷ್ಟ್ಯದ ಕಾರಣದಿಂದಾಗಿ ಅದರಲ್ಲಿರುವ ಚಿತ್ರಗಳು ಮತ್ತು ಪಟ್ಟಿಗಳ ವಿವರಗಳನ್ನೂ, ಉಪಸಂಹಾರ ಭಾಗವನ್ನೂ ಸೇರಿಸಲಾಗಿದೆ. ಈ ಸಂಪುಟವನ್ನು ಮಾಹಿತಿಗಾಗಿ ಓದಿದವರಿಗೆ ಎಲ್ಲ ಹತ್ತು ಸಂಪುಟಗಳ ವಿವರಗಳು ತಿಳಿಯುತ್ತವೆ, ಸಂಶೋಧನಾತ್ಮಕವಾಗಿ ಅವಲೋಕಿಸಿದವರಿಗೆ ಸಾಮಗ್ರಿವಿಶೇಷದ ಸುಳುಹು ದೊರೆಯುತ್ತದೆ. ಮುಖ್ಯವಾಗಿ ಇಡೀ ಹತ್ತು ಸಂಪುಟಗಳ ಹೂರಣವು ಈ ಒಂದೇ ಸಂಪುಟದ ಓದುಗರಿಗೆ ಒಂದೇ ಓದಿನಲ್ಲಿ ದಕ್ಕುವುದರಿಂದ ಸಮುದಾಯದ ಒಟ್ಟು ಚಿತ್ರವು ವಿಶಿಷ್ಟವಾಗಿ ಅನುಭವಕ್ಕೆ ಬರುತ್ತದೆ. ತಮ್ಮ ಆಸಕ್ತಿಯ ವಿಷಯವನ್ನು ವಿವರವಾಗಿ ಓದುವುದಕ್ಕೆ ತಕ್ಕ ಆಯ್ಕೆ ಇದರಿಂದ ಸಾಧ್ಯ. ಎಲ್ಲ ಹತ್ತು ಸಂಪುಟಗಳು ದೊರಕದವರಿಗೂ, ಅಷ್ಟನ್ನೂ ಓದುವ ಸಮಯಾವಕಾಶವೂ ಶಕ್ತಿಯೂ ಅಗತ್ಯವೂ ಇಲ್ಲದವರಿಗೂ ಇದು ಉಪಯುಕ್ತವಾಗಿದೆ. ಮುಖ್ಯವಾಗಿ ಸಮುದಾಯ ಅಧ್ಯಯನದಲ್ಲಿ ಆಸಕ್ತರಾದವರಿಗೆ ಇದು ಹೆಚ್ಚು ಅವಶ್ಯ. ಹತ್ತು ಸಂಪುಟಗಳ ವಿಮರ್ಶೆಯು ವಿಸ್ತಾರವಾಗಿಯೇ ಬಂದಿದೆ.

2. ಮೊದಲ ಹತ್ತು ಸಂಪುಟವನ್ನು ಕುರಿತ ವಿವರ ಎಂದಿದ್ದೀರಿ. ಈ ಮಾಲೆಯು ಮುಂದುವರಿಯುವುದೆಂದು ಅದರ ಅರ್ಥವೆ? ಇದರ ಅಗತ್ಯವಿದೆಯೆ?

ಹೌದು, ಮುಂದುವರಿಯುತ್ತದೆ. ಸಂಶೋಧಕನನ್ನು ಕುತೂಹಲವು ಸೆಳೆಯುತ್ತದೆ, ಸವಾಲುಗಳು ಎದುರುಗೊಳ್ಳುತ್ತವೆ. ಇದೊಂದು ಆನಂದಯಾನ. ಈ ಯಾನದ ಉಲ್ಲಾಸವೇ ಅತಿಶಯವಾದುದು. ಯಾವುದೇ ಸಮುದಾಯದ ಅಧ್ಯಯನವು ಆಯಾ ಸಮುದಾಯಕ್ಕೆ ಮಿತವಾಗುವುದಿಲ್ಲ. ಒಟ್ಟು ಮಾನವಸಮಾಜದ ಅರ್ಥವಂತಿಕೆಗೆ ವಿಸ್ತರಿಸುತ್ತದೆ. ಇದೊಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ; ಈವರೆಗೆ ನೋಡುತ್ತಿರುವ ರಾಜಕೀಯ ಇತಿಹಾಸಕ್ಕೆ ಪೂರಕವಾಗಿ ಬರುವ ಈ ಬಗೆಯ ಅಧ್ಯಯನವು ಇತಿಹಾಸವನ್ನು ಹೆಚ್ಚು ಅರ್ಥಪೂರ್ಣವೂ ಉಪಯುಕ್ತವೂ ಆಗುವಂತೆ ಮಾಡುತ್ತದೆ. ಅಲ್ಲದೆ, ಯಾವುದೇ ವಿಷಯದ ಬಗೆಗೆ ಹೆಚ್ಚು ಮಾಹಿತಿ ಎಂದರೆ ಅದು ಹೆಚ್ಚು ತಿಳಿವು, ಹೆಚ್ಚಿನ ವಿಶ್ಲೇಷಣೆಗೆ ದಾರಿ ಎಂದೇ ಅರ್ಥ.

3. ಹಾಗಾದರೆ ಇದು ಮುಗಿಯುವುದು ಎಂದು?

ಭೌತಶಾಸ್ತ್ರ, ರಸಾಯನಶಾಸ್ತ್ರ, ವೈದ್ಯಕೀಯ ವಿಜ್ಞಾನ, ತಂತ್ರಜ್ಞಾನ ಇಂಥ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಇಂಥ ಪ್ರಶ್ನೆಯನ್ನು ಯಾರೂ ಕೇಳುವುದಿಲ್ಲ, ಕೇಳಲು ಸಾಧ್ಯವೂ ಇಲ್ಲ; ಇದೂ ಹಾಗೆಯೇ. ಯಾರದೇ ಬದುಕು ವಿಸ್ತಾರವಾದುದು, ಸಂಕೀರ್ಣವಾದುದು, ಜಗತ್ತಿನ ಎಲ್ಲ ಮಾನವರು, ಪ್ರಾಣಿಗಳು, ಕೀಟಗಳು, ಪಕ್ಷಿಗಳು, ಸಸ್ಯಗಳು ಮತ್ತು ಜಡವಸ್ತುಗಳ ಜೊತೆ ಹೆಣೆದುಕೊಂಡಂಥದು. ಅಲ್ಲದೆ ಬದುಕೆಂಬುದು ನಿತ್ಯ ಪರಿವರ್ತನಶೀಲವಾದುದು. ಬದುಕು

ವಿಕಾಸಶೀಲವೂ ಆನಂದಮಯವೂ ಅರ್ಥಪೂರ್ಣವೂ ಆಗಲು ಅದನ್ನು ವಿಶ್ಲೇಷಿಸಿಕೊಳ್ಳುತ್ತ ಮುಂದುವರಿಯಬೇಕಾದುದೂ ಅಗತ್ಯ.

4. ಅತಿಪುಟ್ಟ ಸಮುದಾಯಗಳಿಗೂ ಈ ಮಾತು ಅನ್ವಯಿಸುತ್ತದೆಯೆ?

ಸಮುದಾಯವು ಪುಟ್ಟದಾದರೂ ಬದುಕು ದೊಡ್ಡದು ಮತ್ತು ಸಂಕೀರ್ಣವಾದುದು. ಅಲ್ಲದೆ ಅತಿ ಪುಟ್ಟ ಸಮುದಾಯಗಳು ನಶಿಸಿಹೋಗುವ ಸಾಧ್ಯತೆಯು ಹೆಚ್ಚು. ಇನ್ನು ಕೆಲವೇ ದಶಕಗಳಲ್ಲಿ ಅನೇಕ ಭಾಷೆಗಳು ಕಾಣೆಯಾಗಿಹೋಗುವ ಭೀತಿ ಇದೆ. ಅವುಗಳ ಜೊತೆಜೊತೆಗೇ ಅನೇಕ ಸಮುದಾಯಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವ ಸಾಧ್ಯತೆ ಹೆಚ್ಚು. ಸಂಕೇತಿ ಸಮುದಾಯದ ಒಟ್ಟು ಜನಸಂಖ್ಯೆಯು ಮೂವತ್ತು ಸಾವಿರ. ಕೇರಳ, ತಮಿಳುನಾಡು ಮತ್ತು ಕರ್ನಾಟಕದ ಸಂಕೇತಿ ಸಮುದಾಯಗಳು ಪ್ರತ್ಯೇಕ ಅಸ್ತಿತ್ವವನ್ನೇ ಹೊಂದಿವೆ. ಕರ್ನಾಟಕವೊಂದರಲ್ಲೇ ಅದರ ಐದು ಉಪಸಮುದಾಯಗಳಿವೆ; ಈ ಐದರ ಭಾಷಾಸ್ವರೂಪವೂ ಭಿನ್ನವಾಗಿದೆ. ಅತಿಚಿಕ್ಕ ಉಪಸಮುದಾಯದ ಜನಸಂಖ್ಯೆ 600; ಅತಿದೊಡ್ಡ ಉಪಸಮುದಾಯದ ಜನಸಂಖ್ಯೆ 15000. ಈ ಭಾಷೆಗಳೂ ಉಪಸಮುದಾಯಗಳೂ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವ ಮುನ್ನ ಈ ಅಧ್ಯಯನವು ನಡೆಯಬೇಕಾದ ಅಗತ್ಯವಿದೆ. ತಮಿಳುನಾಡಿನಲ್ಲಿ ಕೆಲವು ದಶಕಗಳ ಹಿಂದೆ ಇದ್ದ 50000 ಸಂಕೇತಿಗಳು ಅನ್ಯಸಮುದಾಯಗಳ ಜತೆ ವಿಲೀನವಾಗುವ ಪ್ರಕ್ರಿಯೆ ವೇಗವಾಗಿ ನಡೆದು ಈಗ ಅವರ ಸಂಖ್ಯೆ ಐದು ಸಾವಿರಕ್ಕೆ ಇಳಿದಿದೆ. ಒಂಬತ್ತು ಶತಮಾನಗಳ ಹಿಂದೆ ಈಗಿನ ತಮಿಳುನಾಡಿನ ಶೆಂಕೊಟ್ಟೈ ಪ್ರಾಂತದಿಂದ ಕರ್ನಾಟಕಕ್ಕೆ ವಲಸೆ ಬಂದ ಅದಕ್ಕಿಂತಲೂ ದೊಡ್ಡ ಸಂಖ್ಯೆಯ ಸಂಕೇತಿಗಳಲ್ಲಿ ಈಗ ಉಳಿದಿರುವವರು ಕೇವಲ 25000 ಜನ. 900 ವರ್ಷಗಳ ಹಿಂದಿನ ತಮಿಳಿನ ಕೆಲವು ವಿಶೇಷ ರೂಪಗಳು ಇನ್ನೂ ಉಳಿದುಕೊಂಡಿರುವುದು ಕರ್ನಾಟಕದ ಸಂಕೇತಿಗಳ ಭಾಷೆಯಲ್ಲಿ. ಹಾಗಾಗಿಯೇ ಈ ಅಧ್ಯಯನಕ್ಕೆ ಐತಿಹಾಸಿಕ ಮಹತ್ತ್ವವೂ ಇದೆ.

5. ಈ ತುರ್ತೇ ಸಂಕೇತಿ ಅಧ್ಯಯನಕ್ಕೆ ನಿಮ್ಮನ್ನು ಹಚ್ಚಿತೆ?

ಇಲ್ಲ. ನಾನು ಸಂಕೇತಿ ಅಧ್ಯಯನಕ್ಕೆ ತೊಡಗಿದಾಗ ಆ 'ತುರ್ತಿನ' ಕಲ್ಪನೆ ಇರಲಿಲ್ಲ. ವಾಸ್ತವವಾಗಿ ಕರ್ನಾಟಕದ ಸಂಕೇತಿಗಳಿಗೆ ತಮಿಳುನಾಡು ಮತ್ತು ಕೇರಳದ ಸಂಕೇತಿಗಳ ಜತೆಗೆ ಒಂಬತ್ತು ಶತಮಾನಗಳಿಂದಲೂ ಸಂಪರ್ಕ ಇದ್ದಂತಿಲ್ಲ; ಇತ್ತೀಚಿನ ಇತಿಹಾಸದಲ್ಲಂತೂ ಇಲ್ಲವೇ ಇಲ್ಲ. ಕರ್ನಾಟಕದ ಸಂಕೇತಿಗಳ ಸಮಗ್ರ ಚಿತ್ರವೂ ಆಗ ನನಗಿರಲಿಲ್ಲ. ಇದೆಲ್ಲಾ ಸ್ಪಷ್ಟವಾದುದು ಅಧ್ಯಯನವು ಮುಂದುವರಿದ ಮೇಲೆ. ಅಲ್ಲದೆ ನನಗೆ ಸಂಕೇತಿ ಅಧ್ಯಯನದ ಆಲೋಚನೆಯೇ ಆಗ ಇರಲಿಲ್ಲ; ತೌಲನಿಕ ಸಾಹಿತ್ಯದಲ್ಲಿ ಆಸಕ್ತಿಯಿತ್ತು. ವರಕವಿ ಬೇಂದ್ರೆ ಅಥವಾ ಕನ್ನಡ ನವ್ಯಕಾವ್ಯದ ಪ್ರವರ್ತಕರಾದ ಅಡಿಗರನ್ನು ಯೂರೋಪಿನ ಕವಿಗಳ ಜತೆಗೆ ಹೋಲಿಸಿ ಅಧ್ಯಯನ ಮಾಡಲು ಯೋಜನೆ ಹಾಕಿಕೊಂಡೆ; ಅದು ಆಗದೇ ಹೋಯಿತು. ಮಧ್ಯಕಾಲೀನ ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಅಧ್ಯಯನಕ್ಕೆ ಪೀಠಿಕೆ ಹಾಕಿದೆ. ಅದೂ ಅಂಗೀಕಾರವಾಗಲಿಲ್ಲ. ಆ ಮೇಲೆಯೇ ಸಂಕೇತಿ ಅಧ್ಯಯನದ ಯೋಚನೆ ಬಂತು. ಅದಕ್ಕೂ ಕಾರಣವಿತ್ತು. 1983ರಲ್ಲಿ ಎಂ.ಎ. ಮುಗಿಸಿಕೊಂಡು ನನ್ನ ಹಳ್ಳಿಗೆ ಹೋದೆ; ಅಲ್ಲೇ ಪದವಿಪೂರ್ವ ಕಾಲೇಜಿನ ಒಪ್ಪೊತ್ತಿನ ಉಪನ್ಯಾಸಕನಾದೆ. ಪಾಠಪ್ರವಚನವಿಲ್ಲದ ವೇಳೆಯಲ್ಲಿ ಕ್ಷೇತ್ರಕಾರ್ಯಮಾಡಿದೆ; ನಮ್ಮೂರು ಬಸವಾಪಟ್ಟಣ ಮತ್ತು ಅದರ ಸುತ್ತಣಹಳ್ಳಿಗಳಲ್ಲಿರುವ ಸಂಕೇತಿಗಳಿಂದ ಕಥೆ, ಐತಿಹ್ಯ, ಗಾದೆ, ಒಗಟು, ಹಾಡುಗಳ ಸಂಗ್ರಹ ಮಾಡಿದೆ. ಹೀಗೆ ಪಕ್ಕದ ಒಂದು ಹಳ್ಳಿಯಲ್ಲಿ 10000 ಪುಟಗಳಷ್ಟು ಹಾಡುಗಳನ್ನು ಒಬ್ಬರೇ ವೃದ್ಧೆಯಿಂದ ಸಂಗ್ರಹಿಸಿದೆ. ಒಂದು ಸಂಜೆ ಆ ಹಳ್ಳಿಯಿಂದ ಹಿಂದಿರುಗುತ್ತಿದ್ದೆ. ದಾರಿಯಲ್ಲಿ ಸಂಕೇತಿಗಳಿಗೆ ಸೇರಿದ ಅಡಕೆ ತೋಟಗಳಿದ್ದವು. ಒಂದು ತೋಟದ ಒಬ್ಬರು ಇನ್ನೊಂದು ತೋಟದಲ್ಲಿದ್ದ ಸಹರೈತನಿಗೆ

ಕೂಗಿ ಹೇಳುತ್ತಿದ್ದರು. "ಇವನು ಏಕೆ ಹೀಗೆ ನಾಯಿ ಹಾಗೆ ಅಲೆಯುತ್ತಿದ್ದಾನೆ ಗೊತ್ತೇನೋ? ಪಿಎಚ್.ಡಿ. ಮಾಡಕ್ಕೆ !" ಆದರೂ ನನಗೆ ಸಂಕೇತಿಗಳ ಬಗೆಗೆ ಪಿಎಚ್.ಡಿ.ಗಾಗಿ ಅಧ್ಯಯನ ಮಾಡುವ ಆಲೋಚನೆ ಆಗ ಬರಲಿಲ್ಲ. ಎರಡು ವಿಷಯಗಳು ನಿರಾಕರಣೆಗೊಂಡಾಗ ಆ ರೈತರ ಮಾತು ಜ್ಞಾಪಕಕ್ಕೆ ಬಂತು. ಆ ವೇಳೆಗಾಗಲೇ ಸಂಗ್ರಹಿಸಿದ್ದ ಅಪಾರ ಸಾಮಗ್ರಿಯು ನೆರವಿಗೆ ಬರಬಹುದೆಂಬ ನಿರೀಕ್ಷೆಯೂ ಉಂಟಾಯಿತು. ಸಂಕೇತಿ ಸಮುದಾಯದ ಬಗೆಗೆ ಅಧ್ಯಯನ ಮಾಡಲು ಆರಿಸಿಕೊಂಡೆ.

6. ಅಂದರೆ ಸಂಕೇತಿ ಅಧ್ಯಯನವು ನಿಮ್ಮ ಪ್ರಥಮ ಆಯ್ಕೆಯಲ್ಲ !

ಪ್ರಥಮ ಆಯ್ಕೆಯಲ್ಲ, ಆದರೆ ಉಚಿತವಾದ ಆಯ್ಕೆ. ಮೊದಲು ಆರಿಸಿಕೊಂಡ ಎರಡು ವಿಷಯಗಳಲ್ಲಿ ನಾನು ಆಸೆ ಇಟ್ಟುಕೊಂಡಿದ್ದೇನೇ ಹೊರತು ಆ ಕ್ಷೇತ್ರಗಳಲ್ಲಿ ಕೃಷಿ ಮಾಡಿರಲಿಲ್ಲ. ತೌಲನಿಕ ಸಾಹಿತ್ಯದ ಅಧ್ಯಯನದ ಆಸೆ ಹುಟ್ಟಿದ್ದು ನಾನು ಪಾಶ್ಚಾತ್ಯ ಸಾಹಿತ್ಯವನ್ನು ವಿಶೇಷ ವಿಷಯವಾಗಿ ಅಧ್ಯಯನ ಮಾಡಿದ್ದರಿಂದ. ಮಧ್ಯಕಾಲೀನ ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಅಧ್ಯಯನದಲ್ಲಿ ಆಸಕ್ತಿ ಮೂಡಿದ್ದು ಆ ಭಾಗದ ಅಧ್ಯಯನವು ರೋಚಕವಾಗಿರುತ್ತದೆ ಎಂದು ಅಂದುಕೊಂಡದ್ದರಿಂದ. ಆದರೆ ಸಂಕೇತಿ ಅಧ್ಯಯನದ ಯೋಚನೆ ಬಂದದ್ದು ನಾನು ಅದಾಗಲೇ ಮಾಡಿದ್ದ ಒಂದಿಷ್ಟು ಕೆಲಸದಿಂದ. ಹಾಗಾಗಿ ಅದು ಸಹಜ ಆಯ್ಕೆಯಾಗಿತ್ತು. ಆ 'ಒಂದಿಷ್ಟು' ಕೆಲಸವನ್ನು ಮಾಡಿದ್ದೂ ಅನುದ್ದಿಶ್ಯವಾಗಿ ಮತ್ತು ಹವ್ಯಾಸವಾಗಿ ಎಂಬುದು ನಿಜ. ಆದರೆ ಅದು ಆ ಕ್ಷೇತ್ರದ ಹೆಚ್ಚಿನ ಅಧ್ಯಯನದ ಸಾಧ್ಯತೆಗಳ ಸಹಜಮಾರ್ಗಗಳ ಹೊಳಹು ಮೂಡಿಸಿತ್ತು. ಆ ದಿಕ್ಕಿನಲ್ಲಿ ಸೆಳೆತ ಉಂಟಾಗುವಷ್ಟು ಆಧಾರವೂ ಸಿಕ್ಕಿತ್ತು.

7. ಸಂಶೋಧನೆಯ ಮಾರ್ಗದರ್ಶಕರಾಗಿ ಡಾ. ಅಂಬಳಿಕೆ ಹಿರಿಯಣ್ಣ ಅವರನ್ನೇ ಆರಿಸಿಕೊಳ್ಳಲು ವಿಶೇಷ ಕಾರಣವಿತ್ತೇ?

ಡಾ. ಅಂಬಳಿಕೆ ಹಿರಿಯಣ್ಣ ಅವರು ಖ್ಯಾತ ಜಾನಪದತಜ್ಞರು; ಅನೇಕ ಹೊಸ ಉಪಕ್ರಮದ ಗ್ರಂಥಗಳನ್ನೂ ರಚಿಸಿರುವವರು; ತಾತ್ತ್ವಿಕ ಜಾನಪದದಲ್ಲಿ ಅಧಿಕಾರವಾಣಿಯಾಗಿರುವವರು; ಜಾನಪದ ವಿಶ್ವವಿದ್ಯಾಲಯದ ಮೊದಲ ಕುಲಪತಿಯೆಂಬ ಹೆಗ್ಗಳಿಕೆಗೂ ಪಾತ್ರರಾದವರು. ಅಂಥವರು ನನ್ನ ಸಂಶೋಧನೆಗೆ ಮಾರ್ಗದರ್ಶಕರು ಎಂಬುದು ನನಗೆ ಹೆಮ್ಮೆಯ ವಿಷಯ.

ಆದರೆ ನಾನು ನನ್ನ ಸಂಶೋಧನೆಗೆ ಮಾರ್ಗದರ್ಶಕರಾಗಬೇಕಾಗಿ ಅವರನ್ನು ಪ್ರಾರ್ಥಿಸಿದ ಹೊತ್ತಿನಲ್ಲಿ ಅವರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಒಬ್ಬ ತರುಣ ಅಧ್ಯಾಪಕರಾಗಿದ್ದರು. ಅವರಿಗೆ ಪಿಎಚ್.ಡಿ. ಪದವಿಯು ಆಗತಾನೆ ಪ್ರಾಪ್ತವಾಗಿತ್ತು. ಆದರೂ ಅವರನ್ನೇ ಮಾರ್ಗದರ್ಶಕರಾಗಿ ಆರಿಸಿಕೊಂಡಿದ್ದೆ. ನನ್ನ ಆಯ್ಕೆ ಎಷ್ಟು ಉಚಿತವಾಗಿತ್ತೆಂಬುದು ವೈಯಕ್ತಿಕವಾಗಿ ನನಗೆ ಆ ದಿನಗಳಲ್ಲೇ ಅನುಭವಕ್ಕೆ ಬಂದಿತ್ತು. ಅವರು ಒಂದು ವಿಶ್ವವಿದ್ಯಾಲಯದ ಕುಲಪತಿಗಳಾಗಿರುವ ಈ ಹೊತ್ತು ಅದು ಈಗ ಇನ್ನೂ ನಿಚ್ಚಳಗೊಂಡಿದೆ.

ಯಾವ ಅಭಿಪ್ರಾಯಗಳನ್ನೂ ಹೇರದೆ ಸಂಶೋಧನೆಯ ಸಹಜಪಾತಳಿಯಲ್ಲಿ ಸಾಗುವಂತೆ ನಿರ್ದೇಶಿಸಿ ಆ ಮಾರ್ಗದಲ್ಲಿ ಸ್ವತಂತ್ರವಾಗಿ ಮುಂದುವರಿಯಲು ಅನುವುಮಾಡಿಕೊಟ್ಟ ನುರಿತ ಮಾರ್ಗದರ್ಶಕ ಅವರು. ಹೊಸಪೀಳಿಗೆಯ ವಿದ್ವಾಂಸರಾದ ಅವರಿಗೆ ದೀರ್ಘಾನುಭವದ ಪಕ್ವ ವಿದ್ವಾಂಸರು ಮಾರ್ಗದರ್ಶಕರಾಗಿ ದೊರೆತಿದ್ದರು. ಅಲ್ಲದೆ ಅವರು ಸಹಜವಾಗಿಯೇ ಹೊಸ ಸಂಶೋಧನ ಪ್ರವೃತ್ತಿಗಳಿಗೂ ತೆರೆದುಕೊಂಡಿದ್ದರು. ಅವೆರಡರ ಪ್ರಯೋಜನವೂ ನನಗಾಯಿತು. ನನ್ನ ಮಾಹಿತಿಯ ವಿವರ ಮತ್ತು ತೀರ್ಮಾನಗಳಿಗೆ ಸಂಬಂಧಿಸಿದಂತೆ ಸಂಕೇತಿ ಸಮುದಾಯದ ಯಾರನ್ನೂ ಸುಲಭವಾಗಿ ಮೆಚ್ಚಿಸುವುದು ಸಾಧ್ಯವಿಲ್ಲವೆಂಬ ಅರಿವು ನನಗಿತ್ತು. ಈ ವಿಷಯದ ಸ್ವರೂಪವೇ ಅಂಥದು. ಪ್ರಾದೇಶಿಕ ಕವಲುಗಳು, ಆಚಾರ ವೈವಿಧ್ಯ, ಮನೆತನ

ವಿಶೇಷಗಳು, ಮೂರು ಭಾಷಾ ರಾಜ್ಯಗಳಲ್ಲಿ ಈ ಸಮುದಾಯದ ಜನರು ಚದುರಿಹೋಗಿ ಆಯಾ ಪ್ರದೇಶಗಳ ವೈಶಿಷ್ಟ್ಯಗಳನ್ನು ಬಹಳವಾಗಿ ಸ್ವೀಕರಿಸಿರುವುದು, ಭಿನ್ನ ಪರಿಸರಗಳು ಮತ್ತು ಸಂದರ್ಭಗಳಿಗೆ ತಕ್ಕಂತೆ ಆಗಿರುವ ಭಿನ್ನ ಬೆಳವಣಿಗೆಗಳು, ವಿಪರೀತವಾದ ಭಾಷಾಭಿನ್ನತೆಯ ಪ್ರಭೇದಗಳು – ಇವೆಲ್ಲವೂ ಸಂಕೇತಿ ಸಮುದಾಯದ ಬಗೆಗೆ ಇದ್ದ ಹೆಚ್ಚಿನ ಸವಾಲುಗಳು. ಅದಕ್ಕಾಗಿ ಪ್ರತಿಯೊಂದು ಪ್ರಾದೇಶಿಕ ಉಪಸಮುದಾಯಕ್ಕೂ ಸಂಬಂಧಿಸಿದಂತೆ ಒಬ್ಬೊಬ್ಬ ವಿದ್ವಾಂಸರನ್ನು (ಅನಧಿಕೃತ) ಮಾರ್ಗದರ್ಶಕರಾಗಿ ಸ್ವೀಕರಿಸಿದೆ. ಈ ಸಮುದಾಯದ ನಿಕಟ ಪರಿಚಯವಿರುವ ಸಂಕೇತಿಯೇತರ ಬ್ರಾಹ್ಮಣರೊಬ್ಬರನ್ನೂ, ಬ್ರಾಹ್ಮಣೇತರರೊಬ್ಬರನ್ನೂ ಹೆಚ್ಚಿನವರಾಗಿ ಸ್ವೀಕರಿಸಿದೆ. ಡಾ. ಅಂಬಳಿಕೆ ಹಿರಿಯಣ್ಣ ಅವರು ವಾಸ್ತವಾಂಶಗಳ ಆಧಾರದ ಮೇಲೆ ಸಮಗ್ರ ಅಧ್ಯಯನ ನಡೆಯಬೇಕೆಂದು ಸಂಕಲ್ಪಿಸಿ ನೀಡಿದ ಸೂಚನೆಗಳೇ ಹಾಗಿದ್ದವು. ಹಾಗಾಗಿ ಅವರಿಗೂ ನನಗೂ ಸಮಾಧಾನವಾಗುವಂತೆ ಸಂಪ್ರಬಂಧವು ಸಿದ್ಧವಾಯಿತು.

ಇದು ಹೀಗಿದ್ದರೂ, ನನ್ನ ಸಂಶೋಧನ ವಿಷಯಕ್ಕೆ ಈ ಬಾರಿಯೂ ವಿಶ್ವವಿದ್ಯಾಲಯವು ಸಮ್ಮತಿಸದೇ ಹೋಗಬಹುದೆಂಬ ಅಂಜಿಕೆ ಇದ್ದೇ ಇತ್ತು. ಹಾಗಾಗಿ ಅದಕ್ಕೆ ಸಮ್ಮತಿ ದೊರೆಯುವವರೆಗೂ ಸಂಶೋಧನ ವಿಷಯದ ಬಗೆಗಾಗಲಿ ಮಾರ್ಗದರ್ಶಕರ ಬಗೆಗಾಗಲಿ ಮೋಹವನ್ನು ಬೆಳೆಸಿಕೊಳ್ಳದೆ ನಿರ್ಲಿಪ್ತನಾಗಿ ಕಾದಿದ್ದೆ.

8. ಇದ್ದಕ್ಕಿದ್ದಹಾಗೆ ಈ ಮಹಾಸಂಪುಟ ಮಾಲೆಗೆ ಹೇಗೆ ಮನಸ್ಸು ಮಾಡಿದಿರಿ?

'ಇದ್ದಕ್ಕಿದ್ದಹಾಗೆ' ಅಲ್ಲ. ಅದೂ ಒಂದು ಸಹಜ ಬೆಳವಣಿಗೆ. ನನ್ನ ಸಂಪ್ರಬಂಧವನ್ನು ಪ್ರಕಟಿಸಲು ಪ್ರಯತ್ನಿಸಿದೆ. ಆತ್ಮೀಯರೂ ಹಿರಿಯರೂ ಆದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಆಗ ಅದನ್ನು ತಡೆದರು. ಇನ್ನಷ್ಟು ಸಂಶೋಧನೆ ಮಾಡಿ ಸಂಪ್ರಬಂಧದಲ್ಲಿ ಇರಬಹುದಾದ ಅರೆಕೊರೆಗಳನ್ನು ನಿವಾರಿಸಿ ಆನಂತರವೇ ಪ್ರಕಟಿಸುವಂತೆ ಆಗ್ರಹಿಸಿದರು. ಆಗ ಸಮುದಾಯ ಅಧ್ಯಯನ ಕೇಂದ್ರವನ್ನು ಹುಟ್ಟುಹಾಕಿದೆ. ಭಾರತದ ಎಲ್ಲ ಸಂಸ್ಕೃತಿಘಟಕಗಳ ಅಧ್ಯಯನದ ಉದ್ದೇಶ ಅದಕ್ಕಿತ್ತು. ಆ ಮೂಲಕ 25 ಕಿರುಹೊತ್ತಗೆಗಳನ್ನು ತರಲಾಯಿತು. ಇದರಿಂದ ಪ್ರೇರಣೆಗೊಂಡು ಎಲ್ಲ ಸಮುದಾಯಗಳೂ ತಮ್ಮ ತಮ್ಮ ಬಗೆಗೆ ಹೊತ್ತಗೆಗಳನ್ನು ಸಿದ್ಧಪಡಿಸಿ ತಾವೇ ಪ್ರಕಟಿಸಿದವು. ಅದೊಂದು ಅಭಿಯಾನವೇ ಆಯಿತು.

ಆ ವೇಳೆಗೆ ನನಗೆ ಮೈಸೂರಿನಿಂದ ಹಾಸನಕ್ಕೆ ವರ್ಗವಾಯಿತು. ಹತ್ತು ವರ್ಷಗಳ ಹೆಚ್ಚಿನ ಅಧ್ಯಯನದ ನಂತರವೂ ನನ್ನ ಸಂಪ್ರಬಂಧವು ನ್ಯೂನಾತಿರೇಕಗಳಿಂದ ಮುಕ್ತವಾಗಿರುವುದು ಕಂಡಿತು. ಸಮುದಾಯ ಅಧ್ಯಯನದ ಈ ಕೆಲಸವನ್ನು ನಿಲ್ಲಿಸಿ ಸಾಹಿತ್ಯಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಹವಣಿಸಿದೆ. ಯಾವ ಸಮಾರಂಭಗಳಿಗೆ ಹೋದರೂ ಸಾಹಿತ್ಯೇತರ ಆವೇಶಗಳೇ ಕಾಣುತ್ತಿದ್ದವು. ಮನಸ್ಸು ಕದಡುವುದು ತಕ್ಕುದಲ್ಲವೆನಿಸಿತು. ಹಾಸನ ಜಿಲ್ಲೆಯು ಸಂಕೇತಿ ಸಮುದಾಯದ ಮೂಲಕೇಂದ್ರ. ಅಲ್ಲಿರುತ್ತ ಕ್ಷೇತ್ರಕಾರ್ಯದ ಅವಕಾಶಗಳನ್ನು ಕಳೆದುಕೊಳ್ಳಬಾರದೆನಿಸಿತು. ಹಾಸನದ ಆಕಾಶವಾಣಿ ಕೇಂದ್ರದಲ್ಲಿದ್ದ ಕೃಷಿತಜ್ಞರು ಪ್ರಸಾರಮಾಡುತ್ತಿದ್ದ ಕೃಷಿಕಾರ್ಯಕ್ರಮಗಳಲ್ಲಿ ಸಂಕೇತಿ ಕೃಷಿಕರ ಸಂದರ್ಶನಗಳೂ ಇರುತ್ತಿದ್ದವು. ಅಂಥ ಎಲ್ಲ ಸಂದರ್ಶನಗಳನ್ನೂ ಒಟ್ಟಾಗಿಸಿದರೆ ಒಳ್ಳೆಯ ದಾಖಲೆಯಾಗುತ್ತದೆ ಎನಿಸಿತು. ಮಹಾಸಂಪುಟಗಳ ಕಲ್ಪನೆಯ ಬೀಜ ಅದು.

9. ಪ್ರತಿ ಸಮುದಾಯದವರೂ ತಮ್ಮ ತಮ್ಮ ಬಗೆಗೆ ಹೊತ್ತಗೆಗಳನ್ನು ಪ್ರಕಟಿಸುವ ಅಭಿಯಾನವೇ ಆರಂಭವಾಯಿತು ಎಂದಿರಿ. ಇದರಿಂದ ಜಾತೀಯತೆ ಬೆಳೆದಂತಾಗಲಿಲ್ಲವೆ?

ಎಂಥ ಅಪಪ್ರಯೋಗ ! ಜಾತಿ ಬೇರೆ, ಜಾತಿ ಅಧ್ಯಯನ ಬೇರೆ, ಜಾತೀಯತೆ ಬೇರೆ. ವಿಶ್ವವಿದ್ಯಾಲಯಗಳು ಇಂಥ ಸಂಶೋಧನೆಗಳಿಗೆ ಎಡೆಮಾಡಿವೆ; ಅವೆಲ್ಲ ಸಾಂಸ್ಕೃತಿಕ ಇತಿಹಾಸದ ದಾಖಲೆಗಳಾಗಿವೆ. ನಮ್ಮ ನಡುವಿನ ಅಜ್ಞಾನದ ಗೋಡೆಗಳನ್ನು ಕೆಡವಲು ಇವೂ ಬೇಕಲ್ಲವೆ? ಥರ್ಸ್ಟನ್ ಮೊದಲಾದವರು ಜಾತೀಯತೆಯನ್ನು ಬಿತ್ತಿದರೆ? ನಮ್ಮನ್ನು ಈಗ ಜಾತಿಯೂ ಆಳುತ್ತಿಲ್ಲ, ಸಂಸ್ಕೃತಿಯೂ ಆಳುತ್ತಿಲ್ಲ; ವಿಜ್ಞಾನ ಆಳುತ್ತಿದೆ. ನಾವು ಇಷ್ಟಪಡಲಿ, ಬಿಡಲಿ, ಅದನ್ನು ಒಪ್ಪಲಿ ಬಿಡಲಿ ಜಗತ್ತಿನ ಎಲ್ಲರದೂ ವಿಜ್ಞಾನದ ಜಾತಿಯಾಗಿದೆ.

ಎಂಥ ಪರಮವೈದಿಕರ ಮನೆಯೂ ಈಗ ಗುಡಿಸಲಲ್ಲ. ನಾಡ ಹಂಚು ಬಂತು, 'ಮಂಗಳೂರು ಹಂಚು' ಬಂತು, ತಾರಸಿ ಬಂತು. ನೆಲವನ್ನು ಗೋಮಯಹಾಕಿ ಸಾರಿಸಿ ಹೆಣ್ಣುಮಕ್ಕಳು ಕೈನೋಯಿಸಿಕೊಳ್ಳುತ್ತಿದ್ದ ಜಾಗದಲ್ಲಿ ಸಿಮೆಂಟ್‌ನೆಲ ಬಂದಿದೆ, ಮೊಸಾಯಿಕ್ ಬಂದಿದೆ. ಬೀಸುವಕಲ್ಲು ಒರಳುಕಲ್ಲು ಹೋಗಿ ಮಿಕ್ಸಿ, ಗ್ರೈಂಡರ್‌ಗಳು ಬಂದಿವೆ. ವಿದ್ಯುನ್ಮಾನ ಮಾಧ್ಯಮಗಳು ಆವರಿಸಿವೆ. ಹೊಸತಾಗಿ ಬಂದ ಎಲ್ಲವೂ ಎಲ್ಲ ಜನರ ಮನೆಗಳನ್ನು ಪ್ರವೇಶಿಸಿ ಪರಿಣಾಮಿಸಿ ಆಳುತ್ತಿವೆ. ಜಾತಿವಿಶೇಷಗಳು ಗೌಣವಾಗುತ್ತ, ದೂರವಾಗುತ್ತ ಸಾಗಿವೆ. ನಮ್ಮ ನಿಜವಾದ ಓಟ ಜಾತ್ಯತೀತತೆಯ ಕಡೆಗೇ ಇದೆ, ವೈಜ್ಞಾನಿಕ ಮನೋಭಾವದ ದಿನಚರಿಯ ಕಡೆಗೆ ಇದೆ.

10. ನೀವು ಈ ಕೆಲಸವನ್ನು ಮುಂದುವರಿಸಿಕೊಂಡೇ ಹೋಗುತ್ತಿದ್ದೀರಿ?

ಅದು ಸಂಶೋಧಕನ ಲಕ್ಷಣ !

ಥಾಮಸ್ ಆಲ್ವ ಎಡಿಸನ್ ವಿದ್ಯುದ್ದೀಪವನ್ನು ಪತ್ತೆಮಾಡಲು ಹೊರಟ. ದೀಪವನ್ನು ಉರಿಸುವವರೆಗೂ ಸಂಶೋಧನೆಯನ್ನು ಮುಂದುವರಿಸಿದ. ನಚಿಕೇತನ ದಾರಿ ಅದು.

ತನ್ನನ್ನು ತಾನು ಅರಿಯುವ ದಾಹ ಎಂಥದು ಎಂಬುದನ್ನು ನೋಡಲು ಅಲೆಕ್ಸ್ ಹ್ಯಾಲಿಯ (Alex Haley) Roots ಓದಬೇಕು. ಸಂಶೋಧಕನ ಓಟ ಎಂಥದು ಎಂದು ಕಾಣಲು Simone de Beauvoir ಅವರ The Second Sex ಓದಬೇಕು. ಒಂದು ಕಡೆ ಆಳವಾಗಿ ಅಗೆದರೆ ತಾನೆ ಬಾವಿಯಲ್ಲಿ ನೀರು ಬರುವುದು !

11. ತಮ್ಮ ತಮ್ಮ ಸಂಸ್ಕೃತಿಯ ಬಗೆಗೇ ಅಧ್ಯಯನ ಮಾಡುವುದು ಪಕ್ಷಪಾತದಿಂದ ಕೂಡಿರಬಹುದಲ್ಲವೆ?

'ಕೊನೆಗೆ ನಿಲ್ಲುವುದು ಅಭಿಮಾನವಲ್ಲ, ಸತ್ಯ' ಎನ್ನುತ್ತಾರೆ ಆಚಾರ್ಯರು. ಸತ್ಯವನ್ನು ಕಂಡುಹಿಡಿದು ಸತ್ಯವನ್ನೇ ಪ್ರತಿಪಾದಿಸುವಾಗ ದೊರೆಯುವ ಆತ್ಮತೃಪ್ತಿಯೇ ಈ ಕಠಿಣಕಾರ್ಯಕ್ಕಿರುವ ಫಲ. ಸಮುದಾಯವೇ ಅದನ್ನು ಒರೆಗೆ ಹಚ್ಚುತ್ತದೆ – ಇಂದಲ್ಲ ನಾಳೆ, ಇವರಲ್ಲದಿದ್ದರೆ ಅವರು.

ಎಷ್ಟೇ ಶ್ರಮಿಸಿದರೂ ಅನ್ಯಸಂಸ್ಕೃತಿಯನ್ನು ದಕ್ಕಿಸಿಕೊಂಡು ಸಮಗ್ರವಾಗಿ ಮತ್ತು ನಿರ್ದುಷ್ಟವಾಗಿ ಪ್ರತಿಪಾದಿಸುವುದು ಕಷ್ಟ. ತಾನೇ ಬೆಳೆದು ಓಡಾಡಿದ ಸಂಸ್ಕೃತಿಯ ಅಂತರಂಗ ಮತ್ತು ಬಹಿರಂಗ ದರ್ಶನವು ಅನ್ಯಸಂಸ್ಕೃತಿಯ ಅಧ್ಯಯನಕ್ಕಿಂತ ನಿಷ್ಕೃಷ್ಟವಾಗಿ ಆಗುವುದು ಸಾಧ್ಯ.

ಅಪೂರ್ಣವೂ ದೋಷಪೂರ್ಣವೂ ಆದ ಒಂದು ಸಂಶೋಧನೆಯು ಅದನ್ನು ಸರಿಪಡಿಸಲು ಮತ್ತೊಂದು ಸಂಶೋಧನೆಗೆ ದಾರಿ ಮಾಡುತ್ತದೆ.

12. ನೀವು ಈಗ ಹೊರತಂದಿರುವ ಹತ್ತು ಮಹಾಸಂಪುಟಗಳಲ್ಲಿ ಐದು ಗಂಭೀರವಾದ ಸಂಶೋಧನಕೃತಿಗಳೆಂಬುದು ನಿರ್ವಿವಾದ. ಆದರೆ ಉಳಿದ ಐದು ಆತ್ಮಕಥೆಗಳು ಮತ್ತು ಜೀವನ ಚಿತ್ರಗಳು. ಏಳನೆಯ ಸಂಪುಟವಂತೂ ಒಂದು ಸಣ್ಣ ವ್ಯಕ್ತಿಚಿತ್ರದೊಂದಿಗೆ ಅವರ ಲೇಖನಗಳ ಸಂಗ್ರಹವನ್ನು ಕೊಟ್ಟಿರುವಂಥದು. ಇದರ ಬದಲು ಸಂಶೋಧನ ಕೃತಿಗಳನ್ನೇ ತಂದಿದ್ದರೆ ಈ ಮಾಲೆಯು ಹೆಚ್ಚು ಅರ್ಥಪೂರ್ಣವಾಗುತ್ತಿತ್ತಲ್ಲವೆ?

ಈ ಮಾಲೆಯನ್ನು ತರುವಾಗ ಸಂಶೋಧನೆ, ವಿಷಯದ ಕ್ರೋಡೀಕರಣ ಮತ್ತು ಪ್ರಕಟಣೆ ಎಂಬ ಮೂರು ಉದ್ದೇಶಗಳನ್ನಿಟ್ಟುಕೊಳ್ಳಲಾಯಿತು. ಸಂಕೇತಿ ಸಮುದಾಯವು ಅನೂಚಾನವಾಗಿ ವೇದೋಪನಿಷತ್ತುಗಳು ಪುರಾಣಗಳು ಇತಿಹಾಸ ಮಹಾಕಾವ್ಯಗಳು; ಸಂಸ್ಕೃತಭಾಷೆ ಮತ್ತು ಸಾಹಿತ್ಯ; ಪೌರೋಹಿತ್ಯ, ಸಂಪ್ರದಾಯಾಚಾರ; ಶಾಸ್ತ್ರೀಯ ಸಂಗೀತ, ಗಮಕ, ಸಂಪ್ರದಾಯದ ಹಾಡುಗಳು; ಅಡಕೆ ತೋಟದ ವ್ಯವಸಾಯ ಇವುಗಳಲ್ಲಿ ಪರಿಣತಿಯನ್ನು ಸಾಧಿಸಿಕೊಂಡು ಬಂತು. ಸಮಾಜದ ಪ್ರತಿಯೊಬ್ಬರೂ 'ಲೌಕಿಕ'ವೆನ್ನುವ ಪ್ರಪಂಚದ ಕಡೆಗೆ ಉದಾಸೀನದಿಂದಲೇ ಇರುವ ಪ್ರವೃತ್ತಿಯವರಾದರು. ಹಾಗಾಗಿ ತಮ್ಮ ಬದುಕಿನ ಬಗೆಗೆ ಏನನ್ನೂ ದಾಖಲಿಸಲಿಲ್ಲ. ಇಪ್ಪತ್ತನೆಯ ಶತಮಾನದ ಆದಿಭಾಗದ ಹೊತ್ತಿಗೆ ಆಧುನಿಕ ಶಿಕ್ಷಣದಲ್ಲಿ ತಮ್ಮನ್ನು ಸಣ್ಣದಾಗಿ ತೊಡಗಿಸಿಕೊಂಡು, ಮಧ್ಯಭಾಗದ ಹೊತ್ತಿಗೆ ವ್ಯಾಪ್ತಿಯನ್ನು ಪಡೆದು, ನಾಲ್ಕನೆಯ ಪಾದದಲ್ಲಿ ಎಲ್ಲರೂ ಅದನ್ನು ತೀವ್ರವಾಗಿ ಅಪ್ಪಿ ಹೊಸ ಉದ್ಯೋಗಗಳನ್ನಾಶ್ರಯಿಸಿ ಹೊಸ ಪ್ರಪಂಚಕ್ಕೆ ಕಾಲಿಟ್ಟರು. ಆಗಲೂ ಮಾನವಿಕಗಳ ಕಡೆಗೆ ಬಂದವರು ಬಹು ಕಡಮೆ; ಸಮುದಾಯದ ವಿಷಯವನ್ನಾಗಲಿ ವ್ಯಕ್ತಿವಿಷಯವನ್ನಾಗಲಿ ದಾಖಲಿಸಿದ್ದು ಇನ್ನೂ ಕಡಮೆ. ಈ ಕಾರಣದಿಂದಲೇ ಇಂಥದೊಂದು ಪ್ರವೃತ್ತಿಗೆ ಪ್ರಚೋದನೆ ನೀಡಿ, ಜನರನ್ನು ಆ ಕಾರ್ಯದಲ್ಲಿ ತೊಡಗಿಸಬೇಕಾಯಿತು. ಅದು ಬಹು ಪ್ರಯಾಸದ ಕೆಲಸವೂ ಆಯಿತು. ಕೆಲವರ ಲೇಖನವನ್ನಂತೂ ಪುನರ್ಲೇಖಿಸಬೇಕಾಯಿತು. ಈ ಕಾರಣದಿಂದಲೇ ಯಾವುದು ಪ್ರಾಥಮಿಕ ಅವಸ್ಥೆಯ ಕೆಲಸವೆಂದು ಕಾಣುತ್ತದೋ ಅದನ್ನು ಕೂಡ ಪ್ರಯಾಸದಿಂದ ಮೊದಲಬಾರಿಗೆ ಸಾಧಿಸಲಾಗಿದೆ. ಅಂಥ ಸಾಮಗ್ರಿಯು ತನ್ನಷ್ಟಕ್ಕೇ ಒಂದು ಸಾಂಸ್ಕೃತಿಕ ದಾಖಲೆಯಾಗಿದೆ; ಸಂಶೋಧನೆಗೆ ಆಧಾರವಾಗಿದೆ; ಹಾಗಾಗಿ ಅವನ್ನು ಕ್ರೋಡೀಕರಿಸಿ ಸಂಪುಟಗಳ ರೂಪದಲ್ಲಿ ತರಲಾಗಿದೆ.

ಇಂಥ ಸಾಮಗ್ರಿಯು ಪುಷ್ಟವಾಗಿ ದಾಖಲಾಗಿ ಮುಂದೊಂದು ದಿನ ಪ್ರಖರಪಂಡಿತರು ಈ ಕ್ಷೇತ್ರದ ಸಂಶೋಧನೆಯಲ್ಲಿ ತೊಡಗಿಕೊಳ್ಳುವಂತಾದರೆ ಈಗಿನ ಶ್ರಮವು ಸಾರ್ಥಕವಾದಂತೆ.

ಡಾ. ಶಾಮಶಾಸ್ತ್ರಿಗಳ ವ್ಯಕ್ತಿಚಿತ್ರ ಮತ್ತು ಸಂಶೋಧನ ಲೇಖನಗಳು ಬಹು ಪ್ರತಿಷ್ಠಿತವಾದಂಥವು. ಅರ್ಥಶಾಸ್ತ್ರವು ಪ್ರಕಟವಾದ ನೂರನೆಯ ವರ್ಷದ ವಿಶಿಷ್ಟ ಸಂದರ್ಭವನ್ನು ಬಳಸಿಕೊಂಡು ಈ ಮಾಲೆಯ ಏಳನೆಯ ಸಂಪುಟವಾಗಿ ಅದನ್ನು ತರಲಾಗಿದೆ. ಈ ಮಾಲೆಯ ಪುಸ್ತಕಗಳು ತಲುಪಬೇಕಾದ ಉತ್ಕೃಷ್ಟತೆಯ ಪ್ರಾತಿನಿಧಿಕರೂಪ ಅದು.

13. 'ಶತಮಾನದ ಪತ್ರಗಳು' ಎಂಬ ಸಂಪುಟದಲ್ಲಿ ಪ್ರೊ. ಶ್ರೀಕಂಠಕುಮಾರಸ್ವಾಮಿ ಅವರು ಬರೆದ ಪತ್ರಗಳನ್ನು ಸೇರಿಸಿದ್ದೀರಿ. ಮೊದಲಭಾಗದಲ್ಲಿ ಕೌಟುಂಬಿಕ ಪತ್ರಗಳು ಬಂದಿದ್ದು ಅದು ಸಂಕೇತಿ ಸಮುದಾಯದ ಸಾಂಸ್ಕೃತಿಕ ಇತಿಹಾಸಕ್ಕೆ ನೆರವಾಗಿದೆ. ಪ್ರೊ. ಶ್ರೀಕಂಠಕುಮಾರಸ್ವಾಮಿಯವರ ಪತ್ರಗಳು ಕ್ರಾಂತಿಕಾರಿಯಾಗಿದ್ದು ಈ ಸಮುದಾಯದ ಸಾರ್ವತ್ರಿಕ ಚಿಂತನೆಗಿಂತ ಭಿನ್ನವಾಗಿವೆ. ಇವೆರಡನ್ನೂ ಒಂದೇ ಸಂಪುಟದಲ್ಲಿ ತಂದದ್ದು ಎಷ್ಟರಮಟ್ಟಿಗೆ ಸರಿ?

ಈ ಸಂಪುಟದಲ್ಲಿ ಸಂಕೇತಿ ಸಮುದಾಯವು ಪತ್ರ ಬರೆಯಲು ಸುಮಾರಾಗಿ ಪ್ರಾರಂಭಿಸಿದ ದಿನದಿಂದ ತೊಡಗಿ ಬಹುತೇಕ ನಿಲ್ಲಿಸಿದ ದಿನದವರೆಗಿನ ಪತ್ರಗಳು ಸೇರಿವೆ ಎಂದು ಸ್ಥೂಲವಾಗಿ ಹೇಳಬಹುದು. ಮೊದಲನೆಯ ಭಾಗದಲ್ಲಿ ಅನೇಕ ದಶಕಗಳಲ್ಲಿ ನೂರಾರು ಜನ ಬರೆದ ನೂರಾರು ಕೌಟುಂಬಿಕ ಮತ್ತು ಸಾಮಾಜಿಕ ವಿಷಯಗಳು ಸೇರಿವೆ. ಎರಡನೆಯ ಭಾಗದಲ್ಲಿ

ಒಂದೆರಡು ದಶಕಗಳ ಅವಧಿಯಲ್ಲಿ ಒಬ್ಬನೇ ವ್ಯಕ್ತಿಯು ಸಾಮಾನ್ಯವಾಗಿ ವೈದಿಕ ಜೀವನವನ್ನೇ ಕುರಿತು ಬರೆದ ಹತ್ತಾರು ಪತ್ರಗಳು ಸೇರಿವೆ. ಮೊದಲನೆಯ ಭಾಗವು ಸಾಂಪ್ರದಾಯಿಕ ಜೀವನದ ಒಳವಿವರಗಳನ್ನು ಕೊಡುತ್ತದೆ. ಎರಡನೆಯ ಭಾಗದ ಪತ್ರಕಾರರು ಆಧುನಿಕ ಶಿಕ್ಷಣವನ್ನೂ ಪಡೆದ ವೈದಿಕರು. ಅವರದು ವೈಜ್ಞಾನಿಕ ಮನೋಭಾವದ ಕಡೆಗಿನ ಒಲವು. ಹೊಸ ಶಿಕ್ಷಣ ಮತ್ತು ಹೊಸ ಚಿಂತನಕ್ರಮದ ಪ್ರತಿನಿಧಿ ಅವರು; ಅದನ್ನು ಹೀಗೆ ದಾಖಲಿಸಿದ ಮೊದಲಿಗರು. ವೈದಿಕ ತತ್ತ್ವಗಳ ಮೂಲಸತ್ತ್ವದ ಬಗೆಗೆ ಅವರ ತಕರಾರಿಲ್ಲ. ಮೂಲಸತ್ತ್ವಕ್ಕೆ ಧಕ್ಕೆಯಾಗದಂತೆ ಮಾಡುವ ಯಾವ ಪರಿಷ್ಕರಣಕ್ಕೂ ಈಗಿನ ಸಾರ್ವತ್ರಿಕ ಸಮಾಜದ ವಿರೋಧವಿಲ್ಲ. ಹೀಗಾಗಿ ಎರಡೂ ಭಾಗಗಳು ಪರಸ್ಪರ ವಿರುದ್ಧವಲ್ಲ, ಪರಸ್ಪರ ಪೂರಕ; ಚಲನಶೀಲವಾದ ಸಮಾಜವೇ ಇಲ್ಲಿ ಪ್ರತಿಫಲಿತವಾಗಿದೆ.

14. ಈ ರೀತಿಯ ಸಂಪುಟಮಾಲೆಗೆ ಮಾದರಿ ಇತ್ತೆ?

ಸಮುದಾಯ ಅಧ್ಯಯನ ಕೇಂದ್ರದಿಂದ ಅದಾಗಲೇ 25 ಕಿರುಹೊತ್ತಗೆಗಳನ್ನು ತರಲಾಗಿತ್ತು. ಅವುಗಳಲ್ಲಿ ಸಂಕೇತಿ ಸಮುದಾಯವನ್ನು ಕುರಿತ ಹೊತ್ತಗೆಗಳೂ ಸೇರಿದ್ದವು. ಸಮುದಾಯ ಅಧ್ಯಯನಕೇಂದ್ರದಲ್ಲಿ ಸಂಕೇತಿ ಸಮುದಾಯಕ್ಕೆ ಸಂಬಂಧಿಸಿದ ಮಾಹಿತಿಯು ಹೆಚ್ಚಾಗಿಯೇ ಸಂಗ್ರಹವಾಗಿತ್ತು. ಅದನ್ನೆಲ್ಲ ವಿಷಯಾನುಗುಣವಾಗಿ ವಿಂಗಡಿಸಿ ಮಹಾಸಂಪುಟಗಳ ರೂಪದಲ್ಲಿ ಪ್ರಕಟಿಸಲು ನಿಶ್ಚಯಿಸಲಾಯಿತು.

ಥರ್ಸ್ಟನ್ ಮೊದಲಾದವರ ಜನಾಂಗ ಅಧ್ಯಯನದ ಸಂಪುಟಸರಣಿಗಳನ್ನು ಕಂಡಿದ್ದೆ. ಯಹೂದೀ ಸಮುದಾಯದ ಬಗೆಗಿನ ಸಂಪುಟಸರಣಿಯನ್ನೂ ನೋಡಿದೆ. ಅವೆಲ್ಲವೂ ನನ್ನ ಸುಪ್ತಪ್ರಜ್ಞೆಯಲ್ಲಿದ್ದು ಇಂಥದೊಂದು ಸಂಪುಟಸರಣಿಯ ಸ್ವರೂಪವನ್ನು ನಿರ್ದೇಶಿಸಿರಬಹುದು, ಈ ಉಪಕ್ರಮಕ್ಕೆ ಧೈರ್ಯತುಂಬಿರಬಹುದು.

15. ಈ ಯೋಜನೆಗೆ ಧನಬಲ ಸಿಕ್ಕಿದ್ದು ಹೇಗೆ?

ಇಂಥ ಕೆಲಸಗಳಿಗೆ ಬಳಲಿಕೆಯೇ ಬಲ. ಕ್ಷೇತ್ರಕಾರ್ಯವನ್ನಾಧರಿಸಿ ಮಾಡಬೇಕಾದ ಕೆಲಸಗಳು ಮಿತಿಯರಿಯದ ಹಣವನ್ನೂ ಶ್ರಮವನ್ನೂ ಸಮಯವನ್ನೂ ಬೇಡುತ್ತವೆ. ಅವನ್ನು ವಿನಿಯೋಗಿಸಿ ಸಂಪುಟಗಳನ್ನು ಸಿದ್ಧಪಡಿಸಿದೆವು. ಪ್ರಕಟಣೆಗಾಗಿ ಮಾತ್ರ ದಾನಿಗಳಿಂದ ಹಣವನ್ನು ಸಂಗ್ರಹಿಸಿದೆವು. ಅಂಥವರನ್ನು ಸದಸ್ಯರೆಂದು ಕರೆದೆವು. ಪ್ರಕಟಿತ ಗ್ರಂಥಗಳನ್ನು ಅಂಥ ಸದಸ್ಯರಿಗೂ, ವಿದ್ವಾಂಸರಿಗೂ, ಸಂಸ್ಥೆಗಳಿಗೂ ಉಚಿತವಾಗಿ ಹಂಚಿದೆವು; ಮಾರುಕಟ್ಟೆಯ ಕೆಲಸವು ನಮ್ಮ ಮಿತಿಯನ್ನು ಮೀರಿದ್ದರಿಂದಾಗಿ ಆ ಭಾಗವನ್ನು ಕೈಬಿಟ್ಟೆವು. ಇದೆಲ್ಲದರಿಂದಾಗಿ ಪ್ರತಿ ಸಂಪುಟದ 250–300 ಪ್ರತಿಗಳನ್ನು ಮಾತ್ರ ಮುದ್ರಿಸುತ್ತಿದ್ದೆವು.

ಕಿರುಹೊತ್ತಗೆಗಳನ್ನು ತರುತ್ತಿದ್ದಾಗ ಆವರ್ತನ ರೀತಿಯಿಂದ ಪುಸ್ತಕಗಳನ್ನು ಪ್ರಕಟಿಸಬೇಕೆಂದು ಚಿಂತಿಸಿ ಸದಸ್ಯತ್ವಕ್ಕಾಗಿ 25 ರೂಗಳನ್ನು ಸಂಗ್ರಹಿಸಿದೆವು. ಅದು ಸಾರ್ವಜನಿಕ ಹಣವಾದ್ದರಿಂದ ಅದಕ್ಕೊಂದು ವಿಶ್ವಸ್ತಸಮಿತಿಯನ್ನು (Trust) ರೂಪಿಸಿ ನೋಂದಾಯಿಸಿದೆವು. ಕ್ರಮವಾಗಿ ಲೆಕ್ಕಪತ್ರ ಪರಿಶೋಧನೆ ಮಾಡಿಸಿದೆವು. 80G ನಿಯಮದ ಅನ್ವಯ ದಾನಿಗಳಿಗೆ ಆದಾಯ ತೆರಿಗೆ ವಿನಾಯಿತಿ ಸಿಕ್ಕಿತು. ಗಣ್ಯರಾದ ವಿದ್ವಾಂಸರು ಸಮಿತಿಯ ಸದಸ್ಯರಾದರು.

ಮಹಾಸಂಪುಟಗಳ ಯೋಜನೆಯನ್ನು ಪ್ರಾರಂಭಿಸಿದಾಗ ಸದಸ್ಯತ್ವ ಶುಲ್ಕವನ್ನು ಹೆಚ್ಚಿಸಿದೆವು. ಸಂಶೋಧನೆ ಮಾಡಿ ಸಂಪುಟಗಳ ಹಸ್ತಪ್ರತಿಯನ್ನು ಸಿದ್ಧಪಡಿಸುವುದು ಎಷ್ಟು ಪ್ರಯಾಸದ ಕೆಲಸವಾಗಿತ್ತೋ ಅಷ್ಟೇ ಶಕ್ತಿ ಮತ್ತು ಸಮಯವು ನಿಧಿಸಂಗ್ರಹದ ಕೆಲಸಕ್ಕೂ ವ್ಯಯವಾಯಿತು. ವಿಭಿನ್ನ ರೀತಿಯ ಸಮೃದ್ಧವಾದ ಲೋಕಾನುಭವವನ್ನು ಪಡೆಯುತ್ತಾ, ಸಂಕಲ್ಪಿಸಿದಂತೆ ಹತ್ತು ಸಂಪುಟಗಳನ್ನೂ ಪ್ರಕಟಿಸಿದೆವು.

ಈ ಕೆಲಸವು ಯಶಸ್ವಿಯಾಗಿ ಮುಗಿದದ್ದು ಉದಾರಿಗಳಾದ ದಾನಿಗಳಿಂದ, ಹಲವು ರೀತಿಯಲ್ಲಿ ಹಲವು ರೀತಿಯ ನೆರವು ನೀಡಿದ ಮಿತ್ರರಿಂದ, ವಿದ್ವಾಂಸರ ಸಹಯೋಗದಿಂದ. ಅಕ್ಷರಶಃ ನೂರಾರು ಜನರು ಪೂರ್ಣಮನಸ್ಸಿನಿಂದ ತೊಡಗಿಕೊಂಡು ಆಶೀರ್ವದಿಸಿದ್ದರಿಂದ ಮಾತ್ರವೇ ಹತ್ತು ಸಂಪುಟಗಳ ಈ ಯೋಜನೆಯು ಪೂರ್ಣಗೊಂಡಂತಾಗಿದೆ.

16. ನಿಮ್ಮ ಈ ಯೋಜನೆಯಲ್ಲಿ ಡಾ. ಕೆ. ಅನಂತರಾಮು, ಪ್ರೊ. ಜಿ. ಅಶ್ವತ್ಥನಾರಾಯಣ, ಶ್ರೀ ಎನ್.ಎಸ್. ಶಾರದಾ ಪ್ರಸಾದ್, ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಮೊದಲಾದವರು ನಿಮ್ಮ ಜತೆ ನಿರಂತರವಾಗಿ ಇರುವಂತಿದೆ?

ಧನಬಲವು ಇಂಥ ಯೋಜನೆಗಳಿಗೆ ಅತ್ಯಗತ್ಯ; ಅದು ದೇಹವಿದ್ದಂತೆ. ವಿದ್ವಾಂಸರ ಆಶೀರ್ವಾದವಿಲ್ಲದಿದ್ದರೆ ಗ್ರಂಥವೇ ಸಿದ್ಧವಾಗುವುದಿಲ್ಲ; ಅದು ಜೀವವಿದ್ದಂತೆ.

ಪುನರ್ಜನ್ಮ, ಋಣಾನುಬಂಧ, ಪೂರ್ವನಿಶ್ಚಿತ ಜೀವನ ಇಂಥ ಸಿದ್ಧಾಂತಗಳನ್ನು ನಂಬುವುದು ಅವುಗಳ ವಿಶಿಷ್ಟಸ್ವರೂಪದಿಂದಾಗಿಯೇ ಕಷ್ಟ. ಆದರೆ ಈ ಯೋಜನೆಗೆ ನೆರವಾದವರು ಮತ್ತು ಆ ನೆರವಿನ ಸ್ವರೂಪ, ರೀತಿ, ಪ್ರಮಾಣ ಇವುಗಳನ್ನು ನೋಡಿದಾಗ 'ನನ್ನ ಮಟ್ಟಿಗೆ ಆ ಸಿದ್ಧಾಂತಗಳು ಪೂರ್ಣಸತ್ಯ' ಎಂದು ಖಚಿತವಾಗಿ ಎನಿಸುತ್ತದೆ.

ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಗಳಂಥ ಪರಮಪಂಡಿತರ ಮನೆಗಾಗಲಿ, ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಗೆ ಭೂಷಣಪ್ರಾಯರಾದ ವಿದ್ವಾನ್ ಫಾಟಕ್, ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ, ವಿದ್ವಾನ್ ಡಾ. ಎಚ್.ವಿ. ನಾಗರಾಜರಾವ್ ಅವರಂಥವರ ಬಳಿಗಾಗಲಿ ಸುಳಿಯುವ ಅವಕಾಶ ಸಿಗುವುದು ಋಣಾನುಬಂಧದಿಂದ ಮಾತ್ರ. ಅವರೆಲ್ಲರೂ ನನಗಾಗಿ ಸಮಯವನ್ನು ವಿನಿಯೋಗಿಸಿದ್ದಾರೆ. ಈ ಸಂಪುಟಗಳಿಗೆ ಘನತೆಯನ್ನು ತರಲು ತಮ್ಮವೇ ಆದ ಬೃಹತ್ ಯೋಜನೆಗಳ ನಡುವೆ ಶ್ರಮಿಸಿದ್ದಾರೆ. ಕಾಲೇಜು ಶಿಕ್ಷಣ ಇಲಾಖೆಗೆ ಸೇರಿದ ತತ್‌ಕ್ಷಣ ಪ್ರೊ. ಜಿ. ಅಶ್ವತ್ಥನಾರಾಯಣ ಅವರಂಥ 'ಅಣ್ಣ'ನ ಸಹವಾಸ ದೊರೆಯದಿದ್ದರೆ ನಾನು ನಡೆದ ದಿಕ್ಕಿನ ಕಥೆ ಏನಾಗುತ್ತಿತ್ತೋ? ಹೆಜ್ಜೆ ಹೆಜ್ಜೆಗೆ ದಾರಿ ತೋರಿ ಮುಸುಕಿದ ಕತ್ತಲಲ್ಲಿ ಕೈ ಹಿಡಿದು ನಡೆಸಿದ ಕರುಣಾಳುಬೆಳಕು ಅವರಾಗಿದ್ದಾರೆ. ಸಂಪುಟಗಳ ಕರಡು ಪ್ರತಿಗಳಿಗೆ ಶ್ರೀ ಎನ್.ಎಸ್. ಶಾರದಾ ಪ್ರಸಾದ್ ಅವರ ಅಮೃತಸ್ಪರ್ಶವಾದ ಹೊರತು, ಸಂಪುಟದ ಸತ್ತ್ವದ ಬಗೆಗೆ ಅವರು ಧೈರ್ಯ ತುಂಬಿ ಹಸಿರು ನಿಶಾನೆ ತೋರಿದ ಹೊರತು ಯಾವ ಸಂಪುಟವೂ ಹೊರಗೆ ಬಂದಿಲ್ಲ. ಅವರ ಸಕಾರಾತ್ಮಕ ಲಹರಿಯೇ ಒಂದು ಶಕ್ತಿ.

ಸಣ್ಣ ಲೇಖನದಿಂದ ತೊಡಗಿ ಬೃಹತ್ ಸಂಪುಟದವರೆಗೆ ಯಾವುದೇ ಆಗಲಿ ಅದನ್ನು ಪೂರ್ಣಮನಸ್ಸಿನಿಂದ ಸಮಾಧಾನವಾಗಿ ಅವಲೋಕಿಸಿ ಪರಿಣತ ಮಾರ್ಗದರ್ಶನ ಮಾಡಿ ವಿಸ್ತಾರವಾದ ವಿಶ್ಲೇಷಣೆಗಳನ್ನು ಬರೆದುಕೊಟ್ಟು ನಿರಂತರವಾಗಿ ಆಶೀರ್ವದಿಸುತ್ತಿರುವ ಡಾ. ಕೆ. ಅನಂತರಾಮು ಅವರು ಸಂಕೇತಿ ಸಮುದಾಯವನ್ನು ನಿಕಟವಾಗಿ ದೀರ್ಘಕಾಲ ಕಂಡವರು, ಅದರಲ್ಲಿ ಒಡನಾಡಿದವರು. ಅದೊಂದು ಅಪೂರ್ವ ಸಂಯೋಜನೆ. ಈ ಸಂಪುಟಸರಣಿಗೊಂದು ಬಲವಾದ ಅಚ್ಚುಕಟ್ಟು ಬಂದುದು ಅವರಿಂದ.

ಹತಾಶಸ್ಥಿತಿಗಳಲ್ಲಿ ಗೀತೋಪದೇಶ ಮಾಡಿ ಯೋಜನೆಯನ್ನು ಮುಂದುವರಿಸಲು ಪ್ರೇರಿಸಿದ್ದು ಪೂಜ್ಯರಾದ ಡಾ. ಮತ್ತೂರು ಕೃಷ್ಣಮೂರ್ತಿ ಮೊದಲಾದ ಈ ಎಲ್ಲ ಪೂಜ್ಯರೇ. ಸಂಪುಟಗಳಿಗೆ ಮುನ್ನುಡಿ ಬರೆದುಕೊಟ್ಟ ವಿದ್ವಾಂಸರು, ಸಂಪುಟಗಳನ್ನು ಸಂಪಾದಿಸಿಕೊಟ್ಟು ಸಿದ್ಧಪಡಿಸಿಕೊಟ್ಟು ಉಪಕರಿಸಿದ ಶ್ರದ್ಧಾವಂತರು, ಈ ಸಂಪುಟಗಳನ್ನು ಕುರಿತು ವಿದ್ವತ್ಪೂರ್ಣ ವಿಮರ್ಶೆಗಳನ್ನು ಬರೆದುಕೊಟ್ಟ ಸಹೃದಯರು, ಸಂಪುಟಗಳಿಗಾಗಿಯೇ ಲೇಖನ ಬರೆದುಕೊಟ್ಟ ನೂರಾರು

ಲೇಖಕರು, ಮಾಹಿತಿ ಒದಗಿಸಿದ ಅಕ್ಷರಶಃ ಸಹಸ್ರಾರು ವಕ್ತೃಗಳು, ತಮ್ಮ ಪರಿಣತ ಸಲಹೆಗಳನ್ನು ಆಗಾಗ ನೀಡಿದ ಪ್ರೊ. ಎ.ವಿ. ನರಸಿಂಹಮೂರ್ತಿ, ವಿದ್ವಾನ್ ಡಾ. ನಾಗಸಂಪಿಗೆ, ಡಾ. ಎಂ.ಎಲ್. ಲಲಿತಮ್ಮ ಮೊದಲಾದ ಪರಿಣತರು ಇವರು ಯಾರನ್ನೂ ಮರೆಯುವಂತಿಲ್ಲ.

ಸಮುದಾಯ ಅಧ್ಯಯನ ಕೇಂದ್ರದ ಅಧ್ಯಕ್ಷರೂ ಷಟ್ಪದೀಕಾವ್ಯಕರ್ತೃವೂ ಆದ ರುದ್ರಪಟ್ಣ ವಿ. ಶ್ರೀನಿವಾಸಯ್ಯನವರು ಮೊದಲ ಕಟ್ಟಿನ 25 ಪುಸ್ತಕಗಳು ಹಾಗೂ ಎರಡನೆಯ ಕಟ್ಟಿನ ಹತ್ತು ಮಹಾಸಂಪುಟಗಳು ಸಿದ್ಧವಾಗುವವರೆಗೂ ಇದ್ದು ಅಷ್ಟನ್ನೂ ಒಂದು ಅಕ್ಷರವೂ ಬಿಡದಂತೆ ಓದಿ ಕೆಲದಿನಗಳಲ್ಲಿ ತಮ್ಮ ನೂರೊಂದನೆಯ ವಯಸ್ಸಿನಲ್ಲಿ ದೈವಾಧೀನರಾದರು. ಅದೂ ಒಂದು ವಿಸ್ಮಯ.

ಸಂಸ್ಥೆಯ ಎಲ್ಲ ಸದಸ್ಯರ ಸತತ ಸಹಕಾರದ ಜತೆಗೆ ನನ್ನ ಪತ್ನಿ ಡಾ. ಎಂ.ಎಸ್. ವಿಜಯಾ ಹರನ್ ಕೂಡ ಬೌದ್ಧಿಕ ಸಹಕಾರವನ್ನೂ ನೀಡಿದ್ದಾರೆ. ಸಂಕೇತಿ ಅಧ್ಯಯನಕ್ಕೆ ನಾನು ತೊಡಗಿದ್ದು ಅಧ್ಯಾಪಕನಾದ ತರುಣದಲ್ಲಿ 1983ರಲ್ಲಿ. ಹತ್ತು ಮಹಾಸಂಪುಟಗಳ ಕೆಲಸ ಮುಗಿದದ್ದು 2010ರಲ್ಲಿ – ನನ್ನ ಸೇವಾ ನಿವೃತ್ತಿಯಾದ ಮೇಲೆ. ಇಷ್ಟು ದೀರ್ಘಕಾಲ ನಿರಂತರವಾಗಿ ನನ್ನ ಸಂಬಳದ ಪೂರ್ತಹಣವು ಸಂಕೇತಿ ಅಧ್ಯಯನಕ್ಕೆ ವಿನಿಯೋಗವಾಗಲು ಅವಕಾಶ ಮಾಡಿಕೊಟ್ಟವರು ನನ್ನ ಪತ್ನಿ. ಇದೊಂದು ಸುಯೋಗ.

17. ಈ ಹತ್ತೂ ಸಂಪುಟಗಳ ರೂಪರೇಖೆಯನ್ನು ಮೊದಲೇ ನಿಗದಿಪಡಿಸಿಕೊಂಡು ಪ್ರಾರಂಭಮಾಡಲಾಯಿತೆ?

ಮೊದಲು 20 ಸಂಪುಟಗಳ ಕಲ್ಪನೆ ಮಾಡಿಕೊಂಡು ಪ್ರಾರಂಭಿಸಲಾಯಿತು. ಮೊದಲೆರಡು ಸಂಪುಟಗಳೂ ನಾಲ್ಕನೆಯ ಸಂಪುಟವೂ ಎಂಟು, ಒಂಬತ್ತನೇ ಸಂಪುಟಗಳೂ ನಾವೆಣಿಸಿದಂತೆಯೇ ಬಂದವು. ಉಳಿದಂತೆ ಯಾವ ಸಂಪುಟದ ಸಿದ್ಧತೆಯು ಬೇಗ ಮತ್ತು ಸಮಸ್ಯೆಗಳಿಲ್ಲದೆ ಮುಗಿಯಿತೋ ಅಂಥ ಸಂಪುಟಗಳು ಪ್ರಕಟವಾದವು. ಕ್ಷೇತ್ರಕಾರ್ಯವನ್ನೇ ಆಧರಿಸಿ ಮಾಡುವ ಸಂಶೋಧನೆಗಳಿಗೆ ಹೆಚ್ಚಿನ ಹಣ ಮತ್ತು ಸಮಯ ಬೇಕಾಗುತ್ತದೆ. ಆ ಮಿತಿಯು ನಮಗೂ ಇತ್ತು. ಆದರೂ ಈಗ ಪ್ರಕಟವಾಗಿರುವ ಸಂಪುಟಗಳ ಗುಣಾತ್ಮಕತೆಯಲ್ಲಿ ಎಲ್ಲಿಯೂ ರಾಜಿ ಮಾಡಿಕೊಂಡಿಲ್ಲ. ಯಾವ ಕ್ಷೇತ್ರಗಳ ಅಧ್ಯಯನವು ತುರ್ತಿನದೋ ಅವನ್ನು ಆದ್ಯತೆಯ ಮೇಲೆ ಕೈಗೆತ್ತಿಕೊಂಡೆವು. ಉದಾಹರಣೆಗೆ ಕೃಷಿ. ನಗರೀಕರಣ ಮತ್ತು ಆಧುನಿಕತೆಯ ಮೇಲುಗೈ ಆದಂತೆ ಸಾಂಪ್ರದಾಯಿಕ ಕೃಷಿವಿಧಾನಗಳು ಬದಲಾಗುತ್ತಿವೆ. ಕೃಷಿಯೇ ಬಿಟ್ಟು ಹೋಗುತ್ತಿದೆ. ಹಳ್ಳಿಗಳು ಖಾಲಿಯಾಗುತ್ತಿವೆ. ಭಾಷೆ, ಸಂಗೀತ, ವೈದಿಕತೆ ಈ ಕ್ಷೇತ್ರಗಳಲ್ಲಿ ಇನ್ನೂ ಬಹಳಷ್ಟು ಕೆಲಸ ಆಗಬೇಕಾಗಿದೆ. ಅವುಗಳಲ್ಲಿಯೂ ಭಾಷೆಯ ಬಗೆಗಿನ ಹೆಚ್ಚಿನ ಸಂಶೋಧನೆಯು ಹೆಚ್ಚು ತುರ್ತಾಗಿ ಆಗಬೇಕಾಗಿದೆ. ಮುಂಬರುವ ಸಂಪುಟಗಳಲ್ಲಿ ಅದಕ್ಕೆ ಆದ್ಯತೆ ನೀಡುವ ಉದ್ದೇಶವಿದೆ.

18. ಹತ್ತನೆಯ ಸಂಪುಟವನ್ನು ಇಂಗ್ಲಿಷ್ ಭಾಷೆಯಲ್ಲಿ ತಂದಿದ್ದೀರಿ. ಅಲ್ಲದೆ ಅದು ಆರನೆಯ ಸಂಪುಟದ ಪುನರಾವರ್ತನೆಯಾಗಿರುತ್ತದೆ.

ಸಂಕೇತಿ ಅಧ್ಯಯನಮಾಲೆಯ ಎಲ್ಲ ಸಂಪುಟಗಳನ್ನೂ ಇಂಗ್ಲಿಷ್ ಭಾಷೆಯಲ್ಲಿ ತರಬೇಕೆಂಬ ಉದ್ದೇಶವಿದೆ. ಆದರೆ ಮೊದಲು ಕನ್ನಡ ಭಾಷೆಯಲ್ಲಿ ಈ ಸರಣಿಯು ಮುಗಿಯುವವರೆಗೆ ಅಂಥ ಉಪಕ್ರಮಕ್ಕೆ ಸಮುದಾಯ ಅಧ್ಯಯನ ಕೇಂದ್ರದ ಒಲವಿಲ್ಲ. ಆರನೆಯ ಸಂಪುಟದಲ್ಲಿ ಸೇರಿರುವ ಆತ್ಮಕಥೆಗಳ ಪೈಕಿ ಶೇ. 70 ಭಾಗವು ನಮಗೆ ಮೂಲ ಇಂಗ್ಲಿಷ್‌ನಲ್ಲಿ ದೊರಕಿತ್ತು. ಆ ಪೈಕಿ ದೊಡ್ಡ ಭಾಗವನ್ನು ಕನ್ನಡದಿಂದ ಇಂಗ್ಲಿಷ್‌ಗೆ ತಂದಿದ್ದವರು ಶ್ರೀ ಸುಂದರರಾಜ್ ಅವರು. ಉಳಿದ ಶೇ. 30 ಭಾಗವನ್ನೂ ಇಂಗ್ಲಿಷಿಗೆ ತರಲು ಅವರು ದಯಮಾಡಿ ಒಪ್ಪಿ ಬೇಗ

ನಿರ್ವಹಿಸಿಕೊಟ್ಟರು. ಅದನ್ನು ಪ್ರಕಟಿಸಿದೆವು. ಒಳ್ಳೆಯ ಕೆಲಸಕ್ಕೆ ಒದಗಿಬಂದ ಸನ್ನಿವೇಶವನ್ನು ನಿರಾಕರಿಸುವಂತಿರಲಿಲ್ಲ.

19. ಈ ಯೋಜನೆಯಲ್ಲಿ ತೊಡಗಿಕೊಂಡುದರಿಂದಾಗಿ ನಿಮ್ಮ ಅಧ್ಯಾಪನಕಾರ್ಯವು ಕುಂಠಿತವಾಗಲಿಲ್ಲವೆ?

ಸಂಶೋಧನೆಯೂ ಲೇಖನಕಾರ್ಯವೂ ಅಧ್ಯಾಪಕನ ಲಕ್ಷಣಗಳು. ಅಧ್ಯಾಪನವು ಯಶಸ್ವಿಯಾಗಲು ಅವು ಪೂರಕಗಳೇ ಹೊರತು ತೊಡಕುಗಳಲ್ಲ. ಸಂಶೋಧನೆ, ಲೇಖನಕಾರ್ಯ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿರುವವರ ಅಧ್ಯಾಪನದಲ್ಲಿ ಮಾಹಿತಿ ಮತ್ತು ಅದಕ್ಕಿಂತ ಹೆಚ್ಚಾಗಿ ಹೊಳಹುಗಳು ತುಂಬಿರುತ್ತವೆ. ಯಾವ ಕ್ಷೇತ್ರದ ಪರಿಣತಿಯಾದರೂ ಸರಿ, ಅದು ಅಧ್ಯಾಪಕನಿಗೊಂದು ವರ. ಇಷ್ಟರ ನಡುವೆ ಈ ಹತ್ತು ಮಹಾಸಂಪುಟಗಳ ಕೆಲಸದಲ್ಲಿ ವಿಳಂಬವಾದುದಕ್ಕೆ ಅಧ್ಯಾಪನದ ಮೂಲಕರ್ತವ್ಯಗಳ ನಿರ್ವಹಣೆಯಲ್ಲೂ ಇತರ ಜವಾಬ್ದಾರಿಗಳನ್ನು ನಿರ್ವಹಿಸುವುದರಲ್ಲೂ ಇದ್ದ ತಲ್ಲೀನತೆಯೂ ಕಾರಣ. ಇಂಥ ಶೈಕ್ಷಣಿಕ ಯೋಜನೆಗಳನ್ನು ಸಾಮಾನ್ಯವಾಗಿ ಬಹುತೇಕ ಅಧ್ಯಾಪಕರು ಹಮ್ಮಿಕೊಂಡಿರುತ್ತಾರೆ.

20. ಈ ಯೋಜನೆಯ ಹತ್ತು ಮಹಾಸಂಪುಟಗಳ ಕೆಲಸವು ಮುಗಿದಿರುವ ಈ ಹೊತ್ತು ನಿಮ್ಮ ಪಿಎಚ್.ಡಿ. ನಿಬಂಧದಲ್ಲಿ ತಿದ್ದುಪಡಿಗಳನ್ನು ಮಾಡಬೇಕಾದ ಅಗತ್ಯ ಕಾಣುತ್ತಿದೆಯೆ?

ಇಲ್ಲ. ನನ್ನ ಕ್ಷೇತ್ರಕಾರ್ಯದ ಸ್ವರೂಪವು ಸಂಕೀರ್ಣವೂ ತೀವ್ರವೂ ಆದುದಾಗಿತ್ತು. ಏಳು ವಿಭಿನ್ನ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಹೊಂದಿದ ಸಮುದಾಯವಿದು. ಈಗಿನ ಜನಸಂಖ್ಯೆಯು 30 ಸಾವಿರವಾದರೂ ಅವರು ಚದುರಿರುವುದು ಮೂರು ರಾಜ್ಯಗಳ ಹನ್ನೆರಡು ಜಿಲ್ಲೆಗಳಲ್ಲಿ. ನನ್ನ ಅಧ್ಯಯನದ ಒಳವಿವರಗಳಿಗೆ ಸಂಬಂಧಿಸಿದಂತೆ ಪ್ರತಿ ಕ್ಷೇತ್ರಕ್ಕೂ ದೊರೆತ ಪರಿಣತ ವಕ್ತೃಗಳ ಸಂಖ್ಯೆ ದೊಡ್ಡದು. ಸಾಮಾನ್ಯರಂತೆ ಕಾಣುತ್ತಿದ್ದ ರೈತರೋ ಮತ್ತೊಬ್ಬರೋ ಕೊಡುತ್ತಿದ್ದ ಜೀವನ ವಿವರದ ಹೊಳಹುಗಳೂ ಅತಿಶಯವಾಗಿದ್ದವು. ಪ್ರತಿಯೊಬ್ಬರೂ ತಮ್ಮ ವಿಷಯಗಳನ್ನು ಬಲವಾಗಿ ಪ್ರತಿಪಾದಿಸುತ್ತಿದ್ದವರೇ. ಹೀಗಾಗಿ ನನಗೆ ದೊರೆತ ಮಾಹಿತಿಯಲ್ಲಿ ಅನುಮಾನ, ವಿರೋಧಾಭಾಸ, ಅನಿರ್ದಿಷ್ಟತೆ ಮಾತ್ರವಲ್ಲ ವಾಸ್ತವಭಿನ್ನವಾದ ಸೂಕ್ಷ್ಮಜಿಜ್ಞಾಸೆ ಮೊದಲಾದವು ಕಂಡಾಗಲೆಲ್ಲಾ ಮತ್ತೆ ಮತ್ತೆ ಕ್ಷೇತ್ರಕಾರ್ಯಮಾಡಿ ಪತ್ರ ಸಂಪರ್ಕವನ್ನೂ ಮಾಡಿ ಪುನರ್ ಸಂದರ್ಶನಗಳನ್ನು ನಡೆಸಿ ಹೆಚ್ಚಿನ ವಕ್ತೃಗಳನ್ನು ಕಂಡು ತೀರ್ಮಾನಗಳಿಗೆ ಬಂದಿದ್ದೇನೆ. ಇದಕ್ಕಾಗಿ ಅನ್ಯ ಸಮುದಾಯಗಳನ್ನು ಅಧ್ಯಯನ ಮಾಡುವ ಸಂದರ್ಭಗಳೂ ಬಂದಿವೆ. ನಿಬಂಧವನ್ನು ನಿರ್ದಿಷ್ಟ ಅವಧಿಯಲ್ಲಿ ಮುಗಿಸಬೇಕೆಂಬುದಕ್ಕಾಗಿ ಮಾಹಿತಿಯ ಸಮಗ್ರ ಸಂಗ್ರಹ ಮತ್ತು ಖಚಿತತೆಯ ವಿಷಯದಲ್ಲಿ ರಾಜಿಮಾಡಿಕೊಂಡಿಲ್ಲ. ವಾಸ್ತವವಾಗಿ ನನ್ನ ನಿಬಂಧದಲ್ಲಿ ಪ್ರತಿಪಾದಿಸಲಾದ ವಿಷಯಗಳು ವಿಸ್ತೃತ ಅಧ್ಯಯನದ ಹಿನ್ನೆಲೆಯಲ್ಲಿ ಆಶ್ಚರ್ಯಕರ ರೀತಿಯಲ್ಲಿ ಹೆಚ್ಚು ಸಮರ್ಥನೆಗೊಂಡಿವೆ ಮತ್ತು ಗಟ್ಟಿಯಾಗಿವೆ.

ನಿಬಂಧದಲ್ಲಿ ಲೋಪವು ಕಾಣದಿದ್ದರೂ ನೂರಾರು ಹೊಸ ಅನುಮಾನಗಳು ತಲೆ ಎತ್ತಿವೆ. ನೂರಾರು ಹೊಸ ಸಾಧ್ಯತೆಗಳು ತೆರೆದುಕೊಳ್ಳುತ್ತಿವೆ. ಹೆಚ್ಚಿನ ಸಂಶೋಧನೆಗೆ ಬಾಗಿಲು ತೆರೆದ ನೂರಾರು ಮಗ್ಗುಲುಗಳೂ ಕಾಣುತ್ತಿವೆ. ಜತೆಗೇ ನಮ್ಮ ಮುಂದಿರುವ ಕಾಲಮಿತಿ, ದೈಹಿಕ ಶಕ್ತಿಯ ಮಿತಿ, ಆರ್ಥಿಕ ಮಿತಿಗಳು ನಿರಾಸೆಯನ್ನುಂಟುಮಾಡುತ್ತಿವೆ.

21. ಸಂಕೇತಿ ಸಮುದಾಯದ ವಿಷಯದಲ್ಲಿ ನಿಮ್ಮನ್ನು ಆಕರ್ಷಿಸಿದ ಸಾಂಪ್ರದಾಯಿಕ ಚಿತ್ರ ಎಂಥದು?

ಮಣ್ಣುಮುಟ್ಟಿ ಕಠಿಣ ದುಡಿಮೆ, ಅದರಿಂದ ಉಂಟಾದ ಸದೃಢವೂ ಆರೋಗ್ಯಕರವೂ ಆದ ಶರೀರ, ಅದು ಹೊಮ್ಮಿಸಿದ ಜೀವನೋತ್ಸಾಹ, ವೇದೋಪನಿಷತ್ತುಗಳು ಶಾಸ್ತ್ರಗಳು ಮೊದಲಾದ ಪಾರಂಪರಿಕ ವಿದ್ಯೆಗಳಲ್ಲಿ ಪರಿಣತಿ, ಶಾರೀರಿಕ ದೃಢತೆಯಿಂದಾಗಿ ವೇದಘೋಷದಲ್ಲುಂಟಾದ ಸ್ಪಷ್ಟ, ದೃಢ, ಸಕ್ರಮ ನಾದವಿಶೇಷ, ತಾವು ನೆಲೆಸಿದ ಮೂರೂ

ರಾಜ್ಯಗಳಲ್ಲೂ ಪೌರೋಹಿತ್ಯದ ಪ್ರಾವೀಣ್ಯದ ಹೆಗ್ಗಳಿಕೆ. ಕೃಷಿಕರಾದುದರಿಂದ ಉಂಟಾದ ಸರಳಜೀವನ, ನೇರನಡೆ, ಮನೋವೈಶಾಲ್ಯ, ಹೃದಯವಂತಿಕೆ. ತಾವೇ ಬೆಳೆಸಿದ ತೋಟಗಳಲ್ಲಿ ಏಕಾಂತದಲ್ಲಿ ಮಾಡಿದ ವೇದಾಧ್ಯಯನ, ಶಾಸ್ತ್ರಾಧ್ಯಯನ, ಸೃಷ್ಟಿಸಿದ ಆಶ್ರಮಸದೃಶ ಪರಿಸರ, ಮನೋರಂಜನೆಗಾಗಿ ರೂಢಿಸಿಕೊಂಡ ಸಂಗೀತ, ಗಮಕದ ಮೂಲಕ ಮಾಡಿದ ಸಾಹಿತ್ಯ ಸಲ್ಲಾಪ ಮತ್ತು ಪ್ರಚಾರ. ಪಗಡೆ, ಛಸ್, ಇಸ್ಪಿಟ್ ಆಟಗಳನ್ನೂ, ನಶ್ಯವನ್ನೂ ದುಡಿಸಿಕೊಂಡ ರೀತಿ, ನಿಯತವಾದ ನಿತ್ಯನೈಮಿತ್ತಿಕ ಕರ್ಮಾನುಷ್ಠಾನದ ಮೂಲಕ ತಮ್ಮ ಲೌಕಿಕ ಜೀವನಕ್ಕೆ ಕೊಟ್ಟ ಧಾರ್ಮಿಕ ಚೌಕಟ್ಟು, ಚಿಂತನೆಯಲ್ಲಿ ರೂಢಿಸಿಕೊಂಡ ವೇದಾಂತ ಮತ್ತು ಅದರಿಂದ ಸಾಧಿಸಿದ ನಿರ್ಮೋಹ. ಬಂಧುಬಾಂಧವರಲ್ಲಿ ನಿಕಟ ಸಂಪರ್ಕ, ಒಡನಾಟ, ಸಹಕಾರ; ಸಾಮಾಜಿಕ ಸಮಸ್ಯೆಗಳನ್ನು ದೇವರ ಸನ್ನಿಧಿಯಲ್ಲಿ ಪರಿಹರಿಸಿಕೊಂಡ ಬಗೆ, ಒಪ್ಪಿತ ಮಾರ್ಗದಲ್ಲಿ ನಡೆದು ಸಾಧಿಸಿದ ಕೌಟುಂಬಿಕ ಹದ, ಇತರ ಸಮುದಾಯಗಳ ಜತೆಗಿನ ಸೌಹಾರ್ದ. ಒಟ್ಟಾಗಿ ಕಂಡುಕೊಂಡ ಅಲ್ಪತೃಪ್ತಿ, ಶಾಂತಿ, ಸಮಾಧಾನ, ಸಮರಸ.

22. ಈ ಚಿತ್ರಕ್ಕೆ ಆಧುನಿಕತೆ ಸಹ್ಯವೆ?

ಆಧುನಿಕತೆ ಎಂದರೆ ವಿಜ್ಞಾನ, ತಂತ್ರಜ್ಞಾನ ಮತ್ತು ಮಾನವಿಕಗಳಲ್ಲಿ ಉಂಟಾದ ಕ್ರಾಂತಿ; ಪ್ರಜಾಪ್ರಭುತ್ವ ವ್ಯವಸ್ಥೆ. ಯಾವ ವ್ಯವಸ್ಥೆಯಲ್ಲಿಯೂ ಅಪಾರ್ಥ, ಅಪಬಳಕೆ, ಅತಿರೇಕಗಳ ವಿಕೃತಿ ಸಲ್ಲದು. ಸಮಾನತೆ, ಸರ್ವೋದಯ ಮತ್ತು ನೆಮ್ಮದಿಗಾಗಿ ಇವು ಬಳಕೆಯಾದರೆ ಅದೊಂದು ವರ. ಅತಿ ಒತ್ತಡ, ಅನಾರೋಗ್ಯಕರ ಪೈಪೋಟಿ, ಅತಿ ನಿರೀಕ್ಷೆ ಇಂಥವು ವರ್ಜ್ಯ. ಹಳೆಯದರ ದೃಢವಾದ ಬೇರು, ಹೊಸತರ ನವಿರಾದ ಚಿಗುರು ಸೇರಿ ಹೊಮ್ಮಿಸುವ ನಕ್ಕು ತಂಪೆರೆಯುವ ಸುವಾಸನೆಯ ಸುಂದರ ಪುಷ್ಪವು ಸ್ವಾಗತಾರ್ಹವಾದದ್ದು. ಸಂಕೇತಿ ಸಮುದಾಯದ ಬಹುದೊಡ್ಡ ಭಾಗವು ಈಗ ಅತ್ಯಾಧುನಿಕತೆಯನ್ನು ಅಪ್ಪಿದೆ, ಅನೇಕರು ಅದರ ಮೊನೆಗಳ ಮುಂಚೂಣಿಯಲ್ಲಿದ್ದಾರೆ.

23. ಸದ್ಯದ ಭಾರತದ ಸಾಮಾಜಿಕ ಸನ್ನಿವೇಶದಲ್ಲಿ ಅಂಥ ಹೊಸ ಹದಕ್ಕೆ ಇರಬೇಕಾದ ಪಾತಳಿ ಎಂಥದು ಎನ್ನುತ್ತೀರಿ?

1. ಛಿದ್ರಾನ್ವೇಷಣೆಯಲ್ಲ, ಆತ್ಮನಿರೀಕ್ಷಣೆ (Introspection)
2. ಪರನಿಂದೆಯಲ್ಲ, ಪರಹಿತ (Concern for others)
3. ಎಲ್ಲವೂ ಮಾನವನ ಸಮಸ್ಯೆ (Human problems) ಎಂಬ ನೆಲೆಯಲ್ಲಿ ಪರಿಹಾರೋಪಾಯಕ್ಕೆ ವಸ್ತುನಿಷ್ಠ ನಡೆ (Objectivity).
4. ಪೂರ್ವಗ್ರಹವಿಲ್ಲದ ತೆರೆದ ಮನ (Open-mindedness)
5. ಶುದ್ಧ ವೈಚಾರಿಕತೆ (Absolute thinking)
6. ವೈಜ್ಞಾನಿಕ ಮನೋಭಾವ (Scientific outlook)
7. ಮಾನವೀಯತೆ (Humanity)

ಮನಸ್ಸನ್ನು ಹೀಗೆ ಅಣಿಗೊಳಿಸಿದರೆ ಎಲ್ಲ ಸಮಸ್ಯೆಗಳೂ ತಮಗೆ ತಾವೇ ಪರಿಹಾರವಾಗುತ್ತವೆ ಅಥವಾ ಸಮಸ್ಯೆಗಳೇ ಇರುವುದಿಲ್ಲ.

ಸಂಕೇತಿ ಅಧ್ಯಯನ

ವ್ಯಕ್ತಿಗಳು ಮತ್ತು ಸಮುದಾಯಗಳು ಹಲವಾರು ಕಾರಣಗಳಿಗಾಗಿ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುತ್ತವೆ. ಹೊಸಹೊಸ ಅವಕಾಶಗಳನ್ನು ಅರಸಲು, ರಾಜಕೀಯ ಅಥವಾ ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ಮತ್ತು ಕೆಲವೊಮ್ಮೆ (ವಿರಳವಾಗಿ) ಪರ್ಯಟನಾಕಾಂಕ್ಷೆಯಿಂದ ವಲಸೆಗಳುಂಟಾಗುತ್ತವೆ. ಅಂಥ ಸಮುದಾಯಗಳು ಮತ್ತು ವ್ಯಕ್ತಿಗಳು ಸೂಕ್ತವಾದ ಸ್ಥಳ ಲಭ್ಯವಾದೊಡನೆಯೇ ಅಲ್ಲಿಯೇ ನೆಲಸಿಬಿಡುತ್ತಾರೆ; ಕಾಲಾಂತರದಲ್ಲಿ ತಮ್ಮ ಮೂಲನೆಲೆ, ಭಾಷೆ, ಸಂಸ್ಕೃತಿಯನ್ನು – ಆದರೆ ಸಂಪೂರ್ಣವಾಗಿಯೇನೂ ಅಲ್ಲ – ಮರೆತುಬಿಡುತ್ತಾರೆ. ಹಲವಾರು ಶತಮಾನಗಳ ನಂತರ, ಇಂದಿಗೂ ಅವರ ಮೂಲಭಾಷೆಯ ಮತ್ತು ಸಂಸ್ಕೃತಿಯ ಕುರುಹುಗಳು ಅವರೊಡನೆ ಉಳಿದುಕೊಂಡೇ ಬಂದೇ ಇರುತ್ತವೆ; ಅವರು ಆಶ್ಚರ್ಯ ಮತ್ತು ಉತ್ಕಂಠತೆಯ ಮಿಶ್ರಭಾವನೆಗಳೊಡನೆ ತಮ್ಮ 'ಮೂಲ'ಗಳತ್ತ ಆಗೊಮ್ಮೆ ಈಗೊಮ್ಮೆ ಸಿಂಹಾವಲೋಕನ ಮಾಡುತ್ತಾರೆ. ಹಾಗಾಗಿಯೇ ಜನಾಂಗೀಯ ಅಧ್ಯಯನ ಮತ್ತು ಸಮುದಾಯ ಅಧ್ಯಯನಗಳು ಇಂದು ಹೆಚ್ಚು ಜನಪ್ರಿಯವಾಗುತ್ತಿರಲು ಇರುವ ಪ್ರಮುಖ ಕಾರಣಗಳ ಪೈಕಿ ಇದೂ ಒಂದಾಗಿದೆ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಇಂಥ ಅಧ್ಯಯನಗಳು ಸೂಕ್ಷ್ಮಮಟ್ಟದ ಸಾಮಾಜಿಕ–ಸಾಂಸ್ಕೃತಿಕ ಇತಿಹಾಸಗಳ ಕಾರ್ಯನಿರ್ವಹಿಸುತ್ತವೆ. ಅಂಥ ಒಂದು ಗಮನಾರ್ಹ ಅದ್ಭುತ ಅಧ್ಯಯನವೇ ಡಾ. ಪ್ರಣತಾರ್ತಿಹರನ್‌ರವರ "ಸಂಕೇತಿ ಅಧ್ಯಯನ"ವಾಗಿದೆ.

'ಸಂಕೇತಿ: ಒಂದು ಅಧ್ಯಯನ' – ಇದು ಮೊದಲಿಗೆ ಹರನ್‌ರವರು 1993ರಲ್ಲಿ ಪಿಎಚ್.ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಪ್ರೌಢಪ್ರಬಂಧ. ಆನಂತರದಲ್ಲಿ ಇತರ ಸುಪ್ರಸಿದ್ಧ ವಿದ್ವಾಂಸರ ಸಹಯೋಗದಲ್ಲಿ ಸಂಕೇತಿ ಸಮುದಾಯ, ಅವರ ವಲಸೆಗಳು, ಭಾಷೆ, ಸಂಸ್ಕಾರಗಳು ಮತ್ತು ಹಬ್ಬ–ಹರಿದಿನಗಳು, ಮೌಖಿಕ ಸಾಹಿತ್ಯ, ಕೃಷಿ, ಪತ್ರಗಳು ಮೊದಲಾದ ಸಂಬಂಧಿತ ವಿಷಯಗಳ ಬಗ್ಗೆ ಒಂಬತ್ತು ಸಂಪುಟಗಳನ್ನು ಹೊರತಂದಿದ್ದಾರೆ. ಸದ್ಯ ನಾನು ಮೊದಲನೆ ಸಂಪುಟದ ಬಗ್ಗೆ ಮಾತ್ರ ಗಮನಹರಿಸುತ್ತೇನೆ.

ಸಂಕೇತಿಯು ಸ್ಮಾರ್ತಬ್ರಾಹ್ಮಣರ ಚಿಕ್ಕ ಉಪಪಂಗಡವಾಗಿದೆ. ಜನಸಂಖ್ಯೆ ಸು. 25,000. ಇವರು ಕೆಲವು ಶತಮಾನಗಳ ಹಿಂದೆ (ಸು. 11ನೇ ಶತಮಾನದಲ್ಲಿ) ದಕ್ಷಿಣ ತಮಿಳುನಾಡಿನಿಂದ ಮೈಸೂರಿಗೆ ವಲಸೆ ಬಂದರು. ಹಳೆ ಮೈಸೂರು ರಾಜ್ಯದಲ್ಲಿ (ವಿಶೇಷವಾಗಿ ಕಾವೇರಿ ಮತ್ತು ತುಂಗೆಯ ದಡಗಳಲ್ಲಿ) ಹೆಚ್ಚಾಗಿ ಇರುವರು; ಪಾರಂಪರಿಕವಾಗಿ ವೇದಾಧ್ಯಯನ, ಕೃಷಿ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರಗಳಲ್ಲಿ ಸುಪ್ರಸಿದ್ಧರಾಗಿರುವರು. ಕರ್ನಾಟಕದಲ್ಲಿ ಹವ್ಯಕರನ್ನು ಬಿಟ್ಟರೆ ಈ ಸಮುದಾಯ ಮಾತ್ರವೇ ಕೃಷಿಯಲ್ಲಿ ಪ್ರಧಾನವಾಗಿ ತೊಡಗಿಸಿಕೊಂಡಿರುವಂತೆ ಕಂಡುಬರುತ್ತದೆ. ತಮಿಳಿನ ಕೆಲವು ಅಂಶಗಳನ್ನು ಉಳಿಸಿಕೊಂಡಿರುವುದರ ಜೊತೆಗೆ ಕನ್ನಡ, ಮಲೆಯಾಳಂ ಮತ್ತು ತುಳುಗಳಿಂದ ಮುಕ್ತವಾಗಿ ಪದಗಳು ಹಾಗೂ ವ್ಯಾಕರಣ ರಚನೆಗಳನ್ನು ಎರವಲು ಪಡೆದುಕೊಂಡಿರುವ ಭಾಷೆ ಸಂಕೇತಿಗಳದಾಗಿದೆ. ಪ್ರಪ್ರಥಮವಾಗಿ ಇವರ ಬಗ್ಗೆ ಉಲ್ಲೇಖ 'ಮೈಸೂರ್ ಸೆನ್ಸಸ್ ರಿಪೋರ್ಟ್ 1871 ಮತ್ತು 1873'ರಲ್ಲಿ ಕಂಡುಬರುತ್ತದೆ. ಈ ವಿಷಯದ ಬಗ್ಗೆ ಪ್ರಪ್ರಥಮ ಪ್ರಧಾನ ಕೃತಿ 1936ರಲ್ಲಿ ಬೆಳಕು ಕಂಡ ಎಂ.ಕೇಶವಯ್ಯನವರ "ದಿ ಲೈಫ್ ಆಫ್ ನಾಚಾರಮ್ಮ". ಕೇಶವಯ್ಯನವರ ನಂತರ ಡಾ. ಸಿ.ಎಸ್. ರಾಮಚಂದ್ರ, ಎಚ್.ಎಸ್. ಅನಂತನಾರಾಯಣ ಮತ್ತು ಕಿಕ್ಕೇರಿ ನಾರಾಯಣ ಮೊದಲಾದ ವಿದ್ವಾಂಸರು ಈ ಕ್ಷೇತ್ರದಲ್ಲಿ ಗಮನಾರ್ಹ ಕಾರ್ಯಮಾಡಿದ್ದಾರೆ. ಆದರೆ ದಶಕಕ್ಕೂ ಹೆಚ್ಚು ಕಾಲ ನಡೆಸಿದ ಡಾ. ಹರನ್‌ರವರ ಕಾರ್ಯ ಅಧಿಕೃತವಾದುದೂ ಸಮಗ್ರವಾದುದೂ ಆಗಿರುವಂತೆ ತೋರುತ್ತದೆ.

ಹರನ್‌ರವರ ಪ್ರಮುಖವಾದ ನಿರ್ಣಯ (ತೀರ್ಮಾನ)ಗಳಲ್ಲಿ ಕೆಲವು:

(ಅ) ಉತ್ತರದಲ್ಲಿ ವಾಸಿಸುತ್ತಿದ್ದ ಸ್ಮಾರ್ತ ಬ್ರಾಹ್ಮಣರು ಕ್ರಿ.ಶ. 7–8ನೇ ಶತಮಾನಗಳಲ್ಲಿ ತಮಿಳುನಾಡಿಗೆ ವಲಸೆ ಬಂದರು. ಅವರು 'ಶೆಂಕೋಟ್ಟೈ' ಎಂಬ ಸ್ಥಳದಲ್ಲಿ ಇದ್ದುದರಿಂದ ಅವರನ್ನು "ಸಂಕೇತಿಗಳು" ಎಂದು ಕರೆಯಲಾಗಿದೆ.

(ಆ) ಕ್ರಿ.ಶ. 1087ರಲ್ಲಿ ತಂಡತಂಡವಾಗಿ ಅವರು ಕರ್ನಾಟಕಕ್ಕೆ ವಲಸೆ ಬರಲಾರಂಭಿಸಿದರು; ಮೊದಲು ಅವರು ನೀಲಗುಂದ (ಬಳ್ಳಾರಿ ಜಿಲ್ಲೆ)ದಲ್ಲಿ, ಆನಂತರ ಸರಿಸುಮಾರು ಕ್ರಿ.ಶ. 1120ರಲ್ಲಿ ಹಾಸನ ಜಿಲ್ಲೆಯಲ್ಲಿ ನೆಲೆಸಿದರು.

(ಇ) ವಲಸೆಗೆ 'ನೈಜ' ಕಾರಣ ನಾಚಾರಮ್ಮನ ದುರಂತ ಪ್ರಸಂಗ.

(ಈ) ಅವರ ಸುದೀರ್ಘ ಪಯಣದಲ್ಲಿ ಅವರು ಕಾವೇರಿ ನದಿ ಕಣಿವೆ ಮಾರ್ಗವನ್ನೇ ಅನುಸರಿಸಿದರು; ಅದು ಅಂದಿಗೆ ಸುಪ್ರಸಿದ್ಧವಾದ ವಾಣಿಜ್ಯ–ಸಾಂಸ್ಕೃತಿಕ ಮಾರ್ಗವಾಗಿತ್ತು.

(ಉ) ಅವರು ಯಾವುದೇ ಒಂದು ಮತ ಅಥವಾ ಗುರುಪರಂಪರೆಗೆ ನಿಷ್ಠರಾಗಿಲ್ಲ.

(ಊ) ಅವರು ವೇದಾಧ್ಯಯನ ಮತ್ತು ಅಡಕೆ ತೋಟಗಳಲ್ಲಿ ಶ್ರಮಪಟ್ಟು ದುಡಿಯುವ ಶ್ರಮದ ಕಾಯಕಗಳಲ್ಲಿ ಸಮನ್ವಯ ಸಾಧಿಸಿಕೊಂಡಿದ್ದಾರೆ.

(ಋ) ಅದರ ಸಂಪ್ರದಾಯನಿಷ್ಠ ನಂಬಿಕೆಗಳು ಮತ್ತು ಆಚರಣೆಗಳು ಇಂದು ಸವಾಲುಗಳನ್ನು ಎದುರಿಸುತ್ತಿದ್ದು, ಸಮುದಾಯವು ಒಂದು ರೀತಿಯ ಸ್ಥಿತ್ಯಂತರದಲ್ಲಿದೆ.

ಸುಮಾರು ಒಂದು ಶತಮಾನದ ಅವಧಿಯಲ್ಲಿ (1891–2003) ಸಂಕೇತಿಗಳು ಬರೆದಿರುವ ಪತ್ರಗಳಲ್ಲಿ 555 ಪತ್ರಗಳನ್ನು ಸಂಗ್ರಹಿಸಿ, ಸಂಪಾದಿಸಿ ಈ ಮಾಲೆಯ ಎರಡನೆಯ ಸಂಪುಟ (ಶತಮಾನದ ಪತ್ರಗಳು, 1891–2003)ವಾಗಿ ಡಾ. ಹರನ್‌ರವರು ಪ್ರಕಟಿಸಿದ್ದಾರೆ. ಆ ಪತ್ರಗಳು ಅಂದಿನ ಕಾಲದ ವಿದ್ಯಮಾನಗಳ ಬಗ್ಗೆ ವಿಶಿಷ್ಟವಾದ ಅಂತರ್ದೃಷ್ಟಿಯನ್ನು ನೀಡುವುವು ಮತ್ತು ತುಂಬ ಆಸಕ್ತಿಯ ವಿಷಯಗಳನ್ನು ಪ್ರಕಟಿಸಿರುವುವು; ಪ್ಲೇಗ್ ಮಾರಿಯ ಬಗ್ಗೆ ಭೀತಿ ಆತಂಕ ವ್ಯಕ್ತಪಡಿಸಿರುವುವು (1926, 1945 ಇ). ಆಧುನಿಕ ಶಿಕ್ಷಣ ಪಡೆಯುವಲ್ಲಿ ಮೊದಲ ತಲೆಮಾರಿನವರಿಗೆ ಎದುರಾದ ನಿರುದ್ಯೋಗ ಸಮಸ್ಯೆಗಳು (1931, 1932, 1934 ಇ. ಈ ಕಾಲದಲ್ಲಿ ಬಿ.ಎ. ಗಳಿಗೆ ಯಾರು ಬೆಲೆ ಕೊಡುತ್ತಾರೆ? ಎಂದು ಯುವಕನೊಬ್ಬ ತನ್ನ ತೀ.ರೂಪರಿಗೆ ಬರೆದ); ಚಿಕ್ಕ ವಯಸ್ಸಿನಲ್ಲಿಯೇ ವಿವಾಹಗಳ ಬಗ್ಗೆ ಪತ್ರಗಳು (1936); ದಂಡನೆಯಾಗಿ ಅತ್ತೆಯು ತನ್ನ ಸೊಸೆಗೆ ಎಡತೋಳಿನ ಮೇಲೆ ಬರೆಹಾಕುವುದು (1935), ರೂಪಾಯಿಯ ಆಗಿನ ಕಾಲದ ಮೌಲ್ಯ (1921), ನಗರದಲ್ಲಿ ಓದುತ್ತಿದ್ದ ತಮ್ಮ ಮಗನಿಗೆ ಖರ್ಚಿಗಾಗಿ ತಂದೆ ಒಂದು ರೂಪಾಯಿಯನ್ನು ಕಳುಹಿಸುವುದು – ಈ ರೀತಿ ವಿಷಯವೈವಿಧ್ಯಗಳು ಪತ್ರಗುಚ್ಛಗಳಿಂದ ಪ್ರಕಟಗೊಳ್ಳುತ್ತವೆ.

ಸಂಕೇತಿ ಭಾಷೆಯ ಭಾಷಾವೈಜ್ಞಾನಿಕ ವಿಶ್ಲೇಷಣೆಯು ನಾಲ್ಕನೆಯ ಸಂಪುಟದಲ್ಲಿದ್ದು ಸುಪ್ರಸಿದ್ಧ ಭಾಷಾವಿಜ್ಞಾನಿ ಡಾ. ಎಚ್.ಎಸ್. ಅನಂತನಾರಾಯಣರವರು ಈ ಸಂಪುಟವನ್ನು ಸಂಪಾದಿಸಿಕೊಟ್ಟಿರುವರು. ಸಂಪಾದಕರೂ ಸೇರಿದಂತೆ ಐವರು ಭಾಷಾ ವಿಜ್ಞಾನಿಗಳು ವಿದ್ವತ್ಪೂರ್ಣವಾದ 22 ಲೇಖನಗಳಲ್ಲಿ ಸಂಕೇತಿ ಭಾಷೆಯ ವಿವಿಧ ಅಂಶಗಳನ್ನು ವಿಶ್ಲೇಷಿಸಿರುವರು. ಸಂಕೇತಿ ಭಾಷೆಯು ತಮಿಳಿನ ಒಂದು ಉಪಭಾಷೆಯಾಗಿದೆ; ಅದಕ್ಕೆ ತನ್ನದೇ ಆದ ವ್ಯಾಕರಣವಿದೆ; ಮಲೆಯಾಳಂ ಭಾಷೆಯ ಕೆಲವು ಲಕ್ಷಣಗಳನ್ನೂ ಅದು ಸ್ವಾಂಗೀಕರಣಗೊಳಿಸಿಕೊಂಡಿದೆ – ಎಂಬ ಅಂಶಗಳನ್ನು ಈ ಎಲ್ಲ ಲೇಖನಗಳು ಸಮರ್ಥಿಸುವುದಷ್ಟೇ ಅಲ್ಲದೆ "– ಅದು ಇತರ ಯಾವುದೇ ಭಾಷೆ ಅಥವಾ ಉಪಭಾಷೆಯಷ್ಟೇ ಪರಿಪೂರ್ಣವಾಗಿದೆ ಮತ್ತು ಸಂವಹದನದ ಯಾವುದೇ ಕಾರ್ಯವನ್ನೂ ಅದು ನಿರ್ವಹಿಸಬಲ್ಲುದು" ಎಂದೂ ದೃಢಪಡಿಸಿವೆ.

ವಿದ್ವತ್ತು, ಅಪಾರ ಪರಿಶ್ರಮ ಮತ್ತು ಅಧ್ಯವಸಾಯ ಅಗತ್ಯವಾದಂಥ ವಿಶಿಷ್ಟ ಕಾರ್ಯವನ್ನು ಡಾ. ಹರನ್ ಸಾಧಿಸಿತೋರಿಸಿದ್ದಾರೆ. ಇಷ್ಟಾಗಿಯೂ ವಲಸೆಯ ನಿಜವಾದ ಕಾರಣಗಳು, ವಲಸೆಯ ಸಮಯದಲ್ಲಿ ಅವರು ಸಾಗಿಬಂದ ಹಾದಿ ಮೊದಲಾದ ಪ್ರಶ್ನೆಗಳು ಕಾಡುತ್ತಲೇ ಇರುತ್ತವೆ; ಆದರೆ ಭೂತಕಾಲದ ಪುನಾರಚನೆಯನ್ನು ಒಳಗೊಂಡಂಥ ಎಲ್ಲ ಪ್ರಾಯೋಜನೆಗಳಿಗೂ ಇದು ಅನ್ವಯವಾಗುತ್ತಲೇ ಇರುತ್ತದೆ. ಸಮುದಾಯಗಳ ಅಧ್ಯಯನಕ್ಕೆ ಡಾ. ಹರನ್‌ರವರ ಕಾರ್ಯ ಪ್ರಶಂಸಾರ್ಹ ಮಾದರಿಯಾಗಿದೆ ಎಂಬುದಂತೂ ಖಚಿತ.

ಡಾ. ಸಿ.ಎನ್. ರಾಮಚಂದ್ರನ್
(ಅನುವಾದ : ಎನ್.ಎಸ್. ಶಾರದಾ ಪ್ರಸಾದ್, ಮೈಸೂರು)

ನಮನ

ಶ್ರೀ ವ್ಯಾಕರಣಗುರುವರೇಣ್ಯಾಯ ನಮಃ

(ವ್ಯಾಕರಣ ವಿದ್ವಾನ್ ವೇ॥ಬ್ರ॥ಶ್ರೀ ಬಿ.ಎಸ್. ಸುಬ್ಬರಾಯಶಾಸ್ತ್ರೀ)

"ಎಂದರೋ ಮಹಾನುಭಾವುಲು" ಎಂಬ ತ್ಯಾಗರಾಜಸ್ವಾಮಿಗಳ ಹಾಡು ನೆನಪಾಗುತ್ತದೆ. ವ್ಯಕ್ತಿಯ ಮಹಾನುಭಾವತ್ವಕ್ಕೆ, ಧಾರ್ಮಿಕಚರಿತೆ–ದೈವೀಶಕ್ತಿ–ಅಪ್ರತಿಮಜ್ಞಾನಗಳು ಕಾರಣಗಳಾಗುತ್ತವೆ. ಮಹಾನುಭಾವರು ಕೆಲವೊಮ್ಮೆ ಸರ್ವವಿದಿತರು. ಪವಿತ್ರ ಪುಷ್ಪಗಳ ಬಳ್ಳಿಯ ಪೊದರಿನಲ್ಲಿ ಸ್ವಯಂಪ್ರಭೆಯಿಂದ, ತಮ್ಮಲ್ಲಿ ತಾವೇ ಆನಂದಾನುಭವವನ್ನು ಸವಿಯುತ್ತಾ ತಮ್ಮಲ್ಲಿಯೇ ಲೀನವಾಗಿ ಹೋಗುವ ಅಲೌಕಿಕ ಜೀವರತ್ನಗಳು ಮತ್ತೊಂದು ವಿಧ. ಈ ಎರಡನೇ ವಿಚಾರವನ್ನು ನನ್ನ ಪೂಜ್ಯ ವ್ಯಾಕರಣಗುರುಗಳಾದ ಬಸವಾಪಟ್ಟಣದ ವೇ॥ಬ್ರ॥ಶ್ರೀ ಸುಬ್ಬರಾಯಶಾಸ್ತ್ರಿಗಳನ್ನು ಕುರಿತು ಸಮನ್ವಯಿಸುವುದು ಸಾರ್ಥಕವೆನಿಸುತ್ತದೆ. ಮುಂದಿನ ಸಮಾಜಕ್ಕೆ ಅವರ ನೆನಪು ಉಳಿಯಲಿ ಎಂಬಾಸೆಯಿಂದ ಆವಶ್ಯಕವಾದ ಪ್ರಸ್ತಾವವನ್ನು ಮಾಡುತ್ತಿದ್ದೇನೆ; ವಿಮರ್ಶೆಯ ವಿವೇಚನೆಗೋಸ್ಕರವಲ್ಲ.

ಬೆಳ್ಳನೆಯ ಮೈಕಟ್ಟಿಗೊಪ್ಪುವ, ಹಳೆಯ ಶೈಲಿಯ ಬೆಳ್ಳನೆಯ ಜುಬ್ಬದಾಕೃತಿಯ ತೊಡುಗೆ; ನೆಲಕ್ಕೆ ತಗುಲದ ವೀರಗಾಸೆ; ಎಡಭುಜದಮೇಲೆ ಓರಣವಾಗಿರಿಸಿದ ಉತ್ತರೀಯ; ಶುದ್ಧ ದಿನಗಳಲ್ಲಿ ಮಾತ್ರ ಮಾಡಿಸಿದ ಆಯುಷ್ಕರ್ಮದ ಮುಖಶಿರಸ್ಸನ್ನಿವೇಶ; ಕಿವಿಗಳಲ್ಲಿ ಸುವರ್ಣಾಭರಣ; ಹಣೆಯಲ್ಲಿ ವಿಭೂತಿ; ಹುಬ್ಬುಗಳ ನಡುವೆ ಗೋಪಾದದಾಕೃತಿಯ ಗಂಧ; ಎಡಗೈಯಲ್ಲಿ ಜೋತಾಡುವ ಕೊಡೆ; ಬಲಗೈಯಲ್ಲಿ ಏನನ್ನೋ ಒತ್ತಿಹಿಡಿದ ಚಿನ್ಮುದ್ರೆ; ನಾಸಿಕಾಶ್ರುತಿಪ್ರಧಾನಧ್ವನಿ; ಎಲ್ಲರಲ್ಲೂ ವ್ಯಾಕರಣಬದ್ಧವಾಗಿಯೇ ಮಾತನಾಡುವ ಕನ್ನಡ, ಇವೆಲ್ಲವೂ ಶ್ರೀ ಶಾಸ್ತ್ರಿಗಳ ಎದ್ದು ಕಾಣುತ್ತಿದ್ದ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವ. ಶ್ರೀ ಶಾಸ್ತ್ರಿಗಳನ್ನು ಊರಿನ ನಾಗರಿಕರೂ, ವರ್ತಕರೂ, ಅಧಿಕಾರಿಗಳೂ, ವಿದ್ಯಾರ್ಥಿಗಳೂ, ಒಡನಾಡಿ ಉಪಾಧ್ಯಾಯರೂ, ಬಹುಪೂಜ್ಯಭಾವನೆಯಿಂದ ಕಾಣುತ್ತಿದ್ದರು. ಅವರ ಶಿಷ್ಯರು ಇಂದಿಗೂ ಅವರನ್ನು ನೆನಪುಮಾಡಿಕೊಂಡು ಅವರಿಂದ ಕಲಿತ ಸಂಸ್ಕೃತಪದ್ಯಗಳನ್ನೂ ಕೆಲವು ಸಮಸ್ತಪದಗಳ ವಿಗ್ರಹವಾಕ್ಯಗಳನ್ನೂ, ಸಂಧಿಗಳನ್ನೂ ತರಗತಿಯ ಹಾಸ್ಯ ಸಂದರ್ಭಗಳನ್ನೂ ಅವರು ವಿಶೇಷವಾಗಿ ಪ್ರಯೋಗಿಸುತ್ತಿದ್ದ ಎಚ್ಚರಿಕೆಯ ಪದಗಳನ್ನೂ, ಅವರ ಮಾತುಗಳ ಅನುಕರಣೆಯನ್ನೂ ಹೇಳುತ್ತಾರೆ. ಪ್ರೌಢಶಾಲೆಯಲ್ಲಿಯ ಶ್ರೀ ಶಾಸ್ತ್ರಿಗಳನ್ನು ಮತ್ತು ಕಾಲೇಜಿನ ವೇ॥ಬ್ರ॥ಶ್ರೀ ಕೆ.ಜಿ. ಸುಬ್ರಹ್ಮಣ್ಯಶಾಸ್ತ್ರಿಗಳನ್ನು ಸ್ಮರಿಸುವುದು ಕೊಣನೂರಿನ ವಿದ್ಯಾರ್ಥಿಗಳಿಗೆ ಅನಿವಾರ್ಯವಷ್ಟೆ !

ಬಸವಾಪಟ್ಟಣದ ವೇ॥ಬ್ರ॥ಶ್ರೀ ಯಜ್ಞೇಶ್ವರಾವಧಾನಿಗಳಲ್ಲಿ ವೇದಾಧ್ಯಯನಮಾಡಲು ಹೋಗುತ್ತಿದ್ದ ಕಾಲ. ನಮ್ಮ ತೀರ್ಥರೂಪರು ದೇವಕಿ ಸುಬ್ರಹ್ಮಣ್ಯಭಟ್ಟರು. ಅವರ ಆಣತಿಯಂತೆ ಮಾನ್ಯ ಶಾಸ್ತ್ರಿಗಳನ್ನು ಭೇಟಿಯಾದೆ. ಪ್ರವರಪೂರ್ವಕವಾಗಿ ಅಭಿವಾದನೆ ಮಾಡಿದೆ. ಪರಿಚಯಿಸಿಕೊಂಡೆ. "ಊಹ್ಞು.... ಅಲಂಕಾರ ಶಾಸ್ತ್ರ. ಕಾಣಾದಂ ಪಾಣಿನೀಯಂ ಚ ಸರ್ವಶಾಸ್ತ್ರೋಪಕಾರಕಂ" ಎಂದು ಸುಮ್ಮನಾದರು. ನಿಜ. ವ್ಯಾಕರಣಶಾಸ್ತ್ರದ ಆಳವಾದ ಅಧ್ಯಯನ ಮಾಡುವುದು ಉಚಿತವೆನ್ನಿಸಿತು. ಕೆಲವೇ ದಿನಗಳಲ್ಲಿ ಅವರ ದರ್ಶನ ಪಡೆದೆ. ನನ್ನ ಮನದಾಳವನ್ನು ನಿವೇದಿಸಿಕೊಂಡೆ; 'ಗೌರಿಹಬ್ಬ ಕಳೆಯಲಿ, ಶುದ್ಧ ಪಂಚಮಿಯಿಂದ ಬಾರಯ್ಯ' ಎಂದರು. 'ಹಿಂದೆ ಓದಿದ ಸಿದ್ಧಾಂತಕೌಮುದಿ ಉಪಸ್ಥಿತಿಯಲ್ಲಿಟ್ಟುಕೊಂಡಿದ್ದೀಯಾ?' ಈ ಪ್ರಶ್ನೆಗೆ ನಾನೇನನ್ನೂ ಹೇಳಲಿಲ್ಲ. ಅವರು ಹೇಳಿದ ದಿನವೇ ಶಾಲಾರಂಭಕ್ಕೆ ಮುನ್ನ ಶಾಲೆಯ ಮುಂದೆ ಕಾದೆ. ಶಾಸ್ತ್ರಿಗಳೂ ಬಂದರು. ಏನಯ್ಯ.... ಆಗಲಿ, ಅದೋ ಜಿ.ಕೆ.ನೂ ಬರುತ್ತಿದ್ದಾರೆ. ಅವರಿಗೂ ತಿಳಿಸುತ್ತೇನೆ, ಎಂದು ಹೇಳುತ್ತಾ 'ನರಸಿಂಹಾಚಾರ್ಯರೇ! ಈ ಹೊತ್ತು ಶಾಲೆಗೆ ಬರುವುದಿಲ್ಲ. ಅರ್ಧ ದಿವಸ ರಜೆ ಹೇಳಿಬಿಡಿ. ಈತನಿಗೆ ವ್ಯಾಕರಣಪಾಠ ಹೇಳಿ ಕೊಡುತ್ತೇನೆ', ಮುಂತಾಗಿ ವಿವರಿಸಿದರು.

ಕೊಣನೂರಿನ ನಡುವೆಯಿರುವ ಶಿವಾಲಯ. ಅಲ್ಲಿನ ಗಣಪತಿಗೆ ವಂದಿಸಿ ಕುಳಿತೆವು. ನರಸಿಂಹಮೂರ್ತಿ ! "ಊಕಾಲೋಜ್ಝ್ರಸ್ವದೀರ್ಘಪ್ಲುತಃ" ಈ ಸೂತ್ರ ನೆನಪಿದೆಯೆ? ಅದರ ವ್ಯುತ್ಪತ್ತಿಯನ್ನು ಹೇಳು ಎಂದರು. ವೃತ್ತಿಯನ್ನು ಹೇಳಿದೆ. ವಾರಿ... ಎಂಬ ಶಬ್ದಸ್ವರೂಪವೇನು? ಅಂದರು. ಹೇಳಿದೆ. "ದೇವದತ್ತಃ ಮಾಣವಕಂ ಗ್ರಾಮಂ ನಯತಿ" ಈ ಉದಾಹರಣೆಗೆ

ಸಂಬಂಧಿಸಿದ ಎಲ್ಲ ವಿವರವನ್ನೂ ಈಗ ಹೇಳು ಅಂದರು. ಕಾರಕವಿಭಕ್ತಿಯ ಎಲ್ಲವನ್ನೂ ತಿಳಿಸಿದೆ. ಒಪ್ಪಿಗೆಯಾಗದ ಮುಖಭಾವ ಶಾಸ್ತ್ರಿಗಳದ್ದು. ಏನೂ ತಪ್ಪಾಗಿ ನಾನು ಹೇಳಿರಲಿಲ್ಲ. "ಅಲ್ಪಾರಂಭಃ ಕ್ಷೇಮಕರಃ" ನಾಳೆ ಇಲ್ಲಿಗೇ ಬೇಗ ಬಂದುಬಿಡು ಎಂದರು. ಮನೆಯಲ್ಲಿ ಒಮ್ಮೆ ಸಿದ್ಧಾಂತಕೌಮುದಿಯನ್ನು ನೋಡಿದೆ. ನನ್ನ ಉತ್ತರ ಸರಿಯಾಗಿಯೇ ಇತ್ತು. ಮರುದಿವಸ ಪಾಠಾರಂಭ. ಪ್ರಥಮಾವಿಭಕ್ತಿಯಿಂದಲೇ ಪಾಠವನ್ನು ಆರಂಭಿಸಿದರು. "ತಿಙನಿರ್ದಿಷ್ಟವರ್ತಮಾನಕಾಲಕ್ರಿಯಾಶ್ರಯೀಭೂತೋ ದೇವದತ್ತಃ" ಎಂದು ಆರಂಭಿಸಿದ ಅವರ ವಿವೇಚನಾ ಶೈಲಿ, ಕಣ್ಣು ಮುಚ್ಚಿಯೇ ಸಿದ್ಧಾಂತಕೌಮುದಿಯನ್ನು ನಿರರ್ಗಳವಾಗಿ ಸಮನ್ವಯಿಸುತ್ತಿದ್ದ ಜ್ಞಾನ ಮತ್ತು ತೀಕ್ಷ್ಣಬುದ್ಧಿಯನ್ನು ಕಂಡು ಬೆರಗಾಗಿಹೋದೆ. ಪ್ರತಿಯೊಂದು ರೂಪನಿಷ್ಪತ್ತಿಯೂ ಶಾಬ್ದಬೋಧಪುರಸ್ಸರವಾಗಿಯೇ ವಿವೇಚಿಸಲ್ಪಡಬೇಕು. ಪ್ರತ್ಯಯಾರ್ಥಗಳನ್ನು ಸಮನ್ವಯಿಸಬೇಕು. ಠಕ್, ಠಞ್ ನಂತಹ ಪ್ರತ್ಯಯಗಳಿಂದ ಸಮಾಸರೂಪಗಳಿರುವಾಗ ಉದಾತ್ತಾದಿ ಸ್ವರವಿಧಾನಗಳನ್ನು ಸ್ಪಷ್ಟಪಡಿಸಬೇಕು, ಇವೆಲ್ಲಾ ಶಾಸ್ತ್ರಿಗಳ ಪಾಠದ ವೈಖರಿ. ಕಾರಕಾಂತಗಳನ್ನು ಶಾಬ್ದಬೋಧಪುರಸ್ಸರವಾಗಿ ಪಾಠಹೇಳುವುದೆಂದರೆ ಅವರಿಗೊಂದು ಮೋಜು. ಹಾಗೆ ಫಕ್ಕಿಕಾಪುರಸ್ಸರವಾಗಿ ವ್ಯಾಕರಣ ಪಾಠಹೇಳುವ ವಿದ್ವಾಂಸರು ಅತಿವಿರಳವೆಂದರೆ ತಪ್ಪಾಗಲಾರದು. ನಡುನಡುವೆ ಅವರು ಹೇಳುತ್ತಿದ್ದ "ಛಿನ್ನೇಪುಚ್ಛೇಲೂನೇಕರ್ಣೇ" ಮುಂತಾದ ವ್ಯಾಕರಣನ್ಯಾಯಗಳು, ವಾರ್ತಿಕ ವಿಶೇಷಗಳು, ಪರಿಭಾಷೆಗಳು, ಕಾರಿಕಾವೃತ್ತಿಗಳು, ಖಂಡನಾರ್ಹ ಮಂಡನಾರ್ಹಗಳು, ವಾದಿಯನ್ನು ಕಣ್ಣುಕಣ್ಣು ಬಿಡುವಂತೆಮಾಡುವ ಕೆಲವು ಜಾಣ್ಮೆಗಳು, ಓತಪ್ರೋತವಾದ ಉದಾಹರಣಸಮನ್ವಯ, ಇವೆಲ್ಲವೂ ಎಂಥವರನ್ನೂ ಚಕಿತಗೊಳಿಸುತ್ತಿದ್ದುವು.

ಚಿಕ್ಕಂದಿನಲ್ಲೇ ವೇದವನ್ನು ಕಂಠಪಾಠ ಮಾಡುವಂತೆ ಪಾಣಿನೀಯವನ್ನೆಲ್ಲಾ ಕಂಠಸ್ಥಮಾಡಿಕೊಂಡಿದ್ದರು ಶಾಸ್ತ್ರಿಗಳು. ಸಾಮಾನ್ಯ ಜೀವನದ ಭಾಷೆಗೂ, ವೇದಾಂತವಿಚಾರಗಳಿಗೂ, ವ್ಯಾಕರಣಪದಗಳನ್ನು ಬಳಸಿ ತಮ್ಮದೇ ಆದ ಹಾಸ್ಯಚಟಾಕಿಯನ್ನು ಸಿಡಿಸುತ್ತಿದ್ದರು. ನರಸಿಂಹಮೂರ್ತಿ ! ಇದೆಲ್ಲಾ "ಕ್ವಿಪ್" ಎಂದರು. ಬೆಪ್ಪನಾಗಿ ಕುಳಿತ ನನ್ನನ್ನು 'ಅರ್ಥವಾಗಲಿಲ್ಲವೇ? ನೋಡಯ್ಯ ! ಅದರ ಯಾವ ಅಂಶವೂ ಉಳಿಯುವುದಿಲ್ಲ. ಆದರೆ ತನ್ನಿಮಿತ್ತ ವಿಹಿತಕಾರ್ಯಗಳು ನಡೆಯುತ್ತವೆ. ಅಂಗಾಂಗಗಳು ಮತ್ತು ದೇಹವೆಲ್ಲಾ ಒಂದೊಂದು ಕಾರಣದಿಂದ ಲೋಪಗೊಳ್ಳುತ್ತಾ ಹೋಗಿ ಏನೂ ಇಲ್ಲದಂತಾಗುತ್ತದೆ. ದೇಹವನ್ನು ಪಡೆದುದಕ್ಕೆ ಕುರುಹಾಗಿ ಉಳಿಯುವುದು ಪಾಪ ಪುಣ್ಯಗಳು ಮಾತ್ರ' ಎಂದು ವಿವರಿಸಿದರು. ನಿಜಕ್ಕೂ ಇದು ಊಹೆಗೇ ನಿಲುಕದ ಸಮನ್ವಯ. ಇಂಥಾ ಚಮತ್ಕಾರಾತ್ಮಕ ವಿಚಾರಧಾರೆಗಳನ್ನು ಶಾಸ್ತ್ರಿಗಳಿಂದ ಕೇಳಿ ರೋಮಾಂಚನಗೊಳ್ಳುತ್ತಿದ್ದ ನಾನೇ ಧನ್ಯ. ವೇ॥ಬ್ರ॥ಶ್ರೀ ವಿರೂಪಾಕ್ಷ ಶಾಸ್ತ್ರಿಗಳೆಂದರೆ ಅವರಿಗೆ ಬಲು ಪ್ರಿಯ. ನನಗೆ ಅವರ ವಿವರಣೆ ತಿಳಿಯದು. ಅವರು ಹೇಳುತ್ತಿದ್ದ ಎಷ್ಟೋ ವಿಚಾರಗಳನ್ನು ನೆನಪುಮಾಡಿಕೊಳ್ಳುತ್ತಿದ್ದರು. ಅವರು ನಡೆಸಿದ ವ್ಯಾಕರಣಶಾಸ್ತ್ರದ ವಾದ–ವಿವಾದಗಳು, ಜಯಾಪಜಯಗಳು ಮುಂತಾದ ಘಟನೆಗಳನ್ನು ಕಥಾರೂಪದಲ್ಲಿ ಹೇಳುವ ಸೊಗಸುಗಾರಿಕೆ ಶಾಸ್ತ್ರಿಗಳ ವೈಶಿಷ್ಟ್ಯಗಳಲ್ಲೊಂದು. ಸಂಸ್ಕೃತಪಾಠಶಾಲೆಯ ತೊಟ್ಟಿಯಲ್ಲಿ ಅಂದಂದು ವಿದ್ಯಾರ್ಥಿಗಳು ವಾದವನ್ನು ಮಂಡಿಸುತ್ತಿದ್ದರಂತೆ. ಅಣ್ ಪ್ರತ್ಯಯವನ್ನು ಉತ್ತರಣಕಾರದಿಂದ ಗ್ರಹಿಸದಿದ್ದರೆ ಕೆಲವು ರೂಪಸಿದ್ಧಿಗಳಾಗುವುದಿಲ್ಲ ಎಂಬುದು ವಿಷಯ. ಶಾಸ್ತ್ರಿಗಳು "ರೂಪಸಿದ್ಧಿರೇವ ಮಾಸ್ತು" ಎಂದು ಬಿಟ್ಟರಂತೆ. ವಿರೂಪಾಕ್ಷ ಶಾಸ್ತ್ರಿಗಳು ವಾದಿಗಳ ಮಧ್ಯಸ್ಥಿಕೆ ವಹಿಸುತ್ತಿದ್ದರು. ಶಾಸ್ತ್ರಿಗಳ ಈ ಮಾತನ್ನು ಕೇಳಿದ ವಿರೂಪಾಕ್ಷ ಶಾಸ್ತ್ರಿಗಳು "ವ್ಯಾಕರಣಮೇವ ಮಾಸ್ತು ಗಚ್ಛ ರೇ" ಎಂದುಬಿಟ್ಟರಂತೆ. ವಿರೂಪಾಕ್ಷ ಶಾಸ್ತ್ರಿಗಳಲ್ಲಿ "ಕ್ರೋಡಪತ್ರ"ಗಳೆಂಬ ವ್ಯಾಕರಣವಾದಸರಣಿಯ ಲೇಖನ ಇತ್ತಂತೆ. ಶೃಂಗೇರಿ ಮಠದ ಸ್ವಾಮಿಗಳ ಆರಾಧನೆ ನಂಜನಗೂಡಿನಲ್ಲಿ ನಡೆಯಿತು. ಪೂರ್ವಪಂಕ್ತಿಗೇ ಬಹುಮಂದಿ. ಊಟದ ಆರಂಭಕ್ಕೆ ಅಂದಿನ ಸ್ವಾಮಿಗಳೇ ಪಂಕ್ತಿಯ ಮೇಲೆ ಬಂದು ವಿಚಾರಿಸುತ್ತಿದ್ದರು. ನಂಜನಗೂಡಿನ ಶಾಮಶಾಸ್ತ್ರಿಗಳ ಮುಂದೆ ನಿಂತ ಸ್ವಾಮಿಗಳು ಕಥಂ ವರ್ತತೇ ಚಾರು? ಎಂದರಂತೆ. ಶಾಮಶಾಸ್ತ್ರಿಗಳೆಂದರು "ಲಾವಣ್ಯಹೈನ್ಯಾದ್ವಿಗತಾ ಹಿ ಚಾರುತಾ" ಸ್ವಾಮಿಗಳು ತಾವೇ ಅಡುಗೆ ಮನೆಗೆ ಹೋಗಿ ಲವಣಮಿಶ್ರಿತ ಸಾರನ್ನು ತಂದು ಬಡಿಸಿದರಂತೆ. ಇದು ವಿರೂಪಾಕ್ಷ ಶಾಸ್ತ್ರಿಗಳು ಹೇಳಿದ ಕಥೆಯಂತೆ. ಕಥೆಯನ್ನು ಹೇಳಿ ಸ್ವಾರಸ್ಯವನ್ನು ವಿವರಿಸುತ್ತಿರಲಿಲ್ಲ. ನಮ್ಮ ಬುದ್ಧಿಬಲದಿಂದಲೇ ಊಹಿಸಿಕೊಳ್ಳಬೇಕು. ಇದೊಂದು ತಮ್ಮದೇ ಆದ ಶೈಲಿಯೂ ಹೌದು. ವ್ಯಾಕರಣಶಾಸ್ತ್ರದ ಪರಿಧಿಯ ಶೈಲಿಯೂ ಹೌದು. ಏನಯ್ಯ ! ನಾಳೆ ಸಂತೆ. ಜನಜಂಗುಳಿ.... ಇಷ್ಟೆಂದರೆ ನಾವೇ ತಿಳಿದುಕೊಳ್ಳಬೇಕು. "ಗುರುವಾರ ಪಾಠ ಇಲ್ಲ. ಪ್ರತಿ ಗುರುವಾರವೂ ಇದೇ ನಿಯಮ", ಹೀಗೆ ಅರ್ಥೈಸಿಕೊಳ್ಳುವುದು ನಮ್ಮ ಕೆಲಸ. ಸ್ವಾಭಾವಿಕವಾಗಿ ಮಿತಭಾಷಿಗಳಾದ

ಶಾಸ್ತ್ರಿಗಳು ಪಾಠ ಬೋಧಿಸುವಾಗ ನಿರರ್ಗಲಭಾಷಿಗಳು ಕೂಡ. ಅವರ ಮನಸ್ಸಿನ ಇಂಗಿತವನ್ನು ತಿಳಿಯುವುದೇ ಕಷ್ಟವಾಗುತ್ತಿತ್ತು. ಯಙ್ಲುಕ್ ಪ್ರಕರಣ ಮುಗಿದ ದಿನವೇ ಅಂದರು, "ಮಹಾಭಾಷ್ಯಂ ವಾ ಪಠನೀಯಂ ಮಹಾರಾಜ್ಯಂ ವಾ ಪಾಲನೀಯಂ" ಎಂದು. 'ಮುಂದಕ್ಕೆ ಮಹಾಭಾಷ್ಯವನ್ನು ಪಾಠಮಾಡುತ್ತೇನೆ. ಸಿದ್ಧನಾಗು. ಅದನ್ನು ಓದದಿದ್ದರೆ ಪ್ರಯೋಜನವಿಲ್ಲ'. ಇದು ಶಾಸ್ತ್ರಿಗಳು ನನಗೆ ಹೇಳಿದ ವಿಷಯ ಎಂದು ತಿಳಿದುಕೊಳ್ಳಬೇಕು. ಶಾಸ್ತ್ರಿಗಳ ಆಶ್ರಯದಲ್ಲಿ ಎರಡು ವರ್ಷಗಳ ಕಾಲ ವ್ಯಾಕರಣಶಾಸ್ತ್ರದ ಉನ್ನತಾಧ್ಯಯನವನ್ನು ಮಾಡಿದೆ. ಶಾಲೆಯ ಆಡಳಿತವರ್ಗವನ್ನು ಕಂಡು ನನಗೇ ಕೆಲಸವನ್ನೂ ಕೊಡಿಸಿದರು. ಜ್ಞಾನ ಮತ್ತು ಊಟ ಎರಡನ್ನೂ ನನಗೆ ಕೊಟ್ಟವರು ಶಾಸ್ತ್ರಿಗಳು. ಸಜ್ಜನಸ್ವಭಾವದ ಶಾಸ್ತ್ರಿಗಳು ವೇದ–ಜ್ಯೌತಿಷ–ಮಂತ್ರಶಾಸ್ತ್ರಗಳ ಪರಿಚಯವನ್ನು ಹೊಂದಿದ್ದರು. ಅನುಷ್ಠಾನಪರರು, ಆಚಾರಪರರು, ಬೆಳಗ್ಗೆ ನಿಯಮಪುರಸ್ಸರವಾಗಿ ಊಟ ಮಾಡಿಬಂದರೆ, ಮತ್ತೆ ಬಸವಾಪಟ್ಟಣಕ್ಕೆ ಹೋಗಿ ಸಂಧ್ಯಾವಿಧಾನಗಳನ್ನು ಮುಗಿಸಿ, ಊಟ ಮಾಡುವ ನಿಯಮಬದ್ಧ ಜೀವನವನ್ನು ಮೈಗೂಡಿಸಿಕೊಂಡಿದ್ದರು.

ವ್ಯಾಕರಣಶಾಸ್ತ್ರದಲ್ಲಿ ಮಹತ್ಸಾಧನೆಗೈದು ಸಿದ್ಧಿಪಡೆದಿದ್ದ ಶಾಸ್ತ್ರಿಗಳು ಮುಂದಿನ ಸಮಾಜಕ್ಕಾಗಿ ವ್ಯಾಕರಣಭಾಷ್ಯವಿಚಾರ–ಗ್ರಂಥಗಳವಿಚಾರ–ವೈಯಾಕರಣರ ಸ್ವಾರಸ್ಯಘಟನೆಗಳನ್ನು ಕುರಿತಂತೆ ತಿಳಿಗನ್ನಡದಲ್ಲಿ ನಾಲ್ಕಾರು ಪುಸ್ತಕಗಳನ್ನು ರಚಿಸಬಹುದಾದ ಸಾಮರ್ಥ್ಯವುಳ್ಳವರಾಗಿದ್ದರು. ಈ ಪ್ರಯತ್ನವನ್ನೇಕೆ ಕೈಗೊಳ್ಳಲಿಲ್ಲವೆಂದೆನಿಸುತ್ತದೆ. ಅಪ್ರಬುದ್ಧರಾದ ನಾವು ಈ ವಿಷಯದಲ್ಲಿ ಪ್ರಚೋದನೆಯನ್ನು ಕೊಡುವವರೂ ಆಗಿರಲಿಲ್ಲ. ಅವರ ವ್ಯಕ್ತಿಗತ ಜೀವನವನ್ನು ನಾನೆಂದೂ ಪ್ರಶ್ನಿಸಲಿಲ್ಲ. ನನಗೆ ಅವರನ್ನು ಕಂಡರೆ ಭಕ್ತಿಯ ಜೊತೆಯಲ್ಲೇ ಭಯವೂ ಇತ್ತು. ಅವರಿಂದ ಪಡೆದ ಜ್ಞಾನವಾಹಿನಿಯು ನನ್ನ ಜೀವನದಲ್ಲಿ ಗಂಗಾಜಲದಂತೆ ಪವಿತ್ರವೂ, ಭವರೋಗಹರವೈದ್ಯವೂ ಆಗಿದೆಯೆಂಬುದನ್ನು ಮನಗಂಡಿದ್ದೇನೆ. ಆ ವ್ಯಾಕರಣಾಚಾರ್ಯ, ಸದ್ಗುರು ಮಹಾನುಭಾವರು ನನಗೆ ಪ್ರಾತಃಸ್ಮರಣೀಯರು. ಅವರಿಗಿದೋ ಈ ಚಿಕ್ಕ ಲೇಖನದ ಮೂಲಕ ಕೃತಜ್ಞತೆಗಳು ಮತ್ತು ಮನಃಪೂರ್ವಕ ನಮನಗಳು.

ವಿದ್ವಾನ್ ಡಾ. ಡಿ.ಎಸ್. ನರಸಿಂಹಭಟ್ಟ
ರಾಮನಾಥಪುರ

ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಇಂಥ ಅಧ್ಯಯನಗಳು ಸೂಕ್ಷ್ಮಮಟ್ಟದ ಸಾಮಾಜಿಕ–ಸಾಂಸ್ಕೃತಿಕ ಇತಿಹಾಸಗಳ ಕಾರ್ಯ ನಿರ್ವಹಿಸುತ್ತವೆ, ಅಂಥ ಒಂದು ಗಮನಾರ್ಹ ಅದ್ಭುತ ಅಧ್ಯಯನವೇ ಡಾ. ಪ್ರಣತಾರ್ತಿಹರನ್‌ರವರ 'ಸಂಕೇತಿ ಅಧ್ಯಯನ'ವಾಗಿದೆ.

ಈ ವಿಷಯದ ಬಗ್ಗೆ ಪ್ರಪ್ರಥಮ ಪ್ರಧಾನ ಕೃತಿ 1936ರಲ್ಲಿ ಬೆಳಕು ಕಂಡ ಎಂ.ಕೇಶವಯ್ಯನವರ 'ದಿ ಲೈಫ್ ಆಫ್ ನಾಚಾರಮ್ಮ'. ಕೇಶವಯ್ಯನವರ ನಂತರ ಸಿ.ಎಸ್. ರಾಮಚಂದ್ರ, ಎಚ್.ಎಸ್. ಅನಂತನಾರಾಯಣ ಮತ್ತು ಕಿಕ್ಕೇರಿ ನಾರಾಯಣ ಮೊದಲಾದ ವಿದ್ವಾಂಸರು ಈ ಕ್ಷೇತ್ರದಲ್ಲಿ ಗಮನಾರ್ಹ ಕಾರ್ಯ ಮಾಡಿದ್ದಾರೆ. ಆದರೆ ದಶಕಕ್ಕೂ ಹೆಚ್ಚುಕಾಲ ನಡೆಸಿದ ಡಾ. ಹರನ್‌ರವರ ಕಾರ್ಯ ಅಧಿಕೃತವಾದುದೂ ಸಮಗ್ರವಾದುದೂ ಆಗಿರುವಂತೆ ತೋರುತ್ತದೆ.

ವಿದ್ವತ್ತು, ಅಪಾರ ಪರಿಶ್ರಮ ಮತ್ತು ಅಧ್ಯವಸಾಯ ಅಗತ್ಯವಾದಂಥ ವಿಶಿಷ್ಟ ಕಾರ್ಯವನ್ನು ಡಾ. ಹರನ್ ಸಾಧಿಸಿತೋರಿಸಿದ್ದಾರೆ. ಇಷ್ಟಾಗಿಯೂ ವಲಸೆಯ ನಿಜವಾದ ಕಾರಣಗಳು, ವಲಸೆಯ ಸಮಯದಲ್ಲಿ ಅವರು ಸಾಗಿಬಂದ ಹಾದಿ ಮೊದಲಾದ ಪ್ರಶ್ನೆಗಳು ಕಾಡುತ್ತಲೇ ಇರುತ್ತವೆ; ಆದರೆ ಭೂತಕಾಲದ ಪುನಾರಚನೆಯನ್ನು ಒಳಗೊಂಡಂಥ ಎಲ್ಲ ಪ್ರಾಯೋಜನೆಗಳಿಗೂ ಇದು ಅನ್ವಯವಾಗುತ್ತಲೇ ಇರುತ್ತದೆ. ಸಮುದಾಯಗಳ ಅಧ್ಯಯನಕ್ಕೆ ಡಾ. ಹರನ್‌ರವರ ಕಾರ್ಯ ಪ್ರಶಂಸಾರ್ಹ ಮಾದರಿಯಾಗಿದೆ ಎಂಬುದಂತೂ ಖಚಿತ.

–ಡಾ.ಸಿ.ಎನ್. ರಾಮಚಂದ್ರನ್

ಸಮುದಾಯ ಅಧ್ಯಯನ ಕೇಂದ್ರ
ಮೈಸೂರು